ಶ್ರೀಶಾಂಕರಭಾಷ್ಯಸಮೇತ

ಛಾಂದೋಗ್ಯೋಪನಿಷತ್ತು

ಸಂಪುಟ – ೧



ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573211
2005

ಶ್ರೀಶಾಂಕರಭಾಷ್ಯಸಮೇತ

ಛಾಂದೋಗ್ಯೋಪನಿಷತ್ತು

(ಉಪನಿಷತ್ತಿನ ಮತ್ತು ಭಾಷ್ಯದ ಸಂಸ್ಕೃತಮೂಲ,
ಅನುವಾದ, ಟಿಪ್ಪಣಿ, ಸಾರ - ಮುಂತಾದವುಗಳೊಡನೆ)

ಸಂಪುಟ - ೧

(೧ ರಿಂದ ೪ ಅಧ್ಯಾಯಗಳು)

ಬರೆದವರು:
ಶ್ರೀ ಶ್ರೀಸಚ್ಚಿದಾನಂದಸರಸ್ವತೀಸ್ವಾಮಿಗಳವರು

ಕ್ರಮಾಂಕ. ೯

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211
☎ : 08175-273820
2005

ಮೊದಲನೆಯ ಮುದ್ರಣ : 1956 - 1000 ಪ್ರತಿಗಳು
ಎರಡನೆಯ ಮುದ್ರಣ : 1986 - 1000 ಪ್ರತಿಗಳು
ಮೂರನೆಯ ಮುದ್ರಣ : 2005 - 1000 ಪ್ರತಿಗಳು

ಸಂಪುಟ : 1 : 44+532+21 = 597 ಪುಟಗಳು

ಸಂಪುಟ : 2 : 26+596+21 = 643 ಪುಟಗಳು

ಬೆಲೆ : ರೂ. 400/-

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ :

ಶ್ರೀ ದಿಲೀಪ ಬೆಳ್ಳಾವೆ
ನಂ. 766, 10ನೇ 'ಸಿ' ಅಡ್ಡರಸ್ತೆ
ಮಹಾಲಕ್ಷ್ಮಿಪುರಂ, (ಮೋದಿ ಆಸ್ಪತ್ರೆ ಹತ್ತಿರ)
ವೆಸ್ಟ್ ಆಫ್ ಕಾರ್ಡ್ ರಸ್ತೆ
ಬೆಂಗಳೂರು - 560 086
✆ : 2359 3747

ಶ್ರೀಮತಿ ಸುಧಾ
ನಂ. 43, 3ನೇ ಅಡ್ಡರಸ್ತೆ
3ನೇ ಬ್ಲಾಕ್, ಜವರಯ್ಯ ಗಾರ್ಡನ್
ತ್ಯಾಗರಾಜನಗರ
ಬೆಂಗಳೂರು - 560 028
✆ : 5699 0721

ಮುದ್ರಣಕಾರರು :

ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್
ನಂ. 76, 6ನೇ ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 560 086
✆ : 26766342

ಮೊದಲ ಮಾತು

ಮೊದಲನೆ ಮುದ್ರಣ

ಛಾಂದೋಗ್ಯೋಪನಿಷತ್ತು ಮುಗಿದದ್ದರಿಂದ ಪ್ರಸಿದ್ಧವಾದ ದಶೋಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರ - ಎಂಬ ಪ್ರಸ್ಥಾನತ್ರಯದ ಭಾಷ್ಯಗಳು ಶ್ರೀಜಯಚಾಮರಾಜೇಂದ್ರಗ್ರಂಥರತ್ನಮಾಲೆಯಲ್ಲಿಯೇ ಪ್ರಕಟವಾದಂತೆ ಆಯಿತು.

ಶ್ರೀಶಂಕರಭಗವತ್ಪಾದರವರ ಕೃತಿಗಳೆಂದು ಪ್ರಚಾರದಲ್ಲಿರುವ ಪ್ರಕರಣಗಳೊಳಗೆ ಉಪದೇಶಸಾಹಸ್ರಿ, ಅಪರೋಕ್ಷಾನುಭೂತಿ, ಅದ್ವೈತಾನುಭೂತಿ - ಇಷ್ಟಕ್ಕೆ ಮಾತ್ರ ಒಂದು ಸಂಪುಟದೊಳಗೆ ಈ ಗ್ರಂಥರತ್ನ ಮಾಲೆಯಲ್ಲಿ ಪ್ರವೇಶವು ಲಭಿಸಿತು. ಮಿಕ್ಕ ಪ್ರಕರಣಗಳನ್ನು ಮತ್ತೊಂದು ಆಜ್ಞಾಪತ್ರವನ್ನು ಕಳುಹಿಸುವವರೆಗೆ ಈ ಮಾಲಿಕೆಗಾಗಿ ಸಿದ್ಧಗೊಳಿಸಬೇಕಾದದ್ದಿಲ್ಲವೆಂದು ಅರಮನೆಯಿಂದ ನಿರೂಪವು ಬಂದದ್ದರಿಂದ ಅವುಗಳನ್ನು ಸ್ವತಂತ್ರವಾಗಿಯೇ ಪ್ರಕಟಿಸುವ ಯೋಚನೆಯನ್ನು ಮಾಡಬೇಕಾಗಿದೆ ಯೆಂದು ಅಧ್ಯಾತ್ಮಪ್ರಕಾಶಕಾರ್ಯಾಲಯದವರು ತಿಳಿಸಿರುತ್ತಾರೆ. ಹೇಗಾದರೂ ಪ್ರಕರಣಗಳೆಲ್ಲವನೂ ಕನಡಿಗರಿಗೆ ಆದಷು ಬೇಗನೆ ಒದಗಿಸಿಕೊಡಬೇಕೆಂಬುದೇ ನನ ಹಿರಿಯಾಸೆ. ಅದನ್ನು ಭಗವಂತನು ಪರಿಪೂರ್ತಿಗೊಳಿಸಿಕೊಡಬೇಕಾಗಿದೆ.

ಈ ಗ್ರಂಥರತ್ನ ಮಾಲಿಕೆಯಲ್ಲಿ ಹೊರಕ್ಕೆ ತಂದಿರುವ ಶಾಂಕರವೇದಾಂತದ ಅತ್ಯಂತ ಪ್ರಮುಖ ಗ್ರಂಥಗಳನ್ನು ಅಚ್ಚಿಗೆ ಸಿದ್ಧಪಡಿಸುವದರಲ್ಲಿ ನನಗೆ ನೆರವಾಗಿರುವ ಮಹನೀಯರುಗಳಿಗೂ ಒಟ್ಟು ಗ್ರಂಥಮಾಲಿಕೆಗೇ ಆರ್ಥಿಕಸಹಾಯವನ್ನು ಉದಾರ ಭಾವದಿಂದ ಕೊಟ್ಟು ಕನ್ನಡನಾಡಿಗೇ ಉಪಕಾರಮಾಡಿರುವ ಕಾರ್ಯಾಲಯದ ಪರಿಪಾಲಕರಾದ ಮಹಾಪ್ರಭುಗಳಿಗೂ ಹಾರ್ದಿಕ ಅಭಿನಂದನೆಗಳನ್ನು ನಾರಾಯಣ ಸ್ಮರಣಪೂರ್ವಕವಾಗಿ ಇಲ್ಲಿ ತಿಳಿಸುವದು ನನ್ನ ಕರ್ತವ್ಯವಾಗಿರುತ್ತದೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ದುರ್ಮುಖಿಸಂವತ್ಸರದ ವೈಶಾಖ ಬಹುಳ ೧೧
೧೯೫೬

ಅನುವಾದಕ
ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ

ಪ್ರಕಾಶಕರ ಮೊದಲ ಮಾತು
(ಮೂರನೆ ಮುದ್ರಣಕ್ಕೆ)

ಪರಮಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಶಂಕರಭಗವತ್ಪಾದರ ಪ್ರಸ್ಥಾನತ್ರಯ ಭಾಷ್ಯಗಳನ್ನು ಸಂಸ್ಕೃತಮೂಲಸಹಿತ ಕನ್ನಡ ಭಾಷೆಗೆ ಅನುವಾದಮಾಡಿ, ಮುಖ್ಯವಿಷಯಗಳನ್ನು ವಿಶದೀಕರಿಸುವ ಟಿಪ್ಪಣಿಗಳು, ಆಚಾರ್ಯರ ಮಿಕ್ಕ ಗ್ರಂಥಗಳಲ್ಲಿನ ವಿಷಯ ವಿವೇಚನೆಯ ಹೋಲಿಕೆಯನ್ನು ಸುಲಭಗೊಳಿಸುವ ಗ್ರಂಥಪರಾಮರ್ಶಿಕೆಗಳು, ಆಯಾ ಅಧ್ಯಾಯದ ಸಾರ, ಮಂತ್ರವರ್ಣಾನುಕ್ರಮಣಿಕೆ, ಶಬ್ದಾನುಕ್ರಮಣಿಕೆಗಳನ್ನು ಸೇರಿಸಿ, ಮೈಸೂರು (ಕರ್ಣಾಟಕದ ಹಿಂದಿನ ಹೆಸರು) ಸಂಸ್ಥಾನದ ಮಹಾರಾಜರಾಗಿದ್ದ ಶ್ರೀಜಯಚಾಮರಾಜೇಂದ್ರ ಒಡೆಯರ ಕೃಪಾಶ್ರಯದಿಂದ ''ಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಉಪನಿಷದ್ಭಾಷ್ಯ -ಸಂಪುಟ ೬'' ಎಂಬ ಹೆಸರಿನಿಂದ ಮೊದಲನೆಯ ಬಾರಿಗೆ ೧೯೫೬ರಲ್ಲಿ ಛಾಂದೋಗ್ಯೋಪನಿಷತ್ತು ಗ್ರಂಥವನ್ನು ಕಾರ್ಯಾಲಯದ ಮೂಲಕ ಪ್ರಕಟಿಸಿದ್ದರು.

ಮೂಲಗ್ರಂಥದ ಬದಲಾವಣೆ ಇಲ್ಲದೆ ಮುದ್ರಣದ ತಪ್ಪುಗಳನ್ನು ತಿದ್ದಿ ಎರಡನೆಯ ಬಾರಿಗೆ ೧೯೮೬ರಲ್ಲಿ ಹೊರತರಲಾಯಿತು. ಈಗ ಪುಸ್ತಕಗಳೆಲ್ಲಾ ಮಾರಾಟವಾಗಿದ್ದರಿಂದ ಪುನಃ ಮೂರನೆಯ ಬಾರಿಗೆ ಮುದ್ರಿಸಲಾಗಿದೆ. ಈ ಮುದ್ರಣದಲ್ಲಿಯೂ ಸಹ ಮೂಲಗ್ರಂಥಕ್ಕೆ ಯಾವ ಬದಲಾವಣೆಯಿಲ್ಲದೆ ಕೇವಲ ಮುದ್ರಣದ ದೋಷಗಳನ್ನು ಮಾತ್ರ ತಿದ್ದಿ, ಕೆಲವು ಬಿಟ್ಟು ಹೋದ ಕನ್ನಡಾನುವಾದದಲ್ಲಿರಬೇಕಾದ ಮೂಲಭಾಷ್ಯದ ಪದಗಳ ಅನುವಾದವನ್ನು ಸೇರಿಸಲಾಗಿದೆ.

ಅಧ್ಯಯನ ಮಾಡುವವರಿಗೆ ಅತಿ ಭಾರವೆನಿಸದೆ, ಪಾರಾಯಣ, ಪ್ರವಚನಗಳಿಗೆ ಅನುಕೂಲವಾಗಲೆಂದು (ಬ್ರಹ್ಮಸೂತ್ರಭಾಷ್ಯ, ಶ್ರೀಮದ್ಭಗವದ್ಗೀತಾಭಾಷ್ಯ ಮತ್ತು ಬೃಹದಾರಣ್ಯಕ ಉಪನಿಷದ್ಭಾಷ್ಯಗಳಂತೆ) ಈ ಗ್ರಂಥವನ್ನೂ ಸಹ ಎರಡು ಸಂಪುಟಗಳಾಗಿ ವಿಂಗಡಿಸಿ, ಮೊದಲನೆಯ ಸಂಪುಟದಲ್ಲಿ ಮೊದಲ ನಾಲ್ಕು ಅಧ್ಯಾಯಗಳನ್ನು ಮತ್ತು ಎರಡನೆಯ ಸಂಪುಟದಲ್ಲಿ ಮಿಕ್ಕ ನಾಲ್ಕು ಅಧ್ಯಾಯಗಳನ್ನು (ಒಟ್ಟು ಎಂಟು) ಮುದ್ರಿಸಲಾಗಿದೆ. ಅಧ್ಯಯನಶೀಲರ ಅನುಕೂಲಕ್ಕಾಗಿ ಮಂತ್ರವರ್ಣಾನುಕ್ರಮಣಿಕೆ ಮತ್ತು ಶಬ್ದಾನುಕ್ರಮಣಿಕೆಯನ್ನು ಎರಡು ಸಂಪುಟಗಳಲ್ಲಿ ಕೊಡಲಾಗಿದೆ

ಅಧ್ಯಾತ್ಮನಿಲಯದ ಪ್ರಾಚಾರ್ಯರಾದ ವೇ।। ಬ್ರ।। ಎಮ್.ಎಸ್. ಚಂದ್ರಮೌಳಿ ಅವಧಾನಿಗಳು ಗ್ರಂಥವನ್ನು ತಿದ್ದುವ ಕೆಲಸದಲ್ಲಿ ಹೆಚ್ಚಿನ ಶ್ರದ್ಧೆವಹಿಸಿ ಪುಸ್ತಕವು ಉತ್ತಮ ರೀತಿಯಲ್ಲಿ ಹೊರಬರಲು ಬಹಳ ಶ್ರಮಿಸಿರುತ್ತಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

ತಮಗೆಲ್ಲರಿಗೂ ಗೊತ್ತಿರುವ ಹಾಗೆ ಇಂಥಾ ಬೃಹತ್ ಗ್ರಂಥಗಳು ಹೊರಬರ ಬೇಕಾದರೆ ಲಕ್ಷ್ಮೀಕಟಾಕ್ಷವು ಅತ್ಯವಶ್ಯಕ. ಬೆಂಗಳೂರಿನಲ್ಲಿರುವ ಶ್ರೀಯುತ ಕೆ.ಎಲ್. ನಾಗರಾಜರಾಯರು (ಕೋಡಿಹಳ್ಳಿ ಲಕ್ಷ್ಮೀನಾರಾಯಣರಾವ್ ದತ್ತಿ ಸಂಸ್ಥೆಯ ಮೂಲಕ) ರೂ. ೨೦,೦೦೦/- ಮತ್ತು ಅನೇಕ ಭಕ್ತಾದಿಗಳು ಉದಾರವಾಗಿ ಧನಸಹಾಯ ಮಾಡಿರುತ್ತಾರೆ. ಇಂಥ ದಾನಿಗಳ ಪಟ್ಟಿಯನ್ನು ಗ್ರಂಥದಲ್ಲಿ ಪ್ರಕಟಿಸಿ ಸ್ಮರಿಸಲಾಗಿದೆ.

ಪುಸ್ತಕವನ್ನು ಅಚ್ಚಿಗೆ ಸಿದ್ಧವಡಿಸುವಲ್ಲಿ ಅಕ್ಷರಜೋಡಣೆ ಮತ್ತು ವಿನ್ಯಾಸದಲ್ಲಿ ಶ್ರಮವಹಿಸಿದ ಶ್ರೀ ದಿಲೀಪ ಬೆಳ್ಳಾವೆ ಮತ್ತು ಶ್ರೀಮತಿ ಸುಧಾರವರಿಗೂ, ಅಂದವಾದ ಮುದ್ರಣ, ಹಾಗೂ ಆಕರ್ಷಕ ರಕ್ಷಾಕವಚ ವಿನ್ಯಾಸಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿ ಗ್ರಂಥವನ್ನು ಸಕಾಲಕ್ಕೆ ಮುದ್ರಣ ಮಾಡಿಕೊಟ್ಟ ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಶಾರದಾಪ್ರಸಾದ್‌ರವರಿಗೂ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಾಯ, ಸಹಕಾರಗಳನ್ನು ನೀಡಿರುವ ಎಲ್ಲ ಅಭಿಮಾನಿಗಳಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಈ ನಮ್ಮ ಅಲ್ಪಸೇವೆಯನ್ನು ವಾಚಕರು ಪ್ರೇಮಾದರಗಳಿಂದ ಸ್ವೀಕರಿಸಿ ಕಾರ್ಯಾಲಯದ ಮೂಲಕ ಇಲ್ಲಿಯವರೆಗೆ ಪ್ರಕಾಶನಗೊಂಡಿರುವ ಎಲ್ಲಾ (೨೨೮) ಗ್ರಂಥಗಳೂ ಯಾವಾಗಲೂ ವಾಚಕರಿಗೆ ಸುಲಭದರದಲ್ಲಿ ದ ಗ್ರಂಥಪ್ರಕಟನೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಪ್ರಾರ್ಥಿಸುತ್ತೇವೆ.

ಪಾರ್ಥಿವ ಸಂವತ್ಸರ
ಆಷಾಢ ಬಹುಳ ತ್ರಯೋದಶಿ, ಮಂಗಳವಾರ
(ಶ್ರೀ ಶ್ರೀಗಳ ೩೦ನೆಯ ವಾರ್ಷಿಕಾರಾಧನೆ)
೨-೮-೨೦೦೫

ಪ್ರಕಾಶಕರು

ಛಾಂದೋಗ್ಯೋಪನಿಷತ್ತು ಗ್ರಂಥದ ಮುದ್ರಣಕ್ಕೆ ಧನಸಹಾಯ ಮಾಡಿರುವ ದಾನಿಗಳ ವಿವರ

	ಶ್ರೀಯುತರುಗಳಾದ	ಸ್ಥಳ	ರೂ.
1.	ಕೆ.ಎಲ್. ನಾಗರಾಜ ರಾವ್ (ಕೋಡಿಹಳ್ಳಿ ಲಕ್ಷ್ಮೀನಾರಾಯಣ ರಾವ್ ದತ್ತಿ ಟ್ರಸ್ಟ್ ಮೂಲಕ)	ಬೆಂಗಳೂರು	20,000
2.	ಬೆಂಗಳೂರಿನ ಭಕ್ತಾದಿಗಳಿಂದ : (ತಾ॥ 27.11.02 ರಿಂದ 4.12.02ರ ವರೆಗೆ ಶಂಕರಕೃಪಾ, ದೇವಗಿರಿ ದೇವಸ್ಥಾನ ಮತ್ತು ಯಾಜ್ಞವಲ್ಕ್ಯಾಶ್ರಮಗಳಲ್ಲಿ ನಡೆದ ವೇದಾಂತ ಸಪ್ತಾಹದ ಮಂಗಳ ದಿನದ ಕಾರ್ಯಕ್ರಮದಲ್ಲಿ ಬಂದ ಕಾಣಿಕೆ.)	ಬೆಂಗಳೂರು	6,982
3.	ಅಂತರಂಗಭಕ್ತರು	ಮೈಸೂರು	5,501
4.	ಟಿ. ಆರ್. ಚಂದ್ರಶೇಖರ್	ಬೆಂಗಳೂರು	5,000
5.	ಕೆ. ಎಸ್. ಸುಭಾಷ್	ಬೆಂಗಳೂರು	5,000
6.	ಶ್ರೀಮತಿ ನಾಗರತ್ನಮ್ಮ-ವಿಶ್ವನಾಥ ಶ್ರೇಷ್ಠೀ	ತಿಪಟೂರು	5,000
7.	ಬಿ. ಭೀಮೇಶ್ವರ್	ಬೆಂಗಳೂರು	3,500
8.	ಎ. ಆರ್. ನಟರಾಜನ್ (ಭಗವಾನ್ ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್)	ಬೆಂಗಳೂರು	2,000
9.	ಶ್ರೀಮತಿ ಪ್ರಮೀಳಾ ಸೀತಾರಾಮ್	ಬೆಂಗಳೂರು	1,500
10.	ಜಿ. ಆರ್. ಮಹಾಲಿಂಗೇಗೌಡ	ಗಂಗನಘಟ್ಟ	1,500
11.	ಕೆ. ವೈ. ಪಾಂಡುರಂಗಶೆಟ್ಟಿ	ಮೈಸೂರು	1,004
12.	ಜಿ.ಎಸ್. ಕೇಶವಮೂರ್ತಿ	ಬೆಂಗಳೂರು	1,000
13.	ಶಂಕರಜಯಂತಿ ಮಂಡಳಿ, ಜಯನಗರ	ಬೆಂಗಳೂರು	1,000
14.	ಡಾ॥ ಎನ್.ಕೆ. ಶ್ರೀನಿವಾಸಮೂರ್ತಿ	ಬೆಂಗಳೂರು	1,000
15.	ಕೆ.ಟಿ. ಅನಂತ ಸುಬ್ಬರಾವ್	ಬೆಂಗಳೂರು	1,000
16.	ಬಿ.ವಿ. ಸತ್ಯನಾರಾಯಣ- ಮಂಗಳ ಗೌರಮ್ಮ	ಬೆಂಗಳೂರು	1,000
17.	ಹೆಚ್.ಜಿ. ಗಡ್ಲಬಸಪ್ಪ	ಶಿವಮೊಗ್ಗ	1,000
18.	ಪುರಾಣಿಕ ನಾರಾಯಣ ಭಟ	ಬೆಂಗಳೂರು	1,000

19.	ಜೆ. ಶ್ರೀನಿವಾಸಮೂರ್ತಿ (ತಂದೆ ಜಿ. ವೆಂಕಟರಮಣಯ್ಯ ಸ್ಮರಣಾರ್ಥ)	ಮೈಸೂರು	550
20.	ಶ್ರೀಮತಿ ಎ. ಸರಸ್ವತಿ ಆನಂದ್ (ಉಂಬ್ರಾಣಿ ಅನಂತಯ್ಯನವರ ನೆನಪಾಗಿ)	ಬೆಂಗಳೂರು	501
21.	ಶ್ರೀಮತಿ ನಾಗರತ್ನ-ನಿರಂಜನ (ಮಾತಾಪಿತೃಗಳಾದ ವಿಶಾಲಾಕ್ಷಮ್ಮ ರಾಮಕೃಷ್ಣಯ್ಯ ಸ್ಮರಣಾರ್ಥ)	ಹೊಳೆನರಸೀಪುರ	501
22	ಪಿ. ರಾಮಚಂದ್ರನ್	ಬೆಂಗಳೂರು	501
23.	ವಿ. ರಾಮರಾವ್ (ಮೈಸೂರು ಕಾಫೀ ಕ್ಯೂರಿಂಗ್ ವರ್ಕ್ಸ್)	ಚಿಕ್ಕಮಗಳೂರು	500
24.	ವೇ॥ ವೆಂಕಟರಾಮ ಶರ್ಮ	ಮೈಸೂರು	500
25.	ಯೋಗಾಚಾರ್ಯ ಪ್ರೊ॥ ಕೆ. ಕೇಶವಮೂರ್ತಿ	ಮೈಸೂರು	500
26.	ಬಿ.ಎ. ಶ್ರೀಧರ	ತುಮಕೂರು	500
27.	ಮಲ್ಲೇಶಪ್ಪ (ಲಕ್ಷ್ಮೀದೇವಮ್ಮ - ಚಿಕ್ಕಹನುಮಂತಪ್ಪ ನೆನಪಿಗೆ)	ಶಿವನಗೆರೆ	500
28.	ಶ್ರೀಮತಿ ಗೌರಮ್ಮ	ಪಾವಗಡ	500
29.	ಸಿ.ಎಸ್. ಗುಂಡೂರಾವ್	ಬೆಂಗಳೂರು	500
30.	ಜಿ.ವಿ. ಶ್ರೀನಿವಾಸಯ್ಯ	ಬೆಂಗಳೂರು	500
31.	ಕೆ.ಎಸ್. ನರಸಿಂಹಮೂರ್ತಿ	ಬೆಂಗಳೂರು	500
32.	ಹೆಚ್.ಎನ್. ರಂಗಸ್ವಾಮಿ	ಬೆಂಗಳೂರು	500
33.	ಜಿ.ಎ. ಸೂರ್ಯನಾರಾಯಣ	ಬೆಂಗಳೂರು	500
34.	ಕೆ.ಆರ್. ಸುಬ್ಬರಾವ್	ಸಾಸರವಳ್ಳಿ	500
35.	ಚಿಲೇನಹಳ್ಳಿ ನಾರಾಯ	ಬೆಂಗಳೂರು	500
36.	ಗಾಯತ್ರಿ ಕಸಬಾಮ್	ಬೆಂಗಳೂರು	250

ಉದಾರಾಶ್ರಯರಾಗಿ ದಾನಮಾಡಿದ ಮೇಲ್ಕಂಡ ಭಕ್ತಾದಿಗಳಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ.

ಪ್ರಕಾಶಕರು

ಪೀಠಿಕೆ

ಸಾಮವೇದ

ಛಾಂದೋಗ್ಯೋಪನಿಷತ್ತು ಸಾಮವೇದಕ್ಕೆ ಸೇರಿದ್ದು. ಸಾಮವೇದದ ವಿಷಯಕ್ಕೆ ತಿಳಿಸಬೇಕಾದದ್ದನ್ನೂ ವೇದಸಾಮಾನ್ಯದ ವಿಷಯವಾಗಿಯೂ ವೈದಿಕಕರ್ಮಗಳ ವಿಷಯವಾಗಿಯೂ ತಿಳಿಸಬೇಕಾದದ್ದನ್ನೂ ಸಂಗ್ರಹಿಸಿ ಪರಿಶಿಷ್ಟದಲ್ಲಿ ಕೊಡಲಾಗಿದೆ.

ಛಾಂದೋಗ್ಯೋಪನಿಷತ್ತಿನ ಸ್ಥಾನ

ಪರಿಶಿಷ್ಟದಲ್ಲಿ ಕೊಟ್ಟಿರುವ ವಿವರದಿಂದ ಛಾಂದೋಗ್ಯವು ತಾಂಡ್ಯಬ್ರಾಹ್ಮಣಕ್ಕೆ ಸೇರಿದ್ದೆಂದೂ ಆ ಬ್ರಾಹ್ಮಣವು ಕೌಥುಮಶಾಖೆಯದೆಂದೂ ಕಲ್ಪಿಸಬೇಕಾಗಿರುತ್ತದೆ. ಆದರೆ ಶ್ರೀಶಂಕರಾಚಾರ್ಯರು ಛಾಷ್ಯವನ್ನು ಬರೆದಿರುವ ಉಪನಿಷತ್ತು ಕೌಥುಮಶಾಖೆಯದೆ, ಅಲ್ಲವೆ ?- ಎಂಬ ಬಗೆಗೆ ಕೆಲವು ವಿಚಾರಣೀಯವಿಷಯಗಳಿರುತ್ತವೆ. ಅದನ್ನು ವಿಮರ್ಶಿಸುವದು ವೈದಿಕವಾಙ್ಮಯದಲ್ಲಿ ಈ ಉಪನಿಷತ್ತಿನ ಸ್ಥಾನವನ್ನು ನಿರ್ಣಯಿಸು

೧. **ಸೂತ್ರಭಾಷ್ಯದಲ್ಲಿ** (೩-೩-೨೩ರಲ್ಲಿ) **ರಾಣಾಯನೀಯಶಾಖೆ** ಯವರ ಉಪನಿಷತ್ತಿನ ಪರಾಮರ್ಶವು (ಛಾ. ಛಾ. ೩೬೧) ಕಾಣಬರುತ್ತದೆ. ಅಲ್ಲಿ ಹೆಸರಿಸಿರುವ ಶಾಂಡಿಲ್ಯವಿದ್ಯೆ, ದಹರವಿದ್ಯೆ, ಉಪಕೋಸಲವಿದ್ಯೆಗಳು ಪ್ರಕೃತವಾದ ಛಾಂದೋಗ್ಯದಲ್ಲಿ ಕಾಣಬರುತ್ತಿವೆ. ಅದೇ ಸೂತ್ರಭಾಷ್ಯದಲ್ಲಿ (೩-೩-೨೪ ರಲ್ಲಿ) **ತಾಂಡಿ, ಪೈಂಗಿಶಾಖೆಗಳ** ರಹಸ್ಯಬ್ರಾಹ್ಮಣದ ಪರಾಮರ್ಶವು (ಛಾ. ಛಾ. ೩೬೩) ಕಾಣಬರುತ್ತದೆ. ಅಲ್ಲಿ ಕೊಟ್ಟಿರುವ '**ಪುರುಷಯಜ್ಞ**'ದ ವರ್ಣನೆಯೂ ಪ್ರಕೃತವಾದ ಛಾಂದೋಗ್ಯದಲ್ಲಿದೆ. ಇನ್ನು ಸೂತ್ರಭಾಷ್ಯದಲ್ಲಿ (೩-೩-೨೬ರಲ್ಲಿ) **ತಾಂಡಿಗಳ ಶ್ರುತಿ** ಎಂದು ಉದಾಹರಿಸಿರುವ (ಛಾ. ಛಾ. ೩೬೮) ವಾಕ್ಯವೂ ಪ್ರಕೃತ ಛಾಂದೋಗ್ಯದಲ್ಲಿ ಕಾಣಬರುತ್ತಿದೆ. ಈ ಮೂರು ಸೂತ್ರಭಾಷ್ಯಪರಾಮರ್ಶಗಳಿಂದ ಛಾಂದೋಗ್ಯವು ತಾಂಡಿ, ರಾಣಾಯನೀಯ, ಪೈಂಗಿ - ಈ ಮೂರರಲ್ಲಿ ಯಾವದಾದರೊಂದು ಶಾಖೆಯದಾಗಿರಬಹುದಾಗಿದೆ ; ಅಥವಾ ಈ ಮೂರರಲ್ಲಿಯೂ ಇದೇ ಉಪನಿಷತ್ತಿನ ಭಾಗಗಳು ಇದ್ದಿದ್ದರೂ ಇರಬಹುದು ಎಂಬ ಊಹೆಗೆ ಎಡೆಯಿರುತ್ತದೆ.

೨. ಇನ್ನು ಛಾಂದೋಗ್ಯಭಾಷ್ಯದ ಆರಂಭದಲ್ಲಿ ಬರೆದಿರುವ ಅವತರಣಿಕೆಯಲ್ಲಿ 'ಪ್ರಾಣವೇ ಮುಂತಾದವುಗಳ ಉಪಾಸನೆಗಳಿಂದೊಡಗೂಡಿರುವದರಿಂದ ಅರ್ಚಿರಾದಿ ಮಾರ್ಗದಿಂದ ಬ್ರಹ್ಮಪ್ರಾಪ್ತಿಗೆ ಕಾರಣವಾಗಿರುವ ಕರ್ಮ, ಧೂಮಾದಿಮಾರ್ಗದಿಂದ ಚಂದ್ರಲೋಕಪ್ರಾಪ್ತಿಗೆ ಕಾರಣವಾಗಿರುವ ಬರಿಯ ಕರ್ಮ - ಇವುಗಳನ್ನು ತಿಳಿಸಿ ದ್ದಾಗಿದೆ. ಅಜ್ಞಾನಸ್ವಭಾವದಿಂದ ಪ್ರವೃತ್ತರಾದವರಿಗೆ ಈ ಎರಡು ಮಾರ್ಗಗಳೂ ತಪ್ಪಿ ಕಷ್ಟವಾದ ಅಧೋಗತಿಯಾಗುವದೆಂದು ಹೇಳಲಾಯಿತು' (ಭಾ. ಭಾ. ೨) ಎಂದಿದೆ. ಆದರೆ ಈ ಉಪಾಸನೆಗಳನ್ನಾಗಲಿ ಗತಿಗಳನ್ನಾಗಲಿ ಹೇಳುವ ಭಾಗವು ತಾಂಡ್ಯಬ್ರಾಹ್ಮಣ ದಲ್ಲಿ ಕಾಣುತ್ತಿಲ್ಲ. ಈ ಶಾಖೆಯ ಆರಣ್ಯಕ ಭಾಗವೊಂದು ಬೇರೆಯಿದೆಯೊ ಇಲ್ಲವೊ, ತಿಳಿಯದು. ಇದನ್ನು ಮನದಂದುಕೊಂಡರೂ ಛಾಂದೋಗ್ಯೋಪನಿಷತ್ತು ತಾಂಡ್ಯ ಬ್ರಾಹ್ಮಣಕ್ಕೆ ಸೇರಿದ್ದಲ್ಲವೇನೊ ಎಂಬ ಸಂಶಯವುಂಟಾಗುತ್ತದೆ. ಸಾಮವೇದದ ಬೇರೆಯ ಶಾಖೆಗಳ ಬ್ರಾಹ್ಮಣಗಳು ನಮಗೆ ಸದ್ಯಕ್ಕೆ ಸಿಕ್ಕಿಲ್ಲವಾದ್ದರಿಂದ ಈ ವಿಷಯವನ್ನು ನಿರ್ಣಯಿಸುವದನ್ನು ವೈದಿಕವಾಙ್ಮಯಶೋಧನೆಯಲ್ಲಿ ಹೆಚ್ಚಿನ ಪರಿಶ್ರಮವುಳ್ಳ ವಿದ್ವಾಂಸರಿಗೇ ಬಿಡಬೇಕಾಗಿದೆ.

ಈ ಉಪನಿಷತ್ತಿನ ಹೆಚ್ಚುಗಾರಿಕೆ

ಬೃಹದಾರಣ್ಯಕವನ್ನು ಬಿಟ್ಟರೆ ಛಾಂದೋಗ್ಯದಷ್ಟು ದೊಡ್ಡದಾದ ಉಪನಿಷತ್ತು ನಮಗೆ ಸಿಕ್ಕುವದಿಲ್ಲ. ಸೂತ್ರಭಾಷ್ಯದಲ್ಲಿ ಈ ಉಪನಿಷತ್ತಿನಿಂದ ಆರಿಸಿಕೊಂಡಿರುವಷ್ಟು ಹೆಚ್ಚಿನ ಸಂಖ್ಯೆಯ ವಾಕ್ಯಗಳನ್ನು ಮತ್ತೆ ಯಾವ ಉಪನಿಷತ್ತಿನಿಂದಲೂ ಆರಿಸಿ ಕೊಂಡಿರುವದಿಲ್ಲ. ಬ್ರಹ್ಮಸೂತ್ರದ ಸಮನ್ವಯಾಧ್ಯಾಯದಲ್ಲಿ ಈ ಉಪನಿಷತ್ತಿನ ವಾಕ್ಯ ಗಳನ್ನು ಯಥಾಪಠಿತವಾದ ಅನುಕ್ರಮದಲ್ಲಿಯೇ (೧-೬-೬, ೧-೯-೧, ೧-೧೧-೫, ೩-೧೩-೭, ೩-೧೪-೧, ೪-೧೫-೧, ೫-೧೧ ರಿಂದ ೨೪, ೭-೨೩-೧, ೮-೧-೧, ೮-೧೨-೩, ೮-೧೪-೧) ತೆಗೆದುಕೊಂಡು ವಿಚಾರಮಾಡಿರುವದನ್ನೂ ಸಂಗತಿಗೆ ಹೊಂದುವಂತೆ ತೈತ್ತಿರೀಯ, ಕೌಷೀತಕಿ, ಕಠ, ಮುಂಡಕ, ಪ್ರಶ್ನ - ಇವುಗಳ ವಾಕ್ಯಗಳನ್ನು ಅಲ್ಲಲ್ಲಿಗೆ ಹೆಣೆದುಕೊಂಡಿರುವದನ್ನೂ ನೋಡಿದರೆ ಸೂತ್ರಭಾಷ್ಯದಲ್ಲಿ ಇದಕ್ಕೆ ಕೊಟ್ಟಿರುವ ಹೆಚ್ಚಿನ ಸ್ಥಾನವು ಮನಸ್ಸಿಗೆ ತಟ್ಟುವದು. ಎಲ್ಲಕ್ಕೂ ಮಿಗಿಲಾಗಿ ಉಪಾಸನೆಗಳಿಗೆ ಈ ಉಪನಿಷತ್ತಿನಲ್ಲಿ ಕೊಟ್ಟಿರುವ ಪ್ರಾಧಾನ್ಯವನ್ನು ಮತ್ತೆಯಾವ ಉಪನಿಷತ್ತಿನಲ್ಲಿಯೂ ಕೊಟ್ಟಿರುವದು ಕಂಡುಬರುವದಿಲ್ಲ. ಈ ಎಲ್ಲಾ ಕಾರಣಗಳಿಂದ ಈ ಉಪನಿಷತ್ತಿಗೆ ವೇದಾಂತವಾಙ್ಮಯದಲ್ಲಿ ಬಹುಮುಖ್ಯಸ್ಥಾನವಿದೆ ಎಂದು ಹೇಳಬೇಕಾಗಿದೆ.

ಉಪನಿಷದ್ಭಾಷ್ಯವನ್ನು ಬರೆದವರು

ಈ ಉಪನಿಷತ್ತಿಗೆ ಭಾಷ್ಯವನ್ನು ಬರೆದಿರುವವರು ಸೂತ್ರಭಾಷ್ಯವನ್ನು ಬರೆದಿರುವ ಶ್ರೀಶಂಕರಾಚಾರ್ಯರೇ ಎಂದು ಎಲ್ಲೆಲ್ಲಿಯೂ ಪ್ರಸಿದ್ಧವಾಗಿರುತ್ತದೆ. 'ಶಾರೀರಕದಲ್ಲಿ ಉವನಿಷತ್ತನ್ನು ವಿಸ್ತಾರವಾಗಿ ವಿವರಿಸಿದೆಯಾದರೂ ಪಾಠಕ್ರಮವನ್ನನುಸರಿಸಿ ಬರೆದಿಲ್ಲ ; ಪಾಠಕ್ರಮವನ್ನಾಶ್ರಯಿಸಿ **ದ್ರವಿಡಾಚಾರ್ಯರು** ಬರೆದಿರುವ ಭಾಷ್ಯವು[1] ವಿಸ್ತಾರವಾಗಿದೆ. ಇಲ್ಲಿ ಸಂಕ್ಷೇಪವಾಗಿ ಪಾಠಕ್ರಮದಲ್ಲಿಯೇ ಅರ್ಥವನ್ನು ಸ್ಫುಟಗೊಳಿಸಿದೆ ಎಂದು ಆನಂದಗಿರಿಗಳ ಟೀಕೆಯಲ್ಲಿ ಬರೆದಿದೆ. ಬರವಣಿಗೆಯ ಶೈಲಿಯನ್ನು ನೋಡಿದರೂ ಇದು ಪ್ರಸಿದ್ಧ ಶಂಕರಾಚಾರ್ಯರದೇ ಆಗಿರಬೇಕೆಂದು ಹೇಳಬೇಕಾಗುತ್ತದೆ. ಹೀಗಿದ್ದರೂ ಈ ಉವನಿಷತ್ತಿನ ಭಾಷ್ಯ, ಬೃಹದಾರಣ್ಯಕಭಾಷ್ಯ - ಇವುಗಳನ್ನು ಸೂತ್ರಭಾಷ್ಯಕ್ಕೆ ಹೋಲಿಸುವಾಗ ಕೆಲವು ಮತಭೇದಗಳು ಕಂಡುಬರುತ್ತವೆ. ಅವನ್ನು ಯಥಾಮತಿಯಾಗಿ ಟಿಪ್ಪಣಿಯಲ್ಲಿ ಅಲ್ಲಲ್ಲಿ[2] ವಾಚಕರ ಲಕ್ಷ್ಯಕ್ಕೆ ತಂದಿರುತ್ತೇವೆ. ಈ ಮತಭೇದಗಳಿಗೆ ಕಾರಣವೇನೆಂಬುದನ್ನು ಈ ಮೂರು ಭಾಷ್ಯಗಳನ್ನು ಚಿಕಿತ್ಸಾದೃಷ್ಟಿಯಿಂದ ಓದಿ ವಿದ್ವಾಂಸರೇ ನಿರ್ಣಯಿಸಬೇಕಾಗಿದೆ. ಮುಖ್ಯಸಿದ್ಧಾಂತದ ವಿಷಯದಲ್ಲಿ ಮಾತ್ರ ಯಾವ ಅನ್ಯೋನ್ಯವಿರೋಧವು ಕಾಣಿಸುತ್ತಿಲ್ಲವೆಂಬುದು ಮುಮುಕ್ಷುಗಳಿಗೆ ಮನಃ ಸಮಾಧಾನಕ್ಕೆ ಕಾರಣವಾಗಿರುತ್ತದೆ.

ಉಪಾಸನೆಗಳು

ಈ ಉವನಿಷತ್ತಿನಲ್ಲಿ ಉಪಾಸನೆಯ ವಿಧಾನಕ್ಕೆ ಹೆಚ್ಚಿನ ಭಾಗವನ್ನು ವಿನಿಯೋಗಿಸಿದೆ ಎಂಬುದು ಎದ್ದುಕಾಣಬರುವಂತಿದೆ. ಈ ಉಪಾಸನೆಗಳನ್ನು

1. ಈ ದ್ರಾವಿಡಭಾಷ್ಯವು ಇನ್ನೂ ಸಿಕ್ಕಿರುವದಿಲ್ಲವಾದ್ದರಿಂದ ದ್ರವಿಡಾಚಾರ್ಯರ ವಿಷಯಕ್ಕೆ ಹೆಚ್ಚಿಗೆಯೇನೂ ತಿಳಿದಿಲ್ಲ. ಅವರ ಗ್ರಂಥದಿಂದ ಕೆಲವು ವಿಷಯಗಳನ್ನು ಇಲ್ಲಿ ಸಂಗ್ರಹಿಸಿರುತ್ತಾರೆಂದು ಟೀಕೆಯಿಂದ ತಿಳಿದುಬಂದಿದೆ. ಇದೇ ಆಚಾರ್ಯರ ವಾಕ್ಯಗಳು ಮಾಂಡೂಕ್ಯ, ಬೃಹದಾರಣ್ಯಕ - ಇವುಗಳ ಭಾಷ್ಯದಲ್ಲಿ ಉದಾಹೃತವಾಗಿರುವದನ್ನು ನೋಡಿದರೆ ಇವರು ಅದ್ವೈತಿಗಳೆಂಬುದು ಸ್ಪಟವಾಗುವುದು. ಶ್ರೀರಾಮಾನುಜಾಚಾರ್ಯರು ಉದಾಹರಿಸಿರುವ ದ್ರವಿಡಾಚಾರ್ಯರು ಬೇರೆ ಎಂಬುದನ್ನು ''ವೇದಾರ್ಥಸಂಗ್ರಹ''ದ ಭೂಮಿಕೆಯಲ್ಲಿ ನಾವು ಸ್ಪಷ್ಟಗೊಳಿಸಿರುವೆವು.
2. 128, 140, 143, 332, 358, 362, 441, 624, 664, 721, 742, 910, 1012, 1075 - ಮುಂತಾದ ಪುಟಗಳಲ್ಲಿ.

ಒಂದಾನೊಂದು ಕ್ರಮವನ್ನು ಅನುಸರಿಸಿ ಸೋಪಾನಕ್ರಮದಿಂದ ಹೇಳುತ್ತಾಬಂದಿದೆ ಎಂಬುದನ್ನು ಒಳಹೊಕ್ಕು ವಿಚಾರಮಾಡುವವರು ಕಾಣಬಹುದು. ಮೊದಲು ಉದ್ಗೀಥಭಕ್ತಿಯ ಅವಯವವಾದ ಓಂಕಾರದ ಉಪಾಸನೆಯನ್ನು ಹೇಳಿದೆ ; ಅದನ್ನು ಬಗೆಬಗೆಯ ದೃಷ್ಟಿಯಿಂದ ಬಗೆಬಗೆಯಾಗಿ ಉಪಾಸನೆಮಾಡಬಹುದೆಂಬುದನ್ನು ವಿವರಿಸಿದ ಬಳಿಕ ಆ ಪ್ರಸಂಗದಿಂದ 'ಪ್ರಸ್ತಾವ', 'ಪ್ರತಿಹಾರ' -ಎಂಬ ಭಕ್ತಿಗಳ ಉಪಾಸನೆಯನ್ನು ಹೇಳಿದೆ. ಆಮೇಲೆ ಸಾಮಗಾನಗಳಲ್ಲಿ ಬರುವ ಸ್ತೋಭಗಳ ವಿಷಯವಾದ ಉಪಾಸನೆಯನ್ನು ಹೇಳಿದೆ. ಹೀಗೆ ಸಾಮಾವಯವಗಳ ಉಪಾಸನೆಯಾದ ಬಳಿಕ ಸಮಸ್ತಸಾಮದ ಉಪಾಸನೆಗಳನ್ನು ಹೇಳದೆ ; ಸಮಸ್ತಸಾಮವನ್ನು ಪಾಂಚಭಕ್ತಿಕವೆಂದೂ ಸಾಪ್ತಭಕ್ತಿಕವೆಂದೂ ವಿಂಗಡಿಸಿಕೊಂಡು ಬೇರೆಬೇರೆಯ ಪ್ರಕಾರದ ಉಪಾಸನೆಗಳನ್ನು ಹೇಳಿದೆ[1]. ಇದಾದ ಬಳಿಕ ಉದ್ಗಾತೃವಿನ ಗಾನವಿಶೇಷಗಳಲ್ಲಿರ ಬೇಕಾದ ಗಾನವಿಶೇಷಗಳ ಮತ್ತು ಸ್ವರಾದಿವರ್ಣಗಳ ವಿಷಯದ ಭಾವನೆಯನ್ನು ಹೇಳಿದೆ. ಇದಾದ ಮೇಲೆ ಪ್ರಾಸಂಗಿಕವಾಗಿ ಪರಮಾತ್ಮಪ್ರತೀಕವಾದ ಓಂಕಾರಮಾತ್ರದ ಉಪಾಸನೆಯನ್ನು ಹೇಳಿದೆ. ಆ ಬಳಿಕ ಯಜ್ಞಾಂಗಭೂತವಾದ ಸಾಮಹೋಮಾದಿ ವಿಜ್ಞಾನವನ್ನು ತಿಳಿಸಿದೆ. ಅನಂತರ ಯಜ್ಞದ ಫಲವಾದ ಆದಿತ್ಯನ ಮಧುವಿದ್ಯೆ ಎಂಬ ಉಪಾಸನೆಯನ್ನು ಹೇಳಿದೆ ; ಹೀಗೆ ಆದಿತ್ಯನ ಮೂಲಕ ಬ್ರಹ್ಮೋಪಾಸನೆಯನ್ನು ಹೇಳಿದ ಮೇಲೆ ಛಂದಸ್ಸುಗಳಲ್ಲೆಲ್ಲ ಶ್ರೇಷ್ಠವೆನಿಸಿರುವ ಗಾಯತ್ರಿಯ ಮೂಲಕವೂ ಅದೇ ಬ್ರಹ್ಮದ ಉಪಾಸನೆಯನ್ನು ಹೇಳಿದೆ. ಆ ಬಳಿಕ ಅದೇ ಬ್ರಹ್ಮವನ್ನು ಮನೋಮಯತ್ವಾದಿವಿಶಿಷ್ಟಶಕ್ತಿಗಳಿಂದೊಡಗೂಡಿ ಉಪಾಸನೆಮಾಡುವ ಬಗೆಯನ್ನು ತಿಳಿಸಿದೆ. ಇದರ ಮುಂದೆ ಬ್ರಹ್ಮದ ಏಕದೇಶವಾಗಿ ಉಪದೇಶಿಸಿದ ಮನ-ಆಕಾಶಗಳನ್ನು ಸಮಸ್ತಬ್ರಹ್ಮದೃಷ್ಟಿಯಿಂದ ಉಪಾಸನೆಮಾಡಬೇಕೆಂದು ವಿಧಿಸಿದೆ ; ಅಲ್ಲಿ ಚತುಷ್ಪಾದ್ಬ್ರಹ್ಮನ ಪಾದವೆಂದು ಹೇಳಿದ್ದ ಆದಿತ್ಯನನ್ನು ಸಕಲಬ್ರಹ್ಮದೃಷ್ಟಿಯಿಂದ ಉಪಾಸನೆಮಾಡಬೇಕೆಂದು ಆಮೇಲೆ ತಿಳಿಸಿದೆ ; ಹೀಗೆಯೇ ಬ್ರಹ್ಮದ ಪಾದಗಳೆಂದು ಮೊದಲು ಹೇಳಿದ್ದ ವಾಯುಪ್ರಾಣಗಳಲ್ಲಿ ನೇರಾಗಿ ಬ್ರಹ್ಮದೃಷ್ಟಿಯನ್ನು ವಿಧಿಸಿದೆ. ಆಮೇಲೆ ಇಡಿಯ ಜಗತ್ತನ್ನು ಹದಿನಾರುಕಲೆಗಳಾಗಿ ವಿಂಗಡಿಸಿ ಷೋಡಶಕಲಬ್ರಹ್ಮವಿದ್ಯೆಯನ್ನು ಉಪದೇಶಿಸಿದೆ. ಮತ್ತೆ ಯಜ್ಞದ ಅಗ್ನಿಗಳ ಮೂಲಕ ಅಕ್ಷಿಪುರುಷನಾದ ದೃಷ್ಟಿದ್ರಷ್ಟೃವೇ ಬ್ರಹ್ಮವೆಂದು ಉಪಾಸನೆಮಾಡಬೇಕೆಂದು ಬೋಧಿಸಿದೆ. ಆ ಬಳಿಕ ಪಂಚಾಗ್ನಿವಿದ್ಯೆಯಿಂದ ಗೃಹಸ್ಥರಿಗೂ ಹಿರಣ್ಯಗರ್ಭಾದ್ಯುಪಾಸಕರಿಗೂ ಉತ್ತರಮಾರ್ಗವನ್ನು ಅನುವಾದ

1. ಭಕ್ತಿಗಳ ವಿಷಯಕ್ಕೆ ಪರಿಶಿಷ್ಟವನ್ನುನೋಡಿ.

ಮಾಡಿಕೊಂಡು ಕೇವಲಕರ್ಮಿಗಳಿಗೆ ದಕ್ಷಿಣಮಾರ್ಗಗತಿಯನ್ನೂ ಮಿಕ್ಕವರಿಗೆ ಕ್ಷುದ್ರಜಂತುಗಳ ಜನ್ಮದ ಪ್ರಾಪ್ತಿಯನ್ನೂ ವೈರಾಗ್ಯಪ್ರಾಪ್ತಿಗಾಗಿ ಬೋಧಿಸಿ ಮುಂದೆ ಸರ್ವಜಗದಾತ್ಮನಾದ ವೈಶ್ವಾನರನ ಉಪಾಸನೆಯನ್ನು ಹೇಳಿದೆ. ಈ ಕ್ರಮವನ್ನು ಮನಸ್ಸಿನಲ್ಲಿ ಹೊರಳಿಸಿ ನೋಡಿದರೆ ಕರ್ಮದ ಅಂಗವಾದ ಸಾಮವನ್ನೂ ಛಂದಸ್ಸನ್ನೂ ಕರ್ಮವನ್ನೂ ಫಲವನ್ನೂ ನೆಪಮಾಡಿಕೊಂಡು ಉಪಾಸನೆಗಳನ್ನು ವಿಧಿಸುತ್ತಾ ಕ್ರಮಕ್ರಮವಾಗಿ ಉಪಾಸ್ಯಸ್ವರೂಪವನ್ನು ಹೆಚ್ಚುಹೆಚ್ಚಾಗಿ ವ್ಯಾಪಕವಾಗಿ ತಿಳಿಸುತ್ತಾ ಹೋಗಿದೆ ಎಂಬುದು ಜಿಜ್ಞಾಸುಗಳ ಮನಸ್ಸಿನಲ್ಲಿ ಮಿಂಚದೆ ಇರಲಾರದು.

ಈ ಉಪಾಸನೆಗಳ ವಿಷಯದಲ್ಲಿ ಸೂಕ್ಷ್ಮಮತಿಗಳಾದ ಜಿಜ್ಞಾಸುಗಳಿಗೆ ಹೊಳೆಯಬಹುದಾದ ಮತ್ತೊಂದು ವಿಷಯವೇನೆಂದರೆ ಅಧ್ಯಾತ್ಮಕರ್ಮವು ಬಹಿರ್ದೃಷ್ಟಿಯವರಿಗೆ ವಿಹಿತವಾಗಿದ್ದರೂ ಅದೇ ಕರ್ಮಕ್ಕೆ ಅಂಗವಾಗಿ ಉದ್ಗಾತೃವೇ ಮುಂತಾದ ಋತ್ವಿಜರು ಅಂತರ್ಮುಖರಾಗಿದ್ದರೆ ಉಪಾಸನೆಯನ್ನೂ ಮಾಡಿ ಕರ್ಮಫಲಕ್ಕಿಂತ ಹೆಚ್ಚಿನ ಫಲವನ್ನು ಸಂಪಾದಿಸಿಕೊಳ್ಳಬಹುದೆಂಬುದನ್ನು ಇಲ್ಲಿ ತೋರಿಸಿಕೊಟ್ಟಿರುತ್ತದೆ. ಇಷ್ಟೇ ಅಲ್ಲ ; ಓಂಕಾರ, ಉದ್ಗೀಥ, ಗಾಯತ್ರೀಛಂದಸ್ಸು, ಕರ್ಮಫಲವಾದ ಆದಿತ್ಯ, ಸಾಮಗಾನಕ್ಕೆ ಬೇಕಾದ ಪ್ರಾಣ - ಇವುಗಳಿಗೆ ಪರಮಾತ್ಮನನ್ನು ಸಂಬಂಧಿಸಿ ವಿಶಿಷ್ಟವಾದ ಗುಣಗಳೂ ಶಕ್ತಿಗಳೂ ಇರುವ ಆ ಈಶ್ವರನೆಂಬ ದೃಷ್ಟಿಯಿಂದ ಉಪಾಸನೆಮಾಡ ಬೇಕೆಂದು ತಿಳಿಸಿ ಕರ್ಮವನ್ನು ಕರ್ಮಯೋಗವಾಗಿ ಮಾರ್ಪಡಿಸಿರುವ ಕೌಶಲವೂ ಇಲ್ಲಿ ಕಾಣಬರುತ್ತಿದೆ. ಹೀಗೆ ಕರ್ಮಗಳಿಂದ ಈಶ್ವರೋಪಾಸನೆಗೆ ಮನಸ್ಸನ್ನು ತಿರುಗಿಸಿದ ಬಳಿಕವೇ ಕೇವಲೋಪಾಸನೆಗಳನ್ನು ವಿಧಿಸಿರುವದರಿಂದ ಅಧಿಕಾರಿಗಳನ್ನು ಸೋಪಾನ ಕ್ರಮದಿಂದ ಈಶ್ವರೋಪಾಸನೆಗೆ ಅಣಿಮಾಡುವದೇ ಉಪನಿಷತ್ತಿನ ಗುರಿ ಎಂಬುದು ವಿಚಾರಶೀಲರಿಗೆ ಮನವರಿಕೆಯಾಗುವಂತಿದೆ.

ಜ್ಞಾನವೂ ಉಪಾಸನೆಯೂ

ಆಚಾರ್ಯರ ಸಿದ್ಧಾಂತದಂತೆ ಕರ್ಮನಿರಪೇಕ್ಷವಾದ ಅದ್ವೈತಾತ್ಮವಿಜ್ಞಾನವೇ ಪರಮಪುರುಷಾರ್ಥಕ್ಕೆ ಸಾಧನವಾಗಿರುತ್ತದೆ. ಹೀಗಿರುವಲ್ಲಿ ಉಪನಿಷತ್ತುಗಳಲ್ಲಿಯೂ ಕರ್ಮೋಪಾಸನೆಗಳನ್ನು ಏತಕ್ಕೆ ಹೇಳಿರುತ್ತದೆ ? - ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವದು ಅದ್ವೈತಸಂಪ್ರದಾಯದ ದೃಷ್ಟಿಯಂತೆ ಅತ್ಯಂತ ಆವಶ್ಯವಾಗಿರುತ್ತದೆ.

ಅಧ್ಯಯನ, ಅಗ್ನಿಹೋತ್ರಾದಿಗಳು - ಮುಂತಾದ ಕರ್ಮಗಳನ್ನು ಮಾಡುತ್ತಿರ ಬೇಕೆಂದು ತೈತ್ತಿರೀಯೋಪನಿಷತ್ತಿನ ಶಿಕ್ಷಾವಲ್ಲಿಯಲ್ಲಿ ಒತ್ತಿಹೇಳಿರುತ್ತದೆ. ಆ ಉಪನಿಷತ್ತಿ ನಲ್ಲಿ ಕರ್ಮಗಳನ್ನು ಮಾಡಬೇಕೆಂದು ಎರಡು ಸಾರಿ ಉಪದೇಶಿಸಿರುವದಕ್ಕೆ

ಕಾರಣವೇನೆಂಬ ಪ್ರಶ್ನೆಗೆ ಭಾಷ್ಯಕಾರರು ಹೀಗೆ ಉತ್ತರವನ್ನು ಬರೆದಿರುತ್ತಾರೆ : ''ಋತಾದೀನಾಂ ಪೂರ್ವತ್ರೋಪದೇಶ ಆನರ್ಥಕ್ಯಪರಿಹಾರಾರ್ಥಃ । ಇಹ ತು ಜ್ಞಾನೋತ್ಪತ್ತ್ಯರ್ಥತ್ವಾತ್ ಕರ್ತವ್ಯತಾನಿಯಮಾರ್ಥಃ'' (ಭಾ.ಭಾ. ೬೦) - ಕರ್ಮಗಳನ್ನು ಮೊದಲು ಉಪದೇಶಿಸಿರುವದು ಕರ್ಮಗಳಿಗೆ ಆನರ್ಥಕ್ಯವನ್ನು ಪರಿಹರಿಸುವುದಕ್ಕೆ ; ಎಂದರೆ ಉಪಾಸನೆಯಿಂದಲೇ ಸ್ವಾರಾಜ್ಯರೂಪವಾದ ಮುಕ್ತಿಯು ದೊರಕುವದರಿಂದ ಕರ್ಮವು ವ್ಯರ್ಥ-ಎಂದು ಶಂಕಿಸಬಾರದೆಂಬುದನ್ನು ತಿಳಿಸುವದಕ್ಕೆ. ಮತ್ತೆ ಎರಡನೆಯ ಸಲ ಕರ್ಮಗಳನ್ನು ಉಪದೇಶಿಸಿರುವದು ಕರ್ಮಗಳು ಚಿತ್ತಶುದ್ಧಿಯ ಮೂಲಕವಾಗಿ ಜ್ಞಾನೋತ್ಪತ್ತಿಗೆ ಕಾರಣವಾಗಿರುವದರಿಂದ ಅವಶ್ಯವಾಗಿ ಅವನ್ನು ಮಾಡಬೇಕು - ಎಂಬುದನ್ನು ತಿಳಿಸುವದಕ್ಕೆ ಎಂದು ಆ ಭಾಷ್ಯವಾಕ್ಯದ ಅಭಿಪ್ರಾಯ. ಇದು ಕರ್ಮಗಳಿಗೂ ಜ್ಞಾನಕ್ಕೂ ಇರವ ಸಂಬಂಧವನ್ನು ಕುರಿತ ವಿಚಾರವು.

ಈ ಛಾಂದೋಗ್ಯೋಪನಿಷತ್ತಿನಲ್ಲಿ ಬಲು ಹೆಚ್ಚಿನ ಭಾಗವನ್ನು ಉಪಾಸನೆಗಳಿಗೇ ವಿನಿಯೋಗಿಸಿರುವದೇಕೆ ? - ಎಂಬ ಪ್ರಶ್ನೆಗೆ ಆಚಾರ್ಯರು ಈ ಉತ್ತರವನ್ನು ಬರೆದಿರುತ್ತಾರೆ. 'ರಹಸ್ಯಸಾಮಾನ್ಯಾತ್, ಮನೋವೃತ್ತಿಸಾಮಾನ್ಯಾಚ್ಚ' (ಭಾ.ಭಾ. ೫೫) ಈ ಜ್ಞಾನ, ಉಪಾಸನೆ ಎರಡೂ ಕರ್ಮಕ್ಕೆ ಹೋಲಿಸಿದರೆ ರಹಸ್ಯವಿದ್ಯೆಗಳಾಗಿರುತ್ತವೆ, ಮತ್ತು ಎರಡೂ ಮನೋವೃತ್ತಿಗಳಾಗಿರುತ್ತವೆ. ಆದ್ದರಿಂದ ಉಪನಿಷತ್ತಿನಲ್ಲಿಯೇ ಉಪಾಸನೆಗಳನ್ನು ಹೇಳಿರುತ್ತದೆ ಎಂಬುದು ವಾಕ್ಯದ ಅಭಿಪ್ರಾಯ. ತಟ್ಟನೆ ನೋಡಿದರೆ ಉಪಾಸನೆಗೂ ಜ್ಞಾನಕ್ಕೂ ರೂಪದಲ್ಲಿರುವ ಸಾಮಾನ್ಯವೊಂದೇ ಉಪಾಸನೆಯನ್ನು ಉಪನಿಷತ್ತಿನಲ್ಲಿ ಸೇರಿಸಿರುವುದಕ್ಕೆ ಕಾರಣವೆಂದು ಕಾಣಿಸುತ್ತದೆ. ಆದರೆ ಆಚಾರ್ಯರು ಮತ್ತೊಂದು ವಾಕ್ಯದಿಂದ ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿರುತ್ತಾರೆ : ''ತಾನ್ಯೇತಾನಿ ಉಪಾಸನಾನಿ ಸತ್ತ್ವಶುದ್ಧಿಕರತ್ವೇನ ವಸ್ತುತತ್ತ್ವಾವಭಾಸಕತ್ವಾತ್ ಅದ್ವೈತಜ್ಞಾನೋಪ ಕಾರಕಾಣಿ ಆಲಮ್ಬನವಿಷಯತ್ವಾತ್ ಸುಸಾಧ್ಯಾನಿ ಚ ಇತಿ ಪೂರ್ವಮ್ ಉಪನ್ಯಸ್ಯನ್ತೇ'' (ಭಾ.ಭಾ. ೬) ಈ ಉಪಾಸನೆಗಳು ಸತ್ತ್ವಶುದ್ಧಿಯನ್ನುಂಟುಮಾಡಿ ವಸ್ತುತತ್ತ್ವವನ್ನು ತೋರಿಸಿಕೊಡುವದರಿಂದ ಅದ್ವೈತಜ್ಞಾನಕ್ಕೆ ಉಪಕಾರಕವಾಗಿರುತ್ತವೆ ; ಆಲಂಬನ-ವನ್ನಿಟ್ಟುಕೊಂಡಿರುವ ವೃತ್ತಿರೂಪವಾಗಿರುವದರಿಂದ ಇವುಗಳನ್ನು ಸುಲಭವಾಗಿ ಸಾಧಿಸಿಕೊಳ್ಳಲೂಬಹುದು. ಆದ್ದರಿಂದ ಜ್ಞಾನವನ್ನು ಹೇಳುವದಕ್ಕಿಂತ ಮೊದಲು ಇವನ್ನು ಹೇಳಿರುತ್ತದೆ - ಎಂಬುದು ವಾಕ್ಯದ ಅಭಿಪ್ರಾಯ. ಕರ್ಮಗಳಿಂದಾಗುವ ಚಿತ್ತಶುದ್ಧಿಯು ಬಾಹ್ಯವಿಷಯದ ಚಿಂತೆಯನ್ನು ತಪ್ಪಿಸುತ್ತದೆ ; ಉಪಾಸನೆಯಿಂದಾಗುವ ಚಿತ್ತಶುದ್ಧಿಯು ಚಿತ್ತದ ಕಾಲುಷ್ಯವನ್ನು ಕಳೆಯುವದರ ಜೊತೆಗೆ ಅದರ ಚಾಂಚಲ್ಯ ವನ್ನೂ ಕಳೆದು ಪ್ರತ್ಯಗಾತ್ಮನನ್ನು ಅರಿತುಕೊಳ್ಳುವದಕ್ಕೆ ಅದನ್ನು ಅಣಿಗೊಳಿಸುತ್ತದೆ.

ಭಗವದ್ಗೀತೆಯಲ್ಲಿ ಹೇಳಿರುವ ಕರ್ಮಯೋಗ, ಧ್ಯಾನಯೋಗ- ಇವುಗಳ ಸಂಬಂಧವನ್ನು ಇಲ್ಲಿ ವಾಚಕರು ಮನದಂದುಕೊಳ್ಳಬೇಕು.

ಜ್ಞಾನೋಪಾಸನೆಗಳ ತಾರತಮ್ಯ

ಜ್ಞಾನೋಪಾಸನೆಗಳೆರಡೂ ಮನೋವೃತ್ತಿಗಳೇ ಆದರೂ ಇವೆರಡಕ್ಕೂ ತಾರತಮ್ಯವಿದೆ. ಭಾಷ್ಯಕಾರರು ಇದನ್ನು ಹೀಗೆ ತಿಳಿಸಿಕೊಟ್ಟಿರುತ್ತಾರೆ : ''ಸ್ವಾಭಾವಿಕಸ್ಯ ಆತ್ಮನಿ ಅವಿಕ್ರಿಯೇ ಅಧ್ಯಾರೋಪಿತಸ್ಯ ಕರ್ತ್ರಾದಿಕಾರಕಕ್ರಿಯಾಫಲಭೇದವಿಜ್ಞಾನಸ್ಯ ನಿವರ್ತಕಮ್ ಅದ್ವೈತವಿಜ್ಞಾನಮ್ । ರಜ್ಜ್ವಾದಾವಿವ ಸರ್ಪಾದ್ಯಧ್ಯಾರೋಪಲಕ್ಷಣ-ಜ್ಞಾನಸ್ಯ ರಜ್ಜ್ವಾದಿಸ್ವರೂಪನಿಶ್ಚಯಃ ಪ್ರಕಾಶನಿಮಿತ್ತಃ । ಉಪಾಸನಂ ತು ಯಥಾ ಶಾಸ್ತ್ರಸಮರ್ಪಿತಂ ಕಿಂಚಿದಾಲಮ್ಬನಮ್ ಉಪಾದಾಯ ತಸ್ಮಿನ್ ಸಮಾನಚಿತ್ತವೃತ್ತಿ-ಸಂತಾನಕರಣಂ ತದ್ವಿಲಕ್ಷಣಪ್ರತ್ಯಯಾನನ್ತರಿತಮ್ ಇತಿ ವಿಶೇಷಃ ॥'' (ಭಾ.ಭಾ. ೫) ಅದ್ವೈತವಿಜ್ಞಾನವೆಂದರೆ ಆತ್ಮನು ಇರುವ ರೂಪದಿಂದ ಅವನನ್ನು ತಿಳಿಯಿಸಿಕೊಡುವ ಅರಿವು ; ಮಿಕ್ಕ ಅರಿವುಗಳಂತೆಯೇ ಅದು ತನ್ನ ವಿಷಯದ ಅಜ್ಞಾನವನ್ನು ತೊಲಗಿಸುತ್ತದೆ. ನಮ್ಮ ಆತ್ಮನು ಕರ್ತೃರೂಪನು, ಕಾರಕಗಳಿಂದ ಕ್ರಿಯೆಯನ್ನು ಮಾಡಿ ಫಲವನ್ನು ಪಡೆದುಕೊಳ್ಳುವ ಸ್ವಭಾವದವನು -ಎಂಬುದು ಲೋಕದ ಜನರ ನಂಬಿಕೆ. ಇದು ತಪ್ಪುತಿಳಿವಳಿಕೆಯೆಂಬುದನ್ನು ತೋರಿಸಿಕೊಟ್ಟು ಇದನ್ನು ತೊಲಗಿಸಿ ಆತ್ಮನು ಅದ್ವೀತೀಯನೇ ಎಂಬುದನ್ನು ತಿಳಿಸಿಕೊಡುವದೇ ವೇದಾಂತಜ್ಞಾನವೆಂದೂ ಆಚಾರ್ಯರ ಅಭಿಪ್ರಾಯವು. ಇನ್ನು ಉಪಾಸನೆ ಎಂದರೆ ಶಾಸ್ತ್ರದಲ್ಲಿ ತಿಳಿಸಿಕೊಟ್ಟಿರುವ ಒಂದಾನೊಂದು ಆಲಂಬನವನ್ನು ಮನಸ್ಸಿಗೆ ತಂದುಕೊಂಡು ಅದನ್ನೇ ಎಡಬಿಡದೆ - ಮತ್ತೊಂದು ಬಗೆಯ ಪ್ರತ್ಯಯವನ್ನು ನಡುವೆ ಬರಗೊಡದೆ ಚಿತ್ತವೃತ್ತಿಯನ್ನು ಧಾರಾಕಾರವಾಗಿ ಮಾಡುವದು. ಇದರಲ್ಲಿ ವಸ್ತುವಿನ ಸ್ವರೂಪವು ಹೇಗೇ ಇರಲಿ, ಶಾಸ್ತ್ರದಲ್ಲಿ ವಿಧಿಸಿರುವ ರೂಪದಿಂದಲೇ ಅದನ್ನು ಭಾವಿಸುವದು ಮುಖ್ಯವು. ಈ ಕ್ರಿಯೆಯು ಭಾವನೆಮಾಡುವ ಕರ್ತೃವಿಗೆ ಅಧೀನವಾಗಿರುತ್ತದೆ ಎಂಬುದು ಆಚಾರ್ಯರ ಆಶಯ.

ಜ್ಞೇಯೋಪಾಸ್ಯಬ್ರಹ್ಮಗಳಿಗೆ ಸಂಬಂಧ

ಉಪಾಸನೆಗೆ ಶಾಸ್ತ್ರೋಕ್ತವಾದ ಬೇರೆಬೇರೆಯ ಆಲಂಬನಗಳು ಇರಬಹುದೆಂದು ಮೇಲೆ ನಿಶ್ಚಯವಾಯಿತಷ್ಟೆ. ಇಂಥ ಆಲಂಬನಗಳು ಓಂಕಾರಾದಿಶಬ್ದರೂಪವಾಗಿರಬಹುದು ; ಅಗ್ನಿಯೇ ಮುಂತಾದ ಕರ್ಮಾಂಗವಸ್ತುಗಳಾಗಿರಬಹುದು ;

ಮನಸ್ಸು ಮುಂತಾದ ಅಧ್ಯಾತ್ಮವಸ್ತುವಾಗಿರಬಹುದು ; ಆಕಾಶ, ಆದಿತ್ಯ - ಮುಂತಾದ ಅಧಿದೈವತವಸ್ತುಗಳಾಗಿರಬಹುದು ; ಇಷ್ಟೇ ಅಲ್ಲ ; ಬ್ರಹ್ಮವೂ ಆಗಿರಬಹುದು. ಇದನ್ನು ಆಚಾರ್ಯರು 'ತತ್ರೈತಸ್ಮಿನ್ ಅದ್ವೈತವಿದ್ಯಾಪ್ರಕರಣೇ ಅಭ್ಯುದಯಸಾಧನಾನಿ ಉಪಾಸನಾನಿ ಉಚ್ಯನ್ತೇ । ಕೈವಲ್ಯಸಂನಿಕೃಷ್ಟಫಲಾನಿ ಚ ಅದ್ವೈತಾತ್ ಈಷದ್ವಿಕೃತಬ್ರಹ್ಮ ವಿಷಯಾಣಿ 'ಮನೋಮಯಃ ಪ್ರಾಣಶರೀರಃ' (೩-೪-೧೨) ಇತ್ಯಾದೀನಿ । ಕರ್ಮಸಮೃದ್ಧಿಫಲಾನಿ ಚ ಕರ್ಮಾಙ್ಗಸಂಬನ್ಧೀನಿ ।'' (ಭಾ.ಭಾ. ೫) ಎಂಬ ವಾಕ್ಯದಿಂದ ತಿಳಿಸಿರುತ್ತಾರೆ. ಇಲ್ಲಿ ಹೇಳಿರುವ ಫಲಗಳು ಕರ್ಮಸಮೃದ್ಧಿ, ಅಭ್ಯುದಯ - ಇವೇ ಅಲ್ಲದೆ 'ಕೈವಲ್ಯಕ್ಕೆ ಸಮೀಪವಾಗಿರುವ ಫಲವೂ' ಉಂಟು ಎಂದು ಆಚಾರ್ಯರು ಹೇಳಿರುತ್ತಾರೆಂಬುದನ್ನು ಲಕ್ಷಿಸತಕ್ಕದ್ದಾಗಿದೆ. ಜ್ಞಾನದಿಂದಾಗುವ ಕೈವಲ್ಯಕ್ಕೆ ಹತ್ತಿರವಾದ ಫಲವು ಉಪಾಸನೆಯಿಂದ ಹೇಗೆ ದೊರೆಯುತ್ತದೆ ? - ಎಂಬುದನ್ನು ವಿಮರ್ಶಿಸ ತಕ್ಕದ್ದಿದೆ. ಏಕೆಂದರೆ ಉಪಾಸನೆಯಿಂದ ಸಿಕ್ಕುವದು ಬ್ರಹ್ಮಲೋಕ ; ಅದು ಕಾರಕಗಳಿಂದ ಕ್ರಿಯೆಯನ್ನು ಮಾಡಿ ಅರ್ಚಿರಾದಿಮಾರ್ಗದಿಂದ ಪಡೆಯುವ ಫಲವು. ಹೀಗಿರುವಲ್ಲಿ ಕ್ರಿಯಾಕಾರಕಫಲಗಳಿಲ್ಲದ ಅದ್ವೈತಬ್ರಹ್ಮರೂಪವಾದ ಕೈವಲ್ಯಕ್ಕೆ ಅದು ಹೇಗೆ ಸಮೀಪ ವಾಗಿದ್ದೀತು ? - ಎಂಬ ಸಂಶಯವು ಮನಸ್ಸಿನಲ್ಲಿ ಎದ್ದುಕೊಳ್ಳುವದು ಸಹಜವಾಗಿದೆ.

ಇದಕ್ಕೆ ಉತ್ತರವನ್ನು ವೇದಾಂತಮೀಮಾಂಸಾಸೂತ್ರದಲ್ಲಿ ಕಂಡುಕೊಳ್ಳ ಬೇಕಾಗಿದೆ. ಬ್ರಹ್ಮವು ಕಾರ್ಯರೂಪವಾಗಿರುವ ಅಪರಬ್ರಹ್ಮವೆಂದೂ ಅವಿಕೃತವಾದ ಮುಖ್ಯಬ್ರಹ್ಮ ಅಥವಾ ಪರಬ್ರಹ್ಮವೆಂದೂ ಎರಡು ರೂಪದಲ್ಲಿರುವದು (ಸೂ. ಭಾ. ೪-೩-೭, ಭಾ.ಭಾ. ೫೭೩). ಉಪಾಸಕರು ಕಾರ್ಯಬ್ರಹ್ಮವನ್ನೇ ಅರ್ಚಿರಾದಿಮಾರ್ಗದಿಂದ ಹೋಗಿ ಮುಟ್ಟಿರುತ್ತಾರೆ. ಸಮಸ್ತಜಗತ್ತಿಗೂ ಜನ್ಮಾದಿಕಾರಣ ವಾಗಿರುವದೇ ಮುಖ್ಯಬ್ರಹ್ಮವಾದರೂ ಕಾರ್ಯಬ್ರಹ್ಮವನ್ನು ಬ್ರಹ್ಮವೆಂದು ಕರೆಯುವದು ತಪ್ಪಲ್ಲ ; ಏಕೆಂದರೆ ವಿಶುದ್ಧವಾದ ಉಪಾಧಿಗಳ ಸಂಬಂಧವುಳ್ಳದ್ದಾಗಿ ನಾಮರೂಪ ಕರ್ಮಗಳಾದ ಮನೋಮಯತ್ವಾದಿಧರ್ಮಗಳಿಂದ ಉಪಾಸನೆಮಾಡಬೇಕೆಂದು ಶಾಸ್ತ್ರದಲ್ಲಿ ವಿಹಿತವಾಗಿರುವಾಗ ಆ ಪರಬ್ರಹ್ಮವೇ ಅಪರಬ್ರಹ್ಮವೆಂಬ ಹೆಸರಿಗೆ ತಕ್ಕದ್ದಾ ಗಿರುತ್ತದೆ. ಆದ್ದರಿಂದ ಅಪರಬ್ರಹ್ಮವು ಕಾರಣಬ್ರಹ್ಮಕ್ಕೆ ಸಮೀಪವಾಗಿರುತ್ತದೆ (ಸೂ. ಭಾ. ೪-೩-೯, ಭಾ. ಭಾ. ೫೭೬). ಇನ್ನು ಕಾರ್ಯ ಬ್ರಹ್ಮವನ್ನು ಪಡೆದವರಿಗೆ ಆಗುವ ಫಲವು ಕೈವಲ್ಯಕ್ಕೆ ಹತ್ತಿರವಿರುವದು. ಹೇಗೆಂದರೆ ಕಾರ್ಯಬ್ರಹ್ಮವು ಪ್ರಲಯವಾಗುವ ಕಾಲವು ಬಂದಾಗ ಅಲ್ಲಿಯೇ ಸಮ್ಯಗ್ಜ್ಞಾನವನ್ನು ಪಡೆದುಕೊಂಡವರು ಅಪರಬ್ರಹ್ಮವೆನಿಸುವ ಹಿರಣ್ಯಗರ್ಭನೊಡನೆ ಅದ್ವೈತಮುಕ್ತಿಯನ್ನು ಪಡೆದುಕೊಳ್ಳುತ್ತಾರೆ. ಇದಕ್ಕೆ ಕ್ರಮಮುಕ್ತಿ ಎಂದು ಹೆಸರು. ಈ ದೃಷ್ಟಿಯಿಂದ ಆ ಫಲವು ಕೈವಲ್ಯಕ್ಕೆ ಹತ್ತಿರವೆನಿಸುತ್ತದೆ.

ಯಾರಿಗೆ ಬ್ರಹ್ಮಲೋಕದಲ್ಲಿಯೇ ಸಮ್ಯಗ್ಜ್ಞಾನವಾಗುವದಿಲ್ಲವೋ ಅವರು ಈ ಕಲ್ಪವಾದ ಬಳಿಕ ಮತ್ತೊಂದು ಕಲ್ಪದಲ್ಲಿ ಸಂಸಾರಕ್ಕೆ ಮರಳಿ ಬಂದೇತೀರುತ್ತಾರೆ ಎಂಬುದನ್ನು ಈ ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿಯೇ (೫-೧೦-೨ ಭಾ. ಭಾ. ೪೦೫ರಲ್ಲಿ) ಸ್ಪಷ್ಟಪಡಿಸಿರುತ್ತದೆ.

ಉಪನಿಷತ್ತಿನಲ್ಲಿ ನಿರ್ಗುಣಬ್ರಹ್ಮವಿಚಾರವಿದೆಯೆ ?

ಮೇಲೆ ಹೇಳಿರುವಂತೆ ಒಂದೇ ಬ್ರಹ್ಮವನ್ನೇ ಉಪಾಸನೆಗಾಗಿ ಸಗುಣವೆಂದೂ ಜ್ಞಾನಕ್ಕಾಗಿ ನಿರ್ಗುಣವೆಂದೂ ಹೇಳಿರುತ್ತದೆ ಎಂಬುದು ಆಚಾರ್ಯರ ಅಭಿಪ್ರಾಯವಷ್ಟೆ. ಈ ವಿಷಯದಲ್ಲಿ ಈಗಿನ ವೇದಾಂತಿಗಳೆಲ್ಲರಲ್ಲಿಯೂ ಒಂದೇ ಅಭಿಪ್ರಾಯವಿರುವದಿಲ್ಲ. ಉಪನಿಷತ್ತುಗಳಲ್ಲಿ ಒಂದೇ ಬ್ರಹ್ಮವನ್ನು ಹೇಳಿರುವದು ನಿಜವಾದರೂ ಅಲ್ಲಿ ಪ್ರತಿಪಾದಿತವಾಗಿರುವುದು ಸಗುಣಬ್ರಹ್ಮವೇ ಆಗಿರುತ್ತದೆ - ಎಂದು ಅಭಿಪ್ರಾಯಪಡುವ ಭಾಷ್ಯಕಾರರುಗಳೂ ಇರುತ್ತಾರೆ. ಅವರನ್ನು ಅನುಸರಿಸುವವರು ಈ ಉಪನಿಷತ್ತಿನಲ್ಲಿ ಹೇಳಿರುವ 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ' (೩-೧೪-೧) ಮುಂತಾದ ಕಡೆಯಲ್ಲಿಯೇ ಅಲ್ಲದೆ 'ಸದೇವ ಸೋಮ್ಯೇದಮಗ್ರ ಆಸೀತ್' (೯-೨-೧) ಎಂಬ ಆರುಣಿವಾಕ್ಯದಲ್ಲಿಯೂ 'ಯ ಆತ್ಮಾऽಪಹತಪಾಪ್ಮಾ' (೮-೭-೧) ಎಂಬ ಪ್ರಜಾಪತಿವಾಕ್ಯದಲ್ಲಿಯೂ ಸಗುಣವಿದ್ಯೆಯನ್ನೇ ಹೇಳಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. 'ಸದೇವ' ಎಂಬಲ್ಲಿ ಬ್ರಹ್ಮವು 'ನಾನು ಬಹುವಾಗುವೆನು, ಹುಟ್ಟುವೆನು'- ಎಂದು ಸಂಕಲ್ಪಿಸಿ ಜಗತ್ತನ್ನು ಸೃಷ್ಟಿಸಿರುತ್ತದೆಯೆಂದೂ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿರುವದೆಂದೂ ಸ್ಪಷ್ಟವಾಗಿ ಹೇಳಿರುವದರಿಂದ ಬ್ರಹ್ಮವು ಕಾರ್ಯಕಾರಣಾವಸ್ಥೆಗಳುಳ್ಳದ್ದೆಂದು ತಿಳಿಯುವದೂ ಪ್ರಕರಣಾಂತರದಲ್ಲಿ ಹೇಳಿರುವ ಸರ್ವಜ್ಞತ್ವಸರ್ವಶಕ್ತಿತ್ವ ಸರ್ವೇಶ್ವರತ್ವಾದಿಗುಣಗಳನ್ನೂ ಆ ಬ್ರಹ್ಮಕ್ಕೆ ಸೇರಿಸಿಕೊಳ್ಳುವದೂ ಯುಕ್ತವಾಗಿರುತ್ತದೆ ಎಂದು ಅವರು ಭಾವಿಸಿರುತ್ತಾರೆ. ದಹರವಿದ್ಯೆಯಲ್ಲಿ ಹೇಳಿರುವಂತೆಯೇ ಪ್ರಜಾಪತಿವಾಕ್ಯದಲ್ಲಿ ಸತ್ಯಕಾಮತ್ವಸತ್ಯಸಂಕಲ್ಪತ್ವಾದಿಗಳನ್ನು ಹೇಳಿರುವದರಿಂದಲೂ ಈ ಎರಡು ಸಂಧರ್ಭಗಳಲ್ಲಿ ಹೇಳಿರುವ ಆತ್ಮವರ್ಣನೆಯೂ ಒಂದೇ ರೂಪುವಾಗಿರುವದರಿಂದಲೂ ಈ ವಾಕ್ಯಗಳಲ್ಲಿ ಬೇರೆಬೇರೆಯ ಬ್ರಹ್ಮವನ್ನು ಹೇಳಿರುತ್ತದೆ ಎಂಬುದಕ್ಕೆ ಗಮಕವೇನೂ ಇಲ್ಲ ಎಂಬುದು ಅವರ ಅಭಿಪ್ರಾಯ. ಪ್ರತ್ಯಕ್ಷಾದಿ ಪ್ರಮಾಣಗಳಾಗಲಿ ಶಬ್ದಪ್ರಮಾಣವಾಗಲಿ ನಿರ್ವಿಶೇಷವಸ್ತುಗಳನ್ನು ತಿಳಿಸುವ ಯೋಗ್ಯತೆಯೇ ಇಲ್ಲದವಾಗಿರುವದರಿಂದ ನಿರ್ಗುಣವಾಕ್ಯಗಳೆಂದು ಅದ್ವೈತಿಗಳು ಎಣಿಸಿರುವ ವಾಕ್ಯಗಳಿಗೂ ಸಗುಣವಾಕ್ಯಗಳಿಗೆ ಅವಿರುದ್ಧವಾಗಿಯೇ ಅರ್ಥವನ್ನು

ಮಾಡುವದು ಯುಕ್ತವಾಗಿದೆ ಎಂಬುದು ಅವರ ಆಶಯವಾಗಿದೆ. ಮತಾಂತರದವರ ಸಿದ್ಧಾಂತವನ್ನು ವಿಮರ್ಶಿಸುವದರಿಂದ ಪ್ರಕೃತಭಾಷ್ಯವನ್ನು ಓದುವವರಿಗೆ ಯಾವ ಪ್ರಯೋಜನವೂ ಇರುವುದಿಲ್ಲವಾದರೂ ಮತಾಂತರದವರು ಆಚಾರ್ಯರ ಭಾಷ್ಯವಿವರಣೆಗೆ ಅಂಟಿಸಿರುವ ದೋಷಗಳಿಗೆ ಪ್ರಸ್ಥಾನತ್ರಯಭಾಷ್ಯದಲ್ಲಿ ಯಾವ ಪರಿಹಾರವು ದೊರಕುತ್ತದೆ ಎಂಬುದನ್ನು ಸಂಗ್ರಹವಾಗಿ ತಿಳಿಸುವದರಿಂದ ಭಾಷ್ಯಾರ್ಥಚಿಂತಕರಿಗೆ ಪ್ರಯೋಜನವುಂಟು. ಆದ್ದರಿಂದ ಇಲ್ಲಿ ಈ ಉಪನಿಷತ್ತಿನ ಒಟ್ಟುತಾತ್ಪರ್ಯವನ್ನು ನಿರ್ಣಯಿಸುವುದಕ್ಕೆ ಪ್ರಯತ್ನಿಸುವೆವು.

'ಅತ್ರ ಬ್ರಹ್ಮ ಸಮಶ್ನುತೇ' (ಕಾ. ೨-೩-೧೪), 'ಸ ಯೋ ಹ ವೈ ತತ್ಪರಮಂ ಬ್ರಹ್ಮವೇದ ಬ್ರಹ್ಮೈವ ಭವತಿ' (ಮುಂ. ೩-೨-೯) - ಎಂಬ ಶ್ರುತಿಗಳಲ್ಲಿ ಹೇಗೆ ಬ್ರಹ್ಮಜ್ಞಾನದಿಂದ ಸಿಕ್ಕುವ ಬ್ರಹ್ಮಾತ್ಮರೂಪಕ್ಕೆವಲ್ಯವು ಇಲ್ಲಿಯೇ ದೊರಕುವವೆಂದು ಹೇಳಿದೆಯೋ ಹಾಗೆಯೇ ಇಲ್ಲಿಯೂ 'ತತ್ತ್ವಮಸಿ' ಎಂಬ ಬ್ರಹ್ಮಾತ್ಮೈಕ್ಯವನ್ನು ಅತ್ಯಂತ ಸ್ಪಷ್ಟವಾಗಿ ಹೇಳಿರುತ್ತದೆ. ಪ್ರಜಾಪತಿವಾಕ್ಯದಲ್ಲಿ ಇಂದ್ರನು ತನಗೆ ಉಪದಿಷ್ಟವಾದ ಅರ್ಥವನ್ನು ವಿಮರ್ಶಿಸಿ 'ನಾಹಮತ್ರ ಭೋಗ್ಯಂ ಪಶ್ಯಾಮಿ' (೮-೯-೧, ೨ ; ೮-೧೦-೨, ೩೪, ೮-೧೧-೧, ೨) ಎಂದು ಮತ್ತೆ ಮತ್ತೆ ಹೇಳಿರುತ್ತಾನೆ. 'ಈ ಜ್ಞಾನದಿಂದ ನನಗೆ ಯಾವ ಭೋಗ್ಯಫಲವೂ ಕಾಣಿಸುತ್ತಿಲ್ಲ' ಎಂದು ಹೇಳುವದು ದೃಷ್ಟಫಲವಾದ ಜ್ಞಾನಕ್ಕೆ ಹೊಂದುತ್ತದೆಯೇ ಹೊರತು ಸತ್ತಮೇಲೆ ಅರ್ಚಿರಾದಿಮಾರ್ಗದಿಂದ ಹೋಗಿ ಪಡೆಯಬೇಕಾಗಿರುವ ಫಲಕ್ಕಾಗಿ ಮಾಡುವ ಉಪಾಸನೆಗೆ ಅಷ್ಟು ಸಮಂಜಸವಾಗಿ ಹೊಂದುವದಿಲ್ಲ. 'ಈ ಯಾಗವನ್ನು ಮಾಡಿದರೆ ಸ್ವರ್ಗವು ಸಿಕ್ಕುವದು' ಎಂದು ಶಾಸ್ತ್ರದಲ್ಲಿ ಹೇಳಿದ್ದನ್ನು ಕೇಳಿ ಆಸ್ತಿಕನಾದವನು ನನಗೆ ಇದರಲ್ಲಿ ಯಾವ ಫಲವೂ ಕಾಣಿಸುತ್ತಿಲ್ಲ - ಎಂದಾನೇನು ? ಇಲ್ಲ. ಹೀಗೆಯೇ ಅದೃಷ್ಟಫಲವನ್ನು ಕೊಡುವ ಉಪಾಸನೆಯ ವಿಷಯದಲ್ಲಿಯೂ ಅವಿಶ್ವಾಸಪ್ರದರ್ಶನಕ್ಕೆ ಅವಕಾಶವಿರುವದಿಲ್ಲ. ಇದರಿಂದಲೂ ಪ್ರಜಾಪತಿಯು ಉಪದೇಶಮಾಡಿರುವದು ಇಲ್ಲಿಯೇ ಫಲವನ್ನು ಕೊಡುವ ಜ್ಞಾನವೇ ಎಂದು ಗೊತ್ತಾಗುತ್ತದೆ. ಇದಲ್ಲದೆ ಉಪಾಸನೆಯನ್ನು ವಿಧಿಸಿರುವ ವಾಕ್ಯಗಳಲ್ಲಿ ಸಂಶಯಕ್ಕೆ ಪರಿಹಾರವಾಗಿ ದೃಷ್ಟಫಲವುಳ್ಳ ಅನುಭವವನ್ನು ವಿಮರ್ಶೆಮಾಡಿರುವದು ಎಲ್ಲಿಯೂ ಕಂಡುಬರುವುದಿಲ್ಲ. ಅಲ್ಲೆಲ್ಲ ಶಾಸ್ತ್ರವು ಇಂಥ ಉಪಾಸನೆಯನ್ನು ಮಾಡಿದವನಿಗೆ ಇಂಥ ಅನುಗುಣವಾದ ಫಲವು ಸಿಕ್ಕುತ್ತದೆ ಎಂದಿಷ್ಟೇ ಹೇಳಿರುತ್ತದೆ. ಇಲ್ಲಿಯಾದರೋ ಆತ್ಮಸ್ವರೂಪದ ಜ್ಞಾನಕ್ಕಾಗಿ ಅವಸ್ಥಾತ್ರಯವಿಚಾರವನ್ನು ಮಾಡಿ 'ಅದೇ ಆತ್ಮನನ್ನೇ ಹೇಳುತ್ತೇನೆ' ಎಂದು ಮತ್ತೆ ಮತ್ತೆ ಪ್ರಜಾಪತಿಯು ಆತ್ಮಸ್ವರೂಪವನ್ನು ತಿಳಿಸಿಕೊಟ್ಟಿರುತ್ತಾನೆ. ಅವಸ್ಥಾತ್ರಯವನ್ನು

ವಿಚಾರಮಾಡಿದರೆ ಆತ್ಮನು ಅಶರೀರನೆಂಬುದು ಗೊತ್ತಾಗುತ್ತದೆ ಎಂಬುದು ಉಪದೇಶ ; ಈಗಲೂ ಯಾರು ಅವಸ್ಥಾತ್ರಯವನ್ನು ಪರೀಕ್ಷೆಮಾಡಿದರೂ ಆ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಈ ಎಲ್ಲಾ ಕಾರಣಗಳಿಂದ ಪ್ರಜಾಪತಿವಾಕ್ಯ ದಲ್ಲಿ ಅಶರೀರನಾದ ನಿರ್ವಿಶೇಷಾತ್ಮನನ್ನೇ ಉಪದೇಶಿಸಿದೆ ಎಂದು ನಿರ್ಣಯಿಸುವದು ಅಯುಕ್ತವೆಂದು ಹೇಳವದಕ್ಕೆ ಬರುವದಿಲ್ಲ. ಈ ಜ್ಞಾನವು ಅಪರೋಕ್ಷವಾಗಿ ಇಲ್ಲಿಯೇ ಆಗುತ್ತಿರುವದರಿಂದ ಇಲ್ಲಿ ಹೇಳಿರುವ ಸತ್ಯಕಾಮ, ಸತ್ಯಸಂಕಲ್ಪ- ಮುಂತಾದ ವಿಶೇಷಣಗಳನ್ನೂ 'ಜಕ್ಷತ್ ಕ್ರೀಡನ್ ರಮಮಾಣಃ' (೮-೧೨-೩) ಎಂದು ಮುಂತಾಗಿರುವ ಫಲವಾಕ್ಯಗಳನ್ನೂ ವಿಷಯಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕೆಂಬುದು ಯುಕ್ತವಾಗಿರುತ್ತದೆ; ಆಚಾರ್ಯರು ಹಾಗೆ ಹೊಂದಿಸಿ ಹೇಳಿಯೂ ಇರುತ್ತಾರೆ.

ಇನ್ನು 'ಸದೇವ ಸೋಮ್ಯೇದಮಗ್ರ ಆಸೀತ್' ಮುಂತಾಗಿರುವ ಉಪದೇಶವು ಸಗುಣಬ್ರಹ್ಮಪರವೆ ?- ಎಂಬುದನ್ನು ವಿಮರ್ಶಿಸಿ ನೋಡಿದರೆ ಇಲ್ಲಿ ತಂದಿರುವ ಬಗೆಬಗೆಯ ದೃಷ್ಟಾಂತಗಳಿಂದ ಶ್ವೇತಕೇತುವಿಗೆ ಸದ್ಬ್ರಹ್ಮದ ಸ್ವರೂಪವನ್ನು ಉಪಪಾದನೆಮಾಡಿ ತಿಳಿಸಿರುವದು ಕಂಡುಬರುತ್ತದೆ. ಪ್ರಜಾಪತಿವಾಕ್ಯದಲ್ಲಿ ಹೇಗೋಹಾಗೆ ಇಲ್ಲಿಯೂ ಈ ಕಾರಣದಿಂದಲೇ ಪ್ರಕರಣವು ದೃಷ್ಟಫಲವುಳ್ಳ ಜ್ಞಾನಕ್ಕೆ ಹೊಂದುಗೆ ಯಾಗಿದೆಯೆಂದು ಹೇಳಬೇಕಾಗುತ್ತದೆ. 'ತತ್ತ್ವಮಸಿ' ಅದೇ ನೀನಾಗಿರುವೆ - ಎಂದು ಮತ್ತೆಮತ್ತೆ ಹೇಳಿರುವ ಅಭ್ಯಾಸವು ಈಗಲೇ ಶ್ವೇತಕೇತುವು ಸದ್ಬ್ರಹ್ಮಸ್ವರೂಪ ನಾಗಿರುತ್ತಾನೆ ಎಂಬುದನ್ನು ತಿಳಿಸುವದಕ್ಕೇ ತಂದೆಯು ಪ್ರಯತ್ನಿಸುತ್ತಿದಾನೆಂಬುದನ್ನು ದೃಢಪಡಿಸುತ್ತದೆ. ಕೊನೆಯಲ್ಲಿ 'ತದ್ಧಾಸ್ಯವಿಜಿಜ್ಞೌ' 'ಈ ತಂದೆಯ ಆ ಉಪದೇಶವನ್ನು ಅವನು ಅರಿತುಕೊಂಡನು' ಎಂದೇ ಉಪಸಂಹಾರಮಾಡಿದೆಯೇ ಹೊರತು ಹೀಗೆಂದು ಉಪಾಸನೆಮಾಡಿ ಉತ್ತರಮಾರ್ಗದಿಂದ ಹೋಗಿ ಫಲವನ್ನು ಪಡೆದನು ಎಂದೇನೂ ಹೇಳಿಲ್ಲ. ಈ ಎಲ್ಲಾ ಕಾರಣದಿಂದ ಶ್ರುತಿಯು ಜ್ಞಾನಪರವೇ ಎಂಬ ಸಂಭಾವನಾ ಯುಕ್ತಿಯು ಏರ್ಪಡುತ್ತದೆ.

ಈಗ ಇಲ್ಲಿ ಬ್ರಹ್ಮದ ಕಾರ್ಯಕಾರಣಾವಸ್ಥೆಗಳ ಉಪದೇಶವನ್ನು ಮಾಡುವದಕ್ಕೆ ಶ್ರುತಿಯು ಹೊರಟಿದೆಯೆ? - ಎಂಬುದನ್ನು ವಿಚಾರಿಸಿನೋಡೋಣ. ತಂದೆಯು ಮೊದಲು ಜ್ಞಾನಕ್ಕೆ ದೃಷ್ಟಾಂತವಾಗಿ ತೆಗೆದುಕೊಂಡಿರುವ ಮೃದಾದಿ ದೃಷ್ಟಾಂತದಲ್ಲಿ 'ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್' (೬-೧-೪) ಎಂದುಮುಂತಾಗಿ ಕಾರಣವೇ ಸತ್ಯವೆಂದು ಅವಧಾರಣೆ ಮಾಡಿದಂತೆ 'ತತ್ಸತ್ಯಂ ಸ ಆತ್ಮಾ' (ಅದೇ ಸತ್ಯವು, ಅದೇ ಆತ್ಮನು) ಎಂದು ಮತ್ತೆ ಮತ್ತೆ (೬-೮-೭,

೬-೯-೪, ೬-೧೦-೩, ೬-೧೧-೩, ೬-೧೨-೩, ೬-೧೩-೩, ೬-೧೪-೩, ೬-೧೫-೩, ೬-೧೬-೩) ಅವಧಾರಣೆಮಾಡಿರುವದನ್ನು ಮನದಂದರೆ ಸನ್ಮಾತ್ರವೇ ಸತ್ಯವು, ಅದೇ ಆತ್ಮನು - ಎಂಬುದೇ ಶ್ರುತಿಗೆ ಒಪ್ಪೆಂದು ಏರ್ಪಡುತ್ತದೆ. ಕಾರ್ಯವು ವಾಚಾರಂಭಣಮಾತ್ರವೆಂದು ತಿಳಿಸುವದಕ್ಕೆ 'ಅಪಾಗಾದಗ್ನೇರಗ್ನಿತ್ವಮ್, ಅಪಾಗಾದಾದಿತ್ಯಾದಾದಿತ್ಯತ್ವಮ್' (೬-೩-೧ ರಿಂದ ೪) ಎಂದು ಮುಂತಾಗಿ ಕಾರ್ಯದ ಕಾರ್ಯತ್ವವನ್ನು ಅಲ್ಲಗಳೆಯುವದೂ ಇಲ್ಲಿ ಕಾರ್ಯಕಾರಣಭಾವವು ವಿವಕ್ಷಿತವಲ್ಲ ವೆಂಬುದಕ್ಕೆ ಪೋಷಕಯುಕ್ತಿಯಾಗಿದೆ. 'ಅನ್ನವೆಂಬ ಶುಂಗದಿಂದ ಅಪ್ಪೆಂಬ ಮೂಲವನ್ನು ಹುಡುಕು, ಅಪ್ಪೆಂಬ ಶುಂಗದಿಂದ ತೇಜೋಮೂಲವನ್ನು ಹುಡುಕು, ತೇಜಸ್ಸೆಂಬ ಶುಂಗದಿಂದ ಸನ್ಮೂಲವನ್ನು ಹುಡುಕು' ಎಂದು ಕಾರ್ಯದಿಂದ ಕಾರಣವನ್ನು ಹುಡುಕಿ ಅರಿಯಲೆಂದೇ ಇಲ್ಲಿ ಸೃಷ್ಟಿಯನ್ನು ಹೇಳಿದೆಯೆಂದು ಗೊತ್ತಾಗುತ್ತದೆ. ಆದ್ದರಿಂದ 'ಸೋಮ್ಯನೆ, ಈ ಎಲ್ಲಾ ಪ್ರಜೆಗಳೂ ಸನ್ಮೂಲವಾದವು, ಸದಾಯತನಗಳು, ಸತ್ಪ್ರತಿಷ್ಠೆಗಳು' (೬-೮-೪) ಎಂಬ ವಾಕ್ಯವು ಸತ್ತಿನಿಂದ ಕಾರ್ಯಗಳು ಹುಟ್ಟಿವೆ ಎಂಬುದನ್ನು ತಾತ್ಪರ್ಯದಿಂದ ಹೇಳುವದಕ್ಕೆ ಬಂದಿಲ್ಲವೆಂದೂ ಸನ್ಮಾತ್ರವೇ ಸರ್ವಕಾರ್ಯದ ತಿರುಳೆಂದು ಹೇಳುವದಕ್ಕೇ ಬಂದಿವೆಯೆಂದೂ ತೀರ್ಮಾನಮಾಡಬೇಕಾಗುತ್ತದೆ. ಸೃಷ್ಟಿಯನ್ನರಿತವನಿಗೆ ಯಾವ ಫಲವನ್ನೂ ಹೇಳದೆ, 'ಯಾವದರ ಶ್ರವಣಮನನವಿಜ್ಞಾನದಿಂದ, ಶ್ರವಣಾದಿಗಳನ್ನು ಮಾಡದೆ ಇರುವದೆಲ್ಲ ವನ್ನೂ ಶ್ರವಣಾದಿಗಳಿಂದ ಅರಿತಂತೆ ಆಗುವದೋ ಅದರ ಉಪದೇಶವನ್ನು ಪಡೆದುಕೊಂಡಿರುವೆಯೇನು ?'-ಎಂದ ಕಾರಣರೂಪವನ್ನು ಅರಿತಮಾತ್ರದಿಂದಲೇ ಸರ್ವಜ್ಞತ್ವವು ಬರುವದೆಂದು ಹೊಗಳಿರುವದೂ ಕಾರ್ಯಕಾರಣಭಾವವನ್ನು ಹೇಳು ವದಕ್ಕೆ ಶ್ರುತಿಯು ಬಂದಿಲ್ಲವೆಂದೂ ಕಾರಣದಂತೆ ಕಾಣುವ ಸದಾತ್ಮವಸ್ತುವೊಂದೇ ಸತ್ಯವೆಂಬುದರ ಜ್ಞಾನವನ್ನು ಉಪದೇಶಿಸುವದಕ್ಕೇ ಅದು ಬಂದಿದೆಯೆಂದೂ ನಿರ್ಣಯಿಸುವದಕ್ಕೆ ಸಾಕಾದ ಯುಕ್ತಿಯಾಗಿರುತ್ತದೆ.

ಇನ್ನೊಂದು ವಿಷಯ. ಶ್ವೇತಕೇತುವಿಗೆ ತಂದೆಯು ಆತ್ಮತತ್ತ್ವವನ್ನು ಹೇಳಿಕೊಡು ವದಕ್ಕಾಗಿ ಉಪಯೋಗಿಸಿರುವ ಯಾವ ದೃಷ್ಟಾಂತದಲ್ಲಿಯೂ ಸವಿಶೇಷವಾದ ಸಗುಣಬ್ರಹ್ಮವನ್ನುವದೇಶಿಸಿರುವದು ಕಂಡುಬರುವದಿಲ್ಲ ; ಅಲ್ಲಿ ದೃಷ್ಟಾಂತಕ್ಕೆ ತೆಗೆದುಕೊಂಡಿರುವ ಸುಷುಪ್ತ್ಯಾದಿಗಳಲ್ಲಿ ಯಾವ ವಿಶೇಷವೂ ಇಲ್ಲದ ಆತ್ಮನ ಅನುಭವವೇ ಕಂಡುಬರುತ್ತಿದೆ. ಈ ಅನುಭವವನ್ನು ಯಾರೂ ಅಲ್ಲಗಳೆಯುವದಕ್ಕಿಲ್ಲ. ಸುಷುಪ್ತಿಯಲ್ಲಿಯೂ ಸವಿಶೇಷಾನುಭವವೇ ಇದೆ ಎಂದು ಜಾಗ್ರದವಸ್ಥೆಯ ನೆನಪಿನ ಆಧಾರದಿಂದ ತರ್ಕಿಸುವವರೂ ಇರುತ್ತಾರೆ ; ಆದರೆ ಸುಷುಪ್ತಿಯ ಅನುಭವವನ್ನು

ಅವರೂ ಅಲ್ಲಗಳೆಯುವದಕ್ಕೆ ಆಗುವದಿಲ್ಲ. ಹೀಗಿರುವದರಿಂದ ನಿರ್ವಿಶೇಷವಸ್ತುವನ್ನು ಯಾವ ಪ್ರಮಾಣವೂ ತಿಳಿಸಲಾರದು ಎಂಬ ಯುಕ್ತಿಯು ಯಾವ ಕೆಲಸಕ್ಕೂ ಬರಲಾರದು ; ಏಕೆಂದರೆ ಅನುಭವವು ಎಲ್ಲಾ ಪ್ರಮಾಣಗಳಿಗಿಂತಲೂ ಹೆಚ್ಚಿನದಾಗಿರುತ್ತದೆ, ಪ್ರಮಾಣಗಳಿಗೂ ಅನುಭವವೇ ಬೆಲೆಯನ್ನು ತಂದುಕೊಡತಕ್ಕದ್ದಾಗಿರುತ್ತದೆ.

ಈ ಎಲ್ಲಾ ಕಾರಣಗಳಿಂದ 'ಸದೇವ ಸೋಮ್ಯ' ಎಂಬಲ್ಲಿರುವದು ವಸ್ತುತಂತ್ರವಾದ ಆದ್ವೈತಜ್ಞಾನವೇ ಎಂದು ನಿಶ್ಚಯಿಸಬೇಕಾಗಿರುತ್ತದೆ.

ಬ್ರಹ್ಮಜ್ಞಾನವಾಕ್ಯಗಳಿಗೂ ಉಪಾಸನಾವಾಕ್ಯಗಳಿಗೂ ತಾರತಮ್ಯ

ಈಗ ಉಪನಿಷತ್ತುಗಳಲ್ಲಿ ಹೇಳಿರುವ ಬ್ರಹ್ಮಸ್ವರೂಪವರ್ಣನವಾಕ್ಯಗಳಲ್ಲಿ ಯಾವವು ಪ್ರಬಲ ? ಅವೇ ಪ್ರಬಲವೆಂಬುದಕ್ಕೆ ಗಮಕವೇನು ?- ಎಂಬುದನ್ನು ನಿರ್ಣಯಿಸುವ ಕೆಲಸವೊಂದು ಉಳಿದಿರುತ್ತದೆ. ಬ್ರಹ್ಮವು ಸತ್ಯಕಾಮನೂ ಸತ್ಯಸಂಕಲ್ಪನೂ ಜಗತ್ಕಾರಣನೂ ಅಂತರ್ಯಾಮಿಯೂ ಪ್ರಶಾಸಿತೃವೂ ಆದ ಪರಮೇಶ್ವರನಾಗಿರುತ್ತಾನೆ ಎಂದು ಕೆಲವು ವಾಕ್ಯಗಳಿಂದ ತಿಳಿಯಬರುತ್ತದೆ ; ಅದರಲ್ಲಿ ಯಾವ ವಿಶೇಷವೂ ಇಲ್ಲ, ಅದು ವಿದಿತಾವಿದಿತಗಳಿಗಿಂತ ಬೇರೆ, ವಾಙ್ಮನಸ್ಸುಗಳಿಗೆ ವಿಷಯವಲ್ಲ, ಉಪಶಾಂತಸ್ವರೂಪವಾಗಿರುತ್ತದೆ ಎಂದುಮುಂತಾಗಿ ಕೆಲವು ವಾಕ್ಯಗಳಿಂದ ತಿಳಿದುಬರುತ್ತದೆ. ಹೀಗಿರುವದರಿಂದ ಸಗುಣವಾಕ್ಯಗಳನ್ನು ಮುಖ್ಯವೆಂದು ಹಿಡಿದು ನಿರ್ಗುಣವಾಕ್ಯಗಳನ್ನು ಪರಮಾತ್ಮನು ಹೇಯಗುಣರಹಿತನೆಂಬ ಅರ್ಥಾಂತರವಿಷಯಕವೆಂದು ತಿರುಗಿಸಿಕೊಳ್ಳುವದು ಯುಕ್ತವೆ, ಅಥವಾ ನಿರ್ಗುಣವಾಕ್ಯಗಳನ್ನು ಮುಖ್ಯವೆಂದು ಹಿಡಿದು ಸಗುಣವಾಕ್ಯಗಳನ್ನೇ ಬೇರೊಂದು ಅರ್ಥವುಳ್ಳವೆಂದು ಕಲ್ಪಿಸುವದು ಯುಕ್ತವೆ ? ವೇದವು ಸರ್ವಥಾ ಪ್ರಮಾಣವಾಗಿರುವದರಿಂದ ಯಾವ ವಾಕ್ಯಕ್ಕಾದರೂ ಕಡಿಮೆಯ ಪ್ರಾಮಾಣ್ಯವನ್ನು ಏಕೆ ಕೊಡಬೇಕು ?- ಎಂಬ ಪ್ರಶ್ನೆಯು ಎದ್ದುಕೊಳ್ಳುವದು ಸ್ವಾಭಾವಿಕವಾಗಿರುತ್ತದೆ.

ಇದಕ್ಕೆ ಆಚಾರ್ಯರು ಸೂತ್ರಭಾಷ್ಯದಲ್ಲಿ ಒಂದು ಉತ್ತರವನ್ನು ಕೊಟ್ಟಿರುತ್ತಾರೆ. ಬ್ರಹ್ಮವು ರೂಪಾದಿವಿಶೇಷಗಳಿಲ್ಲದ್ದೆಂದು ನಿರ್ಣಯಿಸುವದೇ ಯುಕ್ತ ; ಏಕೆಂದರೆ ನಿರ್ವಿಶೇಷಬ್ರಹ್ಮವನ್ನು ತಿಳಿಸುವ ವಾಕ್ಯಗಳು ತತ್ಪ್ರಧಾನವಾಗಿರುತ್ತವೆ. ಅವುಗಳು ಬ್ರಹ್ಮವಸ್ತುವಿನಲ್ಲಿಯೇ ಸಮನ್ವಯವಾಗುತ್ತವೆ. ಅವುಗಳು ಬ್ರಹ್ಮವನ್ನು ಯಾವದೊಂದು ವಿಧಿಗೂ ಶೇಷವಾಗಿ ತಿಳಿಸುವದಿಲ್ಲ ; ಆದರೆ ಸವಿಶೇಷಬ್ರಹ್ಮವನ್ನು ತಿಳಿಸುವ ವಾಕ್ಯಗಳೋ ಎಂದರೆ ಅವು ಬ್ರಹ್ಮಸ್ವರೂಪಪ್ರತಿಪಾದನಪರವಾಗಿರುವದಿಲ್ಲ, ಅವು ಉಪಾಸನಾವಿಧಿಪರವಾಗಿರುತ್ತವೆ. ಅಲ್ಲಿ ವರ್ಣಿಸಿರುವ ಬ್ರಹ್ಮರೂಪವು ಉಪಾಸನಾ

ವಿಧಿಗೆ ಶೇಷವಾಗಿರುತ್ತದೆ. ಆದ್ದರಿಂದ ತತ್ಪರವಾಗಿರುವ ವಾಕ್ಯವು ಅತತ್ಪರವಾಗಿರುವ ವಾಕ್ಯಗಳಿಗಿಂತ ಪ್ರಬಲವಾಗಿರುತ್ತದೆ. ಈ ಅರ್ಥವು ಸೂತ್ರಭಾಷ್ಯದಲ್ಲಿ (೩-೨-೧೪) ಸ್ಪಷ್ಟವಾಗಿ ಲಿಖಿತವಾಗಿರುತ್ತದೆ. ಅಲ್ಲಿರುವ ಉಭಯಲಿಂಗಾದಿಕರಣದ ಸೂತ್ರಗಳ ಭಾಷ್ಯವನ್ನೆಲ್ಲ (ಸೂ.ಭಾ. ೩-೨-೧೧ ರಿಂದ ೨೧ ರವರೆಗಿನ ಗ್ರಂಥವನ್ನೆಲ್ಲ) ಸಾವಧಾನವಾಗಿ ವಾಚಕರು ಓದಿಮನನಮಾಡಿಕೊಂಡರೆ ಈ ವಿಷಯದಲ್ಲಿ ಯಾವ ಸಂಶಯವೂ ಉಳಿಯಲಾರದು.

ಉಪನಿಷತ್ತಿನಲ್ಲಿ ಅದ್ವೈತಜ್ಞಾನಕ್ಕಿರುವ ಪ್ರಾಶಸ್ತ್ಯ

ಉಪನಿಷತ್ತುಗಳಲ್ಲಿ ಉಪಾಸನೆ, ವಸ್ತುಬೋಧಕಜ್ಞಾನ- ಇವೆರಡನ್ನೂ ಉಪದೇಶಿಸಿರುತ್ತದೆ. ಅನೇಕರು ತತ್ತ್ವಜ್ಞಾನವನ್ನು ಸಂಪಾದಿಸುವದಕ್ಕೆ ತಕ್ಕ ಅಧಿಕಾರವುಳ್ಳವರಾಗಿರುವದಿಲ್ಲವಾದ್ದರಿಂದ ಮಧ್ಯಮಾಧಿಕಾರಿಗಳಾದವರಿಗಾಗಿ ಶ್ರುತಿಯು ಉಪಾಸನೆಯನ್ನೇ ಬಹಳವಾಗಿ ಹೇಳಿರುವದು ಯುಕ್ತವೇ ಆಗಿರುತ್ತದೆ. ಈಗ್ಗೆ ವೇದಾಂತಿಗಳೆಂದು ಹೇಳಿಕೊಳ್ಳುತ್ತಿರುವ ಅನೇಕರು ಕೆಲವು ಶ್ರುತಿವಾಕ್ಯಗಳನ್ನು ಉದಾಹರಿಸಿ ಶುಷ್ಕತರ್ಕಪ್ರಧಾನವಾದ ವಾಕ್ಯಗಳನ್ನು ಬಳಸುತ್ತಾ ತಾವು ಜ್ಞಾನಿಗಳೆಂದು ಹೊರಗೆ ತೋರಿಸಿಕೊಳ್ಳುತ್ತಿರುವದರಿಂದ ಉಪಾಸನೆಯ ಹೆಚ್ಚುಗಾರಿಕೆಯನ್ನು ಅರಿಯದ ಅನೇಕರು ವೇದಾಂತದ ವಿಷಯಕ್ಕೆ ತಪ್ಪುಕಲ್ಪನೆಗಳನ್ನು ಮಾಡಿಕೊಳ್ಳುವ ಸಂಭವವಿದೆ. ಅಂಥವರು ಈ ಉಪನಿಷತ್ತನ್ನು ಮನಮುಟ್ಟಿ ಓದಿ ಚಿಂತನೆಮಾಡಿದರೆ ಆಚಾರ್ಯರ ವೇದಾಂತದಲ್ಲಿ ಉಪಾಸನೆಗೆ ಇರುವ ಹೆಚ್ಚಿನ ಬೆಲೆಯು ಗೊತ್ತಾದೀತು.

ಆದರೆ ಉಪನಿಷತ್ತಿನ ಪರಮತಾತ್ಪರ್ಯವು ಬ್ರಹ್ಮಾತ್ಮೈಕ್ಯಜ್ಞಾನದಲ್ಲಿಯೇ ಎಂಬುದನ್ನು ಮಾತ್ರ ಯಾರೂ ಅಲ್ಲಗಳೆಯುವದಕ್ಕಿಲ್ಲ. ಆತ್ಮಜ್ಞಾನದ ಆಧಾರದಿಂದಲೇ ಸಗುಣಬ್ರಹ್ಮಶರಣರಿಗೂ ಅವೃತ್ತಿರಹಿತಮುಕ್ತಿಯಾಗುವದು (ಸೂ. ಭಾ. ೪-೪-೨೨) ಎಂದು ಆಚಾರ್ಯರು ಕಂಠೋಕ್ತವಾಗಿ ಹೇಳಿಟ್ಟಿರುತ್ತಾರೆ. ಈ ಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಕರ್ಮೋಪಾಸನೆಗಳು ಒದಗಿಸಿಕೊಡುವವಾದರೂ ಅವೇ ನೇರಾಗಿ ಎಂದಿಗೂ ಕೈವಲ್ಯವನ್ನು ಕೊಡಲಾರವು. ಆಶ್ರಮತ್ರಯದಲ್ಲಿ ನಿಷ್ಠರಾಗಿರುವವರಿಗೆ ಪುಣ್ಯಲೋಕವು ಆಗುವದು, ಬ್ರಹ್ಮಸಂಸ್ಥನಾದ ಸಂನ್ಯಾಸಿಗೆ ಮಾತ್ರ ಅಮೃತತ್ವವು ಸಿಕ್ಕುವದು - ಎಂದು ಪ್ರಣವೋಪಾಸನಾವಿಧಿಗೆ ಶೇಷವಾಗಿರುವ ಅರ್ಥವಾದ ಶ್ರುತಿಯು(೨-೨-೧)ಒಂದು ಅಮೋಘತತ್ತ್ವವನ್ನು ಸಾರುತ್ತದೆ. ಇದರಿಂದ ಅಮೃತತ್ವಕ್ಕೆ ಕರ್ಮದ ಹಂಗಿಲ್ಲವೆಂದು ಉಪಾಸನಾಪ್ರಕರಣದಲ್ಲಿಯೂ ಸ್ಪಷ್ಟವಾಗಿ ಹೇಳಿದಂತೆ

ಆಗಿರುತ್ತದೆ. ಇಲ್ಲಿ ಮರೆಯದೆ ಲಕ್ಷ್ಯದಲ್ಲಿಡಬೇಕಾದ ವಿಷಯವೊಂದಿದೆ. ಆತ್ಮನು ಪರಮಾರ್ಥದೃಷ್ಟಿಯಿಂದ ಅದ್ವಿತೀಯನೇ ಆಗಿದ್ದರೂ ಅವನಲ್ಲಿ ಅವಿದ್ಯೆಯಿಂದ ಕಲ್ಪಿತವಾದ ನಾಮರೂಪಗಳಿಂದಾದ ಉಪಾಧಿಗಳು ತೋರುತ್ತಿರುವವು. ಈ ಉಪಾಧಿಗಳ ಕೆಲವು ಧರ್ಮಗಳನ್ನು ವಿಶೇಷವಾಗಿಟ್ಟುಕೊಂಡು ಮಧ್ಯಮಾಧಿಕಾರಿಗಳಿಗೆ ಬ್ರಹ್ಮೋಪಾಸನೆಯನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆ. ವಿಚಾರಪ್ರಧಾನರಾದ ಜಿಜ್ಞಾಸುಗಳಿಗೆ ಇದೇ ಉಪಾಧಿಗಳನ್ನೇ- ಮನುಷ್ಯನ ಜ್ಞಾನಕ್ಕೆ ಸಾಧನವಾಗಿರುವ ನೆರಳಿನಂತೆ ಆತ್ಮಜ್ಞಾನಕ್ಕೆ ಉಪಾಯವಾಗಿಯೂ ಉಪದೇಶಿಸಿರುತ್ತದೆ. ಉಪಾಸನಾವಾಕ್ಯದಲ್ಲಿ ಉಪಾಧಿಗಳು ವಿವಕ್ಷಿತವಾಗಿರುತ್ತವೆ, ಜ್ಞಾನವಾಕ್ಯದಲ್ಲಿ ಉಪಾಯಮಾತ್ರವಾಗಿರುವದರಿಂದ ಅವಿವಕ್ಷಿತವಾಗಿರುತ್ತವೆ- ಎಂಬುದೊಂದು ವಿಶೇಷ (ಸೂ. ಭಾ. ೧-೧-೧೨, ಭಾ. ಭಾ. ೯೧, ೯೨ನ್ನು ನೋಡಿ). ಒಂದೇ ಬ್ರಹ್ಮವನ್ನೇ ಉಪಾಸ್ಯವಾಗಿಯೂ ಜ್ಞೇಯವಾಗಿಯೂ ಶ್ರುತಿಯಲ್ಲಿ ಹೇಳಿರುವದರಿಂದ ಉಪಾಸನಾಪ್ರಕರಣದಲ್ಲಿ ಉಪಾಸನೆಗಾಗಿ ಹೇಳಿದ ರೂಪವನ್ನು ಕೂಡ ಜ್ಞಾನಪ್ರಕರಣದಲ್ಲಿ ವಸ್ತುನಿರೂಪಣೆಗೆ ಉಪಯೋಗಿಸಿಕೊಳ್ಳಬಹುದಾಗಿದೆ. ಉದಾಹರಣೆಗೆ 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನ್' (೩-೧೪-೧) ಎಂದು ಉಪಾಸನಾಪ್ರಕರಣದಲ್ಲಿ ಹೇಳಿದ್ದ ಜಗಜ್ಜನ್ಮಾದಿಕಾರಣತ್ವವನ್ನೇ 'ಸದೇವ ಸೋಮ್ಯ' ಎಂಬ ಜ್ಞಾನಪ್ರಕರಣದಲ್ಲಿ ಉಪಪಾದನೆಮಾಡಿ ಅದ್ವೈತಾತ್ಮಸ್ವರೂಪವನ್ನು ನಿರ್ಧರಿಸಿರುತ್ತದೆ ; ಇದರಂತೆ ಉಪಾಸನಾಪ್ರಕರಣದಲ್ಲಿ ವೈಶ್ವಾನರಾತ್ಮನಿಗೆ ಹೇಳಿರುವ ದ್ಯುಮೂರ್ಧತ್ವಾದಿ (೫-೧೮-೨) ವಿಶೇಷಣಗಳನ್ನು ಜಾಗರಿತಸ್ಥಾನದ ಆತ್ಮನ ಸ್ವರೂಪದ ನಿರೂಪಣೆಗೆ ಮಾಂಡೂಕ್ಯದಲ್ಲಿ ಉಪಯೋಗಿಸಿಕೊಂಡು ಅದ್ವಿತೀಯಾತ್ಮನಾದ ತುರೀಯನ ತತ್ತ್ವವನ್ನು ನಿಶ್ಚಯಿಸುವದಕ್ಕೆ ವಿನಿಯೋಗಿಸಿರುವದನ್ನು ಇಲ್ಲಿ ಮನದಂದುಕೊಳ್ಳಬಹುದು. ಹೀಗೆಯೇ ಉಪಾಸ್ಯವಾದದ್ದು ಪರಬ್ರಹ್ಮವೊ, ಅಲ್ಲವೊ ? -ಎಂಬುದನ್ನು ಗೊತ್ತುಮಾಡುವದಕ್ಕೆ ಸರ್ವರ ಆತ್ಮನಾಗಿರುವದೇ ಮುಂತಾದ ಪರಮಾತ್ಮಸ್ವರೂಪಬೋಧಕವಾದ ವಿಶೇಷಣಗಳನ್ನು ಉಪಯೋಗಿಸಿಕೊಂಡು ಉಪಾಸ್ಯವು ಬ್ರಹ್ಮವೇ ಎಂದು ನಿಶ್ಚಯಿಸಿರುವ ಉದಾಹರಣೆಗಳನ್ನು ಸೂತ್ರಭಾಷ್ಯದಲ್ಲಿ ವಾಚಕರು ಕಾಣಬಹುದಾಗಿದೆ.

ಇದೂ ಅಲ್ಲದೆ ಜ್ಞಾನದ ಫಲವು ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವದಾಗಿರುತ್ತದೆ. ಇದನ್ನು ಇಲ್ಲವೆನ್ನುವದು ಯಾರಿಂದಲೂ ಆಗುವದಿಲ್ಲ - ಎಂದು ಭಾಷ್ಯಕಾರರು ತಮ್ಮ ಭಾಷ್ಯಗಳಲ್ಲಿ ಮತ್ತೆಮತ್ತೆ ಬರೆದಿರುತ್ತಾರೆ. ಅದ್ವೈತಜ್ಞಾನವಾದ ಬಳಿಕ ಯಾವ ಶಂಕೆಯೂ ಉಳಿಯುವಂತೆಯೇ ಇಲ್ಲವಾದ್ದರಿಂದ ಅದ್ವೈತಸಿದ್ಧಾಂತದಲ್ಲಿ ಯಾವ

ದೋಷವನ್ನೂ ಯಾರೂ ಆರೋಪಿಸುವದಕ್ಕೆ ಬರುವಹಾಗಿಲ್ಲ. ಅದ್ವೈತಾನುಭವವು ಬಂದಾಗ ಎಲ್ಲಾ ದ್ವೈತವನ್ನೂ ಬಾಧಿಸಿಯೇ ಬರುವದರಿಂದ ಆಮೇಲೆ ಉಪಾಸನಾ ವಾಕ್ಯಗಳಿಗೆ ಗತಿಯೇನು ?- ಎಂಬ ಶಂಕೆಗಂತೂ ಯಾವ ಅವಕಾಶವೂ ಉಳಿಯುವದಿಲ್ಲ. ಈ ಕಾರಣದಿಂದಲೇ 'ತತ್ತ್ವಮಸಿ' ಮುಂತಾದ ವಾಕ್ಯಗಳಿಗೆ ಉಪಾಸನಾವಿಧಿಪರವಾದ ಅರ್ಥವನ್ನು ಕಲ್ಪಿಸುವದಾಗಲಿ ಇದು ಕೇವಲ ಸ್ತುತಿಗಾಗಿ ಬಂದಿರುವ ಅರ್ಥವಾದವೆಂದು ಕಲ್ಪಿಸುವದಾಗಲಿ ಆಗಲಾರದು ಎಂದು ಆಚಾರ್ಯರು ಆರನೆಯ ಅಧ್ಯಾಯದ ಉಪಸಂಹಾರಭಾಷ್ಯ (ಭಾ. ಭಾ. ೫೪೧)ದಲ್ಲಿ ಸ್ಪಷ್ಟಪಡಿಸಿರುತ್ತಾರೆ. ಈ ಯುಕ್ತಿಗಳ ಜೊತೆಗೆ ಕೇವಲ ತರ್ಕಪ್ರಧಾನರಾಗಿರುವವರ ಸಲುವಾಗಿ ಮತ್ತೊಂದು ಯುಕ್ತಿಯನ್ನು ಇಲ್ಲಿ ಹೇಳಬಹುದು. ದ್ವೈತವನ್ನು ಸಿದ್ಧಾಂತವೆಂದು ಇಟ್ಟುಕೊಂಡರೆ ಅಲ್ಲಿ ಶಂಕಾಸಮಾಧಾನಗಳಿಗೆ ಅವಕಾಶವಿದ್ದೇ ಇರುತ್ತದೆ ; ಏಕೆಂದರೆ ಶಂಕೆಯೂ ಸಮಾಧಾನವೂ ದ್ವೈತಕ್ಷೇತ್ರದೊಳಗೆ ಇದ್ದೇ ಇರುತ್ತದೆ. ಆದರೆ ಅದ್ವೈತವನ್ನು ಸಿದ್ಧಾಂತವೆಂದು ವಾದಕ್ಕಾಗಿ ಒಪ್ಪಿ ಇಟ್ಟುಕೊಂಡರೂ ಯಾವ ಶಂಕೆಗೂ ಅವಕಾಶವಿರುವದಿಲ್ಲ. ಜಿಜ್ಞಾಸುಗಳು ಇದನ್ನು ನೆನಪಿನಲ್ಲಿಟ್ಟರೆ ಅದ್ವೈತದ ಮೇಲಿನ ಆಕ್ಷೇಪಗಳಿಗೆಲ್ಲ ಪರಿಹಾರವು ದೊರಕುವದು.

ತತ್ತ್ವಪ್ರತಿಪಾದನಪ್ರಕ್ರಿಯೆಗಳು

ಮೇಲೆ ತಿಳಿಸಿರುವಂತೆ ಜಿಜ್ಞಾಸುಗಳಿಗೆ ತತ್ತ್ವವನ್ನು ಬೋಧಿಸುವದಕ್ಕೆಂದು ಶ್ರುತಿಯಲ್ಲಿ ಬೇರೆಬೇರೆಯ ಉಪಾಧಿಗಳನ್ನವಲಂಬಿಸಿರುತ್ತದೆ. ಆದರೆ ಅವುಗಳಲ್ಲಿ ಯಾವದೊಂದು ಉಪಾಧಿಯೂ ವಿವಕ್ಷಿತವಲ್ಲ. ಆದ್ದರಿಂದ ಕೊನೆಯಲ್ಲಿ ಅದ್ವೈತಾತ್ಮನನ್ನು ಅವಧಾರಣೆಮಾಡಿಯೇ ಉಪದೇಶವನ್ನು ಮುಗಿಸಿರುತ್ತದೆ. ಅಧಿಕಾರಿಗಳು ಬೇರೆಬೇರೆಯ ಚಿತ್ತಭೂಮಿಕೆಯಲ್ಲಿರುತ್ತಾರಾದ್ದರಿಂದ ಅವರವರಿಗೆ ತಕ್ಕಂತೆ ಉಪದೇಶದ ಪ್ರಕ್ರಿಯೆಯೂ ಬೇರೆ ಬೇರೆಯಾಗಿರುತ್ತದೆ. ಅಷ್ಟೆ.

ಪ್ರಕೃತೋಪನಿಷತ್ತಿನಲ್ಲಿ ಉಪಯೋಗಿಸಿರುವ ಪ್ರಕ್ರಿಯೆಗಳು ಹೀಗಿವೆ :

(೧) **ಆರನೆಯ ಅಧ್ಯಾಯದಲ್ಲಿ** ಶ್ವೇತಕೇತುವಿಗೆ ನೀನು ಸಂಸಾರಿಯಲ್ಲ ಪರಮಾತ್ಮನೇ ಎಂಬುದನ್ನು ಬೋಧಿಸುವದಕ್ಕಾಗಿ ಮುಖ್ಯವಾಗಿ ಜಗತ್ಕಾರಣವಾದ ಸದ್ಬ್ರಹ್ಮವನ್ನು ಹೇಳುವದಕ್ಕೆ ಉಪಕ್ರಮಿಸಿ ಆ ಸತ್ತೇ ಜೀವರೂಪದಿಂದ ಕಾರ್ಯಕರಣ ಸಂಘಾತದಲ್ಲಿ ಒಳಹೊಕ್ಕು ನಾಮರೂಪಗಳನ್ನು ವ್ಯಾಕರಣಮಾಡಿದೆ- ಎಂಬ ಕಾರ್ಯಕಾರಣಪ್ರಕ್ರಿಯೆಯನ್ನು ಹೇಳಿರುತ್ತದೆ. ಇಡಿಯ ಜಗತ್ತೆಲ್ಲವೂ ನಿಜವಾಗಿ ಆ ಸದಾತ್ಮಕಬ್ರಹ್ಮವೇ ಆಗಿರುತ್ತದೆ, ಅಂಥ ಅದ್ವಿತೀಯಬ್ರಹ್ಮವೇ ನೀನು, ಕಾರ್ಯ

ಕರಣಸಂಘಾತಕ್ಕೆ ಕಟ್ಟುಬಿದ್ದವನಲ್ಲ - ಎಂಬುದನ್ನು ಬಗೆಬಗೆಯ ಶಂಕಾಸಮಾಧಾನಗಳ ರೂಪದಿಂದ ಶ್ವೇತಕೇತುವಿಗೆ ತಂದೆಯು ಬೋಧಿಸಿದನೆಂದು ತಿಳಿಸಿದೆ.

(೨) ಏಳನೆಯ **ಅಧ್ಯಾಯದಲ್ಲಿ** ನಾರದನಿಗೆ ಸನತ್ಕುಮಾರಭಗವಂತನು ಋಗ್ವೇದಾದಿಗಳನ್ನೆಲ್ಲ ನಾಮಮಾತ್ರದಲ್ಲಿ ಅಡಗಿಸಿ, ನಾಮದಿಂದ ಪ್ರಾಣಾಂತವಾದ ಕಾರ್ಯಗಳು ಒಂದಕ್ಕಿಂತ ಒಂದು ವ್ಯಾಪಕವಾಗಿರುವದರಿಂದ ಆತ್ಮಶಬ್ದಕ್ಕೆ ಹೆಚ್ಚು ಹೆಚ್ಚು ಅರ್ಹವಾಗಿರುವವೆಂಬುದನ್ನು ತಿಳಿಸಿಕೊಟ್ಟು, ಆ ಪ್ರಾಣವನ್ನು ಕೂಡ ಪರಮಾರ್ಥಸತ್ಯವಾದ ಭೂಮವೆಂಬ ಹೆಸರಿನ ಪರಮಾತ್ಮನು ವ್ಯಾಪಿಸಿಕೊಂಡಿರುತ್ತಾನೆಂದೂ ಅದ್ವಿತೀಯನಾದ ಆ ಪರಮಾತ್ಮನೇ ಮುಖ್ಯಾರ್ಥದಲ್ಲಿ ಆತ್ಮನೆಂದೂ ತಿಳಿಸಿಕೊಟ್ಟಿರುತ್ತದೆ.

(೩) **ಎಂಟನೆಯ ಅಧ್ಯಾಯದಲ್ಲಿ** ಪ್ರಜಾಪತಿಯು ಇಂದ್ರನಿಗೆ ಅಪಹತ ಪಾಪ್ಮನೂ ಅಶನಾಯಾದ್ಯತೀತನೂ ಆದ ಅಮೃತಾಭಯಬ್ರಹ್ಮವೇ ನಿಜವಾದ ಆತ್ಮನೆಂಬುದನ್ನು ಇಂದ್ರಿಯಜ್ಞಾನ, ಸ್ವಪ್ನಜ್ಞಾನ, ಸುಷುಪ್ತಿಜ್ಞಾನ - ಇವುಗಳ ಮೂಲಕವಾಗಿ ಕಾರ್ಯಕರಣಸಂಘಾತರಹಿತನಾದ ಅಶರೀರಾತ್ಮನ ಸ್ವರೂಪದ ತಿಳಿವಳಿಕೆಯನ್ನು ಕ್ರಮಕ್ರಮವಾಗಿ ಮಾಡಿಕೊಟ್ಟು ಮನಗಾಣಿಸಿರುತ್ತಾನೆ. ಕೊನೆಯಲ್ಲಿ ''ನಾನು ಈ ಇಂದ್ರಿಯದಿಂದ ಇದನ್ನು ಅರಿಯುತ್ತೇನೆ'' ಎಂಬ ಪ್ರಮಾತೃಪ್ರಮಾಣ ಪ್ರಮೇಯವಿಭಾಗವು ಯಾವ ಚೈತನ್ಯರೂಪವಾದ ಆತ್ಮನಿಗೆ ತೋರುತ್ತಿರುವದೋ ಅವನೇ ಆತ್ಮನು ಎಂದು ಸಾಕ್ಷಿಸ್ವರೂಪವನ್ನು ತಿಳಿಸಿಕೊಟ್ಟಿರುತ್ತಾನೆ.

ಇಲ್ಲಿ **ಶ್ವೇತಕೇತುವು** ಗುರುಗಳಲ್ಲಿ ಎಲ್ಲವನ್ನೂ ಕಲಿತೆನೆಂದು ತಪ್ಪುತಿಳಿವಳಿಕೆಯ ಅಭಿಮಾನದಿಂದ ಬಂದಿದ್ದಾಗ ಆತ್ಮಜ್ಞಾನದಿಂದಲೇ ಸರ್ವಜ್ಞತ್ವವು ಬರುವದೆಂದು ತಿಳಿಸುವದಕ್ಕಾಗಿ ಕಾರಣವಿಜ್ಞಾನದಿಂದ ಕಾರ್ಯವೆಲ್ಲವನ್ನೂ ಅರಿತಂತಾಗುವದೆಂಬ ಪ್ರಕ್ರಿಯೆಯನ್ನು ಉಪಯೋಗಿಸಿರುತ್ತದೆ. ನಾರದನು ನಾನು ಬರಿಯ ಮಂತ್ರರೂಪವಾದ ಶಬ್ದಜ್ಞಾನವುಳ್ಳವನು, ಅವುಗಳಿಗೆ ಗುರಿಯಾದ ಆತ್ಮನನ್ನು ಅರಿಯದೆ ಶೋಕಿಸುತ್ತಿರುವೆನು ಎಂದು ಹೇಳಿಕೊಂಡದ್ದರಿಂದ ಆ ಶಬ್ದದಿಂದಲೇ ಮೊದಲುಮಾಡಿಕೊಂಡು ಪ್ರಾಣಾಂತವಾದ ವ್ಯಾಪಕತತ್ತ್ವವನ್ನು ಬೋಧಿಸಿ ಸರ್ವವ್ಯಾಪಕವಾದ ಅದ್ವಿತೀಯಾತ್ಮನೇ ಸುಖವು ಎಂದು ಶೋಕಪರಿಹಾರೋಪಾಯವನ್ನು ಉಪದೇಶಿಸಿದೆ. ಇಂದ್ರನು ಯಾವ ಆತ್ಮಸ್ವರೂಪವನ್ನು ತಿಳಿದರೆ ಸರ್ವಲೋಕಗಳಲ್ಲಿಯೂ ಕಾಮಚಾರ ರೂಪವಾದ ಭೋಗವು ದೊರಕೀತು ? - ಎಂಬುದನ್ನು ಅರಿತುಕೊಳ್ಳುವದಕ್ಕಾಗಿ ಬಂದದ್ದರಿಂದ ಅಶರೀರಾತ್ಮಜ್ಞಾನವೇ ಸರ್ವಾತ್ಮಭಾವದಿಂದ ಸರ್ವಕಾಮಾಪ್ತಿಗೆ

ಮಾರ್ಗವೆಂದು ಉಪದೇಶಿಸಿದೆ. ಹೀಗೆ ಅಧಿಕಾರಭೇದದಿಂದ ಉಪದೇಶ ಪ್ರಕ್ರಿಯೆಯು ಬೇರೆ ಬೇರೆಯಾದರೂ ಅದ್ವೈತ ಜ್ಞಾನವೆಂಬ ಗುರಿಯು ಒಂದೇ ಆಗಿರುತ್ತದೆ.

ಸಾಧನವೂ ಫಲವೂ

ಜ್ಞಾನವಾಗಲಿ ಉಪಾಸನೆಯಾಗಲಿ ಬರಿಯ ಒಣತರ್ಕದಿಂದ ಎಂದಿಗೂ ದಕ್ಕುವದಿಲ್ಲವೆಂಬುದನ್ನು ಈ ಉಪನಿಷತ್ತಿನಲ್ಲಿ ಆಯಾ ಆಖ್ಯಾನದ ಮೂಲಕ ಮತ್ತೆಮತ್ತೆ ಮನಗಾಣಿಸಿದೆ. ಗುರುಶುಶ್ರೂಷೆ, ಬ್ರಹ್ಮಚರ್ಯ, ಗುರುವಿನಲ್ಲಿ ವಿನಯದಿಂದ ಪ್ರಶ್ನೆಮಾಡುವುದು - ಇವುಗಳಿಂದಲೇ ಪರಮಾತ್ಮಪ್ರಾಪ್ತಿಗೆ ಸಾಧನವಾದ ಉಪಾಸನೆಯಾಗಲಿ ಜ್ಞಾನವಾಗಲಿ ಅಳವಡುವದೇ ಹೊರತು ಆಸುರಸಂಪತ್ತಿನವರಿಗೆ ದಕ್ಕಲಾರದು- ಎಂಬುದನ್ನು ಸ್ಪಷ್ಟವಾಗಿ ತೋರಿಸಿದೆ. ಉಪಾಸನೆಯಲ್ಲಿಯೂ ಪರಮಾತ್ಮಜ್ಞಾನದಲ್ಲಿಯೂ ನೆಲೆನಿಂತ ಮಹನೀಯರ ಮಹಿಮೆಯನ್ನು ಆಯಾ ಉಪಾಸನೆಯ ಮತ್ತು ಜ್ಞಾನದ ಪ್ರಕರಣದಲ್ಲಿ ತಿಳಿಯಪಡಿಸಿದೆ. ವಿನೀತರಾಗಿ ಸದ್ಗುರುವಿನ ಮೂಲಕವೇ ಪರಮಪುರುಷಾರ್ಥದ ಸಾಧನವನ್ನು ಪಡೆದು ಕೃತಾರ್ಥರಾಗಬೇಕೆಂಬುದನ್ನು ಮುಮುಕ್ಷುಗಳೆಲ್ಲರೂ ಇಲ್ಲಿರುವ ಬೇರೆಬೇರೆಯ ಆಖ್ಯಾನಗಳಿಂದ ಗ್ರಹಿಸಬಹುದಾಗಿರುತ್ತದೆ.

ಉಪಸಂಹಾರ

ಹೀಗೆ ಶ್ರುತಿಯುಕ್ತ್ಯನುಭವಗಳಿಗೆ ಸಂಮತವಾಗಿರುವ ಆಚಾರ್ಯರ ಭಾಷ್ಯವನ್ನು ಯಥಾಮತಿಯಾಗಿ ಕನ್ನಡಿಸುವ ಸುಯೋಗವನ್ನು ಅನುಗ್ರಹಿಸಿರುವದಕ್ಕಾಗಿ ಆ ಮಹಾತ್ಮರನ್ನು ಪೂಜ್ಯಬುದ್ಧಿಯಿಂದ ಮತ್ತೆಮತ್ತೆ ನಮಸ್ಕರಿಸಿ ಈ ಪೀಠಿಕೆಯನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ, ಅನುವಾದಕ
ಮನ್ಮಥಸಂವತ್ಸರ,
ಮಾಘ ಬಹುಳ ೧೧

ವಿಷಯಾನುಕ್ರಮಣಿಕೆ

ವಿಶೇಷ : ಇಲ್ಲಿ ಚರ್ಚಾಭಾಗಗಳನ್ನು ಸೇರಿಸಿಲ್ಲ. ಕಂಸಗಳಲ್ಲಿರುವ ಸಂಖ್ಯೆಗಳು ಭಾಷ್ಯಭಾಗಗಳನ್ನು ಸೂಚಿಸುವವು.

ಭಾಷ್ಯಕಾರರ ಅವತರಣಿಕೆ

ಗ್ರಂಥಾರಂಭಪ್ರತಿಜ್ಞೆ (೧) - ಹಿಂದಿನ ಗ್ರಂಥಕ್ಕೂ ಈ ಉಪನಿಷತ್ತಿಗೂ ಸಂಬಂಧ (೨) - ಅದ್ವೈತಾತ್ಮಜ್ಞಾನವಿಲ್ಲದೆ ಆತ್ಯಂತಿಕಮೋಕ್ಷವಿಲ್ಲ (೩) - ಅದ್ವೈತಾತ್ಮಜ್ಞಾನಕ್ಕೂ ಕರ್ಮಕ್ಕೂ ಸಮುಚ್ಚಯವಿಲ್ಲ (೪) - ಅದ್ವೈತಜ್ಞಾನಕ್ಕೂ ಉಪಾಸನೆಗೂ ತಾರತಮ್ಯ (೫) - ಮೊದಲು ಉಪಾಸನೆಗಳನ್ನೇ ಹೇಳಿರುವದೇಕೆ ? (೬). **ಪುಟ 1-8**

ಒಂದನೆಯ ಅಧ್ಯಾಯ

ಒಂದನೆಯ ಖಂಡ

(ಉದ್ಗೀಥಾವಯವವಾದ ಓಂಕಾರದ ಉಪಾಸನೆ)

ಓಂಕಾರೋಪಾಸನಾವಿಧಿ : ಓಂಕಾರದ ಉಪಾಸನೆಯನ್ನು ಮಾಡಬೇಕು (೭) - **ಓಂಕಾರದವರೆಗಿನ ರಸಗಳು** (೮) - **ಓಂಕಾರವು ರಸತಮವಾದದ್ದು** (೯) - **ಓಂಕಾರವು ಸರ್ವಕಾಮಾಪ್ತಿಗುಣಕವು** (೧೦) - ಓಂಕಾರದಲ್ಲಿ ಋಕ್ಸಾಮಗಳ ಮಿಥುನ (೧೧) - ಓಂಕಾರಕ್ಕೆ ಮಿಥುನಸಂಬಂಧದಿಂದಾಗಿರುವ ಫಲ (೧೨) - ಓಂಕಾರೋಪಾಸಕನಿಗೆ ಸರ್ವಕಾಮ ಪ್ರಾಪಯಿತೃತ್ವಫಲ (೧೩) - **ಓಂಕಾರವು ಸಮೃದ್ಧಿಗುಣವುಳ್ಳದ್ದು : ಸಮೃದ್ಧಿಗುಣಕೋಪಾಸನೆಯ ಫಲ** (೧೪) - **ಓಂಕಾರದ ಸ್ತುತಿ : ವೈದಿಕಕರ್ಮವೆಲ್ಲ ಓಂಕಾರಪೂರ್ವಕವೇ** (೧೫) - **ಓಂಕಾರೋಪಾಸನಾಸಮುಚ್ಚಿತ ಕರ್ಮವು ವೀರ್ಯವತ್ತರ : ಅಕ್ಷರವಿಜ್ಞಾನದಿಂದಾಗುವ ಫಲ** (೧೬) - ಉಪಾಸಕನಲ್ಲದವನಿಗೂ ಕರ್ಮದಲ್ಲಿ ಅಧಿಕಾರ (೧೭) - ಗುಣತ್ರಯವಿಶಿಷ್ಟವಾದ ಒಂದೇ ಉಪಾಸನೆಯಿದು (೧೮). **ಪುಟ 9-30**

ಎರಡನೆಯ ಖಂಡ

(ಪ್ರಾಣಾದಿದೃಷ್ಟಿಗಳಿಂದ ಓಂಕಾರೋಪಾಸನೆ)

ದೇವತೆಗಳು ಉದ್ಗೀಥಾನುಷ್ಠಾನಮಾಡಿದ್ದು : ಕಥೆಯ ಅಭಿಪ್ರಾಯ (೨೦) - ದೇವತೆಗಳು ಉದ್ಗೀಥೋಪಾಸನೆಯನ್ನು ಕೈಕೊಂಡದ್ದು (೨೧) - ಘ್ರಾಣವು ಪಾಪವಿದ್ಧ (೨೨) - ವಾಗಾದಿಗಳೂ ಪಾಪವಿದ್ಧ (೨೩) - **ಪ್ರಾಣೋಪಾಸನೆ** : ಅಸುರರು ಪ್ರಾಣನಿಂದ ಧ್ವಸ್ತರಾದದ್ದು (೨೪) - ಪ್ರಾಣಸಾಕ್ಷಾತ್ಕಾರವುಳ್ಳವನಿಗೆ ಯಾರೂ ಕೇಡನ್ನು ಮಾಡಲಾರರು (೨೫) - ಘ್ರಾಣಪ್ರಾಣನಿಗೂ ಮುಖ್ಯಪ್ರಾಣನಿಗೂ ತಾರತಮ್ಯ (೨೬) - ಮುಖ್ಯಪ್ರಾಣನು ವಿಶುದ್ಧನು (೨೭) - ಸರ್ವಾರ್ಥಕಾರಿ

(೨೮) - ಪ್ರಾಣನು ಆಂಗಿರಸನೆಂಬ ಭಾವನೆ (೨೯) - ಆಂಗಿರಃಪ್ರಭೃತಿಗಳೇ ಉಪಾಸಕರು (೩೦) - ಬೃಹಸ್ಪತ್ಯಾಯಾಸ್ಯರ ಪ್ರಾಣೋಪಾಸನೆ (೩೧) - ಬಕನು ಯಜಮಾನರಿಗೆ ಫಲವನ್ನು ಆಗಾನ ಮಾಡಿದ್ದು (೩೨) - ಆಂಗಿರಸಸ್ತ್ವಾದಿ ಗುಣೋಪಾಸನೆಗೆ ಫಲ (೩೩). **ಪುಟ 31–53**

ಮೂರನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಆದಿತ್ಯದೃಷ್ಟಿಯಿಂದ ಉದ್ಗೀಥೋಪಾಸನೆ (೩೪) - ಪ್ರಾಣಾದಿತ್ಯರಿಗೆ ತತ್ತ್ವತಃ ಅಭೇದ (೩೫) - ವ್ಯಾನದೃಷ್ಟಿಯಿಂದ ಉಪಾಸನೆ : ವ್ಯಾನಸ್ವರೂಪ (೩೬) - ಉದ್ಗೀಥವು ವ್ಯಾನದಿಂದಾಗುತ್ತದೆ (೩೭) - ವ್ಯಾನೋಪಾಸನೆಯ ಉಪಸಂಹಾರ (೩೮) - ಉದ್ಗೀಥಾಕ್ಷರಗಳ ಉಪಾಸನೆ : ಪ್ರಾಣಾದಿಗಳೆಂದು ಅಕ್ಷರಗಳ ಉಪಾಸನೆ (೩೯) - ಉದ್ಗೀಥಾಕ್ಷರಗಳ ಉಪಾಸನಾಂತರಗಳು (೪೦) - ಅಕ್ಷರಗಳ ಉಪಾಸನೆಯ ಫಲ (೪೧) - ಆಶೀಃಸಮೃದ್ಧಿಗೆ ಉಪಾಸನೆಗಳು : ಸಾಮದ ಉಪಾಸನೆ (೪೨) - ಸಾಮದ ಋಕ್ಕು, ಋಷಿ - ಮುಂತಾದವುಗಳ ಉಪಾಸನೆ (೪೩) - ಛಂದಸ್ಸಿನ ಉಪಾಸನೆ (೪೪) - ದಿಕ್ಕಿನ ಉಪಾಸನೆ (೪೫) - ಆಶೀಃಸಮೃದ್ಧ್ಯುಪಾಸನೆಯ ಫಲ (೪೬). **ಪುಟ 53–70**

ನಾಲ್ಕನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಅಮೃತಾಭಯಗುಣವಿಶಿಷ್ಟವೆಂದು ಉದ್ಗೀಥೋಪಾಸನೆ : ಈ ಖಂಡದ ಸಂಬಂಧ (೪೭)- ದೇವತೆಗಳು ಕರ್ಮವನ್ನು ಮರೆಹೊಕ್ಕದ್ದು (೪೮) - ದೇವತೆಗಳು ಓಂಕಾರವನ್ನು ಪ್ರವೇಶಿಸಿದ್ದು (೪೯) - ಓಮ್ ಎಂಬುದು ಸ್ವರವು ಹೇಗೆ ? (೫೦) - ಅಮೃತಾಭಯ ಗುಣೋಂಕಾರೋಪಾಸನೆಗೆ ಫಲ (೫೧). **ಪುಟ 70–77**

ಐದನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಓಂಕಾರದಲ್ಲಿ ಪ್ರಾಣರಶ್ಮಿಭೇದವಿಶಿಷ್ಟದೃಷ್ಟಿ : ಈ ಖಂಡದ ಸಂಬಂಧ (೫೨) - ಆದಿತ್ಯನೇ ಪ್ರಣವಾಭಿನ್ನವಾದ ಉದ್ಗೀಥ (೫೩) - ಆದಿತ್ಯನನ್ನೂ ರಶ್ಮಿಗಳನ್ನೂ ಬೇರೆಯೆಂದು ಚಿಂತಿಸುವದು : ರಶ್ಮಿಭೇದಚಿಂತನವಿಧಾನ (೫೪) - ಓಂಕಾರದಲ್ಲಿ ಪ್ರಾಣರಶ್ಮಿಭೇದವಿಶಿಷ್ಟದೃಷ್ಟಿ : ಪ್ರಾಣವೇ ಉದ್ಗೀಥ (೫೫) - ಪ್ರಾಣಭೇದಚಿಂತನವಿಧಾನ (೫೬) - ಪ್ರಣವೋದ್ಗೀಥೈಕತ್ವಫಲ (೫೭). **ಪುಟ 77–84**

ಆರನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಉದ್ಗೀಥದ ಆಧಿದೈವಿಕಾಂಗೋಪಾಸನೆಗಳು : ಪೃಥಿವ್ಯಗ್ನಿದೃಷ್ಟಿಯಿಂದ ಋಕ್ಸಾಮಗಳ ಉಪಾಸನೆ (೫೮) - ಅಂತರಿಕ್ಷವಾಯುಗಳೆಂದು ಋಕ್ಸಾಮಗಳ ಉಪಾಸನೆ (೫೯) - ದ್ಯುಲೋಕಾದಿತ್ಯರೆಂದು ಋಕ್ಸಾಮಗಳ ಉಪಾಸನೆ- ನಕ್ಷತ್ರಚಂದ್ರರೆಂದು ಋಕ್ಸಾಮೋಪಾಸನೆ (೬೦) - ಆದಿತ್ಯನ ಶುಕ್ಲಕೃಷ್ಣಕಾಂತಿಗಳೆಂದು ಋಕ್ಸಾಮಗಳ ಉಪಾಸನೆ (೬೧) - ಆದಿತ್ಯಾಂತರ್ಗತ ಪುರುಷನ ದೃಷ್ಟಿಯಿಂದ ಉದ್ಗೀಥದ ಉಪಾಸನೆ : ಆದಿತ್ಯಪುರುಷನ ವರ್ಣನೆ (೬೨-೬೪).

ಪುಟ 85-96

ಏಳನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಉದ್ಗೀಥದ ಆಧ್ಯಾತ್ಮಿಕಾಂಗೋಪಾಸನೆಗಳು : ವಾಕ್ಪ್ರಾಣಗಳೆಂದು ಋಕ್ಸಾಮಗಳ ಉಪಾಸನೆ (೬೫) - ಚಕ್ಷುಶ್ಚಾಯಾತ್ಮಗಳೆಂದು ಉಪಾಸನೆ (೬೬) - ಶ್ರೋತ್ರಮನಸ್ಸುಗಳೆಂದು ಉಪಾಸನೆ (೬೭) - ಕಣ್ಣಿನ ಶುಕ್ಲಕೃಷ್ಣಕಾಂತಿಗಳೆಂದು ಉಪಾಸಸನೆ (೬೮) - ಅಕ್ಷ್ಯಂತರ್ಗತಪುರುಷನೆಂದು ಉದ್ಗೀಥದ ಉಪಾಸನೆ ; ಅಕ್ಷಿಪುರುಷನಿಗೂ ಆದಿತ್ಯಪುರುಷನ ರೂಪವೇ (೬೯-೭೦) - ಆದಿತ್ಯಾಕ್ಷಿ ಪುರುಷೋಪಾಸನೆಗೆ ಫಲ : ಆದಿತ್ಯಚಾಕ್ಷುಷರೂಪದಿಂದ ಸರ್ವಲೋಕಕಾಮಾಪ್ತಿ (೭೧) - ಆದಿತ್ಯಚಾಕ್ಷುಷವಿದ್ಯೆಯನ್ನು ಬಲ್ಲ ಉದ್ಗಾತೃವಿನ ಮಹಿಮೆ (೭೨).

ಪುಟ 96-106

ಎಂಟನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಮುಂದಿನ ಗ್ರಂಥದ ಸಂಬಂಧ (೭೩) - ಶಿಲಕಾದಿಗಳ ಸಂವಾದಕ್ಕೆ ಅವತರಣಿಕೆ : (೭೪-೭೫) - ಶಿಲಕನು ಪ್ರಶ್ನೆಮಾಡುವದಕ್ಕೆ ಅನುಮತಿಪಡೆದದ್ದು (೭೬) - ಉದ್ಗೀಥಕ್ಕೆ ಕೊನೆಯ ಆಶ್ರಯ ಯಾವದು ? ದಾಲ್ಭ್ಯನ ಉತ್ತರ : ಸ್ವರ್ಗವೇ (೭೭-೭೮) - ದಾಲ್ಭ್ಯಮತದ ನಿಂದೆ (೭೯) - ಶಿಲಕನ ಸಿದ್ಧಾಂತ : ಪೃಥ್ವಿಯೇ ಕೊನೆ (೮೦) - ಶಾಲಾವತ್ಯಮತದ ನಿಂದೆ (೮೧).

ಪುಟ 106-118

ಒಂಬತ್ತನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಜೈವಲಿಯ ಸಿದ್ಧಾಂತ : ಪರಮಾತ್ಮನೇ ಉದ್ಗೀಥಕ್ಕೆ ಆಶ್ರಯ (೮೨) - ಉದ್ಗೀಥವು ಪರೋವರೀಯವೆಂದು ಉಪಾಸನೆ : ಪರೋವರೀಯವೆಂದು ಉಪಾಸನೆ ಮಾಡಿದರೆ ಫಲ (೮೩) - ಶೌನಕವಾಕ್ಯ (೮೪).

ಪುಟ 118-124

ಹತ್ತನೆಯ ಖಂಡ

(ಪ್ರಸ್ತಾವಾದಿಗಳ ಉಪಾಸನೆ)

ಗ್ರಂಥದ ಸಂಬಂಧ (೮೫) - ಉಷಸ್ತಿಯ ದಾರಿದ್ರ್ಯ (೮೬) - ದಾರಿಯಲ್ಲಿ ತಂಗಳುಹುರುಳಿಯನ್ನು ತಿಂದು ತೆರಳಿದ್ದು (೮೭-೯೨) - ಉಷಸ್ತಿಯ ಪ್ರಶ್ನೆ · ಪ್ರಸ್ತಾವ ದೇವತೆ ಯಾವದು ? (೯೩) - ಉದ್ಗಾನಪ್ರತಿಹಾರಗಳಿಗೆ ದೇವತೆ ಯಾವದು ? (೯೪).

ಪುಟ 124-135

ಹನ್ನೊಂದನೆಯ ಖಂಡ

(ಪ್ರಸ್ತಾವಪ್ರತಿಹಾರಗಳ ಉಪಾಸನೆ)

ರಾಜನು ಉಷಸ್ತಿಯನ್ನು ವರಿಸಿದ್ದು (೯೫-೯೬) - ಪ್ರಸ್ತಾವದೇವತೆ ಪ್ರಾಣನೆ ಎಂಬ ನಿರ್ಣಯ (೯೭) - ಆದಿತ್ಯನೇ ಉದ್ಗಾತೃದೇವತೆ ಎಂಬ ನಿರ್ಣಯ (೯೮) - ಅನ್ನವೇ ಪ್ರತಿಹಾರದೇವತೆ ಎಂಬ ನಿರ್ಣಯ (೯೯) - ಪ್ರಸ್ತಾವಾದಿಗಳ ಉಪಾಸನೆಗೆ ಫಲ (೧೦೦).

ಪುಟ 136-143

ಹನ್ನೆರಡನೆಯ ಖಂಡ

ಶೌವ ಉದ್ಗೀಥಕ್ಕೆ ಅವತರಣಿಕೆ (೧೦೦-೧೦೪)- ಶೌವ ಉದ್ಗೀಥ (೧೦೫).

ಪುಟ 144-151

ಹದಿಮೂರನೆಯ ಖಂಡ

(ಸ್ತೋಭೋಪಾಸನೆಗಳು)

ಗ್ರಂಥದ ಸಂಬಂಧ (೧೦೬) - ಹಾವುಕಾರಾದಿಸ್ತೋಭಗಳ ಉಪಾಸನೆ (೧೦೭) - ಊಕಾರಾದಿಗಳ ಉಪಾಸನೆ (೧೦೮) - ಹುಂಕಾರದ ಉಪಾಸನೆ (೧೦೯) - ಸ್ತೋಭೋಪಾಸನೆಗೆ ಫಲ (೧೧೦). **ಪುಟ 151-157**

ಒಂದನೆಯ ಅಧ್ಯಾಯದ ಸಾರ **ಪುಟ 158-165**

ಎರಡನೆಯ ಅಧ್ಯಾಯ

(ಸಮಸ್ತಸಾಮದ ಉಪಾಸನೆ)

ಒಂದನೆಯ ಖಂಡ

ಮುಂದಿನ ಗ್ರಂಥದ ಸಂಬಂಧ (೧೧೧) - ಸಮಸ್ತಸಾಮದಲ್ಲಿ ಸಾಧುದೃಷ್ಟಿ (೧೧೨) - ಸಾಮಕ್ಕೆ ಸಾಧು ಎಂಬರ್ಥವೆಂಬುದಕ್ಕೆ ಯುಕ್ತಿ (೧೧೩) - ಇದಕ್ಕೆ ಮತ್ತೊಂದು ಯುಕ್ತಿ (೧೧೪) - ಸಾಧುದೃಷ್ಟ್ಯುಪಾಸನೆಗೆ ಫಲ (೧೧೫). **ಪುಟ 166-171**

ಎರಡನೆಯ ಖಂಡ

(ಪಂಚವಿಧಸಾಮಗಳ ಉಪಾಸನೆ)

ಸಮಸ್ತೋಪಾಸನೆಗಳಲ್ಲೆಲ್ಲಸಾಧುದೃಷ್ಟಿಯಿರಬೇಕು (೧೧೬) - ಊರ್ಧ್ವಲೋಕದೃಷ್ಟಿಯಿಂದ ಉಪಾಸನೆ (೧೧೭) - ಹಿಂಕಾರಾದಿಗಳಲ್ಲಿ ದ್ಯುಲೋಕಾದಿದೃಷ್ಟಿ (೧೧೮) - ಲೋಕದೃಷ್ಟಿಯ ಉಪಾಸನೆಗೆ ಫಲ (೧೧೯) **ಪುಟ 171–178**

ಮೂರನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ವೃಷ್ಟಿದೃಷ್ಟಿಯ ಉಪಾಸನೆಗೆ ಓಂಕಾರಾದಿಗಳ ವಿನಿಯೋಗ (೧೨೦) - ವೃಷ್ಟಿದೃಷ್ಟಿಯ ಉಪಾಸನೆಗೆ ಫಲ (೧೨೧). **ಪುಟ 178–180**

ನಾಲ್ಕನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ನೀರಿನ ದೃಷ್ಟಿಯಿಂದ ಉಪಾಸನೆ (೧೨೨) - ನೀರಿನ ದೃಷ್ಟಿಯ ಉಪಾಸನೆಗೆ ಫಲ (೧೨೩) **ಪುಟ 181–183**

ಐದನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ಋತುಗಳ ದೃಷ್ಟಿಯಿಂದ ಉಪಾಸನೆ (೧೨೪) - ಋತುದೃಷ್ಟಿಯ ಉಪಾಸನೆಗೆ ಫಲ (೧೨೫). **ಪುಟ 183–185**

ಆರನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ಪಶುಗಳ ದೃಷ್ಟಿಯಿಂದ ಸಾಮೋಪಾಸನೆ (೧೨೬) - ಪಶುಸಾಮೋಪಾಸನೆಗೆ ಫಲ (೧೨೭). **ಪುಟ 185–187**

ಏಳನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ಪ್ರಾಣದೃಷ್ಟಿಯಿಂದ ಸಾಮೋಪಾಸನೆ (೧೨೮) - ಪ್ರಾಣಸಾಮೋಪಾಸನೆಗೆ ಫಲ (೧೨೯). **ಪುಟ 187–190**

ಎಂಟನೆಯ ಖಂಡ

(ಸಪ್ತವಿಧಸಾಮೋಪಾಸನೆ)

ವಾಗ್ದೃಷ್ಟಿಯಿಂದ ಸಪ್ತವಿಧಸಾಮದ ಉಪಾಸನೆ (೧೩೦) - ವಾಕ್ಸಾಮೋಪಾಸನೆಗೆ ಫಲ (೧೩೧). **ಪುಟ 190–192**

ಒಂಬತ್ತನೆಯ ಖಂಡ

(ಸಪ್ತವಿಧಸಾಮೋಪಾಸನೆ ಮುಂದುವರಿದದ್ದು)

ಆದಿತ್ಯದೃಷ್ಟಿಯಿಂದ ಸಾಮದ ಉಪಾಸನೆ (೧೩೨) - ಆದಿತ್ಯಸಾಮದ ಹಿಂಕಾರ (೧೩೩) - ಆದಿತ್ಯಸಾಮದ ಪ್ರಸ್ತಾವ (೧೩೪) - ಆದಿತ್ಯಸಾಮದ ಆದಿ (೧೩೫) - ಆದಿತ್ಯ ಸಾಮದ ಉದ್ಗೀಥ (೧೩೬) - ಆದಿತ್ಯಸಾಮದ ಪ್ರತಿಹಾರ (೧೩೭) - ಆದಿತ್ಯಸಾಮದ ಉಪದ್ರವ (೧೩೮) - ಆದಿತ್ಯಸಾಮದ ನಿಧನ, ಮತ್ತು ಉಪಾಸನೆಯ ಫಲ (೧೩೯). **ಪುಟ 193–202**

ಹತ್ತನೆಯ ಖಂಡ

(ಸಪ್ತವಿಧಸಾಮೋಪಾಸನೆ ಮುಂದುವರಿದದ್ದು)

ಅತಿಮೃತ್ಯುಸಾಮೋಪಾಸನೆ : ಹಿಂಕಾರಕ್ಕೆ ಪ್ರಸ್ತಾವವು ಸಮ (೧೪೦) - ಆದಿಗೆ ಪ್ರತಿಹಾರವು ಸಮ (೧೪೧) - ಉದ್ಗೀಥವು ಉಪದ್ರವಕ್ಕೆ ಸಮ (೧೪೨) - ನಿಧನವೂ ಸೇರಿ ನಾಮಾಕ್ಷರಗಳು ಇಪ್ಪತ್ತೆರಡು (೧೪೩) - ಅತಿಮೃತ್ಯೂಪಾಸನೆಯ ಫಲವು ಅತಿಮೃತ್ಯುಪ್ರಾಪ್ತಿಯೇ (೧೪೪) - ಒಟ್ಟರ್ಥ (೧೪೫). **ಪುಟ 202–209**

ಹನ್ನೊಂದನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ಗಾಯತ್ರಸಾಮದ ಉಪಾಸನೆ : ಈಗ ಹೇಳಲಿರುವ ಸಾಮೋಪಾಸನೆಗಳ ವಿಶೇಷ (೧೪೬) - ಗಾಯತ್ರಸಾಮದ ಭಕ್ತಿಗಳ ವಿನಿಯೋಗ (೧೪೭) - ಗಾಯತ್ರೋಪಾಸನದ ಫಲ (೧೪೮). **ಪುಟ 210–212**

ಹನ್ನೆರಡನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ರಥಂತರಸಾಮದ ಉಪಾಸನೆ : ಈ ಸಾಮದ ಭಕ್ತಿಗಳ ವಿನಿಯೋಗ (೧೪೯) -ಉಪಾಸನೆಗೆ ಫಲ (೧೫೦). **ಪುಟ 213–215**

ಹದಿಮೂರನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ವಾಮದೇವಸಾಮದ ಉಪಾಸನೆ : ಈ ಸಾಮದ ಭಕ್ತಿಗಳ ವಿನಿಯೋಗ (೧೫೧)- ಉಪಾಸನೆಗೆ ಫಲ (೧೫೨). **ಪುಟ 215-217**

ಹದಿನಾಲ್ಕನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ಬೃಹತ್ಸಾಮದ ಉಪಾಸನೆ : ಭಕ್ತಿಗಳ ವಿನಿಯೋಗ (೧೫೩)- ಉಪಾಸನೆಗೆ ಫಲ (೧೫೪). **ಪುಟ 218-219**

ಹದಿನೈದನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ವೈರೂಪಸಾಮದ ಉಪಾಸನೆ : ಭಕ್ತಿಗಳ ವಿನಿಯೋಗ (೧೫೫)- ಉಪಾಸನೆಗೆ ಫಲ (೧೫೬). **ಪುಟ 220-221**

ಹದಿನಾರನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ವೈರಾಜಸಾಮದ ಉಪಾಸನೆ : ಭಕ್ತಿಗಳ ವಿನಿಯೋಗ (೧೫೭)- ಉಪಾಸನೆಗೆ ಫಲ (೧೫೮). **ಪುಟ 222-223**

ಹದಿನೇಳನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ಶಕ್ವರೀಸಾಮದ ಉಪಾಸನೆ : ಭಕ್ತಿಗಳ ವಿನಿಯೋಗ (೧೫೯)- ಉಪಾಸನೆಗೆ ಫಲ (೧೬೦). **ಪುಟ 224-225**

ಹದಿನೆಂಟನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ರೇವತೀಸಾಮದ ಉಪಾಸನೆ : ಭಕ್ತಿಗಳ ವಿನಿಯೋಗ (೧೬೧)- ಉಪಾಸನೆಗೆ ಫಲ (೧೬೨). **ಪುಟ 225-226**

ಹತ್ತೊಂಬತ್ತನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ಯಜ್ಞಾಯಜ್ಞೀಯಸಾಮದ ಉಪಾಸನೆ : ಭಕ್ತಿಗಳ ವಿನಿಯೋಗ (೧೬೩) - ಉಪಾಸನೆಗೆ ಫಲ (೧೬೪). **ಪುಟ 227-229**

ಇಪ್ಪತ್ತನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ರಾಜನಸಾಮದ ಉಪಾಸನೆ : ಭಕ್ತಿಗಳ ವಿನಿಯೋಗ (೧೬೫) - ಉಪಾಸನೆಗೆ ಫಲ (೧೬೬). ಪುಟ 229-231

ಇಪ್ಪತ್ತೊಂದನೆಯ ಖಂಡ

(ಸಾಮಸಮುದಾಯದ ಉಪಾಸನೆ)

ಸಾಮಸಾಮಾನ್ಯದ ಹಿಂಕಾರಾದಿಗಳಲ್ಲಿ ತ್ರಯೀವಿದ್ಯಾದಿದೃಷ್ಟಿ (೧೬೭) - ಸರ್ವಸಾಮೋಪಾಸನೆಗೆ ಫಲ (೧೬೮) - ತ್ರಯೀವಿದ್ಯಾದಿಗಳಲ್ಲಿ ಎಲ್ಲವೂ ಅಡಕ (೧೬೯) - ಸಾಮೋಪಾಸಕನಿಗೆ ಸರ್ವದಿಕ್ಕುಗಳಿಂದಲೂ ಬಲಪ್ರಾಪ್ತಿ (೧೭೦). ಪುಟ 232-236

ಇಪ್ಪತ್ತೆರಡನೆಯ ಖಂಡ

(ಗಾನವಿಶೇಷಾದಿಗಳ ಉಪದೇಶ)

ಗಾನಗಳ ವಿನಿಯೋಗ (೧೭೧) - ಗಾನಮಾಡುವಾಗ ಫಲಾನುಸಂಧಾನ (೧೭೨) - ಸ್ವರಾದಿಗಳ ಉಚ್ಚಾರವೂ ಅದರ ಫಲವೂ (೧೭೩) - ಸ್ವರಾದಿಗಳನ್ನು ಪ್ರಯೋಗ ಮಾಡುವ ರೀತಿ (೧೭೪). ಪುಟ 236-243

ಇಪ್ಪತ್ತುಮೂರನೆಯ ಖಂಡ

(ಓಂಕಾರೋಪಾಸನೆ)

ಮುಂದಿನ ಗ್ರಂಥದ ಸಂಬಂಧ (೧೭೫) - ಪ್ರಣವಸಂಸ್ಥನಿಗೆ ಅಮೃತತ್ವ (೧೭೬) - ಇಲ್ಲಿ ಫಲವನ್ನು ಹೇಳಿರುವದು ಪ್ರಣವದ ಸ್ತುತಿಗಾಗಿ (೧೭೭) - ವ್ಯಾಹೃತಿಗಳ ಅಭಿವ್ಯಕ್ತಿ (೧೮೭) - ಓಂಕಾರದ ಅಭಿವ್ಯಕ್ತಿ (೧೮೮). ಪುಟ 243-272

ಇಪ್ಪತ್ತುನಾಲ್ಕನೆಯ ಖಂಡ

(ಸಾಮಹೋಮಮಂತ್ರೋತ್ಥಾನಗಳು)

ಮುಂದಿನ ಗ್ರಂಥದ ಸಂಬಂಧ (೧೮೯) - ಸವನಗಳು ವಸ್ವಾದಿಗಳಿಗೆ ಸೇರಿದವು (೧೯೦) - ಕರ್ಮಮಾತ್ರವನ್ನು ತಿಳಿದವನಿಗೂ ಕರ್ಮಕ್ಕೆ ಅಧಿಕಾರ (೧೯೧) - ಪ್ರಾತಃಸವನಕ್ಕೆ ಸೇರಿದ ಪೃಥಿವೀಲೋಕಪ್ರಾಪ್ತಿಗೆ ಸಾಮ (೧೯೨) - ಪೃಥಿವೀ ಪ್ರಾಪ್ತಿಗೆ ಹೋಮೋತ್ಥಾನಗಳು (೧೯೩) - ಮಾಧ್ಯಂದಿನಸವನಕ್ಕೆ ಸೇರಿದ ಅಂತರಿಕ್ಷ ಲೋಕಪ್ರಾಪ್ತಿಗೆ ಹೋಮ (೧೯೪) - ಅಂತರಿಕ್ಷಲೋಕಕ್ಕೆ ಹೋಮೋತ್ಥಾನಗಳು (೧೯೫) - ಸಾಯಂಸವನಕ್ಕೆ ಸೇರಿದ ದ್ಯುಲೋಕಪ್ರಾಪ್ತಿಗೆ ಸಾಮ (೧೯೬) - ದ್ಯುಲೋಕಪ್ರಾಪ್ತಿಗೆ ಹೋಮೋತ್ಥಾನಗಳು (೧೯೭) - ಈ ಸಾಮಾದಿಗಳು ಯಜಮಾನನ ಕರ್ಮ (೧೯೮) - ಸಾಮಹೋಮೋತ್ಥಾನಕರ್ಮದ ಉಪಸಂಹಾರ (೧೯೯). ಪುಟ 272-283

ಎರಡನೆಯ ಅಧ್ಯಾಯದ ಸಾರ ಪುಟ 284-287

ಮೂರನೆಯ ಅಧ್ಯಾಯ

(ಕರ್ಮಫಲವಾದ ಆದಿತ್ಯೋಪಾಸನೆ)

ಒಂದನೆಯ ಖಂಡ

(ಆದಿತ್ಯೋಪಾಸನೆ)

ಆದಿತ್ಯನೇ ಮಧು (೨೦೧)- ಒಂದನೆಯ ಅಮೃತರಸ : ಋಕ್ಕುಗಳಿಂದುಂಟಾಗುವ ರಸ (೨೦೨)- ಕರ್ಮದಿಂದಾಗುವ ಪ್ರಥಮಾಮೃತ (೨೦೩). **ಪುಟ 288-294**

ಎರಡನೆಯ ಖಂಡ

(ಆದಿತ್ಯೋಪಾಸನೆ)

ಯಜುಸ್ಸುಗಳಿಂದುಂಟಾಗುವ ರಸ (೨೦೪)- ಎರಡನೆಯ ಅಮೃತ (೨೦೫). **ಪುಟ 294-296**

ಮೂರನೆಯ ಖಂಡ

(ಆದಿತ್ಯೋಪಾಸನೆ)

ಸಾಮಗಳಿಂದಾಗುವ ರಸ (೨೦೬)- ಮೂರನೆಯ ಅಮೃತ (೨೦೭). **ಪುಟ 296-297**

ನಾಲ್ಕನೆಯ ಖಂಡ

(ಆದಿತ್ಯೋಪಾಸನೆ)

ಅಥರ್ವಾಂಗಿರಸ್ಸುಗಳಿಂದುಂಟಾಗುವ ರಸ (೨೦೮)- ನಾಲ್ಕನೆಯ ಅಮೃತ (೨೦೯). **ಪುಟ 298-299**

ಐದನೆಯ ಖಂಡ

(ಆದಿತ್ಯೋಪಾಸನೆ)

ಗುಹ್ಯಾದೇಶಗಳಿಂದುಂಟಾಗುವ ರಸ (೨೧೦)- ಐದನೆಯ ಅಮೃತ (೨೧೧)- ಅಮೃತಗಳ ಸ್ತುತಿಯ ದ್ವಾರದಿಂದ ಕರ್ಮಸ್ತುತಿ (೨೧೨). **ಪುಟ 300-302**

ಆರನೆಯ ಖಂಡ

(ಆದಿತ್ಯೋಪಾಸನೆ)

ವಸುಗಳಿಗೆ ಪ್ರಥಮಾಮೃತದಿಂದ ತೃಪ್ತಿ(೨೧೩) - ವಸುಗಳಿಗೆ ಪ್ರಾತಃಸವನ ಕಾಲದಲ್ಲಿ ಮಾತ್ರ ಭೋಗ (೨೧೪) - ಪ್ರಥಮಾಮೃತೋಪಾಸಕನಿಗೆ ಫಲ (೨೧೫) - ವಸುಸಾಯುಜ್ಯಕಾಲದ ಪರಿಮಾಣ (೨೧೬). **ಪುಟ 303-308**

ಏಳನೆಯ ಖಂಡ

(ಆದಿತ್ಯೋಪಾಸನೆ)

ರುದ್ರರಿಗೆ ದ್ವಿತೀಯಾಮೃತದಿಂದ ತೃಪ್ತಿ (೨೧೭) - ರುದ್ರಸಾಯುಜ್ಯಕಾಲದ ಪರಿಮಾಣ (೨೧೮). ಪುಟ 308-311

ಎಂಟರಿಂದ ಹತ್ತನೆಯ ಖಂಡಗಳವರೆಗೆ

(ಆದಿತ್ಯೋಪಾಸನೆ)

ಆದಿತ್ಯನಿಗೆ ಮೂರನೆಯ ಅಮೃತದಿಂದ ತೃಪ್ತಿ, ಮರುತ್ತರಿಗೆ ನಾಲ್ಕನೆಯ ಅಮೃತದಿಂದ ತೃಪ್ತಿ, ಸಾಧ್ಯರಿಗೆ ಐದನೆಯ ಅಮೃತದಿಂದ ತೃಪ್ತಿ (೨೧೯) - ಉಪಾಸಕನ ಬೇರೆಬೇರೆಯ ಫಲಭೋಗಗಳ ಕಾಲ (೨೨೨). ಪುಟ 311-317

ಹನ್ನೊಂದನೆಯ ಖಂಡ

(ಆದಿತ್ಯೋಪಾಸನೆಯ ಪರಿಸಮಾಪ್ತಿ)

ಆದಿತ್ಯೋಪಾಸನೆಯ ಪರಮಫಲ : ಸೂರ್ಯನ ಉದಯಾಸ್ತಗಳು ನಿಲ್ಲುವ ಸ್ಥಿತಿ (೨೨೩) - ಸೂರ್ಯನಲ್ಲಿ ಸಮಾಹಿತನಾಗಿದ್ದ ಉಪಾಸಕನ ವಚನಕ್ಕೆ ಅವತರಣಿಕೆ (೨೨೪) - ಬ್ರಹ್ಮಲೋಕದ ವಿಷಯಕ್ಕೆ ಉಪಾಸಕನ ಅನುಭವ (೨೨೫) - ಮಧುವಿದ್ಯೆಗೆ ಕಾಲಾಪರಿಚ್ಛಿನ್ನ ಬ್ರಹ್ಮಪ್ರಾಪ್ತಿಯೇ ಫಲ (೨೨೬) - ವಿದ್ಯೆಯ ಗುರುಪರಂಪರೆ (೨೨೭) - ಈ ವಿದ್ಯೆಗೆ ಜ್ಯೇಷ್ಠಪುತ್ರ, ಯೋಗ್ಯಶಿಷ್ಯ - ಇಬ್ಬರೇ ಅಧಿಕಾರಿಗಳು (೨೨೮). ಪುಟ 317-325

ಹನ್ನೆರಡನೆಯ ಖಂಡ

(ಗಾಯತ್ರೀಬ್ರಹ್ಮೋಪಾಸನೆ)

ಮುಂದಿನ ಗ್ರಂಥದ ಸಂಬಂಧ (೨೨೯) - ಗಾಯತ್ರೀಬ್ರಹ್ಮವು ಸರ್ವಭೂತಾತ್ಮಕ (೨೩೦) - ಗಾಯತ್ರಿಯು ವೃಥಿವ್ಯಾತ್ಮಕ (೨೩೧) - ಗಾಯತ್ರೀಬ್ರಹ್ಮವು ಶರೀರಾತ್ಮಕ (೨೩೨) - ಗಾಯತ್ರೀ ಬ್ರಹ್ಮವು ಹೃದಯಾತ್ಮಕ (೨೩೩) - ಗಾಯತ್ರಿಯು ಚತುಷ್ಪಾದಗಳುಳ್ಳದ್ದು, ಷಡ್ವಿಧ (೨೩೪) - ಗಾಯತ್ರೀಬ್ರಹ್ಮವು ಸರ್ವಭೂತಾತೀತ (೨೩೫) -ಗಾಯತ್ರೀಬ್ರಹ್ಮವು ಹೃದಯಕಾಶವೇ (೨೩೬) - ಹಾರ್ದಾಕಾಶರೂಪವಾದ ಬ್ರಹ್ಮದ ಉಪಾಸನೆಯ ಫಲ (೨೩೮). ಪುಟ 325-338

ಹದಿಮೂರನೆಯ ಖಂಡ

(ಗಾಯತ್ರೀಬ್ರಹ್ಮದ ಅಂಗೋಪಾಸನೆಗಳು, ಪ್ರತೀಕೋಪಾಸನೆ)

ಮುಂದಿನ ಗ್ರಂಥಸಂಬಂಧ (೨೩೯) - ಪೂರ್ವದ್ವಾರಪುರುಷನ ಉಪಾಸನೆ (೨೪೦) - ದಕ್ಷಿಣದ್ವಾರಪುರುಷನ ಉಪಾಸನೆ (೨೪೧) - ಪಶ್ಚಿಮದ್ವಾರಪಾಲನ ಉಪಾಸನೆ (೨೪೨) -

ಉತ್ತರದ್ವಾರಪಾಲನ ಉಪಾಸನೆ (೨೪೩) - ಮೇಲುಗಡೆಯ ದ್ವಾರಪಾಲನ ಉಪಾಸನೆ (೨೪೪) - ಪಂಚದ್ವಾರಪಾಲರ ಉಪಾಸನೆಗೆ ಫಲ (೨೪೫) - **ಜ್ಯೋತಿರ್ಬ್ರಹ್ಮೋಪಾಸನೆ** : ಮುಂದಿನ ಗ್ರಂಥಭಾಗದ ಸಂಬಂಧ (೨೪೬) - ಜ್ಯೋತಿರ್ಬ್ರಹ್ಮದ ವರ್ಣನೆ (೨೪೭) - ಜ್ಯೋತಿರ್ಬ್ರಹ್ಮದ ದರ್ಶನ (೨೪೮) - ಜ್ಯೋತಿರ್ಬ್ರಹ್ಮದ ಶ್ರವಣ (೨೪೯) - ಉಪಾಸನಾಗುಣವಿಧಿಯೂ ಉಪಾಸನೆಯ ಫಲವೂ (೨೫೦). **ಪುಟ 338–357**

ಹದಿನಾಲ್ಕನೆಯ ಖಂಡ

(ಶಾಂಡಿಲ್ಯ ವಿದ್ಯೆ)

ಮನೋಮಯತ್ವಾದಿ ಗುಣಕಬ್ರಹ್ಮೋಪಾಸನೆ : ಗ್ರಂಥ ಸಂಬಂಧ (೨೫೧) - ಬ್ರಹ್ಮೋಪಾಸನೆಯಲ್ಲಿ ಶಮವಿರಬೇಕು (೨೫೨) - ಬ್ರಹ್ಮವನ್ನು ಉಪಾಸನೆಮಾಡುವ ರೀತಿ (೨೫೩) - ಚಿಂತಿಸಬೇಕಾದ ಬ್ರಹ್ಮದ ಗುಣಗಳು (೨೫೪) - ಈ ಬ್ರಹ್ಮವನ್ನು ಹೃದಯದಲ್ಲಿ ಉಪಾಸನೆಮಾಡಬೇಕು (೨೫೫) - ಗುಣಗಳಿಂದೊಂಡಗೂಡಿಯೇ ಉಪಾಸನೆ ಮಾಡಬೇಕು (೨೫೬) - ಸಾಕ್ಷಾತ್ಕಾರವು ಫಲಪ್ರಾಪ್ತಿಗೆ ಅವಶ್ಯ (೨೫೭). **ಪುಟ 357–372**

ಹದಿನೈದನೆಯ ಖಂಡ

(ಪುತ್ರನ ಆಯುಸ್ಸಿಗಾಗಿ ಉಪಾಸನೆ)

ಕೋಶವಿಜ್ಞಾನ : ಗ್ರಂಥಸಂಬಂಧ (೨೫೮)- ಕೋಶದ ವಿವರ (೨೫೯)- ಕೋಶದಿಗ್ವತ್ಸವಿಜ್ಞಾನವೂ ಅದರ ಫಲವೂ (೨೬೦)- ಉಪಾಸನಾಂಗಜಪಮಂತ್ರಗಳು (೨೬೧)- ಜಪಮಂತ್ರಗಳ ವ್ಯಾಖ್ಯಾನ (೨೬೨). **ಪುಟ 373–380**

ಹದಿನಾರನೆಯ ಖಂಡ

(ದೀರ್ಘಜೀವನಕ್ಕಾಗಿ ಉಪಾಸನೆ)

ಪುರುಷವಿದ್ಯೆ : ಗ್ರಂಥಸಂಬಂಧ (೨೬೩)- ಪುರುಷಯಜ್ಞಕ್ಕೆ ಪ್ರಾತಃಸವನ (೨೬೪) - ಈ ಸವನದ ಧ್ಯಾನಕ್ಕೆ ಲಿಂಗಜಪ (೨೬೫)- ಮಾಧ್ಯಂದಿನಸವನವೂ ಜಪವೂ (೨೬೬) - ಸಾಯಂಸವನವೂ ಜಪವೂ (೨೬೭)- ಉಪಾಸನೆಯ ಸಾಕ್ಷಾತ್ಕಾರಕ್ಕೆ ಫಲ (೨೬೮).
ಪುಟ 381–389

ಹದಿನೇಳನೆಯ ಖಂಡ

(ದೀರ್ಘಾಯುಸ್ಸಿಗೆ ಉಪಾಸನೆ ಮುಂದುವರಿದದ್ದು)

ಪುರುಷಯಜ್ಞದ ದೀಕ್ಷಾದಿಗಳು : ಈ ಯಜ್ಞದ ದೀಕ್ಷೆ (೨೬೯)- ಇದರ ಉಪಪದಗಳು (೨೭೦)- ಸ್ತುತಶಸ್ತ್ರಗಳು (೨೭೧)- ದಕ್ಷಿಣೆಗಳು (೨೭೨)- ಸವನಾವಭೃಥಗಳು (೨೭೩)- ವಿದ್ಯಾಸ್ತುತಿಯೂ ವಿದ್ಯಾಂಗಜಪವೂ (೨೭೪)- ಪುರುಷವಿದ್ಯಾಸ್ತುತಿಯ ಋಕ್ಕುಗಳು (೨೭೫-೨೭೬). **ಪುಟ 389–399**

ಹದಿನೆಂಟನೆಯ ಖಂಡ

(ಮನ ಆಕಾಶಗಳಲ್ಲಿ ಬ್ರಹದೃಷ್ಟಿ)

ಗ್ರಂಥಸಂಬಂಧ (೨೭೭)- ಮನ ಆಕಾಶಗಳನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕು (೨೭೮)- ಬ್ರಹ್ಮದ ಚತುಷ್ಪಾದಗಳು (೨೭೯) - ಪಾದಗಳ ವಿವರಣೆ (೨೮೦)- ವಾಗಾದಿವಾದಗಳಿಗೂ ಅಗ್ನ್ಯಾದಿಪಾದಗಳಿಗೂ ಸಂಬಂಧ (೨೮೧). ಪುಟ 399-406

ಹತ್ತೊಂಬತ್ತನೆಯ ಖಂಡ

(ಆದಿತ್ಯಬ್ರಹ್ಮೋಪಾಸನೆ)

ಗ್ರಂಥಸಂಬಂಧ (೨೮೨)- ಸೃಷ್ಟಿಗೆ ಪೂರ್ವದಲ್ಲಿ ಜಗತ್ತು ಅವ್ಯಾಕೃತ (೨೮೩) ಅಂಡಕವಾಲಗಳುಂಟಾದದ್ದು (೨೮೪)- ಅಂಡವು ಒಡೆದುಕೊಂಡಾಗ ಹುಟ್ಟಿದ ವಸ್ತುಗಳು (೨೮೫)- ಆದಿತ್ಯನ ಜನ್ಮದಲ್ಲಾದ ವಿಶೇಷಗಳು (೨೮೬)- ಆದಿತ್ಯ ಬ್ರಹ್ಮೋಪಾಸನೆಗೆ ಫಲ (೨೮೭). ಪುಟ 406-415

ಮೂರನೆಯ ಅಧ್ಯಾಯದ ಸಾರ ಪುಟ 416-421

ನಾಲ್ಕನೆಯ ಅಧ್ಯಾಯ

(ಸಂವರ್ಗವಿದ್ಯೆ)

ಒಂದನೆಯ ಖಂಡ

(ಜಾನಶ್ರುತಿಯು ರೈಕ್ವನನ್ನು ಹುಡುಕಿಸಿದ್ದು)

ಗ್ರಂಥಸಂಬಂಧ (೨೮೭)- ಜಾನಶ್ರುತಿಯ ಗುಣಕಥನ (೨೮೮)- ಹಂಸವು ಜಾನಶ್ರುತಿಯನ್ನು ಹೊಗಳಿದ್ದು (೨೮೯)- ರೈಕ್ವನ ಪ್ರಸ್ತಾವನೆ (೨೯೦)- ರೈಕ್ವನ ಮಹಿಮೆ (೨೯೧)- ರೈಕ್ವನನ್ನು ಹುಡುಕಿಸಿದ್ದು (೨೯೨-೨೯೩)- ರೈಕ್ವನನ್ನು ಕಂಡು ಹಿಡಿದದ್ದು (೨೯೪). ಪುಟ 422-433

ಎರಡನೆಯ ಖಂಡ

(ಸಂವರ್ಗವಿದ್ಯೆ ಮುಂದುವರಿದದ್ದು)

ಜಾನಶ್ರುತಿ ರೈಕ್ವನಲ್ಲಿಗೆ ಹೋದದ್ದು (೨೯೫)- ಕಾಣಿಕೆಯನ್ನೊಪ್ಪಿಸಿ ಉಪದೇಶವನ್ನು ಕೇಳಿಕೊಂಡದ್ದು (೨೯೬)- ರೈಕ್ವನ ತಿರಸ್ಕಾರ, ರಾಜನು ಹೆಚ್ಚಿನ ಕಾಣಿಕೆಯನ್ನು ಒಪ್ಪಿಸಿದ್ದು (೨೯೭)- ರೈಕ್ವನು ಉಪದೇಶಕ್ಕೆ ಮೊದಲುಮಾಡಿದ್ದು (೨೯೮). ಪುಟ 433-439

ಮೂರನೆಯ ಖಂಡ

(ಸಂವರ್ಗವಿದ್ಯೆ ಮುಂದುವರಿದದ್ದು)

ವಾಯುವೇ ಅಧಿದೈವತಸಂವರ್ಗ (೨೯)- ಪ್ರಾಣವೇ ಅಧ್ಯಾತ್ಮಸಂವರ್ಗ (೩೦) ವಾಯುಪ್ರಾಣಗಳನ್ನು ಸಂವರ್ಗವೆಂದು ಉಪಾಸನೆಮಾಡಬೇಕು (೩೧)- ವಾಯು ಪ್ರಾಣಗಳ ಸ್ತುತಿಗಾಗಿ ಕಥೆ : ಸಂವರ್ಗೋಪಾಸಕನಿಗೆ ಭಿಕ್ಷೆಕೊಡದೆ ಇದ್ದದ್ದು (೩೨) - ಬ್ರಹ್ಮಚಾರಿಯು ವಾಯುವನ್ನು ಪ್ರಶಂಸಿಸಿದ್ದು (೩೩)- ಶೌನಕಕಾಪೇಯನು ವಾಯುವನ್ನು ಪ್ರಶಂಸಿಸಿದ್ದು (೩೪)- ಸಂವರ್ಗವಿದ್ಯೆಯ ದೃಷ್ಟಫಲ (೩೫). **ಪುಟ 440–452**

ನಾಲ್ಕನೆಯ ಅಧ್ಯಾಯದ ಮೊದಲಿನ ಮೂರುಖಂಡಗಳ ಸಾರ **ಪುಟ 453–454**

ನಾಲ್ಕನೆಯ ಖಂಡ

(ಷೋಡಶಕಲವಿದ್ಯೆ)

ಸತ್ಯಕಾಮನು ಹಾರಿದ್ರುಮತನ ಶಿಷ್ಯನಾದದ್ದು : ಗ್ರಂಥ ಸಂಬಂಧ (೩೬)- ಸತ್ಯಕಾಮನು ಬ್ರಹ್ಮಚರ್ಯಕ್ಕೆ ಮನಸ್ಸುಮಾಡಿದ್ದು (೩೭)- ತಾಯಿಗೆ ಅವನ ಗೋತ್ರವು ತಿಳಿಯದಿದ್ದದ್ದು (೩೮)- ಸತ್ಯಕಾಮನು ಹಾರಿದ್ರುಮತನ ಬಳಿಗೆ ಬಂದದ್ದು (೩೯)- ಸತ್ಯಕಾಮನ ಗೋಸೇವೆ : ಗೋಗಳನ್ನು ಶ್ರದ್ಧೆಯಿಂದ ಕಾಯ್ದದ್ದು (೪೦). **ಪುಟ 455–461**

ಐದನೆಯ ಖಂಡ

(ಷೋಡಶಕಲವಿದ್ಯೆ)

ಸತ್ಯಕಾಮನಿಗೆ ಎತ್ತಿನ ಉಪದೇಶ : ಗೋಗಳು ಸಾವಿರವಾದದ್ದು (೪೧)- ಬ್ರಹ್ಮದ ಮೊದಲನೆಯ ಪಾದ (೪೨)- ಈ ಪಾದದ ಉಪಾಸನೆಯ ಫಲ (೪೩).

ಪುಟ 462–465

ಆರನೆಯ ಖಂಡ

(ಷೋಡಶಕಲವಿದ್ಯೆ ಮುಂದುವರಿದದ್ದು)

ಅಗ್ನಿಯ ಉಪದೇಶ : ಸತ್ಯಕಾಮನು ಉಪದೇಶಕ್ಕೆ ಅನುವಾದದ್ದು (೪೪)- ಬ್ರಹ್ಮದ ಎರಡನೆಯ ಪಾದ (೪೫)- ಎರಡನೆಯ ಪಾದದ ಉಪಾಸನೆಯ ಫಲ (೪೬).

ಪುಟ 465–469

ಏಳನೆಯ ಖಂಡ

(ಷೋಡಶಕಲವಿದ್ಯೆ ಮುಂದುವರಿದದ್ದು)

ಹಂಸದ ಉಪದೇಶ : ಉಪದೇಶಕ್ಕೆ ಆಣಿಯಾದದ್ದು (೪೭) - ಬ್ರಹ್ಮದ ಮೂರನೆಯ ಪಾದ (೪೮)- ಈ ಪಾದದ ಉಪಾಸನೆಗೆ ಫಲ (೪೯). **ಪುಟ 469–472**

ಎಂಟನೆಯ ಖಂಡ

(ಷೋಡಶಕಲವಿದ್ಯೆ ಮುಂದುವರಿದದ್ದು)

ಮದ್ಗುವಿನ ಉಪದೇಶ : ಉಪದೇಶಕ್ಕೆ ಅಣಿಯಾದದ್ದು (೩.೨೦)- ಬ್ರಹ್ಮದ ನಾಲ್ಕನೆಯ ಪಾದ (೩.೨೧)- ನಾಲ್ಕನೆಯ ಪಾದದ ಉಪಾಸನೆಗೆ ಫಲ (೩.೨೨). ಪುಟ 472–475

ಒಂಭತ್ತನೆಯ ಖಂಡ

(ಷೋಡಶಕಲವಿದ್ಯೆ)

ಗುರುವಿನಿಂದ ಉಪದೇಶ : ಗುರುವನ್ನು ಉಪದೇಶಮಾಡಬೇಕೆಂದು ಬೇಡಿಕೊಂಡದ್ದು (೩.೨೩)- ಆಚಾರ್ಯನೂ ಷೋಡಶಕಲವಿದ್ಯೆಯನ್ನೇ ಹೇಳಿಕೊಟ್ಟದ್ದು (೩.೨೪).

ಪುಟ 475–478

ನಾಲ್ಕನೆಯ ಅಧ್ಯಾಯದ ನಾಲ್ಕರಿಂದ ಒಂಭತ್ತರವರೆಗಿನ ಖಂಡಗಳ ಸಾರ

ಪುಟ 479–481

ಹತ್ತನೆಯ ಖಂಡ

(ಉಪಕೋಸಲವಿದ್ಯೆ)

ಉಪಕೋಸಲನು ವಿದ್ಯೆಗಾಗಿ ನಿರಶನನಾದದ್ದು : ಗ್ರಂಥದ ಸಂಬಂಧ (೪.೨೫)- ಉಪಕೋಸಲನಿಗೆ ಗುರು ಉಪದೇಶಮಾಡದೆ ಇದ್ದದ್ದು (೪.೨೬)- ಹೆಂಡತಿ ನೆನಪುಕೊಟ್ಟರೂ ಗುರು ಉಪದೇಶಿಸದೆ ಇದ್ದದ್ದು (೪.೨೭)- ಉಪಕೋಸಲನು ವ್ಯಥೆಯಿಂದ ಊಟಮಾಡದೆ ಹೋದದ್ದು (೪.೨೮)- ಉಪಕೋಸಲನಿಗೆ ಅಗ್ನಿಗಳ ಉಪದೇಶ : ಪ್ರಾಣವು ಬ್ರಹ್ಮ, ಕಂ ಬ್ರಹ್ಮ, ಖಂ ಬ್ರಹ್ಮ (೪.೨೯)- ಉಪಕೋಸಲನ ಸಂಶಯ (೪.೩೦)- ಸುಖವಿಶಿಷ್ಟಬ್ರಹ್ಮವನ್ನೇ ಇಲ್ಲಿ ಹೇಳಿದೆ (೪.೩೧) - ಕಂಖಂಗಳ ವ್ಯತಿಹಾರೋಪದೇಶಕ್ಕೆ ಕಾರಣ (೪.೩೨) - ಅಗ್ನಿಗಳ ಉಪದೇಶದ ಒಟ್ಟರ್ಥ (೪.೩೩). ಪುಟ 482–492

ಹನ್ನೊಂದನೆಯ ಖಂಡ

(ಉಪಕೋಸಲವಿದ್ಯೆ ಮುಂದುವರಿದದ್ದು)

ಗಾರ್ಹಪತ್ಯಾಗ್ನಿವಿದ್ಯೆ : ಗಾರ್ಹಪತ್ಯಾಗ್ನಿವಿದ್ಯೆಯ ತನುಚತುಷ್ಪಯ (೪.೩೪) - ಗಾರ್ಹಪತ್ಯೋಪಾಸನೆಗೆ ಫಲ (೪.೩೫). ಪುಟ 493–495

ಹನ್ನೆರಡನೆಯ ಖಂಡ

(ಉಪಕೋಸಲವಿದ್ಯೆ ಮುಂದುವರಿದದ್ದು)

ಅನ್ವಾಹಾರ್ಯಪಚನಾಗ್ನಿವಿದ್ಯೆ : ಅನ್ವಾಹಾರ್ಯಪಚನದ ತನುಚತುಷ್ಪಯವೂ ಉಪಾಸನೆಯ ಫಲವೂ (೪.೩೬). ಪುಟ 496–498

ಹದಿಮೂರನೆಯ ಖಂಡ

(ಉಪಕೋಸಲವಿದ್ಯೆ ಮುಂದುವರಿದದ್ದು)

ಆಹವನೀಯಾಗ್ನಿವಿದ್ಯೆ : ಆಹವನೀಯದ ತನುಚತುಷ್ಪಯ (೪.೩೭). ಪುಟ 498–499

ಹದಿನಾಲ್ಕನೆಯ ಖಂಡ

(ಉಪಕೋಸಲವಿದ್ಯೆ ಮುಂದುವರಿದದ್ದು)

ಉಪಕೋಸಲನು ಆಚಾರ್ಯನಲ್ಲಿ ಎಲ್ಲವನ್ನೂ ಹೇಳಿದ್ದು : ಅಗ್ನಿಗಳ ಉಪದೇಶದ ಉಪಸಂಹಾರ (೩೩೮)- ಆಚಾರ್ಯನು ಅಗ್ನಿಗಳ ಉಪದೇಶವನ್ನು ತಿಳಿದುಕೊಂಡದ್ದು (೩೩೯)- ಆಚಾರ್ಯನು ಉಪದೇಶಮಾಡುವದಕ್ಕೆ ಪ್ರಾರಂಭಿಸಿದ್ದು (೩೪೦). **ಪುಟ 500-504**

ಹದಿನೈದನೆಯ ಖಂಡ

(ಉಪಕೋಸಲವಿದ್ಯೆ)

ಅಕ್ಷಿಪುರುಷನ ವಿದ್ಯೆ : ಅಕ್ಷಿಪುರುಷನೇ ಬ್ರಹ್ಮ (೩೪೧) - ಅಕ್ಷಿಪುರುಷನು ಸಂಯದ್ವಾಮನು (೩೪೨)- ಅಕ್ಷಿಪುರುಷನು ವಾಮನಿಯು (೩೪೩)- ಅಕ್ಷಿಪುರುಷನು ಭಾಮನಿಯು (೩೪೪)- ಸಗುಣವಿದ್ಯೆಗೆ ಉತ್ತರಗತಿ : ಉಪಾಸಕನಿಗೆ ಉತ್ತರ ಮಾರ್ಗದಿಂದ ಬ್ರಹ್ಮಪ್ರಾಪ್ತಿ (೩೪೫). **ಪುಟ 504-513**

ನಾಲ್ಕನೆಯ ಅಧ್ಯಾಯದ ಹತ್ತರಿಂದ ಹದಿನೈದರವರೆಗಿನ ಖಂಡಗಳ ಸಾರ **ಪುಟ 514-515**

ಹದಿನಾರನೆಯ ಖಂಡ

(ಪ್ರಾಸಂಗಿಕವಾಗಿ ಯಜ್ಞಧರ್ಮಗಳು)

ಬ್ರಹ್ಮನು ಮೌನವಾಗಿರುವ ಕಾಲ : ಗ್ರಂಥದ ಸಂಬಂಧ (೩೪೬)-ಯಜ್ಞವು ವಾಯುವೇ (೩೪೭)- ಯಜ್ಞದ ಮಾರ್ಗದ್ವಯ (೩೪೮)- ಬ್ರಹ್ಮನು ಮೌನವಾಗಿರದಿದ್ದರೆ ದೋಷ (೩೪೯)- ಮೌನದಿಂದಿದ್ದರೆ ಗುಣ (೩೫೦). **ಪುಟ 516-522**

ಹದಿನೇಳನೆಯ ಖಂಡ

(ಪ್ರಾಸಂಗಿಕವಾಗಿ ಯಜ್ಞಧರ್ಮಗಳು, ಮುಂದುವರಿದದ್ದು)

ವ್ಯಾಹೃತಿಗಳ ಉತ್ಪತ್ತಿ : ಗ್ರಂಥದ ಸಂಬಂಧ (೩೫೦)- ಲೋಕಾದಿಗಳಲ್ಲಿ ಸಾರತಮವಾದವು ವ್ಯಾಹೃತಿಗಳು (೩೫೧)- ವ್ಯಾಹೃತಿಗಳಿಂದ ಪ್ರಾಯಶ್ಚಿತ್ತ (೩೫೨)- ತಿಳಿದವನನ್ನೇ ಬ್ರಹ್ಮನನ್ನಾಗಿ ಮಾಡಿಕೊಂಡರೆ ಯಜ್ಞಕ್ಕೆ ಗುಣ (೩೫೩)- ತಿಳಿದ ಬ್ರಹ್ಮನ ಸ್ತುತಿ (೩೫೪)- ತಿಳಿದ ಬ್ರಹ್ಮನನ್ನೇ ಇಟ್ಟುಕೊಳ್ಳಬೇಕು (೩೫೫). **ಪುಟ 523-531**

ನಾಲ್ಕನೆಯ ಅಧ್ಯಾಯದ ಹದಿನಾರು ಹದಿನೇಳನೆಯ ಖಂಡಗಳ ಸಾರ **ಪುಟ 532**

ಉಪನಿಷದ್ವಿಭಾಗಗಳ ವರ್ಣಾನುಕ್ರಮಣಿಕೆ **ಪುಟ 1-12**

ಶಬ್ದಾನುಕ್ರಮಣಿಕೆ **ಪುಟ 13-21**

ಭಾಷ್ಯ ಚರ್ಚೆಗಳ ಅನುಕ್ರಮಣಿಕೆ

೧. ಚರ್ಚೆ : ಬ್ರಹ್ಮಸಂಸ್ಥನೆಂದರೆ ಯಾರು ?

ವೃತ್ತಿಕಾರರ ಮತ : ಯಾವ ಆಶ್ರಮದವರಾದರೂ ಬ್ರಹ್ಮಸಂಸ್ಥರಾಗಿರಬಹುದು (೧೭೮)- ಸಿದ್ಧಾಂತ . ಅದ್ವೈತಜ್ಞಾನಿಯಾದ ಪರಮಹಂಸನೇ ಬ್ರಹ್ಮಸಂಸ್ಥನು (೧೭೯)- ಉಪನಿಷತ್ತುಗಳಿಗೆ ಏಕತ್ವಜ್ಞಾನದಲ್ಲಿ ತಾತ್ಪರ್ಯವಿದ್ದರೂ ಕರ್ಮವಾಕ್ಯಗಳಿಗೆ ಅಪ್ರಾಮಾಣ್ಯವಿಲ್ಲ (೧೮೦)- ಏಕತ್ವಜ್ಞಾನಿಗೆ ಅಗ್ನಿಹೋತ್ರಾದಿಕರ್ಮಗಳಿಲ್ಲ (೧೮೧) ಜ್ಞಾನಿಗೆ ಯಮನಿಯಮಾದಿಗಳು ಹೊಂದುವದು ಹೇಗೆ ? (೧೮೨)- ಪೂರ್ವಪಕ್ಷಯುಕ್ತಿಗಳ ವಿಮರ್ಶೆ (೧೮೩)- ವಾರಮಹಂಸ್ಯವೇ ವೇದೋಕ್ತವಾರಿವ್ರಾಜ್ಯವು (೧೮೪)- ಏಕತ್ವಜ್ಞಾನಿಯೇ ಬ್ರಹ್ಮಸಂಸ್ಥನು (೧೮೫)- ಗೃಹಸ್ಥನೂ ಜ್ಞಾನಿಯಾದರೆ ಅವನಿಗೆ ಪಾರಿವ್ರಾಜ್ಯವು ಅರ್ಥಪ್ರಾಪ್ತ (೧೮೬).

ಪುಟ 250–269

೨. ಸೂರ್ಯೋದಯಾಸ್ತಮಗಳ ವಿಷಯಕ್ಕೆ ಚರ್ಚೆ

ಆಕ್ಷೇಪ (೨೨೦)- ಪರಿಹಾರ (೨೨೧).

ಪುಟ 314–317

(೩ರಿಂದ ೧೫ರ ವರೆಗೆ ಎರಡನೆಯ ಸಂಪುಟದಲ್ಲಿದೆ)

ಸಂಕೇತಗಳ ವಿವರ

ಈ ಪುಸ್ತಕದಲ್ಲಿ ಉಪಯೋಗಿಸಿರುವ ಕೆಲವು ಸಂಕೇತಗಳನ್ನು ಮಾತ್ರ ವಿವರಿಸಿದೆ. ಶ್ರೀಜಯಚಾಮರಾಜೇಂದ್ರಗ್ರಂಥರತ್ನಮಾಲೆಯಲ್ಲಿ ಉಪಯೋಗಿಸಿರುವ ಇತರ ಸಂಕೇತಗಳೂ ಇಲ್ಲಿ ಕಾಣಬರುತ್ತವೆ.

ಅ.	ಅಷ್ಟೇಕರ ಕಂಪನಿಯ ಪು.
ಆ.ಟೀ.	ಆನಂದಗಿರಿಗಳ ಟೀಕೆ
ಐ.ಬ್ರಾ.	ಐತರೇಯಬ್ರಾಹ್ಮಣ
ಗೌ.ಧ.	ಗೌತಮಧರ್ಮಸೂತ್ರ
ತೆ.	ತೆಲಗುಪುಸ್ತಕಪಾಠ
ತೈ.ಬ್ರಾ.	ತೈತ್ತಿರೀಯಬ್ರಾಹ್ಮಣ
ಪಾ.ಸೂ.	ಪಾಣಿನೀಯಸೂತ್ರ
ಮನು.	ಮನುಸ್ಮೃತಿ
ವಾ.	ವಾಣೀವಿಲಾಸಪುಸ್ತಕಪಾಠ
ವಿ.ಪು.	ವಿಷ್ಣುಪುರಾಣ
ಶತ.ಬ್ರಾ.	ಶತಪಥಬ್ರಾಹ್ಮಣ
ಶಾ.ಭಾ.	ಶಾಬರಭಾಷ್ಯ

ಶಾಂತಿಮಂತ್ರಃ

ಓಂ ಆಪ್ಯಾಯನ್ತು ಮಮಾಙ್ಗಾನಿ ವಾಕ್ಪ್ರಾಣಶ್ಚಕ್ಷುಶ್ಶ್ರೋತ್ರಮಥೋ
ಬಲಮಿನ್ದ್ರಿಯಾಣಿ ಚ ಸರ್ವಾಣಿ । ಸರ್ವಂ ಬ್ರಹ್ಮೌಪನಿಷದಂ ಮಾಹಂ
ಬ್ರಹ್ಮ ನಿರಾಕುರ್ಯಾಂ ಮಾ ಮಾ ಬ್ರಹ್ಮ ನಿರಾಕರೋತ್
ಅನಿರಾಕರಣಮಸ್ತು ಅನಿರಾಕರಣಂ ಮೇಽಸ್ತು ತದಾತ್ಮನಿ ನಿರತೇ ಯ
ಉಪನಿಷತ್ಸು ಧರ್ಮಾಃ ತೇ ಮಯಿ ಸನ್ತು ತೇ ಮಯಿ ಸನ್ತು ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ನನ್ನ ಮಾತು, ಪ್ರಾಣ, ಕಣ್ಣು, ಕಿವಿ, ಬಲ ಮತ್ತು ಎಲ್ಲಾ ಇಂದ್ರಿಯಗಳು (ಪರಮಾತ್ಮನ ಅನುಗ್ರಹದಿಂದ) ತೃಪ್ತಿ (ವೃದ್ಧಿ-ಬಲ)ವನ್ನು ಹೊಂದಲಿ. ಇದೆಲ್ಲವೂ ಉಪನಿಷತ್ತಿನಲ್ಲಿ ಹೇಳಿದ ಬ್ರಹ್ಮವೇ, ನಾನು ಬ್ರಹ್ಮವನ್ನು ತಿರಸ್ಕಾರ ಮಾಡದಂತಾಗಲಿ; ಬ್ರಹ್ಮವೂ ಸಹ ನನ್ನನ್ನು ತಿರಸ್ಕಾರ ಮಾಡದಿರಲಿ. ನನಗೆ ಬ್ರಹ್ಮವು ತಿರಸ್ಕಾರ (ಪರೋಕ್ಷ)ವಾಗದಿರಲಿ, ನಾನೂ ಸಹ ಬ್ರಹ್ಮಕ್ಕೆ ಪರೋಕ್ಷ (ತಿರಸ್ಕೃತ)ನಾಗದಂತಾಗಲಿ, ಆ ಬ್ರಹ್ಮಸ್ವರೂಪದಲ್ಲಿ ನೆಲೆನಿಂತವನಾದ ನನ್ನಲ್ಲಿ - ಬ್ರಹ್ಮದಲ್ಲಿ ಯಾವ ಅಸಾಧಾರಣವಾದ ಗುಣಗಳಿವೆ ಎಂದು ಉಪನಿಷತ್ತಿನಲ್ಲಿ ಹೇಳಿದೆಯೋ ಅವುಗಳೆಲ್ಲಾ ಇರುವಂತಾಗಲಿ. ಆಧ್ಯಾತ್ಮಿಕ, ಆದಿಭೌತಿಕ, ಆಧಿದೈವಿಕ ತಾಪತ್ರಯಗಳೂ ನಿವಾರಣೆಯಾಗಲಿ.

॥ ಓಮ್ ॥

ಶಾಂಕರಭಾಷ್ಯಸಮೇತವಾದ

ಛಾಂದೋಗ್ಯೋಪನಿಷತ್ತು

ಭಾಷ್ಯಕಾರರ ಅವತರಣಿಕೆ

ಗ್ರಂಥಾರಂಭಪ್ರತಿಜ್ಞೆ

(ಭಾಷ್ಯ)

೧. 'ಓಮಿತ್ಯೇತದಕ್ಷರಮ್' ಇತ್ಯಾದ್ಯಷ್ಟಾಧ್ಯಾಯೀ ಛಾನ್ದೋಗ್ಯೋಪನಿಷತ್ । ತಸ್ಯಾಃ ಸಂಕ್ಷೇಪತೋಽರ್ಥಜಿಜ್ಞಾಸುಭ್ಯಃ ಋಜುವಿವರಣಮ್ ಅಲ್ಪಗ್ರನ್ಥಮ್ ಇದಮ್ ಆರಭ್ಯತೇ ॥

(ಭಾಷ್ಯಾರ್ಥ)

'ಓಮಿತ್ಯೇತದಕ್ಷರಮ್' ಎಂದು ಮೊದಲಾಗಿರುವ ಎಂಟು ಅಧ್ಯಾಯಗಳ (ಗ್ರಂಥವು) ಛಾಂದೋಗ್ಯೋಪನಿಷತ್ತು. ಆ (ಉಪನಿಷತ್ತಿಗೆ) ಸಂಕ್ಷೇಪವಾಗಿ ಅರ್ಥವನ್ನು ತಿಳಿಯಬೇಕೆನ್ನುವವರಿಗೋಸ್ಕರ[1] ಅಲ್ಪಗ್ರಂಥವುಳ್ಳ[2] ಈ ಋಜುವಿವರಣವನ್ನು[3] ಆರಂಭಿಸಿರುತ್ತದೆ.

ಹಿಂದಿನ ಗ್ರಂಥಕ್ಕೂ ಈ ಉಪನಿಷತ್ತಿಗೂ ಸಂಬಂಧ

(ಭಾಷ್ಯ)

೨. ತತ್ರ ಸಂಬನ್ಧಃ । ಸಮಸ್ತಂ ಕರ್ಮ ಅಧಿಗತಂ ಪ್ರಾಣಾದಿದೇವತಾ[4]

1. ಶಾರೀರಕದಲ್ಲಿ ವಿಸ್ತಾರವಾಗಿ ಚರ್ಚೆಮಾಡಿದ್ದರೂ ಈ ಉಪನಿಷತ್ತಿನ ಅರ್ಥವನ್ನು ಸಂಗ್ರಹವಾಗಿ ತಿಳಿದುಕೊಳ್ಳಬೇಕೆನ್ನುವವರಿಗೋಸ್ಕರ ಎಂದರ್ಥ. ಟೀ ॥
2. ದ್ರಾವಿಡಭಾಷ್ಯವು ವಿಸ್ತಾರವಾಗಿರುವದರಿಂದ ಸ್ವಲ್ಪ ಗ್ರಂಥದ ಭಾಷ್ಯವು ಬೇಕೆನ್ನುವವರಿಗೆ ಬೇಕಾಗುತ್ತದೆ ಎಂಬ ಭಾವವು ಈ ವಿಶೇಷಣದಲ್ಲಿ ಅಡಗಿದೆ ಎಂದು ಟೀ ॥
3. ಪಾಠಕ್ರಮಕ್ಕನುಗುಣವಾಗಿ ಶಾರೀರಕಭಾಷ್ಯದಲ್ಲಿ ವಿಚಾರವಿಲ್ಲ; ಆದ್ದರಿಂದಲೂ ಈ ವಿವರಣವು ಜಿಜ್ಞಾಸುಗಳಿಗೆ ಅವಶ್ಯವಾಗಿದೆ ಎಂದರ್ಥ. ಈ ಉಪನಿಷತ್ತಿನ ಸ್ಥಾನ, ವಿಷಯ- ಮುಂತಾದವುಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.
4. 'ಪ್ರಾಣಾಗ್ನ್ಯಾದಿದೇವತಾ' ಎಂದು ಟೀಕಾಸಮ್ಮತವಾದ ಪಾಠ.

ವಿಜ್ಞಾನಸಹಿತಮ್ ಅರ್ಚಿರಾದಿಮಾರ್ಗೇಣ ಬ್ರಹ್ಮಪ್ರತಿಪತ್ತಿಕಾರಣಮ್ । ಕೇವಲಂ ಚ[1] ಧೂಮಾದಿಮಾರ್ಗೇಣ ಚನ್ದ್ರಲೋಕಪ್ರತಿಪತ್ತಿಕಾರಣಮ್ । ಸ್ವಭಾವ ಪ್ರವೃತ್ತಾನಾಂ ಚ ಮಾರ್ಗದ್ವಯಪರಿಭ್ರಷ್ಟಾನಾಂ ಕಷ್ಟಾ ಅಧೋಗತಿರುಕ್ತಾ । ನ ಚ ಉಭಯೋರ್ಮಾರ್ಗಯೋರನ್ಯತರಸ್ಮಿನ್ನಪಿ ಮಾರ್ಗೇ ಆತ್ಯನ್ತಿಕೀ ಪುರುಷಾರ್ಥ ಸಿದ್ಧಿಃ । ಇತ್ಯತಃ ಕರ್ಮನಿರಪೇಕ್ಷಮ್ ಅದ್ವೈತಾತ್ಮವಿಜ್ಞಾನಂ ಸಂಸಾರ ಗತಿತ್ರಯಹೇತೂಪಮರ್ದೇನ ವಕ್ತವ್ಯಮ್ ಇತಿ ಉಪನಿಷತ್ ಆರಭ್ಯತೇ ॥

(ಭಾಷ್ಯಾರ್ಥ)

ಇಲ್ಲಿ[2] ಸಂಬಂಧವೇನೆಂದರೆ : ಪ್ರಾಣವೇ ಮುಂತಾದ[3] (ದೇವತೆಗಳ) ಉಪಾಸನೆಯ ಸಹಿತವಾಗಿ[4] **ಅರ್ಚಿರಾದಿಮಾರ್ಗ**ದಿಂದ[5] ಬ್ರಹ್ಮಪ್ರಾಪ್ತಿಗೆ[6] ಕಾರಣವಾಗಿರುವ (ಕರ್ಮ), **ಧೂಮಾದಿಮಾರ್ಗ**ದಿಂದ ಚಂದ್ರಲೋಕಪ್ರಾಪ್ತಿಗೆ ಕಾರಣವಾಗಿರುವ ಬರಿಯ[7] (ಕರ್ಮ-ಹೀಗೆ) ಸಮಸ್ತಕರ್ಮವನ್ನೂ ತಿಳಿದುಕೊಂಡದ್ದಾಯಿತು. ಸ್ವಭಾವದಿಂದಲೇ ಪ್ರವೃತ್ತರಾಗಿ[8] ಈ ಎರಡು ಮಾರ್ಗಗಳಿಂದಲೂ ತಪ್ಪಿ ಜಗುಳಿರುವ (ಜೀವ)ರಿಗೆ ಕಷ್ಟವಾದ ಅಧೋಗತಿಯನ್ನೂ ಹೇಳಿದ್ದಾಗಿದೆ.[9] ಆದರೆ ಈ ಎರಡು

1. ಇದಾದಮೇಲೆ 'ಕರ್ಮ' ಎಂದು ಹೆಚ್ಚಾಗಿರುವ ಅ॥ ವಾ॥ ಪಾಠವೂ ಆಗಬಹುದು.
2. ಈ ಉಪನಿಷತ್ತಿಗೆ. 3. ಟೀಕಾಸಮ್ಮತವಾದ ಪಾಠದಂತೆ 'ಪ್ರಾಣ, ಅಗ್ನಿ'-ಮುಂತಾದ ಎಂದು ಕನ್ನಡಿಸಿಕೊಳ್ಳಬೇಕು ; ಈಗಿನ ಪಾಠದಲ್ಲಿಯೇ ಅಗ್ನಿಯೂ ಸೇರಿರುತ್ತಾನೆ
4. ಇಲ್ಲಿಯೂ ಪ್ರಾಣಾದ್ಯುಪಾಸನೆಯಿದ್ದರೂ ಅದನ್ನು ಉಪಾಸನೆಮಾಡಿದರೆ ಅಲ್ಪಫಲ ವೆಂಬುದನ್ನು ಅನುವಾದಮಾಡಿ ಆತ್ಯಂತಿಕಫಲವನ್ನು ತಿಳಿಸುವ ಬ್ರಹ್ಮಜ್ಞಾನಕ್ಕೆ ಅವತರಣಿಕೆಯನ್ನು ಮಾಡಿರುವದೇ ವಿಶೇಷ.
5. ಅರ್ಚಿರಾದಿ (ದೇವಯಾನ, ಉತ್ತರ) ಮಾರ್ಗ, ಧೂಮಾದಿ (ಪಿತೃಯಾಣ, ದಕ್ಷಿಣ)ಮಾರ್ಗ - ಇವುಗಳನ್ನು ಇಲ್ಲಿಯೂ ನಾಲ್ಕನೆಯ ಐದನೆಯ ಅಧ್ಯಾಯಗಳಲ್ಲಿ ಅನುವಾದಕ್ಕಾಗಿ ಹೇಳಿರುತ್ತದೆ.
6. 'ಬ್ರಹ್ಮಲೋಕಪ್ರತಿಪತ್ತಿಕಾರಣಮ್' ಎಂಬ ಪಾಠಾಂತರವೂ ಇದೆ. ಅದು ಇಲ್ಲದಿದ್ದರೂ ಅಪರಬ್ರಹ್ಮಪ್ರಾಪ್ತಿಗೆ ಎಂದೇ ಇಲ್ಲಿ ಅರ್ಥ. 7. ಉಪಾಸನಾ ಸಂಬಂಧವಿಲ್ಲದ.
8. ಶಾಸ್ತ್ರದ ಚೋದನೆಯಿಲ್ಲದೆ ರಾಗದ್ವೇಷಾದಿಗಳಿಂದೊಡಗೂಡಿದ ಸ್ವಾಭಾವಿಕವಾದ ತಿಳಿವಳಿಕೆಯಿಂದಲೇ ಕರ್ಮದಲ್ಲಿ ತೊಡಗಿರುವ ಎಂದರ್ಥ.
9. ಮತ್ತೆ ಮತ್ತೆ ಹುಟ್ಟಿ ಸಾಯುವದೆಂಬ ಈ ಮೂರನೆಯ ಗತಿಯನ್ನು ಈ ಉಪನಿಷತ್ತಿನಲ್ಲಿಯೂ ಐದನೆಯ ಅಧ್ಯಾಯದಲ್ಲಿ ಅನುವಾದಮಾಡಿಕೊಂಡಿದೆ. ಹಿಂದಿನ ಕರ್ಮಕಾಂಡದಲ್ಲಿಯೇ ಈ ಮೂರು ಗತಿಯನ್ನೂ ಹೇಳಿದ್ದರೂ ಇವುಗಳನ್ನು ಇಲ್ಲಿ ಅನುವಾದ ಮಾಡಿಕೊಂಡು ಮೋಕ್ಷಹೇತುವನ್ನು ಹೇಳಿದೆ - ಎಂಬುದೇ ಒಟ್ಟರ್ಥ.

ಮಾರ್ಗಗಳಲ್ಲಿ (ಯಾವ) ಒಂದು ಮಾರ್ಗದಲ್ಲಿಯೂ ಆತ್ಯಂತಿಕವಾದ ಪುರುಷಾರ್ಥದ ಸಿದ್ಧಿ (ಯಾಗುವ) ದಿಲ್ಲವಾದ್ದರಿಂದ[1] ಕರ್ಮದಅಪೇಕ್ಷೆಯಿಲ್ಲದ ಅದ್ವೈತಾತ್ಮ ವಿಜ್ಞಾನವನ್ನು - ಸಂಸಾರದ ಮೂರುಗತಿಗಳಿಗೂ ಕಾರಣ (ವಾದ ಅಜ್ಞಾನವನ್ನು) ಬಾಧಿಸಿ - ಹೇಳಬೇಕೆಂದು ಉಪನಿಷತ್ತನ್ನು ಆರಂಭಿಸಿರುತ್ತದೆ.

ಅದ್ವೈತಾತ್ಮವಿಜ್ಞಾನವಿಲ್ಲದೆ ಆತ್ಯಂತಿಕಮೋಕ್ಷವಿಲ್ಲ

(ಭಾಷ್ಯ)

೩. ನ ಚ ಅದ್ವೈತಾತ್ಮವಿಜ್ಞಾನಾತ್ ಅನ್ಯತ್ರ ಆತ್ಯನ್ತಿಕೀ ನಿಃಶ್ರೇಯಸಪ್ರಾಪ್ತಿಃ । ವಕ್ಷ್ಯತಿ ಹಿ ''ಅಥ ಯೇಽನ್ಯಥಾತೋ ವಿದುರನ್ಯರಾಜಾನಸ್ತೇ ಕ್ಷಯ್ಯಲೋಕಾ ಭವನ್ತಿ'' (೭-೨೫-೨), ವಿಪರ್ಯಯೇ ಚ ''ಸ ಸ್ವರಾಡ್ಭವತಿ'' (೭-೨೫-೨) ಇತಿ । ತಥಾ-ದ್ವೈತವಿಷಯಾನೃತಾಭಿಸಂಧಸ್ಯ ಬನ್ದನಂ ತಸ್ಕರಸ್ಯೇವ ತಪ್ತಪರಶುಗ್ರಹಣೇ ಬನ್ದಾದಾಹಭಾವಃ ಸಂಸಾರದುಃಖಪ್ರಾಪ್ತಿಶ್ಚ ಇತ್ಯುಕ್ತಾ ಅದ್ವೈತಾತ್ಮಸತ್ಯಾಭಿಸಂಧಸ್ಯ ಅತಸ್ಕರಸ್ಯೇವ ತಪ್ತಪರಶುಗ್ರಹಣೇ ಬನ್ದಾದಾಹಾಭಾವಃ ಸಂಸಾರದುಃಖನಿವೃತ್ತಿಃ, ಮೋಕ್ಷಶ್ಚ ಇತಿ ॥

(ಭಾಷ್ಯಾರ್ಥ)

ಅದ್ವೈತಾತ್ಮವಿಜ್ಞಾನಕ್ಕಿಂತ ಬೇರೆಯ (ಸಾಧನ) ದಿಂದ ಆತ್ಯಂತಿಕವಾದ ನಿಃಶ್ರೇಯಸದ ಪ್ರಾಪ್ತಿ (ಯಾಗ) ಲಾರದು. ''ಇನ್ನು ಯಾರು ಇದಕ್ಕಿಂತ ಬೇರೆಯಾಗಿ ತಿಳಿದಿರುವರೋ, ಮತ್ತೊಬ್ಬನನ್ನು ರಾಜನಾಗಿಟ್ಟುಕೊಂಡಿರುವ ಅವರು ಕ್ಷಯಿಸತಕ್ಕ ಲೋಕ (ಗಳನ್ನು ಪಡೆದವ) ರಾಗುತ್ತಾರೆ'' (೭-೨೫-೨), ಅದಕ್ಕೆ ವಿಪರೀತವಾಗಿ (ಹೀಗೆ ಅರಿತುಕೊಂಡಿರುವನಲ್ಲ), ''ಅವನು ಸ್ವರಾಜನಾಗಿರುವನು'' (೭-೨೫-೨)- ಎಂದು ಮುಂದೆ ಹೇಳಿದೆಯಲ್ಲವೆ ? ಇದರಂತೆ ದ್ವೈತವಿಷಯವಾದ ಅನೃತದಲ್ಲಿ[2] ಅಭಿಮಾನವುಳ್ಳವನಿಗೆ, ಕಳ್ಳನಿಗೆ ಕಾಯಿಸಿದ ಕೊಡಲಿಯನ್ನು ಹಿಡಿದಾಗ ಬಂಧವೂ ಸುಡುವಿಕೆಯೂ (ದುಃಖಪ್ರಾಪ್ತಿಯೂ) ಆಗುವಂತೆ, ಬಂಧವೂ ಸಂಸಾರದುಃಖ

1. ಬರಿಯ ಕರ್ಮದಿಂದ ಆಗುವ ಪಿತೃಲೋಕಪ್ರಾಪ್ತಿಯು ಬೇಗನೆ ಕ್ಷಯವಾಗುವದು. ಉಪಾಸನಾಸಮುಚ್ಚಿತಕರ್ಮದಿಂದಾಗುವ ದೇವಲೋಕಪ್ರಾಪ್ತಿಯು ಹೆಚ್ಚು ಕಾಲದವರೆಗೆ ಇದ್ದರೂ ನಿತ್ಯವಾದ ಮೋಕ್ಷವನ್ನು ಕೊಡುವದಿಲ್ಲ, ಸ್ವಾಭಾವಿಕಕರ್ಮವಂತೂ ಮತ್ತೆ ಮತ್ತೆ ಹುಟ್ಟುವದಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಎಂದರ್ಥ

2. ಅನೃತ, ಮಿಥ್ಯಾ, ವಿತಥ-ಈ ಶಬ್ದಗಳನ್ನು ಹುಸಿತೋರಿಕೆ ಎಂಬರ್ಥದಲ್ಲಿಯೇ ಭಾಷ್ಯದಲ್ಲಿ ಪ್ರಯೋಗಿಸಿದೆ.

ಪ್ರಾಪ್ತಿಯೂ ಆಗುವವೆಂದು (೬-೧೬-೧) ಹೇಳಿ ಅದ್ವೈತಾತ್ಮನೆಂಬ ಸತ್ಯದಲ್ಲಿ ಅಭಿಮಾನವುಳ್ಳವನಿಗೆ, ಕಳ್ಳನಲ್ಲದವನು ಕಾಯಿಸಿದಕೊಡಲಿಯನ್ನು ಹಿಡಿದಾಗ ಬಂಧ ದಾಹಗಳೂ (ದುಃಖಪ್ರಾಪ್ತಿಯೂ) ಆಗದಿರುವಂತೆ, ಸಂಸಾರದುಃಖಗಳ ನಿವೃತ್ತಿಯೂ ಮೋಕ್ಷವೂ[1] (ಆಗುವ)ವೆಂದೂ (ಮುಂದೆ ಹೇಳಿದೆ).

ಅದ್ವೈತಾತ್ಮಜ್ಞಾನಕ್ಕೂ ಕರ್ಮಕ್ಕೂ ಸಮುಚ್ಚಯವಿಲ್ಲ

(ಭಾಷ್ಯ)

೪. ಅತ ಏವ ನ ಕರ್ಮಸಹಭಾವಿ ಅದ್ವೈತಾತ್ಮದರ್ಶನಮ್ । ಕ್ರಿಯಾಕಾರಕಫಲಭೇದೋಪಮರ್ದೇನ 'ಸದೇಕಮೇವ ಅದ್ವಿತೀಯಮ್', (೬-೨-೧,೨), ''ಆತ್ಮೈವೇದಂ ಸರ್ವಮ್'' (೭-೨೫-೨)- ಇತ್ಯೇವಮಾದಿವಾಕ್ಯ ಜನಿತಸ್ಯ ಬಾಧಕಪ್ರತ್ಯಯಾನುಪಪತ್ತೇಃ । ಕರ್ಮವಿಧಿಪ್ರತ್ಯಯಃ ಇತಿ ಚೇತ್ । ನ । ಕರ್ತೃಭೋಕ್ತೃಸ್ವಭಾವವಿಜ್ಞಾನವತಃ ತಜ್ಜನಿತಕರ್ಮಫಲರಾಗದ್ವೇಷಾದಿ ದೋಷವತಶ್ಚ ಕರ್ಮವಿಧಾನಾತ್ । ಅಧಿಗತಸಕಲವೇದಾರ್ಥಸ್ಯ ಕರ್ಮವಿಧಾನಾತ್ ಅದ್ವೈತಜ್ಞಾನವತೋಽಪಿ ಕರ್ಮ ಇತಿ ಚೇತ್ । ನ । ಕರ್ಮಾಧಿಕೃತವಿಷಯಸ್ಯ ಕರ್ತೃಭೋಕ್ತ್ರಾದಿಜ್ಞಾನಸ್ಯ ಸ್ವಾಭಾವಿಕಸ್ಯ 'ಸದೇಕಮೇವಾದ್ವಿತೀಯಮ್', 'ಆತ್ಮೈವೇದಂ ಸರ್ವಮ್' ಇತ್ಯನೇನ ಉಪಮರ್ದಿತತ್ವಾತ್ । ತಸ್ಮಾತ್ ಅವಿದ್ಯಾದಿದೋಷವತ ಏವ ಕರ್ಮಾಣಿ ವಿಧೀಯನ್ತೇ ನಾದ್ವೈತಜ್ಞಾನವತಃ । ಅತ ಏವ ಹಿ ವಕ್ಷ್ಯತಿ ''ಸರ್ವ ಏತೇ ಪುಣ್ಯಲೋಕಾ ಭವನ್ತಿ, ಬ್ರಹ್ಮಸಂಸ್ಥೋಽಮೃತತ್ವಮೇತಿ'' (೨-೨೩-೧) ಇತಿ ॥

(ಭಾಷ್ಯಾರ್ಥ)

ಆದ್ದರಿಂದಲೇ ಅದ್ವೈತಾತ್ಮದರ್ಶನವು ಕರ್ಮದೊಡನೆ ಇರತಕ್ಕದ್ದಲ್ಲ. ಏಕೆಂದರೆ ಕ್ರಿಯೆ, ಕಾರಕ, ಫಲ- ಎಂಬ ಭೇದವನ್ನು ಬಾಧಿಸಿ ''ತನಗೆರಡನೆಯದಿಲ್ಲದ ಸತ್ತೊಂದೇ'' (೬-೨-೧,೨), ''ಇದೆಲ್ಲವೂ ಆತ್ಮನೇ'' (೭-೨೫-೨)-ಎಂಬಿದೇ ಮುಂತಾದ ವಾಕ್ಯದಿಂದ ಹುಟ್ಟಿದ ಜ್ಞಾನಕ್ಕೆ ಬಾಧಕಪ್ರತ್ಯಯವುಂಟಾಗುವಹಾಗಿಲ್ಲ[2].

---

1. ಸಂಸಾರಬಂಧ, ದುಃಖಪ್ರಾಪ್ತಿ- ಇವುಗಳಲ್ಲದೆ ಎಲ್ಲಾ ಅನಿಷ್ಟದಿಂದಲೂ ಬಿಡುಗಡೆಯಾಗುವದೆಂಬ ಮೋಕ್ಷವು ಕಳ್ಳನಲ್ಲದವನಿಗೆ ಬಂಧ, ಸುಡುವಿಕೆ, ದುಃಖ- ಇವುಗಳಿಲ್ಲದಂತಾಗುವ ಬಿಡುಗಡೆಯನ್ನು ಹೋಲುತ್ತದೆ.

2. ಬಾಧಕವಿರುವದು ದ್ವೈತಭೂಮಿಕೆಯಲ್ಲಿ, ಎಲ್ಲವೂ ಆತ್ಮನೇ- ಎಂಬ ಅದ್ವೈತಾವಸ್ಥೆಯಲ್ಲಿ ಬಾಧಕವೇ ಇರುವಂತಿಲ್ಲ ; ಆದ್ದರಿಂದ ಅದ್ವೈತಜ್ಞಾನದೊಡನೆ ಕರ್ಮವನ್ನು ಸಮುಚ್ಚಯಮಾಡಿಕೊಳ್ಳುವ ಸಂಭವವೇ ಇಲ್ಲ

(ಆಕ್ಷೇಪ) :- ಕರ್ಮಗಳನ್ನು ವಿಧಿಸಿದೆ ಎಂಬ ವ್ರತ್ಯಯವು (ಬಾಧಕವು)[1] ಎಂದರೊ ?

(ಪರಿಹಾರ) :- ಹಾಗಲ್ಲ. ಏಕೆಂದರೆ ಕರ್ತೃಭೋಕ್ತೃಸ್ವಭಾವದ (ಆತ್ಮನ) ಅರಿವುಳ್ಳವನೂ ಅದರಿಂದುಂಟಾಗುವ ಕರ್ಮಫಲದಲ್ಲಿ ರಾಗ, ದ್ವೇಷ-ಮುಂತಾದ ದೋಷವುಳ್ಳವನೂ ಆಗಿರುವವನಿಗೇ ಕರ್ಮವನ್ನು ವಿಧಿಸಿದೆ[2].

(ಆಕ್ಷೇಪ) :- ಸಕಲವೇದಾರ್ಥವನ್ನೂ ಅರಿತುಕೊಂಡವನಿಗೇ ಕರ್ಮವನ್ನು ವಿಧಿಸಿರುವದರಿಂದ ಅದ್ವೈತಜ್ಞಾನವಿರುವವನಿಗೂ ಕರ್ಮ(ವುಂಟು)[3] ಎಂದರೊ ?

(ಪರಿಹಾರ) :- ಹಾಗಲ್ಲ. ಏಕೆಂದರೆ ಕರ್ಮದಲ್ಲಿ ಅಧಿಕೃತನಾದವನಿಗೆ (ಇರುವ) ಸ್ವಾಭಾವಿಕವಾದ ಕರ್ತೃಭೋಕ್ತ್ರಾದಿವಿಜ್ಞಾನವು ''ತನಗೆರಡನೆಯದಿಲ್ಲದ ಸತ್ತೊಂದೇ'', ''ಇದೆಲ್ಲವೂ ಆತ್ಮನೇ''- ಎಂಬೀ (ವಿಜ್ಞಾನ)ದಿಂದ ಬಾಧಿತವಾಗಿರುತ್ತದೆ[4]. ಆದ್ದರಿಂದ ಅವಿದ್ಯೆಯೇ ಮುಂತಾದ ದೋಷವುಳ್ಳವನಿಗೇ ಕರ್ಮಗಳು ವಿಹಿತವಾಗಿರುತ್ತವೆಯೇ ಹೊರತು ಅದ್ವೈತಜ್ಞಾನವುಳ್ಳವನಿಗಲ್ಲ[5]. ಆದ್ದರಿಂದಲೇ ಅಲ್ಲವೆ, ''ಇವರೆಲ್ಲರೂ ಪುಣ್ಯಲೋಕವುಳ್ಳವರಾಗುವರು ; (ಆದರೆ) ಬ್ರಹ್ಮಸಂಸ್ಥನು ಅಮೃತತ್ವವನ್ನು ಪಡೆಯುವನು'' (೨-೨೩-೧) ಎಂದು ಮುಂದೆ ಹೇಳಿರುತ್ತದೆ ?[6]

---

1. ಶಾಸ್ತ್ರದಲ್ಲಿ ಕರ್ಮವನ್ನು ವಿಧಿಸಿರುವದು ವ್ಯರ್ಥವಾಗದೆ ಇರುವದಕ್ಕಾಗಿ ಕರ್ಮವನ್ನು ಮಾಡಬೇಕು ಎಂಬ ಅರಿವು ಅದ್ವೈತಪ್ರತ್ಯಯಕ್ಕೆ ಬಾಧಕವಲ್ಲವೆ ?
2. ನಿತ್ಯಕರ್ಮವನ್ನುಕೂಡ ಅವಿದ್ಯಾದಿದೋಷವುಳ್ಳವನಿಗೇ ವಿಧಿಸಿದೆ. ಬೃ. ಭಾ. ೧-೩-೧ (ಭಾ. ಭಾ. ೫೫).
3. ಅದ್ವೈತಾರ್ಥವೂ ವೇದಜ್ಞಾನವಾದದ್ದರಿಂದ ಅದನ್ನು ಅರಿತಮೇಲೆಯೇ ಕರ್ಮಕ್ಕೆ ಅಧಿಕಾರವೆಂದಾಯಿತು ಎಂದು ಭಾವ. ತೈ. ಭಾ. ೧-೧೧ (ಭಾ.ಭಾ ೭೦) ಸೂ. ಭಾ. ೩-೪-೭- (ಭಾ. ಭಾ. ೪೪೩) - ಇವನ್ನು ನೋಡಿ.
4. ಆತ್ಮನೊಬ್ಬನೇ ಎಂಬ ಜ್ಞಾನದಲ್ಲಿ ಕಾರಕಗಳೂ ವಿಷಯಗಳೂ ಬೇರೆಯಾಗಿರುವದೇ ಇಲ್ಲ, ಅವಿದ್ಯಾವಸ್ಥೆಯಲ್ಲಿ ಮಾತ್ರ ದ್ವೈತವು ಕಾಣುತ್ತದೆ.
5. ಕ್ರಿಯೆಯ ಫಲದಲ್ಲಿ ಆಶೆಯಿರುವ ಅವಿದ್ಯಾವಂತನಿಗೆ ಆಯಾ ಫಲಪ್ರಾಪ್ತಿಗಾಗಿ ಕರ್ಮವನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆ. ಅಷ್ಟರಿಂದಲೇ ಕರ್ಮವಿಧಿಯು ಸಾರ್ಥಕವಾಗುತ್ತದೆ. ಆಶೆಯೇ ಇಲ್ಲದ ಅದ್ವೈತಜ್ಞಾನಿಗೂ ವಿಹಿತವಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ ಎಂದು ಭಾವ. ತೈ. ಭಾ. ಭಾ. ೮೦ನ್ನು ನೋಡಿ.
6. ಈ ಶ್ರುತಿಯಲ್ಲಿ ಪುಣ್ಯಲೋಕವೆಂಬ ಫಲವನ್ನು ಕೊಡುವ ಕರ್ಮನಿಷ್ಠೆಯು ಬ್ರಹ್ಮನಿಷ್ಠನಿಗೆ ಇಲ್ಲ; ಅಮೃತತ್ವವನ್ನು ಕೊಡುವ ಬ್ರಹ್ಮನಿಷ್ಠೆಯು ಕರ್ಮನಿಷ್ಠನಿಗೆ ಇಲ್ಲ ಎಂದು ಹೇಳಿರುತ್ತದೆ - ಎಂದು ಭಾವ.

ಅದ್ವೈತಜ್ಞಾನಕ್ಕೂ ಉಪಾಸನೆಗೂ ತಾರತಮ್ಯ

(ಭಾಷ್ಯ)

೫. ತತ್ರ ಏತಸ್ಮಿನ್ ಅದ್ವೈತವಿದ್ಯಾಪ್ರಕರಣೇऽಭ್ಯುದಯಸಾಧನಾನಿ ಉಪಾಸನಾನಿ ಉಚ್ಯನ್ತೇ । ಕೈವಲ್ಯಸಂನಿಕೃಷ್ಟಫಲಾನಿ ಚ ಅದ್ವೈತಾತ್ ಈಷದ್ವಿಕೃತಬ್ರಹ್ಮ ವಿಷಯಾಣಿ ''ಮನೋಮಯಃ, ಪ್ರಾಣಶರೀರಃ'' (೩-೧೪-೨) ಇತ್ಯಾದೀನಿ ಕರ್ಮ ಸಮೃದ್ಧಿಫಲಾನಿ ಚ ಕರ್ಮಾಙ್ಗಸಂಬನ್ಧೀನಿ । ರಹಸ್ಯಸಾಮಾನ್ಯಾತ್ । ಮನೋವೃತ್ತಿ ಸಾಮಾನ್ಯಾಚ್ಚ । ಯಥಾ ಅದ್ವೈತಜ್ಞಾನಂ ಮನೋವೃತ್ತಿಮಾತ್ರಮ್, ತಥಾ ಅನ್ಯಾನ್ಯಪಿ ಉಪಾಸನಾನಿ ಮನೋವೃತ್ತಿರೂಪಾಣೀ ಇತಿ ಅಸ್ತಿ ಹಿ ಸಾಮಾನ್ಯಮ್ । ಕಸ್ತರ್ಹಿ ಅದ್ವೈತಜ್ಞಾನಸ್ಯ ಉಪಾಸನಾನಾಂ ಚ ವಿಶೇಷಃ ? ಉಚ್ಯತೇ । ಸ್ವಾಭಾವಿಕಸ್ಯ ಆತ್ಮನಿ ಅವಿಕ್ರಿಯೇ[1] ಅಧ್ಯಾರೋಪಿತಸ್ಯ ಕರ್ತ್ರಾದಿಕಾರಕಕ್ರಿಯಾಫಲಭೇದವಿಜ್ಞಾನಸ್ಯ ನಿವರ್ತಕಮ್ ಅದ್ವೈತವಿಜ್ಞಾನಮ್ । ರಜ್ಜ್ವಾದಾವಿವ ಸರ್ಪಾದ್ಯಧ್ಯಾರೋಪ ಲಕ್ಷಣಜ್ಞಾನಸ್ಯ ರಜ್ಜ್ವಾದಿಸ್ವರೂಪನಿಶ್ಚಯಃ ಪ್ರಕಾಶನಿಮಿತ್ತಃ । ಉಪಾಸನಂ ತು ಯಥಾಶಾಸ್ತ್ರಸಮರ್ಪಿತಂ[2] ಕಿಂಚಿದಾಲಮ್ಬನಮ್ ಉಪಾದಾಯ ತಸ್ಮಿನ್ ಸಮಾನಚಿತ್ತವೃತ್ತಿಸಂತಾನಕರಣಂ ತದ್ವಿಲಕ್ಷಣಪ್ರತ್ಯಯಾನನ್ತರಿತಮ್ ಇತಿ ವಿಶೇಷಃ ॥

(ಭಾಷ್ಯಾರ್ಥ)

(ಹೀಗಿರು)ವಲ್ಲಿ, ಈ ಅದ್ವೈತವಿದ್ಯೆಯ ಪ್ರಕರಣದಲ್ಲಿ ಅಭ್ಯುದಯಕ್ಕೆ ಸಾಧನವಾಗಿರುವ ಉಪಾಸನೆಗಳೂ ಕೈವಲ್ಯಕ್ಕೆ ಸಮೀಪದಲ್ಲಿರುವ ಫಲವುಳ್ಳ ಅದ್ವೈತಕ್ಕಿಂತ ಒಂದಿಷ್ಟು ವಿಕಾರರೂಪವಾಗಿರುವ ಬ್ರಹ್ಮದ ವಿಷಯವಾಗಿರುವ ''ಮನೋಮಯನು, ಪ್ರಾಣಶರೀರನು'' (೩-೧೪-೨) ಎಂಬಿದೇ ಮುಂತಾದ (ಉಪಾಸನೆ)ಗಳೂ[3] ಕರ್ಮದ ಅಂಗಕ್ಕೆ[4] ಸಂಬಂಧಪಟ್ಟು ಕರ್ಮಸಮೃದ್ಧಿ - ಎಂಬ ಫಲವನ್ನು (ಕೊಡುವ ಉಪಾಸನೆ)ಗಳೂ ಉಕ್ತವಾಗಿರುತ್ತವೆ. ಏಕೆಂದರೆ ರಹಸ್ಯವಾಗಿರುವದೆಂಬುದು (ಎರಡಕ್ಕೂ)

---

1. 'ಅಕ್ರಿಯೇ' ಎಂಬುದಕ್ಕಿಂತ ಈ ಪಾಠವು ಮೇಲು.
2. 'ಸಮರ್ಧಿತಂ' ಎಂಬುದಕ್ಕಿಂತ ಈ ಪಾಠವೇ ಮೇಲು.
3. ಅಪರಬ್ರಹ್ಮಪ್ರಾಪ್ತಿಯ ಮೂಲಕವಾಗಿ ಕ್ರಮಮುಕ್ತಿಯನ್ನು ಕೊಡುವ ಉಪಾಸನೆಗಳು ಎಂದರ್ಥ. ಸೂ. ಭಾ. ೪-೩-೧೦, (ಭಾ. ಭಾ. ೫೭೬)ನ್ನು ನೋಡಿ.
4. ಕರ್ಮಕ್ಕೆ ಅಂಗವಾಗಿರುವ ಸಾಮವೇ ಮುಂತಾದವುಗಳಿಗೆ ಸಂಬಂಧಪಟ್ಟ ಉಪಾಸನೆಗಳನ್ನು ಇಲ್ಲಿ ಹೇಳಿದೆ. ಇದಕ್ಕೆ ಕರ್ಮವು ಹೆಚ್ಚಿನ ಫಲವನ್ನು ಕೊಡುವದೇ ಫಲವು - ಎಂದರ್ಥ. ಉಪಾಸನೆಗಳ ಫಲದ ವಿಷಯವಾಗಿ ಸೂ. ಭಾ. ೧-೧-೧೨ (ಭಾ. ಭಾ. ೯೧)ನ್ನು ನೋಡಿರಿ.

ಸಮಾನವಾಗಿರುತ್ತದೆ[1]. ಮನೋವೃತ್ತಿರೂಪವಾಗಿರುವದೆಂಬುದು (ಎರಡಕ್ಕೂ) ಸಮಾನವಾಗಿರುವದರಿಂದಲೂ (ಇದನ್ನು ಇಲ್ಲಿಯೇ ಹೇಳಿದೆ. ಇದರ ವಿವರ) ; ಹೇಗೆ ಅದ್ವೈತಜ್ಞಾನವು ಮನೋವೃತ್ತಿಮಾತ್ರವಾಗಿರುತ್ತದೆಯೋ ಹಾಗೆಯೇ ಬೇರೆಯ ಉಪಾಸನೆಗಳೂ ಮನೋವೃತ್ತಿರೂಪವಾಗಿರುತ್ತವೆ[2] ಎಂಬೀ ಹೋಲಿಕೆಯು (ಎರಡಕ್ಕೂ) ಇದೆಯಲ್ಲವೆ ?

(ಪ್ರಶ್ನೆ) :- ಹಾಗಾದರೆ ಅದ್ವೈತಜ್ಞಾನಕ್ಕೂ ಉಪಾಸನೆಗಳಿಗೂ ವಿಶೇಷವೇನು?

(ಉತ್ತರ) :- ಹೇಳುತ್ತೇವೆ. ಸ್ವಭಾವದಿಂದ ಇದ್ದುಕೊಂಡಿರುವದಾಗಿ,[3] ಯಾವ ವಿಕಾರವೂ ಇಲ್ಲದ[4] ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಕರ್ತ್ರಾದಿಕಾರಕಗಳು, ಕ್ರಿಯೆ, ಫಲ - ಎಂಬ ಭೇದದ ಅರಿವನ್ನು ತೊಲಗಿಸುವದು ಅದ್ವೈತವಿಜ್ಞಾನವು. ಹಗ್ಗವೇ ಮುಂತಾದದ್ದರಲ್ಲಿ ಹಾವೇ ಮುಂತಾದದ್ದನ್ನು ಅಧ್ಯಾರೋಪಿಸುವ ರೂಪದ ಅರಿವನ್ನು ಬೆಳಕಿನ ನಿಮಿತ್ತದಿಂದಾದ ಹಗ್ಗವೇ ಮುಂತಾದದ್ದರ ಸ್ವರೂಪದ ನಿಶ್ಚಯವು (ತೊಲಗಿಸು)ವಂತೆಯೇ[5] (ಇದು ಭೇದವಿಜ್ಞಾನವನ್ನು ತೊಲಗಿಸತಕ್ಕದ್ದು). ಉಪಾಸನೆಯಾದರೋ ಶಾಸ್ತ್ರವು ತಿಳಿಸಿಕೊಟ್ಟಿರುವ ಯಾವದಾದರೊಂದು ಆಲಂಬನವನ್ನು ತೆಗೆದುಕೊಂಡು ಅದರಲ್ಲಿ ಒಂದೇ ಬಗೆಯ ಚಿತ್ತವೃತ್ತಿಯನ್ನು, ಅದಕ್ಕಿಂತ ವಿಲಕ್ಷಣವಾದ ಪ್ರತ್ಯಯವು ನಡುವೆ ಬಾರದಂತೆ ಸಂತತವಾಗಿ ನಡೆಯಿಸಿಕೊಂಡು ಬರುವದು.[6]

1. ಅದ್ವೈತಾತ್ಮಜ್ಞಾನಕ್ಕೂ ಉಪಾಸನೆಗಳಿಗೂ 'ರಹಸ್ಯ', 'ಉಪನಿಷತ್ತು' - ಎಂಬ ಹೆಸರು ಸಮಾನವಾಗಿರುತ್ತದೆ. ಕಾಯಪ್ರಧಾನವಾಗಿರುವ ಕರ್ಮಕ್ಕಿಂತಲೂ ಮನಃಪ್ರಧಾನವಾಗಿರುವ ಈ ಎರಡೂ ರಹಸ್ಯವಾಗಿರುತ್ತವೆ
2. ಆತ್ಮಜ್ಞಾನವಾಗುವಾಗಲೂ ಒಂದಾನೊಂದು ಮನೋವೃತ್ತಿಯುಂಟಾಗಬೇಕು.
3. ಭೇದಗಳನ್ನು ತಿಳಿಯಿಸುವ ಅರಿವಿನ ರೂಪವಾದ ಅವಿದ್ಯೆಯು ಸ್ವಭಾವದಿಂದಲೇ ಇದ್ದುಕೊಂಡಿರುತ್ತದೆ; ವಿದ್ಯೆಯಂತೆ ಅದು ಉಪದೇಶದಿಂದ ಹೊಸದಾಗಿ ಉಂಟಾಗತಕ್ಕದ್ದಲ್ಲ.
4. ಕಾರಕಗಳು, ಕ್ರಿಯೆ, ಫಲಭೋಗ-ಇವುಗಳು ತಮ್ಮ ಆಶ್ರಯದಲ್ಲಿ ವಿಕಾರವನ್ನುಂಟು ಮಾಡತಕ್ಕವು ; ಆದರೆ ಆತ್ಮನು ಯಾವ ವಿಕಾರವೂ ಇಲ್ಲದ ಸ್ವಭಾವದವನು, ಈ ಅವಿಕ್ರಿಯನಲ್ಲಿ ವಿಕ್ರಿಯಾಹೇತುಗಳನ್ನು ಅವಿದ್ಯೆಯು ಹುಟ್ಟಿಹಾಕಿರುತ್ತದೆ.
5. ಅವಿದ್ಯೆಯು ಭ್ರಾಂತಿಜ್ಞಾನ, ವಿದ್ಯೆಯು ಸಮ್ಯಗ್ಜ್ಞಾನ ; ಭ್ರಾಂತಿಜ್ಞಾನವನ್ನು ತೊಲಗಿಸುವದೇ ಸಮ್ಯಗ್ಜ್ಞಾನದ ಕೃತ್ಯ ಎಂಬುದನ್ನು ಈ ಉದಾಹರಣೆಯು ಸ್ಪಷ್ಟಪಡಿಸುತ್ತದೆ.
6 ಉಪಾಸನೆಯು ಕರ್ತೃತಂತ್ರ, ಆತ್ಮವಿಜ್ಞಾನವು ವಸ್ತುತಂತ್ರ ; ಉಪಾಸನೆಯು ಅವೃತ್ತ್ಯಪೇಕ್ಷ, ಜ್ಞಾನವು ಒಂದು ಸಲ ಉಂಟಾದರೇ ಅಜ್ಞಾನವನ್ನು ಕಳೆಯುತ್ತದೆ ಎಂಬ ತಾರತಮ್ಯವನ್ನು ಇಲ್ಲಿ ತಿಳಿಸಿಕೊಟ್ಟಿದೆ. ಸೂ.ಭಾ. ೧-೧-೪, ಭಾ. ಭಾ. ೫೧ನ್ನು ನೋಡಿ.

ಮೊದಲು ಉಪಾಸನೆಗಳನ್ನೇ ಹೇಳಿರುವದೇಕೆ ?

(ಭಾಷ್ಯ)

೬. ತಾನ್ಯೇತಾನಿ ಉಪಾಸನಾನಿ ಸತ್ತ್ವಶುದ್ಧಿಕರತ್ವೇನ ವಸ್ತುತತ್ತ್ವಭಾಸಕತ್ವಾತ್ ಅದ್ವೈತಜ್ಞಾನೋಪಕಾರಕಾಣಿ ಆಲಮ್ಬನವಿಷಯತ್ವಾತ್ ಸುಸಾಧ್ಯಾನಿ ಚ ಇತಿ ಪೂರ್ವಮ್ ಉಪ । ತತ್ರ ಕರ್ಮಾಭ್ಯಾಸಸ್ಯ ಕರ್ಮಪರಿತ್ಯಾಗೇನ ಉಪಾಸನ ಏವ ದುಃಖಂ ಚೇತಃಸಮರ್ಪಣಂ ಕರ್ತುಮ್ ಇತಿ ಕರ್ಮಾಙ್ಗವಿಷಯಮೇವ ತಾವತ್ ಆದೌ ಉಪಾಸನಮ್ ಉಪನ್ಯಸ್ಯತೇ ॥

(ಭಾಷ್ಯಾರ್ಥ)

ಆ ಈ ಉಪಾಸನೆಗಳು ಸತ್ತ್ವಶುದ್ಧಿಯನ್ನುಂಟುಮಾಡುವದರಿಂದ ವಸ್ತು ತತ್ತ್ವವನ್ನು ತಿಳಿಸಿಕೊಡುವದರಿಂದ ಅದ್ವೈತಜ್ಞಾನಕ್ಕೆ ಉಪಕಾರಕವಾಗಿರುತ್ತವೆ[1] ; ಆಲಂಬನದ ವಿಷಯವಾಗಿರುವದರಿಂದ ಸುಲಭವಾಗಿ ಅದನ್ನು ಸಾಧಿಸಲೂಬಹುದು[2] - ಎಂಬ (ಕಾರಣ)ದಿಂದ(ಆವನ್ನು) ಮೊದಲು ಹೇಳಿರುತ್ತದೆ. ಅದರಲ್ಲಿಯೂ ಕರ್ಮಾಭ್ಯಾಸವು ಗಟ್ಟಿಯಾಗಿಬಿಟ್ಟಿರುವದರಿಂದ[3] ಕರ್ಮವನ್ನು ಬಿಟ್ಟು (ಬರಿಯ) ಉಪಾಸನೆಯಲ್ಲಿಯೇ ನೇರಾಗಿ ಚಿತ್ತವನ್ನು ಇಡುವದು ಕಷ್ಟವಾದ್ದರಿಂದ ಕರ್ಮಾಂಗ ವಿಷಯವಾದ ಉಪಾಸನೆಯನ್ನೇ ಮೊಟ್ಟಮೊದಲು ಹೇಳಲಾಗುವದು.[4]

1. ಕರ್ಮವು ಜ್ಞಾನಕ್ಕೆ ಹೊರಗಿನ ಸಾಧನ, ಉಪಾಸನೆಯು ಒಳಗಿನ ಸಾಧನ ಕರ್ಮವು ಚಿತ್ತದ ಮಲವನ್ನೂ ಉಪಾಸನೆಯು ವಿಕ್ಷೇಪವನ್ನೂ ಕಳೆದು ಅದ್ವೈತಜ್ಞಾನವುಂಟಾಗುವದಕ್ಕೆ ಸಹಾಯವನ್ನು ಮಾಡುತ್ತವೆ
2. ಅದ್ವೈತಜ್ಞಾನಕ್ಕೆ ಯಾವ ಆಕಾರವೂ ಇಲ್ಲದ ಬ್ರಹ್ಮವು ವಿಷಯವಾದ್ದರಿಂದ ಅದು ನಿರಾಲಂಬನವು ; ಉಪಾಸನೆಗೆ ಆಕಾರಯುಕ್ತವಾದದ್ದೇ ವಿಷಯವಾದದ್ದರಿಂದ ಅದು ಸಾಲಂಬನವು. ಆದ್ದರಿಂದ ಜ್ಞಾನಕ್ಕಿಂತಲೂ ಉಪಾಸನೆ ಸುಸಾಧ್ಯ.
3. ಇದುವರೆಗೆ ಕರ್ಮವನ್ನು ಮಾಡಿಮಾಡಿ ಕರ್ಮವಾಸನೆಯು ಗಟ್ಟಿಯಾಗಿಬಿಟ್ಟಿರುವದರಿಂದ.
4. ಕರ್ಮಾಂಗೋಪಾಸನೆಗಳ ವಿಷಯವನ್ನು ಸೂ. ಭಾ. ೩-೩-೪೨ ; ೩-೩-೫೫, ೫೬ , ೩-೪-೨೧ ; ೩-೪-೪೪- ಇವುಗಳಲ್ಲಿ ಚರ್ಚಿಸಿರುತ್ತದೆ.

ಒಂದನೆಯ ಅಧ್ಯಾಯ-ಒಂದನೆಯ ಖಂಡ

(ಉದ್ಗೀಥಾವಯವವಾದ ಓಂಕಾರದ ಉಪಾಸನೆ)

ಓಂಕಾರೋಪಾಸನಾವಿಧಿ

(ಉಪನಿಷತ್ತು)

ಓಮಿತ್ಯೇತದಕ್ಷರಮುದ್ಗೀಥಮುಪಾಸೀತ । ಓಮಿತಿ ಹ್ಯುದ್ಗಾಯತಿ ತಸ್ಯೋಪವ್ಯಾಖ್ಯಾನಮ್ ॥೧॥

೧. ಓಮ್ ಎಂಬೀ ಅಕ್ಷರವಾದ ಉದ್ಗೀಥವನ್ನು ಉಪಾಸನೆ ಮಾಡಬೇಕು ; ಏಕೆಂದರೆ ಓಮೆಂದೇ ಉದ್ಗಾನಮಾಡುತ್ತಾನೆ. ಅದರ ಉಪವ್ಯಾಖ್ಯಾನವು (ಪ್ರಾರಂಭವಾಗಿದೆ).

ಓಂಕಾರದ ಉಪಾಸನೆಯನ್ನು ಮಾಡಬೇಕು

(ಭಾಷ್ಯ)

೭. ಓಮಿತ್ಯೇತದಕ್ಷರಮುದ್ಗೀಥಮುಪಾಸೀತ । ಓಮಿತ್ಯೇತದಕ್ಷರಂ ಪರಮಾತ್ಮನಃ ಅಭಿಧಾನಂ ನೇದಿಷ್ಠಮ್ । ತಸ್ಮಿನ್ ಹಿ ಪ್ರಯುಜ್ಯಮಾನೇ ಸ ಪ್ರಸೀದತಿ ಪ್ರಿಯನಾಮಗ್ರಹಣ ಇವ ಲೋಕಃ । ತದಿಹ ಇತಿಪರಂ ಪ್ರಯುಕ್ತಮ್ ಅಭಿಧಾಯಕತ್ವಾತ್ ವ್ಯಾವರ್ತಿತಂ ಶಬ್ದಸ್ವರೂಪಮಾತ್ರಂ ಪ್ರತೀಯತೇ । ತಥಾ ಚ ಅರ್ಚಾದಿವತ್ ಪರಸ್ಯ ಆತ್ಮನಃ ಪ್ರತೀಕಂ ಸಂಪದ್ಯತೇ । ಏವಂ ನಾಮತ್ವೇನ ಪ್ರತೀಕತ್ವೇನ ಚ ಪರಮಾತ್ಮೋಪಾಸನಸಾಧನಂ ಶ್ರೇಷ್ಠಮ್ ಇತಿ ಸರ್ವವೇದಾನ್ತೇಷು ಅವಗತಮ್ । ಜಪಕರ್ಮಸ್ವಾಧ್ಯಾಯಾದ್ಯನ್ತೇಷು ಚ ಬಹುಶಃ ಪ್ರಯೋಗಾತ್ ಪ್ರಸಿದ್ಧಮಸ್ಯ ಶ್ರೈಷ್ಠ್ಯಮ್ । ಅತಃ ತದೇತದಕ್ಷರಂ ವರ್ಣಾತ್ಮಕಮ್ ಉದ್ಗೀಥಭಕ್ತ್ಯವಯವತ್ವಾತ್ ಉದ್ಗೀಥಶಬ್ದವಾಚ್ಯಮ್ ಉಪಾಸೀತ । ಕರ್ಮಾಙ್ಗಾವಯವಭೂತೇ ಓಂಕಾರೇ ಪರಮಾತ್ಮಪ್ರತೀಕೇ ದೃಢಾಮ್ ಏಕಾಗ್ರ್ಯಲಕ್ಷಣಾಂ ಮತಿಂ ಸಂತನುಯಾತ್ । ಸ್ವಯಮೇವ ಶ್ರುತಿಃ ಓಂಕಾರಸ್ಯ ಉದ್ಗೀಥಶಬ್ದವಾಚ್ಯತ್ವೇ ಹೇತುಮ್ ಆಹ - ಓಮಿತಿ ಹಿ ಉದ್ಗಾಯತಿ । ಓಮಿತ್ಯಾರಭ್ಯ ಹಿ ಯಸ್ಮಾತ್ ಉದ್ಗಾಯತಿ ಅತಃ ಉದ್ಗೀಥ ಓಂಕಾರಃ ಇತ್ಯರ್ಥಃ । ತಸ್ಯ ಉಪವ್ಯಾಖ್ಯಾನಮ್ । ತಸ್ಯ ಅಕ್ಷರಸ್ಯ ಉಪವ್ಯಾಖ್ಯಾನಮ್ ಏವಮುಪಾಸನಮ್,

ಏವಂ ವಿಭೂತಿ, ಏವಂಫಲಮ್ - ಇತ್ಯಾದಿಕಥನಮ್ ಉಪವ್ಯಾಖ್ಯಾನಮ್ । ಪ್ರವರ್ತತೇ ಇತಿ ವಾಕ್ಯಶೇಷಃ ॥

(ಭಾಷ್ಯಾರ್ಥ)

ಓಮಿತ್ಯೇತದಕ್ಷರಮುದ್ಗೀಥಮುಪಾಸೀತ (ಎಂಬುದರ ಅಭಿಪ್ರಾಯವೇನೆಂದರೆ): **ಓಮ್ ಎಂಬೀ ಅಕ್ಷರವು ಪರಮಾತ್ಮನಿಗೆ ಅತ್ಯಂತಸಮೀಪವಾಗಿರುವ ಹೆಸರು. ಏಕೆಂದರೆ ಅದನ್ನು ಪ್ರಯೋಗಿಸಿದರೆ (ತನ್ನ) ಪ್ರಿಯವಾದ ನಾಮವನ್ನು ತೆಗೆದುಕೊಂಡು (ಉಚ್ಚರಿಸಿದರೆ) ಜನವು ಹೇಗೆ (ಪ್ರಸನ್ನನಾಗುತ್ತದೆಯೋ) ಹಾಗೆಯೇ ಆ (ಪರಮಾತ್ಮನು) ಪ್ರಸನ್ನನಾಗುತ್ತಾನೆ. ಆ (ಅಕ್ಷರವನ್ನು) ಇಲ್ಲಿ ಇತಿ (ಎಂಬ) ಶಬ್ದವನ್ನು ಮುಂದೆ (ಇಟ್ಟು) ಪ್ರಯೋಗಿಸಿರುವದರಿಂದ ಅಭಿಧಾಯಕತ್ವವನ್ನು ಬಿಟ್ಟು ಬರಿಯ ಶಬ್ದಸ್ವರೂಪವೇ ಎಂದು ತಿಳಿಯಬರುತ್ತದೆ**[1]. ಹೀಗಿರುವದರಿಂದ (ಅದು) ಅರ್ಚೆಯೇ ಮುಂತಾದವುಗಳಂತೆ[2] ಪರಮಾತ್ಮನಿಗೆ 'ಪ್ರತೀಕ'ವೆಂದಾಗುತ್ತದೆ.[3] ಹೀಗೆ (ಪರಮಾತ್ಮನ) ನಾಮವಾಗಿಯೂ ಪ್ರತೀಕವಾಗಿಯೂ (ಈ ಓಂಕಾರವು) ಪರಮಾತ್ಮನ ಉಪಾಸನೆಗೆ ಶ್ರೇಷ್ಠವಾದ ಸಾಧನವೆಂದು ಸರ್ವವೇದಾಂತಗಳಲ್ಲಿಯೂ[4] ಗೊತ್ತಾಗಿರುತ್ತದೆ. ಜಪ, ಕರ್ಮ, ಸ್ವಾಧ್ಯಾಯ-[5] ಇವುಗಳ ಆದಿಯಲ್ಲಿಯೂ ಅಂತದಲ್ಲಿಯೂ ಬಹಳವಾಗಿ (ಇದನ್ನು) ಪ್ರಯೋಗಮಾಡುವದರಿಂದ ಇದು ಶ್ರೇಷ್ಠ (ವಾದ ಸಾಧನ)ವೆಂಬುದು ಪ್ರಸಿದ್ಧವಾಗಿರುತ್ತದೆ.[6] ಆದ್ದರಿಂದ[7] ಅಂಥ ಈ

---

1. ಓಮಿತಿ (ಓಮ್ ಎಂಬುದು) ಎಂದು ಇತಿಶಬ್ದಪರವಾಗಿ ಪ್ರಯೋಗಿಸಿರುವದರಿಂದ ಅದು ಓಂಶಬ್ದವಾಚ್ಯನಾದ ಪರಮಾತ್ಮನನ್ನು ಹೇಳುವದಿಲ್ಲ ; ಓಮ್ ಎಂಬ ಬರಿಯ ಶಬ್ದವನ್ನೇ ಹೇಳುತ್ತದೆ ಎಂದರ್ಥ. 'ಸಕ್ಕರೆ ಎಂಬಿದು ಸಿಹಿಪದಾರ್ಥದ ಹೆಸರು' ಎಂಬ ವಾಕ್ಯದಲ್ಲಿರುವ ಸಕ್ಕರೆ ಎಂಬ ಶಬ್ದದಂತೆ ಇದು ಶಬ್ದಸ್ವರೂಪವನ್ನು ಮಟ್ಟಿಗೆ ಹೇಳುತ್ತದೆ.
2. ಅರ್ಚನೆಗೆ ಉಪಯೋಗಿಸುವ ಪ್ರತಿಮೆಯೇ ಮುಂತಾದವುಗಳಂತೆ.
3. ಪ್ರತೀಕವೆಂದರೆ ಮತ್ತೊಂದರ ಸ್ಥಾನದಲ್ಲಿದ್ದು ಉಪಾಸ್ಯವಾಗಿರುವ ವಸ್ತು. ಓಂಕಾರವನ್ನೇ ಬ್ರಹ್ಮವೆಂದಿಟ್ಟುಕೊಂಡು ಉಪಾಸನೆಮಾಡಬೇಕು - ಎಂಬುದು ಈ ವಿಧಿವಾಕ್ಯದ ಅರ್ಥ. ಪ್ರತೀಕೋಪಾಸನೆಗಳ ವಿಷಯಕ್ಕೆ ಸೂ. ಭಾ. ೪-೧-೪, ೫ ಇವನ್ನು ನೋಡಿ.
4. ಕ. ೧-೨-೧೭, ಪ್ರ. ೫-೨, ತೈ. ೧-೮- ಇವುಗಳ ಭಾಷ್ಯವನ್ನು ನೋಡಿ.
5. ಗಾಯತ್ರ್ಯಾದಿಜಪ, ಯಜ್ಞಾದ್ಯಿಕರ್ಮ, ವೇದಾಧ್ಯಯನರೂಪವಾದ ಸ್ವಾಧ್ಯಾಯ - ಇವುಗಳ ಪ್ರಾರಂಭದಲ್ಲಿಯೂ ಕೊನೆಯಲ್ಲಿಯೂ ಓಂಕಾರವನ್ನು ಪ್ರಯೋಗಿಸುವರು. ಗೀ. ೧೭-೨೪. 6. ಶಿಷ್ಟಾಚಾರವೂ ಇದರ ಶ್ರೇಷ್ಠತ್ವಕ್ಕೆ ಒಂದು ಗುರುತಾಗಿರುತ್ತದೆ.
7. ಹೀಗೆ ಉಪಾಸನೆಗೆ ಶ್ರೇಷ್ಠವಾದ ಸಾಧನವಾಗಿರುವದರಿಂದ ಎಂದರ್ಥ.

ವರ್ಣಾತ್ಮಕವಾದ[1] ಅಕ್ಷರವನ್ನು ಉದ್ಗೀಥಭಕ್ತಿಯ[2] ಅವಯವವಾಗಿರುವದರಿಂದ ಉದ್ಗೀಥಶಬ್ದವಾಚ್ಯವಾಗಿರುವ[3] (ಈ ಓಂಕಾರವನ್ನು) ಉಪಾಸನೆಮಾಡಬೇಕು ; ಕರ್ಮಾಂಗವಾದ (ಉದ್ಗೀಥದ) ಅವಯವವಾಗಿರುವ ಪರಮಾತ್ಮನಿಗೆ ಪ್ರತೀಕವಾಗಿರುವ, ಓಂಕಾರದಲ್ಲಿ ಏಕಾಗ್ರತಾರೂಪವಾಗಿರುವ ಗಟ್ಟಿಯಾದ ಪ್ರತ್ಯಯವನ್ನು ಸಂತತವಾಗಿ ಮಾಡಬೇಕು ಎಂದರ್ಥ.

ಓಂಕಾರವು ಉದ್ಗೀಥಶಬ್ದವಾಚ್ಯವಾಗಿರುವದಕ್ಕೆ ಕಾರಣವನ್ನು ಶ್ರುತಿಯು ತಾನೇ ಹೇಳುತ್ತಿದೆ : ಏಕೆಂದರೆ ಓಮ್ ! ಎಂದೇ ಉದ್ಗಾನಮಾಡುತ್ತಾನೆ ; (ಹಿ=ಯಸ್ಮಾತ್) ಓಮ್ ! ಎಂದು ಆರಂಭಿಸಿಯೇ ಉದ್ಗಾನಮಾಡುತ್ತಾನಲ್ಲವೆ, ಆದ್ದರಿಂದ ಓಂಕಾರವು ಉದ್ಗೀಥವು ಎಂದರ್ಥ[4].

'ಅದರ ಉಪವ್ಯಾಖ್ಯಾನವು'. ಆ ಅಕ್ಷರದ ಉಪವ್ಯಾಖ್ಯಾನವು - ಎಂದರೆ (ಅದು) ಇಂಥ ಉಪಾಸನೆಯುಳ್ಳದ್ದು[5], ಇಂಥ ವಿಭೂತಿಗಳುಳ್ಳದ್ದು[6], ಇಂಥ

1. 'ಓಮಿತ್ಯೇತದಕ್ಷರಮ್' ಎಂಬ ವಿಶೇಷಣವಿರುವದರಿಂದ ಇಲ್ಲಿ ಅಕ್ಷರವೆಂದರೆ ವರ್ಣರೂಪವಾದ ಓಂಕಾರವೇ, ಪರಮಾತ್ಮನಲ್ಲ - ಎಂದು ಭಾವ.
2. ಸಾಮದ ಭಾಗಗಳಿಗೆ ಭಕ್ತಿಗಳೆಂದು ಹೆಸರು ; ಉದ್ಗಾತೃವು ಹೇಳುವ ಭಾಗವು ಉದ್ಗೀಥವು.
3. 'ಓಮಿತ್ಯೇತದಕ್ಷರಮುದ್ಗೀಥಮ್' ಎಂಬಲ್ಲಿ ಓಂಕಾರದಲ್ಲಿ ಉದ್ಗೀಥದೃಷ್ಟಿಯನ್ನು ಅಧ್ಯಾಸಮಾಡಿ ಉಪಾಸನೆಮಾಡಬೇಕೆಂದಾಗಲಿ, 'ಬೆಳ್ಳಿಯು ಕಪ್ಪೆಯ ಚಿಪ್ಪೇ' ಎಂಬಂತೆ ಓಂಕಾರವು ನಿಜವಾಗಿ ಉದ್ಗೀಥವೇ ಎಂದಾಗಲಿ, 'ಬ್ರಾಹ್ಮಣನು ವಿಪ್ರನು' ಎಂಬಂತೆ ಓಂಕಾರಕ್ಕೂ ಉದ್ಗೀಥಕ್ಕೂ ಏಕತ್ವವೆಂದಾಗಲಿ ಅರ್ಥವಲ್ಲ , ಉದ್ಗೀಥಶಬ್ದವಾಚ್ಯವಾದ ಓಂಕಾರವನ್ನು ಉಪಾಸನೆಮಾಡಬೇಕು ಎಂದೇ ಅರ್ಥ - ಎಂದು ಭಾವ. ಸೂ. ಭಾ. ೩-೩-೯ (ಭಾ. ಭಾ. ೩೩೧, ೩೩೨).
4. ಇದು ವಾಕ್ಯದ ಒಟ್ಟರ್ಥ. ಇದು ಜ್ಯೋತಿಷ್ಟೋಮವೆಂಬ ಕರ್ಮದ ಅಂಗವಾದ ಉದ್ಗೀಥವನ್ನು ಆಶ್ರಯಿಸಿರುವ ಉಪಾಸನೆಯಾದರೂ ಇದು ಸ್ವತಂತ್ರವಾದ ಉಪಾಸನೆ, ಕರ್ಮಕ್ಕೇ ಸೇರಿದ್ದಲ್ಲ. ಸೂ.ಭಾ. ೩-೩-೪೨ (ಭಾ.ಭಾ. ೩೯೯)
5 ರಸತಮತ್ವ, ಆಪ್ತಿ, ಸಮೃದ್ಧಿ - ಎಂಬ ಗುಣಗಳುಳ್ಳದ್ದೆಂದು ಉಪಾಸನೆ ಮಾಡತಕ್ಕದ್ದು.
6 ಪರಮ, ಪರಾರ್ಧ್ಯ, ವೈದಿಕಕರ್ಮಪ್ರವರ್ತಕತ್ವ - ಎಂಬ ವಿಭೂತಿಗಳುಳ್ಳದ್ದು.

ಫಲವುಳ್ಳದ್ದು[1] - ಎಂದು ಮುಂತಾಗಿ[2] ಹೇಳುವ ಉಪವ್ಯಾಖ್ಯಾನವು 'ವ್ರಾರಂಭ ವಾಗಿರುತ್ತದೆ' ಎಂದು (ಈ) ವಾಕ್ಯಕ್ಕೆ ಶೇಷವನ್ನು (ಪೂರಣಮಾಡಿಕೊಳ್ಳಬೇಕು)[3]

ಓಂಕಾರದವರೆಗಿನ ರಸಗಳು

(ಉಪನಿಷತ್ತು)

ಏಷಾಂ ಭೂತಾನಾಂ ಪೃಥಿವೀ ರಸಃ ಪೃಥಿವ್ಯಾ ಆಪೋ ರಸಃ । ಅಪಾಮೋಷಧಯೋ ರಸ ಓಷಧೀನಾಂ ಪುರುಷೋ ರಸಃ ಪುರುಷಸ್ಯ ವಾಗ್ರಸೋ ವಾಚ ಋಗ್ರಸ ಋಚಃ ಸಾಮ ರಸಃ ಸಾಮ್ನ ಉದ್ಗೀಥೋ ರಸಃ ॥೨॥

೨. ಈ ಭೂತಗಳಿಗೆ ಪೃಥಿವಿಯು ರಸವು ; ಪೃಥಿವಿಗೆ ಅಪ್ಪು ರಸವು ; ಅಪ್ಪಿಗೆ ಓಷಧಿಗಳು ರಸವು ; ಓಷಧಿಗಳಿಗೆ ಪುರುಷನು ರಸವು ; ಪುರುಷನಿಗೆ ವಾಕ್ಕು ರಸವು ; ವಾಕ್ಕಿಗೆ ಋಕ್ಕು ರಸವು ; ಋಕ್ಕಿಗೆ ಸಾಮವು ರಸವು ; ಸಾಮಕ್ಕೆ ಉದ್ಗೀಥವು ರಸವು.

(ಭಾಷ್ಯ)

೮. ಏಷಾಂ ಚರಾಚರಾಣಾಂ ಭೂತಾನಾಂ ಪೃಥಿವೀ ರಸಃ, ಗತಿಃ ಪರಾಯಣಮ್ ಅವಷ್ಟಮ್ಭಃ । ಪೃಥಿವ್ಯಾಃ ಆಪೋ ರಸಃ । ಅಪ್ಸು ಹಿ ಓತಾ ಚ ಪ್ರೋತಾ ಚ ಪೃಥಿವೀ । ಅತಸ್ತಾಃ ರಸಃ ಪೃಥಿವ್ಯಾಃ । ಅಪಾಮ್ ಓಷಧಯೋ ರಸಃ । ಅಪ್ಪರಿಣಾಮತ್ವಾತ್ ಓಷಧೀನಾಮ್ । ತಾಸಾಂ ಪುರುಷೋ ರಸಃ । ಅನ್ನಪರಿಣಾಮತ್ವಾತ್ ಪುರುಷಸ್ಯ । ತಸ್ಯಾಪಿ ಪುರುಷಸ್ಯ ವಾಕ್ ರಸಃ । ಪುರುಷಾವಯವಾನಾಂ ಹಿ ವಾಕ್ ಸಾರಿಷ್ಠಾ । ಅತೋ ವಾಕ್ ಪುರುಷಸ್ಯ ರಸಃ ಉಚ್ಯತೇ । ತಸ್ಯಾ ಅಪಿ ವಾಚಃ ಋಕ್ ರಸಃ ಸಾರತರಾ । ಋಚಃ ಸಾಮ ರಸಃ, ಸಾರತರಮ್ । ತಸ್ಯಾಪಿ ಸಾಮ್ನಃ ಉದ್ಗೀಥಃ ಪ್ರಕೃತತ್ವಾತ್ ಓಂಕಾರಃ ಸಾರತರಃ ॥

---

1. ಕಾಮಾಪ್ತಿ, ಸಮೃದ್ಧಿ - ಎಂಬ ಫಲವುಳ್ಳದ್ದು.
2. ಈ ಉಪಾಸನೆಯ ಸಹಿತವಾಗಿ ಮಾಡಿದ ಕರ್ಮವು ವೀರ್ಯವತ್ತರವಾಗುತ್ತದೆ ಎಂದು ಮುಂತಾಗಿ.
3. ಮುಂದೆ ಉಪನಿಷತ್ತಿನಲ್ಲಿ ಹೇಳಿರುವ ಉಪಾಸನಾಗುಣವೇ ಮುಂತಾದದ್ದನ್ನೇ ಉಪವ್ಯಾಖ್ಯಾನವೆಂಬ ಶಬ್ದವು ಸೂಚಿಸುತ್ತದೆ - ಎಂದು ಭಾವ.

(ಭಾಷ್ಯಾರ್ಥ)

ಈ ಸ್ಥಾವರಜಂಗಮ[1] ಭೂತಗಳಿಗೆ ಪೃಥಿವಿಯು ರಸವು, ಗತಿಯು, ವರಾಯಣವು, ಆಶ್ರಯವು. ಪೃಥಿವಿಗೆ ಅಪ್ಪು ರಸವು. ಅಪ್ಪಿನಲ್ಲಲ್ಲವೆ, ಪೃಥಿವಿಯು ಹಾಸುಹೊಕ್ಕಾಗಿ ಹೆಣೆದುಕೊಂಡಿರುವದು ? ಆದ್ದರಿಂದ ಅದು ಪೃಥಿವಿಗೆ ರಸವು. ಅಪ್ಪಿಗೆ ಓಷಧಿಗಳು ರಸವು ; ಏಕೆಂದರೆ ಗಿಡಮರಗಳು ಅಪ್ಪಿನ ಪರಿಣಾಮವು.

ಆ (ಗಿಡಮರ)ಗಳಿಗೆ ಪುರುಷನು ರಸವು ; ಏಕೆಂದರೆ ಪುರುಷನು ಅನ್ನದ ಪರಿಣಾಮವಾಗಿರುತ್ತಾನೆ[2]. ಆ (ಪುರುಷ)ನಿಗೂ ವಾಕ್ಕು ರಸವು. ಪುರುಷನ ಅವಯವಗಳಲ್ಲಿ ವಾಕ್ಕು ಸಾರಿಷ್ಠವಲ್ಲವೆ ? ಆದ್ದರಿಂದ ವಾಕ್ಕು ಪುರುಷನ ರಸವೆನಿಸುತ್ತದೆ. ಆ ವಾಕ್ಕಿಗೂ ಋಕ್ಕು ರಸವು, ಸಾರತರವಾದದ್ದು. ಋಕ್ಕಿಗೆ ಸಾಮವು ರಸವು, (ಅದಕ್ಕಿಂತ) ಸಾರತರವಾದದ್ದು. ಆ ಸಾಮಕ್ಕೂ ಉದ್ಗೀಥವು, ಪ್ರಕೃತವಾಗಿರುವ ಓಂಕಾರವು[3], (ರಸವು)[4], ಸಾರತರವಾದದ್ದು.

ಓಂಕಾರವು ರಸತಮವಾದದ್ದು

(ಉಪನಿಷತ್ತು)

ಸ ಏಷ ರಸಾನಾಗ್ಂ ರಸತಮಃ ಪರಮಃ ಪರಾರ್ಧ್ಯೋ೭ಷ್ಟಮೋ ಯದುದ್ಗೀಥಃ ॥೩॥

೩. ಉದ್ಗೀಥವೆಂಬ ಆ ಇದು ರಸಗಳಿಗೆಲ್ಲ ರಸತಮವು, ಪರಮವು, ಪರಾರ್ಧ್ಯವು, ಎಂಟನೆಯದು.

(ಭಾಷ್ಯ)

೯. ಏವಂ ಸ ಏಷ ಉದ್ಗೀಥಾಖ್ಯಃ ಓಂಕಾರಃ ಭೂತಾದೀನಾಮ್ ಉತ್ತರೋತ್ತರ ರಸಾನಾಮ್ ಅತಿಶಯೇನ ರಸಃ ರಸತಮಃ । ಪರಮಃ ಪರಮಾತ್ಮಪ್ರತೀಕತ್ವಾತ್ ।

---

1. ಮಹಾಭೂತಗಳಿಗೆ ಎಂದು ಅರ್ಥವಲ್ಲ ಎಂಬುದನ್ನು ಈ ವಿಶೇಷಣವು ತಿಳಿಸುತ್ತದೆ

೨ ಅನ್ನರಸದ ಕಾರ್ಯಗಳಲ್ಲಿ ಮುಖ್ಯನಾಗಿರುತ್ತಾದ್ದರಿಂದ ಪುರುಷನನ್ನೇ ಹೇಳಿದೆ , ತೈ. ಭಾ. ೨-೧ (ಭಾ ಭಾ. ೧೧೬)ವನ್ನು ನೋಡಿ.

3 ಉದ್ಗೀಥವು ಇಲ್ಲಿ ಪ್ರಕೃತವಾಗಿಲ್ಲ, ಉದ್ಗೀಥದ ಅವಯವವಾದ ಓಂಕಾರವೇ ಉಪಾಸ್ಯವಾದ್ದರಿಂದ ಪ್ರಕೃತವಾಗಿದೆ ಆದ್ದರಿಂದ ಉದ್ಗೀಥವೆಂಬ ಶಬ್ದದಿಂದ ಅದನ್ನೇ ಇಲ್ಲಿ ಹಿಡಿಯಬೇಕು - ಎಂದು ಭಾವ. 4. ಈ ಮಾತು ಇಲ್ಲಿ ಮೂಲದಲ್ಲಿದ್ದು ಬರೆದವರು ಮರೆತು ಅದನ್ನು ಕೈಬಿಟ್ಟಿರಬಹುದೆಂದು ಕಾಣುತ್ತದೆ.

ಪರಾರ್ಧ್ಯಃ । ಅರ್ಧಂ ಸ್ಥಾನಮ್ । ಪರಂ ಚ ತದರ್ಧಂ ಚ ಪರಾರ್ಧಮ್ । ತದರ್ಹತೀತಿ ಪರಾರ್ಧ್ಯಃ ಪರಮಾತ್ಮಸ್ಥಾನಾರ್ಹಃ । ಪರಮಾತ್ಮವತ್ ಉಪಾಸ್ಯತ್ವಾತ್ ಇತ್ಯಭಿಪ್ರಾಯಃ । ಅಷ್ಟಮಃ ಪೃಥಿವ್ಯಾದಿರಸಸಂಖ್ಯಾಯಾಂ ಯತ್ ಉದ್ಗೀಥಃ ಯ ಉದ್ಗೀಥಃ ॥

(ಭಾಷ್ಯಾರ್ಥ)

ಹೀಗೆ, ಈ ಉದ್ಗೀಥವೆಂಬ ಹೆಸರಿನ ಓಂಕಾರವು ಒಂದಕ್ಕಿಂತ ಮುಂದಿನ ಮತ್ತೊಂದು (ಹೆಚ್ಚಿನ) ರಸವಾಗಿರುವ ಭೂತಾದಿಗಳೆಂಬ (ರಸ)ಗಳಿಗೆಲ್ಲಕ್ಕಿಂತಲೂ ಮಿಗಿಲಾಗಿ ರಸವಾಗಿರುವದರಿಂದ **ರಸತಮವು**[1], **ಪರಮವು**, ಏಕೆಂದರೆ (ಪರಮಾತ್ಮನಿಗೆ ಪ್ರತೀಕವಾಗಿರುತ್ತದೆ). **ಪರಾರ್ಧ್ಯವು** - ಇಲ್ಲಿ ಅರ್ಧವೆಂದರೆ ಸ್ಥಾನವು ; ಪರವಾದ ಅರ್ಧವು, ಪರಾರ್ಧವು ; ಅದಕ್ಕೆ ತಕ್ಕದ್ದಾಗಿರುವದರಿಂದ ಪರಾರ್ಧ್ಯವು- ಪರಮಾತ್ಮನ ಸ್ಥಾನಕ್ಕೆ ಯೋಗ್ಯವಾದದ್ದು, ಏಕೆಂದರೆ ಪರಮಾತ್ಮನಂತೆ ಉಪಾಸ್ಯವಾಗಿದೆ ಎಂದು ಅಭಿಪ್ರಾಯ. (ಯದುದ್ಗೀಥಃ = ಯ ಉದ್ಗೀಥಃ) ಈ ಉದ್ಗೀಥವೆಂಬುದು ಪೃಥಿವಿಯೇ ಮುಂತಾದವುಗಳ ಸಂಖ್ಯೆಯಲ್ಲಿ[2] ಎಂಟನೆಯದು.

ಓಂಕಾರವು ಸರ್ವಕಾಮಾಪ್ತಿಗುಣಕವು

(ಉಪನಿಷತ್ತು)

ಕತಮಾ ಕತಮರ್ಕ್ಕತಮತ್ ಕತಮತ್ ಸಾಮ ಕತಮಃ ಕತಮ ಉದ್ಗೀಥ ಇತಿ ವಿಮೃಷ್ಟಂ ಭವತಿ ॥೪॥

೪. ಯಾವಯಾವದು ಋಕ್ಕು, ಯಾವಯಾವದು ಸಾಮವು, ಯಾವ ಯಾವದು ಉದ್ಗೀಥವು - ಎಂದು ವಿವರ್ಶಮಾಡಬೇಕಾಗಿದೆ.

(ಭಾಷ್ಯ)

೧೦. ವಾಚ ಋಗ್ರಸಃ ಇತ್ಯುಕ್ತಮ್ । ಕತಮಾ ಸಾ ಋಕ್ ? ಕತಮತ್ ತತ್ ಸಾಮ ? ಕತಮೋ ವಾ ಸ ಉದ್ಗೀಥಃ ? ಕತಮಾ ಕತಮಾ ? ಇತಿ ವೀಪ್ಸಾ

---

1. ಇದು ಬರಿಯ ಉದ್ಗೀಥಸ್ತುತಿಯಲ್ಲ, ಏಕೆಂದರೆ ಅಪೂರ್ವವಾಗಿ ಇದನ್ನು ವಿಧಿಸಿದೆ ; ಆದ್ದರಿಂದ ಉಪಾಸೀತ (೧-೧-೧) ಎಂದು ವಿಧಿಸಿರುವ ಓಂಕಾರಕ್ಕೆ ರಸತಮತ್ವವೆಂಬ ಗುಣವನ್ನು ವಿಧಿಸಿದೆ ಎಂದು ತಿಳಿಯಬೇಕು. ಸೂ. ಭಾ. ೩-೪-೨೧ (ಭಾ. ಭಾ. ೪೬೩).
2. ಭೂತಗಳಿಗೆ ಪೃಥಿವಿಯು ರಸವು ಎಂದು ಹೇಳಿರುವ ಪೃಥಿವಿಯಿಂದ ಎಣಿಸಿದರೆ ಎಂದರ್ಥ.

ಆದರಾರ್ಥಾ । ನನು ''ವಾ ಬಹೂನಾಂ ಜಾತಿಪರಿಪ್ರಶ್ನೇ ಡತಮಚ್'' (ಪಾ. ಸೂ. ೫-೩-೯೩)[1] । ನ ಹಿ ಅತ್ರ ಋಗ್ಜಾತಿಬಹುತ್ವಮ್ । ಕಥಂ ಡತಮಚ್ಪ್ರಯೋಗಃ ? ನೈಷ ದೋಷಃ । ಜಾತೌ ಪರಿಪ್ರಶ್ನಃ ಜಾತಿಪರಿಪ್ರಶ್ನಃ ಇತ್ಯೇತಸ್ಮಿನ್ ವಿಗ್ರಹೇ ಜಾತೌ ಋಗ್ವ್ಯಕ್ತೀನಾಂ ಬಹುತ್ವೋಪಪತ್ತೇಃ । ನ ತು ಜಾತೇಃ ಪರಿಪ್ರಶ್ನಃ ಇತಿ ವಿಗೃಹ್ಯತೇ । ನನು ಜಾತೇಃ ಪರಿಪ್ರಶ್ನಃ ಇತ್ಯಸ್ಮಿನ್ ವಿಗ್ರಹೇ 'ಕತಮಃ ಕಠಃ ?' ಇತ್ಯಾದ್ಯುದಾಹರಣಮ್ ಉಪಪನ್ನಮ್ । ಜಾತೌ ಪರಿಪ್ರಶ್ನಃ ಇತ್ಯತ್ರ ತು ನ ಯುಜ್ಯತೇ । ತತ್ರಾಪಿ ಕಠಾದಿಜಾತಾವೇವ ವ್ಯಕ್ತಿಬಹುತ್ವಾಭಿಪ್ರಾಯೇಣ ಪರಿಪ್ರಶ್ನಃ ಇತ್ಯದೋಷಃ । ಯದಿ ಜಾತೇಃ ಪರಿಪ್ರಶ್ನಃ ಸ್ಯಾತ್ 'ಕತಮಾ ಕತಮಾ ಋಕ್' ಇತ್ಯಾದೌ ಉಪಸಂಖ್ಯಾನಂ ಕರ್ತವ್ಯಂ ಸ್ಯಾತ್ । ವಿಮೃಷ್ಟಂ ಭವತಿ ವಿಮರ್ಶಃ ಕೃತೋ ಭವತಿ । ವಿಮರ್ಶೇ ಹಿ ಕೃತೇ ಸತಿ ಪ್ರತಿವಚನೋಕ್ತಿಃ ಉಪಪನ್ನಾ[2] ॥

(ಭಾಷ್ಯಾರ್ಥ)

''ವಾಕ್ಕಿಗೆ ಋಕ್ಕು ರಸವು....'' (೧-೧-೩) ಎಂದು ಹೇಳಿದೆ (ಯಷ್ಟೆ), (ಅಲ್ಲಿ) ಆ ಋಕ್ಕೆಂಬುದು ಯಾವದು ? ಆ ಸಾಮವೆಂಬುದು ಯಾವದು ? ಆ ಉದ್ಗೀಥವೆಂಬುದಾದರೂ ಯಾವದು ? 'ಕತಮಾ ಕತಮಾ' (ಯಾವಯಾವದು) ಎಂಬ ವೀಪ್ಸೆಯು ಆದರಕ್ಕಾಗಿ (ಬಂದಿದೆ).

(ಆಕ್ಷೇಪ) :- ''ವಾ ಬಹೂನಾಂ ಜಾತಿಪರಿಪ್ರಶ್ನೇ ಡತಮಚ್'' (ಪಾ. ಸೂ. ೫-೩-೯೩) ಬಹಳ ಜಾತಿಗಳೊಳಗೆ (ಒಂದು ಜಾತಿಯ ನಿರ್ಣಯಕ್ಕಾಗಿ) ಪರಿಪ್ರಶ್ನೆಯುಂಟಾದಲ್ಲಿ ಡತಮಚ್ (ಪ್ರತ್ಯಯವು ಬರುವದು- ಎಂದು ವ್ಯಾಕರಣಸೂತ್ರವಿದೆ. ಆದರೆ) ಇಲ್ಲಿ ಋಗ್ಜಾತಿಗಳು ಬಹಳವಿಲ್ಲವಲ್ಲ[3] ! ಡತಮಚ್ಪ್ರತ್ಯಯವನ್ನು ಪ್ರಯೋಗಿಸಿರುವದು ಹೇಗೆ (ಸರಿ) ?

(ಪರಿಹಾರ) :- ಇದೇನೂ ತಪ್ಪಲ್ಲ. 'ಜಾತೌ ಪರಿಪ್ರಶ್ನಃ ಜಾತಿಪರಿಪ್ರಶ್ನಃ' (ಜಾತಿಯಲ್ಲಿ ಒಂದು ವ್ಯಕ್ತಿಯ ನಿರ್ಧಾರಣಕ್ಕಾಗಿ ಮಾಡುವ ಪರಿಪ್ರಶ್ನೆಯೇ ಜಾತಿ ಪರಿಪ್ರಶ್ನೆಯು) ಎಂದು (ಈ ಸಮಾಸಕ್ಕೆ) ವಿಗ್ರಹವನ್ನು (ಮಾಡಿ)ದಲ್ಲಿ ಜಾತಿಯಲ್ಲಿ

1. 'ಇತಿ ಡತಮಚ್ಚತ್ಯಯ ಇಷ್ಟಃ' ಎಂಬ ಹೆಚ್ಚಿನ ಪಾಠವು (ಆ॥ ವಾ॥) ಬೇಕಿಲ್ಲ.
2. ಆಚ್ಚಿನ ಪುಸ್ತಕದಲ್ಲಿ ಮುಂದಿನ ಕಂಡಿಕೆಯ ಕೆಳಗಿರುವ ಈ ವಾಕ್ಯವನ್ನು ಇಲ್ಲಿಗೇ ಸೇರಿಸಿಕೊಳ್ಳಬೇಕು.
3. ಇದು ಉಪಲಕ್ಷಣ. ಹೀಗೆಯೇ ಸಾಮಜಾತಿಗಳೂ ಉದ್ಗೀಥಜಾತಿಗಳೂ ಬಹಳ ವಿಲ್ಲವಲ್ಲ ! - ಎಂದೂ ಈ ಆಕ್ಷೇಪವಾಕ್ಯಕ್ಕೆ ಸೇರಿಸಿಕೊಳ್ಳಬೇಕು.

ಋಗ್ವ್ಯಕ್ತಿಗಳು ಬಹಳವಾಗಿರಬಹುದಾಗಿದೆ[1]. (ಇಷ್ಟೇ) ಹೊರತು 'ಜಾತೇ ಪರಿಪ್ರಶ್ನಃ' (ಜಾತಿಯ ಪರಿಪ್ರಶ್ನೆಯು) ಎಂದು ವಿಗ್ರಹವನ್ನು ಮಾಡತಕ್ಕದ್ದಲ್ಲ[2].

(ಆಕ್ಷೇಪ):- 'ಜಾತೇಃ ಪರಿಪ್ರಶ್ನಃ' ಎಂಬೀ ವಿಗ್ರಹವಿದ್ದರೇ 'ಕತಮಃ ಕಠಃ ? (ಕರನು ಯಾವನು ?) ಎಂದು ಮುಂತಾಗಿರುವ ಉದಾಹರಣೆಯು ಹೊಂದುತ್ತದೆ.[3] 'ಜಾತೌ ಪರಿಪ್ರಶ್ನಃ' ಎಂಬಲ್ಲಿಯಾದರೋ ಯುಕ್ತವಾಗುವದಿಲ್ಲವಲ್ಲ !

(ಪರಿಹಾರ) :- ಅಲ್ಲಿಯೂ ಕಠವೇ ಮುಂತಾದ ಜಾತಿಯೊಳಗೇ ವ್ಯಕ್ತಿಗಳು ಬಹಳವಾಗಿವೆ ಎಂಬ ಅಭಿಪ್ರಾಯದಿಂದ ಪರಿಪ್ರಶ್ನೆ (ಯಾಗಿದೆ) ಯಾದ್ದರಿಂದ (ಯಾವ) ದೋಷವೂ ಇಲ್ಲ.[4] 'ಜಾತೇಃ ಪರಿಪ್ರಶ್ನಃ' ಎಂದೇ (ಅಲ್ಲಿ ವಿಗ್ರಹವಾದರೆ) 'ಕತಮಾ ಕತಮರ್ಕ್' ಮುಂತಾದವುಗಳ ಉಪಸಂಖ್ಯಾನವನ್ನು ಮಾಡಿಕೊಳ್ಳಬೇಕಾಗುವದು.[5] (ಹೀಗೆಂದು) ವಿಮರ್ಶವನ್ನು ಮಾಡಬೇಕಾಗಿದೆ ; ವಿಮರ್ಶೆ ಮಾಡಿದರಲ್ಲವೆ, ಪ್ರತಿವಚನವನ್ನು ಹೇಳುವದು ಯುಕ್ತ ?

1. ಆಯಾ ಜಾತಿಯ ಬಹಳ ವ್ಯಕ್ತಿಗಳ ನಡುವೆ ಒಂದು ವ್ಯಕ್ತಿಯನ್ನು ನಿರ್ಣಯಿಸುವದಕ್ಕಾಗಿ ಪರಿಪ್ರಶ್ನೆಯಿರುವಲ್ಲಿ ಎಂದು ಸೂತ್ರಭಾಗಕ್ಕೆ ಅರ್ಥವೆಂದು ಭಾವ
2. ಹಾಗೆ ಮಾಡಿಕೊಂಡರೆ ಮಾತ್ರ ನಿಮ್ಮ ಆಕ್ಷೇಪವು ಹೊಂದುತ್ತದೆ - ಎಂದು ಭಾವ.
3. ಪಾತಂಜಲಭಾಷ್ಯದಲ್ಲಿ 'ಕತಮಃ ಕಠಃ ?' ಎಂಬ ಉದಾಹರಣೆಯಿದೆ. ಕಠ ಎಂಬುದು ಚರಣವನ್ನು (ಶಾಖೆಯನ್ನು) ತಿಳಿಸುವದರಿಂದ ಜಾತಿ ಎನಿಸುವದು. ಆದ್ದರಿಂದ ಸೂತ್ರವು ಜಾತಿಗೆ ಮಾತ್ರ ಅನ್ವಯಿಸುತ್ತದೆ ಎಂಬುದಕ್ಕೆ ಆ ಉದಾಹರಣೆಯು ಸೂಚಕವಲ್ಲವೆ ? - ಎಂದು ಆಕ್ಷೇಪ.
4. ಕಠಜಾತಿಗೆ ಸೇರಿದ ಅನೇಕ ವ್ಯಕ್ತಿಗಳಲ್ಲಿ ಯಾವನು ? - ಎಂದೇ ಉದಾಹರಣೆಯ ಪ್ರಶ್ನೆಗೆ ಅರ್ಥ. ಆದ್ದರಿಂದ ಅಲ್ಲಿಯೂ 'ಜಾತೌ ಪರಿಪ್ರಶ್ನೇ' ಎಂದೇ ವಿಗ್ರಹ ಎಂದು ಭಾವ. ''ಕಿಂ ಯತ್ತದ್ಭೋರ್ನಿರ್ಧಾರಣೇ ದ್ವಯೋರೇಕಸ್ಯ ಡತರಚ್'' ಪಾ. ಸೂ (೫-೩-೯೨) ಎಂಬ ಸೂತ್ರವಾದ ಬಳಿಕ ಈ ಸೂತ್ರವು ಬಂದಿದೆ. ಕಿಂ ಯತ್ ತತ್ - ಇವುಗಳಿಗೆ ಡತರಚ್ ಪ್ರತ್ಯಯವು ಇಬ್ಬರಲ್ಲೊಬ್ಬನು ಎಂದರ್ಥವಿರುವಾಗ ಬರುವದು - ಎಂದು ಆ ಸೂತ್ರಕ್ಕೆ ಅರ್ಥ. ಕತರಃ, ಯತರಃ, ತತರಃ - ಎಂಬಿವು ಅದಕ್ಕೆ ಉದಾಹರಣೆಗಳು. ಆ ಸೂತ್ರದಲ್ಲಿ 'ದ್ವಯೋಃ' ಎಂಬ ಮಾತು ಬೇಕಿಲ್ಲ; ಈ ಸೂತ್ರದಲ್ಲಿ ಜಾತಿಪರಿಪ್ರಶ್ನೇ ಎಂಬ ಮಾತೂ ಬೇಕಿಲ್ಲ - ಎಂದು ಕೈಯಟರು ಬರೆದಿರುತ್ತಾರೆ. 'ಕತಮ ಏಷಾಂ ಪಾಚಕಃ, ಶೂರಃ ದೇವದತ್ತಃ' ಎಂದು ಕ್ರಿಯೆ, ಗುಣ, ಸಂಜ್ಞೆ- ಇವುಗಳಿಗೂ ಉದಾಹರಣೆಗಳನ್ನು ಕೊಡಬಹುದಾಗಿರುವದರಿಂದ ಜಾತಿಯನ್ನು ನಿರ್ಧಾರಣೆ ಮಾಡುವಾಗಲೇ ಡತಮಚ್‌ಪ್ರತ್ಯಯವು ಬರುವದೆಂಬ ನಿಯಮವೇನೂ ಇಲ್ಲ - ಎಂಬುದು ಅವರ ಅಭಿಪ್ರಾಯ. ಆ ಪಕ್ಷದಲ್ಲಂತೂ ಪ್ರಕೃತಪೂರ್ವಪಕ್ಷಕ್ಕೆ ಅವಕಾಶವೇ ಇರುವದಿಲ್ಲ.
5. ಎಂದರೆ ಈ ಉದಾಹರಣೆಗಳಿಗೂ ಅನ್ವಯಿಸುವಂತೆ ಸೂತ್ರಕ್ಕೆ ಹೆಚ್ಚಿನ ವಾಕ್ಯವನ್ನು ಸೇರಿಸಿಕೊಳ್ಳಬೇಕಾಗುವದು.

(ಉಪನಿಷತ್ತು)

ವಾಗೇವರ್ಕ್ಪ್ರಾಣಃ ಸಾಮೋಮಿತ್ಯೇತದಕ್ಷರಮುದ್ಗೀಥಃ । ತದ್ವಾ ಏತನ್ಮಿಥುನಂ ಯದ್ ವಾಕ್ಚ ಪ್ರಾಣಶ್ಚರ್ಕ್ಚ ಸಾಮ ಚ ॥೫॥

೫. ವಾಕ್ಕೇ ಋಕ್ಕು, ಪ್ರಾಣವು ಸಾಮವು ; ಓಮೆಂಬೀ ಅಕ್ಷರವು ಉದ್ಗೀಥವು. ಆ ಇದೇ ಮಿಥುನವು ; ವಾಕ್ಕೂ ಪ್ರಾಣವೂ, ಋಕ್ಕೂ ಸಾಮವೂ.

ಓಂಕಾರದಲ್ಲಿ ಋಕ್ಸಾಮಗಳ ಮಿಥುನ

(ಭಾಷ್ಯ)

೧೧. ವಾಗೇವರ್ಕ್ ಪ್ರಾಣಃ ಸಾಮೇತಿ । ವಾಗೃಚೋರೇಕತ್ವೇऽಪಿ ನಾಷ್ಟಮತ್ವ-ವ್ಯಾಘಾತಃ । ಪೂರ್ವಸ್ಮಾತ್ ವಾಕ್ಯಾನ್ತರತ್ವಾತ್ । ಆಪ್ತಿಗುಣಸಿದ್ಧಯೇ ಹಿ ಓಮಿತ್ಯೇತದಕ್ಷರಮುದ್ಗೀಥಃ[1] ಇತಿ । ವಾಕ್ಪ್ರಾಣೌ ಋಕ್ಸಾಮಯೋನೀ ಇತಿ 'ವಾಗೇವರ್ಕ್ ಪ್ರಾಣಃ ಸಾಮ' ಇತ್ಯುಚ್ಯತೇ । ಯಥಾಕ್ರಮಮ್ ಋಕ್ಸಾಮಯೋನ್ಯೋರ್ಹಿ ವಾಕ್ಪ್ರಾಣಯೋರ್ಗ್ರಹಣೇ ಹಿ ಸರ್ವಾಸಾಮ್ ಋಚಾಂ ಸರ್ವೇಷಾಂ ಚ ಸಾಮ್ನಾಮ್ ಅವರೋಧಃ ಕೃತಃ ಸ್ಯಾತ್ । ಸರ್ವರ್ಕ್ಸಾಮಾವರೋಧೇ ಚ ಋಕ್ಸಾಮಸಾಧ್ಯಾನಾಂ ಚ ಸರ್ವಕರ್ಮಣಾಮ್ ಅವರೋಧಃ ಕೃತಃ ಸ್ಯಾತ್ । ತದವರೋಧೇ ಚ ಸರ್ವೇ ಕಾಮಾ ಅವರುದ್ಧಾಃ ಸ್ಯುಃ । ಓಮಿತ್ಯೇತದಕ್ಷರಮುದ್ಗೀಥಃ ಇತಿ ಭಕ್ತ್ಯಾಶಙ್ಕಾ ನಿವರ್ತ್ಯತೇ । ತದ್ವಾ ಏತತ್ ಇತಿ ಮಿಥುನಂ ನಿರ್ದಿಶ್ಯತೇ । ಕಿಂ ತನ್ಮಿಥುನಮಿತಿ ? ಆಹ । ಯದ್ ವಾಕ್ಚ ಪ್ರಾಣಶ್ಚ ಸರ್ವರ್ಕ್ಸಾಮಕಾರಣಭೂತೌ ಮಿಥುನಮ್ । ಋಕ್ಚ ಸಾಮ ಚ ಇತಿ ಋಕ್ಸಾಮಕಾರಣೌ ಋಕ್ಸಾಮಶಬ್ದೋಕ್ತೌ ಇತ್ಯರ್ಥಃ । ನ ತು ಸ್ವತನ್ತ್ರಮ್[2] ಋಕ್ಚ ಸಾಮ ಚ ಮಿಥುನಮ್ । ಅನ್ಯಥಾ ಹಿ ವಾಕ್ ಪ್ರಾಣಶ್ಚೈಕಂ ಮಿಥುನಮ್, ಋಕ್ಚ ಸಾಮ ಚ ಅಪರಂ ಮಿಥುನಮ್[3] ಇತಿ ದ್ವೇ

1. ಇಲ್ಲಿರುವ ಪಾರಾಂತರಗಳ ವಿಚಾರಕ್ಕೆ ಅನುವಾದದ ಟಿಪ್ಪಣಿಯನ್ನು ನೋಡಿರಿ.
2. 'ಸ್ವತನ್ತ್ರೇ', 'ಸ್ವಾತನ್ತ್ರ್ಯೇಣ' (ವಾ॥) ಎಂಬ ಪಾಠಾಂತರಗಳು ಬೇಕಿಲ್ಲ.
3. 'ವಾಕ್ಚ ಪ್ರಾಣಶ್ಚ ಇತ್ಯೇಕಂ ಮಿಥುನಮ್ ಋಕ್ಚ ಸಾಮ ಚಾಪರಂ ಮಿಥುನಮ್' (ಆ॥), 'ವಾಕ್ಪ್ರಾಣಶ್ಚ ಇತ್ಯೇಕಂ ಮಿಥುನಮ್, ಋಕ್ಸಾಮ ಚಾಪರಮ್' (ವಾ॥), ''ವಾಕ್ಪ್ರಾಣಶ್ಚೇತ್ಯೇಕಂ ಮಿಥುನಮ್, ಋಕ್ಸಾಮ ಚ ಪರಮ್'' (ಆ॥) ಎಂದು ಈ ವಾಕ್ಯಕ್ಕೆ ಬೇರೆ ಪಾಠಗಳೂ ಇವೆ.

ಮಿಥುನೇ ಸ್ಯಾತಾಮ್ । ತಥಾ ಚ 'ತದ್ವಾ ಏತನ್ಮಿಥುನಮ್[1], ಇತ್ಯೇಕವಚನನಿರ್ದೇಶೋಽನುಪಪನ್ನಃ ಸ್ಯಾತ್ । ಋಕ್ಸಾಮಯೋರ್ಯೋಃ ವಾಕ್ಪ್ರಾಣಯೋರೇವ ಮಿಥುನತ್ವಮ್ ॥

(ಭಾಷ್ಯಾರ್ಥ)

ವಾಕ್ಕೇ ಋಕ್ಕು, ಪ್ರಾಣವು ಸಾಮವು. (ಇಲ್ಲಿ) ವಾಗ್ಪ್ರಕ್ಕುಗಳು ಒಂದೇ (ಎಂದು ಹೇಳಿದ್ದರೂ ಉದ್ಗೀಥವು) ಎಂಟನೆಯದೆಂಬುದಕ್ಕೆ ವಿರೋಧವಿಲ್ಲ[2].

ಏಕೆಂದರೆ ಇದು ಹಿಂದಿನ (ವಾಕ್ಯ)ಕ್ಕಿಂತ ಬೇರೆ ಒಂದು ವಾಕ್ಯವಾಗಿದೆ[3]. ಓಮ್ ಎಂಬೀ ಅಕ್ಷರವು ಉದ್ಗೀಥವು ಎಂಬುದು ಇಲ್ಲಿ ಆಪಿಗುಣದ ಸಿದ್ಧಿಗಾಗಿ (ಬಂದಿರುತ್ತದೆ)[4]. ವಾಕ್ಪ್ರಾಣಗಳು ಋಕ್ಸಾಮಗಳಿಗೆ ಕಾರಣವಾಗಿರುವದರಿಂದ 'ವಾಕ್ಕೇ ಋಕ್ಕು, ಪ್ರಾಣವು ಸಾಮ'- ಎಂದು ಹೇಳಿರುತ್ತದೆ.[5] ಯಥಾಕ್ರಮವಾಗಿ ಋಕ್ಸಾಮಗಳಿಗೆ ಕಾರಣವಾಗಿರುವ ವಾಕ್ಪ್ರಾಣಗಳನ್ನು ಗ್ರಹಿಸಿದರಲ್ಲವೆ, ಎಲ್ಲಾ ಋಕ್ಕುಗಳನ್ನೂ ಎಲ್ಲಾ

---

1. ಈ ವಾ॥ ಪಾಠವೇ ತದೇತನ್ಮಿಥುನಮ್ ಎಂಬುದಕ್ಕಿಂತ ಮೇಲು.
2. ಹಿಂದಿನ ಕಂಡಿಕೆಯಲ್ಲಿ ವಾಕ್ಕಿಗೆ ಋಕ್ಕು ರಸವು ಎಂದು ವಾಗ್ಪ್ರಕ್ಕುಗಳನ್ನು ಬೇರೆಬೇರೆಯಾಗಿ ಹಿಡಿದಿರುವದರಿಂದ ಉದ್ಗೀಥವು ಎಂಟನೆಯದೆಂದದ್ದು ಸರಿಯಾಯಿತು ; ಇಲ್ಲಿ 'ವಾಕ್ಕೇ ಋಕ್ಕು' ಎಂದದ್ದರಿಂದ ಏಳನೆಯದಾಯಿತಲ್ಲ! - ಎಂಬ ಶಂಕೆಗೆ ಪರಿಹಾರವಿದು.
3. ಮತ್ತೊಂದು ವಿಷಯವನ್ನು ಹೇಳುವದಕ್ಕೆ ಬಂದ ವಾಕ್ಯವಾಗಿದೆ.
4. 'ಓಮಿತ್ಯೇತದಕ್ಷರಮುದ್ಗೀಥ ಇತಿ' ಎಂಬ ವಾಕ್ಯವು ಭಾಷ್ಯಕ್ಕೆ ಸೇರಿದ್ದೆಂದು ಮುದ್ರಿತ ಆ॥ ಪಾಠವನ್ನು ಹಿಡಿದು ಕನ್ನಡಿಸಿದೆ. ಆದರೆ ಭಾಷ್ಯದಲ್ಲಿ ಈ ವಾಕ್ಯವನ್ನು ಮತ್ತೊಮ್ಮೆ ಮುಂದೆ ತೆಗೆದುಕೊಂಡೇ ವ್ಯಾಖ್ಯಾನಮಾಡಿರುವದರಿಂದ ಮೂಲಭಾಷ್ಯದಲ್ಲಿ ಈ ವಾಕ್ಯವು ಇಲ್ಲಿಯೂ ಇತ್ತೆ ? -ಎಂಬುದು ವಿಮರ್ಶನೀಯವಾಗಿದೆ. ವಾ॥ ಪಾಠದಲ್ಲಿ ಪ್ರಾಣಃ ಸಾಮೇತಿ ಎಂದಿರದೆ ಪ್ರಾಣಃ ಸಾಮ ಓಮಿತ್ಯೇತದಕ್ಷರಮುದ್ಗೀಥಃ ಎಂಬ ವಾಕ್ಯವನ್ನು ಕೊಟ್ಟಿದೆ ; ಪೂರ್ವಸ್ಮಾತ್ ವಾಕ್ಯಾನ್ತರತ್ವಾತ್ । ಎಂದು ಒಂದು ವಾಕ್ಯವನ್ನು ಮಾಡಿ 'ಆಪಿಗುಣಸಿದ್ಧಯೇ ಹಿ ಓಮಿತ್ಯೇತದಕ್ಷರಮುದ್ಗೀಥಃ ಇತಿ' ಎಂಬ ಪಾಠವನ್ನು ಸ್ವೀಕರಿಸಿದೆ. ಆ ಪಾಠದಲ್ಲಿ ಇದು ವಿವರಣಕ್ಕೆ ಸೇರಿದ ವಾಕ್ಯವೆನ್ನಬೇಕಾಗುವದು. ಈ ವಾಕ್ಯವನ್ನೇ ಕೈಬಿಟ್ಟು 'ಆಪಿಗುಣಸಿದ್ಧಯೇ' ಎಂಬಲ್ಲಿಗೇ ವಾಕ್ಯಸಮಾಪ್ತಿಯನ್ನು ಮಾಡಿರುವ ಪಾಠಾಂತರವನ್ನೂ ಆ॥ ಪುಸ್ತಕದಲ್ಲಿ ತೋರಿಸಿದೆ. ಆ ಪಾಠದಲ್ಲಿ - ಏಳನೆಯ ಕಂಡಿಕೆಯಲ್ಲಿ ಕಾಮಾಪ್ತಿ ಎಂಬ ಫಲವನ್ನು ಹೇಳುವದಕ್ಕಾಗಿ ಹೊರಟಿರುವದರಿಂದ ರಸತಮತ್ವಗುಣವನ್ನು ಹೇಳಿದ ವಾಕ್ಯಕ್ಕಿಂತ ಈ ವಾಕ್ಯವು ಬೇರೆ ಎಂದು ಸುಲಭವಾಗಿ ಸಂಬಂಧವನ್ನು ಕಲ್ಪಿಸ ಬಹುದಾಗುತ್ತದೆ.
5. ವಾಕ್ಕಿನಿಂದ ಋಕ್ಕು ಆಗಿದೆ, ಪ್ರಾಣ(ಬಲ)ದಿಂದ ಸಾಮಗಾನವಾಗುತ್ತದೆ ; ಆದ್ದರಿಂದ ವಾಕ್ಕನ್ನು ಋಕ್ಕು ಎಂದೂ ಪ್ರಾಣವನ್ನು ಸಾಮವೆಂದೂ ಕರೆದಿದೆ ಎಂದರ್ಥ.

ಸಾಮಗಳನ್ನೂ ಒಳಗೊಂಡಂತೆ ಆಗುವದು ?[1] ಎಲ್ಲಾ ಋಕ್ಸಾಮಗಳನ್ನೂ ಒಳಗೊಂಡರೆ ಋಕ್ಸಾಮಸಾಧ್ಯವಾಗಿರುವ ಎಲ್ಲಾ ಕರ್ಮಗಳನ್ನೂ ಒಳಗೊಂಡಂತೆ ಆಗುವದು[2] ; ಅವುಗಳನ್ನು ಒಳಗೊಂಡರೆ ಎಲ್ಲಾ ಕರ್ಮಗಳನ್ನೂ ಒಳಗೊಂಡಂತೆ ಆಗುವದು. (ಅಲ್ಲವೆ) ?[3]

ಓಮೆಂಬೀ ಅಕ್ಷರವು ಉದ್ಗೀಥವು ಎಂದದ್ದರಿಂದ (ಸಾಮ)ಭಕ್ತಿಯನ್ನೇ (ಉದ್ಗೀಥವೆಂದಿದೆ ಎಂಬ) ಆಶಂಕೆಯನ್ನು ತೊಲಗಿಸಿದಂತೆ ಆಗಿದೆ.[4]

'ಆ ಇದೇ' ಎಂದು ಮಿಥುನವನ್ನು ನಿರ್ದೇಶಮಾಡಿರುತ್ತದೆ. ಆ ಮಿಥುನವು ಯಾವದು ? ಎಂದರೆ (ಶ್ರುತಿ) ಹೇಳುತ್ತದೆ : ವಾಕ್ಕೂ ಋಕ್ಕೂ ; ಎಲ್ಲಾ ಋಕ್ಕುಗಳಿಗೂ ಸಾಮಗಳಿಗೂ ಕಾರಣಭೂತವಾದ (ವಾಕ್ಪ್ರಣಗಳೇ ಈ) ಮಿಥುನವು. 'ಋಕ್ಕೂ ಸಾಮವೂ' ಎಂದರೆ ಋಕ್ಪ್ರಣಶಬ್ದಗಳಿಂದ ಉಕ್ತವಾಗಿರುವ (ವಾಕ್ಪ್ರಣಗಳು) ಎಂದರ್ಥ. (ಇಷ್ಟೇ) ಹೊರತು ಋಕ್ಕೂ ಸಾಮವೂ ಸ್ವತಂತ್ರವಾಗಿಯೇ ಮಿಥುನವು (ಎಂದೇನೂ ಅಬಿಪ್ರಾಯ)ವಲ್ಲ. ಏಕೆಂದರೆ ವಾಕ್ಕೂ ಪ್ರಾಣವೂ ಎಂಬುದೊಂದು ಮಿಥುನ, ಋಕ್ಕೂ ಸಾಮವೂ ಎಂಬುದು ಮತ್ತೊಂದು ಮಿಥುನ - ಎಂದು ಎರಡು

---

1. ಋಕ್ಶಬ್ದವಾಚ್ಯವಾಗಿರುವದು ವಾಕ್ಕೇ, ಸಾಮಶಬ್ದವಾಚ್ಯವಾದದ್ದು ಪ್ರಾಣವೇ - ಎಂದು ಹಿಡಿದರೆ ವಾಕ್ಕಿನಿಂದಾಗುವ ಎಲ್ಲಾ ಋಕ್ಕುಗಳನ್ನೂ ಪ್ರಾಣದಿಂದಾಗುವ ಎಲ್ಲಾ ಸಾಮಗಳನ್ನೂ ಹೇಳಿದಂತೆ ಆಗುವದು ಎಂದರ್ಥ. ಸಾಮಾನ್ಯಗ್ರಹಣವಾದರೆ ಜಾತಿಪರಿಪ್ರಶ್ನವೇ ಆಯಿತಲ್ಲ! ಹಿಂದಿನ ಮಂತ್ರದಲ್ಲಿ ಅದನ್ನು ಖಂಡಿಸಿದ್ದೇಕೆ ? - ಎಂದರೆ ಅಲ್ಲಿ ಋಗಾದಿಗಳಲ್ಲಿ ಒಂದೊಂದರಲ್ಲಿಯೂ ಭೇದವನ್ನು ಅಂಗೀಕರಿಸುವ ಷಷ್ಠೀಸಮಾಸಪಕ್ಷವನ್ನು ಖಂಡಿಸಿದೆಯೇ ಹೊರತು ಅವುಗಳಲ್ಲಿ ಪ್ರತಿಯೊಂದೂ ಒಂದೊಂದು ಎಂದು ಒಪ್ಪಿ ಅನೇಕವಾಗಿರುವ ಋಕ್ಸಾಮೋದ್ಗೀಥಜಾತಿಗಳೊಳಗೆ ಒಂದೊಂದನ್ನು ನಿರ್ಧರಿಸುವದಕ್ಕಾಗಿ ಷಷ್ಠೀಸಮಾಸವನ್ನವಲಂಬಿಸುವ ಪಕ್ಷವನ್ನು ಖಂಡಿಸಿಲ್ಲ- ಎಂದು ಆ॥ ಗಿ॥ ಟೀಕಾ.
2. ಋಕ್ಸಾಮಗಳು ಎಲ್ಲಾ ಕರ್ಮಗಳಿಗೂ ಬೇಕಾದ್ದರಿಂದ ವಾಕ್ಪ್ರಣಗ್ರಹಣದಿಂದ ಕರ್ಮ ಗಳೆಲ್ಲವನ್ನೂ ಗ್ರಹಿಸಿದಂತೆ ಆಗುವದು.
3. ಕರ್ಮದಿಂದಲೇ ಕಾಮಾವಾಪ್ತಿಯಾಗಬೇಕಾಗಿರುವದರಿಂದ ಸರ್ವಕರ್ಮಗ್ರಹಣದಿಂದ ಸರ್ವಕಾಮಾವಾಪ್ತಿಯನ್ನು ಗ್ರಹಿಸಿದಂತೆ ಆಗುವದು. ಉದ್ಗೀಥಾವಯವವಾದ ಓಂಕಾರದಿಂದ ಮುಂದಿನ ಕಂಡಿಕೆಯಲ್ಲಿ ಹೇಳಿರುವಂತೆ ಅದರ ಉಪಾಸನೆಯಿಂದ ಸರ್ವಕಾಮಾವಾಪ್ತಿಯು ಸಿದ್ಧವಾಗುವದು.
4. ಇಲ್ಲಿರುವ ಉದ್ಗೀಥವು ಉದ್ಗೀಥವೆಂಬ ಸಾಮಭಕ್ತಿಯಲ್ಲ ; ಪ್ರಕೃತವಾಗಿರುವ ಉದ್ಗೀಥಾವಯವವಾದ ಓಂಕಾರವೇ.

ಮಿಥುನಗಳಾಗುವವು. ಹಾಗಾದರೆ 'ಆ ಇದೇ ಮಿಥುನವು[1]' ಎಂದು ಏಕವಚನ ದಿಂದ ನಿರ್ದೇಶಮಾಡಿರುವದು ವ್ಯರ್ಥವಾಗುವದು. ಆದ್ದರಿಂದ ಋಕ್ಸಾಮಗಳಿಗೆ ಕಾರಣವಾಗಿರುವ ವಾಕ್ಪ್ರಾಣಗಳೇ (ಇಲ್ಲಿ) ಮಿಥುನವು.[2]

(ಉಪನಿಷತ್ತು)

ತದೇತನ್ಮಿಥುನಮೋಮಿತ್ಯೇತಸ್ಮಿನ್ನಕ್ಷರೇ ಸಗ್ಂಸೃಜ್ಯತೇ ಯದಾ ವೈ ಮಿಥುನೌ ಸಮಾಗಚ್ಛತ ಆಪಯತೋ ವೈ ತಾವನ್ಯೋನ್ಯಸ್ಯ ಕಾಮಮ್ ॥೬॥

೬. ಆ ಈ ಮಿಥುನವು ಓಮ್ ಎಂಬೀ ಅಕ್ಷರದಲ್ಲಿ ಸೇರಿಕೊಂಡಿರುತ್ತದೆ. ಯಾವಾಗ ಮಿಥುನರು ಕೂಡುವರೋ (ಆಗ) ಅವರು ಒಬ್ಬರೊಬ್ಬರ ಕಾಮವನು ಪಡೆಯಿಸುತಾರಷ್ಟೆ.

ಓಂಕಾರಕ್ಕೆ ಮಿಥುನಸಂಬಂಧದಿಂದಾಗಿರುವ ಫಲ

(ಭಾಷ್ಯ)

೧೨. ತದೇತತ್ ಏವಂಲಕ್ಷಣಂ ಮಿಥುನಮ್ ಓಮಿತ್ಯೇತಸ್ಮಿನ್ ಅಕ್ಷರೇ ಸಂಸೃಜ್ಯತೇ । ಏವಂ ಸರ್ವಕಾಮಾಪ್ತಿ[3]ಗುಣವಿಶಿಷ್ಟಂ ಮಿಥುನಮ್ ಓಂಕಾರೇ ಸಂಸೃಷ್ಟಂ ವಿದ್ಯತ ಇತಿ ಓಂಕಾರಸ್ಯ ಸರ್ವಕಾಮಾಪ್ತಿಗುಣವತ್ತ್ವಂ ಸಿದ್ಧಮ್[4] । ವಾಙ್ಮಯತ್ವಮ್ ಓಂಕಾರಸ್ಯ ಪ್ರಾಣನಿಷ್ಪಾದ್ಯತ್ವಂ ಚ ಮಿಥುನೇನ ಸಂಸೃಷ್ಟತ್ವಮ್ । ಮಿಥುನಸ್ಯ ಕಾಮಾಪಯಿತೃತ್ವಂ ಪ್ರಸಿದ್ಧಮ್ ಇತಿ ದೃಷ್ಟಾನ್ತ ಉಚ್ಯತೇ । ಯಥಾ ಲೋಕೇ ಮಿಥುನೌ ಮಿಥುನಾವಯವೌ ಸ್ತ್ರೀಪುಂಸೌ ಯದಾ ಸಮಾಗಚ್ಛತೋ ಗ್ರಾಮ್ಯಧರ್ಮತಯಾ ಸಂಯುಜ್ಯೇಯಾತಾಮ್, ತದಾ ಆಪಯತಃ ಪ್ರಾಪಯತಃ ಅನ್ಯೋನ್ಯಸ್ಯ ಇತರೇತರಸ್ಯ ತೌ ಕಾಮಮ್ । ತಥಾ[5] ಸ್ವಾತ್ಮಾನುಪ್ರವಿಷ್ಟೇನ ಮಿಥುನೇನ ಸರ್ವಕಾಮಾಪ್ತಿಗುಣವತ್ತ್ವಮ್ ಓಂಕಾರಸ್ಯ ಸಿದ್ಧಮ್ ಇತ್ಯಭಿಪ್ರಾಯಃ ॥

---

1. 'ತದೇತನ್ಮಿಥುನಮ್' ಎಂಬ ಆ॥ ಪಾಠಕ್ಕೆ ಆ ಈ ಮಿಥುನವು ಎಂದರ್ಥ , ಆದರೆ ಆಗ ಮುಂದಿನ ಕಂಡಿಕೆಯ ಪರಾಮರ್ಶವನ್ನು ಅನವಶ್ಯವಾಗಿ ಕಲ್ಪಿಸಬೇಕಾಗುವದು.
2. ಆದ್ದರಿಂದ ಋಕ್ಕೂ ಸಾಮವೂ ಎಂದು ಹೇಳಿದ ವಾಕ್ಪ್ರಾಣಗಳೆಂಬ ಇದೇ ಮಿಥುನ ಎಂದೇ ವಾಕ್ಯಾರ್ಥವೆಂದು ಭಾವ. 3. 'ಕಾಮಾವಾಪ್ತಿ' ಎಂಬುದಕ್ಕಿಂತ ಈ ಪಾಠವು ಮೇಲು
4. 'ಪ್ರಸಿದ್ಧಮ್' ಎಂಬ ಪಾಠದಲ್ಲಿ ಪ್ರ॥ ಹೆಚ್ಚು.
5. ತಥಾ ಚ ಎಂಬುದಕ್ಕಿಂತ ಈ ಚಶಬ್ದರಹಿತಪಾಠವೇ ಮೇಲು.

(ಭಾವ್ಯಾರ್ಥ)

ಆ ಈ ಇಂಥ ಸ್ವರೂಪದ[1] ಮಿಥುನವು ಓಮ್ ಎಂಬೀ ಅಕ್ಷರದಲ್ಲಿ ಸೇರಿ ಕೊಂಡಿರುತ್ತದೆ. ಹೀಗೆ ಸರ್ವಕಾಮಾಪ್ತಿ ಎಂಬ ಗುಣದಿಂದೊಡಗೂಡಿದ ಮಿಥುನವು ಓಂಕಾರದಲ್ಲಿ ಸೇರಿಕೊಂಡಿರುತ್ತದೆಯಾದ್ದರಿಂದ ಓಂಕಾರವು ಸರ್ವಕಾಮಾಪ್ತಿ ಎಂಬ ಗುಣಗಳುಳ್ಳದ್ದೆಂದು ಏರ್ಪಡುತ್ತದೆ. ಓಂಕಾರದಲ್ಲಿ ಮಿಥುನವು ಸೇರಿಕೊಂಡಿರುವದು ಎಂದರೆ (ಆದು) ವಾಙ್ಮಯವಾಗಿರುವದು ಮತ್ತು ಪ್ರಾಣದಿಂದುಂಟಾಗತಕ್ಕದ್ದಾಗಿರು-ವದು ಎಂಬುದೇ.

ಮಿಥುನಕ್ಕೆ ಕಾಮವನ್ನು ಪಡೆಯಿಸುವದೆಂಬ (ಗುಣವು) ಪ್ರಸಿದ್ಧವಾಗಿದೆ ಎಂದು (ತಿಳಿಸುವದಕ್ಕಾಗಿ ಶ್ರುತಿಯು) ದೃಷ್ಟಾಂತವನ್ನು ಹೇಳುತ್ತದೆ : ಹೇಗೆ ಲೋಕದಲ್ಲಿ ಮಿಥುನರಾದ ಎಂದರೆ ಮಿಥುನದ ಅವಯವಗಳಾದ[2] ಸ್ತ್ರೀಪುರುಷರು ಯಾವಾಗ ಕೂಡುವರೋ ಗ್ರಾಮ್ಯಧರ್ಮದಿಂದ ಸಂಯುಕ್ತರಾಗುವರೋ ಆಗ ಅವರು ಒಬ್ಬ ರೊಬ್ಬರ ಕಾಮವನ್ನು ಪಡೆಯಿಸುತ್ತಾರೋ ಹಾಗೆ ತನ್ನ ಸ್ವರೂಪದಲ್ಲಿ ಒಳಹೊಕ್ಕಿರುವ ಮಿಥುನದಿಂದ ಸರ್ವಕಾಮಾಪ್ತಿ ಎಂಬ ಗುಣವು ಓಂಕಾರಕ್ಕೆ ಸಿದ್ಧವಾಗಿರುತ್ತದೆ ಎಂದು ಅಭಿಪ್ರಾಯ.

(ಉಪನಿಷತ್ತು)

ಆಪಯಿತಾ ಹ ವೈ ಕಾಮಾನಾಂ ಭವತಿ ಯ ಏತದೇವಂ ವಿದ್ವಾನಕ್ಷರ ಮುದ್ಗೀಥಮುಪಾಸ್ತೇ ॥೭॥

೭. ಹೀಗೆಂದು ಅರಿತುಕೊಂಡು ಯಾವನು ಈ ಉದ್ಗೀಥವೆಂಬ ಅಕ್ಷರವನ್ನು ಉಪಾಸಿಸುತ್ತಾನೋ ಅವನು ಕಾಮಗಳನ್ನು ಪಡೆಯಿಸುವವ ನಾಗುವನು.

ಓಂಕಾರೋಪಾಸಕನಿಗೆ ಸರ್ವಕಾಮಪ್ರಾಪಯಿತೃತ್ವಫಲ

(ಭಾಷ್ಯ)

೧೩. ತದುಪಾಸಕೋಽಪಿ ಉದ್ಗಾತಾ ತದ್ಧರ್ಮಾ ಭವತೀತ್ಯಾಹ । **ಆಪಯಿತಾ ಹ ವೈ ಕಾಮಾನಾಂ ಯಜಮಾನಸ್ಯ ಭವತಿ ಯ ಏತದಕ್ಷರಮ್ ಏವಂ**

---

1. ವಾಕ್ಪ್ರಾಣಾತ್ಮಕವಾದ.

2. ಮಿಥುನಗಳು ಎರಡಿಲ್ಲವಾದ್ದರಿಂದ ಮಿಥುನೌ ಎಂಬ ದ್ವಿವಚನಕ್ಕೆ ಈ ಅರ್ಥವನ್ನು ಮಾಡಿದೆ.

(ವಿದ್ವಾನ್)[1] ಆಪ್ತಿಗುಣವದುದ್ಗೀಥಮ್ ಉಪಾಸ್ತೇ । ತಸ್ಯ ಏತದ್ ಯಥೋಕ್ತಂ ಫಲಮ್ ಇತ್ಯರ್ಥಃ । ''ತಂ ಯಥಾ ಯಥೋಪಾಸತೇ ತದೇವ ಭವತಿ'' (ಶತ. ಬ್ರಾ. ೧೦-೫-೨-೨೦) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಅದನ್ನು ಉಪಾಸನೆಮಾಡುವ ಉದ್ಗಾತೃವೂ ಅದರ (ಈ) ಧರ್ಮವುಳ್ಳವನಾಗುತ್ತಾನೆ ಎಂದು (ಶ್ರುತಿ) ಹೇಳುತ್ತಿದೆ. ಯಜಮಾನನ ಕಾಮಗಳನ್ನೂ ಪಡೆಯಿಸುವವನಾಗುತ್ತಾನೆ ; ಯಾವನು ಈ ಅಕ್ಷರವನ್ನು ಹೀಗೆಂದು ಅರಿತುಕೊಂಡು ಆಪ್ತಿಗುಣವುಳ್ಳ ಉದ್ಗೀಥವನ್ನು ಉಪಾಸನೆಮಾಡುವನೋ ಅವನಿಗೆ ಈ ಮೇಲೆ ಹೇಳಿದ ಫಲವು (ಆಗುವದು) ಎಂದರ್ಥ. ''ಆತನನ್ನು ಹೇಗೆಹೇಗೆ ಉಪಾಸನೆ ಮಾಡುವರೋ ಅದೇ ಆಗುವದು'' (ಶತ. ಬ್ರಾ. ೧೦-೫-೨-೨೦) ಎಂಬ ಶ್ರುತಿಯು (ಇದಕ್ಕೆ) ಪ್ರಮಾಣವು.

ಓಂಕಾರವು ಸಮೃದ್ಧಿಗುಣವುಳ್ಳದ್ದು

(ಉಪನಿಷತ್ತು)

ತದ್ವಾ ಏತದನುಜ್ಞಾಕ್ಷರಂ ಯದ್ಧಿ ಕಿಂಚಾನುಜಾನಾತ್ಯೋಮಿತ್ಯೇವ ತದಾ ಹ್ಯೇಷೋ ಏವ ಸಮೃದ್ಧಿರ್ಯದನುಜ್ಞಾ ಸಮರ್ಧಯಿತಾ ಹ ವೈ ಕಾಮಾನಾಂ ಭವತಿ ಯ ಏತದೇವಂ ವಿದ್ವಾನಕ್ಷರಮುದ್ಗೀಥ ಮುಪಾಸ್ತೇ ॥೮॥

೮. ಆ ಇದು ಅನುಜ್ಞಾಕ್ಷರವು. ಯಾವದೊಂದಿಷ್ಟನ್ನು ಅನುಜ್ಞೆ ಮಾಡುವರೋ ಆಗ ಓಮ್ ಎಂದೇ ಹೇಳುತ್ತಾರೆ. ಮತ್ತು ಅನುಜ್ಞೆ ಎಂಬಿದೇ ಸಮೃದ್ಧಿಯು. ಯಾವನು ಹೀಗೆಂದು ಅರಿತುಕೊಂಡು ಉದ್ಗೀಥವೆಂಬ ಈ ಅಕ್ಷರವನ್ನು ಉಪಾಸನೆಮಾಡುವನೋ ಅವನು ಕಾಮಗಳನ್ನು ಸಮೃದ್ಧಿಗೊಳಿಸುವವನಾಗುವನು.

1. ಉಪನಿಷತ್ತಿನಲ್ಲಿರುವ ಈ ಶಬ್ದವು ಇಲ್ಲಿ ಭಾಷ್ಯದಲ್ಲಿ ಲೇಖಕರ ಕೈತಪ್ಪಿನಿಂದ ಬಿಟ್ಟು ಹೋಗಿರಬಹುದು.

ಸಮೃದ್ಧಿಗುಣಕೋಪಾಸನೆಯ ಫಲ

(ಭಾಷ್ಯ)

೧೪. ಸಮೃದ್ಧಿಗುಣವಾಂಶ್ಚ ಓಂಕಾರಃ । ಕಥಮ್ ? ತದ್ವಾ ಏತತ್ ಪ್ರಕೃತಮ್ ಅನುಜ್ಞಾಕ್ಷರಮ್ । ಅನುಜ್ಞಾ ಚ ಸಾ ಅಕ್ಷರಂ ಚ ತತ್ । ಅನುಜ್ಞಾ ಅನುಮತಿ-ರೋಂಕಾರಃ ಇತ್ಯರ್ಥಃ । ಕಥಮನುಜ್ಞಾ ಇತಿ ? ಆಹ ಶ್ರುತಿರೇವ । ಯದ್ ಹಿ ಕಿಂ ಚ ಯತ್ಕಿಂಚ ಲೋಕೇ ಜ್ಞಾನಂ ಧನಂ ವಾ ಅನುಜಾನಾತಿ ವಿದ್ವಾನ್ ಧನೀ ವಾ ತತ್ರ ಅನುಮತಿಂ ಕುರ್ವನ್ ಓಮಿತ್ಯೇವ ತದಾಹ । ತಥಾ ಚ ವೇದೇ ''ತ್ರಯಸ್ತ್ರಿಂಶ-ದಿತ್ಯೋಮಿತಿ ಹೋವಾಚ'' (ಬೃ. ೩-೯-೧) ಇತ್ಯಾದಿ । ತಥಾ ಚ ಲೋಕೇಽಪಿ 'ತವೇದಂ ಧನಂ ಗೃಹ್ಣಾಮಿ' ಇತ್ಯುಕ್ತಃ 'ಓಮ್' ಇತ್ಯೇವಾಹ[1] । ಅತಃ ಏಷಾ ಉ ಏವ ಏಷೈವ ಸಮೃದ್ಧಿಃ ಯದನುಜ್ಞಾ । ಯಾ ಅನುಜ್ಞಾ ಸಾ ಸಮೃದ್ಧಿಃ । ತನ್ಮೂಲತ್ವಾತ್ ಅನುಜ್ಞಾಯಾಃ । ಸಮೃದ್ಧೋ ಹಿ ಓಮ್ ಇತ್ಯನುಜ್ಞಾಂ ದದಾತಿ । ತಸ್ಮಾತ್ ಸಮೃದ್ಧಿಗುಣವಾನ್ ಓಂಕಾರಃ ಇತ್ಯರ್ಥಃ । ಸಮೃದ್ಧಿಗುಣೋಪಾಸಕತ್ವಾತ್ ತದ್ವರ್ಮಾ ಸನ್ ಸಮರ್ಧಯಿತಾ ಹ ವೈ ಕಾಮಾನಾಂ ಯಜಮಾನಸ್ಯ ಭವತಿ ಯ ಏತದೇವಂ ವಿದ್ವಾನ್ ಅಕ್ಷರಮ್ ಉದ್ಗೀಥಮ್ ಉಪಾಸ್ತೇ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಓಂಕಾರವು ಸಮೃದ್ಧಿಗುಣವುಳ್ಳದ್ದೂ (ಆಗಿರುತ್ತದೆ). ಹೇಗೆಂದರೆ, ಆ ಈ ಪ್ರಕೃತವಾದ (ಓಂಕಾರವು) ಅನುಜ್ಞಾಕ್ಷರವು, ಅದು ಅನುಜ್ಞೆಯಾದ ಅಕ್ಷರವು. ಓಂಕಾರವು ಅನುಜ್ಞೆ ಎಂದರೆ ಒಪ್ಪಿಗೆಯು ಎಂದರ್ಥ. (ಅದು) ಅನುಜ್ಞೆ ಎಂಬುದು ಹೇಗೆ ? ಎಂದರೆ ಶ್ರುತಿಯೇ ಹೇಳುತ್ತದೆ : ಹೇಗೆಂದರೆ ಯಾವದೊಂದಿಷ್ಟನ್ನು ಲೋಕದಲ್ಲಿ ಜ್ಞಾನವನ್ನೇ ಆಗಲಿ, ಧನವನ್ನೇ ಆಗಲಿ, ಯಾವದನ್ನೇ ಜ್ಞಾನಿಯು ಅಥವಾ ಧನವಂತನು ಅನುಜ್ಞೆಯನ್ನು ಮಾಡುವನೋ ಆಗ ಅಲ್ಲಿ ಅನುಮತಿಯನ್ನು ಕೊಡುವದಕ್ಕಾಗಿ ಓಮ್ ! ಎಂದೇ ಹೇಳುತ್ತಾನೆ. ಆದ್ದರಿಂದಲೇ ವೇದದಲ್ಲಿ '' ದೇವತೆಗಳು ಮೂವತ್ತು ಮೂರು ಎನ್ನಲು ಓಮ್ ! ಎಂದನು'' (ಬೃ. ೩-೯-೧) ಎಂದು ಮುಂತಾಗಿ[2] (ಪ್ರಯುಕ್ತವಾಗಿರುತ್ತದೆ). ಆದ್ದರಿಂದಲೇ ಲೋಕದಲ್ಲಿ

---

1. ಈ ಆ। ವಾ।। ಪಾಠವೇ ಮೇಲು.

2 ಯಾಜ್ಞವಲ್ಕ್ಯನನ್ನು ವಿದಗ್ಧಶಾಕಲ್ಯನು ದೇವತೆಗಳು ಎಷ್ಟು ? ಎಂದು ಕೇಳಲು ಮೂವತ್ತು ಮೂರು ಎಂದು ಅವನು ಉತ್ತರವನ್ನು ಕೊಟ್ಟನು ; ಶಾಕಲ್ಯನು ಅದಕ್ಕೆ ಓಮ್ (ಸರಿ) ಎಂದು ಒಪ್ಪಿಗೆಯನ್ನು ಸೂಚಿಸಿದನು. ಈ ಉದಾಹೃತಕಂಡಿಕೆಯಲ್ಲಿ ಓಮ್ ! ಎಂಬುದನ್ನು ಒಪ್ಪಿಗೆಯನ್ನು ತಿಳಿಸುವದಕ್ಕೆ ಬಹಳಸಲ ಪ್ರಯೋಗಿಸಿದೆ.

'ಈ ನಿನ್ನ ಧನವನ್ನು ತೆಗೆದುಕೊಳ್ಳುತ್ತೇನೆ' ಎಂದು ಹೇಳಿದರೆ 'ಓಮ್ !' ಎನ್ನುತ್ತಾನೆ[1]. ಆದ್ದರಿಂದ (ಏಷಾ ಉ ಏವ = ಏಷೈವ) ಈ ಅನುಜ್ಞೆ ಎಂಬುದೇ ಸಮೃದ್ಧಿಯು ; ಅನುಜ್ಞೆ ಎನ್ನುವರಲ್ಲ, ಅದು ಸಮೃದ್ಧಿಯೇ ; ಏಕೆಂದರೆ ಅನುಜ್ಞೆಯು ಆ (ಸಮೃದ್ಧಿಯ) ಕಾರಣದಿಂದ (ಆಗುತ್ತದೆ). ಸಮೃದ್ಧನಾಗಿರುವವನಲ್ಲವೆ, ಓಮ್ ! -ಎಂದು ಅನುಜ್ಞೆಯನ್ನು ಕೊಡುತ್ತಾನೆ ? ಆದ್ದರಿಂದ ಓಂಕಾರವು ಸಮೃದ್ಧಿ ಎಂಬ ಗುಣವುಳ್ಳದ್ದು ಎಂದರ್ಥ.

ಸಮೃದ್ಧಿಗುಣವುಳ್ಳ (ಓಂಕಾರವನ್ನು) ಉಪಾಸನೆಮಾಡುವದರಿಂದ ಆ ಧರ್ಮವುಳ್ಳವನಾಗಿ ಯಜಮಾನನಿಗೆ ಕಾಮಗಳನ್ನು ಸಮೃದ್ಧಿಗೊಳಿಸುವವನಾಗುವನು. 'ಯಾವ (ಉದ್ಗಾತೃವು) ಹೀಗೆಂದು ಅರಿತುಕೊಂಡು ಉದ್ಗೀಥವೆಂಬ ಅಕ್ಷರವನ್ನು ಉಪಾಸನೆಮಾಡುವನೋ' ಎಂದು ಮುಂತಾಗಿರುವ (ಮಂತ್ರಭಾಗವನ್ನು) ಹಿಂದಿನಂತೆ (ವ್ಯಾಖ್ಯಾನಮಾಡಿಕೊಳ್ಳಬೇಕು).

ಓಂಕಾರದ ಸ್ತುತಿ

(ಉಪನಿಷತ್ತು)

ತೇನೇಯಂ ತ್ರಯೀ ವಿದ್ಯಾ ವರ್ತತ ಓಮಿತ್ಯಾಶ್ರಾವಯತ್ಯೋಮಿತಿ ಶಗ್ಂಸತ್ಯೋಮಿತ್ಯುದ್ಗಾಯತ್ಯೇತಸ್ಯೈವಾಕ್ಷರಸ್ಯಾಪಚಿತ್ಯೈ ಮಹಿಮ್ನಾ ರಸೇನ ॥೯॥

೯. ಆದರಿಂದ ಈ ತ್ರಯೀವಿದ್ಯೆಯು ನಡೆಯುತ್ತದೆ. ಓಮ್ ! ಎಂದು ಆಶ್ರವಣಮಾಡುತ್ತಾನೆ ; ಓಮ್ ! ಎಂದು ಶಂಸನಮಾಡುತ್ತಾನೆ ; ಓಮ್ ! ಎಂದು ಉದ್ಗಾನಮಾಡುತ್ತಾನೆ. (ಇದೆಲ್ಲ) ಈ ಅಕ್ಷರದ ಅಪಚಿತಿಗೇ. ಮಹಿಮೆಯಿಂದಲೂ ರಸದಿಂದಲೂ (ವಿದ್ಯೆಯು ನಡೆಯುತ್ತದೆ).

ವೈದಿಕಕರ್ಮವೆಲ್ಲ ಓಂಕಾರಪೂರ್ವಕವೇ

(ಭಾಷ್ಯ)

೧೫.ಅಥ ಇದಾನೀಮ್ ಅಕ್ಷರಂ ಸ್ತೌತಿ ಉಪಾಸ್ಯತ್ವಾತ್ ಪ್ರರೋಚನಾರ್ಥಮ್। ಕಥಮ್ ? ತೇನ ಅಕ್ಷರೇಣ ಪ್ರಕೃತೇನ ಇಯಮ್ ಋಗ್ವೇದಾದಿಲಕ್ಷಣಾ ತ್ರಯೀ ವಿದ್ಯಾ।

1. ವೇದದಲ್ಲಿಯೇ ಅಲ್ಲದೆ ಸಾಧಾರಣಸಂಸ್ಕೃತಭಾಷೆಯಲ್ಲಿಯೂ ಈ ಅರ್ಥದಲ್ಲಿ ಓಂಕಾರಕ್ಕೆ ಪ್ರಯೋಗವಿದೆ.

ತ್ರಯೀವಿದ್ಯಾವಿಹಿತಂ ಕರ್ಮ ಇತ್ಯರ್ಥಃ । ನ ಹಿ ತ್ರಯೀವಿದ್ಯೈವ ಆಶ್ರಾವಣಾದಿಭಿರ್ವರ್ತತೇ । ಕರ್ಮ ತು ತಥಾ ಪ್ರವರ್ತತ ಇತಿ ಪ್ರಸಿದ್ಧಮ್ । ಕಥಮ್ ? ಓಮಿತಿ ಆಶ್ರಾವಯತಿ ಓಮಿತಿ ಶಂಸತಿ ಓಮಿತಿ ಉದ್ಗಾಯತಿ ಇತಿ। ಲಿಙ್ಗಾಚ್ಚ ಸೋಮಯಾಗೇ ಇತಿ ಗಮ್ಯತೇ । ತಚ್ಚ ಕರ್ಮ ಏತಸ್ಯೈವ ಅಕ್ಷರಸ್ಯ ಅಪಚಿತ್ಯೈ ಪೂಜಾರ್ಥಮ್ । ಪರಮಾತ್ಮಪ್ರತೀಕಂ ಹಿ ತತ್ । ತದಪಚಿತಿಃ ಪರಮಾತ್ಮನ ಏವ ಸಾ[1]। ''ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ'' (ಗೀ. ೧೮-೪೬) ಇತಿ ಸ್ಮೃತೇಃ। ಮಹಿಮ್ನಾ ರಸೇನ । ಕಿಂ ಚ ಏತಸ್ಯೈವ ಅಕ್ಷರಸ್ಯ ಮಹಿಮ್ನಾ ಮಹತ್ತ್ವೇನ ಋತ್ವಿಗ್ಯಜಮಾನಾದಿಪ್ರಾಣೈಃ ಇತ್ಯರ್ಥಃ । ತಥಾ ಏತಸ್ಯೈವ ಅಕ್ಷರಸ್ಯ ರಸೇನ ವ್ರೀಹಿಯವಾದಿರಸನಿರ್ವೃತ್ತೇನ ಹವಿಷಾ ಇತ್ಯರ್ಥಃ । ಯಾಗಹೋಮಾದಿ ಅಕ್ಷರೇಣ ಕ್ರಿಯತೇ । ತಚ್ಚ ಆದಿತ್ಯಮ್ ಉಪತಿಷ್ಠತೇ । ತತೋ ವೃಷ್ಟ್ಯಾದಿಕ್ರಮೇಣ ಪ್ರಾಣಃ ಅನ್ನಂ ಜಾಯತೇ । ಪ್ರಾಣೈಃ ಅನ್ನೇನ ಚ ಯಜ್ಞಸ್ತಾಯತೇ । ಅತ ಉಚ್ಯತೇ ಅಕ್ಷರಸ್ಯ ಮಹಿಮ್ನಾ ರಸೇನ ಇತಿ ॥

(ಭಾಷ್ಯಾರ್ಥ)

ಇನ್ನು ಈಗ (ಈ) ಅಕ್ಷರವನ್ನು ಸ್ತೋತ್ರಮಾಡಲಾಗುತ್ತದೆ ; ಏಕೆಂದರೆ (ಅದೇ) ಉಪಾಸ್ಯವಾಗಿದೆಯಾಗಿ (ಅದರಲ್ಲಿ) ಅಭಿರುಚಿಯನ್ನುಂಟುಮಾಡುವದಕ್ಕಾಗಿ (ಅದನ್ನು ಹೊಗಳಬೇಕಾಗಿದೆ). ಹೇಗೆಂದರೆ ಪ್ರಕೃತವಾದ ಈ ಅಕ್ಷರದಿಂದ ಈ ಋಗ್ವೇದವೇ ಮುಂತಾದ ರೂಪದ ತ್ರಯೀವಿದ್ಯೆಯು, ಎಂದರೆ ತ್ರಯೀವಿದ್ಯೆಯಲ್ಲಿ ವಿಹಿತವಾಗಿರುವ ಕರ್ಮವು ಎಂದರ್ಥ. ಏಕೆಂದರೆ, ಆಶ್ರವಣವೇ ಮುಂತಾದವುಗಳಿಂದ ತ್ರಯೀವಿದ್ಯೆಯೇ ನಡೆಯುವದಿಲ್ಲ ; (ವಿದ್ಯಾವಿಹಿತವಾದ) ಕರ್ಮವಾದರೆ ಹಾಗೆ ನಡೆಯುತ್ತದೆ ಎಂಬುದು ಪ್ರಸಿದ್ಧ ಅದು ಹೇಗೆಂದರೆ, ಓಮ್ ! -ಎಂದು ಆಶ್ರವಣಮಾಡುತ್ತಾನೆ, ಓಮ್ ! -ಎಂದು ಶಂಸನಮಾಡುತ್ತಾನೆ, ಓಮ್ ! - ಎಂದು ಉದ್ಗಾನಮಾಡುತ್ತಾನೆ- ಎಂಬ (ಈ) ಲಿಂಗದಿಂದ ಸೋಮಯಾಗವು[2] ಎಂದು ತಿಳಿಯಬೇಕಾಗಿದೆ.

ಆ ಕರ್ಮವು ಕೂಡ ಈ ಅಕ್ಷರದ ಅಪಚಿತಿಗಾಗಿಯೇ, ಪೂಜೆಗಾಗಿಯೇ. ಏಕೆಂದರೆ ಈ (ಅಕ್ಷರವು) ಪರಮಾತ್ಮನಿಗೆ ಪ್ರತೀಕವು ; ಇದರ ಆ ಅಪಚಿತಿ ಎಂಬುದು

1. ಸ್ಯಾತ್ ಎಂಬ ಆ। ಆ। ಪಾಠವು ಅನವಶ್ಯ.
2. ತೈ. ೧-೮ನ್ನು ನೋಡಿರಿ. ಅಧ್ವರ್ಯು, ಹೋತೃ, ಉದ್ಗಾತೃ- ಇವರು ಒಟ್ಟು ಸೇರಿದ ಕರ್ಮಗಳನ್ನು ಇಲ್ಲಿ ಹೇಳಿರುವದರಿಂದ ಅಗ್ನಿಷ್ಟೋಮಾದಿಸೋಮಯಾಗವನ್ನೇ ಇಲ್ಲಿ ಹೇಳಿದೆಯೆಂದು ಗೊತ್ತಾಗುತ್ತದೆ ಎಂದರ್ಥ.

ಪರಮಾತ್ಮನ (ಅಪಚಿತಿ)ಯೇ. ''ತನ್ನ ಕರ್ಮದಿಂದ ಆ (ಪರಮಾತ್ಮನನ್ನು) ಅಭ್ಯರ್ಚನೆಮಾಡಿದರೆ ಮಾನವನು ಸಿದ್ಧಿಯನ್ನು ಹೊಂದುತ್ತಾನೆ'' (ಗೀ. ೧೮-೪೬) ಎಂಬ ಸ್ಮೃತಿಯಿಂದ (ಇದು ಸಿದ್ಧವಾಗುತ್ತದೆ)[1].

'ಮಹಿಮೆಯಿಂದಲೂ ರಸದಿಂದಲೂ'[2] ಮತ್ತು ಇದೇ ಅಕ್ಷರದ ಮಹಿಮೆಯಿಂದಲೂ ಮಹತ್ತ್ವದಿಂದಲೂ, ಎಂದರೆ ಋತ್ವಿಜರು, ಯಜಮಾನ- ಮುಂತಾದವರ ಪ್ರಾಣಗಳಿಂದ ಎಂದರ್ಥ. ಹಾಗೂ ಇದೇ ಅಕ್ಷರದ ರಸದಿಂದಲೂ ಎಂದರೆ ವ್ರೀಹಿಯವಾದಿರೂಪದಿಂದ ಆಗಿರುವ ಹವಿಸ್ಸಿನಿಂದಲೂ ಎಂದರ್ಥ. (ಇವುಗಳಿಂದ) ಯಾಗಹೋಮಾದಿಗಳು (ಓಂಕಾರವೆಂಬೀ) ಅಕ್ಷರದ (ಸಹಾಯ)ದಿಂದ ಮಾಡಲ್ಪಡುತ್ತದೆ[3]. ಅದು ಆದಿತ್ಯನನ್ನು ಹೋಗಿ ಸೇರುತ್ತದೆ. ಆದರಿಂದ ವೃಷ್ಟ್ಯಾದಿ ಕ್ರಮದಿಂದ ಪ್ರಾಣವೂ ಅನ್ನವೂ ಉಂಟಾಗುತ್ತದೆ[4]. (ಆ) ಪ್ರಾಣಗಳಿಂದಲೂ ಅನ್ನದಿಂದಲೂ ಯಜ್ಞವನ್ನು ಮಾಡುತ್ತಾರೆ. ಆದ್ದರಿಂದ ಅಕ್ಷರದ ಮಹಿಮೆಯಿಂದಲೂ ರಸದಿಂದಲೂ (ನಡೆಯುತ್ತದೆ) ಎಂದು ಹೇಳಿದೆ[5].

ಓಂಕಾರೋಪಾಸನಾಸಮುಚ್ಚಿತಕರ್ಮವು ವೀರ್ಯವತ್ತರ

(ಉಪನಿಷತ್ತು)

ತೇನೋಭೌ ಕುರುತೋ ಯಶ್ಚೈತದೇವಂ ವೇದ ಯಶ್ಚ ನ ವೇದ। ನಾನಾ ತು ವಿದ್ಯಾ ಚಾವಿದ್ಯಾ ಚ ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರಂ ಭವತೀತಿ ಖಲ್ವೇತಸ್ಯೈವಾಕ್ಷರಸ್ಯೋಪವ್ಯಾಖ್ಯಾನಂ ಭವತಿ ॥೧೦॥

1. ಕರ್ಮಕ್ಕೆ ಓಂಕಾರವು ಬೇಕಾಗಿರುವದರಿಂದ ಓಂಕಾರದ ಮೂಲಕವಾಗಿ ಪರಮೇಶ್ವರನ ಆರಾಧನೆಯಾದಂತಾಯಿತು. ಆದ್ದರಿಂದ ಇಲ್ಲಿ ಓಂಕಾರವನ್ನು ಹೊಗಳಿರುವದು ಪರಮಾತ್ಮನನ್ನೇ ಗೌರವಿಸಿದಂತೆ - ಎಂದು ಭಾವ.
2. ಈ ಪ್ರತೀಕವು ವಾ॥ ಪಾಠದಲ್ಲಿಲ್ಲ. ಇದಿಲ್ಲದಿದ್ದರೂ ಕಿಂಚ ಎಂಬ ಮಾತೇ ಮುಂದಿನ ವಾಕ್ಯಕ್ಕೆ ಅವತರಣಿಕೆಯಾಗುತ್ತದೆ.
3. ಗೀ. ೧೭-೨೪ನ್ನು ನೋಡಿರಿ. 4. ಈ ಅಭಿಪ್ರಾಯಕ್ಕೆ ಮನು. ೩-೭೬ನ್ನು ನೋಡಿರಿ
5. ಓಂಕಾರಪೂರ್ವಕವಾಗಿ ಮಾಡಿದ ಯಜ್ಞದಿಂದಲೇ ಪ್ರಾಣಗಳೂ ಅನ್ನವೂ ಉಂಟಾಗಿ ಮತ್ತೆ ಯಜ್ಞಕ್ಕೆ ಉಪಕರಣವಾಗುವವಾದ್ದರಿಂದ ಓಂಕಾರದ ಮಹಿಮೆಯಿಂದಲೂ ರಸದಿಂದಲೂ ಕರ್ಮವಾಗುತ್ತದೆ ಎಂದಿದೆ - ಎಂದು ಅಭಿಪ್ರಾಯ.

೧೦. ಅದರಿಂದ ಯಾವನು ಇದನ್ನು ಹೀಗೆಂದು ಅರಿತುಕೊಂಡಿರುವನೋ (ಅವನು), ಮತ್ತು ಯಾವನು ಅರಿತುಕೊಂಡಿಲ್ಲವೋ (ಅವನು-ಹೀಗೆ) ಇಬ್ಬರೂ (ಕರ್ಮವನ್ನು) ಮಾಡುತ್ತಾರೆ. ವಿದ್ಯೆಯೂ ಅವಿದ್ಯೆಯೂ ನಾನಾ ಆಗಿಯೇ (ಇರುತ್ತವೆ). ಯಾವದನ್ನು ವಿದ್ಯೆಯಿಂದ ಮಾಡುತ್ತಾನೋ ಶ್ರದ್ಧೆಯಿಂದಲೂ ಉಪನಿಷತ್ತಿನಿಂದಲೂ (ಮಾಡುತ್ತಾನೋ) ಅದೇ ವೀರ್ಯವತ್ತರವಾಗಿರುತ್ತದೆ. ಹೀಗೆಂಬುದೇ ಈ ಅಕ್ಷರದ ಉಪವ್ಯಾಖ್ಯಾನವಾಗಿರುತ್ತದೆ.

ಅಕ್ಷರವಿಜ್ಞಾನದಿಂದಾಗುವ ಫಲ

(ಭಾಷ್ಯ)

೧೬. ತತ್ರ ಅಕ್ಷರವಿಜ್ಞಾನವತಃ ಕರ್ಮ ಕರ್ತವ್ಯಮಿತಿ ಸ್ಥಿತಮ್ ಆಕ್ಷಿಪತಿ । ತೇನ ಅಕ್ಷರೇಣ ಉಭೌ ಕುರುತಃ ಯಶ್ಚೈತದಕ್ಷರಮ್ ಏವಂ ಯಥಾವ್ಯಾಖ್ಯಾತಂ[1] ವೇದ ಯಶ್ಚ ಕರ್ಮಮಾತ್ರವಿತ್ ಅಕ್ಷರಯಾಥಾತ್ಮ್ಯಂ ನ ವೇದ ತೌ ಉಭೌ ಕುರುತಃ ಕರ್ಮ । ತಯೋಶ್ಚ ಕರ್ಮಸಾಮರ್ಥ್ಯಾದೇವ ಫಲಂ ಸ್ಯಾತ್ ಕಿಂ ತತ್ರ ಅಕ್ಷರಯಾಥಾತ್ಮ್ಯವಿಜ್ಞಾನೇನ ಇತಿ ? ದೃಷ್ಟಂ ಹಿ ಲೋಕೇ ಹರೀತಕೀಂ ಭಕ್ಷಯತೋಃ ತದ್ರಸಾಭಿಜ್ಞೇತರಯೋಃ ವಿರೇಚನಮ್ । ನೈವಮ್ । ಯಸ್ಮಾತ್ ನಾನಾ ತು ವಿದ್ಯಾ ಚ ಅವಿದ್ಯಾ ಚ । ಭಿನ್ನೇ ಹಿ ವಿದ್ಯಾವಿದ್ಯೇ । ತುಶಬ್ದಃ ಪಕ್ಷವ್ಯಾವೃತ್ತ್ಯರ್ಥಃ । ನೋಂಕಾರಸ್ಯ ಕರ್ಮಾಙ್ಗತ್ವಮಾತ್ರವಿಜ್ಞಾನಮೇವ ರಸತಮಾಪಿತಮೃದ್ಧಿಗುಣವದ್ವಿಜ್ಞಾನಮ್ । ಕಿಂ ತರ್ಹಿ ತತೋಽಭ್ಯಧಿಕಮ್ । ತಸ್ಮಾತ್ ತದಙ್ಗಾಧಿಕ್ಯಾತ್ ತತ್ಫಲಾಧಿಕ್ಯಂ ಯುಕ್ತಮ್ ಇತ್ಯಭಿಪ್ರಾಯಃ। ದೃಷ್ಟಂ ಹಿ ಲೋಕೇ ವಣಿಕ್ಕಬರಯೋಃ ಪದ್ಮರಾಗಾದಿಮಣಿವಿಕ್ರಯೇ ವಣಿಜೋ ವಿಜ್ಞಾನಾಧಿಕ್ಯಾತ್ ಫಲಾಧಿಕ್ಯಮ್ । ತಸ್ಮಾತ್ ಯದೇವ ವಿದ್ಯಯಾ ವಿಜ್ಞಾನೇನ ಯುಕ್ತಃ ಸನ್ ಕರೋತಿ ಕರ್ಮ ಶ್ರದ್ಧಯಾ ಶ್ರದ್ಧಾನಶ್ಚ ಸನ್ ಉಪನಿಷದಾ ಯೋಗೇನ ಯುಕ್ತಶ್ಚ ಇತ್ಯರ್ಥಃ । ತದೇವ ಕರ್ಮ ವೀರ್ಯವತ್ತರಮ್ ಅವಿದ್ವತ್ಕರ್ಮಣೋಽಧಿಕಫಲಂ ಭವತೀತಿ ॥

(ಭಾಷ್ಯಾರ್ಥ)

ಇಲ್ಲಿ (ಈ) ಅಕ್ಷರದ ವಿಜ್ಞಾನವಿರುವವನಾಗಿ ಕರ್ಮವನ್ನು ಮಾಡಬೇಕು ಎಂದು

1. ಈ ವಾ॥ ಪಾಠವೇ 'ವ್ಯಾಖ್ಯಾತಮ್' ಎಂಬ ಪಾರಕ್ಕಿಂತ ಮೇಲು.

ಸಿದ್ಧವಾಯಿತಷ್ಟೆ[1]. (ಇದನ್ನು) ಆಕ್ಷೇಪಿಸಲಾಗುತ್ತದೆ. ಆ ಅಕ್ಷರದಿಂದ ಇಬ್ಬರೂ - (ಇಲ್ಲಿ) ವಿವರಿಸಿರುವಂತೆ ಯಾವನು ಹೀಗೆಂದು ಅರಿತಿರುವನೋ, ಮತ್ತು ಯಾವನು ಕರ್ಮವೊಂದನ್ನೇ ಅರಿತಿರುವವನಾಗಿ ಅಕ್ಷರದ ತತ್ತ್ವವನ್ನು ಅರಿತಿರುವದಿಲ್ಲವೋ, ಆ ಇಬ್ಬರೂ-ಕರ್ಮವನ್ನು ಮಾಡುತ್ತಾರೆ. ಅವರಿಬ್ಬರಿಗೂ ಕರ್ಮದ ಸಾಮರ್ಥ್ಯದಿಂದಲೇ ಫಲವಾಗುವದು. ಇಲ್ಲಿ ಅಕ್ಷರದ ತತ್ತ್ವವನ್ನು ಅರಿತುಕೊಳ್ಳುವದರಿಂದ (ಆಗಬೇಕಾಗಿರು)ವದೇನು ? ಅಳಲೆಕಾಯಿಯನ್ನು ತಿನ್ನುವವರಿಗೆ- ಅದರ ರಸದ ವಿಜ್ಞಾನವಿರುವವನು, (ಅದಿಲ್ಲದ) ಮತ್ತೊಬ್ಬನು, ಇಬ್ಬರಿಗೂ- ಭೇದಿಯಾಗುವದು ಕಂಡಿದೆಯಲ್ಲ[2] !

(ಪರಿಹಾರ) :- ಹಾಗಲ್ಲ. ಏಕೆಂದರೆ ವಿದ್ಯಾವಿದ್ಯೆಗಳು ನಾನಾ (ಆಗಿಯೇ) ಇರುತ್ತವೆ ; ವಿದ್ಯಾವಿದ್ಯೆಗಳು ಬೇರೆಬೇರೆಯೇ ಅಲ್ಲವೆ ? (ಮೂಲದಲ್ಲಿರುವ) ತುಶಬ್ದವು (ಪೂರ್ವ)ಪಕ್ಷವನ್ನು ತಳ್ಳಿಹಾಕುವದಕ್ಕೆ (ಬಂದಿದೆ). ಓಂಕಾರವು ಕರ್ಮಾಂಗಮಾತ್ರವೆಂಬ ಅರಿವೇ (ಅದು). ರಸತಮಾಪ್ತಿಸಮೃದ್ಧಿಗುಣವುಳ್ಳದ್ದೆಂಬ ಅರಿವಲ್ಲ ; ಮತ್ತೇನೆಂದರೆ ಅದಕ್ಕಿಂತ ಹೆಚ್ಚಾದದ್ದು[3]. ಆದ್ದರಿಂದ ಆ (ಕರ್ಮದ) ಅಂಗವು ಹೆಚ್ಚಾಗಿರುವದರಿಂದ ಅದರ ಫಲವೂ ಹೆಚ್ಚಾಗಬೇಕೆಂಬುದು ಯುಕ್ತ ಎಂದು ಅಭಿಪ್ರಾಯ. ಲೋಕದಲ್ಲಿ ವೈಶ್ಯನು, ಬೇಡರವನು-ಇಬ್ಬರೂ ಪದ್ಮರಾಗವೇ ಮುಂತಾದ ರತ್ನಗಳನ್ನು ಮಾರುವದರಲ್ಲಿ ವೈಶ್ಯನಿಗೆ ತಿಳಿವಳಿಕೆಯು ಹೆಚ್ಚಾಗಿರುವದರಿಂದ ಫಲವೂ ಹೆಚ್ಚಾಗಿರುವದೆಂಬುದು ಕಂಡಿದೆಯಲ್ಲವೆ ?[4]

ಆದ್ದರಿಂದ ಯಾವ ಕರ್ಮವನ್ನು ವಿದ್ಯೆಯಿಂದ ಎಂದರೆ (ಗುಣ) ವಿಜ್ಞಾನದಿಂದ ಕೂಡಿದವನಾಗಿ ಮಾಡುತ್ತಾನೋ ಶ್ರದ್ಧೆಯಿಂದ ಶ್ರದ್ಧೆಯುಳ್ಳವನಾಗಿ ಉಪನಿಷತ್ತಿನಿಂದಲೂ ಎಂದರೆ ಯೋಗದಿಂದಲೂ ಕೂಡಿ (ಮಾಡಿರುತ್ತಾನೋ) ಎಂದರ್ಥ. ಆ ಕರ್ಮವೇ ವೀರ್ಯವತ್ತರವಾಗಿರುತ್ತದೆ, ಅಜ್ಞನ ಕರ್ಮಕ್ಕಿಂತಲೂ ಫಲವುಳ್ಳದ್ದಾಗಿರುತ್ತದೆ.

1. ಹಿಂದಿನ ಕಂಡಿಕೆಯಲ್ಲಿ ತ್ರಯೀವಿದ್ಯೆಗೆ ಅಂಗವಾಗಿ ಓಂಕಾರವಿಜ್ಞಾನವನ್ನು ಹೊಗಳಿರುವದರಿಂದ ಹೀಗೆಂದು ಸಿದ್ಧವಾಗಿರುತ್ತದೆ.
2. ಇಲ್ಲಿ ಅಳಲೆಕಾಯಿ ಎಂಬ ಪದಾರ್ಥವೇ ತನ್ನ ಅರಿವನ್ನು ಬಯಸದೆ ಫಲವನ್ನು ಕೊಡುವದು ಕಂಡಿದೆಯಲ್ಲವೆ ? - ಎಂದು ಭಾವ. 3. ಅಜ್ಞನಿಗೆ ಬರಿಯ ಅಕ್ಷರವು ಕರ್ಮಕ್ಕೆ ಅಂಗ, ವಿಜ್ಞಾನವುಳ್ಳವನಿಗೆ ವಿಜ್ಞಾನಸಹಿತವಾದ ಓಂಕಾರವು ಅಂಗ
4. ಈ ಉದಾಹರಣೆಯಲ್ಲಿ ವಿಜ್ಞಾನವೇ ಮಾರಾಟವೆಂಬ ಕರ್ಮಕ್ಕೆ ಅಂಗವಾಗಿದೆ ; ಅಳಲೆಕಾಯಿಯ ದೃಷ್ಟಾಂತದಲ್ಲಿ ತಿಳಿವಳಿಕೆಯೇ ಭಕ್ಷಣಾಂಗವಲ್ಲ - ಎಂದು ಭಾವ.

ಉಪಾಸಕನಲ್ಲದವನಿಗೂ ಕರ್ಮದಲ್ಲಿ ಅಧಿಕಾರ

(ಭಾಷ್ಯ)

೧೭. ವಿದ್ವತ್ಕರ್ಮಣೋ ವೀರ್ಯವತ್ತರತ್ವವಚನಾತ್[1] ಅವಿದುಷೋಽಪಿ ಕರ್ಮ ವೀರ್ಯವದೇವ ಭವತಿ ಇತ್ಯಭಿಪ್ರಾಯಃ। ನ ಚ ಅವಿದುಷಃ ಕರ್ಮಣಿ ಅನಧಿಕಾರಃ। ಔಷಸ್ತ್ಯೇ ಕಾಣ್ಡೇ ಅವಿದುಷಾಮಪಿ ಆರ್ತ್ವಿಜ್ಯದರ್ಶನಾತ್ ॥

(ಭಾಷ್ಯಾರ್ಥ)

ಉಪಾಸಕನ ಕರ್ಮವು ವೀರ್ಯವತ್ತರವೆಂದು ಹೇಳಿರುವದರಿಂದ ಅಜ್ಞನಾದವನ ಕರ್ಮವೂ ವೀರ್ಯವತ್ತೇ ಆಗಿರುತ್ತದೆ ಎಂದು ಅಭಿಪ್ರಾಯ. (ಹೀಗಲ್ಲದೆ ಉಪಾಸನೆಯ) ಅರಿವಿಲ್ಲದವನಿಗೆ ಕರ್ಮದಲ್ಲಿ ಅಧಿಕಾರವಿಲ್ಲ ಎನ್ನಲಾಗದು. ಏಕೆಂದರೆ ಔಷಸ್ತ್ಯಕಾಂಡದಲ್ಲಿ ಅಜ್ಞರೂ ಋತ್ವಿಜರಾಗಿದ್ದದ್ದು ಕಂಡುಬರುತ್ತದೆ[2].

ಗುಣತ್ರಯವಿಶಿಷ್ಟವೆಂದು ವಿಧಿಸಿರುವ ಒಂದೇ ಉಪಾಸನೆಯಿದು

(ಭಾಷ್ಯ)

೧೮. ರಸತಮಾಪ್ತಿಸಮೃದ್ಧಿಗುಣವದಕ್ಷರಮ್ ಇತ್ಯೇಕಮುಪಾಸನಮ್ । ಮಧ್ಯೇ ಪ್ರಯತ್ನಾನ್ತರಾದರ್ಶನಾತ್ । ಅನೇಕೈರ್ಹಿ ವಿಶೇಷಣೈರನೇಕಧಾ ಉಪಾಸ್ಯತ್ವಾತ್ ॥

(ಭಾಷ್ಯಾರ್ಥ)

ರಸತಮತ್ವ, ಆಪ್ತಿ, ಸಮೃದ್ಧಿ- ಎಂಬ ಗುಣಗಳುಳ್ಳದ್ದು (ಈ) ಅಕ್ಷರವು ಎಂದು (ಚಿಂತಿಸಬೇಕೆಂದು ಇಲ್ಲಿ) ಒಂದೇ ಉಪಾಸನೆಯು (ವಿಹಿತವಾಗಿರುತ್ತದೆ). ಏಕೆಂದರೆ ನಡುವೆ ಮತ್ತೊಂದು (ವಿಧಿಯ) ಪ್ರಯತ್ನವು ಕಂಡುಬಂದಿರು-

---

1. 'ವೀರ್ಯವತ್ತರ' ಎಂಬುದಕ್ಕಿಂತ ಈ ಪಾಠವೇ ಮೇಲು ; ಅಥವಾ ವೀರ್ಯವತ್ತರ ಎಂಬುದನ್ನೇ ಭಾವಪ್ರಧಾನವಾದ ಪ್ರಯೋಗವೆಂದು ಎಣಿಸಿದರೆ ಅದಕ್ಕೂ ಇದೇ ಅರ್ಥವು ಲಭಿಸುತ್ತದೆ.

2. ಏಕೆಂದರೆ ಉಷಸ್ತಿಯಿಂದ ವಿದ್ಯೆಯನ್ನು ಕಲಿತುಕೊಳ್ಳುವದಕ್ಕಿಂತ ಮೊದಲೇ ಆ ಋತ್ವಿಜರನ್ನು ರಾಜನು ವರಣಮಾಡಿದ್ದನು ; ೧-೧೦ರಲ್ಲಿರುವದರ ಪರಾಮರ್ಶವಿದು.

ವದಿಲ್ಲ[1]. ಅನೇಕ ವಿಶೇಷಣಗಳಿಂದ ಅನೇಕಬಗೆಯಿಂದ ಉಪಾಸ್ಯವಾಗಿರುವದಲ್ಲವೆ ?[2]

(ಭಾಷ್ಯ)

೧೯. ಖಲ್ವೇತಸ್ಯೈವ ಪ್ರಕೃತಸ್ಯ ಉದ್ಗೀಥಾಖ್ಯಸ್ಯ ಅಕ್ಷರಸ್ಯ ಉಪವ್ಯಾಖ್ಯಾನಂ ಭವತಿ ॥

(ಭಾಷ್ಯಾರ್ಥ)

(ಹೀಗೆಂಬಿದು) ಪ್ರಕೃತವಾಗಿರುವ[3] ಉದ್ಗೀಥವೆಂಬ ಹೆಸರಿನ ಇದೇ ಅಕ್ಷರದ ಉಪವ್ಯಾಖ್ಯಾನವಾಗಿರುತ್ತದೆ.

ರಸತಮಗುಣದ ವಿಷಯದ ಉಪಾಸನೆಯೊಂದು ಬೇರೆ, ಅದಕ್ಕೆ ಉಪಾಸನೆಗನುಗುಣ ವಾಗಿ ಫಲವನ್ನು ಕಲ್ಪಿಸಬೇಕು; ಆಪ್ತಿ, ಸಮೃದ್ಧಿ-ಎಂಬ ಎರಡು ಗುಣಗಳ ಉಪಾಸನೆಗಳಿಗೂ ಬೇರೆಬೇರೆಯ ಫಲವನ್ನು ಹೇಳಿರುವದರಿಂದ ಅವೆರಡೂ ಬೇರೆಬೇರೆಯ ಉಪಾಸನೆಗಳೇ- ಎಂಬ ಪಕ್ಷವನ್ನು ತಳ್ಳಿಹಾಕುವದಕ್ಕಾಗಿ ಹೀಗೆಂದು ಬರೆದಿದೆ. ಉಪಾಸೀತ ಎಂಬ ಒಂದೇ ವಿಧಿಯಿದೆ ; ಎರಡು ಕಡೆ ಫಲಶ್ರುತಿಯಿದ್ದರೂ ಅರ್ಥವಾದದಲ್ಲಿರುವ ಫಲಾಂಶವನ್ನು ಅದಕ್ಕೂ ಅನ್ವಯಿಸಬಹುದಾದ್ದರಿಂದ ಬೇರೆಬೇರೆ ವಿಧಿಗಳನ್ನು ಕಲ್ಪಿಸುವದು ವ್ಯರ್ಥ ಎಂಬುದು ಆ॥ ಗಿ॥ ಟೀಕೆಯ ಆಶಯ. ಉಪಾಸ್ಯವು ಒಂದೇ ಆಗಿರುವದರಿಂದಲೂ ಒಂದೇ ವಿಧಿವಿಭಕ್ತಿಯಿರುವದರಿಂದಲೂ ಅನೇಕಗುಣಗಳಿಂದೊಡಗೂಡಿದ ಒಂದೇ ಉಪಾಸನೆಯು ಇದೆಂದು ತಿಳಿಯಬೇಕು ; ಫಲಶ್ರುತಿಯು ಆಯಾ ಗುಣವಿಜ್ಞಾನಕ್ಕೆ ಆಗುವ ಅಂಗಫಲವನ್ನು ತಿಳಿಸುವದೆಂದೋ ಪ್ರಧಾನೋಪಾಸನೆಗೇ ಸೇರಿದ್ದೆಂದೋ ಕಲ್ಪಿಸ ಬಹುದು - ಎಂಬುದು ಭಾಷ್ಯಾಭಿಪ್ರಾಯವೆಂದು ತೋರುತ್ತದೆ.

2. ವ್ಯಾಖ್ಯಾನದಂತೆ ಇದು ಮುಂದಿನ ವಾಕ್ಯಕ್ಕೆ ಸಂಬಂಧಿಸಿದೆ. ನಾವು ಮಾಡಿರುವ ಯೋಜನೆಯಲ್ಲಿ ಒಂದೇ ಉಪಾಸ್ಯವನ್ನು ಮೂರು ವಿಧವಾಗಿ ಉಪಾಸನೆ ಮಾಡಬೇಕೆಂಬುದು ಉಪಕ್ರಮೋಪಸಂಹಾರಗಳಿಂದ ಗೊತ್ತಾಗುತ್ತಿರುವಲ್ಲಿ ಮೂರು ಬಗೆಯ ಉಪಾಸನೆಗಳನ್ನು ಕಲ್ಪಿಸುವದು ಅನ್ಯಾಯ- ಎಂಬ ವಿಶೇಷಾಭಿಪ್ರಾಯವು ಹೊರಡುತ್ತದೆ. ಸೂ. ಭಾ. ೧-೧-೩೧ರ ನ್ಯಾಯವನ್ನು ಅನುಸರಿಸಿದಂತೆಯೂ ಆಗುತ್ತದೆ. 'ತಸ್ಯೋಪವ್ಯಾಖ್ಯಾನಮ್' (೧-೧-೧) ಎಂದು ಉದ್ಗೀಥೋಂಕಾರದ ವ್ಯಾಖ್ಯಾನವು ಪ್ರಕೃತವಾಗಿತ್ತಲ್ಲ, ಅದನ್ನು ಇಲ್ಲಿ ಉಪಸಂಹಾರಮಾಡಿದೆ ಎಂಬುದನ್ನು ಏತಸ್ಯೈವ ಎಂಬ ಪ್ರಕೃತ ಪರಾಮರ್ಶಕಸರ್ವನಾಮವು ಸೂಚಿಸುತ್ತದೆ - ಎಂದು ಭಾವ. ಓಂಕಾರೋಪಾಸನೆ ಯನ್ನೇ ಬೇರೆಬೇರೆಯ ಪ್ರಕಾರಗಳಿಂದ ಮಾಡಬೇಕೆಂದು ವಿಧಿಸಿದೆ ಎಂಬುದಕ್ಕೆ ಈ ಉಪಸಂಹಾರವೂ ಒಂದು ಲಿಂಗವಾಗಿರುತ್ತದೆ.

ಒಂದನೆಯ ಅಧ್ಯಾಯ - ಎರಡನೆಯ ಖಂಡ

(ಪ್ರಾಣಾದಿತ್ಯದೃಷ್ಟಿಗಳಿಂದ ಓಂಕಾರೋಪಾಸನೆ)

ದೇವತೆಗಳು ಉದ್ಗೀಥವನ್ನು ಅನುಷ್ಠಾನಮಾಡಿದ್ದು

(ಉಪನಿಷತ್ತು)

ದೇವಾಸುರಾ ಹ ವೈ ಯತ್ರ ಸಂಯೇತಿರ ಉಭಯೇ ಪ್ರಾಜಾಪತ್ಯಾಸ್ತದ್ಧ ದೇವಾ ಉದ್ಗೀಥಮಾಜಹ್ರುರನೇನೈನಾನಭಿ-ಭವಿಷ್ಯಾಮ ಇತಿ ॥೧॥

೧. ದೇವಾಸುರರಿಬ್ಬರು ಪ್ರಾಜಾಪತ್ಯರೂ ಎಲ್ಲಿ ಸಂಯತ್ನ ಮಾಡಿದರೋ ಅಲ್ಲಿ ದೇವತೆಗಳು 'ಇದರಿಂದ ಇವರನ್ನು ಗೆಲ್ಲುವ' ಎಂದು ಉದ್ಗೀಥವನ್ನು (ಅನುಷ್ಠಾನಕ್ಕೆ) ಕೈಕೊಂಡರು.

ಕಥೆಯ ಅಭಿಪ್ರಾಯ

(ಭಾಷ್ಯ)

೨೦.ದೇವಾಸುರಾ ದೇವಾಶ್ಚಾಸುರಾಶ್ಚ। ದೇವಾಃ ದೀವ್ಯತೇರ್ದ್ಯೋತನಾರ್ಥಸ್ಯ। ಶಾಸ್ತ್ರೋದ್ಭಾಸಿತಾ ಇನ್ದ್ರಿಯವೃತ್ತಯಃ । ಅಸುರಾಃ ತದ್ವಿಪರೀತಾಃ ಸ್ವೇಷ್ವೇವ ಅಸುಷು ವಿಷ್ವಗ್ವಿಷಯಾಸು ಪ್ರಾಣನಕ್ರಿಯಾಸು ರಮಣಾತ್ ಸ್ವಾಭಾವಿಕ್ಯಃ ತಮಆತ್ಮಿಕಾ ಇನ್ದ್ರಿಯವೃತ್ತಯ ಏವ । ಹ ವಾ ಇತಿ ಪೂರ್ವವೃತ್ತೋದ್ಭಾಸಕೌ ನಿಪಾತೌ । ಯತ್ರ ಯಸ್ಮಿನ್ ನಿಮಿತ್ತೇ ಇತರೇತರವಿಷಯಾಪಹಾರಲಕ್ಷಣೇ ಸಂಯೇತಿರೇ । ಸಂಪೂರ್ವಸ್ಯ ಯತತೇಃ ಸಜ್ಞಾಮಾರ್ಥತ್ವಮ್ ಇತಿ ಸಜ್ಞಾಮಂ ಕೃತವನ್ತಃ ಇತ್ಯರ್ಥಃ । ಶಾಸ್ತ್ರೀಯಪ್ರಕಾಶವೃತ್ತ್ಯಭಿಭವನಾಯ ಪ್ರವೃತ್ತಾಃ ಸ್ವಾಭಾವಿಕ್ಯಃ ತಮೋರೂಪಾ ಇನ್ದ್ರಿಯವೃತ್ತಯೋಽಸುರಾಃ । ತಥಾ ತದ್ವಿಪರೀತಾಃ ಶಾಸ್ತ್ರಾರ್ಥವಿಷಯವಿವೇಕ ಜ್ಯೋತಿರಾತ್ಮನೋ ದೇವಾಃ ಸ್ವಾಭಾವಿಕತಮೋರೂಪಾಸುರಾಭಿಭವನಾಯ ಪ್ರವೃತ್ತಾಃ । ಇತಿ ಅನ್ಯೋನ್ಯಾಭಿಭವೋದ್ಭವರೂಪಃ ಸಜ್ಞಾಮ ಇವ ಸರ್ವಪ್ರಾಣೇಷು ಪ್ರತಿದೇಹಂ ದೇವಾಸುರಸಜ್ಞಾಮೋಽನಾದಿಕಾಲಪ್ರವೃತ್ತಃ ಇತ್ಯಭಿಪ್ರಾಯಃ । ಸ ಇಹ ಶ್ರುತ್ಯಾ ಆಖ್ಯಾಯಿಕಾರೂಪೇಣ ಧರ್ಮಾಧರ್ಮೋತ್ಪತ್ತಿವಿವೇಕವಿಜ್ಞಾನಾಯ ಕಥ್ಯತೇ ಪ್ರಾಣವಿಶುದ್ಧಿವಿಜ್ಞಾನವಿಧಿಪರತಯಾ ॥

(ಭಾಷ್ಯಾರ್ಥ)

ದೇವಾಸುರರು ಎಂದರೆ ದೇವತೆಗಳೂ ಅಸುರರೂ (ಎಂದರ್ಥ. ದೇವತೆಗಳು ಎಂಬುದು) ಬೆಳಗುವದು ಎಂಬರ್ಥದ ದಿವ್ ಧಾತುವಿನ (ರೂಪವು). ದೇವತೆಗಳು ಎಂದರೆ (ಇಲ್ಲಿ) ಶಾಸ್ತ್ರಪ್ರಕಾಶಿತವಾದ ಇಂದ್ರಿಯವೃತ್ತಿಗಳು. ಅಸುರರು ಎಂದರೆ ಅದಕ್ಕೆ ವಿಪರೀತವಾಗಿರುವ (ಇಂದ್ರಿಯವೃತ್ತಿಗಳು) ; ತಮ್ಮತಮ್ಮ ಅಸುಗಳಲ್ಲಿಯೇ ಎಂದರೆ ಸುತ್ತಲೂ ಇರುವ ವಿಷಯಗಳಲ್ಲಾಗುವ ಪ್ರಾಣನ ಕ್ರಿಯೆಗಳಲ್ಲಿಯೇ[1] ರತರಾಗಿರುವದರಿಂದ ಸ್ವಾಭಾವಿಕವಾದ ತಮೋರೂಪವಾದ ಇಂದ್ರಿಯವೃತ್ತಿಗಳೇ (ಅಸುರರು).[2] ಹ ವೈ ಎಂಬಿವು ಹಿಂದೆ ನಡೆದದ್ದನ್ನು ತಿಳಿಸುವ ನಿಪಾತಗಳು. (ಅವರು) ಎಲ್ಲಿ ಎಂದರೆ ಒಬ್ಬರೊಬ್ಬರ ವಿಷಯವನ್ನು ಅಪಹರಿಸುವದೆಂಬ ಯಾವ ನಿಮಿತ್ತದಲ್ಲಿ[3] ಸಂಯತ್ತಮಾಡಿದರೋ -ಸಮ್ ಎಂಬ (ಉಪಸರ್ಗ) ಪೂರ್ವಕವಾದ ಯತ್ (ಧಾತು)ವಿಗೆ ಸಂಗ್ರಾಮ ಎಂಬ ಅರ್ಥವಿರುವದರಿಂದ (ಸಂಯತ್ನವನ್ನು ಮಾಡಿದರೋ)- ಸಂಗ್ರಾಮವನ್ನು ಮಾಡಿದರೋ ಎಂದರ್ಥ.

ಶಾಸ್ತ್ರೀಯವಾದ ಸಾತ್ತ್ವಿಕವೃತ್ತಿಗಳನ್ನು ವಶಗೊಳಿಸಿಕೊಳ್ಳುವದಕ್ಕೆ ತೊಡಗಿದ ಸ್ವಾಭಾವಿಕವಾದ ತಮೋರೂಪವಾದ ಇಂದ್ರಿಯವೃತ್ತಿಗಳು ಅಸುರರು ; ಹೀಗೆಯೇ ಇದಕ್ಕೆ ವಿಪರೀತವಾಗಿ ಶಾಸ್ತ್ರಾರ್ಥವಿಷಯವನ್ನು ವಿವೇಚಿಸುವ ಬೆಳಕಿನ ರೂಪದ ಗಳು) ದೇವತೆಗಳು. (ಅವರು) ಸ್ವಾಭಾವಿಕವಾದ ತಮೋರೂಪರಾದ ಅಸುರರನ್ನು ವಶಗೊಳಿಸುವದಕ್ಕೆ ತೊಡಗಿರುವರು. ಹೀಗೆ ಒಬ್ಬರನ್ನೊಬ್ಬರು ವಶಗೊಳಿಸಿಕೊಂಡು ಮೇಲಕ್ಕೇಳುವ ರೂಪವಾದ (ವ್ಯಾಪಾರವು) ಸಂಗ್ರಾಮದಂತೆ (ಇರುತ್ತದೆ). ಎಲ್ಲಾ ಪ್ರಾಣಿಗಳಲ್ಲಿಯೂ ಪ್ರತಿದೇಹದಲ್ಲಿಯೂ (ಈ) ದೇವಾಸುರ ಸಂಗ್ರಾಮವು ಅನಾದಿಕಾಲದಿಂದ ಪ್ರವೃತ್ತವಾಗಿರುತ್ತದೆ ಎಂದು ಅಭಿಪ್ರಾಯ. ಇದನ್ನು ಆಖ್ಯಾಯಿಕೆಯ ರೂಪದಿಂದ ಶ್ರುತಿಯು ಧರ್ಮಾಧರ್ಮಗಳುಂಟಾಗುವದು

---

1. ಆಚ್ಚಿನಲ್ಲಿರುವ 'ಪ್ರಾಣನಕ್ರಿಯಾಸು' ಎಂಬುದು 'ಪ್ರಾಣಕ್ರಿಯಾಸು' ಎಂದಿದ್ದರೆ ಪ್ರಾಣಗಳ ವ್ಯಾಪಾರದಲ್ಲಿ ಎಂದು ಸರಳವಾಗಿ ಅರ್ಥವಾಗುವಂತೆ ಕನ್ನಡಿಸಬಹುದಾಗುತ್ತಿತ್ತು.
2. ಇಂದ್ರಿಯಗಳು ತಮ್ಮತಮ್ಮ ವಿಷಯದಲ್ಲಿಯೇ ಪ್ರವರ್ತಿಸುವ ವ್ಯಾಪಾರವೇ ಅಸು ; ಆ ಅಸುವಿನಲ್ಲಿ ರತರಾಗಿರುವದರಿಂದ ತಮೋರೂಪವೃತ್ತಿಗಳು ಅಸುರರೆನಿಸುವವು ; ಶಾಸ್ತ್ರಪ್ರಕಾಶಿತವಾದ ಇಂದ್ರಿಯವೃತ್ತಿಗಳು ಹಾಗಿಲ್ಲದ್ದರಿಂದ ದೇವತೆಗಳು.
3. ದೇವತೆಗಳು ಅಸುರರ ವಿಷಯವನ್ನು ಅಪಹರಿಸಿ ಶಾಸ್ತ್ರೀಯವಾದ ಸಂಸ್ಕಾರವ್ಯಾಪಾರವನ್ನು ಎಬ್ಬಿಸಬೇಕೆಂದೂ ಅಸುರರು ಅದನ್ನು ತಪ್ಪಿಸಿ ವಿಷಯಭೋಗದಲ್ಲಿ ತೊಡಗಿಸಬೇಕೆಂಬ ತಮೋವೃತ್ತಿಗಳನ್ನು ಎಬ್ಬಿಸಬೇಕೆಂದೂ ಪ್ರಯತ್ನಿಸುವದೇ ಯುದ್ಧನಿಮಿತ್ತ ಎಂದರ್ಥ.

(ಹೇಗೆಂಬ) ವಿವೇಕವಿಜ್ಞಾನ(ವಾಗುವ)ದಕ್ಕಾಗಿ[1] ಪ್ರಾಣವು ವಿಶುದ್ಧವಾಗಿರುವದೆಂಬ ವಿಜ್ಞಾನವನ್ನು ವಿಧಿಸುವ ತಾತ್ಪರ್ಯದಿಂದ[2] ಇಲ್ಲಿ ಉಕ್ತವಾಗಿರುತ್ತದೆ.

ದೇವತೆಗಳು ಉದ್ಗೀಥೋಪಾಸನೆಯನ್ನು ಕೈಕೊಂಡದ್ದು

(ಭಾಷ್ಯ)

೨೧. ಅತಃ ಉಭಯೇಽಪಿ ದೇವಾಸುರಾಃ ಪ್ರಜಾಪತೇರಪತ್ಯಾನಿ ಇತಿ ಪ್ರಾಜಾಪತ್ಯಾಃ । ಪ್ರಜಾಪತಿಃ ಕರ್ಮಜ್ಞಾನಾದಿಕೃತಃ ಪುರುಷಃ । ''ಪುರುಷ ಏವೋಕ್ಥಮಯಮೇವ ಮಹಾನ್ ಪ್ರಜಾಪತಿಃ'' (ಐ. ಆ. ೨-೧-೨) ಇತಿ ಶ್ರುತ್ಯನ್ತರಾತ್ । ತಸ್ಯ ಹಿ ಶಾಸ್ತ್ರೀಯಾಃ ಸ್ವಾಭಾವಿಕ್ಯಶ್ಚ ಕರಣವೃತ್ತಯಃ ವಿರುದ್ಧಾಃ ಅಪತ್ಯಾನೀವ । ತದುದ್ಭವತ್ವಾತ್ । ತತ್ ತತ್ರ ಉತ್ಕರ್ಷಾಪಕರ್ಷಲಕ್ಷಣನಿಮಿತ್ತೇ ಹ ದೇವಾಃ ಉದ್ಗೀಥಮ್ ಉದ್ಗೀಥಭಕ್ತ್ಯುಪಲಕ್ಷಿತಮ್ ಔದ್ಗಾತ್ರಂ ಕರ್ಮ ಆಜಹ್ರುಃ ಆಹೃತವನ್ತಃ । ತಸ್ಯಾಪಿ ಕೇವಲಸ್ಯ ಆಹರಣಾಸಂಭವಾತ್ ಜ್ಯೋತಿಷ್ಟೋಮಾದಿ ಆಹೃತವನ್ತಃ ಇತ್ಯಭಿಪ್ರಾಯಃ । ತತ್ ಕಿಮರ್ಥಮಾಜಹ್ರುರಿತಿ ? ಉಚ್ಯತೇ । ಅನೇನ ಕರ್ಮಣಾ ಏನಾನ್ ಅಸುರಾನ್ ಅಭಿಭವಿಷ್ಯಾಮಃ ಇತ್ಯೇವಮಭಿಪ್ರಾಯಾಃ ಸನ್ತಃ ॥

(ಭಾಷ್ಯಾರ್ಥ)

ಆದ್ದರಿಂದ ದೇವಾಸುರರಿಬ್ಬರೂ ಪ್ರಜಾಪತಿಯ ಮಕ್ಕಳಾದ್ದರಿಂದ[3] ಪ್ರಾಜಾಪತ್ಯರು. ಪ್ರಜಾಪತಿ ಎಂದರೆ ಕರ್ಮಜ್ಞಾನಗಳಲ್ಲಿ ಅಧಿಕಾರವುಳ್ಳ ಪುರುಷನು[4]; ''ಪುರುಷನು ಉಕ್ಥವು, ಇವನೇ ದೊಡ್ಡ ಪ್ರಜಾಪತಿಯು'' (ಐ. ಆ. ೨-೧-೨) ಎಂಬ ಮತ್ತೊಂದು ಶ್ರುತಿಯಿಂದ (ಅವನು ಪ್ರಜಾಪತಿ ಎಂದು ಸಿದ್ಧವಾಗುತ್ತದೆ). ಅವನಿಗಲ್ಲವೆ, ಶಾಸ್ತ್ರೀಯವಾದ ಮತ್ತು ಸ್ವಾಭಾವಿಕವಾದ ಕರಣವೃತ್ತಿಗಳು (ಒಂದಕ್ಕೊಂದು) ವಿರುದ್ಧವಾಗಿರುವ ಮಕ್ಕಳಂತೆ ಇವೆ ? ಏಕೆಂದರೆ ಅವನಿಂದ (ಅವು) ಹುಟ್ಟುವವು.

1. ಇಂದ್ರಿಯಗಳು ವಿಷಯಗಳಿಂದ ಹಿಮೆಟ್ಟಿದರೆ ಧರ್ಮವೂ, ಅವುಗಳಲ್ಲಿಯೇ ರತವಾದರೆ ಪಾಪವೂ ಆಗುವವೆಂದು ತಿಳಿಸುವದಕ್ಕಾಗಿ.
2. ಪ್ರಾಣವು ವಿಶುದ್ಧವು - ಎಂಬ ಉಪಾಸನೆಯನ್ನು ವಿಧಿಸುವದಕ್ಕಾಗಿ ಇಂದ್ರಿಯಗಳ ಸ್ವಭಾವವನ್ನು ಅನುವಾದಮಾಡಿಕೊಂಡಿದೆ.
3. ಅವನಿಂದ ಹುಟ್ಟುವರಾದ್ದರಿಂದ.
4. ಏಕೆಂದರೆ ಕರ್ಮೋಪಾಸನೆಗಳಿಂದ ಅವನೇ ಪ್ರಜಾಪತಿಯಾಗಲು ತಕ್ಕವನಾಗಿರುತ್ತಾನೆ.

(ತತ್ = ತತ್ರ) ಹೆಚ್ಚಿಗೆ, ಕೀಳ್ಕೈ - ಎಂಬ ರೂಪವಾದ ನಿಮಿತ್ತದಲ್ಲಿ[1] ದೇವತೆಗಳು ಉದ್ಗೀಥವನ್ನು-ಉದ್ಗೀಥಭಕ್ತಿಯಿಂದ ಉಪಲಕ್ಷಿತವಾದ ಔದ್ಗಾತೃಕರ್ಮವನ್ನು[2]-ಕೈಕೊಂಡರು, ಸ್ವೀಕರಿಸಿದರು (ಎಂದರ್ಥ) ; ಬರಿಯ ಆ (ಔದ್ಗಾತೃಕರ್ಮವನ್ನು) ಕೈಕೊಳ್ಳುವದು ಕೂಡ ಆಗಲಾರದಾದ್ದರಿಂದ ಜ್ಯೋತಿಷ್ಟೋಮಾದಿ (ಕರ್ಮವನ್ನು)[3] ಕೈಕೊಂಡರು - ಎಂದು ಅಭಿಪ್ರಾಯ. ಅದನ್ನು ಏತಕ್ಕೆ ಕೈಕೊಂಡರು ? ಎಂದರೆ (ಶ್ರುತಿ) ಹೇಳುತ್ತಿದೆ. ಈ ಕರ್ಮದಿಂದ ಈ ಅಸುರರನ್ನು ಗೆಲ್ಲುವೆವು - ಎಂಬ ಅಭಿಪ್ರಾಯವುಳ್ಳವರಾಗಿ (ಕೈಕೊಂಡರು).

ಘ್ರಾಣದೃಷ್ಟಿಯಿಂದ ಉದ್ಗೀಥೋಪಾಸನೆಮಾಡಿದ್ದು

(ಉಪನಿಷತ್ತು)

ತೇ ಹ ನಾಸಿಕ್ಯಂ ಪ್ರಾಣಮುದ್ಗೀಥಮುಪಾಸಾಂಚಕ್ರಿರೇ ತಗ್ಂ ಹಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ತೇನೋಭಯಂ ಜಿಘ್ರತಿ ಸುರಭಿ ಚ ದುರ್ಗನ್ಧಿ ಚ ಪಾಪ್ಮನಾ ಹ್ಯೇಷ ವಿದ್ಧಃ ॥೨॥

೨. ಆ (ದೇವತೆಗಳು) ನಾಸಿಕ್ಯಪ್ರಾಣವೆಂದು ಉದ್ಗೀಥವನ್ನು ಉಪಾಸನೆಮಾಡಿದರು. ಅದನ್ನು ಅಸುರರು ಪಾವದಿಂದ ಹೊಡೆದರು. ಆದ್ದರಿಂದ ಸುವಾಸನೆಯುಳ್ಳದ್ದನ್ನೂ ದುರ್ಗಂಧಿಯನ್ನೂ (ಅದು) ಮೂಸುತ್ತದೆ. ಏಕೆಂದರೆ ಇದು ಪಾಪದಿಂದ ವಿದ್ಧವಷ್ಟೆ?

1. ಒಬ್ಬರನ್ನೊಬ್ಬರು ಕೆಳಕ್ಕೆ ತುಳಿದುಹಾಕಿ ತಾವು ಮೇಲಕ್ಕೆ ಏಳುವದೆಂಬ ಈ ಸಂಗ್ರಾಮದಲ್ಲಿ.
2. ಉದ್ಗೀಥವೆಂಬುದು ಸಾಮದ ಒಂದಾನೊಂದು ಭಕ್ತಿಯು, ಅವಯವವು. ಅದಿಷ್ಟನ್ನೇ ಯಾವನೂ ಸ್ವತಂತ್ರವಾಗಿ ಹಾಡುವದಿಲ್ಲ ; ಉದ್ಗಾತೃವಾಗಿ ಹಾಡುತ್ತಾನಾದ್ದರಿಂದ ಇಲ್ಲಿ ಉದ್ಗೀಥವೆಂದರೆ ಉದ್ಗಾತೃವಿನ ಕರ್ಮವು ಎಂದೇ ಅಭಿಪ್ರಾಯ
3. ಬರಿಯ ಔದ್ಗಾತ್ರಕರ್ಮವು ಸ್ವತಂತ್ರವಾಗಿರುವದಿಲ್ಲ ; ಯಜ್ಞದಲ್ಲಿಯೇ ಬರುತ್ತದೆ. ಆದ್ದರಿಂದ ಔದ್ಗಾತ್ರಕರ್ಮವು ಬರುವ ಜ್ಯೋತಿಷ್ಟೋಮಾದಿಯಜ್ಞವನ್ನು ಸ್ವೀಕರಿಸಿದರು ಎಂದರ್ಥ. ಈ ಖಂಡದಲ್ಲಿ ಉದ್ಗೀಥಾವಯವವಾದ ಓಂಕಾರವನ್ನು ಪ್ರಾಣ, ಆದಿತ್ಯ-ಎಂದು ಉಪಾಸನೆಮಾಡಬೇಕೆಂದು ವಿಧಿಸಲಾಗುವದು. ಆ ಉದ್ಗೀಥವು ಔದ್ಗಾತ್ರ ಕರ್ಮದಲ್ಲಿ ನೇರಿರುತ್ತದೆ ; ಅದು ಜ್ಯೋತಿಷ್ಟೋಮಾದಿಯಜ್ಞದಲ್ಲಿಯೇ ಇರುತ್ತದೆ-ಯಾದ್ದರಿಂದ ಉದ್ಗೀಥವೆಂದರೆ ಜ್ಯೋತಿಷ್ಟೋಮಾದಿಕರ್ಮವೆಂದೇ ಅರ್ಥ.

ಘ್ರಾಣವು ಪಾಪವಿದ್ಧವಾಗಿರುತ್ತದೆ

(ಭಾಷ್ಯ)

೨೨. ಯದಾ ಚ ತದುದ್ಗೀಥಂ ಕರ್ಮ ಆಜಿಹೀರ್ಷವಃ ತದಾ ತೇ ಹ ದೇವಾಃ ನಾಸಿಕ್ಯಂ ನಾಸಿಕಾಯಾಂ ಭವಂ ಚೇತನಾವನ್ತಂ ಘ್ರಾಣಂ[1] ಪ್ರಾಣಮ್ ಉದ್ಗೀಥ ಕರ್ತಾರಮ್ ಉದ್ಗಾತಾರಮ್ ಉದ್ಗೀಥಭಕ್ತ್ಯೈ ಉಪಾಸಾಂಚಕ್ರಿರೇ ಉಪಾಸನಂ ಕೃತವನ್ತಃ ಇತ್ಯರ್ಥಃ । ನಾಸಿಕ್ಯಪ್ರಾಣದೃಷ್ಟ್ಯಾ ಉದ್ಗೀಥಾಖ್ಯಮ್ ಅಕ್ಷರಮ್ ಓಂಕಾರಮ್ ಉಪಾಸಾಂಚಕ್ರಿರೇ ಇತ್ಯರ್ಥಃ । ಏವಂ ಹಿ ಪ್ರಕೃತಾರ್ಥಪರಿತ್ಯಾಗಃ, ಅಪ್ರಕೃತಾರ್ಥೋಪಾದಾನಂ ಚ ನ ಕೃತಂ ಸ್ಯಾತ್ । 'ಖಿಲ್ವೇತಸ್ಯೈವ ಅಕ್ಷರಸ್ಯ' ಇತಿ ಓಂಕಾರೋ ಹಿ ಉಪಾಸ್ಯತಯಾ ಪ್ರಕೃತಃ । ನನು ಉದ್ಗೀಥೋಪಲಕ್ಷಿತಂ ಕರ್ಮ ಆಹೃತವನ್ತಃ ಇತ್ಯವೋಚಃ ಇದಾನೀಮೇವ[2] । ಕಥಂ ನಾಸಿಕ್ಯಪ್ರಾಣದೃಷ್ಟ್ಯಾ[3] ಓಂಕಾರಮ್ ಉಪಾಸಾಂಚಕ್ರಿರೇ ಇತ್ಯಾತ್ಥ? ನೈಷ ದೋಷಃ। ಉದ್ಗೀಥಕರ್ಮಣ್ಯೇವ ಹಿ ತತ್ಕರ್ತೃಪ್ರಾಣದೇವತಾದೃಷ್ಟ್ಯಾ ಉದ್ಗೀಥಭಕ್ತ್ಯವಯವಶ್ಚ ಓಂಕಾರಃ[4] ಉಪಾಸ್ಯತ್ವೇನ ವಿವಕ್ಷಿತಃ ನ ಸ್ವತನ್ತ್ರಃ । ಅತಃ ತಾದರ್ಥ್ಯೇನ ಕರ್ಮ ಆಹೃತವನ್ತಃ ಇತಿ ಯುಕ್ತಮೇವೋಕ್ತಮ್ । ತಮೇವಂ ದೇವೈರ್ವೃತಮ್ ಉದ್ಗಾತಾರಂ ಹ ಅಸುರಾಃ ಸ್ವಾಭಾವಿಕತಮಆತ್ಮನಃ ಜ್ಯೋತೀರೂಪಂ ನಾಸಿಕ್ಯಂ ಪ್ರಾಣಂ ದೇವಂ ಸ್ವೋತ್ಥೇನ[5] ಪಾಪ್ಮನಾ ಅಧರ್ಮಾಸಙ್ಗರೂಪೇಣ ವಿವಿಧುಃ ವಿದ್ಧವನ್ತಃ, ಸಂಸರ್ಗಂ ಕೃತವನ್ತಃ ಇತ್ಯರ್ಥಃ । ಸ ಹಿ ನಾಸಿಕ್ಯಃ ಪ್ರಾಣಃ ಕಲ್ಯಾಣಗನ್ಧಗ್ರಹಣಾಭಿಮಾನಾಸಙ್ಗಾಭಿಭೂತ ವಿವೇಕವಿಜ್ಞಾನೋ ಬಭೂವ । ಸ ತೇನ ದೋಷೇಣ ಪಾಪ್ಮಸಂಸರ್ಗೀ ಬಭೂವ । ತದಿದಮುಕ್ತಮ್ ಅಸುರಾಃ ಪಾಪ್ಮನಾ ವಿವಿಧುರಿತಿ । ಯಸ್ಮಾತ್ ಆಸುರೇಣ ಪಾಪ್ಮನಾ

1. ಇಲ್ಲಿರುವದು ಆ॥ ಪಾಠ ; ಘ್ರಾಣಪ್ರಾಣಮ್ ಎಂದೂ ಪಾಠಾಂತರವಿದೆ. 'ಪ್ರಾಣಂ ಚೇತನಾವನ್ತಂ ಘ್ರಾಣಮ್' ಎಂದು ವಾ॥ ಆ॥ ಪಾಠ.
2. 'ಇದಾನೀಮೇವಂ' ಎಂದು ವಾ॥ ಆ॥ಗಳ ಪಾಠ.
3. ಇದರ ಮುಂದೆ 'ಉದ್ಗೀಥಾಖ್ಯಮಕ್ಷರಮ್' ಎಂದು ಹೆಚ್ಚಾಗಿ ಆ॥ ವಾ॥ ಪಾಠದಲ್ಲಿದೆ.
4. ಇಲ್ಲಿ ಭಕ್ತ್ಯವಯವಶ್ಚ ಎಂಬಲ್ಲಿರುವ ಚಕಾರವು ಬೇಕಿಲ್ಲ, ಅಥವಾ ತುಶಬ್ದಾರ್ಥದಲ್ಲಿ ಉಪಯುಕ್ತವಾಗಿದೆ ಎಂದು ಭಾವಿಸಬೇಕು ಅದನ್ನು ನಾವು ಕನ್ನಡಿಸಿಲ್ಲ.
5. 'ಸ್ವೇನ' ಎಂದು ಆ॥, 'ಸ್ವಕೀಯೇನ' ಎಂದು ವಾ ॥ ; ಅರ್ಥವೇನೂ ಬೇರೆಯಾಗುವದಿಲ್ಲ.

ವಿದ್ದಃ, ತಸ್ಮಾತ್ ತೇನ ಪಾಪ್ಮನಾ ಪ್ರೇರಿತಃ ಘ್ರಾಣಃ ಪ್ರಾಣಃ[1] ದುರ್ಗನ್ಧಿ[2]ಗ್ರಾಹಕಃ ಪ್ರಾಣೇನಾಮ್ । ಅತಃ ತೇನ ಉಭಯಂ ಜಿಘ್ರತಿ ಲೋಕಃ ಸುರಭಿ ಚ ದುರ್ಗನ್ಧಿ ಚ । ಪಾಪ್ಮನಾ ಹಿ ಏಷ ಯಸ್ಮಾತ್ ವಿದ್ದಃ । ಉಭಯಗ್ರಹಣಮ್ ಅವಿವಕ್ಷಿತಮ್ । ''ಯಸ್ಯೋಭಯಂ ಹವಿರಾರ್ತಿಮಾರ್ಚ್ಛತಿ'' (ತೈ. ಬ್ರಾ. ೩-೭-೧) ಇತಿ ಯದ್ವತ್ ''ಯದೇವೇದಮಪ್ರತಿರೂಪಂ ಜಿಘ್ರತಿ'' (ಬೃ ೧-೩-೩) ಇತಿ ಸಮಾನ ಪ್ರಕರಣಶ್ರುತೇಃ ॥

(ಭಾಷ್ಯಾರ್ಥ)

ಯಾವಾಗ ಆ ಉದ್ಗೀಥಕರ್ಮವನ್ನು ಕೈಕೊಳ್ಳುವದರಲ್ಲಿದ್ದರೋ ಆಗ ಆ ದೇವತೆಗಳು ನಾಸಿಕ್ಯನಾದ ಮೂಗಿನಲ್ಲಿದ್ದ ಚೇತನಾವಂತನಾದ[3] ಘ್ರಾಣನೆಂಬ ಪ್ರಾಣನನ್ನಾಗಿ[4] ಉದ್ಗೀಥವನ್ನು ಉದ್ಗೀಥಕರ್ತೃವನ್ನು ಉದ್ಗಾತೃವನ್ನು ಉದ್ಗೀಥಭಕ್ತಿಯಿಂದ ಉಪಾಸನೆಮಾಡಿದರು.[5] ನಾಸಿಕ್ಯಪ್ರಾಣದೃಷ್ಟಿಯಿಂದ ಉದ್ಗೀಥವೆಂಬ ಹೆಸರಿನ ಅಕ್ಷರವಾದ ಓಂಕಾರವನ್ನು ಉಪಾಸನೆಮಾಡಿದರು - ಎಂದರ್ಥ. ಹೀಗೆ (ಅರ್ಥಮಾಡಿದರೇ) ಪ್ರಕೃತವಾದ ಅರ್ಥವನ್ನು ಬಿಟ್ಟು ಅಪ್ರಕೃತವಾದ ಅರ್ಥವನ್ನು ಸ್ವೀಕರಿಸಿದಂತೆ ಆಗುವದಿಲ್ಲ.[6] 'ಖಿಲ್ವೇತಸ್ಯೈವಾಕ್ಷರಸ್ಯ' (ಇದೇ ಅಕ್ಷರದ ಉಪವ್ಯಾಖ್ಯಾನವಾಗಿರುತ್ತದೆ) ಎಂದು ಓಂಕಾರವೇ ಅಲ್ಲವೆ, ಉಪಾಸ್ಯವಾಗಿ ಪ್ರಕೃತವಾಗಿರುವದು ?

(ಆಕ್ಷೇಪ) :- 'ಉದ್ಗೀಥೋಪಲಕ್ಷಿತವಾದ ಕರ್ಮವನ್ನು ಕೈಕೊಂಡರು' ಎಂದು (ನೀನೇ) ಈಗತಾನೆ[7] ಹೇಳಿದೆಯಲ್ಲ ! 'ನಾಸಿಕ್ಯಪ್ರಾಣನ ದೃಷ್ಟಿಯಿಂದ

---

1. 'ಘ್ರಾಣಪ್ರಾಣಃ' ಎಂದು ವಾ॥
2. 'ದುರ್ಗನ್ಧ ಗ್ರಾಹಕಃ' ಎಂದು ವಾ॥ ಆ॥ 3. ದೇವತಾರೂಪನಾದ.
4. ಇದು ಆ॥ ವಾತದ ಅರ್ಥ. ವಾ॥ ಪಾಠದಂತೆ ಆದರೆ 'ಪ್ರಾಣನನ್ನು ಎಂದರೆ ಚೇತನಾವಂತನಾದ ಘ್ರಾಣನನ್ನಾಗಿ' ಎಂದು ಕನ್ನಡಿಸಿಕೊಳ್ಳಬೇಕಾಗುವದು.
5. ಘ್ರಾಣವೇ ಉದ್ಗೀಥಕರ್ತೃ ಎಂದು ಭಾವಿಸಿ ಅದರ ದೃಷ್ಟಿಯಿಂದ ಓಂಕಾರವನ್ನು ಉಪಾಸನೆಮಾಡಿದರು ಎಂದರ್ಥ. ಮುಂದಿನ ಭಾಷ್ಯವಾಕ್ಯದಲ್ಲಿ ಇದನ್ನು ಸ್ಪಷ್ಟಗೊಳಿಸಿದೆ. ಘ್ರಾಣಾದಿಗಳ ಉಪಾಸನೆಯು ಪ್ರಕೃತವಲ್ಲ ; ಓಂಕಾರದ ಉಪಾಸನೆಯು ಪ್ರಕೃತ. ಆದ್ದರಿಂದ ಘ್ರಾಣಪ್ರಾಣವನ್ನು ಉದ್ಗೀಥವೆಂದು ಉಪಾಸನೆಮಾಡಿದರು - ಎಂಬಿದು ಸರಿಯಾದ ಅರ್ಥವಲ್ಲ. ಸೂ. ಭಾ. ೪-೧-೬ನ್ನು ನೋಡಿ.
'ಇದಾನೀಮೇವಂ' ಎಂಬ ವಾ॥ ಆ॥ ವಾತಕ್ಕೆ (ನೀನೇ) ಹೇಳಿದೆಯಲ್ಲ ; ಈಗ ನಾಸಿಕ್ಯ ಪ್ರಾಣದೃಷ್ಟಿಯಿಂದ ಓಂಕಾರವನ್ನು ಉಪಾಸನೆಮಾಡಿದರು - ಎಂದಿಂತು ಹೇಗೆ ಹೇಳುತ್ತಿರುವೆ ? - ಎಂದು ಅನುವಾದ.

ಓಂಕಾರವನ್ನು[1] ಉಪಾಸನೆಮಾಡಿದರು' ಎಂದು (ಈಗ) ಹೇಳುತ್ತಿರುವೆಯಲ್ಲ ! (ಇದು) ಹೇಗೆ (ಸರಿ) ?

(ಪರಿಹಾರ) :- ಇದು ದೋಷವಲ್ಲ. ಉದ್ಗೀಥಕರ್ಮದಲ್ಲಿಯೇ ಅಲ್ಲವೆ, ಅದರ ಕರ್ತೃವಾದ ಪ್ರಾಣದೇವತೆಯ ದೃಷ್ಟಿಯಿಂದ ಉದ್ಗೀಥಭಕ್ತಿಯ ಅವಯವವಾದ ಓಂಕಾರವು ಉಪಾಸ್ಯವೆಂದು ವಿವಕ್ಷಿತವಾಗಿದೆ, ಸ್ವತಂತ್ರವಾದ (ಓಂಕಾರವು ಉಪಾಸ್ಯವೆಂದೇನೂ ವಿವಕ್ಷಿತ)ವಾಗಿಲ್ಲವಲ್ಲ ! ಆದ್ದರಿಂದ ಅದಕ್ಕಾಗಿ[2] ಕರ್ಮವನ್ನು ಕೈಕೊಂಡರು - ಎಂದು ಹೇಳಿದ್ದು ಯುಕ್ತವೇ.

ಹೀಗೆ ದೇವತೆಗಳು ವರಿಸಿದ (ಆ) ಉದ್ಗಾತೃವನ್ನು ಸ್ವಾಭಾವಿಕತಮೋರೂಪರಾದ ಅಸುರರು, (ಆ) ಜ್ಯೋತೀರೂಪನಾದ ನಾಸಿಕ್ಯಪ್ರಾಣನೆಂಬ ದೇವತೆಯನ್ನು ತಮ್ಮದಾದ ಅಧರ್ಮಾಸಂಗರೂಪವಾದ ಪಾಪದಿಂದ ಹೊಡೆದರು, ಹೊಡೆದವರಾದರು, (ಅದಕ್ಕೆ) ಸಂಬಂಧಿಸಿದರು ಎಂದರ್ಥ. ಏಕೆಂದರೆ ಆ ನಾಸಿಕ್ಯಪ್ರಾಣನು ಉತ್ತಮವಾದ ಗಂಧವನ್ನು ಗ್ರಹಿಸುವ ಅಭಿಮಾನವೆಂಬ ಆಸಂಗದಿಂದ ವಿವೇಕವಿಜ್ಞಾನವನ್ನು ಕಳೆದುಕೊಂಡವನಾದನು. ಆವನು ಆ ದೋಷದಿಂದ ಪಾಪಸಂಸರ್ಗಿಯಾದನು. ಆ ಇದನ್ನೇ ಅಸುರರು ಪಾಪದಿಂದ ಹೊಡೆದರು ಎಂದು ಹೇಳಿರುತ್ತದೆ. ಹೀಗೆ ಆಸುರಪಾಪದಿಂದ ವಿದ್ಧನಾದನಷ್ಟೆ ಆದ್ದರಿಂದ ಆ ಪಾಪದಿಂದ ಪ್ರೇರಿತನಾಗಿ ಘ್ರಾಣಪ್ರಾಣನು ಪ್ರಾಣಿಗಳಿಗೆ ದುರ್ಗಂಧಿ(ವಸ್ತು)ವನ್ನು[3] ಗ್ರಹಿಸಿಕೊಡುವವ(ನಾಗಿರುತ್ತಾನೆ). ಆದ್ದರಿಂದ ಜನವು ಆ (ಪ್ರಾಣ)ನಿಂದ ಸುವಾಸನೆಯುಳ್ಳದ್ದನ್ನೂ ದುರ್ಗಂಧವುಳ್ಳದ್ದನ್ನೂ ಎರಡನ್ನೂ ಮೂಸಿ(ತಿಳಿಯು)ತ್ತಿದೆ. (ಹಿ-ಯಸ್ಮಾತ್) ಏಕೆಂದರೆ ಇವನು ಪಾಪದಿಂದ ಹೊಡೆಯಲ್ಪಟ್ಟಿರುತ್ತಾನೆ. (ಇಲ್ಲಿ) ಎರಡನ್ನೂ ಗ್ರಹಿಸುವದೆಂಬುದು ವಿವಕ್ಷಿತವಲ್ಲ.[4] ''ಯಾವನ ಎರಡು ಹವಿಸ್ಸೂ ನಾಶವನ್ನು ಹೊಂದುವದೋ'' (ತೈ. ಬ್ರಾ. ೩-೭-೧) ಎಂಬಲ್ಲಿ ಹೇಗೋ ಹಾಗೆಯೇ ಇದು.[5] ''ಈ ಅನನುಗುಣವಾದದ್ದನ್ನು

---

1. ವಾ॥ ಅ॥ ಪಾಠಗಳಂತೆ 'ಉದ್ಗೀಥವೆಂಬ ಹೆಸರಿನ ಅಕ್ಷರವಾದ ಓಂಕಾರವನ್ನು' ಎಂದು ಕನ್ನಡಿಸಬೇಕು. ಆ॥ ಪಾಠದಲ್ಲಿಯೂ ಇದೇ ಅಭಿಪ್ರೇತವಾಗಿದೆ.
2. ಆ ಓಂಕಾರದ ಉಪಾಸನೆಗಾಗಿ. 3. 'ದುರ್ಗನ್ಧಗ್ರಾಹಕಃ' ಎಂಬ ವಾ॥ ಅ॥ ಪಾಠಕ್ಕೆ ಕೆಟ್ಟ ವಾಸನೆಯನ್ನು ಗ್ರಹಿಸಿಕೊಡುವವ(ನಾಗಿರುತ್ತಾನೆ)- ಎಂದು ಅರ್ಥ.
4. ದುರ್ಗಂಧವುಳ್ಳದ್ದನ್ನು ಮೂಸುತ್ತದೆ ಎಂಬುದೊಂದೇ ವಿವಕ್ಷಿತ.
5. ಒಂದೇ ಹವಿಸ್ಸಿಗೆ ಕಾಗೆ ಮುಂತಾದವುಗಳ ಸಂಬಂಧದಿಂದ ಭ್ರಂಶವಾದರೂ ಪ್ರಾಯಶ್ಚಿತ್ತವುಂಟು. ಆದರೂ ಎರಡು ಹವಿಸ್ಸುಗಳಿಗೆ ಭ್ರಂಶವಾದರೆ ಎಂದು ಪ್ರಾಯಶ್ಚಿತ್ತವನ್ನು ವಿಧಿಸಿದೆ. ಆಲ್ಲಿ ಎರಡು ಎಂಬಿದು ಅವಿವಕ್ಷಿತ ಎಂದು ಮೀಮಾಂಸದಲ್ಲಿ ನಿಶ್ಚಯಿಸಿದೆ. ಶಾ. ಭಾ. ೬-೪-೨೩ನ್ನು ನೋಡಿ.

ಮೂಸುತ್ತಾನಲ್ಲ, ಇದೇ'' (ಆ ಪಾಪವು, ಬೃ. ೧-೩-೩) ಎಂಬ ಸಮಾನಪ್ರಕರಣದ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ).[1]

ವಾಗಾದಿದೃಷ್ಟಿಯಿಂದ ಉಪಾಸನೆಮಾಡಿದ್ದು

(ಉಪನಿಷತ್ತು)

ಅಥ ಹ ವಾಚಮುದ್ಗೀಥಮುಪಾಸಾಂಚಕ್ರಿರೇ ತಾಗ್ಂ ಹಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ತಯೋಭಯಂ ವದತಿ ಸತ್ಯಂ ಚಾನೃತಂ ಚ ಪಾಪ್ಮನಾ ಹ್ಯೇಷಾ ವಿದ್ಧಾ ॥೩॥

ಅಥ ಹ ಚಕ್ಷುರುದ್ಗೀಥಮುಪಾಸಾಂಚಕ್ರಿರೇ ತದ್ಧಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ತೇನೋಭಯಂ ಪಶ್ಯತಿ ದರ್ಶನೀಯಂ ಚಾದರ್ಶನೀಯಂ ಚ ಪಾಪ್ಮನಾ ಹ್ಯೇತದ್ ವಿದ್ಧಮ್ ॥೪॥

ಅಥ ಹ ಶ್ರೋತ್ರಮುದ್ಗೀಥಮುಪಾಸಾಂಚಕ್ರಿರೇ ತದ್ಧಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ ತೇನೋಭಯಗ್ಂ ಶೃಣೋತಿ ಶ್ರವಣೀಯಂ ಚಾಶ್ರವಣೀಯಂ ಚ ಪಾಪ್ಮನಾ ಹ್ಯೇತದ್ ವಿದ್ಧಮ್ ॥೫॥

ಅಥ ಹ ಮನ ಉದ್ಗೀಥಮುಪಾಸಾಂಚಕ್ರಿರೇ ತದ್ಧಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ ತೇನೋಭಯಗ್ಂ ಸಂಕಲ್ಪತೇ ಸಂಕಲ್ಪನೀಯಂ ಚಾಸಂಕಲ್ಪನೀಯಂ ಚ ಪಾಪ್ಮನಾ ಹ್ಯೇತದ್ ವಿದ್ಧಮ್ ॥೬॥

೩. ಆಗ ಅವರು ವಾಕ್ಕೆಂದು ಉದ್ಗೀಥವನ್ನು ಉಪಾಸನೆಮಾಡಿದರು. ಅದನ್ನು ಅಸುರರು ಪಾಪದಿಂದ ಹೊಡೆದರು. ಆದ್ದರಿಂದ ಅದರಿಂದ ಸತ್ಯವನ್ನೂ ಅನೃತವನ್ನೂ ಎರಡನ್ನೂ (ಜನವು) ಹೇಳುತ್ತದೆ. ಅದು ಪಾಪದಿಂದ ವಿದ್ಧವಷ್ಟೆ?

೪. ಆಗ ಚಕ್ಷುಸ್ಸೆಂದು ಉದ್ಗೀಥವನ್ನು ಉಪಾಸನೆಮಾಡಿದರು. ಅದನ್ನು ಅಸುರರು ಪಾಪದಿಂದ ಹೊಡೆದರು. ಆದ್ದರಿಂದ ಅದರಿಂದ (ಜನವು)

---

1. ಬೃಹದಾರಣ್ಯಕದಲ್ಲಿ ಒಳ್ಳೆಯ ವಾಸನೆಯ ಗ್ರಹಣವನ್ನು ಹೇಳಿಯೇ ಇಲ್ಲ; ಆದ್ದರಿಂದ ಈ ಸಮಾಖ್ಯೆಯೂ ಈ ವ್ಯಾಖ್ಯಾನಕ್ಕೆ ಪ್ರಮಾಣವೆಂದು ಭಾವ.

ನೋಡತಕ್ಕದ್ದು, ನೋಡಬಾರದ್ದು- (ಈ) ಎರಡನ್ನೂ ಕಾಣುತ್ತದೆ. ಅದು ಪಾಪದಿಂದ ವಿದ್ಧವಷ್ಟೆ?

೫. ಆಗ ಶ್ರೋತ್ರವೆಂದು ಉದ್ಗೀಥವನ್ನು ಉಪಾಸನೆಮಾಡಿದರು. ಅದನ್ನು ಅಸುರರು ಪಾಪದಿಂದ ಹೊಡೆದರು. ಆದ್ದರಿಂದ ಅದರಿಂದ ಕೇಳತಕ್ಕದ್ದು, ಕೇಳಬಾರದ್ದು- (ಈ) ಎರಡನ್ನೂ ಕೇಳುತ್ತಾನೆ. ಅದು ಪಾಪದಿಂದ ವಿದ್ಧವಷ್ಟೆ?

೬. ಆಗ ಮನಸ್ಸೆಂದು ಉದ್ಗೀಥವನ್ನು ಉಪಾಸನೆಮಾಡಿದರು. ಅದನ್ನು ಅಸುರರು ಪಾಪದಿಂದ ಹೊಡೆದರು. ಆದ್ದರಿಂದ ಅದರಿಂದ ಸಂಕಲ್ಪಿಸತಕ್ಕದ್ದು, ಸಂಕಲ್ಪಿಸಬಾರದ್ದು- (ಈ) ಎರಡನ್ನೂ ಸಂಕಲ್ಪಿಸುತ್ತಾನೆ ; ಅದು ಪಾಪದಿಂದ ವಿದ್ಧವಷ್ಟೆ?

(ಭಾಷ್ಯ)

೨೩. मुख्यप्राणस्य उपास्यत्वाय तद्विशुद्धत्वानुभवार्थोऽयं विचारः श्रुत्या प्रवर्तितः । अतः चक्षुरादिदेवताः क्रमेण विचार्य असुरेण पाप्मना विद्धा इति अपोह्यन्ते । समानमन्यत् "अथ ह वाचं.... चक्षुः.... श्रोत्रं.... मनः" इत्यादि । अनुक्ता अपि अन्याः त्वग्रसनादिदेवताः द्रष्टव्याः । "एवमु खल्वेता देवताः पाप्मभिः ...." (बृ ೧-೩-೬) इति श्रुत्यन्तरात् ॥

(ಭಾಷ್ಯಾರ್ಥ)

ಮುಖ್ಯಪ್ರಾಣನೇ ಉಪಾಸ್ಯನೆಂಬುದನ್ನು[1] (ತಿಳಿಸು)ವದಕ್ಕಾಗಿ ಅವನು ವಿಶುದ್ಧನೆಂದು ಅನುಭವಕ್ಕೆ (ತಂದುಕೊಡು)ವದಕ್ಕಾಗಿ[2] ಈ ವಿಚಾರವನ್ನು ಶ್ರುತಿಯು ಮಾಡಿರುತ್ತದೆ. ಆದ್ದರಿಂದ ಚಕ್ಷುರಾದಿದೇವತೆಗಳನ್ನು ಕ್ರಮವಾಗಿ ವಿಚಾರಮಾಡಿ ಅಸುರಪಾಪ್ಮದಿಂದ ವಿದ್ಧವಾಗಿವೆ ಎಂದು (ಅವನ್ನು) ಒತ್ತರಿಸಿದೆ. "ಅಥ ವಾಚಂ....

---

1 ಮುಖ್ಯಪ್ರಾಣದೃಷ್ಟಿಯಿಂದಲೇ ಉದ್ಗೀಥವು ಉಪಾಸ್ಯವು ಎಂದರ್ಥ ; ಹಿಂದಿನ ಭಾ. ಭಾ. ದಲ್ಲಿ ಇದನ್ನು ಸ್ಫುಟಗೊಳಿಸಿರುತ್ತದೆ.

2. ಬೃಹದಾರಣ್ಯಕ, ಛಾಂದೋಗ್ಯ- ಈ ಎರಡರಲ್ಲಿಯೂ ಪ್ರಾಣನು ವಿಶುದ್ಧನೆಂದೇ ಉಪಾಸನೆಮಾಡಬೇಕೆಂದು ಹೇಳಿದ್ದರೂ ಇವೆರಡೂ ಒಂದೇ ಬಗೆಯ ಉಪಾಸನೆಗಳಲ್ಲ ವೆಂಬುದನ್ನು ಸೂ ಭಾ. ೩-೩-೭ರಲ್ಲಿ ನಿಶ್ಚಯಿಸಿದೆ.

ಚಕ್ಷುಃ.... ಶ್ರೋತ್ರಮ್.... ಮನಃ'' ಮುಂತಾದ ಮಿಕ್ಕದೆಲ್ಲವೂ (ಹಿಂದಿನ ವಾಕ್ಯಕ್ಕೆ) ಸಮಾನವಾಗಿರುತ್ತದೆ.[1] (ಇಲ್ಲಿ) ಹೇಳದೆ ಇರುವ ತ್ವಕ್ಕು, ರಸನೆ- ಮುಂತಾದ ಮಿಕ್ಕ ದೇವತೆಗಳನ್ನೂ (ಹೀಗೆಯೇ ಪಾಪವಿದ್ಧವೆಂದು) ತಿಳಿಯಬೇಕು[2] ; ಏಕೆಂದರೆ ''ಹೀಗೆಯೇ ಈ ದೇವತೆಗಳನ್ನು ಪಾಪಗಳಿಂದ (ಸಂಬದ್ಧರನ್ನಾಗಿ ಮಾಡಿದರು)'' (ಬೃ. ೧-೩-೬) ಎಂದು ಶ್ರುತ್ಯಂತರವಿದೆ.

ಪ್ರಾಣದೃಷ್ಟಿಯಿಂದ ಉಪಾಸನೆ

(ಉಪನಿಷತ್ತು)

ಅಥ ಹ ಯ ಏವಾಯಂ ಮುಖ್ಯಃ ಪ್ರಾಣಸ್ತಮುದ್ಗೀಥಮುಪಾಸಾಂ ಚಕ್ರಿರೇ ತಗ್ಂ ಹಾಸುರಾ ಖಯತ್ವಾ ವಿದಧ್ವಂಸುರ್ಯಥಾಶ್ಮಾನ-ಮಾಖಿಣಮೃತ್ವಾ ವಿಧ್ವಗ್ಂಸೇತೈವಮ್ ॥೭॥

೭. ಇನ್ನು ಈ ಮುಖ್ಯಪ್ರಾಣನಿದಾನಲ್ಲ, ಅವನೆಂದೇ ಉದ್ಗೀಥವನ್ನು ಉಪಾಸನೆಮಾಡಿದರು. ಅವನನ್ನು ಸೇರಿ ಅಸುರರು - ಹೇಗೆ ಆಖಿಣವಾದ ಕಲ್ಲನ್ನುಸೇರಿದರೆ (ಮಣ್ಣುಗೊಂಬೆ) ನಾಶವಾಗುವದೋ - ಹಾಗೆ ವಿಧ್ವಸ್ತರಾದರು.

ಅಸುರರು ಪ್ರಾಣನಿಂದ ಧ್ವಸ್ತರಾದದ್ದು

(ಭಾಷ್ಯ)

೨೪. ಆಸುರೇಣ ಪಾಪ್ಮನಾ ವಿದ್ಧತ್ವಾತ್ ಘ್ರಾಣಾದಿ[3]ದೇವತಾ ಅಪೋಹ್ಯ ಅಥ ಅನನ್ತರಂ ಹ ಯ ಏವ ಅಯಂ ಪ್ರಸಿದ್ಧಃ ಮುಖೇ ಭವಃ ಮುಖ್ಯಃ ಪ್ರಾಣಃ ತಮ್ ಉದ್ಗೀಥಮ್ ಉಪಾಸಾಂಚಕ್ರಿರೇ ತಂ ಹಾಸುರಾಃ ಪೂರ್ವವತ್ ಖಯತ್ವಾ ಪ್ರಾಪ್ಯ ವಿದಧ್ವಂಸುಃ ವಿನಷ್ಟಾಃ ಅಭಿಪ್ರಾಯಮಾತ್ರೇಣ ಅಕೃತ್ವಾ ಕಿಂಚಿದಪಿ ಪ್ರಾಣಸ್ಯ । ಕಥಂ ವಿನಷ್ಟಾ ಇತಿ ? ಅತ್ರ ದೃಷ್ಟಾನ್ತಮಾಹ । ಯಥಾ ಲೋಕೇ ಅಶ್ಮಾನಮ್ ಆಖಿಣಂ ನ ಶಕ್ಯತೇ ಖನಿತುಂ ಕುದ್ದಾಲಾದಿಭಿರಪಿ ಭೇತ್ತುಂ ನ ಶಕ್ಯಃ । (ಆಖಿಣಃ)[4] ಆಖಿಣ ಏವ

1. ಆದ್ದರಿಂದ ಆ ಗ್ರಂಥಭಾಗಕ್ಕೆ ಮತ್ತೆ ವ್ಯಾಖ್ಯಾನವನ್ನು ಮಾಡಬೇಕಾದದ್ದಿಲ್ಲ.
2 ಅದರಿಂದ ಮುಖ್ಯಪ್ರಾಣನೊಬ್ಬನೇ ವಿಶುದ್ಧನು ಎಂಬುದು ನಿಶ್ಚಯವಾಗುತ್ತದೆ.
3. 'ಪ್ರಾಣಾದಿ' ಎಂದು ವಾ॥
4. ಇಲ್ಲಿ ಈ ಮಾತು ಅವಶ್ಯ. ವಾ॥ ಆ॥ ಮ॥ ಪಾಠಗಳಲ್ಲಿ ''ಟಙ್ಕೈಶ್ಚ ಛೇತ್ತುಂ ನ ಶಕ್ಯಃ ಅಖಿನಃ ಅಖಿನ ಏವ ಆಖಿಣಃ ತಂ ಖಯತ್ವಾ'' ಎಂದಿದೆ.

ಅಖಣಃ ತಮ್ ಖುತ್ವಾ ಸಾಮರ್ಥ್ಯಾತ್ ಲೋಷ್ಟಃ ಪಾಂಸುಪಿಣ್ಡಃ । ಶ್ರುತ್ಯನ್ತರಾಚ್ಚ । ಅಶ್ಮನಿ ಕ್ಷಿಪ್ತೋ ಅಶ್ಮಭೇದನಾಭಿಪ್ರಾಯೇಣ ತಸ್ಯ ಅಶ್ಮನಃ ಕಿಂಚಿದಪಿ ಅಕೃತ್ವಾ ಸ್ವಯಂ ವಿಧ್ವಂಸೇತ ವಿದೀರ್ಯೇತ, ಏವಂ ವಿದಧ್ವಂಸುಃ ಇತ್ಯರ್ಥಃ । ಏವಂ ವಿಶುದ್ಧೋಽಸುರೈಃ ಅಧರ್ಷಿತತ್ವಾತ್ ಪ್ರಾಣಃ ಇತಿ[1] ॥

(ಭಾಷ್ಯಾರ್ಥ)

ಆಸುರ(ಪಾಪ)ದಿಂದ ವಿದ್ಧರಾಗಿರುವದರಿಂದ ವ್ಯಾಣಾದಿದೇವತೆಗಳನ್ನು ಒತ್ತರಿಸಿ ಇನ್ನು ಆಮೇಲೆ ಮುಖದಲ್ಲಿರುವ ಈ ಪ್ರಸಿದ್ಧನಾದ ಮುಖ್ಯಪ್ರಾಣನಿದಾನಲ್ಲ, ಅವನೆಂದು ಉದ್ಗೀಥವನ್ನು ಉಪಾಸನೆಮಾಡಿದರು. ಅವನನ್ನು ಅಸುರರು ಮೊದಲಿನಂತೆಯೇ ಸೇರಿ ಹೊಂದಿ (ತಮ್ಮ ಆ) ಅಭಿಪ್ರಾಯಮಾತ್ರದಿಂದಲೇ[2] ಪ್ರಾಣನಿಗೆ ಏನನ್ನೂ ಮಾಡದೆ ವಿಧ್ವಸ್ತರಾದರು, ವಿನಷ್ಟರಾದರು.

ಹೇಗೆ ವಿನಷ್ಟರಾದರು ? ಎಂಬುದಕ್ಕೆ (ಶ್ರುತಿಯು) ದೃಷ್ಟಾಂತವನ್ನು ಹೇಳುತ್ತಿದೆ. ಹೇಗೆ ಲೋಕದಲ್ಲಿ ಅಖಣವಾದ (ಕಲ್ಲನ್ನು) - ಗುದ್ದಲಿ ಮುಂತಾದವುಗಳಿಂದಲೂ ಒಡೆಯುವದಕ್ಕೆ ಆಗದಾದ್ದರಿಂದ[3] ಅಖಣ(ವೆನಿಸುವದು) ; ಅಖಣವೇ ಅಖಣ (ಎಂದು ಸ್ವಾರ್ಥಪ್ರತ್ಯಯವು ಬಂದಿದೆ). ಅದನ್ನು- ಸೇರಿದರೆ ; ಹೆಂಟೆಯು, ಮಣ್ಣುಮುದ್ದೆಯು (ಸೇರಿದರೆ ಎಂದು) ಸಾಮರ್ಥ್ಯದಿಂದ (ಇಟ್ಟುಕೊಳ್ಳಬೇಕು)[4] ; ಮತ್ತೊಂದು ಶ್ರುತಿಯಿರುವದರಿಂದಲೂ[5] (ಹೀಗೆಂದು ಇಟ್ಟುಕೊಳ್ಳಬೇಕು). ಕಲ್ಲು (ಬಂಡೆಯ) ಮೇಲೆ, ಕಲ್ಲು(ಬಂಡೆಯನ್ನು) ಒಡೆಯುವ ಅಭಿಪ್ರಾಯದಿಂದ, ಎಸೆದ (ಮಣ್ಣುಹೆಂಟೆಯು) ಆ ಕಲ್ಲಿಗೆ ಏನನ್ನೂ ಮಾಡಲಾರದೆ ತಾನೇ ನಾಶವಾಗುವದೋ ಹುಡಿಯಾಗುವದೋ ಹಾಗೆ ನಷ್ಟವಾದರು - ಎಂದರ್ಥ. ಹೀಗೆ ಅಸುರರಿಂದ ತೊಂದರೆಗೆ ಸಿಕ್ಕಿಸಿಕೊಳ್ಳುವದಕ್ಕಾಗಲಿಲ್ಲವಾದ್ದರಿಂದ ಪ್ರಾಣನು ವಿಶುದ್ಧನು (ಎಂದು ಸಿದ್ಧವಾಯಿತು).

---

1. ವಾ॥ ಅ॥ ಮೈ॥ ಪಾಠಗಳಂತೆ ಈ ವಾಕ್ಯವನ್ನು ಇಲ್ಲಿಗೆ ಸೇರಿಸಿಕೊಂಡಿದೆ ; ಇದೇ ವ್ಯಾಖ್ಯಾನಕ್ಕೆ ಹೊಂದುಗೆಯಾಗಿದೆ. 2. ಇಲ್ಲಿ ಅಭಿಪ್ರಾಯವೆಂದರೆ ಹೋಗಿಮುಟ್ಟುವದು.
3. ''ಉಳಿಗಳಿಂದ ಕತ್ತರಿಸುವದಕ್ಕೂ ಆಗದಾದ್ದರಿಂದ ಅಖನವೆನಿಸುವದು ; ಅಖನವೇ ಅಖಣ (ಎಂದು) ಸ್ವಾರ್ಥಪ್ರತ್ಯಯವು ಬಂದಿದೆ. ಅದನ್ನು-ಸೇರಿದರೆ'' ಎಂದು ವಾ॥ ಅ॥ ಪಾಠಗಳಿಗೆ ಅರ್ಥ.
4 ಏಕೆಂದರೆ ಮಣ್ಣೇ ಕಲ್ಲಿಗೆ ತಗುಲಿದರೆ ಪುಡಿಯಾಗುವದು.
5 ಸಮಾನಪ್ರಕರಣದ ಬೃಹದಾರಣ್ಯಕವಾಕ್ಯದಲ್ಲಿ (೧-೩-೭) ಲೋಷ್ಟಃ ಎಂಬ ಮಾತು ಇದ್ದೂ ಇದೆ.

ಪ್ರಾಣೋಪಾಸಕನಿಗೆ ಫಲ

(ಉಪನಿಷತ್ತು)

ಯಥಾಶ್ಮಾನಮಾಖಿಣಮೃತ್ವಾ[1] ವಿಧ್ವಗ್ಂಸತ ಏವಗ್ಂ ಹೈವ ಸ ವಿಧ್ವಗ್ಂಸತೇ ಯ ಏವಂವಿದಿ ಪಾಪಂ ಕಾಮಯತೇ ಯಶ್ಚೈನಮಭಿದಾಸತಿ ಸ ಏಷೋಽಶ್ಮಾಖಿಣಃ ॥೮॥

೮. ಹೇಗೆ ಆಖಿಣವಾದ ಕಲ್ಲು (ಬಂಡೆಯನ್ನು) ಸೇರಿದರೆ (ಮಣ್ಣು ಹೆಂಟೆಯು) ವಿಧ್ವಸ್ತವಾಗುವದೋ ಹಾಗೆಯೇ ಯಾವನು ಹೀಗೆಂದರಿತಿರುವವನಲ್ಲಿ ಕೆಟ್ಟದ್ದನ್ನು ಇಚ್ಛಿಸುತ್ತಾನೋ, ಮತ್ತು ಯಾವನು ಇವನನ್ನು ತೊಂದರೆಗೊಳಿಸುತ್ತಾನೋ ಅವನು ವಿಧ್ವಸ್ತನಾಗುವನು. ಆ ಇವನು ಅಶ್ಮಾಖಿಣನು.

ಪ್ರಾಣಸಾಕ್ಷಾತ್ಕಾರವುಳ್ಳವನಿಗೆ ಯಾರೂ ಕೇಡನ್ನು ಮಾಡಲಾರರು

(ಭಾಷ್ಯ)

೨೫. ಏವಂವಿದಃ ಪ್ರಾಣಾತ್ಮಭೂತಸ್ಯ ಇದಂ ಫಲಮಾಹ । ಯಥಾಽಶ್ಮಾನಮಿತ್ಯೇಷ ಏವ ದೃಷ್ಟಾನ್ತಃ । ಏವಂ ಹೈವ ಸ ವಿಧ್ವಂಸತೇ ವಿನಶ್ಯತಿ । ಕೋಽಸಾವಿತಿ ? ಆಹ । ಯ ಏವಂವಿದಿ ಯಥೋಕ್ತಪ್ರಾಣವಿದಿ ಪಾಪಂ ತದನರ್ಹಂ ಕರ್ತುಂ ಕಾಮಯತೇ ಇಚ್ಛತಿ, ಯಶ್ಚಾಪಿ ಏನಮ್ ಅಭಿದಾಸತಿ ಹಿನಸ್ತಿ ಪ್ರಾಣವಿದಂ ಪ್ರತಿ ಆಕ್ರೋಶತಾಡನಾದಿ ಪ್ರಯುಙ್ಕ್ತೇ ಸೋಽಪಿ ಏವಮೇವ ವಿಧ್ವಂಸತೇ ಇತ್ಯರ್ಥಃ । ಯಸ್ಮಾತ್ ಸ ಏಷ ಪ್ರಾಣವಿತ್ ಪ್ರಾಣಭೂತತ್ವಾತ್ ಅಶ್ಮಾಖಿಣ ಇವ ಅಶ್ಮಾಖಿಣಃ ಅಧರ್ಷಣೀಯಃ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆಂದು ಅರಿತುಕೊಂಡು ಪ್ರಾಣಸ್ವರೂಪನೇ ಆಗಿರುವವನಿಗೆ[2] ಈ ಫಲವನ್ನು

1. ಆ॥ ಪಾಠದಲ್ಲಿ 'ಏವಂ' ಎಂದೇ ಕಂಡಿಕೆಯು ಪ್ರಾರಂಭವಾಗಿರುತ್ತದೆಯಾದರೂ ಭಾಷ್ಯದಲ್ಲಿ ಅದನ್ನು ಹಿಡಿದಿಲ್ಲವೆಂಬ ಕಾರಣದಿಂದ ಮಿಕ್ಕ ಮುದ್ರಿತಪುಸ್ತಕಗಳ ಪಾಠವನ್ನೇ ನಾವೂ ಅನುಸರಿಸಿದೇವೆ.

2. ಈ ವಾಕ್ಯಕ್ಕೆ ಹಿಂದೆ ಆ॥ ಪಾಠದಲ್ಲಿ 'ಏವಂ ವಿಶುದ್ಧಃ ಆಸುರೈರಧರ್ಷಿತತ್ವಾತ್ ಪ್ರಾಣಃ ಇತಿ' ಎಂಬ ವಾಕ್ಯವನ್ನು ಸೇರಿಸಿಕೊಂಡಿದೆ. ಆಗ "ಹೀಗೆ ಆಸುರರಿಂದ ತೊಂದರೆಗೆ →

(ಶ್ರುತಿ) ಹೇಳುತ್ತಿದೆ. ''ಹೇಗೆ ಕಲ್ಲು(ಬಂಡೆಯನ್ನು)...'' ಎಂಬಿದೇ ದೃಷ್ಟಾಂತವು[1]. ಹೀಗೆಯೇ ಅವನು ವಿಧ್ವಸ್ತನಾಗುತ್ತಾನೆ. (ವಿಧ್ವಸ್ತನಾಗುವನೆಂಬ) ಅವನು ಯಾರು ? ಎಂದರೆ (ಶ್ರುತಿ) ಹೇಳುತ್ತದೆ. ಯಾವನು ಹೀಗೆಂದರಿತಿರುವವನಲ್ಲಿ, ಮೇಲೆ ಹೇಳಿರುವಂಥ ಪ್ರಾಣೋಪಾಸಕನಲ್ಲಿ[2] ಕೆಟ್ಟದ್ದನ್ನು ಅವನಿಗೆ ತಕ್ಕದ್ದಲ್ಲದ (ಕೇಡನ್ನು) ಮಾಡುವದಕ್ಕೆ ಇಚ್ಛಿಸುತ್ತಾನೋ ಮತ್ತು ಯಾವನು ಇವನನ್ನು ತೊಂದರೆಗೊಳಿಸುವನೋ ಹಿಂಸಿಸುತ್ತಾನೋ, (ಈ) ಪ್ರಾಣೋಪಾಸಕನ ಮೇಲೆ ಬಯ್ಯುವದು, ಹೊಡೆಯುವದು- ಮುಂತಾದದ್ದನ್ನು ಪ್ರಯೋಗಿಸುವನೋ ಅವನೂ ಹೀಗೆಯೇ ನಾಶವಾಗುತ್ತಾನೆ ಎಂದರ್ಥ. ಏಕೆಂದರೆ ಆ ಈ ಪ್ರಾಣೋಪಾಸಕನು ಪ್ರಾಣಸ್ವರೂಪನಾಗಿರುವದರಿಂದ ಅಶ್ಮಾಖಿಣದಂತೆ ಇರುತ್ತಾನಾದ್ದರಿಂದ ಅಶ್ಮಾಖಿಣವು, (ಒಡೆಯುವದಕ್ಕಾಗದ ಕಲ್ಲುಬಂಡೆಯು), ತೊಂದರೆಗೀಡಾಗದವನು ಎಂದರ್ಥ.[3]

ಘ್ರಾಣಪ್ರಾಣನಿಗೂ ಮುಖ್ಯಪ್ರಾಣನಿಗೂ ತಾರತಮ್ಯ

(ಭಾಷ್ಯ)

೨೬. ನನು ನಾಸಿಕ್ಯೋಽಪಿ ಪ್ರಾಣಃ ವಾಯ್ವಾತ್ಮಾ ಯಥಾ ಮುಖ್ಯಃ ತತ್ರ ನಾಸಿಕ್ಯಃ ಪ್ರಾಣಃ ಪಾಪ್ಮನಾ ವಿದ್ಧಃ ಪ್ರಾಣ ಏವ ಸನ್ ನ ಮುಖ್ಯಃ ಕಥಮ್ ? ನೈಷ ದೋಷಃ । ನಾಸಿಕ್ಯಸ್ತು ಸ್ಥಾನಕರಣವೈಗುಣ್ಯಾತ್[4] ವಿದ್ಧಃ ವಾಯ್ವಾತ್ಮಾಪಿ ಸನ್, ಮುಖ್ಯಸ್ತು ತದಸಂಭವಾತ್[5] ಸ್ಥಾನದೇವತಾಬಲೀಯಸ್ತ್ವಾತ್ ನ ವಿದ್ಧಃ ಇತಿ ಯುಕ್ತಮ್ । ಯಥಾ ವಾಸ್ಯಾದಯಃ ಶಿಕ್ಷಾವತ್ಪುರುಷಾಶ್ರಯಾಃ ಕಾರ್ಯವಿಶೇಷಂ

ಸಿಕ್ಕಿಸಿಕೊಳ್ಳುವದಕ್ಕಾಗಲಿಲ್ಲವಾದ್ದರಿಂದ ಪ್ರಾಣನು ವಿಶುದ್ಧನು ಎಂದಿಂತು ಅರಿತುಕೊಂಡು ಪ್ರಾಣಸ್ವರೂಪನೇ ಆಗಿರುವವನಿಗೆ'' ಎಂದು ಕನ್ನಡಿಸಬೇಕು. ಹೇಗೇ ಆಗಲಿ, ಪ್ರಾಣೋಪಾಸನೆಯಿಂದ ಪ್ರಾಣಸಾಕ್ಷಾತ್ಕಾರವನ್ನು ಹೊಂದಿರುವವನಿಗೆ ಎಂಬಿದೇ ವಿವಕ್ಷಿತಾರ್ಥ. ಬೃ. ಭಾ. ೧-೩-೯ (ಭಾ. ಭಾ. ೬೭), ೧-೩-೨೮ (ಭಾ. ಭಾ. ೯೬)ನ್ನು ನೋಡಿ.

ಹಿಂದೆ ಮುಖ್ಯಪ್ರಾಣನಿಂದ ಅಸುರರು ವಿಧ್ವಸ್ತರಾದದ್ದಕ್ಕೆ ಕೊಟ್ಟಿದ್ದ ಕಲ್ಲುಬಂಡೆಯ ದೃಷ್ಟಾಂತವನ್ನೇ ಇಲ್ಲಿಯೂ ಕೊಟ್ಟಿದೆ ಎಂದರ್ಥ.

2. ಅಸುರರಿಗೆ ವಿಷಯನಾಗದೆ ವಿಶುದ್ಧನಾಗಿರುವ ಪ್ರಾಣನೇ ನಾನು ಎಂಬ ಸಾಕ್ಷಾತ್ಕಾರವನ್ನು ಪಡೆದಿರುವವನಲ್ಲಿ ಎಂದರ್ಥ.
3. ಆದ್ದರಿಂದ ಇವನಿಗೆ ಯಾರೂ ತೊಂದರೆಯನ್ನು ಮಾಡುವದಕ್ಕೆ ಆಗುವದಿಲ್ಲ ಎಂದರ್ಥ.
4. ಇದರ ಮುಂದೆ ವಾ॥ ಅ॥ಗಳಲ್ಲಿರುವ 'ಅಸುರೈಃ ಪಾಪ್ಮನಾ' ಎಂಬುದು ಬೇಕಿಲ್ಲ.
5. ಈ ಮೈ॥ ವಾ॥ ಪಾಠವೇ ವ್ಯಾಖ್ಯಾನಸಮತವಾಗಿರುತ್ತದೆ.

ಕುರ್ವನ್ತಿ ನಾನ್ಯಹಸ್ತಗತಾಃ ತದ್ವತ್ ದೋಷವದ್ಘ್ರಾಣಸಚಿವತ್ವಾತ್ ವಿದ್ಧಾ ಘ್ರಾಣದೇವತಾ ನ ಮುಖ್ಯಾ[1] ॥

(ಭಾಷ್ಯಾರ್ಥ)

(ಆಕ್ಷೇಪ) :- ನಾಸಿಕ್ಯಪ್ರಾಣನೂ ಮುಖ್ಯ(ಪ್ರಾಣ)ನಂತೆ ವಾಯ್ವಾತ್ಮನೇ ; ಇವರೊಳಗೆ ನಾಸಿಕ್ಯಪ್ರಾಣನು ಪ್ರಾಣನೇ ಆದರೂ ಪಾಪದಿಂದ ವಿದ್ಧನು, ಮುಖ್ಯ (ಪ್ರಾಣನು ಮಾತ್ರ ಪಾಪವಿದ್ಧ)ನಲ್ಲ - ಎಂಬುದು ಹೇಗೆ (ಹೊಂದುತ್ತದೆ) ?

(ಪರಿಹಾರ) :- ಇದೇನೂ ದೋಷವಲ್ಲ. ನಾಸಿಕ್ಯನೇನೋ ವಾಯುರೂಪನೇ ಆದರೂ ಸ್ಥಾನಕರಣದ ವೈಗುಣ್ಯದಿಂದ[2] (ಪಾಪ)ವಿದ್ಧ(ನಾಗಿರುತ್ತಾನೆ); ಮುಖ್ಯ ಪ್ರಾಣನೋ ಎಂದರೆ ಅದು (ಅವನಲ್ಲಿ) ಸಂಭವಿಸುವದಿಲ್ಲವಾದ್ದರಿಂದ[3] ಸ್ಥಾನ ದೇವತೆಯು ಹೆಚ್ಚು ಪ್ರಬಲವಾಗಿರುವದರಿಂದ ವಿದ್ಧನಾಗಿರುವದಿಲ್ಲ -ಎಂಬುದು ಯುಕ್ತವಾಗಿರುತ್ತದೆ. ಹೇಗೆ ಬಾಚಿಯೇ ಮುಂತಾದವುಗಳು ಕುಶಲರಾದ ಪುರುಷರನ್ನು ಆಶ್ರಯಿಸಿದ್ದಾಗ ಕಾರ್ಯವಿಶೇಷವನ್ನು ಮಾಡುತ್ತವೆಯೋ ಮತ್ತೊಬ್ಬರ ಕೈಯಲ್ಲಿದ್ದಾಗ (ಮಾಡಲಾರದೆ) ಇರುವವೋ ಆದರಂತೆ ದೋಷವುಳ್ಳ ಘ್ರಾಣದ ಜೊತೆಯಲ್ಲಿರುವದರಿಂದ ಘ್ರಾಣದೇವತೆಯು ವಿದ್ಧವಾಗಿರುತ್ತದೆ,[4] ಮುಖ್ಯ(ಪ್ರಾಣದೇವತೆಯು ವಿದ್ಧ)ವಾಗಿರುವದಿಲ್ಲ.

ಮುಖ್ಯಪ್ರಾಣನು ವಿಶುದ್ಧನು

(ಉಪನಿಷತ್ತು)

ನೈವೈತೇನ ಸುರಭಿ ನ ದುರ್ಗನ್ಧಿ ವಿಜಾನಾತ್ಯಪಹತಪಾಪ್ಮಾ ಹ್ಯೇಷ ತೇನ ಯದಶ್ನಾತಿ ಯತ್ ಪಿಬತಿ ತೇನೇತರಾನ್ ಪ್ರಾಣಾನವತಿ । ಏತಮು ಏವಾನ್ತತೋಽವಿತ್ಥೋತ್ಕ್ರಮತಿ ವ್ಯಾದದಾತ್ಯೇವಾನ್ತತಃ ಇತಿ ॥೯॥

೯. ಇವನಿಂದ ಸುವಾಸನೆಯುಳ್ಳದ್ದನ್ನಾಗಲಿ ದುರ್ವಾಸನೆಯುಳ್ಳದ್ದನ್ನಾಗಲಿ ಅರಿಯುವದೇ ಇಲ್ಲ. ಇವನು ಅಪಹತಪಾಪ್ಮನಷ್ಟೆ ? ಇವನಿಂದ

1. ಮುಖ್ಯಃ ಎಂಬಿದನ್ನು ಹೀಗೆಂದು ತಿದ್ದಿಕೊಂಡಿದೆ.
2. ಸ್ಥಾನದಿಂದಾದ ಕರಣದೋಷದಿಂದ.
3. ಸ್ಥಾನದಿಂದಾದ ಕರಣದೋಷವು ಇಲ್ಲವಾದ್ದರಿಂದ ಎಂದರ್ಥ.
4. ಘ್ರಾಣಸ್ಥಾನವೇ ಪಾಪವೇಧಕ್ಕೆ ಕಾರಣವೇ ಹೊರತು ಪ್ರಾಣದೇವತೆಯ ಸ್ವರೂಪವಲ್ಲ ಎಂದು ಅಭಿಪ್ರಾಯ.

ಯಾವದನ್ನು ತಿನ್ನುತ್ತಾನೋ ಯಾವದನ್ನು ಕುಡಿಯುತ್ತಾನೋ ಅದರಿಂದ ಉಳಿದ ಪ್ರಾಣಗಳನ್ನು ಕಾಪಾಡುತ್ತಾನೆ. ಕೊನೆಗೆ ಇವನನ್ನು ಪಡೆಯದೆಯೇ ಉತ್ಕ್ರಾಂತನಾಗುತ್ತಾನೆ, ಕೊನೆಗೆ (ಬಾಯಿ) ತೆರೆದುಕೊಂಡೇ ಇರುತ್ತಾನೆ.

ಪ್ರಾಣನು ಪಾಪರಹಿತನು

(ಭಾಷ್ಯ)

೨೭. ಯಸ್ಮಾತ್ ನ ವಿದ್ಧೋಽಸುರೈರ್ಮುಖ್ಯಃ ತಸ್ಮಾತ್ ನೈವ ಏತೇನ ಸುರಭಿ ದುರ್ಗನ್ಧಿ ವಾ ವಿಜಾನಾತಿ[1] ಘ್ರಾಣೇನೈವ ತದುಭಯಂ ವಿಜಾನಾತಿ ಲೋಕಃ। ಅತಶ್ಚ ಪಾಪ್ಮಕಾರ್ಯಾದರ್ಶನಾತ್ ಅಪಹತಪಾಪ್ಮಾ ಅಪಹತೋ ವಿನಾಶಿತಃ ಅಪನೀತಃ ಪಾಪ್ಮಾ ಯಸ್ಮಾತ್ ಸೋಽಯಮ್ ಅಪಹತಪಾಪ್ಮಾ ಹಿ ಏಷಃ। ವಿಶುದ್ಧಃ ಇತ್ಯರ್ಥಃ॥

(ಭಾಷ್ಯಾರ್ಥ)

ಮುಖ್ಯನು (ಹೀಗೆ) ಅಸುರರಿಂದ ವಿದ್ಧನಾಗಲಿಲ್ಲವಷ್ಟೆ, ಆದ್ದರಿಂದ ಇವನಿಂದ ಸುವಾಸನೆಯುಳ್ಳದ್ದನ್ನಾಗಲಿ ದುರ್ವಾಸನೆಯುಳ್ಳದ್ದನ್ನಾಗಲಿ ಜನವು ಅರಿಯುವದೇ ಇಲ್ಲ, ಘ್ರಾಣದಿಂದಲೇ ಅವೆರಡನ್ನೂ ಅರಿಯುತ್ತಿದೆ. ಆದ್ದರಿಂದಲೇ ಪಾಪದ ಕಾರ್ಯವು ಕಾಣಬರದೆ ಇರುವದರಿಂದಲೇ ಇವನು ಅಪಹತಪಾಪ್ಮನು. ಯಾವನಿಂದ ಪಾಪವು ಅಪಹತವಾಗಿದೆಯೋ ನಾಶವಾಗಿರುತ್ತದೆಯೋ ಆ ಈ (ಪ್ರಾಣನು) ಅಪಹತಪಾಪ್ಮನು, ವಿಶುದ್ಧನು ಎಂದರ್ಥ.

ಮುಖ್ಯಪ್ರಾಣನು ಸರ್ವಾರ್ಥವಾಗಿರುವದರಿಂದಲೂ ಶುದ್ಧನು

(ಭಾಷ್ಯ)

೨೮. ಯಸ್ಮಾಚ್ಚ ಆತ್ಮಂಭರಯಃ ಕಲ್ಯಾಣಾದ್ಯಾಸಙ್ಗವತ್ತ್ವಾತ್ ಘ್ರಾಣಾದಯಃ। ನ ತಥಾ ಆತ್ಮಂಭರಿರ್ಮುಖ್ಯಃ, ಕಿಂ ತರ್ಹಿ ಸರ್ವಾರ್ಥಃ। ಕಥಮಿತಿ ? ಉಚ್ಯತೇ। ತೇನ ಮುಖ್ಯೇನ ಯತ್ ಅಶ್ನಾತಿ ಯತ್ಪಿಬತಿ ಲೋಕಃ ತೇನ ಅಶಿತೇನ ಪೀತೇನ ಚ ಇತರಾನ್ ಘ್ರಾಣಾದೀನ್ ಅವತಿ ಪಾಲಯತಿ। ತೇನ ಹಿ ತೇಷಾಂ ಸ್ಥಿತಿರ್ಭವತಿ ಇತ್ಯರ್ಥಃ। ಅತಃ ಸರ್ವಂಭರಃ ಪ್ರಾಣಃ। ಅತೋ ವಿಶುದ್ಧಃ। ಕಥಂ

[1] ವಾ॥ ಆ॥ ಪಾಠಗಳಲ್ಲಿರುವ 'ಲೋಕಃ' ಎಂಬುದು ಆ॥ ಪಾಠದಲ್ಲಿ ಕೊನೆಯಲ್ಲಿಯೇ ಇದೆ. ಎರಡು ಪಾಠವೂ ಆಗಬಹುದು.

ಪುನರ್ಮುಖ್ಯಾಶಿತಪೀತಾಭ್ಯಾಂ ಸ್ಥಿತಿರೇಷಾಂ[1] ಗಮ್ಯತ ಇತಿ ? ಉಚ್ಯತೇ। ಏತಮ್ ಉ ಏವ ಮುಖ್ಯಂ ಪ್ರಾಣಂ ಮುಖ್ಯಪ್ರಾಣಸ್ಯ ವೃತ್ತಿಮ್ ಅನ್ನಪಾನೇ ಇತ್ಯರ್ಥಃ । ಅನ್ತತಃ ಅನ್ತೇ ಮರಣಕಾಲೇ ಅವಿತ್ಯಾ ಅಲಬ್ಧ್ವಾ ಉತ್ಕ್ರಮತಿ । ಘ್ರಾಣಾದಿಪ್ರಾಣ ಸಮುದಾಯಃ ಇತ್ಯರ್ಥಃ । ಅಪ್ರಾಣೋ ಹಿ ನ ಶಕ್ನೋತಿ ಅಶಿತುಂ ಪಾತುಂ ವಾ । ತೇನ ತದಾ ಉತ್ಕ್ರಾನ್ತಿಃ ಪ್ರಸಿದ್ಧಾ ಘ್ರಾಣಾದಿಕಲಾಪಸ್ಯ । ದೃಶ್ಯತೇ ಹಿ ಉತ್ಕ್ರಾನ್ತೌ ಪ್ರಾಣಸ್ಯ ಅಶಿಶಿಷಾ । ಅತಃ ವ್ಯಾದದಾತ್ಯೇವ ಆಸ್ಯ ವಿದಾರಣಂ ಕರೋತಿ ಇತ್ಯರ್ಥಃ । ತದ್ ಹಿ ಅನ್ನಾಲಾಭೇ ಉತ್ಕ್ರಾನ್ತಸ್ಯ ಲಿಙ್ಗಮ್ ॥

(ಭಾಷ್ಯಾರ್ಥ)

ಮತ್ತು ಘ್ರಾಣಾದಿಗಳು ಒಳ್ಳೆಯ (ವಾಸನೆಯೇ) ಮುಂತಾದವುಗಳ ಆಸಂಗವುಳ್ಳವಾದ್ದರಿಂದ ಆತ್ಮಂಭರಿಗಳಾಗಿರುತ್ತವೆಯಲ್ಲ, ಹಾಗೆ ಮುಖ್ಯ(ಪ್ರಾಣ)ನು ಆತ್ಮಂಭರಿಯಲ್ಲ. ಮತ್ತೇನೆಂದರೆ ಎಲ್ಲರಿಗಾಗಿಯೂ (ಇರತಕ್ಕವನು). ಹೇಗೆಂದರೆ (ಶ್ರುತಿ) ಹೇಳುತ್ತದೆ. ಆ ಮುಖ್ಯ(ಪ್ರಾಣ)ನಿಂದ ಯಾವದನ್ನು ಜನವು ತಿನ್ನುತ್ತದೆಯೋ ಯಾವದನ್ನು ಕುಡಿಯುತ್ತದೆಯೋ ಆ ತಿಂದದ್ದರಿಂದಲೂ ಮತ್ತು ಕುಡಿದದ್ದರಿಂದಲೂ ಉಳಿದ ಘ್ರಾಣಾದಿಗಳನ್ನು ಕಾಪಾಡುತ್ತಾನೆ, ಪಾಲಿಸುತ್ತಾನೆ. ಆದರಿಂದಲೇ ಅಲ್ಲವೆ, ಅವರ ಸ್ಥಿತಿಯು ಉಂಟಾಗಿರುತ್ತದೆ ?-ಎಂದರ್ಥ. ಆದ್ದರಿಂದ ಪ್ರಾಣನು ಎಲ್ಲರನ್ನೂ ಕಾಪಾಡುವವನು, ಆದ್ದರಿಂದ ವಿಶುದ್ಧನು.

(ಪ್ರಶ್ನೆ) :- ಇನ್ನು ಮುಖ್ಯ(ಪ್ರಾಣ)ನು ತಿಂದು ಕುಡಿದ (ವದಾರ್ಥ)ಗಳಿಂದ ಅವರ[2] ಸ್ಥಿತಿಯಾಗುತ್ತದೆ ಎಂದು ಹೇಗೆ ಗೊತ್ತಾಗುತ್ತದೆ ?

(ಉತ್ತರ):- ಹೇಳುತ್ತೇವೆ. ಈ ಮುಖ್ಯಪ್ರಾಣನನ್ನೇ, (ಈ) ಮುಖ್ಯಪ್ರಾಣನ ವೃತ್ತಿಯನ್ನೇ, ಅನ್ನಪಾನಗಳನ್ನೇ[3] ಎಂದರ್ಥ. ಕೊನೆಯಲ್ಲಿ ಕೊನೆಯ ಮರಣಕಾಲದಲ್ಲಿ ಪಡೆಯದೆಯೇ ಹೊಂದದಿರುವದರಿಂದಲೇ ಉತ್ಕ್ರಾಂತವಾಗುತ್ತದೆ, ಘ್ರಾಣಾದಿ ಪ್ರಾಣಗಳ ಸಮುದಾಯವು (ಹೊರಟುಹೋಗುತ್ತದೆ) ಎಂದರ್ಥ. ಪ್ರಾಣವಿಲ್ಲದವನು ತಿನ್ನುವದಕ್ಕಾಗಲಿ ಕುಡಿಯುವದಕ್ಕಾಗಲಿ ಶಕ್ತನಾಗಿರುವದಿಲ್ಲವಷ್ಟೆ ? ಆದರಿಂದ ಆಗ ಘ್ರಾಣಾದಿಸಮುದಾಯವು ಉತ್ಕ್ರಾಂತವಾಗುತ್ತದೆ ಎಂಬುದು ಪ್ರಸಿದ್ಧ(ವಾಗಿರುತ್ತದೆ). ಪ್ರಾಣವು ಉತ್ಕ್ರಾಂತವಾಗುವಾಗ ತಿನ್ನುವ ಇಚ್ಛೆಯು ಕಂಡುಬರುತ್ತದೆಯಲ್ಲವೆ ?

1. 'ಇತರೇಷಾಮ್' ಆ॥ ವಾ॥ 2. ಆ ದೇವತೆಗಳ.

3. ಮುಖ್ಯಪ್ರಾಣನ ಮೂಲಕ ಪಡೆಯಬೇಕಾದ ಅನ್ನಪಾನಗಳನ್ನೇ ಎಂದರ್ಥ.

ಏಕೆಂದರೆ ತೆಗೆದುಕೊಂಡೇ ಇರುತ್ತಾನೆ, ಬಾಯಿಬಿಟ್ಟುಕೊಂಡೇ ಇರುತ್ತಾನೆ ಎಂದರ್ಥ. ಅನ್ನವು ಸಿಕ್ಕದೆ ಉತ್ಕ್ರಾಂತನಾದನೆಂಬುದಕ್ಕೆ ಅದು ಗುರುತಷ್ಟೆ ?

ಪ್ರಾಣನಿಗೆ ಆಂಗಿರಸತ್ವಾದಿಗುಣವಿಧಾನ

(ಉಪನಿಷತ್ತು)

ತಗ್ಂ ಹಾಜ್ಗಿರಾ ಉದ್ಗೀಥಮುಪಾಸಾಂಚಕ್ರ ಏತಮು ಏವಾಜ್ಗಿರಸಂ ಮನ್ಯನ್ತೇಽಙ್ಗಾನಾಂ ಯದ್ರಸಃ ॥೧೦॥

೧೦. ಅವನನ್ನು ಆಂಗಿರಸ್ಸು (ಆಂಗಿರಸನೆಂಬ ಗುಣದಿಂದೊಡ ಗೂಡಿದವನೆಂದು) ಉದ್ಗೀಥವನ್ನು ಉಪಾಸನೆಮಾಡಿದನು. ಇವನನ್ನೇ ಆಂಗಿರಸನೆಂದು ತಿಳಿಯುತ್ತಾರೆ, ಏಕೆಂದರೆ ಅಂಗಗಳ ರಸವು.

ಪ್ರಾಣನು ಆಂಗಿರಸನೆಂಬ ಭಾವನೆ : ವೃತ್ತಿಕಾರರ ಮತ

(ಭಾಷ್ಯ)

೨೯. ತಗ್ಂ[1] ಹ ಅಜ್ಗಿರಾಃ । ತಂ ಮುಖ್ಯಂ ಪ್ರಾಣಂ ಹ ಅಜ್ಗಿರಾಃ ಇತ್ಯೇವಂ ಗುಣಮ್ ಉದ್ಗೀಥಮ್ ಉಪಾಸಾಂಚಕ್ರೇ ಉಪಾಸನಂ ಕೃತವಾನ್ ಬಕೋ ದಾಲ್ಭ್ಯಃ ಇತಿ ವಕ್ಷ್ಯಮಾಣೇನ ಸಂಬಧ್ಯತೇ । ತಥಾ ಬೃಹಸ್ಪತಿರಿತಿ ಆಯಾಸ್ಯ ಇತಿ ಚ ಉಪಾಸಾಂಚಕ್ರೇ ಬಕಃ ಇತ್ಯೇವಂ[2] ಸಂಬನ್ಧಂ ಕೃತವನ್ತಃ ಕೇಚಿತ್ । ಏತಮು ಏವಾಜ್ಗಿರಸಮ್ ಬೃಹಸ್ಪತಿಮ್ ಆಯಾಸ್ಯಮ್ ಪ್ರಾಣಂ ಮನ್ಯನ್ತೇ ಇತಿ ವಚನಾತ್ ॥

(ಭಾಷ್ಯಾರ್ಥ)

ತಗ್ಂ ಹ ಅಜ್ಗಿರಾಃ (ಎಂಬ ಕಂಡಿಕೆಯ ಅಭಿಪ್ರಾಯವೇನೆಂದರೆ), ಆ ಮುಖ್ಯಪ್ರಾಣನನ್ನು ಅಂಗಿರಸ್ಸು ಎಂಬೀ ಗುಣದಿಂದ (ಕೂಡಿದವನೆಂದು ಭಾವಿಸಿ) ಉದ್ಗೀಥವನ್ನು ಬಕನು ಉಪಾಸನೆಮಾಡಿದನು, ಉಪಾಸನೆಯನ್ನು ಮಾಡಿದನು ಎಂದು ಮುಂದೆ (೧೩ನೆಯ ಕಂಡಿಕೆಯಲ್ಲಿ) ಹೇಳುವ (ಬಕಶಬ್ದದೊಡನೆ) ಸಂಬಂಧವನ್ನು ಮಾಡಿಕೊಳ್ಳಬೇಕು. ಹೀಗೆಯೇ 'ಬೃಹಸ್ಪತಿ' ಎಂದೂ 'ಆಯಾಸ್ಯ' ನೆಂದೂ ಬಕನು ಉಪಾಸನೆಮಾಡಿದನು- ಎಂದಿಂತು ಕೆಲವರು ಸಂಬಂಧವನ್ನು ಮಾಡಿರುತ್ತಾರೆ. 'ಈತನನ್ನೇ ಆಂಗಿರಸನೆಂದೂ.... ಬೃಹಸ್ಪತಿಯೆಂದೂ.... ಆಯಾಸ್ಯ

---

1. ಇದು ಪ್ರತೀಕವಾದ್ದರಿಂದ 'ತಗ್ಂ ಹಾಜ್ಗಿರಾಃ' ಎಂದಿರಬೇಕು.
2. 'ಇತ್ಯೇವ' ಎಂಬುದಕ್ಕಿಂತ ಈ ವಾ॥ ಪಾಠವು ಮೇಲು.

ನೆಂದೂ ತಿಳಿಯುವರು' ಎಂಬ (ಮುಂದಿನ ಶ್ರುತಿ)ವಚನದ ಆಧಾರದಿಂದ (ಹೀಗೆ ಅವರು ಸಂಬಂಧವನ್ನು ಮಾಡಿರುತ್ತಾರೆ).

ಸಿದ್ಧಾಂತ : ಅಂಗಿರಃಪ್ರಭೃತಿಗಳೇ ಇಲ್ಲಿ ಉಪಾಸಕರು

(ಭಾಷ್ಯ)

೩೦. ಭವತ್ಯೇವಂ ಯಥಾಶ್ರುತಾಸಂಭವೇ । ಸಂಭವತಿ ತು ಯಥಾಶ್ರುತಮ್ ಋಷಿಚೋದನಾಯಾಮಪಿ । ಶ್ರುತ್ಯನ್ತರವತ್ । ''ತಸ್ಮಾಚ್ಛತರ್ಚಿನ ಇತ್ಯಾಚಕ್ಷತ ಏತಮೇವ ಸನ್ತಮ್ ಋಷಿಮಪಿ'' (ಐ. ಆ. ೨-೨-೧), ತಥಾ ಮಾಧ್ಯಮಾಃ, ಗೃತ್ಸ್ನಮದಃ, ವಿಶ್ವಾಮಿತ್ರಃ, ವಾಮದೇವಃ, ಅತ್ರಿಃ - ಇತ್ಯಾದಿ ಋಷೀನೇವ ಪ್ರಾಣಮ್ ಆಪಾದಯತಿ ಶ್ರುತಿಃ । ತಥಾ ಏತಾನಪಿ[1] ಋಷೀನ್ ಪ್ರಾಣೋಪಾಸಕಾನ್ ಅಙ್ಗಿರೋಬೃಹಸ್ಪತ್ಯಾಯಾಸ್ಯಾನ್ ಪ್ರಾಣಂ ಕರೋತಿ ಅಭೇದವಿಜ್ಞಾನಾಯ । ''ಪ್ರಾಣೋ ಹ ಪಿತಾ ಪ್ರಾಣೋ ಮಾತಾ'' (೭-೧೫-೧) ಇತ್ಯಾದಿವಚ್ಚ । ತಸ್ಮಾತ್ ಋಷಿರಙ್ಗಿರಾ ನಾಮ ಪ್ರಾಣ ಏವ ಸನ್ ಆತ್ಮಾನಮ್ ಅಙ್ಗಿರಸಂ ಪ್ರಾಣಮ್ ಉದ್ಗೀಥಮ್ ಉಪಾಸಾಂಚಕ್ರೇ ಇತ್ಯೇತತ್ । ಯತ್ ಯಸ್ಮಾತ್ ಸಃ ಅಙ್ಗಾನಾಂ ಪ್ರಾಣಃ ಸನ್ ರಸಃ, ತೇನ ಅಸೌ ಆಙ್ಗಿರಸಃ ॥

(ಭಾಷ್ಯಾರ್ಥ)

ಯಥಾಶ್ರುತವಾಗಿ (ಅರ್ಥವು) ಹೊಂದದೆ ಇದ್ದರೆ ಹೀಗೆ ಆಗಬಹುದು. ಆದರೆ (ಇದು) ಋಷಿಚೋದನೆಯೇ (ಎಂಬ ಪಕ್ಷ)ದಲ್ಲಿಯೂ ಯಥಾಶ್ರುತವಾಗಿಯೇ ಹೊಂದುತ್ತದೆ. ಬೇರೊಂದು ಶ್ರುತಿಯಂತೆ(ಯೇ ಇದು) : ''ಆದ್ದರಿಂದ ಈ (ಪ್ರಾಣನೇ) ಆಗಿರುವ ಋಷಿಯನ್ನೂ ಶತರ್ಚಿಗಳು ಎನ್ನುವರು'' (ಐ. ಆ. ೨-೨-೧)[2] ಇದರಂತೆ 'ಮಾಧ್ಯಮರು'. 'ಗೃತ್ಸ್ನಮದ', 'ವಿಶ್ವಾಮಿತ್ರ', 'ವಾಮದೇವ', 'ಅತ್ರಿ'-

1. 'ತಾನಪಿ' ಎಂಬ ವಾ॥ ಆ॥ ಪಾಠಕ್ಕಿಂತ ಇದು ಮೇಲು.
2. ಶತರ್ಚಿಗಳು ಎಂದರೆ ಋಗ್ವೇದದ ಪ್ರಥಮಮಂಡಲವನ್ನು ಕಂಡುಹಿಡಿದ ಋಷಿಗಳು ; ಈ ಪ್ರಾಣನು ಕಾರ್ಯಕರಣಸಂಘಾತರೂಪವಾದ ಪುರುಷನನ್ನು ನೂರುವರ್ಷಗಳವರೆಗೆ ಪೂಜ್ಯನನ್ನಾಗಿ ಮಾಡುವದರಿಂದ ಇವನನ್ನೂ ಆ ಋಷಿಗಳನ್ನೂ ಶತರ್ಚಿಗಳು ಎಂದು ಕರೆಯುವರು ಎಂದರ್ಥ ಭಾಷ್ಯದಲ್ಲಿ 'ಋಷಿಮಪಿ' ಎಂದಿರುವದು ಎಲ್ಲಾ ಋಷಿಗಳಿಗೂ ಪ್ರತ್ಯೇಕವಾಗಿ ಶತರ್ಚಿಶಬ್ದವು ಅನ್ವಯಿಸುವದೆಂದು ತಿಳಿಸುವದಕ್ಕೆ. ಮುಂದೆ 'ಅತ್ರಿಃ' ಎಂಬ ಏಕವಚನಪ್ರಯೋಗವನ್ನೂ ಹೀಗೆಯೇ ತಿಳಿಯಬೇಕು.

ಮೊದಲಾದ[1] ಋಷಿಗಳನ್ನೇ (ಆ) ಶ್ರುತಿಯು ಪ್ರಾಣನನ್ನಾಗಿ (ಮಾಡಿ) ಈ ಶ್ರುತಿ (ಹೇಳಿ)ರುತ್ತದೆ. ಅದರಂತೆಯೇ ಈ ಅಂಗಿರಸ್ಸು, ಬೃಹಸ್ಪತಿ, ಆಯಾಸ್ಯ- ಎಂಬ ಪ್ರಾಣೋಪಾಸಕರಾದ ಋಷಿಗಳನ್ನೂ ಅಭೇದ(ರೂಪದಿಂದ) ಉಪಾಸನೆ ಮಾಡುವದಕ್ಕಾಗಿ ಪ್ರಾಣನನ್ನಾಗಿ (ಮಾಡಿ ಹೇಳು)ತ್ತಿದೆ (ಎನ್ನುವದು ಯುಕ್ತ). ''ಪ್ರಾಣನೇ ತಂದೆ, ಪ್ರಾಣನೇ ತಾಯಿ'' (೭-೧೫-೧) ಎಂಬಂತೆಯೂ[2] (ಇದನ್ನು ತಾದಾತ್ಮ್ಯಬೋಧಕವೆಂದು ತಿಳಿಯಬೇಕು). ಆದ್ದರಿಂದ ಅಂಗಿರಸ್ಸೆಂಬ ಋಷಿಯು ಪ್ರಾಣನೇ ಆಗಿ[3] ತನ್ನನ್ನು ಅಂಗಿರಸ್ಸೆಂಬ ಪ್ರಾಣನೆಂದು (ಭಾವಿಸಿ) ಉದ್ಗೀಥವನ್ನು (ಆ ದೃಷ್ಟಿಯಿಂದ) ಉಪಾಸನೆಮಾಡಿದನು - ಎಂದು (ವಾಕ್ಯಕ್ಕೆ) ತಾತ್ಪರ್ಯ. ಅವನು ಅಂಗಗಳಿಗೆ ಪ್ರಾಣನಾಗಿ ರಸವಾಗಿರುವನಷ್ಟೆ, ಆದ್ದರಿಂದ ಅವನು[4] ಆಂಗಿರಸನು[5].

1. 'ಮಾಧ್ಯಮರು' ಎಂದರೆ ಮೊದಲನೆಯ ಮತ್ತು ಹಾಗೂ ಕೊನೆಯ ಮಂಡಲಗಳ ನಡುವೆ ಇರುವ ಮಂಡಲಗಳ ದ್ರಷ್ಟೃಗಳಾದ ಋಷಿಗಳು ; ಸರ್ವಜಗತ್ತನ್ನೂ ತನ್ನೊಳಗೆ ಧರಿಸಿರುವದರಿಂದ ಪ್ರಾಣನು ಮಾಧ್ಯಮನು. ಗೃತ್ಸ್ನಮದನೆಂಬ ಋಷಿಯು ಎರಡನೆಯ ಮಂಡಲದ ಋಷಿ ಪ್ರಾಣವು ರೇತೋವಿಸರ್ಗಕ್ಕೆ ಕಾರಣವಾಗಿರುವದರಿಂದ ಗೃತ್ಸ್ನ ಆವಾನವು ಮದಕ್ಕೆ ಕಾರಣವಾಗಿರುವದರಿಂದ ಮದವು , ಹೀಗೆ ಪ್ರಾಣನೂ ಗೃತ್ಸ್ನಮದನು. ವಿಶ್ವಾಮಿತ್ರನು ಮೂರನೆಯ ಮಂಡಲಕ್ಕೆ ದ್ರಷ್ಟೃ ; ಭೋಕ್ತವಾದ ಪ್ರಾಣನಿಗೆ ಎಲ್ಲವೂ ಮಿತ್ರರೂಪ ವಾಗಿರುವದರಿಂದ ಅವನೂ ವಿಶ್ವಾಮಿತ್ರ. ವಾಮದೇವನು ನಾಲ್ಕನೆಯ ಮಂಡಲದ ದ್ರಷ್ಟೃ ; ಪ್ರಾಣನು ವಾಗಾದಿಗಳಿಗೆ ಸಂಭಜನೀಯನಾಗಿರುವ ದೇವನಾಗಿರುವದರಿಂದ ವಾಮದೇವನು. ಅತ್ರಿಗಳು ಐದನೆಯ ಮಂಡಲದ ದ್ರಷ್ಟೃಗಳು ; ಎಲ್ಲವನ್ನೂ ವಾಪಗಳಿಂದ ತ್ರಾಣಮಾಡುವದರಿಂದ (ಕಾವಾಡುವದರಿಂದ) ಪ್ರಾಣನೂ ಅತ್ರಿಗಳು. 'ಮುಂತಾದ' ಎಂಬ ಮಾತಿನಿಂದ ಆರಣ್ಯಕದ ಅಧ್ಯಾಯದ ಎರಡನೆಯ ಖಂಡದಲ್ಲಿ ಹೇಳಿರುವ ಭರದ್ವಾಜ, ವಸಿಷ್ಠ - ಮುಂತಾದ ಋಷಿಗಳನ್ನೂ ಗ್ರಹಿಸಬೇಕು.

2. ಪ್ರಾಣನು ಸರ್ವಾತ್ಮನಾದ್ದರಿಂದ ಪ್ರಾಣನೇ ತಂದೆ, ಪ್ರಾಣನೇ ತಾಯಿ ; ಇದರಂತೆ ಪ್ರಾಣನೇ ಈ ಋಷಿಗಳು ಎಂದರ್ಥ.

3. ಪ್ರಾಣಸಾಕ್ಷಾತ್ಕಾರವನ್ನು ಹೊಂದಿ. 4. ಪ್ರಾಣನು.

5. ಅಂಗಿರಸ್ಸೆಂದೇ ಋಷಿಯ ಹೆಸರು ; ಇಲ್ಲಿ ಆಂಗಿರಸಃ ಎಂದಿರುವದು ಅದೇ ಶಬ್ದಕ್ಕೆ ಸ್ವಾರ್ಥದಲ್ಲಿ ತದ್ಧಿತಪ್ರತ್ಯಯವನ್ನು ಪಡೆದ ಅದೇ ಶಬ್ದದ ರೂಪಾಂತರ. ಭಾಷ್ಯದಲ್ಲಿ ಮಿಕ್ಕ ಕಡೆಗಳಲ್ಲೆಲ್ಲ ಆಂಗಿರಸ್ಸೆಂದೇ ಪ್ರಯೋಗವಿದ್ದರೂ ಬೃಹದಾರಣ್ಯಕದ ಸಮಾನವ್ರಕರಣದಲ್ಲಿ ಆಂಗಿರಸನೆಂದೇ ಪ್ರಯೋಗಿಸಿರುವದರಿಂದ ಈ ಶ್ರುತಿಯಲ್ಲಿಯೂ 'ಆಂಗಿರಸಂ ಮನ್ಯನ್ತೇ' ಎಂಬಲ್ಲಿ ಆಂಗಿರಸಶಬ್ದವನ್ನೇ ಪ್ರಯೋಗಿಸಿದೆ ಎಂದು ಭಾಷ್ಯಕಾರರು ಭಾವಿಸಿರಬೇಕೆಂದು ತೋರುತ್ತದೆ. 'ತೇನಾಸೌ ಅಙ್ಗಿರಸಃ' ಎಂಬ ವಾ॥ ಪಾಠವು ಸರಿಯಲ್ಲವೆಂಬುದು ಸ್ಪಷ್ಟ.

(ಉಪನಿಷತ್ತು)

ತೇನ ತಗ್ಂ ಹ ಬೃಹಸ್ಪತಿರುದ್ಗೀಥಮುಪಾಸಾಂಚಕ್ರ ಏತಮು ಏವ ಬೃಹಸ್ಪತಿಂ ಮನ್ಯನ್ತೇ ವಾಗ್ಘಿ ಬೃಹತೀ ತಸ್ಯಾ ಏಷ ಪತಿಃ ॥೧೧॥

ತೇನ ತಗ್ಂ ಹಾಯಾಸ್ಯ ಉದ್ಗೀಥಮುಪಾಸಾಂಚಕ್ರ ಏತಮು ಏವಾಯಾಸ್ಯಂ ಮನ್ಯನ್ತ ಆಸ್ಯಾದ್ ಯದಯತೇ ॥೧೨॥

೧೧. ಅದರಿಂದಲೇ ಅವನನ್ನು ಬೃಹಸ್ಪತಿಯು (ಬೃಹಸ್ಪತಿಗುಣ ಯುಕ್ತನೆಂದೆಣಿಸಿ) ಉದ್ಗೀಥವನ್ನು ಉಪಾಸನೆಮಾಡಿದನು. ಇವನನ್ನೇ ಬೃಹಸ್ಪತಿಯೆಂದು ತಿಳಿಯುತ್ತಾರೆ. ವಾಕ್ಕೇ ಅಲ್ಲವೆ, ಬೃಹತಿಯು ? ಅದಕ್ಕೆ ಇವನು ಪತಿಯು.

೧೨. ಅದರಿಂದಲೇ ಅವನನ್ನು ಆಯಾಸ್ಯನು (ಆಯಾಸ್ಯಗುಣ ಯುಕ್ತನೆಂದೆಣಿಸಿ) ಉದ್ಗೀಥವನ್ನು ಉಪಾಸನೆಮಾಡಿದನು. ಇವನನ್ನೇ ಆಯಾಸ್ಯನೆಂದು ತಿಳಿಯುತ್ತಾರೆ ; ಏಕೆಂದರೆ ಆಸ್ಯದಿಂದ ಬರುತ್ತಾನೆ.

ಬೃಹಸ್ಪತ್ಯಾಯಾಸ್ಯರ ಪ್ರಾಣೋಪಾಸನೆ

(ಭಾಷ್ಯ)

೩೧. ತಥಾ ವಾಚೋ ಬೃಹತ್ಯಾಃ ಪತಿಃ, ತೇನ ಅಸೌ ಬೃಹಸ್ಪತಿಃ । ತಥಾ ಯತ್ ಯಸ್ಮಾತ್ ಆಸ್ಯಾತ್ ಅಯತೇ ನಿರ್ಗಚ್ಛತಿ ತೇನ ಆಯಾಸ್ಯಃ । ಋಷಿಃ ಪ್ರಾಣ ಏವ ಸನ್ ಇತ್ಯರ್ಥಃ । ತಥಾ ಅನ್ಯೋಽಪಿ ಉಪಾಸಕಃ ಆತ್ಮಾನಮೇವ ಆಙ್ಗಿರಸಾದಿಗುಣಂ ಪ್ರಾಣಮ್ ಉದ್ಗೀಥಮ್ ಉಪಾಸೀತ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆಯೇ ವಾಕ್ಕೆಂಬ ಬೃಹತಿಗೆ ಪತಿಯಷ್ಟೆ.[1] ಅದರಿಂದ ಈ ಪ್ರಾಣನು ಬೃಹಸ್ಪತಿಯು. ಹೀಗೆಯೇ ಆಸ್ಯದಿಂದ ಬರುತ್ತಾನೆ, (ಮುಖದಿಂದ) ಹೊರಟುಬರುತ್ತಾನಷ್ಟೆ ; ಅದರಿಂದ ಆಯಾಸ್ಯನು. ಋಷಿಯು ಪ್ರಾಣನೇ ಆಗಿ (ಉಪಾಸನೆಮಾಡಿದನು) ಎಂದರ್ಥ.

---

1. ಬೃ. ಭಾ. ೧-೩-೨೦ (ಭಾ. ಭಾ. ೮೨) ರಲ್ಲಿ ಬೃಹಸ್ಪತಿಶಬ್ದದ ನಿರ್ವಚನವನ್ನು ಮಾಡಿರುವದನ್ನು ನೋಡಿರಿ.

ಹೀಗೆಯೇ ಬೇರೆಯ ಉಪಾಸಕನೂ ತನ್ನನ್ನೇ ಆಂಗಿರಸಾದಿಗುಣವುಳ್ಳ ಪ್ರಾಣನೆಂದು[1] (ಭಾವಿಸಿಕೊಂಡು) ಉದ್ಗೀಥವನ್ನು (ಈ ದೃಷ್ಟಿಯಿಂದ) ಉಪಾಸನೆ ಮಾಡಬೇಕು ಎಂದರ್ಥ.[2]

(ಉಪನಿಷತ್ತು)

ತೇನ ತಗ್ಂ ಹ ಬಕೋ ದಾಲ್ಭ್ಯೋ ವಿದಾಂಚಕಾರ ।
ಸ ಹ ನೈಮಿಶೀಯಾನಾಮುದ್ಗಾತಾ ಬಭೂವ ಸ ಹ ಸ್ಮೈಭ್ಯಃ
ಕಾಮಾನಾಗಾಯತಿ ॥೧೩॥

೧೩. ಅದರಿಂದಲೇ ಬಕದಾಲ್ಭ್ಯನು ಅವನನ್ನು ಅರಿತುಕೊಂಡನು. ಅವನು ನೈಮಿಶೀಯರಿಗೆ ಉದ್ಗಾತೃವಾಗಿದ್ದನು ; ಅವನು ಅವರಿಗೆ ಕಾಮಗಳನ್ನು ಆಗಾನಮಾಡಿಕೊಟ್ಟನು.

ಬಕನು ಯಜಮಾನರಿಗೆ ಫಲವನ್ನು ಗಾನಮಾಡಿದ್ದು

(ಭಾಷ್ಯ)

೩.೨. ನ ಕೇವಲಮ್ ಅಙ್ಗಿರಃಪ್ರಭೃತಯಃ ಉಪಾಸಾಂಚಕ್ರಿರೇ । ತಂ ಹ ಬಕೋ ನಾಮ ದಲ್ಭ್ಯಸ್ಯ[3] ಅಪತ್ಯಂ ದಾಲ್ಭ್ಯಃ ವಿದಾಂಚಕಾರ ಯಥಾದರ್ಶಿತಂ ಪ್ರಾಣಂ ವಿಜ್ಞಾತವಾನ್ । ವಿದಿತ್ವಾ ಚ ಸ ಹ ನೈಮಿಶೀಯಾನಾಂ ಸತ್ರಿಣಾಮ್ ಉದ್ಗಾತಾ ಬಭೂವ । ಸ ಚ ಪ್ರಾಣವಿಜ್ಞಾನಸಾಮರ್ಥ್ಯಾತ್ ಏಭ್ಯಃ ನೈಮಿಶೀಯೇಭ್ಯಃ ಕಾಮಾನ್ ಆಗಾಯತಿ ಸ ಹ ಆಗೀತವಾನ್ ಕಿಲ ಇತ್ಯರ್ಥಃ ॥

(ಭಾಷ್ಯಾರ್ಥ)

ಆಂಗಿರಸ್ಸೇ ಮೊದಲಾದವರು ಮಾತ್ರವೇ (ಪ್ರಾಣನನ್ನು ಹೀಗೆ) ಉಪಾಸನೆ ಮಾಡಲಿಲ್ಲ[4]. ಅವನನ್ನು ಬಕನೆಂಬ ಹೆಸರಿನ ದಾಲ್ಭ್ಯನು, ದಲ್ಭ್ಯನ ಮಗನು, ಅರಿತು-

1. ಪ್ರಾಣನು ಆಂಗಿರಸನೆಂಬುದನ್ನು ಬೃ. ಭಾ. ೧-೩-೧೯ (ಭಾ. ಭಾ. ೭೯) ರಲ್ಲಿ ವಿವರಿಸಿರುವದನ್ನು ನೋಡಿ.
2. ಇಲ್ಲಿ ಆಯಾ ಋಷಿಗಳು ಹೀಗೆಂದು ಉಪಾಸನೆಮಾಡಿದರೆಂದು ತಿಳಿಸಿರುವದು ಬರಿಯ ಅರ್ಥವಾದವಲ್ಲ, ಇದು ವಿಧಿಯೇ ಎಂದು ಭಾವ.
3. 'ದಲ್ಭಸ್ಯ' ಎಂದು ವಾ॥ ಪಾಠ.
4. ಮಿಕ್ಕವರೂ ಉಪಾಸನೆಮಾಡಿದರೆ ಫಲವುಂಟೆಂಬುದಕ್ಕೆ ಲಿಂಗವಿದು.

ಕೊಂಡನು. ಮೇಲೆ ತಿಳಿಸಿರುವಂತೆ ಪ್ರಾಣನನ್ನು ಉಪಾಸನೆಮಾಡಿ (ಸಾಕ್ಷಾತ್ಕರಿಸಿ ಕೊಂಡನು. ಹಾಗೆ) ಅರಿತುಕೊಂಡು ಅವನು ನೈಮಿಶೀಯರೆಂಬ ಸತ್ರಿಗಳಿಗೆ ಉದ್ಗಾತೃವಾಗಿದ್ದನು. ಮತ್ತು ಅವನು (ಈ) ಪ್ರಾಣೋಪಾಸನೆಯ ಬಲದಿಂದ ಅವರಿಗೆ ಅಂದರೆ ನೈಮಿಶೀಯರಿಗೆ ಕಾಮಗಳನ್ನು ಗಾನಮಾಡಿಕೊಟ್ಟನು,[1] ಹಾಡಿ (ಫಲವನ್ನು ತರಿಸಿ) ಕೊಡುವನಾದನು.

ಅಂಗಿರಸ್ತ್ವದಿಗುಣೋಪಾಸನೆಗೆ ಫಲ

(ಉಪನಿಷತ್ತು)

ಆಗಾತಾ ಹ ವೈ ಕಾಮಾನಾಂ ಭವತಿ ಯ ಏತದೇವಂ ವಿದ್ವಾನಕ್ಷರಮುದ್ಗೀಥಮುಪಾಸ್ತ ಇತ್ಯಧ್ಯಾತ್ಮಮ್ ॥೧೪॥

೧೪. ಯಾವನು ಹೀಗೆಂದು ಅರಿತುಕೊಂಡು ಈ ಉದ್ಗೀಥವೆಂಬ ಅಕ್ಷರವನ್ನು ಉಪಾಸನೆಮಾಡುವನೋ ಅವನು ಕಾಮಗಳನ್ನು ಆಗಾನ ಮಾಡುವನಾಗುವನು. ಹೀಗೆ ಅಧ್ಯಾತ್ಮ(ವಾದ ಉಪಾಸನೆ ಮುಗಿಯಿತು).

ಉಪಾಸಕನಿಗಾಗುವ ಫಲ

(ಭಾಷ್ಯ)

೩೩. ತಥಾ ಅನ್ಯೋಽಪಿ ಉದ್ಗಾತಾ ಆಗಾತಾ ಹ ವೈ ಕಾಮಾನಾಂ ಭವತಿ ಯ ಏತತ್ ಏವಂ[2] ವಿದ್ವಾನ್ ಯಥೋಕ್ತಗುಣಂ ಪ್ರಾಣಮ್ ಅಕ್ಷರಮ್ ಉದ್ಗೀಥಮ್ ಉಪಾಸ್ತೇ, ತಸ್ಯ ಏತದ್ ದೃಷ್ಟಂ ಫಲಮ್ ಉಕ್ತಮ್ । ಪ್ರಾಣಾತ್ಮಭಾವಸ್ತು ಅದೃಷ್ಟಮ್, "ದೇವೋ ಭೂತ್ವಾ ದೇವಾನಪ್ಯೇತಿ" (ಬೃ ೪-೧-೨....) ಇತಿ ಶ್ರುತ್ಯನ್ತರಾತ್ ಸಿದ್ಧಮೇವ ಇತ್ಯಭಿಪ್ರಾಯಃ । ಇತಿ ಅಧ್ಯಾತ್ಮಮ್ ಏತತ್ ಆತ್ಮ-ವಿಷಯಮ್ ಉದ್ಗೀಥೋಪಾಸನಮ್ ಇತಿ ಉಕ್ತೋಪಸಂಹಾರಃ ಅಧಿದೈವತೋ-ದ್ಗೀಥೋಪಾಸನೇ ವಕ್ಷ್ಯಮಾಣೇ ಬುದ್ಧಿಸಮಾಧಾನಾರ್ಥಃ ॥

---

1. ಉದ್ಗಾತೃವೇ ಈ ಉಪಾಸನೆಗೆ ಅಧಿಕಾರಿ ; ಅವನು ಫಲವನ್ನು ಯಜಮಾನನಿಗೂ ಆಗಾನಮಾಡಬಹುದು ಎಂದು ಅಭಿಪ್ರಾಯ. ಅಂಗಾವಬದ್ಧೋಪಾಸನೆಗಳಿಗೆ ಋತ್ವಿಜರೇ ಅಧಿಕಾರಿಗಳು ಎಂಬ ವಿಷಯಕ್ಕೆ ಸೂ. ಭಾ. ೩-೪-೪೫ರಲ್ಲಿರುವ ಚರ್ಚೆಯನ್ನು ನೋಡಿ.

2. ಇಲ್ಲಿ ಏತದೇವಮ್ ಎಂದಿರುವ ಈ ವಾ।। ಆ।। ಪಾಠವೇ ಮೇಲು

(ಭಾಷ್ಯಾರ್ಥ)

ಹೀಗೆಯೇ ಇನ್ನೊಬ್ಬ ಉದ್ಗಾತೃವಾದರೂ ಕಾಮಗಳ ಆಗಾನವನ್ನು ಮಾಡ (ಬಲ್ಲವ)ನೇ ಆಗುವನು. ಯಾವನು ಹೀಗೆಂದು ಅರಿತುಕೊಂಡು ಮೇಲೆ ಹೇಳಿದ ಗುಣಗಳುಳ್ಳ ಪ್ರಾಣನೆಂದು ಈ ಉದ್ಗೀಥವೆಂಬ ಅಕ್ಷರವನ್ನು[1] ಉಪಾಸನೆಮಾಡು-ತ್ತಾನೋ ಅವನಿಗೆ ಇದು ದೃಷ್ಟಫಲವು. ಪ್ರಾಣಾತ್ಮಭಾವರೂಪವಾದ ಅದೃಷ್ಟಫಲ ವಾದರೋ[2] ''ದೇವನೇ ಆಗಿ ದೇವತೆಗಳನ್ನು ಸೇರಿಕೊಳ್ಳುವನು'' (ಬೃ. ೪-೧-೨ ರಿಂದ ೭) ಎಂಬ ಬೇರೊಂದು ಶ್ರುತಿಯಿಂದ ಸಿದ್ಧವೇ - ಎಂದು ಅಭಿಪ್ರಾಯ.

ಹೀಗೆ ಅಧ್ಯಾತವು, ಇದು ಆತ್ಮವಿಷಯವಾದ[3] ಉದ್ಗೀಥೋಪಾಸನೆ ಎಂದು (ಇದುವರೆಗೆ) ಹೇಳಿದ್ದನ್ನು ಉಪಸಂಹಾರಮಾಡಿರುವದು ಮುಂದೆ ಹೇಳಲಾಗುವ ಅಧಿದೈವತವಾದ ಉದ್ಗೀಥೋಪಾಸನೆಯಲ್ಲಿ ಬುದ್ಧಿಯನ್ನು ನಿಲ್ಲಿಸುವದಕ್ಕಾಗಿ.[4]

ಒಂದನೆಯ ಅಧ್ಯಾಯ - ಮೂರನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಆದಿತ್ಯದೃಷ್ಟಿಯಿಂದ ಉದ್ಗೀಥೋಪಾಸನೆ

(ಉಪನಿಷತ್ತು)

ಅಥಾಧಿದೈವತಂ ಯ ಏವಾಸೌ ತಪತಿ ತಮುದ್ಗೀಥಮುಪಾ-ಸೀತೋದ್ಯನ್ ವಾ ಏಷ ಪ್ರಜಾಭ್ಯ ಉದ್ಗಾಯತಿ। ಉದ್ಯಗ್ಂಸ್ತಮೋ ಭಯಮಪಹನ್ತ್ಯಪಹನ್ತಾ ಹ ವೈ ಭಯಸ್ಯ ತಮಸೋ ಭವತಿ ಯ ಏವಂ ವೇದ ॥೧॥

1. ಓಂಕಾರವನ್ನೇ ಪ್ರಾಣದೃಷ್ಟಿಯಿಂದ ಉಪಾಸನೆಮಾಡಬೇಕೆಂಬುದು ಇಲ್ಲಿ ಸ್ಪಷ್ಟವಾಗಿದೆ.
2. ಸತ್ತ ಬಳಿಕ ಪರಲೋಕದಲ್ಲಿ ಆಗುವ ಫಲವು ಎಂದರ್ಥ.
3. ಶರೀರದಲ್ಲಿ ಪ್ರಾಣವಿಷಯವಾದ, ಪ್ರಾಣದೃಷ್ಟಿಯಿಂದ ಚಿಂತಿಸುವ- ಎಂದರ್ಥ.
4. ಮುಂದೆ ಹೇಳಲಿರುವ ಅಧಿದೈವತವಾದ ಆದಿತ್ಯದೃಷ್ಟಿಯ- ಉದ್ಗೀಥೋಪಾಸನೆಯ ಕಡೆಗೆ ಮನಸ್ಸನ್ನು ಎಳೆಯುವದಕ್ಕಾಗಿ 'ಇಲ್ಲಿಗೆ ಆಧ್ಯಾತ್ಮೋಪಾಸನೆ ಮುಗಿಯಿತು' ಎಂದು ಉಪಸಂಹಾರಮಾಡಿರುತದೆ.

೧. ಇನ್ನು ಅಧಿದೈವತವು. ಅಗೊ, ಆ ತಪಿಸುತ್ತಿರುವನಲ್ಲ, ಅವನೆಂದೇ ಉದ್ಗೀಥವನ್ನು ಉಪಾಸನೆಮಾಡಬೇಕು. ಉದಯಿಸುವಾಗ ಇವನು ಪ್ರಜೆಗಳಿಗೆ ಉದ್ಗಾನಮಾಡುತ್ತಾನೆ, ಉದಯಿಸುವಾಗಲೇ ತಮಸ್ಸನ್ನೂ ಭಯವನ್ನೂ ನಾಶಗೊಳಿಸುತ್ತಾನೆ. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನು ತಮಸ್ಸಿನ ಭಯವನ್ನು ನಾಶಗೊಳಿಸುವವನಾಗುವನು.

ಆದಿತ್ಯನು ಉದ್ಗೀಥವು

(ಭಾಷ್ಯ)

೩೪. ಅಥ ಅನನ್ತರಮ್ ಅಧಿದೈವತಂ ದೇವತಾವಿಷಯಮ್ ಉದ್ಗೀಥೋಪಾಸನಂ ಪ್ರಸುತ್ತಮ್ ಇತ್ಯರ್ಥಃ । ಅನೇಕಧಾ ಉಪಾಸ್ಯತ್ವಾತ್ ಉದ್ಗೀಥಸ್ಯ । ಯ ಏವಾಸೌ ಆದಿತ್ಯಃ ತಪತಿ ತಮ್ ಉದ್ಗೀಥಮ್ ಉಪಾಸೀತ । ಆದಿತ್ಯದೃಷ್ಟ್ಯಾ ಉದ್ಗೀಥಮ್ ಉಪಾಸೀತ ಇತ್ಯರ್ಥಃ । 'ತಮ್ ಉದ್ಗೀಥಮ್' ಇತಿ ಉದ್ಗೀಥಶಬ್ದೋಽಕ್ಷರವಾಚೀ ಸನ್ ಕಥಮ್ ಆದಿತ್ಯೇ ವರ್ತತ ಇತಿ ? ಉಚ್ಯತೇ । ಉದ್ಯನ್ ಉದ್ಗಚ್ಛನ್ ವಾ ಏಷ ಪ್ರಜಾಭ್ಯಃ ಪ್ರಜಾರ್ಥಮ್ ಉದ್ಗಾಯತಿ ಪ್ರಜಾನಾಮ್ ಅನ್ನೋತ್ಪತ್ತ್ಯರ್ಥಮ್ । ನ ಹಿ ಅನುದ್ಯತಿ ತಸ್ಮಿನ್ ವ್ರೀಹ್ಯಾದೇಃ ಪಕ್ತಿ[1] ಸ್ಯಾತ್ । ಅತ ಉದ್ಗಾಯತೀವ ಉದ್ಗಾಯತಿ । ಯಥೈವ ಉದ್ಗಾತಾ ಅನ್ನಾರ್ಥಮ್ । ಅತಃ ಉದ್ಗೀಥಃ ಸವಿತಾ ಇತ್ಯರ್ಥಃ । ಕಿಂ ಚ ಉದ್ಯನ್ ನೈಶಂ ತಮಃ ತಜ್ಜಂ ಚ ಭಯಂ ಪ್ರಾಣಿನಾಮ್ ಅಪಹನ್ತಿ ತಮ್ ಏವಂಗುಣಂ ಸವಿತಾರಂ ಯೋ ವೇದ ಸಃ ಅಪಹನ್ತಾ ನಾಶಯಿತಾ ಹ ವೈ ಭಯಸ್ಯ ಜನ್ಮಮರಣಾದಿಲಕ್ಷಣಸ್ಯ ಆತ್ಮನಃ ತಮಸಶ್ಚ ತತ್ಕಾರಣಸ್ಯ ಅಜ್ಞಾನಲಕ್ಷಣಸ್ಯ ಭವತಿ ॥

(ಭಾಷ್ಯಾರ್ಥ)

ಇನ್ನು (ಅಧ್ಯಾತ್ಮವಾದ) ಬಳಿಕ ಅಧಿದೈವತವು, ದೇವತಾವಿಷಯವಾದ ಉದ್ಗೀಥೋಪಾಸನೆಯು ಪ್ರಾರಂಭವಾಗಿರುತ್ತದೆ ಎಂದರ್ಥ. ಏಕೆಂದರೆ ಉದ್ಗೀಥವು ಅನೇಕಪ್ರಕಾರದಿಂದ ಉಪಾಸನೆಮಾಡತಕ್ಕದ್ದಾಗಿರುತ್ತದೆ[2]. ಅಗೊ, ಆ ಆದಿತ್ಯನು

---

1. 'ನಿಷ್ಪತ್ತಿಃ' ಎಂಬ ವಾ॥ ಅ॥ ಪಾಠಕ್ಕಿಂತ ಇದೇ ಮೇಲು.

2. ಉದ್ಗೀಥೋಪಾನೆಯೇ ಪ್ರಾರಂಭವಾಗಿದ್ದು ಉದ್ಗೀಥವನ್ನು ಬಗೆಬಗೆಯಿಂದ ಉಪಾಸನೆ ಮಾಡಬೇಕೆಂದು ಈವರೆಗೆ ಹೇಳಿದ್ದಾಗಿದೆ. ಹಿಂದಿನ ಪ್ರಕರಣದಲ್ಲಿ ಅಧ್ಯಾತ್ಮವಿಷಯಕವಾದ ಉಪಾಸನೆಯಾಯಿತು ಎಂದು ಅದರ ಉಪಾಸನೆಯನ್ನೇ ಹೇಳಿದೆ ; →

ತಪಿಸುತ್ತಿರುವನಲ್ಲ, ಅವನೆಂದೇ ಉದ್ಗೀಥವನ್ನು ಉಪಾಸನೆಮಾಡಬೇಕು. ಆದಿತ್ಯ ದೃಷ್ಟಿಯಿಂದ ಉದ್ಗೀಥವನ್ನು ಉಪಾಸನೆಮಾಡಬೇಕು ಎಂದರ್ಥ.

(ಆಕ್ಷೇಪ) :- ತಮ್ ಉದ್ಗೀಥಮ್ (ಅವನೆಂದು ಉದ್ಗೀಥವನ್ನು) ಎಂದು (ಹೇಳಿದೆಯಲ್ಲ), ಉದ್ಗೀಥಶಬ್ದವು ಅಕ್ಷರವಾಚಕವಾಗಿರುತ್ತದೆಯಾಗಿ ಆದಿತ್ಯನಲ್ಲಿ (ಅದಕ್ಕೆ) ಹೇಗೆ ಪ್ರವೃತ್ತಿ[1] ?

(ಪರಿಹಾರ) :- ಇದಕ್ಕೆ (ಶ್ರುತಿ) ಹೇಳುತ್ತದೆ : ಉದಯಿಸುವಾಗಲೆ ಮೇಲಕ್ಕೇಳುವಾಗಲೆ ಇವನು ಪ್ರಜೆಗಳಿಗೆ, ಪ್ರಜೆಗಳಿಗೋಸ್ಕರ ಪ್ರಜೆಗಳಿಗೆ ಅನ್ನ ವುಂಟಾಗುವದಕ್ಕಾಗಿ ಉದ್ಗಾನಮಾಡುತ್ತಾನೆ. ಅವನು ಉದಯಿಸದೆ ಇದ್ದರೆ ಬತ್ತವೇ ಮುಂತಾದವು ಪಕ್ವವಾಗಲಾರವಷ್ಟೆ ? ಆದ್ದರಿಂದ ಉದ್ಗಾನಮಾಡುತ್ತಾನೆ ಎಂದರೆ ಉದ್ಗಾನಮಾಡುವವನಂತೆ (ಉದಯಿಸುತ್ತಾನೆ)[2]. ಉದ್ಗಾತೃವು ಹೇಗೆ ಅನ್ನಕ್ಕಾಗಿ (ಉದ್ಗಾನಮಾಡುತ್ತಾನೋ) ಹಾಗೆಯೇ (ಇವನೂ ಉದ್ಗಾನಮಾಡುತ್ತಾನೆ). ಆದ್ದರಿಂದ ಸೂರ್ಯನು ಉದ್ಗೀಥವು ಎಂದರ್ಥ.

ಮತ್ತು ಉದಯಿಸುವಾಗ ರಾತ್ರೆಯ ತಮಸ್ಸನ್ನೂ ಪ್ರಾಣಿಗಳಿಗೆ ಆದರಿಂದಾಗುವ ಭಯವನ್ನೂ ನಾಶಗೊಳಿಸುತ್ತಾನೆ. ಈ ಗುಣವುಳ್ಳ[3] ಸೂರ್ಯನನ್ನು ಯಾವನು ಅರಿತುಕೊಂಡಿರುವನೋ[4] ಅವನು ಹುಟ್ಟು ಸಾವು ಮುಂತಾದ ರೂಪದ ಭಯವನ್ನು ಮತ್ತು ಅದಕ್ಕೆ ಕಾರಣವಾದ ತನ್ನ ಅಜ್ಞಾನರೂಪವಾದ ತಮಸ್ಸನ್ನು ನಾಶ ಗೊಳಿಸುವವನಾಗುತ್ತಾನೆ[5].

ಆದ್ದರಿಂದ ಈಗ ಪ್ರಕಾರಾಂತರದಿಂದ ಎಂದರೆ ಅಧಿದೈವತವಿಷಯವಾಗಿ ಆದಿತ್ಯ ದೃಷ್ಟಿಯಿಂದ ಉಪಾಸನೆ ಯನ್ನು ಹೇಳುವದಕ್ಕೇ ಇಲ್ಲಿ ಅಥಶಬ್ದವನ್ನು ಪ್ರಯೋಗಿಸಿದೆ, ಉಪಾಸ್ಯಾಂತರವನ್ನು ಹೇಳುವದಕ್ಕಲ್ಲ.

1. ಆದಿತ್ಯದೃಷ್ಟಿಯಿಂದ ಉದ್ಗೀಥವನ್ನು ಉಪಾಸನೆಮಾಡುವದಕ್ಕೆ ಆದಿತ್ಯನಲ್ಲಿಯೂ ಉದ್ಗೀಥತ್ವವನ್ನು ಹೇಗಾದರೂ ಸಂಪಾದನಮಾಡಬೇಕಲ್ಲವೆ ?- ಎಂದು ಆಕ್ಷೇಪ.
2. ಉದ್ಗಾತೃವು ಅನ್ನಕ್ಕಾಗಿ ಉದ್ಗಾನಮಾಡುತ್ತಾನಷ್ಟೆ ; ಸೂರ್ಯನೂ ಹಾಗೆಯೇ ಅನ್ನಕ್ಕಾಗಿ ಉದಯಿಸುತ್ತಾನೆ. ಉದಯವೇ ಅವನ ಉದ್ಗಾನವು.
3. ತಮಸ್ಸನ್ನೂ ಆದರಿಂದಾದ ಭಯವನ್ನೂ ನಾಶಗೊಳಿಸುವದೆಂಬ ಗುಣವುಳ್ಳ.
4. ಈ ಗುಣದ ಆದಿತ್ಯನೆಂಬ ದೃಷ್ಟಿಯಿಂದ ಉದ್ಗೀಥವನ್ನು ಉಪಾಸನೆಮಾಡುವನೋ.
5. ಅವನಿಗೆ ಕ್ರಮಮುಕ್ತಿಯಾಗುವದು ಎಂದರ್ಥ.

ಪ್ರಾಣಾದಿತ್ಯರಿಗೆ ತತ್ತ್ವತಃ ಅಭೇದ

(ಉಪನಿಷತ್ತು)

ಸಮಾನ ಉ ಏವಾಯಂ ಚಾಸೌ ಚೋಷ್ಣೋಽಯಮುಷ್ಣೋಽಸೌ ಸ್ವರ ಇತೀಮಮಾಚಕ್ಷತೇ ಸ್ವರ ಇತಿ ಪ್ರತ್ಯಾಸ್ವರ ಇತ್ಯಮುಂ ತಸ್ಮಾದ್ ವಾ ಏತಮಿಮಮಮುಂ ಚೋದ್ಗೀಥಮುಪಾಸೀತ ॥೨॥

೨. ಇವನೂ ಅವನೂ ಸಮಾನವೇ. ಇವನು ಉಷ್ಣನು, ಅವನೂ ಉಷ್ಣನೇ. ಇವನನ್ನು ಸ್ವರವೆಂದು ಕರೆಯುವರು ; ಅವನನ್ನು ಸ್ವರವೆಂದೂ ಪ್ರತ್ಯಾಸ್ವರವೆಂದೂ (ಕರೆಯುವರು). ಆದ್ದರಿಂದ ಇವನೆಂದೂ ಅವನೆಂದೂ ಉದ್ಗೀಥವನ್ನು ಉಪಾಸನೆಮಾಡಬೇಕು.

ಪ್ರಾಣಾದಿತ್ಯರ ಉಪಾಸನೆಯು ಒಂದೇ

(ಭಾಷ್ಯ)

೩ಶಿ. ಯದ್ಯಪಿ ಸ್ಥಾನಭೇದಾತ್ ಪ್ರಾಣಾದಿತ್ಯೌ ಭಿನ್ನಾವಿವ ಲಕ್ಷ್ಯೇತೇ ತಥಾಪಿ ನ ಸತತ್ತ್ವಭೇದಸ್ತಯೋಃ । ಕಥಮ್ ? ಸಮಾನ ಉ ಏವ ತುಲ್ಯ ಏವ ಪ್ರಾಣಃ ಸವಿತ್ರಾ ಗುಣತಃ ಸವಿತಾ ಚ ಪ್ರಾಣೇನ । ಯಸ್ಮಾತ್ ಉಷ್ಣೋಽಯಂ ಪ್ರಾಣಃ, ಉಷ್ಣಶ್ಚಾಸೌ ಸವಿತಾ । ಕಿಂ ಚ ಸ್ವರಃ ಇತಿ ಇಮಂ ಪ್ರಾಣಮ್ ಆಚಕ್ಷತೇ ಕಥಯನ್ತಿ ತಥಾ ಸ್ವರ ಇತಿ ಪ್ರತ್ಯಾಸ್ವರಃ ಇತಿ ಚ ಅಮುಂ ಸವಿತಾರಮ್ । ಯಸ್ಮಾತ್ ಪ್ರಾಣಃ ಸ್ವರತ್ಯೇವ ನ ಪುನಃ ಮೃತಃ ಪ್ರತ್ಯಾಗಚ್ಛತಿ । ಸವಿತಾ ತು ಅಸ್ತಮಿತ್ವಾ ಪುನರಪಿ ಅಹನ್ಯಹನಿ ಪ್ರತ್ಯಾಗಚ್ಛತಿ । ಅತಃ ಪ್ರತ್ಯಾಸ್ವರಃ । ಅಸ್ಮಾತ್ ಗುಣತಃ ನಾಮತಶ್ಚ ಸಮಾನೌ ಇತರೇತರಂ ಪ್ರಾಣಾದಿತ್ಯೌ । ಅತಃ ಸತತ್ತ್ವಭೇದಾತ್[1] ಏತಂ ಪ್ರಾಣಮ್ ಇಮಮ್ ಅಮುಂ ಚ ಆದಿತ್ಯಮ್ ಉದ್ಗೀಥಮ್ ಉಪಾಸೀತ ॥

(ಭಾಷ್ಯಾರ್ಥ)

ಸ್ಥಾನಗಳು ಬೇರೆ(ಬೇರೆ)ಯಾಗಿರುವದರಿಂದ ಪ್ರಾಣಾದಿತ್ಯರು ಬೇರೆಬೇರೆ ಎಂದು ಕಂಡುಬರುತ್ತಾರೆ, ನಿಜ. ಆದರೂ ಅದು ಅವರಿಬ್ಬರಿಗೂ (ಇರುವ) ತತ್ತ್ವದ ಭೇದವಿಲ್ಲ. ಹೇಗೆಂದರೆ, ಸಮಾನವೂ[2] ಪ್ರಾಣನು ಸೂರ್ಯನಿಗೂ ಸೂರ್ಯನು

---

1. ತತ್ತ್ವಭೇದಾತ್ ಎಂಬ ಆ॥ ವಾ॥ ಪಾಠದಲ್ಲಿ ಸ ಬಿಟ್ಟುಹೋಗಿದೆ.
2. ಉಶಬ್ದವು ಅಪಿ ಎಂಬರ್ಥದ್ದು ; ಸಮಾನವೂ ಎಂದದ್ದರಿಂದ ಸ್ಥಾನಭೇದದಿಂದ ಭೇದವೂ ಇದೆ ಎಂದಂತಾಯಿತು.

ಪ್ರಾಣನಿಗೂ ಗುಣದಿಂದ[1] ಸಮಾನವೂ(ಆಗಿರುತ್ತಾರೆ). ಹೇಗೆಂದರೆ ಈ ಪ್ರಾಣನು ಉಷ್ಣವು, ಆ ಸೂರ್ಯನೂ ಉಷ್ಣವೇ. ಮತ್ತು ಈ ಪ್ರಾಣನನ್ನು ಸ್ವರವೆಂದು ಕರೆಯುವರು, (ಹಾಗೆಂದು) ಹೆಸರಿಸುತ್ತಾರೆ ; ಆ ಸೂರ್ಯನನ್ನು ಸ್ವರವೆಂದೂ ಪ್ರತ್ಯಾಸ್ವರವೆಂದೂ (ಕರೆಯುವರು) ; ಏಕೆಂದರೆ ಪ್ರಾಣನು (ಸ್ವರತಿ) ಹೋಗು-ತ್ತಾನೆಯೇ ಹೊರತು ಮತ್ತೆ ಸತ್ತಬಳಿಕ ಹಿಂದಕ್ಕೆ ಬರುವದಿಲ್ಲ, ಸೂರ್ಯನೋ ಎಂದರೆ ಅಸ್ತಮಯವಾದ ಬಳಿಕ ದಿನದಿನವೂ ಮತ್ತೂ ಹಿಂದಕ್ಕೆ ಬರುತ್ತಾನೆ. ಆದ್ದರಿಂದ (ಅವನು) ಪ್ರತ್ಯಾಸ್ವರನು, ಈ ಗುಣದಿಂದಲೂ ನಾಮದಿಂದಲೂ ಪ್ರಾಣಾದಿತ್ಯರು ಒಬ್ಬರಿಗೊಬ್ಬರು ಸಮಾನರು, ಆದ್ದರಿಂದ ತತ್ತ್ವವು[2] ಅಭಿನ್ನವಾಗಿರು - ವದರಿಂದ ಈ ಪ್ರಾಣನೆಂದೂ ಆ ಆದಿತ್ಯನೆಂದೂ ಉದ್ಗೀಥವನ್ನು ಉಪಾಸನೆ ಮಾಡಬೇಕು.

ವ್ಯಾನದೃಷ್ಟಿಯಿಂದ ಉದ್ಗೀಥೋಪಾಸನೆ

(ಉಪನಿಷತ್ತು)

ಅಥ ಖಲು ವ್ಯಾನಮೇವೋದ್ಗೀಥಮುಪಾಸೀತ ಯದ್ವೈ ಪ್ರಾಣಿತಿ ಸ ಪ್ರಾಣೋ ಯದಪಾನಿತಿ ಸೋಽಪಾನಃ । ಅಥ ಯಃ ಪ್ರಾಣಾಪಾನಯೋಃ ಸಂಧಿಃ ಸ ವ್ಯಾನೋ ಯೋ ವ್ಯಾನಃ ಸಾ ವಾಕ್ । ತಸ್ಮಾದಪ್ರಾಣನ್ನನಪಾನನ್ ವಾಚಮಭಿವ್ಯಾಹರತಿ ॥೩॥

೩. ಇನ್ನು ವ್ಯಾನವೆಂದು ಉದ್ಗೀಥವನ್ನು ಉಪಾಸನೆಮಾಡ ಬೇಕು. ಪ್ರಾಣನವನ್ನು ಮಾಡುತ್ತಾನಲ್ಲ, ಅದೇ ಪ್ರಾಣವು ; ಅಪಾನನ ವನ್ನು ಮಾಡುತ್ತಾನಲ್ಲ, ಅದೇ ಅಪಾನವು. ಇನ್ನು ಪ್ರಾಣಾಪಾನಗಳ ಸಂಧಿಯಿದೆಯಷ್ಟೆ, ಅದೇ ವ್ಯಾನವು. ವ್ಯಾನವೆಂಬುದಿದೆಯಲ್ಲ, ಅದು ವಾಕ್ಕು ; ಆದ್ದರಿಂದ ಪ್ರಾಣನವನ್ನು ಮಾಡದೆ ಅಪಾನನವನ್ನು ಮಾಡದೆ ವಾಕ್ಕನ್ನು ಹೇಳುತಾನೆ.

1. ಗುಣತಃ ಎಂದಾದಮೇಲೆ ನಾಮತಃ ಎಂದೂ ಭಾಷ್ಯದಲ್ಲಿದ್ದು ಕೈಬಿಟ್ಟುಹೋಗಿದೆಯೇ ವಿಚಾರಣೀಯವಾಗಿದೆ. ಗುಣತಃ ಸಾಮ್ಯಂ ಸಾಧಯತಿ, ನಾಮತಃ ಸಾಮ್ಯಂ ಸಂಗಿರತೇ - ಎಂದು ಆ॥ ಟೀ॥
2. ಸತತ್ತ್ವ, ತತ್ತ್ವ- ಇವೆರಡು ಶಬ್ದಗಳಿಗೂ ಒಂದೇ ಅರ್ಥ.

ವ್ಯಾನಸ್ವರೂಪನಿರೂಪಣೆ

(ಭಾಷ್ಯ)

೩೬. ಅಥ ಖಲು ಇತಿ ಪ್ರಕಾರಾನ್ತರೇಣ ಉಪಾಸನಮ್ ಉದ್ಗೀಥಸ್ಯೋಚ್ಯತೇ। ವ್ಯಾನಮೇವ ವಕ್ಷ್ಯಮಾಣಲಕ್ಷಣಂ ಪ್ರಾಣಸ್ಯೈವ ವೃತ್ತಿವಿಶೇಷಮ್ ಉದ್ಗೀಥಮ್ ಉಪಾಸೀತ। ಅಧುನಾ ತತ್ಸತತ್ತ್ವಂ[1] ನಿರೂಪ್ಯತೇ। ಯದ್ ವೈ ಪುರುಷಃ ಪ್ರಾಣಿತಿ ಮುಖಿನಾಸಿಕಾಭ್ಯಾಂ ವಾಯುಂ ಬಹಿರ್ನಿಃಸಾರಯತಿ ಸ ಪ್ರಾಣಾಖ್ಯೋ ವಾಯೋರ್ವೃತ್ತಿವಿಶೇಷಃ। ಯದಪಾನಿತಿ ಅಪಶ್ವಸಿತಿ ತಾಭ್ಯಾಮೇವ ಅನ್ತರಾಕರ್ಷತಿ ವಾಯುಮ್, ಸೋಽಪಾನಃ ಅಪಾನಾಖ್ಯಾ ವೃತ್ತಿಃ। ತತಃ ಕಿಮಿತಿ ? ಉಚ್ಯತೇ। ಅಥ ಯ ಉಕ್ತಲಕ್ಷಣಯೋಃ ಪ್ರಾಣಾಪಾನಯೋಃ ಸಂಧಿಃ ತಯೋರನ್ತರಾವೃತ್ತಿವಿಶೇಷಃ ಸ ವ್ಯಾನಃ। ಯಃ ಸಾಂಖ್ಯಾದಿಶಾಸ್ತ್ರಪ್ರಸಿದ್ಧಃ ಶ್ರುತ್ಯಾ ವಿಶೇಷನಿರೂಪಣಾತ್ ನಾಸೌ ವ್ಯಾನ ಇತ್ಯಭಿಪ್ರಾಯಃ। ಕಸ್ಮಾತ್ ಪುನಃ ಪ್ರಾಣಾಪಾನೌ ಹಿತ್ವಾ ಮಹತಾ ಆಯಾಸೇನ ವ್ಯಾನಸ್ಯೈವ ಉಪಾಸನಮುಚ್ಯತೇ ? ವೀರ್ಯವತ್ಕರ್ಮಹೇತುತ್ವಾತ್। ಕಥಂ ವೀರ್ಯವತ್ಕರ್ಮ ಹೇತುತ್ವಮಿತಿ ? ಆಹ। ಯೋ ವ್ಯಾನಃ ಸಾ ವಾಕ್ । ವ್ಯಾನಕಾರ್ಯತ್ವಾದ್ ವಾಚಃ। ಯಸ್ಮಾದ್ ವ್ಯಾನನಿರ್ವರ್ತ್ಯಾ ವಾಕ್ ತಸ್ಮಾತ್ ಅಪ್ರಾಣನ್ ಅನಪಾನನ್ ಪ್ರಾಣಾಪಾನವ್ಯಾಪಾರೌ ಅಕುರ್ವನ್ ವಾಚಮ್ ಅಭಿವ್ಯಾಹರತಿ ಉಚ್ಚಾರಯತಿ ಲೋಕಃ॥

(ಭಾಷ್ಯಾರ್ಥ)

'ಅಥ ಖಲು' ಎಂದು ಮತ್ತೊಂದು ಪ್ರಕಾರದಿಂದ ಉದ್ಗೀಥದ ಉಪಾಸನೆಯನ್ನು (ಮಾಡಬೇಕೆಂದು) ಹೇಳಿರುತ್ತದೆ. ವ್ಯಾನವೆಂದು, ಮುಂದೆ ಹೇಳುವ ಸ್ವರೂಪದ (ಮುಖ್ಯ)ಪ್ರಾಣದ್ದೇ (ಆದ) ವೃತ್ತಿವಿಶೇಷವೆಂದು ಉದ್ಗೀಥವನ್ನು ಉಪಾಸನೆಮಾಡಬೇಕು. ಈಗ ಆದರ ತತ್ತ್ವವನ್ನು (ಶ್ರುತಿ) ಹೇಳುತ್ತದೆ. ಪುರುಷನು ಪ್ರಾಣನವನ್ನು ಮಾಡುತ್ತಾನಲ್ಲ, ಮುಖನಾಸಿಕಗಳಿಂದ ವಾಯುವನ್ನು ಹೊರಕ್ಕೆ ಬಿಡುತ್ತಾನಲ್ಲ, ಅದು ವಾಯುವಿನ ಪ್ರಾಣವೆಂಬ ವೃತ್ತಿವಿಶೇಷವು ; ಇನ್ನು ಅಪಾನನವನ್ನು ಮಾಡುತ್ತಾನಲ್ಲ, ಹಿಂದಕ್ಕೆ ಉಸಿರೆಳೆದುಕೊಳ್ಳುತ್ತಾನಲ್ಲ, ಆ (ಎರಡರ) ಮೂಲಕವೇ ವಾಯುವನ್ನು ಒಳಕ್ಕೆಳೆದುಕೊಳ್ಳುತ್ತಾನಲ್ಲ, ಅದು ಅಪಾನವು, ಅಪಾನ-

1. 'ತಸ್ಯ ತತ್ತ್ವಮ್' ಎಂಬ ಪಾಠಾಂತರವೇನೂ ಅವಶ್ಯವಿಲ್ಲ; ಅದು ಯಾರೋ ಲೇಖಕರು ಮಾರ್ಪಡಿಸಿಕೊಂಡ ಪಾಠವಿರಬಹುದೆಂತ ಕಾಣುತದೆ.

ವೆಂಬ ವೃತ್ತಿಯು. ಇದರಿಂದೇನು[1] ? ಎಂದರೆ (ಶ್ರುತಿ) ಹೇಳುತ್ತದೆ. ಇನ್ನು ಮೇಲೆ ಹೇಳಿದ ಸ್ವರೂಪದ ಪ್ರಾಣಾಪಾನಗಳ ನಡುವೆಯಿದೆಯಲ್ಲ, ಅವುಗಳ ನಡುವಿನ ವೃತ್ತಿ ವಿಶೇಷವಿದೆಯಲ್ಲ, ಅದು ವ್ಯಾನವು. ಸಾಂಖ್ಯರೇ ಮೊದಲಾದವರ ಶಾಸ್ತ್ರದಲ್ಲಿ[2] ಪ್ರಸಿದ್ಧವಾಗಿರುತ್ತದೆಯಲ್ಲ, ಅದು - ಶ್ರುತಿಯಲ್ಲಿ (ಈ) ವಿಶೇಷವನ್ನು ತಿಳಿಸಿರುವದರಿಂದ- ವ್ಯಾನವಲ್ಲ ಎಂದು ಅಭಿಪ್ರಾಯ.

(ಪ್ರಶ್ನೆ) :- ಹಾಗಾದರೆ ಪ್ರಾಣಾಪಾನ(ವೃತ್ತಿ)ಗಳನ್ನು ಬಿಟ್ಟು (ಇಷ್ಟೊಂದು) ಹೆಚ್ಚಿನ ಆಯಾಸದಿಂದ ವ್ಯಾನದ ಉಪಾಸನೆಯನ್ನೇ ಹೇಳಿರುವದೇಕೆ[3] ?

(ಉತ್ತರ) :- ಏಕೆಂದರೆ (ಅದು) ವೀರ್ಯವತ್ಕರ್ಮಕ್ಕೆ ಕಾರಣವಾಗಿರುತ್ತದೆ. (ಅದು) ವೀರ್ಯವತ್ಕರ್ಮಕ್ಕೆ ಕಾರಣವೆಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ. ವ್ಯಾನವೆಂಬುದಿದೆಯಲ್ಲ, ಅದೇ ವಾಕ್ಕು ; ಏಕೆಂದರೆ ವಾಕ್ಕು ವ್ಯಾನದಿಂದಲೇ ಆಗುತ್ತದೆ. ವಾಕ್ಕು ವ್ಯಾನದಿಂದಲೇ ಆಗುವದಲ್ಲ, ಆದ್ದರಿಂದಲೇ ಪ್ರಾಣನವನ್ನು ಮಾಡದೆ, ಅಪಾನನವನ್ನು ಮಾಡದೆ ಪ್ರಾಣಾಪಾನವ್ಯಾಪಾರಗಳನ್ನು ಮಾಡದೆಯೇ[4] ಮನುಷ್ಯನು ವಾಕ್ಕನ್ನು ಹೇಳುತ್ತಾನೆ, ನುಡಿಯುತ್ತಾನೆ.

(ಉಪನಿಷತ್ತು)

ಯಾ ವಾಕ್ ಸರ್ಕ್ಕಸ್ಮಾದಪ್ರಾಣನ್ನನಪಾನನ್ನೃಚಮಭಿವ್ಯಾಹರತಿ ಯರ್ಕ್ಕತ್ ಸಾಮ ತಸ್ಮಾದಪ್ರಾಣನ್ನನಪಾನನ್ ಸಾಮ ಗಾಯತಿ ಯತ್ ಸಾಮ ಸ ಉದ್ಗೀಥಸ್ತಸ್ಮಾದಪ್ರಾಣನ್ನನಪಾನನ್ನುದ್ಗಾಯತಿ ॥೪॥

೪. ವಾಕ್ಕೆಂಬುದಿದೆಯಲ್ಲ, ಅದು ಋಕ್ಕು ; ಆದ್ದರಿಂದ ಪ್ರಾಣನ ಮಾಡದೆ ಅಪಾನನಮಾಡದೆ ಋಕ್ಕನ್ನು ಹೇಳುತ್ತಾನೆ. ಋಕ್ಕೆಂಬುದಿದೆಯಲ್ಲ, ಅದೇ ಸಾಮವು ; ಆದ್ದರಿಂದ ಪ್ರಾಣನ ಮಾಡದೆ ಅಪಾನನಮಾಡದೆ

1. ಪ್ರಾಣಾಪಾನಗಳೇನೂ ಪ್ರಕೃತವಲ್ಲವಷ್ಟೆ ; ಅವುಗಳ ತತ್ತ್ವನಿರೂಪಣದಿಂದ ಪ್ರಕೃತವಾದ ವ್ಯಾನಕ್ಕೇನು ಬಂತು ?- ಎಂದು ಆಕ್ಷೇಪ.
2. ಸಾಂಖ್ಯರು, ಯೋಗಿಗಳು- ಮೊದಲಾದವರು ಸಂಧಿ, ಸ್ಕಂಧ, ಮರ್ಮಪ್ರದೇಶಗಳು- ಇವುಗಳಲ್ಲಿರುವ ವೃತ್ತಿಯೇ ವ್ಯಾನವು ಎಂದು ಹೇಳುತ್ತಾರಷ್ಟೆ, ಅದನ್ನು ಇಲ್ಲಿ ತಿರಸ್ಕರಿಸಿದೆ. ಆ॥ ಟೀ॥
3. ಪ್ರಾಣಾಪಾನಗಳೂ ಪ್ರಾಣವೃತ್ತಿಗಳೇ ಆಗಿರುವಲ್ಲಿ ಅವುಗಳನ್ನು ಬಿಟ್ಟು ವ್ಯಾನದವರೆಗೆ ಹೋಗಿ ಅದರ ಉಪಾಸನೆಯನ್ನು ವಿಧಿಸುವ ಆಯಾಸವನ್ನೇಕೆ ಶ್ರುತಿ ತೆಗೆದುಕೊಂಡಿತು ?
4. ಉಸಿರುಕಟ್ಟಿಯೇ.

ಸಾಮವನ್ನು ಗಾನಮಾಡುತ್ತಾನೆ. ಸಾಮವೆಂಬುದಿದೆಯಲ್ಲ, ಅದೇ ಉದ್ಗೀಥವು; ಆದ್ದರಿಂದ ಪ್ರಾಣನಮಾಡದೆ ಅಪಾನನಮಾಡದೆ ಉದ್ಗಾನಮಾಡುತ್ತಾನೆ.

ಉದ್ಗೀಥವು ವ್ಯಾನದಿಂದಾಗುತ್ತದೆ

(ಭಾಷ್ಯ)

೩೭. ತಥಾ ವಾಗ್ವಿಶೇಷಾಮ್ ಋಚಮ್, ಋಕ್ಸಂಸ್ಥಂ ಚ ಸಾಮ ಸಾಮಾವಯವಂ ಚ ಉದ್ಗೀಥಮ್ ಅಪ್ರಾಣನ್, ಅನಪಾನನ್ ವ್ಯಾನೇನೈವ ನಿರ್ವರ್ತಯತಿ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಹೀಗೆಯೇ ವಾಗ್ವಿಶೇಷವಾದ ಋಕ್ಕನ್ನೂ, ಋಕ್ಕಿನಲ್ಲಿ ನಿಂತಿರುವ ಸಾಮವನ್ನೂ ಸಾಮಾವಯವಾದ ಉದ್ಗೀಥವನ್ನೂ ಪ್ರಾಣನಮಾಡದೆ ಅಪಾನನಮಾಡದೆ ವ್ಯಾನ ದಿಂದಲೇ ಉಂಟುಮಾಡುತ್ತಾನೆ ಎಂದು ಅಭಿಪ್ರಾಯವು.

(ಉಪನಿಷತ್ತು)

ಅತೋ ಯಾನ್ಯನ್ಯಾನಿ ವೀರ್ಯವನ್ತಿ ಕರ್ಮಾಣಿ ಯಥಾऽऽಗ್ನೇ-
ರ್ಮನ್ಥನಮಾಜೇಃ ಸರಣಂ ದೃಢಸ್ಯ ಧನುಷ ಆಯಮನ-
ಮಪ್ರಾಣನ್ನನಪಾನಂಸ್ತಾನಿ ಕರೋತ್ಯೇತಸ್ಯ ಹೇತೋರ್ವ್ಯಾನ-
ಮೇವೋದ್ಗೀಥಮುಪಾಸೀತ ॥೫॥

೫. ಇದಕ್ಕಿಂತಲೂ ಬೇರೆಯಾದ ವೀರ್ಯವಂತವಾದ ಕರ್ಮಗಳಿರುವವಲ್ಲ- ಉದಾಹರಣೆಗೆ ಅಗ್ನಿಯನ್ನು ಕಡೆದು ತೆಗೆಯುವದು, ಆಜಿಯನ್ನು ಓಡಿ (ಮುಟ್ಟುವದು), ಗಟ್ಟಿಯಾದ ಬಿಲ್ಲನ್ನು ಬಗ್ಗಿಸುವದು- ಅವುಗಳನ್ನೂ ಪ್ರಾಣನಮಾಡದೆ ಅಪಾನನಮಾಡದೆ ಮಾಡುತ್ತಾನೆ. ಈ ಹೇತುವಿನಿಂದ ವ್ಯಾನವೆಂದೇ ಉದ್ಗೀಥವನ್ನು ಉಪಾಸನೆಮಾಡಬೇಕು.

ವ್ಯಾನದೃಷ್ಟಿಯ ಉಪಾಸನೆಯ ಉಪಸಂಹಾರ

(ಭಾಷ್ಯ)

೩೮. ನ ಕೇವಲಂ ವಾಗಾದ್ಯಭಿವ್ಯಾಹರಣಮೇವ ಅತೋऽಸ್ಮಾತ್ ಅನ್ಯಾನ್ಯಪಿ ಯಾನಿ ವೀರ್ಯವನ್ತಿ ಕರ್ಮಾಣಿ ಪ್ರಯತ್ನಾಧಿಕ್ಯನಿರ್ವರ್ತ್ಯಾನಿ ಯಥಾ ಅಗ್ನೇ-

ರ್ಮನ್ಥನಮ್, ಆಜೇರ್ಮರ್ಯ್ಯಾದಾಯಾಃ ಸರಣಂ ಧಾವನಮ್, ದೃಢಸ್ಯ ಧನುಷಃ ಆಯಮನಮ್ ಆಕರ್ಷಣಮ್, ಅಪ್ರಾಣನ್ ಅನಪಾನನ್ ತಾನಿ ಕರೋತಿ। ಅತೋ ವಿಶಿಷ್ಟೋ ವ್ಯಾನಃ ಪ್ರಾಣಾದಿವೃತ್ತಿಭ್ಯಃ । ವಿಶಿಷ್ಟಸ್ಯ ಉಪಾಸನಂ ಜ್ಯಾಯಃ । ಫಲವತ್ತ್ವಾತ್ ರಾಜೋಪಾಸನವತ್ । ಏತಸ್ಯ ಹೇತೋಃ ಏತಸ್ಮಾತ್ ಕಾರಣಾತ್ ವ್ಯಾನಮೇವ ಉದ್ಗೀಥಮ್ ಉಪಾಸೀತ, ನಾನ್ಯತ್ ವೃತ್ತ್ಯನ್ತರಮ್ । ಕರ್ಮ ವೀರ್ಯವತ್ತರತ್ವಂ ಫಲಮ್ ॥

(ಭಾಷ್ಯಾರ್ಥ)

ವಾಗಾದಿಗಳನ್ನು ನುಡಿಯುವದು ಮಾತ್ರವಲ್ಲ, ಇದಕ್ಕಿಂತಲೂ ಈ (ವಾಗಾದಿಗಳ ಉಚ್ಚಾರಣೆ)ಗಿಂತಲೂ ಬೇರೆಯಾಗಿ ವೀರ್ಯವಂತವಾದ ಹೆಚ್ಚಿನ ಪ್ರಯತ್ನದಿಂದ ಮಾಡಬೇಕಾಗಿರುವ ಕರ್ಮಗಳಿರುವವಲ್ಲ - ಉದಾಹರಣೆಗೆ ಅಗ್ನಿಯನ್ನು ಕಡೆದು (ತೆಗೆಯು)ವದು, (ಓಟದ ಜೂಜಿನಲ್ಲಿ) ಆಜಿಯನ್ನು ಎಂದರೆ ಎಲ್ಲೆಯನ್ನು ಓಡಿ (ಮುಟ್ಟುವದು, ಅದನ್ನು ಸೇರುವವರೆಗೂ) ಧಾವಿಸುವದು, ಗಟ್ಟಿಯಾದ ಬಿಲ್ಲನ್ನು ಬಗ್ಗಿಸುವದು, ಸೆಳೆದು (ಕೂಡಿಸುವದು)- ಅವುಗಳನ್ನೂ ಪ್ರಾಣನಮಾಡದೆ ಅಪಾನನಮಾಡದೆ ಮಾಡುತ್ತಾನೆ. ಆದ್ದರಿಂದ ಪ್ರಾಣಾದಿವೃತ್ತಿ-ಗಳಿಗಿಂತಲೂ ವ್ಯಾನವು ಹೆಚ್ಚಿನದು. ಹೆಚ್ಚಿನ (ವಸ್ತುವನ್ನು) ಉಪಾಸನೆಮಾಡುವದೇ ಮೇಲು, ಏಕೆಂದರೆ ರಾಜೋಪಾಸನೆಯಂತೆ (ಅದು) ಫಲಪ್ರದವಾಗಿರುತ್ತದೆ.

ಈ ಹೇತುವಿನಿಂದ ಈ ಕಾರಣದಿಂದ ವ್ಯಾನವೆಂದೇ ಉದ್ಗೀಥವನ್ನು ಉಪಾಸನೆ ಮಾಡಬೇಕೇ ಹೊರತು ಮತ್ತೊಂದು ವೃತ್ತಿಯೆಂದು (ಉಪಾಸನೆಮಾಡ)ಬಾರದು. (ಇದಕ್ಕೆ) ಕರ್ಮವು ವೀರ್ಯವತ್ತರವಾಗಿರುವದೇ ಫಲವು.

ಉದ್ಗೀಥಾಕ್ಷರಗಳ ಉಪಾಸನೆ

(ಉಪನಿಷತ್ತು)

ಅಥ ಖಲೂದ್ಗೀಥಾಕ್ಷರಾಣ್ಯುಪಾಸೀತೋದ್ಗೀಥ ಇತಿ ಪ್ರಾಣ ಏವೋತ್ ಪ್ರಾಣೇನ ಹ್ಯುತ್ತಿಷ್ಠತಿ ವಾಗ್ಗೀರ್ವಾಚೋ ಹ ಗಿರ ಇತ್ಯಾಚಕ್ಷತೇಽನ್ನಂ ಥಮನ್ನೇ ಹೀದಗ್ಂ ಸರ್ವಗ್ಂ ಸ್ಥಿತಮ್ ॥೬॥

೬. ಇನ್ನು ಉದ್ಗೀಥ ಎಂಬ ಉದ್ಗೀಥಾಕ್ಷರಗಳನ್ನು ಉಪಾಸನೆ ಮಾಡ ಬೇಕು. ಪ್ರಾಣವೇ ಉತ್ ; ಏಕೆಂದರೆ ಪ್ರಾಣದಿಂದಲೇ ಮೇಲಕ್ಕೇಳುತ್ತಾನೆ,

ವಾಕ್ಕು ಗೀ ; ವಾಕ್ಕುಗಳನ್ನು ಗಿರಃ ಎನ್ನುತ್ತಾರಲ್ಲವೆ ? ಅನ್ನವೇ ಥ, ಏಕೆಂದರೆ ಅನ್ನದಲ್ಲಿಯೇ ಇದೆಲ್ಲವೂ ಸ್ಥಿತವಾಗಿರುತ್ತದೆ.

ಪ್ರಾಣಾದಿಗಳೆಂದು ಅಕ್ಷರಗಳ ಉಪಾಸನೆ

(ಭಾಷ್ಯ)

೩೯. ಅಥ ಅಧುನಾ ಖಲು ಉದ್ಗೀಥಾಕ್ಷರಾಣಿ ಉಪಾಸೀತ । ಭಕ್ತ್ಯಕ್ಷರಾಣಿ ಮಾ ಭೂವನ್ ಇತ್ಯತೋ ವಿಶಿನಷ್ಟಿ ಉದ್ ಗೀ ಥ ಇತಿ । ಉದ್ಗೀಥನಾಮಾಕ್ಷರಾಣಿ ಇತ್ಯರ್ಥಃ । ನಾಮಾಕ್ಷರೋಪಾಸನೇಽಪಿ ನಾಮವತ ಏವ ಉಪಾಸನಂ ಕೃತಂ ಭವೇತ್ ಅಮುಕಮಿಶ್ರಾ ಇತಿ ಯದ್ವತ್ । ಪ್ರಾಣ ಏವ ಉತ್ । ಉತ್ ಇತ್ಯಸ್ಮಿನ್ ಅಕ್ಷರೇ ಪ್ರಾಣದೃಷ್ಟಿಃ । ಕಥಂ ಪ್ರಾಣಸ್ಯ ಉತ್ತ್ವಮ್ ಇತಿ ? ಆಹ । ಪ್ರಾಣೇನ ಹಿ ಉತಿಷ್ಠತಿ ಸರ್ವಃ । ಅಪ್ರಾಣಸ್ಯ ಅವಸಾದದರ್ಶನಾತ್ । ಅತೋಽಸ್ತಿ ಉದಃ ಪ್ರಾಣಸ್ಯ ಚ ಸಾಮಾನ್ಯಮ್ । ವಾಕ್ ಗೀಃ । ವಾಚೋ ಹ ಗಿರಃ ಇತ್ಯಾಚಕ್ಷತೇ ಶಿಷ್ಟಾಃ । ತಥಾ ಅನ್ನಂ ಥಮ್ । ಅನ್ನೇ ಹಿ ಇದಂ ಸರ್ವಂ ಸ್ಥಿತಮ್ । ಅತೋಽಸ್ತಿ ಅನ್ನಸ್ಯ-ಥಾಕ್ಷರಸ್ಯ ಚ ಸಾಮಾನ್ಯಮ್ ॥

(ಭಾಷ್ಯಾರ್ಥ)

ಇನ್ನು ಈಗ ಉದ್ಗೀಥಾಕ್ಷರಗಳನ್ನು ಉಪಾಸನೆಮಾಡಬೇಕು. (ಸಾಮ) ಭಕ್ತಿಯ ಅಕ್ಷರಗಳೆಂದಾಗಬಾರದು ಎಂದು 'ಉದ್ ಗೀ ಥ ಎಂಬ' ಎಂಬ ವಿಶೇಷಣವನ್ನು ಕೊಟ್ಟಿರುತ್ತದೆ[1]. ಉದ್ಗೀಥನಾಮದ ಅಕ್ಷರಗಳನ್ನು (ಉಪಾಸನೆಮಾಡಬೇಕು) ಎಂದರ್ಥ. ನಾಮಾಕ್ಷರೋಪಾಸನೆಗಳನ್ನು ಉಪಾಸನೆಮಾಡಿದರೂ ಇಂಥ ಮಿಶ್ರರು ಎಂದರೆ ಹೇಗೋ ಹಾಗೆ[2] ನಾಮವಂತ(ವಸ್ತುವಿನ) ಉಪಾಸನೆಯನ್ನೇ ಮಾಡಿದಂತೆ ಆಗುವದು.

ಪ್ರಾಣವೇ ಉತ್ ; ಉತ್ ಎಂಬೀ ಅಕ್ಷರದಲ್ಲಿ ಪ್ರಾಣದೃಷ್ಟಿ (ಯನ್ನು ಮಾಡಬೇಕು ಎಂದರ್ಥ) ; ಪ್ರಾಣವು ಉತ್ ಎಂಬುದು ಹೇಗೆ[3] ? ಎಂದರೆ ಶ್ರುತಿ ಹೇಳುತ್ತದೆ.

---

1. ಉತ್ ಗೀ ಥ ಎಂಬೀ ಅಕ್ಷರಗಳನ್ನೇ ಉಪಾಸನೆಮಾಡಬೇಕು, ಉದ್ಗಾತೃವು ಹಾಡುವ ಉದ್ಗೀಥವೆಂಬ ಸಾಮಭಕ್ತಿಯ ಅಕ್ಷರಗಳನ್ನಲ್ಲ - ಎಂಬಿದು ಶ್ರುತಿಯ ಅಭಿಪ್ರಾಯ.
2. ಕೃಷ್ಣಮಿಶ್ರ, ವಾಚಸ್ಪತಿಮಿಶ್ರ- ಎಂಬಂತೆ ಗೌರವಾರ್ಥದಲ್ಲಿ ಆಯಾ ಹೆಸರಿಗೆ ಮಿಶ್ರ ಶಬ್ದವನ್ನು ಸೇರಿಸುತ್ತಾರೆ. ಹಾಗೆಯೇ ಇಲ್ಲಿ ಉತ್, ಗೀ- ಮುಂತಾದ ಅಕ್ಷರಗಳ ಉಪಾಸನೆಯಿಂದಲೂ ಉದ್ಗೀಥದ ಉಪಾಸನೆಯೇ ಆಗುತ್ತದೆ.
3. ಯಾವ ಹೋಲಿಕೆಯಿರುವದರಿಂದ ಉತ್ ಎಂಬಕ್ಷರವನ್ನು ಪ್ರಾಣದೃಷ್ಟಿಯಿಂದ ಉಪಾಸನೆ ಮಾಡಬೇಕು ?

ಪ್ರಾಣದಿಂದಲೇ ಅಲ್ಲವೆ, ಪ್ರತಿಯೊಬ್ಬನೂ ಮೇಲಕ್ಕೇಳುತ್ತಾನೆ (ಉತ್ತಿಷ್ಠತಿ) ? ಏಕೆಂದರೆ ಪ್ರಾಣವಿಲ್ಲದವನು ಕುಸಿದುಬೀಳುವದು ಕಂಡುಬಂದಿದೆ. ಆದ್ದರಿಂದ ಉತ್ (ಎಂಬ ಅಕ್ಷರ)ಕ್ಕೂ ಪ್ರಾಣಕ್ಕೂ ಹೋಲಿಕೆಯಿದೆ. ವಾಕ್ಕೇ 'ಗೀ' ವಾಕ್ಕುಗಳನ್ನು 'ಗಿರಃ' ಎಂದು ಶಿಷ್ಟರು ಕರೆಯುತ್ತಾರಲ್ಲವೆ ? ಹೀಗೆಯೇ ಅನ್ನವು ಥ ; ಏಕೆಂದರೆ ಇದೆಲ್ಲವೂ ಅನ್ನದಲ್ಲಿ ಸ್ಥಿತವಾಗಿ (ನಿಂತಿರು)ತ್ತದೆ[1]. ಆದ್ದರಿಂದ ಅನ್ನಕ್ಕೂ ಥ ಎಂಬಕ್ಷರಕ್ಕೂ ಹೋಲಿಕೆಯಿದೆ.

ಉದ್ಗೀಥಾಕ್ಷರೋಪಾಸನೆಯ ಫಲ

(ಉಪನಿಷತ್ತು)

ದ್ಯೌರೇವೋದನ್ತರಿಕ್ಷಂ ಗೀಃ ಪೃಥಿವೀ ಥಮಾದಿತ್ಯ ಏವೋ ದ್ವಾಯುರ್ಗೀರಗ್ನಿಸ್ಥಗ್ಂ ಸಾಮವೇದ ಏವೋದ್ಯಜುರ್ವೇದೋ ಗೀರ್ಋಗ್ವೇದಸ್ಥಂ ದುಗ್ದೇಽಸ್ಮೈ ವಾಗ್ದೋಹಂ ಯೋ ವಾಚೋ ದೋಹೋಽನ್ನವಾನನ್ನಾದೋ ಭವತಿ ಯ ಏತಾನ್ಯೇವಂ ವಿದ್ವಾನುದ್ಗೀಥಾಕ್ಷರಾಣ್ಯುಪಾಸ್ತ ಉದ್ಗೀಥ ಇತಿ ॥೭॥

೭. ದ್ಯುಲೋಕವೇ ಉತ್, ಅಂತರಿಕ್ಷವೇ ಗೀ, ಪೃಥವಿಯೇ ಥ. ಆದಿತ್ಯನೇ ಉತ್, ವಾಯುವೇ ಗೀ, ಅಗ್ನಿಯೇ ಥ. ಸಾಮವೇದವೇ ಉತ್, ಯಜುರ್ವೇದವೇ ಗೀ, ಋಗ್ವೇದವೇ ಥ. ಯಾವನು ಹೀಗೆಂದು ಅರಿತು ಕೊಂಡು ಉತ್, ಗೀ, ಥ- ಎಂಬೀ ಉದ್ಗೀಥಾಕ್ಷರಗಳನ್ನು ಉಪಾಸನೆಮಾಡು-ತ್ತಾನೋ ಅವನಿಗೆ ವಾಕ್ಕು, ವಾಕ್ಕಿನ ದೋಹವಿದೆಯಲ್ಲ ಅದನ್ನು (ಹಾಲು) ಕರೆಯುವದು ; (ಅವನು) ಅನ್ನವಂತನೂ ಅನ್ನಾದನೂ ಆಗುವನು.

ಉದ್ಗೀಥಾಕ್ಷರಗಳ ಉಪಾಸನಾಪ್ರಕಾರಾಂತರಗಳು

(ಭಾಷ್ಯ)

೪೦. ತ್ರಯಾಣಾಂ ಶ್ರುತ್ಯುಕ್ತಾನಿ ಸಾಮಾನ್ಯಾನಿ । ತಾನಿ ತೇನ ಅನುರೂಪೇಣ ಶೇಷೇಷ್ವಪಿ ದ್ರಷ್ಟವ್ಯಾನಿ । ದ್ಯೌರೇವ ಉತ್ । ಉಚ್ಚೈಃ ಸ್ಥಾನಾತ್ । ಅನ್ತರಿಕ್ಷಂ ಗೀಃ

1 ಉತ್ತಿಷ್ಠತಿ, ಗೀಃ, ಸ್ಥಿತಮ್ - ಎಂಬೀ ಶಬ್ದಗಳಲ್ಲಿ ಉತ್, ಗೀ, ಥ- ಎಂಬ ಅಕ್ಷರಗಳಿರುವದೇ ಪ್ರಾಣ, ವಾಕ್ಕು, ಅನ್ನ- ಇವುಗಳಿಗೂ ಆಯಾ ಅಕ್ಷರಗಳಿಗೂ ಇರುವ ಹೋಲಿಕೆ.

ಗಿರಣಾತ್ ಲೋಕಾನಾಮ್ । ಪೃಥಿವೀ ಥಮ್ । ಪ್ರಾಣಿಸ್ಥಾನಾತ್ । ಆದಿತ್ಯ ಏವ ಉತ್ । ಊರ್ಧ್ವತ್ವಾತ್ । ವಾಯುರ್ಗೀಃ । ಅಗ್ನ್ಯಾದೀನಾಂ ಗಿರಣಾತ್ । ಅಗ್ನಿಃ ಥಮ್ । ಯಾಜ್ಞೀಯಕರ್ಮಾವಸ್ಥಾನಾತ್ । ಸಾಮವೇದ ಏವ ಉತ್ । ಸ್ವರ್ಗ-ಸಂಸ್ತುತತ್ವಾತ್ । ಯಜುರ್ವೇದೋ ಗೀಃ । ಯಜುಷಾಂ ಪ್ರತ್ತಸ್ಯ ಹವಿಷಃ ದೇವತಾನಾಂ ಗಿರಣಾತ್ । ಋಗ್ವೇದಃ ಥಮ್ । ಋಚಿ ಅಧ್ಯೂಢತ್ವಾತ್ ಸಾಮ್ನಃ ॥

(ಭಾಷ್ಯಾರ್ಥ)

ಮೂರಕ್ಕೆ[1] ಹೋಲಿಕೆಗಳನ್ನು ಶ್ರುತಿಯಲ್ಲಿ ಹೇಳಿರುತ್ತದೆ. ಅವುಗಳನ್ನು ಅದಕ್ಕೆ ಅನುರೂಪವಾಗಿ ಮಿಕ್ಕವುಗಳಲ್ಲಿಯೂ ಕಲ್ಪಿಸಿಕೊಳ್ಳಬೇಕು[2]. (ಹೇಗೆಂದರೆ), ದ್ಯುಲೋಕವೇ ಉತ್ ಏಕೆಂದರೆ (ಅದು) ಉಚ್ಚವಾಗಿರುತ್ತದೆ[3]. ಅಂತರಿಕ್ಷವೇ ಗೀ ; ಏಕೆಂದರೆ (ಅದು) ಲೋಕಗಳನ್ನು ಗಿರಣಮಾಡುತ್ತದೆ[4]. ಪೃಥಿವಿಯೇ ಥ ; ಏಕೆಂದರೆ ಅದು ಪ್ರಾಣಿಗಳಿಗೆ ಸ್ಥಾನವಾಗಿದೆ. ಆದಿತ್ಯನೇ ಉತ್ ; ಏಕೆಂದರೆ (ಅವನು) ಊರ್ಧ್ವ-ದಲ್ಲಿರುತ್ತಾನೆ[5]. ವಾಯುವು ಗೀ ; ಅಗ್ನ್ಯಾದಿಗಳನ್ನು (ಅದು) ಗಿರಣಮಾಡುತ್ತದೆ[6]. ಅಗ್ನಿಯು ಥ ; ಏಕೆಂದರೆ ಯಜ್ಞದ ಕರ್ಮಕ್ಕೆ (ಅದು) ಸ್ಥಾನವಾಗಿರುತ್ತದೆ. ಸಾಮವೇದವೇ ಉತ್ ; ಏಕೆಂದರೆ (ಅದನ್ನು) ಸ್ವರ್ಗವೆಂದು (ಶ್ರುತಿಯಲ್ಲಿ) ಹೊಗಳಿದೆ[7]. ಯಜುರ್ವೇದವೇ ಗೀ ; ಏಕೆಂದರೆ ಯಜುಸ್ಸಿನಿಂದ[8] ಕೊಟ್ಟ ಹವಿಸ್ಸನ್ನು ದೇವತೆಗಳು ಗಿರಣಮಾಡುತ್ತಾರೆ. ಋಗ್ವೇದವೇ ಥ ; ಏಕೆಂದರೆ ಸಾಮವು ಋಕ್ಕಿನಲ್ಲಿ ನಿಂತಿರುತದೆ[9].

1.
2. ಶ್ರುತಿಯಲ್ಲಿ ಹೇಳಿರುವದು ಮಿಕ್ಕದ್ದಕ್ಕೂ ಉಪಲಕ್ಷಣವಾಗಿ - ಎಂದು ಭಾವ.
3. ಸ್ವರ್ಗಲೋಕವು ಎಲ್ಲಕ್ಕೂ ಉಚ್ಚ, ಮೇಲಿನದು ; ಆದ್ದರಿಂದ ಅದಕ್ಕೆ ಉಕಾರದ ಹೋಲಿಕೆಯಿದೆ.
4. ಆಕಾಶದಲ್ಲಿ ಎಲ್ಲಾ ಲೋಕಗಳೂ ಇರುವದರಿಂದ ಅದು ಅವನ್ನು ಗಿರಣಮಾಡಿದಂತೆ, ನುಂಗಿದಂತೆ, ಇರುತದೆ. 5. ಮೇಲೆ ಇರುತಾನೆ.
6. ವಾಯುವು ಅಗ್ನ್ಯಾದಿಗಳನ್ನು ಗಿರಣಮಾಡುತಾನೆಂಬುದು ಮುಂದೆ ನಾಲ್ಕನೆಯ ಅಧ್ಯಾಯದಲ್ಲಿರುವ ಸಂವರ್ಗವಿದ್ಯೆಯಿಂದ ಗೊತ್ತಾಗುವದು.
''ಸ್ವರ್ಗೋ ವೈ ಲೋಕಃ ಸಾಮವೇದಃ'' ಎಂಬ ಶ್ರುತಿಯನ್ನು ೧-೮-೫ರಲ್ಲಿ ಉದಾಹರಿಸಿದೆ.
ಸ್ವಾಹಾಸ್ವಧಾದಿಗಳಿಂದ.
ಸ್ಥಿತವಾಗಿರುತ್ತದೆ, ನಿಂತಿರುತ್ತದೆ. ಅಧ್ಯೂಢಮ್ ಎಂಬ ಭಾಷ್ಯದ ಪದವು ಈ ಅಧ್ಯಾಯದ ಆರನೆಯ ಖಂಡವನ್ನು ಸೂಚಿಸುತದೆ.

ಉದ್ಗೀಥಾಕ್ಷರೋಪಾಸನೆಯ ಫಲ

(ಭಾಷ್ಯ)

೪೧. ಉದ್ಗೀಥಾಕ್ಷರೋಪಾಸನಫಲಮ್ ಅಧುನಾ ಉಚ್ಯತೇ । ದುಗ್ಧೇ ದೋಗ್ಧಿ ಅಸ್ಮೈ ಸಾಧಕಾಯ। ಕಾ ಸಾ ? ವಾಕ್ । ಕಮ್ ? ದೋಹಮ್ । ಕೋऽಸೌ ದೋಹ ಇತಿ ? ಆಹ । ಯೋ ವಾಚೋ ದೋಹಃ । ಋಗ್ವೇದಾದಿಶಬ್ದಸಾಧ್ಯಂ ಫಲಮ್ ಇತ್ಯಭಿಪ್ರಾಯಃ । ತದ್ ವಾಚೋ ದೋಹಃ ತಂ ಸ್ವಯಮೇವ ವಾಕ್ ದೋಗ್ಧಿ ಆತ್ಮಾನಮೇವ ದೋಗ್ಧಿ । ಕಿಂ ಚ ಅನ್ನವಾನ್ ಪ್ರಭೂತಾನ್ನಃ, ಅನ್ನಾದಶ್ಚ ದೀಪ್ತಾಗ್ನಿಃ ಭವತಿ ಯ ಏತಾನಿ ಯಥೋಕ್ತಾನಿ ಏವಂ ಯಥೋಕ್ತಗುಣಾನಿ ಉದ್ಗೀಥಾಕ್ಷರಾಣಿ ವಿದ್ವಾನ್ ಸನ್ ಉಪಾಸ್ತೇ ಉದ್ ಗೀ ಥ ಇತಿ ॥

(ಭಾಷ್ಯಾರ್ಥ)

ಈಗ ಉದ್ಗೀಥಾಕ್ಷರಗಳ ಉಪಾಸನೆಯ ಫಲವನ್ನು ಹೇಳಲಾಗುತ್ತದೆ. ಈ ಸಾಧಕನಿಗೆ ದುಗ್ಧೇ (ಹಾಲು) ಕರೆಯುತ್ತದೆ. ಯಾವದದು ? ವಾಕ್ಕು. ಯಾವದನ್ನು ಕರೆಯುತ್ತದೆ ? ದೋಹವನ್ನು. ಆ ದೋಹವು ಯಾವದು ? ವಾಕ್ಕಿನ ದೋಹವಿದೆಯಲ್ಲ, (ಅದನ್ನು ಕರೆಯುತ್ತದೆ). ಋಗ್ವೇದವೇ ಮುಂತಾದ ಶಬ್ದದಿಂದ ಸಾಧಿಸಬೇಕಾದ ಫಲವು ಎಂದು ಅಭಿಪ್ರಾಯ. ಅದೇ ವಾಕ್ಕಿನ ದೋಹವು ; ಅದನ್ನು ವಾಕ್ಕು ತಾನೇ ಕರೆಯುತ್ತದೆ, ತನ್ನನ್ನು (ತಾನೇ) ಕರೆದುಕೊಳ್ಳುತ್ತದೆ[1]. ಇದಲ್ಲದೆ ಅನ್ನವಂತನೂ ಹೆಚ್ಚಿನ ಅನ್ನವುಳ್ಳವನೂ ಅನ್ನಾದನೂ ಎಂದರೆ ದೀಪ್ತಾಗ್ನಿಯೂ ಆಗುತ್ತಾನೆ. ಯಾವನು ಈ ಮೇಲೆ ಹೇಳಿದ ಉದ್ಗೀಥದ ಅಕ್ಷರಗಳನ್ನೂ ಮೇಲೆ ಹೇಳಿದ ಗುಣಗಳುಳ್ಳವೆಂದು ಉತ್ ಗೀ ಥ - ಎಂದು ಅರಿತುಕೊಂಡು ಉಪಾಸನೆ ಮಾಡುತ್ತಾನೋ (ಅವನಿಗೆ ಈ ಫಲವಾಗುತ್ತದೆ).

ಆಶೀಃಸಮೃದ್ಧಿಗೆ ಉಪಾಸನೆಗಳು

(ಉಪನಿಷತ್ತು)

ಅಥ ಖಲ್ವಾಶೀಃಸಮೃದ್ಧಿರುಪಸರಣಾನೀತ್ಯುಪಾಸೀತ ಯೇನ ಸಾಮ್ನಾ ಸ್ತೋಷ್ಯನ್ ಸ್ಯಾತ್ ತತ್ಸಾಮೋಪಧಾವೇತ್ ॥೮॥

1. ಅನಾಯಾಸದಿಂದ ಕೊಡುತ್ತದೆ ಎಂದರ್ಥ.

೮. ಇನ್ನು ಆಶೀಃಸಮೃದ್ಧಿಯನ್ನು (ಹೇಳಲಾಗುತ್ತದೆ). ಉಪಸರಣಗಳಿವು - ಹೀಗೆಂದು ಉಪಾಸನೆಮಾಡಬೇಕು. ಯಾವ ಸಾಮದಿಂದ ಸ್ತೋತ್ರಮಾಡ ಲಿರುವನೋ ಆ ಸಾಮವನ್ನು ಬಳಿಸಾರಬೇಕು.

ಸಾಮದ ಉಪಾಸನೆ

(ಭಾಷ್ಯ)

೪೨. ಅಥ ಖಲು ಇದಾನೀಮ್ ಆಶೀಃಸಮೃದ್ಧಿಃ ಆಶಿಷಃ ಕಾಮಸ್ಯ ಸಮೃದ್ಧಿಃ ಯಥಾ ಭವೇತ್ ತದುಚ್ಯತ ಇತಿ ವಾಕ್ಯಶೇಷಃ । ಉಪಸರಣಾನಿ ಉಪಸರ್ತವ್ಯಾನಿ ಉಪಗನ್ತವ್ಯಾನಿ ಧ್ಯೇಯಾನಿ ಇತ್ಯರ್ಥಃ। ಕಥಮ್ ? ಇತ್ಯುಪಾಸೀತ। ಏವಮ್ ಉಪಾಸೀತ । ತದ್ ಯಥಾ ಯೇನ ಸಾಮ್ನಾ ಯೇನ ಸಾಮವಿಶೇಷೇಣ ಸ್ತೋಷ್ಯನ್ ಸ್ತುತಿಂ ಕರಿಷ್ಯನ್ ಸ್ಯಾತ್ ಭವೇತ್ ಉದ್ಗಾತಾ ತತ್ಸಾಮ ಉಪಧಾವೇತ್ ಉಪಸರೇತ್ ಚಿನ್ತಯೇತ್ ಉತ್ಪತ್ತ್ಯಾದಿಭಿಃ ॥

(ಭಾಷ್ಯಾರ್ಥ)

ಇನ್ನು ಈಗ ಆಶೀಃಸಮೃದ್ಧಿಯು, ಆಶಿಸ್ಸಿನ ಎಂದರೆ ಕಾಮದ ಸಮೃದ್ಧಿಯು ಹೇಗಾದೀತೋ ಅದನ್ನು 'ಹೇಳಲಾಗುವದು' ಎಂದು ವಾಕ್ಯಶೇಷವು. ಉಪಸರಣ-(ಗಳಿವು), ಉಪಸರಣಮಾಡತಕ್ಕವು, ಬಳಿಸಾರತಕ್ಕವು, ಧ್ಯೇಯಗಳು ಎಂದರ್ಥ. ಹೇಗೆ ? ಎಂದರೆ ಹೀಗೆಂದು ಉಪಾಸನೆಮಾಡಬೇಕು : ಅದು ಹೇಗೆಂದರೆ, ಯಾವ ಸಾಮದಿಂದ ಯಾವದೊಂದು (ಗೊತ್ತಾದ) ಸಾಮದಿಂದ ಉದ್ಗಾತೃವು ಸ್ತೋತ್ರಮಾಡಲಿರುವನೋ ಸ್ತುತಿಯನ್ನು ಮಾಡುವೆನೆಂದಿರುವನೋ (ಸ್ಯಾತ್-ಭವೇತ್) ಆ ಸಾಮವನ್ನು ಬಳಿಸಾರಬೇಕು, ಉಪಸರಣ ಮಾಡಬೇಕು, ಉತ್ಪತ್ತಿಯೇ ಮುಂತಾದವುಗಳಿಂದ ಚಿಂತನೆಮಾಡಬೇಕು[1].

(ಉಪನಿಷತ್ತು)

ಯಸ್ಯಾಮೃಚಿ ತಾಮೃಚಂ ಯದಾರ್ಷೇಯಂ ತಮೃಷಿಂ ಯಾಂ ದೇವತಾಮಭಿಷ್ಟೋಷ್ಯನ್ ಸ್ಯಾತ್ ತಾಂ ದೇವತಾಮುಪಧಾವೇತ್ ॥೯॥

ಅದು ಯಾವ ಋಕ್ಕಿನಿಂದ ಹುಟ್ಟಿದೆ, ಯಾವ ಛಂದಸ್ಸಿನದು, ಯಾವ ದೇವತೆಯದು - ಎಂದು ಮುಂತಾಗಿ ಎಂದರ್ಥ ಇದನ್ನು ಮುಂದಿನ ಕಂಡಿಕೆಗಳಲ್ಲಿ ಸ್ಪಷ್ಟಪಡಿಸಿದೆ.

೯. ಯಾವ ಋಕ್ಕಿನಲ್ಲಿರುವದೋ ಆ ಋಕ್ಕನ್ನು, ಯಾವ ಆರ್ಷೇಯವೋ ಆ ಋಷಿಯನ್ನು, ಯಾವ ದೇವತೆಯನ್ನು ಅಭಿಷ್ಟುತಿ ಮಾಡಲಿರುವನೋ ಆ ದೇವತೆಯನ್ನು ಬಳಿಸಾರಬೇಕು.

ಸಾಮದ ಋಕ್ಕು, ಋಷಿ- ಮುಂತಾದವುಗಳ ಉಪಾಸನೆ

(ಭಾಷ್ಯ)

೪೩. ಯಸ್ಯಾಂ ಋಚಿ ತತ್ ಸಾಮ ತಾಂ ಚ ಋಚಮ್ ಉಪಧಾವೇತ್ ದೇವತಾದಿಭಿಃ। ಯದಾರ್ಷೇಯಂ ಸಾಮ ತಂ ಚ ಋಷಿಮ್। ಯಾಂ ದೇವತಾಮ್ ಅಭಿಷ್ಟೋಷ್ಯನ್ ಸ್ಯಾತ್ ತಾಂ ದೇವತಾಮ್ ಉಪಧಾವೇತ್ ॥

(ಭಾಷ್ಯಾರ್ಥ)

ಆ ಸಾಮವು ಯಾವ ಋಕ್ಕಿನಲ್ಲಿರುವದೋ ಆ ಋಕ್ಕನ್ನು ದೇವತಾದಿಗಳಿಂದ ಬಳಿಸಾರಬೇಕು. ಸಾಮವು ಯಾವ ಆರ್ಷೇಯವೋ ಆ ಋಷಿಯನ್ನೂ ಯಾವ ದೇವತೆಯನ್ನು ಸ್ತುತಿಮಾಡಬೇಕೆಂಬ ಅಭಿಪ್ರಾಯವುಳ್ಳವನೋ ಆ ದೇವತೆಯನ್ನೂ ಬಳಿಸಾರಬೇಕು.

(ಉಪನಿಷತ್ತು)

ಯೇನ ಛನ್ದಸಾ ಸ್ತೋಷ್ಯನ್ ಸ್ಯಾತ್ ತಚ್ಛನ್ದ ಉಪಧಾವೇದ್ಯೇನ ಸ್ತೋಮೇನ ಸ್ತೋಷ್ಯಮಾಣಃ ಸ್ಯಾತ್ ತಗ್ಂ ಸ್ತೋಮಮುಪ-ಧಾವೇತ್ ॥೧೦॥

೧೦. ಯಾವ ಛಂದಸ್ಸಿನಿಂದ ಸ್ತೋತ್ರಮಾಡಲಿರುವನೋ ಆ ಛಂದಸ್ಸನ್ನು ಬಳಿಸಾರಬೇಕು. ಯಾವ ಸ್ತೋಮದಿಂದ ಸ್ತೋತ್ರಮಾಡ ಲಿರುವನೋ ಆ ಸ್ತೋಮವನ್ನು ಬಳಿಸಾರಬೇಕು.

ಛಂದಸ್ಸಿನ ಉಪಾಸನೆ

(ಭಾಷ್ಯ)

೪೪. ಯೇನ ಛನ್ದಸಾ ಗಾಯತ್ರ್ಯಾದಿನಾ ಸ್ತೋಷ್ಯನ್ ಸ್ಯಾತ್ ತಚ್ಛನ್ದ ಉಪಧಾವೇತ್। ಯೇನ ಸ್ತೋಮೇನ ಸ್ತೋಷ್ಯಮಾಣಃ ಸ್ಯಾತ್। ಸ್ತೋಮಾಙ್ಗಫಲಸ್ಯ ಕರ್ತೃಗಾಮಿತ್ವಾತ್ ಆತ್ಮನೇಪದಂ ಸ್ತೋಷ್ಯಮಾಣ ಇತಿ। ತಂ ಸ್ತೋಮಮ್ ಉಪಧಾವೇತ್ ॥

(ಭಾಷ್ಯಾರ್ಥ)

ಗಾಯತ್ರಿಯೇ ಮುಂತಾದ[1] ಯಾವ ಛಂದಸ್ಸಿನಿಂದ ಸ್ತೋತ್ರಮಾಡಲಿರುವನೋ ಆ ಛಂದಸ್ಸನ್ನು ಬಳಿಸಾರಬೇಕು. ಯಾವ ಸ್ತೋಮದಿಂದ ಸ್ತೋತ್ರ[2] ಮಾಡಲಿರುವನೋ - ಸ್ತೋಮವೆಂಬ ಅಂಗದ ಫಲವು ಕರ್ತೃಗಾಮಿಯಾದ್ದರಿಂದ 'ಸ್ತೋಷ್ಯಮಾಣಃ' ಎಂದು (ಇಲ್ಲಿ) ಆತ್ಮನೇಪದವನ್ನು (ಪ್ರಯೋಗಿಸಿದೆ)-[3] ಆ ಸ್ತೋಮವನ್ನು ಬಳಿಸಾರಬೇಕು.

(ಉಪನಿಷತ್ತು)

ಯಾಂ ದಿಶಮಭಿಷ್ಟೋಷ್ಯನ್ ಸ್ಯಾತ್ತಾಂ ದಿಶಮುಪಧಾವೇತ್ ॥೧೧॥

೧೧. ಯಾವ ದಿಕ್ಕನ್ನು ಸ್ತೋತ್ರಮಾಡಲಿರುವನೋ ಆ ದಿಕ್ಕನ್ನು ಬಳಿಸಾರಬೇಕು.

ದಿಕ್ಕಿನ ಉಪಾಸನೆ

(ಭಾಷ್ಯ)

೪೫. ಯಾಂ ದಿಶಮ್ ಅಭಿಷ್ಟೋಷ್ಯನ್ ಸ್ಯಾತ್ ತಾಂ ದಿಶಮ್ ಉಪಧಾವೇತ್ ಅಧಿಷ್ಠಾತ್ರಾದಿಭಿಃ ॥

(ಭಾಷ್ಯಾರ್ಥ)

ಯಾವ ದಿಕ್ಕನ್ನು ಸ್ತೋತ್ರಮಾಡಲಿರುವನೋ ಆ ದಿಕ್ಕನ್ನು ಅಧಿಷ್ಠಾತೃ (ದೇವತೆ)[4] ಮುಂತಾದವುಗಳಿಂದೊಡಗೂಡಿ ಬಳಿಸಾರಬೇಕು.

---

1. ಗಾಯತ್ರಿಯೇ ಮುಂತಾದ ಎಂದರೆ ಉಷ್ಣಿಕ್, ಅನುಷ್ಟುಪ್, ಬೃಹತೀ- ಮುಂತಾದ ಛಂದಸ್ಸುಗಳು.
2. ಸೋಮಯಾಗದಲ್ಲಿ ಸ್ತೋತ್ರಸಂಖ್ಯಾವಿಶೇಷಗಳಿಗೆ ಸ್ತೋಮಗಳೆಂದು ಹೆಸರು. ತ್ರಿವೃತ್, ಪಞ್ಚದಶ, ಸಪ್ತದಶ, ಏಕವಿಂಶ - ಎಂದು ಮುಂತಾಗಿ ಒಂಬತ್ತು ಪ್ರಕಾರದ ಸ್ತೋಮಗಳು ಪ್ರಸಿದ್ಧವಾಗಿರುತ್ತವೆ. ಹದಿನೈದು, ಹದಿನೇಳು, ಇಪ್ಪತ್ತೊಂದು- ಇವುಗಳು ಋಕ್ಸಂಖ್ಯೆಗಳು. ಪರಿಶಿಷ್ಟವನ್ನು ನೋಡಿ
3. ಈ ಉಪಾಸನೆಗಳ ಫಲವೆಲ್ಲ ಯಜಮಾನನಿಗೇ ಸೇರತಕ್ಕವು ಎಂಬುದನ್ನು ಸ್ತೋಷ್ಯನ್ ಎಂಬ ವರಸ್ಮೈಪದವು ತಿಳಿಸುತ್ತದೆ ; ಛಂದಸ್ಸಿನ ಉಪಾಸನೆಯು ಮಾತ್ರ ಉದ್ಗಾತೃವಿಗೇ ಎಂಬುದನ್ನು ಆತ್ಮನೇಪದವು ಸೂಚಿಸುತ್ತದೆ. ಪಾ. ಸೂ. ೧-೩-೭೮ ನ್ನು ನೋಡಿ.
4. ಆಯಾ ದಿಕ್ಕುಗಳ ಅಧಿಷ್ಠಾತೃದೇವತೆಗಳು ಮುಂತಾದವರನ್ನು ಎಂದರ್ಥ. ಆಯಾ ದಿಕ್ಕಿನಲ್ಲಿರುವ ಅಸಾಧಾರಣಧರ್ಮಗಳನ್ನೂ "ಮುಂತಾದ" ಎಂಬ ಶಬ್ದದಿಂದ ತೆಗೆದುಕ್ಕೊಳ್ಳಬೇಕೆಂದು ಟೀಕೆ.

ಆಶೀಃಸಮೃದ್ಧ್ಯುಪಾಸನೆಯ ಫಲ

(ಉಪನಿಷತ್ತು)

ಆತ್ಮಾನಮನ್ತ ಉಪಸೃತ್ಯ ಸ್ತುವೀತ ಕಾಮಂ ಧ್ಯಾಯನ್ನಪ್ರಮತ್ತೋಽ-ಭ್ಯಾಶೋ ಹ ಯದಸ್ಮೈ ಸ ಕಾಮಃ ಸಮೃಧ್ಯೇತ ಯತ್ಕಾಮಃ ಸ್ತುವೀತೇತಿ ಯತ್ಕಾಮಃ ಸ್ತುವೀತೇತಿ ॥೧೨॥

೧೨. ಕೊನೆಗೆ ಆತ್ಮನನ್ನು ಬಳಿಸಾರಿ ಕಾಮವನ್ನು ಧ್ಯಾನಿಸುತ್ತಾ ಅಪ್ರಮತ್ತನಾಗಿ ಧ್ಯಾನಿಸಬೇಕು. ಯಾವ ಕಾಮದಿಂದ ಸ್ತುತಿಸುವನೋ ಆ ಕಾಮವು ಅಭ್ಯಾಶವಾಗಿ ಸಮೃದ್ಧವಾಗುವದು ; ಯಾವ ಕಾಮದಿಂದ ಸ್ತುತಿಸುವನೋ (ಆ ಕಾಮವು ಸಮೃದ್ಧವಾಗುವದು).

ಸ್ತೋತ್ರಮಾಡುವ ಕ್ರಮ

(ಭಾಷ್ಯ)

೪೬. ಆತ್ಮಾನಮ್ ಉದ್ಗಾತಾ ಸ್ವಂ[1] ರೂಪಂ ಗೋತ್ರನಾಮಾಧಿಭಿಃ । ಸಾಮಾದಿಕ್ರಮೇಣ[2] ಸ್ವಂ ಚಾಽಽತ್ಮಾನಮ್ ಅನ್ತತೋ ಅನ್ತೇ ಉಪಸೃತ್ಯ ಸ್ತುವೀತ । ಕಾಮಂ ಧ್ಯಾಯನ್ ಅಪ್ರಮತ್ತಃ ಸ್ವರೋಷ್ಮವ್ಯಞ್ಜನಾದಿಭ್ಯಃ ಪ್ರಮಾದಮಕುರ್ವನ್ । ತತಃ ಅಭ್ಯಾಶಃ ಕ್ಷಿಪ್ರಮೇವ ಹ ಯತ್ ಯತ್ರ ಅಸ್ಮೈ ಏವಂವಿದೇ ಸ ಕಾಮಃ ಸಮೃಧ್ಯೇತ ಸಮೃದ್ಧಿಂ ಗಚ್ಛೇತ್ । ಕೋಽಸೌ ? ಯತ್ಕಾಮಃ । ಯಃ ಕಾಮೋಽಸ್ಯ ಸೋಽಯಂ ಯತ್ಕಾಮಃ ಸನ್ ಸ್ತುವೀತ ಇತಿ । ದ್ವಿರುಕ್ತಿರಾದರಾರ್ಥಾ ॥

(ಭಾಷ್ಯಾರ್ಥ)

ಉದ್ಗಾತೃವು ಆತ್ಮನನ್ನು ಎಂದರೆ ತನ್ನ ರೂಪವನ್ನು ಗೋತ್ರ, ನಾಮ ಮುಂತಾದವುಗಳೊಡನೆ[3]- ಸಾಮಾದಿಕ್ರಮದಿಂದ[4] ತನ್ನನ್ನು ಕೊನೆಗೆ ಕೊನೆಯಲ್ಲಿ ಬಳಿಸಾರಿ ಸ್ತೋತ್ರಮಾಡಬೇಕು. (ತನ್ನ) ಕಾಮವನ್ನು ಚಿಂತಿಸಿಕೊಳ್ಳುತ್ತಾ

1. ಈ ಅ॥ ವಾ॥ ಪಾಠವೇ ಮೇಲು. 2. 'ಸಾಮಾದೀನ್' ಎಂಬುದಕ್ಕಿಂತ ಈ ಪಾಠವು ಮೇಲು.
3. ಮುಂತಾದವೆಂದರೆ ವರ್ಣಾಶ್ರಮಾದಿಗಳು ಎಂದು ಟೀಕೆ
4. ಸಾಮ, ಋಕ್ಕು, ಆರ್ಷೇಯ, ದೇವತೆ, ಛಂದಸ್ಸು, ಸ್ತೋಮ, ದಿಕ್ಕು- ಹೀಗೆ ಒಂದಾಗುತಲೊಂದನ್ನು ಉಪಾಸನೆಮಾಡಿದ ಬಳಿಕ.

ಅಪ್ರಮತ್ತನಾಗಿ ; ಸ್ವರಗಳು, ಊಷ್ಮಗಳು, ವ್ಯಂಜನಗಳು- ಮುಂತಾದವುಗಳಲ್ಲಿ ಪ್ರಮಾದವನ್ನು ಮಾಡದೆ[1] (ಸ್ತೋತ್ರಮಾಡಬೇಕು.)

ಅದರಿಂದ ಅಭ್ಯಾಶವಾಗಿ ಕ್ಷಿಪ್ರವಾಗಿಯೇ (ಯತ್ = ಯತ್ರ) ಎಲ್ಲಿ[2] (ಸ್ತೋತ್ರ ಮಾಡುವನೋ ಅಲ್ಲಿ), ಇವನಿಗೆ ಹೀಗೆಂದು ಅರಿತಿರುವವನಿಗೆ, ಆ ಕಾಮವು ಸಮೃದ್ಧವಾಗುವದು, ಸಮೃದ್ಧಿಯನ್ನು ಪಡೆಯುವದು. ಅದು ಯಾವ (ಕಾಮವು) ? ಎಂದರೆ ಯಾವ ಕಾಮದಿಂದ - ಯಾವದು ಇವನಿಗೆ ಕಾಮವೋ ಅದನ್ನುಳ್ಳವ-ನಾದ್ದರಿಂದ ಇವನನ್ನು ಯತ್ಕಾಮನು ಎಂದಿದೆ. ಹೀಗೆ ಯಾವ ಕಾಮವುಳ್ಳವನಾಗಿ-ಸ್ತೋತ್ರಮಾಡುವನೋ (ಅದು ಸಮೃದ್ಧವಾಗುವದು. ಯತ್ಕಾಮಃ ಸ್ತುವೀತ ಎಂಬ) ದ್ವಿರುಕ್ತಿಯು ಆದರಕ್ಕಾಗಿ ಬಂದಿರುತ್ತದೆ.

ಒಂದನೆಯ ಅಧ್ಯಾಯ – ನಾಲ್ಕನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಅಮೃತಾಭಯಗುಣವಿಶಿಷ್ಟವೆಂದು ಉದ್ಗೀಥೋಪಾಸನೆ

(ಉಪನಿಷತ್ತು)

ಓಮಿತ್ಯೇದಕ್ಷರಮುದ್ಗೀಥಮುಪಾಸೀತೋಮಿತಿ ಹ್ಯುದ್ಗಾಯತಿ
ತಸ್ಯೋಪವ್ಯಾಖ್ಯಾನಮ್ ॥೧॥

೧. ಓಮ್ ಎಂಬೀ ಅಕ್ಷರ(ರೂಪವಾದ) ಉದ್ಗೀಥವನ್ನು ಉಪಾಸನೆ ಮಾಡಬೇಕು ; ಏಕೆಂದರೆ ಓಮ್ ಎಂದೇ ಉದ್ಗಾನಮಾಡುತ್ತಾನೆ. ಅದರ ಉಪವ್ಯಾಖ್ಯಾನವು (ಪ್ರಾರಂಭವಾಗಿದೆ).

ಈ ಖಂಡದ ಸಂಬಂಧ

(ಭಾಷ್ಯ)

೪೭. ಓಮಿತ್ಯೇತದಿತ್ಯಾದಿ । ಪ್ರಕೃತಸ್ಯ ಅಕ್ಷರಸ್ಯ ಪುನರುಪಾದಾನಮ್ ಉದ್ಗೀಥಾಕ್ಷರಾದ್ಯುಪಾಸನಾऽನ್ತರಿತತ್ವಾತ್ ಅನ್ಯತ್ರ ಪ್ರಸಙ್ಗೋ ಮಾ ಭೂತ್

1 ಎಚ್ಚರಿಕೆಯಿಂದ. 2. ಯಾವ ಕರ್ಮದಲ್ಲಿ.

ಇತ್ಯೇವಮರ್ಥಮ್ । ಪ್ರಕೃತಸ್ಯೈವ ಅಕ್ಷರಸ್ಯ ಅಮೃತಾಭಯಗುಣವಿಶಿಷ್ಟಸ್ಯ ಉಪಾಸನಮ್ ವಿಧಾತವ್ಯಮ್ ಇತ್ಯಾರಮ್ಭಃ । ಓಮಿತ್ಯಾದಿ ವ್ಯಾಖ್ಯಾತಮ್ ॥

(ಭಾಷ್ಯಾರ್ಥ)

'ಓಮಿತ್ಯೇತತ್' ಮುಂತಾದ (ಗ್ರಂಥದ ಸಂಬಂಧವೇನೆಂದರೆ) : ಪ್ರಕೃತವಾದ (ಓಮ್ ಎಂಬ) ಅಕ್ಷರವನ್ನು ಮತ್ತೆ (ಹೆಸರಿಸಿ) ತೆಗೆದುಕೊಂಡಿರುವದೇಕೆಂದರೆ ಉದ್ಗೀಥದ ಅಕ್ಷರಗಳೇ ಮುಂತಾದವುಗಳ ಉಪಾಸನೆಗಳು ನಡುವೆ ಬಂದದ್ದರಿಂದ ಮತ್ತೊಂದರ (ವಿಷಯವಿದೆಂಬ) ಪ್ರಸಂಗವು ಆಗದಿರಲಿ ಎಂಬುದಕ್ಕಾಗಿ. ಪ್ರಕೃತವಾಗಿರುವ ಇದೇ ಅಕ್ಷರವನ್ನು ಅಮೃತ, ಅಭಯ - ಎಂಬ ಗುಣವಿಶಿಷ್ಟವೆಂದು ಉಪಾಸನೆ ಮಾಡಬೇಕೆಂದು ವಿಧಾನಮಾಡುವದಕ್ಕಾಗಿ (ಇದನ್ನು) ಆರಂಭಿಸಿದೆ. ಓಮ್ ಎಂಬಿದೇ ಮುಂತಾದ (ಗ್ರಂಥವನ್ನು ೧-೧-೧ರಲ್ಲಿ) ವ್ಯಾಖ್ಯಾನಮಾಡಿದ್ದಾಗಿದೆ.

(ಉಪನಿಷತ್ತು)

ದೇವಾ ವೈ ಮೃತ್ಯೋರ್ಬಿಭ್ಯತಸ್ತ್ರಯೀಂ ವಿದ್ಯಾಂ ಪ್ರಾವಿಶಗ್ಂಸ್ತೇ ಛನ್ದೋಭಿರಾಚ್ಛಾದಯನ್ ಯದೇಭಿರಾಚ್ಛಾದಯಗ್ಂಸ್ತಚ್ಛನ್ದಸಾಂ ಛನ್ದಸ್ತ್ವಮ್ ॥೨॥

೨. ದೇವತೆಗಳು ಮೃತ್ಯುವಿಗೆ ಅಂಜಿಕೊಂಡು ತ್ರಯೀವಿದ್ಯೆಯನ್ನು ಪ್ರವೇಶಿಸಿದರು. ಅವರು ಛಂದಸ್ಸುಗಳಿಂದ ಮುಚ್ಚಿಕೊಂಡರು. ಇವುಗಳಿಂದ ಮುಚ್ಚಿಕೊಂಡರಷ್ಟೆ, ಅದೇ ಛಂದಸ್ಸುಗಳ ಛಂದಸ್ತ್ವವು.

ದೇವತೆಗಳು ಕರ್ಮವನ್ನು ಮರೆಹೊಕ್ಕದ್ದು

(ಭಾಷ್ಯ)

೪೮. ದೇವಾ ವೈ ಮೃತ್ಯೋರ್ಮಾರಕಾದ್ ಬಿಭ್ಯತಃ । ಕಿಂ ಕೃತವನ್ತಃ ಇತಿ ? ಉಚ್ಯತೇ । ತ್ರಯೀ ವಿದ್ಯಾಂ ತ್ರಯೀವಿಹಿತಂ ಕರ್ಮ ಪ್ರಾವಿಶನ್ ಪ್ರವಿಷ್ಟವನ್ತಃ । ವೈದಿಕಂ ಕರ್ಮ ಪ್ರಾರಬ್ಧವನ್ತಃ ಇತ್ಯರ್ಥಃ । ತನ್ಮೃತ್ಯೋಸ್ತ್ರಾಣಂ ಮನ್ಯಮಾನಾಃ । ಕಿಂ ಚ ತೇ ಕರ್ಮಣಿ ಅವಿನಿಯುಕ್ತೈಃ ಛನ್ದೋಭಿಃ ಮನ್ತ್ರೈರ್ಜಪಹೋಮಾದಿ ಕುರ್ವನ್ತಃ ಆತ್ಮಾನಂ ಕರ್ಮಾನ್ತರೇಷು ಆಚ್ಛಾದಯನ್ ಛಾದಿತವನ್ತಃ । ಯತ್ ಯಸ್ಮಾತ್ ಏಭಿರ್ಮನ್ತ್ರೈಃ ಆಚ್ಛಾದಯನ್ ತತ್ ತಸ್ಮಾತ್ ಛನ್ದಸಾಂ ಮನ್ತ್ರಾಣಾಂ ಛಾದನಾತ್ ಛನ್ದಸ್ತ್ವಂ ಪ್ರಸಿದ್ಧಮೇವ ।

(ಭಾಷ್ಯಾರ್ಥ)

ದೇವತೆಗಳಿದಾರಷ್ಟೆ, (ಅವರು) ಮೃತ್ಯುವಿಗೆ ಮಾರಕಕ್ಕೆ[1] ಅಂಜಿ- ಏನು ಮಾಡಿದರು ? ಎಂದರೆ (ಶ್ರುತಿ) ಹೇಳುತ್ತದೆ- ತ್ರಯೀವಿದ್ಯೆಯನ್ನು ತ್ರಯೀವಿಹಿತವಾದ ಕರ್ಮವನ್ನು[2] ಪ್ರವೇಶಿಸಿದರು, ಒಳಹೊಕ್ಕರು, ವೈದಿಕಕರ್ಮವನ್ನು- ಅದು ಮೃತ್ಯುವಿನಿಂದ ರಕ್ಷಿಸುವದೆಂದು ಭಾವಿಸಿಕೊಂಡವರಾಗಿ- (ಮಾಡುವದಕ್ಕೆ) ಪ್ರಾರಂಭಿಸಿದರು ಎಂದರ್ಥ. ಮತ್ತು ಅವರು ಕರ್ಮದಲ್ಲಿ ವಿನಿಯೋಗವಾಗದ ಛಂದಸ್ಸುಗಳಿಂದ ಮಂತ್ರಗಳಿಂದ ಜಪಹೋಮಾದಿಗಳನ್ನು ಮಾಡುತ್ತಾ ಬೇರೆಯ ಕರ್ಮಗಳಲ್ಲಿ ತಮನ್ನು ಮುಚ್ಚಿಕೊಂಡರು,[3] ಮುಚ್ಚಿಕೊಂಡವರಾದರು. (ಯತ್ = ಯಸ್ಮಾತ್ ಹೀಗೆ) ಈ ಮಂತ್ರಗಳಿಂದ ಮುಚ್ಚಿಕೊಂಡರಷ್ಟೆ, (ತತ್ = ತಸ್ಮಾತ್) ಆದ್ದರಿಂದ ಛಂದಸ್ಸುಗಳು ಆಚ್ಛಾದನೆಮಾಡುವದರಿಂದ (ಅವುಗಳಿಗೆ) ಛಂದಸ್ತ್ವವು ಪ್ರಸಿದ್ಧವೇ (ಆಗಿದೆ).[4]

(ಉಪನಿಷತ್ತು)

ತಾನು ತತ್ರ ಮೃತ್ಯುರ್ಯಥಾ ಮತ್ಸ್ಯಮುದಕೇ ಪರಿಪಶ್ಯೇದೇವಂ ಪರ್ಯಪಶ್ಯದೃಚಿ ಸಾಮ್ನಿ ಯಜುಷಿ । ತೇ ನು ವಿತ್ತ್ವೋರ್ಧ್ವಾ[5] ಋಚಃ ಸಾಮ್ನೋ ಯಜುಷಃ ಸ್ವರಮೇವ ಪ್ರಾವಿಶನ್ ॥೩॥

೩. ಅವರನ್ನು ಅಲ್ಲಿ- ಋಕ್ಕಿನಲ್ಲಿ, ಸಾಮದಲ್ಲಿ, ಯಜುಸ್ಸಿನಲ್ಲಿ- ಮೃತ್ಯುವು ಹೇಗೆ ಮೀನನ್ನು ನೀರಿನಲ್ಲಿ ಕಾಣುತ್ತಾನೋ (ಹಾಗೆ) ಕಂಡುಕೊಂಡನು. ಅವರು ಅರಿತುಕೊಂಡು ಋಕ್ಕಿನಿಂದಲೂ ಸಾಮದಿಂದಲೂ ಯಜುಸ್ಸಿನಿಂದಲೂ ಮೇಲಕ್ಕೆದ್ದು ಸ್ವರವನ್ನೇ ಪ್ರವೇಶಮಾಡಿದರು.

---

1. ಆಸುರಪಾಪಬುದ್ಧಿಗೆ.
2. ಕರ್ಮದಿಂದ ಸ್ವಾಭಾವಿಕವಾದ ಜ್ಞಾನಕರ್ಮಗಳಿಗೆ ಕಾರಣವಾದ ಮೃತ್ಯುವು ನಾಶವಾಗುತ್ತದೆ ಎಂದು ಕರ್ಮವನ್ನು ಪ್ರವೇಶಿಸಿದರು ಎಂದರ್ಥ.
3. ಯಾವ ಕರ್ಮವನ್ನು ಮಾಡುತ್ತಾರೋ ಆ ಕರ್ಮಗಳಲ್ಲಿ ವಿನಿಯೋಗವಾಗದಿರುವ ಮಂತ್ರಗಳನ್ನು ಜಪಾದಿಗಳಿಗೆ ವಿನಿಯೋಗಿಸಿಕೊಂಡರು ಎಂದರ್ಥ.
4. ಮೃತ್ಯುವಿಗೆ ದೂರವಾಗಿರುವಂತೆ ಮಂತ್ರಗಳು ಸಾಧಕನನ್ನು ಮುಚ್ಚುತ್ತವೆಯಾದ್ದರಿಂದ ಅವಕ್ಕೆ ಛಂದಸ್ಸುಗಳೆಂಬ ಹೆಸರು ಬಂದಿದೆ ಎಂದಭಿಪ್ರಾಯ.
5. "ವಿದಿತ್ವೋರ್ಧ್ವಾಃ" ಎಂದು ಆ॥ ವಾ॥ ಪಾಠ ; ಭಾಷ್ಯದಲ್ಲಿ ವಿತ್ತ್ವಾ ಎಂಬ ಪಾಠವೇ ಪರಾಮೃಷ್ಟವಾಗಿಲ್ಲದ್ದರಿಂದ ಅದೇ ಸರಿಯೆ ? ವಿಮರ್ಶಿಸಬೇಕಾದದ್ದಿದೆ.

ದೇವತೆಗಳು ಓಂಕಾರವನ್ನು ಪ್ರವೇಶಿಸಿದ್ದು

(ಭಾಷ್ಯ)

೪೯. ತಾನ್(ಉ)[1] ತತ್ರ ದೇವಾನ್ ಕರ್ಮಪರಾನ್ ಮೃತ್ಯುಃ ಯಥಾ ಲೋಕೇ ಮತ್ಸ್ಯಘಾತಕೋ ಮತ್ಸ್ಯಮ್ ಉದಕೇ ನಾತಿಗಮ್ಭೀರೇ ಪರಿಪಶ್ಯೇತ್ ಬಡಿಶೋದಕ ಸ್ರಾವೋಪಾಯಸಾಧ್ಯಂ ಮನ್ಯಮಾನಃ, ಏವಂ ಪರ್ಯಪಶ್ಯತ್ ದೃಷ್ಟವಾನ್ ಮೃತ್ಯುಃ ಕರ್ಮಕ್ಷಯೋಪಾಯೇನ ಸಾಧ್ಯಾನ್ ದೇವಾನ್ ಮೇನೇ ಇತ್ಯರ್ಥಃ । ಕ್ವಾಸೌ ದೇವಾನ್ ದದರ್ಶೇತಿ ? ಉಚ್ಯತೇ । ಋಚಿ, ಸಾಮ್ನಿ, ಯಜುಷಿ । ಋಗ್ಯಜುಃಸಾಮ ಸಂಬನ್ಧಿ ಕರ್ಮಣಿ ಇತ್ಯರ್ಥಃ । ತೇ ನು ದೇವಾಃ ವೈದಿಕೇನ ಕರ್ಮಣಾ ಸಂಸ್ಕೃತಾಃ ಶುದ್ಧಾತ್ಮಾನಃ ಸನ್ತೋ ಮೃತ್ಯೋಶ್ಚಿಕೀರ್ಷಿತಂ ವಿದಿತವನ್ತಃ । ವಿದಿತ್ವಾ ಚ ತೇ ಊರ್ಧ್ವಾಃ ವ್ಯಾವೃತ್ತಾಃ ಕರ್ಮಭ್ಯಃ ಋಚಃ ಸಾಮ್ನಃ, ಯಜುಷಃ । ಋಗ್ಯಜುಃ ಸಾಮಸಂಬದ್ಧಾತ್ ಕರ್ಮಣಃ ಅಭ್ಯುತ್ಥಾಯ ಇತ್ಯರ್ಥಃ । ತೇನ ಕರ್ಮಣಾ ಮೃತ್ಯುಭಯಾಪಗಮಂ ಪ್ರತಿ ನಿರಾಶಾಃ ತತ್ ಅಪಾಸ್ಯ ಅಮೃತಾಭಯಗುಣಮ್ ಅಕ್ಷರಂ ಸ್ವರಂ ಸ್ವರಶಬ್ದಿತಂ ಪ್ರಾವಿಶನ್ನಿವ[2] ಪ್ರವಿಷ್ಟವನ್ತಃ । ಓಂಕಾರೋಪಾಸನಪರಾಃ ಸಂವೃತ್ತಾಃ । ಏವಶಬ್ದಃ ಅವಧಾರಣಾರ್ಥಃ ಸನ್ ಸಮುಚ್ಚಯಪ್ರತಿಷೇಧಾರ್ಥಃ । ತದುಪಾಸನಪರಾಃ ಸಂವೃತ್ತಾ ಇತ್ಯರ್ಥಃ ॥

(ಭಾಷ್ಯಾರ್ಥ)

ಅವರನ್ನು, ಅಲ್ಲಿ[3] ಕರ್ಮಪರರಾದ ದೇವತೆಗಳನ್ನು ಮೃತ್ಯುವು- ಹೇಗೆ ಲೋಕದಲ್ಲಿ ಮೀನುಗಳನ್ನು (ಹಿಡಿದು) ಕೊಲ್ಲುವವನು, ಮೀನನ್ನು ಬಹಳ ಆಳವಿಲ್ಲದ ನೀರಿನಲ್ಲಿ, ಮೀನುಗಾರ, ನೀರನ್ನು ಸೋಸಿಹಾಕುವದು ಎಂಬ ಉಪಾಯದಿಂದ (ಅದನ್ನು ಹಿಡಿಯುವದು) ಸಾಧ್ಯವೆಂದು ತಿಳಿದು ಕಂಡುಹಿಡಿದು ಕೊಳ್ಳುವನೋ ಹಾಗೆ ಮೃತ್ಯುವು- ಕಂಡುಕೊಂಡನು, ಕಂಡುಕೊಂಡವನಾದನು. ಕರ್ಮಕ್ಷಯವೆಂಬ ಉಪಾಯದಿಂದ ದೇವತೆಗಳನ್ನು (ಹಿಡಿಯುವದು) ಸಾಧ್ಯವೆಂದು ತಿಳಿದುಕೊಂಡನು ಎಂದರ್ಥ. ಅವನು ದೇವತೆಗಳನ್ನು ಎಲ್ಲಿ ಕಂಡುಕೊಂಡನು ?- ಎಂದರೆ (ಶ್ರುತಿ) ಹೇಳುತ್ತದೆ : ಋಕ್ಕಿನಲ್ಲಿ, ಸಾಮದಲ್ಲಿ, ಯಜುಸ್ಸಿನಲ್ಲಿ (ಕಂಡು ಕೊಂಡನು) : ಋಗ್ಯಜುಃಸಾಮಗಳಿಗೆ ಸಂಬದ್ಧವಾದ ಕರ್ಮದಲ್ಲಿ ಎಂದರ್ಥ.

1. ಈ ಮಾತು ಇಲ್ಲಿ ಬಿಟ್ಟು ಹೋಗಿದೆ. 2. ಪ್ರಾವಿಶನ್ನೇವ ಎಂಬುದನ್ನು ಹೀಗೆಂದು ತಿದ್ದಿಕೊಂಡಿದೆ. 3. ವೈದಿಕಕರ್ಮವನ್ನು ಮಾಡುತ್ತಿರುವಲ್ಲಿ ಎಂದರ್ಥ.

ಆ ದೇವತೆಗಳು, ವೈದಿಕಕರ್ಮದಿಂದ ಸಂಸ್ಕೃತರಾಗಿ ಶುದ್ಧರಾಗಿದ್ದದ್ದರಿಂದ[1] ಮೃತ್ಯುವು (ಮುಂದೆ) ಮಾಡಲಿಳಿಸಿರುವದನ್ನು ಅರಿತುಕೊಂಡರು. (ಹಾಗೆ) ಅರಿತು ಕೊಂಡು (ಅವರು) ಕರ್ಮಗಳಿಂದ[2] ಋಕ್ಕಿನಿಂದಲೂ ಸಾಮದಿಂದಲೂ ಯಜುಸ್ಸಿನಿಂದಲೂ ಮೇಲಕ್ಕೆದ್ದು ಋಗ್ಯಜುಃಸಾಮಗಳಿಗೆ ಸಂಬದ್ಧವಾದ ಕರ್ಮವನ್ನು ಬಿಟ್ಟೆದ್ದು ಎಂದರ್ಥ. ಆ ಕರ್ಮದಿಂದ ಮೃತ್ಯುಭಯವು ಹೋಗುವದೆಂಬುದರಲ್ಲಿ ನಿರಾಶರಾಗಿ ಅದನ್ನು ಬಿಟ್ಟು ಅಮೃತಾಭಯಗುಣವುಳ್ಳ ಅಕ್ಷರವನ್ನು ಸ್ವರಶಬ್ದವಾಚ್ಯವಾದ (ಓಂ ಕಾರವನ್ನು) ಪ್ರವೇಶಮಾಡಿದಂತೆ[3] ಒಳಹೊಕ್ಕರು ಓಂಕಾರೋಪಾಸನಾಪರರಾದರು. ಇಲ್ಲಿ ಏವಶಬ್ದವು ಅವಧಾರಣಾರ್ಥವಾಗಿರುವದರಿಂದ ಸಮುಚ್ಚಯವನ್ನು[4] ಪ್ರತಿಷೇಧ ಮಾಡುವದಕ್ಕೆ (ಬಂದಿದೆ). ಆದರ ಉಪಾಸನೆಯಲ್ಲಿಯೇ ತತ್ಪರರಾದರು ಎಂದರ್ಥ.

(ಉಪನಿಷತ್ತು)

ಯದಾ ವಾ ಋಚಮಾಪ್ನೋತ್ಯೋಮಿತ್ಯೇವಾತಿಸ್ವರತ್ಯೇವಗ್ಂ ಸಾಮೈವಂ ಯಜುರೇಷ ಉ ಸ್ವರೋ ಯದೇತದಕ್ಷರಮೇತದಮೃತ-ಮಭಯಂ ತತ್ಪ್ರವಿಶ್ಯ ದೇವಾ ಅಮೃತಾ ಅಭಯಾ ಅಭವನ್ ॥೪॥

೪. ಯಾವಾಗ ಋಕ್ಕನ್ನು ಪಡೆದುಕೊಳ್ಳುವನೋ, (ಆಗ) ಓಮೆಂದೇ ಅತಿಸ್ವರವನ್ನು ಮಾಡುತ್ತಾನೆ. ಹೀಗೆಯೇ ಸಾಮವನ್ನು (ಪಡೆದು

1. ವೈದಿಕಕರ್ಮವು ಕ್ಷಯವಾಗುವದು ಎಂದದ್ದರಿಂದ ಅದು ಮುಮುಕ್ಷುಗಳಿಗೆ ಬೇಕಿಲ್ಲವೆಂದು ತಿಳಿಯಬಾರದೆಂಬುದಕ್ಕಾಗಿ ಈ ಫಲವನ್ನು ಇಲ್ಲಿ ತಿಳಿಸಿದೆ.

2. ಇಲ್ಲಿ ಕರ್ಮಭ್ಯಃ ಎಂಬ ಪಾಠವನ್ನು ಟೀಕೆಯಲ್ಲಿ ಅಂಗೀಕರಿಸಿದೆ ; ಎಲ್ಲಾ ಕರ್ಮಗಳನ್ನೂ ಬಿಟ್ಟೆದ್ದರು- ಎಂದು ತಿಳಿಸುವದಕ್ಕೆ ಬಹುವಚನವು ಬಂದಿದೆ ಎಂದು ಅಲ್ಲಿ ಬರೆದಿದೆ. ಆದರೆ ಮೂಲದಲ್ಲಿ ಕರ್ಮಶಬ್ದವೇ ಇಲ್ಲದ್ದರಿಂದ ''ಯಜುಷ'' ಮುಂತಾದ ವಾಕ್ಯಕ್ಕೆ ಯಜುಸ್ಸೇ ಮುಂತಾದವಕ್ಕೆ ಸಂಬಂಧಪಟ್ಟ ಕರ್ಮವನ್ನು ಬಿಟ್ಟೆದ್ದು ಎಂದರ್ಥ. ಎಂದೇ ಭಾಷ್ಯಕ್ಕೆ ಆಭಿಪ್ರಾಯವು ಸ್ವರಸವಾಗಿದೆ. ಆದ್ದರಿಂದ ಇಲ್ಲಿಯೂ ಕರ್ಮಣಃ ಎಂದೇ ಇದ್ದಿರಬಹುದೆ ? - ಎಂಬುದು ಯೋಚಿಸತಕ್ಕದ್ದಾಗಿದೆ.

ಓಂಕಾರವನ್ನು ಪ್ರವೇಶಿಸಿದರು, ಎಂದರೆ ಅದನ್ನೇ ಒಳಹೊಕ್ಕು ಅದರಲ್ಲಿ ಒಂದಾದಂತೆ ಆದರು ಎಂಬ ಅರ್ಥನ್ಯಾರಸ್ಯವು ಬರುವದಕ್ಕೆ ಇವ ಎಂದಿರುವದೇ ಹೊಂದುತ್ತದೆ. ತೈ. ಭಾ. ೧-೪ ಭಾ. ಭಾ. ೨೮ ನೋಡಿ.

4. ಓಂಕಾರವನ್ನೇ ಪ್ರವೇಶಿಸಿದರು ಎಂದರೆ ಕರ್ಮವನ್ನು ಬಿಟ್ಟು ಅದನ್ನೇ ಸೇವಿಸಿದರು ಎಂದು ಸಮುಚ್ಚಯನಿಷೇಧ.

ಕೊಳ್ಳುವಾಗ), ಹೀಗೆಯೇ ಯಜುಸ್ಸನ್ನು (ಪಡೆದುಕೊಳ್ಳುವಾಗ). ಈ ಅಕ್ಷರವೆಂಬುದಿದೆಯಲ್ಲ, ಇದೇ ಸ್ವರವು. ಇದು ಅಮೃತವು, ಅಭಯವು. ಇದನ್ನು ಪ್ರವೇಶಿಸಿ ದೇವತೆಗಳು ಅಮೃತರೂ ಅಭಯರೂ ಆದರು.

ಓಮೆಂಬುದು ಸ್ವರವು ಹೇಗೆ ?

(ಭಾಷ್ಯ)

೫೦. ಕಥಂ ಪುನಃ ಸ್ವರಶಬ್ದವಾಚ್ಯತ್ವಮ್ ಅಕ್ಷರಸ್ಯೇತಿ ? ಉಚ್ಯತೇ । ಯದಾ ವೈ ಋಚಮ್ ಆಪ್ನೋತಿ ಓಮಿತ್ಯೇವ ಅತಿಸ್ವರತಿ । ಏವಂ ಸಾಮ, ಏವಂ ಯಜುಃ । ಏಷ ಉ ಸ್ವರಃ । ಕೋಽಸೌ ? ಯದೇತದಕ್ಷರಮ್ । ಏತದಮೃತಮ್, ಅಭಯಮ್ । ತತ್ ಪ್ರವಿಶ್ಯ ಯಥಾಗುಣಮೇವ ಅಮೃತಾ ಅಭಯಾಶ್ಚ ಅಭವನ್ ದೇವಾಃ ॥

(ಭಾಷ್ಯಾರ್ಥ)

(ಈ) ಅಕ್ಷರವು ಸ್ವರಶಬ್ದದಿಂದ ಹೇಳಲ್ಪಡತಕ್ಕದ್ದು ಎಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ. ಯಾವಾಗ ಋಕ್ಕನ್ನು (ಅಧ್ಯಯನದಿಂದ) ಪಡೆದುಕೊಳ್ಳುವನೋ ಆಗ ಓಮ್ ಎಂದೇ ಅತಿಸ್ವರವನ್ನು ಮಾಡುತ್ತಾನೆ.[1] ಹೀಗೆಯೇ ಸಾಮವನ್ನು (ಪಡೆದುಕೊಳ್ಳುವಾಗ), ಹೀಗೆಯೇ ಯಜುಸ್ಸನ್ನು (ಪಡೆದುಕೊಳ್ಳುವಾಗ ಅತಿಸ್ವರವನ್ನು ಮಾಡುತ್ತಾನೆ). ಮತ್ತು ಇದೇ ಸ್ವರವು. (ಇದೇ ಎಂದರೆ) ಯಾವದದು ? ಎಂದರೆ ಈ (ಓಮ್ ಎಂಬ) ಅಕ್ಷರವಿದೆಯಲ್ಲ ಅದು. ಇದು ಅಮೃತವು, ಅಭಯವು. ಇದನ್ನು ಪ್ರವೇಶಿಸಿ ಗುಣಕ್ಕೆ ತಕ್ಕಂತೆಯೇ[2] ದೇವತೆಗಳು ಅಮೃತರೂ ಅಭಯರೂ ಆದರು.

ಅಮೃತಾಭಯಗುಣೋಂಕಾರೋಪಾಸನೆಗೆ ಫಲ

(ಉಪನಿಷತ್ತು)

ಸ ಯ ಏತದೇವಂ ವಿದ್ವಾನಕ್ಷರಂ ಪ್ರಣೌತ್ಯೇತದೇವಾಕ್ಷರಗ್ಂ

1. ಅತ್ಯಾದರದಿಂದ ಉಚ್ಚರಿಸುತ್ತಾನೆ.
2. ಅಮೃತಾಭಯಗುಣವುಳ್ಳದ್ದೆಂದು ಉಪಾಸನೆಮಾಡಿದ್ದಕ್ಕೆ ತಕ್ಕಂತೆಯೇ ಎಂದರ್ಥ. ಹೇಗೆಹೇಗೆ ಉಪಾಸನೆಮಾಡಿದರೆ ಹಾಗೆಹಾಗೆ ಫಲವಾಗುವದೆಂಬ ಶತಪಥಬ್ರಾಹ್ಮಣದ ಸೂಚನೆ ಇಲ್ಲಿದೆ.

ಸ್ವರಮಮೃತಮಭಯಂ ಪ್ರವಿಶತಿ ತತ್ ಪ್ರವಿಶ್ಯ ಯದಮೃತಾ ದೇವಾಸ್ತದಮೃತೋ ಭವತಿ ॥೫॥

೫. ಯಾವನು ಈ ಅಕ್ಷರವನ್ನು ಹೀಗೆಂದು ಅರಿತುಕೊಂಡು ಸ್ತೋತ್ರಮಾಡುವನೋ ಅವನು ಅಮೃತವೂ ಅಭಯವೂ ಆದ ಇದೇ ಅಕ್ಷರವೆಂಬ ಸ್ವರವನ್ನು ಪ್ರವೇಶಿಸುತ್ತಾನೆ. ಇದನ್ನು ಒಳಹೊಕ್ಕು ದೇವತೆಗಳು ಎಂಥ ಅಮೃತರಾದರೋ ಅಂಥ ಅಮೃತನಾಗುತ್ತಾನೆ.

ಈ ಓಂಕಾರೋಪಾಸನೆಗೆ ಫಲ

(ಭಾಷ್ಯ)

೫೧. ಸ ಯೋಽನ್ಯೋಽಪಿ ದೇವವದೇವ ಏತದಕ್ಷರಮ್ ಏವಮ್ ಅಮೃತಾಭಯಗುಣಂ[1] ವಿದ್ವಾನ್ ಪ್ರಣೌತಿ ಸ್ತೌತಿ । ಉಪಾಸನಮೇವಾತ್ರ ಸ್ತುತಿರಭಿಪ್ರೇತಾ । ಸ ತಥೈವ ಏತದೇವ ಅಕ್ಷರಂ ಸ್ವರಮ್ ಅಮೃತಮಭಯಂ ಪ್ರವಿಶತಿ । ತತ್ ಪ್ರವಿಶ್ಯ ಚ ರಾಜಕುಲಂ ಪ್ರವಿಷ್ಟಾನಾಮಿವ ರಾಜ್ಞೋಽನ್ತರಙ್ಗ-ಬಹಿರಙ್ಗತಾವತ್ ನ ಪರಸ್ಯ ಬ್ರಹ್ಮಣೋಽನ್ತರಙ್ಗಬಹಿರಙ್ಗತಾವಿಶೇಷಃ । ಕಿಂ ತರ್ಹಿ ಯದಮೃತಾ ದೇವಾಃ, ಯೇನ ಅಮೃತತ್ವೇನ ಯದಮೃತಾ ಅಭೂವನ್ ತೇನೈವ ಅಮೃತತ್ವೇನ ವಿಶಿಷ್ಟಃ, ತದಮೃತೋ ಭವತಿ । ನ ನ್ಯೂನತಾ ನಾಪ್ಯಧಿಕತಾ ಅಮೃತತ್ವೇ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತೆ ಬೇರೆ ಯಾವನು ದೇವತೆಗಳಂತೆಯೇ ಈ ಅಕ್ಷರವನ್ನು ಹೀಗೆಂದು ಅಮೃತಾಭಯಗುಣವುಳ್ಳದ್ದೆಂದು ಅರಿತುಕೊಂಡು (ಪ್ರಣೌತಿ = ಸ್ತೌತಿ) ಸ್ತೋತ್ರ-ಮಾಡುವನೋ, ಇಲ್ಲಿ ಸ್ತುತಿ ಎಂದರೆ ಉಪಾಸನೆಯೆಂದೇ ಅಭಿಪ್ರಾಯ[2]-ಅವನೂ[3] ಹಾಗೆಯೇ ಅಮೃತವೂ ಅಭಯವೂ ಆದ ಈ ಅಕ್ಷರವೆಂಬ ಸ್ವರವನ್ನೇ

1. "ಅಮೃತಮಭಯಗುಣಂ" ಎಂಬುದಕ್ಕಿಂತ ಈ ಪಾಠವು ಮೇಲು.
2. ಏಕೆಂದರೆ ಇಲ್ಲಿ ಸ್ತೋತ್ರವು, ಸಾಮಗಾನವು, ಪ್ರಕೃತವಲ್ಲ; ಉಪಾಸನೆಯೇ ಪ್ರಕೃತ.
3. ದೇವತೆಗಳು ಮಹಾಮಹಿಮರಾದ್ದರಿಂದ ಅವರಿಗೆ ದಕ್ಕಿದ ಅಮೃತತ್ವವು ನಮಗೆ ದಕ್ಕೀತೇ ? - ಎಂಬ ಶಂಕೆಗೆ ಪರಿಹಾರವಿದು. ಉಪಾಸನೆ ಮುಖ್ಯ, ಉಪಾಸಕರ ಮಹಿಮೆಯಲ್ಲ ಎಂದು ಭಾವ.

ಪ್ರವೇಶಿಸುತ್ತಾನೆ. ಇದನ್ನು ಪ್ರವೇಶಿಸಿ - ರಾಜನ ಅರಮನೆಯನ್ನು ಹೊಕ್ಕವರಿಗೆ ಅಂತರಂಗ, ಬಹಿರಂಗ- ಎಂಬ (ತಾರತಮ್ಯವಿರು)ವಂತೆ ಪರಬ್ರಹ್ಮಕ್ಕೆ ಅಂತರಂಗ ಬಹಿರಂಗಗಳೆಂಬ ವಿಶೇಷವಿರುವದಿಲ್ಲ[1] ; ಮತ್ತೇನೆಂದರೆ- ದೇವತೆಗಳು (ಯದಮೃತಾಃ) ಯಾವ ಅಮೃತತ್ವದಿಂದ ಅಮೃತರಾದರೋ, ಅದೇ ಅಮೃತತ್ವದಿಂದಲೇ ಕೂಡಿ ಅಮೃತನಾಗುತ್ತಾನೆ. (ಅವನ) ಅಮೃತತ್ವದಲ್ಲಿ ಕಡಿಮೆಯೂ ಇರುವದಿಲ್ಲ, ಹೆಚ್ಚಿಗೆಯೂ ಇರುವದಿಲ್ಲ ಎಂದರ್ಥ.[2]

ಒಂದನೆಯ ಅಧ್ಯಾಯ - ಐದನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಓಂಕಾರದಲ್ಲಿ ಪ್ರಾಣರಶ್ಮಿಭೇದವಿಶಿಷ್ಟದೃಷ್ಟಿ

(ಉಪನಿಷತ್ತು)

ಅಥ ಖಲು ಯ ಉದ್ಗೀಥಃ ಸ ಪ್ರಣವೋ ಯಃ ಪ್ರಣವಃ ಸ ಉದ್ಗೀಥಃ ಇತ್ಯಸೌ ವಾ ಆದಿತ್ಯ ಉದ್ಗೀಥ ಏಷ ಪ್ರಣವ ಓಮಿತಿ ಹ್ಯೇಷ ಸ್ವರನ್ನೇತಿ ॥೧॥

೧. ಇನ್ನು ಉದ್ಗೀಥವೆಂಬುದಿದೆಯಲ್ಲ, ಅದೇ ಪ್ರಣವವು ; ಪ್ರಣವವೆಂಬುದಿದೆಯಲ್ಲ, ಅದೇ ಉದ್ಗೀಥವು. ಆ ಆದಿತ್ಯನೇ ಉದ್ಗೀಥವು, ಅವನೇ ಪ್ರಣವವು. ಅವನು ಓಮ್ ! ಎಂದಲ್ಲವೆ, ಸ್ವರಮಾಡುತ್ತಾ ಬರುತಾನೆ ?

1. ಅರಮನೆಯನ್ನು ಹೊಕ್ಕವರೆಲ್ಲರೂ ರಾಜನ ಅಂತರಂಗದವರಾಗಿರುವದಿಲ್ಲ , ಹಾಗೆಯೇ ಬ್ರಹ್ಮದ ವಿಷಯಕ್ಕೂ ಇರಬಹುದಲ್ಲ ! ಎಂಬ ಶಂಕೆಯ ಪರಿಹಾರಕ್ಕೆ ಇದನ್ನು ಹೇಳಿದೆ.
2. ಓಂಕಾರವನ್ನು ಬ್ರಹ್ಮದೃಷ್ಟಿಯಿಂದಲೇ ಉಪಾಸನೆಮಾಡುವದರಿಂದಲೂ ಬ್ರಹ್ಮದಲ್ಲಿ ಯಾವ ತಾರತಮ್ಯವೂ ಇಲ್ಲವಾದ್ದರಿಂದಲೂ ಈ ಉಪಾಸನೆಯಲ್ಲಿಯೂ ತಾರತಮ್ಯವಿಲ್ಲ. ಉಪಾಸನೆಯ ತಾರತಮ್ಯದಿಂದಲೇ ಫಲತಾರತಮ್ಯವೇ ಹೊರತು ಬ್ರಹ್ಮದ ಸ್ವಭಾವದಿಂದಲ್ಲ - ಎಂದು ಭಾವ.

ಈ ಖಂಡದ ಸಂಬಂಧ

(ಭಾಷ್ಯ)

೫೨. ಪ್ರಾಣಾದಿತ್ಯದೃಷ್ಟಿವಿಶಿಷ್ಟಸ್ಯ ಉದ್ಗೀಥಸ್ಯ ಉಪಾಸನಮ್ ಉಕ್ತಮೇವಾನೂದ್ಯ ಪ್ರಣವೋದ್ಗೀಥಯೋರೇಕತ್ವಂ ಕೃತ್ವಾ ತಸ್ಮಿನ್ ಪ್ರಾಣರಶ್ಮಿಭೇದಗುಣವಿಶಿಷ್ಟದೃಷ್ಟ್ಯಾ ಅಕ್ಷರಸ್ಯೋಪಾಸನಮ್ ಅನೇಕಪುತ್ರಫಲಮ್ ಇದಾನೀಂ ವಕ್ತವ್ಯಮ್ ಇತ್ಯಾರಭ್ಯತೇ॥

(ಭಾಷ್ಯಾರ್ಥ)

ಪ್ರಾಣ, ಆದಿತ್ಯ- ಎಂಬ ದೃಷ್ಟಿಯಿಂದೊಡಗೂಡಿದ ಉದ್ಗೀಥದ ಉಪಾಸನೆಯನ್ನು ಹೇಳಿತಷ್ಟೆ ? (ಅದನ್ನೇ) ಅನುವಾದಮಾಡಿಕೊಂಡು[1] ಪ್ರಣವೋದ್ಗೀಥಗಳನ್ನು ಒಂದಾಗಿ ಮಾಡಿಕೊಂಡು ಅದರಲ್ಲಿ ಪ್ರಾಣರಶ್ಮಿಭೇದವೆಂಬ ಗುಣದಿಂದೊಡಗೂಡಿದ್ದು ಎಂಬ ದೃಷ್ಟಿಯಿಂದ (ಈ) ಅಕ್ಷರದ ಉಪಾಸನೆಮಾಡುವದು ಅನೇಕಪುತ್ರ (ಪ್ರಾಪ್ತಿ ಎಂಬ) ಫಲವನ್ನು ಕೊಡುವದೆಂದು ಈಗ ಹೇಳುವದಕ್ಕೆ (ಈ ಖಂಡವನ್ನು) ಆರಂಭಿಸಿದೆ.

ಆದಿತ್ಯನೇ ಉದ್ಗೀಥ, ಪ್ರಣವ

(ಭಾಷ್ಯ)

೫೩. ಅಥ ಖಲು ಯ ಉದ್ಗೀಥಃ ಸ ಪ್ರಣವೋ ಬಹ್ವೃಚಾನಾಮ್ । ಯಶ್ಚ ಪ್ರಣವಸ್ತೇಷಾಮ್, ಸ ಏವ ಛಾನ್ದೋಗ್ಯೇ ಉದ್ಗೀಥಶಬ್ದವಾಚ್ಯಃ । ಅಸೌ ವಾ ಆದಿತ್ಯ ಉದ್ಗೀಥಃ । ಏಷ ಪ್ರಣವಃ । ಪ್ರಣವಶಬ್ದವಾಚ್ಯೋಽಪಿ ಸ ಏವ ಬಹ್ವೃಚಾನಾಮ್ ನಾನ್ಯಃ । ಉದ್ಗೀಥಃ ಆದಿತ್ಯಃ ಕಥಮ್ । ಉದ್ಗೀಥಾಖ್ಯಮ್ ಅಕ್ಷರಮ್ ಓಮಿತಿ ಏತತ್ ಏಷ ಹಿ ಯಸ್ಮಾತ್ ಸ್ವರನ್ ಉಚ್ಚಾರಯನ್ । ಅನೇಕಾರ್ಥತ್ವಾತ್ ಧಾತೂನಾಮ್ । ಅಥವಾ ಸ್ವರನ್ ಗಚ್ಛನ್ ಏತಿ । ಅತಃ ಅಸೌ ಉದ್ಗೀಥಃ ಸವಿತಾ॥

(ಭಾಷ್ಯಾರ್ಥ)

ಇನ್ನು ಉದ್ಗೀಥವೆಂಬುದಿದೆಯಲ್ಲ, ಅದು ಬಹ್ವೃಚರ[2] ಪ್ರಣವವು ; ಅವರ

---

1. ಮೂರನೆಯ ಖಂಡದಲ್ಲಿ ಹೇಳಿದ ಪ್ರಾಣಾದಿತ್ಯದೃಷ್ಟಿಯ ಉಪಾಸನೆಗಿಂತಲೂ ಈ ಉಪಾಸನೆಗೆ ಹೆಚ್ಚಿನ ಫಲವೆಂದು ತಿಳಿಸುವದಕ್ಕಾಗಿ ಅದನ್ನು ಅನುವಾದ ಮಾಡಿಕೊಂಡಿರುತ್ತದೆ.

2. ಋಗ್ವೇದಿಗಳ ಎಂದರ್ಥ ; ಏಕೆಂದರೆ ಅವರು ಋಕ್ಕುಗಳನ್ನೇ ಬಹುವಾಗಿ ಅಧ್ಯಯನ ಮಾಡುವರು.

ಪ್ರಣವವೆಂಬುದಿದೆಯಲ್ಲ, ಅದೇ ಛಾಂದೋಗ್ಯದಲ್ಲಿ ಉದ್ಗೀಥಶಬ್ದವಾಚ್ಯ(ವಾಗಿರುವದು). ಈ ಆದಿತ್ಯನೇ ಉದ್ಗೀಥವು ; ಇವನೇ ಪ್ರಣವವು, ಬಹ್ವೃಚರ ಪ್ರಣವಶಬ್ದವಾಚ್ಯನೂ ಇವನೇ, ಮತ್ತೊಂದಲ್ಲ.

ಆದಿತ್ಯನು ಉದ್ಗೀಥವೆಂಬುದು ಹೇಗೆ ? ಎಂದರೆ, ಉದ್ಗೀಥವೆಂಬ ಹೆಸರಿನ ಆಕ್ಷರವನ್ನು, ಓಮ್ ಎಂಬುದನ್ನು ಇವನು ಸ್ವರಮಾಡುತ್ತಾ, ಉಚ್ಚರಿಸುತ್ತಾ (ಬರುತ್ತಾನಲ್ಲವೆ ? ಆದ್ದರಿಂದ ಇವನು ಉದ್ಗೀಥನು). ಧಾತುಗಳಿಗೆ ಅನೇಕಾರ್ಥಗಳಿರುವದರಿಂದ (ಸ್ವರ್‌ಧಾತುವಿಗೆ ಉಚ್ಚರಿಸು ಎಂಬರ್ಥವೂ ಇರಬಹುದಾಗಿದೆ). ಅಥವಾ ಸ್ವರಮಾಡುತ್ತಾ ಎಂದರೆ ನಡೆಯುತ್ತಾ ಬರುತ್ತಾನೆ.[1] ಆದ್ದರಿಂದ ಈ ಸೂರ್ಯನು ಉದ್ಗೀಥವು.

ಆದಿತ್ಯನನ್ನೂ ರಶ್ಮಿಗಳನ್ನೂ ಬೇರೆಯೆಂದು ಚಿಂತಿಸುವದು

(ಉಪನಿಷತ್ತು)

ಏತಮು ಏವಾಹಮಭ್ಯಗಾಸಿಷಂ ತಸ್ಮಾನ್ಮಮ ತ್ವಮೇಕೋಽಸೀತಿ ಹ ಕೌಷೀತಕಿಃ ಪುತ್ರಮುವಾಚ ರಶ್ಮೀಗ್ಂಸ್ತ್ವಂ ಪರ್ಯಾವರ್ತಯಾದ್ ಬಹವೋ ವೈ ತೇ ಭವಿಷ್ಯನ್ತೀತ್ಯಧಿದೈವತಮ್ ॥೨॥

೨. ''ಇವನನ್ನೇ ನಾನು ಅಭಿಗಾನಮಾಡಿರುತ್ತೇನೆ. ಆದ್ದರಿಂದ ನನಗೆ ನೀನೊಬ್ಬನೇ ಆಗಿರುತ್ತೀಯೆ. ನೀನು ರಶ್ಮಿಗಳನ್ನು ಪರ್ಯಾವೃತ್ತಿಮಾಡು, ನಿನಗೆ ಬಹುಜನ (ಮಕ್ಕಳೇ) ಆಗುವರು'' ಎಂದು ಕೌಷೀತಕಿಯು ಪುತ್ರನಿಗೆ ಹೇಳಿದನು. ಇದು ಅಧಿದೈವತವು.

ರಶ್ಮಿಭೇದಚಿಂತನವಿಧಾನ

(ಭಾಷ್ಯ)

೫೪. ತಮ್ ಏತಮ್ ಉ ಏವ ಅಹಮ್ ಅಭ್ಯಗಾಸಿಷಮ್ ಆಭಿಮುಖ್ಯೇನ

1 ಸ್ವರ್‌ಧಾತುವಿಗೆ ಗತ್ಯರ್ಥ (ನಡೆ ಎಂಬರ್ಥ)ವನ್ನು ವ್ಯಾಕರಣದಲ್ಲಿ ಹೇಳಿದ್ದರೂ ಉಚ್ಚರಿಸುತ್ತಾ ಎಂಬರ್ಥವನ್ನು ಪ್ರಕೃತಕ್ಕೆ ಹೊಂದುವಂತೆ ಮಾಡಬಹುದು ; ಏಕೆಂದರೆ ಧಾತುಗಳಿಗೆ ಅನೇಕಾರ್ಥಗಳಿರುವವೆಂದು ವೈಯಾಕರಣರೂ ಒಪ್ಪಿರುತ್ತಾರೆ ಎಂದು ಮೊದಲನೆಯ ವ್ಯಾಖ್ಯಾನ. ಸೂರ್ಯನು ಸಂಚರಿಸುತ್ತಾ ಬರುತ್ತಿರುವದು, ಜೀವರುಗಳ ಪ್ರವೃತ್ತಿಗಳಿಗೆ ಓಮ್ ಎಂದು ಅನುಜ್ಞೆ ಕೊಡುವಂತಿದೆ ; ಆದ್ದರಿಂದ ಗಚ್ಛನ್ (ನಡೆಯುತ್ತಾ) ಎಂದೇ ಅರ್ಥಮಾಡಬಹುದು ಎಂದು ಈಗಿನ ವ್ಯಾಖ್ಯಾನ.

ಗೀತವಾನಸ್ಮಿ । ಆದಿತ್ಯರಶ್ಮ್ಯಭೇದಂ ಕೃತ್ವಾ ಧ್ಯಾನಂ ಕೃತವಾನಸ್ಮಿ ಇತ್ಯರ್ಥಃ । ಯತಃ,[1] ತಸ್ಮಾತ್ ಕಾರಣಾತ್ ಮಮ ತ್ವಮೇಕೋಽಸಿ ಪುತ್ರ ಇತಿ ಹ ಕೌಷೀತಕಿಃ ಕುಷೀತಕಸ್ಯ ಅಪತ್ಯಂ ಕೌಷೀತಕಿಃ ಪುತ್ರಮುವಾಚ ಉಕ್ತವಾನ್ । ಅತಃ ರಶ್ಮೀನ್ ಆದಿತ್ಯಂ ಚ ಭೇದೇನ ತ್ವಂ ಪರ್ಯಾವರ್ತಯಾತ್ ಪರ್ಯಾವರ್ತಯ ಇತ್ಯರ್ಥಃ । ತ್ವಂ ಯೋಗಾತ್ । ಏವಂ ಬಹವೋ ವೈ ತೇ ತವ ಪುತ್ರಾ ಭವಿಷ್ಯನ್ತಿ । ಇತ್ಯಧಿದೈವತಮ್ ॥

(ಭಾಷ್ಯಾರ್ಥ)

''ಆ ಇವನನ್ನೇ ನಾನು ಅಭಿಗಾನಮಾಡಿರುತ್ತೇನೆ, ಆಭಿಮುಖ್ಯದಿಂದ ಗಾನಮಾಡಿರುತ್ತೇನೆ. ಆದಿತ್ಯನಿಗೂ ರಶ್ಮಿಗಳಿಗೂ ಆಭೇದವನ್ನು ಇಟ್ಟುಕೊಂಡು ಧ್ಯಾನಮಾಡಿರುತ್ತೇನೆ ಎಂದರ್ಥ. (ಹೀಗೆ ಮಾಡಿರುವೆ)ನಷ್ಟೆ, ಆ ಕಾರಣದಿಂದ ನನಗೆ ನೀನೊಬ್ಬನೇ ಮಗನಾಗಿರುವೆ'' ಎಂದು ಕೌಷೀತಕಿಯು, ಕುಷೀತಕನ ಮಗನಾದ ಕೌಷೀತಕಿಯು, ಮಗನಿಗೆ (ಉವಾಚ = ಉಕ್ತವಾನ್) ಹೇಳಿದನು. ''ಆದ್ದರಿಂದ ರಶ್ಮಿಗಳನ್ನೂ ಆದಿತ್ಯನನ್ನೂ ಬೇರೆ ಬೇರೆ ಎಂದು ನೀನು (ಪರ್ಯಾವರ್ತಯಾತ್ ಪರ್ಯಾವರ್ತಯ) ಪರ್ಯಾವರ್ತನೆಮಾಡು[2] ಎಂದರ್ಥ. (ಇಲ್ಲಿ ಪರ್ಯಾವರ್ತಯ ಎಂದೇ ಏಕೆ ವಿಪರಿಣಾಮಮಾಡಿಕೊಳ್ಳಬೇಕೆಂದರೆ) ತ್ವಂ ಎಂಬ (ಮಧ್ಯಮ ಪುರುಷದ) ಸಂಬಂಧವಿದೆ.[3] ಹಾಗಾದರೆ (ತೇ = ತವ) ನಿನಗೆ ಬಹುಪುತ್ರರೇ ಆಗುವರು''. ಇದು ಆಧಿದೈವತವು.[4]

1. ಮೂಲದಲ್ಲಿ ತೇನ ಎಂದಿಲ್ಲವಾಗಿ ''ಯತಃ'' ಎಂಬ ಪಾಠವನ್ನೇ ನಾವು ಇಟ್ಟುಕೊಂಡಿದೇವೆ ; ಇದು ತಸ್ಮಾತ್ ಎಂಬುದಕ್ಕೆ ಸಂಬಂಧವನ್ನು ತೋರಿಸುವದಕ್ಕೆ ಭಾಷ್ಯದಲ್ಲಿ ಬರೆದಿದ್ದೆಂದು ಭಾವಿಸಬಹುದು.
2. ಆವೃತ್ತಿಮಾಡು ಎಂದರ್ಥ ಉಪಾಸನೆಗಳಲ್ಲಿ ಪ್ರತ್ಯಯವನ್ನು ಮತ್ತೆಮತ್ತೆ ಆವೃತ್ತಿ ಮಾಡಬೇಕೆಂಬುದಕ್ಕೆ ಇದೊಂದು ಗುರುತು. ಸೂ. ಭಾ. ೪-೧-೨, ಭಾ. ಭಾ. ೫೦೬ನ್ನು ನೋಡಿ.
3. ಪ್ರಥಮಪುರುಷವಿಲ್ಲವಾದ್ದರಿಂದ ಪರ್ಯಾವರ್ತಯಾತ್- ಆವೃತ್ತಿಮಾಡಲಿ ಎಂಬುದಕ್ಕೆ ಅನ್ವಯವಾಗುವದಿಲ್ಲ.
4. ಇದು ಆಧಿದೈವತೋಪಾಸನೆ ; ಮುಂದಿನ ಕಂಡಿಕೆಯಲ್ಲಿ ಆಧ್ಯಾತ್ಮೋಪಾಸನೆಯನ್ನು ಹೇಳಲಾಗುವದು.

ಮುಖ್ಯಪ್ರಾಣವನ್ನೂ ಪ್ರಾಣಗಳನ್ನೂ ಬೇರೆ ಬೇರೆ ಎಂದು ಚಿಂತಿಸುವದು

(ಉಪನಿಷತ್ತು)

ಅಥಾಧ್ಯಾತ್ಮಂ ಯ ಏವಾಯಂ ಮುಖ್ಯಃ ಪ್ರಾಣಸ್ತಮುದ್ಗೀಥ-ಮುಪಾಸೀತೋಮಿತಿ ಹ್ಯೇಷ ಸ್ವರನ್ನೇತಿ ॥೩॥

೩. ಇನ್ನು ಅಧ್ಯಾತ್ಮವು. ಈ ಮುಖ್ಯಪ್ರಾಣನಿದಾನಲ್ಲ, ಅವನನ್ನೇ ಉದ್ಗೀಥವೆಂದು ಉಪಾಸನೆಮಾಡಬೇಕು. ಇವನು ಓಮೆಂದು ಸ್ವರ ಮಾಡುತ್ತಾ ಬರುತ್ತಾನಲ್ಲವೆ ?

ಪ್ರಾಣವೇ ಉದ್ಗೀಥವೆಂಬ ಉಪಾಸನೆ

೫೫. ಅಥ ಅನನ್ತರಮ್ ಅಧ್ಯಾತ್ಮಮ್ ಉಚ್ಯತೇ । ಯ ಏವಾಯಂ ಮುಖ್ಯಃ ಪ್ರಾಣಃ ತಮ್ ಉದ್ಗೀಥಮುಪಾಸೀತ ಇತ್ಯಾದಿ ಪೂರ್ವವತ್ । ತಥಾ ಓಮಿತಿ ಹಿ ಏಷ ಪ್ರಾಣೋಽಪಿ ಸ್ವರನ್ನೇತಿ । ಓಮಿತಿ ಹಿ ಅನುಜ್ಞಾಂ ಕುರ್ವನ್ನಿವ ವಾಗಾದಿಪ್ರವೃತ್ತ್ಯರ್ಥಮ್ ಏತೀತ್ಯರ್ಥಃ । ನ ಹಿ ಮರಣಕಾಲೇ ಮುಮೂರ್ಷೋಃ ಸಮೀಪಸ್ಥಾಃ ಪ್ರಾಣಸ್ಯ ಓಂಕರಣಂ ಶೃಣ್ವನ್ತೀತಿ । ಏತತ್ ಸಾಮಾನ್ಯಾತ್ ಆದಿತ್ಯೇಽಪಿ ಓಂಕರಣಮ್ ಅನುಜ್ಞಾಮಾತ್ರಂ ದ್ರಷ್ಟವ್ಯಮ್ ॥

(ಭಾಷ್ಯಾರ್ಥ)

ಇನ್ನು (ಅಧಿದೈವತವಾದ) ಬಳಿಕ ಅಧ್ಯಾತ್ಮದ (ಉಪಾಸನೆ)ಯನ್ನು ಹೇಳಲಾಗುವದು. ಈ ಮುಖ್ಯಪ್ರಾಣವಿದೆಯಲ್ಲ, ಇದನ್ನೇ ಉದ್ಗೀಥವೆಂದು ಉಪಾಸನೆಮಾಡಬೇಕು- ಎಂದು ಮುಂತಾಗಿರುವದನ್ನು ಹಿಂದಿನ (ಕಂ೭ ಯಂತೆ ವ್ಯಾಖ್ಯಾನಮಾಡಿಕೊಳ್ಳಬೇಕು. ಹಾಗೆಯೇ[1] ಈ ಪ್ರಾಣವೂ ಸ್ವರಮಾಡುತ್ತಾ ವಾಗಾದಿಗಳ ಪ್ರವೃತ್ತಿಗಾಗಿ ಓಮ್ ! ಎಂದು ಅನುಜ್ಞೆಯನ್ನು ಕೊಡುತ್ತಿರುವವನಂತೆಯೇ ಬರುತ್ತದೆ ಎಂದರ್ಥ. ಮರಣಕಾಲದಲ್ಲಿ ಸಾಯಲಿರುವವನ ಹತ್ತಿರವಿರುವವರಿಗೆ ಪ್ರಾಣವು ಓಂಕಾರ(ವನ್ನುಚ್ಚಾರ)ಮಾಡುವದು

1. ಸೂರ್ಯನಂತೆಯೇ.

ಕೇಳಬರುವದಿಲ್ಲವಷ್ಟೆ ?[1] ಇದಕ್ಕೆ ಸಮಾನವಾಗಿರುವದರಿಂದ ಆದಿತ್ಯನಲ್ಲಿಯೂ ಓಂಕರಣವು ಅನುಜ್ಞಾಮಾತ್ರವೇ[2] ಎಂದು ತಿಳಿಯಬೇಕು.

(ಉಪನಿಷತ್ತು)

ಏತಮು ಏವಾಹಮಭ್ಯಗಾಸಿಷಂ ತಸ್ಮಾನ್ಮಮ ತ್ವಮೇಕೋಽಸೀತಿ ಹ ಕೌಷೀತಕಿಃ ಪುತ್ರಮುವಾಚ ಪ್ರಾಣಾಗ್ಂಸ್ತ್ವಂ ಭೂಮಾನಮ ಭಿಗಾಯತಾದ್ಬಹವೋ ವೈ ಮೇ ಭವಿಷ್ಯನ್ತೀತಿ ॥೪॥

೪. "ಇವನನ್ನೇ ನಾನು ಅಭಿಗಾನಮಾಡಿರುತ್ತೇನೆ ; ಆದ್ದರಿಂದ ನನಗೆ ನೀನೊಬ್ಬನೇ ಆಗಿರುತ್ತೀಯೆ, ನೀನು 'ನನಗೆ ಬಹುಪುತ್ರರಾಗಲಿ !' ಎಂದು ಪ್ರಾಣಗಳನ್ನು ಭೂಮವೆಂದು ಅಭಿಗಾನಮಾಡು !" ಎಂದು ಕೌಷೀತಕಿಯು ಪುತ್ರನಿಗೆ ಹೇಳಿದನು.

ಪ್ರಾಣಭೇದಚಿಂತನವಿಧಾನ

(ಭಾಷ್ಯ)

೫೬. ಏತಮು ಏವಾಹಮಭ್ಯಗಾಸಿಷಮ್ ಇತ್ಯಾದಿ ಪೂರ್ವವದೇವ । ಅತೋ ವಾಗಾದೀನ್ ಮುಖ್ಯಂ ಚ ಪ್ರಾಣಂ ಭೇದಗುಣವಿಶಿಷ್ಟಮುದ್ಗೀಥಂ ಪಶ್ಯನ್ ಭೂಮಾನಂ ಮನಸಾ ಅಭಿಗಾಯತಾತ್ । ಪೂರ್ವವತ್ 'ಆವರ್ತಯ' ಇತ್ಯರ್ಥಃ । ಬಹವೋ ವೈ ಮೇ ಮಮ ಪುತ್ರಾ ಭವಿಷ್ಯನ್ತೀತ್ಯೇವಮಭಿಪ್ರಾಯಃ ಸನ್ ಇತ್ಯರ್ಥಃ । ಪ್ರಾಣಾದಿತ್ಯೈಕತ್ವೋದ್ಗೀಥದೃಷ್ಟೇಃ ಏಕಪುತ್ರತ್ವಫಲದೋಷೇಣ

---

1. ಆದ್ದರಿಂದ ಪ್ರಾಣವು "ಓಮೆಂದು ಸ್ವರಮಾಡುತ್ತದೆ" ಎಂದರೆ ಅನುಜ್ಞೆಕೊಡುತ್ತದೆ, ವಾಗಾದಿಪ್ರವೃತ್ತಿಗಳಿಗೆ ಸಹಾಯಮಾಡುತ್ತದೆ ; ಪ್ರಾಣಾಶ್ರಯದಿಂದಲೇ ವಾಗಾದಿಗಳು ತಮ್ಮತಮ್ಮ ಕಾರ್ಯದಲ್ಲಿ ತೊಡಗುತ್ತವೆ ಎಂದರ್ಥ. ಪ್ರಾಣವು ಓಮ್ ಎಂದುಚ್ಚರಿಸುವದು ವಾಗಾದಿಗಳ ಪ್ರವೃತ್ತಿಗೆ ಅನುಜ್ಞೆಕೊಡುವದಕ್ಕೆಂದೇ ತಿಳಿಯಬೇಕು. ಸುಮ್ಮನೆ ಓಂಕಾರೋಚ್ಚಾರಣೆಮಾಡುವದರಿಂದ ಅದಕ್ಕೆ ಉದ್ಗೀಥತ್ವವಿಲ್ಲ ಎಂದು ಅಭಿಪ್ರಾಯ.

2. ಇಲ್ಲಿ ಮಾತ್ರಶಬ್ದವನ್ನುಪಯೋಗಿಸಿರುವದರಿಂದಲೂ ಸಮೀಪಸ್ಥರು ಓಂಕರಣವನ್ನು "ಕೇಳುವದಿಲ್ಲ" ಎಂದು ಹೇಳಿರುವದರಿಂದಲೂ ಉಚ್ಚಾರಣವೆಂಬರ್ಥದಲ್ಲಿ ತಾತ್ಪರ್ಯವಿಲ್ಲ ; ಆದಿತ್ಯನು ಜನರ ಪ್ರವೃತ್ತಿಗೂ ಪ್ರಾಣವು ವಾಗಾದಿಪ್ರವೃತ್ತಿಗೂ ಅನುಜ್ಞೆಯನ್ನೀಯುವದೇ ಸ್ವರ ಮಾಡುವದೆಂಬ ಓಂಕರಣವು ಎಂದು ಭಾಷ್ಯಕ್ಕೆ ತಾತ್ಪರ್ಯವನ್ನು ಕಲ್ಪಿಸಬೇಕೆಂದು ತೋರುತ್ತದೆ. ಆದರೆ ಟೀಕೆಯಲ್ಲಿ ಹೀಗಿಲ್ಲ.

ಅಪೋದಿತತ್ವಾತ್ ರಶ್ಮಿಪ್ರಾಣಭೇದದೃಷ್ಟೇಃ ಕರ್ತವ್ಯತಾ ಚೋದ್ಯತೇ ಅಸ್ಮಿನ್ ಖಣ್ಡೇ[1] ಬಹುಪುತ್ರಫಲತ್ವಾರ್ಥಮ್ ॥

(ಭಾಷ್ಯಾರ್ಥ)

'ಏತಮು ಏವಾಹಮಭ್ಯಗಾಸಿಷಮ್' ಮುಂತಾದದ್ದನ್ನು ಹಿಂದಿನಂತೆ (ವ್ಯಾಖ್ಯಾನಮಾಡಿಕೊಳ್ಳಬೇಕು). ಆದ್ದರಿಂದ ವಾಗಾದಿಗಳನ್ನು ಭೇದಗುಣವಿಶಿಷ್ಟನಾದ ಮುಖ್ಯಪ್ರಾಣನನ್ನು ಉದ್ಗೀಥವೆಂದು ತಿಳಿದು[2] ಭೂಮವೆಂದು[3] ಮನಸ್ಸಿನಿಂದ ಅಭಿಗಾನಮಾಡು ; (ಮೇ=ಮಮ) ನನಗೆ ಬಹಳ ಜನ ಮಕ್ಕಳಾಗಲಿ - ಎಂಬ ಅಭಿವ್ರಾಯದಿಂದ (ಅಭಿಗಾನಮಾಡು) ಎಂದರ್ಥ. (ಇಲ್ಲಿಯೂ) ಹಿಂದಿನಂತೆ ಆವೃತ್ತಿ-ಮಾಡು ಎಂದೇ ಅರ್ಥ.[4] ಪ್ರಾಣಾದಿತ್ಯರನ್ನು ಒಂದೆಂದು ತಿಳಿಯುವ ಉದ್ಗೀಥದೃಷ್ಟಿ-ಯನ್ನು ಏಕಪುತ್ರತ್ವವೆಂಬ ಫಲವನ್ನು (ಮಾತ್ರ) ಕೊಡತಕ್ಕದ್ದೆಂಬ ದೋಷವಿರುವದೆಂದು ನಿಂದಿಸಿರುವದರಿಂದ ರಶ್ಮಿಗಳನ್ನೂ ಪ್ರಾಣಗಳನ್ನೂ ಬೇರೆ ಬೇರೆ ಎಂಬ ದೃಷ್ಟಿಯನ್ನು ಬಹುಪುತ್ರರೆಂಬ ಫಲಕ್ಕಾಗಿ ಮಾಡಬೇಕೆಂದು[5] ಈ ಖಂಡದಲ್ಲಿ ವಿಹಿತವಾಗಿರುತ್ತದೆ.

ಪ್ರಣವೋದ್ಗೀಥೈಕತ್ವದರ್ಶನದ ಫಲ

(ಉಪನಿಷತ್ತು)

ಅಥ ಖಲು ಯ ಉದ್ಗೀಥಃ ಸ ಪ್ರಣವೋ ಯಃ ಪ್ರಣವಃ ಸ ಉದ್ಗೀಥ ಇತಿ ಹೋತೃಷದನಾದ್ವೈವಾಪಿ ದುರುದ್ಗೀತಮನುಸಮಾಹರತೀತ್ಯನು - ಸಮಾಹರತೀತಿ ॥೫॥

೫. ಇನ್ನು ಉದ್ಗೀಥವೆಂಬುದಿದೆಯಲ್ಲ, ಅದೇ ಪ್ರಣವವು ; ಪ್ರಣವವೆಂಬುದಿದೆಯಲ್ಲ, ಅದೇ ಉದ್ಗೀಥವು. ಹೋತೃಷದನದಿಂದ ದುರುದ್ಗೀತವನ್ನು ಕೂಡ ಸರಿಪಡಿಸಿಕೊಳ್ಳುತ್ತಾನೆ, ಸರಿಪಡಿಸಿಕೊಳ್ಳುತ್ತಾನೆ.

1. ಕಾಣ್ಡೇ ಎಂಬ ಆ॥ ಪಾಠವು ಅಚ್ಚಿನ ತಪ್ಪು. 2. ಭಾವಿಸಿಕೊಂಡು.
3. ಬಹುತ್ವದಿಂದೊಡಗೂಡಿದ. 4. ಮೂಲದಲ್ಲಿರುವ "ಅಭಿಗಾನಮಾಡಲಿ !" ಎಂಬುದನ್ನು ಮಧ್ಯಮಪುರುಷಕ್ಕೆ ತಿರುಗಿಸಿಕೊಂಡೇ ಎಂದು ಅರ್ಥ.
5. ರಶ್ಮಿಭೇದದೃಷ್ಟಿ, ಪ್ರಾಣಭೇದದೃಷ್ಟಿ- ಎಂದರೆ ರಶ್ಮಿಗಳು ಬೇರೆಬೇರೆ, ಪ್ರಾಣಗಳು ಬೇರೆಬೇರೆ- ಎಂಬುದಿಷ್ಟೇ ಅಲ್ಲ ; ಆದಿತ್ಯನೂ ರಶ್ಮಿಗಳೂ ಬೇರೆ, ಮುಖ್ಯಪ್ರಾಣನೂ ವಾಗಾದಿಗಳೂ ಬೇರೆ ಎಂದಿಟ್ಟುಕೊಂಡೇ ಉಪಾಸನೆಮಾಡಬೇಕೆಂದು ಇಲ್ಲಿ ವಿವಕ್ಷಿತವೆಂಬುದು ಭಾಷ್ಯದಿಂದ ವ್ಯಕ್ತವಾಗುತ್ತದೆ.

(ಭಾಷ್ಯ)

೫೭. 'ಅಥ ಖಲು ಯ ಉದ್ಗೀಥ' ಇತ್ಯಾದಿ । ಪ್ರಣವೋದ್ಗೀಥೈಕತ್ವದರ್ಶನ-ಮುಕ್ತಮ್ । ತಸ್ಯೈತತ್ ಫಲಮುಚ್ಯತೇ । ಹೋತೃಷದನಾತ್ । ಹೋತಾ ಯತ್ರಸ್ಥಃ ಶಂಸತಿ ತತ್ಸ್ಥಾನಂ ಹೋತೃಷದನಮ್ । ಹೌತ್ರಾತ್ ಕರ್ಮಣಃ ಸಮ್ಯಕ್ಪ್ರಯುಕ್ತಾತ್ ಇತ್ಯರ್ಥಃ । ನ ಹಿ ದೇಶಮಾತ್ರಾತ್ ಫಲಮಾಹರ್ತುಂ ಶಕ್ಯಮ್ । ಕಿಂ ತತ್ ? ಹ ಏವಾಪಿ ದುರುದ್ಗೀತಂ ದುಷ್ಟವುದ್ಗೀತಮ್ ಉದ್ಗಾನಂ ಕೃತಮ್ ಉದ್ಗಾತ್ರಾ ಸ್ವಕರ್ಮಣಿ ಕ್ಷತಂ ಕೃತಮ್ ಇತ್ಯರ್ಥಃ । ತದನು ಸಮಾಹರತಿ । ಅನುಸಂಧತ್ತೇ ಇತ್ಯರ್ಥಃ । ಚಿಕಿತ್ಸಯೇವ ಧಾತುವೈಷಮ್ಯಸಮೀಕರಣಮಿತಿ ॥

(ಭಾಷ್ಯಾರ್ಥ)

'ಅಥ ಖಲು ಯ ಉದ್ಗೀಥಃ' ಮುಂತಾದ (ಗ್ರಂಥದ ಅಭಿಪ್ರಾಯವೇನೆಂದರೆ) ಪ್ರಣವೋದ್ಗೀಥಗಳು ಒಂದೇ ಎಂಬ ದರ್ಶನವನ್ನು (೧-೫-೧) ಹೇಳಲಾಗಿದೆಯಷ್ಟೆ, ಅದಕ್ಕೆ (ಇಲ್ಲಿ) ಫಲವನ್ನು ಹೇಳಲಾಗುತ್ತದೆ.

ಹೋತೃಷದನದಿಂದ ಹೋತೃವು ಎಲ್ಲಿದ್ದುಕೊಂಡು ಶಸ್ತ್ರವನ್ನು ಹೇಳು-ತ್ತಾನೋ,[1] ಆ ಸ್ಥಾನವು ಹೋತೃಷದನವು. (ಅಲ್ಲಿಂದ, ಎಂದರೆ)- ಸರಿಯಾಗಿ ಪ್ರಯೋಗಿಸಿದ ಹೌತ್ರಕರ್ಮದಿಂದ ಎಂದರ್ಥ. ಏಕೆಂದರೆ (ಹೋತೃಷದನವೆಂಬ) ಸ್ಥಾನಮಾತ್ರದಿಂದ ಫಲವನ್ನು ತಂದುಕೊಳ್ಳುವದು ಶಕ್ಯವಲ್ಲ. ಆ (ಫಲವು) ಯಾವದು ? ಎಂದರೆ, (ದುರುದ್ಗೀತವನ್ನು) ಕೂಡ- ದುಷ್ಟವಾಗಿ ಉದ್ಗೀತವಾದದ್ದು, ಉದ್ಗಾನಮಾಡಿದ್ದು ದುರುದ್ಗೀತವು. (ಅದನ್ನು ಕೂಡ)- ಉದ್ಗಾತೃವು ತನ್ನ ಕರ್ಮದಲ್ಲಿ (ಮಾಡಿಕೊಂಡ) ಕೊರತೆಯನ್ನು (ಕೂಡ) ಎಂದರ್ಥ. ಅನು-ಸಮಾಹರಣ ಮಾಡಿಕೊಳ್ಳುತ್ತಾನೆ, ಸರಿಪಡಿಸಿಕೊಳ್ಳುತ್ತಾನೆ ಎಂದರ್ಥ.[2] ಚಿಕಿತ್ಸೆಯಿಂದ (ಶರೀರದ) ಧಾತುಗಳ ವೈಷಮ್ಯವನ್ನು ಸರಿಪಡಿಸಿಕೊಳ್ಳುವಂತೆ(ಯೇ ಇದು).

1. ಗಾನವಿಲ್ಲದೆ ಮೂರು ಸ್ವರಗಳನ್ನು ಬಿಟ್ಟು ಏಕಸ್ವರದಿಂದ ಋಕ್ಕುಗಳನ್ನು ಪಠಿಸಿ ಮಾಡುವ ದೇವತಾಸ್ತುತಿಗೆ 'ಶಸ್ತ್ರ'ವೆಂದು ಹೆಸರು ; ಶಂಸತಿ ಎಂಬ ಕ್ರಿಯಾಪದವು ಇದನ್ನೇ ಹೇಳುತ್ತದೆ.
2. ಸಾಮವೇದದಲ್ಲಿ ಹೇಳಿರುವ ಈ ಪ್ರತ್ಯಯಕ್ಕೂ ಋಗ್ವೇದದಲ್ಲಿ ಹೇಳಿರುವ ಕರ್ಮಕ್ಕೂ ಸಂಬಂಧವಿದೆ ಎಂದದ್ದು ಉದ್ಗೀಥಾದಿಪ್ರತ್ಯಯಗಳನ್ನು ಎಲ್ಲಾ ಕಡೆಯಲ್ಲಿಯೂ ಉಪಸಂಹಾರ ಮಾಡಿಕೊಳ್ಳಬೇಕೆಂಬುದಕ್ಕೆ ಒಂದು ಗುರುತು- ಎಂಬ ಪೂರ್ವಪಕ್ಷವನ್ನು ಸೂ. ಭಾ. ೩-೩-೬೩ರಲ್ಲಿ ತೆಗೆದು ೩-೩-೬೫ರಲ್ಲಿ ತಳ್ಳಿಹಾಕಿದೆ.

ಒಂದನೆಯ ಅಧ್ಯಾಯ - ಆರನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

ಉದ್ಗೀಥದ ಆಧಿದೈವಿಕಾಂಗೋಪಾಸನೆಗಳು

(ಉಪನಿಷತ್ತು)

ಇಯಮೇವರ್ಗಗ್ನಿಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢ್ಗಂ ಸಾಮ ತಸ್ಮಾದೃಚ್ಯಧ್ಯೂಢ್ಗಂ ಸಾಮ ಗೀಯತ ಇಯಮೇವ ಸಾಽಗ್ನಿರಮಸ್ತತ್ಸಾಮ ॥೧॥

೧. ಈ (ಪೃಥಿವಿ)ಯೇ ಋಕ್ಕು, ಅಗ್ನಿಯು ಸಾಮ. ಆ ಈ ಸಾಮವು ಋಕ್ಕಿನ ಮೇಲೆ ಏರಿಕೊಂಡಿರುತ್ತದೆ. ಆದ್ದರಿಂದ ಋಕ್ಕಿನ (ಆಧಾರದ) ಮೇಲೆಯೇ ಸಾಮವನ್ನು ಗಾನಮಾಡುತ್ತಾರೆ. ಈ (ಪೃಥಿವಿ)ಯೇ ಸಾ, ಅಗ್ನಿಯೇ ಅಮ. ಅದು ಸಾಮ.

ಪೃಥಿವ್ಯಗ್ನಿದೃಷ್ಟಿಯಿಂದ ಋಕ್ಸಾಮಗಳ ಉಪಾಸನೆ

೫೮. ಅಥೇದಾನೀಂ ಸರ್ವಫಲಸಂಪತ್ತ್ಯರ್ಥಮ್ ಉದ್ಗೀಥಸ್ಯ ಉಪಾಸನಾನಾಂತರಂ ವಿಧಿತ್ಸ್ಯತೇ । ಇಯಮೇವ ಪೃಥಿವೀ ಋಕ್ । ಋಚಿ ಪೃಥಿವೀದೃಷ್ಟಿಃ ಕಾರ್ಯಾ । ತಥಾ ಅಗ್ನಿಃ ಸಾಮ । ಸಾಮ್ನಿ ಅಗ್ನಿದೃಷ್ಟಿಃ । ಕಥಂ ಪೃಥಿವ್ಯಗ್ನೋಃ ಋಕ್ಸಾಮತ್ವಮಿತಿ ? ಉಚ್ಯತೇ । ತದೇತತ್[1] ಅಗ್ನ್ಯಾಖ್ಯಂ ಸಾಮ ಏತಸ್ಯಾಂ ಪೃಥಿವ್ಯಾಮ್ ಋಚಿ ಅಧ್ಯೂಢಮ್ ಅಧಿಗತಮ್ । ಉಪರಿಭಾವೇನ ಸ್ಥಿತಮ್ ಇತ್ಯರ್ಥಃ । ಋಚೀವ ಸಾಮ । ತಸ್ಮಾತ್ ಅತ ಏವ ಕಾರಣಾತ್ ಋಚಿ ಅಧ್ಯೂಢಮೇವ ಸಾಮ ಗೀಯತೇ ಇದಾನೀಮಪಿ ಸಾಮಗೈಃ । ಯಥಾ ಚ ಋಕ್ಸಾಮನೀ ನಾತ್ಯನ್ತಂ ಭಿನ್ನೇ ಅನ್ಯೋಽನ್ಯಮ್, ತಥಾ ಏತೌ ಪೃಥಿವ್ಯಗ್ನೀ । ಕಥಮ್ । ಇಯಮೇವ ಪೃಥಿವೀ ಸಾ ಸಾಮನಾಮಾರ್ಧಶಬ್ದವಾಚ್ಯಾ । ಇತರಾರ್ಧಶಬ್ದವಾಚ್ಯಃ ಅಗ್ನಿಃ ಅಮಃ । ತದೇತತ್

1. ಅಚ್ಚಿನ ಮೂಲದಲ್ಲಿ "ತದೇತತ್" ಎಂದು ಮತ್ತೊಂದು ಸಲ ಇರುವದು ಬೇಕಿಲ್ಲ. ಆ॥ ವಾ॥ ಪಾಠದಲ್ಲಿ ಇಲ್ಲವೂ ಇಲ್ಲ.

ಪೃಥಿವ್ಯಗ್ನಿದ್ವಯಂ ಸಾಮೈಕಶಬ್ದಾಭಿಧೇಯತ್ವಮಾಪನ್ನಂ ಸಾಮ । ತಸ್ಮಾತ್ ನಾನ್ಯೋನ್ಯಂ ಭಿನ್ನಂ ಪೃಥಿವ್ಯಗ್ನಿದ್ವಯಂ ನಿತ್ಯಸಂಶ್ಲಿಷ್ಟಮ್ ಋಕ್ಸಾಮನೀ ಇವ । ತಸ್ಮಾಚ್ಚ ಪೃಥಿವ್ಯಗ್ನ್ಯೋಃ ಋಕ್ಸಾಮತ್ವಮ್ ಇತ್ಯರ್ಥಃ । ಸಾಮಾಕ್ಷರಯೋಃ ಪೃಥಿವ್ಯಗ್ನಿದೃಷ್ಟಿವಿಧಾನಾರ್ಥಮ್ 'ಇಯಮೇವ ಸಾ ಅಗ್ನಿರಮಃ' ಇತಿ ಕೇಚಿತ್ ॥

(ಭಾಷ್ಯಾರ್ಥ)

ಇನ್ನು ಈಗ ಸರ್ವಫಲವೂ ಉಂಟಾಗುವದಕ್ಕಾಗಿ ಉದ್ಗೀಥದ ಮತ್ತೊಂದು ಉಪಾಸನೆಯನ್ನು ಹೇಳಲಾಗುತ್ತದೆ. ಈ ಪೃಥಿವಿಯೇ ಋಕ್ಕು ; ಋಕ್ಕಿನಲ್ಲಿ ಪೃಥಿವೀದೃಷ್ಟಿಯನ್ನು ಮಾಡಬೇಕು. ಇದರಂತೆ ಅಗ್ನಿಯೇ ಸಾಮವು ; ಸಾಮದಲ್ಲಿ ಅಗ್ನಿದೃಷ್ಟಿ(ಯನ್ನು ಮಾಡಬೇಕು)[1]. ಪೃಥಿವ್ಯಗ್ನಿಗಳು ಋಕ್ಸಾಮಗಳೆಂಬುದು ಹೇಗೆ ?- ಎಂದರೆ (ಶ್ರುತಿ) ಹೇಳುತ್ತದೆ. ಆ ಇದು, ಅಗ್ನಿ ಎಂಬ ಸಾಮವು ಈ ಪೃಥಿವಿಯೆಂಬ ಋಕ್ಕಿನ ಮೇಲೆ ಏರಿಕೊಂಡಿರುತ್ತದೆ. (ಅಧ್ಯೂಢಮ್ ಎಂದರೆ) ಮೇಲಕ್ಕೆ ಹೋಗಿರುತ್ತದೆ, ಋಕ್ಕಿನ ಮೇಲೆ ಸಾಮವಿರುವಂತೆ ಮೇಲಿನದಾಗಿದ್ದು ಕೊಂಡಿರುತ್ತದೆ ಎಂದರ್ಥ. ಆದ್ದರಿಂದ ಈ ಕಾರಣದಿಂದಲೇ ಈಗಲೂ ಸಾಮಗರು ಋಕ್ಕಿನ ಮೇಲೇರಿದ ಸಾಮವನ್ನೇ ಗಾನಮಾಡುತ್ತಾರೆ[2] :

ಹೇಗೆ ಋಕ್ಸಾಮಗಳು ಒಂದಕ್ಕಿಂತ ಒಂದು ಅತ್ಯಂತವಾಗಿ ಭಿನ್ನವಾಗಿಲ್ಲವೋ, ಈ ಪೃಥಿವ್ಯಗ್ನಿಗಳೂ ಹಾಗೆಯೇ (ಭಿನ್ನವಲ್ಲ). ಹೇಗೆಂದರೆ, ಈ ಪೃಥಿವಿಯೇ ಸಾ, ಸಾಮವೆಂಬ ಹೆಸರಿನ ಅರ್ಧವಾದ ಶಬ್ದಕ್ಕೆ ವಾಚ್ಯವು ; ಅಗ್ನಿಯು ಅಮವು, ಮತ್ತೊಂದು ಅರ್ಧಶಬ್ದಕ್ಕೆ ವಾಚ್ಯವಾಗಿದೆ. ಅದು, ಆ ಈ ಪೃಥಿವ್ಯಗ್ನಿಗಳೆಂಬ ಜೋಡಿಯು ಸಾಮ ವೆಂಬ ಒಂದೇ ಶಬ್ದಕ್ಕೆ ಅಭಿಧೇಯವಾಗಿರುವದರಿಂದ ಸಾಮವು. ಆದ್ದರಿಂದ ಪೃಥಿವ್ಯಗ್ನಿ ಗಳೆಂಬ ಜೋಡಿಯು ಋಕ್ಸಾಮಗಳಂತೆ ನಿತ್ಯಸಂಬದ್ಧವಾಗಿರುವದರಿಂದ ಒಂದ ಕ್ಕೊಂದು ಭಿನ್ನವಲ್ಲ. ಆದ್ದರಿಂದಲೂ[3] ಪೃಥಿವ್ಯಗ್ನಿಗಳು ಋಕ್ಸಾಮಗಳು ಎಂದರ್ಥ.

---

1. ಋಕ್ಸಾಮಗಳು ಕರ್ಮಾಂಗವಾಗಿರುವದರಿಂದ ಅವುಗಳಲ್ಲಿ ಪೃಥಿವ್ಯಗ್ನಿಗಳ ದೃಷ್ಟಿಯನ್ನು ಮಾಡಬೇಕು ; ಪೃಥಿವ್ಯಗ್ನಿಗಳಲ್ಲಿ ಋಕ್ಸಾಮಗಳ ದೃಷ್ಟಿಯನ್ನು ಮಾಡಬೇಕು ಎಂಬುದು ಇಲ್ಲಿ ವಿವಕ್ಷಿತವಲ್ಲ. ಆದ್ದರಿಂದ ಋಕ್ಕು ಈ ಪೃಥಿವಿಯೇ ಎಂದು ಅವಧಾರಣೆಮಾಡಿದೆ, ಋಕ್ಕೇ ಎಂದು ಮಾಡಿಲ್ಲ. ಇದರಿಂದ ಕರ್ಮಾಂಗಸಂಸ್ಕಾರವಾಗುತ್ತದೆ. ಸೂ. ಭಾ. ೪-೧-೬.
2. ಋಕ್ಕನ್ನೇ ಅಲ್ಲವೆ, ಸಾಮವಾಗಿ ಗಾನಮಾಡುವರು ? ಋಕ್ಕು ಆಧಾರವೆಂದೂ ಸಾಮವು ಆಧೇಯವೆಂದೂ ತಿಳಿಯುವದಕ್ಕೇ ಇದೇ ಗಮಕವು ಎಂದು ಅಭಿಪ್ರಾಯ.
3. ಒಂದೇ ಶಬ್ದಕ್ಕೆ ಅಭಿಧೇಯವಾಗಿದ್ದುಕೊಂಡಿರುವದರಿಂದಲೇ ಅಲ್ಲದೆ, ಆ ಕಾರಣದಿಂದ ಅವು ಒಂದಕ್ಕೊಂದು ಸಂಬದ್ಧವಾಗಿರುವದರಿಂದಲೂ ಎಂದರ್ಥ.

ಸಾಮಾಕ್ಷರಗಳಲ್ಲಿ ಪೃಥಿವ್ಯಗ್ನಿದೃಷ್ಟಿಯನ್ನು (ಮಾಡಬೇಕೆಂದು) ವಿಧಿಸುವದಕ್ಕೋಸ್ಕರ 'ಈ (ಪೃಥಿವಿಯೇ) ಸಾ, ಅಗ್ನಿಯು ಅಮ' ಎಂದು (ಹೇಳಿದೆ) ಎಂದು ಕೆಲವರು ಅಭಿಪ್ರಾಯಪಟ್ಟಿರುತ್ತಾರೆ.[1]

(ಉಪನಿಷತ್ತು)

ಅನ್ತರಿಕ್ಷಮೇವರ್ಗ್ವಾಯುಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಗ್ಂ ಸಾಮ ತಸ್ಮಾದೃಚ್ಯಧ್ಯೂಢಗ್ಂ ಸಾಮ ಗೀಯತೇಽನ್ತರಿಕ್ಷಮೇವ ಸಾ ವಾಯುರಮಸ್ತತ್ಸಾಮ ॥೨॥

೨. ಅಂತರಿಕ್ಷವೇ ಋಕ್ಕು, ವಾಯುವೇ ಸಾಮ. ಆ ಈ (ಸಾಮವು) ಈ ಋಕ್ಕಿನ ಮೇಲೆ ಏರಿಕೊಂಡಿರುತ್ತದೆ. ಆದ್ದರಿಂದ ಋಕ್ಕಿನ (ಆಧಾರದ) ಮೇಲೆಯೇ ಸಾಮವು ಗಾನಮಾಡಲ್ಪಡುತ್ತದೆ. ಅಂತರಿಕ್ಷವೇ ಸಾ, ವಾಯುವು ಅಮ ; ಅದು ಸಾಮವು.

ಅಂತರಿಕ್ಷವಾಯುಗಳೆಂದು ಋಕ್ಸಾಮಗಳ ಉಪಾಸನೆ

(ಭಾಷ್ಯ)

೫೯. ಅನ್ತರಿಕ್ಷಮೇವ ಋಕ್ ವಾಯುಃ ಸಾಮ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಅಂತರಿಕ್ಷವೇ ಋಕ್ಕು, ವಾಯುವೇ ಸಾಮ- ಎಂಬುದೇ ಮುಂತಾದ (ಗ್ರಂಥವನ್ನು) ಹಿಂದಿನ (ಕಂಡಿಕೆ)ಯಂತೆ (ವ್ಯಾಖ್ಯಾನಮಾಡಿಕೊಳ್ಳಬೇಕು).

ದ್ಯುಲೋಕಾದಿತ್ಯರೆಂದು ಋಕ್ಸಾಮಗಳ ಉಪಾಸನೆ

(ಉಪನಿಷತ್ತು)

ದ್ಯೌರೇವರ್ಗಾದಿತ್ಯಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಗ್ಂ

1. ಸಾ, ಅಮ- ಎಂಬಿವುಗಳಿಗೆ ಪೃಥಿವಿ, ಅಗ್ನಿ-ಇವು ವಾಚ್ಯಗಳೆಂದು ಮೊದಲು ವ್ಯಾಖ್ಯಾನಮಾಡಿತ್ತು. ಅಲ್ಲಿ ಪೃಥಿವ್ಯಗ್ನಿಗಳು ಋಕ್ಸಾಮಗಳೆಂಬುದಕ್ಕೆ ಅದನ್ನು ಹೇತುವಾಗಿ ಎಣಿಸಿತ್ತು. ಈ ಎರಡನೆಯ ವ್ಯಾಖ್ಯಾನಕ್ಕೆ ''ಸಾಮ'' ಎಂಬುದರಲ್ಲಿರುವ ಸಾ ಎಂಬಕ್ಷರದಲ್ಲಿ ಪೃಥಿವೀದೃಷ್ಟಿಯನ್ನೂ ಅಮ ಎಂಬುದರಲ್ಲಿ ಅಗ್ನಿದೃಷ್ಟಿಯನ್ನೂ ಮಾಡಬೇಕು ಎಂದು ವಿಧಿಸಿದೆ ಎಂದು ಅಭಿಪ್ರಾಯ. ಈ ಪಕ್ಷವನ್ನು ತಿರಸ್ಕರಿಸಿಲ್ಲವಾದ್ದರಿಂದ ಭಾಷ್ಯದಲ್ಲಿ ಇದನ್ನೂ ಒಪಿದಂತೆ ಆಗಿದೆ.

ಸಾಮ ತಸ್ಮಾದೃಚ್ಯಧ್ಯೂಢಗ್ಂ ಸಾಮ ಗೀಯತೇ ದ್ಯೌರೇವ ಸಾಽಽದಿತ್ಯೋಽಮಸತ್ತಾಸಾಮ ॥೩॥

೩. ದ್ಯುಲೋಕವೇ ಋಕ್ಕು, ಆದಿತ್ಯನೇ ಸಾಮವು. ಆ ಈ ಸಾಮವು ಈ ಋಕ್ಕಿನ ಮೇಲೆ ಏರಿರುತ್ತದೆ. ಆದ್ದರಿಂದ ಋಕ್ಕಿನ (ಆಧಾರದ) ಮೇಲೆಯೇ ಸಾಮವು ಗಾನಮಾಡಲ್ಪಡುತ್ತದೆ. ದ್ಯುಲೋಕವೇ ಸಾ, ಆದಿತ್ಯನೇ ಅಮ; ಅದು ಸಾಮವು.[1]

(ಉಪನಿಷತ್ತು)

ನಕ್ಷತ್ರಾಣ್ಯೇವರ್ಕ್ಚನ್ದ್ರಮಾಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಗ್ಂ ಸಾಮ ತಸ್ಮಾದೃಚ್ಯಧ್ಯೂಢಗ್ಂ ಸಾಮ ಗೀಯತೇ ನಕ್ಷತ್ರಾಣ್ಯೇವ ಸಾ ಚನ್ದ್ರಮಾ ಅಮಸತ್ತಾಸಾಮ ॥೪॥

೪. ನಕ್ಷತ್ರಗಳೇ ಋಕ್ಕು, ಚಂದ್ರನೇ ಸಾಮವು. ಆ ಈ ಸಾಮವು, ಈ ಋಕ್ಕಿನ ಮೇಲೆ ಏರಿರುತ್ತದೆ. ಆದ್ದರಿಂದ ಋಕ್ಕಿನ (ಆಧಾರದ) ಮೇಲೆಯೇ ಸಾಮವು ಗಾನಮಾಡಲ್ಪಡುತ್ತದೆ. ನಕ್ಷತ್ರಗಳೇ ಸಾ, ಚಂದ್ರನೇ ಅಮ. ಅದು ಸಾಮವು.

ನಕ್ಷತ್ರಚಂದ್ರರೆಂದು ಋಕ್ಸಾಮೋಪಾಸನೆ

(ಭಾಷ್ಯ)

೬೦. ನಕ್ಷತ್ರಾಣಾಮದಿಪತಿಶ್ಚನ್ದ್ರಮಾಃ। ಅತಃ ಸ ಸಾಮ ॥

(ಭಾಷ್ಯಾರ್ಥ)

ನಕ್ಷತ್ರಗಳಿಗೆ ಚಂದ್ರನು ಅಧಿಪತಿಯು. ಆದ್ದರಿಂದ ಅವನು ಸಾಮವು (ಎಂದಿದೆ).

(ಉಪನಿಷತ್ತು)

ಅಥ ಯದೇತದಾದಿತ್ಯಸ್ಯ ಶುಕ್ಲಂ ಭಾಃ ಸೈವರ್ಗಥ ಯನ್ನೀಲಂ ಪರಃ

---

1. ಈ ವಾಕ್ಯಕ್ಕೆ ಅರ್ಥವನ್ನು ಹಿಂದಿನಂತೆಯೇ ಮಾಡಿಕೊಳ್ಳಬೇಕೆಂದು ಆಚಾರ್ಯರು ಬಿಟ್ಟುಬಿಟ್ಟಿರುತ್ತಾರೆ. ಇದನ್ನು ತಿಳಿಸುವದಕ್ಕೆ ನಾವು ತಲೆಬರಹವನ್ನು ಉಪನಿಷತ್ತಿನ ಮೇಲೆಯೇ ಬರೆದಿರುತ್ತೇವೆ. ಮುಂದೆಯೂ ಹೀಗೆಯೇ ತಿಳಿದುಕೊಳ್ಳಬೇಕು.

ಕೃಷ್ಣಂ ತತ್ಸಾಮ ತದೇತದೇತಸ್ಯಾಮೃಚ್ಯಧ್ಯೂಢಗ್ಂ ಸಾಮ ತಸ್ಮಾದೃಚ್ಯಧ್ಯೂಢಗ್ಂ ಸಾಮ ಗೀಯತೇ ॥೫॥

೫. ಇನ್ನು ಈ ಆದಿತ್ಯನ ಬಿಳಿಯ ಭಾಸವಿದೆಯಲ್ಲ, ಅದೇ ಋಕ್ಕು ; ಇನ್ನು ನೀಲವಾಗಿ ಪರಕೃಷ್ಣವಾಗಿದೆಯಲ್ಲ, ಅದು ಸಾಮ. ಆ ಈ ಸಾಮವು ಈ ಋಕ್ಕಿನಮೇಲೆ ಏರಿರುತ್ತದೆ. ಆದ್ದರಿಂದ ಋಕ್ಕಿನ (ಆಧಾರದ) ಮೇಲೆ ಸಾಮವು ಗಾನಮಾಡಲ್ಪಡುತ್ತದೆ.[1]

ಆದಿತ್ಯನ ಶುಕ್ಲಕೃಷ್ಣಕಾಂತಿಗಳೆಂದು ಋಕ್ಸಾಮಗಳ ಉಪಾಸನೆ

(ಭಾಷ್ಯ)

೬೧. ಅಥ ಯದೇತತ್ ಆದಿತ್ಯಸ್ಯ ಶುಕ್ಲಂ ಭಾಃ ಶುಕ್ಲಾ ದೀಪ್ತಿಃ ಸೈವ ಋಕ್ । ಅಥ ಯದಾದಿತ್ಯೇ ನೀಲಂ ಪರಃ ಕೃಷ್ಣಂ ಪರಃ ಅತಿಶಯೇನ ಕಾಷ್ಣ್ಯಂ ತತ್ ಸಾಮ । ತದ್ಧಿ ಏಕಾನ್ತಸಮಾಹಿತದೃಷ್ಟೇರ್ದೃಶ್ಯತೇ ॥

(ಭಾಷ್ಯಾರ್ಥ)

ಇನ್ನು ಈ ಆದಿತ್ಯನ ಬಿಳಿಯ ಭಾಸವಿದೆಯಲ್ಲ, ಬಿಳಿಯ ಕಾಂತಿಯಿದೆಯಲ್ಲ, ಅದೇ ಋಕ್ಕು. ಇನ್ನು ಆದಿತ್ಯನಲ್ಲಿ ನೀಲವಾಗಿ ಪರಕೃಷ್ಣವಾದ (ಭಾಸವಿದೆಯಲ್ಲ) - ಪರವೆಂದರೆ ಅತಿಶಯವಾದ ಕಪ್ಪು (ಕಾಂತಿಯಿದೆಯಲ್ಲ)- ಅದು ಸಾಮವು. ಆ (ಕೃಷ್ಣಕಾಂತಿಯು) ಒಂದೇ ಸಮನೆ ನೆಟ್ಟದೃಷ್ಟಿಯವರಿಗೆ ಕಾಣುತ್ತದೆಯಲ್ಲವೆ[2] ?

ಆದಿತ್ಯಾಂತರ್ಗತಪುರುಷನ ದೃಷ್ಟಿಯಿಂದ ಉಪಾಸನೆ

(ಉಪನಿಷತ್ತು)

ಅಥ ಯದೇವೈತದಾದಿತ್ಯಸ್ಯ ಶುಕ್ಲಂ ಭಾಃ ಸೈವ ಸಾಽಥ ಯನ್ನೀಲಂ ಪರಃ ಕೃಷ್ಣಂ ತದಮಸ್ತತ್ಸಾಮಾಥ ಯ ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ ಹಿರಣ್ಯಶ್ಮಶ್ರುರ್ಹಿರಣ್ಯಕೇಶ ಆಪ್ರಣಖಾತ್ ಸರ್ವ ಏವ ಸುವರ್ಣಃ ॥೬॥

1. ಮುಂದಿನ ಕಂಡಿಕೆಯಲ್ಲಿ ಈ ಉಪಾಸನೆಯ ಅವಶಿಷ್ಟಭಾಗವಿದೆ.
2. ಶಾಸ್ತ್ರಸಂಸ್ಕೃತದೃಷ್ಟಿಯನ್ನೇ ಇಲ್ಲಿ ಸಮಾಹಿತದೃಷ್ಟಿ ಎಂದಿದೆ ಎಂದು ಆ॥ ಗಿ॥ ಟೀಕೆ.

೬. ಇನ್ನು ಆದಿತ್ಯನ ಈ ಬಿಳಿಯ ಭಾಸವಿದೆಯಲ್ಲ, ಇದೇ ಸಾ ; ಇನ್ನು ನೀಲವಾಗಿರುವ ಪರಕೃಷ್ಣವಾದ (ಭಾಸವಿದೆಯಲ್ಲ), ಅದು ಅಮವು. ಅದು ಸಾಮವು. ಇನ್ನು ಆದಿತ್ಯನೊಳಗೆ ಈ ಹಿರಣ್ಮಯನಾದ ಪುರುಷನು ಕಾಣುತ್ತಿರುವನಲ್ಲ, ಹಿರಣ್ಯಶ್ಮಶ್ರುವಾಗಿ, ಹಿರಣ್ಯಕೇಶನಾಗಿ, ಪ್ರಣಖದವರೆಗೂ ಎಲ್ಲವೂ ಸುವರ್ಣವೇ ಆಗಿರುತ್ತಾನಲ್ಲ-[1]

ಆದಿತ್ಯಪುರುಷನ ವರ್ಣನೆ

(ಭಾಷ್ಯ)

೬.೨. ತೇ ಏವೈತೇ ಭಾಸೌ ಶುಕ್ಲಕೃಷ್ಣತ್ವೇ ಸಾ ಚ ಅಮಶ್ಚ ಸಾಮ । ಅಥ ಯ ಏಷಃ ಅನ್ತರಾದಿತ್ಯೇ ಆದಿತ್ಯಸ್ಯಾನ್ತಃ ಮಧ್ಯೇ ಹಿರಣ್ಮಯಃ ಹಿರಣ್ಮಯ ಇವ ಹಿರಣ್ಮಯಃ । ನ ಹಿ ಸುವರ್ಣವಿಕಾರತ್ವಂ ದೇವಸ್ಯ ಸಂಭವತಿ । ಋಕ್ಸಾಮಗೇಷ್ಣತ್ವಾಪ್ತ-ಹತಪಾಪ್ಮತ್ವಾಸಂಭವಾತ್ । ನ ಹಿ ಸೌವರ್ಣೇ ಅಚೇತನೇ ಪಾಪ್ಮಾದಿಪ್ರಾಪ್ತಿರಸ್ತಿ, ಯೇನ ಪ್ರತಿಷಿಧ್ಯೇತ । ಚಾಕ್ಷುಷೇ ಚ ಅಗ್ರಹಣಾತ್ । ಅತಃ ಲುಪ್ತೋಪಮ ಏವ ಹಿರಣ್ಮಯಶಬ್ದಃ । ಜ್ಯೋತಿರ್ಮಯಃ ಇತ್ಯರ್ಥಃ । ಉತ್ತರೇಷ್ವಪಿ ಸಮಾನಾ ಯೋಜನಾ । ಪುರುಷಃ ಪುರಿ ಶಯನಾತ್ । ಪೂರಯತಿ ವಾ ಸ್ವೇನಾತ್ಮನಾ ಜಗತ್ ಇತಿ । ದೃಶ್ಯತೇ ನಿವೃತ್ತಚಕ್ಷುರ್ಭಿಃ, ಸಮಾಹಿತಚೇತೋಭಿಃ ಬ್ರಹ್ಮಚರ್ಯಾದಿಸಾಧನಾಪೇಕ್ಷೈಃ[2] । ತೇಜಸ್ವಿನೋಽಪಿ ಶ್ಮಶ್ರುಕೇಶಾದಯಃ ಕೃಷ್ಣಾಃ ಸ್ಯುಃ ಇತ್ಯತೋ ವಿಶಿನಷ್ಟಿ । ಹಿರಣ್ಯಶ್ಮಶ್ರುರ್ಹಿರಣ್ಯಕೇಶಃ ಇತಿ । ಜ್ಯೋತಿರ್ಮಯಾನ್ಯೇವಾಸ್ಯ ಶ್ಮಶ್ರೂಣಿ ಕೇಶಾಶ್ಚ ಇತ್ಯರ್ಥಃ । ಆಪ್ರಣಖಾತ್ । ಪ್ರಣಖಃ ನಖಾಗ್ರಮ್ । ನಖಾಗ್ರೇಣ ಸಹ ಸರ್ವಃ ಸುವರ್ಣ ಇವ ಭಾರೂಪ ಇತ್ಯರ್ಥಃ ॥

(ಭಾಷ್ಯಾರ್ಥ)

ಅದೇ ಈ ಶುಕ್ಲಕೃಷ್ಣಭಾಸಗಳೇ ಸಾ, ಮತ್ತು ಅಮ- (ಎಂದಾಗಿ) ಸಾಮವಾಗಿರುತದೆ.[3]

1. ಈ ವಾಕ್ಯವು ಮುಂದಿನ ಕಂಡಿಕೆಯಲ್ಲಿ ಪೂರ್ಣವಾಗುವದು.
2. ಇದು ವಾ॥ ಪಾಠ ; ಆ॥ ಪಾಠವು ''ಸಾಧನಾಪೇಕ್ಷಮ್'' ಎಂದಿದೆ.
3. ಈ ವಾಕ್ಯವು ಹಿಂದಿನ ಶುಕ್ಲಕೃಷ್ಣಕಾಂತಿಗಳ ಉಪಾಸನೆಯ ವಾಕ್ಯಶೇಷವು.

ಇನ್ನು[1] (ಅನ್ತರಾದಿತ್ಯೇ = ಆದಿತ್ಯಸ್ಯಾನ್ತಃ ಮಧ್ಯೇ) ಆದಿತ್ಯನ ಒಳಗೆ ಹಿರಣ್ಮಯನಾದ- ಹಿರಣ್ಮಯನಂತೆ ಇರುವವನು ಹಿರಣ್ಮಯನು (ಎಂದು ಉಪಮಾರ್ಥವನ್ನು ತೆಗೆದುಕೊಳ್ಳಬೇಕು). ಏಕೆಂದರೆ ದೇವನಿಗೆ[2] ಸುವರ್ಣವಿಕಾರತ್ವ-ವೆಂಬುದು ಸಂಭವಿಸುವ ಹಾಗಿಲ್ಲ ; ಏಕೆಂದರೆ (ಮುಂದೆ ಹೇಳಿರುವ) ಋಕ್ಸಾಮ-ಗಳು ಗೆಣ್ಣು ಎಂಬುದೂ ಅಪಹತಪಾಪ್ಮನು ಎಂಬುದೂ (ಆಗ) ಹೊಂದುವದಿಲ್ಲ. ಹೇಗೆಂದರೆ ಅಚೇತನವಾದ ಸುವರ್ಣದ ವಿಕಾರದಲ್ಲಿ ಪಾಪವೇ ಮುಂತಾದವುಗಳ ಪ್ರಸಕ್ತಿಯೇ ಇಲ್ಲ ; ಇದ್ದರಲ್ಲವೆ, (ಅದನ್ನು) ಇಲ್ಲವೆನ್ನುವದು ? ಚಾಕ್ಷುಷ (ಪುರುಷ)ನಲ್ಲಿ (ಸುವರ್ಣವಿಕಾರತ್ವವು) ಕಾಣಬರುವದೂ ಇಲ್ಲ. ಆದ್ದರಿಂದ (ಹಿರಣ್ಮಯನಂತೆ ಇರುವವನು ಎಂದು) ಹಿರಣ್ಮಯಶಬ್ದದಲ್ಲಿ ಉಪಮೆಯು ಲುಪ್ತವಾಗಿದೆ ಎಂದೇ (ತಿಳಿಯಬೇಕು)- ಜ್ಯೋತಿರ್ಮಯನಾದ ಎಂದರ್ಥ. ಮುಂದಿನ (ವಿಶೇಷಣಗಳಲ್ಲಿಯೂ) ಇದಕ್ಕೆ ಸಮವಾಗಿಯೇ ಹೊಂದಿಸಬೇಕು, (ಹಿರಣ್ಮಯನಾದ) ಪುರುಷನು- ಪುರದಲ್ಲಿ[3] ಇರುವದರಿಂದ (ಪುರುಷನು) ; ಅಥವಾ ತನ್ನ ಸ್ವರೂಪದಿಂದ ಜಗತ್ತನ್ನು ತುಂಬಿಕೊಂಡಿರುತ್ತಾನಾದ್ದರಿಂದ[4] (ಪುರುಷನು)- ಚಕ್ಷುಸ್ಸನ್ನು ಹಿಂತಿರುಗಿಸಿಕೊಂಡು, ಬ್ರಹ್ಮಚರ್ಯವೇ ಮುಂತಾದ ಸಾಧನಗಳಿಂದೊಡ ಗೂಡಿ, ಸಮಾಹಿತಚಿತ್ತರಾಗಿರುವವರಿಗೆ ಕಾಣಬರುತ್ತಾನಷ್ಟೆ (ಎಂದರ್ಥ).

ತೇಜಸ್ವಿಯಾಗಿದ್ದರೂ ಗಡ್ಡ, ಮೈಗೂದಲು- ಮುಂತಾದವು ಕಪ್ಪಾಗಿರ ಬಹುದು, ಆದ್ದರಿಂದ 'ಹಿರಣ್ಯಶ್ಮಶ್ರುವಾಗಿ, ಹಿರಣ್ಯಕೇಶನಾಗಿ' ಎಂಬ ವಿಶೇಷಣಗಳನ್ನು ಕೊಟ್ಟಿರುತ್ತದೆ. ಅವನ ಗಡ್ಡದ ಕೂದಲುಗಳೂ ಮೈಗೂದಲುಗಳೂ ಜ್ಯೋತಿರ್ಮಯವಾಗಿಯೇ ಇರುತ್ತವೆ ಎಂದರ್ಥ. ಪ್ರಣಖದವರೆಗೂ -ಪ್ರಣಖವೆಂದರೆ ಉಗುರಿನತುದಿ ; ಉಗುರಿನ ತುದಿಯೂ ಸೇರಿ ಎಲ್ಲವೂ ಸುವರ್ಣದಂತೆ ಥಳಗುಟ್ಟುತ್ತಿರುವ ರೂಪದವನು- ಎಂದರ್ಥ.

1. ಇಲ್ಲಿಯವರೆಗೂ ಅಂಗೋಪಾಸನೆಯನ್ನು ಹೇಳಿದೆ ; ಈಗ ಪ್ರಧಾನೋಪಾಸನೆಯನ್ನೂ ಹೇಳಲಾಗುತ್ತದೆ - ಎಂದು ಟೀಕೆ.
2. ಪರಮೇಶ್ವರನಿಗೆ ಎಂದರ್ಥ. ಈ ಖಂಡದಲ್ಲಿ ಆದಿತ್ಯನೊಳಗೂ ಕಣ್ಣಿನೊಳಗೂ ಇರುವನೆಂದು ವರ್ಣಿಸಿರುವ ಪುರುಷನು ಪರಮೇಶ್ವರನೇ ಎಂಬುದಕ್ಕೆ ಸೂ. ಭಾ. ೧-೧-೨೦, ೨೧ನ್ನು ನೋಡಿರಿ.
3. ಆದಿತ್ಯಶರೀರದಲ್ಲಿ, ಅಥವಾ ಆ ಶರೀರದೊಳಗಿನ ಹೃದಯದಲ್ಲಿ.
4. ತನ್ನದೇ ಆಗಿರುವ ಪರಮಾತ್ಮರೂಪದಿಂದ ಸರ್ವಗತನಾಗಿರುವದರಿಂದ.

(ಉಪನಿಷತ್ತು)

ತಸ್ಯ ಯಥಾ ಕಪ್ಯಾಸಂ ಪುಣ್ಡರೀಕಮೇವಮಕ್ಷಿಣೀ ತಸ್ಯೋದಿತಿ ನಾಮ ಸ ಏಷ ಸರ್ವೇಭ್ಯಃ ಪಾಪ್ಮಭ್ಯ ಉದಿತ ಉದೇತಿ ಹ ವೈ ಸರ್ವೇಭ್ಯಃ ಪಾಪ್ಮಭ್ಯೋ ಯ ಏವಂ ವೇದ ॥೭॥

೭. ಅವನಿಗೆ ಕಪ್ಯಾಸದಂತಿರುವ ಪುಂಡರೀಕವಿರುವದಲ್ಲ, ಹಾಗೆ ಅಕ್ಷಿಗಳು. ಅವನಿಗೆ ಉತ್ ಎಂದು ಹೆಸರು ; ಆ ಇವನು ಸರ್ವಪಾಪಗಳನ್ನೂ (ಬಿಟ್ಟು) ಮೇಲಕ್ಕೆದ್ದವನು. ಯಾವನು ಹೀಗೆಂದು ಅರಿತಿರುವನೋ ಅವನು ಎಲ್ಲ ಪಾಪಗಳನ್ನೂ ಬಿಟ್ಟೇಳುವನು.

(ಭಾಷ್ಯ)

೭ಖಿ. ತಸ್ಯ ಏವಂ ಸರ್ವತಃ ಸುವರ್ಣವರ್ಣಸ್ಯಾಪಿ ಅಕ್ಷ್ಣೋರ್ವಿಶೇಷಃ । ಕಥಮ್ ? ತಸ್ಯ ಯಥಾ ಕಪೇಃ ಮರ್ಕಟಸ್ಯ ಆಸಃ ಕಪ್ಯಾಸಃ । ಆಸೇರುಪವೇಶನಾರ್ಥಸ್ಯ ಕರಣೇ ಘಞ್ । ಕಪಿಪೃಷ್ಠಾನ್ತಃ ಯೇನ ಉಪವಿಶತಿ । ಕಪ್ಯಾಸ ಇವ ಪುಣ್ಡರೀಕಮ್ ಅತ್ಯನ್ತತೇಜಸ್ವಿ ಏವಮ್ ಅಸ್ಯ[1] ದೇವಸ್ಯ ಅಕ್ಷಿಣೀ । ಉಪಮಿತೋಪಮಾನತ್ವಾತ್ ನ ಹೀನೋಪಮಾ । ತಸ್ಯ ಏವಂ ಗುಣವಿಶಿಷ್ಟಸ್ಯ ಗೌಣಮಿದಂ ನಾಮ ಉತ್ ಇತಿ । ಕಥಂ ಗೌಣತ್ವಮ್ ? ಸ ಏಷ ದೇವಃ ಸರ್ವೇಭ್ಯಃ ಪಾಪ್ಮಭ್ಯಃ ಪಾಪ್ಮನಾ ಸಹ ತತ್ಕಾರ್ಯೇಭ್ಯಃ ಇತ್ಯರ್ಥಃ । "ಯ ಆತ್ಮಾಽಪಹತಪಾಪ್ಮಾ" (೮-೭-೧) ಇತ್ಯಾದಿ ವಕ್ಷ್ಯತಿ । ಉದಿತಃ ಉತ್ ಇತಃ । ಉದ್ಗತಃ ಇತ್ಯರ್ಥಃ । ಅತೋಽಸೌ ಉನ್ನಾಮಾ । ತಮ್ ಏವಂಗುಣಸಂಪನ್ನಮ್ ಉನ್ನಾಮಾನಂ ಯಥೋಕ್ತೇನ ಪ್ರಕಾರೇಣ ಯೋ ವೇದ ಸೋಽಪಿ ಏವಮೇವ ಉದೇತಿ ಉದ್ಗಚ್ಛತಿ ಸರ್ವೇಭ್ಯಃ ಪಾಪ್ಮಭ್ಯಃ । ಹ ವೈ ಇತ್ಯವಧಾರಣಾರ್ಥೌ ನಿಪಾತೌ । ಉದೇತ್ಯೇವ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆ ಅವನು ಎಲ್ಲಾ ಕಡೆಯಲ್ಲಿಯೂ ಸುವರ್ಣವರ್ಣದವನಾದರೂ (ಅವನ) ಕಣ್ಣುಗಳಲ್ಲಿ ವಿಶೇಷ. ಹೇಗೆಂದರೆ, ಅವನಿಗೆ - ಕಪಿಯ ಎಂದರೆ ಕೋತಿಯ ಆಸವು (ಕಪ್ಯಾಸವು. ಇಲ್ಲಿ) ಕೂತುಕೊಳ್ಳು ಎಂಬರ್ಥದ ಆಸ್ (ಧಾತು)ವಿಗೆ ಕರಣಾರ್ಥದಲ್ಲಿ ಘಞ್ಪ್ರತ್ಯಯವು ಬಂದು (ಆಸ ಎಂಬ ರೂಪ

1. ಆ॥ ಪಾಠದಲ್ಲಿ "ಅಸ್ಯ" ಎಂಬ ಮಾತಿದೆ ; ವಾ॥ ತೆ॥ ಪಾಠಗಳಲ್ಲಿ ಇದು ಇಲ್ಲ.

ವಾಗಿರುತ್ತದೆ)[1] ; (ಕಪಿಯು) ಯಾವದರಿಂದ ಕುಳಿತುಕೊಳ್ಳುವದೋ ಆ ಕಪಿವೃಷ್ಣದ ಕೊನೆಯು (ಕಪ್ಯಾಸವೆನಿಸುವದು)- ಕಪ್ಯಾಸದಂತಿರುವ ಪುಂಡರೀಕವು ಹೇಗೆ ಅತ್ಯಂತಕಾಂತಿಯುಕ್ತವಾಗಿರುವದೋ ಹಾಗೆ ಈ ದೇವನ ಅಕ್ಷಿಗಳು[2] (ಇವೆ ಎಂಬರ್ಥ. ಇದು) ಉಪಮಿತೋಪಮೆಯಾದ್ದರಿಂದ[3] (ಇದು) ಹೀನೋಪಮೆಯಲ್ಲ.

ಈ ಗುಣಗಳುಳ್ಳ ಅವನಿಗೆ ಉತ್ ಎಂಬೀ ಗೌಣನಾಮ(ವಿದೆ). (ಇದು) ಗೌಣವೆಂಬುದು ಹೇಗೆ ? ಎಂದರೆ, ಆ ಈ ದೇವನು ಎಲ್ಲಾ ಪಾಪಗಳನ್ನೂ-ಪಾಪದಿಂದೊಡಗೂಡಿದ ಅದರ ಕಾರ್ಯಗಳನ್ನೂ[4] ಎಂದರ್ಥ. ''ಯಾವನು ಅಪಹತಪಾಪ್ಮನಾದ ಆತ್ಮನೋ'' (೮-೭-೧) ಎಂದು ಮುಂತಾಗಿ ಮುಂದೆ (ಶ್ರುತಿ) ಹೇಳುವದಲ್ಲವೆ[5] ? - ಉದಿತನಾಗಿರುತ್ತಾನೆ (ಉತ್ ಇತಃ - ಬಿಟ್ಟು ಮೇಲಕ್ಕೆದ್ದಿರುತ್ತಾನೆ), ಮೀರಿರುತ್ತಾನೆ ಎಂದರ್ಥ. ಆದ್ದರಿಂದ ಅವನಿಗೆ ಉತ್ ಎಂದು ಹೆಸರು[6]. ಇಂಥ ಗುಣದಿಂದೊಡಗೂಡಿರುವ ಆ ಉನ್ನಾಮಕ(ದೇವ)ನನ್ನು ಮೇಲೆ ಹೇಳಿದ ಪ್ರಕಾರದಿಂದ ಯಾವನು ಅರಿತುಕೊಂಡಿರುವನೋ[7] ಅವನೂ ಹೀಗೆಯೇ[8] ಎಲ್ಲಾ ಪಾಪಗಳನ್ನೂ ಬಿಟ್ಟೇಳುವನು, ಮೀರುವನು. ಹ ವೈ ಎಂಬ ನಿಪಾತಗಳು ಅವಧಾರಣೆಗೆ (ಬಂದಿವೆ) ; ಮೀರಿಯೇ ಮೀರುತ್ತಾನೆ - ಎಂದರ್ಥ.

1. ಭಾವಾರ್ಥದಲ್ಲಿ ಘಞ್ ಬಂದಿದ್ದರೆ ಕುಳಿತುಕೊಳ್ಳುವಿಕೆ ಎಂದರ್ಥವಾಗುತ್ತಿತ್ತು ; 'ಅಸ್ಯತೇ ಅನೇನ ಇತ್ಯಾಸಃ' ಎಂದು ಕರಣಾರ್ಥದಲ್ಲಿ ಬಂದಿದೆಯಾದ್ದರಿಂದ ಕುಳಿತುಕೊಳ್ಳುವ ಸಾಧನ ಎಂದರ್ಥ.
2. ಕೆಂದಾವರೆಯಂತೆ ಕೆಂಪಗಿರುವ ಕಂಗಳು ಎಂದರ್ಥ.
3. ಕಣ್ಣುಗಳನ್ನು ನೇರಾಗಿ ಕಪ್ಯಾಸಕ್ಕೆ ಹೋಲಿಸದೆ ಕೆಂದಾವರೆಗೆ- ಕಪ್ಯಾಸದಂಥ ಪುಂಡರೀಕಕ್ಕೆ-ಹೋಲಿಸಿರುವದರಿಂದ.
4. ಜನದುಃಖಾದಿಗಳನ್ನೂ.
5. ಆ ನಿರ್ಗುಣಬ್ರಹ್ಮವನ್ನೇ ಇಲ್ಲಿ ಆದಿತ್ಯಸ್ಥನೆಂದು ಉಪಾಸನೆಗಾಗಿ ಹೇಳಿದೆ ; ರೂಪರಹಿತನಾದ ಪರಮೇಶ್ವರನಿಗೂ ಇಚ್ಛಾವಶದಿಂದ ಸಾಧಕಾನುಗ್ರಹಾರ್ಥವಾಗಿ ಮಾಯಾಮಯ ರೂಪವು ಇರಬಹುದಾಗಿದೆ (ಸೂ. ಭಾ. ೧-೧-೨೦ ; ಭಾ. ಭಾ. ೧೧೪, ೧೧೫).
6. ಪಾಪಗಳನ್ನು ಬಿಟ್ಟೆದ್ದಿರುತ್ತಾನೆ (ಉದಿತಃ) ; ಆದ್ದರಿಂದ ಉತ್ ಎಂಬ ಗುಣಕ್ಕೆ ಅನುಗುಣವಾದ ನಾಮವಿದೆ.
7. ಉಪಾಸನೆಮಾಡಿರುವನೋ. 8. ಉನ್ನಾಮಕದೇವನಂತೆಯೇ.

(ಉಪನಿಷತ್ತು)

ತಸ್ಯರ್ಕ್ಚ ಸಾಮ ಚ ಗೇಷ್ಣೌ ತಸ್ಮಾದುದ್ಗೀಥಸ್ತಸಾತ್ತ್ವೋದ್ಗಾತೈತಸ್ಯ ಹಿ ಗಾತಾ ಸ ಏಷ ಯೇ ಚಾಮುಷ್ಮಾತ್ ಪರಾಞ್ಚೋ ಲೋಕಾಸ್ತೇಷಾಂ ಚೇಷ್ಟೇ ದೇವಕಾಮಾನಾಂ ಚೇತ್ಯಧಿದೈವತಮ್ ॥೮॥

೮. ಅವನಿಗೆ ಋಕ್ಕೂ ಸಾಮವೂ ಗೆಣ್ಣುಗಳು ; ಆದ್ದರಿಂದ ಉದ್ಗೀಥನು, ಆದ್ದರಿಂದಲೇ ಉದ್ಗಾತೃ(ವು ಉದ್ಗಾತೃವೆನಿಸುತ್ತಾನೆ). ಇವನನ್ನು ಉದ್ಗಾನಮಾಡುವವನಲ್ಲವೆ ? ಆ ಇವನು ಆ (ಆದಿತ್ಯನಿಂದ) ಆಚಿನ ಲೋಕಗಳಿವೆಯಲ್ಲ, ಅವುಗಳನ್ನೂ ದೇವಕಾಮಗಳನ್ನೂ ಈಶನಮಾಡುತ್ತಾನೆ. ಹೀಗೆ ಅಧಿದೈವತವು.

(ಭಾಷ್ಯ)

೬೪. ತಸ್ಯ ಉದ್ಗೀಥತ್ವಂ ದೇವಸ್ಯ ಆದಿತ್ಯಾದೀನಾಮಿವ ವಿವಕ್ಷಿತ್ವಾ[1] ಆಹ । ತಸ್ಯ ಋಕ್ಚ ಸಾಮ ಚ ಗೇಷ್ಣೌ । ಪೃಥಿವ್ಯಾದ್ಯುಕ್ತಲಕ್ಷಣೇ ಪರ್ವಣೀ । ಸರ್ವಾತ್ಮಾ ಹಿ ದೇವಃ । ಪರಾಪರಲೋಕಕಾಮೇಶಿತೃತ್ವಾತ್ ಉಪಪದ್ಯತೇ ಪೃಥಿವ್ಯಗ್ನ್ಯಾದ್ಯೃಕ್ಸಾಮ-ಗೇಷ್ಣತ್ವಮ್[2] । ಸರ್ವಯೋನಿತ್ವಾಚ್ಚ । ಯತ ಏವಮ್ ಉನ್ನಾಮಾ ಚ ಅಸೌ ಋಕ್ಸಾಮಗೇಷ್ಣಶ್ಚ ತಸ್ಮಾತ್ ಋಕ್ಸಾಮಗೇಷ್ಣತ್ವಂ ಪ್ರಾಪ್ತಮ್[3] ಉದ್ಗೀಥತ್ವಮುಚ್ಯತೇ ಪರೋಕ್ಷೇಣ । ಪರೋಕ್ಷಪ್ರಿಯತ್ವಾತ್ ದೇವಸ್ಯ ತಸ್ಮಾದುದ್ಗೀಥಃ ಇತಿ । ತಸ್ಮಾತ್ತ್ವೇವ ಹೇತೋಃ ಉದಂ ಗಾಯತೀತಿ ಉದ್ಗಾತಾ । ಯಸ್ಮಾದ್ ಹಿ ಏತಸ್ಯ ಯಥೋಕ್ತಸ್ಯ ಉನ್ನಾಮ್ನಃ ಗಾತಾऽಸೌ, ಅತೋ ಯುಕ್ತಾ ಉದ್ಗಾತಾ ಇತಿ ನಾಮಪ್ರಸಿದ್ಧಿರುದ್ಗಾತುಃ । ಸ ಏಷ ದೇವಃ ಉನ್ನಾಮಾ ಯೇ ಚ ಅಮುಷ್ಮಾತ್ ಆದಿತ್ಯಾತ್ ಪರಾಞ್ಚಃ ಪರಾಕ್ ಅಞ್ಚನಾತ್ ಊರ್ಧ್ವಾ ಲೋಕಾಃ, ತೇಷಾಂ ಲೋಕಾನಾಂ ಚ ಈಷ್ಟೇ । ನ ಕೇವಲಮ್ ಈಶಿತೃತ್ವಮೇವ । ಚಶಬ್ದಾತ್ ಧಾರಯತಿ ಚ । "ಸ ದಾಧಾರ ಪೃಥಿವೀಂ ದ್ಯಾಮುತೇಮಾಮ್" (ಋ. ಸಂ. ಮಂ. ೧೦-೧೦-೧೨೧-೧) ಇತಿ ಮನ್ತ್ರವರ್ಣಾತ್ । ಕಿಂ ಚ ದೇವಕಾಮಾನಾಮ್ ಈಷ್ಟೇ । ಇತ್ಯೇತತ್ ಅಧಿದೈವತಂ ದೇವತಾವಿಷಯಂ ದೇವಸ್ಯ ಉದ್ಗೀಥಸ್ಯ ಸ್ವರೂಪಮ್ ಉಕ್ತಮ್ ॥

---

1. "ವಿವಕ್ಷಿತತ್ವಾತ್" ಎಂಬುದಕ್ಕಿಂತ ಈ ವಾ॥ ತೆ॥ ಪಾಠವೇ ಮೇಲು.
2. "ಪೃಥಿವ್ಯಗ್ನ್ಯಲ್ಕಾಸಾಮಗೇಷ್ಣತ್ವಮ್" ಎಂಬ ಆ॥ ಪಾಠಕ್ಕಿಂತ ಇದೇ ಮೇಲು.
3. ಈ ಪಾಠದ ವಿಷಯಕ್ಕೆ ಅನುವಾದದ ಟಿಪ್ಪಣಿಯನ್ನು ನೋಡಿ.

(ಭಾಷ್ಯಾರ್ಥ)

ಆದಿತ್ಯಾದಿಗಳಂತೆ ಆ ದೇವನಿಗೂ ಉದ್ಗೀಥತ್ವವನ್ನು ಹೇಳಬೇಕೆಂದು[1] (ಶ್ರುತಿ ಹೀಗೆಂದು) ಹೇಳುತ್ತಿದೆ. ಅವನಿಗೆ ಪೃಥಿವ್ಯಾದಿರೂಪದಿಂದ ಹೇಳಿದ ಋಕ್ಕೂ ಸಾಮವೂ ಗೆಣ್ಣುಗಳು ; ದೇವನು ಸರ್ವಾತ್ಮನಲ್ಲವೆ[2] ? ಆಚಿನ, ಈಚಿನ- ಲೋಕಗಳಿಗೂ ಕಾಮಗಳಿಗೂ ಒಡೆಯನಾದ್ದರಿಂದ[3] (ಅವನಿಗೆ) ಪೃಥಿವ್ಯಗ್ನ್ಯಾದಿರೂಪದ ಋಕ್ಸಾಮಗಳು ಗೆಣ್ಣುಗಳೆಂಬುದು ಯುಕ್ತವಾಗಿರುತ್ತದೆ. ಎಲ್ಲಕ್ಕೂ ಕಾರಣ ನಾಗಿರುವದರಿಂದಲೂ (ಇದು ಹೊಂದುತ್ತದೆ).[4] ಹೀಗೆ ಇವನು ಉನ್ನಾಮಕನಾಗಿಯೂ ಋಕ್ಸಾಮಗೇಷ್ಣನಾಗಿಯೂ ಇರುವನಷ್ಟೆ, ಆದ್ದರಿಂದ- ಋಕ್ಸಾಮಗೇಷ್ಣತ್ವ ದಿಂದ ವ್ಯಾಪ್ತವಾದ[5] ಉದ್ಗೀಥತ್ವವನ್ನು- 'ತಸ್ಮಾದುದ್ಗೀಥಃ' (ಆದ್ದರಿಂದ ಉದ್ಗೀಥನು) ಎಂದು ಪರೋಕ್ಷವಾಗಿ ಹೇಳಿರುತ್ತದೆ ; ಏಕೆಂದರೆ ದೇವನು ಪರೋಕ್ಷಪ್ರಿಯ ನಾಗಿರುತಾನೆ.[6]

1. ಉದ್ಗೀಥವನ್ನು ಆದಿತ್ಯಪುರುಷನ ದೃಷ್ಟಿಯಿಂದ ಉಪಾಸನೆಮಾಡಬೇಕೆಂದು ತಿಳಿಸುವದಕ್ಕೋಸ್ಕರ ಈ ಪುರುಷನು ಉದ್ಗೀಥನೆಂದು ತಿಳಿಸುವದಕ್ಕಾಗಿ - ಎಂದರ್ಥ.
2. ಸರ್ವಾತ್ಮನಾದ್ದರಿಂದ ವೃಥಿವ್ಯಾದಿರೂಪದ ಋಕ್ಸಾಮಗಳು ಎಂದು ಅರ್ಥಮಾಡಬೇಕು; ಋಕ್ಸಾಮಗಳು ಮಾತ್ರ ಅವನಿಗೆ ಗೆಣ್ಣುಗಳೆಂದರೆ ಪರಿಚ್ಛಿನ್ನನೆಂದಂತೆ ಆದೀತು.
3. ಬರಿಯ ಋಕ್ಸಾಮಗಳು ಮಾತ್ರ ಅವನಿಗೆ ಗೆಣ್ಣುಗಳೆಂದರೆ ಸರ್ವಲೋಕಗಳನ್ನೂ ಸರ್ವಕಾಮಗಳನ್ನೂ ಅವನು ಆಳುತ್ತಾನೆಂಬುದು ಹೊಂದುತ್ತಿರಲಿಲ್ಲ ; ಆದರೆ ವಾಕ್ಯಶೇಷ ದಲ್ಲಿ ಹಾಗೆಂದು ಹೇಳಿದೆ. ಆದ್ದರಿಂದಲೂ ವೃಥಿವ್ಯಾದ್ಯಾತ್ಮಕ ಋಕ್ಸಾಮಗಳೇ ಇಲ್ಲಿ ವಿವಕ್ಷಿತ.
4. ಸರ್ವಕ್ಕೂ ಕಾರಣನಾಗಿರುವದರಿಂದ ಅವನು ಸರ್ವಾತ್ಮಕನೆಂಬುದು ಯುಕ್ತವು ; ಆದ್ದರಿಂದಲೂ ಪೃಥಿವ್ಯಾದಿಗಳೇ ಇಲ್ಲಿ ಗೆಣ್ಣುಗಳೆಂದು ಹೇಳಿದೆ - ಎಂಬುದು ಯುಕ್ತವೆಂದು ಭಾವ. ಹಿಂದೆ ಅಂಗೋಪಾಸನೆಗಳನ್ನು ಹೇಳಿರುವದು ಇಲ್ಲಿಗೆ ಉಪಯೋಗವಾಗಲೆಂಬ ವಿವಕ್ಷೆಯಿಂದಲೇ.
5. ಇಲ್ಲಿ ಭಾಷ್ಯಮೂಲದಲ್ಲಿ ಏನೋ ಹೆಚ್ಚುಕಡಿಮೆಯಾಗಿರುವಂತೆ ತೋರುತ್ತದೆ. ಉನ್ನಾಮಕನೂ ಋಕ್ಸಾಮಗೇಷ್ಣನೂ ಆಗಿರುವದರಿಂದ ಎಂದು ಬಾಯಿಬಿಟ್ಟು ಹೇಳಿ ಉದ್ಗೀಥನೆಂಬ ನಾಮವು ಋಕ್ಸಾಮಗೇಷ್ಣತ್ವದಿಂದ ಪ್ರಾಪ್ತವಾಯಿತೆಂಬುದು ಸರಿಯಾಗಲಾರದು. ಹೀಗೆಯೇ ''ಋಕ್ಸಾಮಗೇಷ್ಣತ್ವೇ ಪ್ರಾಪ್ತೇ'' ಎಂಬ ಅ॥ವಾ॥ ತೇ॥ ಪಾಠಗಳೂ ಹೊಂದುವಂತಿಲ್ಲ ; ಆ॥ ಪಾಠವೇ ಟೀಕೆಗೆ ಸಮ್ಮತವೆಂಬಂತಿದೆ. ಉತ್ ಎಂಬ ನಾಮ, ಋಕ್ಸಾಮಗೇಷ್ಣತ್ವ- ಇವೆರಡನ್ನೂ ಹೇಳುವ ಹೆಸರಿರಬೇಕಾದರೂ ಉದ್ಗೀಥ ಎಂಬ ಪರೋಕ್ಷನಾಮವನ್ನೇ ಆ ಅರ್ಥದಲ್ಲಿ ಉಪಯೋಗಿಸಿದೆ ಎಂಬರ್ಥದ ವಾಕ್ಯವು ಇಲ್ಲಿರಬೇಕಾಗಿತ್ತೆಂದು ತೋರುತ್ತದೆ.
6. ಆ ದೇವತೆಗಳಿಗೆಲ್ಲ ಪರೋಕ್ಷಪ್ರಿಯತ್ವವಿದೆ ; ಐ. ಭಾ. ೧-೩-೧೪ನ್ನು ನೋಡಿ.

ಅದೇ ಕಾರಣದಿಂದಲೇ (ಉದ್ಗಾತೃವು) ಉತ್ತನ್ನು ಗಾನಮಾಡುತ್ತಾನಾದ್ದರಿಂದ ಉದ್ಗಾತೃ(ವೆಂದು ಕರೆಯಿಸಿಕೊಳ್ಳುತ್ತಾನೆ). ಈ ಮೇಲೆ ಹೇಳಿದ ಉನ್ನಾಮಕ (ದೇವ)ನನ್ನು ಗಾನಮಾಡುತ್ತಾನಲ್ಲವೆ, ಅವನು ? ಆದ್ದರಿಂದ ಉದ್ಗಾತೃವಿಗೆ 'ಉದ್ಗಾತೃ' ಎಂಬ ಹೆಸರು ಪ್ರಸಿದ್ಧವಾಗಿರುವದು ಯುಕ್ತವಾಗಿರುತ್ತದೆ.

ಉನ್ನಾಮಕನಾದ ಆ ಈ ದೇವನು, ಆ ಆದಿತ್ಯನಿಂದ ಆಚೆಯ- (ಸೂರ್ಯನ) ಆಚೆಗೆ ಹೋಗಿರುವದರಿಂದ (ಲೋಕಗಳನ್ನು) ಪರಾಞ್ಚಃ (ಎಂದಿದೆ.)- ಮೇಲಿನ ಲೋಕಗಳಿವೆಯಲ್ಲ, ಆ ಲೋಕಗಳನ್ನು ಈಶನಮಾಡುತ್ತಾನೆ (ಆಳುತ್ತಾನೆ) ; (ಅವು ಗಳನ್ನು) ಆಳುತ್ತಾನೆಂಬುದಿಷ್ಟೇ ಅಲ್ಲ, (ಊ ಎಂಬರ್ಥದ ಚಶಬ್ದವಿರುವದರಿಂದ (ಅವುಗಳನ್ನು) ಧರಿಸಿಯೂ ಇರುತ್ತಾನೆ (ಎಂದು ಸೇರಿಸಿಕೊಳ್ಳಬೇಕು.) "ಅವನು ಪೃಥಿವಿಯನ್ನೂ ಈ ದ್ಯುಲೋಕವನ್ನೂ ಧರಿಸಿರುತ್ತಾನೆ" (ಋ. ಸಂ. ಮಂ. ೧೦-೧೦-೧೨೧-೧) ಎಂದು ಮುಂತಾಗಿರುವ ಮಂತ್ರವರ್ಣದಿಂದ (ಇದು ಸಿದ್ಧವಾಗಿರುತ್ತದೆ).[1] ಮತ್ತು ದೇವತೆಗಳ ಕಾಮಗಳನ್ನೂ ಈಶನಮಾಡುತ್ತಾನೆ.[2]

ಹೀಗೆ ಅಧಿದೈವತವು ; ಉದ್ಗೀಥದೇವನ ದೇವತಾವಿಷಯವಾದ ಸ್ವರೂಪವನ್ನು ಹೇಳಿದ್ದಾಯಿತು.[3]

ಒಂದನೆಯ ಅಧ್ಯಾಯ - ಏಳನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

(ಉಪನಿಷತ್ತು)

ಅಥಾಧ್ಯಾತ್ಮಂ ವಾಗೇವರ್ಕ್ಪ್ರಾಣಃ ಸಾಮ ತದೇತದೇತಸ್ಯಾಮೃಚ್ಯ-ಧ್ಯೂಢಗ್ಂ ಸಾಮ ತಸ್ಮಾದೃಚ್ಯಧ್ಯೂಢಗ್ಂ ಸಾಮ ಗೀಯತೇ । ವಾಗೇವ ಸಾ ಪ್ರಾಣೋಽಮಸತ್ತಾಮ ॥೧॥

1. ದ್ಯುಲೋಕವು ಆದಿತ್ಯನಿಂದಾಚೆಗೆ ಇದೆ. ಅದನ್ನು ಆದಿತ್ಯಪುರುಷನು ತನ್ನ ಅಧೀನದಲ್ಲಿಟ್ಟು ಕೊಂಡು ಅದಕ್ಕೆ ಆಧಾರವಾಗಿರುತ್ತಾನೆಂಬುದಕ್ಕೆ ಈ ಋಕ್ಕು ಪ್ರಮಾಣವು.
2. ಅವರ ಕಾಮಗಳನ್ನೆಲ್ಲ ನೆರವೇರಿಸುತ್ತಾನೆ.
3. ಇನ್ನುಮುಂದೆ ಅಧ್ಯಾತ್ಮರೂಪವನ್ನು ಹೇಳಲಾಗುವದು ಎಂದು ಭಾವ.

೧. ಇನ್ನು ಅಧ್ಯಾತ್ಮವು. ವಾಕ್ಕೇ ಋಕ್ಕು, ಪ್ರಾಣವು ಸಾಮವು. ಆ ಈ ಸಾಮವು ಈ ಋಕ್ಕಿನ ಮೇಲೆ ಏರಿರುತ್ತದೆ. ಆದ್ದರಿಂದ ಋಕ್ಕಿನ (ಆಧಾರದ) ಮೇಲೆಯೇ ಸಾಮವು ಗಾನಮಾಡಲ್ಪಡುತ್ತದೆ. ವಾಕ್ಕೇ ಸಾ, ಪ್ರಾಣವೇ ಅಮ. ಅದು ಸಾಮವು.

ವಾಗ್ಪ್ರಾಣಗಳೆಂದು ಋಕ್ಸಾಮಗಳ ಉಪಾಸನೆ

(ಭಾಷ್ಯ)

೭೫. ಅಥ ಅಧುನಾ ಅಧ್ಯಾತ್ಮಮ್ ಉಚ್ಯತೇ । ವಾಗೇವ ಋಕ್ ಪ್ರಾಣಃ ಸಾಮ । ಅಧರೋಪರಿಸ್ಥಾನತ್ವಸಾಮಾನ್ಯಾತ್ । ಪ್ರಾಣೋ ಘ್ರಾಣಮುಚ್ಯತೇ । ಸಹ ವಾಯುನಾ । ವಾಗೇವ ಸಾ ಪ್ರಾಣೋಽಮಃ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಇನ್ನು ಈಗ ಅಧ್ಯಾತ್ಮ (ಸ್ವರೂಪವನ್ನು) ಹೇಳಲಾಗುವದು. ವಾಕ್ಕೇ ಋಕ್ಕು, ಪ್ರಾಣವು ಸಾಮ ; ಏಕೆಂದರೆ ಕೆಳಗೆ, ಮೇಲೆ ಇರುವದೆಂಬುದು (ಎರಡಕ್ಕೂ) ಸಮಾನವಾಗಿದೆ[1]. ಪ್ರಾಣವೆಂದರೆ (ಇಲ್ಲಿ) ವಾಯುವಿನಿಂದೊಡಗೂಡಿದ ಘ್ರಾಣವು. ವಾಕ್ಕೇ ಸಾ, ಪ್ರಾಣವು ಅಮ - ಎಂಬುದೇ ಮುಂತಾದದ್ದನ್ನು ಹಿಂದಿನಂತೆ (ವ್ಯಾಖ್ಯಾನಮಾಡಿಕೊಳ್ಳಬೇಕು).

(ಉಪನಿಷತ್ತು)

ಚಕ್ಷುರೇವಗರ್ಗಾತ್ಮಾ ಸಾಮ ತದೇತದೇತಸ್ಯಾಮೃಚ್ಯಧ್ಯೂಢಗ್ಂ ಸಾಮ ತಸ್ಮಾದೃಚ್ಯಧ್ಯೂಢಗ್ಂ ಸಾಮ ಗೀಯತೇ । ಚಕ್ಷುರೇವ ಸಾಽಽತ್ಮಾಮಸತ್ತಾಸಾಮ ॥೨॥

೨. ಚಕ್ಷುಸ್ಸೇ ಋಕ್ಕು, ಆತನೇ ಸಾಮ ; ಆ ಈ ಸಾಮವು ಈ ಋಕ್ಕಿನ ಮೇಲೆ ಏರಿಕೊಂಡಿರುತ್ತದೆ. ಆದ್ದರಿಂದ ಋಕ್ಕಿನ (ಆಧಾರದ) ಮೇಲೆ ಸಾಮವು ಗಾನಮಾಡಲ್ಪಡುತ್ತದೆ. ಚಕ್ಷುಸ್ಸೇ ಸಾ, ಆತ್ಮವು ಅಮ. ಅದು ಸಾಮವು.

1. ಋಕ್ಕು ಆಧಾರ, ಸಾಮವು ಆಧೇಯ ; ಇದರಂತೆ ವಾಕ್ಕು ಕೆಳಗೆ, ಘ್ರಾಣವು ಮೇಲೆ.

ಚಕ್ಷುಶ್ಛಾಯಾತ್ಮಗಳೆಂದು ಉಪಾಸನೆ

(ಭಾಷ್ಯ)

೭೬. ಚಕ್ಷುರೇವ ಋಕ್, ಆತ್ಮಾ ಸಾಮ, ಆತ್ಮಾ ಇತಿ ಛಾಯಾತ್ಮಾ। ತತ್ಸ್ಥತ್ವಾತ್ ಸಾಮ ॥

(ಭಾಷ್ಯಾರ್ಥ)

ಚಕ್ಷುಸ್ಸೇ ಋಕ್ಕು, ಆತ್ಮವು ಸಾಮ. (ಇಲ್ಲಿ) ಆತ್ಮವೆಂದರೆ ಛಾಯಾತ್ಮವು. ಆ (ಚಕ್ಷುಸ್ಸಿ)ನಲ್ಲಿರುವದರಿಂದ (ಅದು) ಸಾಮವು.

(ಉಪನಿಷತ್ತು)

ಶ್ರೋತ್ರಮೇವರ್ಙ್ಮನಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಗ್ಂ ಸಾಮ ತಸ್ಮಾದೃಚ್ಯಧ್ಯೂಢಗ್ಂ ಸಾಮ ಗೀಯತೇ । ಶ್ರೋತ್ರಮೇವ ಸಾ ಮನೋಽಮಸತ್ತಾಸ್ಮಾ ॥೩॥

೩. ಶ್ರೋತ್ರವೇ ಋಕ್ಕು, ಮನಸ್ಸು ಸಾಮ, ಆ ಈ ಸಾಮವು ಈ ಋಕ್ಕಿನಮೇಲೆ ಏರಿಕೊಂಡಿರುತ್ತದೆ ; ಆದ್ದರಿಂದ ಋಕ್ಕಿನ (ಆಧಾರದ) ಮೇಲೆ ಸಾಮವು ಗಾನಮಾಡಲ್ಪಡುತ್ತದೆ. ಶ್ರೋತ್ರವೇ ಸಾ, ಮನಸ್ಸು ಅಮ ; ಅದು ಸಾಮವು.

ಶ್ರೋತ್ರಮನಸ್ಸುಗಳೆಂದು ಉಪಾಸನೆ

(ಭಾಷ್ಯ)

೭೭. ಶ್ರೋತ್ರಮೇವ ಋಕ್, ಮನಃ ಸಾಮ । ಶ್ರೋತ್ರಸ್ಯ ಅಧಿಷ್ಠಾತೃತ್ವಾತ್ ಮನಸಃ ಸಾಮತ್ವಮ್ ॥

(ಭಾಷ್ಯಾರ್ಥ)

ಶ್ರೋತ್ರವೇ ಋಕ್ಕು, ಮನಸ್ಸು ಸಾಮ. ಶ್ರೋತ್ರಕ್ಕೆ ಮನಸ್ಸು ಅಧಿಷ್ಠಾತೃ[1]-ವಾದ್ದರಿಂದ ಮನಸ್ಸು ಸಾಮವು.

(ಉಪನಿಷತ್ತು)

ಅಥ ಯದೇತದಕ್ಷ್ಣಃ ಶುಕ್ಲಂ ಭಾಃ ಸೈವರ್ಗಥ ಯನ್ನೀಲಂ ಪರಃ

---

1. ಮನಸ್ಸಿನ ಸಹಾಯವಿಲ್ಲದೆ ಶ್ರೋತ್ರವು ಕೇಳಲಾರದು.

ಕೃಷ್ಣಂ ತತ್ ಸಾಮ ತದೇತದೇತಸ್ಯಾಮೃಚ್ಯಧ್ಯೂಢಗ್ಂ ಸಾಮ ತಸ್ಮಾದೃಚ್ಯಧ್ಯೂಢಗ್ಂ ಸಾಮ ಗೀಯತೇ । ಅಥ ಯದೈವೇತದಕ್ಷ್ಣಃ ಶುಕ್ಲಂ ಭಾಃ ಸೈವ ಸಾऽಥ ಯನ್ನೀಲಂ ಪರಃ ಕೃಷ್ಣಂ ತದಮುಸ್ತತ್ಸಾಮ ॥೪॥

೪. ಇನ್ನು ಈ ಕಣ್ಣಿನ ಬಿಳಿಯ ಭಾಸವಿದೆಯಲ್ಲ, ಅದೇ ಋಕ್ಕು ; ಇನ್ನು ನೀಲವಾಗಿ ಪರಕೃಷ್ಣವಾದ (ಭಾಸ) ವಿದೆಯಲ್ಲ, ಅದು ಸಾಮವು. ಆ ಈ ಸಾಮವು ಈ ಋಕ್ಕಿನ ಮೇಲೆ ಏರಿಕೊಂಡಿರುತ್ತದೆ ; ಆದ್ದರಿಂದ ಋಕ್ಕಿನ (ಆಧಾರದ) ಮೇಲೆ ಸಾಮವು ಗಾನಮಾಡಲ್ಪಡುತ್ತದೆ. ಇನ್ನು ಈ ಕಣ್ಣಿನ ಬಿಳಿಯ ಭಾಸವಿದೆಯಲ್ಲ, ಅದೇ ಸಾ ; ಇನ್ನು ನೀಲವಾಗಿ ಪರಕೃಷ್ಣವಾಗಿದೆಯಲ್ಲ, ಅದು ಅಮ, ಅದು ಸಾಮವು.

ಕಣ್ಣಿನ ಶುಕ್ಲಕೃಷ್ಣಕಾಂತಿಗಳೆಂದು ಉಪಾಸನೆ

೬೮. **ಅಥ ಯದೇತದಕ್ಷ್ಣಃ ಶುಕ್ಲಂ ಭಾಃ ಸೈವರ್ಗಥ ಯನ್ನೀಲಂ ಪರಃ ಕೃಷ್ಣಮ್ ಆದಿತ್ಯೇ ಇವ ದೃಕ್ಪತ್ಯಧಿಷ್ಠಾನಮ್, ತತ್ಸಾಮ ॥**

ಸ್ಯ ೯)

ಈ ಕಣ್ಣಿನ ಬಿಳಿಯ ಭಾಸವಿದೆಯಲ್ಲ, ಅದೇ ಋಕ್ಕು ; ಇನ್ನು ಆದಿತ್ಯನಲ್ಲಿರುವಂತೆ[1] ನೀಲವಾಗಿರುವ ಪರಕೃಷ್ಣವಾಗಿ, ನೋಡುವ ಶಕ್ತಿಗೆ ಅಧಿಷ್ಠಾನವಾಗಿರುವ ಭಾಸವಿದೆಯಲ್ಲ, ಅದು ಸಾಮವು.

ಅಕ್ಷ್ಯಂತರ್ಗತಪುರುಷನೆಂದು ಉದ್ಗೀಥದ ಉಪಾಸನೆ

(ಉಪನಿಷತ್ತು)

ಅಥ ಯ ಏಷೋऽನ್ತರಕ್ಷಿಣಿ ಪುರುಷೋ ದೃಶ್ಯತೇ ಸೈವರ್ಕ್ತದ್ಯಾಮ ತದುಕ್ಥಂ ತದ್ಯಜುಸ್ತದ್ ಬ್ರಹ್ಮ ತಸ್ಯೈತಸ್ಯ ತದೇವ ರೂಪಂ ಯದಮುಷ್ಯ ರೂಪಂ ಯಾವಮುಷ್ಯ ಗೇಷ್ಣೌ ತೌ ಗೇಷ್ಣೌ ಯನ್ನಾಮ ತನ್ನಾಮ ॥೫॥

1. ಭಾ. ಭಾ. ೬೧ ರಲ್ಲಿ ಹೇಳಿರುವಂತೆ ಎಂದರ್ಥ.

೫. ಇನ್ನು ಅಕ್ಷಿಯೊಳಗೆ ಈ ಪುರುಷನು ಕಾಣುತ್ತಿರುವನಲ್ಲ, ಅದೇ ಋಕ್ಕು, ಅದೇ ಸಾಮವು, ಅದೇ ಉಕ್ಥವು, ಅದೇ ಯಜುಸ್ಸು, ಅದೇ ಬ್ರಹ್ಮವು. ಆ ಇವನಿಗೆ ಅವನಿಗೆ ಯಾವದು ರೂಪವೋ ಅದೇ ರೂಪವು ; ಅವನಿಗೆ ಯಾವವು ಗೆಣ್ಣುಗಳೋ ಅವೇ ಗೆಣ್ಣುಗಳು ; ಯಾವದು ಹೆಸರೋ ಅದೇ ಹೆಸರು.

ಅಕ್ಷಿಪುರುಷನಿಗೂ ಆದಿತ್ಯಪುರುಷನ ರೂಪವೇ

(ಭಾಷ್ಯ)

೬೯. ಅಥ ಯ ಏಷೋಽನ್ತರಕ್ಷಿಣಿ ಪುರುಷೋ ದೃಶ್ಯತೇ ಪೂರ್ವವತ್ ಸೈವ ಋಕ್ ಅಧ್ಯಾತ್ಮಂ ವಾಗಾದ್ಯಾಃ ಪೃಥಿವ್ಯಾದ್ಯಾಃ ಚ ಅಧಿದೈವತಮ್ । ಪ್ರಸಿದ್ಧಾ ಚ ಋಕ್ ಪಾದಬದ್ಧಾಕ್ಷರಾತ್ಮಿಕಾ । ತಥಾ ಸಾಮ । ಉಕ್ಥಸಾಹಚರ್ಯಾದ್ವಾ ಸ್ತೋತ್ರಂ ಸಾಮ ಋಕ್ ಶಸ್ತ್ರಂ ಉಕ್ಥಾದನ್ಯತ್[1] । ತಥಾ ಯಜುಃ ಸ್ವಾಹಾಸ್ವಧಾವಷಡಾದಿ ಸರ್ವಮೇವ ವಾಗ್ಯಜುಃ । ತತ್ ಸ ಏವ । ಸರ್ವಾತ್ಮಕತ್ವಾತ್ ಸರ್ವಯೋನಿತ್ವಾಚ್ಚ ಇತಿ ಹಿ ಅವೋಚಾಮ । ಋಗಾದಿಪ್ರಕರಣಾತ್ ತದ್ ಬ್ರಹ್ಮ ಇತಿ ತ್ರಯೋ ವೇದಾಃ । ತಸ್ಯೈತಸ್ಯ ಚಾಕ್ಷುಷಸ್ಯ ಪುರುಷಸ್ಯ ತದೇವ ರೂಪಮ್ ಅತಿದಿಶ್ಯತೇ । ಕಿಂ ತತ್ । ಯತ್ ಅಮುಷ್ಯ ಆದಿತ್ಯಪುರುಷಸ್ಯ ಹಿರಣ್ಮಯ ಇತ್ಯಾದಿ ಯದಧಿದೈವತಮುಕ್ತಮ್ । ಯೌ ಅಮುಷ್ಯ ಗೇಷ್ಣೌ ಪರ್ವಣೀ ತಾವೇವ ಅಸ್ಯಾಪಿ ಚಾಕ್ಷುಷಸ್ಯ ಗೇಷ್ಣೌ । ಯಚ್ಚಾಮುಷ್ಯ ನಾಮ ಉತ್ ಇತಿ ಉದ್ಗೀಥ ಇತಿ ಚ ತದೇವಾಸ್ಯ ನಾಮ । ಸ್ಥಾನಭೇದಾತ್, ರೂಪಗುಣನಾಮಾತಿದೇಶಾತ್, ಈಶಿತೃತ್ವವಿಷಯ-ಭೇದವ್ಯಪದೇಶಾಚ್ಚ ಆದಿತ್ಯಚಾಕ್ಷುಷಯೋರ್ಭೇದಃ ಇತಿ ಚೇತ್ । ನ । 'ಅಮುನಾ (೧-೭-೭) ಅನೇನೈವ' (೧-೭-೮) ಇತಿ ಏಕಸ್ಯ ಉಭಯಾತ್ಮತ್ವ-ಪ್ರಾಪ್ತ್ಯನುಪಪತ್ತೇಃ । ದ್ವಿಧಾಭಾವೇನ ಉಪಪದ್ಯತ ಇತಿ ಚೇತ್ । ವಕ್ಷ್ಯತಿ ಹಿ "ಸ ಏಕಧಾ ಭವತಿ ತ್ರಿಧಾ ಭವತಿ" (ಛಾಂ. ೭-೨೬-೨) ಇತ್ಯಾದಿ । ನ । ಚೇತನಸ್ಯೈಕಸ್ಯ ನಿರವಯವತ್ವಾತ್ ದ್ವಿಧಾಭಾವಾನುಪಪತ್ತೇಃ । ತಸ್ಮಾತ್ ಅಧ್ಯಾತ್ಮಾಧಿದೈವತ-ಯೋರೇಕತ್ವಮೇವ । ಯತ್ತು ರೂಪಾದ್ಯತಿದೇಶೋ ಭೇದಕಾರಣಮ್ ಅವೋಚಃ । ನ ತದ್ಭೇದಾವಗಮಾಯ ಕಿಂ ತರ್ಹಿ ಸ್ಥಾನಭೇದಾತ್ ಭೇದಾಶಙ್ಕಾ ಮಾಭೂತ್ ಇತ್ಯೇವಮರ್ಥಮ್ ॥

---

1. ಈ ವಾ॥ ಆ॥ ತೆ॥ ಪಾಠವೇ ಸರಿಯಾದದ್ದು.

(ಭಾಷ್ಯಾರ್ಥ)

ಇನ್ನು[1] ಅಕ್ಷಿಯೊಳಗೆ ಈ ಪುರುಷನು ಹಿಂದೆ ಹೇಳಿದಂತೆ ಕಾಣುತ್ತಿರುವನಲ್ಲ,[2] ಅವನೇ ಋಕ್ಕು ; ಅಧ್ಯಾತ್ಮವಾಗಿ ವಾಗಾದಿಯಾದ[3] ಅಧಿದೈವತವಾಗಿ ಪೃಥಿವ್ಯಾದಿಯಾದ,[4] ಮತ್ತು ಪ್ರಸಿದ್ಧವಾಗಿರುವ ಪಾದಬದ್ಧವಾಗಿರುವ ಅಕ್ಷರಗಳ ರೂಪವಾಗಿರುವ ಋಕ್ಕು (ಅವನೇ)[5]. ಹೀಗೆಯೇ ಸಾಮವು[6] ಅಥವಾ ಉಕ್ಥದೊಡನೆ (ಋಕ್ಕಬ್ದವು) ಇರುವದರಿಂದ[7] ಸ್ತೋತ್ರವೇ ಸಾಮವು, ಋಕ್ಕು ಎಂದರೆ ಉಕ್ಥಕ್ಕಿಂತ ಬೇರೆಯಾದ ಶಸ್ತ್ರವು[8]. ಹೀಗೆಯೇ ಯಜುಸ್ಸು ಎಂದರೆ ಸ್ವಾಹಾ ಸ್ವಧಾ ವಷಟ್ - ಮುಂತಾದ ವಾಕ್ಯೆಲ್ಲವೂ ಯಜುಸ್ಸು. ಅದು ಅವನೇ. ಏಕೆಂದರೆ (ದೇವನು) ಸರ್ವಾತ್ಮಕನೂ ಸರ್ವಕಾರಣನೂ ಆಗಿರುತ್ತಾನೆ-ಎಂದು ಹಿಂದೆ ಹೇಳಿರುತ್ತೇವೆ[9]. ಋಗಾದಿಗಳ ಪ್ರಕರಣವಾಗಿರುವದರಿಂದ ಅವನೇ ಬ್ರಹ್ಮವು - ಎಂದರೆ ಮೂರುವೇದಗಳು (ಎಂದರ್ಥ).[10]

1. ಅಂಗೋಪಾಸನೆಗಳು ಮುಗಿದು ಪ್ರಧಾನೋಪಾಸನೆಯನ್ನು ಹೇಳಬೇಕಾಗಿರುವದರಿಂದ.
2. ಭಾ. ಭಾ. ೬೨ರಲ್ಲಿ ವಿವರಿಸಿರುವಂತೆ ಸಮಾಹಿತಚಿತ್ತರಿಗೆ ಕಾಣಿಸುತ್ತಿರುವನಲ್ಲ ಎಂದರ್ಥ.
3. ಅಂಗೋಪಾಸನೆಗಳಲ್ಲಿ ಋಕ್ಕೆಂದು ಹೇಳಿದ್ದ ವಾಗಾದಿಗಳನ್ನು ಇಲ್ಲಿ ಋಕ್ಕೆಂದು ತಿಳಿಸಿದೆ.
4. ಅಧಿದೈವತವಾಗಿ ಹೇಳಿದ್ದ ಪೃಥಿವ್ಯಾದಿಗಳನ್ನು ಇಲ್ಲಿ ಋಕ್ಶಬ್ದದಿಂದ ಗ್ರಹಿಸಬೇಕು.
5. ಶಬ್ದಾತ್ಮಕವಾದ ಋಕ್ಕನ್ನೂ ಗ್ರಹಿಸಬೇಕು. ಋಕ್ಕೆಂದರೆ ಇಲ್ಲಿ ಇದೆಲ್ಲವನ್ನೂ ಗ್ರಹಿಸಬೇಕೇ ಹೊರತು ಬರಿಯ ಶಬ್ದಮಾತ್ರವನ್ನಲ್ಲ.
6. ಋಕ್ಕಿನಂತೆಯೇ ಸಾಮಶಬ್ದಕ್ಕೂ ಅರ್ಥವನ್ನು ಮಾಡಿಕೊಳ್ಳಬೇಕು ಎಂದಭಿಪ್ರಾಯ.
7. ಇದು ಋಕ್ಕೆಂಬ ಶಬ್ದಕ್ಕೆ ಮತ್ತೊಂದು ವ್ಯಾಖ್ಯಾನವನ್ನು ಮಾಡುವದಕ್ಕೆ ಹೇತು.
8. ಉಕ್ಥವೆಂಬ ಶಸ್ತ್ರದೊಡನೆ ಸಾಮವನ್ನು ಹೇಳಿರುವದರಿಂದ ಋಕ್ಕು ಎಂದರೆ ಉಕ್ಥವನ್ನು ಉಳಿದ ಶಸ್ತ್ರಗಳೆಂದೂ ಸಾಮವೆಂದರೆ ಸ್ತೋತ್ರವೆಂದೂ ಅರ್ಥಮಾಡಬಹುದು ಎಂದರ್ಥ.
9. ಪರಮಾತ್ಮನು ಸರ್ವಕಾರಣನೂ ಸರ್ವಾತ್ಮನೂ ಆಗಿರುವದರಿಂದ ಅವನಿಗೆ ಪೃಥಿವ್ಯಾದಿಗಳು ಗೇಷ್ಣವೆಂದು ಒಪ್ಪುತ್ತದೆ ಎಂದು ಹಿಂದೆ ೮ನೆಯ ಕಂಡಿಕೆಯ ವ್ಯಾಖ್ಯಾನದಲ್ಲಿ (ಭಾ. ಭಾ. ೬೪ರಲ್ಲಿ) ಹೇಳಿತ್ತು. ಆದ್ದರಿಂದ ಇಲ್ಲಿಯೂ ಸರ್ವವೂ ಗೇಷ್ಣವೆಂಬುದಕ್ಕೇ ಇದನ್ನು ಹೇತುವಾಗಿ ತೆಗೆದುಕೊಳ್ಳುವದು ಯುಕ್ತ. ಆದಕಾರಣ ಇದು ಮೊದಲನೆಯ ವ್ಯಾಖ್ಯಾನಕ್ಕೇ ಒಪ್ಪುತ್ತದೆ.
10. ಇಲ್ಲಿ ಎರಡನೆಯ ವ್ಯಾಖ್ಯಾನವನ್ನಿಟ್ಟುಕೊಂಡಿದೆ. ಬ್ರಹ್ಮವೆಂದರೆ ವೇದಸಾಮಾನ್ಯವು ; ಋಗಾದಿಗಳನ್ನು ಬೇರೆಯಾಗಿ ಹೇಳಿರುವದು ಬ್ರಾಹ್ಮಣಪರಿವ್ರಾಜಕನ್ಯಾಯದಿಂದ.

ಆ ಈ ಚಾಕ್ಷುಷಪುರುಷನಿಗೆ ಅದೇ ರೂಪವನ್ನು ಅತಿದೇಶಮಾಡಿಕೊಳ್ಳಬೇಕು. ಅದು ಯಾವದು ? ಆ ಆದಿತ್ಯಪುರುಷನಿಗೆ ಹಿರಣ್ಮಯನು ಎಂದು ಮುಂತಾಗಿ ಅಧಿದೈವತವಾಗಿ ಹೇಳಿತ್ತಲ್ಲ, (ಅದನ್ನೇ). ಅವನಿಗೆ ಯಾವವು ಗೇಷ್ಣಗಳೋ ಗೆಣ್ಣುಗಳೋ ಅವೇ ಈ ಚಾಕ್ಷುಷ(ಪುರುಷನಿಗೂ) ಗೇಷ್ಣಗಳು. ಮತ್ತು ಅವನಿಗೆ ಉತ್ ಮತ್ತು ಉದ್ಗೀಥ ಎಂಬ ಹೆಸರಿತ್ತಷ್ಟೆ, ಅದೇ ಇವನಿಗೂ ಹೆಸರು.

ಸ್ಥಾನವು ಬೇರೆಯಾಗಿರುವದರಿಂದಲೂ ರೂಪಗುಣನಾಮಗಳನ್ನೂ ಅತಿದೇಶಮಾಡಿಕೊಂಡಿರುವದರಿಂದಲೂ ಈಶಿತೃತ್ವಕ್ಕೆ ವಿಷಯಗಳು ಬೇರೆಬೇರೆಯಾಗಿರುವದರಿಂದಲೂ ಆದಿತ್ಯಚಾಕ್ಷುಷ(ಪುರುಷರಿಗೆ) ಭೇದವೇ, ಎಂದರೆ ಹಾಗಲ್ಲ. ಏಕೆಂದರೆ 'ಅಮುನಾ' (ಆ ಪುರುಷನಾಗಿಯೇ ೧-೭-೭), 'ಅನೇನೈವ' (ಇವನಾಗಿಯೇ ೧-೭-೮) ಎಂದು (ಹೇಳಿರುವದರಿಂದ) ಒಬ್ಬನಿಗೇ ಎರಡು ಸ್ವರೂಪಗಳ ಪ್ರಾಪ್ತಿಯು ಹೊಂದದೆಹೋಗುತ್ತದೆ.[1]

(ಶಂಕೆ) :- ಎರಡುರೂಪವಾಗಿ ಆಗುವದರಿಂದ (ಅದೂ) ಹೊಂದ-ಬಹುದಲ್ಲ ! "ಅವನು ಒಂದು ಬಗೆಯಾಗುತ್ತಾನೆ, ಮೂರು ಬಗೆಯಾಗುತ್ತಾನೆ" (ಛಾಂ. ೭-೨೬-೨) ಎಂದು ಮುಂದೆ (ಶ್ರುತಿ) ಹೇಳಿದೆಯಷ್ಟೆ[2] ?

(ಪರಿಹಾರ) :- ಹಾಗಲ್ಲ. ಏಕೆಂದರೆ ಚೇತನವು ನಿರವಯವವಾದ್ದರಿಂದ[3] ತಾನೊಂದೇ ಎರಡಾಗಿ ಆಗಲಾರದು. ಆದ್ದರಿಂದ ಅಧ್ಯಾತ್ಮ, ಅಧಿದೈವತ (-ಈ ಇಬ್ಬರು) ಪುರುಷರೂ ಒಬ್ಬನೇ. ಇನ್ನು ರೂಪಾದಿಗಳ ಅತಿದೇಶವನ್ನು ಮಾಡಿರುವದು (ಅವರಿಬ್ಬರೂ) ಬೇರೆಯೆನ್ನುವದಕ್ಕೆ ಕಾರಣವೆಂದು ಹೇಳಿದೆಯಷ್ಟೆ ; ಅದು ಭೇದವನ್ನು ನಿಶ್ಚಯಿಸಿ (ತಿಳಿಸು)ವದಕ್ಕಲ್ಲ, ಮತ್ತೇನೆಂದರೆ ಸ್ಥಾನಗಳು ಬೇರೆಬೇರೆ ಯಾಗಿರುವದರಿಂದ (ಇಬ್ಬರೂ) ಬೇರೆ ಎಂಬ ಶಂಕೆಯುಂಟಾಗದಿರಲೆಂದು.[4]

(ಉಪನಿಷತ್ತು)

ಸ ಏಷ ಯೇ ಚೈತಸ್ಮಾದರ್ವಾಙ್ಮೋ ಲೋಕಾಸ್ತೇಷಾಂ ಚೇಷ್ಟೇ

1. ಒಬ್ಬನೇ ಇಬ್ಬರು ಪುರುಷರಾಗಬೇಕಾಗುತ್ತದೆ ಎಂಬ ಅನಿಷ್ಟವನ್ನು ಇಲ್ಲಿ ಹೇಳಿದೆ.
2. ಆದ್ದರಿಂದ ಉಕ್ತನಿಷ್ಟಪ್ರಾಪ್ತಿಯಾಗುವದಿಲ್ಲವಲ್ಲ ! - ಎಂದು ಶಂಕೆ.
3. ಉದಾಹೃತಸ್ಥಲದಲ್ಲಿ ಶರೀರಗಳು ಅನೇಕವಾಗಿ ಆಗುವವೆಂದು ಹೇಳಿದೆ ; ಆದರೆ ಪುರುಷನು ಚೇತನನಾಗಿರುವದರಿಂದ ಅವನು ಹಾಗೆ ಎರಡಾಗಲಾರನು.
4. ಈ ಚರ್ಚೆಯನ್ನು ಸೂ. ಭಾ. ೧-೧-೨೦, ೨೧ರಲ್ಲಿ ಮಾಡಿರುವದನ್ನು ಇಲ್ಲಿ ಮನದಂದುಕೊಳ್ಳಬೇಕು.

ಮನುಷ್ಯಕಾಮಾನಾಂ(ಣಾಂ) ಚೇತಿ ತದ್ಯ ಇಮೇ ವೀಣಾಯಾಂ ಗಾಯನ್ತ್ಯೇತಂ ತೇ ಗಾಯನ್ತಿ ತಸ್ಮಾತ್ತೇ ಧನಸನಯಃ ॥೬॥

೬. ಆ ಈತನು ಇವನಿಗಿಂತ ಇದಕ್ಕಿಂತ ಈಚಿನ ಲೋಕಗಳಿವೆಯಲ್ಲ, ಅವುಗಳನ್ನೂ ಮನುಷ್ಯಕಾಮಗಳನ್ನೂ ಆಳುತ್ತಿರುವನು. ಆದ್ದರಿಂದ ಈ ವೀಣೆಯಲ್ಲಿ ಹಾಡುತ್ತಿರವರಲ್ಲ, ಅವರು ಇವನನ್ನೇ ಹಾಡುತ್ತಿರುತ್ತಾರೆ ; ಆದ್ದರಿಂದ ಅವರು ಧನಸನಿಗಳಾಗಿರುತ್ತಾರೆ.

(ಭಾಷ್ಯ)

೭೦. ಸ ಏಷ ಚಾಕ್ಷುಷಃ ಪುರುಷಃ ಯೇ ಚ ಏತಸ್ಮಾತ್ ಆಧ್ಯಾತ್ಮಿಕಾತ್ ಆತ್ಮನಃ ಅರ್ವಾಞ್ಚಃ ಅರ್ವಾಗ್ಗತಾಃ ಲೋಕಾಃ ತೇಷಾಂ ಚ ಈಷ್ಟೇ ಮನುಷ್ಯಸಂಬನ್ಧಿನಾಂ ಚ ಕಾಮಾನಾಮ್ । ತತ್ ತಸ್ಮಾತ್ ಯೇ ಇಮೇ ವೀಣಾಯಾಂ ಗಾಯನ್ತಿ ಗಾಯಕಾಃ ತ ಏತಮೇವ ಗಾಯನ್ತಿ । ಯಸ್ಮಾತ್ ಈಶ್ವರಂ ಗಾಯನ್ತಿ ತಸ್ಮಾತ್ ತೇ ಧನಸನಯಃ ಧನಲಾಭಯುಕ್ತಾಃ । ಧನವನ್ತ ಇತ್ಯರ್ಥಃ ॥

(ಭಾಷ್ಯಾರ್ಥ)

ಆ ಈ ಚಾಕ್ಷುಷಪುರುಷನು ಈ ಆಧ್ಯಾತ್ಮಿಕನಾದ ಆತನ ಈಚಿನ ಕೆಳಗೆ ಇರುವ ಲೋಕಗಳಿವೆಯಲ್ಲ, ಅವುಗಳನ್ನೂ ಮನುಷ್ಯಸಂಬಂಧಿಗಳಾದ ಕಾಮಗಳನ್ನೂ ಆಳುತ್ತಿರುವನು. (ತತ್- ತಸ್ಮಾತ್) ಆದ್ದರಿಂದ ಇವರು ಈ ಗಾಯಕರು ವೀಣೆಯಲ್ಲಿ ಹಾಡುತ್ತಿರುವರಲ್ಲ,[1] ಅವರು ಇವನನ್ನೇ ಹಾಡುತ್ತಿರುತ್ತಾರೆ. (ಹೀಗೆ) ಈಶ್ವರನನ್ನೇ (ಹೊಗಳಿ) ಹಾಡುತ್ತಾರಷ್ಟೆ, ಆದ್ದರಿಂದ ಅವರು ಧನಸನಿಗಳು, ಧನಲಾಭಯುಕ್ತ-ರಾಗಿರುತ್ತಾರೆ, ಧನವಂತರಾಗಿರುತ್ತಾರೆ ಎಂದರ್ಥ.

ಆದಿತ್ಯಾಕ್ಷಿಪುರುಷೋಪಾಸನೆಗೆ ಫಲ

(ಉಪನಿಷತ್ತು)

ಅಥ ಯ ಏತದೇವಂ ವಿದ್ವಾನ್ ಸಾಮ ಗಾಯತ್ಯುಭೌ ಸ ಗಾಯತಿ ಸೋಽಮುನೈವ ಸ ಏಷ ಯೇ ಚಾಮುಷ್ಮಾತ್ ಪರಾಞ್ಚೋ ಲೋಕಾಸ್ತಾಗ್ಂಶ್ಚಾಪ್ನೋತಿ ದೇವಕಾಮಾಗ್ಂಶ್ಚ ॥೭॥

[1] ವೀಣೆಯನ್ನು ನುಡಿಸಿಕೊಂಡು ಹಾಡುತ್ತಿರುವರಲ್ಲ- ಎಂದರ್ಥ.

ಅಥಾನೇನೈವ ಯೇ ಚೈತಸ್ಮಾದರ್ವಾಞ್ಚೋ ಲೋಕಾಸ್ತಾಗ್ಂ ಶ್ಚಾಪ್ನೋತಿ ಮನುಷ್ಯಕಾಮಾಗ್ಂಶ್ಚ ತಸ್ಮಾದು ಹೈವಂವಿದುದ್ಗಾತಾ ಬ್ರೂಯಾತ್ ॥೮॥

ಕಂ ತೇ ಕಾಮಮಾಗಾಯಾನೀತ್ಯೇಷ ಹ್ಯೇವ ಕಾಮಾಗಾನಸ್ಯೇಷ್ಟೇ ಯ ಏವಂ ವಿದ್ವಾನ್ ಸಾಮ ಗಾಯತಿ ಸಾಮ ಗಾಯತಿ ॥೯॥

೭. ಇನ್ನು ಯಾವನು ಇದನ್ನು ಹೀಗೆಂದು ಅರಿತುಕೊಂಡು ಸಾಮವನ್ನು ಗಾನಮಾಡುತ್ತಾನೋ ಅವನು (ಈ) ಇಬ್ಬರನ್ನೂ ಗಾನಮಾಡಿದವ ನಾಗುತ್ತಾನೆ. ಅವನು ಆತನಾಗಿಯೇ, ಆ ಇವನು, ಅವನಿಗಿಂತ ಆಚಿನ ಲೋಕಗಳಿವೆಯಲ್ಲ, ಅವನ್ನೂ ದೇವಕಾಮಗಳನ್ನೂ ಪಡೆದುಕೊಳ್ಳುತ್ತಾನೆ ;

೮-೯. ಇನ್ನು ಇವನಾಗಿಯೇ, ಇವನಿಗಿಂತ ಈಚಿನ ಲೋಕಗಳಿರುತ್ತವೆ ಯಲ್ಲ, ಅವನ್ನೂ ಮನುಷ್ಯಕಾಮಗಳನ್ನೂ ಪಡೆದುಕೊಳ್ಳುತ್ತಾನೆ. ಆದ್ದರಿಂದಲೇ ಹೀಗೆಂದರಿತ ಉದ್ಗಾತೃವು 'ನಿನಗೆ ಯಾವ ಕಾಮವನ್ನು ಗಾನಮಾಡಲಿ ?' ಎಂದು ನುಡಿಯಬೇಕು. ಯಾವನು ಹೀಗೆಂದರಿತು ಸಾಮವನ್ನು ಗಾನಮಾಡುತ್ತಾನೋ, ಅವನೇ ಕಾಮಾಗಾನಕ್ಕೆ ಶಕ್ತನಾಗಿರುತ್ತಾನೆ, (ಯಾವನು) ಸಾಮಗಾನಮಾಡುತ್ತಾನೋ ಅವನೇ ಶಕ್ತನಾಗಿರುತ್ತಾನೆ.

ಆದಿತ್ಯಚಾಕ್ಷುಷರೂಪದಿಂದ ಸರ್ವಲೋಕಕಾಮಾಪ್ತಿ

೭೧. ಅಥ ಯ ಏತದೇವಂ ವಿದ್ವಾನ್ ಯಥೋಕ್ತಂ ದೇವಮ್ ಉದ್ಗೀಥಂ ವಿದ್ವಾನ್ ಸಾಮ ಗಾಯತಿ ಉಭೌ ಸ ಗಾಯತಿ ಚಾಕ್ಷುಷಮ್ ಆದಿತ್ಯಂ ಚ । ತಸ್ಯ ಏವಂವಿದಃ ಫಲಮುಚ್ಯತೇ । ಸಃ ಅಮುನೈವ ಆದಿತ್ಯೇನ । ಸ ಏಷಃ ಯೇ ಚ ಅಮುಷ್ಮಾತ್ ಪರಾಞ್ಚೋ ಲೋಕಾಃ ತಾಂಶ್ಚ ಆಪ್ನೋತಿ । ಆದಿತ್ಯಾನ್ತರ್ಗತದೇವೋ ಭೂತ್ವೇತ್ಯರ್ಥಃ । ದೇವಕಾಮಾಂಶ್ಚ । ಅಥ ಅನೇನೈವ ಚಾಕ್ಷುಷೇಣೈವ ಯೇ ಚ ಏತಸ್ಮಾದರ್ವಾಞ್ಚೋ ಲೋಕಾಃ ತಾಂಶ್ಚ ಆಪ್ನೋತಿ । ಮನುಷ್ಯಕಾಮಾಂಶ್ಚ। ಚಾಕ್ಷುಷೋ ಭೂತ್ವಾ ಇತ್ಯರ್ಥಃ ॥

(ಭಾಷ್ಯಾರ್ಥ)

ಇನ್ನು ಯಾವನು ಇದನ್ನು ಹೀಗೆಂದು ಅರಿತುಕೊಂಡು ಮೇಲೆ ಹೇಳಿದ ದೇವನೆಂದು ಉದ್ಗೀಥವನ್ನು ಅರಿತುಕೊಂಡು ಸಾಮವನ್ನು ಗಾನಮಾಡುತ್ತಾನೋ ಅವನು ಇಬ್ಬರನ್ನೂ ಚಾಕ್ಷುಷ(ಪುರುಷ)ನನ್ನೂ ಆದಿತ್ಯ(ಪುರುಷ)ನನ್ನೂ ಗಾನಮಾಡಿದವನಾಗುತ್ತಾನೆ.

ಹೀಗೆಂದು ಅರಿತುಕೊಂಡ ಅವನಿಗೆ ಫಲವನ್ನು ಹೇಳಲಾಗುತ್ತದೆ, ಅವನು ಈ ಆದಿತ್ಯನಾಗಿಯೇ, (ತಾನೂ) ಆದಿತ್ಯಾಂತರ್ಗತನಾದ ದೇವನಾಗಿ ಎಂದರ್ಥ ; ಆ ಇವನು[1] ಆ (ಆದಿತ್ಯನ) ಆಚೆಗಿರುವ ಲೋಕಗಳಿವೆಯಲ್ಲ, ಅವನ್ನೂ, ದೇವ ಕಾಮಗಳನ್ನೂ ಪಡೆದುಕೊಳ್ಳುತ್ತಾನೆ. ಇನ್ನು[2] ಈ ಚಾಕ್ಷುಷಪುರುಷನಾಗಿಯೇ (ತಾನೂ) ಚಾಕ್ಷುಷ(ಪುರುಷ)ನಾಗಿಯೇ ಎಂದರ್ಥ ; ಈತನಿಗಿಂತ ಈಚಿನ ಲೋಕಗಳಿವೆಯಲ್ಲ, ಅವನ್ನೂ ಮನುಷ್ಯಕಾಮಗಳನ್ನೂ ಪಡೆದುಕೊಳ್ಳುತ್ತಾನೆ.

ಆದಿತ್ಯಚಾಕ್ಷುಷವಿದ್ಯೆಯನ್ನು ಬಲ್ಲ ಉದ್ಗಾತೃವಿನ ಮಹಿಮೆ

(ಭಾಷ್ಯ)

೭.೨. ತಸ್ಮಾತ್ ಉ ಹ ಏವಂವಿತ್ ಉದ್ಗಾತಾ ಬ್ರೂಯಾತ್ ಯಜಮಾನಮ್ ಕಿಮ್ ಇಷ್ಟಂ ತೇ ತವ ಕಾಮಮ್ ಆಗಾಯಾನಿ ? ಇತಿ । ಏಷ ಹಿ ಯಸ್ಮಾತ್ ಉದ್ಗಾತಾ ಕಾಮಾಗಾನಸ್ಯ ಉದ್ಗಾನೇನ ಕಾಮಂ ಸಂಪಾದಯಿತುಮ್ ಈಷ್ಟೇ ಸಮರ್ಥಃ ಇತ್ಯರ್ಥಃ । ಕೋಽಸೌ ? ಯ ಏವಂ ವಿದ್ವಾನ್ ಸಾಮ ಗಾಯತಿ । ದ್ವಿರುಕ್ತಿಃ ಉಪಾಸನಸಮಾಪ್ತ್ಯರ್ಥಾ॥

(ಭಾಷ್ಯಾರ್ಥ)

ಆದ್ದರಿಂದಲೇ ಹೀಗೆಂದರಿತ ಉದ್ಗಾತೃವು ಯಜಮಾನನನ್ನು 'ನಿನಗೆ ಇಷ್ಟವಾದ ಯಾವ ಕಾಮವನ್ನು ಗಾನಮಾಡಲಿ ?' ಎಂದು ಕೇಳಬೇಕು. (ಹಿ- ಯಸ್ಮಾತ್) ಏಕೆಂದರೆ ಈ ಉದ್ಗಾತೃವು ಕಾಮಾಗಾನಕ್ಕೆ ಉದ್ಗಾನದಿಂದ ಕಾಮವನ್ನು ಸಂಪಾದಿಸಿ

---

1. ಉಪಾಸ್ಯನಾದ ಪರಮೇಶ್ವರನೇ ತಾನೆಂಬ ಸಾಕ್ಷಾತ್ಕಾರವನ್ನು ಪಡೆದು ಅವನನ್ನೇ ಸೇರಿರುವ ಈ ಉಪಾಸಕನು ಎಂದರ್ಥ. ಸಾಕ್ಷಾತ್ಕಾರದಿಂದ ಉಪಾಸನೆಯ ಫಲವು ದೊರೆಯುವದೆಂಬುದಕ್ಕೆ ಸೂ. ಭಾ. ೩-೩-೫೯ (ಭಾ.ಭಾ. ೪೨೯)ನ್ನು ನೋಡಿ.
2. ಅಥ(ಇನ್ನು) ಎಂಬ ಮಾತಿಗೆ ಆದಿತ್ಯನಾದ ಬಳಿಕ ಎಂಬ ಆನಂತರ್ಯಾರ್ಥವಿಲ್ಲ, ಆದಿತ್ಯಪುರುಷನಾದಂತೆಯೇ ಎಂದರ್ಥ. ಈ ಆಧಾರದಿಂದಲೇ ಹಿಂದೆ ಭಾ. ಭಾ. ೬೯ರಲ್ಲಿ ಒಬ್ಬನೇ ಎರಡು ರೂಪವಾಗಲಾರನು ಎಂದು ಹೇಳಿದ್ದದ್ದು.

ಕೊಡುವದಕ್ಕೆ ಶಕ್ತನಾಗಿರುತ್ತಾನೆ, ಸಮರ್ಥನಾಗಿರುತ್ತಾನೆ. ಯಾರವನು ? ಯಾವನು ಹೀಗೆಂದು ಅರಿತುಕೊಂಡು ಸಾಮವನ್ನು ಗಾನಮಾಡುತ್ತಾನೋ (ಅವನು. ಸಾಮ ಗಾಯತಿ ಎಂದು) ಎರಡು ಸಲ ಹೇಳಿರುವದು (ಈ) ಉಪಾಸನೆಯು ಸಮಾಪ್ತ ವಾಯಿತೆಂದು (ತಿಳಿಸು)ವದಕ್ಕೆ.

ಒಂದನೆಯ ಅಧ್ಯಾಯ - ಎಂಟನೆಯ ಖಂಡ

(ಉದ್ಗೀಥೋಪಾಸನೆ -ಪ್ರಕಾರಾಂತರ)

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೭೩. ಅನೇಕಧಾ ಉಪಾಸ್ಯತ್ವಾತ್ ಅಕ್ಷರಸ್ಯ ಪ್ರಕಾರಾನ್ತರೇಣ ಪರೋವರೀಯಸ್ತ್ವಗುಣಫಲಮ್ ಉಪಾಸನಾನ್ತರಮ್ ಆನಿನಾಯ । ಇತಿಹಾಸಸ್ತು ಸುಖಾವಬೋಧನಾರ್ಥಃ ॥

(ಭಾಷ್ಯಾರ್ಥ)

(ಉದ್ಗೀಥಾವಯವವಾದ ಈ) ಅಕ್ಷರವನ್ನು ಅನೇಕಪ್ರಕಾರದಿಂದ ಉಪಾಸನೆ ಮಾಡತಕ್ಕದ್ದಾದ್ದರಿಂದ ಮತ್ತೊಂದು ಪ್ರಕಾರದಿಂದ, ಪರೋವರೀಯಸ್ತ್ವಗುಣವೆಂಬ ಫಲವುಳ್ಳ ಇನ್ನೊಂದು ಉಪಾಸನೆಯನ್ನು[1] (ಶ್ರುತಿಯು ಇಲ್ಲಿ) ತಂದಿರುತ್ತದೆ. (ಇಲ್ಲಿರುವ) ಕಥೆಯೊ, ಎಂದರೆ (ವಿಷಯವು) ಸುಲಭವಾಗಿ ತಿಳಿಯುವದಕ್ಕಾಗಿ (ಬಂದಿದೆ).

ಶಿಲಕಾದಿಗಳ ಸಂವಾದಕ್ಕೆ ಅವತರಣಿಕೆ

(ಉಪನಿಷತ್ತು)

ತ್ರಯೋ ಹೋದ್ಗೀಥೇ ಕುಶಲಾ ಬಭೂವುಃ ಶಿಲಕಃ ಶಾಲಾವತ್ಯ-

1. ಹಿಂದಿನ ಉಪಾಸನೆಯಂತೆ ಇಲ್ಲಿಯೂ ಪರಮಾತ್ಮದೃಷ್ಟಿಯನ್ನು ಉದ್ಗೀಥದಲ್ಲಿ ಹಾಕಿ ಉಪಾಸನೆಮಾಡುವ ಪ್ರಕಾರವನ್ನೇ ಹೇಳಿದ್ದರೂ ಪರಮಾತ್ಮನ ವಿಶೇಷಣಗಳಾದ ಗುಣಗಳು ಬೇರೆ ಬೇರೆಯಾಗಿರುವದರಿಂದ ಇವೆರಡೂ ಬೇರೆಬೇರೆಯ ಉಪಾಸನೆಗಳೇ ಎಂದು ಸೂ. ಭಾ. ೩-೩-೭, ಭಾ. ಭಾ. ೩೨೯ ರಲ್ಲಿ ತಿಳಿಸಿಕೊಟ್ಟಿದೆ.

ಶೈಲಕಿತಾಯನೋ ದಾಲ್ಭ್ಯಃ ಪ್ರವಾಹಣೋ ಜೈವಲಿರಿತಿ ತೇ ಹೋಚುರುದ್ಗೀಥೇ ವೈ ಕುಶಲಾಃ ಸ್ಮೋ ಹನ್ತೋದ್ಗೀಥೇ ಕಥಾಂ ವದಾಮ ಇತಿ ॥೧॥

೧. ಶಿಲಕ ಶಾಲಾವತ್ಯ, ಚೈಕಿತಾಯನ ದಾಲ್ಭ್ಯ, ಪ್ರವಾಹಣ ಜೈವಲಿ- ಎಂದು ಉದ್ಗೀಥದಲ್ಲಿ ಕುಶಲರಾದ ಮೂವರಿದ್ದರು. ಅವರು ಇಂತೆಂದರು ; 'ಉದ್ಗೀಥದಲ್ಲಿ ಕುಶಲರಿದೇವಷ್ಟೆ, ಉದ್ಗೀಥದಲ್ಲಿ ಕಥೆಯನ್ನು ವಾದ ಮಾಡೋಣ !'

(ಭಾಷ್ಯ)

೭೪. ತ್ರಯಃ ತ್ರಿಸಂಖ್ಯಾಕಾಃ । ಹ ಇತಿ ಐತಿಹ್ಯಾರ್ಥಃ । ಉದ್ಗೀಥೇ ಉದ್ಗೀಥ ಜ್ಞಾನಂ ಪ್ರತಿ । ಕುಶಲಾಃ ನಿಪುಣಾ ಬಭೂವುಃ । ಕಸ್ಮಿಂಶ್ಚಿತ್ ದೇಶೇ ಕಾಲೇ ಚ ನಿಮಿತ್ತೇ ವಾ ಸಮೇತಾನಾಮ್ ಇತ್ಯಭಿಪ್ರಾಯಃ । ನ ಹಿ ಸರ್ವಸ್ಮಿನ್ ಜಗತಿ ತ್ರಯಾಣಾಮೇವ ಕೌಶಲಮ್ ಉದ್ಗೀಥಾದಿವಿಜ್ಞಾನೇ । ಶ್ರೂಯನ್ತೇ ಹಿ ಉಷಸ್ತಿಜ್ಞಾನಶ್ರುತಿಕೈಕೇಯ ಪ್ರಭೃತಯಃ ಸರ್ವಜ್ಞಕಲ್ಪಾಃ । ಕೇ ತೇ ತ್ರಯ ಇತಿ ? ಆಹ । ಶಿಲಕೋ ನಾಮತಃ । ಶಲಾವತೋ೭ಪತ್ಯಂ ಶಾಲಾವತ್ಯಃ । ಚಿಕಿತಾಯನಸ್ಯ ಅಪತ್ಯಂ ಚೈಕಿತಾಯನಃ । ದಲ್ಭಗೋತ್ರೋ ದಾಲ್ಭ್ಯಃ। ದ್ವ್ಯಮುಷ್ಯಾಯಣೋ ವಾ । ಪ್ರವಾಹಣೋ ನಾಮತಃ । ಜೀವಲಸ್ಯ ಅಪತ್ಯಂ ಜೈವಲಿಃ । ಇತಿ ಏತೇ ತ್ರಯಃ । ತೇ ಹ ಊಚುರನ್ಯೋನ್ಯಮ್ । ಉದ್ಗೀಥೇ ವೈ ಕುಶಲಾಃ ನಿಪುಣಾಃ ಇತಿ ಪ್ರಸಿದ್ಧಾಃ ಸ್ಮಃ । ಅತಃ ಹನ್ತ ಯದ್ಯನುಮತಿರ್ಭವತಾಮ್ ಉದ್ಗೀಥೇ ಉದ್ಗೀಥಜ್ಞಾನನಿಮಿತ್ತಾಂ ಕಥಾಂ ವಿಚಾರಣಾಂ ಪಕ್ಷಪ್ರತಿಪಕ್ಷೋಪನ್ಯಾಸೇನ ವದಾಮಃ ವಾದಂ ಕುರ್ಮಃ ಇತ್ಯರ್ಥಃ । ತಥಾ ಚ ತದ್ವಿದ್ಯಸಂವಾದೇ ವಿಪರೀತಗ್ರಹಣನಾಶಃ, ಅಪೂರ್ವವಿಜ್ಞಾನೋಪಜನಃ, ಸಂಶಯ ನಿವೃತ್ತಿಶ್ಚ ಇತ್ಯತಃ ತದ್ವಿದ್ಯಸಂಯೋಗಃ ಕರ್ತವ್ಯಃ ಇತಿ ಚ ಇತಿಹಾಸಪ್ರಯೋಜನಮ್ । ದೃಶ್ಯತೇ ಹಿ ಶಿಲಕಾದೀನಾಮ್ ॥

(ಭಾಷ್ಯಾರ್ಥ)

ಮೂವರು, ಮೂರು ಸಂಖ್ಯೆಯವರು - ಹ ಎಂಬುದು (ಹಿಂದಿನ ಕಾಲದಲ್ಲಿ) ಹೀಗೆ ನಡೆಯಿತೆಂದು (ತಿಳಿಸು)ವದಕ್ಕಾಗಿ (ಬಂದದ್ದು)[1]- ಉದ್ಗೀಥದಲ್ಲಿ, ಉದ್ಗೀಥ

1. ಉಪನಿಷತ್ತಿನ ಅನುವಾದದಲ್ಲಿ ಈ ಹ ಎಂಬುದನ್ನು ಅನುವಾದಮಾಡದೆ ಬಿಟ್ಟು ಬಿಟ್ಟಿದೆ. ಮುಂದೆಯೂ ಹೀಗೆಯೇ ತಿಳಿಯಬೇಕು.

ಜ್ಞಾನದಲ್ಲಿ ಕುಶಲರಿದ್ದರು, ಜಾಣರಾಗಿದ್ದರು (ಎಂದರ್ಥ). ಯಾವದೋ ಒಂದು ದೇಶದಲ್ಲಿ, ಕಾಲದಲ್ಲಿ ಅಥವಾ ನಿಮಿತ್ತದಿಂದ ಒಟ್ಟುಗೂಡಿದವರಲ್ಲಿ (ಮೂವರು ಕುಶಲರಿದ್ದರು) ಎಂದು ಅಭಿಪ್ರಾಯ. ಏಕೆಂದರೆ ಇಡಿಯ ಜಗತ್ತಿನಲ್ಲಿ ಮೂವರಿಗೆ ಮಾತ್ರವೇ ಉದ್ಗೀಥಾದಿವಿಜ್ಞಾನದಲ್ಲಿ ಕೌಶಲ(ವಿತ್ತು) ಎಂದಾಗಲಾರದು. ಉಷಸ್ತಿ, ಜಾನಶ್ರುತಿ, ಕೈಕೇಯ[1] - ಮುಂತಾದ ಸರ್ವಜ್ಞಕಲ್ಪರನ್ನು ಶ್ರುತಿಯಲ್ಲಿ ಹೇಳಿದೆಯಲ್ಲವೆ ?

ಆ ಮೂವರು ಯಾರು ? ಎಂದರೆ (ಶ್ರುತಿ) ಹೇಳುತ್ತದೆ. ಶಿಲಕನೆಂಬುದು (ಅವನ) ಹೆಸರು ; ಶಲಾವತನ ಮಗನು ಶಾಲಾವತ್ಯನು. ಚಿಕಿತಾಯನನ ಮಗನು ಚೈಕಿತಾಯನನು ; ದಲ್ಭಗೋತ್ರದವನಾದ್ದರಿಂದ ದಾಲ್ಭ್ಯನು. ಅಥವಾ (ಈ ಚೈಕಿತಾಯನದಾಲ್ಭ್ಯನು) ದ್ವ್ಯಮುಷ್ಯಾಯಣನು[2] (ಎಂದೂ ವ್ಯಾಖ್ಯಾನ ಮಾಡಬಹುದು). ಪ್ರವಾಹಣ(ನೆಂಬುದು ಮೂರನೆಯವನ) ಹೆಸರು ; ಜೀವಲನ ಮಗನಾದ್ದರಿಂದ (ಅವನು) ಜೈವಲನು. ಹೀಗೆ ಮೂವರು (ಕುಶಲರಿದ್ದರು).

ಅವರು ಒಬ್ಬರೊಡನೊಬ್ಬರು ಹೀಗೆಂದುಕೊಂಡರು : ''ಉದ್ಗೀಥದಲ್ಲಿ ಕುಶಲರೆಂದು (ವೈ=ಪ್ರಸಿದ್ಧಾಃ) ಪ್ರಸಿದ್ಧರಾಗಿರುವೆವಷ್ಟೆ, ಆದ್ದರಿಂದ (ಹನ್ತ-ಯದ್ಯನುಮತಿರ್ಭವತಾಮ್) ತಾವು ಒಪ್ಪುವದಾದರೆ, ಉದ್ಗೀಥದಲ್ಲಿ ಎಂದರೆ ಉದ್ಗೀಥಜ್ಞಾನನಿಮಿತ್ತವಾಗಿ ಕಥೆಯನ್ನು[3] ವಿಚಾರವನ್ನು ಪಕ್ಷಪ್ರತಿಪಕ್ಷಗಳನ್ನು ಹೇಳುವ ಮೂಲಕ (ಚರ್ಚೆಯನ್ನು) ಹೇಳಿ ವಾದಮಾಡೋಣ !'' ಹೀಗಾದರೆ ತದ್ವಿದ್ಯರೊಡನೆ ಸಂವಾದಮಾಡುವದರಿಂದ ತಪ್ಪುತಿಳಿವಳಿಕೆಯ ನಾಶವೂ, ಹೊಸತಿಳಿವಳಿಕೆಯುಂಟಾಗುವದೂ ಸಂಶಯವು ತೊಲಗುವದೂ (ಆಗುತ್ತದೆ). ಆದ್ದರಿಂದ ತದ್ವಿದ್ಯರೊಡನೆ

ಉಷಸ್ತಿಯ ಕಥೆಯು ಮುಂದಿನ ಖಂಡದಲ್ಲಿ ಬರುವದು, ಜಾನಶ್ರುತಿಯ ಕಥೆಯು ಸಂವರ್ಗವಿದ್ಯೆಯ ವಿಷಯದಲ್ಲಿ ೪-೧ ರಲ್ಲಿ ಬಂದಿದೆ ; ಕೈಕೇಯನ ಕಥೆಯು ವೈಶ್ವಾನರ ವಿದ್ಯೆಯ ವಿಷಯದಲ್ಲಿ ೫-೧೧ ರಲ್ಲಿ ಬಂದಿದೆ. ಇವರೆಲ್ಲರೂ ಬೇರೆ ಬೇರೆಯ ವಿದ್ಯೆಯಲ್ಲಿ ನಿಪುಣರೇ ; ಆದ್ದರಿಂದ ಪ್ರಕೃತದಲ್ಲಿ ಹೇಳಿರುವದು ಒಂದಾನೊಂದು ಸಂದರ್ಭಕ್ಕೆ ಮಾತ್ರ ಸೇರಿದ್ದು ಎನ್ನಬೇಕು.

2. ಒಬ್ಬನ ಮಗನು, ಇನ್ನೊಬ್ಬನಿಗೆ ದತ್ತು-ಹೀಗೆ ಎರಡು ಗೋತ್ರಕ್ಕೆ ಸೇರಿದವನು.

3. ಚರ್ಚೆಯನ್ನು. ವಾದ, ಜಲ್ಪ, ವಿತಂಡಾ - ಇವೆಲ್ಲ ಕಥೆಗಳೆಂದು, ಚರ್ಚಾಭೇದಗಳೆಂದು, ನೈಯಾಯಿಕರ ಸಮಯ.

ಸೇರುವದನ್ನು (ಸಾಧನ) ಮಾಡಬೇಕು.[1] ಎಂಬಿದೂ ಕಥೆಯ ಪ್ರಯೋಜನವು. ಶಿಲಕಾದಿಗಳು (ಹೀಗೆ) ಸೇರಿದರು[2] ಎಂದು ಇಲ್ಲಿ ಕಂಡುಬರುತ್ತದೆಯಷ್ಟೆ ?

(ಉಪನಿಷತ್ತು)

ತಥೇತಿ ಹ ಸಮುಪವಿವಿಶುಃ ಸ ಹ ಪ್ರವಾಹಣೋ ಜೈವಲಿರುವಾಚ ಭಗವನ್ತಾವಗ್ರೇ ವದತಾಂ ಬ್ರಾಹ್ಮಣಯೋರ್ವದತೋರ್ವಾಚಗ್ಂ ಶ್ರೋಷ್ಯಾಮೀತಿ ॥೨॥

೨. ಹಾಗೇ ಆಗಲೆಂದು ಅವರು ಕುಳಿತುಕೊಂಡರು. ಆ ಪ್ರವಾಹಣ ಜೈವಲಿಯು ಇಂತೆಂದನು; 'ಭಗವಂತರಾದ (ತಾವಿಬ್ಬರೇ) ಮೊದಲು ವಾದಮಾಡಿರಿ ; ಬ್ರಾಹ್ಮಣರು ವಾಕ್ಯನ್ನು ಹೇಳುತ್ತಿರುವಲ್ಲಿ ಕೇಳುತ್ತಿರುವೆನು.'

(ಭಾಷ್ಯ)

೭೫. ತಥೇತ್ಯುಕ್ತ್ವಾ ತೇ ಸಮುಪವಿವಿಶುಃ ಹ ಉಪವಿಷ್ಟವನ್ತಃ ಕಿಲ । ತತ್ರ ರಾಜ್ಞಃ ಪ್ರಾಗಲ್ಭ್ಯೋಪಪತ್ತೇಃ ಸ ಹ ಪ್ರವಾಹಣೋ ಜೈವಲಿರುವಾಚ ಇತರೌ । ಭಗವನ್ತೌ ಪೂಜಾವನ್ತೌ ಅಗ್ರೇ ಪೂರ್ವಂ ವದತಾಮ್ । ಬ್ರಾಹ್ಮಣಯೋಃ ಇತಿ ಲಿಙ್ಗಾತ್ ರಾಜಾऽಸೌ । ಯುವಯೋರ್ಬ್ರಾಹ್ಮಣಯೋಃ ವದತೋಃ ವಾಚಂ ಶ್ರೋಷ್ಯಾಮಿ । ಅರ್ಥರಹಿತಾಮ್ ಇತ್ಯಪರೇ । ವಾಚಮ್ ಇತಿ ವಿಶೇಷಣಾತ್ ॥

(ಭಾಷ್ಯಾರ್ಥ)

ಹಾಗೇ ಆಗಲೆಂದು ಅವರು ಕುಳಿತುಕೊಂಡರಂತೆ, ಕುಳಿತುಕೊಂಡವರಾದ

1. ಸಂವಾದವೆಂದರೆ ಸಮಯಬಂಧದಿಂದ ವಾದವನ್ನು ಮಾಡುವದು. ನ್ಯಾ.ಸೂ. ೪-೨-೪೫ರ ಸೂಚನೆಯಿದು. ನ್ಯಾಯಭಾಷ್ಯದಲ್ಲಿ ಸಂವಾದದಿಂದ ವ್ರಜ್ಞಾಪರಿಪಾಕ ವಾಗುತ್ತದೆ ; ಎಂದರೆ ಸಂಶಯವನ್ನು ಕತ್ತರಿಸಿಕೊಳ್ಳುವದು, ತಿಳಿಯದಿದ್ದದ್ದನ್ನು ತಿಳಿದು ಕೊಳ್ಳುವದು, ನಿಶ್ಚಿತವಾದದ್ದನ್ನು ಒಪ್ಪುವದು- ಎಂದು ಬರೆದಿದೆ. ಬ್ಯ. ಭಾ. ೩-೧-೧ (ಭಾ. ಭಾ. ೨)ರಲ್ಲಿಯೂ ಇದನ್ನು ಸೂಚಿಸಿದೆ.

2. ಶಿಲಕಾದಿಗಳು ಸ್ವತಃ ಕುಶಲರಾದರೂ ತದ್ವಿದ್ಯರೊಡನೆ ಜ್ಞಾನಾಭಿವೃದ್ಧಿಗಾಗಿ ಸೇರಿ ಚರ್ಚೆ ಮಾಡಿದರು ಎಂದು ಇಲ್ಲಿ ಹೇಳಿರುವದು ಕಂಡುಬರುತ್ತದೆ. ಆದ್ದರಿಂದ ಕಥೆಯನ್ನು ಹೇಳಿರುವದು ಸುಲಭವಾಗಿ ತಿಳಿಯುವದಕ್ಕೆ ಮಾತ್ರವೇ ಅಲ್ಲ, ಈ ಪ್ರಯೋಜನವನ್ನು ಸೂಚಿಸುವದಕ್ಕೂ ಅದು ಬಂದಿದೆ.

ರಂತೆ. ಅವರಲ್ಲಿ ರಾಜನಿಗೆ ಪ್ರಾಗಲ್ಭ್ಯವು ಯುಕ್ತವಾದ್ದರಿಂದ[1] ಆ ಪ್ರವಾಹಣ ಜೈವಲಿಯು ಮಿಕ್ಕಿಬ್ಬರನ್ನು ಕುರಿತು ಇಂತೆಂದನು ; ಭಗವಂತರಾದ ಪೂಜ್ಯರಾದ ತಾವು ಮೊದಲು ಮುಂಚಿತವಾಗಿ ವಾದಮಾಡಿರಿ. 'ಬ್ರಾಹ್ಮಣರಾದ (ತಾವು)' ಎಂದು (ಹೇಳಿರುವದರ) ಸಾಮರ್ಥ್ಯದಿಂದ ಇವನು ರಾಜನು - (ಎಂದು ನಿಶ್ಚಯಿಸಬಹುದು). ಬ್ರಾಹ್ಮಣರಾದ ತಾವು ವಾದಮಾಡುತ್ತಿರುವಲ್ಲಿ ನಿಮ್ಮ ಮಾತನ್ನು ಕೇಳುತ್ತಿರುವೆನು. ಅರ್ಥರಹಿತವಾದ (ಮಾತನ್ನು) ಕೇಳುತ್ತಿರುವೆನು - ಎಂದು ಕೆಲವರು (ವ್ಯಾಖ್ಯಾನಮಾಡಿರುತ್ತಾರೆ). 'ವಾಚಮ್' (ಮಾತನ್ನು) ಎಂಬ ವಿಶೇಷಣ-ವಿರುವದರಿಂದ[2] (ಅವರು ಈ ಅರ್ಥವನ್ನು ತೆಗೆದಿರುತ್ತಾರೆ).

ಶಿಲಕನ ಪ್ರಶ್ನೆ : ಸಾಮಕ್ಕೆ ಗತಿ ಯಾವದು ?

(ಉಪನಿಷತ್ತು)

ಸ ಹ ಶಿಲಕಃ ಶಾಲಾವತ್ಯಶ್ಚೈಕಿತಾಯನಂ ದಾಲ್ಭ್ಯಮುವಾಚ ಹನ್ತ ತ್ವಾ ಪೃಚ್ಛಾನೀತಿ ಪೃಚ್ಛೇತಿ ಹೋವಾಚ ॥೩॥

೩. ಆ ಶಿಲಕಶಾಲಾವತ್ಯನು ಚೈಕಿತಾಯನದಾಲ್ಭ್ಯನನ್ನು (ಹೀಗೆಂದು) ಕೇಳಿದನು : 'ನಿನ್ನನ್ನು (ನಾನು) ಕೇಳಲೆ ?' (ಅವನು) 'ಕೇಳು !' ಎಂದನು.

ಶಿಲಕನು ಪ್ರಶ್ನೆಮಾಡುವದಕ್ಕೆ ಅನುಮತಿಪಡೆದದ್ದು

(ಭಾಷ್ಯ)

೩ಓ. ಉಕ್ತಯೋಃ ಸ ಹ ಶಿಲಕಃ ಶಾಲಾವತ್ಯಃ ಚೈಕಿತಾಯನಂ ದಾಲ್ಭ್ಯಮ್ ಉವಾಚ । ಹನ್ತ ಯದಿ ಅನುಮಂಸ್ಯಸೇ ತ್ವಾ ತ್ವಾಂ ಪೃಚ್ಛಾನಿ ಇತ್ಯುಕ್ತಃ ಇತರಃ ಪೃಚ್ಛ ಇತಿ ಹೋವಾಚ ॥

(ಭಾಷ್ಯಾರ್ಥ)

(ಹೀಗೆಂದು ರಾಜನು) ಹೇಳಲಾಗಿ (ಅವರೊಳಗೆ) ಶಿಲಕಶಾಲಾವತ್ಯನು ಚೇಕಿತಾಯನದಾಲ್ಭ್ಯನನ್ನು ಕುರಿತು (ಹೀಗೆಂದು) ಕೇಳಿದನು. (ಹನ್ತ=) ನೀನು ಒಪ್ಪುವ

---

1. ಜೈವಲಿಯು ಹೇಳಿದಂತೆ ಮಿಕ್ಕ ಇಬ್ಬರೂ ಏಕೆ ಕೇಳಿದರು ?- ಎಂಬ ಶಂಕೆಗೆ ಸಮಾಧಾನವಿದು.

2. ಇಲ್ಲದಿದ್ದರೆ "ವದತೋಃ" ಎಂದಿಷ್ಟೇ ಇದ್ದರೂ ಸಾಕಾಗುತ್ತಿತ್ತು ಎಂದು ಅವರ ಭಾವ.

ದಾದರೆ, (ತ್ವಾ = ತ್ವಾಮ್) ನಿನ್ನನ್ನು ಕೇಳುವೆನು. ಹೀಗೆನ್ನಲು (ಅವನು) ಕೇಳು ಎಂದನು.

ಪೂ. ಪ. ಉದ್ಗೀಥಕ್ಕೆ ಕೊನೆಯ ಆಶ್ರಯವು ಸ್ವರ್ಗ

(ಉಪನಿಷತ್ತು)

ಕಾ ಸಾಮ್ನೋ ಗತಿರಿತಿ ಸ್ವರ ಇತಿ ಹೋವಾಚ ಸ್ವರಸ್ಯ ಕಾ ಗತಿರಿತಿ ಪ್ರಾಣ ಇತಿ ಹೋವಾಚ ಪ್ರಾಣಸ್ಯ ಕಾ ಗತಿರಿತ್ಯನ್ನಮಿತಿ ಹೋವಾಚಾನ್ನಸ್ಯ ಕಾ ಗತಿರಿತ್ಯಾಪ ಇತಿ ಹೋವಾಚ ॥೪॥

ಅಪಾಂ ಕಾ ಗತಿರಿತ್ಯಸೌ ಲೋಕ ಇತಿ ಹೋವಾಚಾಮುಷ್ಯ ಲೋಕಸ್ಯ ಕಾ ಗತಿರಿತಿ ನ ಸ್ವರ್ಗಂ ಲೋಕಮತಿನಯೇದಿತಿ ಹೋವಾಚ ಸ್ವರ್ಗಂ ವಯಂ ಲೋಕಗ್ಂ ಸಾಮಾಭಿಸಂಸ್ಥಾಪಯಾಮಃ ಸ್ವರ್ಗಸಗ್ಂಸ್ತಾವಗ್ಂ ಹಿ ಸಾಮೇತಿ ॥೫॥

೪. 'ಸಾಮಕ್ಕೆ ಗತಿ ಯಾವದು ?' ಸ್ವರವು ಎಂದನು. 'ಸ್ವರಕ್ಕೆ ಗತಿ ಯಾವದು ?' ಪ್ರಾಣವು ಎಂದನು. 'ಪ್ರಾಣಕ್ಕೆ ಗತಿ ಯಾವದು ?' ಅನ್ನವು ಎಂದನು. 'ಅನ್ನಕ್ಕೆ ಗತಿ ಯಾವದು ?' ಅಪ್ಪು ಎಂದನು.

೫. 'ಅಪ್ಪಿಗೆ ಗತಿ ಯಾವದು ?' ಆ ಲೋಕವು ಎಂದನು. ' ಆ ಲೋಕಕ್ಕೆ ಗತಿ ಯಾವದು ?' (ಎಂದು ಕೇಳಲು) 'ಸ್ವರ್ಗವನ್ನು ದಾಟಿಸಲಾಗದು ; ಸ್ವರ್ಗಲೋಕವನ್ನೇ ನಾವು ಸಾಮವೆಂದು ನಿಲ್ಲಿಸುತ್ತೇವೆ. ಸ್ವರ್ಗಸಂಸ್ತಾವವಲ್ಲವೆ, ಸಾಮವು ?' ಎಂದನು.

ಉದ್ಗೀಥಕ್ಕೆ ಕೊನೆಯ ಗತಿ ಯಾವದೆಂಬುದಕ್ಕೆ ಸಂವಾದ

(ಭಾಷ್ಯ)

೭೭. ಲಬ್ಧಾನುಮತಿರಾಹ । ಕಾ ಸಾಮ್ನಃ ಪ್ರಕೃತತ್ವಾತ್ ಉದ್ಗೀಥಸ್ಯ । ಉದ್ಗೀಥೋ ಹಿ ಅತ್ರ ಉಪಾಸ್ಯತ್ವೇನ ಪ್ರಕೃತಃ । ಪರೋವರೀಯಾಂಸಮ್ ಉದ್ಗೀಥಮ್ ಇತಿ ಚ ವಕ್ಷ್ಯತಿ । ಗತಿಃ ಆಶ್ರಯಃ । ಪರಾಯಣಮ್ ಇತ್ಯೇತತ್ । ಏವಂ ಪೃಷ್ಟೋ ದಾಲ್ಭ್ಯ ಉವಾಚ ಸ್ವರ ಇತಿ । ಸ್ವರಾತ್ಮಕತ್ವಾತ್ ಸಾಮ್ನಃ । ಯೋ ಯದಾತ್ಮಕಃ ಸ ತದ್ಗತಿಸ್ತದಾಶ್ರಯಶ್ಚ ಭವತೀತಿ ಯುಕ್ತಮ್ । ಮೃದಾಶ್ರಯ ಇವ ಘಟಾದಿಃ । ಸ್ವರಸ್ಯ ಕಾ

ಗತಿರಿತಿ ? ಪ್ರಾಣ ಇತಿ ಹೋವಾಚ । ಪ್ರಾಣನಿಷ್ಪಾದ್ಯೋ ಹಿ ಸ್ವರಃ । ತಸ್ಮಾತ್ ಸ್ವರಸ್ಯ ಪ್ರಾಣೋ ಗತಿಃ । ಪ್ರಾಣಸ್ಯ ಕಾ ಗತಿರಿತಿ ? ಅನ್ನಮ್ ಇತಿ ಹೋವಾಚ । ಅನ್ನಾವಷ್ಟಮ್ಭೋ ಹಿ ಪ್ರಾಣಃ । "ಶುಷ್ಯತಿ ವೈ ಪ್ರಾಣ ಋತೇऽನ್ನಾತ್" (ಬೃ ೫-೧೨-೧) ಇತಿ ಶ್ರುತೇಃ । "ಅನ್ನಂ ದಾಮ" (ಬೃ ೨-೨-೧) ಇತಿ ಚ । ಅನ್ನಸ್ಯ ಕಾ ಗತಿರಿತಿ ? ಆಪ ಇತಿ ಹೋವಾಚ । ಆಪ್ಸಂಭವತ್ವಾತ್ ಅನ್ನಸ್ಯ ॥

(ಭಾಷ್ಯಾರ್ಥ)

(ಹೀಗೆ) ಅನುಮತಿಯನ್ನು ಪಡೆದು (ಶಿಲಕನು) ಕೇಳುತ್ತಾನೆ. ಸಾಮಕ್ಕೆ ಯಾವದು (ಗತಿ) ? ಎಂಬಲ್ಲಿ ಸಾಮಕ್ಕೆ (ಎಂದರೆ) ಉದ್ಗೀಥಕ್ಕೆ (ಎಂದರ್ಥ), ಏಕೆಂದರೆ (ಉದ್ಗೀಥವೇ) ಪ್ರಕೃತವಾಗಿರುತ್ತದೆ. ಉದ್ಗೀಥವಲ್ಲವೆ, ಇಲ್ಲಿ ಉಪಾಸ್ಯವಾಗಿ ಪ್ರಕೃತವಾಗಿರುವದು ? "ಪರೋವರೀಯವಾದ ಉದ್ಗೀಥವನ್ನು" (ಯಾವನು ಉಪಾಸನೆಮಾಡುತ್ತಾನೋ....) ಎಂದು ಮುಂದೆ (೧-೯-೨) ಹೇಳಿಯೂ ಇದೆ. ಗತಿ ಎಂದರೆ ಆಶ್ರಯವು ; ಪರಾಯಣವು (ಯಾವದು ?) ಎಂದರ್ಥ. ಹೀಗೆಂದು ಕೇಳಲು ದಾಲ್ಭ್ಯನು 'ಸ್ವರವು' (ಗತಿಯು) ಎಂದನು. ಏಕೆಂದರೆ ಸಾಮವು ಸ್ವರಾತ್ಮಕವಾಗಿರುತ್ತದೆ.[1] ಯಾವದು ಯಾವ ಸ್ವರೂಪದ್ದಾಗಿರುವದೋ ಅದು ಆ ಗತಿಯುಳ್ಳದ್ದು - ಘಟಾದಿಯು ಮಣ್ಣೆಂಬ ಆಶ್ರಯವುಳ್ಳದ್ದಾಗಿರುವಂತೆ- ಆ ಆಶ್ರಯವುಳ್ಳದ್ದು ಆಗಿರುತ್ತದೆ ಎಂಬುದು ಯುಕ್ತವು.

'ಸ್ವರಕ್ಕೆ ಗತಿ ಯಾವದು ?' ಎಂದು (ಕೇಳಲು) ಪ್ರಾಣವು (ಗತಿಯು) ಎಂದನು. ಪ್ರಾಣದಿಂದ ಉಂಟಾಗತಕ್ಕದ್ದಲ್ಲವೆ, ಸ್ವರವು ? ಆದ್ದರಿಂದ ಸ್ವರಕ್ಕೆ ಪ್ರಾಣವೇ ಗತಿ. 'ಪ್ರಾಣಕ್ಕೆ ಗತಿ ಯಾವದು ?' ಎಂದು (ಕೇಳಲು) ಅನ್ನವು (ಗತಿ) ಎಂದನು. ಪ್ರಾಣವು ಅನ್ನವನ್ನು ಆಶ್ರಯಿಸಿರುತ್ತದೆಯಲ್ಲವೆ ? "ಅನ್ನವಿಲ್ಲದಿದ್ದರೆ ಪ್ರಾಣವು ಒಣಗಿಹೋಗುತ್ತದೆಯಷ್ಟೆ ?" (ಬೃ. ೫-೧೨-೧) ಎಂದೂ "ಅನ್ನವೇ ಹಗ್ಗವು" (ಬೃ. ೨-೨-೧) ಎಂದೂ ಶ್ರುತಿಯಿರುವದರಿಂದ (ಇದು ಸಿದ್ಧವಾಗುತ್ತದೆ). "ಅನ್ನಕ್ಕೆ ಗತಿ ಯಾವದು ?" ಎಂದು (ಕೇಳಲು) ಆಪ್ಪು ಎಂದನು ; ಏಕೆಂದರೆ ಅನ್ನವು ಆಪ್ಪಿನಿಂದಾಗಿರುತ್ತದೆ.[2]

---

1. ಧ್ವನ್ಯಾತ್ಮಕವಾಗಿರುತ್ತದೆ. ಸರಿಗಮಪದನಿ ಎಂಬ ಪ್ರಸಿದ್ಧಸ್ವರಗಳನ್ನು ಸಾಮವೇದಿಗಳು "ಯಮ"ಗಳೆಂದು ಕರೆಯುತ್ತಾರೆ ; ಅವಕ್ಕೆ ಕ್ರಮವಾಗಿ ಕ್ರುಷ್ಟ, ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಮನ್ದ್ರ, ಅತಿಸ್ವಾರ್ಯ- ಎಂದು ಹೆಸರಿಟ್ಟುಕೊಂಡಿದಾರೆ.

2. ೬-೨-೪ ನ್ನು ನೋಡಿ.

ದಾಲ್ಭ್ಯನ ಸಿದ್ಧಾಂತ : ಸ್ವರ್ಗವೇ ಉದ್ಗೀಥಕ್ಕೆ ಗತಿ

(ಭಾಷ್ಯ)

೭೮. ಅಪಾಂ ಕಾ ಗತಿರಿತಿ ? ಅಸೌ ಲೋಕ ಇತಿ ಹೋವಾಚ । ಅಮುಷ್ಮಾದ್ ಹಿ ಲೋಕಾದ್ ವೃಷ್ಟಿಃ ಸಂಭವತಿ । ಅಮುಷ್ಯಲೋಕಸ್ಯ ಕಾ ಗತಿರಿತಿ ಪೃಷ್ಟಃ ದಾಲ್ಭ್ಯ ಉವಾಚ । ಸ್ವರ್ಗಮ್ ಅಮುಂ ಲೋಕಮ್ ಅತೀತ್ಯ ಆಶ್ರಯಾನ್ತರಂ ಸಾಮ ನ ನಯೇತ್ ಕಶ್ಚಿತ್ ಇತಿ ಹ ಉವಾಚ ಆಹ । ಅತಃ ವಯಮಪಿ ಸ್ವರ್ಗಂ ಲೋಕಂ ಸಾಮ ಅಭಿಸಂಸ್ಥಾಪಯಾಮಃ । ಸ್ವರ್ಗಲೋಕಪ್ರತಿಷ್ಠಂ ಸಾಮ ಜಾನೀಮಃ ಇತ್ಯರ್ಥಃ । ಸ್ವರ್ಗಸಂಸ್ತಾವಂ ಸ್ವರ್ಗತ್ವೇನ ಸಂಸ್ತವನಂ ಸಂಸ್ತಾವಃ ಯಸ್ಯ ತತ್ ಸಾಮ ಸ್ವರ್ಗ ಸಂಸ್ತಾವಮ್ ಹಿ ಯಸ್ಮಾತ್ । ''ಸ್ವರ್ಗೋ ವೈ ಲೋಕಃ ಸಾಮವೇದಃ'' (?) ಇತಿ ಹಿ ಶ್ರುತಿಃ[1] ॥

(ಭಾಷ್ಯಾರ್ಥ)

'ಅಪ್ಪಿಗೆ ಗತಿ ಯಾವದು ?' ಎಂದು (ಕೇಳಲು) ಆ ಲೋಕವು ಎಂದನು. ಆ ಲೋಕದಿಂದ ಮಳೆಯಾಗುತ್ತದೆಯಲ್ಲವೆ ? (ಆದ್ದರಿಂದ ಅದೇ ಗತಿ). 'ಆ ಲೋಕಕ್ಕೆ ಗತಿ ಯಾವದು ?' ಎಂದು ಕೇಳಲು ದಾಲ್ಭ್ಯನಿಂತೆಂದನು ; ಸ್ವರ್ಗವೆಂಬ ಆ ಲೋಕವನ್ನು ದಾಟಿ ಸಾಮವನ್ನು ಮತ್ತೊಂದು ಆಶ್ರಯಕ್ಕೆ ಯಾವನೂ ಒಯ್ಯಲಾರನು. ಆದ್ದರಿಂದ ನಾವೂ ಸ್ವರ್ಗಲೋಕವನ್ನೇ ಸಾಮವೆಂದು ನಿಲ್ಲಿಸುವೆವು ; ಸಾಮವು ಸ್ವರ್ಗಲೋಕದಲ್ಲಿಯೇ ನಿಂತಿದೆ ಎಂದು ತಿಳಿಯುತ್ತೇವೆ ಎಂದರ್ಥ. ಸಾಮವು ಸ್ವರ್ಗಸಂಸ್ತಾವವಲ್ಲವೆ ? ಸ್ವರ್ಗವೆಂದು ಸಂಸ್ತುತಿಮಾಡುವದೆಂಬ ಸಂಸ್ತಾವವು ಯಾವದಕ್ಕಿದೆಯೋ ಆ ಸಾಮವು ಸ್ವರ್ಗಸಂಸ್ತಾವವು. (ಹಿ=ಯಸ್ಮಾತ್) ''ಸ್ವರ್ಗಲೋಕವೇ ಸಾಮವೇದವಷ್ಟೆ ?'' (?) ಎಂದು ಶ್ರುತಿ.

ಪೂ. ಪ. ಉದ್ಗೀಥಕ್ಕೆ ಕೊನೆಯ ಆಶ್ರಯವು ಪೃಥಿವಿ

(ಉಪನಿಷತ್ತು)

ತಗ್ಂ ಹ ಶಿಲಕಃ ಶಾಲಾವತ್ಯಶ್ಚ್ಚಿಕಿತಾಯನಂ ದಾಲ್ಭ್ಯಮುವಾಚಾಪ್ರತಿಷ್ಠಿತಂ ವೈ ಕಿಲ ತೇ ದಾಲ್ಭ್ಯ ಸಾಮ

1. ಇತಿ ಶ್ರುತಿಃ ಎಂಬುದನ್ನು ಬಿಟ್ಟು ಈ ಪಾಠವನ್ನಿಟ್ಟುಕೊಂಡಿದೆ ; ಇತಿ ಶ್ರುತೇಃ ಎಂಬ ಪಾಠವೂ ಆಗಬಹುದು.

ಯಸ್ತ್ವೇತರ್ಹಿ ಬ್ರೂಯಾನ್ಮೂರ್ಧಾ ತೇ ವಿಪತಿಷ್ಯತೀತಿ ಮೂರ್ಧಾ ತೇ ವಿಪತೇದಿತಿ ॥೬॥

೬. ಶಿಲಕ ಶಾಲಾವತ್ಯನು ಆ ಚೈಕಿತಾಯನ ದಾಲ್ಭ್ಯನನ್ನು ಕುರಿತು ಇಂತೆಂದನು : 'ದಾಲ್ಭ್ಯನೆ, ನಿನ್ನ ಸಾಮವು ಪ್ರತಿಷ್ಠಿತವಲ್ಲ. ಯಾವನಾದರೂ ಈಗ ನಿನ್ನ ತಲೆಯು ಬೀಳಲಿ !' ಎಂದರೆ, ನಿನ್ನ ತಲೆಯು ಬಿದ್ದು ಹೋದೀತು!'

ದಾಲ್ಭ್ಯಮತದ ನಿಂದೆ

(ಭಾಷ್ಯ)

೭೯. ತಮ್ ಇತರಃ ಶಿಲಕಃ ಶಾಲಾವತ್ಯಃ ಚೈಕಿತಾಯನಂ ದಾಲ್ಭ್ಯಮ್ ಉವಾಚ । ಅಪ್ರತಿಷ್ಠಿತಮ್ ಅಸಂಸ್ಥಿತಮ್ । ಪರೋವರೀಯಸ್ತ್ವೇನ ಅಸಮಾಪ್ತಗತಿ ಸಾಮ ಇತ್ಯರ್ಥಃ । ವೈ ಇತಿ ಆಗಮಂ ಸ್ಮಾರಯತಿ ಕಿಲ ಇತಿ ಚ । ದಾಲ್ಭ್ಯ ತೇ ತವ ಸಾಮ। ಯಸ್ತು ಅಸಹಿಷ್ಣುಃ ಸಾಮವಿತ್ ಏತರ್ಹಿ ಏತಸ್ಮಿನ್ ಕಾಲೇ ಬ್ರೂಯಾತ್ ಕಶ್ಚಿತ್ ವಿಪರೀತವಿಜ್ಞಾನಮ್ ಅಪ್ರತಿಷ್ಠಿತಂ ಸಾಮ ಪ್ರತಿಷ್ಠಿತಮಿತ್ಯೇವಂವಾದಾಪ-ರಾಧಿನೋ ಮೂರ್ಧಾ ಶಿರಃ ತೇ ವಿಪತಿಷ್ಯತಿ ವಿಸ್ಪಷ್ಟಂ ಪತಿಷ್ಯತಿ ಇತಿ । ಏವಮುಕ್ತಸ್ಯ ಅಪರಾಧಿನಃ ತಥೈವ ತದ್ ವಿಪತೇತ್ ನ ಸಂಶಯಃ । ನ ತ್ವಹಂ ಬ್ರವೀಮಿ ಇತ್ಯಭಿಪ್ರಾಯಃ । ನನು ಮೂರ್ಧಪಾತಾರ್ಹಂ ಚೇತ್ ಅಪರಾಧಂ ಕೃತವಾನ್ ಅತಃ ಪರೇಣಾನುಕ್ತಸ್ಯಾಪಿ ಪತೇನ್ಮೂರ್ಧಾ । ನ ಚೇದಪರಾಧೀ ಉಕ್ತಸ್ಯಾಪಿ ನೈವ ಪತತಿ । ಅನ್ಯಥಾ ಅಕೃತಾಭ್ಯಾಗಮಃ ಕೃತನಾಶಶ್ಚ ಸ್ಯಾತಾಮ್ । ನೈಷ ದೋಷಃ । ಕೃತಸ್ಯ ಕರ್ಮಣಃ ಶುಭಾಶುಭಸ್ಯ ಫಲಪ್ರಾಪ್ತೇಃ ದೇಶಕಾಲನಿಮಿತ್ತಾಪೇಕ್ಷತ್ವಾತ್ । ತತ್ರೈವಂ ಸತಿ ಮೂರ್ಧಪಾತನಿಮಿತ್ತಸ್ಯಾಪಿ ಅಜ್ಞಾನಸ್ಯ ಪರಾಭಿವ್ಯಾಹಾರ-ನಿಮಿತ್ತಾಪೇಕ್ಷತ್ವಮ್ ಇತಿ ॥

(ಭಾಷ್ಯಾರ್ಥ)

(೮) ಇನ್ನೊಬ್ಬನಾದ ಶಿಲಕಶಾಲಾವತ್ಯನು ಆ ಚೈಕಿತಾಯನದಾಲ್ಭ್ಯನನ್ನು ಕುರಿತು ಇಂತೆಂದನು : ಅಪ್ರತಿಷ್ಠಿತವು, ನಿಲುಗಡೆಯಿಲ್ಲದ್ದು ; (ನಿನ್ನ) ಸಾಮವು ಪರೋವರೀಯಸ್ತ್ವವೆಂದು ಕೊನೆಗಾಣದಿರುವ ಗತಿಯುಳ್ಳದ್ದು ಎಂದರ್ಥ. ವೈ ಎಂದೂ ಕಿಲ (ಅಲ್ಲವೆ ?) ಎಂದು ಆಗಮವನ್ನು ನೆನಪಿಗೆ ತಂದಿರುತ್ತಾನೆ. ದಾಲ್ಭ್ಯನೆ, (ತೇ=ತವ) ನಿನ್ನ ಸಾಮವು (ಅಪ್ರತಿಷ್ಠಿತವಾದದ್ದಲ್ಲವೆ ?)

ಸಾಮವನ್ನು ಬಲ್ಲವನು ಯಾವನು (ಇದನ್ನು) ತಡೆದುಕೊಳ್ಳಲಾರದೆ, 'ಈಗ ಈ ಕಾಲದಲ್ಲಿ ವಿಪರೀತವಿಜ್ಞಾನವುಳ್ಳ, ಅಪ್ರತಿಷ್ಠಿತಸಾಮವನ್ನು ಪ್ರತಿಷ್ಠಿತವೆಂಬ ಈ ವಾದದ ಅಪರಾಧವುಳ್ಳ ನಿನ್ನ ಮೂರ್ಧ್ನವು ತಲೆಯು, ಬೀಳಲಿ, ಬಿದ್ದುಬಿಡಲಿ ! ಎಂದರೆ, ಹೀಗೆ ಹೇಳಿಸಿಕೊಂಡ ಅಪರಾಧಿಯಾದ (ನಿನಗೆ) ಹಾಗೆಯೇ ಆ (ನಿನ್ನ ತಲೆಯು) ಬಿದ್ದುಬಿಟ್ಟೀತು, ಸಂಶಯವಿಲ್ಲ ! ಆದರೆ ನಾನು ಹಾಗೆನ್ನುವದಿಲ್ಲ ಎಂದು ಅಭಿಪ್ರಾಯ.

(ಆಕ್ಷೇಪ) :- ತಲೆಬೀಳುವ ತಪ್ಪನ್ನು ಮಾಡಿರುವನಾದರೆ, ಆಗ ಮತ್ತೊಬ್ಬನು ಹೇಳದೆ ಇದ್ದರೂ ತಲೆ ಬೀಳುವದು ; ತಪ್ಪುಮಾಡಿಲ್ಲವಾದರೆ, (ಹಾಗೆಂದು) ಹೇಳಿದರೂ ಬೀಳಲೇ ಆರದು. ಹೀಗಲ್ಲದಿದ್ದರೆ ಮಾಡದೆ ಇದ್ದದ್ದರ(ಫಲವು) ಬರುವದೂ ಮಾಡಿದ್ದರ ನಾಶವೂ ಆಗಬೇಕಾಗುವದಲ್ಲ ![1]

(ಪರಿಹಾರ) :- ಈ ದೋಷವಿಲ್ಲ. ಏಕೆಂದರೆ ಮಾಡಿದ ಒಳ್ಳೆಯ ಕೆಟ್ಟಕರ್ಮಕ್ಕೆ ಫಲವು ಆಗುವದಕ್ಕೆ ದೇಶಕಾಲನಿಮಿತ್ತಾದಿಗಳ ಅಪೇಕ್ಷೆಯಿರುತ್ತದೆ.[2] ಇದು ಹೀಗಿರುವದರಿಂದ ತಲೆಬೀಳುವದಕ್ಕೆ ನಿಮಿತ್ತವಾದ ಆ ಜ್ಞಾನವೂ[3] ಮತ್ತೊಬ್ಬರು ಹೇಳುವದೆಂಬ ನಿಮಿತ್ತವನ್ನು ಅಪೇಕ್ಷಿಸಿಯೇ (ಫಲಪ್ರದವಾಗ) ಬಹುದಾಗಿದೆ.

(ಉಪನಿಷತ್ತು)

ಹನ್ತಾಹಮೇತದ್ಭಗವತೋ[4] ವೇದಾನೀತಿ ವಿದ್ಧೀತಿ ಹೋವಾಚಾಮುಷ್ಯ ಲೋಕಸ್ಯ ಕಾ ಗತಿರಿತ್ಯಯಂ ಲೋಕ ಇತಿ ಹೋವಾಚಾಸ್ಯ ಲೋಕಸ್ಯ ಕಾ ಗತಿರಿತಿ ನ ಪ್ರತಿಷ್ಠಾಂ ಲೋಕಮತಿನಯೇದಿತಿ ಹೋವಾಚ ಪ್ರತಿಷ್ಠಾಂ ವಯಂ ಲೋಕಗ್ಂ ಸಾಮಾಭಿಸಗ್ಂಸ್ಥಾಪಯಾಮಃ ಪ್ರತಿಷ್ಠಾಸಗ್ಂಸ್ತಾವಗ್ಂ ಹಿ ಸಾಮೇತಿ　　॥೭॥

1. ಕರ್ಮಕ್ಕೆ ಫಲವಾಗಬೇಕು, ಕರ್ಮವಿಲ್ಲದೆ ಆಗಬಾರದು- ಅಲ್ಲವೆ ?
2. ಬೃ. ಭಾ. ೧-೪-೧೦ (ಭಾ. ಭಾ. ೧೬೯) ದೇವತೆ, ಕಾಲ, ಈಶ್ವರ-ಮುಂತಾದ ನಿಮಿತ್ತಗಳನ್ನು ಬಯಸಿಯೇ ಕರ್ಮವು ಫಲವನ್ನು ಕೊಡುತ್ತದೆ ಎಂದು ನಿರ್ಧರಿಸಿರುವದನ್ನು ನೋಡಿ.　　3. ಅಪರಾಧವೂ.
4. ಉಪನಿಷತ್ತಿನಲ್ಲಿಯೂ ಭಾಷ್ಯದಲ್ಲಿಯೂ "ಭಗವತಃ" ಎಂದು ಪಾಠಾಂತರವಿದೆ , ಇದಕ್ಕನುಗುಣವಾಗಿ "ಭಗವತ್ತಃ ಭಗವತಃ" ಎಂದು ವಾ॥ ಪಾಠದಲ್ಲಿ ಭಾಷ್ಯವಿದೆ. ಆದರೆ "ಭಗವತಃ" ಎಂಬ ಹೆಚ್ಚಿಗೆಯ ಶಬ್ದವೊಂದು ಮೂಲಕೋಶಗಳಲ್ಲಿದ್ದಂತೆ ಕಾಣುವದಿಲ್ಲ, ಅದಕ್ಕೆ ಆ॥ ತೆ॥ ಆ॥ ಪಾಠಗಳ ಬೆಂಬಲವಿಲ್ಲ.

೭. '(ಹಾಗಾದರೆ) ನಾನು ಇದನ್ನು ಭಗವಂತನಿಂದ ತಿಳಿದು ಕೊಳ್ಳೋಣವೆ ?' ಎನ್ನಲು 'ತಿಳಿದುಕೋ' ಎಂದನು, 'ಆ ಲೋಕಕ್ಕೆ ಗತಿ ಯಾವದು ?' ಎಂದು (ಕೇಳಲು) 'ಈ ಲೋಕವು' ಎಂದನು. 'ಈ ಲೋಕಕ್ಕೆ ಗತಿ ಯಾವುದು ?' ಎಂದು (ಕೇಳಲು) 'ಪ್ರತಿಷ್ಠೆಯ ಲೋಕವನ್ನು ದಾಟಿ (ಸಾಮವನ್ನು) ಒಯ್ಯಲಾಗದು ; ಪ್ರತಿಷ್ಠೆಯ ಲೋಕವನ್ನೇ ನಾವು ಸಾಮ ವೆಂದು ನಿಲ್ಲಿಸುವೆವು. ಸಾಮವು ಪ್ರತಿಷ್ಠಾಸಂಸ್ತಾವವಲ್ಲವೆ ?' ಎಂದನು.

ಪೂ. ಪ. ಶಾಲಾವತ್ಯನ ಸಿದ್ಧಾಂತ : ಪೃಥ್ವಿಯೇ ಗತಿ

೮೦. ಏವಮುಕ್ತೋ ದಾಲ್ಭ್ಯ ಆಹ । ಹನ್ತ ಅಹಮೇತದ್ ಭಗವತಃ ವೇದಾನಿ ಯತ್ಪ್ರತಿಷ್ಠಂ ಸಾಮ । ಇತ್ಯುಕ್ತಃ ಪ್ರತ್ಯುವಾಚ ಶಾಲಾವತ್ಯಃ । ವಿದ್ಧಿ ಇತಿ ಹೋವಾಚ । ಅಮುಷ್ಯ ಲೋಕಸ್ಯ ಕಾ ಗತಿರಿತಿ ಪೃಷ್ಟಃ ದಾಲ್ಭ್ಯೇನ ಶಾಲಾವತ್ಯಃ ಅಯಂ ಲೋಕಃ ಇತಿ ಹೋವಾಚ । ಅಯಂ ಹಿ ಲೋಕೋ ಯಾಗದಾನ ಹೋಮಾದಿಭಿರಮುಂ ಲೋಕಂ ಪುಷ್ಯತೀತಿ । ''ಅತಃ ಪ್ರದಾನಂ ದೇವಾ ಉಪಜೀವನ್ತಿ'' (?)[1] ಇತಿ ಹಿ ಶ್ರುತಯಃ । ಪ್ರತ್ಯಕ್ಷಂ ಹಿ ಸರ್ವಭೂತಾನಾಂ ಧರಣೀ ಪ್ರತಿಷ್ಠಾ ಇತಿ । ಅತಃ ಸಾಮ್ನೋಽಪಿ ಅಯಂ ಲೋಕಃ ಪ್ರತಿಷ್ಠೈವ ಇತಿ ಯುಕ್ತಮ್ । ಅಸ್ಯ ಲೋಕಸ್ಯ ಕಾ ಗತಿರಿತ್ಯುಕ್ತಃ ಆಹ ಶಾಲಾವತ್ಯಃ । ನ ಪ್ರತಿಷ್ಠಾಮ್ ಇಮಂ ಲೋಕಮ್ ಅತೀತ್ಯ ನಯೇತ್ ಸಾಮ ಕಶ್ಚಿತ್ । ಅತೋ ವಯಂ ಪ್ರತಿಷ್ಠಾಂ ಲೋಕಂ ಸಾಮ ಅಭಿಸಂಸ್ಥಾಪಯಾಮಃ । ಯಸ್ಮಾತ್ ಪ್ರತಿಷ್ಠಾಸಂಸ್ತಾವಂ ಹಿ, ಪ್ರತಿಷ್ಠಾತ್ವೇನ ಸಂಸ್ತುತಂ ಸಾಮ ಇತ್ಯರ್ಥಃ । ''ಇಯಂ ವೈ ರಥನ್ತರಮ್'' (ತಾಂ. ಬ್ರಾ. ೧೮-೬-೧೧) ಇತಿ ಚ ಶ್ರುತಿಃ[2] ॥

(ಭಾಷ್ಯಾರ್ಥ)

ಹೀಗೆನ್ನಲು ದಾಲ್ಭ್ಯನೆಂದನು : ''ಸಾಮವು ಏತರಲ್ಲಿ ಪ್ರತಿಷ್ಠಿತವಾಗಿದೆ ಎಂಬಿದನ್ನು ಭಗವಂತ(ನಾದ ನಿನ್ನಿಂದ) ತಿಳಿಯೋಣವೆ ?'' ಹೀಗೆನ್ನಲು ಶಾಲಾವತ್ಯನು 'ತಿಳಿದುಕೊ' ಎಂದು ಉತ್ತರವನ್ನು ಕೊಟ್ಟನು. 'ಆ ಲೋಕಕ್ಕೆ ಗತಿ

---

1. ಇದು ಯಾವ ಶ್ರುತಿಯೋ ಗೊತ್ತಾಗಲಿಲ್ಲ, ತೈ. ಬ್ರಾ. ೨-೨-೧೧ ರಲ್ಲಿ ಈ ಅರ್ಥದ ವಾಕ್ಯವಿದೆ. ಇಲ್ಲಿರುವದು ಶ್ರುತಿಯ ಅರ್ಥಮಾತ್ರವಿದ್ದರೂ ಇರಬಹುದು.
2. ಐ. ಬ್ರಾ. ೩-೬-೧೧ರಲ್ಲಿ ಇಯಂ ವೈ ಪೃಥಿವೀ ರಥನ್ತರಮ್ ಎಂಬ ವಾಕ್ಯವಿದೆ.

ಯಾವದು' ಎಂದು ದಾಲ್ಭ್ಯನು ಕೇಳಿದ್ದಕ್ಕೆ ಶಾಲಾವತ್ಯನು 'ಈ ಲೋಕವು' ಎಂದು ಉತ್ತರವನ್ನು ಕೊಟ್ಟನು. ಈ ಲೋಕವು ಯಾಗದಾನಹೋಮಾದಿಗಳಿಂದ ಆ ಲೋಕವನ್ನು ಪೋಷಿಸುತ್ತಿದೆಯಲ್ಲವೆ ? (ಆದ್ದರಿಂದ ಅದಕ್ಕೆ ಇದು ಪ್ರತಿಷ್ಠೆ). ಇಲ್ಲಿಂದ ಕೊಟ್ಟದ್ದನ್ನು ದೇವತೆಗಳು ಉಪಜೀವಿಸಿಕೊಂಡಿರುತ್ತಾರೆ ಎಂದಲ್ಲವೆ, ಶ್ರುತಿಗಳು ?[1] ಭೂಮಿಯು ಸರ್ವಭೂತಗಳಿಗೂ ಪ್ರತಿಷ್ಠೆ ಎಂಬುದು ಪ್ರತ್ಯಕ್ಷವಾಗಿದೆ. ಆದ್ದರಿಂದ ಸಾಮಕ್ಕೂ ಈ ಲೋಕವು ಪ್ರತಿಷ್ಠೆಯೇ ಎಂಬುದು ಯುಕ್ತವು.

'ಈ ಲೋಕಕ್ಕೆ ಗತಿ ಯಾವದು?' ಎಂದು ಕೇಳಲು ಶಾಲಾವತ್ಯನು ಹೇಳುತ್ತಾನೆ. ಪ್ರತಿಷ್ಠೆಯಾದ ಈ ಲೋಕವನ್ನು ದಾಟಿ ಸಾಮವನ್ನು ಯಾವನೂ (ಮತ್ತೊಂದಾಶ್ರಯಕ್ಕೆ) ಒಯ್ಯಲಾರನು. ಆದ್ದರಿಂದ ನಾವು ಪ್ರತಿಷ್ಠಾಲೋಕವನ್ನೇ ಸಾಮ(ಕ್ಕೆ ಕೊನೆ ಎಂದು) ನಿಲ್ಲಿಸುತ್ತೇವೆ. (ಹಿ= ಯಸ್ಮಾತ್) ಸಾಮವು ಪ್ರತಿಷ್ಠಾ ಸಂಸ್ತಾವವಲ್ಲವೆ, ಪ್ರತಿಷ್ಠೆ ಎಂದು ಸಂಸ್ತುತವಾಗಿದೆಯಲ್ಲವೆ ? ''ಈ ಭೂಮಿಯೇ ರಥಂತರವು'' (ತಾಂ. ಬ್ರಾ. ೧೮-೬-೧೧) ಎಂದು ಶ್ರುತಿಯೂ ಇದೆ.

ಸಿದ್ಧಾಂತ : ಪರಮಾತ್ಮನೇ ಉದ್ಗೀಥಕ್ಕೆ ಗತಿ

(ಉಪನಿಷತ್ತು)

ತಗ್ಂ ಹ ಪ್ರವಾಹಣೋ ಜೈವಲಿರುವಾಚಾನ್ತವದ್ವೈ ಕಿಲ ತೇ ಶಾಲಾವತ್ಯ ಸಾಮ ಯಸ್ತ್ವೇತರ್ಹಿ ಬ್ರೂಯಾನ್ಮೂರ್ಧಾ ತೇ ವಿಪತಿಷ್ಯತೀತಿ ಮೂರ್ಧಾ ತೇ ವಿಪತೇದಿತಿ ಹನ್ತಾಽಹಮೇತದ್ಭಗವತೋ ವೇದಾನೀತಿ ವಿದ್ಧೀತಿ ಹೋವಾಚ ॥೮॥

೮. ಅವನನ್ನು ಕುರಿತು ಪ್ರವಾಹಣಜೈವಲಿಯು ಇಂತೆಂದನು : ''ಶಾಲಾವತ್ಯನೆ, ನಿನ್ನ ಸಾಮವು ಅಂತವುಳ್ಳದ್ದಲ್ಲ ! ಯಾವನಾದರೂ ಈಗ 'ನಿನ್ನ ತಲೆಯು ಬೀಳಲಿ !' ಎಂದರೆ, ನಿನ್ನ ತಲೆಯು ಬಿದ್ದುಹೋದೀತು !'' (ಹಾಗಾದರೆ) 'ನಾನು ಇದನ್ನು ಭಗವಂತನಿಂದ ತಿಳಿದುಕೊಳ್ಳೋಣವೆ ?' ಎನ್ನಲು 'ತಿಳಿದುಕೊ' ಎಂದನು.

1. 'ಶ್ರುತಯಃ' ಶ್ರುತಿಗಳು ಎಂದು ಬಹುವಚನವಿರುವದರಿಂದ ಇಲ್ಲಿರುವದು ಶ್ರುತ್ಯರ್ಥ ಮಾತ್ರವೆಂದು ಗೊತ್ತುಮಾಡಬಹುದೆಂದು ತೋರುತ್ತದೆ.

ಶಾಲಾವತ್ಯಮತದ ನಿಂದೆ

(ಭಾಷ್ಯ)

೮೧. ತಮೇವಮ್ ಉಕ್ತವನ್ತಂ ಪ್ರವಾಹಣೋ ಜೈವಲಿರುವಾಚ 'ಅನ್ತವದ್ವೈ ಕಿಲ ತೇ ಶಾಲಾವತ್ಯ ಸಾಮ' ಇತ್ಯಾದಿ ಪೂರ್ವವತ್ । ತತಃ ಶಾಲಾವತ್ಯ ಆಹ । ಹನ್ತಾಹಮ್ ಏತದ್ ಭಗವತೋ ವೇದಾನೀತಿ । ವಿದ್ಧೀತಿ ಹೋವಾಚ ಇತರೋಽನುಜ್ಞಾತಃ ಪ್ರಾಹ ॥

(ಭಾಷ್ಯಾರ್ಥ)

ಹೀಗೆಂದು ಹೇಳಲು ಅವನನ್ನು ಕುರಿತು ಪ್ರವಾಹಣಜೈವಲಿಯು "ಶಾಲಾವತ್ಯನೆ, ನಿನ್ನ ಸಾಮವು ಅಂತವುಳ್ಳದ್ದಲ್ಲವೆ ?" ಎಂದು ಮುಂತಾಗಿರುವ (ವಾಕ್ಯವನ್ನು) ಮೊದಲಿನಂತೆ (ವ್ಯಾಖ್ಯಾನಮಾಡಬೇಕು). ಆಗ ಶಾಲಾವತ್ಯನು ಹೇಳುತ್ತಾನೆ. "ನಾನು ಭಗವಂತನಿಂದ ಇದನ್ನು ತಿಳಿದುಕೊಳ್ಳೋಣವೆ ?" (ಅವನು) "ತಿಳಿದುಕೊ !" ಎಂದನು. (ಆ) ಇನ್ನೊಬ್ಬನು ಅನುಮತಿಯನ್ನು ಪಡೆದು ಇಂತೆಂದನು[1] :

ಒಂದನೆಯ ಅಧ್ಯಾಯ - ಒಂಬತ್ತನೆಯ ಖಂಡ

(ಉದ್ಗೀಥೋಪಾಸನೆ ಮುಂದುವರಿದದ್ದು)

(ಉಪನಿಷತ್ತು)

ಅಸ್ಯ ಲೋಕಸ್ಯ ಕಾ ಗತಿರಿತ್ಯಾಕಾಶ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯನ್ತ ಆಕಾಶಂ ಪ್ರತ್ಯಸ್ತಂ ಯನ್ತ್ಯಾಕಾಶೋ ಹ್ಯೇವೈಭ್ಯೋ ಜ್ಯಾಯಾನಾಕಾಶಃ ಪರಾಯಣಮ್ ॥೧॥

೧. 'ಈ ಲೋಕಕ್ಕೆ ಗತಿ ಯಾವದು ?' (ಅವನು) ಇಂತೆಂದನು. ಆಕಾಶವೇ (ಗತಿ). ಈ ಭೂತಗಳೆಲ್ಲವೂ ಆಕಾಶದಿಂದಲೇ ಉತ್ಪನ್ನವಾಗುತ್ತವೆ,

1. ಈ ವಾಕ್ಯವು ಮುಂದಿನ ಕಂಡಿಕೆಯ ಭಾಷ್ಯಕ್ಕೆ ಸಂಬಂಧಿಸಿಕೊಳ್ಳತಕ್ಕದ್ದು.

ಆಕಾಶದಲ್ಲಿಯೇ ಪ್ರತ್ಯಸ್ತಮಯವಾಗುತ್ತವೆ. ಆಕಾಶವೇ ಇವುಗಳಿಗಿಂತ ದೊಡ್ಡದು. ಆಕಾಶವೇ ಪರಾಯಣವು.

ಜೈವಲಿಯ ಸಿದ್ಧಾಂತ : ಪರಮಾತ್ಮನೇ ಉದ್ಗೀಥಕ್ಕೆ ಆಶ್ರಯ

(ಭಾಷ್ಯ)

೮೨. ಅಸ್ಯ ಲೋಕಸ್ಯ ಕಾ ಗತಿರಿತಿ ? ಆಕಾಶ ಇತಿ ಹೋವಾಚ ಪ್ರವಾಹಣಃ। ಆಕಾಶಃ ಇತಿ ಪರ ಆತ್ಮಾ। ''ಆಕಾಶೋ ವೈ ನಾಮ'' (೮-೧೪-೧) ಇತಿ ಶ್ರುತೇಃ। ತಸ್ಯ ಹಿ ಕರ್ಮ ಸರ್ವಭೂತೋತ್ಪಾದಕತ್ವಮ್ । ತಸ್ಮಿನ್ನೇವ ಹಿ ಭೂತಪ್ರಲಯಃ। ''ತತ್ತೇಜೋಽಸೃಜತ'' (೬-೨-೩), ''ತೇಜಃ ಪರಸ್ಯಾಂ ದೇವತಾಯಾಮ್'' (೬-೮-೬) ಇತಿ ಹಿ ವಕ್ಷ್ಯತಿ। ಸರ್ವಾಣಿ ಹ ವೈ ಇಮಾನಿ ಭೂತಾನಿ ಸ್ಥಾವರಜಙ್ಗಮಾನಿ ಆಕಾಶಾದೇವ ಸಮುತ್ಪದ್ಯನ್ತೇ ತೇಜೋಽಬನ್ನಾದಿಕ್ರಮೇಣ । ಸಾಮಾರ್ಥ್ಯಾತ್ ಆಕಾಶಂ ಪ್ರತಿ ಅಸ್ತಂ ಯನ್ತಿ । ಪ್ರಲಯಕಾಲೇ ತೇನೈವ ವಿಪರೀತಕ್ರಮೇಣ । ಹಿ ಯಸ್ಮಾತ್ ಆಕಾಶ ಏವ ಏಭ್ಯಃ ಸರ್ವೇಭ್ಯೋ ಭೂತೇಭ್ಯಃ ಜ್ಯಾಯಾನ್ ಮಹತ್ತರಃ। ಅತಃ ಸ ಸರ್ವೇಷಾಂ ಭೂತಾನಾಂ ಪರಮ್ ಅಯನಂ ಪರಾಯಣಂ ಪ್ರತಿಷ್ಠಾ। ತ್ರಿಷ್ವಪಿ ಕಾಲೇಷು ಇತ್ಯರ್ಥಃ॥

(ಭಾಷ್ಯಾರ್ಥ)

'ಈ ಲೋಕಕ್ಕೆ ಗತಿ ಯಾವದು ?' ಎಂದು (ಕೇಳಲು) ಪ್ರವಾಹಣನು ಆಕಾಶವು ಎಂದನು. ಇಲ್ಲಿ ಆಕಾಶವೆಂದರೆ ಪರಮಾತ್ಮನೇ ; ಏಕೆಂದರೆ 'ಆಕಾಶವೆಂಬುದೇ (ನಾಮರೂಪಗಳನ್ನು ನಿರ್ವಹಿಸುವದು)' (೮-೧೪-೧) ಎಂದು (ಮುಂದೆ) ಶ್ರುತಿಯಿದೆ. ಸರ್ವಭೂತಗಳನ್ನೂ ಉಂಟುಮಾಡುವದು ಅವನ ಕರ್ಮವಲ್ಲವೆ ?[1] ಅವನಲ್ಲಿಯೇ ಅಲ್ಲವೆ, ಭೂತಗಳು ಪ್ರಲಯವಾಗುವದು ? ''ಅದು ತೇಜಸ್ಸನ್ನು ಸೃಷ್ಟಿಸಿತು'' (೬-೨-೩), ''ತೇಜಸ್ಸು ಪರದೇವತೆಯಲ್ಲಿ'' (ಲಯವಾಗುವದು)[2]

---

1. ಇಲ್ಲಿ ಉದ್ಗೀಥದಲ್ಲಿ ಆಕಾಶದೃಷ್ಟಿಯನ್ನು ಮಾಡಬೇಕೆಂದು ವಿಧಿಸಿದೆಯಷ್ಟೆ ; ಈ ಆಕಾಶವೆಂಬುದು ಪರಮಾತ್ಮನೇ ಎಂಬುದಕ್ಕೆ ಹೇತುಗಳನ್ನು ಇಲ್ಲಿಂದ ಮುಂದೆ ಕೊಟ್ಟಿರುತ್ತದೆ. ಸೂ. ಭಾ. ೧-೧-೨೨ರಲ್ಲಿ ಈ ವಿಷಯವನ್ನು ಚರ್ಚಿಸಿದೆ. ಸರ್ವಭೂತಗಳನ್ನು ಎಂಬುದನ್ನು ಯಥಾಶ್ರುತವಾಗಿ ಹಿಡಿದರೆ ಪರಮಾತ್ಮನೇ ಎಂದು ಅರ್ಥಮಾಡಬೇಕಾಗುತ್ತದೆ ಎಂದು ಭಾವ.

2. ತೇಜಸ್ಸು ಎಂಬುದು ಇಲ್ಲಿ ದೇಹಬೀಜಭೂತವಾದ ಸರ್ವಭೂತಗಳನ್ನೂ ಹೇಳುತ್ತದೆ. ಸೂ. ಭಾ. ೪-೨-೫ನ್ನು ನೋಡಿ.

(೬-೮-೬) ಎಂದಲ್ಲವೆ, (ಶ್ರುತಿ) ಮುಂದೆ ಹೇಳಿರುವದು ? ಈ ಸ್ಥಾವರಜಂಗಮ ಭೂತಗಳೆಲ್ಲವೂ ಆಕಾಶದಿಂದಲೇ ಉತ್ಪನ್ನವಾಗುತ್ತವೆ ; ತೇಜಸ್ಸು, ಅಪ್ಪು, ಅನ್ನ-ಮುಂತಾದ ಕ್ರಮದಿಂದ[1] (ಎಂದು) ಸಾಮರ್ಥ್ಯದಿಂದ (ಕಲ್ಪಿಸಬೇಕು).[2] ಆಕಾಶ ದಲ್ಲಿಯೇ ಪ್ರಲಯಕಾಲದಲ್ಲಿ ಅದೇ ವಿಪರೀತಕ್ರಮದಿಂದ[3] ಲಯವಾಗುತ್ತವೆ. ಆಕಾಶವೇ ಈ ಸರ್ವಭೂತಗಳಿಗಿಂತಲೂ ದೊಡ್ಡದಷ್ಟೆ, ಹೆಚ್ಚು ವ್ಯಾಪಕವಷ್ಟೆ ? ಆದ್ದರಿಂದ ಅದು ಎಲ್ಲಾ ಭೂತಗಳಿಗೂ ಪರಾಯಣವು, ಹೆಚ್ಚಿನ ಅಯನವು, ಮೂರು ಕಾಲಗಳಲ್ಲಿಯೂ[4] ಪ್ರತಿಷ್ಠೆಯಾಗಿರುತ್ತದೆ ಎಂದರ್ಥ.

ಉದ್ಗೀಥವು ಪರೋವರೀಯವೆಂದು ಉಪಾಸನೆ

(ಉಪನಿಷತ್ತು)

ಸ ಏಷ ಪರೋವರೀಯಾನುದ್ಗೀಥಃ ಸ ಏಷೋಽನನ್ತಃ ಪರೋವರೀಯೋ ಹಾಸ್ಯ ಭವತಿ ಪರೋವರೀಯಸೋ ಹ ಲೋಕಾಞ್ಜಯತಿ ಯ ಏತದೇವಂ ವಿದ್ವಾನ್ ಪರೋವರೀಯಾಗ್ಂ ಸಮುದ್ಗೀಥಮುಪಾಸ್ತೇ ॥೨॥

೨. ಆ ಇದು ಪರೋವರೀಯವಾದ ಉದ್ಗೀಥವು. ಆ ಇದು ಅನಂತವು. ಯಾವನು ಹೀಗೆ ಹೀಗೆಂದರಿತು ಪರೋವರೀಯವೆಂದು ಉದ್ಗೀಥವನ್ನು ಉಪಾಸನೆಮಾಡುತ್ತಾನೋ, ಅವನಿಗೆ ಪರೋವರೀಯ

1. ಛಾಂದೋಗ್ಯದಲ್ಲಿ ತೇಜಸ್ಸನ್ನು ಮೊದಲು ಹೇಳಿರುವದನ್ನು ಲೆಕ್ಕಕ್ಕೆ ತಂದುಕೊಂಡು ಹೀಗೆಂದಿದೆ ; ಸರ್ವಶ್ರುತಿಗಳಿಗೂ ಏಕವಾಕ್ಯತೆಯಿರುವದಕ್ಕಾಗಿ ಆಕಾಶಾದಿಕ್ರಮದಿಂದ ಎಂದೇ ಅರ್ಥಮಾಡಬೇಕು. ಸೂ. ಭಾ. ೨-೩-೬ (ಭಾ.ಭಾ. ೯೬)ನ್ನು ನೋಡಿ.
2. ಪ್ರಕೃತಶ್ರುತಿಯಲ್ಲಿ "ಬ್ರಹ್ಮದಿಂದಲೇ" ಎಂದಿದ್ದರೂ ಆಕಾಶಾದಿಭೂತೋತ್ಪತ್ತಿ ಕ್ರಮದಿಂದ ಎಂದೇ ಅರ್ಥವನ್ನು ಮಾಡಬೇಕೆಂಬುದಕ್ಕೆ ಸೂ. ಭಾ. ೨-೩-೧೩ (ಭಾ.ಭಾ. ೧೧೩) ನ್ನು ನೋಡಿ. "ಆಕಾಶಾದೇವ" ಎಂಬುದಕ್ಕೆ ಆಕಾಶವೇ ಮುಂತಾದವುಗಳ ರೂಪದಲ್ಲಿದ್ದು ಕೊಂಡಿರುವ ಪರಮಾತ್ಮನಿಂದಲೇ ಎಂದರ್ಥ.
3. ಸೂ. ಭಾ. ೨-೩-೧೪ರಲ್ಲಿ ಲಯವು ವಿಪರೀತಕ್ರಮದಲ್ಲಿಯೇ ಆಗುತ್ತದೆ ಎಂಬುದನ್ನು ಸಾಧಿಸಿದೆ.
4. ಕಾರ್ಯವು ಕಾರಣವನ್ನು ಮೂರುಕಾಲದಲ್ಲಿಯೂ ಬಿಟ್ಟಿರುವದಿಲ್ಲ. ಸೂ. ಭಾ. ೨-೧-೭ (ಭಾ. ಭಾ. ೪೨೦), ೨-೧-೯ (ಭಾ. ಭಾ. ೪೨೩), ೨-೧-೧೬ (ಭಾ. ಭಾ. ೪೪೪).

ವಾಗುವದು ; (ಅವನು) ಪರೋವರೀಯವಾದ ಲೋಕಗಳನ್ನೇ ಗೆದ್ದು ಕೊಳ್ಳುವನು.

ಉದ್ಗೀಥವನ್ನು ಪರೋವರೀಯವೆಂದು ಉಪಾಸನೆಮಾಡಿದರೆ ಫಲ

(ಭಾಷ್ಯ)

೮೩. ಯಸ್ಮಾತ್ (ಸ ಏಷಃ)[1] ಪರಂಪರಂ ವರೀಯಃ ವರೀಯಸೋಽಪಿ ಏಷ ವರಃ । ಪರಶ್ಚ ವರೀಯಾಂಶ್ಚ ಪರೋವರೀಯಾನ್ ಉದ್ಗೀಥಃ । ಪರಮಾತ್ಮಾ ಸಂಪನ್ನಃ ಇತ್ಯರ್ಥಃ । ಅತ ಏವ ಸ ಏಷಃ ಅನನ್ತಃ ಅವಿದ್ಯಮಾನಾನ್ತಃ । ತಮೇತಂ ಪರೋವರೀಯಾಂಸಂ ಪರಮಾತ್ಮಭೂತಮ್ ಅನನ್ತಮ್ ಯ[2] ಏವಂ ವಿದ್ವಾನ್ ಪರೋವರೀಯಾಂಸಮ್ ಉದ್ಗೀಥಮ್ ಉಪಾಸ್ತೇ । ತಸ್ಯೈತತ್ ಫಲಮ್ ಆಹ । ಪರೋವರೀಯಃ ಪರಂಪರಂ ವರೀಯಃ । ವಿಶಿಷ್ಟತರಂ ಜೀವನಂ ಹ ಅಸ್ಯ ವಿದುಷೋ ಭವತಿ । ದೃಷ್ಟಂ ಫಲಮ್ । ಅದೃಷ್ಟಂ ಚ ಪರೋವರೀಯಸಃ ಉತ್ತರೋತ್ತರವಿಶಿಷ್ಟತರಾನೇವ ಬ್ರಹ್ಮಾಕಾಶಾನ್ತಾನ್ ಜಯತಿ ಯ ಏತದೇವಂ ವಿದ್ವಾನ್ ಉದ್ಗೀಥಮ್ ಉಪಾಸ್ತೇ ॥

(ಭಾಷ್ಯಾರ್ಥ)

ಹೀಗೆ ಆ ಈತನು ಮುಂದುಮುಂದಕ್ಕೆ ವರೀಯಾಂಸವು, ವರೀಯಾಂಸ ನಿಗಿಂತಲೂ ವರವು ; ಪರನೂ ವರೀಯಾಂಸನೂ ಆಗಿರುವದರಿಂದ ಪರಮಾತ್ಮನೆಂದು ಸಂಪಾದಿತವಾಗಿರುವ[3] (ಈ) ಉದ್ಗೀಥವು ಪರೋವರೀಯವು ಎಂದರ್ಥ. ಆದ್ದರಿಂದಲೇ ಆ ಈ (ಉದ್ಗೀಥವು) ಅನಂತವು, ಅಂತವಿಲ್ಲದ್ದು ಆ ಈ ಪರೋವರೀಯವಾಗಿ ಪರಮಾತ್ಮನಾಗಿರುವ (ಉದ್ಗೀಥವನ್ನು) ಪರೋವರೀಯವು ಅನಂತವು ಎಂದು ಇಂತು ಅರಿತುಕೊಂಡು ಉದ್ಗೀಥವನ್ನು ಯಾವನು ಉಪಾಸನೆಮಾಡುತ್ತಾನೋ, ಅವನಿಗೆ ಇದು ಫಲ : ಪರೋವರೀಯವು, ಮುಂದುಮುಂದಕ್ಕೆ ವರೀಯವಾದ ವಿಶಿಷ್ಟತರವಾದ ಜೀವನವು ಈ ಉಪಾಸಕನಿಗೆ ಆಗುವದು ; (ಇದು) ದೃಷ್ಟಫಲವು. ಅದೃಷ್ಟ(ಫಲ)ವಾದರೋ (ಇದು) :

1. ಈ ಮಾತುಗಳು ಕೈಬಿಟ್ಟುಹೋಗಿರುವಂತೆ ಕಾಣುತ್ತದೆ.
2. ಇಲ್ಲಿ ಈ ಮಾತು ಇರಬೇಕು, 3. ಹಾಗೆಂದು ಉಪಾಸನೆಮಾಡಿರುವ.

ಪರೋವರೀಯವಾದ ಒಂದಕ್ಕಿಂತ ಒಂದು ವಿಶಿಷ್ಟತರವೇ ಆಗಿರುವ ಬ್ರಹ್ಮವೆಂಬ ಆಕಾಶದವರೆಗಿನ ಲೋಕಗಳನ್ನು - ಯಾವನು ಹೀಗೆಂದರಿತು ಹೀಗೆ ಈ ಉಪಾಸನೆಮಾಡುವನೋ ಅವನು - ಗೆದ್ದುಕೊಳ್ಳುವನು.

(ಉಪನಿಷತ್ತು)

ತಗ್ಂ ಹೈತಮತಿಧನ್ವಾ ಶೌನಕ ಉದರಶಾಣ್ಡಿಲ್ಯಾಯೋಕ್ತ್ವೋವಾಚ ಯಾವತ್ತ ಏನಂ ಪ್ರಜಾಯಾಮುದ್ಗೀಥಂ ವೇದಿಷ್ಯನ್ತೇ ಪರೋವರೀಯೋ ಹೈವ್ಯಸ್ಯಾತವದಸ್ಮಿಲ್ಲೋಕೇ ಜೀವನಂ ಭವಿಷ್ಯತಿ ॥೩॥

ತಥಾಮುಷ್ಮಿಲ್ಲೋಕೇ ಲೋಕ ಇತಿ ಸ ಯ ಏತಮೇವಂ[1] ವಿದ್ವಾನುಪಾಸ್ತೇ ಪರೋವರೀಯ ಏವ ಹಾಸ್ಯಾಸ್ಮಿಲ್ಲೋಕೇ ಜೀವನಂ ಭವತಿ ತಥಾಮುಷ್ಮಿಲ್ಲೋಕೇ ಲೋಕ ಇತಿ ಲೋಕೇ ಲೋಕ ಇತಿ ॥೪॥

೩. ಆ ಇದನ್ನು ಅತಿಧನ್ವಶೌನಕನು ಉದರಶಾಂಡಿಲ್ಯನಿಗೆ ಹೇಳಿ ಇಂತೆಂದನು : 'ನಿನ್ನ ಪ್ರಜೆಯಲ್ಲಿ ಎಲ್ಲಿಯವರೆಗೆ ಈ ಉದ್ಗೀಥವನ್ನು ಅರಿತಿರುವರೋ ಅಲ್ಲಿಯವರೆಗೆ ಅವರಿಗೆ ಪರೋವರೀಯವಾದ ಜೀವನವು ಆಗುತ್ತಿರುವದು.

೪. ಹಾಗೂ ಆ ಲೋಕದಲ್ಲಿಯೂ ಲೋಕವು (ಆಗುವದು)'. ಯಾವನು ಇದನ್ನು ಹೀಗೆಂದರಿತು ಉಪಾಸನೆಮಾಡುವನೋ ಅವನಿಗೆ ಈ ಲೋಕದಲ್ಲಿ ಪರೋವರೀಯವಾದ ಜೀವನವೇ ಆಗುವದು ; ಹಾಗೂ ಆ ಲೋಕದಲ್ಲಿಯೂ ಲೋಕವು (ಆಗುವದು), ಲೋಕದಲ್ಲಿಯೂ ಲೋಕ(ವಾಗುವದು).

ವಿದ್ಯಾಫಲಶ್ರುತಿ, ಶೌನಕವಾಕ್ಯ

(ಭಾಷ್ಯ)

೮೪. ಕಿಂ ಚ ತಮೇತಮ್ ಉದ್ಗೀಥಂ ವಿದ್ವಾನ್ ಅತಿಧನ್ವಾ ನಾಮತಃ ಶುನಕಸ್ಯಾಪತ್ಯಂ ಶೌನಕಃ ಉದರಶಾಣ್ಡಿಲ್ಯಾಯ ಶಿಷ್ಯಾಯ ಏತಮ್ ಉದ್ಗೀಥದರ್ಶನಮ್ ಉಕ್ತ್ವಾ ಉವಾಚ । ಯಾವತ್ ತೇ ತವ ಪ್ರಜಾಯಾಮ್

1. "ಏತದೇವಂ" ಎಂಬುದಕ್ಕಿಂತ ಈ ಪಾಠವೇ ಮೇಲು.

ಪ್ರಜಾಸನ್ತತೌ ಇತ್ಯರ್ಥಃ । ಏನಮ್ ಉದ್ಗೀಥಂ ತ್ವತ್ಸನ್ತತಿಜಾ ವೇದಿಷ್ಯನ್ತೇ ಜ್ಞಾಸ್ಯನ್ತಿ ತಾವನ್ತಂ ಕಾಲಂ ಪರೋವರಿಯೋ ಹ ಏಭ್ಯಃ ಪ್ರಸಿದ್ಧೇಭ್ಯೋ ಲೌಕಿಕಜೀವನೇಭ್ಯಃ ಉತ್ತರೋತ್ತರವಿಶಿಷ್ಟತರಂ ಜೀವನಂ ತೇಭ್ಯೋ ಭವಿಷ್ಯತಿ । ತಥಾ ಅದೃಷ್ಟೇಽಪಿ ಪರಲೋಕೇ ಅಮುಷ್ಮಿನ್ ಪರೋವರೀಯಾನ್ ಲೋಕೋ ಭವಿಷ್ಯತಿ । ಇತ್ಯುಕ್ತವಾನ್ ಶಾಣ್ಡಿಲ್ಯಾಯ ಅತಿಧನ್ವಾ ಶೌನಕಃ ॥

ಸ್ಯಾದೇತತ್ ಫಲಂ ಪೂರ್ವೇಷಾಂ ಮಹಾಭಾಗ್ಯಾನಾಮ್ ನೈದಂ-ಯುಗೀನಾನಾಮ್ ಇತ್ಯಾಶಙ್ಕಾನಿವೃತ್ತ್ಯೇ ಆಹ । ಸ ಯಃ ಕಶ್ಚಿತ್ ಏತಮ್[1] ಏವಂ ವಿದ್ವಾನ್ ಉದ್ಗೀಥಮ್ ಏತರ್ಹಿ ಉಪಾಸ್ತೇ ತಸ್ಯಾಪಿ ಏವಮೇವ ಪರೋವರೀಯ ಏವ ಹ ಅಸ್ಯ ಅಸ್ಮಿನ್ ಲೋಕೇ ಜೀವನಂ ಭವತಿ । ತಥಾ ಅಮುಷ್ಮಿನ್ ಲೋಕೇ ಲೋಕಃ ಇತಿ । ಲೋಕೇ ಲೋಕ ಇತಿ ॥

(ಭಾಷ್ಯಾರ್ಥ)

ಮತ್ತು[2] ಆ ಈ ಉದ್ಗೀಥವನ್ನು ಉಪಾಸನೆಮಾಡಿದ್ದ ಅತಿಧನ್ವನೆಂಬ ಹೆಸರಿನ ಶೌನಕನು, ಶುನಕನ ಮಗನು, ಉದರಶಾಂಡಿಲ್ಯನೆಂಬ ಶಿಷ್ಯನಿಗೆ ಈ ಉದ್ಗೀಥದರ್ಶನವನ್ನು ಹೇಳಿಕೊಟ್ಟು ಇಂತೆಂದನು : ಎಲ್ಲಿಯವರೆಗೆ (ತೇ=ತವ) ನಿನ್ನ ಪ್ರಜೆಯಲ್ಲಿ ಎಂದರೆ, ಪ್ರಜಾಸಂತತಿಯಲ್ಲಿ ಎಂದರ್ಥ. ನಿನ್ನ ಸಂತತಿಯಲ್ಲಿ ಹುಟ್ಟಿದವರು (ಎಲ್ಲಿಯವರೆಗೆ) ಈ ಉದ್ಗೀಥವನ್ನು (ವೇದಿಷ್ಯನ್ತೇ=ಜ್ಞಾಸ್ಯನ್ತಿ) ಉಪಾಸನೆಮಾಡಿಕೊಂಡಿರುವರೋ ಅಷ್ಟು ಕಾಲದವರೆಗೆ ಈ ಲೌಕಿಕಜೀವನದಲ್ಲಿ ಪ್ರಸಿದ್ಧರಾಗಿರುವವರಿಗಿಂತ ಮುಂದುಮುಂದಕ್ಕೆ ವಿಶಿಷ್ಟತರವಾದ ಜೀವನವು ಅವರಿಗೆ ಆಗುತ್ತಿರುವದು. ಹಾಗೂ ಅದೃಷ್ಟವಾದ ಆ ಪರಲೋಕದಲ್ಲಿಯೂ ವರೋವರೀಯವಾದ ಲೋಕವು ಆಗುತ್ತಿರುವದು - ಎಂದು ಶಾಂಡಿಲ್ಯನಿಗೆ ಅತಿಧನ್ವಶೌನಕನು ಹೇಳಿದನು.

ಈ ಫಲವು ಮಹಾಭಾಗ್ಯವಂತರಾದ ಹಿಂದಿನ (ಕಾಲದ)ವರಿಗೆ ಆಗಿರಬಹುದು ; ಈ ಯುಗದವರಿಗೆ ಆಗಲಾರದು - ಎಂಬೀ ಆಶಂಕೆಯನ್ನು ತೊಲಗಿಸುವದಕ್ಕಾಗಿ (ಶ್ರುತಿಯು ಹೀಗೆಂದು) ಹೇಳುತ್ತಿದೆ. ಯಾವನೇ ಆಗಲಿ, ಇದನ್ನು ಹೀಗೆಂದರಿತು ಉದ್ಗೀಥವನ್ನು ಈಗಲೂ ಉಪಾಸನೆಮಾಡಿದರೆ, ಅವನಿಗೂ ಹೀಗೆಯೇ

---

1. ಏತತ್ ಎಂಬುಕ್ಕಿಂತ ಈ ಪಾಠವೇ ಮೇಲು.
2. ಉದ್ಗೀಥೋಪಾಸಕನಿಗೆ ಆಗುವ ಫಲವು ನಿಯತವು. ಯಾರುಯಾರು ಇದನ್ನು ಮಾಡುವರೋ ಅವರಿಗೆಲ್ಲ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಉತ್ತರೋತ್ತರವಾಗಿ ಹೆಚ್ಚಿನ ಸೌಖ್ಯವೇ ಆಗುತ್ತಿರುವದು - ಎಂಬುದನ್ನು ತಿಳಿಸುವದಕ್ಕೆ ಈ ಶೌನಕವಾಕ್ಯವನ್ನು ಉದಾಹರಿಸಿದೆ ಎಂದು ಭಾವ.

ಪರೋವರೀಯವಾಗಿಯೇ ಈ ಲೋಕದಲ್ಲಿ ಜೀವನವು ಆಗುವದು, ಹಾಗೂ ಆ ಲೋಕದಲ್ಲಿ (ಪರೋವರೀಯವಾದ) ಲೋಕವೂ[1] (ಆಗುತ್ತದೆ. ಆ) ಲೋಕದಲ್ಲಿ (ಪರೋವರೀಯವಾದ) ಲೋಕವೂ (ಆಗುತ್ತದೆ).[2]

ಒಂದನೆಯ ಅಧ್ಯಾಯ - ಹತ್ತನೆಯ ಖಂಡ

(ಪ್ರಾಸಂಗಿಕವಾಗಿ ಪ್ರಸ್ತಾವಾದಿಗಳ ಉಪಾಸನೆ)

ಉಷಸ್ತಿಯು ಯಜ್ಞಶಾಲೆಗೆ ಬಂದದ್ದು

(ಉಪನಿಷತ್ತು)

ಮಟಚೀಹತೇಷು ಕುರುಷ್ವಾಟಿಕ್ಯಾ ಸಹ ಜಾಯಯೋಷಸ್ತಿರ್ಹ ಚಾಕ್ರಾಯಣ ಇಭ್ಯಗ್ರಾಮೇ ಪ್ರದ್ರಾಣಕ ಉವಾಸ ॥೧॥

೧. ಮಟಚೀಹತವಾದ ಕುರುದೇಶದಲ್ಲಿ ಆಟಿಕಿಯಾದ ಹೆಂಡತಿಯೊಡನೆ ಉಷಸ್ತಿಚಾಕ್ರಾಯಣನು ಇಭ್ಯಗ್ರಾಮದಲ್ಲಿ ಪ್ರದ್ರಾಣಕನಾಗಿ ವಾಸಮಾಡಿ ಕೊಂಡಿದ್ದನು.

ಗ್ರಂಥದ ಸಂಬಂಧ

೮೫. ಉದ್ಗೀಥೋಪಾಸನಪ್ರಸಙ್ಗೇನ ಪ್ರಸ್ತಾವಪ್ರತಿಹಾರವಿಷಯಮಪಿ ಉಪಾಸನಂ ವಕ್ತವ್ಯಮ್ ಇತಿ ಇದಮಾರಭ್ಯತೇ । ಆಖ್ಯಾಯಿಕಾ ತು ಸುಖಾವ ಬೋಧನಾರ್ಥಾ ॥

1. ಇದು ಅರ್ಥವಾದವು. ಆದ್ದರಿಂದ ಪರೋವರೀಯವೆಂದು ಉದ್ಗೀಥವನ್ನು ಉಪಾಸನೆ ಮಾಡಬೇಕು - ಎಂದು ಅಭಿಪ್ರಾಯ.
2. ಈ ಉಪಾಸನೆಯು ಮುಗಿಯಿತೆಂಬುದನ್ನು ತಿಳಿಸುವದಕ್ಕೆ ಈ ದ್ವಿರುಕ್ತಿ ಬಂದಿದೆ. ಹಿಂದೆ ಹೇಳಿರುವ ಹಿರಣ್ಮಶಶ್ರುತ್ವಾದಿವಿಶಿಷ್ಟೋದ್ಗೀಥೋಪಾಸನೆಗಿಂತ ಈ ಉಪಾಸನೆಯು ಬೇರೆ ಎಂಬುದನ್ನು ಸೂ. ಭಾ. ೩-೩-೭ (ಭಾ. ಭಾ. ೩೨೯) ರಲ್ಲಿ ತಿಳಿಸಿಕೊಟ್ಟಿದೆ. ಗುಣವಿಶೇಷ ಗಳು ಬೇರೆಬೇರೆಯಾಗಿರುವದರಿಂದ ಇವೆರಡನ್ನೂ ಕೂಡಿಸಿ ಉಪಾಸನೆಮಾಡತಕ್ಕದ್ದಲ್ಲ.

(ಭಾಷ್ಯಾರ್ಥ)

ಉದ್ಗೀಥೋಪಾಸನೆಯ ಪ್ರಸಂಗದಿಂದ ಪ್ರಸ್ತಾವ, ಪ್ರತೀಹಾರ[1]- (ಇವುಗಳ) ವಿಷಯದ ಉಪಾಸನೆಯನ್ನು ಹೇಳಬೇಕೆಂದು ಇದನ್ನು ಆರಂಭಿಸಿದೆ. ಕಥೆಯಾದರೋ ಸುಲಭವಾಗಿ ತಿಳಿಯುವದಕ್ಕೆ ಹೇಳಿದ್ದು.[2]

ಉಷಸ್ತಿಯ ದಾರಿದ್ರ್ಯಸ್ಥಿತಿ

(ಭಾಷ್ಯ)

೮೬. ಮಟಚೀಹತೇಷು । ಮಟಚ್ಯಃ ಅಶನಯಃ ತಾಭಿರ್ಹತೇಷು ನಾಶಿತೇಷು ಕುರುಷು ಕುರುಸಸ್ಯೇಷು ಇತ್ಯರ್ಥಃ । ತತೋ ದುರ್ಭಿಕ್ಷೇ ಜಾತೇ ಆಟಿಕ್ಯಾ ಅನುಪಜಾತಪಯೋಧರಾದಿಸ್ತ್ರೀವ್ಯಞ್ಜನಯಾ ಸಹ ಜಾಯಯಾ ಉಷಸ್ತಿಃ ಹ ನಾಮತಃ। ಚಕ್ರಸ್ಯ ಅಪತ್ಯಂ ಚಾಕ್ರಾಯಣಃ । ಇಭಃ ಹಸ್ತೀ, ತಮ್ ಅರ್ಹತೀತಿ ಇಭ್ಯಃ । ಈಶ್ವರಃ ಹಸ್ತ್ಯಾರೋಹೋ ವಾ । ತಸ್ಯ ಗ್ರಾಮಃ ಇಭ್ಯಗ್ರಾಮಃ । ತಸ್ಮಿನ್ । ಪ್ರದ್ರಾಣಕಃ ಅನ್ನಾಲಾಭಾತ್ । ದ್ರಾ ಕುತ್ಸಾಯಾಂ ಗತೌ । ಕುತ್ಸಿತಾಂ ಗತಿಂ ಗತಃ । ಅನ್ಯಾವಸ್ಥಾಂ ಪ್ರಾಪ್ತಃ ಇತ್ಯರ್ಥಃ। ಉವಾಸ ಉಷಿತವಾನ್ ಕಸ್ಯಚಿದ್ ಗೃಹಮ್ ಆಶ್ರಿತ್ಯ ॥

(ಭಾಷ್ಯಾರ್ಥ)

ಮಟಚೀಹತವಾದ- ಮಟಚಿಗಳು ಎಂದರೆ ಸಿಡಿಲುಗಳು[3] ; ಅವುಗಳಿಂದ ಕುರುದೇಶವು ಎಂದರೇ ಕುರುದೇಶದ ಸಸ್ಯಗಳು ಎಂದರ್ಥ ; (ಅವು) ಹತವಾಗಿರಲು, ನಾಶವಾಗಿರಲು, ಅದರಿಂದ ದುರ್ಭಿಕ್ಷವುಂಟಾಗಲಾಗಿ ಆಟಿಕಿಯಾದ ಮೊಲೆಯೇ ಮುಂತಾದ ಸ್ತ್ರೀವ್ಯಂಜನವು (ಇನ್ನೂ) ಉಂಟಾಗದಿದ್ದ[4] ಹೆಂಡತಿಯೊಡನೆ ಉಷಸ್ತಿ ಎಂಬ ಹೆಸರಿನ ಚಾಕ್ರಾಯಣನು, ಚಕ್ರನ ಮಗನು, (ಇಭ್ಯಗ್ರಾಮದಲ್ಲಿ)- ಇಭವೆಂದರೆ ಆನೆ ; ಅದಕ್ಕೆ ತಕ್ಕವನು ಇಭ್ಯನು ; ಒಡೆಯನು ಅಥವಾ ಮಾವಟಿಗನು. ಅವನ ಗ್ರಾಮವು ಇಭ್ಯಗ್ರಾಮವು, ಅದರಲ್ಲಿ -ಪ್ರದ್ರಾಣಕನಾಗಿ ದ್ರಾ ಕುತ್ಸಾಯಾಂ ಗತೌ (ಎಂಬ ಧಾತುವಿನಿಂದ ಈ ಶಬ್ದವು ಬಂದಿದೆ) ; ಕುತ್ಸಿತಗತಿಯನ್ನು ಹೊಂದಿ,

1. ಸಾಮಭೇದಗಳು, ಸಾಮಭಕ್ತಿಗಳು- ಮುಂತಾದವುಗಳ ವಿವರವನ್ನು ಪರಿಶಿಷ್ಟದಲ್ಲಿ ವಿವರಿಸಿದೆ.
2. ಕಥೆಯಲ್ಲಿ ಉಷಸ್ತಿಯ ದರಿದ್ರಾವಸ್ಥೆಯನ್ನು ವರ್ಣಿಸಿರುವದರಿಂದ ಜ್ಞಾನಿಯಾದವನು ಆಪತ್ತಿನಲ್ಲಿ ಅನನ್ನವನ್ನು ತಿಂದರೂ ಪಾಪವಾಗುವದಿಲ್ಲ ಎಂಬುದು ಸುಲಭವಾಗಿ ತಿಳಿಯುತ್ತದೆ.
3. ಆಲಿಕಲ್ಲುಗಳು ಎಂದೇ ಅರ್ಥವಿರಬಹುದು. 4. ಸಣ್ಣ ಹುಡುಗಿಯಾದ

(ತೀರ)ಕೊನೆಯ ಗತಿಯನ್ನು ಹೊಂದಿ[1] ಎಂದರ್ಥ ; ವಾಸಮಾಡಿಕೊಂಡಿದ್ದನು, ಯಾವನೋ ಒಬ್ಬನ ಮನೆಯನ್ನು ಆಶ್ರಯಿಸಿಕೊಂಡು (ವಾಸವಾಗಿದ್ದನು).

(ಉಪನಿಷತ್ತು)

ಸ ಹೇಭ್ಯಂ ಕುಲ್ಮಾಷಾನ್ ಖಾದನ್ತಂ ಬಿಭಿಕ್ಷೇ ತಗ್ಂ ಹೋವಾಚ । ನೇತೋಽನ್ಯೇ ವಿದ್ಯನ್ತೇ । ಯಚ್ಚ ಯೇ ಮ ಇಮ ಉಪನಿಹಿತಾಃ ಇತಿ ॥೨॥

೨. ಅವನು ಕುಲ್ಮಾಷವನ್ನು ತಿನ್ನುತ್ತಿರುವ ಮಾವಟಿಗನನ್ನು ಬೇಡಿದನು. (ಮಾವಟಿಗನು) ಅವನನ್ನು ಕುರಿತು ಇಂತೆಂದನು ; 'ಇಗೊ, ಈ ಬಡಿಸಿ ಕೊಂಡಿರುವ ಈ ನನ್ನದಿದೆಯಲ್ಲ, ಇದಕ್ಕಿಂತ ಬೇರೆಯಿಲ್ಲ'

ಮಾವಟಿಗನನ್ನು ಹುರುಳಿಬೇಡಿದ್ದು, ಅವನ ಉತ್ತರ

(ಭಾಷ್ಯ)

೮೭. ಸ ಅನ್ನಾರ್ಥಮ್ ಅಟನ್ ಇಭ್ಯಂ ಕುಲ್ಮಾಷಾನ್ ಕುತ್ಸಿತಾನ್ ಮಾಷಾನ್ ಖಾದನ್ತಂ ಭಕ್ಷಯನ್ತಂ ಯದೃಚ್ಛಯಾ ಉಪಲಭ್ಯ ಬಿಭಿಕ್ಷೇ ಯಾಚಿತವಾನ್ । ತಮ್ ಉಷಸ್ತಿಂ ಹ ಉವಾಚ ಇಭ್ಯಃ । ನ ಇತಃ ಅಸ್ಮಾತ್ ಮಯಾ ಭಕ್ಷ್ಯಮಾಣಾತ್ ಉಚ್ಛಿಷ್ಟರಾಶೇಃ ಕುಲ್ಮಾಷಾ ಅನ್ಯೇ ನ ವಿದ್ಯನ್ತೇ । ಯಚ್ಚ ಯೇ ರಾಶೌ ಮೇ ಮಮ ಉಪನಿಹಿತಾಃ ಪ್ರಕ್ಷಿಪ್ತಾಃ ಇಮೇ ಭಾಜನೇ । ಕಿಂ ಕರೋಮಿ ?

(ಭಾಷ್ಯಾರ್ಥ)

ಅನ್ನಕ್ಕಾಗಿ ಅಲೆಯುತ್ತಿದ್ದ ಅವನು ಕುಲ್ಮಾಷವನ್ನು ಕುತ್ಸಿತವಾದ ಮಾಷವನ್ನು[2] ತಿನ್ನುತ್ತಿದ್ದ ಮಾವಟಿಗನನ್ನು ಯದೃಚ್ಛೆಯಿಂದ ಕಂಡು ಬೇಡಿದನು, (ಅದನ್ನು) ಯಾಚಿಸಿದನು. (ಆ) ಮಾವಟಿಗನು ಆ ಉಷಸ್ತಿಯನ್ನು ಕುರಿತು ನಾನು ತಿನ್ನುತ್ತಿರುವ (ಇತಃ = ಅಸ್ಮಾತ್) ಈ ಉಚ್ಛಿಷ್ಟರಾಶಿಗಿಂತ ಬೇರೆಯಾದ ಕುಲ್ಮಾಷವು ಇರುವದಿಲ್ಲ. ಈ (ಮೇ = ಮಮ) ನನ್ನ ರಾಶಿಯಲ್ಲಿರುವದೋ ಎಂದರೆ ಇದನ್ನು ಪಾತ್ರೆಯಲ್ಲಿ (ಊಟಕ್ಕೆ ಉಪನಿಹಿತಾಃ = ಪ್ರಕ್ಷಿಪ್ತಾಃ) ಹಾಕಿಕೊಂಡಿರುತ್ತೇನಲ್ಲ! ಏನು ಮಾಡಲಿ ?

---

1. ಸಾಯುವ ಸ್ಥಿತಿಯನ್ನು ಹೊಂದಿ ಎಂದರ್ಥ. 2. ಕುಲ್ಮಾಷವೆಂದರೆ ಈಗ ಹುರುಳಿ ಎಂದೇ ಅರ್ಥವಾಗುತ್ತದೆ ; ಕುತ್ಸಿತವಾದ ಮಾಷ ಎಂಬ ವಿಗ್ರಹವಾಕ್ಯದ ಅಕ್ಷರಾರ್ಥವನ್ನು ಹಿಡಿದರೆ ಉದ್ದಿನ ಜಾತಿಯ ಕೀಳುಧಾನ್ಯ ಎಂಬರ್ಥವು ತೋರುತ್ತದೆ.

(ಉಪನಿಷತ್ತು)

ಏತೇಷಾಂ ಮೇ ದೇಹೀತಿ ಹೋವಾಚ ತಾನಸ್ಮೈ ಪ್ರದದೌ ಹನ್ತಾನುಪಾನಮಿತ್ಯುಚ್ಛಿಷ್ಟಂ ವೈ ಮೇ ಪೀತಗ್ಂ ಸ್ಯಾದಿತಿ ಹೋವಾಚ ॥೩॥

೩. 'ಇದರಲ್ಲಿ (ಯೇ) ನನಗೆ ಕೊಡು' ಎಂದನು. ಅದನ್ನು ಇವನಿಗೆ ಕೊಟ್ಟನು. 'ಹಾಗಾದರೆ (ಇಗೋ), ಅನುಪಾನವು !' ಎನ್ನಲು '(ಅದನ್ನು) ಕುಡಿದರೆ ನನಗೆ ಎಂಜಲಾದೀತು !' ಎಂದನು.

ಹುರುಳಿಯನ್ನು ತೆಗೆದುಕೊಂಡು ಕುಡಿಯುವ ನೀರನ್ನು ಒಲ್ಲೆನೆಂದದ್ದು

(ಭಾಷ್ಯ)

೮೮. ಇತ್ಯುಕ್ತಃ ಪ್ರತ್ಯುವಾಚ ಉಷಸ್ತಿಃ[1] । ಏತೇಷಾಮ್ ಏತಾನ್ ಇತ್ಯರ್ಥಃ । ಮೇ ಮಹ್ಯಂ ದೇಹಿ ಇತಿ ಹ ಉವಾಚ । ತಾನ್ ಸ ಇಭ್ಯಃ ಅಸ್ಮೈ ಉಷಸ್ತಯೇ ಪ್ರದದೌ ಪ್ರದತ್ತವಾನ್ । ಅನುಪಾನಾಯ[2] ಸಮೀಪಸ್ಥಮ್ ಉದಕಂ ಚ ಗೃಹೀತ್ವಾ ಉವಾಚ । ಹನ್ತ ಗೃಹಾಣ ಅನುಪಾನಂ ಇತ್ಯುಕ್ತಃ ಪ್ರತ್ಯುವಾಚ । ಉಚ್ಛಿಷ್ಟಂ ವೈ ಮೇ ಮಮ ಇದಮ್ ಉದಕಂ ಪೀತಂ ಸ್ಯಾತ್ । ಯದಿ ಪಾಸ್ಯಾಮಿ ॥

(ಭಾಷ್ಯಾರ್ಥ)

ಹೀಗೆನ್ನಲು ಉಷಸ್ತಿಯು (ಅದಕ್ಕೆ) ಪ್ರತಿಯಾಗಿ ಇಂತೆಂದನು : (ಮೇ = ಮಹ್ಯಮ್) ನನಗೆ ಇದರಲ್ಲಿಯೇ ಇದನ್ನೇ ಎಂದರ್ಥ ; ಕೊಡು ಎಂದನು. ಅದನ್ನು ಆ ಮಾವಟಿಗನು ಈ ಉಷಸ್ತಿಗೆ (ಪ್ರದದೌ = ಪ್ರದತ್ತವಾನ್) ಕೊಟ್ಟನು. ಅನುಪಾನಕ್ಕಾಗಿ ಹತ್ತಿರದಲ್ಲಿದ್ದ ನೀರನ್ನೂ ತೆಗೆದುಕೊಂಡು 'ಹಾಗಾದರೆ ಅನುಪಾನವನ್ನು ತೆಗೆದುಕೊ !' ಎನ್ನಲು (ಉಷಸ್ತಿಯು ಹೀಗೆ) ಪ್ರತ್ಯುತ್ತರವಿತ್ತನು ! ಇದನ್ನು (ಪೀತಮ್ = ಯದಿ ಪಾಸ್ಯಾಮಿ) ಕುಡಿದೆನಾದರೆ ಈ ಉದಕವು (ಮೇ = ಮಮ) ನನಗೆ ಎಂಜಲಾದೀತು !

---

1. ಈ ವಾಕ್ಯವನ್ನು ಅಚ್ಚಿನ ಪುಸ್ತಕದಲ್ಲಿ ಹಿಂದಿನ ಕಂಡಿಕೆಯ ಭಾಷ್ಯಕ್ಕೇ ಸೇರಿಸಲಾಗಿದೆ. ಆದರೆ ಅರ್ಥಾನುಸಾರವಾಗಿ ಇಲ್ಲಿಗೇ ಹೊಂದುತ್ತದೆ. ಮುಂದಿನ ಕಂಡಿಕೆಯ ಅವತರಣಿಕೆಯನ್ನೂ ಹೀಗೆಯೇ ತಿಳಿಯಬೇಕು. 2. "ಅನುಪಾನೀಯಂ" ಎಂಬುದಕ್ಕಿಂತ ಈ ಪಾಠವೇ ಮೇಲು.

(ಉಪನಿಷತ್ತು)

ನ ಸ್ವಿದೇತೇಽಪ್ಯುಚ್ಛಿಷ್ಟಾ ಇತಿ ನ ವಾ ಅಜೀವಿಷ್ಯಮಿಮಾನಖಾದನ್ನಿತಿ ಹೋವಾಚ ಕಾಮೋ ಮ ಉದಪಾನಮಿತಿ[1] ॥೪॥

೪. 'ಇದೂ ಎಂಜಲಲ್ಲವೆ ?' 'ಇದನ್ನು ತಿನ್ನದಿದ್ದರೆ ಬದುಕುತ್ತಲೇ ಇರಲಿಲ್ಲ. (ಆದರೆ) ಉದಪಾನವು ನನಗೆ ಕಾಮವು' ಎಂದನು.

(ಭಾಷ್ಯ)

೮೯. ಇತ್ಯುಕ್ತವನ್ತಂ ಪ್ರತ್ಯುವಾಚ ಇತರಃ । ಕಿಂ ನ ಸ್ವಿತ್ ಏತೇ ಕುಲ್ಮಾಷಾ ಅಪಿ ಉಚ್ಛಿಷ್ಟಾಃ ? ಇತ್ಯುಕ್ತಃ ಆಹ ಉಷಸ್ತಿಃ । ನ ವೈ ಅಜೀವಿಷ್ಯಂ ನೈವ[2] ಜೀವಿಷ್ಯಾಮಿ ಇಮಾನ್ ಕುಲ್ಮಾಷಾನ್ ಅಖಾದನ್ ಅಭಕ್ಷಯನ್ ಇತಿ ಹೋವಾಚ । ಕಾಮಂ ಇಚ್ಛಾತಃ ಮೇ ಮಮ ಉದಕಪಾನಂ ಲಭ್ಯತೇ ಇತ್ಯರ್ಥಃ । ಅತಶ್ಚ ಏತಾಮ್ ಅವಸ್ಥಾಂ ಪ್ರಾಪ್ತಸ್ಯ ವಿದ್ಯಾಧರ್ಮಯಶೋವತಃ ಸ್ವಾತ್ಮಪರೋಪಕಾರ-ಸಮರ್ಥಸ್ಯ ಏತದಪಿ ಕರ್ಮ ಕುರ್ವತೋ ನ ಆಗಃಸ್ಪರ್ಶಃ[3] ಇತ್ಯಭಿಪ್ರಾಯಃ । ತಸ್ಯಾಪಿ ಜೀವಿತಂ ಪ್ರತಿ ಉಪಾಯಾನ್ತರೇ ಅಜುಗುಪ್ಸಿತೇ ಸತಿ ಜುಗುಪ್ಸಿತಮ್ ಏತತ್ಕರ್ಮ ದೋಷಾಯ । ಜ್ಞಾನಾವಲೇಪೇನ ಕುರ್ವತೋ ನರಕಪಾತಃ ಸ್ಯಾದೇವ ಇತ್ಯಭಿಪ್ರಾಯಃ । ಪ್ರದ್ರಾಣಕಶಬ್ದಶ್ರವಣಾತ್ ॥

(ಭಾಷ್ಯಾರ್ಥ)

ಹೀಗೆ ಹೇಳಿದ (ಉಷಸ್ತಿಗೆ ಆ) ಇನ್ನೊಬ್ಬ (ನಾದ ಮಾವಟಿಗ)ನು ಪ್ರತಿಯಾಗಿ ಹೀಗೆಂದನು : ಈ ಹುರುಳಿಯೂ ಎಂಜಲಲ್ಲವೆ ? ಹೀಗೆನ್ನಲು ಉಷಸ್ತಿ ಹೇಳುತ್ತಾನೆ : ''ಈ ಹುರುಳಿಯನ್ನು ತಿನ್ನದಿದ್ದರೆ ನಾನು ಬದುಕುವಂತೆಯೇ ಇರಲಿಲ್ಲ ; (ಆದರೆ) ನೀರಿನ (ಆನು)ಪಾನವು (ಮೇ = ಮಮ) ಕಾಮವು, ಇಚ್ಛೆಯಿಂದಲೇ ದೊರಕುತ್ತದೆ.''

1. ''ಉದಕವಾನಮಿತಿ'' ಎಂಬ ಪಾಠವೂ ಉಂಟು ; ಭಾಷ್ಯದಲ್ಲಿ ''ಉದಕವಾನಂ'' ಎಂದೇ ಇದೆ. ಆದರೆ ಸೂತ್ರಭಾಷ್ಯದಲ್ಲಿ ''ಉದಪಾನಂ'' ಎಂಬ ಪಾಠವನ್ನೇ ಗ್ರಹಿಸಿದೆ
2. ಇದು ವಾ॥ ಪಾಠ. 3. 'ಆಘಸ್ಪರ್ಶಃ' (ಪಾಪದ ಸೋಂಕು) ಎಂದು ವಾ॥ ಪಾಠ.

ಇದರಿಂದ ಇಂಥ ಅವಸ್ಥೆಯನ್ನು ಪಡೆದಿರುವಲ್ಲಿ ವಿದ್ಯಾಧರ್ಮಕೀರ್ತಿಯುಳ್ಳವನಾಗಿ ತನಗೂ ಮತ್ತೊಬ್ಬರಿಗೂ ಉಪಕಾರಮಾಡಬಲ್ಲವನಿಗೆ ಈ ಕರ್ಮವನ್ನೂ ಮಾಡಿದರೂ ತಪ್ಪು ಸೋಂಕದು ಎಂದು ಅಭಿಪ್ರಾಯ. ಇಂಥವನಿಗೂ ಬದುಕಿರುವದಕ್ಕೆ ಜುಗುಪ್ಸಿತವಲ್ಲದ ಬೇರೊಂದು ಉಪಾಯವು ಇರುವಲ್ಲಿ, ಜುಗುಪ್ಸಿತವಾದ ಈ ಕರ್ಮವು ದೋಷ(ಫಲಕ)ವೇ (ಆಗುವದು). ಜ್ಞಾನದ ಗರ್ವದಿಂದ ಮಾಡಿದವನಿಗೆ ನರಕಪಾತವು ಆಗಿಯೇತೀರುವದು- ಎಂದು ಅಭಿಪ್ರಾಯ.[1] ಏಕೆಂದರೆ (ಇಲ್ಲಿ) ಪ್ರದ್ರಾಣಕಶಬ್ದವು ಶ್ರುತಿಯಲ್ಲಿದೆ.[2]

(ಉಪನಿಷತ್ತು)

ಸ ಹ ಖಾದಿತ್ವಾತಿಶೇಷಾಞ್ಜಾಯಾಯಾ ಆಜಹಾರ ಸಾಗ್ರ ಏವ ಸುಭಿಕ್ಷಾ ಬಭೂವ ತಾನ್ ಪ್ರತಿಗೃಹ್ಯ ನಿದಧೌ ॥೫॥

೫. (ಅದನ್ನು) ಅವನು ತಿಂದು ಉಳಿದದ್ದನ್ನು ಹೆಂಡತಿಗೆ ಕೊಟ್ಟನು. ಅಕೆಯು ಮೊದಲೇ ಸುಭಿಕ್ಷೆಯಾಗಿದ್ದಳು ; ಅದನ್ನು ತೆಗೆದುಕೊಂಡು ಇಟ್ಟಳು.

ತಿಂದು ಮಿಕ್ಕ ಹುರುಳಿಯನ್ನು ಹೆಂಡತಿ ಇಟ್ಟುಕೊಂಡಿದ್ದು

(ಭಾಷ್ಯ)

೯೦. ತಾಂಶ್ಚ ಸ ಖಾದಿತ್ವಾ ಅತಿಶೇಷಾನ್ ಅತಿಶಿಷ್ಟಾನ್ ಜಾಯಾಯೈ ಕಾರುಣ್ಯಾತ್ ಆಜಹಾರ । ಸಾ ಆಟಿಕೀ ಅಗ್ರೇ ಏವ ಕುಲ್ಮಾಷಪ್ರಾಪ್ತೇಃ ಸುಭಿಕ್ಷಾ ಶೋಭನಭಿಕ್ಷಾ । ಲಬ್ಧಾನ್ನಾ ಇತ್ಯೇತತ್ । ಬಭೂವ ಸಂವೃತ್ತಾ । ತಥಾಪಿ ಸ್ತ್ರೀಸ್ವಾಭಾವ್ಯಾತ್ ಅನವಜ್ಞಾಯ ತಾನ್ ಕುಲ್ಮಾಷಾನ್ ಪತ್ಯುರ್ಹಸ್ತಾತ್ ಪ್ರತಿಗೃಹ್ಯ ನಿದಧೌ ನಿಕ್ಷಿಪ್ತವತೀ ॥

(ಭಾಷ್ಯಾರ್ಥ)

ಮತ್ತು ಅದನ್ನು ತಿಂದು ಉಳಿದದ್ದನ್ನು ಮಿಕ್ಕದ್ದನ್ನು ಹೆಂಡತಿಗೆ ಕರುಣೆಯಿಂದ ತಂದುಕೊಟ್ಟನು. ಆಟಿಕೆಯು ಕುಲ್ಮಾಷವು ದೊರಕುವ ಮೊದಲೇ ಸುಭಿಕ್ಷೆಯಾಗಿದ್ದಳು, ಒಳ್ಳೆಯ ಭಿಕ್ಷವುಳ್ಳವಳಾಗಿದ್ದಳು ; ಅನ್ನ ದೊರಕಿದವಳಾಗಿದ್ದಳು ಎಂದು

---

1. ಜ್ಞಾನಿಯು ಯಥೇಷ್ಟಚೇಷ್ಟೆಯನ್ನು ಮಾಡುವದಕ್ಕೆ ಇಲ್ಲಿ ಅನುಮತಿಯಿಲ್ಲ ಎಂದು ಭಾವ. ಸೂ. ಭಾ. ೩-೪-೨೮ (ಭಾ. ಭಾ. ೪೨೭).
2. ಉಷಸ್ತಿಯು ಬರಗಾಲದಲ್ಲಿ ಹಸಿವಿನಿಂದ ಕಂಗೆಟ್ಟು ಅನ್ನಕ್ಕಾಗಿ ಅಲೆದಾಡುವ ಆಪದ್ದಶೆಗೆ ಬಂದಿದ್ದನೆಂದು ತಿಳಿಸುವದಕ್ಕೆಂದೇ ಪ್ರದ್ರಾಣಕಶಬ್ದವನ್ನು ಶ್ರುತಿಯಲ್ಲಿ ಪ್ರಯೋಗಿಸಿದೆ - ಎಂದು ಅಭಿಪ್ರಾಯ.

ತಾತ್ಪರ್ಯ. ಆದರೂ ಸ್ತ್ರೀಸ್ವಾಭಾವ್ಯದಿಂದ[1] ಆ ಕುಲ್ಮಾಷವನ್ನು ಅನಾದರಮಾಡದೆ ಪತಿಯ ಕೈಯಿಂದ ತೆಗೆದುಕೊಂಡು ಇಟ್ಟುಕೊಂಡಳು, (ಒಂದು ಕಡೆಯಲ್ಲಿ) ಇಟ್ಟಿದ್ದಳು.

(ಉಪನಿಷತ್ತು)

ಸ ಹ ಪ್ರಾತಃ ಸಂಜಿಹಾನ ಉವಾಚ ಯದ್ಬತಾನ್ನಸ್ಯ ಲಭೇಮಹಿ ಲಭೇಮಹಿ ಧನಮಾತ್ರಾಗ್ಂ ರಾಜಾಸೌ ಯಕ್ಷ್ಯತೇ ಸ ಮಾ ಸರ್ವೈರಾರ್ತ್ವಿಜ್ಯೈರ್ವೃಣೀತೇತಿ ॥೬॥

೬. ಅವನು ಬೆಳಗ್ಗೆ ಬಿಟ್ಟಕೂಡಲೆ ಇಂತೆಂದನು : 'ಅಯ್ಯೋ ! ಅನ್ನವು ನಮಗೆ ದೊರೆಯುವದಾದರೆ, ಧನಮಾತ್ರೆಯೂ ನಮಗೆ ಸಿಕ್ಕೀತು. ಈ ರಾಜನು ಯಾಗಮಾಡುವನು ; ಅವನು ನನ್ನನ್ನು ಎಲ್ಲಾ ಆರ್ತ್ವಿಜ್ಯ ಗಳಿಂದಲೂ ವರಣಮಾಡಿಯಾನು !'

ಉಷಸ್ತಿಯು ಅನ್ನಕ್ಕಾಗಿ ಹಂಬಲಿಸಿದ್ದು

(ಭಾಷ್ಯ)

೯೧. ಸ ತಸ್ಯಾಃ ಕರ್ಮ ಜಾನನ್ ಪ್ರಾತಃ ಉಷಃಕಾಲೇ ಸಂಜಿಹಾನಃ ಶಯನಂ ನಿದ್ರಾಂ ವಾ ಪರಿತ್ಯಜನ್ ಉವಾಚ ಪತ್ನ್ಯಾಃ ಶೃಣ್ವನ್ತ್ಯಾಃ । ಯತ್ ಯದಿ ಬತ ಇತಿ ಖಿದ್ಯಮಾನಃ । ಅನ್ನಸ್ಯ ಸ್ತೋಕಂ ಲಭೇಮಹಿ ತದ್ ಭುಕ್ತ್ವಾ ಅನ್ನಂ ಸಮರ್ಥಾ[2] ಗತ್ವಾ ಲಭೇಮಹಿ ಧನಮಾತ್ರಾಂ ಧನಸ್ಯ ಅಲ್ಪಮ್ । ತತಃ ಅಸ್ಮಾಕಂ ಜೀವನಂ ಭವಿಷ್ಯತೀತಿ । ಧನಲಾಭೇ ಚ ಕಾರಣಮಾಹ । ರಾಜಾ ಅಸೌ ನಾತಿದೂರೇ ಸ್ಥಾನೇ ಯಕ್ಷ್ಯತೇ । ಯಜಮಾನತ್ವಾತ್ ತಸ್ಯ ಆತ್ಮನೇಪದಮ್ । ಸ ಚ ರಾಜಾ ಮಾ ಮಾಂ ಪಾತ್ರಮ್ ಉಪಲಭ್ಯ ಸರ್ವೈಃ ಆರ್ತ್ವಿಜ್ಯೈಃ ಋತ್ವಿಕ್ಕರ್ಮಭಿಃ । ಋತ್ವಿಕ್ಕರ್ಮ-ಪ್ರಯೋಜನಾಯ ಇತ್ಯರ್ಥಃ । ವೃಣೀತ ಇತಿ ॥

1. ಹೆಂಗಸರು ಸ್ವಭಾವದಿಂದ ಪದಾರ್ಥಗಳನ್ನು ಜೋಪಾನವಾಗಿ ಇಟ್ಟುಕೊಂಡಿರುತ್ತಾರೆಂಬುದು ಭಾವ. ಗಂಡನು ಹೇಳಿದಂತೆ ಕೇಳುವದು ಸ್ತ್ರೀಯರ ಸ್ವಭಾವ ಎಂದು ಟೀಕೆ.
2. ಸಮರ್ಥೋ ಎಂದು ಅಚ್ಚಿನಲ್ಲಿರುವದು 'ಸಮರ್ಥಾ' ಎಂಬುದಕ್ಕೆ ಬಿದ್ದಿರಬಹುದು ; ಏಕೆಂದರೆ ಮಿಕ್ಕ ಕಡೆಗಳಲ್ಲೆಲ್ಲ ಇಲ್ಲಿ ಬಹುವಚನವೇ ಇದೆ.

(ಭಾಷ್ಯಾರ್ಥ)

ಅವನು ಆಕೆಯ ಕೆಲಸವನ್ನು ಅರಿತವನಾಗಿ[1] ಬೆಳಗ್ಗೆ ಉಷಃಕಾಲದಲ್ಲಿ (ಸಂಜಿಹಾನಃ = ಪರಿತ್ಯಜನ್) ಹಾಸಿಗೆಯನ್ನು ಅಥವಾ ನಿದ್ರೆಯನ್ನು ಬಿಟ್ಟವನಾಗಿ, ಹೆಂಡತಿ ಕೇಳುತ್ತಿರಲು ಇಂತೆಂದನು : "ಅಯ್ಯೋ ! ಎಂದು ಖೇದಗೊಂಡವನಾಗಿ (ದ್ದನೆಂಬುದನ್ನು ತಿಳಿಸುವದಕ್ಕೆ) ; ಒಂದಿಷ್ಟು ಅನ್ನವು ನಮಗೆ ಸಿಕ್ಕಿದರೆ ಆಗ ಅನ್ನವನ್ನುಂಡು ಸಮರ್ಥವಾಗಿ ಧನಮಾತ್ರೆಯನ್ನು ಒಂದಿಷ್ಟು ಧನವನ್ನು ಪಡೆದು ಕೊಂಡೇವು ; ಅದರಿಂದ ನಮಗೆ ಜೀವನವು ಆದೀತು !" ಧನವು ಸಿಕ್ಕುವದಕ್ಕೆ ಕಾರಣವನ್ನೂ (ಹೀಗೆಂದು) ತಿಳಿಸಿದನು : "ಇಗೊ, ದೂರವೇನೂ ಇಲ್ಲ (ಈ) ಸ್ಥಲದಲ್ಲಿಯೇ ಈ ರಾಜನು ಯಾಗಮಾಡುವನು. (ಮೂಲದಲ್ಲಿ ಯಕ್ಷ್ಯತೇ ಎಂದು) ಆತ್ಮನೇಪದವನ್ನು ಉಪಯೋಗಿಸಿರುವದು (ರಾಜನು) ಯಜಮಾನನಾದ್ದರಿಂದ.[2] ಆ ರಾಜನು ಪಾತ್ರನಾದ ನನ್ನನ್ನು ಕಂಡು ಎಲ್ಲಾ ಆರ್ತ್ವಿಜ್ಯಗಳಿಂದಲೂ (ಎಲ್ಲಾ) ಋತ್ವಿಕ್ಕರ್ಮಗಳಿಂದಲೂ (ಎಂದರ್ಥ). ಋತ್ವಿಕ್ಕುಗಳ ಕರ್ಮದ ಪ್ರಯೋಜನಕ್ಕಾಗಿ (ನನ್ನನ್ನು) ವರಣಮಾಡಿಯಾನು !"

(ಉಪನಿಷತ್ತು)

ತಂ ಜಾಯೋವಾಚ ಹನ್ತ ಪತ ಇಮ ಏವ ಕುಲ್ಮಾಷಾ ಇತಿ ತಾನ್ ಖಾದಿತ್ವಾಮುಂ ಯಜ್ಞಂ ವಿತತಮೇಯಾಯ ॥೭॥

೭. ಅವನನ್ನು ಹೆಂಡತಿಯು 'ಹಾಗಾದರೆ, ಪತಿಯೆ, ಇದೇ ಕುಲ್ಮಾಷವು' ಎಂದಳು. ಅದನ್ನು ತಿಂದು ನಡೆಯುತ್ತಿದ್ದ ಯಜ್ಞಕ್ಕೆ ಬಂದನು.

ಹೆಂಡತಿಯು ಕೊಟ್ಟ ಹುರಳಿಯನ್ನು ತಿಂದು ತೆರಳಿದ್ದು

(ಭಾಷ್ಯ)

೯೨. ಏವಮ್ ಉಕ್ತವನ್ತಂ ಜಾಯಾ ಉವಾಚ । ಹನ್ತ ಗೃಹಾಣ ಹೇ ಪತೇ ಇಮೇ ಏವ ಯೇ ಮದ್ಗೃಹೇ ವಿನಿಕ್ಷಿಪ್ತಾಃ ತ್ವಯಾ ಕುಲ್ಮಾಷಾಃ ಇತಿ । ತಾನ್ ಖಾದಿತ್ವಾ ಅಮುಂ ಯಜ್ಞಂ ರಾಜ್ಞೋ ವಿತತಂ ವಿಸ್ತಾರಿತಮ್ ಋತ್ವಿಗ್ಭಿಃ ಏಯಾಯ ॥

---

1. ಅವಳು ಹುರುಳಿಯನ್ನು ಇಟ್ಟಿದ್ದಾಳೆಂದು ತಿಳಿದಿದ್ದರಿಂದ.
2. ಯಜಮಾನನು ತನಗಾಗಿ ಯಾಗಮಾಡಿಕೊಳ್ಳುವನು ಎಂಬುದನ್ನು ಆತ್ಮನೇಪದವು ಸೂಚಿಸುತ್ತದೆ ಎಂದು ಅಭಿಪ್ರಾಯ.

(ಭಾಷ್ಯಾರ್ಥ)

ಹೀಗೆಂದ (ಪತಿ)ಯನ್ನು ಕುರಿತು ಹೆಂಡತಿಯು "ಹಾಗಾದರೆ ಎಲೈ ಪತಿಯೆ, ತೆಗೆದುಕೊ. ಇದೇ ನೀನು ನನ್ನ ಕೈಯಲ್ಲಿಟ್ಟ ಕುಲ್ಮಾಷವು !" ಎಂದಳು. ಅದನ್ನು ತಿಂದು ಋತ್ವಿಜರು (ವಿತತಮ್ = ವಿಸ್ತಾರಿತಮ್) ವಿಸ್ತಾರವಾಗಿ ನಡೆಯಿಸುತ್ತಿದ್ದ ಆ ರಾಜನ ಆ ಯಜ್ಞದ ಬಳಿಗೆ ಬಂದನು.

ಉಷಸ್ತಿಯು ಪ್ರಸ್ತೋತೃವಿಗೆ ಹೇಳಿದ್ದು

(ಉಪನಿಷತ್ತು)

ತತ್ರೋದ್ಗಾತ್ಮನಾಸ್ತಾವೇ ಸ್ತೋಷ್ಯಮಾಣಾನುಪೋಪವಿವೇಶ ಸ ಹ ಪ್ರಸ್ತೋತಾರಮುವಾಚ ॥೮॥

ಪ್ರಸ್ತೋತರ್ಯಾ ದೇವತಾ ಪ್ರಸ್ತಾವಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರಸ್ತೋಷ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ॥೯॥

೮. ಅಲ್ಲಿ ಆಸ್ತಾವದಲ್ಲಿ ಸ್ತೋತ್ರಮಾಡಲಿರುವ ಉದ್ಗಾತೃಗಳ ಬಳಿಯಲ್ಲಿ ಕುಳಿತುಕೊಂಡನು. ಅವನು ಪ್ರಸ್ತೋತೃವನ್ನು ಕುರಿತು ಇಂತೆಂದನು ;

೯. 'ಪ್ರಸ್ತೋತೃವೆ, ಯಾವ ದೇವತೆಯು ಪ್ರಸ್ತಾವಕ್ಕೆ ಅನ್ವಾಯತ್ತವಾಗಿರುವದೋ ಅದನ್ನು ಅರಿಯದೆ ಪ್ರಸ್ತಾವಮಾಡುವೆಯಾದರೆ, ನಿನ್ನ ತಲೆಯು ಬೀಳಲಿ !'

ಪ್ರಸ್ತಾವದೇವತೆ ಯಾವದು ?

(ಭಾಷ್ಯ)

೮ಸಿ. ತತ್ರ ಚ ಗತ್ವಾ ಉದ್ಗಾತ್ಮನ್ ಉದ್ಗಾತೃಪುರುಷಾನ್ ಆಗತ್ಯ[1] ಸ್ತುವನ್ತಿ ಅಸ್ಮಿನ್ ಇತಿ ಆಸ್ತಾವಃ । ತಸ್ಮಿನ್ ಆಸ್ತಾವೇ ಸ್ತೋಷ್ಯಮಾಣಾನ್ ಉಪ ಉಪವಿವೇಶ ಸಮೀಪೇ ಉಪವಿಷ್ಟಸ್ತೇಷಾಮ್ ಇತ್ಯರ್ಥಃ । ಉಪವಿಶ್ಯ ಚ ಸ ಹ ಪ್ರಸ್ತೋತಾರಮ್ ಉವಾಚ । ಹೇ ಪ್ರಸ್ತೋತಃ ಇತಿ ಆಮನ್ತ್ರ್ಯ ಆಭಿಮುಖೀಕರಣಾಯ । ಯಾ ದೇವತಾ ಪ್ರಸ್ತಾವಂ ಪ್ರಸ್ತಾವಭಕ್ತಿಮ್ ಅನುಗತಾ ಅನ್ವಾಯತ್ತಾ ತಾಂ ಚೇತ್ ದೇವತಾಂ ಪ್ರಸ್ತಾವಭಕ್ತೇಃ ಅವಿದ್ವಾನ್ ಸನ್ ಪ್ರಸ್ತೋಷ್ಯಸಿ । ವಿದುಷೋ ಮಮ ಸಮೀಪೇ ।

---

1. ಇದರ ಮುಂದಿನ 'ಆ' ಎಂಬ ವಾ॥ ಪಾಠವು ಬೇಕಿಲ್ಲ.

ತತ್ಪರೋಕ್ಷೇಽಪಿ ಚೇತ್ ವಿಪತೇತ್ ತಸ್ಯ ಮೂರ್ಧಾ ಕರ್ಮಮಾತ್ರವಿದಾಮ್ ಅನಧಿಕಾರ ಏವ ಕರ್ಮಣಿ ಸ್ಯಾತ್ । ತಚ್ಚ ಅನಿಷ್ಟಮ್ । ಅವಿದುಷಾಮಪಿ ಕರ್ಮದರ್ಶನಾತ್ । ದಕ್ಷಿಣಮಾರ್ಗಶ್ರುತೇಶ್ಚ । ಅನಧಿಕಾರೇ ಚ ಅವಿದುಷಾಮ್, ಉತ್ತರ ಏವೈಕೋ ಮಾರ್ಗಃ ಶ್ರೂಯೇತ । ನ ಚ ಸ್ಮಾರ್ತಕರ್ಮನಿಮಿತ್ತ ಏವ ದಕ್ಷಿಣಃ ಪನ್ಥಾಃ । "ಯಜ್ಞೇನ ದಾನೇನ" (ಬೃ ೬-೨-೧೬) ಇತಿ ಶ್ರುತೇಃ । "ತಥೋಕ್ತಸ್ಯ ಮಯಾ" (೧-೧೧-೫,೭,೯) ಇತಿ ಚ ವಿಶೇಷಣಾತ್ ವಿದ್ವತ್ಸಮಕ್ಷಮೇವ ಕರ್ಮಣಿ ಅನಧಿಕಾರೋ ನ ಸರ್ವತ್ರ ಅಗ್ನಿಹೋತ್ರಸ್ಮಾರ್ತಕರ್ಮಾಧ್ಯಯನಾದಿಷು ಚ । ಅನುಜ್ಞಾಯಾಸ್ತತ್ರ ತತ್ರ ದರ್ಶನಾತ್ ಕರ್ಮಮಾತ್ರವಿದಾಮಪಿ ಅಧಿಕಾರಃ ಸಿದ್ಧಃ ಕರ್ಮಣೀತಿ । ಮೂರ್ಧಾ ತೇ ವಿಪತಿಷ್ಯತೀತಿ ॥

(ಭಾಷ್ಯಾರ್ಥ)

ಅಲ್ಲಿಗೆ ಹೋಗಿ ಆಸ್ತಾವದಲ್ಲಿ - ಅಲ್ಲಿ ಬಂದು ಸ್ತೋತ್ರಮಾಡುತ್ತಾರಾದ್ದರಿಂದ (ಆ ಸ್ಥಾನಕ್ಕೆ) ಆಸ್ತಾವವೆಂದು ಹೆಸರು. ಆ ಆಸ್ತಾವದಲ್ಲಿ- ಸ್ತೋತ್ರಮಾಡಲಿರುವ ಉದ್ಗಾತೃಗಳ ಉದ್ಗಾತೃಪುರುಷರುಗಳ[1] (ಉಪ = ಅವರ) ಬಳಿಯಲ್ಲಿ ಅವರ ಹತ್ತಿರದಲ್ಲಿ ಕೂತುಕೊಂಡನು ಕುಳಿತವನಾದನು. (ಹಾಗೆ) ಕುಳಿತುಕೊಂಡು ಅವನು ಪ್ರಸ್ತೋತೃವನ್ನು - ಎಲೈ ಪ್ರಸ್ತೋತೃವೆ, ಎಂದು (ಅವನನ್ನು) ತನ್ನ ಕಡೆಗೆ ತಿರುಗಿಸಿ-ಕೊಳ್ಳುವದಕ್ಕಾಗಿ (ಕೂಗಿ) ಕರೆದು - ಇಂತೆಂದನು : ಯಾವ ದೇವತೆಯು ಪ್ರಸ್ತಾವಕ್ಕೆ, ಪ್ರಸ್ತಾವಭಕ್ತಿಗೆ ಅನ್ವಾಯತ್ವವಾಗಿರುವದೋ, (ಅದನ್ನು) ಅನುಸರಿಸಿಕೊಂಡಿರುವದೋ, ಆ ಪ್ರಸ್ತಾವಭಕ್ತಿಯ ದೇವತೆಯನ್ನು ಅರಿತುಕೊಳ್ಳದೆಯಿರುವವನಾಗಿ ಪ್ರಸ್ತಾವ ಮಾಡುವೆಯಾದರೆ - ವಿದ್ವಾಂಸನಾದ ನನ್ನ ಸಮೀಪದಲ್ಲಿ (ಪ್ರಸ್ತಾವಮಾಡುವೆ ಯಾದರೆ ಎಂದು ಅರ್ಥ. ಏಕೆಂದರೆ) ಅವನ ಪರೋಕ್ಷದಲ್ಲಿಯೂ ಅವನ ತಲೆಬೀಳುವದಾದರೆ ಬರಿಯ ಕರ್ಮವನ್ನು ತಿಳಿದವರಿಗೆ[2] ಕರ್ಮದಲ್ಲಿ ಅನಧಿಕಾರವೇ ಎಂದಾದೀತು. ಆದರೆ ಅದು ಒಪ್ಪತಕ್ಕದ್ದಲ್ಲ. ಏಕೆಂದರೆ ಉಪಾಸಕರಲ್ಲದವರಲ್ಲಿಯೂ ಕರ್ಮವು ಕಂಡುಬರುತ್ತದೆ.[3]

ದಕ್ಷಿಣಮಾರ್ಗಶ್ರುತಿಯಿರುವದರಿಂದಲೂ (ಕೇವಲ ಕರ್ಮಜ್ಞರಿಗೆ ಅಧಿಕಾರವಿದೆ

1. ಗಾನಮಾಡುವವರೆಲ್ಲರನ್ನೂ ಇಲ್ಲಿ ಉದ್ಗಾತೃಗಳೆಂದಿದೆ, ಬರಿಯ ಉದ್ಗಾತೃವನ್ನೇ ಅಲ್ಲ. ಉದ್ಗಾತೃಪುರುಷರೆಂದರೆ ಉದ್ಗಾತೃವಿನ ಕಡೆಯವರು.
2. ಉಪಾಸನೆಯನ್ನು ಅರಿಯದವರಿಗೆ.
3. ಉಪಾಸಕರಲ್ಲದವರನ್ನು ಇಲ್ಲಿ ರಾಜನು ವರಣಮಾಡಿದ್ದು ಕಂಡುಬರುತ್ತದೆ ; ಲೋಕ ದಲ್ಲಿಯೂ ಉಪಾಸಕರಲ್ಲದ ಕೇವಲ ಕರ್ಮಜ್ಞರು ಋತ್ವಿಜರಾಗಿರುವದು ಕಂಡುಬರುತ್ತದೆ.

ಎಂದು ಒಪ್ಪಬೇಕು. ಇದರ ವಿವರ) : ಅಜ್ಞಾನಿಗಳಿಗೆ[1] (ಕರ್ಮದಲ್ಲಿ) ಅಧಿಕಾರವಿಲ್ಲ ವೆಂದಾಗಿದ್ದರೆ, ಉತ್ತರಮಾರ್ಗವೊಂದನ್ನೇ ಶ್ರುತಿಯಲ್ಲಿ ಹೇಳಬೇಕಾಗಿತ್ತು[2]. ದಕ್ಷಿಣ-ಮಾರ್ಗವು ಸ್ಮಾರ್ತಕರ್ಮನಿಮಿತ್ತವೇ ಎನ್ನುವದಕ್ಕೂ ಇಲ್ಲ. ಏಕೆಂದರೆ "ಯಜ್ಞ ದಿಂದಲೂ ದಾನದಿಂದಲೂ (ಧೂಮಮಾರ್ಗವನ್ನು ಸೇರುತ್ತಾರೆ)" (ಬೃ. ೬-೨-೧೬) ಎಂದು ಶ್ರುತಿಯಿದೆ.[3] "ಹಾಗೆ ನಾನು ಹೇಳಿದ್ದರೆ (ನಿನ್ನ ತಲೆಯು ಬಿದ್ದು-ಹೋಗುತ್ತಿತ್ತು)" (೧-೧೧-೫, ೭, ೯) ಎಂದು ವಿಶೇಷಣವಿರುವದರಿಂದಲೂ[4] ಜ್ಞಾನಿಗಳ ಸಮಕ್ಷದಲ್ಲಿಯೇ (ಇತರರಿಗೆ) ಅನಧಿಕಾರವೇ ಹೊರತು ಅಗ್ನಿಹೋತ್ರ, ಸ್ಮಾರ್ತಕರ್ಮ, ಅಧ್ಯಯನ- ಮುಂತಾದ ಯಾವ ಕರ್ಮದಲ್ಲಿಯೂ (ಅವರಿಗೆ ಅಧಿಕಾರವಿಲ್ಲ) ಎನ್ನುವದಕ್ಕಿಲ್ಲ. ಅನುಜ್ಞೆಯಿತ್ತಿರುವದು ಅಲ್ಲಲ್ಲಿ ಕಂಡುಬರುವದ-ರಿಂದಲೂ[5] ಬರಿಯ ಕರ್ಮವನ್ನು ಅರಿತುಕೊಂಡಿರುವವರಿಗೂ ಕರ್ಮದಲ್ಲಿ ಅಧಿಕಾರವು ಸಿದ್ಧ(ವಾಗುತ್ತದೆ. ಆದ್ದರಿಂದ ನನ್ನ ಸಮೀಪದಲ್ಲಿ ಪ್ರಸ್ತಾವ-ಮಾಡುವೆಯಾದರೆ[6]) - ನಿನ್ನ ತಲೆಯು ಬೀಳಲಿ ! (ಎಂದೇ ಅರ್ಥ).

ಉಷಸ್ತಿಯು ಉದ್ಗಾತೃಪ್ರತಿಹರ್ತೃಗಳಿಗೆ ಹೇಳಿದ್ದು

(ಉಪನಿಷತ್ತು)

ಏವಮೇವೋದ್ಗಾತಾರಮುವಾಚೋದ್ಗಾತರ್ಯಾ ದೇವತೋದ್ಗೀಥ-ಮನ್ವಾಯತ್ತಾ ತಾಂ ಚೇದವಿದ್ವಾನುದ್ಗಾಸ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ॥೧೦॥

ಕೇವಲ ಕರ್ಮಜ್ಞರಿಗೆ.

2. ಏಕೆಂದರೆ ಉಪಾಸಕರಿಗೆಲ್ಲ ಉತ್ತರಮಾರ್ಗವೇ ವಿಹಿತವಾಗಿರುತ್ತದೆ ; ಆದ್ದರಿಂದ ಕರ್ಮಕ್ಕೆ ದಕ್ಷಿಣಮಾರ್ಗಗತಿಯನ್ನು ಫಲವೆಂದು ಶ್ರುತಿಯಲ್ಲಿ ಹೇಳಿರುವದರಿಂದಲೇ ಕೇವಲ ಕರ್ಮಜ್ಞರಿಗೆ ಕರ್ಮಾಧಿಕಾರವುಂಟೆಂದಾಗುತ್ತದೆ.

3. ಈ ಯಜ್ಞಾದಿಗಳು ಶ್ರೌತಕರ್ಮಗಳು ; ಪಂಚಮಹಾಯಜ್ಞವಾಪೀಕೂಪತಟಾಕಾದಿ ನಿರ್ಮಾಣ- ಮುಂತಾದ ಸ್ಮಾರ್ತಕರ್ಮಗಳಲ್ಲ.

4. ಹಾಗೆ ಹೇಳದೆ ಇದ್ದರೆ ಬೀಳುತ್ತಿರಲಿಲ್ಲವೆಂಬ ಭಾವವಿದ್ದದ್ದರಿಂದಲೇ ಇಲ್ಲಿ ಮತ್ತೆಮತ್ತೆ ಈ ವಿಶೇಷಣವನ್ನು ಕೊಟ್ಟಿದೆ ಎಂದು ಭಾವ.

5. ಇಲ್ಲಿಯೇ ಮುಂದೆ ಉಷಸ್ತಿಯು ಪ್ರಸ್ತೋತೃವಿಗೆ ಅನುಜ್ಞೆಕೊಟ್ಟಿರುವದು ಕಂಡುಬರುತ್ತದೆ.

6. ನನ್ನ ಅನುಜ್ಞೆಯಿಲ್ಲದೆ ಜ್ಞಾನಿಯಾದ ನನ್ನೆದುರಿಗೆ ಪ್ರಸ್ತಾವಮಾಡುವೆಯಾದರೆ ಎಂದರ್ಥ.

ಏವಮೇವ ಪ್ರತಿಹರ್ತಾರಮುವಾಚ ಪ್ರತಿಹರ್ತರ್ಯಾ ದೇವತಾ ಪ್ರತಿಹಾರಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರತಿಹರಿಷ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ತೇ ಹ ಸಮಾರತಾ-ಸ್ತೂಷ್ಣೀಮಾಸಾಂಚಕ್ರಿರೇ ॥೧೧॥

೧೦. ಹೀಗೆಯೇ ಉದ್ಗಾತೃವನ್ನು ಕುರಿತು 'ಉದ್ಗಾತೃವೆ, ಯಾವ ದೇವತೆಯು ಉದ್ಗೀಥಕ್ಕೆ ಅನ್ವಾಯತ್ತವಾಗಿರುವದೋ, ಅದನ್ನು ಅರಿಯದೆ ಉದ್ಗಾನಮಾಡುವೆಯಾದರೆ ನಿನ್ನ ತಲೆಯು ಬೀಳಲಿ !' ಎಂದನು.

೧೧. ಹೀಗೆಯೇ ಪ್ರತಿಹರ್ತೃವನ್ನು ಕುರಿತು 'ಪ್ರತಿಹರ್ತೃವೆ, ಯಾವ ದೇವತೆಯು ಪ್ರತಿಹಾರಕ್ಕೆ ಅನ್ವಾಯತ್ತವಾಗಿರುವದೋ ಅದನ್ನರಿಯದೆ ಪ್ರತಿಹರಣಮಾಡುವೆಯಾದರೆ ನಿನ್ನ ತಲೆಯು ಬೀಳಲಿ !' ಎಂದನು. ಅವರು ಸಮಾರತರಾಗಿ ಸುಮ್ಮನೆ ಕೂತುಕೊಂಡುಬಿಟ್ಟರು. !

ಪ್ರಶ್ನೆ : ಉದ್ಗಾನಪ್ರತಿಹಾರಗಳಿಗೆ ದೇವತೆ ಯಾವದು ?

(ಭಾಷ್ಯ)

೯೪. ಏವಮೇವ ಉದ್ಗಾತಾರಂ ಪ್ರತಿಹರ್ತಾರಮ್ ಉವಾಚ ಇತ್ಯಾದಿ ಸಮಾನಮನ್ಯತ್ । ತೇ ಪ್ರಸ್ತೋತ್ರಾದಯಃ ಕರ್ಮಭ್ಯಃ ಸಮಾರತಾಃ ಉಪರತಾಃ ಸನ್ತಃ ಮೂರ್ಧಪಾತಭಯಾತ್ ತೂಷ್ಣೀಮಾಸಾಂಚಕ್ರಿರೇ ಅನ್ಯಚ್ಚ ಅಕುರ್ವನ್ತಃ । ಅರ್ತ್ವಿತ್ವಾತ್ ॥

(ಭಾಷ್ಯಾರ್ಥ)

ಹೀಗೆಯೇ ಉದ್ಗಾತೃವನ್ನೂ ಪ್ರತಿಹರ್ತೃವನ್ನೂ ಕುರಿತು ಹೇಳಿದನು- ಎಂದು ಮುಂತಾಗಿರುವದು ಉಳಿದ (ಗ್ರಂಥವು ಹಿಂದಿನ ಗ್ರಂಥಕ್ಕೆ) ಸಮಾನವಾಗಿದೆ. ಆ ಪ್ರಸ್ತೋತ್ರಾದಿಗಳು ಸಮಾರತರಾಗಿ (ತಮ್ಮ) ತಲೆಯು ಬಿದ್ದೀತೆಂಬ ಅಂಜಿಕೆಯಿಂದ (ಕರ್ಮವನ್ನು) ಬಿಟ್ಟವರಾಗಿ ; ಆರ್ತ್ವಿಗಳಾಗಿದ್ದರಿಂದ[1] ಮತ್ತೇನನ್ನೂ ಮಾಡದೆ ಸುಮ್ಮನೆ ಕುಳಿತಿದ್ದರು.

1. ದಕ್ಷಿಣೆಯನ್ನು ಬಯಸಿಬಂದವರಾದ್ದರಿಂದ.

ಒಂದನೆಯ ಅಧ್ಯಾಯ - ಹನ್ನೊಂದನೆಯ ಖಂಡ

(ಪ್ರಸ್ತಾವಪ್ರತೀಹಾರಗಳ ಉಪಾಸನೆ)

ರಾಜನು ಉಷಸ್ತಿಯನ್ನು ಆರ್ತ್ವಿಜ್ಯಗಳಿಗೆ ವರಿಸಿದ್ದು

(ಉಪನಿಷತ್ತು)

ಅಥ ಹೈನಂ ಯಜಮಾನ ಉವಾಚ ಭಗವನ್ತಂ ವಾ ಅಹಂ ವಿವಿದಿಷಾಣೀತ್ಯುಷಸ್ತಿರಸ್ಮಿ ಚಾಕ್ರಾಯಣ ಇತಿ ಹೋವಾಚ ॥೧॥

೧. ಆಗ ಇವನನ್ನು ಕುರಿತು ಯಜಮಾನನು 'ಭಗವಂತನಾದ (ನಿನ್ನನ್ನು) ನಾನು ತಿಳಿಯಲಿಚ್ಛಿಸುವೆನು' ಎಂದನು. ಇವನು 'ಉಷಸ್ತಿಚಾಕ್ರಾಯಣನಾಗಿರುವೆನು' ಎಂದನು.

ರಾಜನು ಬಂದವನು ಉಷಸ್ತಿ ಎಂದು ತಿಳಿದುಕೊಂಡದ್ದು

(ಭಾಷ್ಯ)

೯೫. ಅಥ ಅನನ್ತರಂ ಹ ಏನಮ್ ಉಷಸ್ತಿಂ ಯಜಮಾನಃ ರಾಜಾ ಉವಾಚ ಭಗವನ್ತಂ ವೈ ಪೂಜಾವನ್ತಂ ಅಹಂ ವಿವಿದಿಷಾಣಿ ವೇದಿತುಮ್ ಇಚ್ಛಾಮಿ । ಇತ್ಯುಕ್ತಃ ಉಷಸ್ತಿರಸ್ಮಿ ಚಾಕ್ರಾಯಣಃ ತವಾಪಿ ಶ್ರೋತ್ರಪಥಮ್ ಆಗತೋ ಯದಿ ಇತಿ ಹ ಉವಾಚ ಉಕ್ತವಾನ್ ॥

(ಭಾಷ್ಯಾರ್ಥ)

ಆಗ ಆ ಬಳಿಕ ಈ ಉಷಸ್ತಿಯನ್ನು ಯಜಮಾನನಾದ ರಾಜನು "ಭಗವಂತನಾದ ಪೂಜ್ಯನಾದ ನಿನ್ನನ್ನು ನಾನು ತಿಳಿಯಲಿಚ್ಛಿಸುವೆನು, ಯಾರೆಂದು ತಿಳಿಯಬಯಸುತ್ತೇನೆ" ಎಂದನು. ಹೀಗೆನ್ನಲು "ಉಷಸ್ತಿಚಾಕ್ರಾಯಣನಿರುವೆನು, ನಿನ್ನ ಕಿವಿಗೂ (ನನ್ನ ಹೆಸರು) ಬಿದ್ದಿರಬಹುದು" ಎಂದು (ಉವಾಚ = ಉಕ್ತವಾನ್) ಹೇಳಿದನು.

(ಉಪನಿಷತ್ತು)

ಸ ಹೋವಾಚ ಭಗವನ್ತಂ ವಾ ಅಹಮೇಭಿಃ ಸರ್ವೈರಾರ್ತ್ವಿಜ್ಯೈಃ ಪರ್ಯೈಷಿಷಂ ಭಗವತೋ ವಾ ಅಹಮವಿತ್ಯಾನ್ಯಾನವೃಷಿ ॥೨॥

ಭಗವಾಗ್ಂಸ್ತ್ವೇವ ಮೇ ಸರ್ವೈರಾರ್ತ್ವಿಜ್ಯೈರಿತಿ ತಥೇತ್ಯಥ ತರ್ಹ್ಯೇತ ಏವ ಸಮತಿಸೃಷ್ಟಾಃ ಸ್ತುವತಾಂ ಯಾವತ್ತ್ವೇಭ್ಯೋ ಧನಂ ದದ್ಯಾಸ್ತಾವನ್ಮಮ ದದ್ಯಾ ಇತಿ ತಥೇತಿ ಹ ಯಜಮಾನ ಉವಾಚ ॥೩॥

೨. ಅವನಿಂತೆಂದನು : 'ಭಗವಂತನನ್ನೇ ನಾನು ಈ ಎಲ್ಲಾ ಆರ್ತ್ವಿಜ್ಯ ಗಳಿಂದಲೂ ಹುಡುಕಿಸಿದೆನು. ಭಗವಂತನನ್ನು ಪಡೆಯದೆ ನಾನು ಮತ್ತೊಬ್ಬರನ್ನು ವರಣಮಾಡಿದೆನು.

೩. 'ಭಗವಂತನೇ ನನಗೆ ಸರ್ವಾರ್ತ್ವಿಜ್ಯಗಳಿಂದಲೂ (ಆಗಬೇಕು)' ಎನ್ನಲು, 'ಹಾಗೇ ಆಗಲಿ. ಇನ್ನು ಈಗ ಇವರೇ ಸಮತಿಸೃಷ್ಟರಾಗಿ ಸ್ತೋತ್ರ ಮಾಡಲಿ ! ಆದರೆ ಇವರಿಗೆ ಎಷ್ಟು ಧನವನ್ನು ಕೊಡುತ್ತೀಯೋ ಅಷ್ಟನ್ನು ನನಗೆ ಕೊಡಬೇಕು' ಎಂದನು. 'ಹಾಗೇ ಆಗಲಿ !' ಎಂದು ಯಜಮಾನನು ನುಡಿದನು.

ಉಷಸ್ತಿಯನ್ನು ವರಿಸಿದ್ದು, ಅವನು ಋತ್ವಿಜರಿಗೆ ಸ್ತೋತ್ರಮಾಡಲು ಅನುಮತಿಕೊಟ್ಟದ್ದು

(ಭಾಷ್ಯ)

೯೬. **ಸ ಹ ಯಜಮಾನ ಉವಾಚ । ಸತ್ಯಮೇವಮ್ । ಅಹಂ ಭಗವನ್ತಂ ಬಹುಗುಣಮ್ ಅಶ್ರೌಷಮ್ । ಸರ್ವೈಶ್ಚ ಋತ್ವಿಕ್ಕರ್ಮಭಿಃ ಆರ್ತ್ವಿಜ್ಯೈಃ ಪರ್ಯೈಷಿಷಂ ಪರ್ಯೇಷಣಂ ಕೃತವಾನಸಿ । ಅನ್ವಿಷ್ಯ ಭಗವತೋ ವಾ ಅಹಮ್ ಅವಿತ್ತ್ವಾ ಅಲಾಭೇನ ಅನ್ಯಾನ್ ಇಮಾನ್ ಅವೃಷಿ ವೃತವಾನಸ್ಮಿ। ಅದ್ಯಾಪಿ ಭಗವಾಂಸ್ತ್ವೇವ ಮೇ ಮಮ ಸರ್ವೈಃ ಆರ್ತ್ವಿಜ್ಯೈಃ ಋತ್ವಿಕ್ಕರ್ಮಾರ್ಥಮ್ ಅಸ್ತು । ಇತ್ಯುಕ್ತಃ ತಥಾ ಇತ್ಯಾಹ ಉಷಸ್ತಿಃ ಕಿಂ ತು ಅಥ ಏವಂ ತರ್ಹಿ ಏತೇ ಏವ ತ್ವಯಾ ಪೂರ್ವಂ ವೃತಾಃ ಮಯಾ ಸಮತಿಸೃಷ್ಟಾಃ ಮಯಾ ಸಮ್ಯಕ್ ಪ್ರಸನ್ನೇನ ಅನುಜ್ಞಾತಾಃ ಸನ್ತಃ ಸ್ತುವತಾಮ್ । ತ್ವಯಾ ತು ಏತತ್ ಕಾರ್ಯಮ್ । ಯಾವತ್ತು ಏಭ್ಯಃ ಪ್ರಸ್ತೋತ್ರಾದಿಭ್ಯಃ ಸರ್ವೇಭ್ಯೋ ಧನಂ ದದ್ಯಾಃ ಪ್ರಯಚ್ಛಸಿ, ತಾವನ್ಮಮ ದದ್ಯಾಃ । ಇತ್ಯುಕ್ತಃ ತಥಾ ಇತಿ ಹ ಯಜಮಾನ ಉವಾಚ ॥**

(ಭಾಷ್ಯಾರ್ಥ)

ಆ ಯಜಮಾನನು "ನಿಜ, ಹೀಗೆಯೇ ; ಬಹುಗುಣಯುಕ್ತನೆಂದು ಕೇಳಿರುವೆನು. ಭಗವಂತನಾದ ನಿನ್ನನ್ನು ಎಲ್ಲಾ ಆರ್ತ್ವಿಜ್ಯಗಳಿಂದಲೂ ಎಲ್ಲಾ ಋತ್ವಿಕ್ಕರ್ಮಗಳಿಂದಲೂ[1] ನಾನು (ಪರ್ಯೈಷಿಷಮ್ = ಪರ್ಯೇಷಣಂ ಕೃತವಾನಸ್ಮಿ) ಹುಡುಕಿಸಿರುತ್ತೇನೆ. ಹುಡುಕಿಸಿದರೂ ಭಗವಂತನನ್ನು ಪಡೆಯಲಾರದೆ (ತಾವು) ದೊರಕದೆ ಇದ್ದದ್ದರಿಂದ ಈ ಬೇರೆಯವರನ್ನು ನಾನು ವರಣಮಾಡಿರುತ್ತೇನೆ, ಆರಿಸಿಕೊಂಡಿರುತ್ತೇನೆ.

ಈಗಲೂ ಭಗವಂತನಾದ (ನೀನೇ ಮೇ = ಮಮ) ನನಗೆ ಎಲ್ಲಾ ಆರ್ತ್ವಿಜ್ಯಗಳಿಂದಲೂ (ಎಲ್ಲಾ) ಋತ್ವಿಕ್ಕರ್ಮಗಳಿಂದಲೂ ಆಗಬೇಕು" ಎನ್ನಲು ಉಷಸ್ತಿಯು "ಹಾಗೇ (ಆಗಲಿ), ಆದರೆ ಈಗ ಹೀಗಾದರೆ ನೀನು ಮೊದಲು ವರಣಮಾಡಿರುವ ಇವರೇ ನಾನು ನನ್ನಿಂದ ಸಮತಿಸೃಷ್ಟರಾಗಿ, ನಾನು ಪೂರ್ಣವಾಗಿ ಪ್ರಸನ್ನನಾಗಿ ಅನುಜ್ಞೆಮಾಡಿರುತ್ತೇನಾಗಿ (ನನ್ನಪ್ಪಣೆಯಿಂದ) ಸ್ತೋತ್ರಮಾಡಲಿ ! ಆದರೆ ನೀನು ಇದನ್ನು ಮಾಡಬೇಕು. ಈ ಪ್ರಸ್ತೋತೃವೇ ಮುಂತಾದವರಿಗೆಲ್ಲ ಎಷ್ಟು ಧನವನ್ನು (ದದ್ಯಾಃ = ಪ್ರಯಚ್ಛಸಿ) ಕೊಡುವೆಯೋ ಅಷ್ಟನ್ನೇ ನನಗೆ ಕೊಡಬೇಕು !" ಎನ್ನಲು ಯಜಮಾನನು "ಹಾಗೇ ಆಗಲಿ !" ಎಂದನು.

ಪ್ರಸ್ತಾವದೇವತೆಯ ನಿರ್ಣಯ

(ಉಪನಿಷತ್ತು)

ಅಥ ಹೈನಂ ಪ್ರಸ್ತೋತೋಪಸಸಾದ ಪ್ರಸ್ತೋತರ್ಯಾ ದೇವತಾ ಪ್ರಸ್ತಾವಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರಸ್ತೋಷ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ಮಾ ಭಗವಾನವೋಚತ್ ಕತಮಾ ಸಾ ದೇವತೇತಿ ॥೪॥

ಪ್ರಾಣ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶನ್ತಿ ಪ್ರಾಣಮಭ್ಯುಜ್ಜಿಹತೇ ಸೈಷಾ ದೇವತಾ ಪ್ರಸ್ತಾವಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರಾಸ್ತೋಷ್ಯೋ ಮೂರ್ಧಾ ತೇ ವ್ಯಪತಿಷ್ಯತ್ ತಥೋಕ್ತಸ್ಯ ಮಯೇತಿ ॥೫॥

೪. ಇನ್ನು ಇವನನ್ನು ಪ್ರಸ್ತೋತೃವು ಬಳಿಸಾರಿ 'ಪ್ರಸ್ತೋತೃವೆ, ಯಾವ

1. ಎಲ್ಲಾ ಆರ್ತ್ವಿಜ್ಯಗಳನ್ನೂ ತಮಗೆ ಕೊಡಬೇಕೆಂದು ಎಂದರ್ಥ.

ದೇವತೆಯು ಪ್ರಸ್ತಾವಕ್ಕೆ ಅನ್ವಾಯತ್ತವಾಗಿದೆಯೋ ಅದನ್ನರಿಯದೆ ಪ್ರಸ್ತಾವ ಮಾಡುವೆಯಾದರೆ ನಿನ್ನ ತಲೆ ಬೀಳಲಿ - ಎಂದು ನನಗೆ ಭಗವಂತನಾದ (ನೀನು) ಹೇಳಿದೆಯಷ್ಟೆ ಆ ದೇವತೆ ಯಾವದು ?' ಎಂದು (ಕೇಳಿದನು).

೫. (ಅವನು) 'ಪ್ರಾಣನೇ (ಆ ದೇವತೆ). ಭೂತಗಳೆಲ್ಲ ಈ ಪ್ರಾಣನನ್ನೇ ಒಳಹೊಗುತ್ತವೆ. ಪ್ರಾಣನನ್ನೇ ಬಿಟ್ಟು ಈಚೆಗೆ ಬರುತ್ತವೆ. ಆ (ಈ) ದೇವತೆ ಪ್ರಸ್ತಾವಕ್ಕೆ ಅನ್ವಾಯತ್ತವಾಗಿರುತ್ತದೆ ; ಅದನ್ನು ಅರಿಯದೆ (ನೀನು) ಪ್ರಸ್ತಾವ ಮಾಡಿದ್ದರೆ, ನಾನು ಹಾಗೆಂದು ಹೇಳಿದಾಗ ನಿನ್ನ ತಲೆ ಬಿದ್ದುಹೋಗುತ್ತಿತ್ತು' ಎಂದನು.

ಪ್ರಾಣನೇ ಪ್ರಸ್ತಾವದೇವತೆ

(ಭಾಷ್ಯ)

೯೭. ಅಥ ಹ ಏನಮ್ ಔಷಸ್ತ್ಯಂ ವಚಃ ಶ್ರುತ್ವಾ ಪ್ರಸ್ತೋತಾ ಉಪಸಸಾದ । ಉಷಸ್ತಿಂ ವಿನಯೇನ ಉಪಜಗಾಮ। ಪ್ರಸ್ತೋತಃ ಯಾ ದೇವತಾ ಇತ್ಯಾದಿ ಮಾ ಮಾಂ ಭಗವಾನ್ ಅವೋಚತ್ ಪೂರ್ವಮ್, ಕತಮಾ ಸಾ ದೇವತಾ ಯಾ ಪ್ರಸ್ತಾವಭಕ್ತಿಮ್ ಅನ್ವಾಯತ್ತಾ ? ಇತಿ ಪೃಷ್ಟಃ ಪ್ರಾಣಃ ಇತಿ ಹ ಉವಾಚ ಯುಕ್ತಂ ಪ್ರಸ್ತಾವಸ್ಯ ಪ್ರಾಣೋ ದೇವತಾ ಇತಿ । ಕಥಮ್ ? ಸರ್ವಾಣಿ ಸ್ಥಾವರಜಙ್ಗಮಾನಿ ಭೂತಾನಿ ಪ್ರಾಣಮೇವ ಅಭಿಸಂವಿಶನ್ತಿ ಪ್ರಲಯಕಾಲೇ । ಪ್ರಾಣಮ್ ಅಭಿಲಕ್ಷಯಿತ್ವಾ ಪ್ರಾಣಾತ್ಮನೈವ[1] ಉಜ್ಜಿಹತೇ ಪ್ರಾಣಾದೇವ ಉದ್ಗಚ್ಛನ್ತಿ ಇತ್ಯರ್ಥಃ । ಉತ್ಪತ್ತಿಕಾಲೇ । ಅತಃ ಸೈಷಾ ದೇವತಾ ಪ್ರಸ್ತಾವಮನ್ವಾಯತ್ತಾ । ತಾಂ ಚೇತ್ ಅವಿದ್ವಾನ್ ತ್ವಂ ಪ್ರಾಸ್ತೋಷ್ಯಃ ಪ್ರಸ್ತವನಂ ಪ್ರಸ್ತಾವಭಕ್ತಿಂ ಕೃತವಾನಸಿ ಯದಿ, ಮೂರ್ಧಾ ಶಿರಃ ತೇ ವ್ಯಪತಿಷ್ಯತ್ ವಿಪತಿತಮ್ ಅಭವಿಷ್ಯತ್ । ತಥೋಕ್ತಸ್ಯ ಮಯಾ ತತ್ಕಾಲೇ ಮೂರ್ಧಾ ತೇ ವಿಪತಿಷ್ಯತೀತಿ । ಅತಸ್ತ್ವಯಾ ಸಾಧು ಕೃತಮ್ ಮಯಾ ನಿಷಿದ್ಧಃ ಕರ್ಮಣೋ ಯದುಪರಮಮ್ ಅಕಾರ್ಷೀಃ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಇನ್ನು ಉಷಸ್ತಿಯ ಮಾತನ್ನು ಕೇಳಿದ ಪ್ರಸ್ತೋತೃವು ಇವನನ್ನು ಬಳಿಸಾರಿದನು, ವಿನಯದಿಂದ (ಶಿಷ್ಯನಾಗಿ) ಉಷಸ್ತಿಯ ಬಳಿಗೆ ಬಂದನು. '' 'ಪ್ರಸ್ತೋತೃವೆ, ಯಾವ (ದೇವತೆಯು)' ಎಂದು ಮುಂತಾಗಿ (ಮಾ = ಮಾಮ್) ನನಗೆ ಮೊದಲು ಭಗವಂತ

[1] ಅನುವಾದದ ಟಿಪ್ಪಣಿಯನ್ನು ನೋಡಿ.

ನಾದ ನೀನು ಹೇಳಿದೆಯಷ್ಟೆ, ಪ್ರಸ್ತಾವಭಕ್ತಿಗೆ ಅನ್ವಾಯತ್ತವಾಗಿರುವ ಆ ದೇವತೆ ಯಾವದು ?'' ಎಂದು ಕೇಳಿದನು.

(ಹೀಗೆಂದು) ಕೇಳಲು ಪ್ರಾಣನೇ[1] (ಆ ದೇವತೆ) ಎಂದನು. ಪ್ರಸ್ತಾವಕ್ಕೆ ಪ್ರಾಣನೇ ದೇವತೆ ಎಂಬುದು ಯುಕ್ತವಾಗಿದೆ. ಹೇಗೆಂದರೆ ಸ್ಥಾವರಜಂಗಮಭೂತಗಳು ಪ್ರಲಯಕಾಲದಲ್ಲಿ (ಅಭಿಸಂವಿಶನ್ತಿ =) ಪ್ರಾಣನನ್ನು ಅಭಿಲಕ್ಷಿಸಿಕೊಂಡು ಪ್ರಾಣ ರೂಪದಿಂದಲೇ (ಸೇರಿಕೊಳ್ಳುತ್ತವೆ, ಪ್ರಾಣನನ್ನೇ ಅಭಿಲಕ್ಷಿಸಿಕೊಂಡು[2] ಅಭ್ಯುಜ್ಜಿಹತೇ) ಪ್ರಾಣನಿಂದಲೇ ಉತ್ಪತ್ತಿಕಾಲದಲ್ಲಿ ಮೇಲಕ್ಕೆದ್ದು ಬರುತ್ತವೆ ಎಂದರ್ಥ, ಆದ್ದರಿಂದ ಆ ಈ ದೇವತೆಯು ಪ್ರಸ್ತಾವಕ್ಕೆ ಅನ್ವಾಯತ್ತವಾಗಿರುತ್ತದೆ. ಆ (ದೇವತೆ)ಯನ್ನು ಅರಿಯದೆಯೇ ನೀನು ಪ್ರಸ್ತೋತ್ರಮಾಡಿದ್ದರೆ, ಪ್ರಸ್ತಾವಭಕ್ತಿಯನ್ನು ಪ್ರಸ್ತವನಮಾಡಿದ್ದರೆ ನಿನ್ನ ಶಿರಸ್ಸು ಬಿದ್ದುಹೋಗುತ್ತಿತ್ತು ; ನಾನು ಹಾಗೆಂದು ಹೇಳಿದಾಗ ಎಂದರೆ 'ನಿನ್ನ ತಲೆಯು ಬೀಳಲಿ !' ಎಂದು ಹೇಳಿದೆನಲ್ಲ, ಆ ಕಾಲದಲ್ಲಿಯೇ (ಬಿದ್ದು-ಹೋಗುತ್ತಿತ್ತು) ಆದ್ದರಿಂದ ನಾನು ಬೇಡವೆನ್ನುತ್ತಲೂ ನೀನು ಕರ್ಮವನ್ನು ಬಿಟ್ಟುಬಿಟ್ಟೆಯಲ್ಲ, ಅದು ಒಳ್ಳೆಯದನ್ನೇ ಮಾಡಿದ್ದಾಯಿತು ಎಂದು ಅಭಿಪ್ರಾಯ.

ಉದ್ಗಾತೃದೇವತೆಯ ನಿರ್ಣಯ

(ಉಪನಿಷತ್ತು)

ಅಥ ಹೈನಮುದ್ಗಾತೋಪಸಸಾದೋದ್ಗಾತರ್ಯಾ ದೇವತೋದ್ಗೀಥ-ಮನ್ವಾಯತ್ತಾ ತಾಂ ಚೇದವಿದ್ವಾನುದ್ಗಾಸ್ಯಸಿ ಮೂರ್ಧಾ ತೇ ವಿಪ-ತಿಷ್ಯತೀತಿ ಮಾ ಭಗವಾನವೋಚತ್ ಕತಮಾ ಸಾ ದೇವತೇತಿ ॥೬॥

ಆದಿತ್ಯ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯಾದಿತ್ಯಮುಚ್ಚೈಃ ಸನ್ತಂ ಗಾಯನ್ತಿ ಸೈಷಾ ದೇವತೋದ್ಗೀಥ-

ಇಲ್ಲಿ ಪ್ರಾಣವೆಂದರೆ ಬ್ರಹ್ಮವೇ ಎಂದು ಸೂ. ಭಾ. ೧-೧-೨೩ರಲ್ಲಿ ನಿರ್ಣಯವಾಗಿರುತ್ತದೆ. ಟೀಕೆಯಲ್ಲಿಯೂ ಹಾಗೆಂದೇ ಬರೆದಿದೆ. ಆದರೆ ಭಾಷ್ಯದಲ್ಲಿ ಬ್ರಹ್ಮ, ಈಶ್ವರ, ದೇವ-ಎಂಬಂಥ ಮಾತಿನಿಂದ ಇದನ್ನು ಏತಕ್ಕೆ ಸೂಚಿಸಿಲ್ಲವೆಂಬುದು ವಿಚಾರಣೀಯವಾಗಿದೆ.

2. ಮೂಲಭಾಷ್ಯದಲ್ಲಿ ಏನೋ ಹೆಚ್ಚು ಕಡಿಮೆಯಾಗಿರುವಂತೆ ಕಾಣುತ್ತದೆ. ''ಪ್ರಾಣಾತ್ಮಾನ ಏವ ಉಜ್ಜಿಹತೇ'' ಎಂದಿರಬೇಕೋ ಏನೊ, ನಾವು ಪ್ರಾಣಾತ್ಮನೈವ ಎಂಬುದನ್ನು ಟೀಕೆಗನುಸಾರವಾಗಿ ಹಿಂದಕ್ಕೆ ಸಂವಿಶನ್ತಿ ಎಂಬದಕ್ಕೆ ಅನ್ವಯಿಸಿ ''ಪ್ರಾಣಮೇವಾಭಿಲಕ್ಷ್ಯ ಉಜ್ಜಿಹತೇ'' ಎಂಬ ವಾಕ್ಯವು ಮುಂದೆ ಇರಬೇಕೆಂದು ಕಲ್ಪಿಸಿರುತ್ತೇವೆ. ಏಕೆಂದರೆ 'ಪ್ರಾಣಮೇವಾಭಿ-ಸಂವಿಶನ್ತಿ ಪ್ರಾಣಮಭ್ಯುಜ್ಜಿಹತೇ' ಎಂದು ಎರಡು ಕಡೆಯಲ್ಲಿಯೂ 'ಅಭಿ' ಇದೆ.

ಮನ್ವಾಯತ್ತಾ ತಾಂ ಚೇದವಿದ್ವಾನುದಗಾಸ್ಯೋ ಮೂರ್ಧಾ ತೇ ವ್ಯಪತಿಷ್ಯತ್ತಥೋಕ್ತಸ್ಯ ಮಯೇತಿ ॥೭॥

೬. ಇನ್ನು ಇವನನ್ನು ಉದ್ಗಾತೃವು ಬಳಿಸಾರಿ 'ಉದ್ಗಾತೃವೆ, ಯಾವ ದೇವತೆಯು ಉದ್ಗೀಥಕ್ಕೆ ಅನ್ವಾಯತ್ತವಾಗಿರುವದೋ ಅದನ್ನರಿಯದೆ ಉದ್ಗಾನ ಮಾಡಿದರೆ ನಿನ್ನ ತಲೆಯು ಬೀಳಲಿ !- ಎಂದು ನನಗೆ ಭಗವಂತನಾದ (ನೀನು) ಹೇಳಿದೆಯಲ್ಲ, ಆ ದೇವತೆ ಯಾವದು ?' ಎಂದು (ಕೇಳಿದನು).

೭. (ಅವನು) 'ಆದಿತ್ಯನೇ (ಆ ದೇವತೆ). ಈ ಭೂತಗಳೆಲ್ಲವೂ ಆದಿತ್ಯನು ಮೇಲೆ ಇರುವಾಗ ಉಚ್ಚವಾಗಿ ಗಾನಮಾಡುತ್ತವೆ. ಆ ಈ ದೇವತೆಯು ಉದ್ಗೀಥಕ್ಕೆ ಅನ್ವಾಯತ್ತವಾಗಿರುತ್ತದೆ ; ಆದನ್ನರಿಯದೆ ಉದ್ಗಾನಮಾಡಿದ್ದೆ-ಯಾದರೆ ನಾನು ಹಾಗೆಂದು ಹೇಳಿದಾಗ ನಿನ್ನ ತಲೆ ಬಿದ್ದುಹೋಗುತ್ತಿತ್ತು !' ಎಂದನು.

ಆದಿತ್ಯನೇ ಉದ್ಗೀಥದೇವತೆ

(ಭಾಷ್ಯ)

೯೮. ತಥಾ ಉದ್ಗಾತಾ ಪಪ್ರಚ್ಛ ಕತಮಾ ಸಾ ಉದ್ಗೀಥಭಕ್ತಿಮ್ ಅನುಗತಾ ಅನ್ವಾಯತ್ತಾ ದೇವತಾ ? ಇತಿ ಪೃಷ್ಟಃ ಆದಿತ್ಯ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನಿ ಆದಿತ್ಯಮ್ ಉಚ್ಚೈಃ ಊರ್ಧ್ವಂ ಸನ್ತಂ ಗಾಯನ್ತಿ ಶಬ್ದಯನ್ತಿ । ಸ್ತುವನ್ತಿ ಇತ್ಯಭಿಪ್ರಾಯಃ । ಉಚ್ಚಬ್ದಸಾಮಾನ್ಯಾತ್ ಪ್ರಶಬ್ದಸಾಮಾನ್ಯಾದಿವ ಪ್ರಾಣಃ । ಅತಃ ಸೈಷಾ ದೇವತಾ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಹೀಗೆಯೇ ಉದ್ಗಾತೃವು ''ಉದ್ಗೀಥಭಕ್ತಿಗೆ ಅನ್ವಾಯತ್ತವಾಗಿರುವ (ಆದನ್ನು) ಅನುಸರಿಸಿಕೊಂಡು ಬಂದಿರುವ ಆ ದೇವತೆ ಯಾವದು ?'' ಎಂದು ಕೇಳಲು ಆದಿತ್ಯನೇ (ಆ ದೇವತೆಯು). ಈ ಭೂತಗಳೆಲ್ಲವೂ ಆದಿತ್ಯನು ಉಚ್ಚನಾಗಿ ಮೇಲುಗಡೆ ಇರುವಾಗ (ಅವನನ್ನು) ಗಾನಮಾಡುತ್ತವೆ, ಶಬ್ದಮಾಡುತ್ತವೆ, ಸ್ತೋತ್ರಮಾಡುತ್ತವೆ ಎಂದು ಅಭಿಪ್ರಾಯ. ಪ್ರಶಬ್ದಸಾಮಾನ್ಯದಿಂದ ಪ್ರಾಣನು (ಪ್ರಸ್ತಾವಕ್ಕೆ ದೇವತೆ ಯಾಗಿರು)ವಂತೆ ಉಚ್ಚಬ್ದಸಾಮಾನ್ಯವಾಗಿರುವದರಿಂದ (ಆದಿತ್ಯನು ಉದ್ಗೀಥಕ್ಕೆ ದೇವತೆ) ; ಆದ್ದರಿಂದ 'ಆ ಈ ದೇವತೆಯು' ಎಂದು ಮುಂತಾಗಿರುವದನ್ನು ಹಿಂದಿನ (ಗ್ರಂಥ)ದಂತೆ (ವ್ಯಾಖ್ಯಾನಮಾಡಿಕೊಳ್ಳಬೇಕು).

ಪ್ರತಿಹಾರದೇವತೆಯ ನಿರ್ಣಯ

(ಉಪನಿಷತ್ತು)

ಅಥ ಹೈನಂ ಪ್ರತಿಹರ್ತೋಪಸಸಾದ ಪ್ರತಿಹರ್ತರ್ಯಾ ದೇವತಾ ಪ್ರತಿಹಾರಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರತಿಹರಿಷ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ಮಾ ಭಗವಾನವೋಚತ್ ಕತಮಾ ಸಾ ದೇವತೇತಿ ॥೮॥

ಅನ್ನಮಿತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯನ್ನ-ಮೇವ ಪ್ರತಿಹರಮಾಣಾನಿ ಜೀವನ್ತಿ ಸೈಷಾ ದೇವತಾ ಪ್ರತಿಹಾರ-ಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರತ್ಯಹರಿಷ್ಯೋ ಮೂರ್ಧಾ ತೇ ವ್ಯಪತಿಷ್ಯತ್ತಥೋಕ್ತಸ್ಯ ಮಯೇತಿ ತಥೋಕ್ತಸ್ಯ ಮಯೇತಿ ॥೯॥

೮. ಇನ್ನು ಇವನನ್ನು ಪ್ರತಿಹರ್ತೃವು ಬಳಿಸಾರಿ 'ಪ್ರತಿಹರ್ತೃವೆ, ಯಾವ ದೇವತೆಯು ಪ್ರತಿಹಾರಕ್ಕೆ ಅನ್ವಾಯತ್ತವಾಗಿರುವದೋ ಅದನ್ನರಿಯದೆ ಪ್ರತಿಹರಣಮಾಡುವೆಯಾದರೆ ನಿನ್ನ ತಲೆ ಬೀಳಲಿ !- ಎಂದು ನನಗೆ ಭಗವಂತನಾದ (ನೀನು) ಹೇಳಿದೆಯಲ್ಲ, ಆ ದೇವತೆ ಯಾವದು ?' ಎಂದು (ಕೇಳಿದನು).

೯. (ಅವನು) 'ಅನ್ನವೇ (ಆ ದೇವತೆ), ಈ ಭೂತಗಳೆಲ್ಲವೂ ಅನ್ನವನ್ನೇ ಪ್ರತಿಹರಣಮಾಡಿಕೊಂಡು ಜೀವಿಸುತ್ತವೆ. ಆ ಈ ದೇವತೆಯು ಪ್ರತಿಹಾರಕ್ಕೆ ಅನ್ವಾಯತ್ತವಾಗಿರುತ್ತದೆ ; ಅದನ್ನರಿಯದೆ ಪ್ರತಿಹರಣ ಮಾಡಿದ್ದೆಯಾದರೆ, ನಾನು ಹಾಗೆಂದು ಹೇಳಿದಾಗ ನಿನ್ನ ತಲೆ ಬಿದ್ದುಹೋಗುತ್ತಿತ್ತು!' ಎಂದನು.

ಅನ್ನವೇ ಪ್ರತಿಹಾರದೇವತೆ

(ಭಾಷ್ಯ)

೯೯. **ಏವಮೇವ ಅಥ ಹ ಏನಂ ಪ್ರತಿಹರ್ತಾ ಉಪಸಸಾದ ಕತಮಾ ಸಾ ದೇವತಾ ಪ್ರತಿಹಾರಮ್ ಅನ್ವಾಯತ್ತಾ ? ಇತಿ ಪೃಷ್ಟಃ ಅನ್ನಮ್ ಇತಿ ಹೋವಾಚ ।**

ಸರ್ವಾಣಿ ಹ ವಾ ಇಮಾನಿ ಭೂತಾನಿ ಅನ್ನಮೇವ ಆತ್ಮಾನಂ ಪ್ರತಿ ಸರ್ವತಃ ಪ್ರತಿಹರಮಾಣಾನಿ ಜೀವನ್ತಿ। ಸೈಷಾ ದೇವತಾ ಪ್ರತಿಶಬ್ದಸಾಮಾನ್ಯಾತ್ ಪ್ರತಿಹಾರ-ಭಕ್ತಿಮ್ ಅನುಗತಾ। ಸಮಾನಮನ್ಯತ್ ತಥೋಕ್ತಸ್ಯ ಮಯಾ ಇತಿ ॥

(ಭಾಷ್ಯಾರ್ಥ)

ಹೀಗೆಯೇ ಇನ್ನು ಇವನನ್ನು ಪ್ರತಿಹರ್ತನು ಬಳಿಸಾರಿ "ಪ್ರತಿಹಾರಕ್ಕೆ ಅನ್ವಾಯತ್ತವಾಗಿರುವ ಆ ದೇವತೆ ಯಾವದು ?" ಎಂದು ಕೇಳಲು ಅನ್ನವೇ (ಆ ದೇವತೆ). ಈ ಭೂತಗಳೆಲ್ಲವೂ ಅನ್ನವನ್ನೇ ತಮ್ಮ ಕಡೆಗೆ ಎಲ್ಲಾ ಕಡೆಯಿಂದಲೂ (ಪ್ರತಿಹರಮಾಣಾಃ) ತಂದುಕೊಂಡು ಬದುಕಿರುತ್ತವೆ. ಆ ಈ ದೇವತೆಯು ಪ್ರತಿಶಬ್ದ ಸಾಮಾನ್ಯವಿರುವದರಿಂದ ಪ್ರತಿಹಾರಭಕ್ತಿಯನ್ನು ಅನುಸರಿಸಿಕೊಂಡಿರುವದು. 'ನಾನು ಹಾಗೆಂದು ಹೇಳಿದಾಗ' ಎಂಬುದು (ಮುಂತಾಗಿ) ಮಿಕ್ಕದ್ದು (ಹಿಂದಿನ) ಗ್ರಂಥಕ್ಕೆ ಸಮಾನವು.

ಉಪಾಸನೆಯೂ ಫಲವೂ

(ಭಾಷ್ಯ)

೧೦೦. ಪ್ರಸ್ತಾವೋದ್ಗೀಥಪ್ರತಿಹಾರಭಕ್ತೀಃ ಪ್ರಾಣಾದಿತ್ಯಾನ್ನದೃಷ್ಟ್ಯಾ ಉಪಾಸೀತ ಇತಿ ಸಮುದಾಯಾರ್ಥಃ। ಪ್ರಾಣಾದ್ಯಾಪತ್ತಿಃ ಕರ್ಮಸಮೃದ್ಧಿರ್ವಾ ಫಲಮ್ ಇತಿ ॥

(ಭಾಷ್ಯಾರ್ಥ)

ಪ್ರಸ್ತಾವ, ಉದ್ಗೀಥ, ಪ್ರತಿಹಾರ- ಈ ಭಕ್ತಿಗಳನ್ನು ಪ್ರಾಣ,[1] ಆದಿತ್ಯ, ಅನ್ನ- ಇವುಗಳ ದೃಷ್ಟಿಯಿಂದ ಉಪಾಸನೆಮಾಡಬೇಕು ಎಂಬುದು ಒಟ್ಟರ್ಥ. ಪ್ರಾಣಾದಿ ದೇವತೆಗಳ (ಭಾವವನ್ನು) ಪಡೆಯುವದೋ ಕರ್ಮಸಮೃದ್ಧಿಯೋ[2] ಫಲವು.

1. ಇಲ್ಲಿ ಕೂಡ ಈ ಭಾಷ್ಯದಲ್ಲಿ ಪರಮಾತ್ಮವಾಚಕಶಬ್ದವನ್ನುಪಯೋಗಿಸಿಲ್ಲವೇಕೆ ?- ಎಂಬುದು ವಿಚಾರಣೀಯವಾಗಿದೆ. ಆದಿತ್ಯಾನ್ನಗಳನ್ನು ದೇವತೆಗಳಾಗಿ ಹೇಳಿರುವ ಸಂನಿಧಿಯಲ್ಲಿದ್ದರೂ ವಾಕ್ಯಶೇಷದಿಂದ ಬ್ರಹ್ಮವೆಂದೇ ನಿರ್ಣಯಿಸಬೇಕು ಎಂದು ಸೂ. ಭಾ. ದಲ್ಲಿ ಬರೆದಿದೆ.
2. ಉಪಾಸನೆಯ ಉತ್ಕರ್ಷದಿಂದ ದೇವತಾಸಾಯುಜ್ಯವು ದೊರಕುವದು ; ಹಾಗಿಲ್ಲದಿದ್ದರೆ ಮಾಡಿದ ಯಜ್ಞವು ವೀರ್ಯವತ್ತರವಾಗಿ ತನ್ನ ಫಲವನ್ನು ಕೊಡುವದು- ಎಂದು ಅಭಿಪ್ರಾಯ.

ಒಂದನೆಯ ಅಧ್ಯಾಯ - ಹನ್ನೆರಡನೆಯ ಖಂಡ

(ಅನ್ನಾರ್ಥವಾಗಿ ಉದ್ಗೀಥ)

ಶೌವಉದ್ಗೀಥಕ್ಕೆ ಅವತರಣಿಕೆ

(ಉಪನಿಷತ್ತು)

ಅಥಾತಃ ಶೌವಉದ್ಗೀಥಸ್ತದ್ಧ ಬಕೋ ದಾಲ್ಭ್ಯೋ ಗ್ಲಾವೋ ವಾ ಮೈತ್ರೇಯಃ ಸ್ವಾಧ್ಯಾಯಮುದ್ವವ್ರಾಜ ॥೧॥

೧. ಇನ್ನು ಆದ್ದರಿಂದ ಶೌವಉದ್ಗೀಥವು. ಅಲ್ಲಿ ಬಕದಾಲ್ಭ್ಯನು ಮತ್ತು ಗ್ಲಾವಮೈತ್ರೇಯನು ಸ್ವಾಧ್ಯಾಯಕ್ಕಾಗಿ ಹೊರಟನು.

ಋಷಿಯು ಸ್ವಾಧ್ಯಾಯಕ್ಕೆ ಹೊರಟದ್ದು

(ಭಾಷ್ಯ)

೧೦೧. ಅತೀತೇ ಖಣ್ಡೇ ಅನ್ನಾಪ್ಯಾಪ್ತಿನಿಮಿತ್ತಾ ಕಷ್ಟಾವಸ್ಥಾ ಉಕ್ತಾ ಉಚ್ಛಿಷ್ಟೋಚ್ಛಿಷ್ಟಪರ್ಯುಷಿತಭಕ್ಷಣಲಕ್ಷಣಾ । ಸಾ ಮಾ ಭೂತ್ ಇತಿ ಅನ್ನಲಾಭಾಯ ಅಥ ಅನನ್ತರಂ ಶೌವಃ ಶ್ವಭಿರ್ದೃಷ್ಟಃ ಉದ್ಗೀಥಃ ಉದ್ಗಾನಂ ಸಾಮ ಅತಃ ಪ್ರಸೂಯತೇ । ತತ್ ತತ್ರ ಹ ಕಿಲ ಬಕೋ ನಾಮತಃ । ದಲ್ಭಸ್ಯ ಅಪತ್ಯಂ ದಾಲ್ಭ್ಯಃ । ಗ್ಲಾವೋ ವಾ ನಾಮತಃ । ಮಿತ್ರಾಯಾಶ್ಚ ಅಪತ್ಯಂ ಮೈತ್ರೇಯಃ । ವಾಶಬ್ದಶ್ಚಾರ್ಥೇ । ದ್ವಾಮುಷ್ಯಾಯಣೋ ಹಿ ಅಸೌ । ವಸ್ತುವಿಷಯೇ ಕ್ರಿಯಾಸ್ವಿವ ವಿಕಲ್ಪಾನುಪಪತ್ತೇಃ । ದ್ವಿನಾಮಾ ದ್ವಿಗೋತ್ರಃ ಇತ್ಯಾದಿ ಹಿ ಸ್ಮೃತಿಃ । ದೃಶ್ಯತೇ ಚ ಉಭಯತಃ ಪಿಣ್ಡಭಾಕ್ತ್ವಮ್ । ಉದ್ಗೀಥೇ ಬದ್ಧಚಿತ್ತತ್ವಾತ್ ಋಷೌ ಅನಾದರಾದ್ ವಾ । ವಾಶಬ್ದಃ ಸ್ವಾಧ್ಯಾಯಾರ್ಥಃ । ಸ್ವಾಧ್ಯಾಯಂ ಕರ್ತುಂ ಗ್ರಾಮಾದ್ ಬಹಿಃ ಉದ್ವವ್ರಾಜ ಉದ್ಗತವಾನ್ ವಿವಿಕ್ತದೇಶಸ್ಥೋದಕಾಭ್ಯಾಶಮ್ । 'ಉದ್ವವ್ರಾಜ,' 'ಪ್ರತಿ-ಪಾಲಯಾಂಚಕಾರ' (೧-೧೨-೩) ಇತಿ ಚ ಏಕವಚನಾತ್ ಲಿಙ್ಗಾತ್ ಏಕೋಽಸೌ ಋಷಿಃ । ಶ್ವೋದ್ಗೀಥಕಾಲಪ್ರತಿಪಾಲನಾತ್ ಋಷೇಃ ಸ್ವಾಧ್ಯಾಯಕರಣಮ್ ಅನ್ನಕಾಮನಯಾ ಇತಿ ಲಕ್ಷ್ಯತೇಽಭಿಪ್ರಾಯೋಽತಃ[1] ॥

---

1. ಈ ಪಾಠವೇ ಮೇಲೆಂದು ಗಣಿಸಿದೆ.

(ಭಾಷ್ಯಾರ್ಥ)

ಆಗಿಹೋದ ಖಂಡದಲ್ಲಿ ಅನ್ನವು ದೊರಕದ ನಿಮಿತ್ತದಿಂದಾದ, ಉಚ್ಛಿಷ್ಟೋಚ್ಛಿಷ್ಟಪರ್ಯುಷಿತವನ್ನು ತಿನ್ನುವದೆಂಬ ರೂಪದ ಕಷ್ಟದ ಅವಸ್ಥೆಯನ್ನು ಹೇಳಿದೆ. ಆ (ಅವಸ್ಥೆಯು) ಆಗದಿರಲೆಂದು ಅನ್ನಲಾಭಕ್ಕೋಸ್ಕರ ಇನ್ನು ಅನಂತರದಲ್ಲಿ ಶೌವ ಎಂದರೆ ನಾಯಿಗಳು ಕಂಡುಹಿಡಿದ ಉದ್ಗೀಥವನ್ನು ಉದ್ಗಾನವನ್ನು ಸಾಮವನ್ನು, ಆದ್ದರಿಂದ[1] ಪ್ರಾರಂಭಿಸಿರುತ್ತದೆ.

(ತತ್ = ತತ್ರ) ಅಲ್ಲಿ ಬಕನೆಂಬ ಹೆಸರಿನವನೂ ದಲ್ಭನ ಮಗನಾದ್ದರಿಂದ ದಾಲ್ಭ್ಯನೂ ; ಗ್ಲಾವನೆಂಬ ಹೆಸರಿನವನೂ ಮಿತ್ರೆಯ ಮಗನಾದ್ದರಿಂದ ಮೈತ್ರೇಯನೂ- ಇಲ್ಲಿ ವಾ ಎಂಬ ಶಬ್ದವು ಚಶಬ್ದದ ಅರ್ಥದಲ್ಲಿ (ಬಂದಿದೆ). ಇವನು ದ್ವೈಮುಷ್ಯಾಯಣನೇ[2] ; ಏಕೆಂದರೆ ಕ್ರಿಯೆಗಳಲ್ಲಿರಬಹುದಾಗಿರುವಂತೆ ವಸ್ತುವಿನಲ್ಲಿ ವಿಕಲ್ಪವು ಇರಲಾರದು.[3] (ಅವನು) 'ಎರಡು ಹೆಸರಿನವನು, ಎರಡು ಗೋತ್ರದವನು' (?) ಎಂದು ಮುಂತಾಗಿ ಸ್ಮೃತಿಯಿದೆಯಲ್ಲವೆ ? ಎರಡು (ಗೋತ್ರದಲ್ಲಿಯೂ ಇವನಿಂದ) ಪಿಂಡವು ದೊರೆಯುವದು ಕಂಡೂ ಇರುತ್ತದೆ.[4] ಉದ್ಗೀಥದಲ್ಲಿ ಚಿತ್ತವು ನಿಂತುಬಿಟ್ಟದ್ದರಿಂದ ಋಷಿಯಲ್ಲಿ ಆದರವಿಲ್ಲದ್ದರಿಂದ ವಾಶಬ್ದವು ಸ್ವಾಧ್ಯಾಯಾರ್ಥವಾಗಿ[5] (ಬಂದಿದೆ ಎಂದೂ ಹೇಳಬಹುದು).

ಸ್ವಾಧ್ಯಾಯವನ್ನು ಮಾಡುವದಕ್ಕೆಂದು ಊರಿನ ಹೊರಕ್ಕೆ ವಿವಿಕ್ತದೇಶದಲ್ಲಿರುವ ನೀರಿನ ಬಳಿಗೆ (ಉದ್ವವ್ರಾಜ = ಉದ್ಗತವಾನ್) ಹೊರಟುಬಂದನು. ಉದ್ವವ್ರಾಜ (ಹೊರಟನು), ಎಂದೂ ಪ್ರತಿಪಾಲಯಾಂಚಕಾರ (ಕಾದುಕೊಂಡಿದ್ದನು) ಎಂದೂ ಏಕವಚನವಿರುವದೆಂಬ ಲಿಂಗವಿರುವದರಿಂದ ಇವನು ಒಬ್ಬನೇ ಋಷಿ (ಎಂದು

---

1. "ಇನ್ನು ಮುಂದೆ" ಎಂದೂ ಕನ್ನಡಿಸಬಹದಾಗಿತ್ತು ; ಆದರೆ "ಅಥಾತಃ" ಎಂದಿರುವ ಕಡೆಯಲ್ಲೆಲ್ಲ ಅತಃಶಬ್ದಕ್ಕೆ ಹೇತ್ವರ್ಥವನ್ನು ಹೇಳುವದೇ ರೂಢಿ ; ಇಲ್ಲಿ ಹೇಳಿಯೂ ಇದೆ.
2. ಇಬ್ಬರಿಗೂ ಪುತ್ರನು ; ಒಬ್ಬನು ಜನಕನು, ಒಬ್ಬನು ದತ್ತುವಿನ ತಂದೆ.
3. ಕರ್ಮವನ್ನು ಹೀಗೂ ಮಾಡಬಹುದು ಹಾಗೂ ಮಾಡಬಹುದು ; ಆದರೆ ಒಂದು ವಸ್ತು ಹೀಗೂ ಇರಬಹುದು, ಹಾಗೂ ಇರಬಹದು - ಎಂಬುದು ಸಲ್ಲದು.
4. ಇಬ್ಬರ ಆಸ್ತಿಯಲ್ಲಿಯೂ ಇವನಿಗೆ ಭಾಗವು ಬರಬಹುದು, ಇಬ್ಬರಿಗೂ ಇವನು ಪಿಂಡವನ್ನು ಕೊಡುವದಕ್ಕೆ ಅಧಿಕಾರಿಯು - ಎಂಬುದು ಆಚಾರದಲ್ಲಿ ಕಂಡುಬರುತ್ತದೆ.
5. ವಿಕಲ್ಪವನ್ನು ಹೇಳಬೇಕೆಂಬ ಅಭಿಪ್ರಾಯದಿಂದ ವಾಶಬ್ದವನ್ನು ಪ್ರಯೋಗಿಸಿಲ್ಲ ; ಋಷಿಯೇನೂ ಮುಖ್ಯವಲ್ಲ, ಉಪಾಸನೆಯೇ ಮುಖ್ಯ ಎಂಬ ಅಭಿಪ್ರಾಯದಿಂದ ಪ್ರಯೋಗಿಸಿದೆ ಎಂದೂ ಈ ವಾಕ್ಯಕ್ಕೆ ಅರ್ಥಮಾಡಬಹುದು ಎಂದು ಅಭಿಪ್ರಾಯ. ಋಷಿಯು ಒಬ್ಬನೇ ಎಂಬುದು ಸಂದರ್ಭದಿಂದಲೇ ನಿಶ್ಚಯವಾಗುತ್ತದೆ- ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಗೊತ್ತಾಗುತ್ತದೆ)[1] ಶ್ವಾವ ಉದ್ಗೀಥವಾಗುವದನ್ನು ಕಾದುಕೊಂಡಿದ್ದದ್ದರಿಂದ (ಇವನು) ಅಧ್ಯಯನಮಾಡುತ್ತಿದ್ದದ್ದು ಅನ್ನಕಾಮನೆಯಿಂದ ಎಂಬ ಅಭಿಪ್ರಾಯವು ಅದರಿಂದ ಕಾಣಬರುತ್ತದೆ.

(ಉಪನಿಷತ್ತು)

ತಸ್ಮೈ ಶ್ವಾ ಪ್ರಾದುರ್ಬಭೂವ ತಮನ್ಯೇ ಶ್ವಾನಃ ಉಪಸಮೇತ್ಯೋಚುರನ್ನಂ ನೋ ಭಗವಾನಾಗಾಯತ್ವಶನಾಯಾಮ ವಾ ಇತಿ ॥೨॥

೨. ಅವನಿಗೆ ಬಿಳಿಯ ನಾಯಿ ಕಾಣಿಸಿಕೊಂಡಿತು. ಅದರ ಬಳಿಗೆ ಬೇರೆ ನಾಯಿಗಳು ಬಂದು 'ನಮಗೆ ಭಗವಂತನಾದ (ನೀನು) ಅನ್ನವನ್ನು ಆಗಾನ ಮಾಡಬೇಕು! ನಮಗೆ ಹಸಿವಾಗಿದೆ!' ಎಂದವು.

ಬಿಳಿಯ ನಾಯಿಯನ್ನು ಮಿಕ್ಕ ನಾಯಿಗಳು ಅನ್ನಾಗಾನಕ್ಕೆ ಪ್ರಾರ್ಥಿಸಿದ್ದು

(ಭಾಷ್ಯ)

೧೦೨. **ಸ್ವಾಧ್ಯಾಯೇನ ತೋಷಿತಾ ದೇವತಾ ಋಷಿರ್ವಾ ಶ್ವರೂಪಂ ಗೃಹೀತ್ವಾ ಶ್ವಾ ಶ್ವೇತಃ ಸನ್ ತಸ್ಮೈ ಋಷಯೇ ತದನುಗ್ರಹಾರ್ಥಂ ಪ್ರಾದುರ್ಬಭೂವ ಪ್ರಾದುಶ್ಚಕಾರ । ತಮ್ ಅನ್ಯೇ ಶುಕ್ಲಂ ಶ್ವಾನಂ ಕ್ಷುಲ್ಲಕಾಃ ಶ್ವಾನಃ ಉಪಸಮೇತ್ಯ ಊಚುಃ ಉಕ್ತವನ್ತಃ । ಅನ್ನಂ ನಃ ಅಸ್ಮಭ್ಯಂ ಭಗವಾನ್ ಆಗಾಯತು ಆಗಾನೇನ ನಿಷ್ಪಾದಯತು ಇತ್ಯರ್ಥಃ । ಮುಖ್ಯಪ್ರಾಣಂ[2] ವಾಗಾದಯೋ ವಾ ಪ್ರಾಣಮನು ಅನ್ನಭುಜಃ । ಸ್ವಾಧ್ಯಾಯಪರಿತೋಷಿತಾಃ[3] ಸನ್ತಃ ಅನುಗೃಹ್ಣೀಯುರೇನಂ ಶ್ವರೂಪಮ್[4] ಆದಾಯ ಇತಿ ಯುಕ್ತಮ್ ಏವಂ ಪ್ರತಿಪತ್ತುಮ್ । ಅಶನಾಯಾಮ ವೈ ಬುಭುಕ್ಷಿತಾಃ ಸ್ಮೋ ವೈ ಇತಿ ॥**

1. ಹಿಂದೆ ಹೇಳಿದ ಎರಡು ಹೆಸರುಗಳೂ ಒಬ್ಬನದೇ ಎಂಬುದನ್ನು ಈ ಏಕವಚನವು ಸೂಚಿಸುತ್ತದೆ ಎಂದರ್ಥ.
2. "ಮುಖ್ಯಪ್ರಾಣವಾಗಾದಯೋ ವಾ" ಎಂಬ ವಾ॥ ತೆ॥ ಪಾಠಗಳಿಗಿಂತ ಈ ಪಾಠವೇ ಮೇಲು. 3. ಈ ಮಾತಿನ ಹಿಂದೆ "ತೇ" ಎಂದಿದ್ದರೆ ಚೆನ್ನಾಗಿತ್ತೆಂದು ತೋರುತ್ತದೆ.
4. "ಸ್ವರೂಪಮ್" ಎಂಬುದು ಅಚ್ಚಿನ ತಪ್ಪು.

(ಭಾಷ್ಯಾರ್ಥ)

ಅಧ್ಯಯನದಿಂದ ತೋಷಿತನಾದ ಯಾವನಾದರೊಬ್ಬ ದೇವನೋ ಋಷಿಯೋ[1] ನಾಯಿಯ ರೂಪವನ್ನು ಧರಿಸಿಕೊಂಡು ಬಿಳಿಯ ನಾಯಿಯಾಗಿ ಆ ಋಷಿಗೆ ಅವನನ್ನು ಅನುಗ್ರಹಿಸುವದಕ್ಕಾಗಿ (ಪ್ರಾದುರ್ಬಭೂವ = ಪ್ರಾದುಶ್ಚಕ್ರಾರ) ಹೊರತೋರಿಕೊಂಡನು. ಆ ಬಿಳಿಯ ನಾಯಿಯನ್ನು ಬೇರೆಯ ಸಣ್ಣಪುಟ್ಟ ನಾಯಿಗಳು ಬಳಿಸಾರಿ ಇಂತೆಂದವು, ಹೀಗೆಂದವು. ''ಅನ್ನವನ್ನು (ನಃ = ಅಸ್ಮಭ್ಯಮ್) ನಮಗಾಗಿ ಭಗವಂತನಾದ ನೀನು ಆಗಾನಮಾಡಿಕೊಡಬೇಕು, ಆಗಾನಮಾಡುವದರಿಂದ ಉಂಟುಮಾಡಿಕೊಡಬೇಕು'' (ಎಂದರು) ಎಂದರ್ಥ. ಅಥವಾ ಪ್ರಾಣನನ್ನನುಸರಿಸಿ ಅನ್ನವನ್ನು ಭುಂಜಿಸುವ ವಾಗಾದಿಗಳು[2] ಮುಖ್ಯಪ್ರಾಣನನ್ನು ಬಳಿಸಾರಿ (ಹೀಗೆಂದರು ಎಂದು ಅರ್ಥ. ಅವರು), ಅಧ್ಯಯನದಿಂದ ಪರಿತುಷ್ಟರಾಗಿ ನಾಯಿಯ ರೂಪವನ್ನು ತೆಗೆದುಕೊಂಡು ಇವನನ್ನು ಅನುಗ್ರಹಿಸಿದ್ದಾರು - ಎಂದಿಂತು ತಿಳಿಯುವದು ಯುಕ್ತವು.[3] ಆ ಸಣ್ಣನಾಯಿಗಳು (ಮತ್ತೇನೆಂದವೆಂದರೆ), ''ಹಸಿವುಳ್ಳವರಾಗಿರುತ್ತೇವೆ, ಹಸಿವಿನಿಂದ ಬಳಲುತ್ತಿದ್ದೇವೆಯಲ್ಲ!'' (ಎಂದವು).

(ಉಪನಿಷತ್ತು)

ತಾನ್ ಹೋವಾಚೇಹೈವ ಮಾ ಪ್ರಾತರುಪಸಮೀಯಾತೇತಿ ತದ್ಧ ಬಕೋ ದಾಲ್ಭ್ಯೋ ಗ್ಲಾವೋ ವಾ ಮೈತ್ರೇಯಃ ಪ್ರತಿ ಪಾಲಯಾಂಚಕಾರ ॥೩॥

(ಆ ಬಿಳಿಯ ನಾಯಿ) ಅವುಗಳನ್ನು ಕುರಿತು 'ಇಲ್ಲಿಯೇ ಬೆಳಗ್ಗೆ ನನ್ನ ಬಳಿಗೆ ಬನ್ನಿರಿ!' ಎಂದಿತು. ಅಲ್ಲಿ ಬಕದಾಲ್ಭ್ಯನು ಮತ್ತು ಗ್ಲಾವಮೈತ್ರೇಯನು ಪ್ರತಿಪಾಲನೆಮಾಡಿಕೊಂಡಿದ್ದನು.

---

1. ಏಕೆಂದರೆ ಬರಿಯ ನಾಯಿಗೆ ಸಾಮಗಾನವು ಬರುವದಿಲ್ಲ.
2. ವಾಗಾದಿಗಳು ಮುಖ್ಯಪ್ರಾಣನ ಮೂಲಕವೇ ಅನ್ನವನ್ನು ಪಡೆದು ತೃಪ್ತವಾಗುವವೆನ್ನುವದಕ್ಕೆ ಬೃ. ಭಾ. ೧-೩-೧೮ (ಭಾ. ಭಾ. ೭೭) ನ್ನು ನೋಡಿ.
3. ಇಲ್ಲಿಯೂ ಪ್ರಾಣಾದಿದೇವತೆಗಳನ್ನೇ ತೆಗೆದುಕೊಳ್ಳುವದು ಯುಕ್ತ ; ಏಕೆಂದರೆ ಸಾಮಾನ್ಯರಿಗೆ ಅನ್ನಾಗಾನಶಕ್ತಿಯಿಲ್ಲ ; ಮುಖ್ಯಪ್ರಾಣನು ಅನ್ನಾಗಾನವನ್ನು ಮಾಡಿದನೆಂಬ ಅರ್ಥವಾದವೂ ಇದೆ.

ಋಷಿಯು ಶೌವ ಉದ್ಗೀಥಕ್ಕಾಗಿ ಕಾದುಕೊಂಡಿದ್ದದ್ದು

(ಭಾಷ್ಯ)

೧೦೩. ಏವಮುಕ್ತೋ ಶ್ವಾ ಶ್ವೇತ ಉವಾಚ ತಾನ್ ಕ್ಷುಲ್ಲಕಾನ್ ಶುನಃ । ಇಹೈವ ಅಸ್ಮಿನ್ನೇವ ದೇಶೇ ಮಾ ಮಾಂ ಪ್ರಾತಃ ಪ್ರಾತಃಕಾಲೇ ಉಪಸಮಿಯಾತ ಇತಿ । ದೈರ್ಘ್ಯಂ ಛಾನ್ದಸಮ್ ಉಪಸಮಿಯಾತ ಇತಿ । ಪ್ರಮಾದಪಾಠೋ ವಾ । ಪ್ರಾತಃಕಾಲಕರಣಂ ತತ್ಕಾಲ ಏವ ಕರ್ತವ್ಯಾರ್ಥಮ್ । ಅನ್ನದಸ್ಯ ವಾ ಸವಿತುಃ ಅಪರಾಹ್ಣೇ ಅನಾಭಿಮುಖ್ಯಾತ್ । ತತ್ ತತ್ರೈವ ಹ ಬಕೋ ದಾಲ್ಭ್ಯಃ ಗ್ಲಾವೋ ವಾ ಮೈತ್ರೇಯಋಷಿಃ ಪ್ರತಿಪಾಲಯಾಂಚಕಾರ ಪ್ರತೀಕ್ಷಣಂ ಕೃತವಾನ್ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆನ್ನಲು ಬಿಳಿಯ ನಾಯಿ ಆ ಸಣ್ಣಪುಟ್ಟ ನಾಯಿಗಳನ್ನು ಕುರಿತು ಇಲ್ಲಿಯೇ ಈ ಸ್ಥಲದಲ್ಲಿಯೇ (ಮಾ = ಮಾಮ್) ನನ್ನನ್ನು ಬೆಳಗ್ಗೆ ಬಂದು ಸೇರಿರಿ. 'ಸಮಿಯಾತ' ಎಂಬ ದೀರ್ಘಸ್ವರದ (ಪಾಠವು) ವೈದಿಕ (ಪ್ರಯೋಗವು), ಅಥವಾ ತಪ್ಪುಪಾಠವು. ಪ್ರಾತಃಕಾಲವನ್ನು ಗೊತ್ತುಮಾಡಿರುವದು ಆ ಕಾಲದಲ್ಲಿಯೇ (ಈ ಗಾನವನ್ನು) ಮಾಡಬೇಕೆಂದು (ವಿಧಿಸು)ವದಕ್ಕಾಗಿ ; ಅಥವಾ ಅನ್ನವನ್ನು ಕೊಡುವ ಸೂರ್ಯನು ಅಪರಾಹ್ಣದಲ್ಲಿ ಎದುರಿಗಿರುವದಿಲ್ಲವಾದ್ದರಿಂದ. (ತತ್ = ತತ್ರೈವ) ಅಲ್ಲಿಯೇ ಬಕದಾಲ್ಭ್ಯನು ಮತ್ತು ಗ್ಲಾವಮೈತ್ರೇಯ(ನೆಂಬ ಮತ್ತೊಂದು ಹೆಸರಿನ ಆ) ಋಷಿಯು ಪ್ರತಿಪಾಲನೆಮಾಡಿಕೊಂಡಿದ್ದನು, (ಅವರ ಬರುವನ್ನು) ನಿರೀಕ್ಷಿಸಿಕೊಂಡಿದ್ದನು.

ನಾಯಿಗಳು ಉದ್ಗೀಥವನ್ನು ಗಾನಮಾಡಿದ್ದು

(ಉಪನಿಷತ್ತು)

ತೇ ಹ ಯಥೈವೇಹ ಬಹಿಷ್ಪವಮಾನೇನ ಸ್ತೋಷ್ಯಮಾಣಾಃ ಸಗ್ಂರಬ್ಧಾಃ ಸರ್ಪನ್ತ್ಯೇವಮಾಸಸೃಪುಸ್ತೇ ಹ ಸಮುಪವಿಶ್ಯ ಹಿಂ ಚಕ್ರುಃ ॥೪॥

೪. ಅವು ಹೇಗೆ ಇಲ್ಲಿ ಬಹಿಷ್ಪವಮಾನದಿಂದ ಸ್ತೋತ್ರಮಾಡಲಿರುವವರು ಸೇರಿಕೊಂಡು ನಡೆಯುತ್ತಿರುವರೋ, ಹಾಗೆಯೇ ನಡೆದವು. ಅವು ಕುಳಿತು ಕೊಂಡು ಹಿಂಕರಿಸಿದವು.

ನಾಯಿಗಳು ಉದ್ಗಾನಕ್ಕೆ ಸಜ್ಜಾದದ್ದು

(ಭಾಷ್ಯ)

೧೦೪. ತೇ ಶ್ವಾನಃ ತತ್ರೈವ ಆಗತ್ಯ ಋಷೇಃ ಸಮಕ್ಷಂ ಯಥೈವ ಇಹ ಕರ್ಮಣಿ ಬಹಿಷ್ಪವಮಾನೇನ ಸ್ತೋತ್ರೇಣ ಸ್ತೋಷ್ಯಮಾಣಾಃ ಉದ್ಗಾತೃಪುರುಷಾಃ ಸಂರಬ್ಧಾಃ ಸಲ್ಲಗ್ನಾ ಅನ್ಯೋನ್ಯಮೇವ ಸರ್ಪನ್ತಿ[1] ಏವಂ ಮುಖೇನ ಅನ್ಯೋನ್ಯಸ್ಯ ಪುಚ್ಛಂ ಗೃಹೀತ್ವಾ ಆಸಸೃಪುಃ ಆಸೃಪ್ತವನ್ತಃ । ಪರಿಭ್ರಮಣಂ ಕೃತವನ್ತಃ ಇತ್ಯರ್ಥಃ । ಏವಂ ಸಂಸೃಪ್ಯ ಸಮುಪವಿಶ್ಯ ಉಪವಿಷ್ಟಾಃ ಸನ್ತಃ ಹಿಂಚಕ್ರುಃ ಹಿಂಕಾರಂ ಕೃತವನ್ತಃ ॥

(ಭಾಷ್ಯಾರ್ಥ)

ಆ ನಾಯಿಗಳು ಅಲ್ಲಿಗೆ ಬಂದು (ಆ) ಋಷಿಯ ಎದುರಿಗೆ ಹೇಗೆ ಇಲ್ಲಿ, ಕರ್ಮದಲ್ಲಿ, ಬಹಿಷ್ಪವಮಾನಸ್ತೋತ್ರದಿಂದ ಸ್ತೋತ್ರಮಾಡಲಿರುವ[2] ಉದ್ಗಾತೃ ಪುರುಷರು[3] ಸೇರಿಕೊಂಡು ಒಬ್ಬರನ್ನೊಬ್ಬರು ಮುಟ್ಟಿಕೊಂಡು ಸೇರಿಕೊಂಡು, ಒಬ್ಬರ ನ್ನೊಬ್ಬರು ಮುಟ್ಟಿಕೊಂಡು ನಡೆಯುತ್ತಿರುವರೋ ಹಾಗೆ ಬಾಯಿಯಿಂದ ಒಂದು ಮತ್ತೊಂದರ ಬಾಲವನ್ನು ಕಚ್ಚಿಕೊಂಡು ನಡೆದವು, ಹೋದವು ; ಸುತ್ತಿದವು ಎಂದರ್ಥ. ಅವು ಹೀಗೆ ಸುತ್ತಿದಬಳಿಕ ಕುಳಿತುಕೊಂಡು ಕುಳಿತುಕೊಂಡವುಗಳಾಗಿ ಹಿಂಕರಿಸಿದವು, ಹಿಂಕಾರವನ್ನು ಮಾಡಿದವು.

ಶೌವ ಉದ್ಗೀಥ

(ಉಪನಿಷತ್ತು)

ಓಷಿಮದಾಷಿಮೋಂಷಿಪಿಬಾಷಿಮೋಂಷಿ ದೇವೋ ವರುಣಃ ಪ್ರಜಾಪತಿಃ

---

1. ಟೀಕೆಯಲ್ಲಿ "ಸರ್ಪನ್ತಿ ಇತಿ ಶೇಷಃ" ಎಂದಿರುವದರಿಂದ ಆ॥೧॥ ಗಳು "ಸರ್ವನ್ತಿ" ಇಲ್ಲದ ಪಾಠವನ್ನು ಅಂಗೀಕರಿಸಿದ್ದರೆಂದು ಕಲ್ಪಿಸುವದಕ್ಕೆಡೆಯಿದೆ. ಆದರೆ ತೆ॥ ಪಾಠದಲ್ಲಿ "ಅನ್ಯೋನ್ಯಮೇವ ಸರ್ಪನ್ತಿ" ಎಂದೇ ಇರುವದರಿಂದಲೂ ಉಪನಿಷತ್ತಿನಲ್ಲಿಯೂ "ಸರ್ಪನ್ತಿ" ಶಬ್ದವಿರುವದರಿಂದಲೂ ನಾವು ಈ ಪಾಠವನ್ನೇ ಸ್ವೀಕರಿಸಿದ್ದೇವೆ.
2. ಸ್ತೋತ್ರಗಳ ವಿಚಾರಕ್ಕೆ ಪರಿಶಿಷ್ಟವನ್ನು ನೋಡಿರಿ. ಜ್ಯೋತಿಷ್ಟೋಮಾದಿಗಳಲ್ಲಿ ಸ್ತೋತ್ರಮಾಡಬೇಕಾದ ಬಹಿಷ್ಪವಮಾನಸ್ತೋತ್ರದಲ್ಲಿ ಉದ್ಗಾತೃಗಳು "ಉಪಾಸ್ಮೈ ಗಾಯತ", "ದವಿದ್ಯುತತ್ಯ", "ಪವಸ್ವ" ಎಂಬ ತ್ರ್ಯೃಚಗಳಲ್ಲಿರುವ ಒಂಬತ್ತು ಋಕ್ಕುಗಳನ್ನು ಗಾನಮಾಡುತ್ತಾರೆ. ಐ. ಬ್ರಾ. ೧೧-೨ ನ್ನು ನೋಡಿರಿ.
3. ಉದ್ಗಾತೃಪುರುಷರು ಎಂದರೆ ಇಲ್ಲಿ ಅಧ್ವರ್ಯು ಮೊದಲಾಗಿ ಯಜಮಾನಪರ್ಯಂತ ವಾಗಿ ಎಂದರ್ಥ-ಎಂದು ಟೀಕೆ.

ಸವಿತಾನ್ನಮಿಹಾಹರದನ್ನಪತೇಽನ್ನಮಿಹಾಹರಾಹರೋಽಮಿತಿ ॥೫॥

೫. ಓಮ್ । ನಾವು ಉಣ್ಣುವಂತಾಗಲಿ ! ಓಮ್ ! ನಾವು ಕುಡಿಯುವಂತಾಗಲಿ ! ಓಮ್ ! ದೇವವರುಣನು, ಪ್ರಜಾಪತಿಯು, ಸವಿತೃವು ಅನ್ನವನ್ನು ಇಲ್ಲಿಗೆ ತಂದುಕೊಡಲಿ ! ಅನ್ನಪತಿಯೇ ಅನ್ನವನ್ನು ಇಲ್ಲಿಗೆ ತಂದುಕೊಡು ! ತಂದುಕೊಡು, ಓಮ್ !

ಅನ್ನಕ್ಕಾಗಿ ಮಾಡುವ ಗಾನ

(ಭಾಷ್ಯ)

೧೦೫. ಓಮ್ ಅದಾಮ, ಓಂ ಪಿಬಾಮ, ಓಂ ದೇವಃ ದ್ಯೋತನಾತ್ । ವರುಣಃ ವರ್ಷಣಾತ್ ಜಗತಃ । ಪ್ರಜಾಪತಿಃ ಪಾಲನಾತ್ ಪ್ರಜಾನಾಮ್ । ಸವಿತಾ ಪ್ರಸವಿತೃತ್ವಾತ್ ಸರ್ವಸ್ಯ । ಆದಿತ್ಯ ಉಚ್ಯತೇ ಏತೈಃ ಪರ್ಯಾಯೈಃ । ಸ ಏವಂಭೂತಃ ಆದಿತ್ಯಃ ಅನ್ನಮ್ ಅಸ್ಮಭ್ಯಮ್ ಇಹ ಆಹರತ್ ಆಹರತು ಇತಿ । ತೇ ಏವಂ ಹಿಂಕೃತ್ವಾ ಪುನರಪ್ಯೂಚುಃ । ಸ ತ್ವಂ ಹೇ ಅನ್ನಪತೇ । ಸ ಹಿ ಸರ್ವಸ್ಯ ಅನ್ನಸ್ಯ ಪ್ರಸವಿತೃತ್ವಾತ್ ಪತಿಃ । ನ ಹಿ ತತ್ಪಾಕೇನ ವಿನಾ ಪ್ರಸೂತಮ್[1] ಅನ್ನಮ್ ಅಣುಮಾತ್ರಮಪಿ ಜಾಯತೇ ಪ್ರಾಣಿನಾಮ್ । ಅತೋಽನ್ನಪತಿಃ । ಹೇ ಅನ್ನಪತೇ । ಅನ್ನಮ್ ಅಸ್ಮಭ್ಯಮ್ ಇಹ ಆಹರ, ಆಹರ ! ಇತಿ ಅಭ್ಯಾಸ ಆದರಾರ್ಥಃ ಓಮ್ ! ಇತಿ ॥

(ಭಾಷ್ಯಾರ್ಥ)

ಓಮ್ ! ನಾವು ಉಣ್ಣುವಂತಾಗಲಿ ! ಓಮ್ ! ನಾವು ಕುಡಿಯುವಂತಾಗಲಿ ! ಹೊಳೆಯುತ್ತಿರುವದರಿಂದ ದೇವನು ; ಜಗತ್ತಿಗೆ ಮಳೆಗರೆಯುವದರಿಂದ[2] ವರುಣನು ; ಪ್ರಜೆಗಳನ್ನು ಕಾಪಾಡುತ್ತಿರುವದರಿಂದ ಪ್ರಜಾಪತಿಯು ; ಎಲ್ಲವನ್ನೂ ಉಂಟುಮಾಡುವದರಿಂದ ಸವಿತೃ. ಈ ಪರ್ಯಾಯಗಳಿಂದ ಆದಿತ್ಯನನ್ನೇ ಹೇಳಿರುತ್ತದೆ. ಆ ಇಂಥ ಆದಿತ್ಯನು ಅನ್ನವನ್ನು ನಮಗಾಗಿ ಇಲ್ಲಿಗೆ (ಆಹರತ್ = ಆಹರತು) ತಂದುಕೊಡಲಿ !

1. "ಪ್ರಭೂತಮ್" ಎಂದೂ ಪಾಠ ; ಅನುವಾದದ ಟಿಪ್ಪಣಿಯನ್ನು ನೋಡಿ.
2. "ವರಣಾತ್" ಎಂದು ಪಾಠವಿದೆ ; ಜಗತ್ತೆಲ್ಲವೂ ಅವನನ್ನು ವರಿಸುವದರಿಂದ ಎಂದು ಅದಕ್ಕೆ ಅರ್ಥ.

ಅವು ಹೀಗೆ ಹಿಂಕರಿಸಿ[1] ಮತ್ತೆ ಹೀಗೆಂದವು : ಆ ನೀನು, ಎಲೈ ಅನ್ನಪತಿಯೆ- ಆ (ಆದಿತ್ಯನೇ) ಅಲ್ಲವೆ, ಪ್ರತಿಯೊಬ್ಬನಿಗೂ ಅನ್ನವನ್ನುಂಟುಮಾಡುತ್ತಿರುವದರಿಂದ (ಅನ್ನಕ್ಕೆ) ಪತಿಯು ? ಅವನಿಂದ ಪಾಕವಾಗದೆ ಹುಟ್ಟಿದ[2] ಅನ್ನವು ಒಂದಿಷ್ಟೂ ಪ್ರಾಣಗಳಿಗೆ ಉಂಟಾಗಲಾರದಷ್ಟೆ ? ಆದ್ದರಿಂದ (ಅವನು) ಅನ್ನಪತಿಯು. ಎಲೈ ಅನ್ನಪತಿಯೆ,- ಅನ್ನವನ್ನು ನಮಗಾಗಿ ಇಲ್ಲಿ 'ತಂದುಕೊಡು ! ತಂದುಕೊಡು !' ಎಂದು ಮತ್ತೆ ಹೇಳಿರುವದು ಆದರಕ್ಕಾಗಿ. ಓಮ್ ! ಎಂದು[3] (ನುಡಿದವು).

ಒಂದನೆಯ ಅಧ್ಯಾಯ - ಹದಿಮೂರನೆಯ ಖಂಡ

(ಸ್ತೋಭೋಪಾಸನೆಗಳು)

ಈ ಗ್ರಂಥದ ಸಂಬಂಧ

(ಭಾಷ್ಯ)

೧೦೬. ಭಕ್ತಿವಿಷಯೋಪಾಸನಂ ಸಾಮಾವಯವಸಂಬದ್ಧಮ್ ಇತ್ಯತಃ ಸಾಮಾವಯವಾನ್ತರಸ್ತೋಭಾಕ್ಷರವಿಷಯಾಣ್ಯುಪಾಸನಾನ್ತರಾಣಿ ಸಂಹತಾನ್ಯುಪದಿಶ್ಯನ್ತೇ ಅನನ್ತರಮ್ । ತೇಷಾಂ ಸಾಮಾವಯವಸಂಬದ್ಧತ್ವಾವಿಶೇಷಾತ್ ॥

(ಭಾಷ್ಯಾರ್ಥ)

ಭಕ್ತಿಗಳ ವಿಷಯದ ಉಪಾಸನೆಯು ಸಾಮದ ಅವಯವಕ್ಕೆ ಸಂಬದ್ಧವಾಗಿರು

1. ಈ ಸ್ತೋತ್ರಕ್ಕೆ ಹಿಂಕಾರವೆಂಬ ಹೆಸರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಹಿಂಕಾರ ಸ್ವರೂಪಮಾಹ - ಎಂದು ಟೀಕೆ.
2. ''ಪ್ರಭೂತಮ್'' ಎಂಬ ಆ॥ ಪಾಠಕ್ಕೆ ಹೆಚ್ಚಿನ ಎಂದರ್ಥ. ಆ ಪಾಠವಾಗಲಿ ''ಪ್ರಸೂತಮ್'' ಎಂಬ ವಾ॥ತೆ॥ ಪಾಠವಾಗಲಿ ಅಣುಮಾತ್ರಮಪಿ ಎಂಬುದಕ್ಕೆ ಅಷ್ಟು ಹೊಂದಿಕೆಯಾಗಿಲ್ಲವಾದರೂ ಆದಿತ್ಯನ ಅನುಗ್ರಹವಿಲ್ಲದೆ ಅಣುಮಾತ್ರವೂ ಆಹಾರವುಂಟಾಗಲಾರದು-ಎಂಬುದಕ್ಕೆ ''ಪ್ರಸೂತಮ್'' ಎಂಬ ಪಾಠವೇ ಹತ್ತಿರವಾಗಿದೆ.
3. ಇತಿ ಎಂಬುದು ಉಪಾಸನೆಯು ಮುಗಿಯಿತು - ಎಂಬುದನ್ನು ಸೂಚಿಸುತ್ತದೆ ಎಂದು ಟೀಕೆ. ವಾಕ್ಯಪೂರ್ತಿಯನ್ನೂ ಇದೇ ಮಾತು ಸೂಚಿಸುತ್ತದೆ.

ವದರಿಂದ ಅದಾದ ಬಳಿಕ ಮತ್ತೊಂದು ಅವಯವವಾದ ಸ್ತೋಭಾಕ್ಷರವಿಷಯ[1]ಕವಾದ ಬೇರೆಯ ಉಪಾಸನೆಗಳನ್ನು ಒಟ್ಟುಗೂಡಿಸಿ ಇಲ್ಲಿ ಹೇಳಲಾಗುತ್ತದೆ ; ಏಕೆಂದರೆ ಆ (ಸ್ತೋಭಗಳೂ) ಸಾಮಾವಯವಸಂಬದ್ಧವಾಗಿವೆ ಎಂಬುದು ಸಮಾನವಾಗಿರುತ್ತದೆ.

ಸ್ತೋಭಾಕ್ಷರಗಳ ಉಪಾಸನೆ

(ಉಪನಿಷತ್ತು)

ಅಯಂ ವಾವ ಲೋಕೋ ಹಾಉಕಾರೋ ವಾಯುರ್ಹಾ ಇಕಾರಶ್ಚನ್ದ್ರಮಾ ಅಥಕಾರಃ । ಆತ್ಮೇಹಕಾರೋಽಗ್ನಿರೀಕಾರಃ ॥೧॥

೧. ಈ ಲೋಕವೇ ಹಾಉಕಾರವು ; ವಾಯುವು ಹಾಇಕಾರವು ; ಚಂದ್ರನು ಅಥಕಾರವು ; ಆತ್ಮನು ಇಹಕಾರವು ; ಅಗ್ನಿಯು ಈಕಾರವು.

ಹಾಉಕಾರಾದಿಪಂಚಸ್ತೋಭಗಳ ಉಪಾಸನೆ

(ಭಾಷ್ಯ)

೧೦೭. ಅಯಂ ವಾವ ಅಯಮೇವ ಲೋಕಃ ಹಾಉಕಾರಃ ಸ್ತೋಭಃ ರಥನ್ತರೇ ಸಾಮ್ನಿ ಪ್ರಸಿದ್ಧಃ । ''ಇಯಂ ವೈ ರಥನ್ತರಮ್'' (ತಾಂ. ಬ್ರಾ. ೧೮-೬-೧೧) ಇತ್ಯಸ್ಮಾತ್ ಸಂಬನ್ಧಸಾಮಾನ್ಯಾತ್ ಹಾಉಕಾರಸ್ತೋಭೋಽಯಂ ಲೋಕಃ ಇತ್ಯೇವಮ್ ಉಪಾಸೀತ । ವಾಯುರ್ಹಾಇಕಾರಃ । ವಾಮದೇವ್ಯೇ ಸಾಮನಿ ಹಾಇಕಾರಃ ಪ್ರಸಿದ್ಧಃ । ವಾಯ್ವಪ್ಸಂಬನ್ಧಶ್ಚ ವಾಮದೇವ್ಯಸ್ಯ ಸಾಮ್ನೋ ಯೋನಿಃ ಇತ್ಯಸ್ಮಾತ್ ಸಾಮಾನ್ಯಾತ್ ಹಾಇಕಾರಂ ವಾಯುದೃಷ್ಟ್ಯಾ ಉಪಾಸೀತ । ಚನ್ದ್ರಮಾ ಅಥಕಾರಃ । ಚನ್ದ್ರದೃಷ್ಟ್ಯಾ ಅಥಕಾರಮುಪಾಸೀತ । ಅನ್ನೇ ಹಿ ಇದಂ ಸ್ಥಿತಮ್ । ಅನ್ನಾತ್ಮಾ ಚನ್ದ್ರಃ । ಥಕಾರಾಕಾರಸಾಮಾನ್ಯಾಚ್ಚ । ಆತ್ಮಾ ಇಹಕಾರಃ । ಇಹ ಇತಿ ಸ್ತೋಭಃ । ಪ್ರತ್ಯಕ್ಷೋ ಹಿ ಆತ್ಮಾ ಇಹ ಇತಿ ವ್ಯಪದಿಶ್ಯತೇ । ಇಹೇತಿ ಚ ಸ್ತೋಭಃ । ತತ್ಸಾಮಾನ್ಯಾತ್ । ಅಗ್ನಿರೀಕಾರಃ । ಈನಿಧನಾನಿ ಚ ಆಗ್ನೇಯಾನಿ ಸರ್ವಾಣಿ ಸಾಮಾನೀತ್ಯತಃ ತತ್ಸಾಮಾನ್ಯಾತ್ ॥

(ಭಾಷ್ಯಾರ್ಥ)

(ಅಯಂ ವಾವ = ಅಯಮೇವ) ಈ ಲೋಕವೇ ಹಾಉಕಾರವು, ರಥಂತರ

---

1. ಸ್ತೋಭವೆಂದರೆ ಗಾನಕ್ಕಾಗಿ ಸಾಮವೇದಿಗಳು ಹಾಕಿಕೊಂಡಿರುವ ಅರ್ಥಶೂನ್ಯವಾದ ಅಕ್ಷರವಿಶೇಷ.

ಸಾಮದಲ್ಲಿ[1] ಪ್ರಸಿದ್ಧವಾಗಿರುವ ಸ್ತೋಭವು. ಈ (ಭೂಮಿಯೇ) ರಥಂತರವು (ಎಂದು ಶ್ರುತಿಯಿದೆ). ಈ ಸಂಬಂಧದ ಸಾಮಾನ್ಯದಿಂದ[2] ಹಾಉಕಾರವೆಂಬ ಸ್ತೋಭವು ಈ ಲೋಕವು ಎಂದಿಂತು ಉಪಾಸನೆಮಾಡಬೇಕು.[3] ವಾಯು ಹಾಇಕಾರವು, ವಾಮದೇವ್ಯಸಾಮದಲ್ಲಿ ಹಾಇಕಾರವು ಪ್ರಸಿದ್ಧವಾಗಿರುತ್ತದೆ. ವಾಯು, ಅಪ್ಪು - ಇವುಗಳ ಸಂಬಂಧವೇ ವಾಮದೇವ್ಯಸಾಮಕ್ಕೆ ಕಾರಣವು[4] ಎಂಬೀ ಸಾಮಾನ್ಯದಿಂದ ಹಾಇಕಾರವನ್ನು ವಾಯುವೆಂಬ ದೃಷ್ಟಿಯಿಂದ ಉಪಾಸನೆಮಾಡಬೇಕು. ಚಂದ್ರನು ಅಥಕಾರವು ; ಚಂದ್ರದೃಷ್ಟಿಯಿಂದ ಅಥಕಾರವನ್ನು ಉಪಾಸನೆಮಾಡಬೇಕು. ಅನ್ನದ-ಲ್ಲಲ್ಲವೆ, ಇದು ಸ್ಥಿತವಾಗಿದೆ[5] ? ಚಂದ್ರನು ಅನ್ನಾತ್ಮನಾಗಿರುತ್ತಾನೆ[6]. ಥಕಾರ, ಅಕಾರ - ಇವು ಸಮಾನವಾಗಿರುವದರಿಂದಲೂ (ಹೀಗೆಂದು ಉಪಾಸನೆಮಾಡಬೇಕು)[7]. ಆತ್ಮನು ಇಹಕಾರವು. ಇಹ ಎಂಬುದು (ಒಂದು) ಸ್ತೋಭ(ದ ಹೆಸರು). ಪ್ರತ್ಯಕ್ಷನಾದ ಆತ್ಮ ನಲ್ಲವೆ, ಇಹ ಎನ್ನಿಸಿಕೊಳ್ಳುತ್ತಾನೆ ? ಸ್ತೋಭವೂ ಇಹ (ಎನ್ನಿಸಿಕೊಂಡಿದೆ)[8].

1. ಸಾಮಗಳ ಹೆಸರುಗಳನ್ನು ಕುರಿತು ಪರಿಶಿಷ್ಟದಲ್ಲಿ ವಿವರಣವನ್ನು ಕೊಟ್ಟಿದೆ.
2. ರಥಂತರವನ್ನು ಭೂಮಿಯೆಂದು ಶ್ರುತಿಯಲ್ಲಿ ಕರೆದಿದೆ ; ರಥಂತರದಲ್ಲಿ ಹಾಉಕಾರವಿದೆ. ಹೀಗೆ ರಥಂತರಸಂಬಂಧವೆಂಬ ಹೋಲಿಕೆಯಿಂದ ಹಾಉಕಾರವನ್ನು ಭೂಮಿಯೆಂದು ಉಪಾಸನೆಮಾಡಬೇಕು ಎಂದರ್ಥ.
3. ಇಲ್ಲಿ ಕರ್ಮಾಂಗವಾಗಿರುವ ಸಾಮಸ್ತೋಭಗಳಲ್ಲಿ ಭೂಮಿ ಮುಂತಾದ ದೃಷ್ಟಿಯನ್ನಿಡ ಬೇಕೆಂದು ವಿಧಿಸಿದೆ.
4. ಮೈಥುನೇಚ್ಛೆಯುಳ್ಳ ಅಪ್ಪನ್ನು ವಾಯುವು ಹಿಂಗೂಡಿದ್ದರಿಂದ ವಾಮದೇವ್ಯಸಾಮವು ಉಂಟಾಯಿತೆಂದು ಶ್ರುತಿ. ಆ. ಗಿ. ಹಾಇಕಾರವು ವಾಮದೇವ್ಯದಲ್ಲಿರುವದರಿಂದಲೂ ವಾಮದೇವ್ಯಕ್ಕೆ ವಾಯುಸಂಬಂಧವಿರುವದರಿಂದಲೂ ಈ ಸಂಬಂಧದ ಹೋಲಿಕೆಯಿಂದ ಹಾಇಕಾರವನ್ನು ವಾಯುವೆಂದು ಉಪಾಸನೆಮಾಡಬೇಕು - ಎಂದು ಭಾವ.
5. ಇದೆಲ್ಲವೂ ಅನ್ನದಲ್ಲಿ ಸ್ಥಿತವಾಗಿದೆ ; ಅನ್ನವನ್ನಾಶ್ರಯಿಸಿಕೊಂಡು ಇರುತ್ತದೆ.
6. ಚಂದ್ರನು ಸಸ್ಯಗಳಿಗೆ ಪತಿಯಾದ್ದರಿಂದ ಅನ್ನಾತ್ಮಕನು ; ಅಥವಾ ಆದಿತ್ಯ, ಚಂದ್ರ- ಇವರು ಅತ್ತ್ರ, ಅನ್ನ- ಇವುಗಳ ಸ್ವರೂಪರೆಂದು ಶ್ರುತಿಪ್ರಸಿದ್ಧಿ.
7. ಥಕಾರವು ಸ್ಥಿತವೆಂಬ ಮಾತಿನಲ್ಲಿಯೂ ಅಥಕಾರದಲ್ಲಿಯೂ ಇದೆ ; ಅಕಾರವು ಅನ್ನವಾಗಿ ರುವ ಚಂದ್ರನಲ್ಲಿಯೂ ಅಥಕಾರದಲ್ಲಿಯೂ ಇದೆ. ಈ ಹೋಲಿಕೆಯಿಂದ ಎಂದು ಆ. ಗಿ.
8. ಮೊದಲು ಅಪ್ರತ್ಯಕ್ಷನಾಗಿದ್ದು ಆ ಬಳಿಕ ಪ್ರತ್ಯಕ್ಷನಾದವನನ್ನು ಇಹ ಎನ್ನುತ್ತಾರೆ. ಎಂದು ಆ. ಗಿ. ಎಲ್ಲಕ್ಕಿಂತಲೂ ಪ್ರತ್ಯಕ್ಷನಾಗಿರುವದರಿಂದ ಆತ್ಮನು ಇಹ ಎನಿಸಿಕೊಳ್ಳುವದಕ್ಕೆ ತಕ್ಕವನು. ''ಇಹೈವ ಖಲು'' ಎಂದು ಪ್ರ. ಶ್ರುತಿ ; ಸ್ತೋಭವೂ ಇಹ ಎನ್ನಿಸಿಕೊಂಡಿದೆ. ಆದ್ದರಿಂದ ಎಂದು ಹೋಲಿಕೆಯನ್ನು ಇಲ್ಲಿ ಹೇಳಿದೆ -ಎಂದು ತೋರುತ್ತದೆ.

ಈ ಸಾಮಾನ್ಯದಿಂದ (ಇಹಕಾರವು ಆತ್ಮನು ಎಂದು ಉಪಾಸನೆಮಾಡಬೇಕು). ಅಗ್ನಿಯು ಈಕಾರವು. ಆಗ್ನೇಯಸಾಮಗಳೆಲ್ಲವೂ ಈನಿಧನರಾಗಿರುತ್ತವೆ[1]. ಆದ್ದರಿಂದ (ಈ ಸ್ತೋಭವನ್ನು ಅಗ್ನಿ - ಎಂದು ಉಪಾಸನೆಮಾಡಬೇಕು).

(ಉಪನಿಷತ್ತು)

ಆದಿತ್ಯ ಊಕಾರೋ ನಿಹವ ಏಕಾರೋ ವಿಶ್ವೇದೇವಾ ಔಹೋ-ಇಕಾರಃ ಪ್ರಜಾಪತಿರ್ಹಿಂಕಾರಃ ಪ್ರಾಣಃ ಸ್ವರೋಽನ್ನಂ ಯಾ ವಾಗ್ವಿರಾಟ್ ॥೨॥

೨. ಆದಿತ್ಯನು ಊಕಾರವು ; ನಿಹವವು ಏಕಾರವು ; ವಿಶ್ವೇದೇವತೆಗಳು ಔಹೋಇಕಾರವು ; ಪ್ರಜಾಪತಿಯು ಹಿಂಕಾರವು ; ಪ್ರಾಣವು ಸ್ವರವು ; ಅನ್ನವು ಯಾ ; ವಾಕ್ಕು ವಿರಾಜನು.

ಊಕಾರಾದಿಸ್ತೋಭಗಳ ಉಪಾಸನೆ

(ಭಾಷ್ಯ)

೧೦೮. ಆದಿತ್ಯಃ ಊಕಾರಃ । ಉಚ್ಚೈರೂರ್ಧ್ವಂ ಸನ್ತಮ್ ಆದಿತ್ಯಂ ಗಾಯನ್ತಿ[2] । ಊಕಾರಶ್ಚಾಯಂ ಸ್ತೋಭಃ । ಆದಿತ್ಯದೈವತ್ಯೇ ವಾ[3] ಸಾಮ್ನಿ ಸ್ತೋಭಃ ಇತಿ ಆದಿತ್ಯ ಊಕಾರಃ । ನಿಹವಃ ಇತ್ಯಾಹ್ವಾನಮ್ । ಏಕಾರಃ ಸ್ತೋಭಃ । ಏಹಿ ಇತಿ ಚ ಆಹ್ವಯನ್ತೀತಿ ತತ್ಸಾಮಾನ್ಯಾತ್ । ವಿಶ್ವೇದೇವಾ ಔಹೋಇ[4]ಕಾರಃ । ವೈಶ್ವದೇವ್ಯೇ ಸಾಮ್ನಿ ಸ್ತೋಭಸ್ಯ ದರ್ಶನಾತ್ । ಪ್ರಜಾಪತಿರ್ಹಿಂಕಾರಃ । ಆನಿರುಕ್ತ್ಯಾತ್ । ಹಿಂಕಾರಸ್ಯ ಚ ಅವ್ಯಕ್ತತ್ವಾತ್ । ಪ್ರಾಣಃ ಸ್ವರಃ । ಸ್ವರ ಇತಿ ಸ್ತೋಭಃ । ಪ್ರಾಣಸ್ಯ ಚ ಸ್ವರಹೇತುತ್ವಸಾಮಾನ್ಯಾತ್ । ಅನ್ನಂ ಯಾ । ಯಾ ಇತಿ ಸ್ತೋಭೋಽನ್ನಮ್ । ಅನ್ನೇನ ಹಿ ಇದಂ ಯಾತಿ ಇತ್ಯತಃ ತತ್ಸಾಮಾನ್ಯಾತ್ । ವಾಗಿತಿ ಸ್ತೋಭೋ ವಿರಾಟ್ ಅನ್ನಂ, ದೇವತಾವಿಶೇಷೋ ವಾ । ವೈರಾಜೇ ಸಾಮ್ನಿ ಸ್ತೋಭದರ್ಶನಾತ್ ॥

1. ಈಕಾರದಲ್ಲಿ ಕೊನೆಗಂಡಿವೆ. 2. ಇದರ ಮುಂದಿನ ಇತಿ ಬೇಡವೆಂದು ಬಿಟ್ಟಿದೆ.
3. ವಾ ಇಲ್ಲದ ಪಾಠಕ್ಕಿಂತ ಇದು ಮೇಲು. 4. "ಔಹೋಯಿ" ಎಂದೂ ಪಾಠ.

(ಭಾಷ್ಯಾರ್ಥ)

ಆದಿತ್ಯನು ಊಕಾರವು. ಮೇಲುಗಡೆ ಇರುವ ಆದಿತ್ಯನನ್ನು ಉಚ್ಚವಾಗಿ ಗಾನಮಾಡುತ್ತಾರೆ. ಈ ಸ್ತೋಭವೂ ಊಕಾರವಾಗಿದೆ. ಅಥವಾ ಆದಿತ್ಯದೇವತಾಕವಾದ ಸಾಮದಲ್ಲಿ (ಈ) ಸ್ತೋಭವು (ಇದೆ)ಯಾದ್ದರಿಂದ ಆದಿತ್ಯನು ಊಕಾರವು[1]. ನಿಹವ ಎಂದರೆ ಕರೆಯುವದು ; ಏಕಾರವು ಸ್ತೋಭವು, ಏಹಿ (!) (ಬಾ !) ಎಂದು ಕರೆಯುತ್ತಾರಾದ್ದರಿಂದ ಆ ಸಾದೃಶ್ಯದಿಂದ (ಸ್ತೋಭವನ್ನು ನಿಹವ ಎಂದು ಉಪಾಸನೆಮಾಡಬೇಕು). ವಿಶ್ವೇದೇವತೆಗಳು ಔಹೋಇಕಾರವು ; ಏಕೆಂದರೆ ವೈಶ್ವದೇವ್ಯಸಾಮದಲ್ಲಿ (ಈ) ಸ್ತೋಭವು ಕಾಣಬರುತ್ತದೆ. ಪ್ರಜಾಪತಿಯು ಹಿಂಕಾರವು. ಏಕೆಂದರೆ (ಅವನು) ಅನಿರುಕ್ತನಾಗಿರುತ್ತಾನೆ[2]. ಹಿಂಕಾರವೂ ಅವ್ಯಕ್ತವಾಗಿರುತ್ತದೆ[3]. ಪ್ರಾಣವು ಸ್ವರವು. ಸ್ವರ ಎಂಬುದು (ಒಂದು) ಸ್ತೋಭವು ; ಪ್ರಾಣನೂ ಸ್ವರಕ್ಕೆ ಕಾರಣನಾಗಿರುತ್ತಾನೆಂಬ ಹೋಲಿಕೆಯಿಂದ[4] (ಸ್ತೋಭವನ್ನು ಸ್ವರವೆಂದು ಉಪಾಸನೆಮಾಡಬೇಕು). ಅನ್ನವು ಯಾ. ಯಾ ಎಂಬ ಸ್ತೋಭವು ಅನ್ನ(ವು ಎಂದು ಉಪಾಸನೆಮಾಡಬೇಕು). ಅನ್ನದಿಂದಲೇ ಅಲ್ಲವೆ, ಈ ಜಗತ್ತು (ಯಾತಿ=) ಹೋಗುತ್ತಿದೆ ? ಆದ್ದರಿಂದ ಈ ಸಾಮಾನ್ಯದಿಂದ (ಹೀಗೆಂದು ಉಪಾಸನೆ ಮಾಡಬೇಕು). ವಾಕ್ ಎಂಬ ಸ್ತೋಭವು ವಿರಾಜ (ಎಂದರೆ) ಅನ್ನವು, ಅಥವಾ ದೇವತಾವಿಶೇಷವು (ವಿರಾಟ್ಪುರುಷನು ಎಂದು ಉಪಾಸನೆಮಾಡಬೇಕು). ಏಕೆಂದರೆ ವೈರಾಜಸಾಮದಲ್ಲಿ (ಈ) ಸ್ತೋಭವು ಕಾಣಬರುತ್ತದೆ.

(ಉಪನಿಷತ್ತು)

ಅನಿರುಕ್ತಸ್ತ್ರಯೋದಶಃ ಸ್ತೋಭಃ ಸಂಚರೋ ಹುಂಕಾರಃ ॥೩॥

೩. ಹದಿಮೂರನೆಯದಾದ ಹುಂಕಾರವು ಸಂಚರವಾದ ಅನಿರುಕ್ತವು.

1. ಊಕಾರಸ್ತೋಭವನ್ನು ಆದಿತ್ಯನೆಂದು ಉಪಾಸನೆಮಾಡಬೇಕು.
2. ಕಪ್ಪು, ಹಸಿರು- ಎಂದು ಮುಂತಾಗಿ ಗೊತ್ತುಪಡಿಸಿ ಹೇಳಲಾಗದ್ದರಿಂದ ಎಂದು ಟೀಕೆ. ಸಮಷ್ಟಿರೂಪನಾದ್ದರಿಂದ ಒಂದು ವಸ್ತುವನ್ನು ಮತ್ತೊಂದರಿಂದ ಬಿಡಿಸಿ ಗೊತ್ತುಪಡಿಸುವಂತೆ ವಿಂಗಡಿಸಿ ತಿಳಿಸಲಿಕ್ಕಾಗದವನು ಎಂದೂ ವಿವರಿಸಬಹುದು.
3. ಹಿಂ ಎಂಬುದು ವ್ಯಕ್ತವಾಗಿ ಉಚ್ಚರಿಸುವ ಸ್ತೋಭವಲ್ಲ.
4 ಪ್ರಾಣನ ಬಲದಿಂದಲೇ ಸ್ವರವು ಕೇಳಿಸುವಂತೆ ಆಗುತ್ತದೆ.

ಹುಂಕಾರದ ಉಪಾಸನೆ

(ಭಾಷ್ಯ)

೧೦೯. ಅನಿರುಕ್ತಃ ಅವ್ಯಕ್ತತ್ವಾತ್ ಇದಂ ಚ ಇದಂ ಚ ಇತಿ ನಿರ್ವಕ್ತುಂ ನ ಶಕ್ಯತ ಇತ್ಯತಃ ಸಂಚರಃ ವಿಕಲ್ಪ್ಯಮಾನಸ್ವರೂಪಃ ಇತ್ಯರ್ಥಃ । ಕೋಽಸೌ ಇತಿ ? ಆಹ । ತ್ರಯೋದಶಃ ಸ್ತೋಭ ಹುಂಕಾರಃ । ಅವ್ಯಕ್ತೋ ಹಿ ಅಯಮ್ । ಅತೋಽನಿರುಕ್ತ ವಿಶೇಷ ಏವ ಉಪಾಸ್ಯ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಅನಿರುಕ್ತವು, ಎಂದರೆ ಅವ್ಯಕ್ತವಾಗಿರುವದರಿಂದ ಇದೂ ಇದೂ ಎಂದು ನಿರ್ವಚನಮಾಡುವದಕ್ಕೆ ಆಗದಂಥದ್ದು ; ಆದ್ದರಿಂದ ಸಂಚರವು, (ಎರಡು ಬಗೆಯಾಗಿ) ವಿಕಲ್ಪಿಸಬಹುದಾದ[1] ಸ್ವರೂಪವುಳ್ಳದ್ದು ಎಂದರ್ಥ. ಅದು ಯಾವದು ? ಎಂದರೆ (ಶ್ರುತಿ) ಹೇಳುತ್ತದೆ. ಹದಿಮೂರನೆಯ ಸ್ತೋಭವಾದ[2] ಹುಂಕಾರವು. ಅದು ಅವ್ಯಕ್ತವಲ್ಲವೆ ? ಆದ್ದರಿಂದ ಆದನ್ನು ಇಂಥದ್ದೆಂದು ನಿರ್ವಚನಮಾಡದ ಸ್ವರೂಪದಿಂದಲೇ ಉಪಾಸನೆಮಾಡಬೇಕು[3] ಎಂದು ಅಭಿಪ್ರಾಯ.

ಸ್ತೋಭಾಕ್ಷರೋಪಾಸನೆಯ ಫಲ

(ಉಪನಿಷತ್ತು)

ದುಗ್ಧೇಽಸ್ಮೈ ವಾಗ್ದೋಹಂ ಯೋ ವಾಚೋ ದೋಹೋಽನ್ನ-ವಾನನ್ನಾದೋ ಭವತಿ ಯ ಏತಾಮೇವಗ್ಂ ಸಾಮ್ನಾಮುಪನಿಷದಂ ವೇದೋಪನಿಷದಂ ವೇದ ॥೪॥

೪. ಯಾವನು ಹೀಗೆಂದು ಈ ಸಾಮಗಳ ಉಪನಿಷತ್ತನ್ನು ಅರಿತುಕೊಳ್ಳುವನೋ, ಉಪನಿಷತ್ತನ್ನು ಅರಿತುಕೊಳ್ಳುವನೋ ಅವನಿಗೆ ವಾಕ್ಕು,

1. ಹುಂಕಾರೋ ಹುಪ್ಕಾರೋ ವಾ- ಎಂದು ಇದಕ್ಕೆ ಶಾಖಾಭೇದದಿಂದ ವಿಕಲ್ಪಿತರೂಪಗಳಿವೆ.
2. ಇದುವರೆಗೆ ಹನ್ನೆರಡು ಸ್ತೋಭಗಳನ್ನು ಹೇಳಿರುವದರಿಂದ ಇದು ಹದಿಮೂರನೆಯದು.
3. ಅನಿರುಕ್ತವು ಕಾರಣಾತ್ಮನು ಎಂದು ಈ ಸ್ತೋಭವನ್ನು ಉಪಾಸನೆಮಾಡಬೇಕು ; ಏಕೆಂದರೆ ಈ ಸ್ತೋಭವೂ ಶಾಖಾಭೇದದಿಂದ ಬಗೆಬಗೆಯಾಗಿ ವಿಕಲ್ಪಿತವಾಗಿರುತ್ತದೆ ಎಂಬ ಹೋಲಿಕೆಯಿದೆ ಎಂದು ಟೀಕೆ.

ವಾಕ್ಕಿನ ದೋಹವಿದೆಯಲ್ಲ, ಅದನ್ನು ಕರೆಯುವದು. ಅನ್ನವಂತನೂ ಅನ್ನಾದನೂ ಆಗುವನು.

ಒಟ್ಟು ಉಪಾಸನೆಗೆ ಫಲ

(ಭಾಷ್ಯ)

೧೧೦. ಸ್ತೋಭಾಕ್ಷರೋಪಾಸನಾಫಲಮ್ ಆಹ। ದುಗ್ಧೇ ಅಸ್ಯೈ ವಾಗ್ದೋಹಮ್ ಇತ್ಯಾದಿ ಉಕ್ತಾರ್ಥಮ್ । ಯ ಏತಾಮೇವಂ ಯಥೋಕ್ತಲಕ್ಷಣಾಂ ಸಾಮ್ನಾಂ ಸಾಮಾವಯವಸ್ತೋಭಾಕ್ಷರವಿಷಯಾಂ ಉಪನಿಷದಂ ದರ್ಶನಂ ವೇದ, ತಸ್ಯೈತದ್ ಯಥೋಕ್ತಂ ಫಲಮ್ ಇತ್ಯರ್ಥಃ । ದ್ವಿರಭ್ಯಾಸಃ ಅಧ್ಯಾಯಪರಿಸಮಾಪ್ತ್ಯರ್ಥಃ । ಸಾಮಾವಯವವಿಷಯೋಪಾಸನಾವಿಶೇಷಪರಿಸಮಾಪ್ತ್ಯರ್ಥೋ ವಾ[1] ಇತಿ॥

(ಭಾಷ್ಯಾರ್ಥ)

ಸ್ತೋಭಾಕ್ಷರಗಳ ಉಪಾಸನೆಯ ಫಲವನ್ನು (ಶ್ರುತಿ) ಹೇಳುತ್ತಿದೆ. ''ಅವನಿಗೆ ವಾಕ್ಕು ವಾಕ್ಕಿನ ದೋಹವಿದೆಯಲ್ಲ (ಅದನ್ನು) ಕರೆಯುವದು'' ಎಂದು ಮುಂತಾಗಿರುವದರ ಅರ್ಥವನ್ನು ಹಿಂದೆ (೧-೩-೭ರಲ್ಲಿ) ಹೇಳಿರುತ್ತದೆ. ಯಾವನು ಈ(ವರೆಗೆ) ಹೇಳಿರುವ ಲಕ್ಷಣದ, ಸಾಮಗಳ ಎಂದರೆ ಸಾಮಾವಯವವಾದ ಸ್ತೋಭಾಕ್ಷರಗಳ ವಿಷಯವಾದ, ಉಪನಿಷತ್ತನ್ನು ಎಂದರೆ ಉಪಾಸನೆಯನ್ನು ಅರಿತುಕೊಳ್ಳುವನೋ, ಅವನಿಗೆ ಈ ಮೇಲೆ ಹೇಳಿರುವ ಫಲವು (ಆಗುವದು) ಎಂದರ್ಥ.

(ಉಪನಿಷದಂ ವೇದ, ಉಪನಿಷದಂ ವೇದ ಎಂದು) ಎರಡು ಸಲ ಮತ್ತೆ ಹೇಳಿರುವದು ಅಧ್ಯಾಯವು ಮುಗಿಯಿತೆಂಬುದಕ್ಕೆ, ಅಥವಾ ಸಾಮಾವಯವವಿಶೇಷ ವಿಷಯವಾದ ಉಪಾಸನಾವಿಶೇಷವು ಮುಗಿಯಿತೆಂಬುದಕ್ಕೆ[2].

1. ಇಲ್ಲಿ ಉಪನಿಷನ್ಮೂಲದಲ್ಲಿ ''ವೇದೇತಿ'' ಎಂದೂ ಭಾಷ್ಯದಲ್ಲಿ ''ಸಮಾಪ್ತ್ಯರ್ಥ ಇತಿಶಬ್ದಃ'' ಎಂದೂ ವಾ॥ ತೆ॥ ಪಾಠ. ಅನುವಾದದ ಟಿಪ್ಪಣಿಯನ್ನು ನೋಡಿ.
2. ಇತಿಶಬ್ದವಿರುವ ಮೂಲವನ್ನಿಟ್ಟುಕೊಂಡರೆ ಉಪಾಸನೆಯು ಮುಗಿಯಿತೆಂಬುದಕ್ಕೆ ಇತಿಶಬ್ದವು ಬಂದಿದೆ ಎಂದರ್ಥ ಮಾಡಬೇಕಾಗುವದು ; ಆದರೆ ಆ ಪಕ್ಷದಲ್ಲಿ ಅಧ್ಯಾಯವನ್ನು ಮುಗಿಸಿದಮೇಲೆ ಉಪಾಸನಾಸಮಾಪ್ತಿಯನ್ನು ಸೂಚಿಸಿದ್ದು ಅಷ್ಟು ಸಮಂಜಸವಾಗುವದಿಲ್ಲ.

ಒಂದನೆಯ ಅಧ್ಯಾಯದ ಸಾರ

ಈ ಅಧ್ಯಾಯದಲ್ಲಿ ಮುಖ್ಯವಾಗಿ ಉದ್ಗೀಥಾವಯವವಾದ ಓಂಕಾರದ ಉಪಾಸನೆಗಳೂ ಸ್ತೋಭಗಳ ಉಪಾಸನೆಗಳೂ ಇರುತ್ತವೆ. ಇಲ್ಲಿರುವ ಸಂಖ್ಯೆಗಳು ಕ್ರಮವಾಗಿ ಖಂಡ, ಕಂಡಿಕೆ - ಇವನ್ನು ಸೂಚಿಸುವವು.

ಒಂದನೆಯ ಖಂಡ

೧-೮. ವೃಷ್ಟಿ , ಅಪ್ಪು , ಸಸ್ಯಗಳು, ಪುರುಷ , ವಾಕ್ಕು , ಋಕ್ಕು , ಸಾಮ, ಉದ್ಗೀಥ - ಇವುಗಳಲ್ಲಿ ಹಿಂದಿನದರ ರಸವು ಮುಂದಿನದು ; ಆದ್ದರಿಂದ ಉದ್ಗೀಥವು, ಎಂದರೆ ಅದರ ಅವಯವವಾದ ಓಂಕಾರವು ರಸಗಳಲ್ಲೆಲ್ಲ ರಸತಮವು, ವಾಕ್ಕೆಂಬ ಋಕ್ಕಾರಣ, ಪ್ರಾಣವೆಂಬ ಸಾಮಕಾರಣ - ಇವೆರಡೂ ಸೇರಿದ ಮಿಥುನವು ಓಂಕಾರದಲ್ಲಿ ಸೇರಿಕೊಂಡಿರುತ್ತವೆ. ದಂಪತಿಗಳು ಕೂಟದಿಂದ ತಮ್ಮ ತಮ್ಮ ಕಾಮವನ್ನು ಪಡೆಯುವಂತೆ, ಓಂಕಾರವು ಆಪ್ತಿಗುಣವುಳ್ಳದ್ದೆಂದು ಉಪಾಸನೆ ಮಾಡಿದಾತನಿಗೂ ಕಾಮಗಳ ಆಪ್ತಿಯಾಗುವದು. ಓಂಕಾರವು ಅನುಜ್ಞಾಕ್ಷರವಾಗಿರುವದರಿಂದ ಸಮೃದ್ಧಿಗುಣವುಳ್ಳದ್ದೂ ಆಗಿದೆ.

೯-೧೦. ವೇದೋಕ್ತಕರ್ಮವೆಲ್ಲವೂ ಓಂಕಾರಪೂರ್ವಕವಾಗಿಯೇ ನಡೆಯುತ್ತದೆ; ಕರ್ಮದಲ್ಲಿರುವ ಋತ್ವಿಗ್ಯಜಮಾನರೇ ಮುಂತಾದವರು ಇದರ ಮಹಿಮೆ. ವ್ರೀಹಿಯವಾದಿಗಳು ಇದರ ರಸವು. ಆದ್ದರಿಂದ ಕರ್ಮವು ಸಫಲವಾಗುತ್ತದೆ. ಈ ಅಕ್ಷರದ ರಸತಮತ್ವ, ಆಪ್ತಿ, ಸಮೃದ್ಧಿ - ಎಂಬ ಗುಣಗಳೆಂಬ ಗುಣಗಳನ್ನು ಅರಿತುಕೊಂಡು ಕರ್ಮವನ್ನು ಮಾಡುವವನ ಕರ್ಮವು ಸಾಮಾನ್ಯರ ಕರ್ಮಕ್ಕಿಂತಲೂ ವೀರ್ಯವತ್ತರವಾಗುವದು.

ಎರಡನೆಯ ಖಂಡ

೧-೭. ದೇವಾಸುರರ ಸಂಗ್ರಾಮದಲ್ಲಿ ದೇವತೆಗಳು ಜ್ಯೋತಿಷ್ಟೋಮಾದಿ ಕರ್ಮದಲ್ಲಿ ಬರುವ ಔದ್ಗಾತ್ರಕರ್ಮವನ್ನು ಸ್ವೀಕರಿಸಿದರು. ಅವರು ಅನುಕ್ರಮದಿಂದ ಘ್ರಾಣ, ವಾಕ್ಕು , ಚಕ್ಷು, ಶ್ರೋತ್ರ, ಮನಸ್ಸು - ಈ ಮುಂತಾದ ದೇವತೆಗಳ ದೃಷ್ಟಿಯಿಂದ ಉದ್ಗೀಥಾವಯವವಾದ ಓಂಕಾರವನ್ನು ಉಪಾಸನೆಮಾಡಿದರು ; ಆದರೆ ಅಸುರರು ಆ ದೇವತೆಗಳನ್ನು ಅಧರ್ಮಾಸಂಗರೂಪವಾದ ಪಾಪಸಂಬದ್ಧರನ್ನಾಗಿಮಾಡಿದರು. ಆಗ ದೇವತೆಗಳು ಆ ಘ್ರಾಣಾದಿದೇವತೆಗಳನ್ನು ಕೈಬಿಟ್ಟು ಮುಖ್ಯಪ್ರಾಣದೃಷ್ಟಿಯಿಂದಲೇ ಓಂಕಾರವನ್ನು ಉಪಾಸನೆಮಾಡಿದರು. ಅಸುರರು ಆ ಪ್ರಾಣನಮೇಲೆ ಬೀಳುವದಕ್ಕೆ ಯತ್ನಿಸುತ್ತಿರುವಲ್ಲಿ ಕಲ್ಲುಬಂಡೆಯಮೇಲೆ ಬಿದ್ದ ಮಣ್ಣುಹೆಂಟೆಯಂತೆ ಪುಡಿಪುಡಿಯಾದರು.

೮-೯. ಆದ್ದರಿಂದ ಯಾವನು ಉದ್ಗೀಥೋಂಕಾರವನ್ನು ಪ್ರಾಣದೃಷ್ಟಿಯಿಂದ ಉಪಾಸನೆಮಾಡುವನೋ ಅವನ ವಿಷಯದಲ್ಲಿ ಕೆಟ್ಟದ್ದನ್ನಾಚರಿಸುವದಕ್ಕೆ ಹೋಗುವವನು ಕಲ್ಲುಬಂಡೆಯಮೇಲೆ ಬೀಳುವ ಮಣ್ಣುಹೆಂಟೆಯಂತೆ ವಿಧ್ವಸ್ತನಾಗುವನು.

ಮುಖ್ಯಪ್ರಾಣನು ಯಾವ ಪಾಪಸಂಬಂಧವೂ ಇಲ್ಲದವನು ; ತಾನು ತಿಂದು ಕುಡಿಯುವದರಿಂದಲೇ ಮಿಕ್ಕ ಪ್ರಾಣಗಳನ್ನು ಕಾಪಾಡುತ್ತಾನೆ.

೧೦-೧೪. ಈ ಮುಖ್ಯಪ್ರಾಣನನ್ನು ಅಂಗಿರಸ್ಸೆಂಬ ಋಷಿಯು ಅಂಗಿರಸನು - ಅಂಗಗಳ ರಸವುಳ್ಳವನು- ಎಂಬ ಗುಣದಿಂದ ಕೂಡಿದವನೆಂದೂ, ಬೃಹಸ್ಪತಿಯು ಬೃಹಸ್ಪತಿ, ದೊಡ್ಡದಾದ ವಾಕ್ಕಿನ ಪತಿ - ಎಂಬ ಗುಣದಿಂದ ಕೂಡಿದವನೆಂದೂ ಅಯಾಸ್ಯನು ಅಸ್ಯದಿಂದ ಬರುವವನು - ಎಂಬ ಗುಣದಿಂದ ಕೂಡಿದವನೆಂದೂ ಉಪಾಸನೆಮಾಡಿ ದರು. ಆದ್ದರಿಂದ ಪ್ರಾಣನಿಗೆ ಅಂಗಿರಸತ್ವಾದಿಗುಣಗಳಿರುವವೆಂದು ತಿಳಿಯಬೇಕು. ಬಕದಾಲ್ಭ್ಯನೆಂಬ ಋಷಿಯು ಮೇಲೆ ಹೇಳಿದಂಥ ಪ್ರಾಣನನ್ನು ಉಪಾಸನೆಮಾಡಿದ್ದರಿಂದ ನೈಮಿಷೀಯರಿಗೆ ಉದ್ಗಾತೃವಾಗಿದ್ದಾಗ ಅವರ ಕಾಮಗಳನ್ನೆಲ್ಲ ಆಗಾನಮಾಡಿಕೊಟ್ಟನು. ಹೀಗೆಯೇ ಈ ಗುಣಗಳಿಂದೊಡಗೂಡಿ ಪ್ರಾಣನೆಂಬ ದೃಷ್ಟಿಯಿಂದ ಉದ್ಗೀಥೋಂಕಾರ ವನ್ನು ಯಾವನು ಉಪಾಸನೆಮಾಡುವನೋ ಅವನು ಕಾಮಗಳನ್ನು ಗಾನಮಾಡಬಲ್ಲವ ನಾಗುವನು ; ಅವನಿಗೆ ಪ್ರಾಣಾತ್ಮಭಾವವೆಂಬ ಅದೃಷ್ಟಫಲವೂ ಆಗುವದು.

ಇಲ್ಲಿಯವರೆಗೆ ಹೇಳಿದ್ದು ಅಧ್ಯಾತ್ಮವಾದ ಉದ್ಗೀಥೋಪಾಸನೆ.

ಮೂರನೆಯ ಖಂಡ

೧-೫. ಇನ್ನು ಅಧಿದೈವತವಾದ ಉದ್ಗೀಥೋಪಾಸನೆಯನ್ನು ಹೇಳಲಾಗುವದು.

ಆದಿತ್ಯದೃಷ್ಟಿಯಿಂದ ಉಪಾಸನೆಮಾಡಿದರೆ ಸಂಸಾರಭಯವೂ ಅದಕ್ಕೆ ಕಾರಣವಾದ ತಮಸ್ಸೂ ತೊಲಗುವವು. ಪ್ರಾಣನೂ ಆದಿತ್ಯನೂ ಉಷ್ಣಗುಣದಿಂದಲೂ ಸ್ವರ, ಪ್ರತ್ಯಾಸ್ವರ - ಎಂಬ ನಾಮದಿಂದಲೂ ಸಮಾನರಾಗಿರುತ್ತಾರೆ ; ಆದ್ದರಿಂದ ಅವರಿಬ್ಬರ ದೃಷ್ಟಿಯಿಂದಲೂ ಉದ್ಗೀಥವನ್ನು ಉಪಾಸನೆಮಾಡಬೇಕು. ಪ್ರಾಣವೃತ್ತಿಯಾದ ವ್ಯಾನದ ದೃಷ್ಟಿಯಿಂದಲೂ ಉದ್ಗೀಥವನ್ನು ಉಪಾಸನೆಮಾಡಬೇಕು ; ಏಕೆಂದರೆ ವ್ಯಾನದಿಂದಲೇ ವಾಕ್ಕನ್ನೂ ಸಾಮವನ್ನೂ ಉಚ್ಚಾರಣಮಾಡುತ್ತಾರೆ, ವೀರ್ಯವತ್ಕರ್ಮಗಳನ್ನು ಆದರಿಂದಲೇ ಮಾಡುತ್ತಾರೆ. ಈ ಉಪಾಸನೆಯಿಂದ ಕರ್ಮವು ವೀರ್ಯವತ್ತರವಾಗುವದು.

೬-೭. ಇನ್ನು ಉದ್ಗೀಥವೆಂಬ ಹೆಸರಿನ ಅಕ್ಷರಗಳನ್ನು ಹೀಗೆ ಉಪಾಸನೆ ಮಾಡಬೇಕು: ಪ್ರಾಣದಿಂದ (ಉತಿಷ್ಠತಿ) ಮನುಷ್ಯನು ಮೇಲಕ್ಕೇಳುತ್ತಾನಾದ್ದರಿಂದ ಉತ್ ಎಂಬುದನ್ನು ಪ್ರಾಣನೆಂದು ; ವಾಕ್ಕನ್ನು ಗೀಃ ಎಂದು ಕರೆಯುವದರಿಂದ ಗೀ ಎಂಬುದನ್ನು ವಾಕ್ಕೆಂದು ; ಅನ್ನದಲ್ಲಿ ಎಲ್ಲವೂ ಸ್ಥಿತವಾಗಿ (ಆಶ್ರಯಿಸಿರುವದಾಗಿ)ರುವದರಿಂದ ಥ ಎಂಬುದನ್ನು ಅನ್ನವೆಂದು ಉಪಾಸನೆಮಾಡಬೇಕು. ಇದರಂತೆ ಉತ್ತನ್ನು ದ್ಯುಲೋಕವೆಂದೂ ಗೀ ಎಂಬುದನ್ನು ಪೃಥಿವಿಯೆಂದೂ ಥ ಎಂಬುದನ್ನು ಆದಿತ್ಯನೆಂದೂ - ಉಪಾಸನೆಮಾಡಿದರೆ ವಾಗ್ದೋಹವನ್ನು

ಎಂದರೆ ಋಗ್ವೇದಾದಿಶಬ್ದಸಾಧ್ಯವಾದ ಫಲವನ್ನು ವಾಕ್ಯ ಕೊಡುವದಲ್ಲದೆ ಉಪಾಸಕನು ಅನ್ನವಂತನೂ ಅನ್ನಾದನೂ ಆಗುವನು.

೮-೧೨. ಇನ್ನು ಕಾಮಸಮೃದ್ಧಿಗೆ ಮಾಡಬೇಕಾದದ್ದಿದು : ಯಾವ ಸಾಮದಿಂದ ಸ್ತೋತ್ರಮಾಡಲಿರುವನೋ ಆ ಸಾಮವನ್ನು ಚಿಂತಿಸಬೇಕು ; ಯಾವ ಛಂದಸ್ಸಿನಿಂದ ಸ್ತೋತ್ರಮಾಡಲಿರುವನೋ, ಯಾವ ಸ್ತೋಮದಿಂದ ಸ್ತೋತ್ರಮಾಡಲಿರುವನೋ ಆ ಛಂದಸ್ಸನ್ನೂ ಆ ಸ್ತೋಮವನ್ನೂ ಚಿಂತಿಸಬೇಕು ; ಯಾವ ದಿಕ್ಕಿಗೆ ಸ್ತೋತ್ರಮಾಡಲಿರುವನೋ ಆ ದಿಕ್ಕನ್ನು ಚಿಂತಿಸಿಕೊಳ್ಳಬೇಕು. ಕೊನೆಗೆ ತನ್ನನ್ನು ಗೋತ್ರನಾಮಾದಿಗಳಿಂದ ಚಿಂತಿಸಿಕೊಂಡು ತನ್ನ ಕಾಮವನ್ನು ನೆನಸಿಕೊಳ್ಳುತ್ತಾ ಸ್ತೋತ್ರಮಾಡಬೇಕು. ಯಾವ ಕಾಮವುಳ್ಳವನಾಗಿ ಸ್ತೋತ್ರ ಮಾಡುವನೋ ಆ ಕಾಮವು ಸಮೃದ್ಧವಾಗುವದು.

ನಾಲ್ಕನೆಯ ಖಂಡ

೧-೪. ದೇವತೆಗಳು ಮೃತ್ಯುವಿಗೆ ಅಂಜಿಕೊಂಡು ವೈದಿಕಕರ್ಮಗಳನ್ನು ಹೊಕ್ಕು ಬೇರೆ ಮಂತ್ರಗಳಿಂದಲೂ ತಮ್ಮನ್ನು ಆಚ್ಛಾದನೆಮಾಡಿಕೊಂಡರು ; ಆದ್ದರಿಂದಲೇ ಆ ಮಂತ್ರಗಳು ಛಂದಸ್ಸು ಎಂಬ ಹೆಸರಿನಿಂದ ಪ್ರಸಿದ್ಧವಾದವು. ಮೃತ್ಯುವು ಋಗ್ಯಜುಃಸಾಮಗಳಲ್ಲಿ ಅವರಿರುವದನ್ನು ಕಂಡುಹಿಡಿದುಕೊಂಡನು ; ಆದ್ದರಿಂದ ಅವರು ಕರ್ಮವನ್ನು ಬಿಟ್ಟು ಓಂಕಾರೋಪಾಸನೆಯನ್ನೇ ಕೈಕೊಂಡರು. ಋಗ್ಯಜುಃಸಾಮಗಳನ್ನು ಪಡೆದುಕೊಳ್ಳುವಾಗ ಓಂಕಾರವನ್ನೇ ಉಚ್ಚರಿಸುತ್ತಾರಲ್ಲವೆ ? ಈ ಓಂಕಾರವು ಅಮೃತವೂ ಅಭಯವೂ ಆಗಿರುತ್ತದೆ ; ಆದ್ದರಿಂದ ಇದನ್ನು ಪ್ರವೇಶಿಸಿದ ದೇವತೆಗಳೂ ಅಮೃತರೂ ಅಭಯರೂ ಆದರು.

೫. ಈ ಗುಣಗಳಿಂದ ಕೂಡಿದ್ದೆಂದು ಯಾವನು ಈ ಅಕ್ಷರವನ್ನು ಉಪಾಸನೆ ಮಾಡುವನೋ ಅವನು ದೇವತೆಗಳಂತೆಯೇ ಅಮೃತನೂ ಅಭಯನೂ ಆಗುವನು.

ಐದನೆಯ ಖಂಡ

೧-೪. ಸಾಮವೇದಿಗಳ ಉದ್ಗೀಥೋಂಕಾರವೂ ಋಗ್ವೇದಿಗಳ ಪ್ರಣವವೂ ಒಂದೇ. ಆದಿತ್ಯನೇ ಉದ್ಗೀಥವು ; ಅವನನ್ನು ಧ್ಯಾನಮಾಡಿದರೆ ಏಕಪುತ್ರಲಾಭ ವಾಗುವದು ; ಆದರೆ ಆದಿತ್ಯನನ್ನೂ ರಶ್ಮಿಗಳನ್ನೂ ಭಿನ್ನವಾಗಿ ಉಪಾಸನೆಮಾಡಿದರೆ ಬಹುಪುತ್ರರು ಲಾಭವಾಗುವರು - ಎಂದು ಕೌಷೀತಕಿಯು ತನ್ನ ಮಗನಿಗೆ ಹೇಳಿರುತ್ತಾನೆ. ಇದು ಅಧಿದೈವತೋಪಾಸನೆಯು. ಇನ್ನು ಅಧ್ಯಾತ್ಮೋಪಾಸನೆ. ಮುಖ್ಯಪ್ರಾಣದೃಷ್ಟಿಯಿಂದ ಉದ್ಗೀಥವನ್ನು ಉಪಾಸನೆಮಾಡಿದರೆ ಏಕಪುತ್ರಲಾಭವಾಗುವದು ; ಆದರೆ ಈ ಪ್ರಾಣನನ್ನೂ ವಾಗಾದಿಪ್ರಾಣಗಳನ್ನೂ ಬೇರೆಯೆಂದೆಣಿಸಿ ಉಪಾಸನೆಮಾಡಿದರೆ ಬಹುಪುತ್ರಲಾಭವಾಗುವದು - ಎಂದು ಕೌಷೀತಕಿಯು ಮಗನಿಗೆ ಹೇಳಿರುತ್ತಾನೆ.

ಆದ್ದರಿಂದ ಬಹುಪುತ್ರಲಾಭಕ್ಕಾಗಿ ರಶ್ಮಿಗಳನ್ನೂ ವಾಗಾದಿಪ್ರಾಣಗಳನ್ನೂ ಬೇರ್ಪಡಿಸಿಕೊಂಡು ಉಪಾಸನೆಮಾಡಬೇಕು.

೫. ಪ್ರಣವೋದ್ಗೀಥಗಳನ್ನು ಒಂದೆಂದು ತಿಳಿದು ಮಾಡಿದ ಉಪಾಸನೆಯಿಂದ ಚೆನ್ನಾಗಿ ಪ್ರಯೋಗಿಸಿದ ಹೌತ್ರಕರ್ಮದಿಂದ ಉದ್ಗೀಥಗಾನದ ದೋಷವನ್ನೂ ಸರಿಪಡಿಸಿಕೊಳ್ಳಬಹುದೆಂಬ ಫಲವುಂಟಾಗುವದು.

ಆರನೆಯ ಖಂಡ

೧-೬. ಋಕ್ಕು ಪೃಥಿವಿ, ಸಾಮವು ಅಗ್ನಿ, ಪೃಥಿವಿಯೇ ಸಾ, ಅಗ್ನಿಯೇ ಅಮ. ಪೃಥಿವ್ಯಗ್ನಿಗಳು ಋಕ್ಸಾಮಗಳಂತೆ ನಿತ್ಯಸಂಬದ್ಧವಾಗಿವೆ. ಇದರಂತೆ ಋಕ್ಕು ಅಂತರಿಕ್ಷವು, ವಾಯುವು ಸಾಮ ; ಅವೂ ಹೀಗೆಯೇ ಸಂಬದ್ಧವಾಗಿವೆ. ಋಕ್ಕು ದ್ಯುಲೋಕವು, ಆದಿತ್ಯನು ಸಾಮವು ; ನಕ್ಷತ್ರಗಳು ಋಕ್ಕು , ಚಂದ್ರನು ಸಾಮ ; ಆದಿತ್ಯನ ಶುಕ್ಲಕಾಂತಿಯು ಋಕ್ಕು , ಹೆಚ್ಚಿನ ಕಪ್ಪುಕಾಂತಿಯು ಸಾಮ. ಹೀಗೆ ಋಕ್ಸಾಮಗಳಲ್ಲಿ ವೃಥಿವ್ಯಾದಿದೃಷ್ಟಿಯನ್ನು ಮಾಡಿಕೊಳ್ಳಬೇಕು.

೬-೮. ಆದಿತ್ಯನಲ್ಲಿ ಚೈತನ್ಯಜ್ಯೋತಿರ್ಮಯನೂ ಜ್ಯೋತಿರ್ಮಯವಾದ ಸರ್ವ ಶರೀರವುಳ್ಳವನೂ ಬಹುಕೆಂಪಾದ ಕಣ್ಣುಳ್ಳವನೂ ಆದ ಪುರುಷನು ನಿವೃತ್ತೇಂದ್ರಿಯರೂ ಸಮಾಹಿತಚಿತ್ತರೂ ಬ್ರಹ್ಮಚರ್ಯಾದಿಸಾಧನಗಳುಳ್ಳವರೂ ಆದವರಿಗೆ ಕಾಣಬರುತ್ತಾನೆ, ಅವನಿಗೆ ಉತ್ ಎಂದು ಹೆಸರು, ಅವನು ಸರ್ವಪಾಪಗಳನ್ನೂ ಮೀರಿರುವನಾಗಿರುತ್ತಾನೆ. ಅವನಿಗೆ ಮೇಲೆ ವರ್ಣಿಸಿರುವ ಋಕ್ಸಾಮಗಳೇ ಗೆಣ್ಣುಗಳು. ಹೀಗೆ (ಉದ್‌ಗೇಷ್ಣ) ನಾದ್ದರಿಂದ ಅವನನ್ನು ಉದ್ಗೀಥನೆಂಬ ಪರೋಕ್ಷನಾಮದಿಂದ ಕರೆಯುತ್ತಾರೆ. ಅವನನ್ನು ಗಾನಮಾಡುವದರಿಂದಲೇ ಋತ್ವಿಜನಿಗೆ 'ಉದ್ಗಾತೃ' ಎಂಬ ಹೆಸರು ಬಂದಿರುತ್ತದೆ. ಅವನು ಸೂರ್ಯನಿಂದಾಚೆಗಿರುವ ಲೋಕಗಳಿಗೂ ದೇವಕಾಮಗಳಿಗೂ ಒಡೆಯನು. ಇದು ಅಧಿದೈವತವಾಗಿ ಹೇಳಿದ್ದು.

ಏಳನೆಯ ಖಂಡ

೧-೪. ಇನ್ನು ಅಧ್ಯಾತ್ಮವಾಗಿ ನೋಡಿದರೆ, ಋಕ್ಕು ವಾಕ್ಕು , ಸಾಮವು ಪ್ರಾಣವು ; ಋಕ್ಕು ಚಕ್ಷುಸ್ಸು, ಸಾಮವು ಅಲ್ಲಿರುವ ಛಾಯಾತ್ಮ ; ಋಕ್ಕು ಶ್ರೋತ್ರವು, ಸಾಮವು ಮನಸ್ಸು ; ಋಕ್ಕು ಕಣ್ಣಿನ ಶುಕ್ಲಕಾಂತಿ ; ಸಾಮವು ಕೃಷ್ಣಕಾಂತಿ. ಹೀಗೆ ಋಕ್ಸಾಮಗಳನ್ನು ಈ ದೃಷ್ಟಿಯಿಂದ ಕಾಣಬೇಕು.

೫-೬. 'ಚಕ್ಷುಸ್ಸಿನಲ್ಲಿರುವ ಪುರುಷನಿದಾನಲ್ಲ, ಅವನೇ ಋಕ್ಕು , ಸಾಮ, ಉಕ್ಥ, ಯಜುಸ್ಸು, ಮೂರು ವೇದಗಳು ; ಏಕೆಂದರೆ ಸರ್ವಕಾರಣನೂ ಸರ್ವಾತ್ಮಕನೂ ಆಗಿರುತ್ತಾನೆ. ಇವನಿಗೂ ಆದಿತ್ಯಾಂರ್ಗತಪುರುಷನ ರೂಪವೇ, ಅವನ ಗೆಣ್ಣುಗಳೇ, ಅವನ ನಾಮವೇ. ಇವನು ಈ ಅಧ್ಯಾತ್ಮಿಕಾತ್ಮನಿಗಿಂತ ಕೆಳಕ್ಕೆ ಇರುವ ಲೋಕಗಳಿಗೂ ಮನುಷ್ಯಕಾಮಗಳಿಗೂ ಒಡೆಯನು.

೬-೮. ವೀಣೆಯಲ್ಲಿ ಗಾನಮಾಡುವವರು ಈ ಈಶ್ವರನನ್ನೇ ಗಾನಮಾಡುತ್ತಾರೆ. ಹೀಗೆಂದು ಈ ಉದ್ಗೀಥಪುರುಷನನ್ನರಿತು ಯಾವನು ಸಾಮಗಾನಮಾಡುತ್ತಾನೋ ಅವನು ಆದಿತ್ಯನಾಗಿ ಮೇಲಿನ ಲೋಕಗಳನ್ನೂ ದೇವಕಾಮಗಳನ್ನೂ ಪಡೆದುಕೊಳ್ಳುವನು. ಈ ಚಾಕ್ಷುಷಪುರುಷನಾಗಿ ಕೆಳಗಿನ ಲೋಕಗಳನ್ನೂ ಮನುಷ್ಯಕಾಮಗಳನ್ನೂ ಪಡೆದುಕೊಳ್ಳುವನು.

೮-೯. ಆದಿತ್ಯಚಕ್ಷುರಂತರ್ಗತನಾಗಿರುವ ಈ ಉದ್ಗೀಥಪುರುಷನನ್ನು ಹೀಗೆಂದರಿತಿರುವ ಉದ್ಗಾತೃವು ಕಾಮಗಾನಕ್ಕೆ ಸಮರ್ಥನು. ಅವನು ಯಜಮಾನನಿಗೆ ಯಾವ ಕಾಮವನ್ನಾದರೂ ಗಾನಮಾಡಿಕೊಡಬಲ್ಲನು.

ಆದ್ದರಿಂದ ಓಂಕಾರವನ್ನು ಈ ಆದಿತ್ಯಚಕ್ಷುಃಪುರುಷನ ದೃಷ್ಟಿಯಿಂದ ಉಪಾಸನೆ ಮಾಡಬೇಕು.

ಎಂಟನೆಯ ಖಂಡ

೧-೨. ಉದ್ಗೀಥದಲ್ಲಿ ಜಾಣರಾದ ಶಿಲಕ ಶಾಲಾವತ್ಯ, ಚೈಕಿತಾಯನ ದಾಲ್ಭ್ಯ, ಪ್ರವಾಹಣ ಜೈವಲಿ - ಎಂಬ ಮೂವರು ಒಂದು ಕಡೆಸೇರಿ ಉದ್ಗೀಥದ ವಿಷಯಕ್ಕೆ ಚರ್ಚೆಯನ್ನು ಆರಂಭಿಸಿದರು. ರಾಜನಾದ ಪ್ರವಾಹಣಜೈವಲಿಯು ಮಿಕ್ಕ ಇಬ್ಬರು ಮೊದಲು ವಾದಮಾಡುವಂತೆ ಕೇಳಿಕೊಂಡನು.

೩-೫. ಶಿಲಕ ಶಾಲಾವತ್ಯನು ಚೈಕಿತಾಯನ ದಾಲ್ಭ್ಯನನ್ನು 'ಸಾಮಕ್ಕೆ ಎಂದರೆ ಉದ್ಗೀಥಕ್ಕೆ ಗತಿ ಯಾವದು ?' ಎಂದು ಕೇಳಲು ಅವನು 'ಸ್ವರವು' ಎಂದನು. 'ಸ್ವರಕ್ಕೆ ಗತಿ ಯಾವದು ?' ಎಂದು ಶಿಲಕನು ಮತ್ತೆ ಕೇಳಲು 'ಪ್ರಾಣವು' ಎಂದನು ; 'ಪ್ರಾಣಕ್ಕೆ ಗತಿಯೊ ?' ಎಂದು ಕೇಳಿದ್ದಕ್ಕೆ 'ಅನ್ನವು' ಎಂದನು. 'ಅನ್ನಕ್ಕೊ ?' ಎಂದದ್ದಕ್ಕೆ 'ಅಪ್ಪು' ; 'ಅಪ್ಪಿಗೊ ?' ಎಂದದಕ್ಕೆ 'ಆ ಲೋಕವು' ಎಂದನು. 'ಆ ಲೋಕಕ್ಕೆ ?' ಎಂದು ಶಿಲಕನು ಕೇಳಲು 'ಸ್ವರ್ಗವನ್ನು ದಾಟಬಾರದು, ಸಾಮವೇದವು ಸ್ವರ್ಗವೇ - ಎಂದು ಹೊಗಳುತ್ತಾರೆ'- ಎಂದು ತನ್ನ ಸಿದ್ಧಾಂತವನ್ನು ನಿಲ್ಲಿಸಿದನು.

೬-೭. ಆದರೆ ಶಿಲಕನು "ನಿನ್ನ ಸಾಮವು ಅಪ್ರತಿಷ್ಠಿತವಾಗಿದೆ. ಈಗ 'ನಿನ್ನ ತಲೆ ಬಿದ್ದುಹೋಗಲಿ !' ಎಂದು ಯಾವನಾದರೂ ಬಲ್ಲ ಉಪಾಸಕನು ನುಡಿದರೆ ಅದು ಬಿದ್ದೇ ಹೋದೀತು !" ಎಂದನು. ಆಗ ದಾಲ್ಭ್ಯನು "ಹಾಗಾದರೆ ತಾವು ಹೇಳಿಕೊಡಬೇಕು, ಆ ಲೋಕಕ್ಕೆ ಗತಿ ಯಾವದು ?" ಎಂದು ಕೇಳಿಕೊಂಡನು. ಶಿಲಕನು "ಆ ಲೋಕಕ್ಕೆ ಈ ಲೋಕವೇ ಗತಿ, ಇದು ಪ್ರತಿಷ್ಠಾರೂಪವಾಗಿರುವದರಿಂದ ಇದರ ಮುಂದಕ್ಕೆ ಇನ್ನಿಲ್ಲ !" ಎಂದು ತನ್ನ ಸಿದ್ಧಾಂತವನ್ನು ನಿಲ್ಲಿಸಿದನು.

೮. ಆಗ ಪ್ರವಾಹಣಜೈವಲಿಯು "ಶಾಲಾವತ್ಯನೆ, ನಿನ್ನ ಸಾಮವು ಅಂತವುಳ್ಳದ್ದು. ಅದ್ದರಿಂದ ಈಗ ನಿಜವಾದ ಉಪಾಸಕನೊಬ್ಬನು 'ನಿನ್ನ ತಲೆ ಬೀಳಲಿ !' ಎಂದರೆ ಅದು

ಬಿದ್ದೇ ಹೋದೀತು !'' ಎಂದನು. ಆಗ ಶಿಲಕನು ''ಹಾಗಾದರೆ, ತಾವು ಹೇಳಿಕೊಡಬೇಕು !'' ಎಂದು ಕೇಳಿಕೊಂಡನು.

ಒಂಬತ್ತನೆಯ ಖಂಡ

೧-೨. ಶಿಲಕನು 'ಈ ಲೋಕಕ್ಕೆ ಗತಿ ಯಾವದು ?' ಎಂದು ಕೇಳಿಕೊಂಡದ್ದಕ್ಕೆ ''ಆಕಾಶವೇ ಅದಕ್ಕೆ ಗತಿಯು, ಆಕಾಶದಿಂದ ಸರ್ವಭೂತಗಳೂ ಹುಟ್ಟುತ್ತವೆ, ಆಕಾಶವನ್ನೇ ಬಂದು ಸೇರುತ್ತವೆ ; ಆಕಾಶವು ಇವೆಲ್ಲಕ್ಕಿಂತಲೂ ದೊಡ್ಡದು, ಆಕಾಶವೇ ಎಲ್ಲಕ್ಕೂ ಪರಾಯಣವು'' ಎಂದು ಪರಮಾತ್ಮಾಕಾಶವೆಂದು ನಿರ್ಧರಿಸಿದನು.

ಹೀಗೆ ಎಲ್ಲಕ್ಕಿಂತಲೂ ಹೆಚ್ಚಿನ ಪರಮಾಕಾಶವೆಂದು ಉಪಾಸನೆಮಾಡುವದು ಪರೋವರೀಯೋದ್ಗೀಥೋಪಾಸನೆಯು. ಹೀಗೆಂದು ಉಪಾಸನೆಮಾಡುವ ಉಪಾಸಕನಿಗೆ ಉತ್ತರೋತ್ತರವೃದ್ಧಿಯೂ ಉತ್ತರೋತ್ತರವಾಗಿ ವಿಶಿಷ್ಟವಾದ ಲೋಕಗಳ ಪ್ರಾಪ್ತಿಯೂ ಆಗುವದು.

೩-೪. ಅತಿಧನ್ವಶೌನಕನೆಂಬವನು ಈ ಉದ್ಗೀಥವಿದ್ಯೆಯನ್ನು ಉದರ ಶಾಂಡಿಲ್ಯನಿಗೆ ತಿಳಿಸಿಕೊಟ್ಟು ''ನಿನ್ನ ಸಂತತಿಯವರು ಈ ವಿದ್ಯೆಯನ್ನಿಟ್ಟುಕೊಂಡಿರುವವರೆಗೂ ಅವರಿಗೆ ಈ ಲೋಕದಲ್ಲಿ ಉತ್ತರೋತ್ತರಾಭಿವೃದ್ಧಿಯ ಜೀವನವು ಆಗುತ್ತಿರುವದು, ಆ ಲೋಕದಲ್ಲಿಯೂ ಆಗುತ್ತಿರುವದು'' ಎಂದನಂತೆ. ಯಾವನು ಈ ಪರೋವರೀಯಗುಣಕವಾದ ಉದ್ಗೀಥವನ್ನು ಹೀಗೆಂದು ಉಪಾಸನೆ ಮಾಡುತ್ತಿರುವನೋ ಅವನಿಗೆ ಈ ಲೋಕದಲ್ಲಿ ಉತ್ತರೋತ್ತರಾಭ್ಯುದಯವಾಗುವದು, ಆ ಲೋಕದಲ್ಲಿಯೂ ಪರೋವರೀಯಲೋಕವು ಸಿಕ್ಕುವದು.

ಆದ್ದರಿಂದ ಪರೋವರೀಯಗುಣವಿಶಿಷ್ಟನಾದ ಪರಮಾತ್ಮಾಕಾಶವೆಂದು ಉದ್ಗೀಥವನ್ನು ಉಪಾಸನೆಮಾಡಬೇಕು.

ಹತ್ತನೆಯ ಖಂಡ

ಈ ಖಂಡದಲ್ಲಿ ಪ್ರಸಂಗವಶದಿಂದ ಪ್ರಸ್ತಾವಪ್ರತಿಹಾರಭಕ್ತಿಗಳ ಉಪಾಸನೆಯನ್ನು ಹೇಳಿದೆ.

೧-೭. ಕುರುದೇಶದಲ್ಲಿ ಬಹಳವಾಗಿ ಸಿಡಿಲು ಬಿದ್ದು ಪೈರುಪಚ್ಚೆಯೆಲ್ಲ ಹಾಳಾಗಿತ್ತು.

ಆ ಕಾಲದಲ್ಲಿ ಉಷಸ್ತಿಚಾಕ್ರಾಯಣನು ಇನ್ನೂ ಹುಡುಗಿಯಾದ ತನ್ನ ಹೆಂಡತಿಯೊಡನೆ ಅಲ್ಲಲ್ಲಿ ಭಿಕ್ಷಾರ್ಥಿಯಾಗಿ ಅಲೆದಾಡುತ್ತಿದ್ದನು. ಅವನು ಹುರುಳಿಯನ್ನು ತಿನ್ನುತ್ತಿದ್ದ ಒಬ್ಬ ಮಾವಟಿಗನನ್ನು ಕಂಡು ಅನ್ನವನ್ನು ಕೇಳಲು ಅವನು ' ಈ ಪಾತ್ರೆಯಲ್ಲಿರುವದೇ ಹೊರತು ಮತ್ತೆ ಬೇರೆ ಇಲ್ಲವಲ್ಲ !' ಎಂದನು. ಉಷಸ್ತಿಯು 'ಇದನ್ನೇ ಕೊಡು !' ಎಂದು ಕೇಳಲು ಮಾವಟಿಗನು ಕೊಟ್ಟು ಅನುಪಾನಕ್ಕೆ ನೀರನ್ನು ಕೊಡುವದಕ್ಕೆ ಹೋದನು. ಆದರೆ ಚಾಕ್ರಾಯಣನು 'ಬೇಡ, ಅನ್ನವಿಲ್ಲದೆ, ಸಾಯುತ್ತಿದ್ದೆನಾದ್ದರಿಂದ

ಉಚ್ಛಿಷ್ಟವಾದರೂ ಹುರುಳಿಯನ್ನು ತಿಂದೆನು ; ಆದರೆ ಕುಡಿಯುವ ನೀರು ಎಲ್ಲಿಯಾದರೂ ದೊರಕುತ್ತದೆ !' ಎಂದನು. ಅವನು ಆ ಹುರುಳಿಯನ್ನು ತಿಂದು ಉಳಿದದ್ದನ್ನು ಹೆಂಡತಿಗೆ ಕೊಟ್ಟನು, ಆದರೆ ಆಕೆಗೆ ಆಗಲೆ ಆಹಾರವು ದೊರತಿದ್ದದ್ದರಿಂದ ಅದನ್ನು ಒಂದುಕಡೆ ಯಲ್ಲಿಟ್ಟುಕೊಂಡಳು. ಮಾರನೆಯ ದಿನ ಬೆಳಗ್ಗೆ ಏಳುತ್ತಲೂ, ಅವನು 'ಅಯ್ಯೋ, ಒಂದಿಷ್ಟು ಅನ್ನವು ಸಿಕ್ಕಿದರೆ ತಿಂದು ಸ್ವಲ್ಪ ಧನವನ್ನು ಸಂಪಾದಿಸಿಕೊಳ್ಳಬಹುದಲ್ಲ ! ಏಕೆಂದರೆ ಹತ್ತಿರದಲ್ಲಿಯೇ ರಾಜನು ಯಾಗವನ್ನು ಮಾಡುತ್ತಿರುವನು. ನನ್ನನ್ನು ಕಂಡರೆ ಎಲ್ಲಾ ಆರ್ತ್ವಿಜ್ಯಕ್ಕೂ ಕರೆದಾನು' ! ಎಂದನು. ಆಕೆಯು 'ಈ ಹುರಳಿಹೊರತು ಮತ್ತೇನೂ ಇಲ್ಲ' ಎಂದು ಅವನಿಗೆ ಕೊಟ್ಟಳು. ಅವನು ಅದನ್ನೇ ತಿಂದು ಯಜ್ಞವಾಗುತ್ತಿದ್ದಲ್ಲಿಗೆ ಬಂದನು.

೮-೧೧. ಅವನು ಅಲ್ಲಿ ಉದ್ಗಾತೃಪುರುಷರು ಇರುವಲ್ಲಿ ಕುಳಿತುಕೊಂಡು ಪ್ರಸ್ತೋತೃವನ್ನು ಕುರಿತು 'ಎಲೈ ಪ್ರಸ್ತೋತೃವೆ, ಪ್ರಸ್ತಾವದೇವತೆಯನ್ನರಿಯದೆ ನನ್ನೆದುರಿಗೆ ಸ್ತೋತ್ರ ಮಾಡುವೆಯಾದರೆ ನಿನ್ನ ತಲೆ ಬಿದ್ದುಹೋಗಲಿ !' ಎಂದನು. ಹೀಗೆಯೇ ಉದ್ಗಾತೃವನ್ನೂ ಪ್ರತಿಹರ್ತೃವನ್ನೂ ಕುರಿತು ''ಉದ್ಗೀಥದೇವತೆಯನ್ನಾಗಲಿ ಪ್ರತಿಹಾರದೇವತೆಯನ್ನಾಗಲಿ ಅರಿಯದೆ ಸ್ತೋತ್ರಮಾಡಿದರೆ ನಿಮ್ಮ ತಲೆಯು ಬೀಳಲಿ !'' - ಎಂದನು. ಅವರು ಮೂವರೂ ತಮ್ಮ ಕರ್ಮವನ್ನು ಮಾಡದೆ ಸುಮ್ಮನೆ ಕುಳಿತುಬಿಟ್ಟರು.

ಹನ್ನೊಂದನೆಯ ಖಂಡ

೧-೩. ಆಗ ಯಜಮಾನನು 'ತಾವು ಯಾರು ?' ಎಂದು ವಿಚಾರಿಸಿ ಉಷಸ್ತಿ ಚಾಕ್ರಾಯಣನೆಂಬ ಪ್ರಸಿದ್ಧಪುರುಷನೆಂದು ತಿಳಿದಕೂಡಲೆ ಅವನನ್ನು ಎಲ್ಲಾ ಆರ್ತ್ವಿಜ್ಯಗಳಿಗೂ ವರಣಮಾಡಿದನು. ಆದರೆ 'ಬೇಡ, ನನ್ನ ಅನುಮತಿಯಿಂದ ಇವರೇ ಸ್ತೋತ್ರಮಾಡಲಿ ! ಅವರಿಗೆ ಕೊಡುವಷ್ಟು ಧನವನ್ನು ನನಗೂ ಕೊಡು !' ಎಂದು ಋಷಿಯು ನುಡಿದನು.

೪-೫. ಆಗ ಪ್ರಸ್ತೋತೃವು, ''ಪೂಜ್ಯರೆ, ಪ್ರಸ್ತಾವಭಕ್ತಿಯ ದೇವತೆ ಯಾವದು, ನನಗೆ ಹೇಳಿಕೊಡಬೇಕು'' ಎನ್ನಲು ಚಾಕ್ರಾಯಣನು ''ಪ್ರಾಣನೆಂಬ ಪರಮಾತ್ಮನೇ ಆ ದೇವತೆ. ಈ ಎಲ್ಲಾ ಭೂತಗಳೂ ಪ್ರಾಣನಿಂದಲೇ ಹುಟ್ಟಿ ಪ್ರಾಣನನ್ನೇ ಸೇರುವವು. ಈ ದೇವತೆಯನ್ನರಿಯದೆ ನೀನು ಪ್ರಸ್ತಾವವನ್ನು ಮಾಡಿದ್ದರೆ ನಿನ್ನ ತಲೆಯು ನನ್ನ ವಾಕ್ಯದಂತೆ ಬಿದ್ದುಹೋಗುತ್ತಿತ್ತು !'' ಎಂದನು.

೬-೭. ಇದರಂತೆ ಉದ್ಗಾತೃವು ಉದ್ಗೀಥದೇವತೆ ಯಾರೆಂದೂ ಪ್ರತಿಹರ್ತೃವು ಪ್ರತಿಹಾರದೇವತೆ ಯಾರೆಂದೂ ಕೇಳಿದರು. ಚಾಕ್ರಾಯಣನು ''ಆದಿತ್ಯನು ಉದ್ಗೀಥದೇವತೆ, ಅನ್ನವೇ ಪ್ರತಿಹಾರದೇವತೆ. ಏಕೆಂದರೆ ಮೇಲುಗಡೆ ಇರುವ ಸೂರ್ಯನನ್ನೇ ಉದ್ಗಾತೃಗಳು ಗಾನಮಾಡುತ್ತಾರೆ ; ಭೂತಗಳೆಲ್ಲವೂ ಅನ್ನವನ್ನು ಪ್ರತಿಹಾರಮಾಡಿಕೊಂಡೇ ಜೀವಿಸಿವೆ'' ಎಂದು ತಿಳಿಸಿಕೊಟ್ಟನು.

ಆದ್ದರಿಂದ ಉದ್ಗಾತೃಪುರುಷರು ಈ ದೇವತೆಗಳನ್ನು ಅರಿತು ಸ್ತೋತ್ರಮಾಡಬೇಕು ; ಎಂದರೆ ಪ್ರಸ್ತಾವ, ಉದ್ಗೀಥ, ಪ್ರತಿಹಾರ - ಎಂಬ ಸಾಮಭಕ್ತಿಗಳನ್ನು ಪ್ರಾಣ, ಆದಿತ್ಯ, ಅನ್ನ - ಎಂಬ ದೃಷ್ಟಿಯಿಂದ ಉಪಾಸನೆಮಾಡಬೇಕು. ಇದಕ್ಕೆ ಕರ್ಮಸಮೃದ್ಧಿಯೂ ದೇವತಾಸಾಯುಜ್ಯವೂ ಫಲವು.

ಹನ್ನೆರಡನೆಯ ಖಂಡ

ಈ ಖಂಡದಲ್ಲಿ ಶೌವಉದ್ಗೀಥವನ್ನು ತಿಳಿಸಿಕೊಟ್ಟಿದೆ.

೧-೩. ಬಕದಾಲ್ಭ್ಯ, ಗ್ಲಾವಮೈತ್ರೇಯ- ಎಂಬ ಹೆಸರಿನವನು ಸ್ವಾಧ್ಯಾಯಕ್ಕಾಗಿ ಊರ ಹೊರಕ್ಕೆ ಹೋದನು. ಅವನಿಗೆ ಒಂದಾನೊಂದು ದೇವತೆಯು ಪ್ರಸನ್ನವಾಗಿ ಬಿಳಿಯ ನಾಯಿಯ ರೂಪದಲ್ಲಿ ಕಾಣಿಸಿಕೊಂಡಿತು. ಅದರ ಸುತ್ತಲೂ ಸಣ್ಣಪುಟ್ಟ ನಾಯಿಗಳಿದ್ದವು ; ಅವು 'ಭಗವಂತನೆ, ನಮಗೆ ಹಸಿವಾಗಿದೆ, ಅನ್ನವನ್ನು ಆಗಾನಮಾಡಿಕೊಡು !' ಎಂದು ಬೇಡಿಕೊಂಡವು. 'ನಾಳೆ, ಪ್ರಾತಃಕಾಲಕ್ಕೆ ಇಲ್ಲಿಗೆ ಬನ್ನಿರಿ, ಆಗಾನಮಾಡುತ್ತೇನೆ' ಎಂದು ಬಿಳಿಯ ನಾಯಿ ಎಂದಿತು.

೩-೫. ಬ್ರಾಹ್ಮಣನು ಆ ಕಾಲಕ್ಕೆ ಸರಿಯಾಗಿ ಅವನ್ನು ನಿರೀಕ್ಷಿಸಿಕೊಂಡಿದ್ದನು. ನಾಯಿಗಳು ಅಲ್ಲಿಗೆ ಬಂದವು. ಬಹಿಷ್ಪವಮಾನದಿಂದ ಸ್ತೋತ್ರಮಾಡಲಿರುವವರು ಹೇಗೆ ಒಬ್ಬರನ್ನೊಬ್ಬರು ಮುಟ್ಟಿಕೊಂಡು, ಸುತ್ತುವರೋ ಹಾಗೆಯೇ ನಾಯಿಗಳೂ ಸುತ್ತಿ ಕುಳಿತುಕೊಂಡು ಹಿಂಕಾರವನ್ನು ಮಾಡಿ ಈ ಗಾನವನ್ನು ಮಾಡಿದವು. (ಅದರ ಅರ್ಥವಿದು) : "ಓಮ್ ! ನಾವು ಅನ್ನವನ್ನುಣ್ಣುವಂತಾಗಲಿ ! ನೀರನ್ನು ಕುಡಿಯುವಂತೆ ಆಗಲಿ ! ವರುಣ, ಪ್ರಜಾಪತಿ, ಸವಿತೃ - ಎಂಬ ಹೆಸರುಗಳುಳ್ಳ ಆದಿತ್ಯನು ನಮಗೆ ಅನ್ನವನ್ನು ಕೊಡಲಿ ! ಅನ್ನಪತಿಯೆ, ಅನ್ನವನ್ನು ತಂದುಕೊಡು ! ಓಮ್ !"

ಈ ಉದ್ಗಾನವು ಅನ್ನಫಲಕ್ಕಾಗಿ ಮಾಡತಕ್ಕದ್ದು.

ಹದಿಮೂರನೆಯ ಖಂಡ

ಈ ಖಂಡದಲ್ಲಿ ಸಾಮಾವಯವವಾದ ಸ್ತೋಭಗಳ ಉಪಾಸನೆಯಿದೆ.

೧-೩. ಹಾಉಕಾರವು ಈ ಲೋಕವು ; ಹಾಇಕಾರವು ವಾಯು ; ಅಥಕಾರವು ಚಂದ್ರನು ; ಇಹಕಾರವು ಆತ್ಮನು, ಈಕಾರವು ಅಗ್ನಿಯು ; ಊಕಾರವು ಆದಿತ್ಯನು, ಏಕಾರವು ಆಹ್ವಾನವು ; ಔಹೋಇಕಾರವು ವಿಶ್ವೇದೇವತೆಗಳು ; ಹಿಂಕಾರವು ಪ್ರಜಾಪತಿಯು ; ಸ್ವರವು ಪ್ರಾಣವು ; ಯಾ ಎಂಬಿದು ಅನ್ನವು ; ವಾಕ್ಕೆಂಬುದು ವಿರಾಟ್. ಇವುಗಳಿಗೆ ಹದಿಮೂರನೆಯದಾಗಿರುವ ಹುಂಕಾರವು ಅನಿರುಕ್ತವೂ ಸಂಚರವೂ ಆಗಿದೆ ಎಂದು ಉಪಾಸನೆಮಾಡಬೇಕು.

೪. ಹೀಗೆಂದು ಉಪಾಸನೆಮಾಡಿದವರಿಗೆ ವಾಕ್ಕು ತ್ರಯೀವಿದ್ಯೆಯ ಫಲವೆಂಬ ವಾಗ್ದೋಹವನ್ನು ಮಾಡುವದು ; ಅವನು ಅನ್ನವಂತನೂ ದೀಪ್ತಾಗ್ನಿಯೂ ಆಗುವನು.

ಎರಡನೆಯ ಅಧ್ಯಾಯ - ಒಂದನೆಯ ಖಂಡ

(ಸಮಸ್ತಸಾಮದ ಉಪಾಸನೆ)

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೧೧೧. 'ಓಮಿತ್ಯೇತದಕ್ಷರಮ್' ಇತ್ಯಾದಿನಾ ಸಾಮಾವಯವವಿಷಯಮ್ ಉಪಾಸನಮ್ ಅನೇಕಫಲಮ್ ಉಪದಿಷ್ಟಮ್ । ಅನನ್ತರಂ ಚ ಸ್ತೋಭಾಕ್ಷರ ವಿಷಯಮ್ ಉಪಾಸನಮ್ ಉಕ್ತಮ್ । ಸರ್ವಥಾऽಪಿ ಸಾಮೈಕದೇಶಸಂಬದ್ಧಮೇವ ತದಿತಿ ಅಥೇದಾನೀಂ ಸಮಸ್ತೇ ಸಾಮ್ನಿ ಸಮಸ್ತಸಾಮವಿಷಯಾಣಿ[1] ಉಪಾಸನಾನಿ ವಕ್ಷ್ಯಾಮಿ ಇತ್ಯಾರಭತೇ ಶ್ರುತಿಃ । ಯುಕ್ತಂ ಹಿ ಏಕದೇಶೋಪಾಸನಾನನ್ತರಮ್ ಏಕದೇಶಿವಿಷಯಮ್ ಉಪಾಸನಮ್ ಉಚ್ಯತ ಇತಿ ॥

(ಭಾಷ್ಯಾರ್ಥ)

'ಓಮ್ ಎಂಬೀ ಅಕ್ಷರವಾದ (ಉದ್ಗೀಥ)ವನ್ನು' (೧-೧-೧) ಎಂದು ಮುಂತಾಗಿರುವ (ಗ್ರಂಥ)ದಿಂದ ಸಾಮಾವಯವದ ವಿಷಯವಾದ ಅನೇಕಫಲಗಳುಳ್ಳ ಉಪಾಸನೆಯನ್ನು ತಿಳಿಸಿದ್ದಾಯಿತು. ಆಮೇಲೆ ಸ್ತೋಭಾಕ್ಷರಗಳ ವಿಷಯದ ಉಪಾಸನೆಯನ್ನು ಹೇಳಿದ್ದಾಯಿತು. ಹೇಗೂ ಅದು ಸಾಮದ ಒಂದು ಅವಯವಕ್ಕೆ ಸಂಬಂಧಪಟ್ಟದ್ದೇ ಆಗಿರುತ್ತದೆಯಾದ್ದರಿಂದ ಇನ್ನು ಈಗ ಸಮಸ್ತವಾದ ಸಾಮದಲ್ಲಿ ಸಮಸ್ತಸಾಮವಿಷಯಕವಾದ ಉಪಾಸನೆಗಳನ್ನು ಹೇಳೋಣ - ಎಂದು ಶ್ರುತಿಯು ಆರಂಭಿಸಿರುತ್ತದೆ. ಅವಯವದ ಉಪಾಸನೆಯನ್ನು (ಹೇಳಿದ) ಬಳಿಕ ಒಟ್ಟಿನ ವಿಷಯದ ಉಪಾಸನೆಯನ್ನು ಹೇಳುವದು ಯುಕ್ತವೇ ಆಷ್ಟೆ ?

ಸಮಸ್ತಸಾಮದಲ್ಲಿ ಸಾಧುದೃಷ್ಟಿ

(ಉಪನಿಷತ್ತು)

ಸಮಸ್ತಸ್ಯ ಖಲು ಸಾಮ್ನ ಉಪಾಸನಗ್ಂ ಸಾಧು ಯತ್ಖಲು ಸಾಧು ತತ್ ಸಾಮೇತ್ಯಾಚಕ್ಷತೇ ಯದಸಾಧು ತದಸಾಮೇತಿ ॥೧॥

---

1 ಸಮಸ್ತೇ ಸಾಮ್ನಿ, ಸಮಸ್ತಸಾಮವಿಷಯಾಣಿ - ಎಂಬಿವೆರಡರಲ್ಲಿ ಒಂದೇ ಸಾಕೆಂದು ತೋರುತ್ತಿದೆ.

೧. ಸಮಸ್ತವಾದ ಸಾಮದ ಉಪಾಸನೆಯು ಸಾಧು. ಯಾವದು ಸಾಧುವೋ ಅದನ್ನು ಸಾಮವೆನ್ನುವರು, ಯಾವದು ಒಳ್ಳೆಯದಲ್ಲವೋ ಅದನ್ನು ಅಸಾಮವೆನ್ನುವರು.

(ಭಾಷ್ಯ)

೧೧೨. ಸಮಸ್ತಸ್ಯ ಸರ್ವಾವಯವವಿಶಿಷ್ಟಸ್ಯ ಪಾಞ್ಚಭಕ್ತಿಕಸ್ಯ ಸಾಪ್ತಭಕ್ತಿಕಸ್ಯ ಚ ಇತ್ಯರ್ಥಃ । ಖಲು ಇತಿ ವಾಕ್ಯಾಲಂಕಾರಾರ್ಥಃ । ಸಾಮ್ನಃ ಉಪಾಸನಂ ಸಾಧು । ಸಮಸ್ತೇ ಸಾಮ್ನಿ ಸಾಧುದೃಷ್ಟಿವಿಧಿಪರತ್ವಾತ್ ನ ಪೂರ್ವೋಪಾಸನನಿನ್ದಾರ್ಥತ್ವಂ ಸಾಧುಶಬ್ದಸ್ಯ । ನನು ಪೂರ್ವತ್ರ ಅವಿದ್ಯಮಾನಂ ಸಾಧುತ್ವಂ ಸಮಸ್ತೇ ಸಾಮ್ನಿ ಅಭಿಧೀಯತೇ। ನ। ''ಸಾಧು ಸಾಮೇತ್ಯುಪಾಸ್ತೇ'' (೨-೧-೪) ಇತ್ಯುಪಸಂಹಾರಾತ್ । ಸಾಧುಶಬ್ದಃ ಶೋಭನವಾಚೀ । ಕಥಮ್ ಅವಗಮ್ಯತ ಇತಿ ? ಆಹ । ಯತ್ ಖಲು ಲೋಕೇ ಸಾಧು ಶೋಭನಮ್ ಅನವದ್ಯಂ ಪ್ರಸಿದ್ಧಮ್, ತತ್ ಸಾಮ ಇತ್ಯಾಚಕ್ಷತೇ ಕುಶಲಾಃ । ಯತ್ ಅಸಾಧು ವಿಪರೀತಮ್, ತತ್ ಅಸಾಮ ಇತಿ ॥

(ಭಾಷ್ಯಾರ್ಥ)

ಸಮಸ್ತವಾದ, ಎಲ್ಲಾ ಅವಯವಗಳಿಂದಲೂ ಕೂಡಿದ ಎಂದರೆ ಐದು ಭಕ್ತಿಗಳು ಅಥವಾ ಏಳು ಭಕ್ತಿಗಳು ಉಳ್ಳದ್ದರ ಎಂದರ್ಥ. ಖಲು ಎಂಬುದು ವಾಕ್ಯಾಲಂಕಾರಕ್ಕಾಗಿ (ಬಂದದ್ದು) ; (ಸಮಸ್ತ)ಸಾಮದ ಉಪಾಸನೆಯು ಸಾಧು. ಸಮಸ್ತವಾದ ಸಾಮದಲ್ಲಿ ಸಾಧುವೆಂಬ ದೃಷ್ಟಿಯನ್ನು ವಿಧಿಸುವದರಲ್ಲಿ (ಈ ವಾಕ್ಯಕ್ಕೆ) ತಾತ್ಪರ್ಯವಿರುವದರಿಂದ ಸಾಧುಶಬ್ದಕ್ಕೆ ಹಿಂದಿನ ಉಪಾಸನೆಗಳನ್ನು ನಿಂದಿಸುವದೆಂಬ ಪ್ರಯೋಜನವಿಲ್ಲ[1].

(ಆಕ್ಷೇಪ) :- ಹಿಂದಿ(ನ ಉಪಾಸನೆಗಳಲ್ಲಿ) ಇಲ್ಲದಿದ್ದ ಸಾಧುತ್ವವನ್ನು ಸಮಸ್ತಸಾಮದಲ್ಲಿ ಹೇಳಿದಂತಲ್ಲವೆ ?

(ಪರಿಹಾರ) :- ಹಾಗಲ್ಲ. ಏಕೆಂದರೆ ''ಸಾಮವು ಸಾಧುವೆಂದು (ಯಾವನು) ಉಪಾಸನೆಮಾಡುತ್ತಾನೋ'' (೨-೧-೪) ಎಂದೇ[2] ಉಪಸಂಹಾರಮಾಡಿದೆ.

---

1. ಸಾಮವೆಂದರೆ ಸಾಧು ಎಂದು ಉಪಾಸನೆಮಾಡಬೇಕು ಎಂಬುದರಲ್ಲಿ ತಾತ್ಪರ್ಯವೇ ಹೊರತು ಸಾಮದ ಏಕದೇಶದ ಉಪಾಸನೆಯು ಅಸಾಧುವೆಂಬುದರಲ್ಲೇನೂ ಈ ವಾಕ್ಯಕ್ಕೆ ತಾತ್ಪರ್ಯವಿಲ್ಲ.

2. ಈ ವಾಕ್ಯದಲ್ಲಿ ಸಾಮಸಾಮಾನ್ಯವನ್ನೇ ಸಾಧುವೆಂದು ಉಪಾಸನೆಮಾಡಬೇಕು ಎಂದೇ ಸ್ಪಷ್ಟವಾಗಿ ಹೇಳಿದೆ.

ಸಾಧುಶಬ್ದವು ಒಳ್ಳೆಯದನ್ನು ಹೇಳುತ್ತದೆ. (ಸಾಮದ ಉಪಾಸನೆಯು ಸಾಧು ಎಂಬುದು) ಹೇಗೆ ಗೊತ್ತಾಗುತ್ತದೆ ? ಎಂದರೆ (ಶ್ರುತಿ) ಹೇಳುತ್ತದೆ. ಲೋಕದಲ್ಲಿ ಯಾವದು ಸಾಧು, ಒಳ್ಳೆಯದು, ನಿರ್ದುಷ್ಟವು- ಎಂದು ಪ್ರಸಿದ್ಧವಾಗಿರುತ್ತದೆಯೋ ಅದನ್ನು ಬಲ್ಲವರು ಸಾಮ ಎಂದು ಕರೆಯುತ್ತಾರೆ ; ಯಾವದು ಅಸಾಧುವೋ (ಅದಕ್ಕೆ) ವಿಪರೀತವಾಗಿರುವದೋ ಅದನ್ನು ಅಸಾಮ(ವೆನ್ನುತ್ತಾರೆ).

ಸಾಮಶಬ್ದಕ್ಕೆ ಸಾಧು ಎಂಬರ್ಥವಿದೆಯೆಂಬುದಕ್ಕೆ ಯುಕ್ತಿಗಳು

(ಉಪನಿಷತ್ತು)

ತದುತಾಪ್ಯಾಹುಃ ಸಾಮ್ನೈನಮುಪಾಗಾದಿತಿ ಸಾಧುನೈನಮುಪಾಗಾದಿತ್ಯೇವ ತದಾಹುರಸಾಮ್ನೈನಮುಪಾಗಾದಿತ್ಯಸಾಧುನೈನಮುಪಾಗಾದಿತ್ಯೇವ ತದಾಹುಃ ॥೨॥

೨. ಮತ್ತು ಅಲ್ಲಿ ಹೀಗೆಂದೂ ಹೇಳುತ್ತಾರೆ : ಇವನನ್ನು ಸಾಮದಿಂದ ಬಳಿ ಸಾರಿದನು ಎನ್ನುವರಷ್ಟೆ, ಸಾಧು(ಮಾರ್ಗ)ದಿಂದ ಇವನನ್ನು ಬಳಿಸಾರಿದನು ಎಂದೇ ಹಾಗೆ ಹೇಳುತ್ತಾರೆ. ಇವನನ್ನು ಅಸಾಮದಿಂದ ಬಳಿಸಾರಿದನು ಎನ್ನುವರಷ್ಟೆ, ಅಸಾಧು(ಮಾರ್ಗ)ದಿಂದ ಇವನನ್ನು ಬಳಿಸಾರಿದನು ಎಂದೇ ಹಾಗೆ ಹೇಳುತ್ತಾರೆ.

ಸಾಮಕ್ಕೆ ಸಾಧುವೆಂಬರ್ಥವೆಂಬುದಕ್ಕೆ ಯುಕ್ತಿ

(ಭಾಷ್ಯ)

೧೧೩. **ತತ್ ತತ್ರೈವ ಸಾಧ್ವಸಾಧುವಿವೇಕಕರಣೇ ಉತ ಅಪಿ ಆಹುಃ । ಸಾಮ್ನಾ ಏನಂ ರಾಜಾನಂ ಸಾಮನ್ತಂ ವಾ[1] ಉಪಾಗಾತ್ ಉಪಗತವಾನ್ । ಕೋಽಸೌ ? ಯತಃ ಅಸಾಧುತ್ವಪ್ರಾಪ್ತ್ಯಾಶಙ್ಕಾ ಸಃ ಇತ್ಯಭಿಪ್ರಾಯಃ । ಶೋಭನಾಭಿಪ್ರಾಯೇಣ ಸಾಧುನಾ ಏನಮ್ ಉಪಾಗಾತ್ ಇತ್ಯೇವ ತತ್ ತತ್ರ ಆಹುಃ ಲೌಕಿಕಾಃ । ಬನ್ಧನಾದ್ಯಸಾಧುಕಾರ್ಯಮ್ ಅಪಶ್ಯನ್ತಃ । ಯತ್ರ ಪುನರ್ವಿಪರ್ಯಯೇಣ ಬನ್ಧನಾದಿ ಅಸಾಧುಕಾರ್ಯಂ ಪಶ್ಯನ್ತಿ, ತತ್ರ ಅಸಾಮ್ನಾ ಏನಮ್ ಉಪಾಗಾತ್ ಇತಿ, ಅಸಾಧುನಾ ಏನಮ್ ಉಪಾಗಾತ್ ಇತ್ಯೇವ ತದಾಹುಃ ॥**

---

1. ಚ ಎಂಬುದಕ್ಕಿಂತ ಈ ಪಾಠವೇ ಮೇಲು.

(ಭಾಷ್ಯಾರ್ಥ)

(ತತ್=ತತ್ರ) ಆ ಸಾಧು, ಅಸಾಧು - ಎಂಬಿವನ್ನು ವಿವೇಚಿಸುವಲ್ಲಿಯೇ ಹೀಗೆಂದೂ ಹೇಳುತ್ತಾರೆ : ಸಾಮದಿಂದ ಈ ರಾಜನನ್ನು ಅಥವಾ ಸಾಮಂತನನ್ನು ಬಳಿಸಾರಿದನು, ಹತ್ತಿರಕ್ಕೆ ಬಂದನು.[1] ಅವನು ಯಾರು ? (ಎಂದರೆ), ಯಾವನಿಂದ ಕೆಟ್ಟದ್ದುಂಟಾಗುವದೆಂಬ ಆಶಂಕೆಯಿರುವದೋ ಅವನು- ಎಂದು ಅಭಿಪ್ರಾಯ. ಒಳ್ಳೆಯ ಅಭಿಪ್ರಾಯದ ಸಾಧು(ಮಾರ್ಗ)ದಿಂದ ಇವನನ್ನು ಬಳಿಸಾರಿದನು- ಎಂದೇ (ತತ್=ತತ್ರ) ಅಲ್ಲಿ ಬಂಧನವೇ ಮುಂತಾದ ಕೆಟ್ಟಕಾರ್ಯವನ್ನು ಕಾಣದೆ (ಇರುವದರಿಂದ)- ಲೋಕದ ಜನರು ಹೇಳುತ್ತಾರೆ.[2] ಆದರೆ ಎಲ್ಲಿ (ಇದಕ್ಕೆ) ವಿಪರೀತವಾಗಿ ಎಲ್ಲಿ ಬಂಧನಾದಿಯಾದ ಅಸಾಧುಕಾರ್ಯವನ್ನು ಕಾಣುವರೋ, ಅಲ್ಲಿ ಅಸಾಮದಿಂದ ಇವನನ್ನು ಬಳಿಸಾರಿದನು (ಎನ್ನುತ್ತಾರೆ) ; ಅಸಾಧು(ಮಾರ್ಗ)ದಿಂದ ಇವನನ್ನು ಬಳಿಸಾರಿದನು ಎಂದೇ ಹಾಗೆ ಹೇಳುತ್ತಾರೆ.

(ಉಪನಿಷತ್ತು)

ಅಥೋತಾಪ್ಯಾಹುಃ ಸಾಮ ನೋ ಬತೇತಿ ಯತ್ಸಾಧು ಭವತಿ ಸಾಧು ಬತೇತ್ಯೇವ ತದಾಹುರಸಾಮ ನೋ ಬತೇತಿ ಯದಸಾಧು ಭವತ್ಯಸಾಧು ಬತೇತ್ಯೇವ ತದಾಹುಃ ॥೩॥

೩. ಮತ್ತು ಹೀಗೂ ಎನ್ನುತ್ತಾರೆ. ಯಾವದು ಸಾಧುವಾಗಿರುವದೋ, (ಅದನ್ನು) 'ಇದು ನಮಗೆ ಸಾಮವಪ್ಪ !' ಎನ್ನುವರು. 'ಸಾಧುವಪ್ಪ !' ಎಂದೇ ಹಾಗೆ ಹೇಳುತ್ತಾರೆ. ಯಾವದು ಅಸಾಧುವಾಗಿರುವದೋ (ಅದನ್ನು) 'ನಮಗೆ ಅಸಾಮವಪ್ಪ !' ಎಂದು ಹೇಳುತ್ತಾರೆ ; 'ಅಸಾಧುವಪ್ಪ !' ಎಂದೇ ಹಾಗೆ ಹೇಳುತ್ತಾರೆ.

ಸಾಮವೆಂದರೆ ಸಾಧು ಎನ್ನುವದಕ್ಕೆ ಮತ್ತೊಂದು ಯುಕ್ತಿ

(ಭಾಷ್ಯ)

೧೧೪. **ಅಥ ಉತಾಪಿ ಆಹುಃ ಸ್ವಸಂವೇದ್ಯಮ್, ಸಾಮ ನಃ ಅಸ್ಮಾಕಂ ಬತ !-**

1. ಅವನ ವಿಷಯದಲ್ಲಿ ನಡೆದುಕೊಂಡನು ಎಂದರ್ಥ.
2. ಸಾಮಂತನು ರಾಜನ ವಿಷಯದಲ್ಲಿ ಅಥವಾ ರಾಜನು ಸಾಮಂತನ ವಿಷಯದಲ್ಲಿ ಸೆರೆಹಿಡಿಯುವದೇ ಮುಂತಾದ ಕೆಟ್ಟಮಾರ್ಗದಿಂದ ನಡೆದುಕೊಂಡನೆಂಬ ಶಂಕೆಯಿರುವಾಗ ಹಾಗೆ ಮಾಡದಿದ್ದರೆ 'ಸಾಮದಿಂದ ನಡೆದುಕೊಂಡನು' ಎನ್ನುತ್ತಾರೆ, ಒಳ್ಳೆಯಮಾರ್ಗದಿಂದ ವರ್ತಿಸಿದನು ಎಂಬುದೇ ಅವರ ಅಭಿವ್ರಾಯ.

ಇತಿ ಅನುಕಮ್ಪಯನ್ತಃ । ಸಂವೃತ್ತಮ್ ಇತ್ಯಾಹುಃ । ಏತತ್ ತೈರುಕ್ತಂ ಭವತಿ ಯತ್ ಸಾಧು ಭವತಿ । ಸಾಧು ಬತ ಇತ್ಯೇವ ತದಾಹುಃ । ವಿಪರ್ಯಯೇಣ ಜಾತೇ ಅಸಾಮ ನೋ ಬತ !- ಇತಿ ಯದಸಾಧು ಭವತಿ । ಅಸಾಧು ಬತ !- ಇತ್ಯೇವ ತದಾಹುಃ । ತಸ್ಮಾತ್ ಸಾಮಸಾಧುಶಬ್ದಯೋರೇಕಾರ್ಥತ್ವಂ ಸಿದ್ಧಮ್ ॥

(ಭಾಷ್ಯಾರ್ಥ)

ಮತ್ತು ಹೀಗೂ ತಮಗೇ ಗೊತ್ತಿರುವದನ್ನು ಅನ್ನುತ್ತಾರೆ : 'ನಮಗೆ ಸಾಮವಾಯಿತಪ್ಪ !' ಎಂದು ಅನುಕಂಪೆಯನ್ನು ತೋರಿಸುತ್ತಾ (ಹೇಳುತ್ತಾರಷ್ಟೆ) ; ಯಾವದು ಒಳ್ಳೆಯದಾಗಿರುತ್ತದೆಯೋ ಅದನ್ನೇ ಅವರು (ಹಾಗೆಂದು) ಹೇಳುತ್ತಾರೆ. 'ಸಾಧುವಪ್ಪ !' ಎಂದೇ ಅದನ್ನು (ಸಾಮವೆಂದು) ಹೇಳಿರುತ್ತಾರೆ. ಯಾವದು ಅಸಾಧುವಾಗಿರುತ್ತದೆಯೋ (ಅದನ್ನು) 'ನಮಗೆ ಅಸಾಮವಪ್ಪ' (ಎನ್ನುತ್ತಾರೆ) ; 'ಅಸಾಧುವಪ್ಪ !' ಎಂದೇ ಅದನ್ನು (ಅಸಾಮವೆಂದು) ಹೇಳಿರುತ್ತಾರೆ.[1] ಆದ್ದರಿಂದ ಸಾಮಸಾಧುಶಬ್ದಗಳಿಗೆರಡಕ್ಕೂ ಒಂದೇ ಅರ್ಥವೆಂದು ಸಿದ್ಧವಾಯಿತು.[2]

ಸಾಮವನ್ನು ಸಾಧುವೆಂದು ಉಪಾಸನೆಮಾಡಿದರೆ ಫಲ

(ಉಪನಿಷತ್ತು)

ಸ ಯ ಏತದೇವಂ ವಿದ್ವಾನ್ ಸಾಧು ಸಾಮೇತ್ಯುಪಾಸ್ತೇऽಭ್ಯಾಶೋ ಹ ಯದೇನಗ್ಂ ಸಾಧವೋ ಧರ್ಮಾ ಆ ಚ ಗಚ್ಛೇಯುರುಪ ಚ ನಮೇಯುಃ ॥೪॥

೪. ಯಾವನು ಇದನ್ನು ಹೀಗೆಂದರಿತು ಸಾಮವನ್ನು ಸಾಧುವೆಂದು ಉಪಾಸನೆಮಾಡುತ್ತಾನೋ, ಅವನನ್ನು ಬೇಗನೆ ಸಾಧುಧರ್ಮಗಳು ಬಂದು ಸೇರುವವು, ಅವನಿಗೇ ಆಗುವವು.

೧೧೫. ಅತಃ ಸ ಯಃ ಕಶ್ಚಿತ್ ಸಾಧು ಸಾಮ ಇತಿ ಸಾಧುಗುಣವತ್ ಸಾಮ ಇತಿ

1. ಅನುಭವದಲ್ಲಿ ತಮಗೆ ಒಳ್ಳೆಯದಾಯಿತೆಂದು ಕಂಡುಬಂದದ್ದನ್ನು ಸಾಮವೆಂದೂ ಕೆಟ್ಟದ್ದಾಯಿತೆಂದು ಕಂಡುಬಂದದ್ದನ್ನು ಅಸಾಮವೆಂದೂ ಕರೆಯುತ್ತಾರೆ.
2. ಈ ಎರಡು ಅನ್ವಯವ್ಯತಿರೇಕಗಳ ಉದಾಹರಣೆಗಳಿಂದ ಸಾಮವೆಂದರೆ ಸಾಧುವೆಂದೇ ಆಯಿತು. 'ಇದು ಹೇಗೆ ಗೊತ್ತಾಗುತ್ತದೆ ?' ಎಂದು ಭಾ. ಭಾ. ೧೧೨ರಲ್ಲಿ ಕೇಳಿದ್ದ ಪ್ರಶ್ನೆಗೆ ಉತ್ತರ-ವನ್ನು ಇಲ್ಲಿಗೆ ಉಪಸಂಹಾರವನ್ನು ಮಾಡಿದಂತೆ ಆಯಿತು ಎಂದು ಭಾವ.

ಉಪಾಸ್ತೇ (ಏತತ್ ಏವಂ[1]) ಸಮಸ್ತಂ ಸಾಮ ಸಾಧುಗುಣವತ್ ಏದ್ವಾನ್, ತಸ್ಯ ಏತತ್ ಫಲಮ್ । ಅಭ್ಯಾಶೋ ಹ ಕ್ಷಿಪ್ರಂ ಹ । ಯತ್ ಇತಿ ಕ್ರಿಯಾವಿಶೇಷಣಾರ್ಥಮ್ । ಏನಮ್ ಉಪಾಸಕಂ ಸಾಧವಃ ಶೋಭನಾಃ ಧರ್ಮಾಃ ಶ್ರುತಿಸ್ಮೃತ್ಯವಿರುದ್ಧಾಃ ಆ ಚ ಗಚ್ಛೇಯುಃ ಆಗಚ್ಛೇಯುಶ್ಚ । ನ ಕೇವಲಮ್ ಆಗಚ್ಛೇಯುಃ, ಉಪ ಚ ನಮೇಯುಃ । ಉಪನಮೇಯುಶ್ಚ । ಭೋಗ್ಯತ್ವೇನ ಉಪತಿಷ್ಠೇಯುಃ ಇತ್ಯರ್ಥಃ ॥

(ಭಾಷ್ಯಾರ್ಥ)

ಆದ್ದರಿಂದ ಯಾವನೇ ಆಗಲಿ ಸಾಮವು ಸಾಧು ಎಂದು, ಸಾಮವು ಸಾಧು ಗುಣವುಳ್ಳದ್ದು ಎಂದು ಉಪಾಸನೆಮಾಡುತ್ತಾನೋ, (ಈ) ಸಮಸ್ತಸಾಮವನ್ನು ಸಾಧುಗುಣವುಳ್ಳದ್ದೆಂದು ಅರಿತುಕೊಂಡು (ಯಾವನು ಉಪಾಸನೆಮಾಡುತ್ತಾನೋ), ಅವನಿಗೆ ಇದು ಫಲವು. (ಅಭ್ಯಾಶಃ=ಕ್ಷಿಪ್ರಮ್) ಬೇಗನೆಯೇ (ಇದಾಗುವದು)- ಇಲ್ಲಿ ಯತ್ ಎಂಬುದು ಕ್ರಿಯಾವಿಶೇಷಣಕ್ಕಾಗಿ (ಪ್ರಯುಕ್ತವಾಗಿದೆ)[2]. ಈ ಉಪಾಸಕನನ್ನು ಸಾಧುವಾದ ಒಳ್ಳೆಯ ಧರ್ಮಗಳು, ಶ್ರುತಿಸ್ಮೃತಿಗಳಿಗೆ ವಿರುದ್ಧವಲ್ಲದ ಧರ್ಮಗಳು (ಆ ಚ ಗಚ್ಛೇಯುಃ ಆಗಚ್ಛೇಯುಶ್ಚ), ಬಂದುಸೇರುವವು. ಬಂದುಸೇರುವವು ಎಂಬುದಿಷ್ಟೇ ಅಲ್ಲ, (ಉಪ ಚ ನಮೇಯುಃ=ಉಪನಮೇಯುಶ್ಚ) ಭೋಗ್ಯವಾಗಿಯೂ ಅವನಿಗೇ ಆಗುವವು ಎಂದರ್ಥ.

ಎರಡನೆಯ ಅಧ್ಯಾಯ - ಎರಡನೆಯ ಖಂಡ

(ಪಂಚವಿಧಸಾಮಗಳ ಉಪಾಸನೆ)

ಊರ್ಧ್ವಲೋಕಗಳ ದೃಷ್ಟಿಯಿಂದ ಉಪಾಸನೆ

(ಉಪನಿಷತ್ತು)

ಲೋಕೇಷು ಪಞ್ಚವಿಧಗ್ಂ ಸಾಮೋಪಾಸೀತ ಪೃಥಿವೀ ಹಿಂಕಾರಃ

1. ಈ ಮಾತುಗಳು ಇಲ್ಲಿ ಬಿಟ್ಟುಹೋಗಿದೆ ; ಅಥವಾ ಇವುಗಳ ಅರ್ಥವನ್ನು ಮಾತ್ರ ಭಾಷ್ಯದಲ್ಲಿ ಮುಂದೆ ಬರೆದಿದೆ. 2. 'ಆಗಚ್ಛೇಯುರಿತಿ ಯತ್ ತತ್ ಕ್ಷಿಪ್ರಮೇವ' ಎಂದು ಕ್ರಿಯಾವಿಶೇಷಣಾರ್ಥದಲ್ಲಿ 'ಅಭ್ಯಾಶೋ ಹ ಯತ್' ಎಂದು ಪ್ರಯೋಗಿಸಿದೆ ಎಂದು ಅಭಿಪ್ರಾಯ.

ಅಗ್ನಿಃ ಪ್ರಸ್ತಾವೋಽನ್ತರಿಕ್ಷಮುದ್ಗೀಥ ಆದಿತ್ಯಃ ಪ್ರತಿಹಾರೋ ದ್ಯೌರ್ನಿಧನಮಿತ್ಯೂರ್ಧ್ವೇಷು ॥೧॥

೧. ಲೋಕಗಳಲ್ಲಿ ಐದು ಬಗೆಯ ಸಾಮವನ್ನು ಉಪಾಸನೆಮಾಡಬೇಕು. ಪೃಥಿವಿಯು ಹಿಂಕಾರವು, ಅಗ್ನಿಯು ಪ್ರಸ್ತಾವವು, ಅಂತರಿಕ್ಷವು ಉದ್ಗೀಥವು, ಆದಿತ್ಯನು ಪ್ರತಿಹಾರವು, ದ್ಯುಲೋಕವು ನಿಧನವು. ಹೀಗೆ ಊರ್ಧ್ವ (ಲೋಕ)ಗಳ (ವಿಷಯ)ದಲ್ಲಿ (ಉಪಾಸನೆಗಳು).

ಸಮಸ್ತೋಪಾಸನೆಗಳಲ್ಲೆಲ್ಲ ಸಾಧುದೃಷ್ಟಿಯಿರಬೇಕು

೧೧೬. ಕಾನಿ ಪುನಸ್ತಾನಿ ಸಾಧುದೃಷ್ಟಿವಿಶಿಷ್ಟಾನಿ ಸಮಸ್ತಾನಿ ಸಾಮಾನಿ ಉಪಾಸ್ಯಾನೀತಿ ? ಇಮಾನಿ ತಾನಿ ಉಚ್ಯನ್ತೇ । ಲೋಕೇಷು ಪಞ್ಚವಿಧಮ್ ಇತ್ಯಾದೀನಿ । ನನು ಲೋಕಾದಿದೃಷ್ಟ್ಯಾ ತಾನಿ ಉಪಾಸ್ಯಾನಿ ಸಾಧುದೃಷ್ಟ್ಯಾ ಚ ಇತಿ ವಿರುದ್ಧಮ್ । ನ । ಸಾಧ್ವರ್ಥಸ್ಯ ಲೋಕಾದಿಕಾರ್ಯೇಷು ಕಾರಣಸ್ಯ ಅನುಗತತ್ವಾತ್ । ಮೃದಾದಿವತ್ ಘಟಾದಿವಿಕಾರೇಷು । ಸಾಧುಶಬ್ದವಾಚ್ಯೋಽರ್ಥೋ ಧರ್ಮೋ ಬ್ರಹ್ಮ ವಾ ಸರ್ವಥಾಽಪಿ ಲೋಕಾದಿಕಾರ್ಯೇಷು ಅನುಗತಮ್ । ಅತಃ ಯಥಾ ಯತ್ರ ಘಟಾದಿದೃಷ್ಟಿಃ ಮೃದಾದಿದೃಷ್ಟ್ಯನುಗತೈವ ಸಾ ತಥಾ ಸಾಧುದೃಷ್ಟ್ಯನುಗತೈವ ಲೋಕಾದಿದೃಷ್ಟಿಃ । ಧರ್ಮಾದಿಕಾರ್ಯತ್ವಾತ್ ಲೋಕಾದೀನಾಮ್ । ಯದ್ಯಪಿ ಕಾರಣತ್ವಮ್, ಅವಿಶಿಷ್ಟಂ ಬ್ರಹ್ಮಧರ್ಮಯೋಃ, ತಥಾಪಿ[1] ಧರ್ಮ ಏವ ಸಾಧುಶಬ್ದವಾಚ್ಯಃ ಇತಿ ಯುಕ್ತಮ್ । ''ಸಾಧುಕಾರೀ ಸಾಧುರ್ಭವತಿ'' (ಬೃ ೪-೪-೫) ಇತಿ ಧರ್ಮವಿಷಯೇ ಸಾಧುಶಬ್ದಪ್ರಯೋಗಾತ್ । ನನು ಲೋಕಾದಿಕಾರ್ಯೇಷು ಕಾರಣಸ್ಯ ಅನುಗತತ್ವಾತ್ ಅರ್ಥಪ್ರಾಪ್ತ್ಯೈವ ತದ್ದೃಷ್ಟಿಃ ಇತಿ ''ಸಾಧು ಸಾಮೇತ್ಯುಪಾಸ್ತೇ'' (೨-೧-೪) ಇತಿ ನ ವಕ್ತವ್ಯಮ್ । ನ । ಶಾಸ್ತ್ರಗಮ್ಯತ್ವಾತ್ ತದ್ದೃಷ್ಟೇಃ । ಸರ್ವತ್ರ ಹಿ ಶಾಸ್ತ್ರಪ್ರಾಪಿತಾ ಏವ ಧರ್ಮಾಃ ಉಪಾಸ್ಯಾಃ, ನ ವಿದ್ಯಮಾನಾ ಅಪಿ ಅಶಾಸ್ತ್ರೀಯಾಃ ॥

(ಭಾಷ್ಯಾರ್ಥ)

(ಪ್ರಶ್ನೆ) :- ಸಾಧುದೃಷ್ಟಿವಿಶಿಷ್ಟವಾಗಿರುವವೆಂದು ಉಪಾಸನೆಮಾಡಬೇಕಾದ ಆ ಸಮಸ್ತಸಾಮಗಳು ಯಾವವು ?

---

1. 'ಧರ್ಮ ಏವ' ಇತ್ಯತ್ರ 'ತಥಾಪಿ' ಇತಿ ವಕ್ತವ್ಯಮ್ - ಎಂದು ಟೀಕೆಯಿರುವದರಿಂದ ಟೀಕಾಸಮ್ಮತವಾದ ಭಾಷ್ಯಪಾಠದಲ್ಲಿ ತಥಾಪಿ ಎಂಬುದು ಇರಲಿಲ್ಲವೆಂದು ಹೇಳಬೇಕಾಗಿದೆ.

(ಉತ್ತರ) :- ಆ ಇವುಗಳನ್ನು ಹೇಳಲಾಗುತ್ತದೆ. ಲೋಕಗಳಲ್ಲಿ ಐದು ಬಗೆಯ (ಸಾಮವನ್ನು) ಎಂದು ಮುಂತಾಗಿ ಈ ಹೇಳಿರುವ (ಸಾಮಗಳೇ ಇವು).

(ಆಕ್ಷೇಪ) :- ಲೋಕಗಳೇ ಮುಂತಾದ ದೃಷ್ಟಿಯಿಂದ[1] ಇವನ್ನು ಉಪಾಸನೆ ಮಾಡಬೇಕು, ಸಾಧುದೃಷ್ಟಿಯಿಂದಲೂ ಉಪಾಸನೆಮಾಡಬೇಕು ಎಂಬುದು ವಿರುದ್ಧ ವಲ್ಲವೆ ?[2]

(ಪರಿಹಾರ) :- ಹಾಗಲ್ಲ. ಏಕೆಂದರೆ ಕಾರಣವಾದ ಸಾಧು ಎಂಬರ್ಥವು, ಮೃದಾದಿಗಳು ಘಟವೇ ಮುಂತಾದವುಗಳಲ್ಲಿ ಅನುಗತವಾಗಿರುವಂತೆ, ಲೋಕವೇ ಮುಂತಾದ ಕಾರ್ಯಗಳಲ್ಲಿ ಅನುಗತವಾಗಿರುತ್ತದೆ. ಸಾಧುಶಬ್ದವಾಚ್ಯವಾದ ಪದಾರ್ಥವು ಧರ್ಮವಾಗಲಿ ಬ್ರಹ್ಮವಾಗಲಿ,[3] ಹೇಗೂ ಲೋಕವೇ ಮುಂತಾದ ಕಾರ್ಯಗಳಲ್ಲಿ (ಅದು) ಅನುಗತವಾಗಿಯೇ ಇರುತ್ತದೆ. ಆದ್ದರಿಂದ ಹೇಗೆ ಏತರಲ್ಲಿ[4] ಘಟಾದಿದೃಷ್ಟಿಯಿರುವದೋ (ಅದರಲ್ಲಿ) ಆ (ದೃಷ್ಟಿಯು ಹೇಗೆ) ಮೃದಾದಿದೃಷ್ಟಿಗಳಿಂದ ಅನುಗತವಾಗಿಯೇ ಇರುವದೋ, ಹಾಗೆಯೇ (ಸಾಮಗಳಲ್ಲಿ ಮಾಡುವ) ಲೋಕಾದಿದೃಷ್ಟಿಯು ಸಾಧುದೃಷ್ಟಿಯಿಂದ ಅನುಗತವಾಗಿಯೇ ಇರುತ್ತದೆ ; ಏಕೆಂದರೆ ಲೋಕಾದಿಗಳು ಧರ್ಮಾದಿಗಳ ಕಾರ್ಯವಾಗಿರುತ್ತವೆ.[5] ಬ್ರಹ್ಮವೂ ಧರ್ಮವೂ ಕಾರಣವೆಂಬುದು ಸಮಾನವಾಗಿದೆಯಾದರೂ ಧರ್ಮವೇ (ಇಲ್ಲಿ) ಸಾಧುಶಬ್ದವಾಚ್ಯ-

1. ಲೋಕಗಳು, ವೃಷ್ಟಿ, ಅಪ್ಪು, ಋತುಗಳು, ಪಶುಗಳು, ಪ್ರಾಣಗಳು - ಇವುಗಳ ದೃಷ್ಟಿಯಿಂದ ಎಂದರ್ಥ ; ಈ ಉಪಾಸನೆಗಳನ್ನೇ ಮುಂದಿನ ಕಂಡಿಕೆಗಳಲ್ಲಿ ವಿವರಿಸಿದೆ. ಮೂಲದಲ್ಲಿ ಲೋಕಗಳಲ್ಲಿ ಎಂದಿದ್ದರೂ ಲೋಕದೃಷ್ಟಿಯಿಂದ ಎಂದೇ ಅರ್ಥ ; ಏಕೆಂದರೆ ಇಲ್ಲಿ ಆಯಾ ದೃಷ್ಟಿವಿಧಾನವೇ ಪ್ರಕೃತ.
2. ಒಂದು ವಸ್ತು ಎರಡು ದೃಷ್ಟಿಗಳಿಗೆ ವಿಷಯವಾಗಿರುವದು ಹೇಗೆ ? ಘಟವು ಪಟವಾಗಲಾರದಷ್ಟೆ ?- ಎಂದು ಭಾವ. 3 ಸಾಧು ಎಂದರೆ ಒಳ್ಳೆಯ ಕರ್ಮವೆಂದಾಗಲಿ ಒಳ್ಳೆಯ ವಸ್ತುವೆಂದಾಗಲಿ ಅರ್ಥವನ್ನು ಮಾಡಬಹುದು
4. ಯತ್ರ ಎಂದರೆ ಯಾವ ದೇವದತ್ತನೇ ಮುಂತಾದ ಪುರುಷನಲ್ಲಿ ಎಂದು ಟೀಕೆ ; ಈ ವ್ಯಾಖ್ಯಾನವು ಅನವಶ್ಯ, ಅನುಪಯುಕ್ತ. ಏಕೆಂದರೆ ವಸ್ತುವಿನಲ್ಲಿ ಮಾಡುವ ದೃಷ್ಟಿಯೇ ಇಲ್ಲಿ ಪ್ರಕೃತ ; ಕರ್ತೃವೊಬ್ಬನಲ್ಲಿ ಎರಡು ದೃಷ್ಟಿಗಳಿರಬಹುದೆಂಬುದು ಪ್ರಕೃತವಲ್ಲ.
5. ಧರ್ಮವು ನಿಮಿತ್ತಕಾರಣ ; ಬ್ರಹ್ಮವು ನಿಮಿತ್ತಕಾರಣವೂ ಉಪಾದಾನಕಾರಣವೂ ಆಗಿದೆ. ಮತ್ತೊಂದು ಬಗೆಯಿಂದ ನೋಡಿದರೆ ಬ್ರಹ್ಮದೃಷ್ಟಿಯೇ ಧರ್ಮದಲ್ಲಿಯೂ ಅನುಗತವಾಗಿದೆ ಎನ್ನಬಹುದು.

ವಾದದ್ದು ಎಂಬುದು ಯುಕ್ತವು.[1] ಏಕೆಂದರೆ ''ಸಾಧುಕಾರಿಯಾದವನು ಸಾಧುವಾಗುವನು'' (ಬೃ. ೪-೪-೫) ಎಂದು ಧರ್ಮದ ವಿಷಯದಲ್ಲಿಯೇ ಸಾಧುಶಬ್ದವನ್ನು (ಶ್ರುತಿಯಲ್ಲಿ) ಪ್ರಯೋಗಿಸಿರುತ್ತದೆ.[2]

(ಆಕ್ಷೇಪ) :- ಲೋಕಗಳೇ ಮುಂತಾದವುಗಳಲ್ಲಿ ಕಾರಣ(ವಾದ ಧರ್ಮ)ವು ಅನುಗತವೇ ಆಗಿರುವದರಿಂದ ಆ (ಕಾರಣ)ದೃಷ್ಟಿಯು ತಾನೇ ಪ್ರಾಪ್ತವಾಗಿರುವದರಿಂದ ''ಸಾಧುವೆಂದು ಸಾಮವನ್ನು ಉಪಾಸನೆಮಾಡುವನೋ'' (೨-೧-೪) ಎಂದು ಹೇಳಬೇಕಾದದ್ದೇ ಇಲ್ಲವಲ್ಲ!

(ಪರಿಹಾರ) :- ಹಾಗಲ್ಲ. ಏಕೆಂದರೆ ಆ (ಕಾರಣದ) ದೃಷ್ಟಿಯು ಶಾಸ್ತ್ರದಿಂದಲೇ ತಿಳಿಯಬರಬೇಕಾಗಿರುತ್ತದೆ. (ಇದರ ವಿವರ) : ಎಲ್ಲೆಲ್ಲಿಯೂ ಶಾಸ್ತ್ರದಿಂದ ಬಂದೊದಗಿರುವ ಧರ್ಮಗಳನ್ನೇ ಉಪಾಸನೆಮಾಡಬೇಕೇ ಹೊರತು ಅಶಾಸ್ತ್ರೀಯವಾದ ಧರ್ಮಗಳು ಇದ್ದರೂ ಉಪಾಸನೆಮಾಡತಕ್ಕದ್ದಲ್ಲ.[3]

ಕಂಡಿಕೆಯ ವ್ಯಾಖ್ಯಾನ

(ಭಾಷ್ಯ)

೧೧೭. ಲೋಕೇಷು ಪೃಥಿವ್ಯಾದಿಷು ಪಞ್ಚವಿಧಂ ಪಞ್ಚಭಕ್ತಿಭೇದೇನ ಪಞ್ಚಪ್ರಕಾರಂ ಸಾಧು ಸಮಸ್ತಂ ಸಾಮ ಉಪಾಸೀತ। ಕಥಮ್ ? ಪೃಥಿವೀ ಹಿಂಕಾರಃ। ಲೋಕೇಷು ಇತಿ ಯಾ ಸಪ್ತಮೀ ತಾಂ ಪ್ರಥಮಾತ್ವೇನ ವಿಪರಿಣಮಯ್ಯ ಪೃಥಿವೀ ದೃಷ್ಟ್ಯಾ ಹಿಂಕಾರೇ ಪೃಥಿವೀ ಹಿಂಕಾರಃ ಇತಿ ಉಪಾಸೀತ। ವ್ಯತ್ಯಸ್ಯ ವಾ ಸಪ್ತಮೀಶ್ರುತಿಂ ಲೋಕವಿಷಯಾಂ ಹಿಂಕಾರಾದಿಷು ಪೃಥಿವ್ಯಾದಿದೃಷ್ಟಿಂ ಕೃತ್ವಾ ಉಪಾಸೀತ । ತತ್ರ ಪೃಥಿವೀ ಹಿಂಕಾರಃ। ಪ್ರಾಥಮ್ಯಸಾಮಾನ್ಯಾತ್ । ಅಗ್ನಿಃ ಪ್ರಸ್ತಾವಃ। ಅಗ್ನೌ ಹಿ ಕರ್ಮಾಣಿ ಪ್ರಸ್ತೂಯನ್ತೇ। ಪ್ರಸ್ತಾವಶ್ಚ ಭಕ್ತಿಃ। ಅನ್ತರಿಕ್ಷಮ್ ಉದ್ಗೀಥಃ। ಅನ್ತರಿಕ್ಷಂ ಹಿ ಗಗನಮ್ ।

---

1. ಧರ್ಮವು ನಿಮಿತ್ತಕಾರಣವಾದರೂ ಕರ್ಮಾಪೂರ್ವಸಹಿತವಾದ ದಧಿಪಯಾದಿ ದ್ರವ್ಯಗಳೇ ಧರ್ಮವಾದ್ದರಿಂದ ಅದೂ ಉಪಾದಾನಕಾರಣವಾಗಿದೆ ಎಂದು ಟೀಕೆ. ಸಾಮವು ಕರ್ಮವಾಗಿರುವದರಿಂದ ಕರ್ಮರೂಪವಾದ ಧರ್ಮದ ದೃಷ್ಟಿಯು ಅದರಲ್ಲಿಯೂ ಅನುಗತವಾಗಿದೆ ಎಂಬುದು ಸ್ವಾಭಾವಿಕವಾಗಿದೆ ; ಲೋಕಾದಿಗಳು ಧರ್ಮಕಾರ್ಯವಾಗಿರುವದರಿಂದಲೂ ಕರ್ಮದ ಅಪೇಕ್ಷೆಯಿಂದಲೇ ಬ್ರಹ್ಮವನ್ನು ಲೋಕಾದಿಗಳಿಗೆ ಕಾರಣವೆಂದು ಎಣಿಸಬೇಕಾಗಿರುವದರಿಂದಲೂ ಧರ್ಮಬುದ್ಧಿಯು ಅವುಗಳಲ್ಲಿಯೂ ಅನುಗತವಾಗಿರುವದು ವಿರುದ್ಧವಲ್ಲ.

2. ಸಾಧುಕಾರೀ ಎಂಬಲ್ಲಿ ಸಾಧುಶಬ್ದಕ್ಕೆ ಬ್ರಹ್ಮಾರ್ಥವಿಲ್ಲ; ಏಕೆಂದರೆ ಬ್ರಹ್ಮವು ಅನುಷ್ಠೇಯವಲ್ಲ.

3. ಶಾಸ್ತ್ರದಲ್ಲಿ ಸ್ಪಷ್ಟವಾಗಿ ವಿಧಿಸಿರುವಂತೆ ಅನುಷ್ಠಾನಮಾಡಬೇಕೇ ಹೊರತು, ತಾನೇ ತೋರುವದನ್ನಲ್ಲ.

ಗಕಾರವಿಶಿಷ್ಟಶ್ಚ ಉದ್ಗೀಥಃ । ಆದಿತ್ಯಃ ಪ್ರತಿಹಾರಃ । ಪ್ರತಿಪ್ರಾಣಂ ಅಭಿಮುಖಿತ್ವಾತ್ ಮಾಂ ಪ್ರತಿ ಮಾಂ ಪ್ರತಿ ಇತಿ । ದ್ಯೌರ್ನಿಧನಮ್ । ದಿವಿ ನಿಧೀಯನ್ತೇ ಹಿ ಇತೋ ಗತಾಃ । ಇತಿ ಊರ್ಧ್ವೇಷು ಊರ್ಧ್ವಗತೇಷು ಲೋಕದೃಷ್ಟ್ಯಾ ಸಾಮೋಪಾಸನಮ್ ॥

(ಭಾಷ್ಯಾರ್ಥ)

ಲೋಕಗಳಲ್ಲಿ ಎಂದರೆ ಪೃಥಿವ್ಯಾದಿಗಳಲ್ಲಿ ಐದು ಬಗೆಯ, ಐದು ಭಕ್ತಿವಿಶೇಷ ಗಳಿರುವದರಿಂದ[1] ಐದು ಪ್ರಕಾರವಾಗಿರುವ ಸಮಸ್ತಸಾಮವನ್ನು ಸಾಧುವೆಂದು ಉಪಾಸನೆಮಾಡಬೇಕು. ಹೇಗೆಂದರೆ, ಪೃಥಿವಿಯೇ ಹಿಂಕಾರವು. 'ಲೋಕಗಳಲ್ಲಿ' ಎಂಬ ಸಪ್ತಮೀ(ವಿಭಕ್ತಿ)ಯಿದೆಯಷ್ಟೆ, ಅದನ್ನು ಪ್ರಥಮಾವಿಭಕ್ತಿಯಾಗಿ ವಿಪರಿಣಾಮಮಾಡಿ ಕೊಂಡು, ಪೃಥಿವೀದೃಷ್ಟಿಯಿಂದ ಹಿಂಕಾರದಲ್ಲಿ, ಪೃಥಿವಿಯೇ ಹಿಂಕಾರವು ಎಂದು ಉಪಾಸನೆಮಾಡಬೇಕು.[2] ಅಥವಾ ಲೋಕವಿಷಯದಲ್ಲಿರುವ ಸಪ್ತಮೀಶ್ರುತಿಯನ್ನು ವ್ಯತ್ಯಾಸಮಾಡಿಕೊಂಡು ಹಿಂಕಾರಾದಿಗಳಲ್ಲಿ ಪೃಥಿವ್ಯಾದಿದೃಷ್ಟಿಯನ್ನು ಮಾಡಿಕೊಂಡು ಉಪಾಸನೆಮಾಡಬೇಕು.[3]

ಇಲ್ಲಿ ಪೃಥಿವಿಯೇ ಹಿಂಕಾರವು, ಏಕೆಂದರೆ ಒಂದನೆಯದಾಗಿರುವದೆಂಬುದು (ಎರಡುಕ್ಕೂ) ಸಮಾನವು.[4] ಅಗ್ನಿಯು ಪ್ರಸ್ತಾವವು ; ಅಗ್ನಿಯಲ್ಲಲ್ಲವೆ, ಕರ್ಮಗಳು ಪ್ರಸ್ತುತವಾಗುವವು ? ಭಕ್ತಿಯೂ ಪ್ರಸ್ತಾವವೇ.[5] ಅಂತರಿಕ್ಷವೇ ಉದ್ಗೀಥವು. ಅಂತರಿಕ್ಷ

---

1. ಗಾನಮಾಡುವ ಸಾಮಕ್ಕೆ ಐದು ಭಾಗಗಳು. ಮೊದಲು ಉದ್ಗಾತೃವು ಹೇಳುವದು ಹಿಂಕಾರವು ; ಪ್ರಸ್ತೋತೃವು ಗಾನಮಾಡಬೇಕಾದ ಎರಡನೆಯ ಭಾಗವು ಪ್ರಸ್ತಾವವು ; ಉದ್ಗಾತೃವು ಗಾನಮಾಡಬೇಕಾದ ಮೂರನೆಯ ಭಾಗವು ಉದ್ಗೀಥವು ; ಪ್ರತಿಹರ್ತೃವು ಗಾನಮಾಡಬೇಕಾದ ನಾಲ್ಕನೆಯ ಭಾಗವು ಪ್ರತಿಹಾರವು ; ಎಲ್ಲರೂ ಒಟ್ಟು ಸೇರಿ ಗಾನ ಮಾಡುವ ಐದನೆಯ ಭಾಗವು ನಿಧನವು. ಈ ಐದು ಭಕ್ತಿಗಳನ್ನು ಸಾಧುದೃಷ್ಟಿಯಿಂದಲೂ ಲೋಕದೃಷ್ಟಿಯಿಂದಲೂ ಉಪಾಸನೆಮಾಡಬೇಕು - ಎಂದರ್ಥ.
2. 'ಲೋಕೇಷು ಸಾಮ ಉಪಾಸೀತ' ಎಂಬುದನ್ನು 'ಲೋಕಾಃ ಸಾಮ ಇತ್ಯುಪಾಸೀತ' ಎಂಬ ವಾಕ್ಯವಾಗಿ ಮಾರ್ಪಡಿಸಿಕೊಂಡು ಅರ್ಥವನ್ನು ಮಾಡಬೇಕು ಎಂದರ್ಥ.
3. 'ಲೋಕೇಷು ಸಾಮ ಉಪಾಸೀತ' ಎಂಬುದನ್ನು 'ಲೋಕಾ ಇತಿ ಸಾಮಾನಿ ಉಪಾಸೀತ' ಎಂದು ಮಾರ್ಪಡಿಸಿಕೊಳ್ಳಬೇಕು ಎಂದರ್ಥ. ಈ ಎರಡು ಬಗೆಯಲ್ಲಿ ಮಾರ್ಪಡಿಸಿ ಕೊಳ್ಳುವದಕ್ಕೆ ಕಾರಣವು ಲೋಕಾದಿಗಳ ಉತ್ಕರ್ಷವೇ ಎಂದು ಬ್ರ. ಸೂ. ೪-೧-೫ರ ನ್ಯಾಯವನ್ನು ವ್ಯಾಖ್ಯಾನಕಾರರು ಹೇಳಿರುವದು ಸರಿಯಲ್ಲ; ಬ್ರ. ಸೂ. ೪-೧-೬ ರಲ್ಲಿರುವ ನ್ಯಾಯವೇ ಇಲ್ಲಿ ಯುಕ್ತ. ಆ ಸೂತ್ರದ ಭಾಷ್ಯವನ್ನು (ಭಾ. ಭಾ. ೫೧೭, ೫೧೮) ನೋಡಿ.
4. ಹಿಂಕಾರವು ಸಾಮದಲ್ಲಿಯೂ ಪೃಥಿವಿಯು ಲೋಕಗಳಲ್ಲಿಯೂ ಒಂದನೆಯದು.
5. ಪ್ರಶಬ್ದವು ಎರಡಕ್ಕೂ ಸಮಾನವಾಗಿದೆ.

ವೆಂದರೆ ಗಗನವಷ್ಟೆ ? ಉದ್ಗೀಥವೂ ಗಕಾರವಿಶಿಷ್ಟವಾಗಿರುತ್ತದೆ.[1] ಆದಿತ್ಯನೇ ಪ್ರತಿಹಾರವು ; ಏಕೆಂದರೆ (ಆದಿತ್ಯನು) 'ನನಗೆ ಪ್ರತಿ, ನನಗೆ ಪ್ರತಿ' ಎಂದು ಪ್ರತಿಯೊಬ್ಬ ಜೀವನಿಗೂ ಅಭಿಮುಖವಾಗಿರುತ್ತಾನೆ.[2] ದ್ಯುಲೋಕವು ನಿಧನವು ; ಇಲ್ಲಿಂದ ಹೋದವರು ದ್ಯುಲೋಕದಲ್ಲಿ ನಿಹಿತರಾಗುತ್ತಾರಷ್ಟೆ[3] ?

ಹೀಗೆ ಊರ್ಧ್ವವಾದ, ಮೇಲುಗಡೆಗಿರುವ (ಲೋಕ)ಗಳಲ್ಲಿ, ಲೋಕದೃಷ್ಟಿಯಿಂದ ಸಾಮೋಪಾಸನೆಯನ್ನು (ಹೇಳಿದ್ದಾಯಿತು).

ಆವೃತ್ತಲೋಕಗಳ ದೃಷ್ಟಿಯಿಂದ ಸಾಮೋಪಾಸನೆ

(ಉಪನಿಷತ್ತು)

ಅಥಾವೃತ್ತೇಷು ದ್ಯೌರ್ಹಿಂಕಾರ ಆದಿತ್ಯಃ ಪ್ರಸ್ತಾವೋಽನ್ತರಿಕ್ಷ-ಮುದ್ಗೀಥೋಽಗ್ನಿಃ ಪ್ರತಿಹಾರಃ ಪೃಥಿವೀ ನಿಧನಮ್ ॥೨॥

೨. ಇನ್ನು ಆವೃತ್ತ(ಲೋಕ)ಗಳಲ್ಲಿ : ದ್ಯುಲೋಕವು ಹಿಂಕಾರವು, ಆದಿತ್ಯನು ಪ್ರಸ್ತಾವವು, ಅಂತರಿಕ್ಷವು ಉದ್ಗೀಥವು, ಅಗ್ನಿಯು ಪ್ರತಿಹಾರವು, ಪೃಥಿವಿಯು ನಿಧನವು.

ಹಿಂಕಾರಾದಿಗಳಲ್ಲಿ ದ್ಯುಲೋಕಾದಿದೃಷ್ಟಿ

(ಭಾಷ್ಯ)

೧೧೮. **ಅಥ ಆವೃತ್ತೇಷು ಅವಾಙ್ಮುಖೇಷು ಪಞ್ಚವಿಧಮ್ ಉಚ್ಯತೇ ಸಾಮೋಪಾಸನಮ್ । ಗತ್ಯಾಗತಿವಿಶಿಷ್ಟಾ ಹಿ ಲೋಕಾಃ । ಯಥಾ ತೇ ತಥಾ ದೃಷ್ಟ್ಯೈವ ಸಾಮೋಪಾಸನಂ ವಿಧೀಯತೇ ಯತಃ, ಅತಃ ಆವೃತ್ತೇಷು ಲೋಕೇಷು । ದ್ಯೌರ್ಹಿಂಕಾರಃ । ಪ್ರಾಥಮ್ಯಾತ್ । ಆದಿತ್ಯಃ ಪ್ರಸ್ತಾವಃ । ಉದಿತೇ ಹಿ ಆದಿತ್ಯೇ ಪ್ರಸ್ತೂಯನ್ತೇ ಕರ್ಮಾಣಿ ಪ್ರಾಣಿನಾಮ್ । ಅನ್ತರಿಕ್ಷಮ್ ಉದ್ಗೀಥಃ ಪೂರ್ವವತ್,**

ಗಕಾರವು ಎರಡಕ್ಕೂ ಸಮಾನವಾಗಿದೆ. ಗಕಾರಸಾಮ್ಯದಿಂದ ಉಪಾಸನೆ ; ಯಾವದಾದರೊಂದು ಹೋಲಿಕೆಯನ್ನು ನೆನಪಿಗೆ ತಂದುಕೊಂಡು ಉಪಾಸನೆಮಾಡಬೇಕು.

ಪ್ರತಿಶಬ್ದವು ಎರಡಕ್ಕೂ ಸಮಾನವಾಯಿತು. 'ಮಾಂ ಪ್ರತಿ ಮಾಂ ಪ್ರತಿ' ಎಂದು ಪ್ರತಿಯೊಬ್ಬರಿಗೂ ಆದಿತ್ಯನು ಎದುರಿಗೇ ಇರುವಂತೆ ಕಾಣಿಸುತ್ತಾನೆ. ಮುಂದೆ ೨-೯-೧ನ್ನು ನೋಡಿರಿ.

3. ನಿಧನತ್ವವು ಎರಡಕ್ಕೂ ಸಮಾನವಾಯಿತು. ಇಲ್ಲಿ ವಚನದಿಂದಲೇ ಉಪಾಸನೆಯು ವಿಹಿತವಾಗಿದ್ದರೂ ಯಾವದಾದರೊಂದಿಷ್ಟು ಸಾಮಾನ್ಯವನ್ನು ತಿಳಿಸಿ ಉಪಾಸನೆಗೆ ಉಪಪತ್ತಿಯನ್ನು ತೋರಿಸಬೇಕೆಂದು ಕೆಲವು ಕಡೆ ಶಬ್ದಸಾಮಾನ್ಯವನ್ನು ತೋರಿಸಿದೆ.

ಅಗ್ನಿಃ ಪ್ರತಿಹಾರಃ । ಪ್ರಾಣೇಭ್ಯಃ ಪ್ರತಿಹರಣಾತ್ ಅಗ್ನೇಃ । ಪೃಥಿವೀ ನಿಧನಮ್ । ತತ ಆಗತಾನಾಮ್ ಇಹ ನಿಧನಾತ್ ॥

(ಭಾಷ್ಯಾರ್ಥ)

ಇನ್ನು ಆವೃತ್ತವಾಗಿರುವ ಕೆಳಗಡೆ ಬಂದಿರುವ (ಲೋಕ)ಗಳ (ವಿಷಯ)ದಲ್ಲಿ ಐದು ಬಗೆಯ ಸಾಮೋಪಾಸನೆಯನ್ನು ಹೇಳಲಾಗುವದು. ಏಕೆಂದರೆ ಲೋಕಗಳು ಗತ್ಯಾಗತಿವಿಶಿಷ್ಟವಾಗಿರುತ್ತವೆ. ಅವು ಹೇಗಿವೆಯೋ ಆ ದೃಷ್ಟಿಯಿಂದಲೇ ಸಾಮೋಪಾಸನೆಯನ್ನು ವಿಧಿಸಲಾಗುತ್ತದೆಯಷ್ಟೆ, ಅದರಿಂದ ಆವೃತ್ತಲೋಕಗಳಲ್ಲಿ (ಹೀಗೆ ಉಪಾಸನೆ ಮಾಡಬೇಕು).[1]

ದ್ಯು(ಲೋಕವು) ಹಿಂಕಾರವು ; ಏಕೆಂದರೆ ಮೊದಲನೆದಾಗಿರುವದೆಂಬುದು (ಎರಡಕ್ಕೂ ಸಮಾನವಾಗಿರುತ್ತದೆ). ಆದಿತ್ಯನು ಪ್ರಸ್ತಾವವು ; ಏಕೆಂದರೆ ಆದಿತ್ಯನು ಉದಯಿಸುತ್ತಲೂ ಪ್ರಾಣಿಗಳ ಕರ್ಮಗಳು ಪ್ರಸುತ್ತವಾಗುತ್ತವೆ. ಅಂತರಿಕ್ಷವು ಉದ್ಗೀಥವು ಎಂಬುದು ಹಿಂದಿನ (ಕಂಡಿಕೆಯ)ಂತೆಯೇ. ಅಗ್ನಿಯು ಪ್ರತಿಹಾರವು ; ಏಕೆಂದರೆ ಜೀವರು ಅಗ್ನಿಯನ್ನು ಪ್ರತಿಹರಣಮಾಡುತ್ತಾರೆ.[2] ಪೃಥಿವಿಯು ನಿಧನವು ; ಏಕೆಂದರೆ ಅಲ್ಲಿಂದ ಬಂದವರು ಇಲ್ಲಿ ನಿಹಿತರಾಗುತ್ತಾರೆ.[3]

ಲೋಕದೃಷ್ಟಿಯ ಉಪಾಸನೆಗೆ ಫಲ

(ಉಪನಿಷತ್ತು)

ಕಲ್ಪನ್ತೇ ಹಾಸ್ಮೈ ಲೋಕಾ ಊರ್ಧ್ವಾಶ್ಚಾವೃತ್ತಾಶ್ಚ ಯ ಏತದೇವಂ-ವಿದ್ವಾಲ್ಲೋಕೇಷು ಪಞ್ಚವಿಧಗ್ಂ ಸಾಮೋಪಾಸ್ತೇ ॥೩॥

೩. ಯಾವನು ಹೀಗೆಂದರಿತು ಲೋಕಗಳಲ್ಲಿ ಐದು ಬಗೆಯ ಸಾಮವನ್ನು ಉಪಾಸನೆಮಾಡುತ್ತಾನೋ ಅವನಿಗೆ ಊರ್ಧ್ವವಾದ ಮತ್ತು ಆವೃತ್ತವಾದ ಲೋಕಗಳು ಆಗುವವು.

1. ಈ ಉಪಾಸನೆಯ ಪ್ರಕಾರವು ಹಿಂದೆ ಹೇಳಿದ್ದಕ್ಕೆ ವಿರುದ್ಧವಲ್ಲ ; ಹಿಂದಿನ ಉಪಾಸನೆಗಳು ಮೇಲಿನ ಲೋಕಗಳಿಗೆ ಹೋಗುವದನ್ನನುಸರಿಸಿ ಉಕ್ತವಾಗಿವೆ ; ಇಲ್ಲಿ ಈ ಕಡೆಗೆ ಇಳಿಯುವ ಕ್ರಮವನ್ನನುಸರಿಸಿ ಹೇಳಿದೆ.
2. ಅತ್ತಿತ್ತ ಒಯ್ಯುತ್ತಾರೆ. 3. ಈ ಕಂಡಿಕೆಯಲ್ಲಿಯೂ ಹಿಂದಿನಂತೆಯೇ ಹೋಲಿಕೆಗಳನ್ನು ಕಲ್ಪಿಸಿಕೊಳ್ಳಬೇಕು ಎಂದು ಅಭಿಪ್ರಾಯ.

(ಭಾಷ್ಯ)

೧೧೯. ಉಪಾಸನಫಲಮ್ । ಕಲ್ಪನ್ತೇ ಸಮರ್ಥಾ ಭವನ್ತಿ ಹ ಅಸ್ಮೈ ಲೋಕಾ ಊರ್ಧ್ವಾಶ್ಚ ಆವೃತ್ತಾಶ್ಚ ಗತ್ಯಾಗತಿವಿಶಿಷ್ಟಾ ಭೋಗ್ಯತ್ವೇನ ವ್ಯವತಿಷ್ಠನ್ತೇ ಇತ್ಯರ್ಥಃ । ಯ ಏತದೇವಂ ವಿದ್ವಾನ್ ಲೋಕೇಷು ಪಞ್ಚವಿಧಂ ಸಮಸ್ತಂ ಸಾಧು ಸಾಮ ಇತ್ಯುಪಾಸ್ತೇ ಇತಿ ಸರ್ವತ್ರ ಯೋಜನಾ ಪಞ್ಚವಿಧೇ ಸಪ್ತವಿಧೇ ಚ ॥

(ಭಾಷ್ಯಾರ್ಥ)

(ಈ) ಉಪಾಸನೆಗೆ ಫಲವೇನೆಂದರೆ : ಇವನಿಗೆ ಊರ್ಧ್ವವಾದ ಮತ್ತು ಆವೃತ್ತವಾದ ಗತ್ಯಾಗತಿವಿಶಿಷ್ಟವಾದ ಲೋಕಗಳು ಆಗುವವು. ಭೋಗ್ಯವಾಗಿರುವವು - ಎಂದರ್ಥ. ಯಾವನು ಇದನ್ನು ಹೀಗೆಂದರಿತು ಲೋಕಗಳ (ವಿಷಯ)ದಲ್ಲಿ ಐದು ಬಗೆಯ ಸಮಸ್ತಸಾಮವನ್ನು ಸಾಧುವೆಂದು ಹೀಗೆ ಉಪಾಸನೆಮಾಡುತ್ತಾನೋ[1] (ಅವನಿಗೆ ಈ ಫಲವು)- ಎಂದು ಐದು ಬಗೆಯ (ಸಾಮದ ವಿಷಯ)ದಲ್ಲಿಯೂ ಏಳು ಬಗೆಯ (ಸಾಮವಿಷಯ)ದಲ್ಲಿಯೂ ಎಲ್ಲಾ ಕಡೆಯಲ್ಲಿಯೂ (ಫಲವಾಕ್ಯವನ್ನು) ಹೊಂದಿಸಿಕೊಳ್ಳಬೇಕು.

ಎರಡನೆಯ ಅಧ್ಯಾಯ - ಮೂರನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ವೃಷ್ಟಿದೃಷ್ಟಿಯಿಂದ ಸಾಮೋಪಾಸನೆ

(ಉಪನಿಷತ್ತು)

ವೃಷ್ಟೌ ಪಞ್ಚವಿಧಗ್ಂ ಸಾಮೋಪಾಸೀತ ಪುರೋವಾತೋ ಹಿಂಕಾರೋ ಮೇಘೋ ಜಾಯತೇ ಸ ಪ್ರಸ್ತಾವೋ ವರ್ಷತಿ ಸ ಉದ್ಗೀಥೋ ವಿದ್ಯೋತತೇ ಸ್ತನಯತಿ ಸ ಪ್ರತಿಹಾರ ಉದ್ಗೃಹ್ಣಾತಿ ತನ್ನಿಧನಮ್[2] ॥೧॥

1. ಲೋಕದೃಷ್ಟಿಯಿಂದಲೂ ಸಾಧುದೃಷ್ಟಿಯಿಂದಲೂ ಉಪಾಸನೆಮಾಡುವನೋ ಎಂದರ್ಥ.
2. 'ಉದ್ಗೃಹ್ಣಾತಿ ತನ್ನಿಧನಮ್' ಎಂಬುದನ್ನು ವಾ॥ ತೆ॥ ಪಾಠಗಳನ್ನನುಸರಿಸಿ ಈ ಕಂಡಿಕೆಗೇ ಸೇರಿಸಿಕೊಂಡಿದೆ.

೧. ವೃಷ್ಟಿ(ವಿಷಯ)ದಲ್ಲಿ ಐದುಬಗೆಯ ಸಾಮವನ್ನು ಉಪಾಸನೆ ಮಾಡಬೇಕು. ಮುಂಗಾಳಿಯು ಹಿಂಕಾರವು ; ಮೋಡವು ಹುಟ್ಟುತ್ತದೆಯಲ್ಲ, ಅದು ಪ್ರಸ್ತಾವವು ; ಮಳೆಗರೆಯುತ್ತದೆಯಲ್ಲ, ಆದು ಉದ್ಗೀಥವು ; ಮಿಂಚುತ್ತದೆಯಷ್ಟೆ, ಗುಡುಗುತ್ತದೆಯಷ್ಟೆ, ಅದು ಪ್ರತಿಹಾರವು ; ನಿಲ್ಲುತ್ತದೆಯಲ್ಲ, ಅದು ನಿಧನವು.

ವೃಷ್ಟಿದೃಷ್ಟಿಯ ಉಪಾಸನೆಗೆ ಹಿಂಕಾರಾದಿಗಳ ವಿನಿಯೋಗ

(ಭಾಷ್ಯ)

೧೨೦. ವೃಷ್ಟೌ ಪಞ್ಚವಿಧಂ ಸಾಮ ಉಪಾಸೀತ । ಲೋಕಸ್ಥಿತೇಃ ವೃಷ್ಟಿನಿಮಿತ್ತತ್ವಾತ್ ಆನನ್ತರ್ಯಮ್ । ಪುರೋವಾತೋ ಹಿಂಕಾರಃ । ಪುರೋವಾತಾದ್ಯುದ್ಗ್ರಹಣಾನ್ತಾ ಹಿ ವೃಷ್ಟಿಃ । ಯಥಾ ಸಾಮ ಹಿಂಕಾರಾದಿನಿಧನಾನ್ತಮ್ । ಅತಃ ಪುರೋವಾತೋ ಹಿಂಕಾರಃ । ಪ್ರಾಥಮ್ಯಾತ್ । ಮೇಘೋ ಜಾಯತೇ ಸ ಪ್ರಸ್ತಾವಃ । ಪ್ರಾವೃಷಿ ಮೇಘಜನನೇ ವೃಷ್ಟೇಃ ಪ್ರಸ್ತಾವಃ ಇತಿ ಹಿ ಪ್ರಸಿದ್ಧಿಃ । ವರ್ಷತಿ ಸ ಉದ್ಗೀಥಃ । ಶ್ರೈಷ್ಠ್ಯಾತ್ । ವಿದ್ಯೋತತೇ ಸ್ತನಯತಿ ಸ ಪ್ರತಿಹಾರಃ । ಪ್ರತಿಹೃತತ್ವಾತ್ । ಉದ್ಗ್ರಹ್ಣಾತಿ ತನ್ನಿಧನಮ್ । ಸಮಾಪ್ತಿಸಾಮಾನ್ಯಾತ್ ॥

(ಭಾಷ್ಯಾರ್ಥ)

ವೃಷ್ಟಿಯ (ವಿಷಯ)ದಲ್ಲಿ ಐದು ಬಗೆಯ ಸಾಮವನ್ನು ಉಪಾಸನೆಮಾಡಬೇಕು. ಲೋಕಗಳಿರುವದಕ್ಕೆ ಮಳೆಯೇ ನಿಮಿತ್ತವಾಗಿರುವದರಿಂದ (ಈ ಉಪಾಸನೆಯನ್ನು ಲೋಕಸಾಮೋಪಾಸನೆಯ) ಅನಂತರದಲ್ಲಿ (ಹೇಳಿದೆ).[1]

ಮುಂಗಾಳಿಯು ಹಿಂಕಾರವು, ಮುಂಗಾಳಿಯಿಂದ ಮೊದಲಾಗಿ ನಿಲುಗಡೆಯವರೆಗೂ ಅಲ್ಲವೆ, ವೃಷ್ಟಿಯೆಂಬುದು ? ಸಾಮವು ಹಿಂಕಾರವು ಮೊದಲಾಗಿ ನಿಧನದವರೆಗೂ ಹೇಗೆ ಸಾಮ(ವೆನಿಸುವದೋ ಹಾಗೆಯೇ ಇದು). ಆದ್ದರಿಂದ ಮುಂಗಾಳಿಯೇ ಹಿಂಕಾರವು ; ಏಕೆಂದರೆ (ಎರಡೂ) ಒಂದನೆಯ(ವಾಗಿವೆ). ಮೋಡವು ಹುಟ್ಟುತ್ತದೆಯಲ್ಲ, ಅದು ಪ್ರಸ್ತಾವವು ; ಮಳೆಗಾಲದಲ್ಲಿ ಮೋಡವುಂಟಾಗಲು ಮಳೆಗೆ ಪ್ರಸ್ತಾವವು[2] ಎಂದಲ್ಲವೆ, ಪ್ರಸಿದ್ಧಿ ? ಮಳೆಗರೆಯುತ್ತದೆಯಲ್ಲ, ಅದು ಉದ್ಗೀಥವು ; ಏಕೆಂದರೆ (ಅವು) ಶ್ರೇಷ್ಠವಾಗಿರುತ್ತವೆ.[3] ಮಿಂಚುತ್ತದೆಯಷ್ಟೆ,

---

1. ಉಪಾಸನೆಗಳ ಕ್ರಮವಾತಕ್ಕೂ ಒಂದು ಹೇತುವಿದೆ ಎಂದು ಭಾವ. 2. ಪ್ರಾರಂಭವು.

3. ಮಳೆಗೆ ಮಳೆಗರೆಯುವದೇ ಶ್ರೇಷ್ಠ, ಸಾಮಕ್ಕೆ ಉದ್ಗೀಥಭಕ್ತಿಯೇ ಶ್ರೇಷ್ಠ.

ಗುಡುಗುತ್ತದೆಯಷ್ಟೆ ಆದು ಪ್ರತಿಹಾರವು ; ಏಕೆಂದರೆ (ಅವು) ಪ್ರತಿಹೃತವಾಗುತ್ತವೆ.[1] ನಿಲ್ಲುತ್ತದೆಯಲ್ಲ, ಅದು ನಿಧನವು ; ಏಕೆಂದರೆ ಮುಗಿಯಿತು ಎಂಬುದು (ಎರಡಕ್ಕೂ) ಸಮಾನವಾಗಿರುತ್ತದೆ.[2]

ವೃಷ್ಟಿದೃಷ್ಟಿಯ ಉಪಾಸನೆಗೆ ಫಲ

(ಉಪನಿಷತ್ತು)

ವರ್ಷತಿ ಹಾऽಸ್ಮೈ ವರ್ಷಯತಿ ಹ ಯ ಏತದೇವಂ ವಿದ್ವಾನ್ ವೃಷ್ಟೌ ಪಞ್ಚವಿಧಗ್ಂ ಸಾಮೋಪಾಸ್ತೇ ॥೨॥

೨. ಯಾವನು ಹೀಗೆಂದರಿತು ವೃಷ್ಟಿಯ (ವಿಷಯ)ದಲ್ಲಿ ಐದುಬಗೆಯ ಸಾಮವನ್ನು ಉಪಾಸನೆಮಾಡುತ್ತಾನೋ ಅವನಿಗೆ ಮಳೆಗರೆಯುತ್ತದೆ, ಅವನು ಮಳೆಗರೆಯಿಸುತ್ತಾನೆ.

(ಭಾಷ್ಯ)

೧೨೧. ಫಲಮ್ ಉಪಾಸನಸ್ಯ । ವರ್ಷತಿ ಹ ಅಸ್ಮೈ ಇಚ್ಛಾತಃ । ತಥಾ ವರ್ಷಯತಿ ಹ ಅಸತ್ಯಾಮಪಿ ವೃಷ್ಟೌ । ಯ ಏತತ್ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

(ಈ) ಉಪಾಸನೆಗೆ ಫಲವೇನೆಂದರೆ, ಇವನಿಗೆ ಇಚ್ಛೆಯಂತೆ ಮಳೆಗರೆಯುತ್ತದೆ ; ಹಾಗೆಯೇ ಮಳೆಯಿಲ್ಲದಿದ್ದರೂ (ಇಚ್ಛೆಯಿಂದಲೇ) ಮಳೆಗರೆಯಿಸುತ್ತಾನೆ. 'ಯಾವನು ಹೀಗೆ(ಂದರಿತು)' ಮುಂತಾದ ವಾಕ್ಯವು ಹಿಂದಿನಂತೆ ವ್ಯಾಖ್ಯಾನ ಮಾಡಿಕೊಳ್ಳತಕ್ಕದ್ದು.[3]

1. ಅತ್ತಿತ್ತ ಚದರುತ್ತವೆ.
2. ಮಳೆನಿಲ್ಲುವದೆಂಬುದು ಆದಕ್ಕೆ ಕೊನೆ ; ನಿಧನವೆಂಬ ಭಕ್ತಿಯ ಗಾನವು ಸಾಮಕ್ಕೆ ಕೊನೆ.
3. ಹಿಂದಿನ ಖಂಡದ ೩ನೆಯ ಕಂಡಿಕೆಯ ಭಾಷ್ಯದಲ್ಲಿರುವಂತೆ.

ಎರಡನೆಯ ಅಧ್ಯಾಯ - ನಾಲ್ಕನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ನೀರಿನ ದೃಷ್ಟಿಯಿಂದ ಸಾಮೋಪಾಸನೆ

(ಉಪನಿಷತ್ತು)

ಸರ್ವಾಸ್ವಪ್ಸು ಪಞ್ಚವಿಧಗ್ಂ ಸಾಮೋಪಾಸೀತ ಮೇಘೋ ಯತ್ ಸಂಪ್ಲವತೇ ಸ ಹಿಂಕಾರೋ ಯದ್ವರ್ಷತಿ ಸ ಪ್ರಸ್ತಾವೋ ಯಾಃ ಪ್ರಾಚ್ಯಃ ಸ್ಯನ್ದನ್ತೇ ಸ ಉದ್ಗೀಥೋ ಯಾಃ ಪ್ರತೀಚ್ಯಃ ಸ ಪ್ರತಿಹಾರಃ ಸಮುದ್ರೋ ನಿಧನಮ್ ॥೧॥

೧. ಎಲ್ಲಾ ನೀರಿನಲ್ಲಿಯೂ ಐದುಬಗೆಯ ಸಾಮವನ್ನು ಉಪಾಸನೆಮಾಡ ಬೇಕು. ಮೋಡವು ಒಟ್ಟುಗೂಡುವದಲ್ಲ, ಅದು ಹಿಂಕಾರವು ; ಮಳೆಗರೆಯು ವದಲ್ಲ, ಅದು ಪ್ರಸ್ತಾವವು ; ಪೂರ್ವಕ್ಕೆ ಹರಿಯುವವಲ್ಲ, ಅದು ಉದ್ಗೀಥವು; ಪಶ್ಚಿಮಕ್ಕೆ (ಹರಿಯುವವಲ್ಲ), ಅದು ಪ್ರತಿಹಾರವು ; ಸಮುದ್ರವು ನಿಧನವು.

ನೀರಿನ ದೃಷ್ಟಿಯ ಉಪಾಸನೆಗಳಿಗೆ ಹಿಂಕಾರಾದಿಗಳ ವಿನಿಯೋಗ

(ಭಾಷ್ಯ)

೧೨೨. ಸರ್ವಾಸು ಅಪ್ಸು ಪಞ್ಚವಿಧಂ ಸಾಮ ಉಪಾಸೀತ । ವೃಷ್ಟಿಪೂರ್ವಕತ್ವಾತ್ ಸರ್ವಾಸಾಮ್ ಅಪಾಮ್ ಆನನ್ತರ್ಯಮ್ । ಮೇಘೋ ಯತ್ ಸಂಪ್ಲವತೇ । ಏಕೀಭಾವೇನ ಇತರೇತರಂ ಘನೀಭವತಿ ಮೇಘೋ ಯದಾ ಉನ್ನತಃ ತದಾ ಸಂಪ್ಲವತೇ ಇತ್ಯುಚ್ಯತೇ[1] । ತದಾ ಅಪಾಮ್ ಆರಮ್ಭಃ । ಸ ಹಿಂಕಾರಃ । ಯದ್ ವರ್ಷತಿ ಸ ಪ್ರಸ್ತಾವಃ । ಆಪಃ ಸರ್ವತೋ ವ್ಯಾಪ್ತುಂ ಪ್ರಸ್ತುತಾಃ । ಯಾಃ ಪ್ರಾಚ್ಯಃ ಸ್ಯನ್ದನ್ತೇ ಸ ಉದ್ಗೀಥಃ । ಶ್ರೈಷ್ಠ್ಯಾತ್ । ಯಾಃ ಪ್ರತೀಚ್ಯಃ ಸ ಪ್ರತಿಹಾರಃ । ಪ್ರತಿಶಬ್ದಸಾಮಾನ್ಯಾತ್ । ಸಮುದ್ರೋ ನಿಧನಮ್ । ತನ್ನಿಧನತ್ವಾತ್ ಅಪಾಮ್ ॥

---

1. ಇಲ್ಲಿ 'ಮೇಘಃ' ಎಂದು ಆ॥ ಪಾಠದಲ್ಲಿರುವದು ಹೆಚ್ಚು ; ಅಥವಾ ಅನ್ವಯಕ್ಕಾಗಿ ಭಾಷ್ಯಕಾರರು ಮತ್ತೆ ಬರೆದುಕೊಂಡಿದ್ದರೂ ಇರಬಹುದು.

(ಭಾಷ್ಯಾರ್ಥ)

'ಎಲ್ಲಾ ನೀರಿನಲ್ಲಿಯೂ ಐದು ಬಗೆಯ ಸಾಮವನ್ನು ಉಪಾಸನೆಮಾಡಬೇಕು' ಎಲ್ಲಾ ನೀರೂ ಮಳೆಯಿಂದಲೇ (ಆಗು)ವದರಿಂದ (ಈ ಉಪಾಸನೆಯನ್ನು ಮಳೆಯ ಉಪಾಸನೆಯಾದ) ಬಳಿಕ (ಹೇಳಿದೆ).

ಮೋಡವು ಒಟ್ಟುಗೂಡುವದಲ್ಲ, ಒಂದಕ್ಕೊಂದು (ಸೇರಿಕೊಂಡು) ಒಂದಾಗಿ ಗಟ್ಟಿಯಾಗುವದಲ್ಲ - ಯಾವಾಗ ಮೋಡವು ಎತ್ತರದಲ್ಲಿರುವದೋ, ಆಗ ಒಟ್ಟುಗೂಡಿತು ಎನಿಸುತ್ತದೆ - ಆಗ ನೀರು ಉಂಟಾಗುತ್ತದೆ ; ಅದೇ ಹಿಂಕಾರವು. ಮಳೆಗರೆಯುವದಲ್ಲ, ಅದು ಪ್ರಸ್ತಾವವು ; ನೀರು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿ ಕೊಳ್ಳುವದಕ್ಕೆ ಪ್ರಸ್ತುತವಾಗುತ್ತದೆ. ಪೂರ್ವಕ್ಕೆ (ನದಿಗಳು) ಹರಿಯುವವಲ್ಲ[1], ಅದು ಉದ್ಗೀಥವು ; ಏಕೆಂದರೆ (ಎರಡೂ) ಶ್ರೇಷ್ಠ (ವಾಗಿರುತ್ತವೆ). ಪ್ರತೀಚಿಗೆ (ನದಿಗಳು) ಹರಿಯುವವಲ್ಲ[2], ಅದು ಪ್ರತಿಹಾರವು ; ಏಕೆಂದರೆ ಪ್ರತಿಶಬ್ದವು (ಎರಡಕ್ಕೂ) ಸಮಾನವಾಗಿರುತ್ತದೆ. ಸಮುದ್ರವು ನಿಧನವು, ಏಕೆಂದರೆ (ನೀರಿಗೆ ಅದೇ) ನಿಧನವು.[3]

ನೀರಿನ ದೃಷ್ಟಿಯ ಸಾಮೋಪಾಸನೆಗೆ ಫಲ

(ಉಪನಿಷತ್ತು)

ನ ಹಾಪ್ಸು ಪ್ರೈತ್ಯಪ್ಸುಮಾನ್ ಭವತಿ ಯ ಏತದೇವಂ ವಿದ್ವಾನ್ ಸರ್ವಾಸ್ವಪ್ಸು ಪಞ್ಚವಿಧಗ್ಂ ಸಾಮೋಪಾಸ್ತೇ ॥೨॥

೨. ಹೀಗೆಂದರಿತು ಎಲ್ಲಾ ನೀರಿನಲ್ಲಿಯೂ ಹೀಗೆ ಐದು ಬಗೆಯ ಸಾಮವನ್ನು ಯಾವನು ಉಪಾಸನೆಮಾಡುತ್ತಾನೋ ಅವನು ನೀರಿನಲ್ಲಿ ಸಾಯುವದಿಲ್ಲ, ನೀರುಳ್ಳವನೂ ಆಗುವನು.

(ಭಾಷ್ಯ)

೧೨ಸ. ನ ಹ ಅಪ್ಸು ಪ್ರೈತಿ । ನೇಚ್ಛತಿ ಚೇತ್ । ಅಪ್ಸುಮಾನ್ ಅಮ್ಮಾನ್ ಭವತಿ । ಫಲಮ್ ॥

(ಭಾಷ್ಯಾರ್ಥ)

ಅವನು ಇಚ್ಛಿಸದಿದ್ದರೆ[4] ನೀರಿನಲ್ಲಿ ಸಾಯುವದಿಲ್ಲ ; (ಅಪ್ಸುಮಾನ್=

1. ಗಂಗಾದಿನದಿಗಳು. 2. ನರ್ಮದಾದಿಗಳು.

3. ಅದರಲ್ಲಿಯೇ ಎಲ್ಲಾ ನೀರೂ ಹೋಗಿ ನಿಲ್ಲುತ್ತದೆಯಾದ್ದರಿಂದ ಅದೇ ಕೊನೆ.

4. ಬೇಕೆಂತಲೇ ಗಂಗಾದಿನದಿಗಳ ನೀರಿನಲ್ಲಿ ಬಿದ್ದು ಪ್ರಾಣಬಿಡುವ ಮಾನಪ್ರಸ್ಥಾದಿಗಳಿಗೂ ಮರಣವಾಗುವದಿಲ್ಲವೆಂದಲ್ಲ - ಎಂದು ಭಾವ.

ಅಮ್ಮಾನ್ ಯಥೇಚ್ಛವಾಗಿ) ನೀರುಳ್ಳವನೂ ಆಗುವನು[1] (ಎಂಬುದು ಉಪಾಸನೆಯ) ಫಲ.

ಎರಡನೆಯ ಅಧ್ಯಾಯ - ಐದನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ಋತುಗಳ ದೃಷ್ಟಿಯಿಂದ ಸಾಮೋಪಾಸನೆ

(ಉಪನಿಷತ್ತು)

ಋತುಷು ಪಞ್ಚವಿಧಗ್ಂ ಸಾಮೋಪಾಸೀತ ವಸನ್ತೋ ಹಿಂಕಾರೋ ಗ್ರೀಷ್ಮಃ ಪ್ರಸ್ತಾವೋ ವರ್ಷಾ ಉದ್ಗೀಥಃ ಶರತ್ ಪ್ರತಿಹಾರೋ ಹೇಮನ್ತೋ ನಿಧನಮ್ ॥೧॥

೧. ಋತುಗಳ (ವಿಷಯ)ದಲ್ಲಿ ಐದು ಬಗೆಯ ಸಾಮವನ್ನು ಉಪಾಸನೆಮಾಡಬೇಕು. ವಸಂತವು ಹಿಂಕಾರವು ; ಗ್ರೀಷ್ಮವು ಪ್ರಸ್ತಾವವು ; ವರ್ಷರ್ತುವೇ ಉದ್ಗೀಥವು ; ಶರತ್ತು ಪ್ರತಿಹಾರವು ; ಹೇಮಂತವು ನಿಧನವು.

(ಭಾಷ್ಯ)

೧.೨೪. ಋತುಷು ಪಞ್ಚವಿಧಂ ಸಾಮ ಉಪಾಸೀತ । ಋತುವ್ಯವಸ್ಥಾಯಾ ಯಥೋಕ್ತಾಬ್ದಮಿತತ್ವಾತ್[2] ಆನನ್ತರ್ಯಮ್ । ವಸನ್ತೋ ಹಿಂಕಾರಃ । ಪ್ರಾಥಮ್ಯಾತ್। ಗ್ರೀಷ್ಮಃ ಪ್ರಸ್ತಾವಃ । ಯವಾದಿಸಂಗ್ರಹಃ ಪ್ರಸ್ತೂಯತೇ ಹಿ ಪ್ರಾವೃಡರ್ಥಮ್ । ವರ್ಷಾ ಉದ್ಗೀಥಃ । ಪ್ರಾಧಾನ್ಯಾತ್ । ಶರತ್ ಪ್ರತಿಹಾರಃ । ರೋಗಿನಾಂ ಮೃತಾನಾಂ ಚ ಪ್ರತಿಹರಣಾತ್ । ಹೇಮನ್ತೋ ನಿಧನಮ್ । ಹೇಮನ್ತೇ[3] ನಿಧನಾತ್ ಪ್ರಾಣಿನಾಮ್ ॥

---

1. ನೀರಿಲ್ಲದ ಮರುಭೂಮಿಯೇ ಮುಂತಾದವುಗಳಲ್ಲಿಯೂ ಅವನಿಗೆ ನೀರಿರುವ ಪ್ರದೇಶಗಳು ಸಿಕ್ಕುವವು ಎಂದಭಿಪ್ರಾಯ.
2. 'ಆಮ್ಬುನಿಮಿತ್ತಾತ್' ಎಂದು ವಾ॥ ಪಾಠ ; 'ಯಥೋಕ್ತಾನ್ನಿಮಿತ್ತಾತ್' ಎಂದು ಆ॥ ಪಾಠ. ಇಲ್ಲಿ ಇಟ್ಟುಕೊಂಡಿರುವದು ತೆ॥ ಪಾಠ.
3. 'ನಿವಾತೇ' ಎಂದೇ ಅಚ್ಚಿನ ಪುಸ್ತಕದ ಪಾಠ ; ಪ್ರಕೃತಕ್ಕೆ 'ಹೇಮನ್ತೇ' ಎಂದಿರಬೇಕೆಂದು ತಿದ್ದಿದೆ.

(ಭಾಷ್ಯಾರ್ಥ)

ಋತುಗಳ (ವಿಷಯ)ದಲ್ಲಿ ಐದು ಬಗೆಯ ಸಾಮವನ್ನು ಉಪಾಸನೆ ಮಾಡಬೇಕು. ಋತುಗಳ ವ್ಯವಸ್ಥೆಗೆ ಹಿಂದೆ ಹೇಳಿರುವ ನೀರೇ ನಿಮಿತ್ತವಾಗಿರುವದರಿಂದ (ಈ ಉಪಾಸನೆಯನ್ನು ಅದರ ಉಪಾಸನೆಯಾದ) ಬಳಿಕ (ಹೇಳಿದೆ).

ವಸಂತವು ಹಿಂಕಾರವು ; ಏಕೆಂದರೆ (ಇವೆರಡೂ) ಒಂದನೆಯವು.[1] ಗ್ರೀಷ್ಮವು ಪ್ರಸ್ತಾವವು ; ಏಕೆಂದರೆ ಮಳೆಗಾಲಕ್ಕಾಗಿ (ಆಗ) ಜವೆಯೇ ಮುಂತಾದ (ದವಸ)ವನ್ನು ಕೂಡಿಹಾಕುವದು ಪ್ರಸ್ತುತವಾಗುತ್ತದೆ. ವರ್ಷರ್ತುವು ಉದ್ಗೀಥವು ; ಏಕೆಂದರೆ (ಎರಡೂ) ಮುಖ್ಯವಾಗಿವೆ. ಶರತ್ತು ಪ್ರತಿಹಾರವು ; ಏಕೆಂದರೆ (ಅದು) ರೋಗಿಗಳನ್ನೂ ಸತ್ತವರನ್ನೂ ಪ್ರತಿಹರಣಮಾಡುತ್ತದೆ. ಹೇಮಂತವು ನಿಧನವು ; ಏಕೆಂದರೆ ಚಳಿಗಾಲದಲ್ಲಿ ಪ್ರಾಣಿಗಳು ಸಾಯುತ್ತಾರೆ.[2]

ಋತುದೃಷ್ಟಿಯ ಸಾಮೋಪಾಸನೆಗೆ ಫಲ

(ಉಪನಿಷತ್ತು)

ತ್ತೇ ಹಾಸ್ಮಾ ಋತವ ಋತುಮಾನ್ ಭವತಿ ಯ ಏತದೇವಂ ವಿದ್ವಾನ್ ಋತುಷು ಪಞ್ಚವಿಧಗ್ಂ ಸಾಮೋಪಾಸ್ತೇ ॥೨॥

೨. ಯಾವನು ಹೀಗೆಂದರಿತು ಋತುಗಳ (ವಿಷಯ)ದಲ್ಲಿ ಐದುಬಗೆಯ ಉಪಾಸನೆಯನ್ನು ಮಾಡುತ್ತಾನೋ, ಅವನಿಗೆ ಋತುಗಳು ಆಗುವವು ; ಅವನು ಋತುಮಂತನಾಗುವನು.

(ಭಾಷ್ಯ)

೧೨೫. ಫಲಮ್ । ಕಲ್ಪನ್ತೇ ಹ ಋತುವ್ಯವಸ್ಥಾನುರೂಪಂ ಭೋಗ್ಯತ್ವೇನ ಅಸ್ಮೈ ಉಪಾಸಕಾಯ ಋತವಃ । ಋತುಮಾನ್ ಆರ್ತವೈರ್ಭೋಗೈಶ್ಚ ಸಂಪನ್ನೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಫಲ(ವೇನೆಂದರೆ) : ಈ ಉಪಾಸಕನಿಗೆ ಋತುವ್ಯವಸ್ಥೆಗೆ ಅನುಗುಣವಾಗಿ

1. ವಸಂತವು ಋತುಗಳಲ್ಲಿ, ಹಿಂಕಾರವು ಭಕ್ತಿಗಳಲ್ಲಿ ಒಂದನೆಯದು.
2. ಪ್ರತಿಶಬ್ದಸಾಮಾನ್ಯದಿಂದಲೂ ಕೊನೆಯಾಗಿರುವದೆಂಬ ಸಾಮಾನ್ಯದಿಂದಲೂ ಕೊನೆಯ ಎರಡು ಋತುಗಳ ದೃಷ್ಟಿಯನ್ನು ಪ್ರತಿಹಾರನಿಧನಗಳಲ್ಲಿ ಮಾಡಬೇಕು ಎಂದು ಅಭಿಪ್ರಾಯ.

ಋತುಗಳು ಭೋಗ್ಯವಾಗುವವು. ಇವನು ಋತುಮಂತನೂ ಆಗುವನು ; ಋತುಗಳ ಭೋಗಗಳಿಂದ ಕೂಡಿದವನೂ ಆಗುವನು ಎಂದರ್ಥ.

ಎರಡನೆಯ ಅಧ್ಯಾಯ - ಆರನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

ಪಶುಗಳ ದೃಷ್ಟಿಯಿಂದ ಸಾಮೋಪಾಸನೆ

(ಉಪನಿಷತ್ತು)

ಪಶುಷು ಪಞ್ಚವಿಧಗ್ಂ ಸಾಮೋಪಾಸೀತಾಜಾ ಹಿಂಕಾರೋ೭ವಯಃ ಪ್ರಸ್ತಾವೋ ಗಾವ ಉದ್ಗೀಥೋ೭ಶ್ವಾಃ ಪ್ರತಿಹಾರಃ ಪುರುಷೋ ನಿಧನಮ್ ॥೧॥

೧. ಪಶುಗಳ (ವಿಷಯ)ದಲ್ಲಿ ಐದುಬಗೆಯ ಸಾಮವನ್ನು ಉಪಾಸನೆ ಮಾಡಬೇಕು. ಹೆಣ್ಣಾಡು ಹಿಂಕಾರವು ; ಕುರಿಗಳು ಪ್ರಸ್ತಾವವು ; ಗೋಗಳು ಉದ್ಗೀಥವು ; ಕುದುರೆಗಳು ಪ್ರತಿಹಾರವು ; ಮನುಷ್ಯನು ನಿಧನವು.

(ಭಾಷ್ಯ)

೧.೨೬. ಪಶುಷು ಪಞ್ಚವಿಧಂ ಸಾಮ ಉಪಾಸೀತ । ಸಮ್ಯಗ್ವೃತ್ತೇಷು ಋತುಷು ಪಶವ್ಯಃ ಕಾಲ ಇತಿ ಆನನ್ತರ್ಯಮ್ । ಅಜಾ ಹಿಂಕಾರಃ । ಪ್ರಾಧಾನ್ಯಾತ್ । ಪ್ರಾಥಮ್ಯಾದ್ ವಾ । ''ಅಜಃ ಪಶೂನಾಂ ಪ್ರಥಮಃ'' (?) ಇತಿ ಶ್ರುತೇಃ । ಅವಯಃ ಪ್ರಸ್ತಾವಃ । ಸಾಹಚರ್ಯದರ್ಶನಾತ್ ಅಜಾವೀನಾಮ್ । ಗಾವ ಉದ್ಗೀಥಃ । ಶ್ರೈಷ್ಠ್ಯಾತ್ । ಅಶ್ವಾಃ ಪ್ರತಿಹಾರಃ । ಪ್ರತಿಹರಣಾತ್ ಪುರುಷಾಣಾಮ್ । ಪುರುಷೋ ನಿಧನಮ್ । ಪುರುಷಾಶ್ರಯತ್ವಾತ್ ಪಶೂನಾಮ್ ॥

(ಭಾಷ್ಯಾರ್ಥ)

ಪಶುಗಳ (ವಿಷಯ)ದಲ್ಲಿ ಐದುಬಗೆಯ ಸಾಮವನ್ನು ಉಪಾಸನೆ ಮಾಡಬೇಕು. ಋತುಗಳು ಸರಿಯಾಗಿ ನಡೆದುಕೊಂಡರೆ ಪಶುಗಳಿಗೆ ತಕ್ಕ

ಕಾಲವಾಗಿರು ತ್ತದೆ. ಆದ್ದರಿಂದ (ಋತೂಪಾಸನೆಯಾದ) ಬಳಿಕ (ಈ ಉಪಾಸನೆಯನ್ನು ಹೇಳಿದೆ).

ಹೆಣ್ಣಾಡು ಹಿಂಕಾರವು ; ಏಕೆಂದರೆ (ಪಶುಗಳಲ್ಲಿ ಅದೇ) ಮುಖ್ಯವಾಗಿರುತ್ತದೆ.[1] ಅಥವಾ ಒಂದನೆಯದಾಗಿರುತ್ತದೆ ; ''ಆಡು ಪಶುಗಳಲ್ಲಿ ಒಂದನೆಯದು'' (?) ಎಂಬ ಶ್ರುತಿ(ಯಿಂದ ಇದು ಸಿದ್ಧವಾಗುತ್ತದೆ).[2] ಕುರಿಗಳು ಪ್ರಸ್ತಾವವು ; (ಆಡುಗಳೂ ಕುರಿಗಳೂ) ಒಟ್ಟಿಗೆ (ಶ್ರುತಿಯಲ್ಲಿ ಪಠಿತವಾಗಿರುವದು) ಕಂಡುಬರುತ್ತದೆ.[3] ಗೋಗಳು ಉದ್ಗೀಥವು ; ಏಕೆಂದರೆ (ಅವು) ಶ್ರೇಷ್ಠವಾಗಿರುತ್ತವೆ. ಕುದುರೆಗಳು ಪ್ರತಿಹಾರವು ; ಏಕೆಂದರೆ ಮನುಷ್ಯರನ್ನು ಪ್ರತಿಹರಣಮಾಡುತ್ತವೆ.[4] ಪುರುಷನು ನಿಧನವು ; ಏಕೆಂದರೆ ಪಶುಗಳು ಪುರುಷನನ್ನು ಆಶ್ರಯಿಸಿಕೊಂಡಿರುತ್ತವೆ.[5]

ಪಶುಸಾಮೋಪಾಸನೆಗೆ ಫಲ

(ಉಪನಿಷತ್ತು)

ಭವನ್ತಿ ಹಾಸ್ಯ ಪಶವಃ ಪಶುಮಾನ್ ಭವತಿ ಯ ಏತದೇವಂ ವಿದ್ವಾನ್ ಪಶುಷು ಪಞ್ಚವಿಧಗ್ಂ ಸಾಮೋಪಾಸ್ತೇ ॥೨॥

೨. ಯಾವನು ಹೀಗೆ ಅರಿತುಕೊಂಡು ಪಶುಗಳ (ವಿಷಯ)ದಲ್ಲಿ ಐದುಬಗೆಯ ಸಾಮವನ್ನು ಹೀಗೆ ಉಪಾಸನೆಮಾಡುತ್ತಾನೋ ಅವನಿಗೆ ಪಶುಗಳು ಆಗುತ್ತವೆ, (ಅವನು) ಪಶುಮಂತನೂ ಆಗುತ್ತಾನೆ.

(ಭಾಷ್ಯ)

೧೨೭. ಫಲಮ್ । ಭವನ್ತಿ ಹಿ ಅಸ್ಯ ಪಶವಃ ಪಶುಮಾನ್ ಭವತಿ, ಪಶುಫಲೈಶ್ಚ ಭೋಗಯಾಗಾದಿಭಿ[6]ರ್ಯುಜ್ಯತೇ ಇತ್ಯರ್ಥಃ ॥

---

1. ಯಜ್ಞಸಂಬಂಧವಿರುವದರಿಂದ ಅದಕ್ಕೆ ಪ್ರಾಧಾನ್ಯವಿದೆ.
2. ಶ್ರುತಿಯಲ್ಲಿ ಒಂದನೆಯದೆಂದು ಹೇಳಿರುವದರಿಂದ ಅದು ಒಂದನೆಯದು ; ''ಬ್ರಾಹ್ಮಣೋ ಮನುಷ್ಯಾಣಾಮಜಃ ಪಶೂನಾಂ ತಸ್ಮಾತ್ತೇ ಮುಖ್ಯಾ ಮುಖತೋ ಹ್ಯಸೃಜ್ಯನ್ತ'' ಎಂದು ಶ್ರುತಿಯಿದೆಂದು ಆ॥ ಗಿ॥ ಟೀಕೆ. (ತೈ. ಸಂ. ೭-೧-೧-೪).
3. 'ಅಜಾವಯಃ' ಎಂದು ಪುರುಷಸೂಕ್ತವೇ ಮುಂತಾದ ಕಡೆಗಳಲ್ಲಿ ಸಹಪಾಠವಿದೆ.
4. ಒಯ್ಯುತ್ತವೆ. 5. ನಿದೀಯನ್ತೇऽಸ್ಮಿನ್ (ಇವನನ್ನಾಶ್ರಯಿಸಿಕೊಂಡಿವೆ) ಎಂಬ ವ್ಯುತ್ಪತ್ತಿಯಿಂದ ಪುರುಷನು ಪಶುಗಳಿಗೆ ನಿಧನವು.
6. 'ಭೋಗತ್ಯಾಗಾದಿಭಿಃ' ಎಂಬುದಕ್ಕಿಂತ ಈ ಪಾಠವು ಮೇಲು.

(ಭಾಷ್ಯಾರ್ಥ)

(ಇದಕ್ಕೆ) ಫಲ(ವೇನೆಂದರೆ) ಇವನಿಗೆ ಪಶುಗಳಾಗುತ್ತವೆ, ಪಶುಫಲಗಳಾದ ಭೋಗ, ಯಾಗ[1]-ಮುಂತಾದವುಗಳಿಂದ ಕೂಡಿದವನೂ ಆಗುತ್ತಾನೆ ಎಂದರ್ಥ.

ಎರಡನೆಯ ಅಧ್ಯಾಯ - ಏಳನೆಯ ಖಂಡ

(ಪಂಚವಿಧಸಾಮೋಪಾಸನೆ ಮುಂದುವರಿದದ್ದು)

(ಉಪನಿಷತ್ತು)

ಪ್ರಾಣೇಷು ಪಞ್ಚವಿಧಂ ಪರೋವರೀಯಃ ಸಾಮೋಪಾಸೀತ ಪ್ರಾಣೋ ಹಿಂಕಾರೋ ವಾಕ್ ಪ್ರಸ್ತಾವಶ್ಚಕ್ಷುರುದ್ಗೀಥಃ ಶ್ರೋತ್ರಂ ಪ್ರತಿಹಾರೋ ಮನೋ ನಿಧನಂ ಪರೋವರೀಯಾಗ್ಂಸಿ ವಾ ಏತಾನಿ ॥೧॥

೧. ಪ್ರಾಣಗಳ (ವಿಷಯ)ದಲ್ಲಿ ಪರೋವರೀಯವೆಂದು ಐದುಬಗೆಯ ಸಾಮವನ್ನು ಉಪಾಸನೆಮಾಡಬೇಕು. ಪ್ರಾಣವು ಹಿಂಕಾರವು ; ವಾಕ್ಕು ಪ್ರಸ್ತಾವವು ; ಚಕ್ಷುಸ್ಸು ಉದ್ಗೀಥವು ; ಶ್ರೋತ್ರವು ಪ್ರತಿಹಾರವು ; ಮನಸ್ಸು ನಿಧನವು. ಇವು ಪರೋವರೀಯಗಳಷ್ಟೆ?

೧೨೮. ಪ್ರಾಣೇಷು ಪಞ್ಚವಿಧಂ ಪರೋವರೀಯಃ ಸಾಮ ಉಪಾಸೀತ। ಪರಂ ಪರಂ ವರೀಯಸ್ತ್ವಗುಣವತ್ಪ್ರಾಣದೃಷ್ಟಿವಿಶಿಷ್ಟಂ ಸಾಮ ಉಪಾಸೀತ ಇತ್ಯರ್ಥಃ। ಪ್ರಾಣೋ ಘ್ರಾಣಂ[2] ಹಿಂಕಾರಃ। ಉತ್ತರೋತ್ತರವರೀಯಸಾಂ ಪ್ರಾಥಮ್ಯಾತ್। ವಾಕ್ ಪ್ರಸ್ತಾವಃ। ವಾಚಾ ಹಿ ಪ್ರಸ್ತೂಯತೇ ಸರ್ವಮ್। ವಾಗ್ ವರೀಯಸೀ ಪ್ರಾಣಾತ್।

1. 'ಭೋಗತ್ಯಾಗಾದಿಭಃ' ಎಂಬ ಪಾಠಕ್ಕೆ ಭೋಗದಾನಾದಿಗಳಿಂದ ಎಂದು ಅರ್ಥ.
2. ವಾ॥ ಪಾಠದಲ್ಲಿ ಈ ಮಾತನ್ನು ಬಿಟ್ಟಿದೆ.

ಅಪ್ರಾಪ್ತಮಪಿ ಉಚ್ಯತೇ ವಾಚಾ, ಪ್ರಾಪ್ತಸ್ಯೈವ ತು ಗನ್ಧಸ್ಯ ಗ್ರಾಹಕಃ ಪ್ರಾಣಃ । ಚಕ್ಷುರುದ್ಗೀಥಃ । ವಾಚೋ ಬಹುತರಂ[1] ವಿಷಯಂ ಪ್ರಕಾಶಯತಿ ಚಕ್ಷುಃ । ಅತೋ ವರೀಯೋ ವಾಚ ಉದ್ಗೀಥಃ । ಶ್ರೈಷ್ಠ್ಯಾತ್ । ಶ್ರೋತ್ರಂ ಪ್ರತಿಹಾರಃ । ಪ್ರತಿಹೃತತ್ವಾತ್ । ವರೀಯಶ್ಚಕ್ಷುಷಃ । ಸರ್ವತಃ ಶ್ರವಣಾತ್ । ಮನೋ ನಿಧನಮ್ । ಮನಸಿ ಹಿ ನಿಧೀಯನ್ತೇ ಪುರುಷಸ್ಯ ಭೋಗ್ಯತ್ವೇನ ಸರ್ವೇನ್ದ್ರಿಯಾಹೃತಾ ವಿಷಯಾಃ । ವರೀಯಸ್ತ್ವಂ ಚ ಶ್ರೋತ್ರಾತ್ ಮನಸಃ ಸರ್ವೇನ್ದ್ರಿಯವಿಷಯವ್ಯಾಪಕತ್ವಾತ್ । ಅತೀನ್ದ್ರಿಯವಿಷಯೋಽಪಿ ಮನಸೋ ಗೋಚರ ಏವೇತಿ । ಯಥೋಕ್ತಹೇತುಭ್ಯಃ ಪರೋವರೀಯಾಂಸಿ ಪ್ರಾಣಾದೀನಿ ವೈ ಏತಾನಿ ॥

(ಭಾಷ್ಯಾರ್ಥ)

ಪ್ರಾಣಗಳಲ್ಲಿ[2] ಪರೋವರೀಯವೆಂದು, ಐದು ಬಗೆಯ ಸಾಮವನ್ನು ಉಪಾಸನೆ ಮಾಡಬೇಕು. ಮುಂದೆಮುಂದೆ ಶ್ರೇಷ್ಠವಾಗಿರುವದೆಂಬ ಗುಣದಿಂದ ಕೂಡಿದ ಪ್ರಾಣ ಗಳ[3] ದೃಷ್ಟಿಯಿಂದೊಡಗೂಡಿದ ಸಾಮವನ್ನು ಉಪಾಸನೆಮಾಡಬೇಕು ಎಂದರ್ಥ. ಪ್ರಾಣವು ಎಂದರೆ ಘ್ರಾಣವು[4] ಹಿಂಕಾರವು ; ಏಕೆಂದರೆ ಮುಂದುಮುಂದಕ್ಕೆ ಹೆಚ್ಚಿನವೆನಿಸಿದವುಗಳಲ್ಲಿ ಇದು ಮೊದಲನೆಯದು. ವಾಕ್ಕು ಪ್ರಸ್ತಾವವು ; ವಾಕ್ಕಿನಿಂದ-ಲ್ಲವೆ, ಎಲ್ಲವೂ ಪ್ರಸ್ತುತವಾಗುವದು ? ವಾಕ್ಕು (ಘ್ರಾಣ)ಪ್ರಾಣಕ್ಕಿಂತ ಹೆಚ್ಚಿನದು ; ಏಕೆಂದರೆ ವಾಕ್ಕು ಪ್ರಾಪ್ತವಾಗಿಲ್ಲದ್ದನ್ನೂ ಹೇಳುತ್ತದೆ, ಆದರೆ (ಘ್ರಾಣ)ಪ್ರಾಣವು ಪ್ರಾಪ್ತವಾದ ಗಂಧವನ್ನು ಮಾತ್ರ ಗ್ರಹಿಸುತ್ತದೆ. ಚಕ್ಷುಸ್ಸು ಉದ್ಗೀಥವು, ವಾಕ್ಕಿಗಿಂತ ಹೆಚ್ಚಾಗಿ ವಿಷಯವನ್ನು ತಿಳಿಸುವದರಿಂದ[5] ಚಕ್ಷುಸ್ಸು ವಾಕ್ಕಿಗಿಂತಲೂ ಹೆಚ್ಚಿನದಾಗಿರುವದು ; (ಇದು) ಉದ್ಗೀಥವು , ಏಕೆಂದರೆ ಶ್ರೇಷ್ಠವಾಗಿದೆ. ಶ್ರೋತ್ರವು ಪ್ರತಿಹಾರವು ; ಏಕೆಂದರೆ (ಅದು) ಪ್ರತಿಹೃತವಾಗಿದೆ.[6] (ಇದು) ಚಕ್ಷುಸ್ಸಿಗಿಂತಲೂ ಹೆಚ್ಚಿನದು ; ಏಕೆಂದರೆ ಎಲ್ಲಾ

1. 'ಬಹುತರ' ಎಂಬುದಕ್ಕಿಂತ ಈ ಪಾಠವೇ ಮೇಲು.
2. ಪಶುಗಳಿಂದಾದ ಹಾಲೇ ಮುಂತಾದವುಗಳಿಂದ ಪ್ರಾಣವು ನಿಂತಿರುವದರಿಂದ ಪಶುಸಾಮೋಪಾಸನೆಯಾದ ಬಳಿಕ ಈ ಉಪಾಸನೆಯನ್ನು ಹೇಳಿದೆ. ಆ॥ ಗಿ॥
3. ಸಾಮವನ್ನು ಪ್ರಾಣಗಳ ದೃಷ್ಟಿಯಿಂದ ಉಪಾಸನೆಮಾಡಬೇಕು ; ಈ ಪ್ರಾಣಗಳು ಒಂದಕ್ಕಿಂತ ಒಂದು ಹೆಚ್ಚಿನವು ಎಂಬುದನ್ನು ಮನದಂದುಕೊಳ್ಳಬೇಕು ಎಂದರ್ಥ.
4. ಮುಖ್ಯಪ್ರಾಣವೇ ಪ್ರಾಣಗಳಲ್ಲಿ ಶ್ರೇಷ್ಠ . ಆದ್ದರಿಂದ ಹಿಂಕಾರಸ್ಥಾನದಲ್ಲಿರುವ ಪ್ರಾಣವೆಂದರೆ ಘ್ರಾಣವೇ. ಆ॥ ಗಿ॥
5. ಹೆಚ್ಚು ವಿಶದವಾಗಿ ತಿಳಿಸಿಕೊಡುವದರಿಂದ ಎಂದರ್ಥ. ಬಾಯಲ್ಲಿ ಎಷ್ಟು ವರ್ಣಿಸಿದರೂ ಕಣ್ಣಿಗೆ ತೋರಿಸಿದಷ್ಟು ಸ್ಪಷ್ಟವಾದ ಜ್ಞಾನವಾಗುವದಿಲ್ಲ - ಎಂದು ಅಭಿಪ್ರಾಯ.
6. ಪ್ರತಿಹೃತವಾಗಿದೆ ಎಂದರೇನೆಂಬುದು ತಿಳಿಯಲಿಲ್ಲ ; ಪ್ರತಿಹರ್ತೃತ್ವಾತ್ ಎಂಬ →

ಕಡೆಯಿಂದಲೂ ಕೇಳುತ್ತಾರೆ.[1] ಮನಸ್ಸು ನಿಧನವು ; ಮನಸ್ಸಿನಲ್ಲಲ್ಲವೆ, ಎಲ್ಲಾ ಇಂದ್ರಿಯಗಳೂ ತಂದ ವಿಷಯಗಳು ಭೋಗ್ಯವಾಗಿ ನಿಲ್ಲುತ್ತವೆ ? ಮನಸ್ಸು ಶ್ರೋತ್ರಕ್ಕಿಂತಲೂ ಹೆಚ್ಚಿನದೆಂಬುದು ಎಲ್ಲಾ ಇಂದ್ರಿಯಗಳನ್ನೂ ವ್ಯಾಪಿಸಿರುವದರಿಂದ (ಸಿದ್ಧವಾಗುತ್ತದೆ) ; ಅತೀಂದ್ರಿಯವಿಷಯವೂ ಮನಸ್ಸಿಗೆ ಗೋಚರವೇ (ಆಗಿರು)ವದಷ್ಟೆ ?

ಈ ಮೇಲೆ ಹೇಳಿದ ಕಾರಣಗಳಿಂದ ಈ (ಘ್ರಾಣ)ಪ್ರಾಣಾದಿಗಳು ಪರೋವರೀಯಾಂಸಗಳು.[2]

ಪ್ರಾಣಸಾಮೋಪಾಸನೆಗೆ ಫಲ

(ಉಪನಿಷತ್ತು)

ಪರೋವರೀಯೋ ಹಾಸ್ಯ ಭವತಿ ಪರೋವರೀಯಸೋ ಹ ಲೋಕಾಞ್ಜಯತಿ ಯ ಏತದೇವಂ ವಿದ್ವಾನ್ ಪ್ರಾಣೇಷು ಪಞ್ಚವಿಧಂ ಪರೋವರೀಯಃ ಸಾಮೋಪಾಸ್ತ ಇತಿ ತು ಪಞ್ಚವಿಧಸ್ಯ ॥೨॥

೨. ಯಾವನು ಹೀಗೆಂದರಿತು ಪ್ರಾಣಗಳ (ವಿಷಯ)ದಲ್ಲಿ ಐದು ಬಗೆಯ ಪರೋವರೀಯಸಾಮವನ್ನು ಉಪಾಸನೆಮಾಡುತ್ತಾನೋ ಅವನಿಗೆ ಪರೋವರೀಯವಾಗುತ್ತದೆ ; (ಅವನು) ಪರೋವರೀಯವಾದ ಲೋಕಗಳನ್ನು ಗೆದ್ದುಕೊಳ್ಳುತ್ತಾನೆ. ಇದಾದರೆ ಪಂಚವಿಧ(ಸಾಮ)ದ (ಉಪಾಸನೆ).

ಉಪಾಸನೆಗೆ ಫಲವೂ ಪಂಚವಿಧಸಾಮೋಪಾಸನೆಯ ಉಪಸಂಹಾರವೂ

(ಭಾಷ್ಯ)

೧೨೯. ಏತದ್ದೃಷ್ಟ್ವಾ ವಿಶಿಷ್ಟಂ ಯಃ ಪರೋವರೀಯಃ ಸಾಮ ಉಪಾಸ್ತೇ ಪರೋವರೀಯೋ ಹ ಅಸ್ಯ ಜೀವನಂ ಭವತಿ ಇತಿ ಉಕ್ತಾರ್ಥಮ್ । ಇತಿ ತು

ಪಾಠವಿದ್ದರೆ ಶಬ್ದವನ್ನು ತಂದುಕೊಡುವದರಿಂದ ಎಂದರ್ಥವಾಗುತ್ತಿತ್ತು. ಆದರೆ ಮುಂದೆಯೂ ಹೀಗೆಯೇ ಭಾಷ್ಯವಿದೆ ; ೨-೧೧-೧ರ ಭಾಷ್ಯವನ್ನು ನೋಡಿ.

1. ಚಕ್ಷುಸ್ಸು ಕಣ್ಣಮುಂದೆ ಇರುವದನ್ನು ಮಾತ್ರ ಕಾಣಬಲ್ಲದು ; ಶ್ರೋತ್ರಕ್ಕೆ ದಿಕ್ಕಿನ ನಿಯಮವಿಲ್ಲ.
2. ಒಂದಕ್ಕಿಂತ ಒಂದು ಹೆಚ್ಚಿನವುಗಳು ; ಇವುಗಳ ದೃಷ್ಟಿಯಿಂದ ಸಾಮವನ್ನು ಉಪಾಸನೆಮಾಡಬೇಕು.

ಪಞ್ಚವಿಧಸ್ಯ ಸಾಮ್ನ ಉಪಾಸನಮ್ ಉಕ್ತಮ್ ಇತಿ ಸಪ್ತವಿಧೇ ವಕ್ಷ್ಯಮಾಣವಿಷಯೇ ಬುದ್ಧಿಸಮಾಧಾನಾರ್ಥಮ್ । ನಿರಪೇಕ್ಷೋ ಹಿ ಪಞ್ಚವಿಧೇ ವಕ್ಷ್ಯಮಾಣೇ ಬುದ್ಧಿಂ ಸಮಾಧಿತ್ಸತಿ॥

(ಭಾಷ್ಯಾರ್ಥ)

ಈ ದೃಷ್ಟಿಯಿಂದೊಡಗೂಡಿ ಯಾವನು ಪರೋವರೀಯಾಂಸವೆಂದು ಸಾಮವನ್ನು ಉಪಾಸನೆಮಾಡುತ್ತಾನೋ ಅವನಿಗೆ ''ಪರೋವರೀಯವಾದ ಜೀವನವಾಗುವದು'' ಎಂಬುದಕ್ಕೆ ಹಿಂದೆ (೧-೯-೨ರಲ್ಲಿ) ಹೇಳಿದ್ದೇ ಅರ್ಥ.

''ಹೀಗೆಂದು ಹೇಳಿದ್ದು ಪಂಚವಿಧಸಾಮದ ಉಪಾಸನೆ'' ಎಂಬುದು ಮುಂದೆ ಹೇಳಲಿರುವ ಸಪ್ತವಿಧವಾದ (ಸಾಮದ ಉಪಾಸನೆಯಲ್ಲಿ) ಬುದ್ಧಿಯನ್ನು ಸರಿಯಾಗಿಟ್ಟುಕೊಳ್ಳಲೆಂದು. ಪಂಚವಿಧದಲ್ಲಿ (ಇನ್ನು ಏನೂ ಹೇಳತಕ್ಕದ್ದಿಲ್ಲ ಎಂದರೆ) ನಿರಪೇಕ್ಷನಾದವನಲ್ಲವೆ, ಮುಂದೆ ಹೇಳುವದರಲ್ಲಿ ಬುದ್ಧಿಯನ್ನು ಸರಿಯಾಗಿಟ್ಟು ಕೊಳ್ಳುವದು ?

ಎರಡನೆಯ ಅಧ್ಯಾಯ - ಎಂಟನೆಯ ಖಂಡ

(ಸಪ್ತವಿಧಸಾಮೋಪಾಸನೆ)

ವಾಗ್ದೃಷ್ಟಿಯಿಂದ ಸಾಮೋಪಾಸನೆ

(ಉಪನಿಷತ್ತು)

ಅಥ ಸಪ್ತವಿಧಸ್ಯ ವಾಚಿ ಸಪ್ತವಿಧಗ್ಂ ಸಾಮೋಪಾಸೀತ ಯತ್ಕಿಂಚ ವಾಚೋ ಹುಮಿತಿ ಸ ಹಿಂಕಾರೋ ಯತ್ಪ್ರೈತಿ ಸ ಪ್ರಸ್ತಾವೋ ಯದೇತಿ ಸ ಆದಿಃ ॥೧॥

ಯದುದಿತಿ ಸ ಉದ್ಗೀಥೋ ಯತ್ಪ್ರತೀತಿ ಸ ಪ್ರತಿಹಾರೋ ಯದುಪೈತಿ ಸ ಉಪದ್ರವೋ ಯನ್ನೀತಿ ತನ್ನಿಧನಮ್ ॥೨॥

೧. ಇನ್ನು ಸಪ್ತವಿಧ(ಸಾಮದ ಉಪಾಸನೆ). ವಾಕ್ಕಿನ (ವಿಷಯ)ದಲ್ಲಿ

ಏಳು ಬಗೆಯ ಸಾಮವನ್ನು ಉಪಾಸನೆಮಾಡಬೇಕು. ವಾಕ್ಕಿನಲ್ಲಿ ಯಾವ ಯಾವದು ಹುಮ್ ! ಎಂದಿರುವದೋ ಅದು ಹಿಂಕಾರವು ; ಯಾವದು ಪ್ರ ಎಂದಿರುವದೋ ಅದು ಪ್ರಸ್ತಾವವು ; ಯಾವದು ಆ ಎಂದಿರುವದೋ ಅದು ಆದಿಯು.

೨. ಉತ್ ಎಂದಿರುವದಲ್ಲ, ಅದು ಉದ್ಗೀಥವು ; ಪ್ರತಿ ಎಂದಿರುವದಲ್ಲ, ಅದು ಪ್ರತಿಹಾರವು ; ಉಪ ಎಂದಿರುವದು ಉಪದ್ರವವು ; ನಿ ಎಂದಿರುವದಲ್ಲ, ಅದು ನಿಧನವು.

(ಭಾಷ್ಯ)

೧೩೦. ಅಥ ಅನನ್ತರಂ ಸಪ್ತವಿಧಸ್ಯ ಸಮಸ್ತಸ್ಯ ಸಾಮ್ನಃ ಉಪಾಸನಂ ಸಾಧು ಇದಮ್ ಆರಭ್ಯತೇ। ವಾಚಿ ಇತಿ ಸಪ್ತಮೀ ಪೂರ್ವವತ್ ವಾಗ್ದೃಷ್ಟಿವಿಶಿಷ್ಟಂ ಸಪ್ತವಿಧಂ ಸಾಮ ಉಪಾಸೀತ ಇತ್ಯರ್ಥಃ। ಯತ್ಕಿಂಚ ವಾಚಃ ಶಬ್ದಸ್ಯ ಹುಮಿತಿ[1] ಯೋ ವಿಶೇಷಃ ಸ ಹಿಂಕಾರಃ । ಹಕಾರಸಾಮಾನ್ಯಾತ್ । ಯತ್ ಪ್ರ ಇತಿ ಶಬ್ದರೂಪಮ್, ಸ ಪ್ರಸ್ತಾವಃ। ಪ್ರಸಾಮಾನ್ಯಾತ್ । ಯತ್ ಆ ಇತಿ ಸ ಆದಿಃ। ಆಕಾರಸಾಮಾನ್ಯಾತ್ । ಆದಿರಿತಿ ಓಂಕಾರಃ । ಸರ್ವಾದಿತ್ವಾತ್ । ಯದ್ ಉತ್ ಇತಿ ಸ ಉದ್ಗೀಥಃ । ಉತ್ಪೂರ್ವತ್ವಾತ್ ಉದ್ಗೀಥಸ್ಯ । ಯತ್ ಪ್ರತಿ ಇತಿ ಸ ಪ್ರತಿಹಾರಃ । ಪ್ರತಿ ಸಾಮಾನ್ಯಾತ್ । ಯತ್ ಉಪ ಇತಿ ಸ ಉಪದ್ರವಃ । ಉಪೋಪಕ್ರಮತ್ವಾತ್ ಉಪದ್ರವಸ್ಯ। ಯತ್ ನಿ ಇತಿ ತನ್ನಿಧನಮ್ । ನಿಶಬ್ದಸಾಮಾನ್ಯಾತ್ ॥

(ಭಾಷ್ಯಾರ್ಥ)

ಇನ್ನು (ಪಂಚವಿಧಸಾಮ)ವಾದ ಬಳಿಕ ಸಪ್ತವಿಧವಾದ ಸಮಸ್ತಸಾಮದ ಈ ಸಾಧೂ[2]ಪಾಸನೆಯನ್ನು ಆರಂಬಿಸಲಾಗುತ್ತದೆ. ವಾಚಿ ಎಂಬ ಸಪ್ತಮೀ (ವಿಭಕ್ತಿ) ಯನ್ನು ಹಿಂದೆ (೨-೨-೧ ಭಾ. ಭಾ. ೧೧೭ರಲ್ಲಿ ಹೇಳಿರು)ವಂತೆ (ವಿಪರಿಣಾಮ ಮಾಡಬೇಕು). ವಾಗ್ದೃಷ್ಟಿಯಿಂದ ಕೂಡಿ ಸಪ್ತವಿಧಸಾಮವನ್ನು ಉಪಾಸನೆಮಾಡಬೇಕು ಎಂದರ್ಥ.

1. ಇಲ್ಲಿ ಹಿಮ್ ಎಂದೇ ರಂಗರಾಮಾನುಜೀಯಪಾಠವಿದೆ ; ಮೂಲದಲ್ಲಿಯೂ ಹಿಮ್ ಎಂದೇ ಇದ್ದಿತೆ ? ಎಂಬುದು ವಿಚಾರಣೀಯವಾಗಿದೆ. ಅಚ್ಚಿನ ಪುಸ್ತಕಗಳಲ್ಲೆಲ್ಲ ಹುಮ್ ಎಂದೇ ಇದೆ.
2. ಇಲ್ಲಿಯೂ ಸಾಧುದೃಷ್ಟಿಯು ಹಿಂದಿನಂತೆಯೇ ಅನುಗತವಾಗಿದೆ ಎಂದು ಭಾವ.

ವಾಕ್ಕಿನಲ್ಲಿ ಎಂದರೆ ಶಬ್ದದಲ್ಲಿ ಯಾವಯಾವ ಹುಮ್ ಎಂಬ (ರೂಪ) ವಿಶೇಷ ವಿರುವದೋ ಅದು ಹಿಂಕಾರವು ; ಏಕೆಂದರೆ ಹಕಾರವು (ಎರಡಕ್ಕೂ) ಸಮಾನವಾಗಿರುತ್ತದೆ. ಪ್ರ ಎಂಬ ಶಬ್ದವಿರುವದಲ್ಲ, ಅದು ಪ್ರಸ್ತಾವವು ; ಏಕೆಂದರೆ ಪ್ರ ಎಂಬುದು (ಎರಡಕ್ಕೂ) ಸಮಾನವಾಗಿರುತ್ತದೆ. ಆ ಎಂದಿರುವದಲ್ಲ, ಅದು ಆದಿಯು ; ಏಕೆಂದರೆ ಆಕಾರವು ಸಮಾನವಾಗಿರುತ್ತದೆ. (ಇಲ್ಲಿ) ಆದಿ ಎಂದರೆ ಓಂಕಾರವು ; ಏಕೆಂದರೆ ಅದು ಎಲ್ಲಕ್ಕೂ ಆದಿ.[1] ಉತ್ ಎಂದಿರುವದಲ್ಲ. ಅದು ಉದ್ಗೀಥವು. ಏಕೆಂದರೆ ಉದ್ಗೀಥ(ಶಬ್ದದಲ್ಲಿ) ಮೊದಲು ಉತ್ ಎಂಬುದಿದೆ. ಪ್ರತಿ ಎಂದಿರುವದಲ್ಲ, ಅದು ಪ್ರತಿಹಾರವು ; ಏಕೆಂದರೆ 'ಪ್ರತಿ'ಯು ಸಮಾನವಾಗಿರುತ್ತದೆ. ಉಪ ಎಂದಿರುವದಲ್ಲ, ಅದು ಉಪದ್ರವವು[2] ; ಏಕೆಂದರೆ ಉಪದ್ರವ(ಶಬ್ದವು) ಉಪ ಎಂಬುದರಿಂದ ಮೊದಲಾಗಿರುತ್ತದೆ. ನಿ ಎಂಬುದಿರುವದಲ್ಲ, ಅದು ನಿಧನವು ; ಏಕೆಂದರೆ ನಿಶಬ್ದವು(ಎರಡಕ್ಕೂ) ಸಮಾನವಾಗಿರುತ್ತದೆ.

ವಾಕ್ಸಾಮೋಪಾಸನೆಯ ಫಲ

(ಉಪನಿಷತ್ತು)

ದುಗ್ಧೇಽಸ್ಮೈ ವಾಗ್ದೋಹಂ ಯೋ ವಾಚೋ ದೋಹೋಽನ್ನವಾನನ್ನಾದೋ ಭವತಿ ಯ ಏತದೇವಂ ವಿದ್ವಾನ್ ವಾಚಿ ಸಪ್ತವಿಧಗ್ಂ ಸಾಮೋಪಾಸ್ತೇ ॥೩॥

೩. ಯಾವನು ಹೀಗೆಂದರಿತು ವಾಕ್ಕಿನ (ವಿಷಯ)ದಲ್ಲಿ ಸಪ್ತವಿಧ-ಸಾಮವನ್ನು ಹೀಗೆ ಉಪಾಸನೆಮಾಡುತ್ತಾನೋ ಅವನಿಗೆ ವಾಕ್ಕು ವಾಕ್ಕಿನ ದೋಹವಿರುವದಲ್ಲ, ಅದನ್ನು ಕರೆಯುವದು ; (ಅವನು) ಅನ್ನವಂತನೂ ಅನ್ನಾದನೂ ಆಗುತ್ತಾನೆ.

(ಭಾಷ್ಯ)

೧೩೧. ದುಗ್ಧೇಽಸ್ಮೈ ಇತ್ಯಾದ್ಯುಕ್ತಾರ್ಥಮ್ ॥

(ಭಾಷ್ಯಾರ್ಥ)

ಇವನಿಗೆ (ವಾಕ್ಕು ದೋಹವನ್ನು) ಕರೆಯುವದು ಮುಂತಾದ ವಾಕ್ಯಕ್ಕೆ ಹಿಂದೆ (೧-೩-೭ರ ಭಾಷ್ಯದಲ್ಲಿರು)ವಂತೆ ಅರ್ಥ.

---

1. ಓಂಕಾರದಿಂದಲೇ ಮಿಕ್ಕ ಶಬ್ದಗಳೆಲ್ಲ ಉಂಟಾಗಿರುವವು.
2. ಉಪದ್ರವ ಎಂಬ ಭಕ್ತಿಯನ್ನು ಉದ್ಗಾತೃವೇ ಹಾಡುತ್ತಾನೆ.

ಎರಡನೆಯ ಅಧ್ಯಾಯ - ಒಂಬತ್ತನೆಯ ಖಂಡ

(ಸಪ್ತವಿಧಸಾಮೋಪಾಸನೆ ಮುಂದುವರಿದದ್ದು)

ಆದಿತ್ಯದೃಷ್ಟಿಯಿಂದ ಸಾಮೋಪಾಸನೆ

(ಉಪನಿಷತ್ತು)

ಅಥ ಖಲ್ವಮುಮಾದಿತ್ಯಗ್ಂ ಸಪ್ತವಿಧಗ್ಂ ಸಾಮೋಪಾಸೀತ ಸರ್ವದಾ ಸಮಸ್ತೇನ ಸಾಮ ಮಾಂ ಪ್ರತಿ ಮಾಂ ಪ್ರತೀತಿ ಸರ್ವೇಣ ಸಮಸ್ತೇನ ಸಾಮ ॥೧॥

೧. ಇನ್ನು ಆ ಆದಿತ್ಯನೆಂದು ಸಪ್ತವಿಧಸಾಮವನ್ನು ಉಪಾಸನೆಮಾಡಬೇಕು. (ಅವನು) ಯಾವಾಗಲೂ ಸಮನು ; ಆದ್ದರಿಂದ ಸಾಮವು. ನನ್ನ ಎದುರಿಗೆ, ನನ್ನ ಎದುರಿಗೆ ಎಂದು ಎಲ್ಲರಿಗೂ ಸಮ ; ಆದ್ದರಿಂದ ಸಾಮವು.

(ಭಾಷ್ಯ)

೧೩.೨. ಅವಯವಮಾತ್ರೇ ಸಾಮ್ನಿ ಆದಿತ್ಯದೃಷ್ಟಿಃ ಪಞ್ಚವಿಧೇಷು ಉಕ್ತಾ ಪ್ರಥಮೇ ಚಾಧ್ಯಾಯೇ । ಅಥ ಇದಾನೀಂ ಖಲು ಅಮುಮ್ ಆದಿತ್ಯಂ ಸಮಸ್ತೇ ಸಾಮ್ನಿ ಅವಯವವಿಭಾಗಶಃ ಅಧ್ಯಸ್ಯ ಸಪ್ತವಿಧಂ ಸಾಮ ಉಪಾಸೀತ । ಕಥಂ ಪುನಃ ಸಾಮತ್ವಮ್ ಆದಿತ್ಯಸ್ಯ ಇತಿ ? ಉಚ್ಯತೇ । ಉದ್ಗೀಥತ್ವೇ ಹೇತುವತ್ ಆದಿತ್ಯಸ್ಯ ಸಾಮತ್ವೇ ಹೇತುಃ । ಕೋಽಸೌ ? ಸರ್ವದಾ ಸಮಃ । ವೃದ್ಧಿಕ್ಷಯಾಭಾವಾತ್ । ತೇನ ಹೇತುನಾ ಸಾಮ ಆದಿತ್ಯಃ । ಮಾಂ ಪ್ರತಿ ಮಾಂ ಪ್ರತಿ ಇತಿ ತುಲ್ಯಾಂ ಬುದ್ಧಿಮ್ ಉತ್ಪಾದಯತಿ । ಅತಃ ಸರ್ವೇಣ ಸಮಃ । ಅತಃ ಸಾಮ । ಸಮತ್ವಾತ್ ಇತ್ಯರ್ಥಃ । ಉದ್ಗೀಥಭಕ್ತಿಸಾಮಾನ್ಯವಚನಾದೇವ ಲೋಕಾದಿಷು ಉಕ್ತಸಾಮಾನ್ಯಾತ್ ಹಿಂಕಾರಾದಿತ್ವಂ ಗಮ್ಯತೇ ಇತಿ ಹಿಂಕಾರಾದಿತ್ವೇ ಕಾರಣಂ ನೋಕ್ತಮ್ । ಸಾಮತ್ವೇ ಪುನಃ ಸವಿತುಃ ಅನುಕ್ತಂ ಕಾರಣಂ ನ ಸುಬೋಧಮ್ ಇತಿ ಸಮತ್ವಮುಕ್ತಮ್ ॥

(ಭಾಷ್ಯಾರ್ಥ)

ಅವಯವಮಾತ್ರವಾದ ಸಾಮದಲ್ಲಿ ಆದಿತ್ಯದೃಷ್ಟಿಯನ್ನು ಪಂಚವಿಧಸಾಮೋ-(ಪಾಸನೆಗಳನ್ನು ಹೇಳು)ವಲ್ಲಿ (೨-೨-೧,೨)ಯೂ ಒಂದನೆಯ ಅಧ್ಯಾಯದಲ್ಲಿಯೂ

(೧-೩-೧, ೧-೧೩-೨) ಹೇಳಿತ್ತು[1]. ಇನ್ನು ಈಗ ಈ ಆದಿತ್ಯನನ್ನು ಸಮಸ್ತಸಾಮದಲ್ಲಿ (ಅವನ್ನು) ಅವಯವಗಳಾಗಿ ಹಂಚಿ ಅಧ್ಯಾಸಮಾಡಿಕೊಂಡು, ಏಳು ಬಗೆಯ ಸಾಮವನ್ನು ಉಪಾಸನೆಮಾಡಬೇಕು (ಎಂದು ಹೇಳಿರುತ್ತದೆ).

(ಪ್ರಶೆ) :- ಆದಿತ್ಯನು ಸಾಮವೆಂಬುದು ಹೇಗೆ ?

(ಉತ್ತರ) :- ಹೇಳುತ್ತೇವೆ. (ಆದಿತ್ಯನು) ಉದ್ಗೀಥವೆಂಬುದಕ್ಕೆ ಹೇತುವಿರುವಂತೆಯೇ[2] ಆದಿತ್ಯನು ಸಾಮವೆಂಬುದಕ್ಕೆ ಕಾರಣವಿದೆ.[3] ಆ (ಕಾರಣವು) ಯಾವದು ? (ಅವನು) ಯಾವಾಗಲೂ ಸಮನಾಗಿರುತ್ತಾನೆ ; ಏಕೆಂದರೆ (ಅವನಿಗೆ) ವೃದ್ಧಿಕ್ಷಯಗಳಿರುವದಿಲ್ಲ. ಈ ಹೇತುವಿನಿಂದ ಆದಿತ್ಯನು ಸಾಮವು. (ಮತ್ತು) 'ನನ್ನ ಎದುರಿಗೆ', 'ನನ್ನ ಎದುರಿಗೆ'- ಎಂದು ಸಮಾನಬುದ್ಧಿಯನ್ನೇ (ಎಲ್ಲರಲ್ಲಿಯೂ) ಉಂಟುಮಾಡುತ್ತಿರುತ್ತಾನೆ ; ಆದ್ದರಿಂದ ಪ್ರತಿಯೊಬ್ಬನಿಗೂ ಸಮನು. ಆದ್ದರಿಂದ ಸಮವಾಗಿರುವದರಿಂದ ಸಾಮ(ನಾಗಿರುತ್ತಾನೆ) ಎಂದರ್ಥ.

ಉದ್ಗೀಥಭಕ್ತಿಗೆ ಸಾಮಾನ್ಯವನ್ನು ಹೇಳಿರುವದರಿಂದಲೇ ಲೋಕವೇ ಮುಂತಾದವುಗಳಲ್ಲಿ (ಆ) ಹೇಳಿದ ಸಾಮಾನ್ಯದಿಂದಲೇ (ಹಿಂಕಾರಾದಿಸ್ವರೂಪ)ವು (ಹೇಗೆಂಬುದು) ತಿಳಿಯಬರುತ್ತದೆಯಾದ್ದರಿಂದ (ಅವು) ಹಿಂಕಾರಾದಿಗಳು (ಹೇಗೆಂ)ಬುದಕ್ಕೆ ಕಾರಣವನ್ನು ಹೇಳಲಿಲ್ಲ.[4] ಆದರೆ ಸೂರ್ಯನು ಸಾಮವೆಂಬುದು

---

1. ಉದ್ಗೀಥವನ್ನು ಆದಿತ್ಯನೆಂದು ಉಪಾಸನೆಮಾಡಬೇಕು, ಊಕಾರಸ್ತೋಭವನ್ನು ಆದಿತ್ಯನೆಂದು ಉಪಾಸನೆಮಾಡಬೇಕು- ಎಂದು ಒಂದನೆಯ ಅಧ್ಯಾಯದಲ್ಲಿಯೂ ಪ್ರತಿಹಾರವೆಂಬ ಭಕ್ತಿಯನ್ನು ಆದಿತ್ಯನೆಂದು ಉಪಾಸನೆಮಾಡಬೇಕು, ಪ್ರಸ್ತಾವಭಕ್ತಿಯನ್ನು ಆದಿತ್ಯನೆಂದು ಉಪಾಸನೆಮಾಡಬೇಕು- ಎಂದು ಈ ಅಧ್ಯಾಯದಲ್ಲಿಯೂ ಹಿಂದೆ ಹೇಳಿತ್ತು; ಅದೆಲ್ಲ ಸಾಮದ ಅವಯವದ ಉಪಾಸನೆಯೇ ಎಂದರ್ಥ.

2. 'ಮೇಲುಗಡೆಯಿರುವ ಆದಿತ್ಯನನ್ನು ಕುರಿತು ಗಾನಮಾಡುತ್ತಾರೆ' ಎಂಬ ಹೇತುವನ್ನು ಶ್ರುತಿಯಲ್ಲಿ ಹೇಳಿತ್ತು-ಎಂದು ಟೀಕೆ. ಅದು ಸರಿಯಲ್ಲ ; ಏಕೆಂದರೆ ಆ ಹೋಲಿಕೆಯು ಭಾಷ್ಯಕಾರರು (೧-೧೩-೨) ಆದಿತ್ಯನು ಊಕಾರವೆಂಬುದಕ್ಕೆ ಹೇಳಿದ್ದು. ಶ್ರುತಿಯಲ್ಲಿ (೧-೩-೧ ರಲ್ಲಿ) ಉದಯವಾಗುತ್ತಲೇ ಇವನು ಪ್ರಜೆಗಳಿಗೆ ಅನ್ನೋತ್ಪತ್ತಿಗಾಗಿ ಉದ್ಗಾನ ಮಾಡುತ್ತಾನೆ ಎಂಬ ಹೇತುವನ್ನು ಕೊಟ್ಟಿದೆ.

3. ಅಕ್ಷರರೂಪವಾದ ಉದ್ಗೀಥತ್ವವಿಲ್ಲದಿದ್ದರೂ ಅನುಗುಣವಾದ ಧರ್ಮದಿಂದ ಉದ್ಗೀಥತ್ವವಿದೆ ಎಂದು ಹೇಳಿದಂತೆಯೇ ಇಲ್ಲಿ ಸಮತ್ವವೆಂಬ ಧರ್ಮವನ್ನು ಹೇತುವಾಗಿ ಹೇಳಿದೆ ಎಂದು ಅಭಿಪ್ರಾಯ.

ಉದ್ಗೀಥಭಕ್ತಿಗೆ ಸಾಮಾನ್ಯವನ್ನು ಹೇಳಿದ್ದರಿಂದಲೇ ಪೃಥಿವಿಯು ಹಿಂಕಾರವು - ಎಂಬಲ್ಲಿ ಹಿಂಕಾರದಂತೆ ಅದು ಲೋಕಗಳಲ್ಲಿ ಮೊದಲನೆಯದು ಎಂಬುದು ತಾನೇ ಗೊತ್ತಾಗುತ್ತದೆ ;

(ಹೇಗೆಂ)ಬುದಕ್ಕೆ ಕಾರಣವನ್ನು ಹೇಳದಿದ್ದರೆ ತಿಳಿಯಲಾರದು ಎಂದು ಸಮತ್ವ(ವೆಂಬ ಕಾರಣವನ್ನು ಇಲ್ಲಿ) ಹೇಳಿರುತ್ತಾರೆ.

(ಉಪನಿಷತ್ತು)

ತಸ್ಮಿನ್ನಿಮಾನಿ ಸರ್ವಾಣಿ ಭೂತಾನ್ಯನ್ವಾಯತಾನೀತಿ ವಿದ್ಯಾತ್ತಸ್ಯ ಯತ್ಪುರೋದಯಾತ್ ಸ ಹಿಂಕಾರಸ್ತದಸ್ಯ ಪಶವೋಽನ್ವಾಯತಾಸ್ತ-ಸ್ಮಾತ್ತೇ ಹಿಂಕುರ್ವಂತಿ ಹಿಂಕಾರಭಾಜಿನೋ ಹ್ಯೇತಸ್ಯ ಸಾಮ್ನಃ ॥೨॥

೨. ಅವನಲ್ಲಿ ಈ ಭೂತಗಳೆಲ್ಲವೂ ಅನ್ವಾಯತ್ತವಾಗಿರುತ್ತವೆ ಎಂದು ತಿಳಿಯಬೇಕು. ಅವನಿಗೆ ಉದಯಕ್ಕಿಂತ ಮೊದಲಿದೆಯಲ್ಲ, ಅದು ಹಿಂಕಾರವು - ಈ (ಸಾಮದ) ಆ (ಭಕ್ತಿಗೆ) ಪಶುಗಳು ಅನ್ವಾಯತ್ತವಾಗಿರುವವು. ಆದ್ದರಿಂದ ಅವು ಹಿಂಕಾರವನ್ನು ಮಾಡುತ್ತಿರುತ್ತವೆ. ಈ ಸಾಮದ ಹಿಂಕಾರಕ್ಕೆ ಭಾಗಿಗಳಲ್ಲವೆ ?

ಆದಿತ್ಯಸಾಮದ ಹಿಂಕಾರ

(ಭಾಷ್ಯ)

೧೩. ತಸ್ಮಿನ್ ಆದಿತ್ಯೇ ಅವಯವವಿಭಾಗಶಃ ಇಮಾನಿ ವಕ್ಷ್ಯಮಾಣಾನಿ ಸರ್ವಾಣಿ ಭೂತಾನಿ ಅನ್ವಾಯತ್ತಾನಿ ಅನುಗತಾನಿ ಆದಿತ್ಯಮ್ ಉಪಜೀವ್ಯತ್ವೇನ ಇತಿ ವಿದ್ಯಾತ್ । ಕಥಮ್ ? ತಸ್ಯ ಆದಿತ್ಯಸ್ಯ ಯತ್ ಪುರಾ ಉದಯಾತ್ ಧರ್ಮರೂಪಮ್, ಸ ಹಿಂಕಾರೋ ಭಕ್ತಿಃ । ತತ್ರ ಇದಂ ಸಾಮಾನ್ಯಮ್ ಯತ್ ತಸ್ಯ ಹಿಂಕಾರಭಕ್ತಿರೂಪಮ್, ತದಸ್ಯ ಆದಿತ್ಯಸ್ಯ ಸಾಮ್ನಃ ಪಶವಃ ಗವಾದಯಃ ಅನ್ವಾಯತ್ತಾಃ ಅನುಗತಾಃ । ತದ್ಭಕ್ತಿರೂಪಮ್ ಉಪಜೀವಂತಿ ಇತ್ಯರ್ಥಃ । ಯಸ್ಮಾದೇವಮ್ ತಸ್ಮಾತ್ ತೇ ಹಿಂಕುರ್ವಂತಿ ಪಶವಃ ಪ್ರಾಗುದಯಾತ್ । ತಸ್ಮಾತ್ ಹಿಂಕಾರಭಾಜಿನೋ ಹಿ ಏತಸ್ಯ ಆದಿತ್ಯಾಖ್ಯಸ್ಯ ಸಾಮ್ನಃ । ತದ್ಭಕ್ತಿಭಜನಶೀಲತ್ವಾದ್ ಹಿ ತೇ ಏವಂ ವರ್ತಂತೇ ॥

ಆದರೆ ಆದಿತ್ಯನಿಗೆ ಸಾಮತ್ವವೆಂಬುದು ಹಾಗೆ ಹೇಳದೆ ಗೊತ್ತಾಗಲಾರದು- ಎಂದರ್ಥ. 'ಆದಿತ್ಯನಿಗೆ ಊರ್ಧ್ವತ್ವವೆಂಬ ಸಾಮಾನ್ಯವು ಉದ್ಗೀಥಕ್ಕೆ ಇದೆ' ಎಂದು ಶ್ರುತಿ ಹೇಳಿದೆ ; ಅದನ್ನನುಸರಿಸಿ ನಾವೂ ಪ್ರಾಥಮ್ಯಾದಿಗಳ ಸಾಮಾನ್ಯದಿಂದ ಹಿಂಕಾರಾದಿತ್ವಕ್ಕೆ ಹೇತುವೆಂದು ಹೇಳಿರುತ್ತೇವೆ. ಆದರಂತೆಯೇ 'ಆದಿತ್ಯಪ್ರಭೇದಗಳಿಗೂ ಹಿಂಕಾರಾದಿತ್ವವನ್ನು ತಿಳಿಯ ಬಹುದೆಂದು ಶ್ರುತಿಯು ಕಾರಣವನ್ನು ಹೇಳಿಲ್ಲ' ಎಂಬ ಟೀಕಾವ್ಯಾಖ್ಯಾನವು ಸರಿಯಲ್ಲ ; ಏಕೆಂದರೆ ಆದಿತ್ಯಪ್ರಭೇದಗಳಲ್ಲಿ ಶ್ರುತಿಯು ಸಾಮಾನ್ಯವನ್ನು ಹೇಳಿಯೇ ಇದೆ.

(ಭಾಷ್ಯಾರ್ಥ)

ಆ ಆದಿತ್ಯನಲ್ಲಿ (ಆಯಾ) ಅವಯವಗಳನ್ನು ವಿಂಗಡಿಸಿಕೊಂಡು ಈ ಮುಂದೆ ಹೇಳುವ ಎಲ್ಲಾ ಭೂತಗಳೂ (ಅವಕ್ಕೆ) ಅನ್ವಾಯತ್ತವಾಗಿರುವವು, ಆದಿತ್ಯನೇ (ತಮಗೆ) ಉಪಜೀವ್ಯನೆಂದು ಅನುಸರಿಸಿಕೊಂಡಿರುವವು - ಎಂದು ತಿಳಿಯಬೇಕು.

ಹೇಗೆಂದರೆ, ಆ ಆದಿತ್ಯನ ಉದಯಕ್ಕಿಂತ ಮುಂಚಿನ ಧರ್ಮರೂಪವಿದೆಯಲ್ಲ,[1] ಅದು ಹಿಂಕಾರವೆಂಬ ಭಕ್ತಿಯು. ಅಲ್ಲಿ (ಎರಡಕ್ಕೂ) ಸಾಮಾನ್ಯವೇನೆಂದರೆ[2] ಆ(ಸಾಮದ) ಹಿಂಕಾರವೆಂಬ ಭಕ್ತಿರೂಪವಾಗಿದೆಯಲ್ಲ, ಆ ಈ ಆದಿತ್ಯನೆಂಬ ಸಾಮದ (ಭಕ್ತಿಗೇ) ಪಶುಗಳು ಗೋವುಗಳೇ ಮುಂತಾದವು ಅನ್ವಾಯತ್ತವಾಗಿರುವವು ; ಆ ಭಕ್ತಿಯ ರೂಪವನ್ನು ಉಪಜೀವಿಸಿಕೊಂಡಿರುತ್ತವೆ ಎಂದರ್ಥ. ಹೀಗಿರುವದರಿಂದಲೇ ಆ ಪಶುಗಳು ಉದಯವಾಗುವ ಮುಂಚೆ ಹಿಂಕರಿಸುತ್ತವೆ. ಆದ್ದರಿಂದ (ಅವು) ಆದಿತ್ಯನೆಂಬ ಸಾಮದ ಹಿಂಕಾರಭಾಜಿಗಳೇ ; ಆ ಭಕ್ತಿಯನ್ನು ಹೊಂದುವ ಸ್ವಭಾವದವಾದ್ದರಿಂದಲೇ, ಅವು ಹಾಗೆ ನಡೆದುಕೊಳ್ಳುತ್ತವೆ.[3]

(ಉಪನಿಷತ್ತು)

ಅಥ ಯತ್ ಪ್ರಥಮೋದಿತೇ ಸ ಪ್ರಸ್ತಾವಸ್ತದಸ್ಯ ಮನುಷ್ಯಾ ಅನ್ವಾಯತಾಸ್ತಸ್ಮಾತ್ತೇ ಪ್ರಸುತಿಕಾಮಾಃ ಪ್ರಶಗ್ಂಸಾಕಾಮಾಃ ಪ್ರಸ್ತಾವಭಾಜಿನೋ ಹ್ಯೇತಸ್ಯ ಸಾಮ್ನಃ ॥೩॥

೩. ಇನ್ನು ಮೊದಲು ಉದಯವಾಗಲಿನ (ರೂಪ)ವಿದೆಯಲ್ಲ, ಅದು ಪ್ರಸ್ತಾವವು. ಅದರ ಆ (ಭಕ್ತಿಗೆ) ಮನುಷ್ಯರು ಅನ್ವಾಯತ್ತರು. ಆದ್ದರಿಂದ ಅವರು ಪ್ರಸುತಿಕಾಮರು, ಪ್ರಶಂಸಾಕಾಮರು ; ಈ ಸಾಮದ ಪ್ರಸ್ತಾವಕ್ಕೆ ಭಾಗಿಗಳಲ್ಲವೆ ?

1. ಸುಖಕರವಾಗಿರುವದರಿಂದ ಇದು ಧರ್ಮರೂಪವು, ಧರ್ಮನಿಯತವಾದ ರೂಪವು ಎಂದರ್ಥ- ಎಂದು ಟೀಕೆ. ಆದಿತ್ಯನು ಧರ್ಮಿ, ಅವನ ಧರ್ಮವಾಗಿರುವ ಉದಯಕ್ಕಿಂತ ಮುನ್ನಿನ ರೂಪವನ್ನು ಎಂದಿಷ್ಟೇ ಅರ್ಥವನ್ನು ಮಾಡಿದರೆ ಸಾಕೆಂದು ತೋರುತ್ತದೆ.

2 ಆದಿತ್ಯನ ಉದಯಕ್ಕಿಂತ ಮುನ್ನಿನ ರೂಪಕ್ಕೂ ಹಿಂಕಾರಕ್ಕೂ ಇಲ್ಲಿ ಸಾಮಾನ್ಯವನ್ನು ಹೇಳಿದೆ ಎಂಬುದು ಸ್ಪಷ್ಟವಾಗಿದೆ ; ಇದರ ಆಧಾರದಿಂದಲೇ ನಾವು ಇಲ್ಲಿ ಸಾಮಾನ್ಯವನ್ನು ಶ್ರುತಿ ಹೇಳಲಿಲ್ಲ ಎಂಬ ಟೀಕೆಯು ಸಲ್ಲದೆಂದದ್ದು

3. ಆದಿತ್ಯಸಾಮದ ಹಿಂಕಾರವು ಅವುಗಳ ಪಾಲಿಗೆ ಬಂದಿರುತ್ತದೆಯಾದ್ದರಿಂದ ಅವು ಮುಂಜಾವದಲ್ಲಿ ಹಿಂಕಾರವನ್ನು ಮಾಡುತ್ತವೆ ಎಂದರ್ಥ. ಮುಂದಿನ ಈ ಬಗೆಯ ವಾಕ್ಯಗಳಿಗೂ ಹೀಗೆಯೇ ಅಭಿಪ್ರಾಯ.

ಆದಿತ್ಯಸಾಮದ ಪ್ರಸ್ತಾವ

(ಭಾಷ್ಯ)

೧೩.೪. ಅಥ ಯತ್ ಪ್ರಥಮೋದಿತೇ ಸವಿತೃರೂಪಮ್, ತದಸ್ಯ ಆದಿತ್ಯಾಖ್ಯಸ್ಯ ಸಾಮ್ನಃ ಸ[1] ಪ್ರಸ್ತಾವಃ । ತದಸ್ಯ ಮನುಷ್ಯಾಃ ಅನ್ವಾಯತ್ತಾಃ ಪೂರ್ವವತ್ । ತಸ್ಮಾತ್ ತೇ ಪ್ರಸುತಿಂ ಪ್ರಶಂಸಾಂ ಕಾಮಯನ್ತೇ । ಯಸ್ಮಾತ್ ಪ್ರಸ್ತಾವಭಾಜಿನೋ ಹಿ ಏತಸ್ಯ ಸಾಮ್ನಃ ।

(ಭಾಷ್ಯಾರ್ಥ)

ಇನ್ನು ಮೊದಲು ಉದಯವಾದಾಗಲಿನ ಸೂರ್ಯನ ರೂಪವಿದೆಯಲ್ಲ, ಅದು ಈ ಆದಿತ್ಯನೆಂಬ ಸಾಮದ ಪ್ರಸ್ತಾವವು. ಈ(ಸಾಮದ) ಆ (ಭಕ್ತಿಗೆ) ಮನುಷ್ಯರು ಅನ್ವಾಯತ್ತವಾಗಿರುವರು- ಎಂಬುದಕ್ಕೆ ಹಿಂದಿನಂತೆ (ಅರ್ಥವನ್ನು ಮಾಡಿಕೊಳ್ಳಬೇಕು). ಆದ್ದರಿಂದ ಆ (ಮನುಷ್ಯರು) ಪ್ರಸುತಿಯನ್ನು ಎಂದರೆ ಪ್ರಶಂಸೆಯನ್ನು[2] ಬಯಸುತ್ತಾರೆ ; ಏಕೆಂದರೆ ಈ ಸಾಮದ ಪ್ರಸ್ತಾವಕ್ಕೆ ಅವರು ಭಾಗಿಗಳು.

(ಉಪನಿಷತ್ತು)

ಅಥ ಯತ್ಸಂಗವವೇಲಾಯಾಗ್ಂ ಸ ಆದಿಸ್ತದಸ್ಯ ವಯಾಗ್ಂಸ್ಯನ್ವಾಯತ್ತಾನಿ ತಸ್ಮಾತ್ತಾನ್ಯನ್ತರಿಕ್ಷೇಽನಾರಮ್ಬಣಾನ್ಯಾದಾಯಾಽಽತ್ಮಾನಂ ಪರಿಪತನ್ತ್ಯಽದಿಭಾಜೀನಿ ಹ್ಯೇತಸ್ಯ ಸಾಮ್ನಃ ॥೪॥

೪. ಇನ್ನು ಸಂಗವವೇಳೆಯಲ್ಲಿರುವದಲ್ಲ, ಅದು ಆದಿಯು. ಅದರ ಆ (ಭಕ್ತಿಗೆ) ಪಕ್ಷಿಗಳು ಅನ್ವಾಯತ್ತವಾಗಿರುವವು. ಆದ್ದರಿಂದ ಅವು ಅಂತರಿಕ್ಷದಲ್ಲಿ ಆಲಂಬನವಿಲ್ಲದೆ ತಮನ್ನೇ ತೆಗೆದುಕೊಂಡು (ಹೋಗಿ) ಹಾರಾಡುತ್ತವೆ ; ಈ ಸಾಮದ ಆದಿಗೆ ಭಾಗಿಗಳಲ್ಲವೆ ?

1. ಈ ಮಾತು ಕೆಲವು ಪಾಠಗಳಲ್ಲಿಲ್ಲದಿದ್ದರೂ ಬೇಕು ; ಉಪನಿಷತ್ತಿನಲ್ಲಿದೆ.
2. ಪ್ರಸುತಿಗೂ ಪ್ರಶಂಸೆಗೂ ಪ್ರತ್ಯಕ್ಷಪರೋಕ್ಷಕೃತಭೇದವಿದೆ ಎಂಬ ಟೀಕೆ ಅನವಶ್ಯ ; ಭಾಷ್ಯದಲ್ಲಿ ಪ್ರಸುತಿಂ ಪ್ರಶಂಸಾಂ ಚ ಎಂದಿಲ್ಲವಾದ್ದರಿಂದ ಇವೆರಡಕ್ಕೂ ವ್ಯಾಖ್ಯಾನ ವ್ಯಾಖ್ಯೇಯ-ಭಾವವಿದೆ ಎಂದೇ ತಿಳಿಯಬಹುದು.

ಆದಿತ್ಯಸಾಮದ ಆದಿ

(ಭಾಷ್ಯ)

೧೩ಶಿ. ಅಥ ಯತ್ ಸಂಗವವೇಲಾಯಾಂ ಗವಾಂ ರಶ್ಮೀನಾಂ ಸಂಗಮನಂ ಸಂಗವಃ। ಯಸ್ಯಾಂ ವೇಲಾಯಾಮ್, ಗವಾಂ ವಾ ವತ್ಸೈಃ ಸಹ, ಸಾ ಸಂಗವವೇಲಾ। ತಸ್ಮಿನ್ ಕಾಲೇ ಯತ್ ಸಾವಿತ್ರಂ ರೂಪಮ್, ಸ ಆದಿಃ ಭಕ್ತಿವಿಶೇಷ ಓಂಕಾರಃ। ತದಸ್ಯ ವಯಾಂಸಿ ಪಕ್ಷಿಣೋಽನ್ವಾಯತ್ತಾನಿ। ಯತ ಏವಮ್, ತಸ್ಮಾತ್ ತಾನಿ ವಯಾಂಸಿ ಅನ್ತರಿಕ್ಷೇ[1] ಅನಾರಮ್ಬಣಾನಿ ಅನಾಲಮ್ಬನಾನಿ ಆತ್ಮಾನಮ್ ಆದಾಯ ಆತ್ಮಾನಮೇವ ಆಲಮ್ಬನತ್ವೇನ ಗೃಹೀತ್ವಾ ಪರಿಪತನ್ತಿ ಗಚ್ಛನ್ತಿ। ಅತಃ ಆಕಾರಸಾಮಾನ್ಯಾತ್ ಆದಿಭಕ್ತಿಭಾಜೀನಿ ಹಿ ಏತಸ್ಯ ಸಾಮ್ನಃ ॥

(ಭಾಷ್ಯಾರ್ಥ)

ಇನ್ನು ಸಂಗವವೇಳೆಯಲ್ಲಿ - ಗೋಗಳು ಎಂದರೆ ರಶ್ಮಿಗಳು ಒಟ್ಟುಗೂಡುವದೇ ಸಂಗವವು ಯಾವ ವೇಳೆಯಲ್ಲಾಗುವದೋ, ಅಥವಾ ಗೋಗಳು ಕರುಗಳೊಡನೆ (ಸೇರಿಕೊಳ್ಳವದು ಯಾವ ವೇಳೆಯಲ್ಲಾಗುವದೋ) ಅದು ಸಂಗವವೇಳೆಯು. ಆ ಕಾಲದಲ್ಲಿರುವ - ಸೂರ್ಯನ ರೂಪವಿದೆಯಲ್ಲ ಅದು (ಆದಿತ್ಯಸಾಮದ) ಆದಿಯು, ಓಂಕಾರವೆಂಬ ಭಕ್ತಿವಿಶೇಷವು, ಈ ಸಾಮದ ಆ (ಭಕ್ತಿವಿಶೇಷಕ್ಕೆ ವಯಾಂಸಿ= ಪಕ್ಷಿಣಃ) ಪಕ್ಷಿಗಳು ಅನ್ವಾಯತ್ತವಾಗಿರುವವು. ಹೀಗಿರುವದಷ್ಟೆ, ಆದ್ದರಿಂದ ಆ ಪಕ್ಷಿಗಳು ಅಂತರಿಕ್ಷದಲ್ಲಿ (ಅನಾರಮ್ಬಣಾನಿ=ಅನಾಲಮ್ಬನಾನಿ) ಯಾವ ಆಲಂಬನವೂ ಇಲ್ಲದೆ ತಮ್ಮನ್ನೇ (ತಾವು) ತೆಗೆದುಕೊಂಡು, ತಮ್ಮನ್ನೇ ಆಲಂಬನವಾಗಿ ಮಾಡಿಕೊಂಡು ಹಾರಾಡುತ್ತವೆ, ಸಂಚರಿಸುತ್ತವೆ. ಆದ್ದರಿಂದ (ಹೀಗೆ) ಆಕಾರವು ಸಮಾನವಾಗಿರುವದರಿಂದ ಈ ಸಾಮದ ಆದಿಭಕ್ತಿಗೆ ಅವು ಭಾಗಿಗಳಷ್ಟೆ.

(ಉಪನಿಷತ್ತು)

ಅಥ ಯತ್ಸಂಪ್ರತಿ ಮಧ್ಯಂದಿನೇ ಸ ಉದ್ಗೀಥಸ್ತದಸ್ಯ ದೇವಾ ಅನ್ವಾಯತ್ತಾಸ್ತಸ್ಮಾತ್ತೇ ಸತ್ತಮಾಃ ಪ್ರಾಜಾಪತ್ಯಾನಾಮುದ್ಗೀಥಭಾಜಿನೋ ಹ್ಯೇತಸ್ಯ ಸಾಮ್ನಃ ॥೫॥

೫. ಇನ್ನು ಸರಿಯಾದ ನಡುಹಗಲಿನಲ್ಲಿ(ರುವ ರೂಪ)ವಿದೆಯಲ್ಲ,

1. 'ಅನ್ತರಿಕ್ಷೇಣ ಅನ್ತರಿಕ್ಷೇ ಆರಂಬಣಾನಿ ಆಲಂಬನಾನಿ' ಎಂಬ ಪಾಠಾಂತರವು ಸರಿಯಲ್ಲ

ಅದು ಉದ್ಗೀಥವು. ಇದರ ಆ (ಭಕ್ತಿಗೆ) ದೇವತೆಗಳು ಅನ್ವಾಯತ್ತರಾಗಿರುವರು. ಆದ್ದರಿಂದ ಅವರು ಪ್ರಾಜಾಪತ್ಯರಲ್ಲಿ ಸತ್ತಮರಾಗಿರುವರು. ಈ ಸಾಮದ ಉದ್ಗೀಥಕ್ಕೆ ಭಾಗಿಗಳಲ್ಲವೆ ?

ಆದಿತ್ಯಸಾಮದ ಉದ್ಗೀಥ

೧೩೬. ಅಥ ಯತ್ ಸಂಪ್ರತಿ ಮಧ್ಯಂದಿನೇ । ಋಜುಮಧ್ಯಂದಿನೇ ಇತ್ಯರ್ಥಃ । ಸ ಉದ್ಗೀಥಭಕ್ತಿಃ । ತದಸ್ಯ ದೇವಾ ಅನ್ವಾಯತ್ತಾಃ । ದ್ಯೋತನಾತಿಶಯಾತ್ ತತ್ಕಾಲೇ । ತಸ್ಮಾತ್ ತೇ ಸತ್ತಮಾಃ ವಿಶಿಷ್ಟತಮಾಃ । ಪ್ರಾಜಾಪತ್ಯಾನಾಂ ಪ್ರಜಾಪತ್ಯಪತ್ಯಾನಾಮ್ । ಉದ್ಗೀಥಭಾಜಿನೋ ಹಿ ಏತಸ್ಯ ಸಾಮ್ನಃ ॥

(ಭಾಷ್ಯಾರ್ಥ)

ಇನ್ನು ಯಾವದು ಸರಿಯಾದ ನಡುಹಗಲಿನಲ್ಲಿ, ಎಂದರೆ ನೇರಾದ ನಡುಹಗಲಿನಲ್ಲಿರುವದೋ ಎಂದರ್ಥ. ಅದು ಉದ್ಗೀಥಭಕ್ತಿಯು. ಈ (ಸಾಮದ) ಆ (ಭಕ್ತಿಗೆ) ದೇವತೆಗಳು ಅನ್ವಾಯತ್ತರಾಗಿರುತ್ತಾರೆ ; ಏಕೆಂದರೆ ಆ ಕಾಲದಲ್ಲಿ (ಆದಿತ್ಯನು) ಮಿಗಿಲಾದ ದ್ಯುತಿಯುಳ್ಳವನಾಗಿರುತ್ತಾನೆ. ಆದ್ದರಿಂದ ಆ (ದೇವತೆಗಳು) ಪ್ರಾಜಾಪತ್ಯರಲ್ಲಿ, ಪ್ರಜಾಪತಿಯ ಸಂತತಿಯವರಲ್ಲಿ, ಸತ್ತಮರು, ವಿಶಿಷ್ಟತಮರು ; ಈ ಸಾಮದ ಉದ್ಗೀಥಕ್ಕೆ ಭಾಗಿಗಳಲ್ಲವೆ[1] ?

(ಉಪನಿಷತ್ತು)

ಅಥ ಯದೂರ್ಧ್ವಂ ಮಧ್ಯಂದಿನಾತ್ ಪ್ರಾಗಪರಾಹ್ಣಾತ್ ಸ ಪ್ರತಿಹಾರಸ್ತದಸ್ಯ ಗರ್ಭಾ ಅನ್ವಾಯತ್ತಾಸ್ತಸ್ಮಾತ್ತೇ ಪ್ರತಿಹೃತಾ ನಾವಪದ್ಯನ್ತೇ ಪ್ರತಿಹಾರಭಾಜಿನೋ ಹ್ಯೇತಸ್ಯ ಸಾಮ್ನಃ ॥೬॥

೬. ಇನ್ನು ನಡುಹಗಲಿನ ಮೇಲೆ ಅಪರಾಹ್ಣಕ್ಕೆ ಮುಂಚೆ (ಇರುವದಲ್ಲ), ಅದು ಪ್ರತಿಹಾರವು. ಇದರ ಆ (ಭಕ್ತಿಗೆ) ಗರ್ಭಗಳು ಅನ್ವಾಯತ್ತವಾಗಿರುತ್ತವೆ. ಆದ್ದರಿಂದ ಪ್ರತಿಹೃತವಾದರೆ ಕೆಳಕ್ಕೆ ಬೀಳುವದಿಲ್ಲ. (ಅವು) ಈ ಸಾಮದ ಪ್ರತಿಹಾರಕ್ಕೆ ಭಾಗಿಗಳಲ್ಲವೆ ?

1. ಆದ್ದರಿಂದ ಉದ್ಗೀಥದಂತೆ ಅವರೂ ಶ್ರೇಷ್ಠರಾಗಿರುತ್ತಾರೆ.

ಆದಿತ್ಯಸಾಮದ ಪ್ರತಿಹಾರ

(ಭಾಷ್ಯ)

೧೩.೭. ಅಥ ಯತ್ ಊರ್ಧ್ವಂ ಮಧ್ಯಂದಿನಾತ್ ಪ್ರಾಗ್ ಅಪರಾಹ್ಣಾತ್ ಯದ್ರೂಪಂ ಸವಿತುಃ, ಸ ಪ್ರತಿಹಾರಃ । ತದಸ್ಯ ಗರ್ಭಾಃ ಅನ್ವಾಯತ್ತಾಃ । ಅತಃ ತೇ ಸವಿತುಃ ಪ್ರತಿಹಾರಭಕ್ತಿರೂಪೇಣ ಊರ್ಧ್ವಂ ಪ್ರತಿಹೃತಾಃ ಸನ್ತಃ ನಾವಪದ್ಯನ್ತೇ ನಾಧಃಪತನ್ತಿ । ತದ್ದ್ವಾರೇ ಸತ್ಯಪಿ ಇತ್ಯರ್ಥಃ । ಯತಃ ಪ್ರತಿಹಾರಭಾಜಿನೋ ಹಿ ಏತಸ್ಯ ಸಾಮ್ನೋ ಗರ್ಭಾಃ ॥

(ಭಾಷ್ಯಾರ್ಥ)

ಇನ್ನು ನಡುಹಗಲಾದಮೇಲೆ ಅಪರಾಹ್ಣಕ್ಕೆ ಮುಂಚೆ ಇರುವ (ಸೂರ್ಯನ) ರೂಪವಿದೆಯಲ್ಲ, ಅದು ಪ್ರತಿಹಾರ(ಭಕ್ತಿಯು). ಈ (ಸಾಮದ) ಆ (ಭಕ್ತಿಗೆ) ಗರ್ಭಗಳು ಅನ್ವಾಯತ್ತವಾಗಿರುತ್ತವೆ. ಆದ್ದರಿಂದ ಅವು ಸೂರ್ಯನ ಪ್ರತಿಹಾರಭಕ್ತಿರೂಪದಿಂದ ಮೇಲಕ್ಕೆ ಪ್ರತಿಹೃತವಾಗಿರುವದರಿಂದ, ಆ (ಬೀಳುವ) ದ್ವಾರವು ಇದ್ದರೂ (ನಾವಪದ್ಯನ್ತೇ= ನಾಧಃಪತನ್ತಿ) ಕೆಳಕ್ಕೆ ಬೀಳದೆ ಇರುವವು ಎಂದರ್ಥ. ಏಕೆಂದರೆ ಗರ್ಭಗಳು ಈ ಸಾಮದ ಪ್ರತಿಹಾರಕ್ಕೆ ಭಾಗಿಗಳಲ್ಲವೆ ?

(ಉಪನಿಷತ್ತು)

ಅಥ ಯದೂರ್ಧ್ವಮಪರಾಹ್ಣಾತ್ ಪ್ರಾಗಸ್ತಮಯಾತ್ ಸ ಉಪದ್ರವ-ಸ್ತದಸ್ಯಾರಣ್ಯಾಃ ಅನ್ವಾಯತ್ತಾಸ್ತಸ್ಮಾತ್ತೇ ಪುರುಷಂ ದೃಷ್ಟ್ವಾ ಕಕ್ಷಗ್ಂ ಶ್ವಭ್ರಮಿತ್ಯುಪದ್ರವನ್ತ್ಯುಪದ್ರವಭಾಜಿನೋ ಹ್ಯೇತಸ್ಯ ಸಾಮ್ನಃ ॥೭॥

೭. ಇನ್ನು ಅಪರಾಹ್ಣದ ಮೇಲೆ ಅಸ್ತಮಯಕ್ಕೆ ಮುಂಚೆ (ಇರುವದಿದೆ)ಯಲ್ಲ, ಅದು ಉಪದ್ರವವು. ಇದರ ಆ (ಭಕ್ತಿಗೆ) ಆರಣ್ಯಗಳು ಅನ್ವಾಯತ್ತವಾಗುವವು. ಆದ್ದರಿಂದ ಅವು ಪುರುಷನನ್ನು ಕಂಡರೆ ಕಕ್ಷವನ್ನು ಶ್ವಭ್ರವೆಂದು ಓಡುತ್ತವೆ. ಈ ಸಾಮದ ಉಪದ್ರವಕ್ಕೆ ಭಾಗಿಗಳಲ್ಲವೆ ?

ಆದಿತ್ಯಸಾಮದ ಉಪದ್ರವ

೧೩.೮. ಅಥ ಯದೂರ್ಧ್ವಮಪರಾಹ್ಣಾತ್ ಪ್ರಾಕ್ ಅಸ್ತಮಯಾತ್ ಸ ಉಪದ್ರವಃ । ತದಸ್ಯ ಆರಣ್ಯಾಃ ಪಶವಃ ಅನ್ವಾಯತ್ತಾಃ । ತಸ್ಮಾತ್ ತೇ ಪುರುಷಂ ದೃಷ್ಟ್ವಾ

ಭೀತಾಃ ಕಕ್ಷಮ್ ಅರಣ್ಯಂ ಶ್ವಭ್ರಂ ಭಯಶೂನ್ಯಮಿತಿ ಉಪದ್ರವನ್ತಿ ಉಪಗಚ್ಛನ್ತಿ ದೃಷ್ಟ್ವಾ ಉಪದ್ರವಣಾತ್ ಉಪದ್ರವಭಾಜಿನೋ ಹಿ ಏತಸ್ಯ ಸಾಮ್ನಃ ॥

(ಭಾಷ್ಯಾರ್ಥ)

ಇನ್ನು ಅಪರಾಹ್ಣವಾದ ಮೇಲೆ ಅಸ್ತಮಯಕ್ಕೆ ಮುಂಚೆ(ಇರುವ ರೂಪ) ವಿದೆಯಲ್ಲ, ಅದು ಉಪದ್ರವವು. ಈ (ಸಾಮದ) ಆ (ಭಕ್ತಿಗೆ) ಆರಣ್ಯಪಶುಗಳು ಅನ್ವಾಯತ್ತವಾಗಿರುವವು. ಆದ್ದರಿಂದಲೇ ಅವು ಮನುಷ್ಯನನ್ನು ಕಂಡರೆ ಅಂಜಿಕೊಂಡು ಕಕ್ಷವನ್ನು ಅರಣ್ಯವನ್ನು ಕುರಿತು ಶ್ವಭ್ರವೆಂದು[1] ಭಯರಹಿತವಾದ (ಪ್ರದೇಶವೆಂದು) ಓಡಿಹೋಗುತ್ತವೆ. ಕಂಡು ಓಡುವದರಿಂದ (ಉಪದ್ರವಣಾತ್) ಈ ಸಾಮದ ಉಪದ್ರವಕ್ಕೆ ಭಾಗಿಗಳಷ್ಟೆ.

(ಉಪನಿಷತ್ತು)

ಅಥ ಯತ್ಪ್ರಥಮಾಸ್ತಮಿತೇ ತನ್ನಿಧನಂ ತದಸ್ಯ ಪಿತರೋಽನ್ವಾಯತ್ತಾ-ಸ್ತಸ್ಮಾತ್ತಾನ್ನಿದಧತಿ ನಿಧನಭಾಜಿನೋ ಹ್ಯೇತಸ್ಯ ಸಾಮ್ನ ಏವಂ ಖಿಲ್ವಮುಮಾದಿತ್ಯಗ್ಂ ಸಪ್ತವಿಧಗ್ಂ ಸಾಮೋಪಾಸ್ತೇ ॥೮॥

೮. ಇನ್ನು ಪ್ರಥಮಾಸ್ತಮಿತ(ಕಾಲದಲ್ಲಿರುವ ಸೂರ್ಯನ ರೂಪವಿದೆ-ಯಲ್ಲ) ಅದು, ನಿಧನವು. ಇದರ ಆ (ಭಕ್ತಿಗೆ) ಪಿತೃಗಳು ಅನ್ವಾಯತ್ತರು. ಆದ್ದರಿಂದ ಅವರನ್ನು ಇಡುತ್ತಾರೆ. ಈ ಸಾಮದ ನಿಧನಕ್ಕೆ ಭಾಗಿಗಳಲ್ಲವೆ ? ಹೀಗೆ ಈ ಆದಿತ್ಯನೆಂದು ಸಪ್ತವಿಧಸಾಮವನ್ನು ಉಪಾಸನೆಮಾಡಬೇಕು.

ಆದಿತ್ಯಸಾಮದ ನಿಧನವು

(ಭಾಷ್ಯ)

೧೩೯. ಅಥ ಯತ್ ಪ್ರಥಮಾಸ್ತಮಿತೇ ಅದರ್ಶನಂ ಜಿಗಮಿಷತಿ ಸವಿತರಿ, ತನ್ನಿಧನಮ್ । ತದಸ್ಯ ಪಿತರೋಽನ್ವಾಯತ್ತಾಃ । ತಸ್ಮಾತ್ ತಾನ್ ನಿದಧತಿ ಪಿತೃಪಿತಾಮಹಪ್ರಪಿತಾಮಹರೂಪೇಣ ದರ್ಭೇಷು ನಿಕ್ಷಿಪನ್ತಿ ತಾನ್ । ತದರ್ಥಂ ಪಿಣ್ಡಾನ್ ವಾ ಸ್ಥಾಪಯನ್ತಿ । ನಿಧನಸಂಬನ್ಧಾತ್ ನಿಧನಭಾಜಿನೋ ಹಿ ಏತಸ್ಯ ಸಾಮ್ನಃ ಪಿತರಃ । ಏವಮ್ ಅವಯವಶಃ ಸಪ್ತಧಾ ವಿಭಕ್ತಂ ಖಲು ಅಮುಮಾದಿತ್ಯಂ ಸಪ್ತವಿಧಂ ಸಾಮ ಉಪಾಸ್ತೇ ಯಃ ತಸ್ಯ ತದಾಪತ್ತಿಃ ಫಲಮ್ ಇತಿ ವಾಕ್ಯಶೇಷಃ ॥

---

1. 'ಕಕ್ಷಂ ಶ್ವಭ್ರಮಿತಿ' ಎಂಬುದನ್ನು ಹುಲ್ಲುಬಣವೆ, ಗುಂಡಿ- ಮುಂತಾದ ಪ್ರದೇಶವನ್ನು ಕುರಿತು-ಎಂದೂ ಅರ್ಥಮಾಡಬಹುದಾಗಿತ್ತೆಂದು ತೋರುತ್ತದೆ.

(ಭಾಷ್ಯಾರ್ಥ)

ಇನ್ನು ಪ್ರಥಮಾಸ್ತಮಿತ(ಕಾಲ)ದಲ್ಲಿ , ಸೂರ್ಯನು ಅಸ್ತವಾಗುವದರಲ್ಲಿರುವ (ರೂಪ)ವಿದೆಯಲ್ಲ, ಅದು ನಿಧನವು. ಈ (ಸಾಮದ) ಆ (ಭಕ್ತಿಗೆ) ಪಿತೃಗಳು ಅನ್ವಾಯತ್ತರಾಗಿರುವರು. ಆದ್ದರಿಂದ ಅವರನ್ನು(ನಿದಧತಿ) ಇಡುತ್ತಾರೆ ; ಪಿತೃ, ಪಿತಾಮಹ, ಪ್ರಪಿತಾಮಹರೂಪದಿಂದ ಅವರನ್ನು ದರ್ಭೆಗಳ ಮೇಲೆ ಇಡುತ್ತಾರೆ, ಅಥವಾ ಅವರಿಗಾಗಿ ಪಿಂಡಗಳನ್ನು ಇಡುತ್ತಾರೆ (ಎಂದರ್ಥ). ಹೀಗೆ ನಿಧನ ಸಂಬಂಧವಿರುವದರಿಂದ ಈ ಸಾಮದ ನಿಧನಕ್ಕೆ ಪಿತೃಗಳು ಭಾಗಿಗಳಾಗಿರುವರಷ್ಟೆ ? ಹೀಗೆ ಅವಯವಶಃ ಏಳು ಬಗೆಯಾಗಿ ವಿಭಕ್ತವಾಗಿರುವ ಈ ಆದಿತ್ಯನೆಂದು ಸಪ್ತವಿಧಸಾಮವನ್ನು ಯಾವನು ಉಪಾಸನೆಮಾಡುವನೋ[1] ಅವನಿಗೆ ಆ ಸ್ವರೂಪವನ್ನು ಪಡೆಯುವದು ಫಲವು - ಎಂದು ವಾಕ್ಯಶೇಷವು.

ಎರಡನೆಯ ಅಧ್ಯಾಯ - ಹತ್ತನೆಯ ಖಂಡ

(ಸಪ್ತವಿಧಸಾಮೋಪಾಸನೆ ಮುಂದುವರಿದದ್ದು)

ಅತಿಮೃತ್ಯುಸಾಮೋಪಾಸನೆ

(ಉಪನಿಷತ್ತು)

ಅಥ ಖಲ್ವಾತ್ಮಸಂಮಿತಮತಿಮೃತ್ಯು ಸಪ್ತವಿಧಗ್ಂ ಸಾಮೋಪಾಸೀತ ಹಿಂಕಾರ ಇತಿ ತ್ರ್ಯಕ್ಷರಂ ಪ್ರಸ್ತಾವ ಇತಿ ತ್ರ್ಯಕ್ಷರಂ ತತ್ಸಮಮ್ ॥೧॥

1. 'ಆದಿತ್ಯಂ ಸಪ್ತವಿಧಂ ಸಾಮೋಪಾಸೀತ' ಎಂಬಲ್ಲಿ ದ್ವಿತೀಯಾವಿಭಕ್ತಿಯು ಆದಿತ್ಯಶಬ್ದಕ್ಕೂ ಸಾಮಶಬ್ದಕ್ಕೂ ಸಮಾನವಾಗಿದೆಯಾದರೂ 'ಸಾಮ್ನ ಸಾಧು ಉಪಾಸನಂ' (೨-೧-೧), 'ಅಥ ಸಪ್ತವಿಧಸ್ಯ' (೨-೮-೧) ಎಂದು ಸಾಮೋಪಾಸನೆಯನ್ನೇ ಉಪಕ್ರಮದಲ್ಲಿ ಹೇಳಿರುವದರಿಂದ ಇಲ್ಲಿಯೂ ಅದಕ್ಕೆ ಅನುಗುಣವಾಗಿ ಆದಿತ್ಯನೆಂದು ಸಾಮವನ್ನು ಉಪಾಸನೆಮಾಡಬೇಕು ಎಂಬುದೇ ವಿವಕ್ಷಿತವೆಂದು ನಿಶ್ಚಯಿಸಬೇಕು. ಸಾಮವು ಕರ್ಮಾಂಗವಾಗಿರುವದರಿಂದ ಹಾಗಲ್ಲದ ಆದಿತ್ಯದೃಷ್ಟಿಯನ್ನೇ ಮಾಡಬೇಕೆಂಬುದೇ ಇಲ್ಲಿ ವಿಧಿಸಿರುತ್ತದೆ ಎಂದು ಸೂ. ಭಾ. ೪-೧-೬ (ಭಾ. ಭಾ. ೫೧೮) ರಲ್ಲಿ ನಿರ್ಣಯಿಸಿದೆ.

೧. ಇನ್ನು ಆತ್ಮಸಂಮಿತವಾದ ಅತಿಮೃತ್ಯುವಾದ ಸಪ್ತವಿಧಸಾಮವನ್ನು ಉಪಾಸನೆಮಾಡಬೇಕು, ಹಿಂಕಾರ ಎಂಬುದು ಮೂರಕ್ಷರದ್ದು ; ಪ್ರಸ್ತಾವ ಎಂಬುದು ಮೂರಕ್ಷರದ್ದು. ಅದು ಸಮವಾಗಿದೆ.

ಹಿಂಕಾರಕ್ಕೆ ಪ್ರಸ್ತಾವವು ಸಮ

(ಭಾಷ್ಯ)

೧೪೦. ಮೃತ್ಯುರಾದಿತ್ಯಃ । ಅಹೋರಾತ್ರಾದಿಕಾಲೇನ ಜಗತಃ ಪ್ರಮಾಪಯಿತೃತ್ವಾತ್ । ತಸ್ಯ ಅತಿತರಣಾಯ ಇದಂ ಸಾಮೋಪಾಸನಂ ಉಪದಿಶ್ಯತೇ । ಅಥ ಖಲು ಅನನ್ತರಮ್ ಆದಿತ್ಯಮೃತ್ಯುವಿಷಯಸಾಮೋಪಾಸನಸ್ಯ ಆತ್ಮಸಂಮಿತಂ ಸ್ತಾವಯವತುಲ್ಯತಯಾ ಸಂಮಿತಮ್[1], ಪರಮಾತ್ಮತುಲ್ಯತಯಾ ವಾ ಸಂಮಿತಮ್ ಅತಿಮೃತ್ಯು ಮೃತ್ಯುಜಯಹೇತುತ್ವಾತ್ । ಯಥಾ ಪ್ರಥಮೇ ಅಧ್ಯಾಯೇ ಉದ್ಗೀಥಭಕ್ತಿನಾಮಾಕ್ಷರಾಣಿ ಉದ್ಗೀಥ ಇತಿ ಉಪಾಸ್ಯತ್ವೇನ ಉಕ್ತಾನಿ ತಥಾ ಇಹ ಸಾಮ್ನಃ ಸಪ್ತವಿಧಭಕ್ತಿನಾಮಾಕ್ಷರಾಣಿ ಸಮಾಹೃತ್ಯ ತ್ರಿಭಿಸ್ತ್ರಿಭಿಃ ಸಮತಯಾ ಸಾಮತ್ವಂ ಪರಿಕಲ್ಪ್ಯ ಉಪಾಸ್ಯತ್ವೇನ ಉಚ್ಯನ್ತೇ । ತದುಪಾಸನಂ ಮೃತ್ಯುಗೋಚರಾಕ್ಷರಸಂಖ್ಯಾಸಾಮಾನ್ಯೇನ ಮೃತ್ಯುಂ ಪ್ರಾಪ್ಯ ತದತಿರಿಕ್ತಾಕ್ಷರೇಣ ತಸ್ಯ ಆದಿತ್ಯಸ್ಯ ಮೃತ್ಯೋಃ ಅತಿಕ್ರಮಣಾಯೈವ ಸಂಕ್ರಮಣಂ ಕಲ್ಪಯತಿ । ಅತಿಮೃತ್ಯು ಸಪ್ತವಿಧಂ ಸಾಮ ಉಪಾಸೀತ ಮೃತ್ಯುಮ್ ಅತಿಕ್ರಾನ್ತಮ್ ಅತಿರಿಕ್ತಾಕ್ಷರಸಂಖ್ಯಯಾ ಇತಿ ಅತಿಮೃತ್ಯು ಸಾಮ । ತಸ್ಯ ಪ್ರಥಮಭಕ್ತಿನಾಮಾಕ್ಷರಾಣಿ ಹಿಂಕಾರಃ ಇತ್ಯತಃ[2] ತ್ರ್ಯಕ್ಷರಂ ಭಕ್ತಿನಾಮ । ಪ್ರಸ್ತಾವಃ ಇತಿ ಚ ಭಕ್ತೇಃ ತ್ರ್ಯಕ್ಷರಮೇವ ನಾಮ । ತತ್ ಪೂರ್ವೇಣ ಸಮಮ್ ।

(ಭಾಷ್ಯಾರ್ಥ)

ಮೃತ್ಯು ಎಂದರೆ ಆದಿತ್ಯನು. ಅಹೋರಾತ್ರವೇ ಮುಂತಾದ[3] ಕಾಲದಿಂದ ಜಗತ್ತನ್ನು ಸಾಯಿಸುವದರಿಂದ (ಅವನು ಮೃತ್ಯುವು). ಅವನನ್ನು ದಾಟುವದಕ್ಕೆ ಈ ಸಾಮೋಪಾಸನವನ್ನು ಉಪದೇಶಿಸಿರುತ್ತದೆ.

1. ಅಚ್ಚಿನ ಪುಸ್ತಕಗಳಲ್ಲಿ ಮಿತಮ್ ಎಂದಿಷ್ಟೇ ಇದೆಯಾದರೂ ಇದು ವಿಗ್ರಹವಾಕ್ಯ-ವಾಗಿರುವದರಿಂದ ಮುಂದಿನ ವಾಕ್ಯದಂತೆ ಇಲ್ಲಿಯೂ 'ಸಂಮಿತಮ್' ಎಂಬ ಪಾಠವೇ ಸರಿಯೆಂದು ಅಂಗೀಕರಿಸಿದೇವೆ.
2. 'ಇತ್ಯೇತತ್' ಎಂಬುದಕ್ಕಿಂತ ಈ ಪಾಠವು ಮೇಲು.
3. ಅಹೋರಾತ್ರ, ಮಾಸ, ಅಯನ, ಸಂವತ್ಸರ- ಎಂಬ ರೂಪದ ಎಂದರ್ಥ.

ಇನ್ನು ಎಂದರೆ ಆದಿತ್ಯನೆಂಬ ಮೃತ್ಯುವಿನ ವಿಷಯದ ಸಾಮೋಪಾಸನೆ(ಯನ್ನು ತಿಳಿಸಿದ) ಬಳಿಕ[1] ಆತ್ಮಸಂಮಿತವಾದ ತನ್ನ ಅವಯವಗಳು ಸಮಾನವಾಗಿರುವದರಿಂದ[2] ಸಂಮಿತವಾಗಿರುವ, ಅಥವಾ ಪರಮಾತ್ಮನಿಗೆ ಸಮವಾಗಿರುವದರಿಂದ[3] (ಆತ್ಮ)ಸಂಮಿತವಾಗಿರುವ- ಅತಿಮೃತ್ಯುವಾದ, ಮೃತ್ಯುವನ್ನು ಗೆದ್ದುಕೊಳ್ಳುವದಕ್ಕೆ ಕಾರಣವಾಗಿರುವದರಿಂದ ಅತಿಮೃತ್ಯುವೆನಿಸಿರುವ - ಹೇಗೆ ಒಂದನೆಯ ಅಧ್ಯಾಯದಲ್ಲಿ (೧-೩-೬ರಲ್ಲಿ) ಉದ್ಗೀಥ - ಎಂಬ ಉದ್ಗೀಥಭಕ್ತಿಯ ನಾಮಾಕ್ಷರಗಳನ್ನು ಉಪಾಸನೆಮಾಡಬೇಕೆಂದು ಹೇಳಲಾಯಿತೋ[4] ಹಾಗೆಯೇ ಇಲ್ಲಿ ಏಳು ವಿಧವಾದ ಭಕ್ತಿಗಳ ನಾಮಾಕ್ಷರಗಳನ್ನು ಸೇರಿಸಿಕೊಂಡು[5] (ಅವು) ಮೂರುಮೂರಾಗಿ ಸಮವಾಗಿರುವದರಿಂದ ಸಾಮವೆಂದು ಕಲ್ಪಿಸಿ ಉಪಾಸನೆಮಾಡಬೇಕೆಂದು ಹೇಳಿದೆ. ಅವುಗಳ ಉಪಾಸನೆಯಿಂದ ಮೃತ್ಯುವಿಷಯಕವಾದ ಅಕ್ಷರಸಂಖ್ಯೆಯ ಸಾಮಾನ್ಯ[6]ವಿರುವದರಿಂದ ಆ ಮೃತ್ಯುವನ್ನು ಪಡೆದು, ಅವಕ್ಕಿಂತ ಹೆಚ್ಚಿನ (ಸಂಖ್ಯೆಯ) ಅಕ್ಷರದಿಂದ ಆ ಆದಿತ್ಯನೆಂಬ ಮೃತ್ಯುವನ್ನು ಅತಿಕ್ರಮಿಸುವದಕ್ಕಾಗಿಯೇ ಸಂಕ್ರಮಣವನ್ನು ಕಲ್ಪಿಸಿರುತ್ತದೆ.[7] (ಹೀಗೆ) ಅತಿಮೃತ್ಯುವಾದ - ಸಪ್ತವಿಧಸಾಮವನ್ನು ಉಪಾಸನೆಮಾಡಬೇಕು. ಹೆಚ್ಚಿನ ಅಕ್ಷರಸಂಖ್ಯೆಯಿಂದ ಮೃತ್ಯುವನ್ನು ಅತಿಕ್ರಮಿಸುವದರಿಂದ ಸಾಮವು ಅತಿಮೃತ್ಯುವು.

ಆ (ಸಾಮದ) ಮೊದಲನೆಯ ಭಕ್ತಿಯ ನಾಮಾಕ್ಷರಗಳು ಹಿಂ, ಕಾ, ರ-

---

1. ಹಿಂದಿನ ಕಂಡಿಕೆಯ ಆದಿತ್ಯೋಪಾಸನೆಯನ್ನು ಹೇಳಿದ ಬಳಿಕ.
2. ಹಿಂಕಾರ, ಪ್ರಸ್ತಾವ- ಇವೆರಡೂ ಮೂರಕ್ಷರವಾಗಿ ಸಮವಾಗಿವೆ ಹೀಗೆ ಭಕ್ತಿಯ ಅವಯವಗಳು ಸಮವಾಗಿರುವದರಿಂದ ಆತ್ಮಸಂಮಿತವಾಯಿತು.
3. ಪರಮಾತ್ಮಜ್ಞಾನವು ಮೃತ್ಯವನ್ನು ಬಾಧಿಸಿ ಮುಮುಕ್ಷವನ್ನು, ಮೃತ್ಯುವನ್ನು ಮೀರುವಂತೆ ಹೇಗೆ ಮಾಡುತ್ತದೆಯೋ ಹಾಗೆ ಈ ಉಪಾಸನೆಯೂ ಆದಿತ್ಯಮೃತ್ಯುವನ್ನು ಮೀರುವಂತೆ ಮಾಡುವದರಿಂದ ಆತ್ಮಸಂಮಿತವು.
4. ನಾಮಾಕ್ಷರವನ್ನು ಉಪಾಸನೆಮಾಡಿದರೆ ನಾಮಿಯನ್ನೇ ಉಪಾಸನೆಮಾಡಿದಂತೆ ಎಂದು ಆ ಕಂಡಿಕೆಯಲ್ಲಿ ಹೇಳಿದೆ.
5. ಒಂದರ ನಾಮಾಕ್ಷರಗಳು ಹೆಚ್ಚಾಗಿದ್ದರೆ ಕಡಿಮೆಯಿರುವದಕ್ಕೆ ಹೆಚ್ಚಿಗೆಯ ಅಕ್ಷರವನ್ನು ತಂದು ಜೋಡಿಸಿಕೊಳ್ಳವದರಿಂದ ಎಂದರ್ಥ. ಮುಂದಿನ ಕಂಡಿಕೆಯನ್ನು ನೋಡಿ.
6. ಇಪ್ಪತ್ತೊಂದೆಂಬುದು ಮೃತ್ಯುವಾದ ಆದಿತ್ಯನ ಸಂಖ್ಯೆ ; ಐದನೆಯ ಕಂಡಿಕೆಯ ಭಾಷ್ಯವನ್ನು ನೋಡಿ.
7. ಸಾಧನವಾದ ಉಪಾಸನೆಯನ್ನು ಉಪದೇಶಿಸಿದೆ.

ಎಂಬಿವು ; ಆದ್ದರಿಂದ (ಈ) ಭಕ್ತಿಯ ನಾಮವು ಮೂರಕ್ಷರದ್ದು. ಪ್ರಸ್ತಾವ ಎಂಬ ಭಕ್ತಿಯ ನಾಮವೂ ಮೂರಕ್ಷರದ್ದೇ. ಅದು ಹಿಂದಿನದಕ್ಕೆ ಸಮವು.

(ಉಪನಿಷತ್ತು)

ಆದಿರಿತಿ ದ್ವ್ಯಕ್ಷರಂ ಪ್ರತಿಹಾರ ಇತಿ ಚತುರಕ್ಷರಂ ತತ್ ಇಹೈಕಂ ತತ್ಸಮಮ್ ॥೨॥

೨. ಆದಿ ಎಂಬುದು ಎರಡಕ್ಷರದ್ದು ; ಪ್ರತಿಹಾರ ಎಂಬುದು ನಾಲ್ಕಕ್ಷರದ್ದು. ಅದರಿಂದ ಇಲ್ಲಿ ಒಂದನ್ನು (ಸೇರಿಸಿಕೊಳ್ಳಬೇಕು), ಅದು ಸಮವು.

ಆದಿಗೆ ಪ್ರತಿಹಾರವು ಸಮ

(ಭಾಷ್ಯ)

೧೪೧. ಆದಿಃ ಇತಿ ದ್ವ್ಯಕ್ಷರಮ್ । ಸಪ್ತವಿಧಸ್ಯ ಸಾಮ್ನಃ ಸಂಖ್ಯಾಪೂರಣಃ ಓಂಕಾರಃ ಆದಿರಿತ್ಯುಚ್ಯತೇ । ಪ್ರತಿಹಾರಃ ಇತಿ ಚತುರಕ್ಷರಮ್ । ತತಃ ಇಹ ಏಕಮ್ ಅಕ್ಷರಮ್ ಅವಚ್ಛಿದ್ಯ ಆದ್ಯಕ್ಷರಯೋಃ ಪ್ರಕ್ಷಿಪ್ಯತೇ । ತೇನ ತತ್ ಸಮಮೇವ ಭವತಿ ॥

(ಭಾಷ್ಯಾರ್ಥ)

ಆದಿ ಎಂಬುದು ಎರಡಕ್ಷರದ್ದು ; ಸವ್ತವಿಧಸಾಮದ ಸಂಖ್ಯೆಯನ್ನು ಪೂರಣ ಮಾಡುವ[1] ಓಂಕಾರವನ್ನು ಆದಿ ಎಂದಿದೆ. ಪ್ರತಿಹಾರವೆಂಬುದು ನಾಲ್ಕಕ್ಷರದ್ದು. ಅದರಿಂದ ಇಲ್ಲಿಗೆ ಒಂದು ಅಕ್ಷರವನ್ನು (ಕಿತ್ತು) ತೆಗೆದುಕೊಂಡು ಆದಿಯ (ನಾಮದ) ಅಕ್ಷರಗಳಲ್ಲಿ ಸೇರಿಸಿಕೊಳ್ಳಬೇಕು. ಅದರಿಂದ ಅದು (ಇದಕ್ಕೆ) ಸಮವೇ ಆಗುತ್ತದೆ.[2]

(ಉಪನಿಷತ್ತು)

ಉದ್ಗೀಥ ಇತಿ ತ್ರ್ಯಕ್ಷರಮುಪದ್ರವ ಇತಿ ಚತುರಕ್ಷರಂ ತ್ರಿಭಿಸ್ತ್ರಿಭಿಃ ಸಮಂ ಭವತ್ಯಕ್ಷರಮತಿಶಿಷ್ಯತೇ ತ್ರ್ಯಕ್ಷರಂ ತತ್ ಸಮಮ್ ॥೩॥

---

1. ಓಂಕಾರವು ಗಾನಕ್ರಮದಲ್ಲಿ ಏಳನೆಯದೆಂದು ಅರ್ಥವಲ್ಲ ; ಭಕ್ತಿಗಳು ಏಳೆಂಬುದನ್ನು ತೋರಿಸುವಾಗ ಉಪದ್ರವ, ಓಂಕಾರ- ಇವೂ ಬೇಕಾಗುವವು. ಏಳೆಂಬ ಸಂಖ್ಯೆಯನ್ನು ಪೂರ್ಣ ಮಾಡುವ ಓಂಕಾರಕ್ಕೆ ಆದಿ ಎಂಬ ಹೆಸರಿದೆ ಎಂದರ್ಥ.
2. ಆದಿ, ಪ್ರತಿಹಾರ- ಎಂದಿರುವಲ್ಲಿ ಆದಿಪ್ರ, ತಿಹಾರ - ಎಂದು ಅಕ್ಷರಗಳನ್ನು ವಿಂಗಡಿಸಿಕೊಂಡರೆ ಒಂದು ಭಕ್ತಿಯು ಇನ್ನೊಂದಕ್ಕೆ ಸಮವೇ ಆಗುತ್ತದೆ.

೩. ಉದ್ಗೀಥವೆಂಬುದು ಮೂರಕ್ಷರದ್ದು, ಉಪದ್ರವವೆಂಬುದು ನಾಲ್ಕಕ್ಷರದ್ದು. ಮೂರುಮೂರಾದರೆ ಸಮವಾಗುತ್ತದೆ. (ಒಂದು) ಅಕ್ಷರವುಳಿಯುತ್ತದೆ. ಅದು ಮೂರಕ್ಷರದ್ದು, ಅದು ಸಮ(ವಾಗುವದು).

ಉದ್ಗೀಥವು ಉಪದ್ರವಕ್ಕೆ ಸಮ

(ಭಾಷ್ಯ)

೧೪೨. ಉದ್ಗೀಥಃ ಇತಿ ತ್ರ್ಯಕ್ಷರಮ್ । ಉಪದ್ರವಃ ಇತಿ ಚತುರಕ್ಷರಮ್ । ತ್ರಿಭಿಸ್ತ್ರಿಭಿಃ ಸಮಂ ಭವತಿ । ಅಕ್ಷರಮ್ ಅತಿಶಿಷ್ಯತೇ ಅತಿರಿಚ್ಯತೇ । ತೇನ ವೈಷಮ್ಯೇ ಪ್ರಾಪ್ತೇ ಸಾಮ್ನಃ ಸಮತ್ವಕರಣಾಯ ಆಹ । ತದೇಕಮಪಿ ಸತ್ ಅಕ್ಷರಮ್ ಇತಿ ತ್ರ್ಯಕ್ಷರಮೇವ ಭವತಿ । ಅತಃ ತತ್ ಸಮಮ್ ॥

(ಭಾಷ್ಯಾರ್ಥ)

ಉದ್ಗೀಥವೆಂಬುದು ಮೂರಕ್ಷರದ್ದು ; ಉಪದ್ರವ ಎಂಬುದು ನಾಲ್ಕಕ್ಷರದ್ದು. ಮೂರುಮೂರಾದರೆ[1] ಸಮವಾಗುತ್ತದೆ. (ಒಂದು) ಅಕ್ಷರವು ಉಳಿದಿರುತ್ತದೆ, ಹೆಚ್ಚಾಗಿರುತ್ತದೆ. ಅದರಿಂದ ವೈಷಮ್ಯವು ಬಂದೊದಗಲಾಗಿ ಸಮತ್ವಕ್ಕಾಗಿ (ಶ್ರುತಿ) ಹೇಳುತ್ತದೆ. ಅದು ಒಂದೇ ಆದರೂ ಅಕ್ಷರಮ್ ಎಂಬ (ಅದರ ಹೆಸರು) ಮೂರಕ್ಷರದ್ದೇ ಆಗಿರುತ್ತದೆ.[2] ಆದ್ದರಿಂದ ಅದು ಸಮವು.

(ಉಪನಿಷತ್ತು)

ನಿಧನಮಿತಿ ತ್ರ್ಯಕ್ಷರಂ ತತ್ಸಮಮೇವ ಭವತಿ ತಾನಿ ಹ ವಾ ಏತಾನಿ ದ್ವಾವಿಂಶತಿರಕ್ಷರಾಣಿ ॥೪॥

೪. ನಿಧನವೆಂಬುದು ಮೂರಕ್ಷರದ್ದು ; ಅದು ಸಮವಾಗಿಯೇ ಇದೆ. ಆ ಇವು ಇಪ್ಪತ್ತೆರಡಕ್ಷರಗಳು.

ನಿಧನವೂ ಸೇರಿದರೆ ನಾಮಾಕ್ಷರಗಳು ಇಪ್ಪತ್ತೆರಡು

(ಭಾಷ್ಯ)

೧೪೩. ನಿಧನಮಿತಿ ತ್ರ್ಯಕ್ಷರಂ ತತ್ ಸಮಮೇವ ಭವತಿ । ಏವಮ್

---

1. ಉದ್ಗೀಥ, ಉಪದ್ರ - ಹೀಗೆ ಮೂರುಮೂರನ್ನು ತೆಗೆದುಕೊಂಡರೆ ಎಂದರ್ಥ.
2. ವ ಎಂಬ ಉಳಿದ ಅಕ್ಷರವು ಒಂದೇ ಆದರೂ ಅದರ ಅಕ್ಷರವೆಂಬ ನಾಮದಲ್ಲಿ ಮೂರಕ್ಷರಗಳಿರುವದರಿಂದ ಅದೂ ಸಮವೇ.

ತ್ರ್ಯಕ್ಷರಸಮತಯಾ ಸಾಮತ್ವಂ ಸಂಪಾದ್ಯ ಯಥಾಪ್ರಾಪ್ತಾನ್ಯೇವ ಅಕ್ಷರಾಣಿ ಸಂಖ್ಯಾಯನ್ತೇ। ತಾನಿ ಹ ವಾ ಏತಾನಿ ಸಪ್ತಭಕ್ತಿನಾಮಾಕ್ಷರಾಣಿ ದ್ವಾವಿಂಶತಿಃ॥

(ಭಾಷ್ಯಾರ್ಥ)

ನಿಧನವೆಂಬುದು ಮೂರಕ್ಷರದ್ದು, ಅದು ಸಮವಾಗಿಯೇ ಇದೆ.[1] ಹೀಗೆ ಮೂರಕ್ಷರದ ಸಮತೆಯಿಂದ ಸಾಮತ್ವವನ್ನು ಸಂಪಾದನೆಮಾಡಿ[2] ಯಥಾಪ್ರಾಪ್ತವಾದ ಅಕ್ಷರಗಳನ್ನೇ (ಶ್ರುತಿಯು) ಎಣಿಸಿ ಹೇಳುತ್ತದೆ. ಆ ಈ ಏಳು ಭಕ್ತಿಗಳ ನಾಮಾಕ್ಷರಗಳು ಇಪ್ಪತ್ತೆರಡು[3].

ಉಪಾಸನೆಗೆ ಅತಿಮೃತ್ಯುಪ್ರಾಪ್ತಿಫಲ

(ಉಪನಿಷತ್ತು)

ಏಕವಿಗ್ಂಶತ್ಯಾದಿತ್ಯಮಾಪ್ನೋತ್ಯೇಕವಿಗ್ಂಶೋ ವಾ ಇತೋऽಸಾವಾದಿತ್ಯೋ ದ್ವಾವಿಗ್ಂಶೇನ ಪರಮಾದಿತ್ಯಾಜ್ಜಯತಿ ತನ್ನಾಕಂ ತದ್ವಿಶೋಕಮ್ ॥೫೫॥

೫೫. ಇಪ್ಪತ್ತೊಂದರಿಂದ ಆದಿತ್ಯನನ್ನು ಪಡೆಯುತ್ತಾನೆ ; ಇಲ್ಲಿಂದ ಆ ಆದಿತ್ಯನು ಇಪ್ಪತ್ತೊಂದನೆಯವನಷ್ಟೆ ? ಇಪ್ಪತ್ತೆರಡನೆಯದರಿಂದ ಆದಿತ್ಯನಿಂದಾಚೆಗಿರುವ (ಲೋಕವನ್ನು) ಗೆದ್ದುಕೊಳ್ಳುತ್ತಾನೆ. ಅದೇ ನಾಕವು, ಅದೇ ವಿಶೋಕವು.

ಅತಿಮೃತ್ಯೂಪಾಸನೆಯ ಫಲವು, ಅತಿಮೃತ್ಯುಪ್ರಾಪ್ತಿಯೇ

(ಭಾಷ್ಯ)

೧೪೪. ತತ್ರ ಏಕವಿಂಶತ್ಯಕ್ಷರಸಂಖ್ಯಯಾ ಆದಿತ್ಯಮ್ ಆಪ್ನೋತಿ ಮೃತ್ಯುಮ್ । ಯಸ್ಮಾತ್ ಏಕವಿಂಶ ಇತಃ ಅಸ್ಮಾಲ್ಲೋಕಾತ್ ಅಸೌ ಆದಿತ್ಯಃ ಸಂಖ್ಯಯಾ ।

---

1. ಮೂರಕ್ಷರವೇ ಆದರಲ್ಲಿರುವದರಿಂದ ಆದು ಸಮವೇ.
2. ಮೂರುಮೂರಾಗಿ ವಿಂಗಡಿಸಿದರೆ ಅಕ್ಷರಗಳು ಸಮವಾಗುವದರಿಂದ ಇದು ಸಾಮವು ಎಂದು ಸಮತ್ವದಿಂದ ಸಾಮತ್ವವನ್ನು ಸಂಪಾದನೆಮಾಡಿ ಎಂದರ್ಥ. ಇಲ್ಲಿ ಅಕ್ಷರ - ಎಂಬ ಮೂರಕ್ಷರಗಳನ್ನು ಸೇರಿಸಿದರೆ ಭಕ್ತ್ಯಕ್ಷರಗಳು ಸಮವಾಗುವವು.
3. ಭಕ್ತಿಯಲ್ಲಿರುವ ಅಕ್ಷರಗಳನ್ನೇ ಎಣಿಸಿದರೆ ಇಪ್ಪತ್ತೆರಡಾಗುವವು ; ಇಲ್ಲಿ ಅಕ್ಷರ ಎಂದು ಮೂರನ್ನು ಎಣಿಸಿಕೊಂಡಿಲ್ಲ. ವ ಎಂಬುದನ್ನು ಒಂದೇ ಅಕ್ಷರವಾಗಿ ಎಣಿಸಿದೆ. ಯಥಾ ಪ್ರಾಪ್ತವಾದ ಎಂಬ ವಿಶೇಷಣಕ್ಕೆ ಇದ್ದಂತೆಯೇ ಕಾಣುವ (ಅಕ್ಷರಗಳು) ಎಂದರ್ಥ.

''ದ್ವಾದಶ ಮಾಸಾಃ ಪಞ್ಚರ್ತವಸ್ತ್ರಯ ಇಮೇ ಲೋಕಾ ಅಸಾವಾದಿತ್ಯ ಏಕವಿಗ್ಂಶಃ'' (ಐ. ಬ್ರಾ. ೪-೫ ; ತಾಂ. ಬ್ರಾ. ೧೦-೧-೧೦) ಇತಿ ಶ್ರುತೇಃ। ಅತಿಶಿಷ್ಟೇನ ದ್ವಾವಿಂಶೇನ ಅಕ್ಷರೇಣ ಪರಂ ಮೃತ್ಯೋಃ ಆದಿತ್ಯಾತ್ ಜಯತಿ ಆಪ್ನೋತಿ ಇತ್ಯರ್ಥಃ । ಯಚ್ಚ ತದಾದಿತ್ಯಾತ್ ಪರಂ ಕಿಂ ತತ್ ? ನಾಕಮ್ । ಕಮ್ ಇತಿ ಸುಖಮ್ । ತಸ್ಯ ಪ್ರತಿಷೇಧಃ ಅಕಮ್ । ತನ್ನ ಭವತೀತಿ ನಾಕಮ್ । ಕಮೇವ ಇತ್ಯರ್ಥಃ । ಮೃತ್ಯುವಿಷಯತ್ವಾತ್ ದುಃಖಸ್ಯ । ವಿಶೋಕಂ ಚ ತತ್ ವಿಗತಶೋಕಮ್ । ಮಾನಸದುಃಖರಹಿತಮ್ ಇತ್ಯರ್ಥಃ। ತತ್ ಆಪ್ನೋತಿ ॥

(ಭಾಷ್ಯಾರ್ಥ)

ಇಲ್ಲಿ ಇಪ್ಪತ್ತೊಂದೆಂಬ ಅಕ್ಷರಸಂಖ್ಯೆಯಿಂದ[1] ಆದಿತ್ಯನೆಂಬ ಮೃತ್ಯುವನ್ನು ಪಡೆದುಕೊಳ್ಳುತ್ತಾನೆ. ಏಕೆಂದರೆ ಆ ಆದಿತ್ಯನು ಇಲ್ಲಿಂದ, ಈ ಲೋಕದಿಂದ, ಸಂಖ್ಯೆಯಲ್ಲಿ ಇಪ್ಪತ್ತೊಂದನೆಯವನಷ್ಟೆ ? ಏಕೆಂದರೆ ''ಹನ್ನೆರಡು ತಿಂಗಳುಗಳು, ಐದು ಋತುಗಳು[2], ಈ ಲೋಕಗಳು ಮೂರು, ಆ ಆದಿತ್ಯನು ಇಪ್ಪತ್ತೊಂದನೆಯವನು'' (ಐ. ಬ್ರಾ. ೪-೫ ; ತಾಂ. ಬ್ರಾ. ೧೦-೧-೧೦) ಎಂದು ಶ್ರುತಿಯಿದೆ. ಉಳಿಯುವ ಇಪ್ಪತ್ತೆರಡನೆಯ ಅಕ್ಷರದಿಂದ ಮೃತ್ಯುವಾದ ಆದಿತ್ಯನಿಗಿಂತ ಆಚಿನ (ಲೋಕ)ವನ್ನು ಗೆದ್ದುಕೊಳ್ಳುತ್ತಾನೆ, ಪಡೆದುಕೊಳ್ಳುತ್ತಾನೆ- ಎಂದರ್ಥ.

ಆದಿತ್ಯನಿಂದಾಚೆಗೆ ಇರುವದಲ್ಲ, ಅದು ಯಾವುದು ? ಎಂದರೆ ನಾಕವು. ಕ - ಎಂದರೆ ಸುಖವು, ಅದಲ್ಲದ್ದು ಅಕ ; ಆ (ಅಕ)ವಲ್ಲದ್ದು ನಾಕವು ಕವೇ, ಆಗಿರುತ್ತದೆ. ಏಕೆಂದರೆ ದುಃಖವು ಮೃತ್ಯುವಿಷಯವಾದದ್ದು.[3] ಆ (ಲೋಕವು) ವಿಶೋಕವೂ (ಆಗಿದೆ), ಶೋಕವಿಲ್ಲದ್ದು, ಮಾನಸದುಃಖವಿಲ್ಲದ್ದು ಎಂದರ್ಥ.[4] ಅದನ್ನು ಪಡೆದು-ಕೊಳ್ಳುತ್ತಾನೆ ಎಂದು (ಅಭಿಪ್ರಾಯ).

(ಉಪನಿಷತ್ತು)

ಆಪ್ನೋತಿ ಹಾದಿತ್ಯಸ್ಯ ಜಯಂ ಪರೋ ಹಾಸ್ಯಾದಿತ್ಯಜಯಾಜ್ಜಯೋ ಭವತಿ ಯ ಏತದೇವಂ ವಿದ್ವಾನಾತ್ಮಸಂಮಿತಮತಿಮೃತ್ಯು ಸಪ್ತವಿಧಗ್ಂ ಸಾಮೋಪಾಸ್ತೇ ಸಾಮೋಪಾಸ್ತೇ ॥೬॥

1. ೩ × ೭=೨೧ ಎಂಬೀ ಸಾಮನಾಮಾಕ್ಷರಸಂಖ್ಯೆಯಿಂದ.
2. ಹೇಮಂತಶಿಶಿರಗಳನ್ನು ಒಂದೇ ಎಂದು ಎಣಿಸಿದರೆ ಐದು ಋತುಗಳಾಗುವವು.
3. ಈ ಆದಿತ್ಯನ ಅಹೋರಾತ್ರಗಳಿಂದ ಜನರಿಗೆ ದುಃಖವಾಗುತ್ತದೆ ಎಂದರ್ಥ.
4. ಇದೇ ಬ್ರಹ್ಮಲೋಕವು.

೬. ಯಾವನು ಇದನ್ನು ಹೀಗೆಂದರಿತು ಆತ್ಮಸಂಮಿತವಾದ ಅತಿಮೃತ್ಯುವಾದ ಸಪ್ತವಿಧಸಾಮವನ್ನು ಉಪಾಸನೆಮಾಡುವನೋ, ಸಾಮವನ್ನು ಉಪಾಸನೆಮಾಡುವನೋ (ಅವನು) ಆದಿತ್ಯನ ಜಯವನ್ನು ಪಡೆದುಕೊಳ್ಳುವನು, ಆದಿತ್ಯನ ಜಯಕ್ಕಿಂತಲೂ ಹೆಚ್ಚಿನ ಜಯವು ಇವನಿಗಾಗುವದು.

ಒಟ್ಟರ್ಥ

(ಭಾಷ್ಯ)

೧೪೫. ಉಕ್ತಸ್ಯೈವ ಪಿಣ್ಡಿತಾರ್ಥಮಾಹ । ಏಕವಿಂಶತಿಸಂಖ್ಯಯಾ ಆದಿತ್ಯಸ್ಯ ಜಯಮಾಪ್ನೋತಿ[1] । ಪರೋ ಹ ಅಸ್ಯ ಏವಂವಿದಃ ಆದಿತ್ಯಜಯಾತ್ ಮೃತ್ಯುಗೋಚರಾತ್ ಪರೋ ಜಯೋ ಭವತಿ । ದ್ವಾವಿಂಶತ್ಯಕ್ಷರಸಂಖ್ಯಯಾ ಇತ್ಯರ್ಥಃ । ಯ ಏತದೇವಂ ವಿದ್ವಾನ್ ಇತ್ಯಾದ್ಯುಕ್ತಾರ್ಥಮ್ । ತಸ್ಯ ಏತತ್ ಯಥೋಕ್ತಂ ಫಲಮಿತಿ । ದ್ವಿರಭ್ಯಾಸಃ ಸಾಪ್ತವಿಧ್ಯಸಮಾಪ್ತ್ಯರ್ಥಃ ॥

(ಭಾಷ್ಯಾರ್ಥ)

(ಮೇಲೆ) ಹೇಳಿರುವದಕ್ಕೇ ಒಟ್ಟರ್ಥವನ್ನು (ಶ್ರುತಿ) ಹೇಳುತ್ತದೆ : ಇಪ್ಪತ್ತೊಂದೆಂಬ ಸಂಖ್ಯೆಯಿಂದ ಆದಿತ್ಯನ ಜಯವನ್ನು ಪಡೆದುಕೊಳ್ಳುತ್ತಾನೆ. ಹೀಗೆಂದು ಅರಿತಿರುವವನಿಗೆ ಮೃತ್ಯುಗೋಚರವಾದ ಆದಿತ್ಯಜಯಕ್ಕಿಂತಲೂ ಹೆಚ್ಚಿನ ಜಯವೂ ಆಗುತ್ತದೆ ; ಇಪ್ಪತ್ತೆರಡೆಂಬ ಅಕ್ಷರಸಂಖ್ಯೆಯಿಂದ (ಇದಾಗುತ್ತದೆ) ಎಂದರ್ಥ. (ಯ ಏತದೇವಂ ವಿದ್ವಾನ್) 'ಯಾವನು ಹೀಗೆಂದರಿತು...' ಮುಂತಾದದ್ದಕ್ಕೆ ಹಿಂದೆ ಹೇಳಿದರ್ಥವೇ, (ಯಾವನು ಹೀಗೆ ಉಪಾಸನೆಮಾಡುವನೋ) ಅವನಿಗೆ ಈ ಮೇಲೆ ಹೇಳಿದ ಫಲವು (ಆಗುವದು ಎಂದರ್ಥ). ಸಾಮೋಪಾಸ್ತೇ (ಎಂಬ) ದ್ವಿರುಕ್ತಿಯು ಸಪ್ತವಿಧ(ಸಾಮೋಪಾಸನೆಯ) ಸಮಾಪ್ತಿಗಾಗಿ (ಬಂದಿದೆ).

1. 'ಜಯಮನು' ಎಂಬ ವಾ॥ ಪಾಠಕ್ಕಿಂತ ಈ ಆ॥ ಪಾಠವೇ ಮೇಲು.

ಎರಡನೆಯ ಅಧ್ಯಾಯ - ಹನ್ನೊಂದನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ಗಾಯತ್ರಸಾಮದ ಉಪಾಸನೆ

(ಉಪನಿಷತ್ತು)

ಮನೋ ಹಿಂಕಾರೋ ವಾಕ್ ಪ್ರಸ್ತಾವಶ್ಚಕ್ಷುರುದ್ಗೀಥಃ ಶ್ರೋತ್ರಂ ಪ್ರತಿಹಾರಃ ಪ್ರಾಣೋ ನಿಧನಮೇತದ್ ಗಾಯತ್ರಂ ಪ್ರಾಣೇಷು ಪ್ರೋತಮ್ ॥೧॥

೧. ಮನಸ್ಸು ಹಿಂಕಾರವು, ವಾಕ್ಕು ಪ್ರಸ್ತಾವವು, ಚಕ್ಷುಸ್ಸು ಉದ್ಗೀಥವು, ಶ್ರೋತ್ರವು ಪ್ರತಿಹಾರವು, ಪ್ರಾಣವು ನಿಧನವು. ಈ ಗಾಯತ್ರವು ಪ್ರಾಣಗಳಲ್ಲಿ ಪ್ರೋತ(ವಾಗಿರುತ್ತದೆ).

ಈಗ ಹೇಳಲಿರುವ ಸಾಮೋಪಾಸನೆಗಳ ವಿಶೇಷ

(ಭಾಷ್ಯ)

೧೪೬. ಏನಾ ನಾಮಗ್ರಹಣಂ ಪಞ್ಚವಿಧಸ್ಯ ಸಪ್ತವಿಧಸ್ಯ ಚ ಸಾಮ್ನಃ ಉಪಾಸನಮ್ ಉಕ್ತಮ್ । ಅಥ ಇದಾನೀಂ ಗಾಯತ್ರಾದಿನಾಮಗ್ರಹಣಪೂರ್ವಕಂ ವಿಶಿಷ್ಟಫಲಾನಿ ಸಾಮೋಪಾಸನಾನ್ತರಾಣಿ ಉಚ್ಯನ್ತೇ । ಯಥಾಕ್ರಮಂ ಗಾಯತ್ರಾದೀನಾಂ ಕರ್ಮಣಿ ಪ್ರಯೋಗಃ ತಥೈವ ॥

(ಭಾಷ್ಯಾರ್ಥ)

(ಸಾಮದ) ಹೆಸರನೆತ್ತಿ ಹೇಳದೆ ಐದು ಬಗೆಯ ಮತ್ತು ಏಳು ಬಗೆಯ ಸಾಮದ ಉಪಾಸನೆಯನ್ನು ಹೇಳಿದ್ದಾಯಿತು. ಇನ್ನು ಈಗ ಗಾಯತ್ರವೇ ಮುಂತಾದ ಹೆಸರನೆತ್ತಿ ಆಯಾ ಫಲವುಳ್ಳ ಬೇರೆಯ ಸಾಮೋಪಾಸನೆಗಳನ್ನು ಹೇಳಲಾಗುತ್ತದೆ. ಗಾಯತ್ರವೇ ಮುಂತಾದವುಗಳಿಗೆ ಕರ್ಮದಲ್ಲಿ ಯಾವ ಕ್ರಮದಿಂದ ಪ್ರಯೋಗವಾಗುವದೋ ಹಾಗೆಯೇ[1] (ಈ ಉಪಾಸನೆಗಳನ್ನು ಹೇಳಲಾಗುವದು).

1. ಆ ಕ್ರಮದಿಂದಲೇ ಅವುಗಳ ಉಪಾಸನೆಯನ್ನು ಹೇಳಿರುತ್ತದೆ ಎಂದರ್ಥ.

ಗಾಯತ್ರಸಾಮದ ಭಕ್ತಿಗಳ ವಿನಿಯೋಗ

(ಭಾಷ್ಯ)

೧೪೭. ಮನೋ ಹಿಂಕಾರಃ ಮನಸಃ ಸರ್ವಕರಣವೃತ್ತೀನಾಂ ಪ್ರಾಥಮ್ಯಾತ್ । ತದಾನನ್ತರ್ಯಾತ್ ವಾಕ್ ಪ್ರಸ್ತಾವಃ । ಚಕ್ಷುರುದ್ಗೀಥಃ । ಶ್ರೈಷ್ಠ್ಯಾತ್ । ಶ್ರೋತ್ರಂ ಪ್ರತಿಹಾರಃ । ಪ್ರತಿಹೃತತ್ವಾತ್ । ಪ್ರಾಣೋ ನಿಧನಮ್ । ಯಥೋಕ್ತಾನಾಂ ಪ್ರಾಣೇ ನಿಧನಾತ್ ಸ್ವಾಪಕಾಲೇ । ಏತದ್ ಗಾಯತ್ರಂ ಸಾಮ ಪ್ರಾಣೇಷು ಪ್ರೋತಮ್ । ಗಾಯತ್ರ್ಯಾ ಃ ಪ್ರಾಣಸಂಸ್ತುತತ್ವಾತ್ ॥

೪೯)

ಮನಸ್ಸು ಹಿಂಕಾರವು, ಏಕೆಂದರೆ ಮನಸ್ಸು ಕರಣವೃತ್ತಿಗಳಿಗೆಲ್ಲ ಮೊದಲನೆಯ ದಾಗಿದೆ. ಇದಾದ ಬಳಿಕ ಬರುವದರಿಂದ ವಾಕ್ಕು ಪ್ರಸ್ತಾವವು ; ಚಕ್ಷಸ್ಸು ಉದ್ಗೀಥವು ; ಏಕೆಂದರೆ (ಅದು) ಶ್ರೇಷ್ಠವಾದದ್ದು. ಶ್ರೋತ್ರವು ಪ್ರತಿಹಾರವು ; ಏಕೆಂದರೆ ಪ್ರತಿಹೃತ ವಾಗಿರುತ್ತದೆ.[1] ಪ್ರಾಣವು ನಿಧನವು ; ಏಕೆಂದರೆ ಮೇಲೆ ಹೇಳಿದ(ಪ್ರಾಣಗಳು) ನಿದ್ರೆಯ ಕಾಲದಲ್ಲಿ (ಮುಖ್ಯ)ಪ್ರಾಣದಲ್ಲಿ ಇಡಲ್ಪಡುತ್ತವೆ[2].

ಈ ಗಾಯತ್ರಸಾಮವು ಪ್ರಾಣಗಳಲ್ಲಿ ಹೆಣೆದುಕೊಂಡಿರುತ್ತದೆ[3] ; ಏಕೆಂದರೆ ಗಾಯತ್ರಿಯನ್ನು ಪ್ರಾಣ(ವೆಂದು ಶ್ರುತಿಯಲ್ಲಿ) ಹೊಗಳಿದೆ.[4]

ಗಾಯತ್ರೋಪಾಸನದ ಫಲ

(ಉಪನಿಷತ್ತು)

ಸ ಯ ಏವಮೇತದ್ಗಾಯತ್ರಂ ಪ್ರಾಣೇಷು ಪ್ರೋತಂ ವೇದ ಪ್ರಾಣೇ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ಮಹಾಮನಾಃ ಸ್ಯಾತ್ ತದ್ ವ್ರತಮ್ ॥೨॥

1. ಹಿಂದೆ ೨-೭-೧ರ ಭಾಷ್ಯ (ಭಾ. ಭಾ. ೧೨೮)ರಲ್ಲಿ ಪ್ರತಿಹೃತಶಬ್ದಕ್ಕೆ ಮಾಡಿರುವ ವ್ಯಾಖ್ಯಾನವನ್ನೂ ಅದರ ಅನುವಾದದ ಟಿಪ್ಪಣಿಯನ್ನೂ ನೋಡಿ.
2. ಪ್ರಾಣಂ ತರ್ಹಿ ವಾಗಪ್ಯೇತಿ (ಶತ. ಬ್ರಾ. ೧೦-೩-೩-೬) ಮುಂತಾದ ಶ್ರುತಿಯೂ ಈ ಉಪನಿಷತ್ತಿನ ೪-೩-೩ರಲ್ಲಿರುವ ಶ್ರುತಿಯೂ ಇದಕ್ಕೆ ಪ್ರಮಾಣ. 3. ಪ್ರತಿಷ್ಠಿತವಾಗಿರುತ್ತದೆ.
4. 'ಪ್ರಾಣೋ ವೈ ಗಾಯತ್ರೀ' ಎಂಬ (?) ಶ್ರುತಿಯು ಇದಕ್ಕೆ ಪ್ರಮಾಣ. ಆ॥ ಗಿ॥ ತಾಂ. ಬ್ರಾ. ೧೬-೧೬-೭ ಮತ್ತು ೧೯-೫-೧-ಇವುಗಳಲ್ಲಿ 'ಪ್ರಾಣೋ ಗಾಯತ್ರೀ' ಎಂದಿದೆ.

೨. ಯಾವನು ಹೀಗೆಂದರಿತು ಪ್ರಾಣಗಳಲ್ಲಿ ಪ್ರೋತವಾಗಿರುವ ಈ ಗಾಯತ್ರವನ್ನು ಅರಿತುಕೊಂಡಿರುವನೋ ಅವನು ಪ್ರಾಣಿಯಾಗಿರುವನು, ಆಯುಸ್ಸೆಲ್ಲವನ್ನೂ ಹೊಂದುವನು, ಚೆನ್ನಾಗಿ ಬಾಳುತ್ತಾನೆ, ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗುವನು, ಕೀರ್ತಿಯಿಂದಲೂ ದೊಡ್ಡವನಾಗಿರುವನು. ಮಹಾಮನಸ್ಕನಾಗಿರಬೇಕು ; ಇದು ವ್ರತವು.

೧೪೮. ಸ ಯ ಏವಮ್ ಏತದ್ ಗಾಯತ್ರಂ ಪ್ರಾಣೇಷು ಪ್ರೋತಂ ವೇದ ಪ್ರಾಣೀ ಭವತಿ । ಅವಿಕಲಕರಣೋ ಭವತಿ ಇತ್ಯೇತತ್ । ಸರ್ವಮ್ ಆಯುಃ ಏತಿ । "ಶತಂ ವರ್ಷಾಣಿ ಸರ್ವಮಾಯುಃ ಪುರುಷಸ್ಯ" (?) ಇತಿ ಶ್ರುತೇಃ । ಜ್ಯೋಕ್ ಉಜ್ಜ್ವಲಃ ಸನ್ ಜೀವತಿ । ಮಹಾನ್ ಭವತಿ ಪ್ರಜಾದಿಭಿಃ । ಮಹಾಂಶ್ಚ ಕೀರ್ತ್ಯಾ । ಗಾಯತ್ರೋಪಾಸಕಸ್ಯ ಏತತ್ ವ್ರತಂ ಭವತಿ ಯತ್ ಮಹಾಮನಸ್ತ್ವಮ್[1] । ಅಕ್ಷುದ್ರಚಿತ್ತಃ ಸ್ಯಾತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಯಾವನು ಹೀಗೆ ಈ ಗಾಯತ್ರವು ಪ್ರಾಣಗಳಲ್ಲಿ ಪ್ರೋತವಾಗಿರುವದೆಂದು ಅರಿತುಕೊಂಡಿರುವನೋ ಅವನು ಪ್ರಾಣಿಯಾಗಿರುತ್ತಾನೆ ; ನ್ಯೂನತೆಯಿಲ್ಲದ ಕರಣಗಳುಳ್ಳವನಾಗಿರುತ್ತಾನೆ ಎಂದು ತಾತ್ಪರ್ಯ. ಎಲ್ಲಾ ಆಯುಸ್ಸನ್ನೂ ಹೊಂದುತ್ತಾನೆ ; 'ನೂರು ವರ್ಷಗಳೇ ಪುರುಷನ ಒಟ್ಟು ಆಯುಸ್ಸು' (?)[2] ಎಂದು ಶ್ರುತಿಯಿರುವುದರಿಂದ (ಅಷ್ಟನ್ನು ಪಡೆದುಕೊಳ್ಳುತ್ತಾನೆ). ಚೆನ್ನಾಗಿ ಎಂದರೆ ಉಜ್ಜ್ವಲವಾಗಿ[3] ಬಾಳುತ್ತಾನೆ, ಪ್ರಜಾದಿಗಳಿಂದ ದೊಡ್ಡವನಾಗಿರುತ್ತಾನೆ ; ಕೀರ್ತಿಯಿಂದಲೂ ದೊಡ್ಡವನಾಗಿರುತ್ತಾನೆ.

ಗಾಯತ್ರೋಪಾಸಕನಿಗೆ[4] 'ಮಹಾಮನನಾಗಿರಬೇಕು' ಎಂಬುದು ವ್ರತವು. ಕ್ಷುದ್ರಚಿತ್ತನಾಗಿರಬಾರದು ಎಂದು ಅರ್ಥ.

1. 'ಮಹಾಮನಾಸ್ತ್ವಕ್ಷುದ್ರಚಿತ್ತಃ' ಎಂದು ಆ॥ ಪಾಠ. ವಾ॥ ಪಾಠದಲ್ಲಿ ತುಶಬ್ದವಿರುವ ಪಾಠವಿಲ್ಲ. ನಾವು ಒಪ್ಪಿರುವ ಪಾಠಕ್ಕೂ ಆಧಾರವಿದೆ.
2. 'ಶತಾಯುರ್ವೈ ಪುರುಷಃ' ಇತಿ ಶ್ರುತೇರಿತ್ಯುಚ್ಯತೇ- ಎಂದು ಟೀಕೆ.
3. ತನಗೂ ಮತ್ತೊಬ್ಬರಿಗೂ ಉಪಕಾರಸಮರ್ಥನಾಗಿರುವದೇ ಉಜ್ಜ್ವಲತ್ವವು ಆ. ಗಿ.
4. ಗಾಯತ್ರಸಾಮದ ಹಿಂಕಾರಾದಿಗಳಲ್ಲಿ ಮನಾದಿದೃಷ್ಟಿಯನ್ನು ಇಟ್ಟು ಚಿಂತಿಸುವದೇ ಸಾಮದ ಉಪಾಸನೆ. ಹೀಗೆಯೇ ಮುಂದೆಯೂ ತಿಳಿಯಬೇಕು.

ಎರಡನೆಯ ಅಧ್ಯಾಯ - ಹನ್ನೆರಡನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ರಥಂತರಸಾಮದ ಉಪಾಸನೆ

(ಉಪನಿಷತ್ತು)

ಅಭಿಮನ್ಥತಿ ಸ ಹಿಂಕಾರೋ ಧೂಮೋ ಜಾಯತೇ ಸ ಪ್ರಸ್ತಾವೋ ಜ್ವಲತಿ ಸ ಉದ್ಗೀಥೋಽಙ್ಗಾರಾ ಭವನ್ತಿ ಸ ಪ್ರತಿಹಾರ ಉಪಶಾಮ್ಯತಿ ತನ್ನಿಧನಗ್ಂ ಸಗ್ಂಶಾಮ್ಯತಿ ತನ್ನಿಧನಮೇತದ್ರಥಂತರಮಗ್ನೌ ಪ್ರೋತಮ್ ॥೧॥

೧. ಕಡೆಯುತ್ತಾರಲ್ಲ, ಅದು ಹಿಂಕಾರವು ; ಹೊಗೆಯುಂಟಾಗುತ್ತದೆಯಲ್ಲ, ಅದು ಪ್ರಸ್ತಾವವು ; ಉರಿಯುತ್ತದೆಯಲ್ಲ, ಅದು ಉದ್ಗೀಥವು ; ಕೆಂಡಗಳಾಗುತ್ತವೆಯಲ್ಲ, ಅದು ಪ್ರತಿಹಾರವು ; ಒಂದಿಷ್ಟು ಆರುವದಲ್ಲ, ಅದು ನಿಧನವು ; ಪೂರ ಆರುವದಲ್ಲ, ಅದು ನಿಧನವು. ಈ ರಥಂತರವು ಅಗ್ನಿಯಲ್ಲಿ ಪ್ರೋತವಾಗಿದೆ.

ರಥಂತರಸಾಮದ ಭಕ್ತಿಗಳ ವಿನಿಯೋಗ

(ಭಾಷ್ಯ)

೧೪. ಅಭಿಮನ್ಥತಿ ಸ ಹಿಂಕಾರಃ । ಪ್ರಾಥಮ್ಯಾತ್ । ಅಗ್ನೇರ್ಧೂಮೋ ಜಾಯತೇ ಸ ಪ್ರಸ್ತಾವಃ । ಆನನ್ತರ್ಯಾತ್ । ಜ್ವಲತಿ ಸ ಉದ್ಗೀಥಃ । ಹವಿಃ ಸಂಬನ್ಧಾತ್ ಶ್ರೈಷ್ಠ್ಯಂ ಜ್ವಲನಸ್ಯ । ಅಙ್ಗಾರಾ ಭವನ್ತಿ ಸ ಪ್ರತಿಹಾರಃ । ಅಙ್ಗಾರಾಣಾಂ ಪ್ರತಿಹೃತತ್ವಾತ್ । ಉಪಶಮಃ ಸಾವಶೇಷತ್ವಾತ್ ಅಗ್ನೇಃ, ಸಂಶಮಃ ನಿಃಶೇಷೋಪಶಮಃ । ಸಮಾಪ್ತಿಸಾಮಾನ್ಯಾತ್ ನಿಧನಮ್ । ಏತದ್ ರಥಂತರಮ್ ಅಗ್ನೌ ಪ್ರೋತಮ್ । ಮನ್ಥನೇ ಹಿ ಅಗ್ನೇರ್ಗೀಯತೇ ॥

(ಭಾಷ್ಯಾರ್ಥ)

ಕಡೆಯುತ್ತಾನಲ್ಲ[1], ಅದು ಹಿಂಕಾರವು ; ಏಕೆಂದರೆ ಮೊದಲನೆಯದಾಗಿದೆ.

---

1. ಸಮಗ್ರಪ್ರಾಣಗಳಿದ್ದವನೇ ಮಂಥನಕ್ಕೆ ಸಮರ್ಥನಾದ್ದರಿಂದ ಪ್ರಾಣದೃಷ್ಟಿಯಾದ ಬಳಿಕ ಈ ಮಂಥನಾದಿದೃಷ್ಟಿಯ ಉಪಾಸನೆಯನ್ನು ಹೇಳಿದೆ. ಆ. ಗಿ.

ಬೆಂಕಿಯಿಂದ ಹೊಗೆ ಉಂಟಾಗುತ್ತದೆಯಲ್ಲ, ಅದು ಪ್ರಸ್ತಾವವು ; ಏಕೆಂದರೆ (ಅದು ಪ್ರಸ್ತಾವದಂತೆ) ಆಮೇಲೆ (ಉಂಟಾಗುತ್ತದೆ). ಹೊತ್ತಿಕೊಳ್ಳುತ್ತದೆಯಲ್ಲ, ಅದು ಉದ್ಗೀಥವು ; ಹವಿಸ್ಸಿನ ಸಂಬಂಧವಿರುವದರಿಂದ[1] ಉರಿಗೆ ಶ್ರೇಷ್ಠತ್ವ(ವಿದೆ). ಕೆಂಡಗಳಾಗುವದಲ್ಲ, ಅದು ಪ್ರತಿಹಾರವು ; ಏಕೆಂದರೆ ಕೆಂಡಗಳು ಪ್ರತಿಹೃತವಾಗುತ್ತವೆ[2] ಉಪಶಮ ಎಂದರೆ ಕೆಂಡವು (ಒಂದಿಷ್ಟು) ಉಳಿದುಕೊಂಡಿರುವಂತೆ (ಆರಿರುವದು) ; ಸಂಶಮವೆಂದರೆ (ಸ್ವಲ್ಪವೂ) ಉಳಿಯದಂತೆ ಆರಿಬಿಡುವದು ; ಸಮಾಪ್ತಿ ಎಂಬ ಹೋಲಿಕೆಯಿಂದ (ಆರುವದು) ನಿಧನವು.

ಈ ರಥಂತರ(ಸಾಮ)ವು ಅಗ್ನಿಯಲ್ಲಿ ಪ್ರೋತವಾಗಿರುತ್ತದೆ ; ಅಗ್ನಿಯನ್ನು ಮಥನಮಾಡುವಾಗ (ಅದನ್ನು) ಗಾನಮಾಡುತ್ತಾರಲ್ಲವೆ[3] ?

ರಥಂತರೋಪಾಸನೆಗೆ ಫಲ

(ಉಪನಿಷತ್ತು)

ಸ ಯ ಏವಮೇತದ್ ರಥಂತರಮಗ್ನೌ ಪ್ರೋತಂ ವೇದ ಬ್ರಹ್ಮವರ್ಚಸ್ಯನ್ನಾದೋ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ನ ಪ್ರತ್ಯಙ್ಙಗ್ನಿಮಾಚಾಮೇನ್ನ ನಿಷ್ಠೀವೇತ್ ತದ್ವ್ರತಮ್ ॥೨॥

೨. ಯಾವನು ಈ ರಥಂತರವು ಅಗ್ನಿಯಲ್ಲಿ ಪ್ರೋತವಾಗಿದೆ - ಎಂದು ಅರಿತುಕೊಂಡಿರುತ್ತಾನೋ ಅವನು ಬ್ರಹ್ಮವರ್ಚಸಿಯೂ ಅನ್ನಾದನೂ ಆಗಿರುವನು. ಆಯುಸ್ಸೆಲ್ಲವನ್ನೂ ಪಡೆದುಕೊಳ್ಳುವನು, ಚೆನ್ನಾಗಿ ಬಾಳುವನು ; ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗಿರುವನು, ಕೀರ್ತಿಯಿಂದಲೂ ದೊಡ್ಡವನಾಗುವನು. ಅಗ್ನಿಯ ಮುಂದುಗಡೆಯಲ್ಲಿ ಆಚಮನಮಾಡಬಾರದು, ಉಗುಳಬಾರದು ; ಅದು ವ್ರತವು.

(ಭಾಷ್ಯ)

೧೫೦. ಸ ಯ ಇತ್ಯಾದಿ ಪೂರ್ವವತ್ । ಬ್ರಹ್ಮವರ್ಚಸೀ ವೃತ್ತಸ್ವಾಧ್ಯಾಯ

---

1. ಹವಿಸ್ಸನ್ನು ಉರಿಯುವಾಗ ಹಾಕುತ್ತಾರೆ. 2. ಕೂಡಿಕೊಂಡಿರುತ್ತದೆ ಎಂದರ್ಥ.
3. ಮಥನಮಾಡುವಾಗ ಉದ್ಗಾತೃಗಳು ಈ ಸಾಮವನ್ನು ಉಪಯೋಗಿಸಬೇಕು.

ನಿಮಿತ್ತಂ ತೇಜೋ ಬ್ರಹ್ಮವರ್ಚಸಮ್ । ತೇಜಸ್ತು ಕೇವಲಂ ತ್ವಿಡ್ಭಾವಃ । ಅನ್ನಾದೋ ದೀಪ್ತಾಗ್ನಿಃ । ನ ಪ್ರತ್ಯಕ್ ಅಗ್ನೇರಭಿಮುಖಃ ನ ಆಚಾಮೇತ್, ನ ಭಕ್ಷಯೇತ್ ಕಿಂಚಿತ್ । ನ ನಿಷ್ಠೀವೇತ್ ಶ್ಲೇಷ್ಮನಿರಸನಂ ಚ ನ ಕುರ್ಯಾತ್ । ತದ್ ವ್ರತಮ್ ॥

(ಭಾಷ್ಯಾರ್ಥ)

"ಯಾವನು..." ಮುಂತಾದ (ಅರಿತುಕೊಂಡಿರುತ್ತಾನೋ ಎಂಬವರೆಗಿನ ಗ್ರಂಥಕ್ಕೆ) ಹಿಂದಿನಂತೆ (ಅರ್ಥ). ಬ್ರಹ್ಮವರ್ಚಸಿ(ಯಾಗುತ್ತಾನೆ). ಹಿಂದೆ ಆಗಿರುವ ಅಧ್ಯಯನನಿಮಿತ್ತದಿಂದ ಬಂದಿರುವ ತೇಜಸ್ಸು ಬ್ರಹ್ಮವರ್ಚಸವು, ತೇಜಸ್ಸೆಂದರೋ (ಬರಿಯ ಚರ್ಮ) ಕಾಂತಿಯು. ಅನ್ನಾದನು ಎಂದರೆ ದೀಪ್ತಾಗ್ನಿಯು. ಅಗ್ನಿಗೆ ಪ್ರತ್ಯಂಚವಾಗಿ ಎಂದರೆ ಅದರ ಎದುರಿಗೆ ಆಚಮನಮಾಡಬಾರದು, ಏನನ್ನೂ ತಿನ್ನಬಾರದು ; ಉಗುಳಬಾರದು, ಶ್ಲೇಷ್ಮವನ್ನು ಹೊರತೆಗೆಯಲೂ ಬಾರದು. ಅದು (ಈ ಉಪಾಸಕನಿಗೆ) ವ್ರತವು.

ಎರಡನೆಯ ಅಧ್ಯಾಯ - ಹದಿಮೂರನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ವಾಮದೇವಸಾಮದ ಉಪಾಸನೆ

(ಉಪನಿಷತ್ತು)

ಉಪಮನ್ತ್ರಯತೇ ಸ ಹಿಂಕಾರೋ ಜ್ಞಪಯತೇ ಸ ಪ್ರಸ್ತಾವಃ । ಸ್ತ್ರಿಯಾ ಸಹ ಶೇತೇ ಸ ಉದ್ಗೀಥಃ ಪ್ರತಿ ಸ್ತ್ರೀಂ ಸಹ ಶೇತೇ ಸ ಪ್ರತಿಹಾರಃ ಕಾಲಂ ಗಚ್ಛತಿ ತನ್ನಿಧನಂ ಪಾರಂ ಗಚ್ಛತಿ ತನ್ನಿಧನಮೇತದ್ವಾಮದೇವ್ಯಂ ಮಿಥುನೇ ಪ್ರೋತಮ್ ॥೧॥

೧. ಕರೆಯುತ್ತಾನಲ್ಲ, ಅದು ಹಿಂಕಾರವು ; ತಿಳಿಸುತ್ತಾನಲ್ಲ, ಅದು ಪ್ರಸ್ತಾವವು ; ಸ್ತ್ರೀಯೊಡನೆ ಮಲಗುತ್ತಾನಲ್ಲ, ಅದು ಉದ್ಗೀಥವು ; ಸ್ತ್ರೀಗೆ ಪ್ರತಿಯಾಗಿ ಮಲಗುತ್ತಾನಲ್ಲ, ಅದು ಪ್ರತಿಹಾರವು ; ಕಾಲಕ್ಕೆ ಸರಿಯಾಗಿ ಗಮನ

ಮಾಡುತ್ತಾನಲ್ಲ, ಅದು ನಿಧನವು ; ಪಾರವನ್ನು ಹೊಂದುತ್ತಾನಲ್ಲ, ಅದು ನಿಧನವು . ಈ ವಾಮದೇವ್ಯವು, ಮಿಥುನದಲ್ಲಿ ಪ್ರೋತವಾಗಿರುತ್ತದೆ.

ವಾಮದೇವಸಾಮದ ಭಕ್ತಿಗಳ ವಿನಿಯೋಗ

(ಭಾಷ್ಯ)

೧೫೧. ಉಪಮನ್ತ್ರಯತೇ ಸಂಕೇತಂ ಕರೋತಿ । ಪ್ರಾಥಮ್ಯಾತ್ ಸ ಹಿಂಕಾರಃ । ಜ್ಞಪಯತೇ ತೋಷಯತಿ ಸ ಪ್ರಸ್ತಾವಃ । ಸಹಶಯನಮ್ ಏಕಪರ್ಯಙ್ಕಗಮನಮ್, ಸ ಉದ್ಗೀಥಃ । ಶ್ರೈಷ್ಠ್ಯಾತ್ । ಪ್ರತಿ ಸ್ತ್ರೀಂ ಶಯನಂ ಸ್ತ್ರಿಯಾ ಅಭಿಮುಖೀಭಾವಃ । ಸ ಪ್ರತಿಹಾರಃ । ಕಾಲಂ ಗಚ್ಛತಿ ಮೈಥುನೇನ । ಪಾರಂ ಸಮಾಪ್ತಿಂ ಗಚ್ಛತಿ । ತನ್ನಿಧನಮ್ । ಏತದ್ವಾಮದೇವ್ಯಂ ಮಿಥುನೇ ಪ್ರೋತಮ್ ವಾಯ್ವಮ್ಬುಮಿಥುನಸಂಬನ್ಧಾತ್ ॥

(ಭಾಷ್ಯಾರ್ಥ)

ಕರೆಯುತ್ತಾನಲ್ಲ, ಸನ್ನೆಯನ್ನು ಮಾಡುತ್ತಾನಲ್ಲ, ಅದು ಮೊದಲನೆಯದಾದ್ದರಿಂದ ಹಿಂಕಾರವು. ತಿಳಿಸುತ್ತಾನಲ್ಲ, ಸಂತೋಷಪಡಿಸುತ್ತಾನಲ್ಲ, ಅದು ಪ್ರಸ್ತಾವವು. ಸಹಶಯನ ಎಂದರೆ ಒಂದೇ ಮಂಚದಮೇಲೆ ಇರುವದು ; ಅದು ಶ್ರೇಷ್ಠವಾಗಿರುವದರಿಂದ ಉದ್ಗೀಥವು. ಸ್ತ್ರೀಗೆ ಪ್ರತಿಯಾಗಿ ಮಲಗುತ್ತಾನಲ್ಲ, ಎದುರಾಗಿ ಮಲಗುವನಲ್ಲ, ಅದು ಪ್ರತಿಹಾರವು. ಕಾಲದಲ್ಲಿ ಮೈಥುನದಿಂದ ಬೆರೆಯುತ್ತಾನಲ್ಲ, ಪಾರವನ್ನು ಎಂದರೆ ಕೊನೆಯನ್ನು ಮುಟ್ಟುವನಲ್ಲ, ಅದು ನಿಧನವು. ಈ ವಾಮದೇವ್ಯ(ಸಾಮ)ವು ಮಿಥುನದಲ್ಲಿ ಪ್ರೋತವಾಗಿದೆ ; ಏಕೆಂದರೆ (ಅದಕ್ಕೆ) ವಾಯು, ಜಲ- ಎಂಬ ಮಿಥುನದ ಸಂಬಂಧವಿದೆ.[1]

ವಾಮದೇವ್ಯೋಪಾಸನೆಗೆ ಫಲ

(ಉಪನಿಷತ್ತು)

ಸ ಯ ಏವಮೇತದ್ವಾಮದೇವ್ಯಂ ಮಿಥುನೇ ಪ್ರೋತಂ ವೇದ ಮಿಥುನೀ ಭವತಿ ಮಿಥುನಾನ್ಮಿಥುನಾತ್ ಪ್ರಜಾಯತೇ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ನ ಕಾಂಚನ ಪರಿಹರೇತ್ ತದ್ವ್ರತಮ್ ॥೨॥

---

1. ವಾಯು, ಅಪ್ಪು - ಇವುಗಳ ಮಿಥುನಸಂಬಂಧದಿಂದ ವಾಮದೇವ್ಯವು ಹುಟ್ಟಿರುತ್ತದೆ. ಆ॥ ಟೀ॥

೨. ಯಾವನು ಈ ವಾಮದೇವ್ಯವು ಮಿಥುನದಲ್ಲಿ ಪ್ರೋತವಾಗಿದೆ ಎಂದು ತಿಳಿಯುವನೋ ಅವನು ಮಿಥುನವಾಗಿರುತ್ತಾನೆ. ಮಿಥುನದಿಂದ ಮಿಥುನದಿಂದ ಹುಟ್ಟುತ್ತಾನೆ. ಆಯುಸ್ಸೆಲ್ಲವನ್ನೂ ಪಡೆದುಕೊಳ್ಳುತ್ತಾನೆ, ಚೆನ್ನಾಗಿ ಜೀವಿಸುತ್ತಾನೆ, ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗತ್ತಾನೆ, ಕೀರ್ತಿಯಿಂದ ದೊಡ್ಡವನಾಗುತ್ತಾನೆ. ಯಾವಾಕೆಯನ್ನೂ ಬಿಡಬಾರದು, ಅದು ವ್ರತವು.

(ಭಾಷ್ಯ)

೧೫೨. ಸ ಯ ಇತ್ಯಾದಿಪೂರ್ವವತ್ । ಮಿಥುನೀಭವತಿ । ಅವಿಧುರೋ ಭವತಿ ಇತ್ಯರ್ಥಃ । ಮಿಥುನಾತ್ ಪ್ರಜಾಯತೇ ಇತಿ ಅಮೋಘರೇತಸ್ತ್ವಮ್ ಉಚ್ಯತೇ । ನ ಕಾಂಚನ ಕಾಂಚಿದಪಿ ಸ್ತ್ರಿಯಂ ಸ್ವಾತ್ಮತಲಪ್ರಾಪ್ತಾಂ ನ ಪರಿಹರೇತ್ ಸಮಾಗಮಾರ್ಥಿನೀಮ್ । ವಾಮದೇವ್ಯಸಾಮೋಪಾಸನಾಜ್ಞತ್ವೇನ ವಿಧಾನಾತ್ ಏತಸ್ಮಾದನ್ಯತ್ರ ಪ್ರತಿಷೇಧಸ್ಮೃತಯಃ । ವಚನಪ್ರಾಮಾಣ್ಯಾಚ್ಚ ಧರ್ಮಾವಗತೇಃ ನ ಪ್ರತಿಷೇಧಶಾಸ್ತ್ರೇಣ ಅಸ್ಯ ವಿರೋಧಃ ॥

(ಭಾಷ್ಯಾರ್ಥ)

"ಯಾವನು..." ಮುಂತಾದ ಗ್ರಂಥಕ್ಕೆ ಹಿಂದಿನಂತೆ (ವ್ಯಾಖ್ಯಾನ). ಮಿಥುನನಾಗಿರುತ್ತಾನೆ ಎಂದರೆ ವಿಧುರನಾಗದೆ ಇರುತ್ತಾನೆ ಎಂದರ್ಥ. ಮಿಥುನದಿಂದ ಮಿಥುನದಿಂದ ಹುಟ್ಟುತ್ತಾನೆ.[1] ಎಂದರೆ ಅಮೋಘರೇತಸ್ಕನಾಗಿರುತ್ತಾನೆ ಎಂದರ್ಥ.

ಯಾವಾಕೆಯನ್ನೂ ತನ್ನ ಹಾಸಿಗೆಯಬಳಿಗೆ ಬಂದು ಸಮಾಗಮವನ್ನು ಬಯಸುವ ಯಾವ ಸ್ತ್ರೀಯನ್ನೂ ಬಿಡಬಾರದು. (ಅದು ವ್ರತವು). ವಾಮದೇವ್ಯ ಸಾಮದ ಉಪಾಸನೆಗೆ ಅಂಗವಾಗಿ (ಇದನ್ನು) ವಿಧಿಸಿರುವದರಿಂದ ಪ್ರತಿಷೇಧಸ್ಮೃತಿಗಳು ಇದಕ್ಕಿಂತ ಬೇರೆಯ ಕಡೆಯಲ್ಲಿ (ಪ್ರಮಾಣವಾಗಿರುತ್ತವೆ), ವಚನಪ್ರಮಾಣದಿಂದಲೇ ಧರ್ಮನಿಶ್ಚಯವಾಗಬೇಕಾಗಿರುವದರಿಂದ ಪ್ರತಿಷೇಧಶಾಸ್ತ್ರಕ್ಕೆ ಇದು ವಿರುದ್ಧವಲ್ಲ.[2]

1. ವ್ರತಿಯೊಂದು ಮಿಥುನಕರ್ಮದಿಂದಲೂ ಪುತ್ರವಂತನಾಗುತ್ತಾನೆ.
2. ಪ್ರತಿಷೇಧಶಾಸ್ತ್ರವು ಸಾಮಾನ್ಯ, ಇದು ಅದಕ್ಕೆ ಬಾಧಕವಾಗಿರುವ ವಿಶೇಷಶಾಸ್ತ್ರ ಎಂದು ಅಭಿಪ್ರಾಯ.

ಎರಡನೆಯ ಅಧ್ಯಾಯ - ಹದಿನಾಲ್ಕನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ಬೃಹತ್ಸಾಮದ ಉಪಾಸನೆ

(ಉಪನಿಷತ್ತು)

ಉದ್ಯನ್ ಹಿಂಕಾರ ಉದಿತಃ ಪ್ರಸ್ತಾವೋ ಮಧ್ಯಂದಿನ ಉದ್ಗೀಥೋಽಪರಾಹ್ಣಃ ಪ್ರತಿಹಾರೋಽಸ್ತಂ ಯನ್ನಿಧನಮೇತದ್ ಬೃಹದಾದಿತ್ಯೇ ಪ್ರೋತಮ್ ॥೧॥

೧. ಉದಯಿಸುವಾಗ ಹಿಂಕಾರವು ; ಉದಿಸಿದ ಮೇಲೆ ಪ್ರಸ್ತಾವವು ; ನಡುಹಗಲು ಉದ್ಗೀಥವು ; ಅಪರಾಹ್ಣವು ಪ್ರತಿಹಾರವು ; ಅಸ್ತವಾಗುವಾಗ ನಿಧನವು. ಈ ಬೃಹತ್ (ಸಾಮವು) ಆದಿತ್ಯನಲ್ಲಿ ಪ್ರೋತವಾಗಿರುತ್ತದೆ.

ಬೃಹತ್ಸಾಮಭಕ್ತಿಗಳ ವಿನಿಯೋಗ

(ಭಾಷ್ಯ)

೧ಹಿಂ. ಉದ್ಯನ್ ಸವಿತಾ ಸ ಹಿಂಕಾರಃ । ಪ್ರಾಥಮ್ಯಾದ್ ದರ್ಶನಸ್ಯ । ಉದಿತಃ ಪ್ರಸ್ತಾವಃ । ಪ್ರಸ್ತವನಹೇತುತ್ವಾತ್ ಕರ್ಮಣಾಮ್ । ಮಧ್ಯಂದಿನ ಉದ್ಗೀಥಃ । ಶ್ರೈಷ್ಠ್ಯಾತ್ । ಅಪರಾಹ್ಣಃ ಪ್ರತಿಹಾರಃ । ಪಶ್ವಾದೀನಾಂ ಗೃಹಾನ್ ಪ್ರತಿಹರಣಾತ್ । ಯದಸ್ತಂ ಯತ್ ತನ್ನಿಧನಮ್ । ರಾತ್ರೌ ಗೃಹೇ ನಿಧಾನಾತ್ ಪ್ರಾಣಿನಾಮ್ ಏತದ್ ಬೃಹತ್ ಆದಿತ್ಯೇ ಪ್ರೋತಮ್ । ಬೃಹತಃ ಆದಿತ್ಯದೈವತ್ಯತ್ವಾತ್ ॥

(ಭಾಷ್ಯಾರ್ಥ)

ಉದಯಿಸುವ ಸೂರ್ಯನಿದಾನಲ್ಲ, ಅವನು ಹಿಂಕಾರವು ; ಏಕೆಂದರೆ (ಅವನ) ದರ್ಶನವೇ ಮೊದಲು. ಉದಿಸಿದಮೇಲೆ ಪ್ರಸ್ತಾವವು ; ಏಕೆಂದರೆ ಕರ್ಮಗಳು ಪ್ರಸ್ತುತವಾಗುವದಕ್ಕೆ ಹೇತುವಾಗಿರುತ್ತಾನೆ. ನಡುಹಗಲು ಉದ್ಗೀಥವು ; ಏಕೆಂದರೆ ಶ್ರೇಷ್ಠವಾಗಿರುತ್ತದೆ. ಅಪರಾಹ್ಣವು ಪ್ರತಿಹಾರವು ; ಏಕೆಂದರೆ (ಆಗ) ಪಶ್ವಾದಿಗಳನ್ನು ಮನೆಗೆ ಪ್ರತಿಹರಣಮಾಡುತ್ತಾರೆ.[1] ಅಸ್ತವಾಗುತ್ತಾನಲ್ಲ, ಅದು ನಿಧನವು ; ಏಕೆಂದರೆ ಪ್ರಾಣಿಗಳು ಮನೆಯಲ್ಲಿಡಲ್ಪಡುತ್ತವೆ.

---

1. ಒಯ್ಯುತ್ತಾರೆ.

ಈ ಬೃಹತ್ (ಸಾಮವು) ಆದಿತ್ಯನಲ್ಲಿ[1] ಪ್ರೋತವಾಗಿರುತ್ತದೆ ; ಏಕೆಂದರೆ ಬೃಹತ್ಸಾಮಕ್ಕೆ ಆದಿತ್ಯನೇ ದೇವತೆ.

ಬೃಹತ್ಸಾಮೋಪಾಸನೆಗೆ ಫಲ

(ಉಪನಿಷತ್ತು)

ಸ ಯ ಏವಮೇತದ್ಬೃಹದಾದಿತ್ಯೇ ಪ್ರೋತಂ ವೇದ ತೇಜಸ್ವ್ಯನ್ನಾದೋ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ತಪನ್ತಂ ನ ನಿನ್ದೇತ್ ತದ್ವ್ರತಮ್ ॥೨॥

೨. ಯಾವನು ಈ ಬೃಹತ್ಸಾಮವು ಆದಿತ್ಯನಲ್ಲಿ ಪ್ರೋತವೆಂದು ಅರಿತುಕೊಂಡಿರುವನೋ ಅವನು ತೇಜಸ್ವಿಯೂ ಅನ್ನಾದನೂ ಆಗುತ್ತಾನೆ, ಆಯುಸ್ಸೆಲ್ಲವನ್ನೂ ಪಡೆದುಕೊಳ್ಳುತ್ತಾನೆ, ಚೆನ್ನಾಗಿ ಬಾಳುತ್ತಾನೆ, ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗುತ್ತಾನೆ, ಕೀರ್ತಿಯಿಂದಲೂ ದೊಡ್ಡವನಾಗುತ್ತಾನೆ. ತಪಿಸುತ್ತಿರುವ (ಸೂರ್ಯ)ನನ್ನು ನಿಂದಿಸಬಾರದು. ಅದು ವ್ರತವು.

(ಭಾಷ್ಯ)

೧೫೪. ಸ ಯ ಇತ್ಯಾದಿ ಪೂರ್ವವತ್ । ತಪನ್ತಂ ನ ನಿನ್ದೇತ್, ತದ್ವ್ರತಮ್ ॥

(ಭಾಷ್ಯಾರ್ಥ)

''ಯಾವನು...'' ಮುಂತಾದ (ಗ್ರಂಥಕ್ಕೆ) ಹಿಂದಿನಂತೆ (ವ್ಯಾಖ್ಯಾನ). ತಪಿಸುತ್ತಿರುವ (ಸೂರ್ಯನನ್ನು) ನಿಂದಿಸಬಾರದು, ಅದು ವ್ರತವು.

1. ಆದಿತ್ಯನು ಪ್ರಜೋತ್ಪತ್ತಿಗೆ ಕಾರಣನಾಗಿರುವದರಿಂದ ಹಿಂದಿನ ಸಾಮವಾದ ಬಳಿಕ ಈ ಸಾಮದ ಉಪಾಸನೆ ಬಂದಿದೆ ಎಂದು ಆ॥ ಗಿ॥

ಎರಡನೆಯ ಅಧ್ಯಾಯ - ಹದಿನೈದನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ವೈರೂಪಸಾಮದ ಉಪಾಸನೆ

(ಉಪನಿಷತ್ತು)

ಅಭ್ರಾಣಿ ಸಂಪ್ಲವನ್ತೇ ಸ ಹಿಂಕಾರೋ ಮೇಘೋ ಜಾಯತೇ ಸ ಪ್ರಸ್ತಾವೋ ವರ್ಷತಿ ಸ ಉದ್ಗೀಥೋ ವಿದ್ಯೋತತೇ ಸ್ತನಯತಿ ಸ ಪ್ರತಿಹಾರಃ ಉದ್ಗೃಹ್ಣಾತಿ ತನ್ನಿಧನಮೇತದ್ವೈರೂಪಂ ಪರ್ಜನ್ಯೇ ಪ್ರೋತಮ್ ॥೧॥

೧. ಅಭ್ರಗಳು ಒಟ್ಟುಗೂಡುತ್ತವೆಯಲ್ಲ, ಅದು ಹಿಂಕಾರವು ; ಮೇಘವಾಗುತ್ತದೆಯಲ್ಲ, ಅದು ಪ್ರಸ್ತಾವವು ; ಮಳೆಗರೆಯುತ್ತದೆಯಲ್ಲ, ಅದು ಉದ್ಗೀಥವು ; ಮಿಂಚುತ್ತದೆಯಲ್ಲ, ಗುಡುಗುತ್ತದೆಯಲ್ಲ, ಅದು ಪ್ರತಿಹಾರವು. ನಿಲುಗಡೆಯಾಗುತ್ತದೆಯಲ್ಲ, ಅದು ನಿಧನವು. ಈ ವೈರೂಪ(ಸಾಮ)ವು ಮೋಡದಲ್ಲಿ ಪ್ರೋತವಾಗಿರುತ್ತದೆ.

ವೈರೂಪಭಕ್ತಿಗಳ ವಿನಿಯೋಗ

೧ಖಿಖಿ. ಅಭ್ರಾಣಿ । ಅಭ್ಚರಣಾತ್ । ಮೇಘಃ । ಉದಕಸೇಕ್ತೃತ್ವಾತ್ । ಉಕ್ತಾರ್ಥಮ್ ಅನ್ಯತ್ । ಏತದ್ ವೈರೂಪಂ ನಾಮ ಸಾಮ ಪರ್ಜನ್ಯೇ ಪ್ರೋತಮ್ । ಅನೇಕರೂಪತ್ವಾತ್ ಅಭ್ರಾದಿಭಿಃ ಪರ್ಜನ್ಯಸ್ಯ ವೈರೂಪ್ಯಮ್ ॥

(ಭಾಷ್ಯಾರ್ಥ)

ನೀರನ್ನು ತುಂಬಿಕೊಂಡಿರುವದರಿಂದ (ಕಾರ್ಮೋಡಗಳು) ಅಭ್ರಗಳು ; ನೀರನ್ನು ಸುರಿಸುವದರಿಂದ (ಆಗಿನ ಮೋಡವು) ಮೇಘ(ವೆನಿಸುತ್ತದೆ). ಮಿಕ್ಕದ್ದೆಲ್ಲಕ್ಕೂ ಹಿಂದೆ ಹೇಳಿದಂತೆ ಅರ್ಥ. ವೈರೂಪಸಾಮವು ಮೋಡದಲ್ಲಿ ಪ್ರೋತವಾಗಿರುತ್ತದೆ. ಅಭ್ರಗಳೇ ಮುಂತಾದ ಅನೇಕ ರೂಪ(ಗಳಿರುವದರಿಂದ) ಮೋಡಕ್ಕೆ ವೈರೂಪ್ಯವಿದೆ.

ವೈರೂಪಸಾಮೋಪಾಸನೆಯ ಫಲ

(ಉಪನಿಷತ್ತು)

ಸ ಯ ಏವಮೇತದ್ವೈರೂಪಂ ಪರ್ಜನ್ಯೇ ಪ್ರೋತಂ ವೇದ ವಿರೂಪಾಗ್ಂಶ್ಚ ಸುರೂಪಾಗ್ಂಶ್ಚ ಪಶೂನವರುನ್ಧೇ ಸರ್ವ ಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ವರ್ಷನ್ತಂ ನ ನಿನ್ದೇತ್ ತದ್ವ್ರತಮ್ ॥೨॥

೨. ಯಾವನು ಈ ವೈರೂಪ(ಸಾಮ)ವನ್ನು ಮೋಡದಲ್ಲಿ ಪ್ರೋತವಾಗಿರುವದೆಂದು ಅರಿತುಕೊಂಡಿರುವನೋ ಅವನು ವಿರೂಪವೂ ಸುರೂಪವೂ ಆಗಿರುವ ಪಶುಗಳನ್ನು ಕಟ್ಟುವನು, ಆಯುಸ್ಸನೆಲ್ಲ ಪಡೆದುಕೊಳ್ಳುವನು, ಚೆನ್ನಾಗಿ ಬಾಳುವನು, ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗಿರುವನು ; ಕೀರ್ತಿಯಿಂದಲೂ ದೊಡ್ಡವನಾಗಿರುವನು. ಮಳೆಗರೆಯುವ (ಮೋಡ)ವನ್ನು ನಿಂದಿಸಬಾರದು ; ಅದು ವ್ರತವು.

(ಭಾಷ್ಯ)

೧೫೬. ವಿರೂಪಾಂಶ್ಚ ಸುರೂಪಾಂಶ್ಚ ಅಜಾವಿಪ್ರಭೃತೀನ್ ಪಶೂನ್ ಅವರುನ್ಧೇ ಪ್ರಾಪ್ನೋತಿ ಇತ್ಯರ್ಥಃ। ವರ್ಷನ್ತಂ ನ ನಿನ್ದೇತ್ । ತದ್ ವ್ರತಮ್ ॥

(ಭಾಷ್ಯಾರ್ಥ)

ವಿರೂಪಗಳಾಗಿಯೂ[1] ಸುರೂಪಗಳಾಗಿಯೂ ಇರುವ ಆಡು ಕುರಿ ಮುಂತಾದ ಪಶುಗಳನ್ನು ಕಟ್ಟುವನು, ಎಂದರೆ ಪಡೆದುಕೊಳ್ಳುವನು ಎಂದರ್ಥ. ಮಳೆಗರೆಯುವ (ಮೋಡಗಳನ್ನು) ನಿಂದಿಸಬಾರದು ; ಅದು (ಈ ಸಾಮೋಪಾಸಕನಿಗೆ) ವ್ರತವು.

1. ವಿಧವಿಧವಾದ ರೂಪಗಳುಳ್ಳವಾಗಿಯೂ.

ಎರಡನೆಯ ಅಧ್ಯಾಯ - ಹದಿನಾರನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ವೈರಾಜಸಾಮದ ಉಪಾಸನೆ

(ಉಪನಿಷತ್ತು)

ವಸನ್ತೋ ಹಿಂಕಾರೋ ಗ್ರೀಷ್ಮಃ ಪ್ರಸ್ತಾವೋ ವರ್ಷಾ ಉದ್ಗೀಥಃ ಶರತ್ ಪ್ರತಿಹಾರೋ ಹೇಮನ್ತೋ ನಿಧನಮೇತದ್ ವೈರಾಜಮೃತುಷು ಪ್ರೋತಮ್ ॥೧॥

೧. ವಸಂತವು ಹಿಂಕಾರವು ; ಗ್ರೀಷ್ಮವು ಪ್ರಸ್ತಾವವು ; ವರ್ಷರ್ತು ಉದ್ಗೀಥವು ; ಶರತ್ಕಾಲವು ಪ್ರತಿಹಾರವು ; ಹೇಮಂತವು ನಿಧನವು. ಈ ವೈರಾಜ(ಸಾಮವು) ಋತುಗಳಲ್ಲಿ ಪ್ರೋತವಾಗಿರುತ್ತದೆ.

ವೈರಾಜಸಾಮದ ಭಕ್ತಿಗಳ ವಿನಿಯೋಗ

(ಭಾಷ್ಯ)

೧ಖಿ೭. ವಸನ್ತೋ ಹಿಂಕಾರಃ । ಪ್ರಾಥಮ್ಯಾತ್ । ಗ್ರೀಷ್ಮಃ ಪ್ರಸ್ತಾವಃ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ವಸಂತವು ಹಿಂಕಾರವು ; ಏಕೆಂದರೆ ಮೊದಲನೆಯದಾಗಿದೆ. ಗ್ರೀಷ್ಮವು ಪ್ರಸ್ತಾವವು ಎಂದು ಮುಂತಾಗಿರುವದಕ್ಕೆ ಹಿಂದೆ (೨-೫ ಕಂಡಿಕೆ)ಯಂತೆ (ವ್ಯಾಖ್ಯಾನ).

ವೈರಾಜಸಾಮೋಪಾಸನೆಗೆ ಫಲ

(ಉಪನಿಷತ್ತು)

ಸ ಯ ಏವಮೇತದ್ವೈರಾಜಮೃತುಷು ಪ್ರೋತಂ ವೇದ ವಿರಾಜತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾನ್ನ ನಿನ್ದೇತ್ತದ್ವ್ರತಮ್ ॥೨॥

೨. (ಯಾವನು ಹೀಗೆ) ಈ ವೈರಾಜ(ಸಾಮವು) ಋತುಗಳಲ್ಲಿ ಪ್ರೋತವಾಗಿರುವದೆಂದು ಅರಿತುಕೊಂಡಿರುವನೋ ಅವನು ಪ್ರಜೆಯಿಂದಲೂ ಪಶುಗಳಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ವಿರಾಜಿಸುತ್ತಿರುವನು. ಆಯುಸ್ಸೆಲ್ಲವನ್ನೂ ಪಡೆದುಕೊಳ್ಳುವನು, ಚೆನ್ನಾಗಿ ಬಾಳುವನು, ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗಿರುವನು, ಕೀರ್ತಿಯಿಂದಲೂ ದೊಡ್ಡವನಾಗಿರುವನು. ಋತುಗಳನ್ನು ನಿಂದಿಸಬಾರದು, ಅದು ವ್ರತವು.

೧೫೮. ಏತದ್[1] ವೈರಾಜಮ್ ಋತುಷು ಪ್ರೋತಂ ವೇದ ವಿರಾಜತಿ ಋತುವತ್, ಯಥಾ ಋತವಃ ಆರ್ತವೈರ್ಧರ್ಮೈಃ ವಿರಾಜನ್ತೇ, ಏವಂ ಪ್ರಜಾದಿಭಿರ್ವಿದ್ವಾನ್ ಇತಿ । ಉಕ್ತಮನ್ಯತ್ । ಋತೂನ್ನ ನಿನ್ದೇತ್ । ತದ್ವ್ರತಮ್ ॥

(ಭಾಷ್ಯಾರ್ಥ)

(ಯಾವನು ಹೀಗೆ) ಈ ವೈರಾಜ(ಸಾಮವು) ಋತುಗಳಲ್ಲಿ ಪ್ರೋತವಾಗಿರುವದೆಂದು ಅರಿತುಕೊಂಡಿರುವನೋ (ಅವನು) ಋತುಗಳಂತೆ ವಿರಾಜಿಸುತ್ತಿರುವನು. ಹೇಗೆ ಋತುಗಳು (ಆಯಾ) ಋತುಧರ್ಮಗಳಿಂದ ವಿರಾಜಿಸುತ್ತಿರುವವೋ ಹಾಗೆಯೇ ಉಪಾಸಕನು ಪ್ರಜಾದಿಗಳಿಂದ (ವಿರಾಜಿಸುತ್ತಿರುವನು) ಎಂದು (ಅರ್ಥ).

ಮಿಕ್ಕದ್ದರ (ಅರ್ಥವ)ನ್ನು (ಹಿಂದೆ) ಹೇಳಿದೆ.

(ಈ ಉಪಾಸಕನು) ಋತುಗಳನ್ನು ನಿಂದಿಸಬಾರದು. ಅದು (ಅವನಿಗೆ) ವ್ರತವು.

1. 'ಸ ಯ ಏವಂ' ಎಂಬ ಮಾತುಗಳು 'ಏತದ್' ಎಂಬುದರ ಹಿಂದೆ ಇದ್ದು ಬಿಟ್ಟು ಹೋಗಿವೆ, ಅಥವಾ ಅವನ್ನು ಸೇರಿಸಿಕೊಳ್ಳಬೇಕೆಂದು ಭಾಷ್ಯಕಾರರೇ ಬಿಟ್ಟುಬಿಟ್ಟಿದ್ದಾರೆ.

ಎರಡನೆಯ ಅಧ್ಯಾಯ - ಹದಿನೇಳನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ಶಕ್ವರೀಸಾಮದ ಉಪಾಸನೆ

(ಉಪನಿಷತ್ತು)

ಪೃಥಿವೀ ಹಿಂಕಾರೋಽನ್ತರಿಕ್ಷಂ ಪ್ರಸ್ತಾವೋ ದ್ಯೌರುದ್ಗೀಥೋ ದಿಶಃ ಪ್ರತಿಹಾರಃ ಸಮುದ್ರೋ ನಿಧನಮೇತಾಃ ಶಕ್ವರ್ಯೋ ಲೋಕೇಷು ಪ್ರೋತಾಃ ॥೧॥

೧. ಪೃಥಿವಿಯು ಹಿಂಕಾರವು ; ಅಂತರಿಕ್ಷವು ಪ್ರಸ್ತಾವವು ; ದ್ಯುಲೋಕವು ಉದ್ಗೀಥವು ; ದಿಕ್ಕುಗಳು ಪ್ರತಿಹಾರವು ; ಸಮುದ್ರವು ನಿಧನವು ; ಈ ಶಕ್ವರಿಯು ಲೋಕಗಳಲ್ಲಿ ಪ್ರೋತವಾಗಿದೆ.

ಶಕ್ವರೀಸಾಮದ ಭಕ್ತಿಗಳ ವಿನಿಯೋಗ

(ಭಾಷ್ಯ)

೧೫೯. ಪೃಥಿವೀ ಹಿಂಕಾರ ಇತ್ಯಾದಿ ಪೂರ್ವವತ್ । ಶಕ್ವರ್ಯಃ ಇತಿ ನಿತ್ಯಂ ಬಹುವಚನಂ ರೇವತ್ಯ ಇವ । ಲೋಕೇಷು ಪ್ರೋತಾಃ ॥

(ಭಾಷ್ಯಾರ್ಥ)

ಪೃಥಿವಿಯು ಹಿಂಕಾರವು ಮುಂತಾದದ್ದು ಹಿಂದೆ (೨-೨-೧) ಹೇಳಿದಂತೆ (ತಿಳಿಯತಕ್ಕದ್ದು). ಶಕ್ವರ್ಯಃ ಎಂಬುದು (ಮುಂದಿನ ಖಂಡದಲ್ಲಿರುವ) ರೇವತ್ಯಃ ಎಂಬುದರಂತೆ ನಿತ್ಯಬಹುವಚನವು. (ಶಕ್ವರಿಯು) ಲೋಕಗಳಲ್ಲಿ ಪ್ರೋತ.

ಶಕ್ವರೀಸಾಮೋಪಾಸನೆಗೆ ಫಲ

(ಉಪನಿಷತ್ತು)

ಸ ಯ ಏವಮೇತಾಃ ಶಕ್ವರ್ಯೋ ಲೋಕೇಷು ಪ್ರೋತಾ ವೇದ ಲೋಕೀ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ಲೋಕಾನ್ನ ನಿನ್ದೇತ್ ತದ್ವ್ರತಮ್ ॥೨॥

೨. ಯಾವನು ಹೀಗೆ ಈ ಶಕ್ವರಿಯು ಲೋಕಗಳಲ್ಲಿ ಪ್ರೋತವಾಗಿದೆ ಎಂದು ಅರಿತುಕೊಂಡಿರುವನೋ ಅವನು ಲೋಕಿಯಾಗುವನು, ಆಯುಸ್ಸೆಲ್ಲವನ್ನೂ ಪಡೆದುಕೊಳ್ಳುವನು, ಚೆನ್ನಾಗಿ ಬಾಳುವನು, ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗಿರುವನು, ಕೀರ್ತಿಯಿಂದಲೂ ದೊಡ್ಡವನಾಗಿರುವನು. ಲೋಕಗಳನ್ನು ನಿಂದಿಸಬಾರದು, ಅದು ವ್ರತವು.

(ಭಾಷ್ಯ)

೧೬೦. ಲೋಕೀ ಭವತಿ । ಲೋಕಫಲೇನ ಯುಜ್ಯತ ಇತ್ಯರ್ಥಃ । ಲೋಕಾನ್ ನ ನಿನ್ದೇತ್ । ತದ್ವ್ರತಮ್ ॥

(ಭಾಷ್ಯಾರ್ಥ)

ಲೋಕಿಯಾಗುವನು, ಲೋಕವೆಂಬ ಫಲದಿಂದ ಕೂಡಿಕೊಳ್ಳುವನು ಎಂದರ್ಥ. ಲೋಕಗಳನ್ನು ನಿಂದಿಸಬಾರದು ; ಇದು (ಈ ಉಪಾಸಕನಿಗೆ) ವ್ರತವು.

ಎರಡನೆಯ ಅಧ್ಯಾಯ - ಹದಿನೆಂಟನೆಯ ಖಂಡ

(ಗಾಯತ್ರ್ಯಾದಿಸಾಮಗಳ ಉಪಾಸನೆಗಳು)

ರೇವತೀಸಾಮದ ಉಪಾಸನೆ

(ಉಪನಿಷತ್ತು)

ಅಜಾ ಹಿಂಕಾರೋಽವಯಃ ಪ್ರಸ್ತಾವೋ ಗಾವ ಉದ್ಗೀಥೋಽಶ್ವಾಃ ಪ್ರತಿಹಾರಃ ಪುರುಷೋ ನಿಧನಮೇತಾ ರೇವತ್ಯಃ ಪಶುಷು ಪ್ರೋತಾಃ ॥೧॥

೧. ಆಡುಗಳು ಹಿಂಕಾರವು ; ಕುರಿಗಳು ಪ್ರಸ್ತಾವವು ; ಗೋಗಳು ಉದ್ಗೀಥವು ; ಕುದುರೆಗಳು ಪ್ರತಿಹಾರವು ; ಮನುಷ್ಯನು ನಿಧನವು. ಈ ರೇವತಿಯು ಪಶುಗಳಲ್ಲಿ ಪ್ರೋತವು.

ರೇವತೀಭಕ್ತಿಗಳ ವಿನಿಯೋಗ

(ಭಾಷ್ಯ)

೧೬೧. ಅಜಾ ಹಿಂಕಾರಃ ಇತ್ಯಾದಿ ಪೂರ್ವವತ್ । ಪಶುಷು ಪ್ರೋತಾಃ ॥

(ಭಾಷ್ಯಾರ್ಥ)

ಆಡುಗಳು ಹಿಂಕಾರವು ಮುಂತಾದದ್ದು ಹಿಂದಿನ(೬ನೆಯ ಖಂಡದ)ಂತೆ. (ಈ ರೇವತೀಸಾಮವು) ಪಶುಗಳಲ್ಲಿ[1] ಪ್ರೋತ.

ರೇವತ್ಯುಪಾಸನೆಗೆ ಫಲ

(ಉಪನಿಷತ್ತು)

ಸ ಯ ಏವಮೇತಾ ರೇವತ್ಯಃ ಪಶುಷು ಪ್ರೋತಾ ವೇದ ಪಶುಮಾನ್ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ಪಶೂನ್ನ ನಿನ್ದೇತ್ತದ್ವ್ರತಮ್ ॥೨॥

೨. ಯಾವನು ಹೀಗೆ ಈ ರೇವತಿಯು ಪಶುಗಳಲ್ಲಿ ಪ್ರೋತವೆಂದು ಅರಿತುಕೊಂಡಿರುವನೋ ಅವನು ಪಶುಗಳುಳ್ಳವನಾಗುವನು ; ಎಲ್ಲಾ ಆಯುಸ್ಸನ್ನೂ ಪಡೆದುಕೊಳ್ಳುವನು, ಚೆನ್ನಾಗಿ ಜೀವಿಸಿರುವನು, ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗಿರುವನು, ಕೀರ್ತಿಯಿಂದಲೂ ದೊಡ್ಡವನಾಗಿರುವನು. ಪಶುಗಳನ್ನು ನಿಂದಿಸಬಾರದು ; ಅದು ವ್ರತವು.

೧೬೨. ಪಶೂನ್ ನ ನಿನ್ದೇತ್ । ತದ್ವ್ರತಮ್ ॥

(ಭಾಷ್ಯಾರ್ಥ)

ಪಶುಗಳನ್ನು ನಿಂದಿಸಬಾರದು. ಅದು (ಈ ಉಪಾಸಕನಿಗೆ) ವ್ರತವು.

1. 'ಪಶವೋ ವೈ ರೇವತೀಃ' ಎಂಬ ಶ್ರುತ್ಯಂತರವನ್ನು ಇಲ್ಲಿ ಟೀಕೆಯಲ್ಲಿ ಉದಾಹರಿಸಿದೆ. 'ರೇವತ್ಯಃ' ಎಂಬ ಪಾಠವು ತಾಂ. ಬ್ರಾ. ೧೩-೭-೩ ರಲ್ಲಿದೆ.

ಎರಡನೆಯ ಅಧ್ಯಾಯ - ಹತ್ತೊಂಬತ್ತನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ಯಜ್ಞಾಯಜ್ಞೀಯಸಾಮದ ಉಪಾಸನೆ

(ಉಪನಿಷತ್ತು)

ಲೋಮ ಹಿಂಕಾರಸ್ತ್ವಕ್ಪ್ರಸ್ತಾವೋ ಮಾಗ್ಂಸಮುದ್ಗೀಥೋಽಸ್ಥಿಪ್ರತಿಹಾರೋ ಮಜ್ಜಾ ನಿಧನಮೇತದ್ಯಜ್ಞಾಯಜ್ಞೀಯಮಙ್ಗೇಷು ಪ್ರೋತಮ್ ॥೧॥

೧. ಮೈಗೂದಲು ಹಿಂಕಾರವು, ಚರ್ಮವು ಪ್ರಸ್ತಾವವು, ಮಾಂಸವು ಉದ್ಗೀಥವು, ಮೂಳೆಯು ಪ್ರತಿಹಾರವು, ಮಜ್ಜೆಯು ನಿಧನವು. ಈ ಯಜ್ಞಾಯಜ್ಞೀಯವು ಅಂಗಗಳಲ್ಲಿ ಪ್ರೋತವಾಗಿದೆ.

ಯಜ್ಞಾಯಜ್ಞೀಯದ ಭಕ್ತಿಗಳ ವಿನಿಯೋಗ

(ಭಾಷ್ಯ)

೧೬೩. ಲೋಮ ಹಿಂಕಾರಃ । ದೇಹಾವಯವಾನಾಂ ಪ್ರಾಥಮ್ಯಾತ್ । ತ್ವಕ್ ಪ್ರಸ್ತಾವಃ । ಆನನ್ತರ್ಯಾತ್ । ಮಾಂಸಮ್ ಉದ್ಗೀಥಃ । ಶ್ರೈಷ್ಠ್ಯಾತ್ । ಅಸ್ಥಿ ಪ್ರತಿಹಾರಃ । ಪ್ರತಿಹೃತತ್ವಾತ್ । ಮಜ್ಜಾ ನಿಧನಮ್ । ಆನ್ತ್ಯಾತ್ । ಏತದ್ ಯಜ್ಞಾಯಜ್ಞೀಯಂ ನಾಮ ಸಾಮ ದೇಹಾವಯವೇಷು ಪ್ರೋತಮ್ ॥

(ಭಾಷ್ಯಾರ್ಥ)

ಮೈಗೂದಲು ಹಿಂಕಾರವು, ಏಕೆಂದರೆ (ಅದು) ದೇಹದ ಅವಯವಗಳಲ್ಲಿ ಮೊದಲನೆಯದು. ಚರ್ಮವು ಪ್ರಸ್ತಾವವು ; ಏಕೆಂದರೆ ಅದು (ಆ) ಬಳಿಕ (ಇರುತ್ತದೆ). ಮಾಂಸವು ಉದ್ಗೀಥವು ; ಏಕೆಂದರೆ ಶ್ರೇಷ್ಠವಾಗಿರುತ್ತದೆ. ಮೂಳೆಯು ಪ್ರತಿಹಾರವು, ಏಕೆಂದರೆ ಪ್ರತಿಹೃತವಾಗಿರುತ್ತದೆ.[1] ಮಜ್ಜೆಯು ನಿಧನವು ; ಏಕೆಂದರೆ (ಇದು) ಕೊನೆಯಲ್ಲಿದೆ.

ಈ ಯಜ್ಞಾಯಜ್ಞೀಯವೆಂಬ ಸಾಮವು ದೇಹದ ಅವಯವಗಳಲ್ಲಿ ಪ್ರೋತವು.

1. ಒಳಕ್ಕೆ ಸರಿದುಕೊಂಡಿದೆ ಎಂದರ್ಥವೆ ? ಟೀಕೆಯಲ್ಲಿ ಏನೂ ಹೇಳಿಲ್ಲ.

ಯಜ್ಞಾಯಜ್ಞೀಯೋಪಾಸನೆಯ ಫಲ

(ಉಪನಿಷತ್ತು)

ಸ ಯ ಏವಮೇತದ್ಯಜ್ಞಾಯಜ್ಞೀಯಮಙ್ಗೇಷು ಪ್ರೋತಂ ವೇದಾಙ್ಗೀ ಭವತಿ ನಾಙ್ಗೇನ ವಿಹೂರ್ಛತಿ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ಸಂವತ್ಸರಂ ಮಜ್ಞೋ ನಾಶ್ನೀಯಾತ್ ತದ್ವ್ರತಂ ಮಜ್ಞೋ ನಾಶ್ನೀಯಾದಿತಿ ವಾ ॥೨॥

೨. ಯಾವನು ಹೀಗೆ ಈ ಯಜ್ಞಾಯಜ್ಞೀಯವು ಅಂಗಗಳಲ್ಲಿ ಪ್ರೋತವಾಗಿರುವದೆಂದು ಅರಿತುಕೊಂಡಿರುವನೋ ಅವನು ಅಂಗಿಯಾಗುವನು ; ಅಂಗದಲ್ಲಿ ಕೊರತೆಯುಳ್ಳವನಾಗುವದಿಲ್ಲ. ಆಯುಸ್ಸನ್ನೆಲ್ಲ ಪಡೆದುಕೊಳ್ಳುವನು, ಚೆನ್ನಾಗಿ ಬಾಳುವನು. ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗಿರುವನು, ಕೀರ್ತಿಯಿಂದಲೂ ದೊಡ್ಡವನಾಗಿರುವನು. ವರ್ಷದವರೆಗೆ ಮಜ್ಜೆಗಳನ್ನು ತಿನ್ನಬಾರದು, ಅಥವಾ ಮಜ್ಜೆಗಳನ್ನು ತಿನ್ನಲೇಬಾರದು.

೧೬೪. ಅಙ್ಗೀ ಭವತಿ ಸಮಗ್ರಾಙ್ಗೋ ಭವತಿ ಇತ್ಯರ್ಥಃ । ನಾಙ್ಗೇನ ಹಸ್ತಪಾದಾದಿನಾ ವಿಹೂರ್ಛತಿ ನ ಕುಟಿಲೀಭವತಿ ಪಙ್ಗುಃ ಕುಣೇ (?) ವಾ ಇತ್ಯರ್ಥಃ । ಸಂವತ್ಸರಂ ಸಂವತ್ಸರಮಾತ್ರಂ ಮಜ್ಞೋ ಮಾಂಸಾನಿ ನಾಶ್ನೀಯಾತ್ ನ ಭಕ್ಷಯೇತ್ । ಬಹುವಚನಂ ಮತ್ಸ್ಯೇಪಲಕ್ಷಣಾರ್ಥಮ್ । ಮಜ್ಞೋ ನಾಶ್ನೀಯಾತ್ ಸರ್ವದೈವ ನಾಶ್ನೀಯಾತ್ ಇತಿ ವಾ । ತದ್ ವ್ರತಮ್ ॥

(ಭಾಷ್ಯಾರ್ಥ)

ಅಂಗಿಯಾಗಿರುತ್ತಾನೆ, ಎಂದರೆ ಸಮಗ್ರವಾದ ಅಂಗಗಳುಳ್ಳವನಾಗಿರುತ್ತಾನೆ ಎಂದರ್ಥ. ಕೈಕಾಲು- ಮುಂತಾದ ಅಂಗಗಳ ಕೊರತೆಯುಳ್ಳವನಾಗಿರುವದಿಲ್ಲ, ವಕ್ರನಾಗಿರುವದಿಲ್ಲ ; ಹೆಳವನಾಗಲಿ ಮೋಟನಾಗಲಿ[1] ಆಗಿರುವದಿಲ್ಲ ಎಂದರ್ಥ.

---

1. ಭಾಷ್ಯದಲ್ಲಿ 'ಕುಣೇ' ಎಂದಿದೆ ; ಆದರೆ ಕುಣ, ಕೂಣ ಎಂಬ ಎರಡು ಶಬ್ದಗಳು ಮಾತ್ರ ಸಂಸ್ಕೃತದಲ್ಲಿ ಮೋಟುಗೈಯನಿಗೆ ಇವೆ. ಭಾಷ್ಯದಲ್ಲಿರುವ ರೂಪವೂ ಇದೆಯೆ, ಅಥವಾ ಲೇಖಕ ಪ್ರಮಾದವೆ ?- ಎಂಬುದು ವಿಚಾರಣೀಯ. ಟೀಕೆಯಲ್ಲಿ ಇದಕ್ಕೆ ಶಶ್ರುರಹಿತಃ ಎಂಬರ್ಥವಿದೆ !

ವರ್ಷದವರೆಗೆ (ಮಜ್ಞಃ = ಮಾಂಸಾನಿ) ಮಜ್ಜೆಗಳನ್ನು ಎಂದರೆ ಮಾಂಸಗಳನ್ನು[1] ತಿನ್ನಬಾರದು, ಭಕ್ಷಿಸಬಾರದು. (ಇಲ್ಲಿ ಮಜ್ಞಃ ಎಂದು) ಬಹುವಚನವು ಮತ್ಸ್ಯವನ್ನು (ತಿನ್ನಬಾರದು ಎಂದು) ಉಪಲಕ್ಷಣಕ್ಕಾಗಿ (ಬಂದಿದೆ). ಅಥವಾ ಯಾವಾಗಲೂ ಮಾಂಸಗಳನ್ನು ತಿನ್ನಲೇಬಾರದು ಎಂದಾದರೂ (ಹೇಳಬಹುದು). ಇದು (ಉಪಾಸಕನಿಗೆ) ವ್ರತವು.

ಎರಡನೆಯ ಅಧ್ಯಾಯ - ಇಪ್ಪತ್ತನೆಯ ಖಂಡ

(ಗಾಯತ್ರಾದಿಸಾಮಗಳ ಉಪಾಸನೆಗಳು)

ರಾಜನಸಾಮದ ಉಪಾಸನೆ

(ಉಪನಿಷತ್ತು)

ಅಗ್ನಿರ್ಹಿಂಕಾರೋ ವಾಯುಃ ಪ್ರಸ್ತಾವ ಆದಿತ್ಯ ಉದ್ಗೀಥೋ ನಕ್ಷತ್ರಾಣಿ ಪ್ರತಿಹಾರಶ್ಚನ್ದ್ರಮಾ ನಿಧನಮೇತದ್ರಾಜನಂ ದೇವತಾಸು ಪ್ರೋತಮ್ ॥೧॥

೧. ಅಗ್ನಿಯು ಹಿಂಕಾರವು ; ವಾಯು ಪ್ರಸ್ತಾವವು ; ಆದಿತ್ಯನು ಉದ್ಗೀಥವು ; ನಕ್ಷತ್ರಗಳು ಪ್ರತಿಹಾರವು ; ಚಂದ್ರನು ನಿಧನವು. ಈ ರಾಜನವು ದೇವತೆಗಳಲ್ಲಿ ಪ್ರೋತವು.

ರಾಜನಭಕ್ತಿಗಳ ವಿನಿಯೋಗ

(ಭಾಷ್ಯ)

೧ಟಿಖಿ. ಅಗ್ನಿರ್ಹಿಂಕಾರಃ । ಪ್ರಥಮಸ್ಥಾನತ್ವಾತ್ । ವಾಯುಃ ಪ್ರಸ್ತಾವಃ । ಆನನ್ತರ್ಯಸಾಮಾನ್ಯಾತ್ । ಆದಿತ್ಯ ಉದ್ಗೀಥಃ । ಶ್ರೈಷ್ಠ್ಯಾತ್ । ನಕ್ಷತ್ರಾಣಿ ಪ್ರತಿಹಾರಃ ।

1. ಮಜ್ಞ್‌ಶಬ್ದಕ್ಕೆ ದ್ವಿತೀಯಾ ಬಹುವಚನವು'ಮಜ್ಞಃ' ಎಂದಾಗುತ್ತದೆ. ಮಜ್ಜೆ ಎಂಬಿದೇ ಈ ಶಬ್ದದ ಅರ್ಥವಿರುವಲ್ಲಿ ಮಾಂಸಗಳು ಎಂದು ಭಾಷ್ಯದಲ್ಲಿ ಏತಕ್ಕೆ ಅರ್ಥವನ್ನು ಕೊಟ್ಟಿದೆ ಎಂಬುದು ತಿಳಿಯಲಿಲ್ಲ.

ಪ್ರತಿಹೃತತ್ವಾತ್ । ಚನ್ದ್ರಮಾ ನಿಧನಮ್ । ಕರ್ಮಿಣಾಂ ತನ್ನಿಧನಾತ್ । ಏತದ್ ರಾಜನಂ ದೇವತಾಸು ಪ್ರೋತಮ್ । ದೇವತಾನಾಂ ದೀಪ್ತಿಮತ್ತ್ವಾತ್ ॥

(ಭಾಷ್ಯಾರ್ಥ)

ಅಗ್ನಿಯು ಹಿಂಕಾರವು ; ಏಕೆಂದರೆ (ಅವನು) ಮೊದಲನೆಯ ಸ್ಥಾನದವನು.[1] ವಾಯುವು ಪ್ರಸ್ತಾವವು ; ಏಕೆಂದರೆ ಆನಂತರ್ಯವು (ಎರಡಕ್ಕೂ) ಹೋಲಿಕೆ. ಆದಿತ್ಯನು ಉದ್ಗೀಥವು ; ಏಕೆಂದರೆ ಶ್ರೇಷ್ಠನಾಗಿರುತ್ತಾನೆ. ನಕ್ಷತ್ರಗಳು ಪ್ರತಿಹಾರವು ; ಏಕೆಂದರೆ ಪ್ರತಿಹೃತವಾಗಿವೆ[2]. ಚಂದ್ರನು ನಿಧನವು ; ಏಕೆಂದರೆ ಕರ್ಮಿಗಳು ಅವನಲ್ಲಿಯೇ ನಿಲ್ಲುತ್ತಾರೆ.

ಈ ರಾಜನ (ಸಾಮವು) ದೇವತೆಗಳಲ್ಲಿ ಪ್ರೋತವು ; ಏಕೆಂದರೆ ದೇವತೆಗಳು ಪ್ರಕಾಶಯುಕ್ತರಾಗಿರುತ್ತಾರೆ[3].

ರಾಜನಸಾಮೋಪಾಸನೆಗೆ ಫಲ

(ಉಪನಿಷತ್ತು)

ಸ ಯ ಏವಮೇತದ್ರಾಜನಂ ದೇವತಾಸು ಪ್ರೋತಂ ವೇದೈತಾಸಾಮೇವ ದೇವತಾನಾಗ್ಂ ಸಲೋಕತಾಗ್ಂ ಸಾರ್ಷ್ಟಿತಾಗ್ಂ ಸಾಯುಜ್ಯಂ ಗಚ್ಛತಿ ಸರ್ವಮಾಯುರೇತಿ ಜ್ಯೋಗ್ ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ಬ್ರಾಹ್ಮಣಾನ್ನ ನಿನ್ದೇತ್ತದ್ವ್ರತಮ್ ॥೨॥

೨. ಯಾವನು ಹೀಗೆ ಈ ರಾಜನವು ದೇವತೆಗಳಲ್ಲಿ ಪ್ರೋತವೆಂದು ಅರಿತುಕೊಂಡಿರುವನೋ ಅವನು ಇದೇ. ದೇವತೆಗಳ ಸಲೋಕತೆಯನ್ನು, ಸಾರ್ಷ್ಟಿತ್ವವನ್ನು (ಅಥವಾ) ಸಾಯುಜ್ಯವನ್ನು ಪಡೆದುಕೊಳ್ಳುವನು ; ಎಲ್ಲಾ ಆಯುಸ್ಸನ್ನೂ ಪಡೆದುಕೊಳ್ಳುವನು, ಚೆನ್ನಾಗಿ ಜೀವಿಸುವನು, ಪ್ರಜೆಯಿಂದಲೂ ಪಶುಗಳಿಂದಲೂ ದೊಡ್ಡವನಾಗಿರುವನು, ಕೀರ್ತಿಯಿಂದಲೂ ದೊಡ್ಡವನಾಗಿರುವನು. ಬ್ರಾಹ್ಮಣರನ್ನು ನಿಂದಿಸಬಾರದು ; ಅದು ವ್ರತವು.

---

1. ದೇವತೆಗಳಲ್ಲಿ ಅಗ್ನಿಯು ಮೊದಲಿನದು, ವಿಷ್ಣುವು ಕೊನೆಯವನು- ಎಂದು ಬ್ರಾಹ್ಮಣವಾದ.
2. ಅವೆಲ್ಲವೂ ಆಕಾಶದಲ್ಲಿ ಒಟ್ಟಾಗಿ ಕಾಣಿಸುತ್ತವೆ.
3. ರಾಜನ ಎಂಬ ಶಬ್ದಕ್ಕೆ ಪ್ರಕಾಶವೆಂದೇ ಅರ್ಥ.

ರಾಜನೋಪಾಸನೆಗೆ ಫಲ

(ಭಾಷ್ಯ)

೧೬೬. ವಿದ್ವತ್ಫಲಮಾಹ । ಏತಾಸಾಮೇವ ಅಗ್ನ್ಯಾದೀನಾಂ ದೇವತಾನಾಂ ಸಲೋಕತಾಂ ಸಮಾನಲೋಕತಾಂ ಸಾರ್ಷ್ಟಿತಾಂ ಸಮಾನರ್ದ್ಧಿತ್ವಂ ಸಾಯುಜ್ಯಂ ಸಯುಗ್ಭಾವಮ್ ಏಕದೇಹದೇಹಿತ್ವಮ್ ಇತ್ಯೇತತ್ । ವಾ ಶಬ್ದೋಽತ್ರ ಲುಪ್ತೋ ದ್ರಷ್ಟವ್ಯಃ । ಸಲೋಕತಾಂ ವಾ ಇತ್ಯಾದಿ । ಭಾವನಾವಿಶೇಷತಃ ಫಲ ವಿಶೇಷೋಪಪತ್ತೇಃ । ಗಚ್ಛತಿ ಪ್ರಾಪ್ನೋತಿ । ಸಮುಚ್ಚಯಾನುಪಪತ್ತೇಶ್ಚ । ಬ್ರಾಹ್ಮಣಾನ್ ನ ನಿನ್ದೇತ್ ತದ್ ವ್ರತಮ್ । ''ಏತೇ ವೈ ದೇವಾಃ ಪ್ರತ್ಯಕ್ಷಂ ಯದ್ ಬ್ರಾಹ್ಮಣಾಃ'' (ತೈ.ಸಂ. ೧-೭-೩-೧) ಇತಿ ಶ್ರುತೇಃ ಬ್ರಾಹ್ಮಣನಿನ್ದಾ ದೇವತಾನಿನ್ದೈವ ಇತಿ ॥

(ಭಾಷ್ಯಾರ್ಥ)

(ಹೀಗೆಂದು) ಉಪಾಸನೆಮಾಡಿದವನಿಗೆ ಫಲವನ್ನು (ಶ್ರುತಿ) ಹೇಳುತ್ತದೆ. ಇದೇ ಅಗ್ನ್ಯಾದಿದೇವತೆಗಳ ಸಲೋಕತೆಯನ್ನು ಎಂದರೆ ಸಮಾನವಾದ (ಒಂದೇ ಆಗಿರುವ) ಲೋಕವನ್ನು ; ಸಾರ್ಷ್ಟಿತ್ವವನ್ನು ಎಂದರೆ ಸಮಾನವಾದ ಸಮೃದ್ಧಿಯನ್ನು ; ಸಾಯುಜ್ಯವನ್ನು ಎಂದರೆ ಸೇರಿಕೊಂಡಿರುವಿಕೆಯನ್ನು, ಒಂದೇ ದೇಹಕ್ಕೆ (ಇಬ್ಬರೂ) ದೇಹಿಯಾಗಿರುವದನ್ನು ಎಂದರ್ಥ. ಇಲ್ಲಿ 'ಸಲೋಕತೆಯನ್ನಾಗಲಿ' ಎಂದು ಮುಂತಾಗಿ 'ವಾ' (ಆಗಲಿ) ಎಂಬ ಶಬ್ದವು ಲುಪ್ತವಾಗಿದೆಯೆಂದು ಇಟ್ಟುಕೊಳ್ಳಬೇಕು. ಏಕೆಂದರೆ ಬೇರೆಬೇರೆಯ ಭಾವನೆಯಿಂದ (ಈ) ಬೇರೆಬೇರೆಯ ಫಲಗಳು ಉಂಟಾಗಬಹುದಾಗಿರುತ್ತದೆ. (ಆದ್ದರಿಂದ ಸಾಲೋಕ್ಯವನ್ನೋ ಸಾರ್ಷ್ಟಿತ್ವವನ್ನೋ ಸಾಯುಜ್ಯವನ್ನೋ) ಪಡೆದುಕೊಳ್ಳುವನು, ಹೊಂದುವನು (ಎಂದರ್ಥ). (ಈ ಎಲ್ಲಾ ಫಲಗಳೂ ಒಬ್ಬನಲ್ಲಿಯೇ) ಸೇರಿರುವದು ಆಗಲಾರದಾದ್ದರಿಂದಲೂ[1] (ಹೀಗೆ ಅಧ್ಯಾಹಾರಮಾಡಿಕೊಳ್ಳಬೇಕು).

'(ಈ) ಬ್ರಾಹ್ಮಣರಿದಾರಲ್ಲ, ಇವರೇ ಪ್ರತ್ಯಕ್ಷದೇವರುಗಳು' (ತೈ. ಸಂ. ೧-೭-೩-೧) ಎಂದು ಶ್ರುತಿಯಿರುವದರಿಂದ ಬ್ರಾಹ್ಮಣನಿಂದೆಯು ದೇವತೆನಿಂದೆಯೇ ಆಗಿರುವದರಿಂದ ; ಬ್ರಾಹ್ಮಣರನ್ನು ನಿಂದೆಮಾಡಬಾರದು ; ಇದು(ರಾಜನೋಪಾಸನೆಗೆ) ವ್ರತವು.

---

1. ಒಬ್ಬನೇ ಸಾಲೋಕ್ಯವನ್ನೂ ಸಾರ್ಷ್ಟಿತ್ವವನ್ನೂ ಸಾಯುಜ್ಯವನ್ನೂ ಏಕಕಾಲಕ್ಕೆ ಪಡೆದಿರುತ್ತಾನೆಂಬುದು ಅಸಾಧ್ಯ. ಆದರೆ ಅವರವರ ಭಾವನೆಗೆ ತಕ್ಕಂತೆ ಅವರವರಿಗೆ ಸಾಲೋಕ್ಯಾದಿಗಳು ಆಗುವವೆಂದು ಫಲವಿಕಲ್ಪವನ್ನು ಒಪ್ಪಿದರೆ ಯಾವ ದೋಷವೂ ಇರುವದಿಲ್ಲ.

ಎರಡನೆಯ ಅಧ್ಯಾಯ - ಇಪ್ಪತ್ತೊಂದನೆಯ ಖಂಡ

(ಸಾಮಸಮುದಾಯದ ಉಪಾಸನೆ)

ಸಾಮಸಾಮಾನ್ಯದ ಉಪಾಸನೆ

(ಉಪನಿಷತ್ತು)

ತ್ರಯೀವಿದ್ಯಾ ಹಿಂಕಾರಸ್ತ್ರಯ ಇಮೇ ಲೋಕಾಃ ಸ ಪ್ರಸ್ತಾವೋಽಗ್ನಿರ್ವಾಯುರಾದಿತ್ಯಃ ಸ ಉದ್ಗೀಥೋ ನಕ್ಷತ್ರಾಣಿ ವಯಾಗ್ಂಸಿ ಮರೀಚಯಃ ಸ ಪ್ರತಿಹಾರಃ ಸರ್ಪಾ ಗನ್ಧರ್ವಾ ಪಿತರಸ್ತನ್ನಿಧನಮೇತತ್ ಸಾಮ ಸರ್ವಸ್ಮಿನ್ ಪ್ರೋತಮ್ ॥೧॥

೧. ತ್ರಯೀವಿದ್ಯೆಯು ಹಿಂಕಾರವು ; ಈ ಮೂರು ಲೋಕಗಳಿವೆಯಲ್ಲ, ಅದು ಪ್ರಸ್ತಾವವು ; ಅಗ್ನಿ, ವಾಯು, ಆದಿತ್ಯ (ಎಂಬ ದೇವತೆಗಳಿದಾರಲ್ಲ), ಅದೇ ಉದ್ಗೀಥವು ; ನಕ್ಷತ್ರಗಳು, ಪಕ್ಷಿಗಳು, ಕಿರಣಗಳು (ಇವೆಯಲ್ಲ), ಅದು ಪ್ರತಿಹಾರವು ; ಸರ್ಪಗಳು, ಗಂಧರ್ವರು, ಪಿತೃಗಳು (ಇರುವರಲ್ಲ), ಅದು ನಿಧನವು. ಈ ಸಾಮವು ಎಲ್ಲದರಲ್ಲಿಯೂ ಪ್ರೋತವಾಗಿದೆ.

ಸಾಮಸಾಮಾನ್ಯದ ಹಿಂಕಾರಾದಿಗಳಲ್ಲಿ ತ್ರಯೀವಿದ್ಯಾದಿದೃಷ್ಟಿ

(ಭಾಷ್ಯ)

೧ಟ೭. ತ್ರಯೀವಿದ್ಯಾ ಹಿಂಕಾರಃ । ಅಗ್ನ್ಯಾದಿಸಾಮ್ನಃ ಆನನ್ತರ್ಯಂ ತ್ರಯೀವಿದ್ಯಾಯಾಃ ಅಗ್ನ್ಯಾದಿಕಾರ್ಯತ್ವಶ್ರುತೇಃ । ಹಿಂಕಾರಃ ಪ್ರಾಥಮ್ಯಾತ್ ಸರ್ವಕರ್ತವ್ಯಾನಾಮ್ । ತ್ರಯ ಇಮೇ ಲೋಕಾಃ ತತ್ಕಾರ್ಯತ್ವಾತ್ ಆನನ್ತರಾ ಇತಿ ಪ್ರಸ್ತಾವಃ । ಅಗ್ನ್ಯಾದೀನಾಮ್ ಉದ್ಗೀಥತ್ವಂ ಶ್ರೈಷ್ಠ್ಯಾತ್ । ನಕ್ಷತ್ರಾದೀನಾಂ ಪ್ರತಿಹೃತತ್ವಾತ್ ಪ್ರತಿಹಾರತ್ವಮ್ । ಸರ್ಪಾದೀನಾಂ ಧಕಾರಸಾಮಾನ್ಯಾತ್ ನಿಧನತ್ವಮ್ । ಏತತ್ ಸಾಮ ನಾಮವಿಶೇಷಾಭಾವಾತ್ ಸಾಮಸಮುದಾಯಃ ಸಾಮಶಬ್ದಃ ಸರ್ವಸ್ಮಿನ್ ಪ್ರೋತಮ್ । ತ್ರಯೀವಿದ್ಯಾದಿ ಹಿ ಸರ್ವಮ್ । ತ್ರಯೀವಿದ್ಯಾದಿದೃಷ್ಟ್ಯಾ ಹಿಂಕಾರಾದಿಸಾಮಭಕ್ತಯ ಉಪಾಸ್ಯಾಃ । ಅತೀತೇಷ್ವಪಿ ಸಾಮೋಪಾಸನೇಷು ಯೇಷು ಯೇಷು ಪ್ರೋತಂ ಯದ್ಯತ್ ಸಾಮ ತದ್ದೃಷ್ಟ್ಯಾ

ತದುಪಾಸ್ಯಮ್ ಇತಿ । ಕರ್ಮಾಙ್ಗಾನಾಮ್ ದೃಷ್ಟಿವಿಶೇಷೇಣ ಆಜ್ಯಸ್ಯೇವ ಸಂಸ್ಕಾರ್ಯತ್ವಾತ್ ॥

(ಭಾಷ್ಯಾರ್ಥ)

'ತ್ರಯೀವಿದ್ಯೈಯೇ ಹಿಂಕಾರವು'. ಅಗ್ನ್ಯಾದಿ (ದೃಷ್ಟಿಯ) ಸಾಮವಾದ ಬಳಿಕ ತ್ರಯೀವಿದ್ಯೆಯು ಅಗ್ನ್ಯಾದಿಗಳ ಕಾರ್ಯವೆಂದು ಶ್ರುತಿಯಿರುವದರಿಂದ,[1] (ತ್ರಯೀವಿದ್ಯೆಯು) ಹಿಂಕಾರವು ; ಏಕೆಂದರೆ ಎಲ್ಲಾ ಕರ್ಮಗಳಿಗೂ ಅದೇ ಮೊದಲನೆಯದು, ಈ ಮೂರು ಲೋಕಗಳು (ವಿದ್ಯೆಯ) ಕಾರ್ಯವಾಗಿರುವದರಿಂದ[2] ಆಮೇಲೆ (ಆಗಿರುವ)ನಾದ್ದರಿಂದ ಪ್ರಸ್ತಾವವು. ಅಗ್ನಿಯೇ ಮುಂತಾದವರು ಶ್ರೇಷ್ಠರಾಗಿರುವದರಿಂದ ಉದ್ಗೀಥವು. ನಕ್ಷತ್ರಾದಿಗಳು ಪ್ರತಿಹೃತವಾಗಿರುವದರಿಂದ[3] ಪ್ರತಿಹಾರವು. ಸರ್ಪಾದಿಗಳಲ್ಲಿ ಧಕಾರಸಾಮಾನ್ಯವಿರುವದರಿಂದ (ಅವು) ನಿಧನವು.

ಈ ಸಾಮವು, ಗೊತ್ತಾದ ಹೆಸರಿಲ್ಲದ್ದರಿಂದ ಸಾಮಶಬ್ದವಾಚ್ಯವಾದ ಸಾಮಸಮುದಾಯವು, ಎಲ್ಲದರಲ್ಲಿಯೂ ಪ್ರೋತವಾಗಿದೆ. ತ್ರಯೀವಿದ್ಯೆಯೇ ಮುಂತಾದದ್ದೇ ಅಲ್ಲವೆ, ಸರ್ವವು[4] ?

ತ್ರಯೀವಿದ್ಯೆಯೇ ಮುಂತಾದ ದೃಷ್ಟಿಯಿಂದ ಹಿಂಕಾರವೇ ಮುಂತಾದ ಸಾಮಭಕ್ತಿಗಳನ್ನು ಉಪಾಸನೆಮಾಡಬೇಕು. ಹಿಂದಿನ ಸಾಮೋಪಾಸನೆಗಳಲ್ಲಿಯೂ ಯಾವಯಾವ ಸಾಮವು ಯಾವಯಾವ (ವಸ್ತು)ಗಳಲ್ಲಿ ಪ್ರೋತವಾಗಿದೆಯೋ ಆಯಾ ದೃಷ್ಟಿಯಿಂದ ಅದನ್ನು ಉಪಾಸನೆಮಾಡಬೇಕು. ಏಕೆಂದರೆ ಆಜ್ಯವನ್ನು

---

1. ಅಗ್ನಿಯಿಂದ ಋಗ್ವೇದವೂ ವಾಯುವಿನಿಂದ ಯಜುರ್ವೇದವೂ ಆದಿತ್ಯನಿಂದ ಸಾಮವೇದವೂ ಉಂಟಾದವೆಂದು (ಐ. ಬ್ರಾ. ೨೫-೬) ಶ್ರುತಿಯಿದೆ ; ಮುಂದೆ ೪-೧೭-೨ ರಲ್ಲಿಯೂ ಹೀಗೆಂದಿದೆ.
2. ತ್ರಯೀವಿದ್ಯೆಯ ಬಲದಿಂದ ಮಾಡುವ ಕರ್ಮದಿಂದಲೇ ಪಡೆದುಕೊಳ್ಳತಕ್ಕವಾಗಿರುವದರಿಂದ.
3. ಒಟ್ಟಾಗಿರುವದರಿಂದ.
4. ಕರ್ಮಸಾಮಾನ್ಯವೂ ಅದಕ್ಕೆ ಬೇಕಾದ ಜ್ಞಾನವೂ ಅದರ ಫಲವೂ ಸರ್ವಶಬ್ದವಾಚ್ಯವಾಗಿದೆಯಾದರೂ ಇಲ್ಲಿ ವೈದಿಕಕರ್ಮಾದಿಗಳನ್ನು ಮಾತ್ರ ಸರ್ವವೆಂದಿದೆ. ಏಕೆಂದರೆ ಶಾಸ್ತ್ರವು ಪುಣ್ಯಕರ್ಮದಲ್ಲಿ ಮಾತ್ರವೇ ಆದರವುಳ್ಳದ್ದಾಗಿರುತ್ತದೆ. ಆದ್ದರಿಂದ ಸಾಮವನ್ನು ಈ ಸರ್ವದೃಷ್ಟಿಯಿಂದ ಉಪಾಸನೆಮಾಡಬೇಕು ಎಂದು ಅಭಿಪ್ರಾಯ.

(ಹೇಗೆ) ದೃಷ್ಟಿವಿಶೇಷದಿಂದ (ಸಂಸ್ಕಾರಮಾಡಿಕೊಳ್ಳಬೇಕಾಗಿರುವದೋ) ಹಾಗೆ ಕರ್ಮಾಂಗಗಳನ್ನು (ಈ ದೃಷ್ಟಿಗಳಿಂದ) ಸಂಸ್ಕಾರಮಾಡಿಕೊಳ್ಳಬೇಕಾಗಿದೆ[1].

ಸರ್ವಸಾಮೋಪಾಸನೆಗೆ ಫಲ

(ಉಪನಿಷತ್ತು)

ಸ ಯ ಏವಮೇತತ್ ಸಾಮ ಸರ್ವಸ್ಮಿನ್ ಪ್ರೋತಂ ವೇದ ಸರ್ವಗ್ಂ ಹ ಭವತಿ ॥೨॥

೨. ಯಾವನು ಈ ಸಾಮವು ಸರ್ವದಲ್ಲಿ ಪ್ರೋತವೆಂದು ಅರಿತು ಕೊಂಡಿರುವನೋ ಅವನು ಸರ್ವವೂ ಆಗುತ್ತಾನೆ.

ಸರ್ವಸಾಮೋಪಾಸನೆಯಿಂದ ಸರ್ವೈಶ್ವರ್ಯ

(ಭಾಷ್ಯ)

೧೬೮. ಸರ್ವವಿಷಯಸಾಮವಿದಃ ಫಲಮ್ । ಸರ್ವಂ ಹ ಭವತಿ ಸರ್ವೇಶ್ವರೋ ಭವತಿ ಇತ್ಯರ್ಥಃ। ನಿರುಪಚರಿತಸರ್ವಭಾವೇ ಹಿ ದಿಕ್ಷ್ವೇಭ್ಯೋ ಬಲಿಪ್ರಾಪ್ತ್ಯನುಪಪತ್ತಿಃ ॥

(ಭಾಷ್ಯಾರ್ಥ)

ಸರ್ವವಿಷಯಸಾಮವನ್ನು ಅರಿತುಕೊಂಡಿರುವವನಿಗೆ ಫಲವನ್ನು (ಶ್ರುತಿ) ಹೇಳುತ್ತದೆ. 'ಸರ್ವವೂ ಆಗುತ್ತಾನೆ' ಎಂದರೆ ಸರ್ವೇಶ್ವರನಾಗುತ್ತಾನೆ ಎಂದರ್ಥ. ನಿರುಪಚರಿತವಾಗಿ (ಮುಖ್ಯಾರ್ಥದಲ್ಲಿಯೇ) ಸರ್ವಭಾವವನ್ನು (ಪಡೆಯುತ್ತಾನೆ) ಎಂದಾದರೆ (೪ನೆಯ ಕಂಡಿಕೆಯಲ್ಲಿ ಹೇಳಿರುವಂತೆ) ದಿಕ್ಕುಗಳಲ್ಲಿರುವದರಿಂದ ಬಲಿ ಪ್ರಾಪ್ತಿಯಾಗುವದೆಂಬುದು ಹೊಂದಲಾರದಷ್ಟೆ ?[2]

---

1. ಆಜ್ಯವನ್ನು ಪತ್ನಿಯು ನೋಡುವದರಿಂದ ಆದಕ್ಕೆ ಸಂಸ್ಕಾರವಾಗುತ್ತದೆ ಎಂದು ಶ್ರುತಿಯಲ್ಲಿದೆ. ಇದರಂತೆ ಇಲ್ಲಿಯೂ ಸಾಮಗಳೂ ಸಾಮವಿಶೇಷಗಳೂ ಸಾಮಾವಯವಗಳೂ ಕರ್ಮಾಂಗವಾಗಿರುವದರಿಂದ ಆಯಾ ದೃಷ್ಟಿರೂಪವಾದ ಉಪಾಸನೆಯಿಂದ ಅವು ಸಂಸ್ಕೃತವಾಗುತ್ತವೆ. ಇದರಿಂದ ಆಯಾ ಕರ್ಮವು ಸಮೃದ್ಧವಾಗುತ್ತದೆ ; ಪಂಚವಿಧಸಾಮವೇ ಮುಂತಾದ ಉಪಾಸನೆಗಳು ಸ್ವತಂತ್ರವಾಗಿಯೇ ಫಲವನ್ನು ಕೊಡತಕ್ಕವಾದರೂ ಆಯಾ ಕರ್ಮಕ್ಕೆ ಅಧಿಕಾರಿಗಳಾದವರೇ ಅವಕ್ಕೂ ಅಧಿಕಾರಿಗಳಾದ್ದರಿಂದ ಅಲ್ಲಿಯೂ ಆಯಾ ಕರ್ಮದ ಅಪೂರ್ವಕ್ಕೆ ಬೇಕಾದ ಅಂಗವಾಗಿರುವದರಿಂದಲೇ ಫಲವುಂಟಾಗುತ್ತದೆ - ಎಂದರ್ಥ. ಸೂ. ಭಾ. ೪-೧-೬ ಭಾ.ಭಾ. ೫೧೭.

2. ನಿಜವಾದ ಸರ್ವಭಾವವೇ ಆದರೆ ದಿಕ್ಕುಗಳಲ್ಲಿರುವವರೂ ತಾನೇ ಆಗುತ್ತಾನಾದ್ದರಿಂದ ಅವರಿಂದ ಬಲಿಯನ್ನು ಕೊಳ್ಳುವದೂ ಆಗಲಾರದು.

(ಉಪನಿಷತ್ತು)

ತದೇಷ ಶ್ಲೋಕೋ ಯಾನಿ ಪಞ್ಚಧಾ ತ್ರೀಣಿ ತ್ರೀಣಿ ತೇಭ್ಯೋ ನ ಜ್ಯಾಯಃ ಪರಮನ್ಯದಸ್ತಿ ॥೩॥

೩. ಇಲ್ಲಿ ಈ ಶ್ಲೋಕವಿರುತ್ತದೆ. ಪಂಚವಿಧವಾಗಿರುವ ಮೂರು ಮೂರು ಇವೆಯಲ್ಲ, ಅವಕ್ಕಿಂತ ಹೆಚ್ಚಿನದು ಮತ್ತೊಂದಿಲ್ಲ.

ತ್ರಯೀವಿದ್ಯಾದಿಗಳಲ್ಲಿ ಎಲ್ಲವೂ ಅಡಕ

(ಭಾಷ್ಯ)

೧೬೯. ತತ್ ಏತಸ್ಮಿನ್ ಅರ್ಥೇ ಏಷ ಶ್ಲೋಕಃ ಮನ್ತ್ರೋಽಪಿ ಅಸ್ತಿ । ಯಾನಿ ಪಞ್ಚಧಾ ಪಞ್ಚಪ್ರಕಾರೇಣ ಹಿಂಕಾರಾದಿವಿಭಾಗೈಃ ಪ್ರೋಕ್ತಾನಿ ತ್ರೀಣಿ ತ್ರೀಣಿ ತ್ರಯೀವಿದ್ಯಾದೀನಿ ತೇಭ್ಯಃ ಪಞ್ಚತ್ರಿಕೇಭ್ಯಃ ಜ್ಯಾಯಃ ಮಹತ್ತರಂ ಪರಂ ಚ ವ್ಯತಿರಿಕ್ತಮ್ ಅನ್ಯತ್ ವಸ್ತ್ವನ್ತರಂ ನಾಸ್ತಿ ನ ವಿದ್ಯತೇ ಇತ್ಯರ್ಥಃ। ತತ್ರೈವ ಹಿ ಸರ್ವಸ್ಯ ಅನ್ತರ್ಭಾವಃ॥

(ಭಾಷ್ಯಾರ್ಥ)

ಆ ಈ ಅರ್ಥದಲ್ಲಿ ಈ ಶ್ಲೋಕವು ಎಂದರೆ ಮಂತ್ರವೂ ಇರುತ್ತದೆ. ಪಂಚ ವಿಧವಾಗಿರುವ ಐದು ಪ್ರಕಾರವಾಗಿರುವ ಹಿಂಕಾರವೇ ಮುಂತಾದ ವಿಭಾಗಗಳಾಗಿ ಹೇಳಿರುವ ತ್ರಯೀವಿದ್ಯೆಯೇ ಮುಂತಾದ ಮೂರುಮೂರು (ಇವೆಯಲ್ಲ), ಅವುಗಳಿಗಿಂತ (ಆ) ಐದು ತ್ರಿಕಗಳಿಗಿಂತ ಹೆಚ್ಚಿನದು. ಇನ್ನು ದೊಡ್ಡದಾಗಿರುವದು ಪರವು (ಅವಕ್ಕಿಂತ) ಬೇರೆಯಾದದ್ದು ಮತ್ತೊಂದು ವಸ್ತ್ವಂತರವು ಇಲ್ಲ, ಇರುವದಿಲ್ಲ ಎಂದರ್ಥ. ಏಕೆಂದರೆ ಅದರಲ್ಲಿಯೇ ಎಲ್ಲವೂ ಅಡಕವಾಗಿರುತ್ತದೆ.

(ಉಪನಿಷತ್ತು)

ಯಸ್ತದ್ವೇದ ಸ ವೇದ ಸರ್ವಗ್ಂ ಸರ್ವಾ ದಿಶೋ ಬಲಿಮಸ್ಮೈ ಹರನ್ತಿ ಸರ್ವಮಸ್ಮೀತ್ಯುಪಾಸೀತ ತದ್ವ್ರತಂ ತದ್ವ್ರತಮ್ ॥೪॥

೪. ಯಾವನು ಇದನ್ನು ಅರಿತಿರುವನೋ ಅವನು ಎಲ್ಲವನ್ನೂ ಅರಿತಿರುವನು. ಸರ್ವದಿಕ್ಕುಗಳೂ ಅವನಿಗೆ ಬಲಿಯನ್ನು ತಂದೊಪ್ಪಿಸುವವು. ಸರ್ವವೂ ಆಗಿರುವೆನು ಎಂದು ಉಪಾಸನೆಮಾಡಬೇಕು. ಅದು ವ್ರತವು, ಅದು ವ್ರತವು.

ಸಾಮೋಪಾಸಕನಿಗೆ ಸರ್ವದಿಕ್ಕುಗಳಿಂದಲೂ ಬಲಿಪ್ರಾಪ್ತಿ

(ಭಾಷ್ಯ)

೧೭೦. ಯಃ ತದ್ ಯಥೋಕ್ತಂ ಸರ್ವಾತ್ಮಕಂ ಸಾಮ ವೇದ ಸ ವೇದ ಸರ್ವಮ್ । ಸರ್ವಜ್ಞೋ ಭವತಿ ಇತ್ಯರ್ಥಃ । ಸರ್ವಾ ದಿಶಃ ಸರ್ವದಿಕ್ಸ್ಥಾಃ ಅಸ್ಮೈ ಏವಂವಿದೇ ಬಲಿಂ ಭೋಗಂ ಹರನ್ತಿ ಪ್ರಾಪಯನ್ತಿ ಇತ್ಯರ್ಥಃ । ಸರ್ವಮಸಿ ಭವಾಮಿ ಇತ್ಯೇವಮ್ ಏತತ್ ಸಾಮ ಉಪಾಸೀತ । ತಸ್ಯ ಏತದೇವ ವ್ರತಮ್ । ದ್ವಿರುಕ್ತಿಃ ಸಾಮೋಪಾಸನಸಮಾಪ್ತ್ಯರ್ಥಾ ॥

(ಭಾಷ್ಯಾರ್ಥ)

ಯಾವನು ಈ ಮೇಲೆ ಹೇಳಿದ ಸರ್ವಾತ್ಮಕವಾದ ಸಾಮವನ್ನು ಅರಿತು ಕೊಂಡಿರುವನೋ ಅವನು ಎಲ್ಲವನ್ನೂ ಅರಿತುಕೊಂಡಿರುವನು ; ಸರ್ವಜ್ಞನಾಗಿರುವನು ಎಂದರ್ಥ. ಸರ್ವದಿಕ್ಕುಗಳೂ ಎಲ್ಲಾ ದಿಕ್ಕುಗಳಲ್ಲಿರುವವರೂ ಹೀಗೆಂದರಿತಿರುವ ಅವನಿಗೆ ಬಲಿಯನ್ನು ಭೋಗವನ್ನು ತಂದೊಪ್ಪಿಸುವರು, ಪಡೆಯಿಸುವರು ಎಂದರ್ಥ.

ಸರ್ವವೂ (ಅಸ್ಮಿ = ಭವಾಮಿ) ಆಗಿರುವೆನು ಎಂದರಿತು ಈ ಸಾಮವನ್ನು ಉಪಾಸನೆಮಾಡಬೇಕು. ಅವನಿಗೆ ಇದೇ ವ್ರತವು. (ಇದೇ ವ್ರತವು ಎಂದು) ಎರಡು ಸಲ ಹೇಳಿರುವದು ಸಾಮೋಪಾಸನೆಯು ಮುಗಿಯಿತೆಂದು (ತಿಳಿಸುವದಕ್ಕೆ)[1].

ಎರಡನೆಯ ಅಧ್ಯಾಯ - ಇಪ್ಪತ್ತೆರಡನೆಯ ಖಂಡ

(ಗಾನವಿಶೇಷಾದಿಗಳ ಉಪದೇಶ)

ಗಾನವಿಶೇಷಾದಿಗಳು

(ಉಪನಿಷತ್ತು)

ಏನರ್ದಿ ಸಾಮ್ನೋ ವೃಣೇ ಪಶವ್ಯಮಿತ್ಯಗ್ನೇರುದ್ಗೀಥೋಽ-
ನಿರುಕ್ತಃ ಪ್ರಜಾಪತೇರ್ನಿರುಕ್ತಃ ಸೋಮಸ್ಯ ಮೃದು ಶ್ಲಕ್ಷ್ಣಂ

1. ಇಲ್ಲಿಗೆ ಸಾಮಸಾಮಾನ್ಯದ ಉಪಾಸನೆಯು ಮುಗಿಯಿತು.

ವಾಯೋಃ ಶ್ಲಕ್ಷ್ಣಂ ಬಲವದಿನ್ದ್ರಸ್ಯ ಕ್ರೌಞ್ಚಂ ಬೃಹಸ್ಪತೇರಪಧ್ವಾನ್ತಂ ವರುಣಸ್ಯ ತಾನ್ ಸರ್ವಾನೇವೋಪಸೇವೇತ ವಾರುಣಂ ತ್ವೇವ ವರ್ಜಯೇತ್ ॥೧॥

೧. ಸಾಮದ ವಿನರ್ದಿಯನ್ನು ವರಿಸುತ್ತೇನೆ ; ಏಕೆಂದರೆ (ಅದು) ಪಶವ್ಯವು, ಅಗ್ನಿಯದೂ ಆಗಿರುವ ಉದ್ಗೀಥವು ; ಅನಿರುಕ್ತವು ಪ್ರಜಾಪತಿಯದು ; ನಿರುಕ್ತವು ಸೋಮನದು ; ಮೃದು ಶ್ಲಕ್ಷ್ಣವು ವಾಯು ವಿನದು ; ಬಲವತ್ತಾದದ್ದು ಇಂದ್ರನದು ; ಕ್ರೌಂಚವು ಬೃಹಸ್ಪತಿಯದು ; ಅಪಧ್ವಾಂತವು ವರುಣನದು. ಅವೆಲ್ಲವನ್ನೂ ಉಪಸೇವಿಸಬೇಕು, ಆದರೆ ವಾರುಣವೊಂದನ್ನೇ ಬಿಡಬೇಕು.

ಗಾನಗಳ ವಿನಿಯೋಗ

(ಭಾಷ್ಯ)

೧೭೧. ಸಾಮೋಪಾಸನಪ್ರಸಙ್ಗೇನ ಗಾನವಿಶೇಷಾದಿಸಂಪತ್ ಉದ್ಗಾತುರುಪದಿಶ್ಯತೇ । ಫಲವಿಶೇಷಸಂಬನ್ಧಾತ್ ವಿನರ್ದಿ ವಿಶಿಷ್ಟೋ ನರ್ದಃ ಸ್ವರವಿಶೇಷಃ । ಋಷಭಕೂಜಿತಸಮಃ ಅಸ್ಯಾಸ್ತೀತಿ ವಿನರ್ದಿ ಗಾನಮ್ ಇತಿ ವಾಕ್ಯವಿಶೇಷಃ । ತಚ್ಚ ಸಾಮ್ನಃ ಸಂಬನ್ಧಿ ಪಶುಭ್ಯೋ ಹಿತಂ ಪಶವ್ಯಮ್ ಅಗ್ನೇಃ ಅಗ್ನಿದೇವತ್ಯಂ ಚ ಉದ್ಗೀಥಃ ಉದ್ಗಾನಮ್ । ತತ್ ಅಹಮ್ ಏವಂವಿಶಿಷ್ಟಂ ವೃಣೇ ಪ್ರಾರ್ಥಯೇ । ಇತಿ ಕಶ್ಚಿತ್ ಯಜಮಾನಃ ಉದ್ಗಾತಾ ವಾ ಮನ್ಯತೇ । ಅನಿರುಕ್ತಃ ಅಮುಕಸಮಃ ಇತ್ಯವಿಶೇಷಿತಃ ಪ್ರಜಾಪತೇಃ ಪ್ರಜಾಪತಿದೇವತ್ಯಃ ಸ ಗಾನವಿಶೇಷಃ । ಅನಿರುಕ್ತ್ಯಾತ್ ಪ್ರಜಾಪತೇಃ । ನಿರುಕ್ತಃ ಸ್ಪಷ್ಟಃ । ಸೋಮಸ್ಯ ಸೋಮದೇವತ್ಯಃ ಸ ಉದ್ಗೀಥಃ ಇತ್ಯರ್ಥಃ । ಮೃದು ಶ್ಲಕ್ಷ್ಣಂ ಚ ಗಾನಂ ವಾಯೋಃ ವಾಯುದೇವತ್ಯಂ ತತ್ । ಶ್ಲಕ್ಷ್ಣಂ ಬಲವಚ್ಚ ಪ್ರಯತ್ನಾಧಿಕ್ಯೋಪೇತಂ ಚ ಇನ್ದ್ರಸ್ಯ । ಐನ್ದ್ರಂ ತದ್ ಗಾನಮ್ । ಕ್ರೌಞ್ಚಂ ಕ್ರೌಞ್ಚಪಕ್ಷಿನಿನಾದಸಮಂ ಬೃಹಸ್ಪತೇಃ ಬಾರ್ಹಸ್ಪತ್ಯಂ ತತ್ । ಅಪಧ್ವಾನ್ತಂ ಭಿನ್ನಕಾಂಸ್ಯಸ್ವರಸಮಂ ವರುಣಸ್ಯ ಏತದ್ ಗಾನಮ್ । ತಾನ್ ಸರ್ವಾನೇವ ಉಪಸೇವೇತ ಪ್ರಯುಞ್ಜೀತ ವಾರುಣಂ ತ್ವೇವ ಏಕಂ ವರ್ಜಯೇತ್ ॥

(ಭಾಷ್ಯಾರ್ಥ)

ಸಾಮೋಪಾಸನೆಯ ಪ್ರಸಂಗದಿಂದ ಗಾನವಿಶೇಷಾದಿಗಳನ್ನು ಕೂಡಿಕೊಂಡಿರ

ಬೇಕೆಂದು ಉದ್ಗಾತೃವಿಗೆ ಉಪದೇಶಿಸಿರುತ್ತದೆ. ಏಕೆಂದರೆ (ಇದಕ್ಕೆ) ಬೇರೆ ಬೇರೆಯ ಫಲಗಳು ಇರುತ್ತವೆ.[1]

ವಿನರ್ದಿ ಎಂದರೆ ಒಂದು ಬಗೆಯ ನರ್ದವು ; ಎತ್ತಿನ ಗುಟರಿಗೆ ಸಮವಾದ ಒಂದಾನೊಂದು ಸ್ವರವು, ಈ (ಗಾನಕ್ಕಿದೆಯಾದ್ದರಿಂದ) ಇದು ವಿನರ್ದಿ. (ವಿನರ್ದಿ ಎಂಬ) ಗಾನವನ್ನು ಎಂದು (ಈ) ವಾಕ್ಯಕ್ಕೆ ಸೇರಿಸಿಕೊಳ್ಳಬೇಕು. ಈ ಸಾಮಸಂಬಂಧಿಯಾದ (ಗಾನವು) ಪಶವ್ಯವು, ಪಶುಗಳಿಗೆ ಹಿತವಾದದ್ದು, ಮತ್ತು ಅಗ್ನಿಯದು ಎಂದರೆ ಅಗ್ನಿದೇವತಾಕವಾದ ಉದ್ಗೀಥವು, ಉದ್ಗಾನವು[2]. ಈ ವಿಶೇಷಣಗಳಿಂದೊಡಗೂಡಿದ ಈ (ಗಾನ)ವನ್ನು ನಾನು ವರಿಸುತ್ತೇನೆ, ಪ್ರಾರ್ಥಿಸುತ್ತೇನೆ- ಎಂದು ಯಾವನೋ ಒಬ್ಬ ಯಜಮಾನನು ಅಥವಾ ಉದ್ಗಾತೃವು ಭಾವಿಸುತ್ತಾನೆ[3]. ಅನಿರುಕ್ತವು ಎಂದರೆ ಇಂಥದಕ್ಕೆ ಸಮನಾದದ್ದೆಂಬ ವಿಶೇಷವನ್ನು ಹೇಳಲಾಗದಲ್ಲ, ಆ ಗಾನವಿಶೇಷವು. ಪ್ರಜಾಪತಿಯದು, ಪ್ರಜಾಪತಿದೇವತಾಕವಾದದ್ದು. ಏಕೆಂದರೆ ಪ್ರಜಾಪತಿಯು ಅನಿರುಕ್ತನಾಗಿರುತ್ತಾನೆ.[4] ನಿರುಕ್ತವು, ಎಂದರೆ ಸ್ಪಷ್ಟವಾದದ್ದು. ಆ ಉದ್ಗೀಥವು ಸೋಮನದು, ಸೋಮದೇವತಾಕವಾದದ್ದು ಎಂದರ್ಥ. ಮೃದುವಾಗಿಯೂ ನಯವಾಗಿಯೂ ಇರುವ ಗಾನವಿದೆಯಲ್ಲ, ಅದು ವಾಯುವಿನದು, ವಾಯುದೇವತಾಕವಾದದ್ದು. ನಯವಾಗಿಯೂ ಬಲವಾಗಿಯೂ ಎಂದರೆ ಹೆಚ್ಚಿನ ಪ್ರಯತ್ನದಿಂದ ಕೂಡಿರುವದೂ ಆಗಿರುವದಲ್ಲ, ಆ ಗಾನವು ಇಂದ್ರನದು, ಇಂದ್ರನಿಗೆ ಸಂಬಂಧವಟ್ಟದ್ದು. ಕ್ರೌಂಚವು ಎಂದರೆ ಕ್ರೌಂಚಪಕ್ಷಿಯ ಧ್ವನಿಗೆ ಸಮವಾದದ್ದು ಬೃಹಸ್ಪತಿಯದು, ಅದು ಬೃಹಸ್ಪತಿಗೆ ಸಂಬಂಧಪಟ್ಟದ್ದು. ಅಪಧ್ವಾಂತವು ಎಂದರೆ ಒಡೆದ ಕಂಚಿನ ಧ್ವನಿಯಂತಿರುವದಲ್ಲ, ಆ ಗಾನವು ವರುಣನದು.

1. ಮುಂದಿನ ಕಂಡಿಕೆಗಳಲ್ಲಿ ಫಲಗಳನ್ನು ಹೇಳಿರುತ್ತದೆಯಾದ್ದರಿಂದ ಹೇಗೆ ಗಾನಮಾಡಬೇಕೆಂದು ವಿಧಿಸಿದೆ ಎಂದು ತಿಳಿಯಬೇಕೆಂದರ್ಥ.
2. ಉದ್ಗೀಥವೆಂದರೆ ಇಲ್ಲಿ ಉದ್ಗೀಥಭಕ್ತಿಯಲ್ಲ, ಉದ್ಗಾನಕ್ರಿಯೆ.
3. 'ವೃಣೇ' ವರಿಸುತ್ತೇನೆ ಎಂಬುದಕ್ಕೆ ಇಲ್ಲಿ ಕರ್ತೃಪದವನ್ನು ತಿಳಿಸಿಲ್ಲ ; ಆದ್ದರಿಂದ ಫಲವನ್ನು ಬಯಸುವ ಯಜಮಾನನೋ ಅಥವಾ ಉದ್ಗಾತೃವೋ ಹೀಗೆಂದು ಅನುಸಂಧಾನ ಮಾಡಬೇಕು ಎಂದು ಶ್ರುತಿಗೆ ಅಭಿಪ್ರಾಯವನ್ನು ಹೇಳಬೇಕು. ಉಭಯಪಕ್ಷದಲ್ಲಿಯೂ ಇದು ಉದ್ಗಾತೃವಿಗೇ ಹೇಳಿದ್ದು.
4. ನೀಲಪೀತಾದಿಗಳೆಂದು ನಿಶ್ಚಯಿಸದೆ ಇರುವದರಿಂದ ಎಂದು ಟೀಕೆ. ಇದರ ಅಭಿಪ್ರಾಯವೇನೆಂಬುದು ತಿಳಿಯಲಿಲ್ಲ. ದೇವತಾವಿಶೇಷವಲ್ಲದೆ ಸಮಷ್ಟಿರೂಪನಾಗಿರುವದರಿಂದ ಎಂದು ಭಾಷ್ಯದ ಅಭಿಪ್ರಾಯವೆಂತ ತೋರುತ್ತದೆ.

ಈ ಎಲ್ಲಾ (ಸಾಮಗಳನ್ನೂ) ಪ್ರಯೋಗಮಾಡಬೇಕು. ಆದರೆ ಮಾರುಣ ವೊಂದನ್ನೇ ಬಿಟ್ಟು ಬಿಡಬೇಕು.

ಗಾನಮಾಡುವಾಗ ಫಲಾನುಸಂಧಾನ

(ಉಪನಿಷತ್ತು)

ಅಮೃತತ್ವಂ ದೇವೇಭ್ಯ ಆಗಾಯಾನೀತ್ಯಾಗಾಯೇತ್ ಸ್ವಧಾಂ ಪಿತೃಭ್ಯ ಆಶಾಂ ಮನುಷ್ಯೇಭ್ಯಸ್ತೃಣೋದಕಂ ಪಶುಭ್ಯಃ ಸ್ವರ್ಗಂ ಲೋಕಂ ಯಜಮಾನಾಯಾನ್ನಮಾತ್ಮನ ಆಗಾಯಾನೀತ್ಯೇತಾನಿ ಮನಸಾ ಧ್ಯಾಯನ್ನಪ್ರಮತ್ತಃ ಸ್ತುವೀತ ॥೨॥

೨. ದೇವತೆಗಳಿಗೆ ಅಮೃತವನ್ನು ಆಗಾನಮಾಡುವೆನು ಎಂದು ಆಗಾನಮಾಡಬೇಕು. ಪಿತೃಗಳಿಗೆ ಸ್ವಧೆಯನ್ನೂ ಮನುಷ್ಯನಿಗೆ ಆಶೆಯನ್ನೂ ಪಶುಗಳಿಗೆ ಹುಲ್ಲುನೀರುಗಳನ್ನೂ ಯಜಮಾನನಿಗೆ ಸ್ವರ್ಗಲೋಕವನ್ನೂ ತನಗೆ ಅನ್ನವನ್ನೂ ಆಗಾನಮಾಡುವೆನು ಎಂದು ಇವನ್ನು ಮನಸ್ಸಿನಿಂದ ಧ್ಯಾನಮಾಡುತ್ತಾ ಅಪ್ರಮತ್ತನಾಗಿ ಸ್ತೋತ್ರಮಾಡಬೇಕು.

(ಭಾಷ್ಯ)

೧೭೨. ಅಮೃತತ್ವಂ ದೇವೇಭ್ಯ ಆಗಾಯಾನಿ ಸಾಧಯಾನಿ । ಸ್ವಧಾಂ ಪಿತೃಭ್ಯ ಆಗಾಯಾನಿ । ಆಶಾಂ ಮನುಷ್ಯೇಭ್ಯಃ । ಆಶಾಂ ಪ್ರಾರ್ಥನಾಮ್ । ಪ್ರಾರ್ಥಿತಮ್ ಇತ್ಯೇತತ್ । ತೃಣೋದಕಂ ಪಶುಭ್ಯಃ । ಸ್ವರ್ಗಂ ಲೋಕಂ ಯಜಮಾನಾಯ, ಅನ್ನಮ್ ಆತ್ಮನೇ ಮಹ್ಯಮ್ ಆಗಾಯಾನಿ ಇತ್ಯೇತಾನಿ ಮನಸಾ ಧ್ಯಾಯನ್ ಚಿನ್ತಯನ್[1] ಅಪ್ರಮತ್ತಃ ಸ್ವರೋಷ್ಮವ್ಯಞ್ಜನಾದಿಭ್ಯಃ ಸ್ತುವೀತ ॥

(ಭಾಷ್ಯಾರ್ಥ)

ದೇವತೆಗಳಿಗೆ ಅಮೃತತ್ವವನ್ನು ಆಗಾನಮಾಡುವೆನು, ಸಾಧಿಸುವೆನು. ಪಿತೃಗಳಿಗೆ ಸ್ವಧೆಯನ್ನು ಆಗಾನಮಾಡುವೆನು, ಮನುಷ್ಯರಿಗೆ ಆಶೆಯನ್ನು, ಪ್ರಾರ್ಥನೆಯನ್ನು, ಎಂದರೆ ಇಷ್ಟವಾದದ್ದನ್ನು ಎಂದು ಅಭಿಪ್ರಾಯ. ಪಶುಗಳಿಗೆ ಹುಲ್ಲುನೀರುಗಳನ್ನು, ಯಜಮಾನನಿಗೆ ಸ್ವರ್ಗಲೋಕವನ್ನು, ನನಗೆ ಅನ್ನವನ್ನು ಆಗಾನಮಾಡುವೆನು-

1. ಅಚ್ಚಿನಪುಸ್ತಕಗಳಲ್ಲಿ ಚಿನ್ತಯನ್ ಧ್ಯಾಯನ್ ಎಂದು ವ್ಯುತ್ಕ್ರಮವಾಗಿ ಬಿದ್ದಿದೆ.

ಎಂದು ಇವುಗಳನ್ನು ಮನಸ್ಸಿನಿಂದ ಧ್ಯಾನಮಾಡುತ್ತಾ ಚಿಂತಿಸಿಕೊಳ್ಳುತ್ತಾ ಸ್ವರ, ಊಷ್ಮ, ವ್ಯಂಜನ- ಇವುಗಳ ವಿಷಯದಲ್ಲಿ ಎಚ್ಚರಿಕೆಯಿಂದ ಸ್ತೋತ್ರಮಾಡಬೇಕು.

ಸ್ವರಾದಿಗಳ ಉಚ್ಚಾರವೂ ಅದರ ಫಲವೂ

(ಉಪನಿಷತ್ತು)

ಸರ್ವೇ ಸ್ವರಾ ಇನ್ದ್ರಸ್ಯಾತ್ಮಾನಃ ಸರ್ವ ಊಷ್ಮಾಣಃ ಪ್ರಜಾಪತೇರಾತ್ಮಾನಃ ಸರ್ವೇ ಸ್ಪರ್ಶಾ ಮೃತ್ಯೋರಾತ್ಮಾನಸ್ತಂ ಯದಿ ಸ್ವರೇಷೂಪಾಲಭೇತೇನ್ದ್ರಗ್ಂ ಶರಣಂ ಪ್ರಪನ್ನೋಽಭೂವಂ ಸ ತ್ವಾ ಪ್ರತಿವಕ್ಷ್ಯತೀತ್ಯೇವಂ ಬ್ರೂಯಾತ್ ॥೩॥

ಅಥ ಯದ್ಯೇನಮೂಷ್ಮಸೂಪಾಲಭೇತ ಪ್ರಜಾಪತಿಗ್ಂ ಶರಣಂ ಪ್ರಪನ್ನೋಽಭೂವಂ ಸ ತ್ವಾ ಪ್ರತಿಪೇಕ್ಷ್ಯತೀತ್ಯೇನಂ ಬ್ರೂಯಾದಥ ಯದ್ಯೇನಗ್ಂ ಸ್ಪರ್ಶೇಷೂಪಾಲಭೇತ ಮೃತ್ಯುಗ್ಂ ಶರಣಂ ಪ್ರಪನ್ನೋಽಭೂವಂ ಸ ತ್ವಾ ಪ್ರತಿ ಧಕ್ಷ್ಯತೀತ್ಯೇನಂ ಬ್ರೂಯಾತ್॥೪॥

೩. ಸ್ವರಗಳೆಲ್ಲ ಇಂದ್ರನ ಆತ್ಮಗಳು, ಊಷ್ಮಗಳೆಲ್ಲ ಪ್ರಜಾಪತಿಯ ಆತ್ಮಗಳು, ಸ್ಪರ್ಶಗಳೆಲ್ಲ ಮೃತ್ಯುವಿನ ಆತ್ಮಗಳು. ಇವನ ಮೇಲೆ ಸ್ವರಗಳ (ವಿಷಯ)ದಲ್ಲಿ ತಪ್ಪುಹೊರಿಸಿದರೆ 'ಇಂದ್ರನನ್ನು ಶರಣುಹೊಕ್ಕಿರುತ್ತೇನೆ, ಅವನು ನಿನಗೆ ಹೇಳುವನು' ಎಂದು ಅವನಿಗೆ ಹೇಳಬೇಕು.

೪. ಇನ್ನು ಇವನ ಮೇಲೆ ಊಷ್ಮಗಳ (ವಿಷಯ)ದಲ್ಲಿ ತಪ್ಪನ್ನು ಹೊರಿಸಿದರೆ 'ಪ್ರಜಾಪತಿಯನ್ನು ಶರಣುಹೊಕ್ಕಿರುತ್ತೇನೆ, ಅವನು ನಿನ್ನನ್ನು ಪ್ರತಿಪೇಷಣಮಾಡುವನು' ಎಂದು ಅವನಿಗೆ ಹೇಳಬೇಕು. ಇನ್ನು ಇವನ ಮೇಲೆ ಸ್ಪರ್ಶಗಳ (ವಿಷಯ)ದಲ್ಲಿ ತಪ್ಪುಹೊರಿಸಿದರೆ, 'ಮೃತ್ಯುವನ್ನು ಶರಣು ಹೊಕ್ಕಿರುವೆನು, ಅವನು ನಿನ್ನನ್ನು ಪ್ರತಿಧಕ್ಷಣಮಾಡುವನು' ಎಂದು ಅವನಿಗೆ ಹೇಳಬೇಕು.

(ಭಾಷ್ಯ)

೧೭೩. ಸರ್ವೇ ಸ್ವರಾ ಅಕಾರಾದಯಃ ಇನ್ದ್ರಸ್ಯ ಬಲಕರ್ಮಣಃ ಪ್ರಾಣಸ್ಯ ಆತ್ಮಾನಃ ದೇಹಾವಯವಸ್ಥಾನೀಯಾಃ । ಸರ್ವೇ ಊಷ್ಮಾಣಃ ಶಷಸಹಾದಯಃ ಪ್ರಜಾ-

ಪತೇರ್ವಿರಾಜಃ ಕಶ್ಯಪಸ್ಯ ವಾ ಆತ್ಮಾನಃ । ಸರ್ವೇ ಸ್ಪರ್ಶಾಃ ಕಾದಯೋ ವ್ಯಞ್ಜನಾನಿ ಮೃತ್ಯೋಃ ಆತ್ಮಾನಃ । ತಮ್ ಏವಂವಿಧಮ್ ಉದ್ಗಾತಾರಂ ಯದಿ ಕಶ್ಚಿತ್ ಸ್ವರೇಷು ಉಪಾಲಭೇತ 'ಸ್ವರಸ್ತ್ವಯಾ ದುಷ್ಟಃ ಪ್ರಯುಕ್ತಃ' ಇತಿ, ಏವಮ್ ಉಪಾಲಬ್ಧಃ 'ಇನ್ದ್ರಂ ಪ್ರಾಣಮ್ ಈಶ್ವರಂ ಶರಣಮ್ ಆಶ್ರಯಂ ಪ್ರಪನ್ನೋಽಭೂವಂ ಸ್ವರಾನ್ ಪ್ರಯುಞ್ಜಾನೋಽಹಮ್ । ಸ ಇನ್ದ್ರಃ ಯತ್ತವ ವಕ್ತವ್ಯಂ ತ್ವಾ ತ್ವಾಂ ಪ್ರತಿವಕ್ಷ್ಯತಿ । ಸ ಏವ ದೇವ ಉತ್ತರಂ ದಾಸ್ಯತಿ' ಇತ್ಯೇನಂ ಬ್ರೂಯಾತ್ । ಅಥ ಯದಿ ಏನಮ್ ಊಷ್ಮಸು ತಥೈವ ಉಪಾಲಭೇತ, 'ಪ್ರಜಾಪತಿಂ ಶರಣಂ ಪ್ರಪನ್ನೋಽಭೂವಮ್ । ಸ ತ್ವಾ ಪ್ರತಿಪೇಕ್ಷ್ಯತಿ ಸಂಚೂರ್ಣಯಿಷ್ಯತಿ', ಇತ್ಯೇನಂ ಬ್ರೂಯಾತ್ । ಅಥ ಯದಿ ಏನಂ ಸ್ಪರ್ಶೇಷು ಉಪಾಲಭೇತ 'ಮೃತ್ಯುಂ ಶರಣಂ ಪ್ರಪನ್ನೋಽಭೂವಮ್, ಸ ತ್ವಾ ಪ್ರತಿಧಕ್ಷ್ಯತಿ ಭಸ್ಮೀಕರಿಷ್ಯತಿ' ಇತ್ಯೇನಂ ಬ್ರೂಯಾತ್ ॥

(ಭಾಷ್ಯಾರ್ಥ)

ಅಕಾರಾದಿಸ್ವರಗಳೆಲ್ಲ ಇಂದ್ರನ, ಬಲಕ್ರಿಯೆಯುಳ್ಳ ಪ್ರಾಣನ[1], ಆತ್ಮಗಳು, ದೇಹಾವಯವಗಳ ಸ್ಥಾನದಲ್ಲಿರುತ್ತವೆ. ಊಷ್ಮಗಳೆಲ್ಲ, ಎಂದರೆ ಶಷಸಹಾದಿಗಳು[2] ಪ್ರಜಾಪತಿಯ ಎಂದರೆ ವಿರಾಜನ ಅಥವಾ ಕಶ್ಯಪನ ಆತ್ಮಗಳು, ಸ್ಪರ್ಶಗಳೆಲ್ಲ ಎಂದರೆ ಕಕಾರಾದಿವ್ಯಂಜನಗಳು, ಮೃತ್ಯುವಿನ ಆತ್ಮಗಳು.

ಹೀಗೆಂದು ಉಪಾಸನೆಮಾಡಿರುವ ಉದ್ಗಾತೃವಿನ ಮೇಲೆ ಯಾವದಾದರೂ ಸ್ವರಗಳ (ವಿಷಯ)ದಲ್ಲಿ ತಪ್ಪುಹೊರಿಸಿದರೆ, 'ನೀನು ಸ್ವರವನ್ನು ತಪ್ಪಾಗಿ ಪ್ರಯೋಗಿಸಿದೀಯೆ !' ಎಂದರೆ ಹೀಗೆ ತಪ್ಪುಹೊರಿಸಿಕೊಂಡ (ಉದ್ಗಾತೃವು) 'ಇಂದ್ರನನ್ನು, ಪ್ರಾಣನನ್ನು, ಈಶ್ವರನನ್ನು, ಸ್ವರಗಳನ್ನು ಪ್ರಯೋಗಿಸುವಾಗ ನಾನು ಶರಣುಹೊಕ್ಕಿರುತ್ತೇನೆ. ಆಶ್ರಯವಾಗಿಟ್ಟುಕೊಂಡಿರುತ್ತೇನೆ ; 'ಆ ಇಂದ್ರನು ನಿನಗೆ ಏನು ಹೇಳಬೇಕೋ (ಅದನ್ನು) (ತ್ವಾ=ತ್ವಾಂ) ನಿನಗೆ ಹೇಳುವನು, ಆ ದೇವನೇ ನಿನಗೆ ಉತ್ತರವನ್ನು ಕೊಡುವನು' ಎಂದು ಅವನಿಗೆ ಹೇಳಬೇಕು. ಇನ್ನು ಹೀಗೆಯೇ ಇವನ ಮೇಲೆ ಊಷ್ಮಗಳ (ವಿಷಯ)ದಲ್ಲಿ ತಪ್ಪುಹೊರಿಸಿದರೆ 'ನಾನು ಪ್ರಜಾಪತಿಯನ್ನು ಶರಣುಹೊಕ್ಕಿರುತ್ತೇನೆ ; ಅವನು ನಿನ್ನನ್ನು ಪ್ರತಿಪೇಷಣೆಮಾಡುವನು, ಹುಡಿಮಾಡುವನು' ಎಂದು ಅವನಿಗೆ ಹೇಳಬೇಕು. ಇನ್ನು ಇವನ ಮೇಲೆ ಸ್ಪರ್ಶಗಳ

1. ಪ್ರಾಣನನ್ನು ಇಂದ್ರನೆಂದು ಕರೆದಿರುವದು ಬ್ರಾಹ್ಮಣಗಳಲ್ಲಿ ಕಂಡುಬರುತ್ತದೆ. ಐ. ಆ. ೨-೩-೭, ಬೃ.ಭಾ. ೧-೫-೧೨ (ಭಾ.ಭಾ. ೨೨೧)- ಇವನ್ನು ನೋಡಿರಿ.
2. ಜಿಹ್ವಾಮೂಲೀಯ ಉಪಧಾನೀಯಗಳನ್ನೂ ಇವಕ್ಕೆ ಸೇರಿಸಿರಬಹುದೆ ? ಶಷಸಹಗಳ ಅವಾಂತರಭೇದಗಳನ್ನು ಆದಿಶಬ್ದದಿಂದ ತಿಳಿಯಬೇಕೆಂದು ಟೀಕೆ.

(ವಿಷಯ)ದಲ್ಲಿ ತಪ್ಪುಹೊರಿಸಿದರೆ 'ಮೃತ್ಯುವನ್ನು ಶರಣುಹೊಕ್ಕಿರುವೆನು, ಅವನು ನಿನ್ನನ್ನು ಪ್ರತಿಧಕ್ಷಣಮಾಡುವನು, ಬೂದಿಗೈಯುವನು' - ಎಂದು ಅವನಿಗೆ ಹೇಳಬೇಕು.

ಸ್ವರಾದಿಗಳನ್ನು ಪ್ರಯೋಗಮಾಡುವ ರೀತಿ

(ಉಪನಿಷತ್ತು)

ಸರ್ವೇ ಸ್ವರಾ ಘೋಷವನ್ತೋ ಬಲವನ್ತೋ ವಕ್ತವ್ಯಾ ಇನ್ದ್ರೇ ಬಲಂ ದದಾನೀತಿ ಸರ್ವ ಊಷ್ಮಾಣೋಽಗ್ರಸ್ತಾ ಅನಿರಸ್ತಾ ವಿವೃತಾ ವಕ್ತವ್ಯಾಃ ಪ್ರಜಾಪತೇರಾತ್ಮಾನಂ ಪರಿದದಾನೀತಿ ಸರ್ವೇ ಸ್ಪರ್ಶಾ ಲೇಶೇನಾನಭಿನಿಹಿತಾ ವಕ್ತವ್ಯಾ ಮೃತ್ಯೋರಾತ್ಮಾನಂ ಪರಿಹರಾಣೇತಿ ॥೫॥

೫. ಸ್ವರಗಳನೆಲ್ಲ ಘೋಷದಿಂದ ಕೂಡಿಯೂ ಬಲವಾಗಿಯೂ ಹೇಳಬೇಕು ; ಇಂದ್ರನಿಗೆ ಬಲವನ್ನು ಕೊಡುವೆನು ಎಂದು (ಭಾವಿಸಬೇಕು). ಊಷ್ಮಗಳನ್ನೆಲ್ಲ ನುಂಗದೆ ಹೊರಗೆ ಹಾಕದೆ ವಿವೃತವಾಗಿ ಹೇಳಬೇಕು ; ಪ್ರಜಾಪತಿಗೆ ಆತ್ಮವನ್ನು ಕೊಡುವೆನು ಎಂದು (ಭಾವಿಸಬೇಕು). ಸ್ಪರ್ಶಗಳನ್ನೆಲ್ಲ ಸ್ವಲ್ಪವಾಗಿ ಅನಭಿನಿಹಿತವಾಗಿ ಹೇಳಬೇಕು, ನನ್ನನ್ನು ಮೃತ್ಯುವಿನಿಂದ ತಪ್ಪಿಸಿಕೊಳ್ಳುವೆನು - ಎಂದು (ಭಾವಿಸಬೇಕು).

(ಭಾಷ್ಯ)

೧೭೪. ಯತ ಇನ್ದ್ರಾದ್ಯಾತ್ಮಾನಃ ಸ್ವರಾದಯಃ । ಅತಃ ಸರ್ವೇ ಸ್ವರಾಃ ಘೋಷವನ್ತೋ ಬಲವನ್ತೋ ವಕ್ತವ್ಯಾಃ । ತಥಾ ಅಹಮ್ ಇನ್ದ್ರೇ ಬಲಂ ದದಾನಿ ಬಲಮ್ ಆದಧಾನಿ ಇತಿ । ತಥಾ ಸರ್ವೇ ಊಷ್ಮಾಣಃ ಅಗ್ರಸ್ತಾಃ ಅನ್ತರಪ್ರವೇಶಿತಾಃ ಅನಿರಸ್ತಾಃ ಬಹಿರಪ್ರಕ್ಷಿಪ್ತಾಃ ವಿವೃತಾಃ ವಿವೃತಪ್ರಯತ್ನೋಪೇತಾಃ । ಪ್ರಜಾಪತೇಃ ಆತ್ಮಾನಂ ಪರಿದದಾನಿ ಪ್ರಯಚ್ಛಾನಿ ಇತಿ । ಸರ್ವೇ ಸ್ಪರ್ಶಾಃ ಲೇಶೇನ ಶನಕೈಃ ಅನಭಿನಿಹಿತಾಃ ಅನಭಿಕ್ಷಿಪ್ತಾಃ ವಕ್ತವ್ಯಾಃ । ಮೃತ್ಯೋಃ ಆತ್ಮಾನಂ ಬಾಲಾನಿವ ಶನಕೈಃ ಪರಿಹರದ್ಭಿರ್ಮೃತ್ಯೋರಾತ್ಮಾನಂ ಪರಿಹರಾಣ ಇತಿ ॥

(ಭಾಷ್ಯಾರ್ಥ)

(ಹೀಗೆ) ಸ್ವರವೇ ಮುಂತಾದ(ವರ್ಣ)ಗಳು ಇಂದ್ರಾದಿಗಳ ಆತ್ಮಗಳಾಗಿರುವವಷ್ಟೆ, ಆದ್ದರಿಂದ ಸ್ವರಗಳನ್ನೆಲ್ಲ ಘೋಷದಿಂದಲೂ ಬಲದಿಂದಲೂ ಕೂಡಿ ಉಚ್ಚರಿಸಬೇಕು.

ಹಾಗೆ ಮಾಡುವದರಿಂದ ನಾನು ಇಂದ್ರನಿಗೆ ಬಲವನ್ನು ಕೊಡುವೆನು, ಬಲವನ್ನುಂಟು ಮಾಡುವೆನು - ಎಂದು (ಭಾವಿಸಬೇಕು). ಹೀಗೆಯೇ ಎಲ್ಲಾ ಊಷ್ಮಗಳನ್ನೂ ನುಂಗದೆ ಒಳಕ್ಕೆ ಹೊಗಿಸಿಕೊಳ್ಳದೆ, ಹೊರಗೆ ಹಾಕದೆ ಹೊರಕ್ಕೆ ದೂಡಿ (ಉಚ್ಚರಿಸದೆ) ವಿವೃತವಾಗಿ ವಿವೃತಪ್ರಯತ್ನದಿಂದೊಡಗೂಡಿ (ಉಚ್ಚರಿಸಬೇಕು). ಪ್ರಜಾಪತಿಗೆ ಆತ್ಮವನ್ನು[1] ಕೊಡುತ್ತಿರುವೆನು ಎಂದು (ಭಾವಿಸಬೇಕು), ಸ್ವರ್ಶಗಳನ್ನೆಲ್ಲ ಸ್ವಲ್ಪವಾಗಿ, ಎಂದರೆ ಮೆಲ್ಲಗೆ ಅನಭಿನಿಹಿತವಾಗಿ ಎಂದರೆ ಒಂದಕ್ಕೊಂದನ್ನು ಕೂಡಿಸುವಂತೆ ಮಾಡದೆ ಉಚ್ಚರಿಸಬೇಕು. ಮೃತ್ಯುವಿನಿಂದ ಹುಡುಗರನ್ನು ಮೆಲ್ಲಗೆ ಬಿಡಿಸಿಕೊಳ್ಳುವವರಂತೆ[2] ಮೃತ್ಯುವಿನಿಂದ ತನ್ನನ್ನು ಬಿಡಿಸಿಕೊಳ್ಳುತ್ತೇನೆಂದು (ಭಾವಿಸಬೇಕು)[3].

ಎರಡನೆಯ ಅಧ್ಯಾಯ - ಇಪ್ಪತ್ತುಮೂರನೆಯ ಖಂಡ

(ಓಂಕಾರೋಪಾಸನೆ)

ಪ್ರಣವನಿಷ್ಠನಾದವನಿಗೆ ಅಮೃತತ್ವ

(ಉಪನಿಷತ್ತು)

ತ್ರಯೋ ಧರ್ಮಸ್ಕನ್ಧಾ ಯಜ್ಞೋಽಧ್ಯಯನಂ ದಾನಮಿತಿ ಪ್ರಥಮ-ಸ್ತಪ ಏವ ದ್ವಿತೀಯೋ ಬ್ರಹ್ಮಚಾರ್ಯಾಚಾರ್ಯಕುಲವಾಸೀ ತೃತೀಯೋಽತ್ಯನ್ತಮಾತ್ಮಾನಮಾಚಾರ್ಯಕುಲೇಽವಸಾದಯನ್ ಸರ್ವ ಏತೇ ಪುಣ್ಯಲೋಕಾ ಭವನ್ತಿ ಬ್ರಹ್ಮಸಂಸ್ಥೋಽಮೃತತ್ವಮೇತಿ ॥೧॥

1. ಇದನ್ನು 'ನನ್ನನ್ನು ಕೊಟ್ಟುಕೊಳ್ಳುತ್ತಿರುವೆನು' ಎಂದೂ ಕನ್ನಡಿಸಬಹುದು.
2. ಹುಡುಗರು ಅಪಾಯದಲ್ಲಿದ್ದರೆ ಅವರನ್ನು ಹೇಗೆ ಮೆಲ್ಲಗೆ ಎಚ್ಚರಿಕೆಯಿಂದ ಬಿಡಿಸಿಕೊಳ್ಳುವರೋ ಹಾಗೆ ಎಂದರ್ಥ.
3. ಸ್ವರಾದಿಗಳನ್ನು ಉಚ್ಚರಿಸುವಾಗ ಎಚ್ಚರಿಕೆಯಿಂದ ಉಚ್ಚರಿಸಬೇಕು ; ಹಾಗೆ ಮಾಡುವುದರಿಂದ ಪ್ರಾಣ, ಪ್ರಜಾಪತಿ, ಮೃತ್ಯು- ಇವರು ಪ್ರಸನ್ನರಾಗುವರು ಎಂಬುದು ಅಭಿಪ್ರಾಯ.

೧. ಧರ್ಮಸ್ಕಂಧಗಳು ಮೂರು. ಯಜ್ಞ, ಅಧ್ಯಯನ, ದಾನ- ಎಂಬುದು ಒಂದನೆಯದು. ತಪಸ್ಸೇ ಎರಡನೆಯದು. ಅತ್ಯಂತವಾಗಿ ಆಚಾರ್ಯಕುಲದಲ್ಲಿ ವಾಸಮಾಡಿಕೊಂಡು ತನ್ನನ್ನು ಸವೆಯಿಸಿಕೊಳ್ಳುವ ಬ್ರಹ್ಮಚಾರಿಯು ಮೂರನೆಯವನು. ಇವರೆಲ್ಲರೂ ಪುಣ್ಯಲೋಕರಾಗುವರು, ಬ್ರಹ್ಮಸಂಸ್ಥನು ಅಮೃತತ್ವವನ್ನು ಹೊಂದುವನು.

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೧೭೫. ಓಂಕಾರಸ್ಯ ಉಪಾಸನವಿಧ್ಯರ್ಥಂ ''ತ್ರಯೋ ಧರ್ಮಸ್ಕನ್ಧಾಃ'' ಇತ್ಯಾದಿ ಆರಭ್ಯತೇ । ನೈವಂ ಮನ್ತವ್ಯಂ ಸಾಮಾವಯವಭೂತಸ್ಯೈವ ಉದ್ಗೀಥಾದಿ ಲಕ್ಷಣಸ್ಯ ಓಂಕಾರಸ್ಯ ಉಪಾಸನಾತ್ ಫಲಂ ಪ್ರಾಪ್ಯತ ಇತಿ । ಕಿಂ ತರ್ಹಿ । ಯತ್ ಸರ್ವೈರಪಿ ಸಾಮೋಪಾಸನೈಃ ಕರ್ಮಭಿಶ್ಚ ಅಪ್ರಾಪ್ಯಮ್, ತತ್ಫಲಮ್ ಅಮೃತತ್ವಂ ಕೇವಲಾತ್ ಓಂಕಾರೋಪಾಸನಾತ್ ಪ್ರಾಪ್ಯತ ಇತಿ । ತತ್ಸ್ತುತ್ಯರ್ಥಂ ಸಾಮಪ್ರಕರಣೇ ತದುಪನ್ಯಾಸಃ ॥

(ಭಾಷ್ಯಾರ್ಥ)

ಓಂಕಾರದ ಉಪಾಸನೆಯನ್ನು ವಿಧಿಸುವದಕ್ಕಾಗಿ ''ತ್ರಯೋ ಧರ್ಮಸ್ಕನ್ಧಾಃ'' ಎಂದು ಮುಂತಾಗಿರುವದನ್ನು ಆರಂಭಿಸಲಾಗಿರುತ್ತದೆ. ಸಾಮಾವಯವವಾಗಿರುವ ಉದ್ಗೀಥಾದಿರೂಪದ ಓಂಕಾರದ ಉಪಾಸನೆಯಿಂದ ಮಾತ್ರವೇ[1] ಫಲವು ದೊರಕುತ್ತದೆ ಎಂದು ತಿಳಿಯಬಾರದು ; ಮತ್ತೇನೆಂದರೆ ಸರ್ವಸಾಮೋಪಾಸನೆಗಳಿಂದಲೂ ಕರ್ಮಗಳಿಂದಲೂ ಅಪ್ರಾಪ್ಯವಾಗಿರುವ ಫಲವಿದೆಯಲ್ಲ, ಆ ಅಮೃತತ್ವವೆಂಬ ಫಲವೂ[2] ಕೇವಲ[3] ಓಂಕಾರದ ಉಪಾಸನೆಯಿಂದ ದೊರಕುತ್ತದೆ ಎಂದು

1. ಈ ಉಪನಿಷತ್ತಿನ ಒಂದನೆಯ ಅಧ್ಯಾಯದಲ್ಲಿ ಉದ್ಗೀಥಾವಯವವಾಗಿರುವ ಓಂಕಾರವನ್ನು ಬಗೆಬಗೆಯಾಗಿ ಉಪಾಸನೆಮಾಡುವ ವಿಧಾನವನ್ನು ಹೇಳಿರುತ್ತದೆ. ಆ ಉಪಾಸನೆಗಳು ಉದ್ಗಾತೃವಿಗೆ ಮಾತ್ರ ಹೇಳಿದವುಗಳಾದ್ದರಿಂದ ಕರ್ಮಕ್ಕೆ ಸಂಬಂಧ ಪಟ್ಟಿರುತ್ತವೆ.
2. ಇದುವರೆಗೆ ಹೇಳಿರುವ ಯಾವ ಉಪಾಸನೆಗಾಗಲಿ ಯಾವ ಕರ್ಮಕ್ಕಾಗಲಿ ಅಮೃತತ್ವವು ಫಲವಲ್ಲ.
3. ಕರ್ಮಕ್ಕೆ ಸಂಬಂಧವಿಲ್ಲದೆ ಸ್ವತಂತ್ರವಾಗಿರುವ.

(ತಿಳಿಯಬೇಕು)- ಎಂದು ಅದನ್ನು ಹೊಗಳುವದಕ್ಕಾಗಿ ಸಾಮಪ್ರಕರಣದಲ್ಲಿ[1] ಅದನ್ನು ಹೇಳಿರುತ್ತದೆ.

ಪ್ರಣವಸಂಸ್ಥನಿಗೆ ಅಮೃತತ್ವ

(ಭಾಷ್ಯ)

೧೭೬. ತ್ರಯಃ ತ್ರಿಸಂಖ್ಯಾಕಾ ಧರ್ಮಸ್ಯ ಸ್ಕನ್ಧಾಃ ಧರ್ಮಸ್ಕನ್ಧಾಃ । ಧರ್ಮಪ್ರವಿಭಾಗಾಃ ಇತ್ಯರ್ಥಃ । ಕೇ ತೇ ಇತಿ ? ಆಹ । ಯಜ್ಞಃ ಅಗ್ನಿಹೋತ್ರಾದಿಃ, ಅಧ್ಯಯನಂ ಸನಿಯಮಸ್ಯ ಋಗಾದೇರಭ್ಯಾಸಃ, ದಾನಂ ಬಹಿರ್ವೇದಿ ಯಥಾಶಕ್ತಿ ದ್ರವ್ಯಸಂವಿಭಾಗೋ ಭಿಕ್ಷಮಾಣೇಭ್ಯಃ ಇತ್ಯೇಷ ಪ್ರಥಮೋ ಧರ್ಮಸ್ಕನ್ಧಃ । ಗೃಹಸ್ಥಸಮವೇತತ್ವಾತ್ ತನ್ನಿರ್ವರ್ತಕೇನ ಗೃಹಸ್ಥೇನ ನಿರ್ದಿಶ್ಯತೇ । ಪ್ರಥಮಃ ಏಕಃ ಇತ್ಯರ್ಥಃ । ದ್ವಿತೀಯತೃತೀಯಶ್ರವಣಾತ್ ನ ಆದ್ಯರ್ಥಃ । ತಪ ಏವ ದ್ವಿತೀಯಃ । ತಪಃ ಇತಿ ಕೃಚ್ಛ್ರಚಾನ್ದ್ರಾಯಣಾದಿ । ತದ್ವಾನ್ ತಾಪಸಃ ಪರಿವ್ರಾಡ್ವಾ । ನ ಬ್ರಹ್ಮಸಂಸ್ಥಃ । ಆಶ್ರಮಧರ್ಮಮಾತ್ರಸಂಸ್ಥಃ[2] । ಬ್ರಹ್ಮಸಂಸ್ಥಸ್ಯ ತು ಅಮೃತತ್ವಶ್ರವಣಾತ್ । ದ್ವಿತೀಯಃ ಧರ್ಮಸ್ಕನ್ಧಃ । ಬ್ರಹ್ಮಚಾರೀ ಆಚಾರ್ಯಕುಲೇ ವಸ್ತುಂ ಶೀಲಮ್ ಅಸ್ಯ ಇತಿ ಆಚಾರ್ಯಕುಲವಾಸೀ । ಅತ್ಯನ್ತಂ ಯಾವಜ್ಜೀವಮ್ ಆತ್ಮಾನಂ ನಿಯಮ್ಯೇಃ ಆಚಾರ್ಯಕುಲೇ ಅವಸಾದಯನ್ ಕ್ಷಪಯನ್ ದೇಹಂ ತೃತೀಯೋ ಧರ್ಮಸ್ಕನ್ಧಃ । ಅತ್ಯನ್ತಮ್ ಇತ್ಯಾದಿವಿಶೇಷಣಾತ್ ನೈಷ್ಠಿಕ ಇತಿ ಗಮ್ಯತೇ । ಉಪಕುರ್ವಾಣಸ್ಯ ಸ್ವಾಧ್ಯಾಯಗ್ರಹಣಾರ್ಥತ್ವಾತ್ ನ ಪುಣ್ಯಲೋಕತ್ವಂ ಬ್ರಹ್ಮಚರ್ಯೇಣ । ಸರ್ವ ಏತೇ ತ್ರಯೋಽಪಿ ಆಶ್ರಮಿಣಃ ಯಥೋಕ್ತೈರ್ಧರ್ಮೈಃ ಪುಣ್ಯಲೋಕಾ ಭವನ್ತಿ । ಪುಣ್ಯೋ ಲೋಕೋ ಯೇಷಾಂ ತ ಇಮೇ ಪುಣ್ಯಲೋಕಾಃ ಆಶ್ರಮಿಣೋ ಭವನ್ತಿ । ಅವಶಿಷ್ಟಸ್ತು ಅನುಕ್ತಃ ಪರಿವ್ರಾಟ್ ತುರೀಯಃ[3] ಬ್ರಹ್ಮಸಂಸ್ಥಃ ಬ್ರಹ್ಮಣಿ ಸಮ್ಯಕ್ಸ್ಥಿತಃ । ಸಃ ಅಮೃತತ್ವಂ ಪುಣ್ಯಲೋಕವಿಲಕ್ಷಣಮ್ ಅಮರಣಭಾವಮ್ ಆತ್ಯನ್ತಿಕಮ್ ಏತಿ । ನಾಪೇಕ್ಷಿಕಮ್ ದೇವಾದ್ಯಮೃತತ್ವವತ್ । ಪುಣ್ಯಲೋಕಾತ್ ಪೃಥಕ್ ಅಮೃತತ್ವಸ್ಯ ವಿಭಾಗಕರಣಾತ್ । ಯದಿ ಚ ಪುಣ್ಯಲೋಕಾತಿಶಯಮಾತ್ರಮ್ ಅಮೃತತ್ವಮ್

1. ಪ್ರಕರಣವು ಸಾಮೋಪಾಸನೆಯದಾದರೂ ಕರ್ಮಕ್ಕೆ ಸಂಬಂಧಪಟ್ಟಿದ್ದರೂ ಓಂಕಾರವನ್ನು ಸ್ತುತಿಸುವದಕ್ಕಾಗಿ ಅದರ ಸ್ವತಂತ್ರೋಪಾಸನೆಯನ್ನು ಇಲ್ಲಿ ಪ್ರಾಸಂಗಿಕವಾಗಿ ಹೇಳಿದೆ. ಈ ಉಪಾಸನೆಯು ಸಾಮಪ್ರಕರಣಕ್ಕೇನೂ ಸೇರಿದ್ದಲ್ಲ- ಎಂದು ಭಾವ.
2. ಅನುವಾದದ ಟಿಪ್ಪಣಿಯನ್ನು ನೋಡಿ.
3. ಈ ಮಾತು ವಾ॥ ಆ॥ ಪುಸ್ತಕಗಳಲ್ಲಿದೆ ; ಇದು ಇಲ್ಲದಿದ್ದರೂ ಸಾಗುತ್ತದೆ.

ಅಭವಿಷ್ಯತ್ ತತಃ ಪುಣ್ಯಲೋಕತ್ವಾದ್ ವಿಭಕ್ತಂ ನಾವಕ್ಷ್ಯತ್ । ವಿಭಕ್ತೋಪದೇಶಾಚ್ಚ ಆತ್ಯನ್ತಿಕಮ್ ಅಮೃತತ್ವಮ್ ಇತಿ ಗಮ್ಯತೇ ॥

(ಭಾಷ್ಯಾರ್ಥ)

ಮೂರು ಎಂದರೆ ಮೂರು ಸಂಖ್ಯೆಯ ಧರ್ಮಸ್ಕಂಧಗಳು - ಧರ್ಮದ ಸ್ಕಂಧಗಳು, ಧರ್ಮದ ಪ್ರವಿಭಾಗಗಳು (ಇವೆ) ಎಂದರ್ಥ. ಅವು ಯಾವವು ? ಎಂದರೆ (ಶ್ರುತಿ) ಹೇಳುತ್ತದೆ. ಯಜ್ಞವು, ಎಂದರೆ ಅಗ್ನಿಹೋತ್ರವೇ ಮುಂತಾದದ್ದು ; ಅಧ್ಯಯನವು, ಎಂದರೆ ನಿಯಮಸಹಿತವಾಗಿ ಋಗಾದಿಗಳನ್ನು ಅಭ್ಯಾಸಮಾಡುವದು[1] ; ದಾನವು ಎಂದರೆ ವೇದಿಯ ಹೊರಗೆ[2] ಬೇಡಿದವರಿಗೆ ಯಥಾಶಕ್ತಿಯಾಗಿ ದ್ರವ್ಯವನ್ನು ಹಂಚಿಕೊಡುವದು- ಎಂಬಿದು ಒಂದನೆಯ ಧರ್ಮಸ್ಕಂಧವು. (ಇದು) ಗೃಹಸ್ಥನಿಗೆ ಸಂಬಂಧಪಟ್ಟದ್ದಾದ್ದರಿಂದ (ಈ ಧರ್ಮವಿಭಾಗವನ್ನು) ಅದನ್ನು ಮಾಡುವ ಗೃಹಸ್ಥನಿಂದ (ಗೃಹಸ್ಥಾಶ್ರಮ ಎಂದು) ನಿರ್ದೇಶಮಾಡಿರುತ್ತದೆ. (ಈ ಆಶ್ರಮವು) ಪ್ರಥಮವು ಎಂದರೆ ಒಂದು ಎಂದರ್ಥ ; ಮೊದಲನೆಯದು ಎಂದರ್ಥವಲ್ಲ, ಏಕೆಂದರೆ (ಮುಂದೆ) ಎರಡನೆಯದು, ಮೂರನೆಯದು ಎಂದು ಶ್ರುತಿಯಲ್ಲಿದೆ.[3] ತಪಸ್ಸೇ ಎರಡನೆಯದು. ತಪಸ್ಸು ಎಂದರೆ ಕೃಚ್ಛ್ರಚಾಂದ್ರಾಯಣಾದಿಗಳು ; ಅವನ್ನುಳ್ಳವನು ತಾಪಸನು, ಅಥವಾ (ಇಲ್ಲಿ ತಪಸ್ಸು ಎಂದರೆ) ಆಶ್ರಮಧರ್ಮಮಾತ್ರದಲ್ಲಿರುವ ಪರಿವ್ರಾಜಕನು[4], ಬ್ರಹ್ಮಸಂಸ್ಥನಲ್ಲ ; ಏಕೆಂದರೆ ಬ್ರಹ್ಮಸಂಸ್ಥನಿಗಾದರೋ ಅಮೃತತ್ವ

---

1. ಗೃಹಸ್ಥನಿಗೂ ನಿಯಮದಿಂದ ವೇದಾಭ್ಯಾಸವನ್ನು ಮಾಡುವದೆಂಬ, ಬ್ರಹ್ಮಯಜ್ಞವನ್ನು ಮಾಡುವದೆಂಬ ಧರ್ಮವಿದೆ.

2. ವೇದಿಯಲ್ಲಿ ಕೊಡುವ ದಕ್ಷಿಣೆಯು ಯಜ್ಞಾಂಗವು ; ಆದ್ದರಿಂದ ಯಜ್ಞದ ವೇದಿಯಲ್ಲಲ್ಲದೆ ಕೊಡುವದನ್ನೇ ಇಲ್ಲಿ ದಾನವೆಂದಿದೆ.
ವಾನಪ್ರಸ್ಥವು ಎರಡನೆಯದು, ಆಚಾರ್ಯ ಕುಲವಾಸಿತ್ವವು ಮೂರನೆಯದು- ಎಂದಿರುವದರಿಂದ ಇಲ್ಲಿ ಆಶ್ರಮಗಳ ಕ್ರಮವನ್ನು ಹೇಳಿಲ್ಲ ; ಆದ್ದರಿಂದ ಗೃಹಸ್ಥಾಶ್ರಮವು ಪ್ರಥಮವು, ಎಂದರೆ ಒಂದು ಎಂದಿಷ್ಟೇ ಅರ್ಥ. ಮೂರು ಆಶ್ರಮಗಳು ಯಾವವೆಂಬುದನ್ನು ಅನುವಾದಮಾಡುವದು ಮಾತ್ರ ಇಲ್ಲಿ ವಿವಕ್ಷಿತ- ಎಂದರ್ಥ.

4. ಸಂನ್ಯಾಸಾಶ್ರಮರೂಪವಾದ ಪಾರಿವ್ರಾಜ್ಯವನ್ನು ಸ್ವೀಕರಿಸಿ ಯಜ್ಞೋಪವೀತ ದಂಡಕಮಂಡಲ್ವಾದಿಗಳನ್ನು ಧರಿಸುವವನು. ಇವನಿಗೆ ಬ್ರಹ್ಮಲೋಕಪ್ರಾಪ್ತಿಯಾಗುವದೆಂದು ಸ್ಮೃತಿ.ಬೃ. ೩-೫-೧ (ಭಾ.ಭಾ. ೬೦)ನ್ನು ನೋಡಿ. 'ಇಲ್ಲಿ ಪರಿವ್ರಾಡ್ವಾ ಆಶ್ರಮಧರ್ಮಮಾತ್ರ ಸಂಸ್ಥಃ । ನ ಬ್ರಹ್ಮಸಂಸ್ಥಃ । ಬ್ರಹ್ಮಸಂಸ್ಥಸ್ಯ ತು....' ಈ ಅನುಕ್ರಮದಲ್ಲಿ ಮೂಲದಲ್ಲಿ ವಾಕ್ಯಗಳಿರಬೇಕಾಗಿತ್ತೆಂದು ತೋರುತ್ತದೆ. 'ಅಥವಾ ಪರಿವ್ರಾಜಕನು' ಎಂಬಲ್ಲಿ ವಿಕಲ್ಪವನ್ನು ಹೇಳಬಾರದು ; ವಾನಪ್ರಸ್ಥ ಮತ್ತು ಆಶ್ರಮಪರಿವ್ರಾಜಕ - ಇಬ್ಬರನ್ನೂ ತಂತ್ರದಿಂದ ಹೇಳಿದೆ ಎಂದು ಅರ್ಥವನ್ನು ಮಾಡಬೇಕು. ಹಾಗಿಲ್ಲದಿದ್ದರೆ ವಾನಪ್ರಸ್ಥಾಶ್ರಮವನ್ನು ಕೈಬಿಟ್ಟಂತೆ ಆದೀತು.

(ಫಲವೆಂದು) ಶ್ರುತಿಯಲ್ಲಿ (ಬೇರೆಯಾಗಿ) ಹೇಳಿದೆ.[1] (ಇದು) ಎರಡನೆಯ ಸ್ಕಂಧವು. ಅತ್ಯಂತವಾಗಿ ಎಂದರೆ ಜೀವವಿರುವವರೆಗೂ ನಿಯಮಗಳಿಂದ ತನ್ನನ್ನು ಸವೆಯಿಸಿಕೊಳ್ಳುತ್ತಿರುವವನು, ದೇಹವನ್ನು ಕ್ಷಯಗೊಳಿಸುತ್ತಿರುವ ಆಚಾರ್ಯನ ಮನೆಯಲ್ಲಿಯೇ ವಾಸಮಾಡುವ ಸ್ವಭಾವದವನಾದ ಆಚಾರ್ಯಕುಲವಾಸಿಯು ಮೂರನೆಯ ಸ್ಕಂಧವು. (ಇಲ್ಲಿ) ಅತ್ಯಂತವಾಗಿ ಎಂದು ಮುಂತಾಗಿರುವ ವಿಶೇಷಣದಿಂದ ನೈಷ್ಠಿಕಬ್ರಹ್ಮಚಾರಿ ಎಂದು ಗೊತ್ತಾಗುತ್ತದೆ. ಉಪಕುರ್ವಾಣ (ಬ್ರಹ್ಮಚಾರಿಯಾಗಿ) ಸ್ವಾಧ್ಯಾಯಗ್ರಹಣಕ್ಕಾಗಿ (ಬ್ರಹ್ಮಚಾರಿಯಾಗಿರುವದರಿಂದ) ಅವನಿಗೆ ಬ್ರಹ್ಮಚರ್ಯದಿಂದ ಪುಣ್ಯಲೋಕ (ಫಲವಿಲ್ಲ).

ಇವರೆಲ್ಲರೂ, (ಈ) ಮೂರು ಆಶ್ರಮದವರೂ (ಈ) ಮೇಲೆ ಹೇಳಿರುವ ಧರ್ಮಗಳಿಂದ ಪುಣ್ಯಲೋಕರಾಗುವರು ; ಪುಣ್ಯವಾದ ಲೋಕ ಯಾರಿಗೆ ಇರುವದೋ ಆ ಈ (ಮೂವರು) ಆಶ್ರಮಿಗಳು ಪುಣ್ಯಲೋಕರಾಗುವರು[2]. ಇನ್ನು ಉಳಿದ (ಈವರೆಗೆ) ಹೇಳದಿರುವ ಪರಿವ್ರಾಜಕನು[3] ಬ್ರಹ್ಮಸಂಸ್ಥನು, ಎಂದರೆ ಬ್ರಹ್ಮದಲ್ಲಿ ಚೆನ್ನಾಗಿ ನೆಲೆನಿಂತವನು (ಇದಾನಷ್ಟೆ), ಅವನು ಪುಣ್ಯಲೋಕಕ್ಕಿಂತ ವಿಲಕ್ಷಣವಾದ ಅಮೃತತ್ವವನ್ನು ಅತ್ಯಂತಿಕವಾದ ಅಮರಣಭಾವವನ್ನು[4] ಹೊಂದುತ್ತಾನೆ, ದೇವಾದಿಗಳನ್ನು (ಸೇರುವ) ಅಮೃತತ್ವದಂತೆ ಆಪೇಕ್ಷಿಕವಾದ ಅಮೃತತ್ವ(ವ)ನ್ನಲ್ಲ.[5] ಏಕೆಂದರೆ ಪುಣ್ಯಲೋಕಕ್ಕಿಂತ ಬೇರೆಯೇ ಆಗಿ ಅಮೃತತ್ವವನ್ನು ವಿಂಗಡ ಮಾಡಿರುತ್ತದೆ. (ಇಲ್ಲಿ ಹೇಳಿರುವ) ಅಮೃತತ್ವವು ಪುಣ್ಯಲೋಕದ ಅತಿಶಯಮಾತ್ರವೇ

---

1. ಹಿಂದಿನ ಆಶ್ರಮದವರಿಂದ ಬ್ರಹ್ಮಸಂಸ್ಥಪರಿವ್ರಾಜಕನನ್ನು ವಿಂಗಡಿಸಿಕೊಂಡು ಬ್ರಹ್ಮಸಂಸ್ಥೋऽಮೃತತ್ವಮೇತಿ - ಎಂದು ಹೇಳಿದೆ ಎಂದರ್ಥ.
2. ಇಲ್ಲಿ ಪುಣ್ಯಲೋಕವೆಂದರೆ ಸ್ವರ್ಗಮಾತ್ರವಲ್ಲ ; ಪಂಚಾಗ್ನ್ಯುಪಾಸನೆಯೇ ಮುಂತಾದವುಗಳಿಂದ ಉತ್ತರಮಾರ್ಗದ ಮೂಲಕ ಪಡೆಯುವ ಬ್ರಹ್ಮಲೋಕವೂ ಇದರಲ್ಲಿ ಸೇರಿದೆ. ಬೃ.ಭಾ. ೬-೨-೧೫ (ಭಾ. ಭಾ. ೪೪೭). ಬರಿಯ ಕರ್ಮಿಗಳಿಗೆ ಪಿತೃಲೋಕದ ಬೇರೆಯ ಫಲವಿದೆ ಬೃ.ಭಾ. ೬-೨-೧೫ (ಭಾ.ಭಾ. ೪೪೮).
3. ಮುಖ್ಯಪರಿವ್ರಾಜಕನಾದ ಪರಮಹಂಸನು.
4. ಅಮರಣನಾದ ಆತ್ಮನಲ್ಲಿಯೇ ಆತ್ಮರೂಪದಿಂದ ನಿಂತುಬಿಡುವ ಮೋಕ್ಷವನ್ನು ಎಂದರ್ಥ.
5. ಬ್ರಹ್ಮಲೋಕಾಂತವಾದ ದೇವಲೋಕಪ್ರಾಪ್ತಿಯೂ ಪ್ರಲಯಕಾಲದವರೆಗಿರುವದರಿಂದ ಅದೂ ಇತರ ಲೋಕಗಳ ಅಪೇಕ್ಷೆಯಿಂದ ಅಮೃತತ್ವವೆನಿಸುತ್ತದೆ. ಆದರೆ ಜ್ಞಾನವಿಲ್ಲದಿದ್ದರೆ ಬ್ರಹ್ಮಲೋಕದಿಂದಲೂ ಪುನರಾವೃತ್ತಿಯುಂಟು. ಇದನ್ನು ಬೃ.ಭಾ. ೬-೨-೧೫ (ಭಾ. ಭಾ. ೪೫೦)ರಲ್ಲಿ ಹೇಳಿದೆ. ಇಲ್ಲಿಯೂ ಮುಂದೆ ೫-೧೦-೨ರ ಭಾಷ್ಯದಲ್ಲಿ ಹೀಗೆಂದೇ ಹೇಳಿದೆ.

ಆಗಿದ್ದರೆ, ಆಗ ಪುಣ್ಯಲೋಕದಿಂದ (ಅದನ್ನು) ವಿಂಗಡಿಸಿ ಹೇಳುತ್ತಿರಲಿಲ್ಲ. (ಆದರೆ) ವಿಂಗಡಿಸಿಯೇ ಹೇಳಿರುವದರಿಂದ (ಇದು) ಆತ್ಯಂತಿಕವಾದ ಅಮೃತತ್ವವೇ ಎಂದು ಗೊತ್ತಾಗುತ್ತದೆ.[1]

ಇಲ್ಲಿ ಫಲವನ್ನು ಹೇಳಿರುವದು ಪ್ರಣವಸ್ತುತಿಗಾಗಿಯೇ

(ಭಾಷ್ಯ)

೧೭೭. ಅತ್ರ ಚ ಆಶ್ರಮಧರ್ಮಫಲೋಪನ್ಯಾಸಃ ಪ್ರಣವಸೇವಾಸ್ತುತ್ಯರ್ಥಮ್, ನ ತತ್ಫಲವಿಧ್ಯರ್ಥಮ್[2] । ಸ್ತುತಯೇ ಚ ಪ್ರಣವಸೇವಾಯಾಃ, ಆಶ್ರಮಧರ್ಮಫಲ ವಿಧಯೇ ಚ ಇತಿ ಹಿ ಭಿದ್ಯೇತ ವಾಕ್ಯಮ್ । ತಸ್ಮಾತ್ ಸ್ಮೃತಿಪ್ರಸಿದ್ಧಾಶ್ರಮ-ಫಲಾನುವಾದೇನ ಪ್ರಣವಸೇವಾಫಲಮ್ ಅಮೃತತ್ವಂ ಬ್ರುವನ್ ಪ್ರಣವಸೇವಾಂ ಸ್ತೌತಿ । ಯಥಾ ಪೂರ್ಣವರ್ಮಣಃ ಸೇವಾ ಭುಕ್ತಪರಿಧಾನಮಾತ್ರಫಲಾ, ರಾಜವರ್ಮಣಸ್ತು ಸೇವಾ ರಾಜ್ಯತುಲ್ಯಫಲಾ ಇತಿ, ತದ್ವತ್ । ಪ್ರಣವಶ್ಚ ತತ್ ಸತ್ಯಂ ಪರಂ ಬ್ರಹ್ಮ । ತತ್ಪ್ರತೀಕತ್ವಾತ್ । "ಏತದ್ಧ್ಯೇವಾಕ್ಷರಂ ಬ್ರಹ್ಮ ಏತದ್ಧ್ಯೇವಾಕ್ಷರಂ ಪರಮ್" (ಕ. ೧-೨-೧೬) ಇತ್ಯಾದ್ಯಾಮ್ನಾನಾತ್ ಕಾಠಕೇ ಯುಕ್ತಂ ತತ್ಸೇವಾತೋಽಮೃತತ್ವಮ್ ॥

(ಭಾಷ್ಯಾರ್ಥ)

ಇಲ್ಲಿ ಆಶ್ರಮಧರ್ಮಗಳಿಗೆ ಫಲವನ್ನು ಹೇಳಿರುವದು ಪ್ರಣವಸೇವೆಯನ್ನು ಹೊಗಳುವದಕ್ಕಾಗಿಯೇ ಹೊರತು ಅವುಗಳ ಫಲವನ್ನು ವಿಧಾನಮಾಡುವದಕ್ಕಲ್ಲ.[3] ಏಕೆಂದರೆ ಪ್ರಣವಸೇವೆಯನ್ನು ಹೊಗಳುವದಕ್ಕೂ (ಬಂದಿದೆ), ಆಶ್ರಮಧರ್ಮಗಳ ಫಲವನ್ನು ವಿಧಿಸುವದಕ್ಕೂ (ಬಂದಿದೆ) - ಎಂದಾದರೆ ವಾಕ್ಯವು ಭಿನ್ನವಾಗುತ್ತದೆ.[4]

---

1. ಅಮೃತತ್ವವೆಂದರೆ ಬ್ರಹ್ಮಲೋಕಪ್ರಾಪ್ತಿಯಾಗಿದ್ದರೆ ಮೊದಲನೆಯ ಮೂವರಿಗೆ ಪುಣ್ಯಲೋಕ, ಬ್ರಹ್ಮಸಂಸ್ಥನಿಗೆ ಅಮೃತತ್ವ - ಎಂದು ವಿಂಗಡಿಸಿ ಹೇಳುವದಕ್ಕೆ ಕಾರಣವಿರಲಿಲ್ಲ ಎಂದರ್ಥ.
2. ವಾ॥ ವಾಠದಲ್ಲಿ ಸ್ತುತ್ಯರ್ಥಃ, ವಿಧ್ಯರ್ಥಃ - ಎಂದಿದೆ.
3. ಇಂಥಿಂಥ ಆಶ್ರಮಕರ್ಮಕ್ಕೆ ಇಂಥಿಂಥ ಫಲ ಎಂದು ಹೇಳುವದಕ್ಕೆ ಬಂದಿಲ್ಲ.
4. ಒಂದು ತಾತ್ಪರ್ಯವುಳ್ಳದ್ದು ಒಂದು ವಾಕ್ಯವು ; ಹೀಗಿರುವಲ್ಲಿ ಎರಡು ತಾತ್ಪರ್ಯ ಗಳನ್ನು ಹೇಳುವದಾದರೆ ಇದನ್ನು ಅನವಶ್ಯವಾಗಿ ಎರಡು ವಾಕ್ಯಗಳೆಂದು ವಿಂಗಡಿಸಿದಂತೆ ಆಗುತ್ತದೆ. ಇದು ಮೀಮಾಂಸಾನ್ಯಾಯಕ್ಕೆ ವಿರುದ್ಧ. ಹಿಂದೆ ಹೇಳಿದ್ದು ಮುಖ್ಯಬ್ರಹ್ಮಸಂಸ್ಥನಿಗೆ ನಿರಂಕುಶವಾದ ಅಮೃತತ್ವವಾಗುವದೆಂದು ; ಇಲ್ಲಿ ಹೇಳಿರುವದು ಪ್ರಣವಪ್ರತೀಕೋಪಾಸಕ-ನಿಗೆ ಕ್ರಮಮುಕ್ತಿಯಾಗುವದೆಂದು- ಎಂದು ಟೀಕೆಯಲ್ಲಿ ವಿಂಗಡಿಸಿದೆ ಆದರೆ →

ಆದ್ದರಿಂದ ಸ್ಮೃತಿಪ್ರಸಿದ್ಧವಾಗಿರುವ ಆಶ್ರಮಫಲಗಳನ್ನು ಅನುವಾದಮಾಡಿಕೊಂಡು, ಪ್ರಣವಸೇವೆಯ ಫಲವಾದ ಅಮೃತತ್ವವನ್ನು ಹೇಳುವದರಮೂಲಕ ಪ್ರಣವಸೇವೆಯನ್ನು ಹೊಗಳಿರುತ್ತದೆ.[1] 'ಪೂರ್ಣವರ್ಮನ ಸೇವೆಯು ಹೊಟ್ಟೆಬಟ್ಟೆಗಳಿಗೆ ಮಾತ್ರ (ಆಗುವ) ಫಲವುಳ್ಳದ್ದು, ಆದರೆ ರಾಜವರ್ಮನ ಸೇವೆಯು ರಾಜ್ಯಕ್ಕೆ ಸಮಾನವಾದ ಫಲವುಳ್ಳದ್ದು' ಎಂಬ (ವಾಕ್ಯಕ್ಕೆ) ಹೇಗೋ ಹಾಗೆಯೇ (ಈ ವಾಕ್ಯಕ್ಕೂ ಅರ್ಥವು). ಪ್ರಣವವು ಆ ಸತ್ಯವಾದ ಪರಬ್ರಹ್ಮವೇ ; ಏಕೆಂದರೆ ಅದಕ್ಕೆ ಪ್ರತೀಕವಾಗಿರುತ್ತದೆ.[2] ''ಈ ಅಕ್ಷರವೇ (ಅಪರ)ಬ್ರಹ್ಮವು, ಈ ಅಕ್ಷರವೇ ಪರಬ್ರಹ್ಮವು'' (ಕ. ೧-೨-೧೬) ಎಂದು ಕಾಠಕದಲ್ಲಿ ವಠಿಸಿರುವದರಿಂದ ಅದರ ಸೇವೆಯಿಂದ ಅಮೃತತ್ವವಾಗುವದು ಯುಕ .[3]

ಪ್ರಕರಣದಲ್ಲಿ ಓಂಕಾರೋಪಾಸನೆಯು ವಿವಕ್ಷಿತವೆಂಬುದು ನಿರ್ವಿವಾದವಾಗಿರುವದರಿಂದ ಹೀಗೆ ವಾಕ್ಯಾರ್ಥವನ್ನು ವಿಂಗಡಿಸುವದು ಯುಕ್ತವೆಂತ ನಮಗೆ ತೋರುವದಿಲ್ಲ. ಪ್ರಣವಸೇವೆಯಿಂದ ಆತ್ಯಂತಿಕವಾದ ಅಮೃತತ್ವವಾಗುತ್ತದೆ ಎಂಬುದು ಜ್ಞಾನಕ್ಕೂ ಉಪಾಸನೆಗೂ ಸಮಾನ ; ಮಿಕ್ಕ ಆಶ್ರಮಗಳಿಗೆ ಆಪೇಕ್ಷಿಕಾಮೃತತ್ವವೇ ಹೊರತು ಆತ್ಯಂತಿಕಾಮೃತತ್ವವಿಲ್ಲ ಎಂಬುದೇ ಸ್ತುತಿಯ ಅಭಿಪ್ರಾಯವೆಂದೇ ಇಲ್ಲಿ ವಾಕ್ಯಾರ್ಥ.

1. ಈ ವಾಕ್ಯಕ್ಕೆ ಅರ್ಥವೇನೆಂಬುದನ್ನು ನಿಶ್ಚಯಿಸುವದು ಕಠಿನವಾಗಿದೆ. ಏಕೆಂದರೆ ಪಂಚಾಗ್ನಿವಿದ್ಯೆಯ ಗೃಹಸ್ಥರಿಗೂ ವಾನಪ್ರಸ್ಥರಿಗೂ ಪುಣ್ಯಲೋಕವ್ಯಾಪ್ತಿಯು ಶ್ರುತಿಸಿದ್ಧವೇ ಆಗಿದೆ ; ನೈಷ್ಠಿಕಬ್ರಹ್ಮಚಾರಿಗಳಿಗೆ ಮಾತ್ರ ಸ್ಮೃತಿಸಿದ್ಧವಾಗಿದೆ. ಬೃ. ಭಾ. ೬-೨-೧೫ (ಭಾ. ಭಾ. ೪೪೭)ನ್ನು ನೋಡಿ. ಸ್ಮೃತಿಸಿದ್ಧವಾದದ್ದನ್ನು ಶ್ರುತಿಯು ಅನುವಾದ ಮಾಡಲಾರದಾದ್ದರಿಂದ ಸ್ಮೃತ್ಯನುಮಿತಶ್ರುತಿಸಿದ್ಧ ಎಂದು ಅರ್ಥಮಾಡಬೇಕೆಂದು ಟೀಕೆಯಲ್ಲಿದೆ ; ಆದರೆ ಬೃಹದಾರಣ್ಯಕ ೬-೩-೧೮ರ ಭಾಷ್ಯ (ಭಾ. ಭಾ. ೪೫೮)ಕ್ಕೆ ಶ್ರುತಿಯು ಕಾಲತ್ರಯವಿಷಯಕವಾದ್ದರಿಂದ ಸ್ಮೃತಿಯನ್ನು ಅನುಮಾನಮಾಡಬಹುದು ಎಂದು ಟೀಕೆಯಲ್ಲಿ ಬರೆದಿದೆ. ಮಿಮಾಂಸಾಕುಶಲರೇ ಇದರ ನಿಶ್ಚಯವನ್ನು ಹೇಳಬೇಕಾಗಿದೆ.

2. ಓಂಕಾರವು ಪ್ರತೀಕವೂ ಆಗಿದೆ, ಅಭಿಧಾನವೂ ಆಗಿದೆ ; ಆದರೂ ಪ್ರಕೃತದಲ್ಲಿ ಪ್ರತೀಕವಾಗಿ ಉಪಾಸನೆಗೆಂದೇ ವಿಹಿತವಾಗಿರುವದರಿಂದ ಪ್ರತೀಕವೆಂದಿದೆ.

3. ಓಂಕಾರವನ್ನು ವರಬ್ರಹ್ಮಕ್ಕೆ ಪ್ರತೀಕವಾಗಿ ಉಪಾಸನೆಮಾಡಿದರೂ ಕ್ರಮಮುಕ್ತಿಯಾಗುವದೆಂದು ಪ್ರಶ್ನೋಪನಿಷತ್ತಿನಲ್ಲಿ ತಿಳಿಸಿದೆ. ಸೂ. ಭಾ. ೪-೩-೧೩ (ಭಾ. ಭಾ. ೨೫೨)ನ್ನು ನೋಡಿ. ಇಲ್ಲಿಯೂ ಅಮೃತತ್ವಫಲವನ್ನು ಹೇಳಿ ಸ್ತುತಿಸಿರುವದರಿಂದ ಈ ಉಪಾಸನೆಯೂ ಕ್ರಮಮುಕ್ತಿದಾಯಕವೆಂದು ತಿಳಿಯಬೇಕು.

ಚರ್ಚೆ : ಬ್ರಹ್ಮಸಂಸ್ಥನೆಂದರೆ ಯಾರು ?

ವೃತ್ತಿಕಾರರ ಮತ : ಯಾವ ಆಶ್ರಮದವರಾದರೂ ಬ್ರಹ್ಮಸಂಸ್ಥರಾಗಿರಬಹುದು

(ಭಾಷ್ಯ)

೧೭೮. ಅತ್ರಾಹುಃ ಕೇಚಿತ್ । ಚತುರ್ಣಾಮ್ ಆಶ್ರಮಿಣಾಮ್ ಅವಿಶೇಷೇಣ ಸ್ವಕರ್ಮಾನುಷ್ಠಾನಾತ್[1] ಪುಣ್ಯಲೋಕತಾ ಇಹೋಕ್ತಾ ಜ್ಞಾನವರ್ಜಿತಾನಾಮ್ ''ಸರ್ವ ಏತೇ ಪುಣ್ಯಲೋಕಾ ಭವನ್ತಿ'' ಇತಿ । ನಾತ್ರ ಪರಿವ್ರಾಟ್ ಅವಶೇಷಿತಃ । ಪರಿವ್ರಾಜಕಸ್ಯಾಪಿ ಜ್ಞಾನಂ ಯಮಾ ನಿಯಮಾಶ್ಚ ತಪ ಏವೇತಿ ''ತಪ ಏವ ದ್ವಿತೀಯಃ'' ಇತ್ಯತ್ರ ತಪಃಶಬ್ದೇನ ಪರಿವ್ರಾಟ್ತಾಪಸೌ ಗೃಹೀತೌ । ಅತಸ್ತೇಷಾಮೇವ ಚತುರ್ಣಾಂ ಯೋ ಬ್ರಹ್ಮಸಂಸ್ಥಃ ಪ್ರಣವಸೇವಕಃ ಸೋಽಮೃತತ್ವಮೇತಿ ಇತಿ । ಚತುರ್ಣಾಮ್ ಅಧಿಕೃತತ್ವಾವಿಶೇಷಾತ್, ಬ್ರಹ್ಮಸಂಸ್ಥತ್ವೇಽಪ್ರತಿಷೇಧಾಚ್ಚ । ಸ್ವಕರ್ಮಚ್ಛಿದ್ರೇ ಚ ಬ್ರಹ್ಮಸಂಸ್ಥತಾಯಾಂ ಸಾಮರ್ಥ್ಯೋಪಪತ್ತೇಃ । ನ ಚ ಯವವರಾಹಾದಿಶಬ್ದವತ್ ಬ್ರಹ್ಮಸಂಸ್ಥಶಬ್ದಃ ಪರಿವ್ರಾಜಕೇ ರೂಢಃ । ಬ್ರಹ್ಮಣಿ ಸಂಸ್ಥಿತಿನಿಮಿತ್ತಮ್ ಉಪಾದಾಯ ಪ್ರವೃತ್ತತ್ವಾತ್ । ನ ಹಿ ರೂಢಿಶಬ್ದಾ ನಿಮಿತ್ತಮ್ ಉಪಾದದತೇ । ಸರ್ವೇಷಾಂ ಚ ಬ್ರಹ್ಮಣಿ ಸ್ಥಿತಿರುಪಪದ್ಯತೇ[2] । ಯತ್ರ ಯತ್ರ ನಿಮಿತ್ತಮಸ್ತಿ ಬ್ರಹ್ಮಣಿ ಸಂಸ್ಥಿತಿಃ ತಸ್ಯ ತಸ್ಯ ನಿಮಿತ್ತವತೋ ವಾಚಕಂ ಸನ್ತಂ ಬ್ರಹ್ಮಸಂಸ್ಥಶಬ್ದಂ ಪರಿವ್ರಾಡೇಕವಿಷಯೇ ಸಂಕೋಚೇ ಕಾರಣಾಭಾವಾತ್ ನಿರೋದ್ಧುಮ್ ಅಯುಕ್ತಮ್ । ನ ಚ ಪಾರಿವ್ರಾಜ್ಯಾಶ್ರಮಧರ್ಮಮಾತ್ರೇಣ ಅಮೃತತ್ವಮ್ ಜ್ಞಾನಾನರ್ಥಕ್ಯಪ್ರಸಙ್ಗಾತ್ ಪಾರಿವ್ರಾಜ್ಯಧರ್ಮಯುಕ್ತಮೇವ ಜ್ಞಾನಮ್ ಅಮೃತತ್ವಸಾಧನಮ್ ಇತಿ ಚೇತ್, ನ । ಆಶ್ರಮಧರ್ಮತ್ವಾವಿಶೇಷಾತ್ । ಧರ್ಮೋ ವಾ ಜ್ಞಾನವಿಶಿಷ್ಟೋಽಮೃತತ್ವಸಾಧನಮ್ ಇತ್ಯೇತದಪಿ ಸರ್ವಾಶ್ರಮಧರ್ಮಾಣಾಮ್ ಅವಿಶಿಷ್ಟಮ್ ನ ಚ ವಚನಮಸ್ತಿ ಪರಿವ್ರಾಜಕಸ್ಯೈವ ಬ್ರಹ್ಮಸಂಸ್ಥಸ್ಯ ಮೋಕ್ಷಃ ನಾನ್ಯೇಷಾಮ್ ಇತಿ । ಜ್ಞಾನಾನ್ಮೋಕ್ಷ ಇತಿ ಚ ಸರ್ವೋಪನಿಷದಾಂ ಸಿದ್ಧಾನ್ತಃ । ತಸ್ಮಾತ್ ಯ ಏವ ಬ್ರಹ್ಮಸಂಸ್ಥಃ ಸ್ವಾಶ್ರಮವಿಹಿತಧರ್ಮವತಾಮ್, ಸೋಽಮೃತತ್ವಮೇತಿ ಇತಿ ॥

---

1. 'ಸ್ವಧರ್ಮಾನುಷ್ಠಾನಾತ್' ಎಂದು ವಾ॥ ಆ॥ ಪಾಠ.
2. 'ಸಂಸ್ಥಿತಿ' ಎಂದೇ ಮೂಲದಲ್ಲಿದ್ದು ಸ್ಥಿತಿ ಎಂದು ಲೇಖಕರು ಬರೆದುಕೊಂಡಿರಬಹುದೆಂದು ತೋರುತದೆ.

(ಭಾಷ್ಯಾರ್ಥ)

ಇಲ್ಲಿ ಕೆಲವರು ಹೇಳುತ್ತಾರೇನೆಂದರೆ, ''ಇವರೆಲ್ಲರೂ ಪುಣ್ಯಲೋಕದವರಾಗುತ್ತಾರೆ'' ಎಂದು ಇಲ್ಲಿ ಜ್ಞಾನವಿಲ್ಲದ ನಾಲ್ಕು ಆಶ್ರಮದವರಿಗೂ ಸಮಾನವಾಗಿಯೇ ಸ್ವಧರ್ಮಾನುಷ್ಠಾನದಿಂದ ಪುಣ್ಯಲೋಕ(ವ್ಯಾಪ್ತಿಯನ್ನು) ಹೇಳಿರುತ್ತದೆಯೇ ಹೊರತು ಪರಿವ್ರಾಜಕನನ್ನು ಈ (ವಾಕ್ಯ)ದಲ್ಲಿ ಉಳಿಸಿಕೊಂಡಿರುವದಿಲ್ಲ. ಪರಿವ್ರಾಜಕನಿಗೂ ಜ್ಞಾನ, ಯಮ, ನಿಯಮ-(ಎಂಬ ಧರ್ಮಗಳು) ತಪಸ್ಸೇ ಆದ್ದರಿಂದ ''ತಪಸ್ಸೇ ಎರಡನೆಯದು'' ಎಂಬೀ (ವಾಕ್ಯ)ದಲ್ಲಿ ಪರಿವ್ರಾಟ್ತಾಪಸರಿಬ್ಬರನ್ನೂ ಗ್ರಹಿಸಿದೆ. ಆದ್ದರಿಂದ ಆ ನಾಲ್ಕರೊಳಗೇ ಯಾವನು ಬ್ರಹ್ಮಸಂಸ್ಥನೋ, ಪ್ರಣವಸೇವಕನೋ, ಅವನು ಅಮೃತತ್ವವನ್ನು ಹೊಂದುತ್ತಾನೆ ಎಂದು (ಅವರು ಹೇಳುವರು).[1] ಏಕೆಂದರೆ ನಾಲ್ಕು ಆಶ್ರಮದವರಿಗೂ (ಬ್ರಹ್ಮಸಂಸ್ಥತೆಗೆ) ಅಧಿಕಾರವಿರುತ್ತದೆ, (ಯಾರನ್ನೂ ಅನಧಿಕಾರಿಗಳೆಂದು) ನಿಷೇಧಿಸಿಯೂ ಇರುವದಿಲ್ಲ. (ಎಲ್ಲರೂ) ಸ್ವಕರ್ಮವನ್ನು ಮಾಡದೆ ಇರುವಕಾಲದಲ್ಲಿ ಬ್ರಹ್ಮಸಂಸ್ಥರಾಗಿರುವ ಸಾಮರ್ಥ್ಯವಿರಬಹುದಾಗಿದೆ.[2] ಯವವರಾಹಾದಿಶಬ್ದಗಳಂತೆ ಬ್ರಹ್ಮಸಂಸ್ಥ ಎಂಬ ಶಬ್ದವು ಪರಿವ್ರಾಜಕನಲ್ಲಿಯೇ ರೂಢವಾಗಿರುವದೂ ಇಲ್ಲ[3] ; ಏಕೆಂದರೆ ಬ್ರಹ್ಮದಲ್ಲಿ ಸಂಸ್ಥಿತಿ (ನೆಲೆನಿಂತಿರುವದು) ಎಂಬ ನಿಮಿತ್ತವನ್ನು ತೆಗೆದುಕೊಂಡೇ (ಅದು) ಪ್ರವೃತ್ತವಾಗಿರುತ್ತದೆ. ರೂಢಿ ಶಬ್ದಗಳು ನಿಮಿತ್ತವನ್ನು ತೆಗೆದುಕೊಂಡು (ಪ್ರವೃತ್ತ)ವಾಗಿರುವದಿಲ್ಲವಷ್ಟೆ[4] ? ಎಲ್ಲರಿಗೂ ಬ್ರಹ್ಮದಲ್ಲಿ ನಿಂತಿರುವದೆಂಬುದು ಆಗಬಹುದಾಗಿದೆ. ಯಾವಯಾವನಿಗೆ ಬ್ರಹ್ಮದಲ್ಲಿ ನೆಲೆನಿಂತಿರುವದೆಂಬ ನಿಮಿತ್ತವಿರುವದೋ ಆಯಾ ನಿಮಿತ್ತವುಳ್ಳ (ಆಶ್ರಮಿ)ಯನ್ನು ಹೇಳಬಹುದಾಗಿರುವ (ಈ) ಬ್ರಹ್ಮಸಂಸ್ಥಶಬ್ಧವನ್ನು ಸಂಕೋಚಿಸಿ (ಹೇಳುವದಕ್ಕೆ)

---

1. ಗೀ. ಭಾ. ೩ನೆಯ ಅಧ್ಯಾಯದ ಅವತರಣಿಕೆಯಲ್ಲಿಯೂ ಹೀಗೆಯೇ ಜ್ಞಾನಕರ್ಮ ಸಮುಚ್ಚಯದಿಂದ ಮೋಕ್ಷವಾಗಬಹುದೆಂಬ ವೃತ್ತಿಕಾರಮತವನ್ನು ಅನುವಾದಮಾಡಿಕೊಂಡು ಖಂಡಿಸಿದೆ.
2. ಅಧಿಕಾರಕ್ಕೆ ಕಾರಣವಾದ ಆರ್ಥಿತ್ವ, ಸಾಮರ್ಥ್ಯ, ಜ್ಞಾನ, ಅಪ್ರತಿಷಿದ್ಧತ್ವ - ಇವು ಎಲ್ಲರಿಗೂ ಇರುವದರಿಂದ ಎಲ್ಲರೂ ಅಧಿಕಾರಿಗಳೇ ಎಂದು ಭಾವ.
3. ಜೈ.ಸೂ. ೧-೩-೮, ೯ ಇವುಗಳ ಶಾಬರಭಾಷ್ಯದಲ್ಲಿ ಯವವರಾಹಾದಿಶಬ್ದಗಳನ್ನು ಶಿಷ್ಟರು ರೂಢಿಯಲ್ಲಿ ಯಾವ ಅರ್ಥದಲ್ಲಿ ಬಳಸುತ್ತಾರೋ ಅವೇ ಅವಕ್ಕೆ ಅರ್ಥ - ಎಂದು ನಿರ್ಣಯಿಸಿದೆ. ಹೀಗೆ ಬ್ರಹ್ಮಸಂಸ್ಥನೆಂದರೆ ಇಂಥವನು ಎಂಬ ರೂಢ್ಯರ್ಥವು ಯಾವದೂ ಇಲ್ಲ- ಎಂದು ಅಭಿಪ್ರಾಯ.
4. ನಿಮಿತ್ತವನ್ನು ತೆಗೆದುಕೊಳ್ಳುವ ಶಬ್ದಗಳು ಯೌಗಿಕಶಬ್ದಗಳು ; ಆದ್ದರಿಂದ ಬ್ರಹ್ಮಸಂಸ್ಥಶಬ್ದವು ಯೌಗಿಕವೇ ಎಂದು ಅಭಿಪ್ರಾಯ.

ಕಾರಣವಿರುವದಿಲ್ಲವಾದ್ದರಿಂದ[1] (ಅದನ್ನು) ಪರಿವ್ರಾಜಕನಲ್ಲಿಯೇ ತಡೆಗಟ್ಟಿ (ಉಪಯೋಗಿಸುವದು) ಯುಕ್ತವಲ್ಲ.

ಇದೂ ಅಲ್ಲದೆ ಪಾರಿವ್ರಾಜ್ಯಾಶ್ರಮದ ಧರ್ಮಮಾತ್ರದಿಂದಲೇ[2] ಅಮೃತತ್ವವು (ದೊರಕುತ್ತದೆ ಎನ್ನುವದಕ್ಕೆ ಬರುವದಿಲ್ಲ) ; ಏಕೆಂದರೆ (ಆಗ) ಜ್ಞಾನವು ವ್ಯರ್ಥವೆಂದಾಗುವದು. ಪಾರಿವ್ರಾಜ್ಯಧರ್ಮದಿಂದೊಡಗೂಡಿದ ಜ್ಞಾನವೇ ಅಮೃತತ್ವಕ್ಕೆ ಸಾಧನವು ಎಂದರೆ, (ಅದು ಸರಿ)ಯಲ್ಲ; ಏಕೆಂದರೆ ಆಶ್ರಮಧರ್ಮವೆಂಬ (ವಿಷಯದಲ್ಲಿ ಅದರಲ್ಲಿ ಯಾವ) ವಿಶೇಷವೂ ಇಲ್ಲ.[3] (ಅಥವಾ ಆಶ್ರಮಧರ್ಮವೇ) ಜ್ಞಾನವಿಶಿಷ್ಟವಾದರೆ ಅಮೃತತ್ವಕ್ಕೆ ಸಾಧನ ಎಂದರೆ ಅದೂ ಸರ್ವಾಶ್ರಮಧರ್ಮಗಳಿಗೂ ಸಮಾನವಾಗಿರುತ್ತದೆ.[4] ಬ್ರಹ್ಮಸಂಸ್ಥನಾದ ಪರಿವ್ರಾಜಕನಿಗೊಬ್ಬನಿಗೇ ಮೋಕ್ಷವು. ಮಿಕ್ಕ (ಆಶ್ರಮಿ)ಗಳಿಗಲ್ಲ ಎಂಬ ವಚನವೂ ಇಲ್ಲ.[5] ಜ್ಞಾನದಿಂದ ಮೋಕ್ಷವು ಎಂಬುದು ಸರ್ವೋಪನಿಷತ್ತುಗಳ ಸಿದ್ಧಾಂತವಾಗಿರುತ್ತದೆ. ಆದ್ದರಿಂದ ತಮ್ಮತಮ್ಮ ಆಶ್ರಮಧರ್ಮಗ(ಳನ್ನು ಮಾಡುತ್ತಿರು)ವವರೊಳಗೆ ಯಾವನು ಬ್ರಹ್ಮಸಂಸ್ಥನೋ ಅವನೇ ಅಮೃತತ್ವವನ್ನು ಹೊಂದುತ್ತಾನೆ (ಎಂದೇ ವಾಕ್ಯಾರ್ಥ).

ಸಿದ್ಧಾಂತ : ಅದ್ವೈತಜ್ಞಾನಿಯಾದ ಪರಮಹಂಸನೇ ಬ್ರಹ್ಮಸಂಸ್ಥನು

(ಭಾಷ್ಯ)

೧೭೯. ನ । ಕರ್ಮನಿಮಿತ್ತವಿದ್ಯಾಪ್ರತ್ಯಯಯೋರ್ವಿರೋಧಾತ್ । ಕರ್ತ್ರಾದಿಕಾರಕಕ್ರಿಯಾಫಲಭೇದಪ್ರತ್ಯಯವತ್ತ್ವಂ ಹಿ ನಿಮಿತ್ತಮ್ ಉಪಾದಾಯ 'ಇದಂ ಕುರು, ಇದಂ ಮಾ ಕಾರ್ಷೀಃ' ಇತಿ ಕರ್ಮವಿಧಯಃ ಪ್ರವೃತ್ತಾಃ । ತಚ್ಚ ನಿಮಿತ್ತಂ ನ

1. ವಾಚ್ಯಾರ್ಥವನ್ನೆಲ್ಲ ತೆಗೆದುಕೊಳ್ಳುವದಕ್ಕೆ ಅಡ್ಡಿ ಏನಾದರೂ ಇದ್ದರೆ ಸಂಕೋಚಮಾಡಿ ಅರ್ಥಮಾಡಿ ಹೇಳಬೇಕಾಗಿತ್ತು; ಇಲ್ಲಿ ಹಾಗೇನೂ ಇಲ್ಲ.
2. ಬರಿಯ ಸಂನ್ಯಾಸದಿಂದಲೇ, ಜ್ಞಾನವಿಲ್ಲದೆಯೆ.
3. ಎಲ್ಲಾ ಆಶ್ರಮಧರ್ಮಗಳೂ ಆಶ್ರಮಧರ್ಮಗಳೇ ; ಆದ್ದರಿಂದ ಮಿಕ್ಕ ಧರ್ಮಗಳಿಂದೊಡಗೂಡಿದ ಜ್ಞಾನವು ಮೋಕ್ಷವನ್ನು ಕೊಡಲಾರದಾದರೆ ಪರಿವ್ರಾಜಕಧರ್ಮಸಹಿತವಾದದ್ದೂ ಕೊಡಲಾರದು.
4. ಯಾವ ಕರ್ಮದೊಡನೆ ಜ್ಞಾನವು ಸಮುಚ್ಚಿತವಾದರೆ ಅದರಿಂದ ಮೋಕ್ಷವಾಗುತ್ತದೆ ಎಂದೇನೂ ಶ್ರುತಿಯಲ್ಲಿ ಅವಧಾರಣೆ ಮಾಡಿಲ್ಲ ; ಬ್ರಹ್ಮಸಂಸ್ಥನಿಗೆ ಆಗುತ್ತದೆ ಎಂದಿಷ್ಟೇ ಹೇಳಿದೆ. ಆದ್ದರಿಂದ ಆಶ್ರಮವು ಮುಖ್ಯವಲ್ಲ, ಜ್ಞಾನವೇ ಮುಖ್ಯ- ಎಂದು ಭಾವ.
5. ಬ್ರಹ್ಮಸಂಸ್ಥನಿಗೆ ಅಮೃತತ್ವವು ಎಂದಿಷ್ಟೇ ಶ್ರುತಿಯಲ್ಲಿದೆ.

ಶಾಸ್ತ್ರಕೃತಮ್ । ಸರ್ವಪ್ರಾಣೆಷು ದರ್ಶನಾತ್ । ''ಸದೇಕಮೇವಾದ್ವಿತೀಯಮ್''[1] (೬-೨-೧), ''ಆತ್ಮೈವೇದಂ ಸರ್ವಮ್'' (೭-೨೬-೨), ''ಬ್ರಹ್ಮೈವೇದಂ ಸರ್ವಮ್'' (?)[2] ಇತಿ ಶಾಸ್ತ್ರಜನ್ಯಃ ಪ್ರತ್ಯಯೋ ವಿದ್ಯಾರೂಪಃ ಸ್ವಾಭಾವಿಕಂ ಕ್ರಿಯಾಕಾರಕಫಲಭೇದಪ್ರತ್ಯಯಂ ಕರ್ಮವಿಧಿನಿಮಿತ್ತಮ್ ಅನುಪಮೃದ್ಯ ನ ಜಾಯತೇ । ಭೇದಾಭೇದಪ್ರತ್ಯಯಯೋರ್ವಿರೋಧಾತ್ । ನ ಹಿ ತೈಮಿರಿಕದ್ವಿಚನ್ದ್ರಾದಿಭೇದಪ್ರತ್ಯಯಮ್ ಅನುಪಮೃದ್ಯ ತಿಮಿರಾಪಗಮೇ ಚನ್ದ್ರಾದ್ಯೇಕತ್ವಪ್ರತ್ಯಯ ಉಪಜಾಯತೇ ವಿದ್ಯಾವಿದ್ಯಾಪ್ರತ್ಯಯಯೋರ್ವಿರೋಧಾತ್ । ತತ್ರ ಏವಂ ಸತಿ ಯಂ ಭೇದಪ್ರತ್ಯಯಮ್ ಉಪಾದಾಯ ಕರ್ಮವಿಧಯಃ ಪ್ರವೃತ್ತಾಃ ಸ ಯಸ್ಯೋಪಮರ್ದಿತಃ 'ಸದೇಕಮೇವಾದ್ವಿತೀಯಮ್' (೬-೨-೧), 'ತತ್ತ್ವಮ್' (೬-೮-೭), 'ವಿಕಾರಭೇದೋಽನೃತಮ್'[3] (೬-೧-೪) ಇತ್ಯೇತದ್ವಾಕ್ಯಪ್ರಮಾಣಜನಿತೇನ ಏಕತ್ವಪ್ರತ್ಯಯೇನ, ಸ ಸರ್ವಕರ್ಮಭ್ಯೋ ನಿವೃತ್ತಃ । ನಿಮಿತ್ತನಿವೃತ್ತೇಃ । ಸ ಚ ನಿವೃತ್ತಕರ್ಮಾ ಬ್ರಹ್ಮಸಂಸ್ಥ ಉಚ್ಯತೇ । ಸ ಚ ಪರಿವ್ರಾಡೇವ । ಅನ್ಯಸ್ಯ ಅಸಂಭವಾತ್ ಅನ್ಯೋ ಹಿ ಅನಿವೃತ್ತಭೇದಪ್ರತ್ಯಯಃ । ಸೋಽನ್ಯತ್ ಪಶ್ಯನ್, ಶೃಣ್ವನ್, ಮನ್ವಾನೋ ವಿಜಾನನ್, ಇದಂ ಕೃತ್ವಾ ಇದಂ ಪ್ರಾಪ್ನುಯಾಮ್ - ಇತಿ ಹಿ ಮನ್ಯತೇ । ತಸ್ಯ ಏವಂ ಕುರ್ವತೋ ನ ಬ್ರಹ್ಮಸಂಸ್ಥತಾ । ವಾಚಾರಮ್ಭಣಮಾತ್ರವಿಕಾರಾನೃತಾಭಿಸಂಧಿಪ್ರತ್ಯಯವತ್ತ್ವಾತ್ । ನ ಚ ಅಸತ್ಯಮ್ ಇತಿ ಉಪಮರ್ದಿತೇ ಭೇದಪ್ರತ್ಯಯೇ ಸತ್ಯಮಿದಮ್, ಅನೇನ ಕರ್ತವ್ಯಂ ಮಯಾ ಇತಿ ಪ್ರಮಾಣಪ್ರಮೇಯಬುದ್ಧಿರುತ್ಪದ್ಯತೇ[4] । ಆಕಾಶ ಇವ ತಲಮಲಬುದ್ಧಿರ್ವಿವೇಕಿನಃ । ಉಪಮರ್ದಿತೇಽಪಿ ಭೇದಪ್ರತ್ಯಯೇ ಕರ್ಮಭ್ಯೋ ನ ನಿವರ್ತತೇ ಚೇತ್ ಪ್ರಾಗಿವ ಭೇದಪ್ರತ್ಯಯಾನುಪಮರ್ದನಾತ್, ಏಕತ್ವಪ್ರತ್ಯಯವಿಧಾಯಕಂ ವಾಕ್ಯಮ್ ಅಪ್ರಮಾಣೀಕೃತಂ ಸ್ಯಾತ್ ಅಭಕ್ಷ್ಯಭಕ್ಷಣಾದಿಪ್ರತಿಷೇಧವಾಕ್ಯಾನಾಂ ಪ್ರಾಮಾಣ್ಯವತ್ ಯುಕ್ತಮ್ ಏಕತ್ವವಾಕ್ಯಸ್ಯಾಪಿ ಪ್ರಾಮಾಣ್ಯಮ್ । ಸರ್ವೋಪನಿಷದಾಂ ತತ್ಪರತ್ವಾತ್ ॥

1. ಇದು ಶ್ರುತಿಯ ಅರ್ಥಮಾತ್ರ.
2. ೬-೧-೪. ಇದು ಯಾವ ಶ್ರುತಿಯೆಂಬುದು ತಿಳಿಯದು. ಮುಂಡಕದಲ್ಲಿ 'ಬ್ರಹ್ಮೈವೇದಂ ವಿಶ್ವಮ್' ಎಂದಿದೆ. ತೈತ್ತಿರೀಯಾದಿಭಾಷ್ಯಗಳಲ್ಲಿಯೂ ಹೀಗೆ 'ಸರ್ವಮ್' ಎಂದೇ ಇರುವ ವಾಕ್ಯವು ಭಾಷ್ಯದಲ್ಲಿ ಉದಾಹೃತವಾಗಿರವದು ಕಂಡುಬರುತ್ತದೆ.
3. ಇದೂ ಶ್ರುತಿಯ ಅರ್ಥಮಾತ್ರವೇ
4. 'ಉಪಪದ್ಯತೇ' ಎಂಬ ಪಾಠವೂ ಉಂಟು. ಅನುವಾದದ ಟಿಪ್ಪಣಿಯನ್ನು ನೋಡಿ.

(ಭಾಷ್ಯಾರ್ಥ)

(ಇದು) ಸರಿಯಲ್ಲ. ಏಕೆಂದರೆ ಕರ್ಮನಿಮಿತ್ತಕ್ಕೂ ವಿದ್ಯಾಪ್ರತ್ಯಯಕ್ಕೂ ವಿರೋಧವಿದೆ. ಕರ್ತ್ರಾದಿಕಾರಕಗಳು, ಕ್ರಿಯೆ, ಫಲ- ಎಂಬ ಭೇದಪ್ರತ್ಯಯವುಳ್ಳವ-ವಾಗಿರುವದೆಂಬ ನಿಮಿತ್ತವನ್ನು ತೆಗೆದುಕೊಂಡಲ್ಲವೆ, 'ಇದನ್ನು ಮಾಡು', 'ಇದನ್ನು ಮಾಡಬೇಡ' ಎಂಬ ಕರ್ಮವಿಧಿಗಳು ಪ್ರವೃತ್ತವಾಗಿವೆ ? ಆದರೆ ಆ ನಿಮಿತ್ತವು ಶಾಸ್ತ್ರಕೃತವಲ್ಲ ; ಏಕೆಂದರೆ ಎಲ್ಲಾ ಪ್ರಾಣಿಗಳಲ್ಲಿಯೂ ಅದು ಕಂಡುಬರುತ್ತದೆ. 'ತನಗೆರಡನೆಯದಿಲ್ಲದ ಸತ್ತೊಂದೇ (ಇತ್ತು)' (೬-೨-೧), 'ಇದೆಲ್ಲವೂ ಆತ್ಮನೇ' (೭-೨೬-೨), 'ಇದೆಲ್ಲವೂ ಬ್ರಹ್ಮವೇ' (?) ಎಂಬ **ಶಾಸ್ತ್ರದಿಂದುಂಟಾಗುವ ವಿದ್ಯಾರೂಪವಾದ ಪ್ರತ್ಯಯವು ಸ್ವಾಭಾವಿಕವಾದ[1] ಕ್ರಿಯಾಕಾರಕಫಲಗಳ ಭೇದದ ಪ್ರತ್ಯಯವೆಂಬ ಕರ್ಮವಿಧಿನಿಮಿತ್ತವನ್ನು ಅರೆದುಹಾಕದೆ ಹುಟ್ಟುವದಿಲ್ಲ.** ಏಕೆಂದರೆ ಭೇದ(ಪ್ರತ್ಯಯ), ಅಭೇದಪ್ರತ್ಯಯ - (ಇವು)ಗಳಿಗೆ ವಿರೋಧವಿರುತ್ತದೆ.[2] ಕಣ್ಣುಪರೆಯವನಿಗೆ (ಉಂಟಾಗುವ) ಇಬ್ಬರು ಚಂದ್ರರೆಂಬುದೇ ಮುಂತಾದ[3] ಭೇದಪ್ರತ್ಯಯವನ್ನು ಅರೆದುಹಾಕದೆ ಕಣ್ಣುಪರೆಯು ಹೋದಬಳಿಕ ಚಂದ್ರನೇ ಮುಂತಾದದ್ದು ಒಂದೇ ಎಂಬ ಪ್ರತ್ಯಯವು ಉಂಟಾಗಲಾರದಷ್ಟೆ ? ಏಕೆಂದರೆ ವಿದ್ಯಾವಿದ್ಯಾಪ್ರತ್ಯಯಗಳಿಗೆ ವಿರೋಧವಿರುತ್ತದೆ.[4] **ಹೀಗಿರುವಲ್ಲಿ ಯಾವ ಭೇದಪ್ರತ್ಯಯವನ್ನು ತೆಗೆದುಕೊಂಡು ಕರ್ಮವಿಧಿಗಳು[5] ಪ್ರವೃತ್ತವಾಗಿರುವವೋ, ಆ (ಭೇದಪ್ರತ್ಯಯವು) ಯಾವನಿಗೆ 'ತನಗೆರಡನೆಯದಿಲ್ಲದ ಸತ್ತೊಂದೇ (ಇತ್ತು)'**

---

1. ಅವಿದ್ಯೆಯಿರುವವರಿಗೆಲ್ಲ ಸ್ವಭಾವದಿಂದಿದ್ದುಕೊಂಡಿರುವ ಎಂದರ್ಥ ; ಈ ಪ್ರತ್ಯಯವನ್ನು ಶಾಸ್ತ್ರವೇನೂ ಮಾಡಿಕೊಟ್ಟಿಲ್ಲವೆಂಬುದನ್ನು ಈ ವಿಶೇಷಣವು ಸೂಚಿಸುತ್ತದೆ.
2. ಆದ್ದರಿಂದ ಈ ಎರಡು ಪ್ರತ್ಯಯಗಳೂ ಒಬ್ಬನಲ್ಲಿಯೇ ಏಕಕಾಲಕ್ಕೆ ಇರುವದು ಸಾಧ್ಯವಿಲ್ಲ; ಎರಡು ಪ್ರತ್ಯಯಗಳೂ ಪ್ರತ್ಯಯಗಳೇ ಆದರೂ ಸ್ವಾಭಾವಿಕಪ್ರತ್ಯಯವೇ ಶಾಸ್ತ್ರಜನಿತ ಪ್ರತ್ಯಯದಿಂದ ಬಾದಿತವಾಗಬೇಕು ; ಏಕೆಂದರೆ ಸರಿಯಾದ ತಿಳಿವಳಿಕೆಯು ತಪ್ಪುತಿಳಿವನ್ನು, ಹೊಡೆದುಹಾಕುವದು ಯುಕ್ತ - ಎಂದು ಭಾವ.
3. ಕನಸಿನಲ್ಲಿ ತನಗಿಂತ ಬೇರೆಯಾಗಿ ಅನೇಕರಿರುವದು ಮುಂತಾದ ಭೇದಪ್ರತ್ಯಯವನ್ನು 'ಮುಂತಾದ' ಎಂಬ ಶಬ್ದದಿಂದ ಗ್ರಹಿಸಬೇಕು.
4. ವಿದ್ಯೆ, ಅವಿದ್ಯೆ- ಇವೆರಡೂ ಪ್ರತ್ಯಯಗಳೇ ಎಂಬುದನ್ನು ಇಲ್ಲಿ ದೃಷ್ಟಾಂತದಲ್ಲಿಯೂ ದಾರ್ಷ್ಟಾಂತಿಕದಲ್ಲಿಯೂ ಬಾಯಿಬಿಟ್ಟು ಹೇಳಿದೆ. ಇದು ವ್ಯಾಖ್ಯಾನಪ್ರಸ್ಥಾನಗಳ ಮೂಲಾವಿದ್ಯಾ ವಾದಕ್ಕೆ ವಿರುದ್ಧವಾಗಿದೆ ಎಂಬುದು ಸ್ಪಷ್ಟ
5. ವಿಧಿಗಳು ಎಂಬುದನ್ನು ನಿಷೇಧಗಳಿಗೂ ಉಪಲಕ್ಷಣವಾಗಿ ತೆಗೆದುಕೊಳ್ಳಬೇಕು ; ಏಕೆಂದರೆ ಅವಕ್ಕೂ ಭೇದಪ್ರತ್ಯಯವೇ ನಿಮಿತ್ತವಾಗಿದೆ.

(೬-೨-೧), 'ಅದೇ ಸತ್ಯವು' (೬-೮-೭...), 'ವಿಕಾರಭೇದವು ಅನೃತವು' (೬-೧-೪)- ಎಂಬೀ ವಾಕ್ಯಪ್ರಮಾಣಜನಿತವಾದ ಏಕತ್ವಪ್ರತ್ಯಯದಿಂದ ಅರೆದುಹಾಕಲ್ಪಟ್ಟು (ನಾಶ)ವಾಗಿರುವದೋ, ಅವನು ಸರ್ವಕರ್ಮಗಳಿಂದಲೂ ನಿವೃತ್ತನಾಗಿರುತ್ತಾನೆ ; ಏಕೆಂದರೆ (ಆ ಕರ್ಮಗಳ) ನಿಮಿತ್ತವು ತೊಲಗಿಹೋಗಿರುತ್ತದೆ. ಆ (ನಿವೃತ್ತ ಕರ್ಮನೇ) ಬ್ರಹ್ಮಸಂಸ್ಥನೆನಿಸುತ್ತಾನೆ.[1]

ಅವನು ಪರಿವ್ರಾಜಕನೇ[2] ; ಏಕೆಂದರೆ ಮತ್ತೊಬ್ಬನಿಗೆ (ಬ್ರಹ್ಮಸಂಸ್ಥತ್ವವು) ಸಂಭವಿಸುವದಿಲ್ಲ. (ಇದರ ವಿವರ) ; (ಆ) ಮತ್ತೊಬ್ಬನು ಭೇದಪ್ರತ್ಯಯವು ತೊಲಗದಿರುವದರಿಂದ ಮತ್ತೊಂದನ್ನು ಕಾಣುತ್ತಲೂ, ಕೇಳುತ್ತಲೂ, ಯೋಚಿಸುತ್ತಲೂ ಅರಿಯುತ್ತಲೂ[3] ಇದನ್ನು ಮಾಡಿ ಇದನ್ನು ಪಡೆದುಕೊಳ್ಳುವೆನು ಎಂದಲ್ಲವೆ, ಭಾವಿಸಿಕೊಂಡಿರುತ್ತಾನೆ ? ಹೀಗೆ ಮಾಡುತ್ತಿರುವ[4] ಅವನಿಗೆ ಬ್ರಹ್ಮಸಂಸ್ಥತ್ವವು (ಸಂಭವಿಸ)ಲಾರದು ; ಏಕೆಂದರೆ ವಾಚಾರಂಭಣಮಾತ್ರವಾಗಿರುವ ಕಾರ್ಯರೂಪವಾದ ಅನೃತದ ಅಭಿಸಂಧಿಯ ಪ್ರತ್ಯಯವು ಅವನಿಗೆ ಇರುತ್ತದೆ.[5] (ಇದು) ಅಸತ್ಯವು ಎಂದು ಭೇದಪ್ರತ್ಯಯವು ಅರೆದುಹಾಕಿ (ಅಳಿದು)ಹೋಗಿರುವಲ್ಲಿ, 'ಇದು ಸತ್ಯವು, ಇದರಿಂದ ಇದನ್ನು ನಾನು ಮಾಡಬೇಕಾದದ್ದು' - ಎಂಬ ಪ್ರಮಾಣಪ್ರಮೇಯ ಬುದ್ಧಿಯು- ಆಕಾಶದಲ್ಲಿ ತಲಮಲಿನತ್ವಬುದ್ಧಿಯು ಹೇಗೆ ವಿವೇಕಿಯಾದವನಿಗೆ[6] (ಉಂಟಾಗಲಾರದೋ ಹಾಗೆ) - (ಉಂಟಾಗ)ಲಾರದು. ಭೇದಪ್ರತ್ಯಯವು ಅರೆದು

1. ಬ್ರಹ್ಮಸಂಸ್ಥನು ಎಂದರೆ ಅದ್ವಿತೀಯಬ್ರಹ್ಮಸ್ವರೂಪದಲ್ಲಿ ನೆಲೆನಿಂತಿರುವವನೇ ಎಂದರ್ಥ. ವೃತ್ತಿಕಾರರ ಮತದಲ್ಲಿ ಬ್ರಹ್ಮೋಪಾಸಕನೇ ಬ್ರಹ್ಮಸಂಸ್ಥನು ; ಆದ್ದರಿಂದ ಅವರಿಗೆ ಕರ್ಮಕ್ಕೂ ಬ್ರಹ್ಮಸಂಸ್ಥತ್ವಕ್ಕೂ ಯಾವ ವಿರೋಧವೂ ಇಲ್ಲ.
2. ಪರಮಹಂಸನೇ ಎಂದರ್ಥ.
3. ಅವಿದ್ಯಾಕೃತವಾದ ದ್ವೈತವಿರುವಲ್ಲಿಯೇ ವ್ಯವಹಾರವಿರುತ್ತದೆ ; ಬೃ. ಭಾ. ೪-೩-೩೧ನ್ನು ನೋಡಿ.
4. ಮತ್ತೊಂದನ್ನು ನೋಡುತ್ತಲೂ ಅರಿಯುತ್ತಲೂ ಇರುವ ಎಂದರ್ಥ.
5. ಅನೃತವಾದ ದ್ವೈತದ ಅಭಿಸಂಧಿಯಿರುವವನಿಗೆ ಏಕತ್ವಪ್ರತ್ಯಯರೂಪವಾದ ಬ್ರಹ್ಮಸಂಸ್ಥತ್ವವು ಇರಲಾರದು. ಎರಡನೆಯದನ್ನು ಕಾಣದೆ ಕೇಳದೆ ಅರಿಯದೆ ಇರುವದೇ ಬ್ರಹ್ಮಸ್ಥಿತಿಯೆಂದು (೭-೨೪-೧) ಶ್ರುತಿಯು ಹೇಳಿಯೂ ಇದೆ.
6. ತಲಮಲಿನತ್ವವು ಬರಿಯ ತೋರಿಕೆಯೇ, ಆಕಾಶಕ್ಕೆ ನಿಜವಾಗಿ ಯಾವ ಬಣ್ಣವೂ ಇಲ್ಲ - ಎಂಬ ವಿವೇಕಿಗೆ ಎಂದರ್ಥ. ದೃಷ್ಟಾಂತದಲ್ಲಿಯೂ ಏಕತ್ವಪ್ರತ್ಯಯವುಳ್ಳ ವಿವೇಕಿಗೆ ಹೀಗೆಯೇ ತೋರಿಕೆಯ ಕ್ರಿಯಾಕಾರಕಫಲಭೇದವು ಸತ್ಯವೆಂಬ ಬುದ್ಧಿಯು ಉಂಟಾಗಲಾರದು ಎಂದು ಭಾವ.

ಹಾಕಿ (ಅಳಿದು) ಹೋದಮೇಲೆಯೂ ಭೇದಪ್ರತ್ಯಯವು ಅಳಿಯುವ ಮುನ್ನಿನಂತೆಯೇ ಕರ್ಮಗಳಿಂದ ಹಿಮ್ಮೆಟ್ಟುವದಿಲ್ಲವಾದರೆ, ಏಕತ್ವಪ್ರತ್ಯಯವನ್ನುಂಟು ಮಾಡುವ ವಾಕ್ಯವನ್ನು ಅಪ್ರಮಾಣವೆಂದೆಣಿಸಿದಂತೆ ಆಗುವದು.[1] ಅಭಕ್ಷ್ಯಭಕ್ಷಣವೇ ಮುಂತಾದವನ್ನು ಪ್ರತಿಷೇಧಿಸುವ ವಾಕ್ಯಗಳಿಗೆ ಪ್ರಾಮಾಣ್ಯವಿರುವಂತೆ ಏಕತ್ವವಾಕ್ಯಕ್ಕೆ ಪ್ರಾಮಾಣ್ಯವಿರುವದು ಯುಕ್ತವು.[2] ಏಕೆಂದರೆ ಎಲ್ಲಾ ಉಪನಿಷತ್ತುಗಳಿಗೂ ಅದರಲ್ಲಿ ತಾತ್ಪರ್ಯವಿರುತ್ತದೆ.[3]

ಉಪನಿಷತ್ತುಗಳಿಗೆ ಏಕತ್ವಜ್ಞಾನದಲ್ಲಿ ತಾತ್ಪರ್ಯವಿದ್ದರೂ ಕರ್ಮವಾಕ್ಯಗಳಿಗೆ ಅಪ್ರಾಮಾಣ್ಯವಿಲ್ಲ

(ಭಾಷ್ಯ)

೧೮೦. ಕರ್ಮವಿಧೀನಾಮ್ ಅಪ್ರಾಮಾಣ್ಯಪ್ರಸಙ್ಗಃ ಇತಿ ಚೇತ್ । ನ । ಅನುಪಮರ್ದಿತಭೇದಪ್ರತ್ಯಯವತ್ಪುರುಷವಿಷಯೇ ಪ್ರಾಮಾಣ್ಯೋಪಪತ್ತೇಃ ಸ್ವಪ್ನಾದಿ-ಪ್ರತ್ಯಯ ಇವ ಪ್ರಾಕ್ ಪ್ರಬೋಧಾತ್ । ವಿವೇಕಿನಾಮ್ ಅಕರಣಾತ್ ಕರ್ಮವಿಧಿ-ಪ್ರಾಮಾಣ್ಯೋಚ್ಛೇದಃ ಇತಿ ಚೇತ್ । ನ । ಕಾಮ್ಯವಿಧ್ಯನುಚ್ಛೇದದರ್ಶನಾತ್ । ನ ಹಿ ''ಕಾಮಾತ್ಮತಾ ನ ಪ್ರಶಸ್ತಾ'' (ಮನು. ೨-೨) ಇತ್ಯೇವಂ ವಿಜ್ಞಾನವದ್ಭಿಃ ಕಾಮ್ಯಾನಿ ಕರ್ಮಾಣಿ ನಾನುಷ್ಠೀಯನ್ತ ಇತಿ ಕಾಮ್ಯಕರ್ಮವಿಧಯಃ ಉಚ್ಛಿದ್ಯನ್ತೇ । ಅನುಷ್ಠೀಯನ್ತ ಏವ ಕಾಮಿಭಿರಿತಿ । ತಥಾ ಬ್ರಹ್ಮಸಂಸ್ಥೈರ್ಬ್ರಹ್ಮವಿದ್ಭಿಃ ನಾನುಷ್ಠೀಯನ್ತೇ ಕರ್ಮಾಣಿ ಇತಿ ನ ತದ್ವಿಧಯ ಉಚ್ಛಿದ್ಯನ್ತೇ । ಅಬ್ರಹ್ಮವಿದ್ಭಿರನುಷ್ಠೀಯನ್ತ ಏವೇತಿ ॥

(ಭಾಷ್ಯಾರ್ಥ)

(ಆಕ್ಷೇಪ) :- (ಹೀಗಾದರೆ) ಕರ್ಮವಿಧಿಗಳು ಅಪ್ರಮಾಣವೆಂದಾಗ ಬೇಕಾಗುವದಲ್ಲ!

1. ಕರ್ಮವಾಕ್ಯದಂತೆ ಬೋಧಕತ್ವವಿದ್ದರೂ ವಾಕ್ಯವನ್ನು ಅಪ್ರಮಾಣವೆನ್ನುವದು ಸರಿಯಲ್ಲ ಎಂದು ಭಾವ. ಬೃ. ಭಾ. ೨-೧-೨೦ (ಭಾ. ಭಾ. ೩೨೧)ನ್ನು ನೋಡಿ.
2. ಕರ್ಮವಾಕ್ಯದಂತೆ ಬ್ರಹ್ಮವಾಕ್ಯವು ಪ್ರವರ್ತಕವಲ್ಲವಲ್ಲ! - ಎಂಬ ಶಂಕೆಗೆ ಪರಿಹಾರವಾಗಿ ಈ ಪ್ರತಿಷೇಧವಾಕ್ಯದ ದೃಷ್ಟಾಂತವನ್ನು ಕೊಟ್ಟಿದೆ. ಪ್ರತಿಷೇಧವಾಕ್ಯಕ್ಕೂ ಬ್ರಹ್ಮವಾಕ್ಯಕ್ಕೂ ಅನರ್ಥಕರವಾದ ಪ್ರವೃತ್ತಿಯಿಂದ ಹಿಮೆಟ್ಟಿಸುವ ಪ್ರಾಮಾಣ್ಯವು ಸಮಾನವಾಗಿದೆ ಎಂದು ಭಾವ. ಬೃ. ಭಾ. ೧-೩-೧ (ಭಾ. ಭಾ. ೫೪, ೫೭)ರಲ್ಲಿ ಇದನ್ನು ಸ್ಪಷ್ಟಪಡಿಸಿದೆ.
3. ಏಕತ್ವವಾಕ್ಯವು ಅರ್ಥವಾದಮಾತ್ರವಾದ್ದರಿಂದ ಅದಕ್ಕೆ ಪ್ರಾಮಾಣ್ಯವಿಲ್ಲ ಎನ್ನುವಂತೆಯೂ ಇಲ್ಲ; ಏಕೆಂದರೆ ಶ್ರುತಿಗಳೆಲ್ಲ ತಾತ್ಪರ್ಯದಿಂದ ಏಕತ್ವವನ್ನು ಹೇಳುತ್ತವೆ. ಐ. ಭಾ. ಅವ. (ಭಾ. ಭಾ. ೧೨).

(ಪರಿಹಾರ) :- ಹಾಗಲ್ಲ ; ಏಕೆಂದರೆ ನಾಶವಾಗದಿರುವ ಭೇದಪ್ರತ್ಯಯವುಳ್ಳ ಪುರುಷರ ವಿಷಯದಲ್ಲಿ (ಅವಕ್ಕೆ) ಪ್ರಾಮಾಣ್ಯವಿರಬಹುದಾಗಿದೆ.[1] ಸ್ವಪ್ನಾದಿಪ್ರತ್ಯಯದಲ್ಲಿ ಎಚ್ಚರವಾಗುವವರೆಗೂ ಹೇಗೆ (ಪ್ರಮಾಣ್ಯವಿರವದೋ ಹಾಗೆ).[2]

(ಆಕ್ಷೇಪ) :- ವಿವೇಕಿಗಳು (ಕರ್ಮಗಳನ್ನು) ಮಾಡದೆ ಇರುವದರಿಂದ ಕರ್ಮವಿಧಿಗಳ ಪ್ರಾಮಾಣ್ಯವು ಹಾಳಾಗುವದಲ್ಲ !

(ಪರಿಹಾರ):- ಹಾಗಲ್ಲ. ಏಕೆಂದರೆ ಕಾಮ್ಯವಿಧಿಯ (ಪ್ರಾಮಾಣ್ಯವು) ಹಾಳಾಗದೆ ಇರುವದು ಕಂಡುಬರುತ್ತಿದೆ. (ಇದರ ವಿವರ) : "ಕಾಮಾತ್ಮನಾಗಿರುವದು ಪ್ರಶಸ್ತವಲ್ಲ" (ಮನು. ೨-೨) ಎಂಬೀ ಅರಿವು ಉಂಟಾಗಿರುವವರು ಕಾಮ್ಯಕರ್ಮ-ಗಳನ್ನು ಮಾಡುವದಿಲ್ಲ ಎಂಬದರಿಂದ ಕಾಮ್ಯಕರ್ಮವಿಧಿಗಳು ಹಾಳಾಗುವದಿಲ್ಲವಷ್ಟೆ ? ಏಕೆಂದರೆ (ಅವನ್ನು) ಕಾಮಿಗಳು ಮಾಡುತ್ತಲೇ ಇರುತ್ತಾರೆ[3]. (ಅಲ್ಲವೆ) ? ಅದರಂತೆ ಬ್ರಹ್ಮಸಂಸ್ಥರಾದ ಬ್ರಹ್ಮಜ್ಞಾನಿಗಳು (ನಿತ್ಯ)ಕರ್ಮಗಳನ್ನು ಮಾಡುವದಿಲ್ಲ ಎಂಬ ಕಾರಣದಿಂದ ಆ (ಕರ್ಮ)ವಿಧಿಗಳು ಹಾಳಾಗುವದಿಲ್ಲ ; ಏಕೆಂದರೆ ಬ್ರಹ್ಮಜ್ಞಾನಿಗಳಲ್ಲದವರು (ಅವನ್ನು) ಮಾಡುತ್ತಲೇ ಇರುತ್ತಾರೆ.[4]

ಏಕತ್ವಜ್ಞಾನಿಗೆ ಅಗ್ನಿಹೋತ್ರಾದಿಕರ್ಮಗಳಿಲ್ಲ

(ಭಾಷ್ಯ)

೧೮೧. ಪರಿವ್ರಾಜಕಾನಾಂ ಭಿಕ್ಷಾಚರಣಾದಿವತ್ ಉತ್ಪನ್ನೈಕತ್ವಪ್ರತ್ಯಯಾ-

---

1. ಕರ್ಮವಿಧಿಗಳು ಅಜ್ಞರ ವಿಷಯವೇ, ಜ್ಞಾನಿಗೆ ಅವು ಪ್ರಮಾಣವಲ್ಲ. ಗೀ. ಭಾ. ೧೮-೬೬ (ಭಾ.ಭಾ. ೫೯೬), ಸೂ.ಭಾ. ೩-೪-೧೬ (ಭಾ. ಭಾ. ೪೫೬) ನೋಡಿ.
2. ಪ್ರತ್ಯಕ್ಷಾದಿಪ್ರಮಾಣವ್ಯವಹಾರವೆಲ್ಲ ಆತ್ಮಜ್ಞಾನವಾಗುವವರೆಗೆ ಸ್ವಪ್ನಗತವ್ಯವಹಾರದಂತೆ ಗೀ. ಭಾ. ೨-೬೯ (ಭಾ. ಭಾ. ೧೨೯), ಸೂ. ಭಾ. ೨-೧-೧೪ (ಭಾ. ಭಾ. ೪೩೬), ಸೂ. ಭಾ. ೪-೩-೧೪ (ಭಾ. ಭಾ. ೫೮೫)- ಇವನ್ನು ನೋಡಿ.
3. ಈ ದೃಷ್ಟಾಂತವನ್ನು ಬೃ. ಭಾ. ೪-೫-೧೫ (ಭಾ. ಭಾ. ೫೩೯)ರಲ್ಲಿಯೂ ಕೊಟ್ಟಿದೆ. ಇಲ್ಲಿ ಕಾಮ್ಯ, ನಿತ್ಯ- ಎಂಬ ಭೇದವು ಕಾಮಸ್ವಭಾವದಲ್ಲಿದೆಯೇ ಹೊರತು ನಿತ್ಯಕರ್ಮದಲ್ಲಿ ಕಾಮವೇ ಇಲ್ಲವೆಂಬ ಅಭಿಪ್ರಾಯವೇನೂ ಇಲ್ಲ ಎಂಬ ಭಾವವೂ ಅಡಗಿದೆ. ಬೃ. ಭಾ. ೧-೩-೧ (ಭಾ. ಭಾ. ೫೫೫)ನ್ನು ನೋಡಿ. ಮನು. ೨-೨ರಲ್ಲಿ ವೈದಿಕಕರ್ಮವೆಲ್ಲವೂ ಕಾಮ್ಯವೇ ಎಂದು ಕಂಠರವದಿಂದ ಹೇಳಿಯೂ ಇದೆ.
4. ಏಕೆಂದರೆ ಅವರಿಗೆ ಕರ್ಮವಾಕ್ಯಗಳು ಪ್ರಮಾಣವೆಂದೇ ತೋರುತ್ತಿರುತ್ತದೆ. ೨-೧-೨೦ (ಭಾ. ಭಾ. ೩೨೩), ೪-೫-೧೫ (ಭಾ. ಭಾ. ೫೩೯), ಗೀ. ಭಾ. ೧೩-೨ (ಭಾ. ಭಾ. ೨೨೩) ಇವನ್ನು ನೋಡಿ.

ನಾಮಪಿ ಗೃಹಸ್ಥಾದೀನಾಮ್ ಅಗ್ನಿಹೋತ್ರಾದಿಕರ್ಮಾನಿವೃತ್ತಿಃ ಇತಿ ಚೇತ್ । ನ । ಪ್ರಾಮಾಣ್ಯಚಿನ್ತಾಯಾಂ ಪುರುಷಪ್ರವೃತ್ತೇರದೃಷ್ಟಾನ್ತತ್ವಾತ್ । ನ ಹಿ ನಾಭಿಚರೇತ್ ಇತಿ ಪ್ರತಿಷಿದ್ಧಮಪಿ ಅಭಿಚರಣಂ ಕಶ್ಚಿತ್ ಕುರ್ವನ್ ದೃಷ್ಟಃ ಇತಿ ಶತ್ರೌ ದ್ವೇಷರಹಿತೇನಾಪಿ ವಿವೇಕಿನಾ ಅಭಿಚರಣಂ ಕ್ರಿಯತೇ । ನ ಚ ಕರ್ಮವಿಧಿಪ್ರವೃತ್ತಿನಿಮಿತ್ತೇ ಭೇದಪ್ರತ್ಯಯೇ ಬಾಧಿತೇ ಅಗ್ನಿಹೋತ್ರಾದೌ ಪ್ರವರ್ತಕಂ ನಿಮಿತ್ತಮಸ್ತಿ ಪರಿವ್ರಾಜಕಸ್ಯೇವ ಭಿಕ್ಷಾಚರಣಾದೌ ಬುಭುಕ್ಷಾದಿಪ್ರವರ್ತಕಮ್ । ಇಹಾಪಿ ಅಕರಣೇ ಪ್ರತ್ಯವಾಯಭಯಂ ಪ್ರವರ್ತಕಮ್ ಇತಿ ಚೇತ್ । ನ । ಭೇದಪ್ರತ್ಯಯವತೋಽಧಿಕೃತತ್ವಾತ್ । ಭೇದಪ್ರತ್ಯಯವಾನ್ ಅನುಪಮರ್ದಿತಭೇದಬುದ್ಧಿರ್ವಿದ್ಯಯಾ ಯಃ ಸ ಕರ್ಮಣಿ ಅಧಿಕ್ರಿಯತ ಇತ್ಯವೋಚಾಮ । ಯೋ ಹಿ ಅಧಿಕೃತಃ ಕರ್ಮಣಿ, ತಸ್ಯ ತದಕರಣೇ ಪ್ರತ್ಯವಾಯಃ, ನ ನಿವೃತ್ತಾಧಿಕಾರಸ್ಯ ಗೃಹಸ್ಥಸ್ಯೇವ ಬ್ರಹ್ಮಚಾರಿಣೋ ವಿಶೇಷಧರ್ಮಾನನುಷ್ಠಾನೇ । ಏವಂ ತರ್ಹಿ ಸರ್ವಃ ಸ್ವಾಶ್ರಮಸ್ಥಃ ಉತ್ಪನ್ನೈಕತ್ವಪ್ರತ್ಯಯಃ ಪರಿವ್ರಾಡ್ ಇತಿ ಚೇತ್ । ನ । ಸ್ವಸ್ವಾಮಿತ್ವಭೇದಬುದ್ಧ್ಯನಿವೃತ್ತೇಃ । ಕರ್ಮಾರ್ಥತ್ವಾಚ್ಚ ಇತರಾಶ್ರಮಾಣಾಮ್ । ''ಅಥ ಕರ್ಮ ಕುರ್ವೀಯ'' (ಬೃ ೧-೪-೧೭) ಇತಿ ಶ್ರುತೇಃ । ತಸ್ಮಾತ್ ಸ್ವಸ್ವಾಮಿತ್ವಾಭಾವಾತ್ ಭಿಕ್ಷುರೇಕ ಏವ ಪರಿವ್ರಾಟ್, ನ ಗೃಹಸ್ಥಾದಿಃ ॥

(ಭಾಷ್ಯಾರ್ಥ)

(ಆಕ್ಷೇಪ) :- ಪರಿವ್ರಾಜಕರಿಗೆ ಭಿಕ್ಷಾಚರಣಾದಿಗಳು[1] (ಇದ್ದುಕೊಂಡಿರು)ವಂತೆ ಗೃಹಸ್ಥಾದಿಗಳಿಗೂ ಏಕತ್ವಪ್ರತ್ಯಯವುಂಟಾದಮೇಲೆ ಅಗ್ನಿಹೋತ್ರಾದಿಕರ್ಮಗಳು ತೊಲಗದೆ ಇದ್ದುಕೊಂಡಿರಬಹುದಲ್ಲ!

(ಪರಿಹಾರ) :- ಹಾಗಲ್ಲ. ಏಕೆಂದರೆ ಪ್ರಾಮಾಣ್ಯವನ್ನು ಚಿಂತಿಸುವಲ್ಲಿ ಪುರುಷರ ಪ್ರವೃತ್ತಿಯು ದೃಷ್ಟಾಂತವಾಗಲಾರದು[2] 'ಅಭಿಚಾರಮಾಡಬಾರದು'[3] (?) ಎಂದು ಪ್ರತಿಷಿದ್ಧವಾಗಿರುವ ಅಭಿಚಾರವನ್ನೂ ಯಾವನೋ ಒಬ್ಬನು ಮಾಡುತ್ತಿರುವದು ಕಂಡುಬಂದರೆ ಶತ್ರುವಿನಲ್ಲಿ ದ್ವೇಷವಿಲ್ಲದ ವಿವೇಕಿಯೂ ಅಭಿಚಾರವನ್ನು

1. ಏಕತ್ವಜ್ಞಾನಿಗೆ ಯಾವ ಪ್ರವೃತ್ತಿಯೂ ಇರಲಾರದೆಂಬುದು ಸರಿಯಲ್ಲ ; ಏಕೆಂದರೆ ಭಿಕ್ಷಾಚರಣಾದಿಗಳನ್ನು ನೀವೇ ಒಪ್ಪಿರುತ್ತೀರಿ- ಎಂದು ಪೂರ್ವಪಕ್ಷಿಯ ಭಾವ.
2. ಕರ್ಮಜ್ಞಾನಗಳ ಸಹಪ್ರವೃತ್ತಿಯು ಪ್ರಾಮಾಣಿಕವೆ, ಅಲ್ಲವೆ ?- ಎಂಬುದು ಪ್ರಕೃತಪ್ರಶ್ನೆ. ಇದನ್ನು ಬಿಡಿಸುವದಕ್ಕೆ ಭಿಕ್ಷುಕನು ಭಿಕ್ಷಾಚರ್ಯವನ್ನು ಮಾಡುತ್ತಾನಲ್ಲ !- ಎಂದು ದೃಷ್ಟಾಂತವನ್ನು ಕೊಡುವದು ಈ ಪ್ರಶ್ನೆಗೇನೂ ಉತ್ತರವಾಗಲಾರದು.
3. ಹಿಂಸೆಮಾಡಬಾರದು ಎಂದು ವಿಧಿಯಿದೆ.

ಮಾಡಲಾರನಷ್ಟೆ[1] ? ಕರ್ಮವಿಧಿಗೆ ನಿಮಿತ್ತವಾದ ಭೇದಪ್ರತ್ಯಯವು ಬಾಧಿತವಾದ ಮೇಲೆ ಪರಿವ್ರಾಜಕನಿಗೆ ಭಿಕ್ಷಾಚರಣೆಯೇ ಮುಂತಾದದ್ದಕ್ಕೆ ಹಸಿವು ಮುಂತಾದದ್ದು ನಿಮಿತ್ತವಾಗಿರುವಂತೆ, ಅಗ್ನಿಹೋತ್ರಾದಿಯಲ್ಲಿ ತೊಡಗುವಂತೆ ಮಾಡುವ ನಿಮಿತ್ತವು (ಯಾವದೂ) ಇರುವದೂ ಇಲ್ಲ.[2]

(ಆಕ್ಷೇಪ) :- ಇಲ್ಲಿಯೂ (ಅಗ್ನಿಹೋತ್ರಾದಿಕರ್ಮಗಳನ್ನು) ಮಾಡದಿದ್ದರೆ ಪ್ರತ್ಯವಾಯ(ವಾದೀತೆಂಬ) ಭಯವೇ ಪ್ರವರ್ತಕ(ವಾಗಬಹುದಲ್ಲ) !

(ಪರಿಹಾರ) :- ಹಾಗಲ್ಲ. ಏಕೆಂದರೆ ಭೇದಪ್ರತ್ಯಯವುಳ್ಳವನೇ (ಅದಕ್ಕೆ) ಅಧಿಕಾರಿ. (ಇದರ ವಿವರ) : ಭೇದಪ್ರತ್ಯಯವುಳ್ಳವನೂ ವಿದ್ಯೆಯಿಂದ ಭೇದ ಪ್ರತ್ಯಯವನ್ನು ಅರೆದುಹಾಕಿಕೊಳ್ಳದೆ ಇರುವವನೂ ಆಗಿರುವನಲ್ಲ, ಅವನೇ ಕರ್ಮದಲ್ಲಿ ಅಧಿಕೃತ(ನಾಗಿರುತ್ತಾನೆ) ಎಂದು ಹೇಳಿರುತ್ತೇವೆ.[3] ಯಾವನು ಕರ್ಮದಲ್ಲಿ ಅಧಿಕಾರಿಯೋ ಅವನಿಗೇ, ಅದನ್ನು ಮಾಡದೆ ಇರುವದರಿಂದ ಪ್ರತ್ಯವಾಯ (ವಾಗುವದೇ) ಹೊರತು(ಕರ್ಮದಲ್ಲಿ) ಅಧಿಕಾರವು ತೊಲಗಿಹೋಗಿರುವವನಿಗಲ್ಲ.[4] ಗೃಹಸ್ಥನಿಗೆ ಬ್ರಹ್ಮಚಾರಿಯ ವಿಶೇಷಧರ್ಮಗಳನ್ನು ಅನುಷ್ಠಾನಮಾಡದಿದ್ದರೆ ಹೇಗೆ (ಪ್ರತ್ಯವಾಯವಿಲ್ಲವೋ ಹಾಗೆಯೇ ಇದು).[5]

1. ದ್ವೇಷದಿಂದ ಅಭಿಚಾರಮಾಡುತ್ತಾನೆಯೇ ಹೊರತು ಶಾಸ್ತ್ರವಿಧಿಯಿಂದಲೇ ಆದನ್ನು ಮಾಡುವದಿಲ್ಲ ಎಂದರ್ಥ. (ಜೈ. ಸೂ. ಶಾ. ಭಾಷ್ಯ. ೧-೧-೨ನ್ನು ನೋಡಿ). ಹೀಗಿರುವದರಿಂದ ದೋಷಯುಕ್ತನು ಮಾಡುವ ಅಭಿಚಾರವನ್ನು ದೋಷರಹಿತನು ಮಾಡದೆ ಇರುವಂತೆ ಅವಿದ್ಯಾವಂತನು ಮಾಡುವ ಕರ್ಮವನ್ನು ಏಕತ್ವಜ್ಞಾನವುಳ್ಳವನೂ ಮಾಡುತ್ತಿರಬಹುದೆಂಬುದು ಸರಿಯಾಗಲಾರದು ಎಂದು ಭಾವ.
2. ಭಿಕ್ಷಾಚರಣವು ಕೇವಲದೋಷಪ್ರಯುಕ್ತ, ಶಾಸ್ತ್ರಪ್ರಯುಕ್ತವಲ್ಲ ; ಆದು ನಿಯಮದಿಂದ ಮಾಡಲೇಬೇಕಾದದ್ದೂ ಅಲ್ಲ. ಇಲ್ಲಿ ಆದಿ ಎಂಬ ಶಬ್ದಕ್ಕೆ ಶೌಚಾದಿಗಳನ್ನೂ ಸೇರಿಸಿಕೊಳ್ಳಬೇಕು. ಬೃ. ಭಾ. ೧-೩-೩ (ಭಾ. ಭಾ. ೫೬) ಐ. ಭಾ. ಅವ. (ಭಾ. ಭಾ. ೧೭)ರಲ್ಲಿಯೂ ಭಿಕ್ಷಾಚರಣನಿಯಮವನ್ನು ಚರ್ಚಿಸಿದೆ.
3. ಭಾ. ಭಾ. ೧೭೯ರಲ್ಲಿ ಹೇಳಿರುತ್ತೇವೆ ಎಂದರ್ಥ.
4. ಕರ್ಮದ ಅಧಿಕಾರವಾಗಲಿ ಪ್ರತ್ಯವಾಯವಾಗಲಿ ಏಕತ್ವಜ್ಞಾನಿಗೆ ಇರುವಂತಿಲ್ಲ. ಬೃ. ಭಾ. ೪-೪-೬. (ಭಾ. ಭಾ. ೨೬೯).
5. ಒಂದು ಆಶ್ರಮದ ಕರ್ಮವನ್ನು ಮತ್ತೊಂದು ಆಶ್ರಮದವರು ಮಾಡದಿದ್ದರೆ ಪ್ರತ್ಯವಾಯವಾಗಲಾರದು ; ಹಾಗೂ ಆಗುವದಾದರೆ ಎಲ್ಲರಿಗೂ ಪ್ರತ್ಯವಾಯವೇ ಆಗಬೇಕಾದೀತು ಎಂದರ್ಥ. ಗೀ. ಭಾ. ೩-೧ (ಭಾ. ಭಾ. ೧೪೨)ನ್ನು ನೋಡಿ. ಕರ್ಮವನ್ನು ಮಾಡದಿದ್ದರೆ ಪ್ರತ್ಯವಾಯವುಂಟೆಂದು ಒಪ್ಪಿ ಹೀಗೆ ಹೇಳಿದೆ ; ಕರ್ಮಾಭಾವವು →

(ಆಕ್ಷೇಪ) :- ಹೀಗಾದರೆ ತನ್ನತನ್ನ ಆಶ್ರಮದಲ್ಲಿರುವ ಪ್ರತಿಯೊಬ್ಬನೂ ಏಕತ್ವ ಪ್ರತ್ಯಯವುಂಟಾದರೆ ಪರಿವ್ರಾಜಕನೇ.[1]

(ಪರಿಹಾರ) :- ಹಾಗಲ್ಲ. ಏಕೆಂದರೆ (ತಾನು) ಒಡೆಯನು, (ಇದು) ತನ್ನದು - ಎಂಬ ಬುದ್ಧಿಯು(ಅವನಿಗೆ) ತೊಲಗಿರುವದಿಲ್ಲ.[2] ಇದಲ್ಲದೆ ಉಳಿದ ಆಶ್ರಮಗಳು ಕರ್ಮಕ್ಕಾಗಿಯೇ (ಬೇಕಾಗಿರುತ್ತವೆ)[3] ''ಇನ್ನು ಕರ್ಮವನ್ನು ಮಾಡುವೆನು'' (ಬೃ. ೧-೪-೧೭) ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ).[4] ಆದ್ದರಿಂದ ತಾನುತನ್ನದೆಂಬ ಭಾವವಿಲ್ಲದ್ದರಿಂದ ಭಿಕ್ಷುವೊಬ್ಬನೇ ಪರಿವ್ರಾಜಕನು[5], ಗೃಹಸ್ಥಾದಿಗಳಲ್ಲ.

ಭಾವರೂಪಪ್ರತ್ಯವಾಯಕ್ಕೆ ಕಾರಣವೇ ಅಲ್ಲವೆಂದು ಗೀ. ಭಾ. ೩-೨ (ಭಾ. ಭಾ. ೧೪೨), ಗೀ. ಭಾ. ೪-೧೮ (ಭಾ. ಭಾ. ೨೬೨), ತೈ. ಭಾ. ಭಾ. ೭- ಇವುಗಳಲ್ಲಿ ತೋರಿಸಿಕೊಟ್ಟಿದೆ.

1. ಬ್ರಹ್ಮಸಂಸ್ಥನೇ ಆಗಿರುವದರಿಂದ ಅವನು ಸಂನ್ಯಾಸವೆಂಬ ಆಶ್ರಮಾಂತರವನ್ನೇಕೆ ಪಡೆಯಬೇಕು ? ಆಷ್ಟರಿಂದಲೇ ಅವನಿಗೆ ಅಮೃತತ್ವವು ಪ್ರಾಪ್ತವಾಗಬೇಕಲ್ಲವೆ ?- ಎಂದು ಭಾವ.

2. ಗೃಹಸ್ಥಾಶ್ರಮದಲ್ಲಿಯೇ ಇರುತ್ತೇನೆಂಬ ಆಗ್ರಹಕ್ಕೆ ಕಾಮವೇ ಕಾರಣವು ; ಆದರೆ ಏಕತ್ವಜ್ಞಾನಿಗೆ ಕಾಮವಿರುವಹಾಗಿಲ್ಲ ಎಂದರ್ಥ. ಐ. ಭಾ. ಭಾ. ೧೫ನ್ನು ನೋಡಿ.

3. ಬ್ರಹ್ಮಚರ್ಯವು ಗಾರ್ಹಸ್ಥ್ಯಕ್ಕಾಗಿಯೇ ಇದೆ. ನೈಷ್ಠಿಕಬ್ರಹ್ಮಚಾರಿ, ವಾನಪ್ರಸ್ಥ- ಇವರಿಗೂ ಒಂದಾನೊಂದು ಫಲವನ್ನು ಕೊಡುವ ಕರ್ಮವು ಬೇಕಾಗಿರುತ್ತದೆ ಎಂದು ಭಾವ. ಇಲ್ಲಿ ಜ್ಞಾನಿಯು ಇಂಥ ಆಶ್ರಮದಲ್ಲಿಯೇ ಇರಬೇಕೆಂಬ ಆಗ್ರಹವನ್ನು ಖಂಡಿಸಿದೆಯೇ ಹೊರತು ಪಾರಮಹಂಸ್ಯವೆಂಬುದು ಜ್ಞಾನಿಗೆ ಅವಶ್ಯವೇ ಎಂದೇನೂ ಪ್ರತಿಪಾದಿಸಿಲ್ಲ. ಇತರ ಆಶ್ರಮದಲ್ಲಿರುವ ಜ್ಞಾನಿಗಳಿಗೆಲ್ಲ ಭಿಕ್ಷಾಚರಣವು ಅರ್ಥಪ್ರಾಪ್ತವಾಗುತ್ತದೆಯೆಂದೂ ಕಾರಣಾಂತರದಿಂದ ಗೃಹಸ್ಥಾಶ್ರಮಕರ್ಮಗಳನ್ನು ಯತ್ನವಿಲ್ಲದೆ ಮಾಡುತ್ತಿದ್ದರೂ ಜ್ಞಾನಿಗೆ ಕರ್ಮಸಂಬಂಧವೇ ಇಲ್ಲವೆಂದೂ ಐ. ಭಾ. ಭಾ. ೧೪, ೧೫ ; ಗೀ. ಭಾ. ೪-೨೨ (ಭಾ. ಭಾ. ೨೭೩, ೨೭೪, ೨೭೫)- ಇವುಗಳಲ್ಲಿ ತಿಳಿಸಿರುವದನ್ನು ನೋಡಿ.

4. ಇದು ಉಪಕುರ್ವಾಣಬ್ರಹ್ಮಚಾರಿಗೆ ಮಾತ್ರ ಅನ್ವಯಿಸುವ ಶ್ರುತಿಯಾಗಿದೆ. ಗೃಹಸ್ಥನು ಕರ್ಮಿ ಎಂಬುದು ಪ್ರಸಿದ್ಧವೇ ಆಗಿದೆ. ನೈಷ್ಠಿಕನು ಗುರುಶುಶ್ರೂಷೆಯನ್ನೂ ವಾನಪ್ರಸ್ಥತ್ರಿದಂಡಿ ಸಂನ್ಯಾಸಿಗಳು ತಪಉಪಾಸನೆಗಳನ್ನೂ ಬ್ರಹ್ಮಲೋಕಪ್ರಾಪ್ತಿಗಾಗಿ ಮಾಡುತ್ತಾರಾದ್ದರಿಂದ ಅವರ ಆಶ್ರಮಗಳಲ್ಲಿಯೂ ತಾನುತನ್ನದೆಂಬ ಭಾವವಿದೆ. ಬೃ. ಭಾ. ೬-೨-೧೫ (ಭಾ. ಭಾ. ೪೪೭)ನ್ನೂ ಈ ಉಪನಿಷತ್ತಿನ ೫-೯-೧೨ರ ಭಾಷ್ಯವನ್ನೂ ನೋಡಿ.

5. ಪರಮಹಂಸನಿಗೆ ಗೃಹಸ್ಥಕರ್ಮಗಳೂ ಇಲ್ಲ, ಬ್ರಹ್ಮಚಾರಿವಾನಪ್ರಸ್ಥತ್ರಿದಂಡಿಗಳ ಕರ್ಮಗಳೂ ಇಲ್ಲ ; ಆದ್ದರಿಂದ ಅವನೊಬ್ಬನೇ ಮುಖ್ಯಾರ್ಥದಲ್ಲಿ ಪರಿವ್ರಾಜಕನು. ಐ. ಭಾ. ಭಾ. ೧೪ನ್ನು ನೋಡಿ.

ಜ್ಞಾನಿಗೆ ಯಮನಿಯಮಾದಿಗಳು ಹೊಂದುವದು ಹೇಗೆ ?

(ಭಾಷ್ಯ)

೧೮೨. ಏಕತ್ವಪ್ರತ್ಯಯವಿಧಿಜನಿತೇನ ಪ್ರತ್ಯಯೇನ ವಿಧಿನಿಮಿತ್ತಭೇದಪ್ರತ್ಯಯಸ್ಯ ಉಪಮರ್ದಿತತ್ವಾತ್ ಯಮನಿಯಮಾದ್ಯನುಪಪತ್ತಿಃ ಪರಿವ್ರಾಜಕಸ್ಯ ಇತಿ ಚೇತ್ । ನ । ಬುಭುಕ್ಷಾದಿನಾ ಏಕತ್ವಪ್ರತ್ಯಯಾತ್ ಪ್ರಚ್ಯಾವಿತಸ್ಯ ಉಪಪತ್ತೇಃ । ನಿವೃತ್ತ್ಯರ್ಥತ್ವಾತ್ । ನ ಚ ಪ್ರತಿಷಿದ್ಧಸೇವಾಪ್ರಾಪ್ತಿಃ । ಏಕತ್ವಪ್ರತ್ಯಯೋತ್ಪತ್ತೇಃ ಪ್ರಾಗೇವ ಪ್ರತಿಷಿದ್ಧತ್ವಾತ್ । ನ ಹಿ ರಾತ್ರೌ ಕೂಪೇ ಕಣ್ಟಕೇ ವಾ ಪತಿತಃ ಉದಿತೇಽಪಿ ಸವಿತರಿ ಪತತಿ ತಸ್ಮಿನ್ನೇವ । ತಸ್ಮಾತ್ ಸಿದ್ಧಂ ನಿವೃತ್ತಕರ್ಮಾ ಭಿಕ್ಷುಕ ಏವ ಬ್ರಹ್ಮಸಂಸ್ಥಃ ಇತಿ ॥

(ಭಾಷ್ಯಾರ್ಥ)

(ಆಕ್ಷೇಪ) :- ಏಕತ್ವಪ್ರತ್ಯಯವನ್ನುಂಟುಮಾಡುವ (ವಾಕ್ಯ)ದಿಂದಾದ ಪ್ರತ್ಯಯದಿಂದ ವಿಧಿಗೆ ನಿಮಿತ್ತವಾಗಿರುವ ಭೇದಪ್ರತ್ಯಯವು ಬಾಧಿತವಾಗಿರುವದರಿಂದ ಪರಿವ್ರಾಜಕನಿಗೆ ಯಮನಿಯಮಾದಿಗಳು ಹೊಂದುವದಿಲ್ಲವಲ್ಲ[1] !

(ಪರಿಹಾರ) :- ಹಾಗಲ್ಲ. ಏಕೆಂದರೆ ಹಸಿವೇ ಮುಂತಾದ (ಕಾರಣ)ದಿಂದ ಏಕತ್ವಪ್ರತ್ಯಯದಿಂದ ಜಗುಳಿಬಿದ್ದವನಿಗೆ (ಅವು) ಆಗಬಹುದಾಗಿವೆ. ಏಕೆಂದರೆ (ಅವು) ನಿವೃತ್ತಿಗಾಗಿ ಮಾಡತಕ್ಕವು.[2] (ಹೀಗಾದರೆ) ಪ್ರತಿಷಿದ್ಧ (ಕರ್ಮ)ವನ್ನು ಮಾಡಬಹುದೆಂದೇನೂ ಬಂದೊದಗುವದಿಲ್ಲ ; ಏಕೆಂದರೆ ಏಕತ್ವಪ್ರತ್ಯಯವುಂಟಾಗುವ ಮೊದಲೇ (ಅದು ಶಾಸ್ತ್ರದಿಂದ) ಪ್ರತಿಷಿದ್ಧವಾಗಿರುತ್ತದೆ.[3] ರಾತ್ರೆಯಲ್ಲಿ ಬಾವಿಯೊಳಗೋ ಮುಳ್ಳಿನ

---

1. ಆದ್ದರಿಂದ ಅವನು ಶಾಸ್ತ್ರವನ್ನು ಮೀರಿ ಯಮಾದಿಗಳನ್ನು ಬಿಡಬಹುದು, ಸ್ವೇಚ್ಛಾಚಾರಿಯೂ ಆಗಬಹುದಲ್ಲ! ಎಂದು ಭಾವ.

2. ಯಮಾದಿಗಳು ಅನಾತ್ಮದಲ್ಲಾಗುವ ಪ್ರವೃತ್ತಿಯನ್ನು ತಪ್ಪಿಸುವದಕ್ಕಾಗಿ ಮಾಡಬೇಕಾದವುಗಳು ; ಆದ್ದರಿಂದ ಜ್ಞಾನಕ್ಕೇ ಉಪಕಾರಕವಾಗಿವೆ. ಬೃ. ಭಾ. ೪-೫-೧೫, ಭಾ. ಭಾ. ೩೪೩. ಇಲ್ಲಿ ಯಮಾದಿಗಳನ್ನು ವಿಧಿಸಿದೆಯೆಂದಿಟ್ಟುಕೊಂಡರೂ ನಿಯಮವಿಧಿಯಾಗಬಹುದು ಎಂದು ವ್ಯಾವಹಾರಿಕದೃಷ್ಟಿಯಿಂದಲೂ (ಬೃ. ಭಾ. ೧-೪-೭, ಭಾ. ಭಾ. ೧೪೨), ಅನಾತ್ಮಪ್ರವೃತ್ತಿಯು ಅನರ್ಥಕರವೆಂಬ ನಿಶ್ಚಯದಿಂದಲೇ ಯಮಾದಿಗಳು ಜ್ಞಾನಿಗೆ ಅರ್ಥಪ್ರಾಪ್ತವಾಗಿರುವವೆಂದು (ಬೃ. ಭಾ. ೧-೪-೭ ಭಾ. ಭಾ. ೧೩೮) ಪರಮಾರ್ಥದೃಷ್ಟಿಯಿಂದಲೂ ಉತ್ತರವನ್ನು ಹೇಳಿದಂತೆ ಆಗಿದೆ.

3. ಅಧರ್ಮವನ್ನು ಬಿಟ್ಟಮೇಲೆಯೇ ವಿಹಿತಕರ್ಮಕ್ಕೆ ಅಧಿಕಾರಿಯಾಗುತ್ತಾನೆ ; ಆ ಕರ್ಮವನ್ನೂ ಸಂನ್ಯಾಸಮಾಡಿದವನು ಆದಕ್ಕಿಂತಲೂ ಕಡಿಮೆಯಾದ, ಮೊದಲೇ ಬಿಟ್ಟಿದ್ದ, ನಿಷಿದ್ಧಕರ್ಮವನ್ನು ಹೇಗೆ ಮಾಡಿಯಾನು ?

ಮೇಲೋ ಬೀಳುತ್ತಿದ್ದವನು, ಸೂರ್ಯನು ಉದಯಿಸಿದಮೇಲೂ ಆಲ್ಲಿಯೇ ಬೀಳಲಾರನಷ್ಟೆ.[1] ಆದ್ದರಿಂದ ಕರ್ಮ(ಗಳನ್ನೆಲ್ಲ) ಬಿಟ್ಟ ಭಿಕ್ಷುಕನೇ ಬ್ರಹ್ಮಸಂಸ್ಥನು ಎಂದು ಸಿದ್ಧವಾಯಿತು.[2]

ಪೂರ್ವಪಕ್ಷಯುಕ್ತಿಗಳ ವಿಮರ್ಶೆ

(ಭಾಷ್ಯ)

೧೮೩. ಯತ್ತುನರುಕ್ತಂ ಸರ್ವೇಷಾಂ ಜ್ಞಾನವರ್ಜಿತಾನಾಂ ಪುಣ್ಯಲೋಕತಾ ಇತಿ। ಸತ್ಯಮೇತತ್ । ಯಚ್ಚೋಕ್ತಂ ತಪಃಶಬ್ದೇನ ಪರಿವ್ರಾಡಪ್ಯುಕ್ತಃ ಇತಿ । ಏತದಸತ್ । ಕಸ್ಮಾತ್ ? ಪರಿವ್ರಾಜಕಸ್ಯೈವ (ನಿವೃತ್ತಭೇದಪ್ರತ್ಯಯಸ್ಯ)[3] ಬ್ರಹ್ಮಸಂಸ್ಥತಾಸಂಭವಾತ್। ಸ ಏವ ಹಿ ಅವಶೇಷಿತ ಇತಿ ಅವೋಚಾಮ । ಏಕತ್ವವಿಜ್ಞಾನವತೋಽಗ್ನಿಹೋತ್ರಾದಿವತ್ ತಪೋನಿವೃತ್ತೇಶ್ಚ । ಭೇದಬುದ್ಧಿಮತ ಏವ ಹಿ ತಪಃ ಕರ್ತವ್ಯತಾ ಸ್ಯಾತ್ । ಏತೇನ ಕರ್ಮಚ್ಛಿದ್ರೇ ಬ್ರಹ್ಮಸಂಸ್ಥತಾ ಸಾಮರ್ಥ್ಯಮ್, ಅಪ್ರತಿಷೇಧಶ್ಚ ಪ್ರತ್ಯುಕ್ತಃ । ತಥಾ ಜ್ಞಾನವಾನೇವ ನಿವೃತ್ತಕರ್ಮಾ ಪರಿವ್ರಾಟ್ ಇತಿ ಜ್ಞಾನವೈಯರ್ಥ್ಯಂ ಪ್ರತ್ಯುಕ್ತಮ್ । ಯತ್ತುನರುಕ್ತಂ ಯವವರಾಹಾದಿಶಬ್ದವತ್ ಪರಿವ್ರಾಜಕೇ ನ ರೂಢೋ ಬ್ರಹ್ಮಸಂಸ್ಥಶಬ್ದಃ ಇತಿ । ತತ್ ಪರಿಹೃತಮ್ । ತಸ್ಯೈವ ಬ್ರಹ್ಮಸಂಸ್ಥತಾಸಂಭವಾತ್ ನಾನ್ಯಸ್ಯ ಇತಿ । ಯತ್ತುನರುಕ್ತಂ ರೂಢಶಬ್ದಾಃ ನಿಮಿತ್ತಂ ನೋಪಾದದತ ಇತಿ । ತನ್ನ।

[illegible]

ಪಾದಾನಾ ಅಪಿ ಗೃಹಸ್ಥಪರಿವ್ರಾಜಕೌ ಆಶ್ರಮವಿಶೇಷೇ, ವಿಶಿಷ್ಟಜಾತಿಮತಿ ಚ ತಕ್ಷಾ ಇತಿ ರೂಢಾ ದೃಶ್ಯನ್ತೇ ಶಬ್ದಾಃ । ನ ಯತ್ರ ಯತ್ರ ತಾನಿ ನಿಮಿತ್ತಾನಿ ತತ್ರ ತತ್ರ ವರ್ತನ್ತೇ । ಪ್ರಸಿದ್ಧ್ಯಭಾವಾತ್ । ತಥಾ ಇಹಾಪಿ ಬ್ರಹ್ಮಸಂಸ್ಥಶಬ್ದೋ ನಿವೃತ್ತಸರ್ವಕರ್ಮ ತತ್ಸಾಧನಪರಿವ್ರಾಡೇಕವಿಷಯೇ ಅತ್ಯಾಶ್ರಮಿಣಿ ಪರಮಹಂಸಾಖ್ಯೇ ವೃತ್ತೋ[4] ಭವಿತುಮರ್ಹತಿ । ಮುಖ್ಯಾಮೃತತ್ವಫಲಶ್ರವಣಾತ್ ॥

---

1. ಈ ದೃಷ್ಟಾಂತವನ್ನು ಐ. ಭಾ. ಭಾ. ೧೩ರಲ್ಲಿ ವಿಹಿತಕರ್ಮವನ್ನು ಬಿಡುವದಕ್ಕೆ ಪ್ರಯೋಜನವನ್ನು ಕೇಳಬಾರದೆಂಬುದಕ್ಕೆ ಉಪಯೋಗಿಸಿಕೊಂಡಿದೆ.
2. ಇಲ್ಲಿ ಜ್ಞಾನಿಯಾದ ಸಂನ್ಯಾಸಿಯೇ ಬ್ರಹ್ಮಸಂಸ್ಥನೆಂಬುದು ಪ್ರಕೃತ. ಆತ್ಮಜ್ಞಾನಾಂಗವಾಗಿ ಮುಮುಕ್ಷುಗಳೂ ಪಾರಿವ್ರಾಜ್ಯವನ್ನು ಮಾಡಬಹುದೆಂಬುದನ್ನು ಐ. ಭಾ. ಭಾ. ೧೮ ಮುಂತಾದ ಕಡೆಗಳಲ್ಲಿ ಪ್ರತಿಪಾದಿಸಿದೆ.
3. ಇದು ವಾ।। ಅ।। ಪಾಠ ; ಇದಿಲ್ಲದಿದ್ದರೂ ಸಾಗುತ್ತದೆ.
4. 'ವೃತ್ತ ಇಹ' ಎಂಬ ಅಚ್ಚಿನ ಪಾಠದಲ್ಲಿ 'ಇಹ' ಹೆಚ್ಚು.

(ಭಾಷ್ಯಾರ್ಥ)

ಇನ್ನು ಜ್ಞಾನರಹಿತರಾದ (ಆಶ್ರಮಿ)ಗಳಿಗೆಲ್ಲ ಪುಣ್ಯಲೋಕವೇ (ಆಗುವದು) ಎಂದು (ಪೂರ್ವಪಕ್ಷದಲ್ಲಿ) ಹೇಳಿತ್ತಷ್ಟೆ, ಅದು ನಿಜವೇ.[1] ಆದರೆ ತಪಃಶಬ್ದದಿಂದ ಪರಿವ್ರಾಜಕನನ್ನೂ ಹೇಳಿದೆ - ಎಂದು (ಪೂರ್ವಪಕ್ಷದಲ್ಲಿ) ಹೇಳಿತ್ತಷ್ಟೆ, ಅದು ಸರಿಯಲ್ಲ; ಏಕೆ ? ಎಂದರೆ ಪರಿವ್ರಾಜಕನೊಬ್ಬನೇ ಭೇದಪ್ರತ್ಯಯವು ತೊಲಗಿರುವವನಾದ್ದರಿಂದ[2] (ಅವನಿಗೆ) ಬ್ರಹ್ಮಸಂಸ್ಥತ್ವವು ಸಂಭವಿಸುವದರಿಂದ ಅವನನ್ನೇ ಉಳಿಸಿಕೊಂಡಿದೆ ಎಂದಲ್ಲವೆ, ನಾವು ಹೇಳಿರುತ್ತೇವೆ[3] ? ಏಕತ್ವವಿಜ್ಞಾನವುಳ್ಳವನಿಗೆ ಅಗ್ನಿ ಹೋತ್ರಾದಿಗಳಂತೆ[4] ತಪಸ್ಸೂ ನಿವೃತ್ತವಾಗಿರುವದರಿಂದಲೂ (ತಪಃಶಬ್ದದಿಂದ ಅವನನ್ನು ಹೇಳಿದೆಯೆಂಬುದು ಸರಿಯಲ್ಲ). ಭೇದಬುದ್ಧಿಯುಳ್ಳವನಿಗೇ ಅಲ್ಲವೆ, ತಪಸ್ಸೆಂಬುದು ಕರ್ತವ್ಯವಾಗಿರುತ್ತದೆ[5] ? ಇದರಿಂದ ಕರ್ಮವಿಲ್ಲದ ಸಂದಿನಲ್ಲಿ ಬ್ರಹಸಂಸ್ಥನಾಗಿರಬಹುದೆಂಬುದಕ್ಕೂ (ಮಿಕ್ಕ ಆಶ್ರಮಿಗಳನ್ನು) ಪ್ರತಿಷೇಧಿಸಿಲ್ಲವೆಂಬುದಕ್ಕೂ ಪ್ರತಿಹೇಳಿದಂತೆ ಆಯಿತು.[6] ಮತ್ತು ಜ್ಞಾನವುಳ್ಳವನಾಗಿ ಕರ್ಮವನ್ನು

1. ಆ ಪುಣ್ಯಲೋಕಭಾಗಿಗಳಲ್ಲಿ ಆಶ್ರಮಮಾತ್ರಶರಣನಾದ ಸಂನ್ಯಾಸಿಯೂ ಸೇರಿರುತ್ತಾನೆ ; ಏಕೆಂದರೆ ಅವನಿಗೂ ಏಕತ್ವಜ್ಞಾನವಿರುವದಿಲ್ಲ.
2. ನಿವೃತ್ತಭೇದಪ್ರತ್ಯಯಸ್ಯ ಎಂಬುದರ ಅನುವಾದವಿದು ; ಅದು ಇಲ್ಲದ ಆ।। ಪಾಠಕ್ಕೂ ಇದೇ ಅಭಿಪ್ರಾಯ.
3. ಅವನಿಗೂ ತಪಸ್ಸುಂಟೆಂಬುದು ಶ್ರುತಿಯ ಅಭಿಪ್ರಾಯವಾಗಿದ್ದರೆ ಅವನನ್ನು ಬೇರ್ಪಡಿಸಿ ಅಮೃತತ್ವವು ಅವನಿಗೆ ಆಗುತ್ತದೆ ಎಂದು ಹೇಳುತ್ತಿರಲಿಲ್ಲ ; ಏಕತ್ವಜ್ಞಾನಿಗೆ ಕರ್ಮವು ಸಂಭವಿಸುವದೂ ಇಲ್ಲ. ಆದ್ದರಿಂದ ಅವನನ್ನೇ ಉಳಿಸಿಕೊಂಡು ಬ್ರಹ್ಮಸಂಸ್ಥನೆಂದಿದೆ ಎಂದು ಭಾ. ಭಾ. ೧೭೮ರಲ್ಲಿ ಹೇಳಿದೆ.
4. ಗೃಹಸ್ಥನ ಧರ್ಮಗಳಂತೆ.
5. ಈ ತಪಸ್ಸನ್ನು ನಾನು ಮಾಡಿ ಇಂಥ ಫಲವನ್ನು ಅನುಭವಿಸುವೆನು ಎಂಬ ಕ್ರಿಯಾಕಾರಕಫಲಭೇದಬುದ್ಧಿಯಿರುವ ಮಾನವಸ್ಥನಿಗೇ ತಪಸ್ಸು ; ಪರಿವ್ರಾಜಕನಿಗೆ ಆ ಭೇದ ಬುದ್ಧಿಯು ಇರುವದಿಲ್ಲ.
6. ಏಕೆಂದರೆ ಕರ್ಮವಿದ್ದವನಿಗೆ ಬ್ರಹ್ಮಸಂಸ್ಥತೆ ಸಂಭವಿಸುವದಿಲ್ಲ, ಬ್ರಹ್ಮಸಂಸ್ಥನಿಗೆ ಕರ್ಮವು ಸಂಭವಿಸುವದಿಲ್ಲ ; ಆದ್ದರಿಂದ ಕರ್ಮವಿಲ್ಲದ ಸಂದಿನಲ್ಲಿ ಬ್ರಹ್ಮಸಂಸ್ಥನಾಗುವದೆಂಬುದು ಅಸಂಭಾವಿತ. ಮಿಕ್ಕ ಆಶ್ರಮಗಳಿಗೆ ಪುಣ್ಯಲೋಕವನ್ನು ಹೇಳಿ ಅಮೃತತ್ವವನ್ನು ಬ್ರಹ್ಮಸಂಸ್ಥನಿಗೆ ಬೇರ್ಪಡಿಸಿ ಹೇಳಿರುವದರಿಂದಲೇ ಅವರಿಗೆ ಬ್ರಹ್ಮಸಂಸ್ಥತ್ವವಿಲ್ಲದಂತೆ ಆಗಿದೆ.

ಬಿಟ್ಟಿರುವವನೇ ಪರಿವ್ರಾಜಕನಾದ್ದರಿಂದ ಜ್ಞಾನವು ವ್ಯರ್ಥವೆಂಬ (ಪೂರ್ವಪಕ್ಷಕ್ಕೂ) ಪ್ರತ್ಯುತ್ತರವನ್ನು ಹೇಳಿದಂತೆ ಆಯಿತು.[1]

ಇನ್ನು ಯವವರಾಹಾದಿಶಬ್ದಗಳಂತೆ ಬ್ರಹ್ಮಸಂಸ್ಥಶಬ್ದವು ಪರಿವ್ರಾಜಕನಲ್ಲಿ ರೂಢವಲ್ಲ ಎಂದು (ಪೂರ್ವಪಕ್ಷಿ ಹೇಳಿದ್ದನಷ್ಟೆ), ಆ (ಪರಿವ್ರಾಜಕನಿಗೇ) ಬ್ರಹ್ಮಸಂಸ್ಥತ್ವವು ಸಂಭವಿಸುವದೇ ಹೊರತು ಮತ್ತೊಬ್ಬರಿಗಿಲ್ಲ - ಎಂದು ಅದನ್ನು ಪರಿಹರಿಸಿದ್ದಾಗಿದೆ.[2] ಇನ್ನು ರೂಢಶಬ್ದಗಳು ನಿಮಿತ್ತವನ್ನು ಸ್ವೀಕರಿಸಿ (ಪ್ರವೃತ್ತವಾಗು) ವದಿಲ್ಲ ಎಂದು (ಪೂರ್ವಪಕ್ಷದಲ್ಲಿ) ಹೇಳಿತಷ್ಟೆ? ಅದು ಸರಿಯಲ್ಲ; ಏಕೆಂದರೆ ಗೃಹಸ್ಥ, ತಕ್ಷ, ಪರಿವ್ರಾಜಕ- ಮುಂತಾದ ಶಬ್ದಗಳು ಕಂಡುಬರುತ್ತವೆ, (ಇದರ ವಿವರ) : ಮನೆಯಲ್ಲಿರುವದು, (ಮನೆಯನ್ನು ಬಿಟ್ಟು) ಹೊರಟುಹೋಗಿಬಿಡುವದು, ಕೆತ್ತುವದು- ಮುಂತಾದ ನಿಮಿತ್ತಗಳನ್ನು (ಈ) ಶಬ್ದಗಳು ತೆಗೆದುಕೊಳ್ಳುವವಾದರೂ ಗೃಹಸ್ಥಪರಿವ್ರಾಜಕ(ಶಬ್ದ)ಗಳು ಆಯಾ ಆಶ್ರಮಿಯಲ್ಲಿಯೂ ತಕ್ಷ ಎಂಬ (ಶಬ್ದವು) ಗೊತ್ತಾದ (ಒಂದು) ಜಾತಿಯುಳ್ಳ (ಬಡಗಿಯಲ್ಲಿ)ಯೂ ರೂಢ[3]ವಾಗಿರುವದೇ ಹೊರತು ಎಲ್ಲೆಲ್ಲಿ ಆ ನಿಮಿತ್ತಗಳಿವೆಯೋ ಅಲ್ಲೆಲ್ಲ ವರ್ತಿಸುವದಿಲ್ಲ, ಏಕೆಂದರೆ (ಹಾಗೆ)

---

1. ಜ್ಞಾನವಿಲ್ಲದ ಆಶ್ರಮಮಾತ್ರದವನಿಗೂ ಅಮೃತತ್ವವಾಗುವದೆಂದಿದ್ದರೆ ಜ್ಞಾನವು ವ್ಯರ್ಥವಾಗುತ್ತಿತ್ತು ಎಂದು ಭಾವ. ಇಲ್ಲಿ ಬ್ರಹ್ಮಸಂಸ್ಥನು ಅಮೃತತ್ವವನ್ನು ಪಡೆಯುತ್ತಾನೆ ಎಂದಿರುವದು ಪ್ರಣವಾರ್ಥವಾದ ಬ್ರಹ್ಮವನ್ನು ಬಲ್ಲ ಜ್ಞಾನಿಯಾದ ಪರಮಹಂಸನ ವಿಷಯವೇ ಆದರೂ ಬ್ರಹ್ಮಸಂಸ್ಥತ್ವವನ್ನು ಹೊಗಳಿರುವದರಿಂದಲೇ ಅದು ಕರ್ತವ್ಯವೆಂದು ಹೇಳಿದಂತೆ ಆಗಿದೆ ; ಈ ಕರ್ತವ್ಯತ್ವವು ಕರ್ತೃವಿಲ್ಲದೆ ಸಂಭವಿಸುವದಿಲ್ಲವಾದ್ದರಿಂದ ಅನಾತ್ಮಜ್ಞಾನಾದ ಮುಮುಕ್ಷುವೂ ಬ್ರಹ್ಮನಿಷ್ಠೆಯನ್ನು ಮಾಡುವದಕ್ಕೆ ಅಧಿಕಾರಿಯೆಂದಾಗುತ್ತಾನೆ. ಆದ್ದರಿಂದ ಅಮೃತತ್ವಕಾಮನಾದವನು ಬ್ರಹ್ಮಸಂಸ್ಥನಾಗಬೇಕು, ಓಂಕಾರೋಪಾಸನೆಯನ್ನು ಮಾಡಬೇಕು - ಎಂದು ವಿಧಿಯು ಏರ್ಪಡುತ್ತದೆ. ಮುಂದಿನ ಕಂಡಿಕೆಯಲ್ಲಿ ಓಂಕಾರವನ್ನು ಹೊಗಳಿರುವದಕ್ಕೆ ಅದೇ ಕಾರಣ. ಈ ನ್ಯಾಯವನ್ನು ಗೀ.ಭಾ. ೫-೧ (ಭಾ.ಭಾ. ೩೧೪)ರಲ್ಲಿ ಕಾಣಬಹುದು. ವಿವಿದಿಷುಗಳಿಗೂ ಸರ್ವಕರ್ಮಸಂನ್ಯಾಸಪೂರ್ವಕವಾಗಿ ಬ್ರಹ್ಮನಿಷ್ಠರಾಗಿರುವದು ವಿಹಿತವೆಂಬುದಕ್ಕೆ ಗೀ. ಭಾ. ೧೮-೪೯ (ಭಾ. ಭಾ. ೫೫೨), ಗೀ. ಭಾ. ೧೮-೫೧ ರಿಂದ ೫೩ (ಭಾ. ಭಾ. ೫೬೦ ರಿಂದ ೫೬೨), ಬೃ. ಭಾ. ೪-೫-೧೫ (ಭಾ. ಭಾ. ೩೪೩, ೩೪೪)- ಇವನ್ನು ನೋಡಿ.

2. ಮತ್ತೊಬ್ಬರಿಗೆ ಸಂಭವಿಸುವದಿಲ್ಲವಾದ್ದರಿಂದ ಬ್ರಹ್ಮಸಂಸ್ಥಶಬ್ದವು ರೂಢವಲ್ಲದಿದ್ದರೂ ಪರಿವ್ರಾಜಕನನ್ನೇ ಹೇಳುತ್ತದೆ.

3. ನಿರುಕ್ತದಲ್ಲಿ ತಕ್ಷಾ, ವರಿವ್ರಾಜಕೋ, ಜೀವೋ, ಭೂಮಿಜಃ ಎಂಬ ಶಬ್ದಗಳನ್ನು ಉದಾಹರಿಸಿದೆ ೧-೪.

ಪ್ರಸಿದ್ಧಿಯಿಲ್ಲ.[1] ಹಾಗೆಯೇ ಇಲ್ಲಿಯೂ ಬ್ರಹ್ಮಸಂಸ್ಥಶಬ್ದವು ಸರ್ವಕರ್ಮಗಳನ್ನೂ ಅವುಗಳ ಸಾಧನಗಳನ್ನೂ ಬಿಟ್ಟ ಅತ್ಯಾಶ್ರಮಿಯಾದ[2] ಪರಮಹಂಸನೆಂಬ ಪರಿವ್ರಾಜಕನೊಬ್ಬನ ವಿಷಯದಲ್ಲಿಯೇ ವರ್ತಿಸುತ್ತದೆಯೆಂಬುದೇ ಯುಕ್ತವು[3]; ಏಕೆಂದರೆ ಇಲ್ಲಿ ಮುಖ್ಯಾಮೃತತ್ವವೆಂಬ ಫಲವನ್ನು ಶ್ರುತಿಯಲ್ಲಿ ಹೇಳಿರುತ್ತದೆ.[4]

ಪಾರಮಹಂಸ್ಯವೇ ವೇದೋಕ್ತಪಾರಿವ್ರಾಜ್ಯವು

(ಭಾಷ್ಯ)

೧೮೪. ಅತಶ್ಚ ಇದಮೇವೈಕಂ ವೇದೋಕ್ತಂ ಪಾರಿವ್ರಾಜ್ಯಮ್, ನ ಯಜ್ಞೋಪವೀತತ್ರಿದಣ್ಡಕಮಣ್ಡಲ್ವಾದಿಪರಿಗ್ರಹಃ (ಇತಿ)[5] । "ಮುಣ್ಡೋऽಪರಿಗ್ರಹೋऽಸಙ್ಗಃ" (ಜಾ. ಖಿ)[6] ಇತಿ ಚ ಶ್ರುತಿಃ[7] । "ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ" (ಶ್ವೇ. ೬-೨೧) ಇತ್ಯಾದಿ ಚ ಶ್ವೇತಾಶ್ವತರೀಯೇ। "ನಿಸ್ತುತಿರ್ನಿರ್ನಮಸ್ಕಾರಃ" (ಮೋ. ಧ. ೨೪೨-೯)[8] ಇತ್ಯಾದಿಸ್ಮೃತಿಭ್ಯಶ್ಚ । "ತಸ್ಮಾತ್ ಕರ್ಮ ನ ಕುರ್ವನ್ತಿ ಯತಯಃ

1. ಮನೆಯಲ್ಲಿರುವದರಿಂದ ಬ್ರಹ್ಮಚಾರಿಯೂ ಗೃಹಸ್ಥನೆನಿಸಲಾರನು, ಮನೆಯನ್ನು ಬಿಟ್ಟು ದೂರದೇಶಕ್ಕೆ ಹೋಗಿರುವವನೂ ಪರಿವ್ರಾಜಕನಾಗುವದಿಲ್ಲ, ಮರವನ್ನು ಕೆತ್ತುವವರೆಲ್ಲ ಬಡಗಿಗಳೆನಿಸುವದಿಲ್ಲ; ಈ ಶಬ್ದಗಳು ಇಂಥಿಂಥವರನ್ನೇ ಹೇಳುವವೆಂಬ ಪ್ರಸಿದ್ಧಿಯಿದೆ.
2. ಪರಮಹಂಸನನ್ನು ಅತ್ಯಾಶ್ರಮಿ ಎಂದು ಕರೆದಿರುವದು ಸ್ಮಾರ್ತಲಿಂಗವಿಲ್ಲವೆನ್ನುವದಕ್ಕೆ. ಬೃ. ಭಾ. ೩-೫-೧ (ಭಾ. ಭಾ. ೫೬)ನ್ನು ನೋಡಿ.
3. ಇತರ ಯೋಗರೂಢವಾದ ಶಬ್ದಗಳಂತೆ ಇದೂ ಯಾವ ಸಂನ್ಯಾಸಿಯಲ್ಲಿ ಬ್ರಹ್ಮಸಂಸ್ಥತ್ವವು ಸಂಭವಿಸುವದೋ ಆವನಲ್ಲಿ ಮಾತ್ರ ವರ್ತಿಸುವದು ವಿರುದ್ಧವಲ್ಲ - ಎಂದು ಅಭಿಪ್ರಾಯ.
4. ಪುಣ್ಯಲೋಕಗಳಿಂದ ಬೇರ್ಪಡಿಸಿರುವದರಿಂದ ಇದು ಮುಖ್ಯಾಮೃತತ್ತ್ವವೇ ಎಂದು ಹಿಂದೆ ನಿಶ್ಚಯಿಸಿದೆ ; ಆ ಅಮೃತತ್ವವು ಮಿಕ್ಕ ಗೌಣಬ್ರಹ್ಮಸಂಸ್ಥರಿಗೆ - ಎಂದರೆ ಸುಮ್ಮನೆ ಯಾವ ಆಶ್ರಮದಲ್ಲಾದರೂ ಇದ್ದು ಪ್ರಣವಸೇವೆಮಾಡುವವರಿಗೆ- ದಕ್ಕಲಾರದು.
5. ಇಲ್ಲಿ ಇತಿಯು ಇಲ್ಲದಿದ್ದರೂ ಸಾಗುತ್ತಿತ್ತೆಂದು ತೋರುತ್ತದೆ.
6. ಜಾಬಾಲದಲ್ಲಿ 'ಅಸಙ್ಗಃ' ಎಂಬ ಮಾತಿಲ್ಲ ; 'ಅಸಙ್ಗಃ' ಎಂಬುದೇ ಬೇರೊಂದು ಶ್ರುತಿಯ ವಾಕ್ಯವಾಗಿರಬಹುದೆ ?
7. ಈ ಮಾತನ್ನು ಟೀಕೆಯಲ್ಲಿ ಅನ್ವಯಿಸಿರುವಂತೆ ಮುಂದಿನ ವಾಕ್ಯಕ್ಕೆ ಜೋಡಿಸುವ ಕಾರಣವೇನೂ ಇಲ್ಲ.
8. ನಿಸ್ತುತಿರ್ನಿರ್ನಮಸ್ಕಾರಃ ಪರಿತ್ಯಜ್ಯ ಶುಭಾಶುಭೇ । ಅರಣ್ಯೇ ವಿಚರೈಕಾಕೀ ಯೇನ ಕೇನಚಿದಾಶಿತಃ॥ (ಮೋ. ಧ. ೨೪೨-೯) ಎಂದು ಪೂರ್ಣಶ್ಲೋಕ.

ಪಾರದರ್ಶಿನಃ'' (ಮೋ. ಧ. ೨೪೧-೭), ''ತಸ್ಮಾದಲಿಙ್ಗೋ ಧರ್ಮಜ್ಞಃ'' (ಅಶ್ವ. ೪೬-೫೧)[1], ''ಅವ್ಯಕ್ತಲಿಙ್ಗಃ''[2] (ವ. ೧೦-೧೨) ಇತ್ಯಾದಿಸ್ಮೃತಿಭ್ಯಶ್ಚ[3] ॥

(ಭಾಷ್ಯಾರ್ಥ)

ಮತ್ತು ಈ ಕಾರಣದಿಂದಲೇ[4] ಇದೊಂದೇ ವೇದೋಕ್ತವಾದ ಪಾರಿವ್ರಾಜ್ಯವೇ ಹೊರತು ಯಜ್ಞೋಪವೀತ, ತ್ರಿದಂಡ, ಕಮಂಡಲು ಮುಂತಾದವುಗಳನ್ನು ಪರಿಗ್ರಹಿಸುವದಲ್ಲ - ಎಂದಾಗುತ್ತದೆ.[5] ''ಮುಂಡನು, ಅಪರಿಗ್ರಹನು, ಅಸಂಗನು'' (ಜಾ. ೫ ?) ಎಂದು ಶ್ರುತಿಯಿದೆ.[6] ''ಅತ್ಯಾಶ್ರಮಿಗಳಿಗೆ ಪರಮಪವಿತ್ರವಾದ (ಈ ಜ್ಞಾನವನ್ನು ಹೇಳಿದನು)'' (ಶ್ವೇ. ೬-೨೧) ಎಂದು ಶ್ವೇತಾಶ್ವತರೀಯದಲ್ಲಿಯೂ (ಹೇಳಿದೆ).[7] ''ಸ್ತುತಿಯಿಲ್ಲದವನೂ ನಮಸ್ಕಾರವಿಲ್ಲದವನೂ'' (ಮೋ. ಧ. ೨೪೨-೯)[8] ''ಆದ್ದರಿಂದ[9] ಪಾರದರ್ಶಿಗಳಾದ ಯತಿಗಳು ಕರ್ಮವನ್ನು ಮಾಡುವದಿಲ್ಲ'' (ಮೋ. ಧ.

1. ಅಚ್ಚಿನಭಾರತದಲ್ಲಿ 'ತಸ್ಮಾದಲಿಙ್ಗಧರ್ಮಜ್ಞೋ ಧರ್ಮತತ್ತ್ವಮುಪಾಚರೇತ್' ಎಂದಿದೆ. ಆದರೆ ಭಾಷ್ಯಕಾರರು 'ಅಲಿಙ್ಗೋ' ಎಂದೇ ಬರೆದಿರುತ್ತಾರೆ. ಬೃ. ಭಾ. ೩-೫-೧ (ಭಾ. ಭಾ. ೫೬.) ನೋಡಿ.
2. ವಸಿಷ್ಠಸ್ಮೃತಿಯಲ್ಲಿ ''ಅವ್ಯಕ್ತಲಿಙ್ಗೋಽವ್ಯಕ್ತಾಚಾರೋಽನುನ್ಮತ್ತ ಉನ್ಮತ್ತವೇಷಃ'' ಎಂಬ ವಾಕ್ಯವಿದೆ. ಇದು ಅದೇ ಸ್ಮೃತಿಯಿಂದ ಆರಿಸಿದ್ದೊ, ಅಲ್ಲವೊ, ನಿಶ್ಚಯವಿಲ್ಲ.
3. ಇತ್ಯಾದಿಸ್ಮೃತಿಭ್ಯಶ್ಚ ಎಂಬುದು ಪುನರುಕ್ತಿಯಾಗಿದೆ.
4. ಜ್ಞಾನಿಯಾದ ಸರ್ವಕರ್ಮಸಂನ್ಯಾಸಿಯನ್ನೇ ಬ್ರಹ್ಮಸಂಸ್ಥನೆಂದೆಣಿಸಬೇಕಾಗಿರುವದರಿಂದಲೇ.
5. ಏಕೆಂದರೆ ಯಜ್ಞೋಪವೀತಾದಿಗಳು ಕರ್ಮಾರ್ಥವಾಗಿರುತ್ತವೆ, ಭೇದಪ್ರತ್ಯಯವುಳ್ಳವನಿಗೆ ಮಾತ್ರ ಸಂಭವಿಸುತ್ತವೆ ; ಅವನ್ನುಳ್ಳ ಸಂನ್ಯಾಸವು ಅಮೃತತ್ವಫಲವುಳ್ಳ ವೈದಿಕ ಸಂನ್ಯಾಸವಾಗಲಾರದು.
6. ಈ ಶ್ರುತಿಯಲ್ಲಿ ಸಂನ್ಯಾಸಿಗೆ ಯಾವ ಪರಿಗ್ರಹವೂ ಕರ್ಮವೂ ಇಲ್ಲವೆಂದು ಸ್ಪಷ್ಟವಾಗಿ ಹೇಳಿದೆ.
7. ಜ್ಞಾನೋಪದೇಶಕ್ಕೆ ಅತ್ಯಾಶ್ರಮಿಗಳೇ ಮುಖ್ಯಾಧಿಕಾರಿಗಳೆಂದಾಯಿತು.
8. ಸ್ತುತಿಯಿಲ್ಲದವನೂ ನಮಸ್ಕಾರವಿಲ್ಲದವನೂ ಶುಭಾಶುಭವಿಲ್ಲದವನೂ ಆಗಿ ಯಾವದು ಸಿಕ್ಕಿದರೆ ಅದನ್ನು ತಿಂದುಕೊಂಡು ಅರಣ್ಯದಲ್ಲಿ ಸಂಚರಿಸು- ಎಂಬ ಉಪದೇಶವು ಎಂದಿಗೂ ತ್ರಿದಂಡಿಸಂನ್ಯಾಸಕ್ಕೆ ಹೊಂದುವದಿಲ್ಲ.
9. ಕರ್ಮವು ಬಂಧಕವೂ ಜ್ಞಾನವು ಮೋಕ್ಷದಾಯಕವೂ ಆಗಿರುವದರಿಂದ ಎಂದರ್ಥ ; ಜ್ಞಾನಕರ್ಮಸಮುಚ್ಚಯಕಾರಿಗಳಾದ ಸಂನ್ಯಾಸಿಗಳಿಗೆ ಇದೂ ಹೊಂದುವದಿಲ್ಲ.

೨೪೧-೭), "ಆದ್ದರಿಂದ ಅಲಿಂಗನೂ ಧರ್ಮಜ್ಞನೂ (ಆಗಿ ಧರ್ಮತತ್ತ್ವವನ್ನು ಆಚರಿಸಬೇಕು)" (ಅಶ್ವ. ೪೬-೫೧), "ಅವ್ಯಕ್ತಲಿಂಗನೂ..." (ವ. ೧೦-೧೨)[1]-ಮುಂತಾದ ಸ್ಮೃತಿಗಳಿಂದಲೂ ಇದು (ಸಿದ್ಧವಾಗುತ್ತದೆ).[2]

ಏಕತ್ವಜ್ಞಾನಿಯೇ ಬ್ರಹ್ಮಸಂಸ್ಥನು

(ಭಾಷ್ಯ)

೧೮೫. **ಯತ್ತು ಸಾಂಖ್ಯೈಃ ಕರ್ಮತ್ಯಾಗೋಽಭ್ಯುಪಗಮ್ಯತೇ । ಕ್ರಿಯಾಕಾರಕಫಲಭೇದಬುದ್ಧೇಃ ಸತ್ಯತ್ವಾಭ್ಯುಪಗಮಾತ್ ತನ್ಮೃಷಾ । ಯಚ್ಚ ಬೌದ್ಧೈಃ ಶೂನ್ಯತಾಭ್ಯುಪಗಮಾತ್ ಅಕರ್ತೃತ್ವಮಭ್ಯುಪಗಮ್ಯತೇ, ತದಪ್ಯಸತ್ । ತದಭ್ಯುಪಗನ್ತುಃ ಸತ್ತ್ವಾಭ್ಯುಪಗಮಾತ್ । ಯಚ್ಚ ಅಜ್ಞೈರಲಸತಯಾ ಅಕರ್ತೃತ್ವಾಭ್ಯುಪಗಮಃ, ಸೋಽಪ್ಯಸತ್[3] । ಕಾರಕಬುದ್ಧೇರನಿವರ್ತಿತತ್ವಾತ್ ಪ್ರಮಾಣೇನ । ತಸ್ಮಾತ್ ವೇದಾನ್ತಪ್ರಮಾಣಜನಿತೈಕತ್ವಪ್ರತ್ಯಯವತ ಏವ ಕರ್ಮನಿವೃತ್ತಿಲಕ್ಷಣಂ ಪಾರಿವ್ರಾಜ್ಯಂ ಬ್ರಹ್ಮಸಂಸ್ಥತ್ವಂ ಚ ಇತಿ ಸಿದ್ಧಮ್ ॥**

(ಭಾಷ್ಯಾರ್ಥ)

ಆದರೆ ಸಾಂಖ್ಯರು ಕರ್ಮತ್ಯಾಗವನ್ನು ಒಪ್ಪಿರುವರಷ್ಟೆ, (ಅವರು) ಕ್ರಿಯಾ ಕಾರಕಫಲಗಳು ಬೇರೆಬೇರೆ ಎಂಬ ಬುದ್ಧಿಯು ಸತ್ಯವೆಂದು ಒಪ್ಪಿರುವದರಿಂದ ಅದು ತಪ್ಪೇ.[4] ಮತ್ತು ಬೌದ್ಧರು (ಆತನು) ಶೂನ್ಯವೆಂದು ಒಪ್ಪಿರುವದರಿಂದ ಅಕರ್ತೃತ್ವವನ್ನು ಒಪ್ಪಿರುತ್ತಾರಲ್ಲ, ಅದೂ ಸರಿಯಲ್ಲ ; ಏಕೆಂದರೆ ಅದನ್ನು ಒಪ್ಪಿರುವವನು

1. ದಂಭಕ್ಕಾಗಿ ಆಶ್ರಮಲಿಂಗವನ್ನು ತೋರಿಸಿಕೊಳ್ಳದೆ ಇರುವವನು, ಅದಂಭದಿಂದ ಶ್ರುತಿಸ್ಮೃತ್ಯುಕ್ತಲಿಂಗವುಳ್ಳವನು ಎಂದು ಟೀಕೆ ; ಆದರೆ ಲಿಂಗವೆಂದರೆ ಸ್ಮಾರ್ತಸಂನ್ಯಾಸದ ಲಿಂಗವು, ಅದಿಲ್ಲದವನು - ಎಂದು ಸರಳವಾಗಿ ಅರ್ಥವಾಗುತ್ತದೆ. ಬೃ. ಭಾ. ೩-೫-೧ (ಭಾ. ಭಾ. ೫೬)ರ ಬೆಂಬಲವೂ ಈ ಅರ್ಥಕ್ಕೇ ಇದೆ.
2. ಯಾವ ಪರಿಗ್ರಹವೂ ಇಲ್ಲದ ಜ್ಞಾನಯುಕ್ತಸರ್ವಕರ್ಮಸಂನ್ಯಾಸವೇ ವೇದೋಕ್ತ ಪಾರಿವ್ರಾಜ್ಯವೆಂದು ಸಿದ್ಧವಾಗುತ್ತದೆ ಎಂದರ್ಥ.
3. ಇದು ಆ॥ ಪಾಠ. ಭಾಷ್ಯವು ಏನೋ ಹೆಚ್ಚುಕಡಿಮೆಯಾಗಿರಬೇಕು. ಯಶ್ಚ... ಆಸನ್ ಎಂದೋ ಅಥವಾ ತದಪ್ಯಸತ್ ಎಂದೋ ಇದ್ದರೆ ಚೆನ್ನ.
4. ಪ್ರಕೃತಿಪುರುಷವಿವೇಕವಾದಮೇಲೂ ಕ್ರಿಯಾಕಾರಕಫಲಗಳು ಸತ್ಯವಾಗಿರುತ್ತವೆ ಎಂದೇ ಅವರು ಒಪ್ಪಿರುತ್ತಾರೆ. ಆದ್ದರಿಂದ ವಿವೇಕಿಗೂ ಮತ್ತೆ ಅವಿವೇಕದಿಂದ ಕರ್ಮವು ಅಂಟಿಕೊಳ್ಳಬಹುದು.

ಇರುತ್ತಾನೆಂದು ಒಪ್ಪಲಾಗಿದೆ.[1] ಇನ್ನು ಅಜ್ಞರಾದವರು ಆಲಸ್ಯದಿಂದ (ತಾವು) ಅಕರ್ತೃ ಗಳೆಂದು ಒಪ್ಪಿರುತ್ತಾರಲ್ಲ, ಅದೂ ತಪ್ಪೇ ; ಏಕೆಂದರೆ (ಅವರಿಗೆ) ಕಾರಕಬುದ್ಧಿಯು ಪ್ರಮಾಣದಿಂದ (ಬಾಧಿತವಾಗಿ) ತೊಲಗಿರುವದಿಲ್ಲ.[2] ಆದ್ದರಿಂದ ವೇದಾಂತಪ್ರಮಾಣ ದಿಂದ ಉಂಟಾದ ಏಕತ್ವಪ್ರತ್ಯಯವುಳ್ಳವನಿಗೇ ಕರ್ಮನಿವೃತ್ತಿರೂಪವಾದ ಪಾರಿ ವ್ರಾಜ್ಯವೂ ಬ್ರಹ್ಮಸಂಸ್ಥತ್ವವೂ (ಹೊಂದುತ್ತದೆ) ಎಂದು ಸಿದ್ಧವಾಯಿತು.[3]

ಗೃಹಸ್ಥನೂ ಜ್ಞಾನಿಯಾದರೆ ಅವನಿಗೆ ಪಾರಿವ್ರಾಜ್ಯವು ಅರ್ಥಪ್ರಾಪ್ತ

(ಭಾಷ್ಯ)

೧೮೬. ಏತೇನ ಗೃಹಸ್ಥಸ್ಯ ಏಕತ್ವವಿಜ್ಞಾನೇ ಸತಿ ಪಾರಿವ್ರಾಜ್ಯಮ್ ಅರ್ಥಸಿದ್ಧಮ್ । ನನು ಅಗ್ನ್ಯುತ್ಪಾದನದೋಷಭಾಗ್ ಸ್ಯಾತ್ ಪರಿವ್ರಜನ್ । "ವೀರಹಾ ವಾ ಏಷ ದೇವಾನಾಂ ಯೋಽಗ್ನಿಮುದ್ವಾಸಯತೇ" (ತೈ. ಸಂ. ೧-೫-೨) ಇತಿ ಶ್ರುತೇಃ । ನ । ದೈವೋತ್ಪಾದಿತತ್ವಾತ್ । ಉತ್ಪನ್ನ ಏವ ಹಿ ಸ ಏಕತ್ವದರ್ಶನೇ ಜಾತೇ "ಅಪಾಗಾದಗ್ನೇರಗ್ನಿತ್ವಮ್" (೬-೪-೧) ಇತಿ ಶ್ರುತೇಃ । ಅತೋ ನ ದೋಷಭಾಗ್ ಗೃಹಸ್ಥಃ ಪರಿವ್ರಜನ್ ಇತಿ ॥

(ಭಾಷ್ಯಾರ್ಥ)

ಇದರಿಂದ[4], ಗೃಹಸ್ಥನಿಗೆ ಏಕತ್ವವಿಜ್ಞಾನವುಂಟಾದರೆ ಪಾರಿವ್ರಾಜ್ಯವು ತಾನೆ ಸಿದ್ಧ

1. ಶೂನ್ಯವನ್ನು ಒಪ್ಪಿರುವ ವಾದಿಗಳು ಇಲ್ಲದಿದ್ದರೆ ಆ ವಾದವೇ ಸಿದ್ಧಿಸುವದಿಲ್ಲ; ಅವರು ಇದ್ದರೆ ಅವರೇ ಕರ್ತೃಗಳಾಗಿ ಕರ್ಮವನ್ನು ಮಾಡುತಾರೆಂದು ಒಪಬೇಕಾಗುವದು.
2. ಅಜ್ಞರಿಗೆ ಕರ್ತೃಕಾರಕವು ಸತ್ಯವೆಂಬ ಬುದ್ಧಿಯಿರುವದರಿಂದ ಕರ್ಮವನ್ನು ಬಿಡುವದೆಂಬುದೂ ಒಂದು ಕರ್ಮವೇ ಆಗುವದು. ಆದ್ದರಿಂದ ದೇಹಧಾರಿಯಾದವನು ಕರ್ಮವನ್ನು ಬಿಡುವದು ಆಗಲಾರದು. ಗೀ ೩-೫, ೧೮-೧೧.
3. ಏಕತ್ವಪ್ರತ್ಯಯವುಳ್ಳವನಿಗೆ ತ್ರಿಕಾಲದಲ್ಲಿಯೂ ನಾನು ಕರ್ತೃವಲ್ಲ ಎಂದೇ ನಿಶ್ಚಯ ವಾಗಿರುತ್ತದೆ. ಸೂ. ಭಾ. ೪-೧-೧೩ (ಭಾ. ಭಾ. ೫೨೮).
4. ಏಕತ್ವಜ್ಞಾನಿಗೆ ಭೇದಬುದ್ಧಿಯು ಇರುವದಿಲ್ಲವೆಂದಾದದ್ದರಿಂದ.
5. ಏಕೆಂದರೆ ಕರ್ಮಕ್ಕೆ ಭೇದಬುದ್ಧಿಯು ಅವಶ್ಯವಾಗಿರುತ್ತದೆ. ಏಕತ್ವಬುದ್ಧಿಯಿರುವವನಿಗೆ ಶಾಸ್ತ್ರವಿಧಿಯ ಅಪೇಕ್ಷೆಯಿಲ್ಲದೆಯೇ ಪಾರಿವ್ರಾಜ್ಯವು ಅರ್ಥಸಿದ್ಧವಾಯಿತು. ಬೃ. ಭಾ. ೪-೫-೧೫ (ಭಾ. ಭಾ. ೩೪೧), ಐ. ಭಾ. ಭಾ. ೧೫.

(ಆಕ್ಷೇಪ):- ಪರಿವ್ರಜನಮಾಡುವ (ಗೃಹಸ್ಥನು) ಅಗ್ನಿಯನ್ನು ನಾಶಮಾಡಿದ ದೋಷಕ್ಕೆ ಭಾಗಿಯಾಗುವದಿಲ್ಲವೆ ? ''ಯಾವನು ಅಗ್ನಿಯನ್ನು ಬಿಟ್ಟು (ತೆರಳು) ವನೋ, ಅವನು ದೇವತೆಗಳ ವೀರರನ್ನು ಕೊಂದವನು'' (ತೈ. ಸಂ. ೧-೫-೨) ಎಂದು ಶ್ರುತಿ(ಯಿದೆಯಲ್ಲ) !

(ಪರಿಹಾರ) :- ಹಾಗಲ್ಲ. ಏಕೆಂದರೆ ದೈವ(ವಶ)ದಿಂದ (ಅದು ತಾನೇ) ನಾಶವಾಗಿರುತ್ತದೆ. ಏಕತ್ವದರ್ಶನವು ಹುಟ್ಟಿದರೆ ಆ (ಅಗ್ನಿಯು ತಾನೇ) ನಾಶವಾಗಿರುವದಲ್ಲವೆ[1] ? ''ಅಗ್ನಿಯ ಅಗ್ನಿತ್ವವು ಹೋಗಿಬಿಟ್ಟಿತು'' (೬-೪-೧) ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). ಆದ್ದರಿಂದ ಗೃಹಸ್ಥನು (ಜ್ಞಾನವಾದ ಬಳಿಕ) ಪರಿವ್ರಜನ ಮಾಡಿದರೆ ದೋಷಭಾಗಿಯಲ್ಲ.[2]

ಓಂಕಾರವು ಸರ್ವಸಾರ

(ಉಪನಿಷತ್ತು)

ವಿದ್ಯಾ

ಸಂಪ್ರಾಸ್ರವತ್ತಾಮಭ್ಯತಪತ್ತಸ್ಯಾ ಅಭಿತಪ್ತಾಯಾ ಏತಾನ್ಯಕ್ಷರಾಣಿ ಸಂಪ್ರಾಸ್ರವನ್ತ ಭೂರ್ಭುವಃ ಸ್ವರಿತಿ ॥೨॥

ತಾನ್ಯಭ್ಯತಪತ್ತೇಭ್ಯೋಽಭಿತಪ್ತೇಭ್ಯ ಓಂಕಾರಃ ಸಂಪ್ರಾಸ್ರವತ್ತದ್ಯಥಾ ಶಙ್ಕುನಾ ಸರ್ವಾಣಿ ಪರ್ಣಾನಿ ಸಂತೃಣ್ಣಾನ್ಯೇವಮೋಂಕಾರೇಣ ಸರ್ವಾ ವಾಕ್ಸಂತೃಣ್ಣೋಂಕಾರ ಏವೇದಗ್ಂ ಸರ್ವಮೋಂಕಾರ ಏವೇದಗ್ಂ ಸರ್ವಮ್ ॥೩॥

೨. ಪ್ರಜಾಪತಿಯು ಲೋಕಗಳನ್ನು ಕುರಿತು ತಪಸ್ಸುಮಾಡಿದನು ; (ಹಾಗೆ) ತಪಸ್ಸುಮಾಡಿದ ಆ (ಲೋಕಗಳಿಂದ) ತ್ರಯೀವಿದ್ಯೆಯು ಹೊರಕ್ಕೆ ಬಂದಿತು. ಅದನ್ನು ಕುರಿತು ತಪಸ್ಸುಮಾಡಿದನು ; (ಹಾಗೆ) ತಪಸ್ಸುಮಾಡಿದ ಅದರಿಂದ ಭೂಃ, ಭುವಃ, ಸುವಃ- ಎಂಬೀ ಅಕ್ಷರಗಳು ಹೊರಕ್ಕೆ ಬಂದವು.

---

1. ಅಗ್ನ್ಯುತ್ಪಾದನದೋಷಶ್ರುತಿಯು ಅಗ್ನಿಯು ಸತ್ಯವು, ಅದರಲ್ಲಿ ಹೋಮಮಾಡುವದು ನನ್ನ ಕರ್ತವ್ಯವು- ಎಂಬ ಭೇದಪ್ರತ್ಯಯವುಳ್ಳವನ ವಿಷಯವು ; ಏಕತ್ವಪ್ರತ್ಯಯವುಳ್ಳವನಿಗೆ ಎಲ್ಲವೂ ಬ್ರಹ್ಮವೇ ಆಗಿರುವದರಿಂದ ಆ ದೋಷವಿಲ್ಲ.
2. ಏಕೆಂದರೆ ಅವನಿಗೆ ದೋಷವೆಂಬುದೇ ಇಲ್ಲ ; ಏಕತ್ವಪ್ರತ್ಯಯದಿಂದ ದೋಷ ಪ್ರತ್ಯಯವೂ ಬಾಧಿತವಾಗಿರುತ್ತದೆ.

೩. ಅದನ್ನು ಕುರಿತು ತಪಸ್ಸುಮಾಡಿದನು ; (ಹಾಗೆ) ತಪಸ್ಸು ಮಾಡಿದ ಅವುಗಳಿಂದ ಓಂಕಾರವು ಹೊರಕ್ಕೆ ಬಂದಿತು. ಹೇಗೆ ಶಂಕು ವಿನಿಂದ ಪರ್ಣಗಳೆಲ್ಲ ಕೊರೆಯಲ್ಪಟ್ಟಿವೆಯೋ ಹಾಗೆಯೇ ಓಂಕಾರದಿಂದ ವಾಕ್ಕೆಲ್ಲವೂ ಕೊರೆಯಲ್ಪಟ್ಟಿದೆ. ಇದೆಲ್ಲವೂ ಓಂಕಾರವೇ, ಇದೆಲ್ಲವೂ ಓಂಕಾರವೇ.

ವ್ಯಾಹೃತಿಗಳ ಅಭಿವ್ಯಕ್ತಿ

(ಭಾಷ್ಯ)

೧೮೭. ಯತ್ಸಂಸ್ಥೋऽಮೃತತ್ವಮೇತಿ ತನ್ನಿರೂಪಣಾರ್ಥಮ್ ಆಹ । ಪ್ರಜಾಪತಿಃ ವಿರಾಟ್, ಕಶ್ಯಪೋ ವಾ ಲೋಕಾನ್ ಉದ್ದಿಶ್ಯ ತೇಷು ಸಾರಜಿಘೃಕ್ಷಯಾ ಅಭ್ಯತಪತ್ ಅಭಿತಾಪಂ ಕೃತವಾನ್ । ಧ್ಯಾನಂ ತಪಃ ಕೃತವಾನ್ ಇತ್ಯರ್ಥಃ । ತೇಭ್ಯೋऽಭಿತಪ್ತೇಭ್ಯಃ ಸಾರಭೂತಾ ತ್ರಯೀವಿದ್ಯಾ ಸಂಪ್ರಾಸ್ರವತ್ ಪ್ರಜಾಪತೇರ್ಮನಸಿ ಪ್ರತ್ಯಭಾತ್ ಇತ್ಯರ್ಥಃ। ತಾಮ್ ಅಭ್ಯತಪತ್ । ಪೂರ್ವವತ್ । ತಸ್ಯಾ ಅಭಿತಪ್ತಾಯಾ ಏತಾನಿ ಅಕ್ಷರಾಣಿ ಸಂಪ್ರಾಸ್ರವನ್ತ ಭೂರ್ಭುವಃಸ್ವರಿತಿ ವ್ಯಾಹೃತಯಃ ॥

(ಭಾಷ್ಯಾರ್ಥ)

ಯಾವ (ಬ್ರಹ್ಮದಲ್ಲಿ) ನೆಲೆನಿಂತವನು ಅಮೃತನಾಗುವನೋ[1] ಅದನ್ನು ನಿರೂಪಣಮಾಡುವದಕ್ಕಾಗಿ (ಶ್ರುತಿ ಹೀಗೆಂದು) ಹೇಳುತ್ತದೆ.

ಪ್ರಜಾಪತಿಯು ಎಂದರೆ ವಿರಾಜನು ಅಥವಾ ಕಶ್ಯಪನು[2], ಲೋಕಗಳನ್ನು ಕುರಿತು, ಅವುಗಳಲ್ಲಿರುವ ಸಾರವನ್ನು ಗ್ರಹಿಸುವ ಇಚ್ಛೆಯಿಂದ ಅಭಿತಪಿಸಿದನು ; ಅಭಿತಾಪವನ್ನು ಮಾಡಿದನು ; ಧ್ಯಾನವೆಂಬ ತಪಸ್ಸನ್ನು ಮಾಡಿದನು ಎಂದರ್ಥ.[3] (ಹಾಗೆ) ತಪಸ್ಸುಮಾಡಲು ಅವುಗಳಿಂದ ಸಾರಭೂತವಾದ ತ್ರಯೀವಿದ್ಯೆಯು

1. ಬ್ರಹ್ಮದ ಪ್ರತೀಕವಾದ ಓಂಕಾರವನ್ನೇ ಬ್ರಹ್ಮವೆಂದಿದೆ. ಓಂಕಾರದ ತತ್ತ್ವವಾದ ಬ್ರಹ್ಮದ ಜ್ಞಾನದಿಂದ ಸದ್ಯೋಮುಕ್ತಿಯಾದ ಅಮೃತತತ್ತ್ವವಾಗುತ್ತದೆ ಎಂದು ಅದನ್ನು ಹೊಗಳಿ ಈ ಓಂಕಾರದ ಉಪಾಸನೆಯನ್ನು ವಿಧಿಸಲಾಗುತ್ತದೆ.
2. ವಿರಾಟ್ಪುರುಷನು ಆದಿಪ್ರಜಾಪತಿ, ಕಶ್ಯಪಾದಿಗಳು ಅನಂತರದ ಪ್ರಜಾಪತಿಗಳು.
3. ಪ್ರಜಾಪತಿಗೆ ಹಿಂದಿನ ಜನ್ಮದ ವಾಸನೆಯಿಂದ ಜ್ಞಾನಕರ್ಮಗಳ ಫಲವಾಗಿ ಧ್ಯಾನ ತಪೋಮಾತ್ರದಿಂದಲೇ ತ್ರಯೀವಿದ್ಯೆಯು ಹೊಳೆಯಿತು ; ಅವನು ಶರೀರಪ್ರಧಾನವಾದ ತಪಸ್ಸನ್ನು ಮಾಡಲಿಲ್ಲ.

ಹೊರಕ್ಕೆ ಬಂದಿತು ; ಪ್ರಜಾಪತಿಯ ಮನಸ್ಸಿನಲ್ಲಿ ಹೊಳೆಯಿತು ಎಂದರ್ಥ.[1] ಅದನ್ನು ಕುರಿತು ಅಭಿತಪಿಸಿದನು (ಎಂಬುದಕ್ಕೆ) ಮೊದಲಿನಂತೆ(ಅರ್ಥ). (ಹೀಗೆ) ತಪಸ್ಸು ಮಾಡಲು ಆ (ವಿದ್ಯೆಯಿಂದ) ಈ ಅಕ್ಷರಗಳು, ಭೂಃ, ಭುವಃ ಸುವಃ ಎಂಬ ವ್ಯಾಹೃತಿಗಳು ಜಿನುಗಿಬಂದವು.[2]

ಓಂಕಾರದ ಅಭಿವ್ಯಕ್ತಿ

(ಭಾಷ್ಯ)

೧೮೮. ತಾನಿ ಅಕ್ಷರಾಣಿ ಅಭ್ಯತಪತ್ । ತೇಭ್ಯಃ ಅಭಿತಪ್ತೇಭ್ಯ ಓಂಕಾರಃ ಸಂಪ್ರಾಸ್ರವತ್ । ತದ್ ಬ್ರಹ್ಮ ಕೀದೃಶಮಿತಿ ? ಆಹ । ತದ್ ಯಥಾ ಶಙ್ಕುನಾ ಪರ್ಣನಾಲೇನ ಸರ್ವಾಣಿ ಪರ್ಣಾನಿ ಪತ್ರಾವಯವಜಾತಾನಿ ಸಂತೃಣ್ಣಾನಿ ವಿದ್ಧಾನಿ । ವ್ಯಾಪ್ತಾನೀತ್ಯರ್ಥಃ । ಏವಮ್ ಓಂಕಾರೇಣ ಬ್ರಹ್ಮಣಾ ಪರಮಾತ್ಮನಃ ಪ್ರತೀಕಭೂತೇನ ಸರ್ವಾ ವಾಕ್ ಶಬ್ದಜಾತಂ ಸಂತೃಣ್ಣಾ । ''ಅಕಾರೋ ವೈ ಸರ್ವಾ ವಾಕ್'' (ಐ. ಆ. ೨-೩-೭) ಇತ್ಯಾದಿಶ್ರುತೇಃ । ಪರಮಾತ್ಮವಿಕಾರಶ್ಚ ನಾಮಧೇಯ ಮಾತ್ರಮ್ ಇತ್ಯತಃ ಓಂಕಾರ ಏವೇದಗ್ಂ ಸರ್ವಮಿತಿ । ದ್ವಿರಭ್ಯಾಸಃ ಆದರಾರ್ಥಃ । ಲೋಕಾದಿನಿಷ್ಪಾದನಕಥನಮ್ ಓಂಕಾರಸ್ತುತ್ಯರ್ಥಮಿತಿ ॥

(ಭಾಷ್ಯಾರ್ಥ)

ಆ ಅಕ್ಷರಗಳನ್ನು ಕುರಿತು ತಪಸ್ಸುಮಾಡಿದನು. ಹಾಗೆ ತಪಿಸಿದ ಅವುಗಳಿಂದ ಓಂಕಾರವು ಹೊರಕ್ಕೆ ಬಂದಿತು ; (ಅದೇ ಬ್ರಹ್ಮವು)[3].

ಆ ಬ್ರಹ್ಮವು ಎಂಥದ್ದು? ಎಂದರೆ (ಶ್ರುತಿ) ಹೇಳುತ್ತದೆ. ಅದು ಹೇಗೆಂದರೆ (ಹೇಗೆ) ಶಂಕುವಿನಿಂದ, ಎಲೆಯ ನಾಳದಿಂದ, ಪರ್ಣಗಳೆಲ್ಲ, ಎಲೆಯ ಅವಯವ (ಸಮೂಹ ಗಳೆಲ್ಲ) ಕೊರೆಯಲ್ಪಟ್ಟಿರುವವೋ, ಹೊಲಿದುಕೊಂಡಿರುವವೋ, ವ್ಯಾಪ್ತವಾಗಿರುವವೋ ಎಂದರ್ಥ. ಹಾಗೆಯೇ ಪರಮಾತ್ಮನಿಗೆ ಪ್ರತೀಕವಾಗಿರುವ ಓಂಕಾರವೆಂಬ ಬ್ರಹ್ಮದಿಂದ

---

1. ವೇದವು ಹುಟ್ಟಿತೆಂದು ಅರ್ಥವಲ್ಲ. ಹೀಗೆ ವೇದವ್ಯಾಹೃತಿಗಳೂ ಓಂಕಾರವೂ ತೋರಿಕೊಂಡ ಪ್ರಕಾರವನ್ನು ಐ. ಬ್ರಾ. ೨೫-೭-೮ರಲ್ಲಿಯೂ ಹೇಳಿದೆ. ಅಲ್ಲಿ ಅಗ್ನಿವಾಯ್ವಾದಿತ್ಯರು ತೋರಿಕೊಂಡಬಳಿಕ ವೇದಗಳು ತೋರಿಕೊಂಡವೆಂದು ಹೇಳಿದೆ.
2. ಈ ವ್ಯಾಹೃತಿಗಳು ಮೂರು ವೇದಕ್ಕೂ ಸಾರವಾಗಿರುವವೆಂದು ಶತ. ಬ್ರಾ. ೧೧-೫-೮-೩ರಲ್ಲಿ ಹೇಳಿದೆ ; ಅವುಗಳನ್ನು ಪ್ರಯೋಗಿಸಿದರೆ ಸರ್ವಪ್ರಾಯಶ್ಚಿತ್ತದಂತೆ ಎಂದು ಬ್ರಾಹ್ಮಣವಾದ.
3. 'ತದ್ ಬ್ರಹ್ಮ' ಎಂಬುದನ್ನು ಮಧ್ಯಮಣಿನ್ಯಾಯದಿಂದ ಇಲ್ಲಿಗೂ ಅನ್ವಯಿಸಬಹುದು.

ವಾಕ್ಕೆಲ್ಲವೂ ಶಬ್ದಜಾತವೆಲ್ಲವೂ ಕೊರೆಯಲ್ಪಟ್ಟಿರುವದು. ''ಆಕಾರವೇ ಎಲ್ಲಾ ವಾಕ್ಕು'' (ಐ. ಆ. ೨-೩-೭೯) ಎಂದು ಮುಂತಾಗಿರುವ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ)[1]. ಪರಮಾತ್ಮನ ವಿಕಾರವು ನಾಮಧೇಯಮಾತ್ರವಾಗಿರುವದರಿಂದಲೂ ಇವೆಲ್ಲವೂ ಓಂಕಾರವೇ[2]. (ಓಂಕಾರ ಏವೇದಂ ಸರ್ವಮ್ ಎಂದು) ಎರಡು ಸಲ ಹೇಳಿರುವದು ಆದರಕ್ಕಾಗಿ.[3] ಲೋಕಾದಿಗಳ (ಮೂಲಕ) ಹೊರತೋರಿಕೊಂಡಿತೆಂದು ಹೇಳಿರುವದು ಓಂಕಾರದ ಸ್ತುತಿಗಾಗಿ[4].

ಎರಡನೆಯ ಅಧ್ಯಾಯ - ಇಪ್ಪತ್ತನಾಲ್ಕನೆಯ ಖಂಡ

(ಸಾಮಹೋಮಮಂತ್ರೋತ್ಥಾನಗಳು)

ಸಾಮಾದ್ಯುಪಾಯಗಳನ್ನು ಅರಿತುಕೊಂಡು ಯಜ್ಞವನ್ನು ಮಾಡಬೇಕು

(ಉಪನಿಷತ್ತು)

ಬ್ರಹ್ಮವಾದಿನೋ ವದನ್ತಿ ಯದ್ವಸೂನಾಂ ಪ್ರಾತಃಸವನಗ್ಂ ರುದ್ರಾಣಾಂ ಮಾಧ್ಯನ್ದಿನಗ್ಂ ಸವನಮಾದಿತ್ಯಾನಾಂ ಚ ವಿಶ್ವೇಷಾಂ ಚ ದೇವಾನಾಂ ತೃತೀಯಸವನಮ್ ॥೧॥

---

1. ಆಕಾರವೇ ಸರ್ವವಾಕ್ಕು ; ಅದು ಸ್ಪರ್ಶ, ಊಷ- ಇವುಗಳೊಡನೆ ಸೇರಿ ನಾನಾರೂಪವಾಗಿದೆ ಎಂದು ಶ್ರುತಿವಾಕ್ಯದ ಅರ್ಥ. ಓಂಕಾರದ ಅವಯವವಾದ ಆಕಾರವೇ ಎಲ್ಲಾ ಶಬ್ದರೂಪಗಳಾಗಿರುವದರಿಂದ ಓಂಕಾರವು ಸರ್ವಶಬ್ದರೂಪವಾಗಿದೆ ಎಂದು ಹೇಳಬಹುದು ಎಂದು ಭಾವ.
2. ಪರಮಾತ್ಮನ ಕಾರ್ಯವಾದದ್ದು ಯಾವದೂ ಪರಮಾತ್ಮನಿಗಿಂತ ವ್ಯತಿರಿಕ್ತವಾಗಿಲ್ಲದ್ದರಿಂದ ಬರಿಯ ನಾಮಧೇಯವೇ ಆದ್ದರಿಂದ ಓಂಕಾರವು ಪರಮಾತ್ಮನ ಹೆಸರಾದ್ದರಿಂದ ಅದು ಎಲ್ಲಕ್ಕೂ ಹೆಸರಾದಂತಾಯಿತು. ಅಭಿಧೇಯನಾದ ಪರಮಾತ್ಮನು ಅಭಿಧಾನವಾದ ಓಂಕಾರಾದೀನವಾಗಿರುವದರಿಂದ ಓಂಕಾರವೇ ಎಲ್ಲವೂ. ಮಾಂ. ಭಾ. ೪.
3. ಓಂಕಾರೋಪಾಸನೆಯಲ್ಲಿ ಆದರವನ್ನುಂಟುಮಾಡುವದಕ್ಕೆ ಎಂದರ್ಥ.
4. ಲೋಕಾದ್ಯುತ್ಪತ್ತಿಯೇನೂ ಪ್ರಕೃತವಲ್ಲ ; ಓಂಕಾರವು ಸರ್ವಸಾರವಾದ್ದರಿಂದ ಅದನ್ನು ಉಪಾಸನೆಮಾಡಬೇಕು - ಎಂದು ಇಲ್ಲಿ ಓಂಕಾರವನ್ನು ಹೊಗಳಿದೆ.

ಕ್ವ ತರ್ಹಿ ಯಜಮಾನಸ್ಯ ಲೋಕ ಇತಿ ಸ ಯಸ್ತಂ ನ ವಿದ್ಯಾತ್ ಕಥಂ ಕುರ್ಯಾದಥ ವಿದ್ವಾನ್ ಕುರ್ಯಾತ್ ॥೨॥

೧. ಬ್ರಹ್ಮವಾದಿಗಳು ಹೇಳುತ್ತಾರೇನೆಂದರೆ : ಪ್ರಾತಃಸವನವು ವಸುಗಳದ್ದು ; ಮಾಧ್ಯಂದಿನಸವನವು ರುದ್ರರದ್ದು ; ಮೂರನೆಯ ಸವನವು ಆದಿತ್ಯರದ್ದು ಮತ್ತು ವಿಶ್ವೇದೇವರುಗಳದ್ದು.

೨. ಹಾಗಾದರೆ ಯಜಮಾನನ ಲೋಕವು ಎಲ್ಲಿ ? ಆ (ಲೋಕ)ವನ್ನು ಯಾವನು ಅರಿಯನೋ ಅವನು (ಯಜ್ಞವನ್ನು) ಹೇಗೆ ಮಾಡಿಯಾನು ? ಆದ್ದರಿಂದ ಅರಿತುಕೊಂಡು ಮಾಡಬೇಕು.

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೧೮೯. ಸಾಮೋಪಾಸನಪ್ರಸಙ್ಗೇನ ಕರ್ಮಗುಣಭೂತತ್ವಾತ್ ನಿವರ್ತ್ಯ ಓಂಕಾರಂ ಪರಮಾತ್ಮಪ್ರತೀಕತ್ವಾತ್ ಅಮೃತತ್ವಹೇತುತ್ವೇನ ಮಹೀಕೃತ್ಯ ಪ್ರಕೃತಸ್ಯೈವ ಯಜ್ಞಸ್ಯ ಅಙ್ಗಭೂತಾನಿ ಸಾಮಹೋಮಮನ್ತ್ರೋತ್ಥಾನಾನಿ ಉಪದಿದಿಕ್ಷನ್ ಆಹ-

(ಭಾಷ್ಯಾರ್ಥ)

ಸಾಮೋಪಾಸನೆಯ ಪ್ರಸಂಗದಿಂದ, ಓಂಕಾರವನ್ನು ಕರ್ಮಗುಣಭೂತವಾಗಿರುವದೆಂಬುದರಿಂದ ಬಿಡಿಸಿ[1] ಪರಮಾತ್ಮನಿಗೆ ಪ್ರತೀಕವಾಗಿರುವದರಿಂದ ಅಮೃತತ್ವಹೇತುವೆಂದು ದೊಡ್ಡದುಮಾಡಿ (ಹೊಗಳಿ), ಪ್ರಕೃತವಾಗಿರುವ ಯಜ್ಞಕ್ಕೇ ಅಂಗವಾಗಿರುವ ಸಾಮಹೋಮ, ಮಂತ್ರೋತ್ಥಾನ- (ಇವು)ಗಳನ್ನು ಉಪದೇಶಿಸಬೇಕೆಂದು (ವೇದವು ಹೀಗೆಂದು) ಹೇಳುತ್ತಿದೆ :

ಸವನಗಳು ವಸ್ವಾದಿಗಳಿಗೆ ಸೇರಿದವುಗಳು

(ಭಾಷ್ಯ)

೧೯೦. ಬ್ರಹ್ಮವಾದಿನೋ ವದನ್ತಿ। ಯತ್ ಪ್ರಾತಃಸವನಂ ಪ್ರಸಿದ್ಧಮ್, ತದ್ ವಸೂನಾಮ್ । ತೈಶ್ಚ ಪ್ರಾತಃಸವನಸಂಬನ್ಧೋಽಯಂ ಲೋಕೋ ವಶೀಕೃತಃ

1. ಹಿಂದೆ ಹೇಳಿದ ಸಾಮೋಪಾಸನೆಗಳು ಕರ್ಮಾಂಗವಾಗಿರುವಂತೆ ಓಂಕಾರವೂ ಕರ್ಮಾಂಗವೆಂದು ಬಂದೊದಗಿತಷ್ಟೆ; ಅದನ್ನು ತಪ್ಪಿಸಿ - ಎಂದರ್ಥ.

ಪ್ರಾತಃಸವನೇಶಾನೈಃ । ತಥಾ ರುದ್ರೈಃ ಮಾಧ್ಯನ್ದಿನಸವನೇಶಾನೈಃ ಅನ್ತರಿಕ್ಷಲೋಕಃ । ಆದಿತ್ಯೈಶ್ಚ ವಿಶ್ವೇದೇವೈಶ್ಚ ತೃತೀಯಸವನೇಶಾನೈಃ ತೃತೀಯೋ ಲೋಕೋ ವಶೀಕೃತಃ । ಇತಿ ಯಜಮಾನಸ್ಯ ಲೋಕೋಽನ್ಯಃ ಪರಿಶಿಷ್ಟೋ ನ ವಿದ್ಯತೇ । ಅತಃ ಕ್ವ ತರ್ಹಿ ಯಜಮಾನಸ್ಯ ಲೋಕಃ, ಯದರ್ಥಂ ಯಜತೇ ? ನ ಕ್ವಚಿಲ್ಲೋಕೋಽಸ್ತಿ ಇತ್ಯಭಿಪ್ರಾಯಃ । ''ಲೋಕಾಯ ವೈ ಯಜತೇ ಯೋ ಯಜತೇ'' (?) ಇತಿ ಶ್ರುತೇಃ । ಲೋಕಾಭಾವೇ ಚ ಸ ಯೋ ಯಜಮಾನಃ ತಂ ಲೋಕಸ್ವೀಕರಣೋಪಾಯಂ ಸಾಮಹೋಮಮನ್ತ್ರೋತ್ಥಾನಲಕ್ಷಣಂ ನ ವಿದ್ಯಾತ್ ನ ವಿಜಾನೀಯಾತ್ ಸೋಽಜ್ಞಃ ಕಥಂ ಕುರ್ಯಾತ್ ಯಜ್ಞಮ್ ? ನ ಕಥಂಚನ ತಸ್ಯ ಕರ್ತೃತ್ವಮ್ ಉಪಪದ್ಯತ ಇತ್ಯರ್ಥಃ ॥

(ಭಾಷ್ಯಾರ್ಥ)

ಬ್ರಹ್ಮವಾದಿಗಳು ಹೇಳುತ್ತಾರೇನೆಂದರೆ, ಪ್ರಸಿದ್ಧವಾದ ಪ್ರಾತಃಸವನವಿದೆಯಷ್ಟೆ, ಅದು ವಸುಗಳದ್ದು ; ಅವರು (ಆ) ಸವನಕ್ಕೆ ಒಡೆಯರಾದ್ದರಿಂದ ಪ್ರಾತಃಸವನಕ್ಕೆ ಸಂಬಂಧಪಟ್ಟಿರುವ ಈ ಲೋಕವನ್ನು ವಶೀಕರಿಸಿಕೊಂಡಿರುತ್ತಾರೆ. ಹೀಗೆಯೇ ಮಾಧ್ಯಂದಿನಸವನಕ್ಕೆ ಒಡೆಯರಾದ ರುದ್ರರು ಅಂತರಿಕ್ಷಲೋಕವನ್ನು (ವಶೀಕರಿಸಿ ಕೊಂಡಿರುತ್ತಾರೆ). ಆದಿತ್ಯರೂ ವಿಶ್ವೇದೇವತೆಗಳೂ ಮೂರನೆಯ ಸವನಕ್ಕೆ ಒಡೆಯರಾದ್ದರಿಂದ (ಅವರು) ಮೂರನೆಯ ಲೋಕವನ್ನು ವಶೀಕರಿಸಿಕೊಂಡಿರುತ್ತಾರೆ. ಹೀಗಿರುವದರಿಂದ ಯಜಮಾನನಿಗೆ ಮತ್ತೊಂದು ಲೋಕವು ಉಳಿದಿರುವದಿಲ್ಲ. ಆದ್ದರಿಂದ ಯಜಮಾನನ ಲೋಕವು ಎಲ್ಲಿ ? ಅದಕ್ಕಲ್ಲವೆ, (ಅವನು) ಯಾಗಮಾಡುತ್ತಾನೆ ? (ಅವನ) ಲೋಕವು ಎಲ್ಲಿಯೂ ಇರುವದೇ ಇಲ್ಲವಲ್ಲ! ಎಂದು ಅಭಿಪ್ರಾಯ. ''ಯಾವನು ಯಾಗಮಾಡುತ್ತಾನೋ ಅವನು ಲೋಕಕ್ಕಾಗಿಯೇ ಯಾಗಮಾಡುತ್ತಾನೆ'' (?) ಎಂಬ ಶ್ರುತಿಯಿಂದ (ಲೋಕವಿರಬೇಕು)[1]. ಲೋಕವು ಇಲ್ಲದಿರುವಲ್ಲಿ, ಯಾವ ಯಜಮಾನನು ಆ ಲೋಕವನ್ನು ಸ್ವೀಕರಿಸುವ, ಸಾಮಹೋಮಮಂತ್ರೋತ್ಥಾನರೂಪವಾದ ಉಪಾಯವನ್ನು ಅರಿಯನೋ ಆ ಅಜ್ಞನು, ಯಜ್ಞವನ್ನು ಹೇಗೆ ಮಾಡಿಯಾನು ? ಅವನಿಗೆ ಹೇಗೂ ಕರ್ತೃತ್ವವು ಹೊಂದುಗಡೆಯಾಗುವದಿಲ್ಲ ಎಂದರ್ಥ.

---

1. 'ಶ್ರುತಿಃ' ಎಂಬ ಪಾಠಾಂತರಕ್ಕೆ ಶ್ರುತಿಯಿದೆ ಎಂದಿಷ್ಟೇ ಅರ್ಥ. ಆಗ ''ಆದ್ದರಿಂದ ಲೋಕಕ್ಕಾಗಿಯೇ ಯಜಮಾನನು ಯಜ್ಞವನ್ನು ಮಾಡುತ್ತಾನೆ'' ಎಂದು ವಾಕ್ಯಶೇಷವನ್ನು ಸೇರಿಸಿಕೊಳ್ಳಬೇಕು.

ಕರ್ಮಮಾತ್ರವನ್ನು ತಿಳಿದವನಿಗೂ ಕರ್ತೃತ್ವವುಂಟು

(ಭಾಷ್ಯ)

೧೯೧. ಸಾಮಾದಿವಿಜ್ಞಾನಸ್ತುತಿಪರತ್ವಾತ್ ನ ಅವಿದುಷಃ ಕರ್ತೃತ್ವಂ ಕರ್ಮಮಾತ್ರವಿದಃ ಪ್ರತಿಷಿಧ್ಯತೇ । ಸ್ತುತಯೇ ಚ ಸಾಮಾದಿವಿಜ್ಞಾನಸ್ಯ, ಅವಿದ್ವತ್ಕರ್ತೃತ್ವಪ್ರತಿಷೇಧಾಯ ಚ ಇತಿ ಹಿ ಭಿದ್ಯೇತ ವಾಕ್ಯಮ್ । ಆದ್ಯೇ ಚ ಔಷಸ್ತ್ಯೇ ಕಾಣ್ಡೇ ಅವಿದುಷೋಽಪಿ ಕರ್ಮಾಸ್ತೀತಿ ಹೇತುಮ್ ಅವೋಚಾಮ । ಅಥ ಏತದ್ ವಕ್ಷ್ಯಮಾಣಂ ಸಾಮಾದ್ಯುಪಾಯಂ ವಿದ್ವಾನ್ ಕುರ್ಯಾತ್ ॥

(ಭಾಷ್ಯಾರ್ಥ)

ಈ (ಶ್ರುತಿಯು) ಸಾಮವೇ ಮುಂತಾದವುಗಳ ವಿಜ್ಞಾನವನ್ನು ಹೊಗಳುವದರಲ್ಲಿ ತಾತ್ಪರ್ಯವುಳ್ಳದ್ದಾದ್ದರಿಂದ ಕರ್ಮವೊಂದನ್ನೇ ಅರಿತಿರುವ ಅಜ್ಞನಿಗೆ ಕರ್ತೃತ್ವವನ್ನು ಇಲ್ಲವೆನ್ನುವದಿಲ್ಲ. ಏಕೆಂದರೆ (ಆ ಪಕ್ಷದಲ್ಲಿ) ಸಾಮಾದಿವಿಜ್ಞಾನವನ್ನು ಹೊಗಳುವದಕ್ಕೂ (ಇದು ಬಂದಿದೆ), ಅಜ್ಞನಿಗೆ ಕರ್ತೃತ್ವವನ್ನು ಪ್ರತಿಷೇಧಿಸುವದಕ್ಕೂ ಬಂದಿದೆ ಎಂದಾಗಿ ವಾಕ್ಯವು ಭಿನ್ನವಾಗುವದು[1]. ಮೊದಲನೆಯ ಔಷಸ್ತ್ಯಕಾಂಡದಲ್ಲಿ[2] ಅಜ್ಞನಿಗೂ ಕರ್ಮ(ದಲ್ಲಿ ಅಧಿಕಾರ)ವುಂಟೆಂಬುದಕ್ಕೆ ಹೇತುವನ್ನು ಹೇಳಿರುತ್ತೇವೆ. ಆದ್ದರಿಂದ ಈ ಮುಂದೆ ಹೇಳುವ ಸಾಮವೇ ಮುಂತಾದ ಉಪಾಯವನ್ನು ಅರಿತುಕೊಂಡು (ಯಜ್ಞವನ್ನು)ಮಾಡಬೇಕು.

ಪ್ರಾತಃಸವನಲೋಕವನ್ನು ಪಡೆದುಕೊಳ್ಳುವ ಉಪಾಯ

(ಉಪನಿಷತ್ತು)

ಪುರಾ ಪ್ರಾತರನುವಾಕಸ್ಯೋಪಾಕರಣಾಜ್ಜಘನೇನ ಗಾರ್ಹಪತ್ಯಸ್ಯೋದಙ್ಮುಖ ಉಪವಿಶ್ಯ ಸ ವಾಸವಗ್ಂ ಸಾಮಾಭಿಗಾಯತಿ ॥೩॥

1. ಆದರೆ ಏಕವಾಕ್ಯತೆಯು ಹೊಂದುತ್ತಿರುವಲ್ಲಿ ವಾಕ್ಯಭೇದವನ್ನು ಮಾಡುವದು ಯುಕ್ತವಲ್ಲವೆಂಬ ಮಿಮಾಂಸಕರ ನ್ಯಾಯವಿದೆ. ಆದ್ದರಿಂದ ಅಜ್ಞನಿಗೆ ಕರ್ತೃತ್ವವಿಲ್ಲವೆಂದೂ ಈ ವಾಕ್ಯಕ್ಕೆ ತಾತ್ಪರ್ಯವನ್ನು ಕಲ್ಪಿಸಬಾರದು.
2. ಔಷಸ್ತ್ಯೇ ಕಾಣ್ಡೇ- ಎಂಬುದು ಔಷಸ್ತ್ಯೇ ಖಣ್ಡೇ ಎಂದಿರಬೇಕೆಂದು ತೋರುತ್ತದೆ. ಒಂದನೆಯ ಪ್ರವಾಠಕದಲ್ಲಿ ಹತ್ತನೆಯ ಖಂಡದ ೯ನೆಯ ಕಂಡಿಕೆಯ ಭಾಷ್ಯ (ಭಾ. ಭಾ. ೯೬)ರಲ್ಲಿ ಉಪಾಸನಾಜ್ಞಾನವಿಲ್ಲದ ಅಜ್ಞರಿಗೂ ಕರ್ಮದಲ್ಲಿ ಅಧಿಕಾರವಿದೆ ಎಂದು ಹೇಳಿದೆ.

ಲೋಕದ್ವಾರಮಪಾವೃಣು ಹೇ ಪಶ್ಯೇಮ ತ್ವಾ ವಯಗ್ಂ ರಾಜ್ಯಾಯ ಹುವಿಮ್ ಆವಿಜ್ಯಾಯೋವಿ ಆವಿ೨೧೧೧ ಇತಿ ॥೪॥

೩. ಪ್ರಾತರನುವಾಕದ ಉಪಾಕರಣಕ್ಕಿಂತ ಮುಂಚೆ ಗಾರ್ಹಪತ್ಯದ ಹಿಂಗಡೆಯಲ್ಲಿ ಉತ್ತರಕ್ಕೆ ಮುಖವಾಗಿ ಕುಳಿತುಕೊಂಡು ಅವನು ವಾಸವ ಸಾಮವನ್ನು (ಹೀಗೆ) ಅಭಿಗಾನಮಾಡಬೇಕು.

೪. 'ಲೋಕದ್ವಾರವನ್ನು ತೆರೆ ! ನಿನ್ನನ್ನು ನಾವು ನೋಡುವಂತಾಗಲಿ ! (ಅದು) ರಾಜ್ಯಕ್ಕೆ (ಆಗಲಿ) !'

ಪೃಥಿವೀಲೋಕಪ್ರಾಪ್ತಿಗೆ ಸಾಮ

೧೯೨. ಕಿಂ ತದ್ ವೇದ್ಯಮಿತಿ ? ಆಹ । ಪುರಾ ಪೂರ್ವಂ ಪ್ರಾತರನುವಾಕಸ್ಯ ಶಸ್ತ್ರಸ್ಯ ಪ್ರಾರಮ್ಭಾತ್ ಜಘನೇನ ಗಾರ್ಹಪತ್ಯಸ್ಯ ಪಶ್ಚಾತ್ ಉದಙ್ಮುಖಃ ಸನ್ ಉಪವಿಶ್ಯ ಸ ವಾಸವಂ ವಸುದೈವತ್ಯಂ ಸಾಮ ಅಭಿಗಾಯತಿ । ಲೋಕದ್ವಾರಮ್ ಅಸ್ಯ ಪೃಥಿವೀಲೋಕಸ್ಯ ಪ್ರಾಪ್ತಯೇ ದ್ವಾರಮ್ ಅಪಾವೃಣು ಹೇ ಅಗ್ನೇ ತೇನ ದ್ವಾರೇಣ ಪಶ್ಯೇಮ ತ್ವಾ ತ್ವಾಂ ರಾಜ್ಯಾಯ ಇತಿ ॥

(ಭಾಷ್ಯಾರ್ಥ)

ಇಲ್ಲಿ ಅರಿತುಕೊಳ್ಳಬೇಕಾದದ್ದೆಂಬುದು ಯಾವದು ? ಎಂದರೆ (ಶ್ರುತಿ) ಹೇಳುತ್ತದೆ. ಪ್ರಾತರನುವಾಕವಾದ ಶಸ್ತ್ರವು[1] ಮೊದಲಾಗುವ (ಪುರಾ=ಪೂರ್ವಂ) ಮುಂಚೆಯೇ. ಗಾರ್ಹಪತ್ಯದ[2] ಹಿಂಗಡೆ ಹಿಂದುಗಡೆಯಲ್ಲಿ ಉತ್ತರಮುಖವಾಗಿ ಕುಳಿತುಕೊಂಡು ಅವನು ವಾಸವಸಾಮವನ್ನು, ವಸುಗಳೆಂಬ ದೇವತೆಗಳುಳ್ಳ (ಸಾಮವನ್ನು) ಅಭಿಗಾನಮಾಡಬೇಕು.

''ಲೋಕದ್ವಾರವನ್ನು ಎಂದರೆ ಈ ಪೃಥಿವೀಲೋಕದ ಪ್ರಾಪ್ತಿಗಾಗಿ (ದ್ವಾರವನ್ನು)

---

1. ಅಧ್ವರ್ಯುವು 'ಅನುಬ್ರೂಹಿ' ಎಂದು ಕೇಳಿಕೊಂಡಮೇಲೆ ಹೋತೃವು ಹೇಳತಕ್ಕ ಶಸ್ತ್ರವಿಶೇಷವು 'ಪುರೋನುವಾಕ್ಯ'ವೆನಿಸುವದು. ಪ್ರಾತಃಸವನದಲ್ಲಿ ಅವನು ಹೇಳುವದಕ್ಕೆ ಆರಂಭಿಸುವ ಮುಂಚೆ ಈ ಸಾಮವನ್ನು ಹೇಳಬೇಕು.
2. ಗಾರ್ಹಪತ್ಯಾಗ್ನಿಯೇ ಮುಖ್ಯವಾದದ್ದು ; ಇದರಿಂದಲೇ ದಕ್ಷಿಣಾಗ್ನಿ, ಆಹವನೀಯಾಗ್ನೀ- ಎಂಬಿವುಗಳನ್ನು ಎತ್ತಿ ಆಯಾ ಸ್ಥಾನಗಳಲ್ಲಿ ಇಟ್ಟುಕೊಂಡಿರುತ್ತಾರೆ.

ತೆರೆ. ಎಲೈ ಅಗ್ನಿಯೆ, (ತೆರೆ). ಆ ದ್ವಾರದಿಂದ (ತ್ವಾ=ತ್ವಾಮ್) ನಿನ್ನನ್ನು ನಾವು ಕಾಣುವಂತಾಗಲಿ ! (ಅದು) ರಾಜ್ಯಕ್ಕೆ ಆಗಲಿ !''[1]

(ಉಪನಿಷತ್ತು)

ಅಥ ಜುಹೋತಿ ನಮೋಽಗ್ನಯೇ ಪೃಥಿವೀಕ್ಷಿತೇ ಲೋಕಕ್ಷಿತೇ ಲೋಕಂ ಮೇ ಯಜಮಾನಾಯ ವಿನ್ದೈಷ ವೈ ಯಜಮಾನಸ್ಯ ಲೋಕ ಏತಾಸ್ಮಿ ॥೫॥

ಅತ್ರ ಯಜಮಾನಃ ಪರಸ್ತಾದಾಯುಷಃ ಸ್ವಾಹಾಪಜಹಿ ಪರಿಘಮಿತ್ಯುಕ್ತ್ವೋತ್ತಿಷ್ಠತಿ ತಸ್ಮೈ ವಸವಃ ಪ್ರಾತಃಸವನಗ್ಂ ಸಂಪ್ರಯಚ್ಛನ್ತಿ ॥೬॥

೫-೬. ಇನ್ನು (ಹೀಗೆಂಬರ್ಥದ ಮಂತ್ರವನ್ನು ಹೇಳುತ್ತಾ) ಹೋಮ ಮಾಡಬೇಕು. 'ಪೃಥಿವೀಕ್ಷಿತನಾದ ಅಗ್ನಿಗೆ ನಮಸ್ಕಾರ ! ಲೋಕಕ್ಷಿತನಿಗೆ (ನಮಸ್ಕಾರ) ! ಯಜಮಾನನಾದ ನನ್ನನ್ನು ಲೋಕವನ್ನು ಪಡೆಯಿಸು. ಇದೇ ಯಜಮಾನನ ಲೋಕವು, ಇಲ್ಲಿ ಯಾಗಮಾಡುತ್ತಿರುವವನಾಗಿ ಆಯುಸ್ಸಾದ ಬಳಿಕ ಹೋಗಲಿರುವೆನು, ಸ್ವಾಹಾ !' 'ಪರಿಘವನ್ನು ತೆಗೆ' ಎಂದು ಎದ್ದೇಳಬೇಕು. ಅವನಿಗೆ ವಸುಗಳು ಪ್ರಾತಃಸವನವನ್ನು ಕೊಡುವರು.

ಪೃಥಿವೀಲೋಕಪ್ರಾಪ್ತಿಗೆ ಹೋಮೋತ್ಥಾನಗಳು

(ಭಾಷ್ಯ)

೧೯೩. **ಅಥ** ಅನನ್ತರಂ **ಜುಹೋತಿ** ಅನೇನ ಮನ್ತ್ರೇಣ । ''**ನಮೋಽಗ್ನಯೇ** ಪ್ರಹ್ವೀಭೂತಾಃ ತುಭ್ಯಂ ವಯಂ **ಪೃಥಿವೀಕ್ಷಿತೇ** ಪೃಥಿವೀನಿವಾಸಾಯ **ಲೋಕಕ್ಷಿತೇ** ಲೋಕನಿವಾಸಾಯ[2] । **ಪೃಥಿವೀಲೋಕನಿವಾಸಾಯ** ಇತ್ಯರ್ಥಃ । **ಲೋಕಂ ಮೇ** ಮಹ್ಯಂ **ಯಜಮಾನಾಯ ವಿನ್ದ** ಲಭಸ್ವ । **ಏಷ ವೈ** ಮಮ **ಯಜಮಾನಸ್ಯ ಲೋಕಃ** । **ಏತಾ** ಗನ್ತಾ **ಅಸ್ಮಿ** ಅತ್ರ **ಅಸ್ಮಿನ್ ಲೋಕೇ ಯಜಮಾನಃ** ಅಹಂ **ಆಯುಷಃ ಪರಸ್ತಾತ್** ಊರ್ಧ್ವಮ್ । ಮೃತಃ ಸನ್ ಇತ್ಯರ್ಥಃ । **ಸ್ವಾಹಾ** ! ಇತಿ **ಜುಹೋತಿ** ।

1. ಪೃಥಿವೀಲೋಕದ ಭೋಗವು ನಮಗೆ ಲಭಿಸಲಿ !- ಎಂದರ್ಥ.
2. ಇದು ಲೋಕಕ್ಷಿತೇ ಎಂಬುದರರ್ಥ ; ಮುಂದಿರುವದು ವಾಕ್ಯಾರ್ಥ. ಆದ್ದರಿಂದ ಈ ಪಾಠವನ್ನು ಇಟ್ಟುಕೊಂಡಿದೆ.

ಅಪಜಹಿ ಅಪನಯ ಪರಿಘಂ ಲೋಕದ್ವಾರಾರ್ಗಲಮ್ - ಇತಿ ಏತಂ[1] ಮನ್ತ್ರಮ್ ಉಕ್ತ್ವಾ ಉತ್ತಿಷ್ಠತಿ । ಏವಮ್ ಏತೈಃ ವಸುಭ್ಯಃ ಪ್ರಾತಃಸವನಸಂಬದ್ಧೋ ಲೋಕೋ ನಿಷ್ಕ್ರೀತಃ ಸ್ಯಾತ್ । ತತಸ್ತೇ ಪ್ರಾತಃಸವನಂ ವಸವೋ ಯಜಮಾನಾಯ ಸಂಪ್ರಯಚ್ಛನ್ತಿ ॥

(ಭಾಷ್ಯಾರ್ಥ)

ಇನ್ನು ಆ ಬಳಿಕ ಈ (ಅರ್ಥದ) ಮಂತ್ರದಿಂದ ಹೋಮಮಾಡಬೇಕು ; ಅಗ್ನಿಗೆ, ಪೃಥಿವೀಕ್ಷಿತನಾದ ಪೃಥಿವಿಯಲ್ಲಿ ವಾಸಮಾಡಿಕೊಂಡಿರುವ ; ಲೋಕಕ್ಷಿತನಾದ, ಲೋಕದಲ್ಲಿ ವಾಸಮಾಡಿಕೊಂಡಿರುವ- ಪೃಥಿವೀಲೋಕದಲ್ಲಿ ವಾಸಮಾಡಿ ಕೊಂಡಿರುವ - ಎಂದು (ಒಟ್ಟು) ಅರ್ಥ. ಎಲೆ ಅಗ್ನಿಯೆ, ನಿನಗೆ ನಮಸ್ಕಾರ, ನಾವು ತಲೆಬಾಗುವೆವು ಎಂದರ್ಥ. ಯಜಮಾನನಾದ ನನಗೆ ಲೋಕವನ್ನು (ವಿನ್ದ=ಲಭಸ್ವ) ಪಡೆಯಿಸು ! ಇದೇ ಯಜಮಾನನಾದ ನನ್ನ ಲೋಕವು. ಇಲ್ಲಿ ಈ ಲೋಕದಲ್ಲಿ ಯಾಗಮಾಡುತ್ತಿರುವ ನಾನು ಆಯುಸ್ಸಾದ ಬಳಿಕ, ಆಮೇಲೆ ; ಸತ್ತವನಾಗಿ ಎಂದರ್ಥ. (ಪೃಥಿವೀಲೋಕಕ್ಕೆ ಏತಾಸಿ=ಗನ್ತಾಸಿ) ಹೋಗುವವನಿರುವೆನು ! 'ಸ್ವಾಹಾ !' ಎಂದು ಹೋಮಮಾಡಬೇಕು.[2] 'ಪರಿಘವನ್ನು ಲೋಕದ್ವಾರದ ಅಗುಳಿಯನ್ನು ತೆಗೆ' ಎಂಬೀ (ಅರ್ಥದ) ಮಂತ್ರವನ್ನು ಹೇಳಿ ಏಳಬೇಕು.[3]

ಹೀಗೆ ಇವುಗಳಿಂದ[4] ಪ್ರಾತಃಸವನಸಂಬದ್ಧಲೋಕವು ವಸುಗಳಿಂದ ನಿಷ್ಕ್ರೀತವಾದ ದ್ದಾಗುವದು.[5] ಆಗ ಆ ವಸುಗಳು ಪ್ರಾತಃಸವನ(ಫಲ)ವನ್ನು ಯಜಮಾನನಿಗೆ ಕೊಡುವರು.

ಮಾಧ್ಯಂದಿನಸವನಪ್ರಾಪ್ತಿಗೆ ಉಪಾಯ

(ಉಪನಿಷತ್ತು)

ಪುರಾ ಮಾಧ್ಯನ್ದಿನಸ್ಯ ಸವನಸ್ಯೋಪಾಕರಣಾಜ್ಜಘನೇನಾಗ್ನೀಧ್ರೀಯ ಸ್ಯೋದಙ್ಮುಖ ಉಪವಿಶ್ಯ ಸ ರೌದ್ರಗ್ಂ ಸಾಮಾಭಿಗಾಯತಿ ॥೭॥

---

1. 'ಏವಂ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
2. ಸ್ವಾಹಾ !- ಎಂಬುದು ಹೋಮಮಂತ್ರದ ಕೊನೆಯನ್ನು ಸೂಚಿಸುವದು.
3. ಇದೇ ಉತ್ಥಾನಪ್ರಕಾರವು. 4. ಹೀಗೆ ಸಾಮಗಾನ, ಮಂತ್ರಪೂರ್ವಕಹೋಮ, ಮಂತ್ರಪೂರ್ವಕೋತ್ಥಾನ- ಇವುಗಳನ್ನು ಮಾಡುವದರಿಂದ ಎಂದರ್ಥ.
5. ಇವುಗಳಿಂದ ಕೊಂಡುಕೊಂಡು ತನ್ನದಾಗಿ ಮಾಡಿಕೊಂಡಂತೆ ಆಗುವದು.

ಲೋಕದ್ವಾರಮಪಾವಾ ಋ್ಣೋ ಪಶ್ಯೇಮ ತ್ವಾ ವಯಂ ವೈರಾಜಾಯ ಹುವಿಮ್ ಆಜಿಜ್ಯಾಯೋ ಆಜಿ೨೧೧೧ ಇತಿ ॥೮॥

೭. ಮಾಧ್ಯಂದಿನಸವನದ[1] ಉಪಾಕರಣದ ಮುಂಚೆ ಆಗ್ನೀಧ್ರೀಯದ ಹಿಂಗಡೆಯಲ್ಲಿ ಉತ್ತರಮುಖವಾಗಿ ಕುಳಿತುಕೊಂಡು ಅವನು ರೌದ್ರಸಾಮವನ್ನು (ಹೀಗೆ) ಅಭಿಗಾನಮಾಡಬೇಕು.

೮. 'ಲೋಕದ್ವಾರವನ್ನು ತೆರೆ ! ನಿನ್ನನ್ನು ನಾವು ನೋಡುವಂತಾಗಲಿ ! (ಅದು) ವೈರಾಜ್ಯಕ್ಕೆ (ಆಗಲಿ) !'

ಅಂತರಿಕ್ಷಲೋಕಪ್ರಾಪ್ತಿಗೆ ಹೋಮ

(ಭಾಷ್ಯ)

೧೯೪. ತಥಾ ಆಗ್ನೀಧ್ರೀಯಸ್ಯ ದಕ್ಷಿಣಾಗ್ನೇಃ ಜಘನೇನ ಉದಙ್ಮುಖ ಉಪವಿಶ್ಯ ಸ ರೌದ್ರಂ ಸಾಮ ಅಭಿಗಾಯತಿ ಯಜಮಾನಃ ರುದ್ರದೈವತ್ಯಂ ವೈರಾಜ್ಯಾಯ ॥

(ಭಾಷ್ಯಾರ್ಥ)

ಹೀಗೆಯೇ ಆಗ್ನೀಧ್ರೀಯದ ಎಂದರೆ ದಕ್ಷಿಣಾಗ್ನಿಯ ಹಿಂಗಡೆಯಲ್ಲಿ ಉತ್ತರಮುಖವಾಗಿ ಕುಳಿತುಕೊಂಡು ಅವನು ರೌದ್ರಸಾಮವನ್ನು, ಎಂದರೆ ರುದ್ರರನ್ನು ದೇವತೆಗಳಾಗಿ ಉಳ್ಳ, (ಸಾಮ)ವನ್ನು ಯಜಮಾನನು ವೈರಾಜ್ಯಕ್ಕಾಗಿ ಅಭಿಗಾನಮಾಡಬೇಕು.

(ಉಪನಿಷತ್ತು)

ಅಥ ಜುಹೋತಿ ನಮೋ ವಾಯವೇಽನ್ತರಿಕ್ಷ ಕ್ಷಿತೇ ಲೋಕಕ್ಷಿತೇ ಲೋಕಂ ಮೇ ಯಜಮಾನಾಯ ವಿನ್ದ್ಯೈಷ ವೈ ಯಜಮಾನಸ್ಯ ಲೋಕ ಏತಾಸ್ಮಿ ॥೯॥

ಅತ್ರ ಯಜಮಾನಃ ಪರಸ್ತಾದಾಯುಷಃ ಸ್ವಾಹಾಪಜಹಿ ಪರಿಘಮಿತ್ಯುಕ್ತ್ವೋತ್ತಿಷ್ಠತಿ ತಸ್ಮೈ ರುದ್ರಾ ಮಾಧ್ಯನ್ದಿನಗ್ಂ ಸವನಗ್ಂ ಸಂಪ್ರಯಚ್ಛನ್ತಿ ॥೧೦॥

1. ಇದು ಎರಡನೆಯ ಸವನವು ಪರಿಶಿಷ್ಟವನ್ನು ನೋಡಿ. ಇಲ್ಲಿಯೂ ಪುರೋನುವಾಕ್ಯದ ಪ್ರಾರಂಭದ ಮುಂಚೆ ಎಂದೇ ಅರ್ಥ. ಪ್ರತಿಯೊಂದು ಸವನಕ್ಕೂ ಶಸ್ತ್ರವಿರುತ್ತದೆ. ಅದು ಪ್ರಾರಂಭವಾಗುವ ಮುಂಚೆಯೇ ಯಜಮಾನನು ಗಾನಮಾಡಬೇಕು.

೯-೧೦. ಇನ್ನು (ಹೀಗೆಂಬರ್ಥದ ಮಂತ್ರವನ್ನು ಪಠಿಸುತ್ತಾ) ಹೋಮ ಮಾಡಬೇಕು : 'ಅಂತರಿಕ್ಷಕ್ಷಿತನಾದ ವಾಯುವಿಗೆ ನಮಸ್ಕಾರ, ಲೋಕಕ್ಷಿತನಿಗೆ (ನಮಸ್ಕಾರ) ! ಯಜಮಾನನಾದ ನನ್ನನ್ನು ಲೋಕವನ್ನು ಪಡೆಯಿಸು. ಇದೇ ಯಜಮಾನನ ಲೋಕವು. ಇಲ್ಲಿ ಯಾಗಮಾಡುತ್ತಿರುವವನಾಗಿ ಆಯುಸ್ಸಾದ ಬಳಿಕ ಹೋಗಲಿರುವೆನು. ಸ್ವಾಹಾ !' 'ಪರಿಘವನ್ನು ತೆಗೆ' ಎಂದು ಏಳಬೇಕು. ಅವನಿಗೆ ರುದ್ರರು ಮಾಧ್ಯಂದಿನಸವನವನ್ನು ಕೊಡುವರು.

ಅಂತರಿಕ್ಷಲೋಕಕ್ಕೆ ಹೋಮೋತ್ಥಾನಗಳು

(ಭಾಷ್ಯ)

೧೯೫. ಅನ್ತರಿಕ್ಷಕ್ಷಿತ ಇತ್ಯಾದಿ ಸಮಾನಮ್ ॥

(ಭಾಷ್ಯಾರ್ಥ)

ಅಂತರಿಕ್ಷಕ್ಷಿತನಾದ ಎಂದು ಮುಂತಾಗಿರುವದು (ಹಿಂದಿನ ವಾಕ್ಯಕ್ಕೆ) ಸಮಾನವಾಗಿದೆ.

ಮೂರನೆಯ ಸವನದ ಪ್ರಾಪ್ತಿಗೆ ಉಪಾಯ

(ಉಪನಿಷತ್ತು)

ಪುರಾ ತೃತೀಯಸವನಸ್ಯೋಪಾಕರಣಾಜ್ಜಘನೇನಾಹವನೀಯಸ್ಯೋದಙ್ಮುಖ ಉಪವಿಶ್ಯ ಸ ಆದಿತ್ಯಗ್ಂ ಸ ವೈಶ್ವದೇವಗ್ಂ ಸಾಮಾಭಿಗಾಯತಿ ॥೧೧॥

ಲೋಕಿಕದ್ವಾರಮಪಾವಾಕಿರ್ಣೋಕಿ ಪಶ್ಯೇಮ ತ್ವಾ ವಯಗ್ಂ ಸ್ವಾರಾಕಿಕಿಕಿಕಿ ಹುಕಿಮ್ ಆಕಿಕಿಜ್ಯಾಕಿಯೋಕಿ ಆಕಿ೨೧೧೧ ಇತಿ ॥೧೨॥

ಆದಿತ್ಯಮಥ ವೈಶ್ವದೇವಂ ಲೋಕಿಕದ್ವಾರಮಪಾವಾಕಿರ್ಣೋಕಿ ಪಶ್ಯೇಮ ತ್ವಾ ವಯಗ್ಂ ಸಾಮ್ರಾಕಿಕಿಕಿಕಿಹುಕಿಮ್ ಆಕಿಕಿ ಜ್ಯಾಕಿಯೋಕಿ ಆಕಿ೨೧೧೧ ಇತಿ[1] ॥೧೩॥

1. ತೆ॥ ಪಾಠದಲ್ಲಿ ಸಾಮಕ್ಕೆ ಹಾಕಿರುವ ಈ ಸ್ವರಸಂಖ್ಯೆಗಳು ಬೇರೆಯಾಗಿವೆ. ಇವುಗಳ ಆಧ್ಯಯನಕ್ರಮವು ನಮಗೆ ತಿಳಿಯದ್ದರಿಂದ ಇದರ ಕಾರಣವನ್ನು ನಿರ್ಧರಿಸುವದು ಆಗುವಂತಿಲ್ಲ. ನಾವು ಆ॥ ಪಾಠವನ್ನೇ ಅಂಗೀಕರಿಸಿರುತ್ತೇವೆ.

೧೧-೧೩. ಮೂರನೆಯ ಸವನದ ಉಪಾಕರಣದ ಮುಂಚೆ ಆಹವನೀಯದ ಹಿಂದೆ ಉತ್ತರಮುಖವಾಗಿ ಕುಳಿತು ಅವನು ಆದಿತ್ಯ (ದೇವತಾಕ)ವಾದ (ಸಾಮವನ್ನು) ಅವನು ವೈಶ್ವದೇವ(ತಾಕವಾದ) ಸಾಮವನ್ನು (ಹೀಗೆ) ಅಭಿಗಾನಮಾಡಬೇಕು. 'ಲೋಕದ್ವಾರವನ್ನು ತೆರೆ ! ನಿನ್ನನ್ನು ನಾವು ನೋಡುವಂತಾಗಲಿ ! (ಅದು) ಸ್ವಾರಾಜ್ಯಕ್ಕಾಗಲಿ !' ಎಂದು ಆದಿತ್ಯ (ಸಾಮವನ್ನು ಗಾನಮಾಡಬೇಕು). ಇನ್ನು ವೈಶ್ವದೇವನನ್ನು 'ಲೋಕದ್ವಾರವನ್ನು ತೆರೆ ! ನಿನ್ನನ್ನು ನೋಡುವಂತಾಗಲಿ ! ಅದು ಸಾಮ್ರಾಜ್ಯಕ್ಕಾಗಲಿ' ಎಂದು (ಗಾನಮಾಡಬೇಕು).

ದ್ಯುಲೋಕಪ್ರಾಪ್ತಿಗೆ ಸಾಮಗಳು

(ಭಾಷ್ಯ)

೧೯೬. ತಥಾ ಆಹವನೀಯಸ್ಯ ಉದಙ್ಮುಖ ಉಪವಿಶ್ಯ ಸ ಆದಿತ್ಯದೈವತ್ಯಮ್ ಆದಿತ್ಯಮ್, ವೈಶ್ವದೇವಂ ಚ ಸಾಮ ಅಭಿಗಾಯತಿ ಕ್ರಮೇಣ ಸ್ವಾರಾಜ್ಯಾಯ ಸಾಮ್ರಾಜ್ಯಾಯ (ಚ ?) ॥

(ಭಾಷ್ಯಾರ್ಥ)

ಹೀಗೆಯೇ ಆಹವನೀಯದ (ಹಿಂದುಗಡೆ) ಉತ್ತರಮುಖವಾಗಿ ಕುಳಿತು ಅವನು ಆದಿತ್ಯ(ಸಾಮವನ್ನು) ಎಂದರೆ ಆದಿತ್ಯದೇವತಾಕವಾದ (ಸಾಮ)ವನ್ನು ಮತ್ತು ವಿಶ್ವೇದೇವತೆಗಳು ದೇವತೆಗಳಾಗಿರುವ (ಸಾಮ)ವನ್ನು ಅಭಿಗಾನಮಾಡಬೇಕು. (ಅವು) ಕ್ರಮವಾಗಿ ಸ್ವಾರಾಜ್ಯಕ್ಕೂ ಸಾಮ್ರಾಜ್ಯಕ್ಕೂ[1] (ಕಾರಣವಾಗುವವು).

(ಉಪನಿಷತ್ತು)

ಅಥ ಜುಹೋತಿ ನಮ ಆದಿತ್ಯೇಭ್ಯಶ್ಚ ವಿಶ್ವೇಭ್ಯಶ್ಚ ದೇವೇಭ್ಯೋ ದಿವಿಕ್ಷಿದ್ಭ್ಯೋ ಲೋಕಕ್ಷಿದ್ಭ್ಯೋ ಲೋಕಂ ಮೇ ಯಜಮಾನಾಯ ವಿನ್ದತ ॥೧೪॥

ಏಷ ವೈ ಯಜಮಾನಸ್ಯ ಲೋಕ ಏತಾಸ್ಮೈತ್ರ ಯಜಮಾನಃ ಪರಸ್ತಾದಾಯುಷಃ ಸ್ವಾಹಾಪಹತಪರಿಘಮಿತ್ಯುಕ್ತ್ವೈತ್ತಿಷ್ಠತಿ ॥೧೫॥

1. ದ್ಯುಲೋಕದಲ್ಲಿ ಸ್ವಾರಾಜ್ಯವೂ ಅದಕ್ಕಿಂತಲೂ ಹೆಚ್ಚಿನ ಸಾಮ್ರಾಜ್ಯವೂ ಈ ಸಾಮಗಳಿಗೆ ಫಲವು.

೧೪-೧೫. ಇನ್ನು (ಹೀಗೆಂಬರ್ಥದ ಮಂತ್ರವನ್ನು ಪಠಿಸುತ್ತಾ) ಹೋಮಮಾಡಬೇಕು. 'ಆದಿತ್ಯರುಗಳಿಗೂ ವಿಶ್ವೇದೇವತೆಗಳಿಗೂ ನಮಸ್ಕಾರ; ದಿವಿಕ್ಷಿತರಿಗೆ ನಮಸ್ಕಾರ! ಲೋಕಕ್ಷಿತರಿಗೆ ನಮಸ್ಕಾರ! ಯಜಮಾನನಾದ ನನ್ನನ್ನು ಲೋಕವನ್ನು ಪಡೆಯಿಸಿರಿ ! ಇದೇ ಯಜಮಾನನ ಲೋಕವು. ಇಲ್ಲಿ ಯಾಗಮಾಡುತ್ತಿರುವವನಾಗಿ ಆಯುಸ್ಸು ಮುಗಿದ ಬಳಿಕ (ಅಲ್ಲಿಗೆ) ಹೋಗುವೆನು! ಸ್ವಾಹಾ!' 'ಪರಿಘವನ್ನು ತೆಗೆಯಿರಿ!' ಎಂದು ಏಳಬೇಕು.

ದ್ಯುಲೋಕಪ್ರಾಪ್ತಿಗೆ ಹೋಮೋತ್ಥಾನಗಳು

(ಭಾಷ್ಯ)

೧೯೭. ದಿವಿಕ್ಷಿದ್ಭ್ಯಃ ಇತ್ಯೇವಮಾದಿ ಸಮಾನಮನ್ಯತ್ । ವಿನ್ದತ, ಅಪಹತ ಇತಿ ಬಹುವಚನಮಾತ್ರಂ ವಿಶೇಷಃ ॥

(ಭಾಷ್ಯಾರ್ಥ)

ದಿವಿಕ್ಷಿತರಿಗೆ ಎಂಬಿದೇ ಮುಂತಾದ ಮಿಕ್ಕ (ಗ್ರಂಥವು ಹಿಂದಿನದಕ್ಕೆ) ಸಮಾನವು. ಪಡೆಯಿಸಿರಿ, ತೆಗೆಯಿರಿ- ಎಂದು ಬಹುವಚನ(ವಿರುವದು) ಮಾತ್ರ (ಇಲ್ಲಿ) ವಿಶೇಷ.

ಈ ಸಾಮಾದಿಗಳು ಯಜಮಾನನ ಕರ್ಮ

(ಭಾಷ್ಯ)

೧೯೮. ಯಜಮಾನಂ ತ್ವೇತತ್ । ಏತಾಸ್ಮಿ, ಅತ್ರ ಯಜಮಾನಃ ಇತ್ಯಾದಿ ಲಿಙ್ಗಾತ್ ॥

(ಭಾಷ್ಯಾರ್ಥ)

ಈ (ಕರ್ಮ)ವಾದರೋ ಯಜಮಾನನದು.[1] ಏಕೆಂದರೆ 'ಹೋಗುವೆನು,' 'ಇಲ್ಲಿ ಯಾಗಮಾಡುತ್ತಿರುವವನಾಗಿ' ಮುಂತಾದ ಲಿಂಗವಿದೆ.

1. ಉದ್ಗಾತೃವಿನದಲ್ಲ.

ಸಾಮಹೋಮೋತ್ಥಾನಕರ್ಮದ ಉಪಸಂಹಾರ

(ಉಪನಿಷತ್ತು)

ತಸ್ಮಾ ಆದಿತ್ಯಾಶ್ಚ ವಿಶ್ವೇ ಚ ದೇವಾಸ್ತೃತೀಯಸವನಗ್ಂ ಸಂಪ್ರಯಚ್ಛನ್ತ್ಯೇಷ ಹ ವೈ ಯಜ್ಞಸ್ಯ ಮಾತ್ರಾಂ ವೇದ ಯ ಏವಂ ವೇದ ಯ ಏವಂ ವೇದ ॥೧೬॥

೧೬. ಅವನಿಗೆ ಆದಿತ್ಯರೂ ವಿಶ್ವೇದೇವತೆಗಳೂ ಮೂರನೆಯ ಸವನವನ್ನು ಕೊಡುವರು. ಯಾವನು ಹೀಗೆಂದು ಅರಿತುಕೊಂಡಿರುವನೋ ಅವನೇ ಯಜ್ಞದ ಅಳತೆಯನ್ನು ಬಲ್ಲವನು, ಯಾವನು ಹೀಗೆಂದು ಅರಿತುಕೊಂಡಿರುವನೋ (ಅವನೇ ಬಲ್ಲವನು).

(ಭಾಷ್ಯ)

೧೯. ಏಷ ಹ ವೈ ಯಜಮಾನಃ ಏವಂವಿತ್[1] ಯಥೋಕ್ತಸ್ಯ ಸಾಮಾದೇರ್ವಿದ್ವಾನ್ ಯಜ್ಞಸ್ಯ ಮಾತ್ರಾಂ ಯಜ್ಞಯಾಥಾತ್ಮ್ಯಂ ವೇದ ಯಥೋಕ್ತಮ್ । ಯ ಏವಂ ವೇದ ಯ ಏವಂ ವೇದ ಇತಿ ದ್ವಿರುಕ್ತಿರಧ್ಯಾಯಪರಿಸಮಾಪ್ತ್ಯರ್ಥಾ ॥

(ಭಾಷ್ಯಾರ್ಥ)

ಈ ಯಜಮಾನನೇ, ಮೇಲೆ ಹೇಳಿರುವ ಸಾಮಾದಿಗಳನ್ನು ಅರಿತುಕೊಂಡಿರುವಾತನೇ, ಯಜ್ಞದ ಅಳತೆಯನ್ನು, ಮೇಲೆ ಹೇಳಿದ ಯಜ್ಞದ ಯಾಥಾತ್ಮ್ಯವನ್ನು ಬಲ್ಲವನಾಗಿರುತ್ತಾನೆ. ಯಾವನು ಹೀಗೆಂದು ಅರಿತುಕೊಂಡಿರುವನೋ ಯಾವನು ಹೀಗೆಂದು ಅರಿತುಕೊಂಡಿರುವನೋ ಎಂಬ ದ್ವಿರುಕ್ತಿಯು ಅಧ್ಯಾಯವು ಮುಗಿಯಿತೆಂದು ತಿಳಿಸುವದಕ್ಕೆ (ಬಂದಿದೆ).

1. 'ಏವಂವಿತ್' ಎಂಬುದು ಮೂಲಭಾಷ್ಯದಲ್ಲಿತ್ತೋ ಇಲ್ಲವೋ, 'ಯ ಏವಂ ವೇದ' ಎಂದೇ ಇತ್ತೋ ತಿಳಿಯುವ ಹಾಗಿಲ್ಲ.

ಎರಡನೆಯ ಅಧ್ಯಾಯದ ಸಾರ

ಈ ಅಧ್ಯಾಯದ ಗ್ರಂಥವು ಸುಸ್ಪಷ್ಟವಾಗಿರುವದರಿಂದ ಇದಕ್ಕೆ ಸಾರವನ್ನು ಬಹಳ ಸಂಕ್ಷಿಪ್ತವಾಗಿ ಬರೆದಿದೆ.

ಒಂದನೆಯ ಖಂಡ

೧-೪. ಮುಂದೆ ಹೇಳುವ ಸಮಸ್ತಸಾಮಭಕ್ತಿಗಳ ವಿಷಯಕವಾದ ಸಾಮಗಳಲ್ಲಿ ಸಾಧುದೃಷ್ಟಿಯನ್ನು ಮಾಡಬೇಕು, ಆಯಾ ಸಂದರ್ಭದಲ್ಲಿ ವಿಧಿಸಿರುವ ದೃಷ್ಟಿಯನ್ನು ಮಾಡಬೇಕು.

೨ ರಿಂದ ೮ ಖಂಡಗಳು

ಖಂ. ೨ ಕಂ. ೧-೩. ಪೃಥಿವಿ, ಅಗ್ನಿ, ಅಂತರಿಕ್ಷ, ಆದಿತ್ಯ, ದ್ಯುಲೋಕ- ಈ ದೃಷ್ಟಿಯಿಂದಲೂ ದ್ಯುಲೋಕ, ಆದಿತ್ಯ, ಅಂತರಿಕ್ಷ, ಅಗ್ನಿ, ಪೃಥಿವಿ- ಈ ದೃಷ್ಟಿಯಿಂದಲೂ ಸಾಮದ ಹಿಂಕಾರ, ಪ್ರಸ್ತಾವ, ಉದ್ಗೀಥ, ಪ್ರತಿಹಾರ, ನಿಧನ- ಎಂಬ ಭಕ್ತಿಗಳನ್ನು ಉಪಾಸನೆಮಾಡಬೇಕು. ಉಪಾಸಕರಿಗೆ ಲೋಕಗಳು ದೊರಕುವವು.

ಖಂ. ೩ ಕಂ. ೧-೨ ಮುಂಗಾಳಿ, ಮೇಘ, ಮಳೆ, ಮಿಂಚು, ಗುಡುಗು- ಈ ದೃಷ್ಟಿಗಳಿಂದ ಹಿಂಕಾರಾದಿಗಳನ್ನು ಉಪಾಸನೆಮಾಡಿದರೆ ಇಚ್ಛೆಯಂತೆ ಮಳೆಯಾಗುವದು.

ಖಂ. ೪ ಕಂ. ೧-೨ ಮೋಡಗಳು ಒಟ್ಟಾಗುವದು, ಮಳೆ, ಪೂರ್ವಕ್ಕೆ ಹರಿಯುವ ನದಿ, ಪಶ್ಚಿಮಕ್ಕೆ ಹರಿಯುವ ನದಿ, ಸಮುದ್ರ- ಇವುಗಳ ದೃಷ್ಟಿಯಿಂದ ಉಪಾಸನೆಮಾಡಿದರೆ ನೀರಿನಲ್ಲಿ ಸಾವಿಲ್ಲ, ಹೆಚ್ಚಾಗಿ ನೀರಿನ ಲಾಭ.

ಖಂ. ೫ ಕಂ. ೧-೨ ವಸಂತ, ಗ್ರೀಷ್ಮ, ವರ್ಷಾಕಾಲ, ಶರತ್ಕಾಲ, ಹೇಮಂತ- ಇವುಗಳಿಂದು ಉಪಾಸನೆಮಾಡಿದರೆ ಋತುಗಳು ಭೋಗ್ಯಗಳಾಗುವವು.

ಖಂ. ೬ ಕಂ. ೧-೨ ಆಡು, ಕುರಿ, ಗೋವು, ಕುದುರೆ, ಮನುಷ್ಯ- ಈ ದೃಷ್ಟಿಗೆ ಪಶುಫಲ.

ಖಂ. ೭ ಕಂ. ೧-೨ ಪ್ರಾಣ, ವಾಕ್ಕು, ಚಕ್ಷುಸ್ಸು, ಶ್ರೋತ್ರ, ಮನಸ್ಸು - ಈ ದೃಷ್ಟಿಗೆ ಉತ್ತರೋತ್ತರಾಭಿವೃದ್ಧಿ.

ಇನ್ನು ಮುಂದೆ ಹೇಳಿರುವವು ಸಪ್ತವಿಧಸಾಮೋಪಾಸನೆಗಳು.

ಖಂ. ೮ ಕಂ. ೧-೩. ವಾಕ್ಕಿನಲ್ಲಿರುವ ಹುಂಕಾರವು ಹಿಂಕಾರವು, ಪ್ರ ಎಂಬುದು ಪ್ರಸ್ತಾವ, ಆ ಎಂಬುದು ಆದಿ (ಓಂಕಾರ), ಉತ್ ಎಂಬುದು ಉದ್ಗೀಥ, ಪ್ರತಿ ಎಂಬುದು ಪ್ರತಿಹಾರ, ಉಪ ಎಂಬುದು ಉಪದ್ರವ, ನಿ ಎಂಬುದು ನಿಧನ- ಎಂದು ಸಾಮದ

ಸಪ್ತಭಕ್ತಿಗಳನ್ನು ಉಪಾಸನೆ ಮಾಡಿದರೆ ವಾಕ್ಯನಿಂದಾಗುವ ಪೂರ್ಣಫಲ. ಅನ್ನವಂತನೂ ಅನ್ನಾದನೂ ಆಗುವನು.

ಒಂಭತನೆಯ ಖಂಡ

೧-೮. ಸೂರ್ಯನ ಉದಯಕ್ಕಿಂತ ಮುನ್ನಿನ ರೂಪವು ಹಿಂಕಾರ, ಅದನ್ನು ಪಶುಗಳು ಉಪಜೀವಿಸಿಕೊಂಡಿರುವವು. ಹುಟ್ಟಿದಾಗಿನ ರೂಪವು ಪ್ರಸ್ತಾವ, ಅವನ್ನು ಮನುಷ್ಯರು ಉಪಜೀವಿಸಿಕೊಂಡಿರುವರು. ಸಂಗವಕಾಲದ ರೂಪವು ಆದಿ ; ಅದನ್ನು ಹಕ್ಕಿಗಳು ಉಪಜೀವಿಸಿಕೊಂಡಿರುವವು. ನಡುಹಗಲಿನ ರೂಪವು ಉದ್ಗೀಥವು, ಅದನ್ನು ದೇವತೆಗಳು ಉಪಜೀವಿಸಿರುವರು. ಅಪರಾಹ್ಣಕ್ಕೆ ಮುನ್ನಿನ ರೂಪವು ಪ್ರತಿಹಾರವು, ಅದನ್ನು ಗರ್ಭಗಳು ಉಪಜೀವಿಸಿಕೊಂಡಿರುವವು. ಅಪರಾಹ್ಣವಾದಮೇಲೆ ಸಂಜೆಯ ಮುನ್ನಿನ ರೂಪವು ಉಪದ್ರವವು ; ಅದನ್ನು ಅರಣ್ಯಪಶುಗಳು ಉಪಜೀವಿಸಿಕೊಂಡಿರುವವು. ಸಂಜೆಯು ನಿಧನವು, ಅದನ್ನು ಪಿತೃಗಳು ಉಪಜೀವಿಸಿಕೊಂಡಿರುವರು. ಯಾವನು ಹೀಗೆ ಸಪ್ತವಿಧಾದಿತ್ಯದೃಷ್ಟಿಯಿಂದ ಸಾಮಭಕ್ತಿಗಳನ್ನು ಉಪಾಸನೆಮಾಡುವನೋ ಅವನಿಗೆ ಆದಿತ್ಯಪ್ರಾಪ್ತಿಯು ಫಲವು.

ಹತ್ತನೆಯ ಖಂಡ

೧-೬. ಇಲ್ಲಿ ಸಪ್ತವಿಧಭಕ್ತಿಗಳ ಅಕ್ಷರಗಳನ್ನು ಮೂರುಮೂರಾಗಿ ವಿಂಗಡಿಸಿ ಉಪದ್ರವ ಎಂಬುದರಲ್ಲಿ ಮೂರನ್ನು ತೆಗೆದುಕೊಂಡು ಉಳಿಯುವದೂ ಅಕ್ಷರವೇ ಆದ್ದರಿಂದ ಅದೂ ಮೂರೇ ಆಯಿತು- ಎಲ್ಲವೂ ಸಮವಾಯಿತು, ಎಂದು ಭಾವಿಸಬೇಕು. ಇವುಗಳ ಅಕ್ಷರಗಳು ಇಪ್ಪತ್ತೆರಡಾಗುವವು. ಆದಿತ್ಯನು ಇಲ್ಲಿಂದ ಎಣಿಸಿದರೆ ಇಪ್ಪತ್ತೊಂದನೆಯವನಾಗುತ್ತಾನೆ ; ಆದ್ದರಿಂದ ಇಪ್ಪತ್ತೆರಡಕ್ಷರಗಳ ಉಪಾಸನೆಯಿಂದ ಅತಿಮೃತ್ಯುವಾದ ಆದಿತ್ಯನಿಂದಾಚೆಯ ಲೋಕವನ್ನು ಜಯಿಸಿಕೊಳ್ಳುತ್ತಾನೆ.

ಇಲ್ಲಿಂದ ಮುಂದಕ್ಕೆ ಗಾಯತ್ರ್ಯಾದಿಸಾಮಭಕ್ತಿಗಳ ಉಪಾಸನೆ

೧೧ ರಿಂದ ೨೧ ಖಂಡಗಳು

ಖಂ. ೧೧ ಕಂ. ೧-೨. ಮನಸ್ಸು, ವಾಕ್ಕು, ಚಕ್ಷುಸ್ಸು, ಶ್ರೋತ್ರ, ಪ್ರಾಣ- ಇವುಗಳ ದೃಷ್ಟಿಯಿಂದ ಗಾಯತ್ರಸಾಮದ ಭಕ್ತಿಗಳನ್ನು ಉಪಾಸನೆಮಾಡಿದರೆ ಪ್ರಾಣಗಳು ಪೂರ್ಣವಾಗಿ ಸರ್ವಾಯುಸ್ಸು ಫಲ.

ಖಂ. ೧೨ ಕಂ. ೧-೨ ಮಂಥನ, ಧೂಮ, ಜ್ವಾಲೆ, ಅಂಗಾರ, ಉಪಶಾಂತಿ, ಸಂಶಾಂತಿಗಳು- ಇವುಗಳ ದೃಷ್ಟಿಯಿಂದ ರಥಂತರಸಾಮವನ್ನು ಉಪಾಸಿಸಿದರೆ ಬ್ರಹವರ್ಚಸ್ಸು, ಅನ್ನಾದತ್ವ, ಸರ್ವಾಯುಸ್ಸು.

ಖಂ. ೧೩ ಕಂ. ೧-೨ ಉಪಮಂತ್ರಣಾದಿಗಳ ದೃಷ್ಟಿಯಿಂದ ವಾಮದೇವ್ಯಸಾಮವನ್ನು ಉಪಾಸನೆಮಾಡಿದರೆ ಅಮೋಘರೇತಸ್ತ್ವ.

ಈ ಅಧ್ಯಾಯದಲ್ಲಿ ಮುಖ್ಯವಾಗಿ ಸಾಮೋಪಾಸನೆಗಳನ್ನೂ
ಪ್ರಣವೋಪಾಸನೆಯನ್ನೂ ಹೇಳಿದೆ.

ಖಂ. ೧೪. ಕಂ. ೧-೨. ಉದಯಿಸುತ್ತಿರುವ ಸೂರ್ಯ ಮುಂತಾದ ದೃಷ್ಟಿಯಿಂದ ಬೃಹತ್ಸಾಮವನ್ನು ಉಪಾಸನೆಮಾಡಿದರೆ ತೇಜಸ್ವಿಯೂ ಅನ್ನಾದನೂ ಆಗುವನು, ಸರ್ವಾಯುಸ್ಸು, ಪ್ರಜೆ, ಕೀರ್ತಿ.

ಖಂ. ೧೫. ಕಂ ೧-೨ ಅಭ್ರಾದಿಗಳ ದೃಷ್ಟಿಯಿಂದ ವೈರೂಪಸಾಮವನ್ನು ಉಪಾಸನೆ ಮಾಡಿದರೆ ಬಹುವಿಧಪಶುವ್ಯಾಪ್ತಿ, ಸರ್ವಾಯುಸ್ಸು, ಪ್ರಜೆ, ಕೀರ್ತಿ.

ಖಂ. ೧೬. ಕಂ ೧-೨ ವಸಂತಾದಿಗಳ ದೃಷ್ಟಿಯಿಂದ ವೈರಾಜಸಾಮವನ್ನು ಉಪಾಸನೆ ಮಾಡಿದರೆ ಪ್ರಜಾದಿಗಳು ಫಲ.

ಖಂ. ೧೭. ಕಂ ೧-೨. ಪೃಥಿವ್ಯಾದಿಗಳ ದೃಷ್ಟಿಯಿಂದ ಶಕ್ವರೀಸಾಮವನ್ನು ಉಪಾಸನೆಮಾಡಿದರೆ ಲೋಕ, ಆಯುಸ್ಸು, ಪ್ರಜಾದಿಗಳು.

ಖಂ. ೧೮. ಕಂ. ೧-೨. ಅಜಾದಿಗಳ ದೃಷ್ಟಿಯಿಂದ ರೇವತೀಸಾಮವನ್ನು ಉಪಾಸನೆಮಾಡಿದರೆ ಪಶ್ವಾದಿಗಳು.

ಖಂ. ೧೯. ಕಂ. ೧-೨. ಲೋಮಾದಿಗಳ ದೃಷ್ಟಿಯಿಂದ ಯಜ್ಞಾಯಜ್ಞೀಯಸಾಮವನ್ನು ಉಪಾಸನೆಮಾಡಿದರೆ ಅಂಗವು ವೈಕಲ್ಯವಿಲ್ಲದೆ ಇರುವದು.

ಖಂ.೨೦. ಕಂ.೧-೨. ಅಗ್ನ್ಯಾದಿಗಳ ದೃಷ್ಟಿಯಿಂದ ರಾಜನಸಾಮವನ್ನು ಉಪಾಸನೆ ಮಾಡಿದರೆ ದೇವತೆಗಳ ಸಾಲೋಕ್ಯಸಾರ್ಷ್ಟಿತ್ವವೂ ಆಯುರಾದಿಗಳೂ.

ಖಂ. ೨೧. ಕಂ. ೧-೪. ತ್ರಯೀವಿದ್ಯಾದಿಗಳ ದೃಷ್ಟಿಯಿಂದ ಸಾಮಸಮುದಾಯ-ವನ್ನು ಉಪಾಸನೆಮಾಡಿದರೆ ಸರ್ವಾಪ್ತಿ.

ಮೇಲೆ ಹೇಳಿರುವವು ಭಕ್ತ್ಯುಪಾಸನೆಗಳು ಮಾತ್ರ. ಗಾಯತ್ರಾದಿಸಾಮಗಳು ಪ್ರಾಣಾದಿಗಳಲ್ಲಿ ಪ್ರೋತವೆಂದು ಶ್ರುತಿಯಲ್ಲಿ ಹೇಳಿರುವದರಿಂದ ಆಯಾ ಒಟ್ಟು ಸಾಮವನ್ನು ಆಯಾ ಪ್ರಾಣಾದಿಗಳ ದೃಷ್ಟಿಯಿಂದಲೂ ಉಪಾಸನೆಮಾಡತಕ್ಕದ್ದು.

ಇಪ್ಪತ್ತೆರಡನೆಯ ಖಂಡ

ಇದರಲ್ಲಿ ಗಾನವಿಶೇಷಗಳು ಹೇಗೆ ಇರಬೇಕೆಂಬುದನ್ನೂ ವರ್ಣಾದಿಗಳನ್ನು ಹೇಗೆ ಉಚ್ಚರಿಸಬೇಕೆಂಬುದನ್ನೂ ಉದ್ಗಾತೃವಿಗೆ ಉಪದೇಶಿಸಿರುತ್ತದೆ

ಇಪ್ಪತ್ತುಮೂರನೆಯ ಖಂಡ

೧. ನೈಷ್ಠಿಕಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ - ಇವರಿಗೆ ತಮ್ಮತಮ್ಮ ಧರ್ಮಗಳನ್ನು ಆಚರಿಸುವದರಿಂದ ಪುಣ್ಯಲೋಕಪ್ರಾಪ್ತಿಯಾಗುವದು ; ಆದರೆ ಓಂಕಾರನಿಷ್ಠನಿಗೆ ಅಮೃತತ್ವವೇ ದೊರಕುವದು.

೨-೩. ಪ್ರಜಾಪತಿಯು ಲೋಕಗಳ ಸಾರವನ್ನು ಆಲೋಚಿಸಲಾಗಿ ಕ್ರಮಕ್ರಮವಾಗಿ ತ್ರಯೀವಿದ್ಯೆ, ವ್ಯಾಹೃತಿಗಳು, ಓಂಕಾರ- ಇವು ಜಿನುಗಿ ತೋರಿದವು. ಆದ್ದರಿಂದ ಓಂಕಾರವೇ ಸರ್ವವೂ ಆಗಿದೆ ಎಂದು ಉಪಾಸನೆಮಾಡಬೇಕು.

ಇಪ್ಪತ್ತುನಾಲ್ಕನೆಯ ಖಂಡ

೧-೨. ಯಜ್ಞದ ಸವನಗಳು ಮೂರೂ ಕ್ರಮವಾಗಿ ವಸುಗಳು, ರುದ್ರರು, ಆದಿತ್ಯರು ಇವರುಗಳಿಗೆ ಸೇರಿರುತ್ತವೆ. ಆದ್ದರಿಂದ ಯಜಮಾನನು ಯಜ್ಞಫಲವಾದ ಲೋಕವನ್ನು ಪೂರ್ಣವಾಗಿ ಪಡೆದುಕೊಳ್ಳುವದಕ್ಕೆ ಆಯಾ ಸವನದ ಸಾಮ, ಹೋಮ, ಉತ್ಥಾನ- ಇವುಗಳನ್ನು ಅರಿತುಕೊಂಡಿರಬೇಕು.

೩-೧೬. ಇಂಥಿಂಥ ಸಾಮಗಳನ್ನು ಆಯಾ ಸವನದಲ್ಲಿ ಗಾನಮಾಡಿ, ಆಯಾ ಮಂತ್ರಗಳಿಂದ ಹೋಮವನ್ನು ಉತ್ಥಾನವನ್ನೂ ಆಚರಿಸಿದರೆ ಸವನದೇವತೆಗಳು ಸವನದ ಫಲವನ್ನು ಕೊಡುತ್ತಾರೆಂದು ಈ ಕಂಡಿಕೆಗಳಲ್ಲಿ ಹೇಳಿದೆ.

ಮೂರನೆಯ ಅಧ್ಯಾಯ - ಒಂದನೆಯ ಖಂಡ

(ಆದಿತ್ಯೋಪಾಸನೆ)

ಅಧ್ಯಾಯದ ಸಂಬಂಧ

೨೦೦. 'ಅಸೌ ವಾ ಆದಿತ್ಯಃ' ಇತ್ಯಾದ್ಯಧ್ಯಾಯಾರಮ್ಭೇ ಸಂಬನ್ಧಃ । ಅತೀತಾನನ್ತರಾಧ್ಯಾಯಾನ್ತ ಉಕ್ತಮ್ 'ಯಜ್ಞಸ್ಯ ಮಾತ್ರಾಂ ವೇದ' ಇತಿ । ಯಜ್ಞ ವಿಷಯಾಣಿ ಚ ಸಾಮಹೋಮಮನೋ್ಗೀತ್ಥಾನಾನಿ ವಿಶಿಷ್ಟಫಲಪ್ರಾಪ್ತಯೇ ಯಜ್ಞಾಙ್ಗಭೂತಾನಿ ಉಪದಿಷ್ಟಾನಿ । ಸರ್ವಯಜ್ಞಾನಾಂ ಚ ಕಾರ್ಯನಿರ್ವೃತ್ತಿರೂಪಃ ಸವಿತಾ ಮಹತ್ಯಾ ಶ್ರಿಯಾ ದೀಪ್ಯತೇ । ಸ ಏಷ ಸರ್ವಪ್ರಾಣಿಕರ್ಮಫಲಭೂತಃ ಪ್ರತ್ಯಕ್ಷಂ ಸರ್ವೈರುಪಜೀವ್ಯತೇ । ಅತಃ ಯಜ್ಞವ್ಯಪದೇಶಾನನ್ತರಂ ತತ್ಕಾರ್ಯಭೂತಸವಿತೃ ವಿಷಯಮ್ ಉಪಾಸನಂ ಸರ್ವಪುರುಷಾರ್ಥೇಭ್ಯಃ ಶ್ರೇಷ್ಠತಮಫಲಂ ವಿಧಾಸ್ಯಾಮೀತಿ ಏವಮ್ ಆರಭತೇ ಶ್ರುತಿಃ ॥

(ಭಾಷ್ಯಾರ್ಥ)

'ಆ ಆದಿತ್ಯನೇ' ಎಂದು ಮುಂತಾಗಿರುವ ಅಧ್ಯಾಯಕ್ಕೆ ಸಂಬಂಧವೇನೆಂದರೆ : ಇದರ ಹಿಂದೆ ಆಗಿಹೋಗಿರುವ ಅಧ್ಯಾಯದ ಕೊನೆಯಲ್ಲಿ ''(ಅವನೇ) ಯಜ್ಞದ ಅಳತೆಯನ್ನು ಬಲ್ಲನು'' (೨-೨೪-೧೬) ಎಂದು ಹೇಳಿರುತ್ತದೆ. ಯಜ್ಞಕ್ಕೆ ಅಂಗ ವಾಗಿರುವ ಯಜ್ಞವಿಷಯಕವಾದ ಸಾಮ, ಹೋಮ, ಮನೋ್ಗೀತ್ಥಾನ - ಇವುಗಳನ್ನೂ ಆಯಾ ವಿಶೇಷಫಲದ ಪ್ರಾಪ್ತಿಗಾಗಿ ತಿಳಿಸಿಕೊಟ್ಟಿರುತ್ತದೆ. ಎಲ್ಲಾ ಯಜ್ಞಗಳ ಕಾರ್ಯಸಿದ್ಧಿರೂಪನಾದ ಸೂರ್ಯನು ಮಹಾಶ್ರೀಯುಕ್ತನಾಗಿ ಹೊಳೆಯುತ್ತಿರುತ್ತಾನೆ. ಆ ಈ ಸರ್ವಪ್ರಾಣಿಗಳ ಕರ್ಮಕ್ಕೂ ಫಲಭೂತನಾಗಿರುವ (ಸೂರ್ಯನನ್ನು) ಪ್ರತ್ಯಕ್ಷವಾಗಿಯೇ ಎಲ್ಲರೂ ಉಪಜೀವಿಸಿಕೊಂಡಿರುತ್ತಾರೆ. ಆದ್ದರಿಂದ ಯಜ್ಞವನ್ನು ಹೇಳಿದ ಬಳಿಕ ಅದರ ಕಾರ್ಯವಾದ ಸವಿತೃವಿನ ವಿಷಯದ ಉಪಾಸನೆಯು ಸರ್ವಪುರುಷಾರ್ಥಗಳಿಗಿಂತಲೂ ಶ್ರೇಷ್ಠತಮಫಲ(ವುಳ್ಳದ್ದಾದ್ದರಿಂದ ಅದನ್ನು) ವಿಧಿ ಸೋಣವೆಂದು ಶ್ರುತಿಯು (ಇದನ್ನು) ಆರಂಭಿಸಿರುತ್ತದೆ.

ಆದಿತ್ಯನು ದೇವಮಧುವೆಂಬ ರೂಪಕ

(ಉಪನಿಷತ್ತು)

ಅಸೌ ವಾ ಆದಿತ್ಯೋ ದೇವಮಧು ತಸ್ಯ ದ್ಯೌರೇವ ತಿರಶ್ಚೀನ-ವಗ್ಂಶೋಽನ್ತರಿಕ್ಷಮಪೂಪೋ ಮರೀಚಯಃ ಪುತ್ರಾಃ ॥೧॥

೧. ಆ ಆದಿತ್ಯನೇ ದೇವಮಧು, ಅದಕ್ಕೆ ದ್ಯು(ಲೋಕ)ವೇ ಅಡ್ಡಬಿದಿರು, ಅಂತರಿಕ್ಷವೇ ಜೇನುಹುಟ್ಟಿಯು, ಮರೀಚಿಗಳೇ ಮರಿಗಳು.

(ಭಾಷ್ಯ)

೨೦೧. 'ಅಸೌ ವಾ ಆದಿತ್ಯೋ ದೇವಮಧು' ಇತ್ಯಾದಿ । ದೇವಾನಾಂ ಮೋದನಾತ್ ಮಧ್ವಿವ ಮಧು ಅಸೌ ಆದಿತ್ಯಃ । ವಸ್ವಾದೀನಾಂ ಚ ಮೋದನ ಹೇತುತ್ವಂ ವಕ್ಷ್ಯತಿ ಸರ್ವಯಜ್ಞಫಲರೂಪತ್ವಾತ್ ಆದಿತ್ಯಸ್ಯ । ಕಥಂ ಮಧುತ್ವಮಿತಿ ? ಆಹ । ತಸ್ಯ ಮಧುನಃ ದ್ಯೌರೇವ ಭ್ರಾಮರಸ್ಯೇವ ಮಧುನಃ ತಿರಶ್ಚೀನವಂಶಃ ತಿರಶ್ಚೀನಶ್ಚಾಸೌ ವಂಶಶ್ಚ ಇತಿ ತಿರಶ್ಚೀನವಂಶಃ । ತಿರ್ಯಗ್ಗತೇವ ಹಿ ದ್ಯೌರ್ಲಕ್ಷ್ಯತೇ । ಅನ್ತರಿಕ್ಷಂ ಚ ಮಧ್ವಪೂಪೋ ದ್ಯುವಂಶೇ ಲಗ್ನಃ ಸನ್ ಲಮ್ಬತ ಇವ । ಅತೋ ಮಧ್ವಪೂಪಸಾಮಾನ್ಯಾತ್ ಅನ್ತರಿಕ್ಷಂ ಮಧ್ವಪೂಪಃ । ಮಧುನಃ ಸವಿತುಃ ಆಶ್ರಯತ್ವಾಚ್ಚ । ಮರೀಚಯಃ ರಶ್ಮಯಃ, ರಶ್ಮಿಸ್ಥಾ ಆಪೋ ಭೌಮಾಃ ಸವಿತ್ರಾಕೃಷ್ಟಾಃ । "ಏತಾ ವಾ ಆಪಃ ಸ್ವರಾಜೋ ಯನ್ಮರೀಚಯಃ" (?) ಇತಿ ಹಿ ವಿಜ್ಞಾಯತೇ[1] । ತಾ ಅನ್ತರಿಕ್ಷಮಧ್ವಪೂಪಸ್ಥರಶ್ಮ್ಯನ್ತರ್ಗತತ್ವಾತ್ ಭ್ರಮರಬೀಜಭೂತಾಃ ಪುತ್ರಾ ಇವ ಹಿ ತಾ ಲಕ್ಷ್ಯನ್ತೇ ಇತಿ ಪುತ್ರಾ ಇವ ಪುತ್ರಾಃ । ಮಧ್ವಪೂಪನಾಡ್ಯನ್ತರ್ಗತಾ ಹಿ ಭ್ರಮರಪುತ್ರಾಃ ॥

(ಭಾಷ್ಯಾರ್ಥ)

'ಆ ಆದಿತ್ಯನೇ ದೇವಮಧು' ಮುಂತಾದ (ಕಂಡಿಕೆಯ ಸಂಬಂಧವೇನೆಂದರೆ) : ದೇವತೆಗಳಿಗೆ (ಜೇನುತುಪ್ಪದಂತೆ) ಮೋದವನ್ನುಂಟುಮಾಡುತ್ತಿರುವದರಿಂದ ಮಧು, ಮಧುವಿನಂತಿರುವವನು. ಆದಿತ್ಯನು ಎಲ್ಲಾ ಯಜ್ಞಗಳಿಗೂ ಫಲವಾಗಿರುವದರಿಂದ ವಸ್ವಾದಿಗಳಿಗೆ ಸಂತೋಷಗೊಳಿಸುವ ಕಾರಣನಾಗಿರುತ್ತಾನೆ - ಎಂದು ಮುಂದೆ[2] (ಶ್ರುತಿಯು) ಹೇಳುತ್ತದೆ. (ಅವನು) ಮಧುವೆಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ ; ಆ ಮಧುವಿಗೆ ಆಕಾಶವೇ ಅಡ್ಡಬಿದಿರು - ಭ್ರಮರಗಳ ಮಧುವಿಗೆ ಹೇಗೆ (ಅಡ್ಡಬಿದಿರಿರುವದೋ ಹಾಗೆ) - ಅಡ್ಡಲಾಗಿರುವ ಬಿದಿರಾದ್ದರಿಂದ (ಅದು) ಅಡ್ಡಬಿದಿರು.

---

1. ವಿಜ್ಞಾಯನ್ತೇ ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
2. ಆರನೆಯ ಖಂಡದಿಂದ ಮುಂದಕ್ಕೆ ಇದನ್ನು ಹೇಳಲಾಗಿದೆ.

ಆಕಾಶವು ಅಡ್ಡಡ್ಡಲಾಗಿರುವಂತೆ ಕಾಣುತ್ತಿದೆಯಲ್ಲವೆ ? ಅಂತರಿಕ್ಷವು ಜೇನು ಹುಟ್ಟಿಯು ; ಆಕಾಶವೆಂಬ ಬಿದಿರಿಗೆ ಸಿಕ್ಕಿಕೊಂಡು ಜೋತಾಡುತ್ತಿರುವಂತೆ ಇದೆ ; ಆದ್ದರಿಂದ ಜೇನುಹುಟ್ಟಿಯ ಹೋಲಿಕೆಯಿರುವದರಿಂದ ಅಂತರಿಕ್ಷವು ಜೇನುಹುಟ್ಟಿಯು (ಎಂದಿದೆ). ಮಧುವಾಗಿರುವ ಸೂರ್ಯನಿಗೆ ಆಸರೆಯಾಗಿರುವದರಿಂದಲೂ (ಅದು ಹುಟ್ಟಿ), ಮರೀಚಿಗಳು ಎಂದರೆ ರಶ್ಮಿಗಳು ; ಭೂಮಿಯಿಂದ ಸೂರ್ಯನು ಸೆಳೆದುಕೊಂಡಿರುವ ರಶ್ಮಿಗತವಾಗಿರುವ ನೀರು(ಎಂದರ್ಥ). ''ಸ್ವರಾಜನಾದ (ಸೂರ್ಯನ) ಮರೀಚಿಗಳಿವೆಯಲ್ಲ, ಇವೇ ನೀರು'' (?) ಎಂದಲ್ಲವೆ, (ಶ್ರುತಿಯಿಂದ) ತಿಳಿದುಬರುತ್ತದೆ ? ಅಂತರಿಕ್ಷವೆಂಬ ಜೇನುಹುಟ್ಟಿಯಲ್ಲಿರುವ ರಶ್ಮಿಗಳಲ್ಲಿರುವದರಿಂದ ಆ (ನೀರು) ಭ್ರಮರಗಳಿಗೆ ಬೀಜವಾಗಿರುವ ಪುತ್ರರಂತೆ ಹಿತವಾಗಿ ಕಾಣಿಸುತ್ತದೆ ಯಾದ್ದರಿಂದ (ಅವನ್ನು) ಪುತ್ರರು, ಪುತ್ರರಂತಿರುವ (ಮರಿ)ಗಳು ಎಂದಿದೆ[1]. ಜೇನುಹುಟ್ಟಿಯ ನಾಡಿಗಳ ಒಳಗಲ್ಲವೆ, ಭ್ರಮರಪುತ್ರಗಳಿರುವದು ?

ಒಂದನೆಯ ಅಮೃತರಸದ ಉತ್ಪತ್ತಿ

(ಉಪನಿಷತ್ತು)

ತಸ್ಯ ಯೇ ಪ್ರಾಙ್ಮೋ ರಶ್ಮಯಸ್ತಾ ಏವಾಸ್ಯ ಪ್ರಾಚ್ಯೋ ಮಧುನಾಡ್ಯಃ । ಋಚ ಏವ ಮಧುಕೃತ ಋಗ್ವೇದ ಏವ ಪುಷ್ಪಂ ತಾ ಅಮೃತಾ ಅಪಸ್ತಾ ವಾ ಏತಾ ಋಚಃ ॥೨॥

ಏತಮೃಗ್ವೇದಮಭ್ಯತಪಗ್ಂಸ್ತಸ್ಯಾಭಿತಪ್ತಸ್ಯ ಯಶಸ್ತೇಜ ಇನ್ದ್ರಿಯಂ ವೀರ್ಯಮನ್ನಾದ್ಯಗ್ಂ ರಸೋಽಜಾಯತ ॥೩॥

೨-೩. ಆ (ಸೂರ್ಯನ) ಪೂರ್ವದಿಕ್ಕಿನ ರಶ್ಮಿಗಳಿವೆಯಲ್ಲ, ಅವೇ ಈ (ಮಧುವಿಗೆ) ಪೂರ್ವದ ಮಧುನಾಡಿಗಳು ; ಋಕ್ಕುಗಳೇ ಮಧುವನ್ನುಂಟು ಮಾಡುವ (ಭ್ರಮರ)ಗಳು ; ಋಗ್ವೇದವೇ ಹೂವು. ಆ ಅಪ್ಪೇ ಅಮೃತವು, ಆ ಈ ಋಕ್ಕುಗಳೆಂಬ (ಭ್ರಮರಗಳು) ಈ ಋಗ್ವೇದವನ್ನು ಅಭಿತಪಿಸಿದವು ; ಹಾಗೆ ಅಭಿತಪ್ತವಾದ ಆ (ಋಗ್ವೇದದಿಂದಾದ) ಯಶಸ್ಸು, ತೇಜವು, ಇಂದ್ರಿಯವು, ವೀರ್ಯವು, ಅನ್ನಾದ್ಯವು - ಎಂಬ ರಸವು ಉಂಟಾಯಿತು.

---

1. ಭ್ರಮರಬೀಜವಾಗಿರುವ ಮೊಟ್ಟೆಗಳು ಜೇನುಹುಟ್ಟಿಯ ರಂಧ್ರಗಳಲ್ಲಿರುತ್ತವೆ ; ಈ ನೀರೂ ಅಂತರಿಕ್ಷವೆಂಬ ಹುಟ್ಟಿಯ ರಶ್ಮಿಗಳಲ್ಲಿರುತ್ತದೆ. ಆದ್ದರಿಂದ ಇದರಲ್ಲಿ ಭ್ರಮರಬೀಜ-ದೃಷ್ಟಿಯನ್ನು ಮಾಡಬೇಕು ಎಂದರ್ಥ. ಆ. ಗಿ. ಟೀಕೆ.

ಋಕ್ಕುಗಳಿಂದ ಉಂಟಾಗುವ ರಸ

(ಭಾಷ್ಯ)

೨೦೨. ತಸ್ಯ ಸವಿತುರ್ಮಧ್ವಾಶ್ರಯಸ್ಯ ಮಧುನೋ ಯೇ ಪ್ರಾಞ್ಚಃ ಪ್ರಾಚ್ಯಾಂ ದಿಶಿ ಗತಾ ರಶ್ಮಯಃ ತಾ ಏವಾಸ್ಯ ಪ್ರಾಚ್ಯಃ ಪ್ರಾಗಞ್ಚನಾತ್ ಮಧುನೋ ನಾಡ್ಯ ಇವ[1] ಮಧುನಾಡ್ಯಃ । ಮಧ್ವಾಧಾರಚ್ಛಿದ್ರಾಣಿ ಇತ್ಯರ್ಥಃ । ತತ್ರ ಋಚ ಏವ ಮಧುಕೃತಃ । ಲೋಹಿತರೂಪಂ ಸವಿತ್ರಾಶ್ರಯಂ ಮಧು ಕುರ್ವನ್ತೀತಿ ಮಧುಕೃತಃ । ಭ್ರಮರಾ ಇವ ಯತೋ ರಸಾನ್ ಆದಾಯ ಮಧು ಕುರ್ವನ್ತಿ । ತತ್ಪುಷ್ಪಮಿವ ಪುಷ್ಪಮ್ ಋಗ್ವೇದ ಏವ । ತತ್ರ ಋಗ್ಬ್ರಾಹ್ಮಣಸಮುದಾಯಸ್ಯ ಋಗ್ವೇದಾಖ್ಯತ್ವಾತ್ ಶಬ್ದಮಾತ್ರಾಚ್ಚ ಭೋಗ್ಯರೂಪರಸನಿಸ್ರಾವಾಸಂಭವಾತ್ ಋಗ್ವೇದಶಬ್ದೇನ ಅತ್ರ ಋಗ್ವೇದವಿಹಿತಂ ಕರ್ಮ । ತತೋ ಹಿ ಕರ್ಮಫಲಭೂತಮಧುರಸನಿಸ್ರಾವಃ ಸಂಭವತಿ[2] । ಮಧುಕರೈರಿವ ಪುಷ್ಪಸ್ಥಾನೀಯಾತ್ ಋಗ್ವೇದವಿಹಿತಾತ್ ಕರ್ಮಣಃ ಆಪ ಆದಾಯ ಋಗ್ಭಿರ್ಮಧು ನಿರ್ವರ್ತ್ಯತೇ । ಕಾಸ್ತಾ ಆಪಃ ಇತಿ ? ಆಹ । ತಾಃ ಕರ್ಮಣಿ ಪ್ರಯುಕ್ತಾಃ ಸೋಮಾಜ್ಯ ಪಯೋರೂಪಾ ಅಗ್ನೌ ಪ್ರಕ್ಷಿಪ್ತಾಃ ತತ್ಪಾಕಾಭಿನಿರ್ವೃತ್ತಾ ಅಮೃತಾಃ ಅಮೃತಾರ್ಥತ್ವಾತ್ ಅತ್ಯನ್ತರಸವತ್ಯಃ ಆಪೋ ಭವನ್ತಿ । ತದ್ರಸಾನ್ ಆದಾಯ ತಾ ವಾ ಏತಾ ಋಚಃ ಪುಷ್ಪೇಭ್ಯೋ ರಸಮಾದದಾನಾ ಇವ ಭ್ರಮರಾ ಋಚಃ ಏತಮ್ ಋಗ್ವೇದಮ್ ಋಗ್ವೇದವಿಹಿತಂ ಕರ್ಮ ಪುಷ್ಪಸ್ಥಾನೀಯಮ್ ಅಭ್ಯತಪನ್ ಅಭಿತಾಪಂ ಕೃತವತ್ಯ ಇವ ಏತಾ ಋಚಃ ಕರ್ಮಣಿ ಪ್ರಯುಕ್ತಾಃ ಋಗ್ಭಿರ್ಹಿ ಮನ್ತ್ರೈಃ ಶಸ್ತ್ರಾದ್ಯಙ್ಗಭಾವಮುಪಗತೈಃ ಕ್ರಿಯಮಾಣಂ ಕರ್ಮ ಮಧುನಿರ್ವರ್ತಕಂ ರಸಂ ಮುಞ್ಚತೀತ್ಯುಪಪದ್ಯತೇ । ಪುಷ್ಪಾಣೀವ ಭ್ರಮರೈರಾಚೂಷ್ಯಮಾಣಾನಿ । ತದೇತದಾಹ । ತಸ್ಯ ಋಗ್ವೇದಸ್ಯ ಅಭಿತಪ್ತಸ್ಯ । ಕೋಽಸೌ ರಸಃ, ಯ ಋಚ್ಛಧುಕರಾಭಿತಾಪನಿಃಸೃತ ಇತಿ । ಉಚ್ಯತೇ ಯಶೋ ವಿಶ್ರುತತ್ವಮ್ । ತೇಜಃ ದೇಹಗತಾ ದೀಪ್ತಿಃ । ಇನ್ದ್ರಿಯಂ ಸಾಮರ್ಥ್ಯೋಪೇತೈರಿನ್ದ್ರಿಯೈಃ ಅವೈಕಲ್ಯಮ್ । ವೀರ್ಯಂ ಸಾಮರ್ಥ್ಯಮ್ । ಬಲಮ್ ಇತ್ಯರ್ಥಃ । ಅನ್ನಾದ್ಯಮ್ । ಅನ್ನಂ ಚ ತತ್ ಆದ್ಯಂ ಚ ಯೇನ ಉಪಯುಜ್ಯಮಾನೇನ ಅಹನ್ಯಹನಿ ದೇವಾನಾಂ ಸ್ಥಿತಿಃ ಸ್ಯಾತ್ । ತದನ್ನಾದ್ಯಮ್ । ಏಷ ರಸೋಽಜಾಯತ ಯಾಗಾದಿಲಕ್ಷಣಾತ್ ಕರ್ಮಣಃ ॥

---

1. ನಾಡ್ಯೋ ಮಧುನಾಡ್ಯ ಇವ- ಎಂಬುದನ್ನು ಭಿನ್ನಕ್ರಮದಿಂದ ಇಲ್ಲಿಗೆ ಸೇರಿಸಿಕೊಂಡಿದೆ. ಅಥವಾ ಆ ಪಾಠಕ್ಕೆ ಹೀಗೆ ಅನ್ವಯವೆಂದು ಭಾವಿಸಬೇಕು.
2. ಸಂಭವಾತ್ ಎಂಬ ಪಾಠದಲ್ಲಿ ಹಿ ಹೆಚ್ಚಾಗುತ್ತದೆಯಾದ್ದರಿಂದ ಹೀಗೆ ತಿದ್ದಿಕೊಂಡಿದೆ.

(ಭಾಷ್ಯಾರ್ಥ)

ಮಧುವಿಗೆ ಆಶ್ರಯವಾಗಿರುವ ಆ ಮಧುವಿನ, ಸೂರ್ಯನ[1], ಪೂರ್ವದಿಕ್ಕಿನ ಮೂಡಣದಿಕ್ಕಿನ ಹರಿದಿರುವ ರಶ್ಮಿಗಳಿರುವವಲ್ಲ, ಅವೇ ಪೂರ್ವದ ಮಧುನಾಡಿಗಳು ; ಮಧುವಿನ ನಾಡಿಗಳಂತೆ ಇರುವದರಿಂದ ಮಧುನಾಡಿಗಳು, ಮಧ್ವಾಧಾರವಾಗಿರುವ ರಂಧ್ರಗಳು[2] ಎಂದರ್ಥ.

ಇಲ್ಲಿ ಋಕ್ಕುಗಳೇ ಮಧುಕರಗಳು ; ಏಕೆಂದರೆ ತುಂಬಿಗಳಂತೆ ಅವು ರಸಗಳನ್ನು ತಂದು ಸೂರ್ಯನನ್ನಾಶ್ರಯಿಸಿಕೊಂಡಿರುವ ಲೋಹಿತರೂಪವಾದ ಮಧುವನ್ನು ಮಾಡುತ್ತವೆ. ಯಾವದರಿಂದ ರಸಗಳನ್ನು ತಂದು ಮಧುವನ್ನು ಮಾಡುತ್ತವೆಯೋ ಆ ಹೂವಿನಂತಿರುವದರಿಂದ ಹೂವಾಗಿರುವದು ಋಗ್ವೇದವೇ. ಈ (ಪಾಠದಲ್ಲಿ) ಋಗ್ಬ್ರಾಹ್ಮಣಗಳ[3] ಸಮುದಾಯವು ಋಗ್ವೇದವೆಂಬ ಹೆಸರಿನ ಶಬ್ದಮಾತ್ರವಾಗಿರುವ-ದರಿಂದ (ಅದರಿಂದ) ಭೋಗ್ಯರೂಪವಾದ ರಸವು ಒಸರುವ ಸಂಭವವಿಲ್ಲದ್ದರಿಂದ ಋಗ್ವೇದವೆಂಬ ಶಬ್ದಕ್ಕೆ ಇಲ್ಲಿ ಋಗ್ವೇದವಿಹಿತವಾದ ಕರ್ಮ(ವನ್ನು ಗ್ರಹಿಸಬೇಕು) ; ಅದರಿಂದಲೇ ಅಲ್ಲವೆ, ಕರ್ಮಫಲವಾಗಿರುವ ಮಧುರಸವು ಒಸರುವ ಸಂಭವವಿದೆ[4] ? ಹೂವಿನಂತಿರುವ ಋಗ್ವೇದವಿಹಿತವಾದ ಕರ್ಮದಿಂದ ತುಂಬಿಗಳಂತೆ ಋಕ್ಕುಗಳು ಅಪ್ಪನ್ನು ತಂದು ಮಧುವನ್ನು ಉಂಟುಮಾಡುತ್ತವೆ.

ಆ ಅಪ್ಪು ಯಾವದು ? ಎಂದರೆ (ಶ್ರುತಿ) ಹೇಳುತ್ತದೆ. ಕರ್ಮದಲ್ಲಿ ಪ್ರಯೋಗಿಸಿದ ಸೋಮ, ಆಜ್ಯ, ಹಾಲು - ಎಂಬ ರೂಪದ, ಅಗ್ನಿಯಲ್ಲಿ ಹಾಕಿದ, ಆ ಅಪ್ಪು, ಆ (ಅಗ್ನಿಯ) ಪಾಕದಿಂದ ಅಡಿಗೆಯಾಗಿ ಅಮೃತವಾಗುತ್ತದೆ, ಅಮೃತವೆಂಬ ಫಲವನ್ನು ಕೊಡುವದರಿಂದ (ಅಮೃತವಾಗುತ್ತದೆ), ಅತ್ಯಂತ ರುಚಿಯುಳ್ಳದ್ದಾಗುತ್ತದೆ.

ಆ ರಸಗಳನ್ನು ತಂದು, ಹೂಗಳಿಂದ ರಸವನ್ನು ತರುವ ಭ್ರಮರಗಳಂತಿರುವ ಆ ಈ ಋಕ್ಕುಗಳು, ಹೂವಿನಂತಿರುವ ಈ ಋಗ್ವೇದವಿಹಿತವಾದ ಕರ್ಮವನ್ನು ಅಭಿತಪಿಸಿದವು, ಕರ್ಮದಲ್ಲಿ ಪ್ರಯುಕ್ತವಾದ ಈ ಋಕ್ಕುಗಳು[5] ಅಭಿತಾಪಗೊಳಿಸಿದಂತೆ (ವರ್ತಿಸಿದವು). ಋಕ್ಕುಗಳೆಂಬ ಮಂತ್ರಗಳು ಶಸ್ತ್ರವೇ ಮುಂತಾದ ಅಂಗಭಾವವನ್ನು

---

1. ಮುಂದೆ ಹೇಳುವ ಋಗ್ವೇದಾದಿಕರ್ಮಫಲವಾದ ಮಧುವಿಗೆ ಆಶ್ರಯನಾಗಿರುವದರಿಂದ ಸೂರ್ಯನನ್ನು ಮಧುವೆಂದಿದೆ - ಎಂದು ಭಾವ. 2. ಜೇನುಗೂಡುಗಳು.
3. ಋಕ್ಕುಗಳು ಭ್ರಮರಗಳು, ಕರ್ಮವನ್ನು ವಿಧಿಸುವ ಋಗ್ಬ್ರಾಹ್ಮಣಗಳು ಹೂಗಳು- ಎಂದು ಯಥಾಶ್ರುತವಾಗಿ ಅರ್ಥ ಮಾಡಬೇಕು.
4. ಬರಿಯ ಶಬ್ದಪ್ರಯೋಗದಿಂದ ಈ ಫಲವಾಗಲಾರದು ಎಂದು ಅಭಿಪ್ರಾಯ.
5. ಕರ್ಮಕ್ಕೂ ಋಕ್ಕುಗಳಿಗೂ ಆಗುವ ಸಂಬಂಧವೇ ಅಭಿತಾಪವು.

ಹೊಂದಲು[1] ಮಾಡಿದ ಕರ್ಮವು ಮಧುವನ್ನುಂಟುಮಾಡುವ ತುಂಬಿಗಳು ಹೀರುವಾಗ ಹೂಗಳಂತೆ ರಸವನ್ನು ಬಿಡುತ್ತದೆ - ಎಂಬುದಲ್ಲವೆ, ಹೊಂದುತ್ತದೆ[2] ?

ಆ ಇದನು (ಶ್ರುತಿ)ಹೇಳುತ್ತಿದೆ. (ಹೀಗೆ) ಆಭಿತಪ್ತವಾದ ಋಗ್ವೇದದಿಂದ (ರಸವುಂಟಾಯಿತು), ಋಕ್ಕುಗಳೆಂಬ ತುಂಬಿಗಳು ಅಭಿತಾಪದಿಂದ ಹೊರಹೊರಟ ಈ ರಸವೆಂಬುದು ಯಾವದು ? ಎಂದರೆ (ಶ್ರುತಿ) ಹೇಳುತ್ತದೆ. ಯಶಸ್ಸು, ಎಂದರೆ ಹೆಸರುವಾಸಿ ; ತೇಜಸ್ಸು, ಎಂದರೆ ದೇಹದಲ್ಲಿರುವ ಕಾಂತಿ ; ಇಂದ್ರಿಯವು, ಎಂದರೆ ಸಾಮರ್ಥ್ಯದಿಂದೊಡಗೂಡಿ ಇಂದ್ರಿಯಗಳು ಊನವಾಗದೆ ಇರುವದು ; ವೀರ್ಯವು, ಎಂದರೆ ಸಾಮರ್ಥ್ಯವು, ಬಲವು ; ಅನ್ನಾದ್ಯವು - ಅನ್ನವೂ ಆದ್ಯವೂ ಆಗಿರತಕ್ಕದ್ದು ; ದಿನದಿನವೂ ಯಾವದನ್ನು ಉಪಯೋಗಿಸಿದರೆ ದೇವತೆಗಳು ಇರುವದಕ್ಕಾಗುವದೋ ಅದು ಅನ್ನಾದ್ಯವು- ಈ ರಸವು ಯಾಗವೇ ಮುಂತಾದ ಕರ್ಮದಿಂದ ಉಂಟಾಯಿತು (ಎಂದರ್ಥ).[3]

(ಉಪನಿಷತ್ತು)

ತದ್ವ್ಯಕ್ಷರತ್ತದಾದಿತ್ಯಮಬಿತೋಽಶ್ರಯತ್ತದ್ವಾ ಏತದ್ಯದೇತದಾದಿತ್ಯಸ್ಯ ರೋಹಿತಗ್ಂ ರೂಪಮ್ ॥೪॥

೪. ಅದು ಹೊರಟುಹೋಯಿತು. ಅದು ಆದಿತ್ಯನನ್ನು ಹತ್ತಿರದಲ್ಲಿ ಆಶ್ರಯಿಸಿಕೊಂಡಿತು. ಆದಿತ್ಯನ ಕೆಂಪನೆಯ ರೂಪವಿದೆಯಲ್ಲ, ಇದೇ ಅದು.

ಆದಿತ್ಯನಲ್ಲಿ ಕರ್ಮದಿಂದಾಗುವ ಪ್ರಥಮಾಮೃತ

(ಭಾಷ್ಯ)

೨೦೩. ಯಶಆದ್ಯನ್ನಾದ್ಯಪರ್ಯನ್ತಂ ತತ್ ವ್ಯಕ್ಷರತ್ ವಿಶೇಷೇಣ ಅಕ್ಷರತ್ ಅಗಮತ್, ಗತ್ವಾ ಚ ತದಾದಿತ್ಯಮ್ ಅಭಿತಃ ಪಾರ್ಶ್ವತಃ ಪೂರ್ವಭಾಗಂ ಸವಿತುಃ

---

1. ಪುರೋನುವಾಕ್ಯ, ಯಾಜ್ಯ, ಶಸ್ಯ- ಮುಂತಾದ ರೂಪದಿಂದ ಋಕ್ಕುಗಳು ಕರ್ಮಕ್ಕೆ ಅಂಗವಾಗಿರುತ್ತವೆ ; ಹಾಗೆ ಋಕ್ಕುಗಳನ್ನು ಉಪಯೋಗಿಸಿದಾಗಲೇ ಕರ್ಮಗಳಿಂದ ಫಲವುಂಟಾಗುತ್ತದೆ.

2. ಯಶಸ್ತೇಜಆದಿರೂಪದ ರಸವು ಈ ಕರ್ಮದಿಂದ ಉಂಟಾಗಿ ಸೂರ್ಯನಲ್ಲಿಗೆ ಮುಟ್ಟಿದ ಬಳಿಕವೇ ಅಲ್ಲಿ ಮಧುವನ್ನುಂಟುಮಾಡುತ್ತದೆ. ಆ ಮಧುವಿಗೆ ಆಶ್ರಯನೆಂಬುದರಿಂದಲೇ ಸೂರ್ಯನನ್ನು ಇಲ್ಲಿ ಮಧುವೆಂದು ಭಾವಿಸಬೇಕೆಂದು ವಿಧಿಸಿರುವದು - ಎಂದರ್ಥ.

3. ಋಗ್ವೇದದಿಂದ ಉಂಟಾಗುತ್ತದೆ ಎಂದರೆ ಋಗ್ವೇದದಿಂದ ಮಾಡುವ ಕರ್ಮದಿಂದ ಉಂಟಾಗುತ್ತದೆ ಎಂದೇ ಅರ್ಥವೆಂದು ಭಾಷ್ಯದಲ್ಲಿ ಹೇಳಿದ್ದು ಈ ಕಾರಣದಿಂದಲೇ.

ಅಶ್ರಯತ್ ಆಶ್ರಿತವತ್ ಇತ್ಯರ್ಥಃ । ಅಮುಷ್ಮಿನ್ ಆದಿತ್ಯೇ ಸಂಚಿತಂ ಕರ್ಮ-ಫಲಾಖ್ಯಮ್ ಮಧು ಭೋಕ್ಷ್ಯಾಮಹ ಇತ್ಯೇವಂ ಹಿ ಯಶಆದಿಲಕ್ಷಣಫಲಪ್ರಾಪ್ತಯೇ ಕರ್ಮಾಣಿ ಕ್ರಿಯನ್ತೇ ಮನುಷ್ಯೈಃ । ಕೇದಾರನಿಷ್ಪಾದನಮಿವ ಕರ್ಷಕೈಃ । ತತ್ ಪ್ರತ್ಯಕ್ಷಂ ಪ್ರದರ್ಶ್ಯತೇ ಶ್ರದ್ಧಾಹೇತೋಃ । ತದ್ವಾ ಏತತ್ । ಕಿಮ್ ಏತತ್ ? ಯದೇತತ್ ಆದಿತ್ಯಸ್ಯ ಉದ್ಯತೋ ದೃಶ್ಯತೇ ರೋಹಿತಂ ರೂಪಮ್ ॥

(ಭಾಷ್ಯಾರ್ಥ)

ಯಶಸ್ಸೇ ಮೊದಲಾಗಿ ಅನ್ನಾದ್ಯದವರೆಗಿನ ಆ (ರಸವು ವ್ಯಕ್ಷರತ್=ವಿಶೇಷೇಣ ಅಕ್ಷರತ್) ವಿಶೇಷರೂಪದಿಂದ ಕ್ಷರಣಮಾಡಿತು ಎಂದರೆ ಹೋಯಿತು.[1] ಹೋಗಿ ಅದು ಆದಿತ್ಯನ ಹತ್ತಿರ (ಬಂದು) ಪಕ್ಕದಲ್ಲಿ ಸೂರ್ಯನ ಪೂರ್ವಭಾಗವನ್ನು (ಅಶ್ರಯತ್=ಆಶ್ರಿತವತ್) ಆಶ್ರಯಿಸಿಕೊಂಡಿತು[2] ಎಂದರ್ಥ. ಆ ಆದಿತ್ಯನಲ್ಲಿ ಕೂಡಿಹಾಕಿಕೊಂಡಿರುವ ಕರ್ಮಫಲವೆಂಬ ಮಧುವನ್ನು ಭುಂಜಿಸೋಣ - ಎಂದಲ್ಲವೆ, ಯಶಸ್ಸೇ ಮುಂತಾದ ಫಲಪ್ರಾಪ್ತಿಗಾಗಿ, ಕರ್ಮಗಳನ್ನು - ಬೇಸಾಯಗಾರರು ಗದ್ದೆಯನ್ನು ಮಾಡುವಂತೆ, ಮನುಷ್ಯರು ಮಾಡುತ್ತಾರೆ ? ಆ ಫಲವನ್ನು, ಶ್ರದ್ಧೆಯುಂಟಾಗಲೆಂಬ, ಕಾರಣದಿಂದ[3] ಪ್ರತ್ಯಕ್ಷವಾಗಿ ತೋರಿಸುತ್ತಾರೆ. ಇದೇ ಅದು. ಯಾವದದು ? ಎಂದರೆ ಉದಯಿಸುವ ಸೂರ್ಯನ ಕೆಂಪನೆಯ ರೂಪವಿದೆಯಲ್ಲ, (ಅದು).

ಮೂರನೆಯ ಅಧ್ಯಾಯ - ಎರಡನೆಯ ಖಂಡ

(ಆದಿತ್ಯೋಪಾಸನೆ)

ಎರಡನೆಯ ಅಮೃತದ ಉತ್ಪತ್ತಿ

(ಉಪನಿಷತ್ತು)

ಅಥ ಯೇಽಸ್ಯ ದಕ್ಷಿಣಾ ರಶ್ಮಯಸ್ತಾ ಏವಾಸ್ಯ ದಕ್ಷಿಣಾ

1. ಒಂದಾನೊಂದು ಅದೃಷ್ಟರೂಪದಿಂದ ಹೋಗುತ್ತದೆ ಎಂದರ್ಥ.
2. ಇಲ್ಲಿ ಭೂತಕಾಲದ ರೂಪವನ್ನು ಪ್ರಯೋಗಿಸಿದ್ದರೂ ಆಶ್ರಯಿಸಿಕೊಂಡಿರುತ್ತದೆ ಎಂದೇ ಅರ್ಥ. 3. ಕರ್ಮಿಗಳಿಗೂ ಈ ಮಧುವಿದ್ಯೆಯ ಉಪಾಸಕರಿಗೂ ಸಾಧನದಲ್ಲಿ ಶ್ರದ್ಧೆಯುಂಟಾಗಲೆಂಬ ಉದ್ದೇಶದಿಂದ ಎಂದರ್ಥ.

ಮಧುನಾಡ್ಯೋ ಯಜೂಗ್ಂಷ್ಯೇವ ಮಧುಕೃತೋ ಯಜುರ್ವೇದ ಏವ ಪುಷ್ಪಂ ತಾ ಅಮೃತಾ ಆಪಃ ॥೧॥

ತಾನಿ ವಾ ಏತಾನಿ ಯಜೂಗ್ಂಷ್ಯೇತಂ ಯಜುರ್ವೇದಮಭ್ಯ-ತಪಗ್ಂಸ್ತಸ್ಯಾಭಿತಪ್ತಸ್ಯ ಯಶಸ್ತೇಜ ಇನ್ದ್ರಿಯಂ ವೀರ್ಯಮನ್ನಾದ್ಯಗ್ಂ ರಸೋಽಜಾಯತ ॥೨॥

೧-೨. ಇನ್ನು ಆ (ಸೂರ್ಯನ) ದಕ್ಷಿಣದಿಕ್ಕಿನ ರಶ್ಮಿಗಳಿವೆಯಲ್ಲ, ಅವೇ ಈ (ಮಧುವಿಗೆ) ದಕ್ಷಿಣದ ಮಧುನಾಡಿಗಳು ; ಯಜುಸ್ಸುಗಳೇ ಮಧು ವನ್ನುಂಟುಮಾಡುವ (ಭ್ರಮರ)ಗಳು, ಯಜುರ್ವೇದವೇ ಹೂವು. ಆ ಅಪ್ಪೇ ಅಮೃತವು. ಆ ಈ ಯಜುಸ್ಸುಗಳು (ಎಂಬ ಭ್ರಮರಗಳು) ಈ ಯಜುರ್ವೇದ ವನ್ನು ಅಭಿತಪಿಸಿದವು. (ಹಾಗೆ) ಅಭಿತಪ್ತವಾದ ಆ (ಯಜುರ್ವೇದದಿಂದ) ಯಶಸ್ಸು, ತೇಜವು, ಇಂದ್ರಿಯವು, ವೀರ್ಯವು, ಅನ್ನಾದ್ಯವು - ಎಂಬ ರಸವು ಉಂಟಾಯಿತು.

ಯಜುಸ್ಸುಗಳಿಂದ ಉಂಟಾಗುವ ರಸ

(ಭಾಷ್ಯ)

೨೦೪. ಅಥ ಯೇ ಅಸ್ಯ ದಕ್ಷಿಣಾ ರಶ್ಮಯ ಇತ್ಯಾದಿಸಮಾನಮ್ । ಯಜೂಂಷ್ಯೇವ ಮಧುಕೃತಃ ಯಜುರ್ವೇದವಿಹಿತೇ ಕರ್ಮಣಿ ಪ್ರಯುಕ್ತಾನಿ । ಪೂರ್ವವನ್ಮಧುಕೃತ ಇವ । ಯಜುರ್ವೇದವಿಹಿತಂ ಕರ್ಮ ಪುಷ್ಪಸ್ಥಾನೀಯಂ ಪುಷ್ಪಮ್ ಇತ್ಯುಚ್ಯತೇ । ತಾ ಏವ ಸೋಮಾದ್ಯಾ ಅಮೃತಾ ಆಪಃ । ತಾನಿ ವಾ ಏತಾನಿ ಯಜೂಂಷಿ ಏತಂ ಯಜುರ್ವೇದಮ್ ಅಭ್ಯತಪನ್ ಇತ್ಯೇವಮಾದಿ ಸರ್ವಂ ಸಮಾನಮ್ ॥

(ವ್ಯಾಖ್ಯಾನ)

ಇನ್ನು ಇವನ ದಕ್ಷಿಣದ ರಶ್ಮಿಗಳಿರುವವಲ್ಲ - ಎಂಬುದೇ ಮುಂತಾದ ಗ್ರಂಥವು (ಹಿಂದಿನದಕ್ಕೆ) ಸಮಾನವು. ಯಜುರ್ವೇದವಿಹಿತವಾದ ಕರ್ಮದಲ್ಲಿ ಪ್ರಯೋಗಿಸಿದ ಯಜುಸ್ಸುಗಳೇ ಭ್ರಮರಗಳು ; ಹಿಂದೆ ಹೇಳಿದಂತೆ ಭ್ರಮರಗಳಂತೆ (ಎಂದು ಅರ್ಥಮಾಡಿಕೊಳ್ಳಬೇಕು). ಯಜುರ್ವೇದದಲ್ಲಿ ವಿಹಿತವಾಗಿರುವ ಕರ್ಮವು ಪುಷ್ಪದಂತೆ ಇರುವದರಿಂದ ಪುಷ್ಪವು ಎಂದಿದೆ. ಸೋಮವೇ ಮುಂತಾದ ಅವುಗಳೇ ಅಮೃತವಾದ

ಅಪ್ಪು. 'ಆ ಈ ಯಜುಸ್ಸುಗಳು ಈ ಯಜುರ್ವೇದವನ್ನು ಅಭಿತಪಿಸಿದವು' ಎಂದು ಮುಂತಾಗಿರುವದೆಲ್ಲವೂ (ಹಿಂದಿನ ಗ್ರಂಥಕ್ಕೆ) ಸಮಾನವು.

(ಉಪನಿಷತ್ತು)

ತದ್ವ್ಯುಕ್ಷರತ್ತದಾದಿತ್ಯಮಭಿತೋಽಶ್ರಯತ್ತದ್ವಾ ಏತದ್ಯದೇತದಾದಿತ್ಯಸ್ಯ ಶುಕ್ಲಗ್ಂ ರೂಪಮ್ ॥೩॥

೩. ಅದು ಹೊರಟುಹೋಯಿತು. ಅದು ಆದಿತ್ಯನ ಹತ್ತಿರದಲ್ಲಿ ಆಶ್ರಯಿಸಿಕೊಂಡಿತು. ಆದಿತ್ಯನ ಬಿಳಿಯ ರೂಪವಿದೆಯಲ್ಲ, ಇದೇ ಅದು.

ಆದಿತ್ಯನಲ್ಲಿ ಉಂಟಾದ ಎರಡನೆಯ ಅಮೃತ

(ಭಾಷ್ಯ)

೨೦೫. ಮಧು ಏತತ್ ಆದಿತ್ಯಸ್ಯ ದೃಶ್ಯತೇ ಶುಕ್ಲಂ ರೂಪಮ್ ॥

(ಭಾಷ್ಯಾರ್ಥ)

ಈ ಮಧುವು ಆದಿತ್ಯನ ಬಿಳಿಯ ರೂಪವಾಗಿ ಕಾಣಿಸುತ್ತಿದೆ.

ಮೂರನೆಯ ಅಧ್ಯಾಯ - ಮೂರನೆಯ ಖಂಡ

(ಆದಿತ್ಯೋಪಾಸನೆ)

ಮೂರನೆಯ ಅಮೃತದ ಉತ್ಪತ್ತಿ

(ಉಪನಿಷತ್ತು)

ಅಥ ಯೇಽಸ್ಯ ಪ್ರತ್ಯಞ್ಚೋ ರಶ್ಮಯಸ್ತಾ ಏವಾಸ್ಯ ಪ್ರತೀಚ್ಯೋ ಮಧುನಾಡ್ಯಃ ಸಾಮಾನ್ಯೇವ ಮಧುಕೃತಃ ಸಾಮವೇದ ಏವ ಪುಷ್ಪಂ ತಾ ಅಮೃತಾ ಆಪಃ ॥೧॥

ತಾನಿ ವಾ ಏತಾನಿ ಸಾಮಾನ್ಯೇತಗ್ಂ ಸಾಮವೇದಮಭ್ಯತಪಗ್ಂ ಸ್ತಸ್ಯಾಭಿತಪ್ತಸ್ಯ ಯಶಸ್ತೇಜ ಇನ್ದ್ರಿಯಂ ವೀರ್ಯಮನ್ನಾದ್ಯಗ್ಂ ರಸೋಽಜಾಯತ ॥೨॥

೧-೨ ಇನ್ನು ಈತನ ಪಶ್ಚಿಮದಿಕ್ಕಿನ ರಶ್ಮಿಗಳಿವೆಯಲ್ಲ, ಅವೇ ಇದರ ಪಶ್ಚಿಮದ ಮಧುನಾಡಿಗಳು ; ಸಾಮಗಳೇ ಮಧುವನ್ನುಂಟುಮಾಡುವ (ಭ್ರಮರ)ಗಳು ; ಸಾಮವೇದವೇ ಹೂವು. ಆ ಅಪ್ಪೇ ಅಮೃತವು. ಆ ಈ ಸಾಮಗಳು ಈ ಸಾಮವೇದವನ್ನು ಅಭಿತಪಿಸಿದವು. (ಹಾಗೆ) ಅಭಿತಪ್ತವಾದ ಆ (ಸಾಮವೇದದಿಂದ) ಯಶಸ್ಸು, ತೇಜವು, ಇಂದ್ರಿಯವು, ವೀರ್ಯವು, ಅನ್ನಾದ್ಯವು - ಎಂಬ ರಸವು ಉಂಟಾಯಿತು.

ಸಾಮಗಳಿಂದ ಉಂಟಾಗುವ ರಸ

(ಭಾಷ್ಯ)

೨೦೬. ಅಥ ಯೇಽಸ್ಯ ಪ್ರತ್ಯಙ್ಙೋ ರಶ್ಮಯಃ ಇತ್ಯಾದಿ ಸಮಾನಮ್ ॥

(ಭಾಷ್ಯಾರ್ಥ)

'ಇನ್ನು ಈತನ ಪಶ್ಚಿಮದಿಕ್ಕಿನ ರಶ್ಮಿಗಳಿವೆಯಲ್ಲ...' ಎಂದು ಮುಂತಾಗಿರುವ (ಗ್ರಂಥವು ಹಿಂದಿನ ಗ್ರಂಥಕ್ಕೆ) ಸಮಾನವು.

(ಉಪನಿಷತ್ತು)

ತದ್ವ್ಯಕ್ಷರತ್ತದಾದಿತ್ಯಮಭಿತೋಽಶ್ರಯತ್ತದ್ವಾ ಏತದ್ಯದೇತದಾದಿತ್ಯಸ್ಯ ಕೃಷ್ಣಗ್ಂ ರೂಪಮ್ ॥೩॥

೩. ಅದು ಹೊರಟುಹೋಯಿತು. ಅದು ಆದಿತ್ಯನನ್ನು ಹತ್ತಿರದಲ್ಲಿ ಆಶ್ರಯಿಸಿಕೊಂಡಿತು. ಆದಿತ್ಯನ ಕರಿಯ ರೂಪವಿದೆಯಲ್ಲ, ಇದೇ ಅದು.

ಆದಿತ್ಯನಲ್ಲಿ ಉಂಟಾದ ಮೂರನೆಯ ಅಮೃತ

(ಭಾಷ್ಯ)

೨೦೭. ತಥಾ ಸಾಮ್ನಾಂ ಮಧು ಏತತ್ ಆದಿತ್ಯಸ್ಯ ಕೃಷ್ಣಂ ರೂಪಮ್ ॥

(ಭಾಷ್ಯಾರ್ಥ)

ಹೀಗೆಯೇ ಸಾಮಗಳ ಮಧುವು ಈ ಆದಿತ್ಯನ ಕರಿಯ ರೂಪವು.

ಮೂರನೆಯ ಅಧ್ಯಾಯ - ನಾಲ್ಕನೆಯ ಖಂಡ

(ಆದಿತ್ಯೋಪಾಸನೆ)

ನಾಲ್ಕನೆಯ ಅಮೃತದ ಉತ್ಪತ್ತಿ

(ಉಪನಿಷತ್ತು)

ಅಥ ಯೇಽಸ್ಯೋದಞ್ಚೋ ರಶ್ಮಯಸ್ತಾ ಏವಾಸ್ಯೋದೀಚ್ಯೋ ಮಧುನಾಡ್ಯೋಽಥರ್ವಾಙ್ಗಿರಸ ಏವ ಮಧುಕೃತ ಇತಿಹಾಸ ಪುರಾಣಂ ಪುಷ್ಪಂ ತಾ ಅಮೃತಾ ಆಪಃ ॥೧॥

ತೇ ವಾ ಏತೇಽಥರ್ವಾಙ್ಗಿರಸ ಏತದಿತಿಹಾಸಪುರಾಣ-ಮಭ್ಯತಪಗ್ಂಸ್ತಸ್ಯಾಭಿತಪ್ತಸ್ಯ ಯಶಸ್ತೇಜನ್ದ್ರಿಯಂ ವೀರ್ಯ-ಮನ್ನಾದ್ಯಗ್ಂ ರಸೋಽಜಾಯತ ॥೨॥

೧-೨. ಇನ್ನು ಈತನ ಉತ್ತರರಶ್ಮಿಗಳಿವೆಯಲ್ಲ, ಅವೇ ಇದರ ಉತ್ತರ ಮಧುನಾಡಿಗಳು ; ಅಥರ್ವಾಂಗಿರಸ್ಸುಗಳೇ ಮಧುವನ್ನುಂಟುಮಾಡುವ (ಭ್ರಮರ)ಗಳು ; ಇತಿಹಾಸಪುರಾಣವು ಹೂವು ; ಆ ಆಪ್ಸೇ ಅಮೃತವು. ಆ ಈ ಅಥರ್ವಾಂಗಿರಸಗಳು ಈ ಇತಿಹಾಸಪುರಾಣವನ್ನು ಅಭಿತಪಿಸಿದವು. (ಹಾಗೆ) ಅಭಿತಪ್ತವಾದ (ಅದರಿಂದ) ಯಶಸ್ಸು, ತೇಜವು, ಇಂದ್ರಿಯ, ವೀರ್ಯ, ಅನ್ನಾದ್ಯ - ಎಂಬ ರಸವು ಉಂಟಾಯಿತು.

ಅಥರ್ವಾಙ್ಗಿರಸ್ಸುಗಳಿಂದಾಗುವ ರಸ

(ಭಾಷ್ಯ)

೨೦೮. 'ಅಥ ಯೇಽಸ್ಯ ಉದಞ್ಚೋ ರಶ್ಮಯಃ' ಇತ್ಯಾದಿ ಸಮಾನಮ್ । ಅಥರ್ವಾಙ್ಗಿರಸಃ ಅಥರ್ವಣಾ ಅಙ್ಗಿರಸಾ ಚ ದೃಷ್ಟಾ ಮನ್ತ್ರಾ ಅಥರ್ವಾಙ್ಗಿರಸಃ ಕರ್ಮಣಿ ಪ್ರಯುಕ್ತಾಃ ಮಧುಕೃತಃ । ಇತಿಹಾಸಪುರಾಣಂ ಪುಷ್ಪಮ್ ತಯೋಶ್ಚ ಇತಿಹಾಸಪುರಾಣಯೋಃ ಅಶ್ವಮೇಧೇ ಪಾರಿಪ್ಲವಾಸು ರಾತ್ರಿಷು ಕರ್ಮಾಙ್ಗತ್ವೇನ ವಿನಿಯೋಗಃ (ಪ್ರ)[1] ಸಿದ್ಧಃ ॥

1. ಇಲ್ಲಿ ಪ್ರ ಎಂಬ ಉಪಸರ್ಗವು ಬಿಟ್ಟುಹೋಗಿರಬಹುದೆಂದು ತೋರುತ್ತದೆ.

(ಭಾಷ್ಯಾರ್ಥ)

'ಇನ್ನು ಈತನ ಉತ್ತರರಶ್ಮಿಗಳಿವೆಯಲ್ಲ' ಎಂಬಿದೇ ಮುಂತಾದದ್ದು (ಹಿಂದಿನ ಗ್ರಂಥಕ್ಕೆ ಸಮಾನ(ವಾಗಿದೆ).

ಅಥರ್ವಾಂಗಿರಸ್ಸುಗಳು ಎಂದರೆ ಅಥರ್ವ, ಮತ್ತು ಅಂಗಿರಸ್ಸು- ಇವರು ಕಂಡುಹಿಡಿದ ಮಂತ್ರಗಳು, ಕರ್ಮದಲ್ಲಿ ಪ್ರಯುಕ್ತವಾದ (ಆ ಮಂತ್ರಗಳೇ) ಮಧುವನ್ನುಂಟುಮಾಡುವ(ತುಂಬಿಗಳು). ಇತಿಹಾಸಪುರಾಣವು ಪುಷ್ಪವು. ಆ ಇತಿಹಾಸಪುರಾಣಗಳನ್ನು ಅಶ್ವಮೇಧದಲ್ಲಿ ಪಾರಿಪ್ಲವದ ರಾತ್ರೆಗಳಲ್ಲಿ[1] ಕರ್ಮಾಂಗವಾಗಿ ವಿನಿಯೋಗಿಸುವದು ಪ್ರಸಿದ್ಧವಾಗಿದೆ.

(ಉಪನಿಷತ್ತು)

ತದ್ವ್ಯಕ್ಷರತ್ತದಾದಿತ್ಯಮಭಿತೋಽಶ್ರಯತ್ತದ್ವಾ ಏತದ್ಯದೇತದಾದಿತ್ಯಸ್ಯ ಪರಂ ಕೃಷ್ಣಗ್ಂ ರೂಪಮ್ ॥೩॥

೩. ಅದು ಹೊರಟುಹೋಯಿತು. ಆದಿತ್ಯನನ್ನು ಹತ್ತಿರದಲ್ಲಿ ಆಶ್ರಯಿಸಿಕೊಂಡಿತು. ಆದಿತ್ಯನ ಪರಕೃಷ್ಣರೂಪವಿದೆಯಲ್ಲ, ಇದೇ ಅದು.

ಆದಿತ್ಯನಲ್ಲಿ ಉಂಟಾಗಿರುವ ನಾಲ್ಕನೆಯ ಅಮೃತ

(ಭಾಷ್ಯ)

೨೦೯. ಮಧು ಏತದಾದಿತ್ಯಸ್ಯ ಪರಂ ಕೃಷ್ಣಂ ರೂಪಮ್ । ಅತಿಶಯೇನ ಕೃಷ್ಣಮ್ ಇತ್ಯರ್ಥಃ॥

(ಭಾಷ್ಯಾರ್ಥ)

(ಇಲ್ಲಿ) ಮಧು (ಯಾವದೆಂದರೆ) ಈ ಆದಿತ್ಯನ ಪರಕೃಷ್ಣರೂಪವು, ಹೆಚ್ಚಾಗಿ ಕಪ್ಪಾಗಿರುವ ರೂಪವಿದೆಯಲ್ಲ (ಅದು) ಎಂದರ್ಥ.

1. ಅಶ್ವಮೇಧಯಾಗದಲ್ಲಿ ಪುತ್ರಾಮಾತ್ಯಸಹಿತನಾದ ರಾಜನಿಗೆ ಹೇಳಬೇಕಾದ ಕಥೆಗಳನ್ನು ಪಾರಿಪ್ಲವವೆನ್ನುವರು. ಸೂ. ಭಾ. ೩-೪-೨೩ (ಭಾ. ಭಾ. ೪೬೬) ನೋಡಿ.

ಮೂರನೆಯ ಅಧ್ಯಾಯ - ಐದನೆಯ ಖಂಡ

(ಆದಿತ್ಯೋಪಾಸನೆ)

ಐದನೆಯ ಅಮೃತದ ಉತ್ಪತ್ತಿ

(ಉಪನಿಷತ್ತು)

ಅಥ ಯೇಽಸ್ಯೋರ್ಧ್ವಾ ರಶ್ಮಯಸ್ತಾ ಏವಾಸ್ಯೋರ್ಧ್ವಾ ಮಧು ನಾಡ್ಯೋ ಗುಹ್ಯಾ ಏವಾದೇಶಾ ಮಧುಕೃತೋ ಬ್ರಹ್ಮೈವ ಪುಷ್ಪಂ ತಾ ಅಮೃತಾ ಆಪಃ ॥೧॥

ತೇ ವಾ ಏತೇ ಗುಹ್ಯಾ ಆದೇಶಾ ಏತದ್ಬ್ರಹ್ಮಾಭ್ಯತಪಗ್ಂಸ್ತಸ್ಯಾಭಿತಪ್ತಸ್ಯ ಯಶಸ್ತೇಜ ಇನ್ದ್ರಿಯಂ ವೀರ್ಯಮನ್ನಾದ್ಯಗ್ಂ ರಸೋಽಜಾಯತ ॥೨॥

೧-೨. ಇನ್ನು ಈತನ ಮೇಲುಗಡೆಯ ರಶ್ಮಿಗಳಿರುವವಲ್ಲ, ಅವೇ ಮೇಲಿನ ಮಧುನಾಡಿಗಳು ; ಗುಹ್ಯಾದೇಶಗಳೇ ಮಧುವನ್ನುಂಟುಮಾಡುವ (ಭ್ರಮರ)ಗಳು ; ಬ್ರಹ್ಮವೇ ಪುಷ್ಪವು, ಆ ಅಪ್ಪೇ ಅಮೃತವು. ಆ ಈ ಗುಹ್ಯಾದೇಶಗಳು ಈ ಬ್ರಹ್ಮವನ್ನು ಅಭಿತಪಿಸಿದವು. (ಹಾಗೆ) ಅಭಿತಪ್ತವಾದ ಆ (ಬ್ರಹ್ಮ)ದಿಂದ ಯಶಸ್ಸು, ತೇಜ, ಇಂದ್ರಿಯ, ವೀರ್ಯ, ಅನ್ನಾದ್ಯ - ಎಂಬ ರಸವು ಉಂಟಾಯಿತು.

ಗುಹ್ಯಾದೇಶಗಳಿಂದಾದ ರಸ

೨೧೦. ಅಥ ಯೇಽಸ್ಯ ಊರ್ಧ್ವಾ ರಶ್ಮಯ ಇತ್ಯಾದಿ ಸಮಾನಮ್ । ಗುಹ್ಯಾ ಗೋಪ್ಯಾ ರಹಸ್ಯಾ ಏವ ಆದೇಶಾಃ ಲೋಕದ್ವಾರೀಯಾದಿವಿಧಯಃ, ಉಪಾಸನಾನಿ ಚ ಕರ್ಮಾಙ್ಗವಿಷಯಾಣಿ ಮಧುಕೃತಃ । ಬ್ರಹ್ಮೈವ ಶಬ್ದಾದಿಕಾರಾತ್ ಪ್ರಣವಾಖ್ಯಂ ಪುಷ್ಪಮ್ । ಸಮಾನಮನ್ಯತ್ ॥

(ಭಾಷ್ಯಾರ್ಥ)

'ಇನ್ನು ಈತನ ಮೇಲುಗಡೆಯಿರುವ ರಶ್ಮಿಗಳಿರುವವಲ್ಲ' ಎಂಬುದೇ

ಮುಂತಾದದ್ದು (ಹಿಂದಿನ ಗ್ರಂಥಕ್ಕೆ) ಸಮಾನ(ವಾಗಿದೆ). ಗುಹ್ಯವಾದ, ಎಂದರೆ ಗೋಪ್ಯವಾಗಿರುವ, ಗುಟ್ಟಾಗಿರುವ ಆದೇಶಗಳೇ, ಎಂದರೆ ಲೋಕದ್ವಾರಕ್ಕೆ ಸಂಬಂಧ ಪಟ್ಟಿರುವದೇ ಮುಂತಾದ ವಿಧಿಗಳು[1] ಕರ್ಮಾಂಗವಿಷಯವಾದ ಉಪಾಸನಗಳೂ[2] (ಇಲ್ಲಿ) ಮಧುವನ್ನುಂಟುಮಾಡುವ (ತುಂಬಿಗಳು). ಬ್ರಹ್ಮವೇ ಎಂದರೆ (ಇದು) ಶಬ್ದದ ಪ್ರಕರಣವಾಗಿರುವದರಿಂದ ಪ್ರಣವವೆಂಬ (ಬ್ರಹ್ಮವೇ) ಹೂವು. ಮಿಕ್ಕದ್ದೆಲ್ಲವೂ ಸಮಾನವು.

(ಉಪನಿಷತ್ತು)

ತದ್ವ್ಯಕ್ಷರತ್ತದಾದಿತ್ಯಮಭಿತೋಽಶ್ರಯತ್ತದ್ವಾ ಏತದ್ಯದೇತದಾದಿತ್ಯಸ್ಯ ಮಧ್ಯೇ ಕ್ಷೋಭತ ಇವ ॥೩॥

೩. ಅದು ಹೊರಟುಹೋಯಿತು. ಅದು ಆದಿತ್ಯನನ್ನು ಹತ್ತಿರದಲ್ಲಿ ಆಶ್ರಯಿಸಿಕೊಂಡಿತು. ಆದಿತ್ಯನ ನಡುವೆ ಹರಿದಾಡುವಂತೆ ಕಾಣುತ್ತಿರುವದಲ್ಲ, ಇದೇ ಅದು.

ಆದಿತ್ಯನಲ್ಲಿ ಉಂಟಾಗಿರುವ ಐದನೆಯ ಅಮೃತ

(ಭಾಷ್ಯ)

೨೧೧. ಮಧು ಏತತ್ ಆದಿತ್ಯಸ್ಯ ಮಧ್ಯೇ ಕ್ಷೋಭತ ಇವ ಸಮಾಹಿತದೃಷ್ಟೇರ್ದೃಶ್ಯತೇ ಸಂಚಲತೀವ॥

(ಭಾಷ್ಯಾರ್ಥ)

ಆದಿತ್ಯನ ನಡುವೆ ಹರಿದಾಡುತ್ತಿರುವಂತೆ ಚಲಿಸುತ್ತಿರುವಂತೆ ಅಲ್ಲಿಯೇ ನೆಟ್ಟ ದೃಷ್ಟಿಯವನಿಗೆ ಕಾಣಿಸುತ್ತದೆಯಲ್ಲ, ಇದೇ (ಆ) ಮಧು.

ಅಮೃತಗಳ ಸ್ತುತಿ

(ಉಪನಿಷತ್ತು)

ತೇ ವಾ ಏತೇ ರಸಾನಾಗ್ಂ ರಸಾ ವೇದಾ ಹಿ ರಸಾಸ್ತೇಷಾಮೇತೇ ರಸಾಸ್ತಾನಿ ವಾ ಏತಾನ್ಯಮೃತಾನಾಮಮೃತಾನಿ ವೇದಾ ಹ್ಯಮೃತಾ-ಸ್ತೇಷಾಮೇತಾನ್ಯಮೃತಾನಿ ॥೪॥

1. ಹಿಂದಿನ ಅಧ್ಯಾಯದಲ್ಲಿ೨೪ನೆಯ ಖಂಡದಲ್ಲಿಹೇಳಿರುವ ರಹಸ್ಯಗಳು.
2. ಇದುವರೆಗೆ ಸಾಮಾವಯವಗಳ ವಿಷಯವಾದ ಉಪಾಸನೆಗಳನ್ನು ಹೇಳಿದೆಯಷ್ಟೆ, ಅವೆಲ್ಲ ಗುಹ್ಯಾದೇಶಗಳೇ.

೪. ಆ ಇವು ರಸಗಳ ರಸಗಳು. ವೇದಗಳು ರಸಗಳಷ್ಟೆ, ಅವುಗಳಿಗೆ ಇವು ರಸಗಳು. ಆ ಇವು ಅಮೃತಗಳ ಅಮೃತಗಳು. ವೇದಗಳು ಅಮೃತ ಗಳಷ್ಟೆ, ಅವುಗಳಿಗೆ ಇವು ಅಮೃತಗಳು.

ರೋಹಿತಾದಿಗಳ ಸ್ತುತಿಯ ದ್ವಾರದಿಂದ ಕರ್ಮಸ್ತುತಿ

(ಭಾಷ್ಯ)

೨೧೨. ತೇ ವಾ ಏತೇ ಯಥೋಕ್ತಾ ರೋಹಿತಾದಿರೂಪವಿಶೇಷಾಃ ರಸಾನಾಂ ರಸಾಃ । ಕೇಷಾಂ ರಸಾನಾಮಿತಿ ? ಆಹ । ವೇದಾ ಹಿ ಯಸ್ಮಾತ್ ಲೋಕನಿಷ್ಪನ್ನತ್ವಾತ್ ಸಾರಾಃ ಇತಿ ರಸಾಃ । ತೇಷಾಂ ರಸಾನಾಂ ಕರ್ಮಭಾವಮಾಪನ್ನಾನಾಮಪಿ ಏತೇ ರೋಹಿತಾದಿವಿಶೇಷಾಃ ರಸಾಃ । ಅತ್ಯನ್ತಸಾರಭೂತಾ ಇತ್ಯರ್ಥಃ । ತಥಾ ಅಮೃತಾನಾಮ್ ಅಮೃತಾನಿ । ವೇದಾ ಹಿ ಅಮೃತಾಃ ನಿತ್ಯತ್ವಾತ್ । ತೇಷಾಮ್ ಏತಾನಿ ರೋಹಿತಾದೀನಿ ರೂಪಾಣಿ ಅಮೃತಾನಿ । ರಸಾನಾಂ ರಸಾ ಇತ್ಯಾದಿ ಕರ್ಮಸ್ತುತಿರೇಷಾ ಯಸ್ಯೈವಂವಿಶಿಷ್ಟಾನಿ ಅಮೃತಾನಿ ಫಲಮಿತಿ ॥

(ಭಾಷ್ಯಾರ್ಥ)

ಆ ಈ ರೋಹಿತಾದಿರೂಪವಿಶೇಷಗಳು ರಸಗಳ ರಸಗಳು. ಯಾವ ರಸಗಳ (ರಸ)ಗಳು ? ಎಂದರೆ (ಶ್ರುತಿ) ಹೇಳುತ್ತದೆ. (ಹಿ=ಯಸ್ಮಾತ್) ವೇದಗಳು ಲೋಕಗಳಿಂದ ಹೊರಟಿರುವದರಿಂದ[1] (ಅವುಗಳ) ಸಾರವಾಗಿರುತ್ತವೆಯಾಗಿ ರಸಗಳು ಕರ್ಮಭಾವವನ್ನು ಹೊಂದಿದ[2] ಆ ರಸಗಳಿಗೂ ಈ ಕೆಂಪು (ರೂಪ)ವೇ ಮುಂತಾದವುಗಳು ರಸಗಳು. ಅತ್ಯಂತಸಾರಭೂತವಾದವುಗಳು ಎಂದರ್ಥ ಮತ್ತು ಅಮೃತಗಳ ಅಮೃತಗಳು. ವೇದಗಳು ನಿತ್ಯವಾಗಿರುವದರಿಂದ ಅಮೃತಗಳಷ್ಟೆ ? ಅವುಗಳಿಗೂ ಈ ಕೆಂಪು ಮುಂತಾದ ರೂಪವಿಶೇಷಗಳು ಅಮೃತಗಳು.

'ರಸಗಳಿಗೂ ರಸಗಳು' - ಎಂದು ಮುಂತಾಗಿ ಇಂಥ ವಿಶಿಷ್ಟವಾದ ಅಮೃತಫಲಗಳಿವೆ ಎಂದು - ಕರ್ಮವನ್ನು ಸ್ತುತಿಗೈದಿರುವದಿದು.

1. ೨-೨೩-೨ರಲ್ಲಿ ಇದನ್ನು ಹೇಳಿದೆ.
2. ಕರ್ಮಾಂಗಭಾವವನ್ನು ಹೊಂದಿದ ಎಂದರ್ಥ. ಕರ್ಮಾಙ್ಗಭಾವಮಾಪನ್ನಾನಾಮ್ ಎಂದೇ ಮೂಲಭಾಷ್ಯದಲ್ಲಿತ್ತೋ ಏನೋ.

ಮೂರನೆಯ ಅಧ್ಯಾಯ - ಆರನೆಯ ಖಂಡ

(ಆದಿತ್ಯೋಪಾಸನೆ)

ವಸುಗಳಿಗೆ ಪ್ರಥಮಾಮೃತದಿಂದ ತೃಪ್ತಿ

(ಉಪನಿಷತ್ತು)

ತದ್ಯತ್ಪ್ರಥಮಮಮೃತಂ ತದ್ವಸವ ಉಪಜೀವನ್ತ್ಯಗ್ನಿನಾ ಮುಖೇನ ನ ವೈ ದೇವಾ ಅಶ್ನನ್ತಿ ನ ಪಿಬನ್ತ್ಯೇತದೇವಾಮೃತಂ ದೃಷ್ಟ್ವಾ ತೃಪ್ಯನ್ತಿ ॥೧॥

೧. ಅವುಗಳೊಳಗೆ ಒಂದನೆಯ ಅಮೃತವಿದೆಯಲ್ಲ, ಅದನ್ನು ವಸುಗಳು ಅಗ್ನಿಮುಖರಾಗಿ ಉಪಜೀವಿಸಿಕೊಂಡಿರುತ್ತಾರೆ. ದೇವತೆಗಳು ಉಣ್ಣುವದಿಲ್ಲ, ಕುಡಿಯುವದಿಲ್ಲ; ಈ ಅಮೃತವನ್ನೇ ಕಂಡು ತೃಪ್ತರಾಗುತ್ತಾರೆ.

(ಭಾಷ್ಯ)

೨೧೩. ತತ್ ತತ್ರ ಯತ್ ಪ್ರಥಮಮಮೃತಂ ರೋಹಿತರೂಪಲಕ್ಷಣಮ್, ತದ್ ವಸವಃ ಪ್ರಾತಃಸವನೇಶಾನಾಃ ಉಪಜೀವನ್ತಿ ಅಗ್ನಿನಾ ಮುಖೇನ ಅಗ್ನಿನಾ ಪ್ರಧಾನಭೂತೇನ । ಅಗ್ನಿಪ್ರಧಾನಾಃ ಸನ್ತ ಉಪಜೀವನ್ತಿ ಇತ್ಯರ್ಥಃ । ''ಅನ್ನಾದ್ಯಂ ರಸೋಽಜಾಯತ'' (೩-೨-೩..) ಇತಿ ವಚನಾತ್ ಕಬಲಗ್ರಾಹಮ್ ಅಶ್ನನ್ತಿ ಇತಿ ಪ್ರಾಪ್ತಮ್ । ತತ್ ಪ್ರತಿಷಿಧ್ಯತೇ ನ ವೈ ದೇವಾಃ ಅಶ್ನನ್ತಿ ನ ಪಿಬನ್ತೀತಿ । ಕಥಂ ತರ್ಹಿ ಉಪಜೀವನ್ತೀತಿ ? ಉಚ್ಯತೇ । ಏತದೇವ ಹಿ ಯಥೋಕ್ತಮ್ ಅಮೃತಂ ರೋಹಿತಂ ರೂಪಂ ದೃಷ್ಟ್ವಾ ಉಪಲಭ್ಯ ಸರ್ವಕರಣೈಃ ಅನುಭೂಯ ತೃಪ್ಯನ್ತಿ । ದೃಶೇಃ ಸರ್ವಕರಣದ್ವಾರೋಪಲಬ್ಧ್ಯರ್ಥತ್ವಾತ್ । ನನು ರೋಹಿತಂ ರೂಪಂ ದೃಷ್ಟ್ವಾ ಇತ್ಯುಕ್ತಮ್ । ಕಥಮ್ ಅನ್ಯೇನ್ದ್ರಿಯವಿಷಯತ್ವಂ ರೂಪಸ್ಯೇತಿ ? ನ । ಯಶಆದೀನಾಂ ಶ್ರೋತ್ರಾದಿಗಮ್ಯತ್ವಾತ್ । ಶ್ರೋತ್ರಗ್ರಾಹ್ಯಂ ಯಶಃ । ತೇಜೋರೂಪಂ ಚಾಕ್ಷುಷಮ್ । ಇನ್ದ್ರಿಯಂ ವಿಷಯಗ್ರಹಣಕಾರ್ಯಾನುಮೇಯಂ ಕರಣಸಾಮರ್ಥ್ಯಮ್ । ವೀರ್ಯಂ ಬಲಂ ದೇಹಗತ ಉತ್ಸಾಹಃ ಪ್ರಾಣವತ್ತಾ । ಅನ್ನಾದ್ಯಂ ಪ್ರತ್ಯಹಮ್ ಉಪಜೀವ್ಯಮಾನಂ ಶರೀರಸ್ಥಿತಿಕರಂ ಯದ್ ಭವತಿ । ರಸೋ ಹಿ ಏವಮಾತ್ಮಕಃ ಸರ್ವಃ । ಯಂ ದೃಷ್ಟ್ವಾ ತೃಪ್ಯನ್ತಿ ಸರ್ವೇ । ದೇವಾ ದೃಷ್ಟ್ವಾ ತೃಪ್ಯನ್ತಿ ಇತಿ ಏತತ್ಸರ್ವಂ ಸ್ವಕರಣೈರನುಭೂಯ ತೃಪ್ಯನ್ತಿ ಇತ್ಯರ್ಥಃ । ಆದಿತ್ಯಸಂಶ್ರಯಾಃ ಸನ್ತೋ ವೈಗನ್ಧ್ಯಾದಿದೇಹಕರಣದೋಷ-ರಹಿತಾಶ್ಚ॥

(ಭಾಷ್ಯಾರ್ಥ)

(ತತ್=ತತ್ರ) ಅವುಗಳೊಳಗೆ ಕೆಂಪುಬಣ್ಣದ ಸ್ವರೂಪವುಳ್ಳ ಒಂದನೆಯ ಅಮೃತ ವಿದೆಯಲ್ಲ, ಅದನ್ನು ಪ್ರಾತಃಸವನಕ್ಕೆ ಒಡೆಯರಾದ ವಸುಗಳು ಉಪಜೀವಿಸಿಕೊಂಡಿರುತ್ತಾರೆ ; ಅಗ್ನಿಮುಖರಾಗಿ ಎಂದರೆ ಅಗ್ನಿಯನ್ನೇ ಪ್ರಧಾನನನ್ನಾಗಿಮಾಡಿಕೊಂಡು, ಅಗ್ನಿಯನ್ನು ಮುಂದಾಳಾಗಿ ಮಾಡಿಕೊಂಡು ಉಪಜೀವಿಸುತ್ತಾರೆ ಎಂದರ್ಥ.

'ಅನ್ನಾದ್ಯವೆಂಬ ರಸವು ಉಂಟಾಯಿತು' (೩-೨-೩...) ಎಂದು ಹೇಳಿರುವದರಿಂದ ತುತ್ತುಮಾಡಿ ತೆಗೆದುಕೊಂಡು ಊಟಮಾಡುತ್ತಾರೆ ಎಂದಾಯಿತಷ್ಟೆ ; ಅದನ್ನು-ದೇವತೆಗಳು ಉಣ್ಣುವದೂ ಇಲ್ಲ, ಕುಡಿಯುವದೂ ಇಲ್ಲ - ಎಂದು (ಶ್ರುತಿಯು) ಅಲ್ಲಗಳೆಯುತ್ತದೆ. ಹಾಗಾದರೆ (ಅವರು) ಮತ್ತೆ ಹೇಗೆ (ಅದನ್ನು) ಉಪಜೀವಿಸಿಕೊಂಡಿರುತ್ತಾರೆ ? ಎಂದರೆ (ಶ್ರುತಿ) ಹೇಳುತ್ತದೆ. ಮೇಲೆ ಹೇಳಿದ ಕೆಂಪುಬಣ್ಣವೆಂಬ ಈ ಅಮೃತವನ್ನೇ ಕಂಡು, ಸರ್ವಕರಣಗಳಿಂದಲೂ ಅನುಭವಿಸಿ ತೃಪ್ತರಾಗುತ್ತಾರೆ (ಎಂದರ್ಥ). ಏಕೆಂದರೆ ದೃಶ್ (ನೋಡು ಎಂಬ ಧಾತುವಿಗೆ) ಎಲ್ಲಾ ಕರಣಗಳ ಮೂಲಕವೂ ಅನುಭವಿಸುವದು ಎಂದೇ ಅರ್ಥ.

(ಆಕ್ಷೇಪ) :-'ರೋಹಿತರೂಪವನ್ನು ಕಂಡು' ಎಂದು ಹೇಳಿರುತ್ತದೆ. ರೂಪವು ಮಿಕ್ಕ ಇಂದ್ರಿಯಗಳಿಗೂ ಹೇಗೆ ವಿಷಯ(ವಾದೀತು) ?

(ಪರಿಹಾರ) :- ಹಾಗಲ್ಲ. ಏಕೆಂದರೆ ಯಶಸ್ಸೇ ಮುಂತಾದವು ಶ್ರೋತ್ರಾದಿಗಳಿಂದ ಅರಿತುಕೊಳ್ಳತಕ್ಕವಾಗಿವೆ. ಯಶಸ್ಸು ಶ್ರೋತ್ರದಿಂದ ಗ್ರಹಿಸತಕ್ಕದ್ದು ; ತೇಜಸ್ಸೆಂಬ ರೂಪವು ಚಕ್ಷುಸ್ಸಿಗೆ ಸಂಬಂಧಪಟ್ಟದ್ದು. ಇಂದ್ರಿಯವೆಂಬುದು ವಿಷಯಗಳನ್ನು ಗ್ರಹಿಸುವದೆಂಬ ಕಾರ್ಯದಿಂದ ಅನುಮೇಯಿಸಿ (ಅರಿತುಕೊಳ್ಳ)ಬೇಕಾಗಿರುವ ಕರಣಸಾಮರ್ಥ್ಯವು ; ವೀರ್ಯವೆಂಬುದು ಬಲವು, ದೇಹದಲ್ಲಿರುವ ಉತ್ಸಾಹವು, ಪ್ರಾಣವುಳ್ಳವನಾಗಿರುವದು ; ಅನ್ನಾದ್ಯವೆಂಬುದು ಪ್ರತಿದಿನವೂ ತಿಂದು ಜೀವಿಸಿದರೆ ಶರೀರವು ಇದ್ದುಕೊಂಡಿರುವದಕ್ಕೆ ಕಾರಣವಾಗಿರುವದಲ್ಲ, (ಅದು). ಈ ಎಲ್ಲಾ ರೂಪದಿಂದಲೂ ಇರುವದೇ ರಸವು ; ಅದನ್ನು ಕಂಡು ಎಲ್ಲಾ (ದೇವತೆಗಳೂ) ತೃಪ್ತರಾಗುತ್ತಾರೆ. (ಆದ್ದರಿಂದ) 'ದೇವತೆಗಳು ಕಂಡು ತೃಪ್ತರಾಗುತ್ತಾರೆ' ಎಂದರೆ ಇದೆಲ್ಲವನ್ನೂ ತಮ್ಮ ಕರಣಗಳಿಂದ ಅನುಭವಿಸಿ ತೃಪ್ತರಾಗುತ್ತಾರೆ ಎಂದರ್ಥ ; ಆದಿತ್ಯನನ್ನು ಆಶ್ರಯಿಸಿಕೊಂಡವರಾಗಿ ದುರ್ಗಂಧವೇ ಮುಂತಾದ ದೇಹಕರಣಗಳ ದೋಷಗಳೂ ಇಲ್ಲದವರಾಗಿ (ಇದನ್ನು ಅನುಭವಿಸಿ ತೃಪ್ತರಾಗುತ್ತಿದ್ದಾರೆ ಎಂದರ್ಥ).[1]

---

1. ತಿಂದೂ-ಕುಡಿದೂ-ಮಾಡುವ ಜೀವರುಗಳಿಗೆ ದೇಹಕರಣಗಳ ದುರ್ವಾಸನೆಯೇ ಮುಂತಾದ ದೋಷಗಳಿರುವಂತೆ ವಸ್ವಾದಿಗಳಲ್ಲಿರುವದಿಲ್ಲ ಎಂಬುದು ವಾಕ್ಯಾರ್ಥ.

(ಉಪನಿಷತ್ತು)

ತ ಏತದೇವ ರೂಪಮಭಿಸಂವಿಶನ್ತ್ಯೇತಸ್ಮಾದ್ರೂಪಾದುದ್ಯನ್ತಿ ॥೨॥

೨. ಅವರು ಈ ರೂಪವನ್ನೇ ಅಭಿಸಂವೇಶನಮಾಡುತ್ತಾರೆ, ಈ ರೂಪದಿಂದಲೇ ಮೇಲಕ್ಕೇಳುತ್ತಾರೆ.

ವಸುಗಳಿಗೆ ಪ್ರಾತಃಸವನಕಾಲದಲ್ಲಿ ಮಾತ್ರ ಭೋಗ

(ಭಾಷ್ಯ)

೨೧೪. ಕಿಂ ತೇ ನಿರುದ್ಯಮಾ ಅಮೃತಮ್ ಉಪಜೀವನ್ತಿ ? ನ । ಕಥಂ ತರ್ಹಿ, ಏತದೇವ ರೂಪಮ್ ಅಬಿಲಕ್ಷ್ಯ ಅಧುನಾ ಭೋಗಾವಸರೋ ನಾಸ್ಮಾಕಮ್ ಇತಿ ಬುದ್ಧ್ವಾ ಅಭಿಸಂವಿಶನ್ತಿ ಉದಾಸತೇ । ಯದಾ ಚೈ[1]ತಸ್ಯ ಅಮೃತಸ್ಯ ಭೋಗಾವಸರೋ ಭವೇತ್ ತದಾ ಏತಸ್ಮಾತ್ (ರೂಪಾತ್)[2] ಅಮೃತಾತ್ । ಅಮೃತಭೋಗನಿಮಿತ್ತಮ್ ಇತ್ಯರ್ಥಃ । ಏತಸ್ಮಾತ್ ರೂಪಾತ್ ಉದ್ಯನ್ತಿ ಉತ್ಸಾಹವನ್ತೋ ಭವನ್ತಿ ಇತ್ಯರ್ಥಃ । ನ ಹಿ ಅನುತ್ಸಾಹವತಾಮ್ ಅನನುತಿಷ್ಠತಾಮ್ ಅಲಸಾನಾಂ ಭೋಗಪ್ರಾಪ್ತಿಃ ಲೋಕೇ ದೃಷ್ಟಾ ॥

(ಭಾಷ್ಯಾರ್ಥ)

ಅವರು(ಯಾವ) ಪ್ರಯತ್ನವೂ ಇಲ್ಲದೆ ಅಮೃತವನ್ನು ಉಪಜೀವಿಸಿಕೊಂಡಿರುತ್ತಾರೇನು ? ಎಂದರೆ ಇಲ್ಲ. ಮತ್ತೆ ಹೇಗೆಂದರೆ, ಇದೇ ರೂಪವನ್ನು ಲಕ್ಷ್ಯದಲ್ಲಿಟ್ಟು, ಈಗ ನಮಗೆ ಭೋಗಕ್ಕೆ ಕಾಲವಲ್ಲವೆಂದು ಅರಿತುಕೊಂಡು[3] ಅಭಿಸಂವೇಶನಮಾಡುವರು, ಉದಾಸೀನರಾಗುತ್ತಾರೆ. ಮತ್ತು ಯಾವಾಗ ಈ ಅಮೃತದ ಭೋಗದ ಕಾಲವು ಆಗುವದೋ, ಆಗ ಈ (ರೂಪದಿಂದ) ಅಮೃತದಿಂದ, (ಈ) ಅಮೃತಭೋಗದ ನಿಮಿತ್ತವಾಗಿ ಎಂದರ್ಥ.[4] ಈ

---

1. ಚಶಬ್ದವಿರುವ ಪಾಠವೇ ವಾಶಬ್ದಯುಕ್ತಪಾಠಕ್ಕಿಂತ ಮೇಲು.
2. ಅನುವಾದದ ಟಿಪ್ಪಣಿಯನ್ನುನೋಡಿ.
3. ಅಭಿಸಂವಿಶನ್ತಿ- ಎಂಬಲ್ಲಿ ಅಭಿ ಎಂಬ ಉಪಸರ್ಗದ ಬಲದಿಂದ, ತಮ್ಮ ತಮ್ಮ ಸವನಕಾಲವು ಬರುವವರೆಗೂ ಸುಮ್ಮನಿರುತ್ತಾರೆ ಎಂಬರ್ಥವು ಹೊರಡುತ್ತದೆ ಎಂದು ಭಾವ.
4. ಇಲ್ಲಿ 'ಅಮೃತಾತ್ ಅಮೃತಭೋಗನಿಮಿತ್ತಮ್ ಇತ್ಯರ್ಥಃ ।' ಎಂದಿಷ್ಟೇ ಇರುವದರಿಂದ ಇಲ್ಲಿ ಅಮೃತವೆಂಬ ಮಾತಿನ ವ್ಯಾಖ್ಯಾನಮಾಡಿದೆ ಎಂತ ತೋರುತ್ತದೆ ; ಆದರೆ ಉಪನಿಷತ್ತಿನಲ್ಲಿ ರೂಪಾತ್ ಎಂದೇ ಇದೆ, ಅಮೃತಾತ್ ಎಂದಿಲ್ಲ, ಆದ್ದರಿಂದ ಏತಸ್ಮಾತ್ ರೂಪಾತ್ ಅಮೃತಾತ್ ಎಂದು ಮೂಲಭಾಷ್ಯದಲ್ಲಿದ್ದ ಪಂಚಮೀವಿಭಕ್ತಿಯು →

ರೂಪ(ನಿಮಿತ್ತ)ದಿಂದ[1] ಮೇಲಕ್ಕೇಳುತ್ತಾರೆ, ಉತ್ಸಾಹವಂತರಾಗುತ್ತಾರೆ ಎಂದರ್ಥ. ಉತ್ಸಾಹವಿಲ್ಲದವರಿಗೆ, (ಏನೂ) ಮಾಡದೆ ಆಲಸರಾಗಿ ಇರುವವರಿಗೆ ಲೋಕದಲ್ಲಿ ಭೋಗವು ಪ್ರಾಪ್ತವಾಗುವದು ಕಂಡಿಲ್ಲವಷ್ಟೆ[2] ?

ಪ್ರಥಮಾಮೃತೋಪಾಸಕನಿಗೆ ಫಲ

(ಉಪನಿಷತ್ತು)

ಸ ಯ ಏತದೇವಮಮೃತಂ ವೇದ ವಸೂನಾಮೇವೈಕೋ ಭೂತ್ವಾಗ್ನಿನೈವ ಮುಖೇನೈತದೇವಾಮೃತಂ ದೃಷ್ಟ್ವಾ ತೃಪ್ಯತಿ ಸ ಏತದೇವ ರೂಪಮಭಿಸಂವಿಶತ್ಯೇತಸ್ಮಾದ್ ರೂಪಾದುದೇತಿ ॥೩॥

೩. ಯಾವನು ಈ ಅಮೃತವನ್ನು ಹೀಗೆಂದು ಅರಿತುಕೊಳ್ಳುವನೋ, ಅವನು ವಸುಗಳಲ್ಲಿಯೇ ಒಂದಾಗಿ ಅಗ್ನಿಮುಖನಾಗಿಯೇ ಇದೇ ಅಮೃತವನ್ನು ಕಂಡು ತೃಪ್ತನಾಗುತ್ತಾನೆ. ಅವನು ಇದೇ ರೂಪವನ್ನು ಅಭಿಸಂವೇಶನಮಾಡುತ್ತಾನೆ. ಈ ರೂಪದಿಂದಲೇ ಮೇಲಕ್ಕೇಳುತ್ತಾನೆ.

ಉಪಾಸನಾಪ್ರಕಾರವೂ ಫಲವೂ

(ಭಾಷ್ಯ)

೨೧೫. ಸ ಯಃ ಕಶ್ಚಿತ್ ಏತದೇವಂ ಯಥೋದಿತಮ್ ಋಜ್ವಧುಕರತಾಪರಸಸಂಕ್ಷರಣಮ್ ಋಗ್ವೇದವಿಹಿತಕರ್ಮಪುಷ್ಟ್ಯಾತ್ ತಸ್ಯ ಚ ಆದಿತ್ಯಸಂಶ್ರಯಣಂ ರೋಹಿತರೂಪತ್ವಂ ಚ ಅಮೃತಸ್ಯ ಪ್ರಾಚೀದಿಗ್ಗತರಶ್ಮಿನಾಡೀ ಸಂಸ್ಥಾಂ ವಸುದೇವಭೋಗ್ಯತಾಂ ತದ್ವಿದಶ್ಚ ವಸುಭಿಃ ಸಹೈಕತಾಂ ಗತ್ವಾ ಅಗ್ನಿನಾ ಮುಖೇನ ಉಪಜೀವನಂ ದರ್ಶನಮಾತ್ರೇಣ ತೃಪ್ತಿಂ ಚ ಸ್ವಭೋಗಾವಸರೇ ಉದ್ಯಮನಂ ತತ್ಕಾಲಾಪಾಯೇ ಚ ಸಂವೇಶನಂ ವೇದ, ಸೋಽಪಿ ವಸುವತ್ ಸರ್ವಂ ತಥೈವ ಅನುಭವತಿ ॥

ನಿಮಿತ್ತಾರ್ಥದಲ್ಲಿ ಬಂದಿದೆ ಎಂದು ಸೂಚಿಸುವದಕ್ಕೇ ಈ ವ್ಯಾಖ್ಯಾನಭಾಷ್ಯವು ಬಂದಿದೆ ಎಂದು ಕಲ್ಪಿಸಿದರೆ ಸಮಂಜಸವಾಗುತ್ತದೆ.

1. ಇದು ವ್ಯಾಖ್ಯಾನಮಾಡಿದ್ದರೆ ಅನುವಾದಮಾತ್ರ.
2. ಈ ಲೋಕಪ್ರಸಿದ್ಧಿಯಿಂದಲೂ ಅವರು ಆಗ ಉತ್ಸಾಹವಂತರಾಗುತ್ತಾರೆ ಎಂದು ಕಲ್ಪಿಸಬಹುದಾಗಿದೆ; ಅದು ಶ್ರುತ್ಯನುಕೂಲವೂ ಆಗಿದೆ ಎಂದು ಭಾವ.

(ಭಾಷ್ಯಾರ್ಥ)

ಯಾವನು ಹೀಗೆ ಈ ಮೇಲೆ ಹೇಳಿದಂತೆ ಈ ಅಮೃತವನ್ನು- ಋಕ್ಕುಗಳೆಂಬ ತುಂಬಿಗಳು ತಾಪಮಾಡುವದು, ಋಗ್ವೇದವಿಹಿತವಾದ ಕರ್ಮವೆಂಬ ಹೂವಿನಿಂದ ರಸವು ಜಿನುಗುವದು, ಅದು ಆದಿತ್ಯನನ್ನು ಆಶ್ರಯಿಸಿಕೊಂಡಿರುವದು, ಕೆಂಪುರೂಪ ದ್ದಾಗಿರುವದು, (ಆ) ಅಮೃತವು ಪೂರ್ವದಿಕ್ಕಿನಲ್ಲಿರುವ ರಶ್ಮಿಗಳೆಂಬ ನಾಡಿಗಳಲ್ಲಿರು ವದು, ವಸುಗಳೆಂಬ ದೇವತೆಗಳಿಗೆ ಭೋಗ್ಯವಾಗಿರುವದು, ಅದನ್ನು ಅರಿತುಕೊಂಡ (ಉಪಾಸಕನು) ವಸುಗಳಲ್ಲಿ ಒಂದಾಗಿ ಅಗ್ನಿಮುಖವಾಗಿ (ಅಮೃತವನ್ನು) ಉಪಜೀವಿಸುವದು, (ಅದನ್ನು) ನೋಡಿದಮಾತ್ರದಿಂದಲೇ ತೃಪ್ತಿಯಾಗುವದು, ತನ್ನ ಭೋಗದ ಕಾಲಕ್ಕೆ ಉತ್ಸಾಹಶೀಲನಾಗುವದು, ಆ ಕಾಲವು ಆಗಿಹೋಗಲು ಸುಮ್ಮನಾಗುವದು- (ಎಂಬಿದೆಲ್ಲವನ್ನೂ) ಉಪಾಸನೆಮಾಡುವನೋ ಅವನೂ ವಸುಗಳಂತೆ (ಈ) ಎಲ್ಲವನ್ನೂ ಹಾಗೆಯೇ[1] ಅನುಭವಿಸುವನು.

(ಉಪನಿಷತ್ತು)

ಸ ಯಾವದಾದಿತ್ಯಃ ಪುರಸ್ತಾದುದೇತಾ ಪಶ್ಚಾದಸ್ತಮೇತಾ ವಸೂನಾ-ಮೇವ ತಾವದಾಧಿಪತ್ಯಗ್ಂ ಸ್ವಾರಾಜ್ಯಂ ಪರ್ಯೇತಾ ॥೪॥

೪. ಅವನು, ಎಲ್ಲಿಯವರೆಗೆ ಆದಿತ್ಯನು ಪೂರ್ವದಲ್ಲಿ ಮೂಡುತ್ತಿರು-ವನೋ, ಪಶ್ಚಿಮದಲ್ಲಿ ಮುಳುಗುತ್ತಿರುವನೋ, ಅಲ್ಲಿಯವರೆಗೆ ವಸುಗಳ ಆಧಿಪತ್ಯವನ್ನೇ, ಸ್ವಾರಾಜ್ಯವನ್ನೇ ಪಡೆಯುವನು.

ವಸುಸಾಯುಜ್ಯದ ಕಾಲಪರಿಮಾಣ

(ಭಾಷ್ಯ)

೨೧೬. ಕಿಯನ್ತಂ ಕಾಲಂ ವಿದ್ವಾನ್ ತದಮೃತಮ್ ಉಪಜೀವತೀತಿ ? ಉಚ್ಯತೇ। ಸ ವಿದ್ವಾನ್ ಯಾವದಾದಿತ್ಯಃ ಪುರಸ್ತಾತ್ ಪ್ರಾಚ್ಯಾಂ ದಿಶಿ ಉದೇತಾ ಪಶ್ಚಾತ್ ಪ್ರತೀಚ್ಯಾಂ ಅಸ್ತಮೇತಾ ತಾವದ್ ವಸೂನಾಂ ಭೋಗಕಾಲಃ । ತಾವನ್ತಮೇವ ಕಾಲಂ ವಸೂನಾಮ್ ಆಧಿಪತ್ಯಂ ಸ್ವಾರಾಜ್ಯಂ ಪರ್ಯೇತಾ ಪರಿತೋ ಗನ್ತಾ ಭವತಿ ಇತ್ಯರ್ಥಃ । ನ ಯಥಾ ಚನ್ದ್ರಮಣ್ಡಲಸ್ಥಃ ಕೇವಲಕರ್ಮಾ ಪರತನ್ತ್ರೋ-ದೇವಾನಾಮ್ ಅನ್ನಭೂತಃ, ಕಿಂ ತರ್ಹಿ ಅಯಮ್ ಆಧಿಪತ್ಯಂ ಸ್ವಾರಾಜ್ಯಂ ಸ್ವರಾಡ್ಭಾವಂ ಚ ಅಧಿಗಚ್ಛತಿ ॥

---

1. ಈ ಭಾಷ್ಯಭಾಗದಲ್ಲಿ ವಸುಗಳ ವಿಷಯದಲ್ಲಿ ವರ್ಣಿಸಿರುವಂತೆಯೇ.

(ಭಾಷ್ಯಾರ್ಥ)

ಆ ಅಮೃತಕಾಲವನ್ನು ಜ್ಞಾನಿಯು, ಎಷ್ಟುಕಾಲದವರೆಗೆ ಉಪಜೀವಿಸಿ ಕೊಂಡಿರುತ್ತಾನೆ ?- ಎಂದರೆ (ಶ್ರುತಿ) ಹೇಳುತ್ತದೆ. ಆ ಜ್ಞಾನಿಯು ಎಲ್ಲಿಯವರೆಗೆ ಆದಿತ್ಯನು ಪೂರ್ವದಲ್ಲಿ ಮೂಡುತ್ತಿರುವನೋ (ಪಶ್ಚಾತ್= ಪ್ರತೀಚ್ಯಾಮ್) ಪಶ್ಚಿಮದಲ್ಲಿ ಮುಳುಗುತ್ತಿರುವನೋ ಅಲ್ಲಿಯವರೆಗೂ ವಸುಗಳಿಗೆ ಭೋಗಕಾಲವು[1] ; ಅಷ್ಟು ಕಾಲದವರೆಗೂ ವಸುಗಳ ಆಧಿಪತ್ಯವನ್ನೂ ಸ್ವಾರಾಜ್ಯವನ್ನೂ ಪಡೆಯುವನು ; (ಪರ್ಯೇತಾ=) ಎಲ್ಲಾ ಬಗೆಯಿಂದಲೂ ಪಡೆಯುವವನಾಗಿರುವನು - ಎಂದರ್ಥ.

ಚಂದ್ರಮಂಡಲದಲ್ಲಿರುವ ಕೇವಲಕರ್ಮಿಯು ಹೇಗೆ ದೇವತೆಗಳಿಗೆ ಅನ್ನ-ವಾಗಿದ್ದುಕೊಂಡು[2] ಪರತಂತ್ರನಾಗಿರುವನೋ ಹಾಗಲ್ಲ, ಮತ್ತೇನೆಂದರೆ ಇವನು ಆಧಿಪತ್ಯವನ್ನೂ ಸ್ವಾರಾಜ್ಯವನ್ನೂ ಸ್ವಯಂರಾಜನಾಗಿರುವಿಕೆಯನ್ನೂ ಪಡೆದು-ಕೊಂಡಿರುತ್ತಾನೆ.[3]

ಮೂರನೆಯ ಅಧ್ಯಾಯ - ಏಳನೆಯ ಖಂಡ

(ಆದಿತ್ಯೋಪಾಸನೆ)

ರುದ್ರನಿಗೆ ದ್ವಿತೀಯಾಮೃತದಿಂದ ತೃಪ್ತಿ

(ಉಪನಿಷತ್ತು)

ಅಥ ಯದ್ ದ್ವಿತೀಯಮಮೃತಂ ತದ್ರುದ್ರಾ ಉಪಜೀವನ್ತೀನ್ದ್ರೇಣ ಮುಖೇನ ನ ವೈ ದೇವಾ ಅಶ್ನನ್ತಿ ನ ಪಿಬನ್ತ್ಯೇತದೇವಾಮೃತಂ ದೃಷ್ಟ್ವಾ ತೃಪ್ಯನ್ತಿ ॥೧॥

ತ ಏತದೇವ ರೂಪಮಭಿಸಂವಿಶನ್ತ್ಯೇತಸ್ಮಾದ್ರೂಪಾದುದ್ಯನ್ತಿ ॥೨॥

1. ಅಲ್ಲಿಯವರೆಗೂ ಅವರು ಪ್ರಾತಃಸವನಕಾಲದ ಅಮೃತಭೋಗವನ್ನು ಪಡೆಯುತ್ತಿರುವರು.
2. ಭೋಗ್ಯನಾಗಿದ್ದುಕೊಂಡು. ಇದನ್ನು ಮುಂದೆ ಪಂಚಾಗ್ನಿವಿದ್ಯೆಯಲ್ಲಿ (೫-೯-೪ರಲ್ಲಿ) ತಿಳಿಸಲಾಗುವದು.
3. ಉಪಾಸಕರಿಗೆ ಸಿಕ್ಕುವ ಸಾಯುಜ್ಯವಿಚಾರಕ್ಕೆ ಸೂ. ಭಾ. ೪-೪-೯ನ್ನು ನೋಡಿ.

ಸ ಯ ಏತದೇವಮಮೃತಂ ವೇದ ರುದ್ರಾಣಾಮೇವೈಕೋ ಭೂತ್ವೇನ್ದ್ರೇಣೈವ ಮುಖೇನೈತದೇವಾಮೃತಂ ದೃಷ್ಟ್ವಾ ತೃಪ್ಯತಿ ಸ ಏತದೇವ ರೂಪಮಭಿಸಂವಿಶತ್ಯೇತಸ್ಮಾದ್ರೂಪಾದುದೇತಿ ॥೩॥

೧. ಇನ್ನು ಎರಡನೆಯ ಅಮೃತವಿದೆಯಲ್ಲ, ಅದನ್ನು ರುದ್ರರು ಇಂದ್ರಮುಖರಾಗಿ ಉಪಜೀವಿಸಿಕೊಂಡಿರುತ್ತಾರೆ. ದೇವತೆಗಳು ಉಣ್ಣುವದಿಲ್ಲ, ಕುಡಿಯುವದಿಲ್ಲ; ಈ ಅಮೃತವನ್ನೇ ಕಂಡು ತೃಪ್ತರಾಗುತ್ತಾರೆ.

೨. ಅವರು ಈ ರೂಪವನ್ನೇ ಅಭಿಸಂವೇಶನಮಾಡುತ್ತಾರೆ, ಈ ರೂಪದಿಂದಲೇ ಮೇಲಕ್ಕೇಳುತ್ತಾರೆ.

೩. ಯಾವನು ಈ ಅಮೃತವನ್ನು ಹೀಗೆಂದು ಅರಿತುಕೊಳ್ಳುವನೋ, ಅವನು ರುದ್ರರುಗಳಲ್ಲಿಯೇ ಒಂದಾಗಿ ಇಂದ್ರಮುಖನಾಗಿಯೇ ಇದೇ ಅಮೃತವನ್ನು ಕಂಡು ತೃಪ್ತನಾಗುತ್ತಾನೆ. ಅವನು ಇದೇ ರೂಪವನ್ನು ಅಭಿಸಂವೇಶನಮಾಡುತ್ತಾನೆ, ಈ ರೂಪದಿಂದಲೇ ಮೇಲಕ್ಕೇಳುತ್ತಾನೆ.

(ಭಾಷ್ಯ)

೨೧೭. ಅಥ ಯದ್ ದ್ವಿತೀಯಮಮೃತಂ ತದ್ರುದ್ರಾ ಉಪಜೀವನ್ತಿ- ಇತ್ಯಾದಿ ಸಮಾನಮ್ ॥

(ಭಾಷ್ಯಾರ್ಥ)

ಇನ್ನು ಎರಡನೆಯ ಅಮೃತವಿದೆಯಲ್ಲ, ಅದನ್ನು ರುದ್ರರು ಉಪಜೀವಿಸಿ-ಕೊಂಡಿರುತ್ತಾರೆ- ಎಂದು ಮುಂತಾಗಿರುವದು (ಹಿಂದಿನ ಗ್ರಂಥಕ್ಕೆ) ಸಮಾನವು.

(ಉಪನಿಷತ್ತು)

ಸ ಯಾವದಾದಿತ್ಯಃ ಪುರಸ್ತಾದುದೇತಾ ಪಶ್ಚಾದಸ್ತಮೇತಾ ದ್ವಿಸ್ತಾವದ್ದಕ್ಷಿಣತ ಉದೇತೋತ್ತರತೋಽಸ್ತಮೇತಾ ರುದ್ರಾಣಾಮೇವ ತಾವದಾಧಿಪತ್ಯಗ್ಂ ಸ್ವಾರಾಜ್ಯಂ ಪರ್ಯೇತಾ ॥೪॥

೪. ಅವನು ಎಲ್ಲಿಯವರೆಗೆ ಆದಿತ್ಯನು ಪೂರ್ವದಲ್ಲಿ ಮೂಡುತ್ತಿರುವನೋ ಪಶ್ಚಿಮದಲ್ಲಿ ಮುಳುಗುತ್ತಿರುವನೋ ಅದರ ಎರಡರಷ್ಟು ಕಾಲ ದಕ್ಷಿಣದಲ್ಲಿ ಮೂಡುವನು, ಉತ್ತರದಲ್ಲಿ ಮುಳುಗುವನು. ಅಲ್ಲಿಯ ವರೆಗೂ ರುದ್ರರುಗಳ ಆಧಿಪತ್ಯವನ್ನೇ ಸ್ವಾರಾಜ್ಯವನ್ನೇ ಪಡೆಯುವನು.

ರುದ್ರಸಾಯುಜ್ಯದ ಕಾಲಪರಿಮಾಣ

(ಭಾಷ್ಯ)

೨೧೮. ಸ ಯಾವದಾದಿತ್ಯಃ ಪುರಸ್ತಾತ್ ಉದೇತಾ ಪಶ್ಚಾತ್ ಅಸ್ತಮೇತಾ ದ್ವಿಸ್ತಾವತ್ ತತೋ ದ್ವಿಗುಣಂ ಕಾಲಂ ದಕ್ಷಿಣತ ಉದೇತಾ ಉತ್ತರತೋಽಸ್ತಮೇತಾ । ರುದ್ರಾಣಾಂ ತಾವದ್ ಭೋಗಕಾಲಃ ॥

(ಭಾಷ್ಯಾರ್ಥ)

ಎಲ್ಲಿಯವರೆಗೂ ಸೂರ್ಯನು ಪೂರ್ವದಲ್ಲಿ ಮೂಡುತ್ತಿರುವನೋ ಪಶ್ಚಿಮದಲ್ಲಿ ಮುಳುಗುತ್ತಿರುವನೋ - ಅದರ ಎರಡರಷ್ಟು, ಅದರ ದುಪ್ಪಟ್ಟುಕಾಲದವರೆಗೂ ದಕ್ಷಿಣದಲ್ಲಿ ಮೂಡುವನು. ಉತ್ತರದಲ್ಲಿ ಮುಳುಗುವನು. ರುದ್ರರುಗಳಿಗೆ ಅಲ್ಲಿಯವರೆಗೂ ಭೋಗಕಾಲ.

ಮೂರನೆಯ ಅಧ್ಯಾಯ – ಎಂಟನೆಯ ಖಂಡ

(ಆದಿತ್ಯೋಪಾಸನೆ)

ಮೂರನೆಯ ಅಮೃತದಿಂದ ಆದಿತ್ಯರಿಗೆ ತೃಪ್ತಿ

(ಉಪನಿಷತ್ತು)

ಅಥ ಯತ್ತೃತೀಯಮಮೃತಂ ತದಾದಿತ್ಯಾ ಉಪಜೀವನ್ತಿ ವರುಣೇನ ಮುಖೇನ ನ ವೈ ದೇವಾ ಅಶ್ನನ್ತಿ ನ ಪಿಬನ್ತ್ಯೇತದೇವಾಮೃತಂ ದೃಷ್ಟ್ವಾ ತೃಪ್ಯನ್ತಿ ॥೧॥

ತ ಏತದೇವ ರೂಪಮಭಿಸಂವಿಶನ್ತ್ಯೇತಸ್ಮಾದ್ರೂಪಾದುದ್ಯನ್ತಿ ॥೨॥

ಸ ಯ ಏತದೇವಾಮೃತಂ ವೇದಾऽऽದಿತ್ಯಾನಾಮೇವೈಕೋ ಭೂತ್ವಾ ವರುಣೇನೈವ ಮುಖೇನೈತದೇವಾಮೃತಂ ದೃಷ್ಟ್ವಾ ತೃಪ್ಯತಿ ಸ ಏತದೇವ ರೂಪಮಭಿಸಂವಿಶತ್ಯೇತಸ್ಮಾದ್ರೂಪಾದುದೇತಿ ॥೩॥

ಸ ಯಾವದಾದಿತ್ಯೋ ದಕ್ಷಿಣತ ಉದೇತೋತ್ತರತೋಽಸ್ತಮೇತಾ ದ್ವಿಸ್ತಾವತ್ ಪಶ್ಚಾದುದೇತಾ ಪುರಸ್ತಾದಸ್ತಮೇತಾऽऽದಿತ್ಯಾನಾಮೇವ ತಾವದಾಧಿಪತ್ಯಗ್ಂ ಸ್ವಾರಾಜ್ಯಂ ಪರ್ಯೇತಾ ॥೪॥

೧. ಇನ್ನು ಮೂರನೆಯ ಅಮೃತವಿದೆಯಲ್ಲ, ಅದನ್ನು ಆದಿತ್ಯರು ವರುಣ ಮುಖರಾಗಿ ಉಪಜೀವಿಸಿಕೊಂಡಿರುತ್ತಾರೆ ; ದೇವತೆಗಳು ಉಣ್ಣುವದಿಲ್ಲ, ಕುಡಿಯುವದಿಲ್ಲ; ಈ ಅಮೃತವನ್ನೇ ಕಂಡು ತೃಪ್ತರಾಗುತ್ತಾರೆ.

೨. ಅವರು ಈ ರೂಪವನ್ನೇ ಅಭಿಸಂವೇಶನಮಾಡುತ್ತಾರೆ, ಈ ರೂಪದಿಂದಲೇ ಮೇಲಕ್ಕೇಳುತ್ತಾರೆ.

೩. ಯಾವನು ಈ ಅಮೃತವನ್ನು ಹೀಗೆಂದು ಅರಿತುಕೊಳ್ಳುವನೋ ಅವನು ಆದಿತ್ಯರುಗಳಲ್ಲಿಯೇ ಒಂದಾಗಿ ವರುಣಮುಖನೇ ಆಗಿ ಇದೇ ಅಮೃತವನ್ನು ಕಂಡು ತೃಪ್ತನಾಗುತ್ತಾನೆ ; ಅವನು ಇದೇ ರೂಪವನ್ನು ಅಭಿಸಂವೇಶನಮಾಡುತ್ತಾನೆ, ಈ ರೂಪದಿಂದಲೇ ಮೇಲಕ್ಕೇಳುತ್ತಾನೆ.

೪. ಅವನು ಎಲ್ಲಿಯವರೆಗೆ ಆದಿತ್ಯನು ದಕ್ಷಿಣದಲ್ಲಿ ಮೂಡುತ್ತಿರುವನೋ ಉತ್ತರದಲ್ಲಿ ಮುಳುಗುತ್ತಿರುವನೋ- ಅದರ ಎರಡರಷ್ಟು ಕಾಲ ಪಶ್ಚಿಮದಲ್ಲಿ ಮೂಡುವನು, ಪೂರ್ವದಲ್ಲಿ ಮುಳುಗುವನು- ಅಲ್ಲಿಯವರೆಗೂ ಆದಿತ್ಯರ ಅಧಿಪತ್ಯವನ್ನೇ ಸ್ವಾರಾಜ್ಯವನ್ನೇ ಪಡೆಯುವನು.

ಮೂರನೆಯ ಅಧ್ಯಾಯ - ಒಂಬತ್ತನೆಯ ಖಂಡ

(ಆದಿತ್ಯೋಪಾಸನೆ)

ನಾಲ್ಕನೆಯ ಅಮೃತದಿಂದ ಮರುತ್ತರಿಗೆ ತೃಪ್ತಿ

(ಉಪನಿಷತ್ತು)

ಅಥ ಯಚ್ಚತುರ್ಥಮಮೃತಂ ತನ್ಮರುತ ಉಪಜೀವನ್ತಿ

ಸೋಮೇನ ಮುಖೇನ ನ ವೈ ದೇವಾ ಅಶ್ನನ್ತಿ ನ ಪಿಬನ್ತ್ಯೇತದೇವಾಮೃತಂ ದೃಷ್ಟ್ವಾ ತೃಪ್ಯನ್ತಿ ॥೧॥

ತ ಏತದೇವ ರೂಪಮಭಿಸಂವಿಶನ್ತ್ಯೇತಸ್ಮಾದ್ರೂಪಾದುದ್ಯನ್ತಿ ॥೨॥

ಸ ಯ ಏತದೇವಮಮೃತಂ ವೇದ ಮರುತಾಮೇವೈಕೋ ಭೂತ್ವಾ ಸೋಮೇನೈವ ಮುಖೇನೈತದೇವಾಮೃತಂ ದೃಷ್ಟ್ವಾ ತೃಪ್ಯತಿ ಸ ಏತದೇವ ರೂಪಮಭಿಸಂವಿಶತ್ಯೇತಸ್ಮಾದ್ರೂಪಾದುದೇತಿ ॥೩॥

ಸ ಯಾವದಾದಿತ್ಯಃ ಪಶ್ಚಾದುದೇತಾ ಪುರಸ್ತಾದಸ್ತಮೇತಾ ದ್ವಿಸ್ತಾವದುತ್ತರತ ಉದೇತಾ ದಕ್ಷಿಣತೋಽಸ್ತಮೇತಾ ಮರುತಾಮೇವ ತಾವದಾಧಿಪತ್ಯಗ್ಂ ಸ್ವಾರಾಜ್ಯಂ ಪರ್ಯೇತಾ ॥೪॥

೧. ಇನ್ನು ನಾಲ್ಕನೆಯ ಅಮೃತವಿದೆಯಲ್ಲ, ಅದನ್ನು ಮರುತ್ತರು ಸೋಮಮುಖರಾಗಿ ಉಪಜೀವಿಸಿಕೊಂಡಿರುತ್ತಾರೆ. ದೇವತೆಗಳು ಉಣ್ಣುವದಿಲ್ಲ, ಕುಡಿಯುವದಿಲ್ಲ; ಈ ಅಮೃತವನ್ನೇ ಕಂಡು ತೃಪ್ತರಾಗುತ್ತಾರೆ.

೨. ಅವರು ಈ ರೂಪವನ್ನೇ ಅಭಿಸಂವೇಶನಮಾಡುತ್ತಾರೆ, ಈ ರೂಪದಿಂದಲೇ ಮೇಲಕ್ಕೇಳುತ್ತಾರೆ.

೩. ಯಾವನು ಈ ಅಮೃತವನ್ನೇ ಹೀಗೆಂದು ಅರಿತುಕೊಳ್ಳುವನೋ ಅವನು ಮರುತ್ತರುಗಳಲ್ಲಿಯೇ ಒಂದಾಗಿ ಸೋಮಮುಖನಾಗಿಯೇ ಇದೇ ಅಮೃತವನ್ನು ಕಂಡು ತೃಪ್ತನಾಗುತ್ತಾನೆ. ಅವನು ಇದೇ ರೂಪವನ್ನು ಅಭಿಸಂವೇಶನಮಾಡುತ್ತಾನೆ, ಈ ರೂಪದಿಂದಲೇ ಮೇಲಕ್ಕೇಳುತ್ತಾನೆ.

೪. ಅವನು ಎಲ್ಲಿಯವರೆಗೆ ಆದಿತ್ಯನು ಪಶ್ಚಿಮದಲ್ಲಿ ಮೂಡುತ್ತಿರುವನೋ ಪೂರ್ವದಲ್ಲಿ ಮುಳುಗುತ್ತಿರುವನೋ- ಅದರ ಎರಡರಷ್ಟು ಕಾಲ ಉತ್ತರದಲ್ಲಿ ಮೂಡುವನು, ದಕ್ಷಿಣದಲ್ಲಿ ಮುಳುಗುವನು. ಅಲ್ಲಿಯವರೆಗೂ ಮರುತ್ತರುಗಳ ಆಧಿಪತ್ಯವನ್ನೇ ಸ್ವಾರಾಜ್ಯವನ್ನೇ ಪಡೆಯುವನು.

ಮೂರನೆಯ ಅಧ್ಯಾಯ - ಹತ್ತನೆಯ ಖಂಡ

(ಆದಿತ್ಯೋಪಾಸನೆ)

ಐದನೆಯ ಅಮೃತದಿಂದ ಸಾಧ್ಯರಿಗೆ ತೃಪ್ತಿ

(ಉಪನಿಷತ್ತು)

ಅಥ ಯತ್ತಜ್ಜಿಮಮಮೃತಂ ತತ್ ಸಾಧ್ಯಾ ಉಪಜೀವನ್ತಿ ಬ್ರಹ್ಮಣಾ ಮುಖೇನ ನ ವೈ ದೇವಾ ಅಶ್ನನ್ತಿ ನ ಪಿಬನ್ತ್ಯೇತದೇವಾಮೃತಂ ದೃಷ್ಟಾ ತೃಪ್ಯನ್ತಿ ॥೧॥

ತ ಏತದೇವ ರೂಪಮಭಿಸಂವಿಶನ್ತ್ಯೇತಸ್ಮಾದ್ರೂಪಾದುದ್ಯನ್ತಿ ॥೨॥

ಸ ಯ ಏತದೇವಮಮೃತಂ ವೇದ ಸಾಧ್ಯಾನಾಮೇವೈಕೋ ಭೂತ್ವಾ ಬ್ರಹ್ಮಣೈವ ಮುಖೇನೈತದೇವಾಮೃತಂ ದೃಷ್ಟಾ ತೃಪ್ಯತಿ ಸ ಏತದೇವ ರೂಪಮಭಿಸಂವಿಶತ್ಯೇತಸ್ಮಾದ್ರೂಪಾದುದೇತಿ ॥೩॥

ಸ ಯಾವದಾದಿತ್ಯ ಉತ್ತರತ ಉದೇತಾ ದಕ್ಷಿಣತೋಽಸ್ತಮೇತಾ ದ್ವಿಸ್ತಾವದೂರ್ಧ್ವ ಉದೇತಾಽರ್ವಾಜ[1]ಸ್ತಮೇತಾ ಸಾಧ್ಯಾನಾಮೇವ ತಾವದಾಧಿಪತ್ಯಗ್ಂ ಸ್ವಾರಾಜ್ಯಂ ಪರ್ಯೇತಾ ॥೪॥

೧. ಇನ್ನು ಐದನೆಯ ಅಮೃತವಿದೆಯಲ್ಲ, ಅದನ್ನು ಸಾಧ್ಯರು ಬ್ರಹ್ಮಮುಖರಾಗಿ ಉಪಜೀವಿಸಿಕೊಂಡಿರುತ್ತಾರೆ. ದೇವತೆಗಳು ಉಣ್ಣುವದಿಲ್ಲ, ಕುಡಿಯುವದಿಲ್ಲ; ಈ ಅಮೃತವನ್ನೇ ಕಂಡು ತೃಪ್ತರಾಗುತ್ತಾರೆ.

೨. ಅವರು ಈ ರೂಪವನ್ನೇ ಅಭಿಸಂವೇಶನಮಾಡುತ್ತಾರೆ, ಈ ರೂಪದಿಂದಲೇ ಮೇಲಕ್ಕೇಳುತ್ತಾರೆ.

೩. ಯಾವನು ಈ ಅಮೃತವನ್ನೇ ಹೀಗೆಂದು ಅರಿತುಕೊಳ್ಳುವನೋ ಅವನು ಸಾಧ್ಯರುಗಳಲ್ಲಿಯೇ ಒಂದಾಗಿ ಬ್ರಹ್ಮಮುಖನಾಗಿಯೇ ಇದೇ ಅಮೃತವನ್ನು ಕಂಡು ತೃಪ್ತನಾಗುತ್ತಾನೆ. ಅವನು ಇದೇ ರೂಪವನ್ನು ಅಭಿಸಂವೇಶನಮಾಡುತ್ತಾನೆ, ಈ ರೂಪದಿಂದಲೇ ಮೇಲಕ್ಕೇಳುತ್ತಾನೆ.

---

1. ಇದು ಅವಾಕ್ ಎಂದಿರಬೇಕೆ ?

೪. ಅವನು ಎಲ್ಲಿಯವರೆಗೆ ಆದಿತ್ಯನು ಉತ್ತರದಲ್ಲಿ ಮೂಡುವನೋ ದಕ್ಷಿಣದಲ್ಲಿ ಮುಳುಗುವನೋ ಅದರ ಎರಡರಷ್ಟು ಕಾಲ ಮೇಲುಗಡೆ ಮೂಡುವನು, ಕೆಳಗಡೆ ಮುಳುಗುವನು. ಅಲ್ಲಿಯವರೆಗೂ ಸಾಧ್ಯರ ಆಧಿಪತ್ಯವನ್ನೇ, ಸ್ವಾರಾಜ್ಯವನ್ನೇ ಪಡೆಯುವನು.

(ಭಾಷ್ಯ)

೨೧೯. ತಥಾ ಪಶ್ಚಾತ್, ಉತ್ತರತಃ, ಊರ್ಧ್ವಮ್ ಉದೇತಾ ವಿಪರ್ಯಯೇಣ ಅಸ್ತಮೇತಾ ॥

(ಭಾಷ್ಯಾರ್ಥ)

ಹೀಗೆಯೇ (ಅದರ ಎರಡರಷ್ಟು ಕಾಲ) ಪಶ್ಚಿಮದಲ್ಲಿ (ಖಂ. ೮), ಉತ್ತರದಲ್ಲಿ (ಖಂ. ೯) ಮೇಲುಗಡೆಯಲ್ಲಿ (ಖಂ. ೧೨) ಮೂಡುವನು, (ಅದಕ್ಕೆ) ವಿಪರ್ಯಯವಾಗಿ[1] ಮುಳುಗುವನು.

ಸೂರ್ಯೋದಯಾಸ್ತಮಯಗಳ ವಿಷಯಕ್ಕೆ ಚರ್ಚೆ ಆಕ್ಷೇಪ

(ಭಾಷ್ಯ)

೨೨೦. ಪೂರ್ವಸ್ಮಾತ್ ಪೂರ್ವಸ್ಮಾತ್ ದ್ವಿಗುಣೋತ್ತರೋತ್ತರೇಣ ಕಾಲೇನ ಇತಿ ಅಪೌರಾಣಂ ದರ್ಶನಮ್ । ಸವಿತುಶ್ಚತುರ್ದಿಶಮ್ ಇನ್ದ್ರಯಮವರುಣ ಸೋಮಪುರೀಷು ಉದಯಾಸ್ತಮಯಕಾಲಸ್ಯ ತುಲ್ಯತ್ವಂ ಹಿ ಪೌರಾಣಿಕೈರುಕ್ತಮ್ । ಮಾನಸೋತ್ತರಸ್ಯ ಮೂರ್ಧನಿ ಮೇರೋಃ ಪ್ರದಕ್ಷಿಣಾವೃತ್ತೇಸ್ತುಲ್ಯತ್ವಾತ್ ಇತಿ ॥

(ಭಾಷ್ಯಾರ್ಥ)

ಹಿಂದುಹಿಂದಿನದಕ್ಕಿಂತಲೂ ಮುಂದುಮುಂದಕ್ಕೆ ಎರಡರಷ್ಟು ಕಾಲ (ಉದಯಾಸ್ತಮಯಗಳಾಗುತ್ತಿರುವವು) ಎಂಬ ತಿಳಿವಳಿಕೆಯು ಪುರಾಣಕ್ಕೆ ವಿರುದ್ಧವಾಗಿರುತ್ತದೆ.[2] ಸೂರ್ಯನಿಗೆ ನಾಲ್ಕು ದಿಕ್ಕುಗಳಲ್ಲಿ (ಕ್ರಮವಾಗಿ) ಇಂದ್ರ, ಯಮ, ವರುಣ,

---

1. ಪೂರ್ವದಲ್ಲಿ, ದಕ್ಷಿಣದಲ್ಲಿ, ಕೆಳಗಡೆ (ಮುಳುಗುವನು) ಎಂದು ಕ್ರಮವಾಗಿಟ್ಟುಕೊಳ್ಳಬೇಕೆಂದರ್ಥ. ಮುಂದುಮುಂದಿನ ಕಾಲವು ಹಿಂದುಹಿಂದಿನದರ ಎರಡರಷ್ಟು, ಅಷ್ಟಷ್ಟು ಕಾಲ ಉವಾಸಕನಿಗೆ ಆದಿತ್ಯರ, ಮರುತ್ತರ ಮತ್ತು ಸಾಧ್ಯರ ಆಧಿಪತ್ಯಸ್ವಾರಾಜ್ಯಗಳು ದೊರಕುವವು ಎಂದೂ ಅಭಿಪ್ರಾಯ.

2. ಪುರಾಣವು ಶ್ರುತಿಗೆ ವಿರುದ್ಧವಾದರೆ ಅಪ್ರಮಾಣವೇ ಆದರೂ ಇವೆರಡನ್ನೂ ಹೊಂದಿಸಬಹುದಾದರೆ ಅದು ಪ್ರಮಾಣವೇ ಎಂದು ಭಾವ.

ಸೋಮ - ಇವರ ಪುರಗಳಲ್ಲಿ ಉದಯಾಸ್ತಮಯಕಾಲವು ಸಮಾನವಾಗಿರುತ್ತದೆ ಎಂದಲ್ಲವೆ, ಪೌರಾಣಿಕರು ಹೇಳಿರುತ್ತಾರೆ ? ಮಾನಸಕ್ಕೆ ಉತ್ತರದಲ್ಲಿರುವ ಮೇರುವಿನ ಶಿಖರದ ಸುತ್ತಲೂ ತಿರುಗುತ್ತಿರುವ ದೂರವು ಒಂದೇ ಸಮನಾಗಿರುವದರಿಂದ (ಈ ಕಾಲವು ಎಲ್ಲೆಲ್ಲಿಯೂ ಸಮಾನವಾಗಿರುತ್ತದೆ ಎಂದಷ್ಟೆ, ಅವರ ಮತವು) ?[1]

ಪರಿಹಾರ

(ಭಾಷ್ಯ)

೨೨೧. ಅತ್ರೋಕ್ತಃ ಪರಿಹಾರ ಆಚಾರ್ಯೈಃ । ಅಮರಾವತ್ಯಾದೀನಾಂ ಪುರೀಣಾಂ ದ್ವಿಗುಣೋತ್ತರೋತ್ತರೇಣ ಕಾಲೇನ ಉದ್ವಾಸಃ ಸ್ಯಾತ್ । ಉದಯಶ್ಚ ನಾಮ ಸವಿತುಸ್ತನ್ನಿವಾಸಿನಾಂ ಪ್ರಾಣಿನಾಂ ಚಕ್ಷುರ್ಗೋಚರಾಪತ್ತಿಃ, ತದತ್ಯಯಶ್ಚ ಅಸ್ತಮನಮ್ । ನ ಪರಮಾರ್ಥತಃ ಉದಯಾಸ್ತಮನೇ ಸ್ತಃ । ತನ್ನಿವಾಸಿನಾಂ ಚ ಪ್ರಾಣಿನಾಮ್ ಅಭಾವೇ ತಾನ್ ಪ್ರತಿ ತೇನೈವ ಮಾರ್ಗೇಣ ಗಚ್ಛನ್ನಪಿ ನೈವೋದೇತಾ ನಾಸ್ತಮೇತಾ ಇತಿ ಚಕ್ಷುರ್ಗೋಚರಾಪತ್ತೇಸ್ತದತ್ಯಯಸ್ಯ ಚ ಅಭಾವಾತ್ । ತಥಾ ಅಮರಾವತ್ಯಾಃ ಸಕಾಶಾತ್ ದ್ವಿಗುಣಂ ಕಾಲಂ ಸಂಯಮನೀಪುರೀ ವಸತಿ । ಅತಃ ತನ್ನಿವಾಸಿನಃ ಪ್ರಾಣಿನಃ ಪ್ರತಿ ದಕ್ಷಿಣತ ಇವ ಉದೇತಿ ಉತ್ತರತೋಽಸ್ತಮೇತಿ ಇತ್ಯುಚ್ಯತೇ ಅಸ್ಮದ್ಬುದ್ಧಿಂ ಚ ಅಪೇಕ್ಷ್ಯ । ತಥಾ ಉತ್ತರಾಸ್ವಪಿ ಪುರೀಷು ಯೋಜನಾ । ಸರ್ವೇಷಾಂ ಚ ಮೇರುರುತ್ತರತೋ ಭವತಿ । ಯದಾ ಅಮರಾವತ್ಯಾಂ ಮಧ್ಯಾಹ್ನಗತಃ ಸವಿತಾ ತದಾ ಸಂಯಮನ್ಯಾಮ್ ಉದ್ಯನ್ ದೃಶ್ಯತೇ ತತ್ರ ಮಧ್ಯಾಹ್ನಗತೋ ವಾರುಣ್ಯಾಮ್ ಉದ್ಯನ್ ದೃಶ್ಯತೇ ತಥಾ ಉತ್ತರಸ್ಯಾಮ್ । ಪ್ರದಕ್ಷಿಣಾವೃತ್ತೇಸ್ತುಲ್ಯತ್ವಾತ್ । ಇಲಾವೃತವಾಸಿನಾಂ ಸರ್ವತಃ ಪರ್ವತಪ್ರಾಕಾರನಿವಾರಿತಾದಿತ್ಯರಶ್ಮೀನಾಂ ಸವಿತಾ ಊರ್ಧ್ವ ಇವ ಉದೇತಾ ಅರ್ವಾಗಸ್ತ[2]ಮೇತಾ ದೃಶ್ಯತೇ । ಪರ್ವತೋರ್ಧ್ವ ಚ್ಛಿದ್ರಪ್ರವೇಶಾತ್ ಸವಿತೃಪ್ರಕಾಶಸ್ಯ ॥

(ಭಾಷ್ಯಾರ್ಥ)

ಇದಕ್ಕೆ ಆಚಾರ್ಯರು[3] ಹೇಳಿರುವ ಪರಿಹಾರ(ವೇನೆಂದರೆ), ಅಮರಾವತಿಯೇ ಮುಂತಾದ ಪುರಿಗಳಲ್ಲಿ ಮುಂದುಮುಂದಕ್ಕೆ ಎರಡರಷ್ಟು ಕಾಲದಲ್ಲಿ ಉದ್ವಾಸವಾಗು

1. ಇಲ್ಲಿ ವಿಷ್ಣುಪುರಾಣದ ಮತ್ತು ಲೈಂಗಪುರಾಣಗಳ ಸಮ್ಮತಿಯನ್ನು ಆ॥ಗಿ॥ ಟೀಕೆಯಲ್ಲಿ ಕೊಟ್ಟಿದೆ. ಆಚಾರ್ಯರು ಯಾವ ಪುರಾಣವನ್ನು ಲಕ್ಷ್ಯದಲ್ಲಿಟ್ಟುಕೊಂಡಿದ್ದರೆಂಬುದನ್ನು ಗೊತ್ತುಮಾಡುವದು ಕಷ್ಟ. 2. ಇದು ಅವಾಕ್ ಎಂದಿರಬೇಕೆ ?
3. ದ್ರವಿಡಾಚಾರ್ಯರು. ಇವರ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ವದು[1] ಸೂರ್ಯನ ಉದಯವು ಎಂದರೆ ಅಲ್ಲಿ ವಾಸವಾಗಿರುವ ಪ್ರಾಣಿಗಳ ಕಣ್ಣಿಗೆ ಗೋಚರವಾಗುವದು, ಅದನ್ನು ಮಿರುವದೇ ಅಸ್ತಮಯವು ; (ಇಷ್ಟೇ ಹೊರತು) ನಿಜವಾಗಿ ಉದಯಾಸ್ತಮಯಗಳು ಇರುವದಿಲ್ಲ.[2] (ಆದ್ದರಿಂದ) ಅಲ್ಲಿ ವಾಸವಾಗಿರುವ ಪ್ರಾಣಿಗಳು ಇಲ್ಲದಿದ್ದರೆ ಅವುಗಳನ್ನು ಅದೇ ಮಾರ್ಗದಿಂದ ದಾಟಿದರೂ (ಸೂರ್ಯನು ಅಲ್ಲಿ) ಉದಯವಾಗುವದೂ ಇಲ್ಲ, ಅಸ್ತಮವಾಗುವದೂ ಇಲ್ಲ[3] ; ಏಕೆಂದರೆ ಕಣ್ಣಿಗೆ ಗೋಚರವಾಗುವದು, ಅದನ್ನು ಮಿರುವದು (ಅಲ್ಲಿ) ಇರುವದೇ ಇಲ್ಲ.[4] ಮತ್ತು ಅಮರಾವತಿಗಿಂತ ಸಂಯಮಿನೀಪುರಿಯ ಎರಡರಷ್ಟು ಕಾಲದ (ದೂರದಲ್ಲಿ) ಇರುತ್ತದೆ. ಆದ್ದರಿಂದ ಅಲ್ಲಿರುವ ಪ್ರಾಣಿಗಳಿಗೆ ದಕ್ಷಿಣದಿಂದ ಉದಯವಾದಂತೆ ಆಯಿತು ; ಉತ್ತರದಿಂದ ಅಸ್ತಮಯ(ವಾದಂತೆ ಆಯಿತು) ಎಂದು ನಮ್ಮಗಳ ಬುದ್ಧಿಯ ಅಪೇಕ್ಷೆಯಿಂದ[5] ಹೇಳಿರುತ್ತದೆ. ಹೀಗೆಯೇ ಮುಂದಿನ ಪುರಿಗಳಿಗೂ (ಗ್ರಂಥವನ್ನು) ಹೊಂದಿಸಿಕೊಳ್ಳಬೇಕು.

ಎಲ್ಲರಿಗೂ ಮೇರು(ಪರ್ವತವು) ಉತ್ತರಕ್ಕೇ ಇರುತ್ತದೆ. ಅಮರಾವತಿಯಲ್ಲಿ ಸೂರ್ಯನು ನೆತ್ತಿಯ ಮೇಲಿರುವನಲ್ಲ, ಆಗ ಸಂಯಮಿನಿಯಲ್ಲಿ ಉದಯಿಸುವಂತೆ ಕಾಣುತ್ತಾನೆ, ಆ (ಸಂಯಮಿನಿ)ಯಲ್ಲಿ ನೆತ್ತಿಯಮೇಲಿರುವಾಗ ವಾರುಣಿಯಲ್ಲಿ ಉದಯಿಸುವಂತೆ ಕಾಣಿಸುತ್ತಾನೆ. ಹೀಗೆಯೇ (ವಾರುಣಿಯಲ್ಲಿ ನೆತ್ತಿಯಮೇಲಿರುವಾಗ) ಉತ್ತರದಲ್ಲಿರುವ (ವಿಭಾಪುರಿಯಲ್ಲಿಯೂ) ಉದಯಿಸುವಂತೆ ಕಾಣಿಸುತ್ತಾನೆ.[6] ಏಕೆಂದರೆ ಸುತ್ತುವ (ದೂರವು) ಸಮಾನವಾಗಿರುತ್ತದೆ. ಇಲಾವೃತದಲ್ಲಿ ವಾಸವಾಗಿರು

---

1. ಸೂರ್ಯನ ಗತಿಯಾಗುವದು ; ಅಲ್ಲಿ ನಿವಾಸಿಗಳೂ ಇಲ್ಲವಾಗುವದು.
2. ಐ. ಬ್ರಾ. ೧೪-೬ನ್ನು ನೋಡಿ.
3. ನಿವಾಸಿಗಳಿಲ್ಲದ್ದರಿಂದ ಅವರಿಗೆ ಆಗುತ್ತಿದ್ದ ಉದಯಾಸ್ತಮಯಗಳಿಲ್ಲವೆಂದಿದೆ ಎಂದರ್ಥ. ಆದ್ದರಿಂದ ಅಮರಾವತಿಯಲ್ಲಿ ಯಾರೂ ಇಲ್ಲದಿರುವಾಗ ಉದಯಾಸ್ತಮಯಗಳಿಲ್ಲದ್ದರಿಂದ ವಸುಗಳ ಭೋಗವೂ ಮುಗಿಯುವದು. ಹೀಗೆಯೇ ಮುಂದುಮುಂದಿನ ಪುರಗಳಲ್ಲಿ ಯಾರೂ ಇಲ್ಲದಿದ್ದರೆ ಅದರ ಎರಡರಷ್ಟು ಕಾಲವಾದ ಬಳಿಕ ರುದ್ರಾದಿಗಳ ಭೋಗವು ಮುಗಿಯುವದು.
4. ವಿ. ಪು. ೨-೮-೧೪, ೧೫ನ್ನು ನೋಡಿ.
5. ನಮ್ಮ ದೃಷ್ಟಿಯಿಂದ ದಕ್ಷಿಣದಿಕ್ಕಿನಿಂದ ಉದಯವೇ ಹೊರತು ನಿಜವಾಗಿ ಸೂರ್ಯನು ಅಲ್ಲಿ ದಕ್ಷಿಣದಲ್ಲಿ ಉದಯಿಸುತ್ತಾನೆಂದಲ್ಲ; ಏಕೆಂದರೆ ಎಲ್ಲಿ ಉದಯಿಸುತ್ತಾನೋ ಅದೇ ಪೂರ್ವ.
6. ಇಲ್ಲಿ ಆ।। ಗಿ।। ಟೀಕೆಯಲ್ಲಿ ವಾಯುಪುರಾಣದಿಂದ ಪ್ರಮಾಣವಚನವನ್ನು ಉದಾಹರಿಸಿದೆ.

ವವರಿಗೆ ಸುತ್ತಲೂ ಪರ್ವತದ ಪೌಳಿಯಿಂದ ಸೂರ್ಯರಶ್ಮಿಗಳಿಗೆ ಅಡ್ಡಿಯಾಗಿರು ವದರಿಂದ ಸೂರ್ಯನು ಮೇಲೆ ಉದಯಿಸುವಂತೆಯೂ ಕೆಳಗೆ ಅಸ್ತಮಯವಾಗು ವಂತೆಯೂ ಕಾಣಿಸುತ್ತಾನೆ. ಏಕೆಂದರೆ ಪರ್ವತಗಳ ಮೇಲಿರುವ ಆಕಾಶಭಾಗದಿಂದ ಸೂರ್ಯನ ಪ್ರಕಾಶವು ಒಳಕ್ಕೆ ಬರಬೇಕಾಗಿರುತ್ತದೆ.[1]

ಉಪಾಸಕನ ಫಲಭೋಗಕಾಲ

(ಭಾಷ್ಯ)

೨೨೨. ತಥಾ ಋಗಾದ್ಯಮೃತೋಪಜೀವಿನಾಮ್ ಅಮೃತಾನಾಂ ಚ ದ್ವಿಗುಣೋ-ತ್ತರೋತ್ತರವೀರ್ಯವತ್ತ್ವಮ್ ಅನುಮಾಯತೇ ಭೋಗಕಾಲದ್ವೈಗುಣ್ಯಲಿಙ್ಗೇನ । ಉದ್ಯಮನಸಂವೇಶನಾದಿದೇವಾನಾಂ ರುದ್ರಾದೀನಾಂ ವಿದುಷಶ್ಚ ಸಮಾನಮ್ ॥

(ಭಾಷ್ಯಾರ್ಥ)

ಇದರಂತೆ[2] ಋಗಾದ್ಯಮೃತಗಳನ್ನು ಉಪಜೀವಿಸಿಕೊಂಡಿರುವವರಿಗೂ ಅಮೃತ ಗಳಿಗೂ (ಹಿಂದುಹಿಂದಿನದಕ್ಕಿಂತ) ಮುಂದುಮುಂದಿನದಕ್ಕೆ ಎರಡರಷ್ಟು ವೀರ್ಯವಿರುವದೆಂದು, ಭೋಗಕಾಲವು ಎರಡರಷ್ಟಾಗಿರುವದೆಂಬ ಲಿಂಗದಿಂದ ಅನುಮಾನಿಸಬೇಕಾಗಿರುತ್ತದೆ. (ಭೋಗಕ್ಕಾಗಿ) ಮೇಲಕ್ಕೇಳುವದು, ಸುಮ್ಮನಾಗುವದು-ಮುಂತಾದದ್ದು ರುದ್ರಾದಿಗಳಿಗೂ ಉಪಾಸಕರಿಗೂ ಸಮಾನವಾಗಿರುತ್ತದೆ.[3]

ಮೂರನೆಯ ಅಧ್ಯಾಯ - ಹನ್ನೊಂದನೆಯ ಖಂಡ

(ಆದಿತ್ಯೋಪಾಸನೆ)

ಆದಿತ್ಯೋಪಾಸನೆಯ ಪರಮಫಲ

(ಉಪನಿಷತ್ತು)

ಅಥ ತತ ಊರ್ಧ್ವ ಉದೇತ್ಯ ನೈವೋದೇತಾ ನಾಸ್ತಮೇತೈಕಲ ಏವ ಮಧ್ಯೇ ಸ್ಥಾತಾ ತದೇಷ ಶ್ಲೋಕಃ ॥೧೫॥

1. ಇಲ್ಲಿರುವ ವಿವರಗಳನ್ನು ಪೌರಾಣಿಕರಿಂದಲೇ ತಿಳಿದುಕೊಂಡು ಸರಿಯಾಗಿ ಮನದಟ್ಟು ಮಾಡಿಕೊಳ್ಳಬೇಕು. 2. ಭೋಗಕಾಲವು ದ್ವಿಗುಣವಾಗಿರುವಂತೆ. 3. ರುದ್ರಾದಿಗಳಿಗೆ ಆಗುವಂಥ ಭೋಗವೇ ಅವರ ಸಾಯುಜ್ಯವನ್ನು ಪಡೆದ ಉಪಾಸಕನಿಗೂ ಆಗುವದು.

೧. ಇನ್ನು ಆ ಬಳಿಕ ಮೇಲುಗಡೆ ಉದಯಿಸಿದವನು ಉದಯಿಸುವದೂ ಇಲ್ಲ ; ಅಸ್ತವನ್ನು ಹೊಂದುವದೂ ಇಲ್ಲ. ಒಂಟಿಯಾಗಿಯೇ ನಡುವೆ ನಿಂತುಬಿಡುವನು. ಆ (ವಿಷಯ)ದಲ್ಲಿ ಈ ಶ್ಲೋಕವು (ಬಂದಿರುತ್ತದೆ):

ಸೂರ್ಯನ ಉದಯಾಸ್ತಗಳು ನಿಲ್ಲುವ ಸ್ಥಿತಿ

೨೨೩. ಕೃತ್ವಾ ಏವಮುದಯಾಸ್ತಮನೇನ ಪ್ರಾಣಿನಾಂ ಸ್ವಕರ್ಮಫಲಭೋಗ ನಿಮಿತ್ತಮ್ ಅನುಗ್ರಹಮ್, ತತ್ಕರ್ಮಫಲಭೋಗಕ್ಷಯೇ ತಾನಿ ಪ್ರಾಣಿಜಾತಾನಿ ಆತ್ಮನಿ ಸಂಹೃತ್ಯ ಅಥ ತತಃ ತಸ್ಮಾತ್ ಅನನ್ತರಂ ಪ್ರಾಣ್ಯನುಗ್ರಹಕಾಲಾತ್ ಊರ್ಧ್ವಃ ಸನ್ ಆತ್ಮನಿ ಉದೇತ್ಯ ಉದ್ಗಮ್ಯ ಯಾನ್ ಪ್ರತ್ಯುದೇತಿ ತೇಷಾಂ ಪ್ರಾಣಿನಾಮ್ ಅಭಾವಾತ್ ಸ್ವಾತ್ಮಸ್ಥಃ ನೈವೋದೇತಾ ನಾಸ್ತಮೇತಾ । ಏಕಲಃ ಅದ್ವಿತೀಯಃ ಅನವಯವಃ ಮಧ್ಯೇ ಸ್ವಾತ್ಮನ್ಯೇವ ಸ್ಥಾತಾ ॥

(ಭಾಷ್ಯಾರ್ಥ)

ಹೀಗೆ ಉದಯಾಸ್ತಮನ(ಕ್ರಿಯೆಗಳಿಂದ) ಪ್ರಾಣಿಗಳಿಗೆ ಅವರವರ ಕರ್ಮಫಲ-ಭೋಗಕ್ಕಾಗಿ ಅನುಗ್ರಹವನ್ನು ಮಾಡಿ, ಅವರ ಕರ್ಮಫಲಭೋಗವು ಸವೆಯಲು ಆ ಪ್ರಾಣಿಸಮೂಹಗಳನ್ನು ತನ್ನಲ್ಲಿ ಉಪಸಂಹಾರಮಾಡಿಕೊಂಡು, ಇನ್ನು ಆ ಬಳಿಕ ; ಆ ಪ್ರಾಣಿಗಳಿಗೆ ಅನುಗ್ರಹಿಸುವ ಕಾಲವಾದಮೇಲೆ[1] ಮೇಲುಗಡೆ ಇರುವವನಾಗಿ[2] ತನ್ನಲ್ಲಿಯೇ ಉದಯಿಸಿದವನಾಗಿ ಮೇಲಕ್ಕೇರಿದವನಾಗಿ[3] ಯಾರಿಗಾಗಿ ಉದಯಿಸ ಬೇಕೋ ಆ ಪ್ರಾಣಿಗಳು ಇಲ್ಲದಿದ್ದರಿಂದ ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡವನಾಗಿ, ಉದಯಿಸುವದೂ ಇಲ್ಲ, ಅಸ್ತಮಯವಾಗುವದೂ ಇಲ್ಲ ; ಒಬ್ಬನೇ ಅದ್ವಿತೀಯನಾಗಿ ನಿರವಯವನಾಗಿ ನಡುವೆ, ತನ್ನಲ್ಲಿಯೇ ಇದ್ದುಕೊಂಡುಬಿಡುವನು.

---

1. ಹೀಗೆ ಪ್ರಾಣ್ಯನುಗ್ರಹವನ್ನು ಮಾಡುವ ಸಾವಿರ ಯುಗಗಳು ಕಳೆದ ಮೇಲೆ ಎಂದರ್ಥ. ಸೂ. ಭಾ. ೩-೩-೩೨ (ಭಾ. ಭಾ. ೩೮೦)ನ್ನು ನೋಡಿ.
2. ಉತ್ಕೃಷ್ಟವಾದ ಬ್ರಹ್ಮಸ್ವರೂಪದಲ್ಲಿಯೇ ಇದ್ದುಕೊಂಡು ಎಂದರ್ಥ.
3. ಉದಯಾಸ್ತಮಯಗಳಿಲ್ಲದ ಕೈವಲ್ಯಸ್ವರೂಪದಲ್ಲಿದ್ದುಕೊಂಡು ಎಂದರ್ಥ. ತನ್ನ ಅಧಿಕಾರವು ಕಳೆದ ಬಳಿಕ ಸೂರ್ಯನು ಕೈವಲ್ಯವನ್ನೇ ಅನುಭವಿಸುತ್ತಾನೆ ; ಉಪಾಸಕನೂ ಸೂರ್ಯಸಾಯುಜ್ಯವನ್ನು ಹೊಂದಿ ಕ್ರಮಮುಕ್ತಿಯನ್ನು ಪಡೆಯುತ್ತಾನೆ - ಎಂದು ಆಶಯ.

ಸೂರ್ಯನಲ್ಲಿ ಸಮಾಹಿತನಾಗಿದ್ದ ಉಪಾಸಕನ ವಚನಕ್ಕೆ ಅವತರಣಿಕೆ

(ಭಾಷ್ಯ)

೨೨೪. ತತ್ರ ಕಶ್ಚಿದ್ ವಿದ್ವಾನ್ ವಸ್ವಾದಿಸಮಾನಚರಣಃ ರೋಹಿತಾದ್ಯಮೃತ ಭೋಗಭಾಗೀ ಯಥೋಕ್ತಕ್ರಮೇಣ ಸ್ವಾತ್ಮಾನಂ ಸವಿತಾರಮ್ ಆತ್ಮತ್ವೇನ ಉಪೇತ್ಯ ಸಮಾಹಿತಃ ಸನ್ ಏತಂ ಮನ್ತ್ರಂ ದೃಷ್ಟ್ವಾ ಉತ್ಥಿತಃ ಅನ್ಯಸ್ಮೈ ಪೃಷ್ಟವತೇ ಜಗಾದ । ''ಯತಸ್ತ್ವಮ್ ಆಗತೋ ಬ್ರಹ್ಮಲೋಕಾತ್ ಕಿಂ ತತ್ರಾಪಿ ಅಹೋರಾತ್ರಾಭ್ಯಾಂ ಪರಿವರ್ತಮಾನಃ ಸವಿತಾ ಪ್ರಾಣಿನಾಮ್ ಆಯುಃ ಕ್ಷಪಯತಿ ಯಥೇಹ ಅಸ್ಮಾಕಮ್ ?'' ಇತ್ಯೇವಂ ಪೃಷ್ಟಃ ಪ್ರತ್ಯಾಹ । ತತ್ ತತ್ರ ಯಥಾ ಪೃಷ್ಟೇ ಯಥೋಕ್ತೇ ಚ ಅರ್ಥೇ ಏಷ ಶ್ಲೋಕೋ ಭವತಿ ತೇನೋಕ್ತೋ ಯೋಗಿನಾ ಇತಿ ಶ್ರುತೇರ್ವಚನಮಿದಮ್ ॥

(ಭಾಷ್ಯಾರ್ಥ)

ಇಲ್ಲಿ ಯಾವನೋ ಒಬ್ಬ ಉಪಾಸಕನು ವಸುಗಳೇ ಮುಂತಾದ ಆಚಾರವುಳ್ಳವನಾಗಿ ಮೇಲೆ ಹೇಳಿದ ಕ್ರಮದಿಂದ[1] ರೋಹಿತವೇ ಮುಂತಾದ ಅಮೃತಗಳ ಭೋಗವನ್ನು ಪಡೆದು ತನ್ನ ಆತ್ಮನಾದ ಸೂರ್ಯನೇ ತಾನೆಂದು ಇಟ್ಟುಕೊಂಡು[2] ಸಮಾಹಿತನಾಗಿ (ಈ ಮುಂದೆ ಹೇಳುವ) ಮಂತ್ರಗಳನ್ನು ಕಂಡುಹಿಡಿದು, (ಸಮಾಧಿಯಿಂದ) ಎದ್ದವನಾಗಿ[3] ಕೇಳಿದ ಮತ್ತೊಬ್ಬನಿಗೆ ಹೇಳಿದನು. ''ನೀನು ಬ್ರಹ್ಮಲೋಕದಿಂದ ಬಂದಿರುವೆಯಷ್ಟೆ, ಅಲ್ಲಿಯೂ ಹಗಲುರಾತ್ರಿಗಳಿಂದ ಸುತ್ತುತ್ತಾ ಪ್ರಾಣಿಗಳ ಆಯುಸ್ಸನ್ನು, ಇಲ್ಲಿ ನಮ್ಮಗಳ (ಆಯುಸ್ಸನ್ನು ಕ್ಷಯಗೊಳಿಸುತ್ತಿರುವಂತೆಯೇ) ಕ್ಷಯಗೊಳಿಸುತ್ತಿರುವನೇನು ? - ಎಂದು ಕೇಳಲು (ಈ ಮಂತ್ರದಿಂದ) ಉತ್ತರವನ್ನು ಕೊಟ್ಟನು. (ತತ್ = ತತ್ರ) ಅಲ್ಲಿ, (ಅವನು) ಕೇಳಿದ ಮತ್ತು ಮೇಲೆ ಹೇಳಿರುವ ಅರ್ಥದ (ವಿಷಯ)ದಲ್ಲಿ ಆ ಯೋಗಿಯು ಹೇಳಿದ ಈ ಶ್ಲೋಕವಿರುತ್ತದೆ - ಎಂಬುದು ಶ್ರುತಿಯ ವಚನವು.

(ಉಪನಿಷತ್ತು)

ನ ವೈ ತತ್ರ ನ ನಿಮ್ಲೋಚ ನೋದಿಯಾಯ ಕದಾಚನ ।
ದೇವಾಸ್ತೇನಾಹಗ್ಂ ಸತ್ಯೇನ ಮಾ ವಿರಾಧಿಷಿ ಬ್ರಹ್ಮಣೇತಿ ॥೨॥

---

1. ವಸ್ವಾದಿಕ್ರಮದಿಂದ. 2. ರೋಹಿತಾದ್ಯಮೃತಗಳಿಂದ ಕೂಡಿದ ಸೂರ್ಯನೇ ತಾನೆಂದು ಭಾವಿಸಿಕೊಂಡು. 3. ಸಮಾಧಿಯಲ್ಲಿಸೂರ್ಯಸಾಕ್ಷಾತ್ಕಾರವನ್ನು ಹೊಂದಿ ಎಚ್ಚತ್ತು.

೨. ಅಲ್ಲಿ(ಇದು) ಇರುವದಿಲ್ಲ. (ಅಲ್ಲಿ) ಎಂದಿಗೂ ನಿಮ್ಲುಕ್ತನಾಗಲಿಲ್ಲ, ಉದಯಿಸಲೂ ಇಲ್ಲ. ದೇವತೆಗಳಿರ, ಆ ಸತ್ಯದಿಂದಲೇ ನಾನು ಬ್ರಹ್ಮಕ್ಕೆ ಎದುರಾಗದೆ ಇರುವಂತಾಗಲಿ !

ಬ್ರಹ್ಮಲೋಕದ ವಿಷಯಕ್ಕೆ ಉಪಾಸಕನ ಅನುಭವ

(ಭಾಷ್ಯ)

೨೨೫. ನ ವೈ ತತ್ರ ಯತೋಽಹಂ ಬ್ರಹ್ಮಲೋಕಾತ್ ಆಗತಃ ತಸ್ಮಿನ್ ನ ವೈ ತತ್ರ ಏತದಸ್ತಿ ಯತ್ ಪೃಚ್ಛಸಿ । ನ ಹಿ ತತ್ರ ನಿಮ್ಲೋಚ ಅಸ್ತಮಗಮತ್ ಸವಿತಾ ನ ಚ ಉದಿಯಾಯ ಉದ್ಗತಃ ಕುತಶ್ಚಿತ್ ಕದಾಚನ ಕಸ್ಮಿಂಶ್ಚಿದಪಿ ಕಾಲೇ ಇತಿ । ಉದಯಾಸ್ತಮಯವರ್ಜಿತೋ ಬ್ರಹ್ಮಲೋಕಃ ಇತ್ಯನುಪಪನ್ನಮ್ ಇತ್ಯುಕ್ತಃ ಶಪಥಮಿವ ಪ್ರತಿಪೇದೇ । ಹೇ ದೇವಾಃ ಸಾಕ್ಷಿಣೋ ಯೂಯಂ ಶೃಣುತ । ಯಥಾ ಮಯೋಕ್ತಂ ಸತ್ಯಂ ವಚಃ ತೇನ ಸತ್ಯೇನ ಅಹಂ ಬ್ರಹ್ಮಣಾ ಬ್ರಹ್ಮಸ್ವರೂಪೇಣ ಮಾ ವಿರಾಧಿಷಿ ಮಾ ವಿರುಧ್ಯೇಯಮ್ । ಅಪ್ರಾಪ್ತಿರ್ಬ್ರಹ್ಮಣೋ ಮಮ ಮಾ ಭೂತ್ ಇತ್ಯರ್ಥಃ ॥

(ಭಾಷ್ಯಾರ್ಥ)

ನ ವೈ ತತ್ರ (ಎಂಬ ಕಂಡಿಕೆಯ ಅರ್ಥವೇನೆಂದರೆ), ಅಲ್ಲಿ ಯಾವ ಬ್ರಹ್ಮಲೋಕದಿಂದ ನಾನು ಬಂದಿರುವೆನೋ ಅಲ್ಲಿ, ನೀನು ಕೇಳಿದೆಯಲ್ಲ ಇದಿಲ್ಲ.[1] ಏಕೆಂದರೆ ಅಲ್ಲಿ ಸೂರ್ಯನು ಎಂದಿಗೂ ಯಾವ ಕಾಲದಲ್ಲಿಯೂ ನಿಮ್ಲುಕ್ತನಾಗಲಿಲ್ಲ, ಅಸ್ತಂಗತನಾಗಲೂ ಇಲ್ಲ, ಉದಯಿಸಲೂ ಇಲ್ಲ, ಹುಟ್ಟಲೂ ಇಲ್ಲ. ಬ್ರಹ್ಮಲೋಕವು ಉದಯಾಸ್ತಮಯರಹಿತವಾದದ್ದು ಎಂಬುದು ಹೊಂದುವದಿಲ್ಲವಲ್ಲ[2] ! ಎಂದು (ಪೃಚ್ಛಕನು) ಕೇಳಲಾಗಿ ಈ (ಆ ಉಪಾಸಕನು) ಆಣೆಯಿಟ್ಟಂತೆ[3] ಹೀಗೆಂದನು : ಎಲೈ ದೇವತೆಗಳಿರ, ನೀವು ಸಾಕ್ಷಿಗಳಾಗಿ (ಈ ಮಾತನ್ನು) ಕೇಳಿರಿ ! ನಾನು ನಿಜವಾದ

1. ಅಲ್ಲಿಯೂ ಉದಯಾಸ್ತಮಯಗಳಿಂದ ಜನರ ಆಯುಸ್ಸು ಸವೆಯುತ್ತಿರುವದೊ ?- ಎಂದು ಕೇಳಿದೆಯಲ್ಲ, ಅದು ಅಲ್ಲಿಲ್ಲ. ಯಾವ ಪರಿಣಾಮವು ಇಲ್ಲದೆ ಆ ಲೋಕವು ಬ್ರಹ್ಮಕಲ್ಪದವರೆಗೂ ಇರುತ್ತದೆ ಎಂದು ಭಾವ.
2. ಅದೂ ಲೋಕವೇ ಆದ್ದರಿಂದ ಅಲ್ಲಿಯೂ ಉದಯಾಸ್ತಮಯಗಳಿರಬೇಕಲ್ಲ ! - ಎಂದು ಭಾವ. 3. ಶಪಥವೂ ಒಂದು ಪ್ರಮಾಣ ; ಆದ್ದರಿಂದ ಇಲ್ಲಿ ಆ ಯೋಗಿಯು ಸತ್ಯವನ್ನೇ ಹೇಳಿರುತ್ತಾನೆ ಎಂದು ಭಾವ. ಬೃ. ಭಾ. ೧-೩-೨೪ (ಭಾ. ಭಾ. ೮೮).

ಮಾತನ್ನೇ ಆಡಿದ್ದರೆ, ಆ ಸತ್ಯವಚನ(ಮಹಿಮೆ)ಯಿಂದ ನಾನು ಬ್ರಹ್ಮಕ್ಕೆ ಬ್ರಹ್ಮಸ್ವರೂಪಕ್ಕೆ (ಮಾ ವಿರಾಧಿಷಿ = ಮಾ ವಿರುಧ್ಯೇಯಮ್) ಎದುರಾಗದೆ- ಇರುವಂತಾಗಲಿ ವಿರುದ್ಧನಾಗದೆ ಇರುವಂತಾಗಲಿ ! ನನಗೆ ಬ್ರಹ್ಮದ ಅಪ್ರಾಪ್ತಿಯು ಆಗದಿರಲಿ !- ಎಂದರ್ಥ.

(ಉಪನಿಷತ್ತು)

ನ ಹ ವಾ ಅಸ್ಮಾ ಉದೇತಿ ನ ನಿಮ್ಲೋಚತಿ ಸಕೃದ್ದಿವಾ ಹೈವಾಸ್ಮೈ ಭವತಿ ಯ ಏತಾಮೇವಂ ಬ್ರಹ್ಮೋಪನಿಷದಂ ವೇದ ॥೩॥

೩. ಯಾವನು ಈ ಬ್ರಹ್ಮೋಪನಿಷತ್ತನ್ನು ಅರಿತುಕೊಳ್ಳುವನೋ, ಅವನಿಗೆ ಉದಯವಾಗುವದಿಲ್ಲ, ನಿಮ್ಲುಕ್ತನಾಗುವದೂ ಇಲ್ಲ; ಅವನಿಗೆ ಯಾವಾಗಲೂ ಹಗಲೇ ಆಗಿರುತ್ತದೆ.

ಮಧುವಿದ್ಯೆಗೆ ಕಾಲಾಪರಿಚ್ಛಿನ್ನಬ್ರಹ್ಮಪ್ರಾಪ್ತಿಯೇ ಫಲ

(ಭಾಷ್ಯ)

೨೨೬. ಸತ್ಯಂ ತೇನೋಕ್ತಮಿತ್ಯಾಹ ಶ್ರುತಿಃ । ನ ಹ ವಾ ಅಸ್ಮೈ ಯಥೋಕ್ತಬ್ರಹ್ಮವಿದೇ ನೋದೇತಿ ನ ನಿಮ್ಲೋಚತಿ ನಾಸ್ತಮೇತಿ । ಕಿಂ ತು ಬ್ರಹ್ಮವಿದೇ ಅಸ್ಮೈ ಸಕೃದ್ದಿವಾ ಹೈವ ಸದೈವ ಅಹರ್ಭವತಿ ಸ್ವಯಂಜ್ಯೋತಿಷ್ಟ್ವಾದ್ ಯ ಏತಾಂ ಯಥೋಕ್ತಾಂ ಬ್ರಹ್ಮೋಪನಿಷದಂ ವೇದಗುಹ್ಯಂ ವೇದ । ಏವಂ ತನ್ಮೂಣ ವಂಶಾದಿತ್ರಯಂ ಪ್ರತ್ಯಮೃತಸಂಬನ್ಧಂ ಚ ಯಚ್ಚ ಅನ್ಯದ್ ಅವೋಚಾಮ ಏವಂ ಜಾನಾತಿ ಇತ್ಯರ್ಥಃ । ವಿದ್ವಾನ್ ಉದಯಾಸ್ತಮಯಕಾಲಾಪರಿಚ್ಛೇದ್ಯಂ ನಿತ್ಯಮಜಂ ಬ್ರಹ್ಮ ಭವತಿ ಇತ್ಯರ್ಥಃ॥

(ಭಾಷ್ಯಾರ್ಥ)

ಆ (ಉಪಾಸಕನು) ಹೇಳಿದ್ದು ಸತ್ಯವು ಎಂದು ಶ್ರುತಿ ಹೇಳುತ್ತಿದೆ : ಅವನಿಗೆ ಮೇಲೆ ಹೇಳಿರುವ ಬ್ರಹ್ಮವನ್ನು ಅರಿತುಕೊಂಡವನಿಗೆ ಉದಯವಾಗುವದೂ ಇಲ್ಲ, ನಿಮ್ಲುಕ್ತನಾಗುವದೂ ಇಲ್ಲ, ಅಸ್ತನಾಗುವದೂ ಇಲ್ಲ; ಮತ್ತೇನೆಂದರೆ ಈ ಬ್ರಹ್ಮಜ್ಞಾನಿಗೆ ಯಾವಾಗಲೂ ಹಗಲೇ ಆಗಿರುತ್ತದೆ, ಸ್ವಯಂಜ್ಯೋತಿಯಾಗಿರುವದರಿಂದ[1] (ಅವನಿಗೆ) ಎಂದೆಂದಿಗೂ ಹಗಲೇ ಆಗಿರುತ್ತದೆ. ಯಾವನು ಈ ಬ್ರಹ್ಮೋಪನಿಷತ್ತನ್ನು, ವೇದದ

1. ಬ್ರಹ್ಮವು ಸೂರ್ಯಾದಿಗಳನ್ನು ಬೆಳಗುವ ಸ್ವಯಂಜ್ಯೋತಿಯಾಗಿರುವದರಿಂದ ಅವನು ಬ್ರಹ್ಮಸ್ವರೂಪನೇ ಆಗಿರುವಾಗ ಅವನಿಗೆ ಹಗಲು ರಾತ್ರೆಗಳಿರುವದಿಲ್ಲ.

ರಹಸ್ಯವನ್ನು[1] ಅರಿತುಕೊಂಡಿರುವನೋ, ಹೀಗೆ ತಂತ್ರದಿಂದ[2] ವಂಶವೇ ಮುಂತಾದ ಮೂರನ್ನೂ[3] ಒಂದೊಂದು ಅಮೃತಕ್ಕೂ (ದೇವತಾ) ಸಂಬಂಧವನ್ನು[4], ಇನ್ನೂ ಏನೇನು ಹೇಳಿರುವೆವೋ (ಅದೆಲ್ಲವನ್ನೂ)[5] ಹೀಗೆ ಅರಿತಿರುವನೋ (ಅವನಿಗೆ) ಎಂದರ್ಥ. ಉಪಾಸಕನು ಉದಯಾಸ್ತಮಯಕಾಲಗಳಿಂದ ಪರಿಚ್ಛಿನ್ನವಲ್ಲದ ನಿತ್ಯವಾದ ಅಜನಾದ ಬ್ರಹ್ಮವೇ ಆಗುವನು[6] ಎಂದರ್ಥ.

ಮಧುವಿದ್ಯೆಯ ಗುರುಪರಂಪರೆ

(ಉಪನಿಷತ್ತು)

ತದ್ಧೈತದ್ ಬ್ರಹ್ಮಾ ಪ್ರಜಾಪತಯ ಉವಾಚ ಪ್ರಜಾಪತಿರ್ಮನವೇ ಮನುಃ ಪ್ರಜಾಭ್ಯಸ್ತದ್ಧೈತದುದ್ದಾಲಕಾಯಾऽऽರುಣಯೇ ಜ್ಯೇಷ್ಠಾಯ ಪುತ್ರಾಯ ಪಿತಾ ಬ್ರಹ್ಮ ಪ್ರೋವಾಚ ॥೪॥

೪. ಆ ಇದನ್ನು ಬ್ರಹ್ಮನು ಪ್ರಜಾಪತಿಗೆ ಹೇಳಿದನು ; ಪ್ರಜಾಪತಿಯು ಮನುವಿಗೆ, ಮನುವು ಪ್ರಜೆಗಳಿಗೆ (ಹೇಳಿದನು). ಆ ಈ ಬ್ರಹ್ಮ(ವಿಜ್ಞಾನ)ವನ್ನು ಉದ್ದಾಲಕ ಆರುಣಿ ಎಂಬ ಜ್ಯೇಷ್ಠಪುತ್ರನಿಗೆ (ಅವನ) ತಂದೆಯು ಹೇಳಿದನು.

ವಿದ್ಯೆಯ ಸ್ತುತಿ

(ಭಾಷ್ಯ)

೨೨೭. ತದ್ ಹ ಏತತ್ ಮಧುಜ್ಞಾನಮ್ ಬ್ರಹ್ಮಾ ಹಿರಣ್ಯಗರ್ಭಃ ವಿರಾಜೇ ಪ್ರಜಾಪತಯೇ ಉವಾಚ । ಸೋऽಪಿ ಮನವೇ । ಮನುಃ ಇಕ್ಷ್ವಾಕ್ವಾದ್ಯಾಭ್ಯಃ ಪ್ರಜಾಭ್ಯಃ ಪ್ರೋವಾಚ । ಇತಿ ವಿದ್ಯಾಂ ಸ್ತೌತಿ । ಬ್ರಹ್ಮಾದಿವಿಶಿಷ್ಟಕ್ರಮಾಗತಾ ಇತಿ । ಕಿಂ ಚ ತದ್ಧೈತತ್ ಮಧುಜ್ಞಾನಮ್ ಉದ್ದಾಲಕಾಯ ಆರುಣಯೇ ಪಿತಾ ಬ್ರಹ್ಮವಿಜ್ಞಾನಂ ಜ್ಯೇಷ್ಠಾಯ ಪುತ್ರಾಯ ಪ್ರೋವಾಚ ॥

1. ಉಪಾಸನೆಯನ್ನು ಎಂದರ್ಥ. 2. ಏಕಕಾಲದಲ್ಲಿ.
3. ಮಧುವಿನ ಅಡ್ಡಬಿದಿರು, ಜೇನುಹುಟ್ಟಿ, ಮಧುನಾಡಿ - ಇವನ್ನು.
4. ಅಮೃತಗಳು ವಸುರುದ್ರಾದಿಗಳಿಗೆ ಅಮೃತವಾಗಿರುವದೆಂಬುದನ್ನು.
5. ವಸ್ವಾದಿಗಳೂ ಉಪಾಸಕನೂ ಈ ಅಮೃತಗಳನ್ನು ಅನುಭವಿಸುವ ಪ್ರಕಾರವೇ ಮುಂತಾದದ್ದನ್ನು. 6. ಕ್ರಮಮುಕ್ತಿಯನ್ನೇ ಪಡೆಯುವನು.

(ಭಾಷ್ಯಾರ್ಥ)

ಆ ಈ ಮಧುಜ್ಞಾನವನ್ನು ಬ್ರಹ್ಮನು, ಹಿರಣ್ಯಗರ್ಭನು ಪ್ರಜಾಪತಿಗೆ ವಿರಾಜನಿಗೆ ಹೇಳಿದನು. ಆ (ವಿರಾಜನೂ) ಮನುವಿಗೆ, ಮನುವು ಇಕ್ಷ್ವಾಕುವೇ ಮೊದಲಾದ ಪ್ರಜೆಗಳಿಗೆ ಹೇಳಿದನು - ಎಂದು ವಿದ್ಯೆಯನ್ನು- 'ಹೀಗೆ ಬ್ರಹ್ಮಾದಿಗಳೆಂಬ ಅಸಾಧಾರಣ ಕ್ರಮದಿಂದ (ಇದು) ಬಂದಿದೆ' ಎಂದು - ಹೊಗಳಿರುತ್ತದೆ.[1] ಮತ್ತು ಆ ಈ ಮಧುಜ್ಞಾನವನ್ನು ಉದ್ದಾಲಕ ಆರುಣಿ ಎಂಬ ಹಿರಿಯಮಗನಿಗೆ (ಅವನ) ತಂದೆಯು

ಈ ವಿದ್ಯೆಯ ಉಪದೇಶಕ್ಕೆ ಅಧಿಕಾರಿಗಳು

(ಉಪನಿಷತ್ತು)

ಇದಂ ವಾವ ತಜ್ಜ್ಯೇಷ್ಠಾಯ ಪುತ್ರಾಯ ಪಿತಾ ಬ್ರಹ್ಮ ಪ್ರಬ್ರೂಯಾತ್ ಪ್ರಣಾಯ್ಯಾಯ ವಾಽನ್ತೇವಾಸಿನೇ ॥೫॥

ನಾನ್ಯಸ್ಮೈ ಕಸ್ಮೈಚನ ಯದ್ಯಪ್ಯಸ್ಮಾ ಇಮಾಮದ್ಭಿಃ ಪರಿಗೃಹೀತಾಂ ಧನಸ್ಯ ಪೂರ್ಣಾಂ ದದ್ಯಾದೇತದೇವ ತತೋ ಭೂಯ ಇತ್ಯೇತದೇವ ತತೋ ಭೂಯ ಇತಿ ॥೬॥

೫. ಆ ಈ ಬ್ರಹ್ಮವನ್ನು ಜ್ಯೇಷ್ಠಪುತ್ರನಿಗೆ ತಂದೆಯು ಹೇಳಬೇಕು ; ಅಥವಾ ಪ್ರಣಾಯ್ಯನಾದ ಅಂತೇವಾಸಿಗೆ (ಹೇಳಬೇಕು).

೬. ಬೇರೆ ಯಾವನೊಬ್ಬನಿಗೂ- ಇವನಿಗೆ ಈ ನೀರಿನಿಂದ ಸುತ್ತುವರೆದಿರುವ ಧನಪೂರ್ಣವಾದ ಈ (ಪೃಥಿವಿಯನ್ನು) ಕೊಟ್ಟರೂ - (ಹೇಳ)ಬಾರದು. ಅದಕ್ಕಿಂತಲೂ ಇದೇ ಹೆಚ್ಚಿನದು ; ಅದಕ್ಕಿಂತ ಇದೇ ಹೆಚ್ಚಿನದು.

---

1. ವಿರಾಜನಿಗೆ ಈ ಉಪಾಸನೆಯು ಬೇಕಿಲ್ಲದಿದ್ದರೂ ಮನ್ವಾದಿಕ್ರಮದಿಂದ ಪ್ರಜೆಗಳಿಗೆ ಸಂಪ್ರದಾಯಾಗತವಾಗಿ ಬಂದದ್ದು ಎಂದು ಹೊಗಳಿದೆ ಎಂದರ್ಥ. ಮಧುವಿದ್ಯೆಯಲ್ಲಿ ಆದಿತ್ಯನಿಗೆ ಅಧಿಕಾರವಿಲ್ಲದಿದ್ದರೂ ಶುದ್ಧಬ್ರಹ್ಮವಿದ್ಯೆಯಲ್ಲಿ ಅಧಿಕಾರವುಂಟು ; ಆದ್ದರಿಂದ ಆದಿತ್ಯ ಸಾಯುಜ್ಯವನ್ನು ಪಡೆದವನಿಗೂ ಕ್ರಮಮುಕ್ತಿಯಾಗಬಹುದಾಗಿದೆ. ನೂ. ಭಾ. ೧-೩-೩೩ (ಭಾ. ಭಾ. ೩-೩, ೩೦೧) ನೋಡಿರಿ.

ಜ್ಯೇಷ್ಠಪುತ್ರ, ಯೋಗ್ಯಶಿಷ್ಯ - ಇಬ್ಬರೇ ಅಧಿಕಾರಿಗಳು

(ಭಾಷ್ಯ)

೨೨೮. ಇದಂ ವಾವ ತತ್ ಯಥೋಕ್ತಮ್ ಅನ್ಯೋಽಪಿ ಜ್ಯೇಷ್ಠಾಯ ಪುತ್ರಾಯ ಸರ್ವಪ್ರಿಯಾರ್ಹಾಯ ಬ್ರಹ್ಮ ಪ್ರಬ್ರೂಯಾತ್ । ಪ್ರಣಾಯ್ಯಾಯ ವಾ ಯೋಗ್ಯಾಯ ಅನ್ತೇವಾಸಿನೇ ಶಿಷ್ಯಾಯ । ನಾನ್ಯಸ್ಮೈ ಕಸ್ಮೈಚನ ಪ್ರಬ್ರೂಯಾತ್ । ತೀರ್ಥದ್ವಯಮ್ ಅನುಜ್ಞಾತಮ್ ಅನೇಕೇಷಾಂ ಪ್ರಾಪ್ತಾನಾಂ ತೀರ್ಥಾನಾಮ್ ಆಚಾರ್ಯಾದೀನಾಮ್ । ಕಸ್ಮಾತ್ ಪುನಸ್ತೀರ್ಥಸಂಕೋಚನಂ ವಿದ್ಯಾಯಾಃ ಕೃತಮಿತಿ ? ಆಹ । ಯದ್ಯಪಿ ಅಸ್ಮೈ ಆಚಾರ್ಯಾಯ ಇಮಾಂ ಕಶ್ಚಿತ್ ಪೃಥಿವೀಮ್ ಅಬ್ಧಿಃ ಪರಿಗೃಹೀತಾಂ ಸಮುದ್ರಪರಿವೇಷ್ಟಿತಾಂ ಸಮಸ್ತಾಮಪಿ ದದ್ಯಾತ್ ಅಸ್ಯಾ ವಿದ್ಯಾಯಾ ನಿಷ್ಕ್ರಯಾರ್ಥಮ್ ಆಚಾರ್ಯಾಯ ಧನಸ್ಯ ಪೂರ್ಣಾಂ ಸಂಪನ್ನಾಂ ಭೋಗೋಪಕರಣೈಃ ನಾಸಾವಸ್ಯ ನಿಷ್ಕ್ರಯಃ । ಯಸ್ಮಾತ್ ತತೋಽಪಿ ದಾನಾತ್ ಏತದೇವ ಯನ್ಮಧುವಿದ್ಯಾದಾನಂ ಭೂಯಃ ಬಹುತರಫಲಮ್ ಇತ್ಯರ್ಥಃ । ದ್ವಿರಭ್ಯಾಸ ಆದರಾರ್ಥಃ॥

(ಭಾಷ್ಯಾರ್ಥ)

ಮೇಲೆ ಹೇಳಿರುವ ಆ ಈ ಬ್ರಹ್ಮವನ್ನು ಮತ್ತೊಬ್ಬ (ಆಚಾರ್ಯ)ನಾದರೂ ಎಲ್ಲಾ ಪ್ರಿಯ(ವಸ್ತುಗಳ ದಾನಕ್ಕೂ) ಪಾತ್ರನಾದ ಹಿರಿಯಮಗನಿಗೆ ಹೇಳಬಹುದು ; ಅಥವಾ ಪ್ರಣಾಯ್ಯನಾದ ಯೋಗ್ಯನಾದ ಅಂತೇವಾಸಿಗೆ ಶಿಷ್ಯನಿಗೆ ಹೇಳಬಹುದು.

ಬೇರೆ ಯಾವನಿಗೂ ಹೇಳಬಾರದು. ಆಚಾರ್ಯನೇ ಮೊದಲಾಗಿ ಪ್ರಾಪ್ತವಾಗಿರುವ ಅನೇಕ ತೀರ್ಥಗಳಲ್ಲಿ[1] ಎರಡು ತೀರ್ಥಗಳನ್ನು (ಮಾತ್ರ ಇಲ್ಲಿ) ಆಗಬಹುದೆಂದಿದೆ. (ಈ) ವಿದ್ಯೆಗೆ ತೀರ್ಥಗಳನ್ನು ಸಂಕೋಚಮಾಡಿದ್ದೇಕೆ ? - ಎಂದರೆ (ಶ್ರುತಿ) ಹೇಳುತ್ತದೆ. ಈ ಆಚಾರ್ಯನಿಗೆ ಯಾವನಾದರೊಬ್ಬನು ನೀರಿನಿಂದ ಸುತ್ತುವರೆದಿರುವ ಕಡಲಿನಿಂದ ಸುತ್ತುಗಟ್ಟಲ್ಪಟ್ಟಿರುವ ಈ[2] ಪೃಥಿವಿಯನ್ನು ಇಡಿಯ (ಭೂಮಿಯನ್ನೇ), ಈ ವಿದ್ಯೆಯ ನಿಷ್ಕ್ರಯಕ್ಕಾಗಿ ಧನಪೂರ್ಣವಾದ ಭೋಗೋಪಕರಣಗಳಿಂದ ಕೂಡಿರುವ (ಭೂಮಿಯನ್ನೇ) ಆಚಾರ್ಯನಿಗೆ ಕೊಡುತ್ತಾನಾದರೂ ಇದಕ್ಕೆ ಅದು ನಿಷ್ಕ್ರಯ(ವಾಗ)ಲಾರದು. ಏಕೆಂದರೆ ಆ ದಾನಕ್ಕಿಂತಲೂ ಈ ಮಧುವಿದ್ಯಾದಾನವಿದೆಯಲ್ಲ, ಇದೇ ಹೆಚ್ಚಿನದು,

---

1. 'ಮುಂದೆ ೪-೨-೫ರ ಭಾಷ್ಯದಲ್ಲಿ ವಿದ್ಯೆಗೆ ಆರು ತೀರ್ಥಗಳು, ಆರು ಜನರು ಪಾತ್ರರು ಎಂದು ಹೇಳಿದೆ ; ಅವರೊಳಗೆ

2. 'ಇಯಮ್' ಎಂದಿಷ್ಟೇ ಹೇಳಿದರೂ ಈ ಭೂಮಿ ಎಂದರ್ಥವು ವೇದದಲ್ಲಿರುತ್ತದೆ.

ಹೆಚ್ಚಿನ ಫಲವುಳ್ಳದ್ದು ಎಂದರ್ಥ[1]. (ಅದಕ್ಕಿಂತ ಇದೇ ಹೆಚ್ಚಿನದು ಎಂದು) ಎರಡುಸಲ ಹೇಳಿರುವದು ಆದರಕ್ಕಾಗಿ.

ಮೂರನೆಯ ಅಧ್ಯಾಯ - ಹನ್ನೆರಡನೆಯ ಖಂಡ

(ಗಾಯತ್ರೀಬ್ರಹ್ಮೋಪಾಸನೆ)

ಗಾಯತ್ರೀಬ್ರಹ್ಮದ ಮಹಿಮೆ

(ಉಪನಿಷತ್ತು)

ಗಾಯತ್ರೀ ವಾ ಇದಗ್ಂ ಸರ್ವಂ ಭೂತಂ ಯದಿದಂ ಕಿಂಚ ವಾಗ್ವೈ ಗಾಯತ್ರೀ ವಾಗ್ವಾ ಇದಗ್ಂ ಸರ್ವಂ ಭೂತಂ ಗಾಯತಿ ಚ ತ್ರಾಯತೇ ಚ ॥೧॥

೧. ಇದು ಯಾವಯಾವದಿದೆಯೋ ಈ ಎಲ್ಲಾ ಭೂತವೂ ಗಾಯತ್ರಿಯೇ. ವಾಕ್ಕೇ ಗಾಯತ್ರಿ ; ವಾಕ್ಕೇ ಈ ಎಲ್ಲಾ ಭೂತವು. (ಅದು) ಹೇಳುತ್ತದೆ, ಕಾಪಾಡುತ್ತದೆ.

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೨೨೯. ಯತ ಏವಮ್ ಅತಿಶಯಫಲೈಷಾ ಬ್ರಹ್ಮವಿದ್ಯಾ, ಅತಃ ಸಾ ಪ್ರಕಾರಾನ್ತರೇಣಾಪಿ ವಕ್ತವ್ಯಾ ಇತಿ 'ಗಾಯತ್ರೀ ವಾ' ಇತ್ಯಾದಿ ಆರಭ್ಯತೇ । ಗಾಯತ್ರೀದ್ವಾರೇಣ ಚ ಉಚ್ಯತೇ ಬ್ರಹ್ಮ । ಸರ್ವವಿಶೇಷರಹಿತಸ್ಯ ನೇತಿನೇತೀತ್ಯಾದಿವಿಶೇಷಪ್ರತಿಷೇಧಗಮ್ಯಸ್ಯ ದುರ್ಬೋಧತ್ವಾತ್ । ಸತ್ಸು ಅನೇಕೇಷು ಛನ್ದಸ್ಸು ಗಾಯತ್ರ್ಯಾ ಏವ ಬ್ರಹ್ಮಜ್ಞಾನದ್ವಾರತಯಾ ಉಪಾದಾನಂ ಪ್ರಾಧಾನ್ಯಾತ್ । ಸೋಮಾಹರಣಾತ್ ಇತರಚ್ಛನ್ದೋಕ್ಷರಾಹರಣೇನ ಇತರಚ್ಛನ್ದೋವ್ಯಾಪ್ತ್ಯಾ ಚ

1 ಆದ್ದರಿಂದ ಧನದಾನವೇ ಮುಂತಾದವು ಇಲ್ಲಿ ವಿದ್ಯಾದಾನಕ್ಕೆ ಸಾಲವು ಎಂದಭಿಪ್ರಾಯ.

ಸರ್ವಸವನವ್ಯಾಪಕತ್ವಾಚ್ಚ ಯಜ್ಞೇ ಪ್ರಾಧಾನ್ಯಂ ಗಾಯತ್ರ್ಯಾಃ । ಗಾಯತ್ರೀ ಸಾರತ್ವಾಚ್ಚ ಬ್ರಾಹ್ಮಣಸ್ಯ ಮಾತರಮಿವ ಹಿತ್ವಾ ಗುರುತರಾಂ ಗಾಯತ್ರೀಂ ತತೋಽನ್ಯದ್ ಗುರುತರಂ ನ ಪ್ರತಿಪದ್ಯತೇ ಯಥೋಕ್ತಂ ಬ್ರಹ್ಮಾಪೀತಿ । ತಸ್ಯಾಮ್ ಅತ್ಯನ್ತಗೌರವಸ್ಯ ಪ್ರಸಿದ್ಧತ್ವಾತ್ । ಅತೋ ಗಾಯತ್ರೀಮುಖೇನೈವ ಬ್ರಹ್ಮೋಚ್ಯತೇ ॥

(ಭಾಷ್ಯಾರ್ಥ)

ಹೀಗೆ ಈ ಬ್ರಹ್ಮವಿದ್ಯೆಯು ಅತಿಶಯಫಲವುಳ್ಳದ್ದಾಗಿರುವದಷ್ಟೆ, ಆದ್ದರಿಂದ ಅದನ್ನು ಮತ್ತೊಂದು ಪ್ರಕಾರದಿಂದಲೂ ಹೇಳಬೇಕೆಂದು 'ಗಾಯತ್ರೀ ವಾ' ಮುಂತಾದದ್ದನ್ನು ಆರಂಭಿಸಿರುತ್ತದೆ.

ಗಾಯತ್ರಿಯ ದ್ವಾರದಿಂದಲೇ ಬ್ರಹ್ಮವನ್ನು ಹೇಳಿರುತ್ತದೆ ; ಏಕೆಂದರೆ ಯಾವ ವಿಶೇಷವೂ ಇಲ್ಲದೆ ನೇತಿನೇತಿ (ಹೀಗಲ್ಲ, ಹೀಗಲ್ಲ) ಎಂದು ಎಲ್ಲಾ ವಿಶೇಷಗಳನ್ನೂ ಅಲ್ಲಗಳೆಯುವದರಿಂದ ಅರಿತುಕೊಳ್ಳಬೇಕಾಗಿರುವ (ಬ್ರಹ್ಮವು) ಅರಿತುಕೊಳ್ಳುವದಕ್ಕೆ ಕಷ್ಟವಾಗಿರುತ್ತದೆ. ಅನೇಕ ಛಂದಸ್ಸುಗಳು ಇದ್ದರೂ[1] ಗಾಯತ್ರಿಯನ್ನೇ ಬ್ರಹ್ಮಜ್ಞಾನಕ್ಕೇ ದ್ವಾರವೆಂದು ತೆಗೆದುಕೊಂಡಿರುವದು[2] (ಅದು) ಪ್ರಧಾನವಾಗಿರುವದರಿಂದ. ಸೋಮವನ್ನು ತಂದದ್ದರಿಂದಲೂ[3] ಮಿಕ್ಕ ಛಂದಸ್ಸುಗಳ ಅಕ್ಷರಗಳನ್ನು ತಂದದ್ದರಿಂದಲೂ[4] ಇತರ ಛಂದಸ್ಸುಗಳನ್ನು ವ್ಯಾಪಿಸಿಕೊಂಡಿರುವದರಿಂದಲೂ ಎಲ್ಲಾ ಸವನಗಳನ್ನೂ ವ್ಯಾಪಿಸಿಕೊಂಡಿರುವದರಿಂದಲೂ[5] ಗಾಯತ್ರಿಗೆ ಯಜ್ಞದಲ್ಲಿ ಪ್ರಾಧಾನ್ಯವಿರುತ್ತದೆ, ಬ್ರಾಹ್ಮಣನಿಗೆ ಗಾಯತ್ರಿಯೇ ಸಾರವಾಗಿರುವದರಿಂದಲೂ[6] (ಅದನ್ನು ಬ್ರಹ್ಮದ್ವಾರವಾಗಿ

1. ಜಗತೀ, ತ್ರಿಷ್ಟುಪ್- ಮುಂತಾದ ಮಿಕ್ಕ ಛಂದಸ್ಸುಗಳಿದ್ದರೂ ಎಂದರ್ಥ.
2. ಬ್ರಹ್ಮವನ್ನು ಇದರ ಮೂಲಕವಾಗಿ ತಿಳಿಸುವದಕ್ಕೆ ಹೊರಟಿರುವದು.
3. ಸುಪರ್ಣಾಕಾರವಾಗಿ ಹೋಗಿ ದ್ಯುಲೋಕದಿಂದ ಗಾಯತ್ರಿಯು ತಂದಿತೆಂದು ಬ್ರಾಹ್ಮಣವಾದ. ಐ. ಬ್ರಾ. ೧೩-೨.
4. ಜಗತೀಛಂದಸ್ಸು ಮೂರಕ್ಷರಗಳನ್ನೂ ತ್ರಿಷ್ಟುಪ್ಪು ಒಂದಕ್ಷರವನ್ನೂ ಬಿಟ್ಟುಬಿಟ್ಟು ಬಂದಿದ್ದವು ; ಆ ಅಕ್ಷರವನ್ನು ಗಾಯತ್ರಿಯು ತೆಗೆದುಕೊಂಡುಬಂದಿತು. ಐ. ಬ್ರಾ. ೧೩-೧, ೨.
5. ಸವನಗಳನ್ನೂ ಇತರ ಛಂದಸ್ಸುಗಳನ್ನೂ ಗಾಯತ್ರಿಯು ವ್ಯಾಪಿಸಿಕೊಂಡಿರುವ ಬಗೆಯನ್ನು ಐ. ಬ್ರಾ. ೧೩-ಳರಲ್ಲಿ ವರ್ಣಿಸಿದೆ. ಹಿಂದಕ್ಕೆ ಗಾಯತ್ರಿ, ಜಗತೀ, ತ್ರಿಷ್ಟುಪ್ಪು- ಈ ಮೂರಕ್ಕೆ ನಾಲ್ಕು ನಾಲ್ಕಕ್ಷರಗಳಿದ್ದವು ; ಸೋಮಾಹರಣವಾದಮೇಲೆ ಗಾಯತ್ರಿಗೆ ಎಂಟಕ್ಷರವಾದವು, ಜಗತಿಗೆ ಒಂದು, ತ್ರಿಷ್ಟುಪ್ಪಿಗೆ ಎಂಟಕ್ಷರವನ್ನೂ ಸಾಯಂಸವನದಲ್ಲಿ ಜಗತಿಗೆ ಹನ್ನೊಂದನ್ನೂ ಕೊಟ್ಟಿದ್ದರಿಂದ ಈಗ ಗಾಯತ್ರಿಗೆ ಎಂಟು, ತ್ರಿಷ್ಟುಪ್ಪಿಗೆ ಹನ್ನೊಂದಕ್ಷರವೂ ಜಗತಿಗೆ ಹನ್ನೆರಡೂ ಅಕ್ಷರಗಳಾದವೆಂದು ಅಲ್ಲಿ ಹೇಳಿದೆ.
6. 'ಗಾಯತ್ರೋ ವೈ ಬ್ರಾಹ್ಮಣ', 'ತ್ರೈಷ್ಟುಭೋ ವೈ ರಾಜನ್ಯಃ', 'ಜಾಗತೋ ವೈ ವೈಶ್ಯಃ' - ಎಂದು ಐ. ಬ್ರಾ. ೫-೨.

ತೆಗೆದುಕೊಂಡಿರುತ್ತದೆ). ತಾಯಿಯಂತೆ ಗುರುತರವಾಗಿರುವ ಗಾಯತ್ರಿಯನ್ನು ಬಿಟ್ಟರೆ ಅದಕ್ಕಿಂತ ಹೆಚ್ಚಿನ (ಛಂದಸ್ಸು) ಮೇಲೆ ಹೇಳಿದ ಬ್ರಹ್ಮಕ್ಕೆ ದೊರೆಯಲಾರದಾದ್ದರಿಂದ (ಅದನ್ನೇ ತೆಗೆದುಕೊಂಡಿದೆ). ಏಕೆಂದರೆ ಅದರಲ್ಲಿ ಆತ್ಯಂತಗೌರವವು ಪ್ರಸಿದ್ಧವಾಗಿರುತ್ತದೆ. ಆದ್ದರಿಂದ ಗಾಯತ್ರಿಯ ದ್ವಾರದಿಂದಲೇ ಬ್ರಹ್ಮವನ್ನು ಹೇಳಿರುತ್ತದೆ.[1]

ಗಾಯತ್ರಿಯು ಸರ್ವಭೂತಾತ್ಮಕವಾಗಿರುತ್ತದೆ

(ಭಾಷ್ಯ)

೨೩೦. ಗಾಯತ್ರೀ ವಾ ಇತಿ । ಅವಧಾರಣಾರ್ಥೋ ವೈಶಬ್ದಃ । ಇದಂ ಸರ್ವಂ ಭೂತಂ ಪ್ರಾಣಿಜಾತಂ ಯತ್ ಕಿಂ ಚ ಸ್ಥಾವರಂ ಜಙ್ಗಮಂ ವಾ ತತ್ ಸರ್ವಂ ಗಾಯತ್ರ್ಯೇವ । ತಸ್ಯಾಃ ಛನ್ದೋಮಾತ್ರಾಯಾಃ ಸರ್ವಭೂತತ್ವಮ್ ಅನುಪಪನ್ನಮ್ ಇತಿ ಗಾಯತ್ರೀಕಾರಣಂ ವಾಚಂ ಶಬ್ದರೂಪಾಮ್ ಆಪಾದಯತಿ ಗಾಯತ್ರೀಮ್ 'ವಾಗ್ವೈ ಗಾಯತ್ರೀ' ಇತಿ । ವಾಗ್ವಾ ಇದಂ ಸರ್ವಂ ಭೂತಮ್ । ಯಸ್ಮಾದ್ ವಾಕ್‌ಶಬ್ದರೂಪಾ ಸತೀ ಸರ್ವಂ ಭೂತಂ ಗಾಯತಿ ಶಬ್ದಯತಿ ಅಸೌ ಗೌಃ ಅಸೌ ಅಶ್ವಃ ಇತಿ ಚ । ತ್ರಾಯತೇ ಚ ರಕ್ಷತಿ 'ಅಮುಷ್ಮಾತ್ ಮಾ ಭೈಷೀಃ ಕಿಂ ತೇ ಭಯಮ್ ಉತ್ಥಿತಮ್ ?'- ಇತ್ಯಾದಿನಾ ಸರ್ವತೋ ಭಯಾತ್ ನಿವರ್ತ್ಯಮಾನೋ ವಾಚಾ ತ್ರಾತಃ ಸ್ಯಾತ್ । ಯದ್ ವಾಕ್‌ಭೂತಂ ಗಾಯತಿ ಚ ತ್ರಾಯತೇ ಚ ಗಾಯತ್ರ್ಯೇವ ತದ್ ಗಾಯತಿ ಚ ತ್ರಾಯತೇ ಚ । ವಾಚೋಽನನ್ಯತ್ವಾತ್ ಗಾಯತ್ರ್ಯಾಃ । ಗಾನಾತ್ ತ್ರಾಣಾಚ್ಚ ಗಾಯತ್ರ್ಯಾ ಗಾಯತ್ರೀತ್ವಮ್ ॥

(ಭಾಷ್ಯಾರ್ಥ)

'ಗಾಯತ್ರೀ ವೈ' ಎಂಬಲ್ಲಿ ವೈಶಬ್ದವು ಅವಧಾರಣಾರ್ಥಕವಾದದ್ದು. ಈ ಎಲ್ಲಾ ಭೂತವೂ ಪ್ರಾಣಿಸಮೂಹವೂ ಸ್ಥಾವರವಾಗಲಿ ಜಂಗಮವಾಗಲಿ ಯಾವ ಯಾವದಿದೆಯೋ ಅದೆಲ್ಲವೂ ಗಾಯತ್ರಿಯೇ. ಬರಿಯ ಛಂದಸ್ಸಾಗಿರುವದರಿಂದ ಆ (ಗಾಯತ್ರಿಯು) ಎಲ್ಲಾ ಭೂತವೂ ಆಗಿರುವದು ಹೊಂದುವದಿಲ್ಲವಾದ್ದರಿಂದ ಗಾಯತ್ರಿಗೆ ಕಾರಣವಾಗಿರುವ ಶಬ್ದರೂಪವಾದ ವಾಕ್ಕನ್ನಾಗಿ ಗಾಯತ್ರಿಯನ್ನು ಮಾಡಿ

---

1. ಇಲ್ಲಿ ಗಾಯತ್ರಿಯೆಂಬ ಕಾರ್ಯದ್ವಾರದಿಂದ ತದನುಗತವಾದ ಬ್ರಹ್ಮವನ್ನು ಉಪಾಸನೆ ಮಾಡಬೇಕೆಂದು ಹೇಳಿದೆ ಎಂದು ಸೂ.ಭಾ. ೧-೧-೨೫ (ಭಾ. ಭಾ. ೧೩೧) ರಲ್ಲಿ ನಿರ್ಣಯಿಸಿದೆ. ಗಾಯತ್ರಿ ಎಂಬ ಹೆಸರಿನಿಂದ ಸಾಕ್ಷಾತ್ತಾಗಿ ಬ್ರಹ್ಮವನ್ನೇ ಉಪಾಸನೆ ಮಾಡಬೇಕೆಂದು ತಿಳಿಸಿದೆ ಎಂಬಲ್ಲಿ ಮತ್ತೊಂದು ಪಕ್ಷವೂ ಅಲ್ಲಿ (ಭಾ. ಭಾ. ೧೩೨ರಲ್ಲಿ) ಇದೆ; ಆದರೆ ಅದನ್ನೇಕೆ ಇಲ್ಲಿ ಪರಾಮರ್ಶಿಸಿಲ್ಲವೋ ತಿಳಿಯದು.

'ವಾಕ್ಕೇ ಗಾಯತ್ರಿ' ಎಂದು (ಶ್ರುತಿ) ಹೇಳಿರುತ್ತದೆ. ವಾಕ್ಕೇ ಈ ಎಲ್ಲಾ ಭೂತವೂ ಆಗಿದೆ ; ಏಕೆಂದರೆ ವಾಕ್ಕು ಶಬ್ದರೂಪವಾಗಿರುವದಾದ್ದರಿಂದ ಎಲ್ಲಾ ಭೂತವನ್ನೂ ಇದು ಎತ್ತು, ಇದು ಕುದುರೆ ? ಎಂದು (ಗಾಯತಿ) ಹೇಳುತ್ತದೆ, ಹೆಸರಿಸುತ್ತದೆ. ಮತ್ತು (ಇದು ತ್ರಾಯತೇ=) ಕಾಪಾಡುತ್ತದೆ, ರಕ್ಷಿಸುತ್ತದೆ, ''ಇದಕ್ಕೆ ಅಂಜದಿರು ; ನಿನಗೇನು ಅಂಜಿಕೆ ಬಂದಿದೆ ?''ಎಂದು ಮುಂತಾದ (ವಾಕ್ಯರೂಪ)ದಿಂದ ಯಾವ ಭಯವೂ ಇಲ್ಲದಂತೆ ಮಾಡುವದರಿಂದ ವಾಕ್ಕು ಅವನನ್ನು ಕಾಪಾಡಿದಂತೆ ಆಗುತ್ತದೆ. ವಾಕ್ಕು (ಹೀಗೆ) ಭೂತವನ್ನು (ಗಾಯತಿ) ಹೆಸರಿಸುತ್ತದೆ, ಮತ್ತು (ತ್ರಾಯತೇ) ಕಾಪಾಡುತ್ತದೆಯಷ್ಟೆ ? ಹಾಗೆ ಹೆಸರಿಸುವದೂ ಕಾಪಾಡುವದೂ ಗಾಯತ್ರಿಯೇ (ಎನ್ನಬೇಕು) ; ಏಕೆಂದರೆ ಗಾಯತ್ರಿಯು ವಾಕ್ಕಿಗಿಂತ ಬೇರೆಯಲ್ಲ.[1] (ಹೀಗೆ) ಗಾನ(ಹೆಸರಿಸು)ವದರಿಂದಲೂ, ತ್ರಾಣ(ಕಾಪಾಡು)ವದರಿಂದಲೂ ಗಾಯತ್ರಿಯು ಗಾಯತ್ರಿಯಾಗಿದೆ.[2]

(ಉಪನಿಷತ್ತು)

ಯಾ ವೈ ಸಾ ಗಾಯತ್ರೀಯಂ ವಾವ ಸಾ ಯೇಯಂ ಪೃಥಿವ್ಯ - ಸ್ಯಾಗ್ಂ ಹೀದಗ್ಂ ಸರ್ವಂ ಭೂತಂ ಪ್ರತಿಷ್ಠಿತಮೇತಾಮೇವ ನಾತಿಶೀಯತೇ ॥೨॥

೨. ಆ ಗಾಯತ್ರಿಯಿದೆಯಲ್ಲ, ಈ ಪೃಥಿವಿಯೆಂಬುದೇ ಅದು. ಈ (ಪೃಥಿವಿ)ಯಲ್ಲಲ್ಲವೆ, ಸರ್ವಭೂತವೂ ಪ್ರತಿಷ್ಠಿತವಾಗಿದೆ ? ಇದನ್ನೇ (ಅಲ್ಲವೆ), ಬಿಟ್ಟುಹೋಗುವದಿಲ್ಲ ?

ಗಾಯತ್ರಿಯು ಪೃಥಿವ್ಯಾತ್ಮಕ

(ಭಾಷ್ಯ)

೨ಸಿ. ಯಾ ವೈ ಸಾ ಏವಂಲಕ್ಷಣಾ ಸರ್ವಭೂತರೂಪಾ ಗಾಯತ್ರೀ ಇಯಂ ವಾವ ಸಾ ಯೇಯಂ ಪೃಥಿವೀ । ಕಥಂ ಪುನರಿಯಂ ಪೃಥಿವೀ ಗಾಯತ್ರೀತಿ ? ಉಚ್ಯತೇ । ಸರ್ವಭೂತಸಂಬನ್ಧಾತ್ । ಕಥಂ ಸರ್ವಭೂತಸಂಬನ್ಧಃ ? ಅಸ್ಯಾಂ ಪೃಥಿವ್ಯಾಂ ಹಿ ಯಸ್ಮಾತ್ ಸರ್ವಂ ಸ್ಥಾವರಂ ಜಙ್ಗಮಂ ಚ ಭೂತಂ ಪ್ರತಿಷ್ಠಿತಮ್ ।

1. ವಾಗ್ರೂಪವಾದ ಕಾರಣಕ್ಕಿಂತ ಕಾರ್ಯವಾದ ಗಾಯತ್ರಿಯು ಬೇರೆಯಲ್ಲವಾದ್ದರಿಂದ ವಾಕ್ಕು ಹೆಸರಿಸುವದು, ಕಾವಾಡುವದು- ಎಂದರೆ ಗಾಯತ್ರಿಯು ಹೆಸರಿಸುತ್ತದೆ, ಕಾವಾಡುತ್ತದೆ ಎಂದೇ ಆಯಿತು.

2. ಇದು ಗಾಯತ್ರೀಶಬ್ದದ ನಿರ್ವಚನವು.

ಏತಾಮೇವ ಪೃಥಿವೀಂ ನಾತಿಶೀಯತೇ ನಾತಿವರ್ತತೇ ಇತ್ಯೇತತ್ । ಯಥಾ ಗಾನತ್ರಾಣಾಭ್ಯಾಂ ಭೂತಸಂಬನ್ಧೋ ಗಾಯತ್ರ್ಯಾಃ, ಏವಂ ಭೂತಪ್ರತಿಷ್ಠಾನಾತ್ ಭೂತಸಂಬದ್ಧಾ ಪೃಥಿವೀ । ಅತೋ ಗಾಯತ್ರೀ ಪೃಥಿವೀ ॥

(ಭಾಷ್ಯಾರ್ಥ)

ಈ ಸ್ವರೂಪದ, ಸರ್ವಭೂತರೂಪವಾಗಿರುವ, ಆ ಗಾಯತ್ರಿಯಿದೆಯಲ್ಲ, ಈ ಪೃಥಿವಿಯೆಂಬುದೇ ಆ (ಗಾಯತ್ರಿಯು). ಈ ಪೃಥಿವಿಯು ಆ ಗಾಯತ್ರಿ ಎಂಬುದು ಹೇಗೆ ? ಎಂದರೆ (ಇದಕ್ಕೆ) ಸರ್ವಭೂತಸಂಬಂಧವಿರುವದರಿಂದ- (ಇದಕ್ಕೆ) ಸರ್ವಭೂತಗಳ ಸಂಬಂಧ(ವಿದೆ ಎಂಬುದು) ಹೇಗೆ ? (ಹಿ = ಯಸ್ಮಾತ್) ಹೇಗೆಂದರೆ, ಈ ಪೃಥಿವಿಯಲ್ಲಿ ಸ್ಥಾವರವೂ ಜಂಗಮವೂ ಆಗಿರುವ ಎಲ್ಲಾ ಭೂತವೂ ಈ ಪೃಥಿವಿಯಲ್ಲಿಯೇ ಪ್ರತಿಷ್ಠಿತವಾಗಿದೆ, ಈ ಪೃಥಿವಿಯನ್ನೇ (ಆ ಭೂತವು) ಮೀರಿಹೋಗದೆ ಇರುತ್ತದೆ. ಹೇಗೆ (ಸರ್ವಭೂತಗಳ) ಗಾನತ್ರಾಣಗಳಿಂದ ಗಾಯತ್ರಿಗೆ ಭೂತಗಳ ಸಂಬಂಧ(ವಿರುತ್ತದೆಯೋ) ಹಾಗೆಯೇ ಭೂತಗಳು ಪ್ರತಿಷ್ಠಿತವಾಗಿರುವದರಿಂದ ಪೃಥಿವಿಯೂ ಭೂತಗಳ ಸಂಬಂಧವುಳ್ಳದ್ದಾಗಿದೆ. ಆದ್ದರಿಂದ ಪೃಥಿವಿಯೇ ಗಾಯತ್ರಿ.[1]

(ಉಪನಿಷತ್ತು)

ಯಾ ವೈ ಪೃಥಿವೀಯಂ ವಾವ ಸಾ ಯದಿದಮಸ್ಮಿನ್ ಪುರುಷೇ ಶರೀರಮಸ್ಮಿನ್ ಹೀಮೇ ಪ್ರಾಣಾಃ ಪ್ರತಿಷ್ಠಿತಾ ಏತದೇವ ನಾತಿಶೀಯನ್ತೇ ॥೩॥

೩. ಆ ಪೃಥಿವಿಯಿದೆಯಲ್ಲ, ಈ ಪುರುಷನಲ್ಲಿರುವ ಶರೀರವೆಂಬುದೇ ಅದು. ಇದರಲ್ಲಿ ಪ್ರಾಣಗಳು ಪ್ರತಿಷ್ಠಿತ(ವಾಗಿರುತ್ತವೆ). ಇದನ್ನೇ ಬಿಟ್ಟುಹೋಗುವದಿಲ್ಲ.

ಗಾಯತ್ರೀಬ್ರಹ್ಮವು ಶರೀರಾತ್ಮಕ

(ಭಾಷ್ಯ)

೨೩.೨. ಯಾ ವೈ ಸಾ ಪೃಥಿವೀ ಗಾಯತ್ರೀ ಇಯಂ ವಾವ ಸಾ ಇದಮೇವ । ತತ್ ಕಿಮ್ ? ಯದಿದಮ್ ಅಸ್ಮಿನ್ ಪುರುಷೇ ಕಾರ್ಯಕರಣಸಂಘಾತೇ ಜೀವತಿ ಶರೀರಮ್ । ಪಾರ್ಥಿವತ್ವಾತ್ ಶರೀರಸ್ಯ । ಕಥಂ ಶರೀರಸ್ಯ ಗಾಯತ್ರೀತ್ವಮಿತಿ ।

1. ಭೂತಸಂಬಂಧವಿರುವದರಿಂದ ಪೃಥಿವಿಯು ಗಾಯತ್ರಿಯಾಯಿತು.

ಉಚ್ಯತೇ । ಅಸ್ಮಿನ್ ಹಿ ಇಮೇ ಪ್ರಾಣಾ ಭೂತಶಬ್ದವಾಚ್ಯಾಃ
ಅತಃ ಪೃಥಿವೀವತ್ ಭೂತಶಬ್ದವಾಚ್ಯಪ್ರಾಣಪ್ರತಿಷ್ಠಾನಾತ್ ಶರೀರಂ ಗಾಯತ್ರೀ ।
ಏತದೇವ ಯಸ್ಮಾತ್ ಶರೀರಂ ನಾತಿಶೀಯನ್ತೇ ಪ್ರಾಣಾಃ ॥

(ಭಾಷ್ಯಾರ್ಥ)

ಆ ಪೃಥಿವೀಗಾಯತ್ರಿಯಿದೆಯಲ್ಲ, ಇದೇ ಅದು. ಯಾವದದು ? ಈ ಪುರುಷನಲ್ಲಿ, ಎಂದರೆ ಬದುಕಿರುವ ಈ ಕಾರ್ಯಕರಣಸಂಘಾತದಲ್ಲಿ ಶರೀರವಿದೆಯಲ್ಲ, (ಇದೇ). ಏಕೆಂದರೆ ಶರೀರವು ವಾರ್ಥಿವವಾಗಿರುತ್ತದೆ.[1] ಶರೀರವು ಗಾಯತ್ರಿ ಎಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ. ಇದರಲ್ಲಿಯೇ ಅಲ್ಲವೆ, ಭೂತಶಬ್ದವಾಚ್ಯವಾದ ಪ್ರಾಣಗಳು ಪ್ರತಿಷ್ಠಿತವಾಗಿವೆ ? ಆದ್ದರಿಂದ ಪೃಥಿವಿಯಲ್ಲಿ ಭೂತಗಳು (ಹೇಗೋ) ಹಾಗೆ ಭೂತಶಬ್ದವಾಚ್ಯಗಳಾದ ಪ್ರಾಣಗಳು ಪ್ರತಿಷ್ಠಿತವಾಗಿರುವದರಿಂದ ಶರೀರವು ಗಾಯತ್ರಿಯು.[2] ಇದೇ ಶರೀರವನ್ನೇ ಪ್ರಾಣಗಳು ಮೀರಿಹೋಗದೆ ಇರುತ್ತವೆ.[3]

(ಉಪನಿಷತ್ತು)

ಯದ್ವೈ ತತ್ ಪುರುಷೇ ಶರೀರಮಿದಂ ವಾವ ತದ್ಯದಿದಮಸ್ಮಿನ್ನನ್ತಃ-ಪುರುಷೇ ಹೃದಯಮಸ್ಮಿನ್ ಹೀಮೇ ಪ್ರಾಣಾಃ ಪ್ರತಿಷ್ಠಿತಾ ಏತದೇವ ನಾತಿಶೀಯನ್ತೇ ॥೪॥

೪. ಪುರುಷನೊಳಗಿರುವ ಆ ಶರೀರವಿದೆಯಲ್ಲ, ಈ ಪುರುಷನೊಳಗಿರುವ ಹೃದಯವೆಂಬುದೇ ಅದು. ಇದರಲ್ಲಿಯಲ್ಲವೆ, ಪ್ರಾಣಗಳು ಪ್ರತಿಷ್ಠಿತವಾಗಿವೆ ? ಇದನ್ನೇ (ಅಲ್ಲವೆ), ಬಿಟ್ಟುಹೋಗದೆ ಇರುತ್ತವೆ ?

ಗಾಯತ್ರೀಬ್ರಹ್ಮವು ಹೃದಯಾತ್ಮಕ

(ಭಾಷ್ಯ)

೨೩. ಯದ್ವೈ ತತ್ ಪುರುಷೇ ಶರೀರಂ ಗಾಯತ್ರೀ ಇದಂ ವಾವ ತತ್ । ಯದಿದಮ್ ಅಸ್ಮಿನ್ ಅನ್ತರ್ಮಧ್ಯೇ ಪುರುಷೇ ಹೃದಯಂ ಪುಣ್ಡರೀಕಾಖ್ಯಮ್ ।

---

1. ಶರೀರವು ವಾರ್ಥಿವವಾಗಿರುವದರಿಂದ ಅದೇ ಪೃಥಿವೀಗಾಯತ್ರಿಯು.
2. ಪೃಥಿವಿಯಲ್ಲಿ ಸ್ಥಾವರಜಂಗಮಗಳಂತೆ ಶರೀರದಲ್ಲಿರುವ ಭೂತಗಳು ಯಾವವು ? ಎಂದರೆ ಪ್ರಾಣಗಳು. 3. ಆದ್ದರಿಂದ ಭೂತಸಂಬಂಧದಿಂದ ಶರೀರವೂ ಗಾಯತ್ರಿ.

ಏತದ್ ಗಾಯತ್ರೀ । ಕಥಮಿತಿ ? ಆಹ । ಅಸ್ಮಿನ್ ಹಿ ಇಮೇ ಪ್ರಾಣಾಃ ಪ್ರತಿಷ್ಠಿತಾಃ । ಅತಃ ಶರೀರವದ್ ಗಾಯತ್ರೀ ಹೃದಯಮ್ । ಏತದೇವ ಚ ನಾತಿಶೀಯನ್ತೇ ಪ್ರಾಣಾಃ । "ಪ್ರಾಣೋ ಹ ಪಿತಾ ಪ್ರಾಣೋ ಮಾತಾ" (೭-೧೫-೧) ಇತಿ, "ಅಹಿಂಸನ್ ಸರ್ವಭೂತಾನಿ" (೮-೧೫-೧) ಇತಿ ಚ ಶ್ರುತೇರ್ಭೂತಶಬ್ದವಾಚ್ಯಾಃ ಪ್ರಾಣಾಃ ॥

(ಭಾಷ್ಯಾರ್ಥ)

ಪುರುಷನಲ್ಲಿರುವ ಆ ಶರೀರವೆಂಬ ಗಾಯತ್ರಿಯಿದೆಯಲ್ಲ, ಈ ಪುರುಷನೊಳಗೆ ಪುಂಡರೀಕವೆಂಬ ಹೆಸರಿನ ಹೃದಯವೇ ಆದು. ಇದು ಗಾಯತ್ರಿಯು. ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ. ಇದರಲ್ಲಲ್ಲವೆ, ಈ ಪ್ರಾಣಗಳು ಪ್ರತಿಷ್ಠಿತವಾಗಿವೆ[1] ? ಆದ್ದರಿಂದ ಶರೀರದಂತೆ ಹೃದಯವೂ ಗಾಯತ್ರಿ. ಇದನ್ನೇ ಪ್ರಾಣಗಳು ಮೀರಿಹೋಗದೆ ಇರುತ್ತವೆ. "ಪ್ರಾಣನೇ ಪಿತನು, ಪ್ರಾಣನೇ ಮಾತೆ" (೭-೧೫-೧) ಎಂದೂ, "ಯಾವ ಭೂತಗಳನ್ನೂ ಕೊಲ್ಲದೆ" (೮-೧೫-೧) ಎಂದೂ ಶ್ರುತಿಯಿರುವದರಿಂದ ಪ್ರಾಣಗಳು ಭೂತಶಬ್ದವಾಚ್ಯವಾಗಿರುತ್ತವೆ.[2]

(ಉಪನಿಷತ್ತು)

ಸೈಷಾ ಚತುಷ್ಪದಾ ಷಡ್ವಿಧಾ ಗಾಯತ್ರೀ ತದೇತದೃಚಾಭ್ಯನೂಕ್ತಮ್ ॥೫॥

೫. ಆ ಈ ಗಾಯತ್ರಿಯು ನಾಲ್ಕು ಪಾದಗಳುಳ್ಳದ್ದು, ಆರು ವಿಧವಾದದ್ದು. ಅಲ್ಲಿ ಇದು ಋಕ್ಕಿನಿಂದ ಹೇಳಲ್ಪಟ್ಟಿರುತ್ತದೆ.

ಗಾಯತ್ರಿಯು ಚತುಷ್ಪಾದವುಳ್ಳದ್ದು, ಷಡ್ವಿಧ

(ಭಾಷ್ಯ)

೨೩೪. ಸೈಷಾ ಚತುಷ್ಪದಾ ಷಡಕ್ಷರಪದಾ[3] ಽನ್ಯೋರೂಪಾ ಸತೀ ಭವತಿ ಗಾಯತ್ರೀ ಷಡ್ವಿಧಾ । ವಾಗ್ಭೂತಪೃಥಿವೀಶರೀರಹೃದಯಪ್ರಾಣರೂಪಾ ಸತೀ ಷಡ್ವಿಧಾ ಭವತಿ । ವಾಕ್ಪ್ರಾಣಯೋರನ್ಯಾರ್ಥನಿರ್ದಿಷ್ಟಯೋರಪಿ ಗಾಯತ್ರೀ

---

1. ಭೂತಶಬ್ದವಾಚ್ಯವಾದ ಪ್ರಾಣಗಳು ಇದರಲ್ಲಿ ಪ್ರತಿಷ್ಠಿತವಾಗಿರುವದರಿಂದ ಇದು ಗಾಯತ್ರಿ.
2. ಪ್ರಾಣಗಳಿಗಿಂತ ವ್ಯತಿರಿಕ್ತವಾದ ತಂದೆತಾಯಿ ಮುಂತಾದ ಭೂತಗಳಿಲ್ಲ ; ಪ್ರಾಣವಿಲ್ಲದ ಶರೀರವನ್ನು ಹಿಂಸೆಮಾಡುತ್ತಾರೆಂದರೆ ಅರ್ಥವಿಲ್ಲ. ಆದ್ದರಿಂದ ಪ್ರಾಣಗಳೇ ಭೂತಶಬ್ದವಾಚ್ಯವಾಗಿವೆ ಎಂದು ಶ್ರುತಿಪ್ರಮಾಣೋದಾಹರಣೆಯ ಭಾವ.
3. ಷಡಕ್ಷರವಾದಾ ಎಂದೂ ಪಾಠವಿದೆ.

ಪ್ರಕಾರತ್ವಮ್ । ಅನ್ಯಥಾ ಷಡ್ವಿಧಸಂಖ್ಯಾಪೂರಣಾನುಪಪತ್ತೇಃ । ತದೇತಸ್ಮಿನ್ ಅರ್ಥೇ ಏತದ್ ಗಾಯತ್ಯಾಖ್ಯಂ ಬ್ರಹ್ಮ ಗಾಯತ್ರ್ಯನುಗತಂ ಗಾಯತ್ರೀಮುಖೇನೋಕ್ತಮ್ ಋಚಾಪಿ ಮನ್ತ್ರೇಣ ಅಭ್ಯನೂಕ್ತಂ ಪ್ರಕಾಶಿತಮ್ ॥

(ಭಾಷ್ಯಾರ್ಥ)

ಆ ಈ ಗಾಯತ್ರಿಯು ಛಂದೋರೂಪವಾಗಿರುವದಾಗಿ ನಾಲ್ಕು ಪಾದಗಳುಳ್ಳದ್ದು, ಆರು ಅಕ್ಷರಗಳ ನಾಲ್ಕು ಪಾದಗಳುಳ್ಳದ್ದಾಗಿರುತ್ತದೆ.[1] ಆರು ವಿಧವಾದದ್ದು ; ವಾಕ್ಕು, ಭೂತ, ಪೃಥಿವಿ, ಶರೀರ, ಹೃದಯ, ಪ್ರಾಣ- ಎಂಬ ರೂಪದಲ್ಲಿ ಆರು ವಿಧವಾಗಿರುತ್ತದೆ. ವಾಕ್ಕು, ಪ್ರಾಣ- ಇವುಗಳನ್ನು ಮತ್ತೊಂದಕ್ಕಾಗಿ ನಿರ್ದೇಶಮಾಡಿದೆಯಾದರೂ (ಇಲ್ಲಿ ಅವು) ಗಾಯತ್ರಿಯ ಪ್ರಕಾರಗಳೆಂದು (ಹಿಡಿಯಬೇಕು) ; ಏಕೆಂದರೆ ಹಾಗಿಲ್ಲದಿದ್ದರೆ ಆರುವಿಧವೆಂಬ ಸಂಖ್ಯೆಯು ಪೂರಣವಾಗುವದಿಲ್ಲ.[2]

ಅಲ್ಲಿ, ಎಂದರೆ ಈ ಅರ್ಥದಲ್ಲಿ ಈ ಗಾಯತ್ರಿ ಎಂಬ - ಗಾಯತ್ರಿಯಲ್ಲಿ ಅನುಗತವಾಗಿರುವ, ಗಾಯತ್ರಿಯ ದ್ವಾರದಿಂದ ಹೇಳಿರುವ- ಬ್ರಹ್ಮವು ಋಕ್ಕಿನಿಂದ ಎಂದರೆ ಮಂತ್ರದಿಂದಲೂ (ಹೀಗೆಂದು) ಹೇಳಲ್ಪಟ್ಟಿರುತ್ತದೆ.

ಗಾಯತ್ರೀಬ್ರಹ್ಮದ ಪರಮಾರ್ಥರೂಪ

(ಉಪನಿಷತ್ತು)

ತಾವಾನಸ್ಯ ಮಹಿಮಾ ತತೋ ಜ್ಯಾಯಾಗ್ಂಶ್ಚ ಪೂರುಷಃ ।
ಪಾದೋಽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವೀತಿ ॥೬॥

---

1. ಹೀಗೆಂದು ಉಪಾಸನೆಮಾಡಬೇಕು ಎಂದರ್ಥ. ಭೂತಾದಿಗಳೇ ನಾಲ್ಕುಪಾದಗಳು ಎಂದು ಸೂ. ಭಾ. ೧-೧-೨೬ (ಭಾ. ಭಾ.೧೬) ಎಂದು ಹೇಳಿದೆ. ಆದರೆ ಅಲ್ಲಿ ಷಡ್ವಿಧವೆಂದರೆ ಏನೆಂದಿಟ್ಟುಕೊಂಡಿದೆ ಎಂಬುದು ಸ್ಪಷ್ಟವಾಗಿಲ್ಲ. ಆರಕ್ಷರಗಳ ನಾಲ್ಕು ಪಾದಗಳೆಂದು ಹೇಳಿರುವದು ವೃತ್ತಿಕಾರಮತವೆಂದೂ ಅದು ಅಪ್ರಸಿದ್ಧವೆಂದೂ ರತ್ನಪ್ರಭಾವ್ಯಾಖ್ಯಾನದಲ್ಲಿ ಬರೆದಿರುವದಕ್ಕೆ ಆಧಾರವೇನೆಂಬುದೂ ತಿಳಿದಿಲ್ಲ. ಭಾಮತೀಕಾರರೂ ಆರು ಅಕ್ಷರಗಳ ನಾಲ್ಕು ಪಾದಗಳನ್ನು ಒಪ್ಪಿರುತ್ತಾರೆ.

2. ಗಾಯತ್ರಿಯು ಸರ್ವಭೂತಾತ್ಮಕವೆಂದು ತಿಳಿಸುವದಕ್ಕೆ ವಾಕ್ಕನ್ನೂ ಪೃಥಿವೀ ಹೃದಯಗಳು ಗಾಯತ್ರಿ ಎಂಬುದು ಹೇಗೆ ಎಂಬುದನ್ನೂ ಉಪಪಾದಿಸುವದಕ್ಕೆ ಪ್ರಾಣಗಳನ್ನೂ ಹೇಳಿದೆಯಾದರೂ ಇಲ್ಲಿ ಗಾಯತ್ರಿಯನ್ನು ಷಡ್ವಿಧವೆಂದು ಉಪಾಸನೆಮಾಡಬೇಕೆಂದು ಹೇಳಿರುವದು ಹೊಂದುವದಕ್ಕಾಗಿ ಅವೆರಡನ್ನೂ ಗಾಯತ್ರಿಯ ಪ್ರಕಾರಗಳೆಂದು ಎಣಿಸಬೇಕು ; ಇಲ್ಲದಿದ್ದರೆ ಚತುರ್ವಿಧತ್ವವೇ ಆಗಿಬಿಡುತ್ತದೆ ಎಂದರ್ಥ.

೬. ''ಇದರ ಮಹಿಮೆಯು ಅಷ್ಟು; ಆದರೆ ಪುರುಷನು ಅದಕ್ಕಿಂತಲೂ ದೊಡ್ಡವನು. ಎಲ್ಲಾ ಭೂತಗಳೂ ಇದರ ಪಾದವು, ಇದರ ಅಮೃತವಾದ ಮೂರುಪಾದವು ದಿವದಲ್ಲಿರುವದು.''

ಪೂರ್ಣಬ್ರಹ್ಮವು ಸರ್ವಭೂತಾತೀತ

(ಭಾಷ್ಯ)

೨೩೫. ತಾವಾನ್ ಅಸ್ಯ ಗಾಯತ್ರ್ಯಾಖ್ಯಸ್ಯ ಬ್ರಹ್ಮಣಃ ಸಮಸ್ತಸ್ಯ ಮಹಿಮಾ ವಿಭೂತಿರ್ವಿಸ್ತಾರಃ। ಯಾವಾನ್ ಚತುಷ್ಪಾತ್ ಷಡ್ವಿಧಶ್ಚ ಬ್ರಹ್ಮಣೋ ವಿಕಾರಃ ಪಾದೋ ಗಾಯತ್ರೀತಿ ವ್ಯಾಖ್ಯಾತಃ, ಅತಃ ತಸ್ಮಾತ್ ವಿಕಾರಲಕ್ಷಣಾತ್ ಗಾಯತ್ರ್ಯಾಖ್ಯಾತ್ ವಾಚಾರಮ್ಭಣಮಾತ್ರಾತ್ ತತೋ ಜ್ಯಾಯಾನ್ ಮಹತ್ತರಶ್ಚ ಪರಮಾರ್ಥ-ಸತ್ಯರೂಪೋऽವಿಕಾರಃ ಪೂರುಷಃ ಪುರುಷಃ ಸರ್ವಪೂರಣಾತ್ ಪುರುಷಃ ಪುರಿ ಶಯನಾಚ್ಚ। ತಸ್ಯಾಸ್ಯ ಪಾದಃ ಸರ್ವಾ ಸರ್ವಾಣಿ ಭೂತಾನಿ ತೇಜೋऽಬನ್ನಾದೀನಿ ಸ್ಥಾವರಜಙ್ಗಮಾನಿ। ತ್ರಿಪಾತ್ ತ್ರಯಃ ಪಾದಾ ಅಸ್ಯ ಸೋऽಯಂ ತ್ರಿಪಾತ್। ತ್ರಿಪಾದಮೃತಮ್ ಪುರುಷಾಖ್ಯಂ ಸಮಸ್ತಸ್ಯ ಗಾಯತ್ರ್ಯಾತನೋ ದಿವಿ ದ್ಯೋತನವತಿ ಸ್ವಾತ್ಮನಿ ಅವಸ್ಥಿತಮ್ ಇತ್ಯರ್ಥಃ ಇತಿ॥

(ಭಾಷ್ಯಾರ್ಥ)

ಈ ಗಾಯತ್ರಿ ಎಂಬ ಸಮಸ್ತ[1] ಬ್ರಹ್ಮದ ಮಹಿಮೆಯು, ಎಂದರೆ ವಿಭೂತಿಯು, ವಿಸ್ತಾರವು ಅಷ್ಟೇ; ಎಷ್ಟೆಂದರೆ ನಾಲ್ಕು ಪಾದಗಳುಳ್ಳದ್ದು, ಆರು ವಿಧಗಳುಳ್ಳದ್ದು ಎಂದು ಬ್ರಹ್ಮದ ವಿಕಾರವಾದ[2], (ಒಂದು) ಪಾದವಾದ ಗಾಯತ್ರಿಯನ್ನು ವಿವರಿಸಿದೆಯಲ್ಲ, (ಅಷ್ಟೇ).[3] ಆದ್ದರಿಂದ[4] ಆ ವಿಕಾರರೂಪವಾದ, ವಾಚಾರಂಭಣಮಾತ್ರವಾದ[5], ಅದಕ್ಕಿಂತಲೂ ಆ ಗಾಯತ್ರಿಗಿಂತಲೂ ಪರಮಾರ್ಥಸತ್ಯರೂಪನೂ ವಿಕಾರವಲ್ಲದವನೂ ಆದ (ಪೂರುಷಃ = ಪುರುಷಃ) ಪುರುಷನು, ಎಲ್ಲವನ್ನೂ ತುಂಬಿಕೊಂಡಿರುವದರಿಂದಲೂ ಪುರದಲ್ಲಿ ಇದ್ದುಕೊಂಡಿರುವದರಿಂದಲೂ[6] (ಪುರುಷನೆನಿಸಿಕೊಂಡಿರು

---

1. ಚತುಷ್ಪಾದವುಳ್ಳದ್ದೂ ಷಡ್ವಿಧವೂ ಆಗಿರುವ ಒಟ್ಟು.
2. ಕಾರ್ಯವಾದ. 3. ಒಂದು ಪಾದವೇ, ಪೂರ್ಣವಲ್ಲ.
4. ಅದು ಅದರ ವಿಭೂತಿಮಾತ್ರವೇ, ಸ್ವರೂಪವಲ್ಲವಾದ್ದರಿಂದ.
5. ಬರಿಯಮಾತಿನಿಂದ ಹೇಳುವ, ಮಿಥ್ಯಾರೂಪವಾದ; ೬-೧-೪ರ ಸೂಚನೆ.
6. ಚ ಎಂಬ ಪಾಠಕ್ಕೆ ಅನುವಾದವಿದು. 'ಶಯನಾದ್ ವಾ' ಎಂಬ ಪಾಠಕ್ಕೆ ಅಥವಾ ಪುರುಷನಲ್ಲಿದ್ದುಕೊಂಡಿರುವದರಿಂದ ಎಂದು ಅರ್ಥಮಾಡಬೇಕು.

ವನು), ದೊಡ್ಡವನು ಮಹತ್ತರನಾಗಿರುವನು. ಆ ಇವನ (ಒಂದು) ಪಾದವು, ಸರ್ವಭೂತಗಳು ; ಸ್ಥಾವರಜಂಗಮಸಹಿತವಾದ ತೇಜೋೞಬನ್ನಾದಿಗಳು[1] (ಒಂದು ಪಾದವೇ). ತ್ರಿಪಾತ್- ಆದಕ್ಕೆ ಮೂರು ಪಾದಗಳಿರುವದರಿಂದ ಅದು ತ್ರಿಪಾತ್ (ಎನ್ನಿಸಿಕೊಂಡಿದೆ)- (ಆ) ತ್ರಿಪಾತ್ತಾದ ಅಮೃತವು[2], ಸಮಸ್ತಗಾಯತ್ರ್ಯಾತ್ಮನ ಪುರುಷನೆಂಬ ಮೂರು ಪಾದದ ಅಮೃತವು. ದಿವದಲ್ಲಿ ಪ್ರಕಾಶವುಳ್ಳ ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡಿದೆ[3] ಎಂದರ್ಥ, ಹೀಗೆಂದು (ಮಂತ್ರವಿದೆ).

ಗಾಯತ್ರೀಬ್ರಹ್ಮವನ್ನು ಹೃದಯದಲ್ಲಿ ಧ್ಯಾನಿಸಬೇಕು

(ಉಪನಿಷತ್ತು)

ಯದ್ವೈ ತದ್ಬ್ರಹ್ಮೇತೀದಂ ವಾವ ತದ್ಯೋೞಯಂ ಬಹಿರ್ಧಾ ಪುರುಷಾ-
ದಾಕಾಶೋ ಯೋ ವೈ ಸ ಬಹಿರ್ಧಾ ಪುರುಷಾದಾಕಾಶಃ ॥೭॥

ಅಯಂ ವಾವ ಸ ಯೋೞಯಮನ್ತಃಪುರುಷ ಆಕಾಶೋ ಯೋ ವೈ
ಸೋೞನ್ತಃಪುರುಷ ಆಕಾಶಃ ॥೮॥

ಅಯಂ ವಾವ ಸ ಯೋೞಯಮನ್ತರ್ಹೃದಯ ಆಕಾಶಸ್ತದೇತ-
ತ್ಪೂರ್ಣಮಪ್ರವರ್ತಿ ಪೂರ್ಣಾಮಪ್ರವರ್ತಿನೀಗ್ಂ ಶ್ರಿಯಂ ಲಭತೇ
ಯ ಏವಂ ವೇದ ॥೯॥

೭-೯. ಆ ಬ್ರಹ್ಮವೆಂಬುದಿದೆಯಲ್ಲ, ಪುರುಷನ ಹೊರಗಿನ ಆಕಾಶವೇ ಅದು. ಆ ಪುರುಷನ ಹೊರಗಿನ ಆಕಾಶವೆಂಬುದಿದೆಯಲ್ಲ, ಪುರುಷನ ಒಳಗಡೆಯಿರುವ ಈ ಆಕಾಶವೇ ಅದು. ಪುರುಷನೊಳಗಡೆ ಇರುವ ಆ

1. ಇಲ್ಲಿ ಆಕಾಶವಾಯುಗಳನ್ನು ಆದಿ ಎಂಬ ಪದದಿಂದ ಹಿಡಿಯಬೇಕು. ಆದರೆ ಈ ಉಪನಿಷತ್ತಿನಲ್ಲಿ ತೇಜೋೞಬನ್ನಗಳನ್ನು ಮಾತ್ರವೇ ಹೇಳಿರುವದರಿಂದ 'ಆದಿ' ಎಂಬ ಮಾತು ಭಾಷ್ಯಮೂಲದಲ್ಲಿಲ್ಲದೆ ಇದ್ದರೂ ಇರಬಹುದು. ಆಗಲೂ ಸರ್ವಭೂತಗಳು ಎಂದೇ ಅರ್ಥ. ಇಲ್ಲಿ ಭೂತಶಬ್ದದಿಂದ ಪಂಚಭೂತಗಳನ್ನೇ ಅಲ್ಲದೆ ಕಾರ್ಯಕರಣ ಸಂಘಾತಾತಕವಾದ ಭೂತಗಳನ್ನೂ ಹಿಡಿಯಬೇಕೆಂದು ಭಾಷ್ಯಕಾರರ ಮತ.

2. ವಿಭೂತಿಯು ವಿಕಾರವುಳ್ಳದ್ದಾದ್ದರಿಂದ ಅವಿನಾಶಿಯಲ್ಲ ; ಆದರೆ ಬ್ರಹ್ಮದ ಸ್ವರೂಪವು ಅಮೃತವು. 3. ದಿವಿ ಎಂದರೆ ದ್ಯುಲೋಕದಲ್ಲಿ ಎಂದರ್ಥವಲ್ಲ ; ಚಿನ್ಮಾತ್ರವಾದ ಕೂಟಸ್ಥಸ್ವರೂಪದಲ್ಲಿಎಂದೇ ಅರ್ಥ.

ಆಕಾಶವೆಂಬುದಿದೆಯಲ್ಲ, ಹೃದಯದೊಳಗಡೆ ಇರುವ ಈ ಆಕಾಶವೇ ಅದು. ಆ ಇದು ಪೂರ್ಣವು, ಅಪ್ರವರ್ತಿಯು. ಯಾವನು ಹೀಗೆಂದು ಅರಿತು ಕೊಳ್ಳುವನೋ ಅವನು ಪೂರ್ಣವಾದ ಅಪ್ರವರ್ತಿಯಾದ ಶ್ರೀಯನ್ನು ಪಡೆದುಕೊಳ್ಳುವನು.

ಗಾಯತ್ರೀಬ್ರಹ್ಮವು ಹೃದಯಾಕಾಶವೇ

(ಭಾಷ್ಯ)

೨೩೬. ಯದ್ವೈ ತತ್ ತ್ರಿಪಾದಮಮೃತಂ ಗಾಯತ್ರೀಮುಖೇನೋಕ್ತಂ ಬ್ರಹ್ಮೇತಿ, ಇದಂ ವಾವ ತತ್ ಇದಮೇವ ತತ್ ಯೋಽಯಂ ಪ್ರಸಿದ್ಧಃ ಬಹಿರ್ಧಾ ಬಹಿಃ ಪುರುಷಾತ್ ಆಕಾಶಃ ಭೌತಿಕಃ । ಯೋ ವೈ ಸ ಬಹಿರ್ಧಾ ಪುರುಷಾತ್ ಆಕಾಶ ಉಕ್ತಃ, ಅಯಂ ವಾವ ಸಃ, ಯೋಽಯಮ್ ಅನ್ತಃಪುರುಷೇ ಶರೀರೇ ಆಕಾಶಃ । ಯೋ ವೈ ಸೋಽನ್ತಃಪುರುಷ ಆಕಾಶಃ ಅಯಂ ವಾವ ಸ ಯೋಽಯಮನ್ತರ್ಹೃದಯೇ ಹೃದಯಪುಣ್ಡರೀಕೇ ಆಕಾಶಃ[1] ॥

(ಭಾಷ್ಯಾರ್ಥ)

ಆ ಮೂರು ವಾದಗಳ ಅಮೃತವೆಂದು ಗಾಯತ್ರೀದ್ವಾರದಿಂದ ತಿಳಿಸಿ ಕೊಟ್ಟಿರುವ ಬ್ರಹ್ಮವಿದೆಯಷ್ಟೆ, ಇದೇ ಅದು ; ಪುರುಷನ ಹೊರಗಿರುವದೆಂದು ಪ್ರಸಿದ್ಧವಾಗಿರುವ ಈ ಭೌತಿಕವಾದ ಆಕಾಶವಿದೆಯಲ್ಲ, (ಇದೇ). ಪುರುಷನ ಹೊರಗಿರುವದೆಂದು ಹೇಳಿದ ಆ ಆಕಾಶವಿದೆಯಷ್ಟೆ, ಇದೇ ಅದು ; ಪುರುಷನೊಳಗೆ ಶರೀರದೊಳಗೆ ಆಕಾಶವಿದೆಯಲ್ಲ, (ಇದೇ). ಪುರುಷನೊಳಗೆ ಇರುವ ಆ ಆಕಾಶವೆಂಬುದಿದೆಯಷ್ಟೆ, ಇದೇ ಅದು ; ಈ ಹೃದಯದೊಳಗೆ ಹೃದಯ ಪುಂಡರೀಕದೊಳಗೆ (ಇರುವ) ಆಕಾಶವಿದೆಯಲ್ಲ, (ಇದೇ).

ಒಂದೇ ಆಕಾಶದಲ್ಲಿ ಮೂರು ಭೇದಗಳನ್ನು ಹೇಳಿರುವದೇಕೆ ?

(ಭಾಷ್ಯ)

೨೩೭. ಕಥಮೇಕಸ್ಯ ಸತಃ ಆಕಾಶಸ್ಯ ತ್ರಿಧಾ ಭೇದ ಇತಿ ? ಉಚ್ಯತೇ । ಬಾಹ್ಯೇನ್ದ್ರಿಯವಿಷಯೇ ಜಾಗರಿತಸ್ಥಾನೇ ನಭಸಿ ದುಃಖಬಾಹುಲ್ಯಂ ದೃಶ್ಯತೇ ।

---

1. ವಾಕ್ಯವು ಒಂದೇ ಆಗಿರುವದರಿಂದ ಮೂರು ಕಂಡಿಕೆಗಳ ಭಾಷ್ಯವನ್ನೂ ಒಟ್ಟು ಸೇರಿಸಿಕೊಂಡು ಅನುವಾದಮಾಡಿರುತದೆ.

ತತೋಽನ್ತಃಶರೀರೇ ಸ್ವಪ್ನಸ್ಥಾನಭೂತೇ ಮನ್ದತರಂ ದುಃಖಂ ಭವತಿ ಸ್ವಪ್ನಾನ್ ಪಶ್ಯತಃ । ಹೃದಯಸ್ಥೇ ಪುನರ್ನಭಸಿ ನ ಕಂಚನ ಕಾಮಂ ಕಾಮಯತೇ ನ ಕಂಚನ ಸ್ವಪ್ನಂ ಪಶ್ಯತಿ । ಅತಃ ಸರ್ವದುಃಖನಿವೃತ್ತಿರೂಪಮ್ ಆಕಾಶಂ ಸುಷುಪ್ತಸ್ಥಾನಮ್ । ಅತೋ ಯುಕ್ತಮ್ ಏಕಸ್ಯಾಪಿ ತ್ರಿಧಾ ಭೇದಾನ್ವಾಖ್ಯಾನಮ್ । ಬಹಿರ್ಧಾ ಪುರುಷಾತ್ ಆರಭ್ಯ ಆಕಾಶಸ್ಯ ಹೃದಯೇ ಸಂಕೋಚಕರಣಂ ಚೇತಃಸಮಾಧಾನಸ್ಥಾನಸ್ತುತಯೇ । ಯಥಾ ''ತ್ರಯಾಣಾಮಪಿ ಲೋಕಾನಾಂ ಕುರುಕ್ಷೇತ್ರಂ ವಿಶಿಷ್ಯತೇ । ಅರ್ಧತಸ್ತು ಕುರುಕ್ಷೇತ್ರಮರ್ಧತಸ್ತು ಪೃಥೂದಕಮ್'' (?) ಇತಿ ತದ್ವತ್ ॥

(ಆಕ್ಷೇಪ) :- ಒಂದೇ ಆಗಿರುವ ಆಕಾಶಕ್ಕೆ ಮೂರು ಪ್ರಕಾರವಾದ ಭೇದವಿರುವದು ಹೇಗೆ ?

(ಪರಿಹಾರ) :- ಹೇಳುತ್ತೇವೆ. ಹೊರಗಿನ ಇಂದ್ರಿಯವಿಷಯಗಳುಳ್ಳ ಎಚ್ಚರದವಸ್ಥೆಯಲ್ಲಿರುವ ಆಕಾಶದಲ್ಲಿ ಬಹಳ ದುಃಖವು ಕಾಣಬರುತ್ತದೆ. ಅದಕ್ಕಿಂತಲೂ ಶರೀರದ ಒಳಗಡೆ ಇರುವ ಕನಸಿನವಸ್ಥೆಯ (ಆಕಾಶದಲ್ಲಿ) ಕನಸುಗಳನ್ನು ಕಾಣುತ್ತಿರುವವನಿಗೆ ಇನ್ನೂ ಕಡಿಮೆಯ ದುಃಖವಾಗುತ್ತದೆ.[1] ಇನ್ನು ಹೃದಯದಲ್ಲಿರುವ ಆಕಾಶದಲ್ಲಿ ಯಾವ ಕಾಮವನ್ನೂ ಬಯಸುವದಿಲ್ಲ, ಯಾವ ಕನಸನ್ನೂ ಕಾಣುವದಿಲ್ಲ[2] ; ಆದ್ದರಿಂದ ಯಾವ ದುಃಖವೂ ಇಲ್ಲದ್ದು ಸುಷುಪ್ತಾವಸ್ಥೆಯ ಆಕಾಶವು.[3] ಆದ್ದರಿಂದ ಒಂದಕ್ಕೇ ಮೂರು ಬಗೆಯ ಭೇದಗಳನ್ನು ಹೇಳುವದು ಯುಕ್ತವೇ.[4]

ಪುರುಷನ ಹೊರಗಿನ (ಆಕಾಶ)ದಿಂದ ಆರಂಭಿಸಿ ಆಕಾಶವನ್ನು ಹೃದಯದೊಳಗೆ ಸಂಕೋಚಗೊಳಿಸಿರುವದು ಚಿತ್ತಸಮಾಧಾನವನ್ನು ಮಾಡಿಕೊಳ್ಳಬೇಕಾಗಿರುವ (ಹೃದಯವೆಂಬ) ಸ್ಥಾನದ ಸ್ತುತಿಗಾಗಿ. ಹೇಗೆ ''ಮೂರೂ ಲೋಕಗಳೊಳಗೆ

---

1. ಇದು ಎಚ್ಚರದ ವ್ಯವಹಾರದ ದೃಷ್ಟಿಯಿಂದ ಹೇಳಿದ್ದು ; ಎರಡೂ ಸ್ವಪ್ನವೇ ಎಂಬ ಶ್ರೌತದೃಷ್ಟಿಯಿಂದ ನೋಡಿದಾಗ ಶರೀರದೊಳಗಡೆ ಕನಸಾಗುವದೆಂಬುದೂ ಅಲ್ಲಿ ಕಡಿಮೆಯ ದುಃಖವಾಗುವದೆಂಬುದೂ ಬಾಧಿತವಾಗುತ್ತದೆ.
2. ಮಾಂ. ಶಿ, ಮತ್ತು ಬೃ. ೪-೩-೧೯ರ ಸೂಚನೆ.
3. ಮಾಂ. ಕಾ. ಭಾ. ೧-೨ (ಭಾ. ಭಾ. ೨೨)ರಲ್ಲಿ ಆಕಾಶೇ ಚ ಹೃದಿ - ಎಂಬುದರ ಭಾಷ್ಯವನ್ನೂ ತೈ. ಭಾ. ೨-೧ (ಭಾ. ಭಾ. ೧೦೮)ರಲ್ಲಿ ವ್ಯೋಮಶಬ್ದವ್ಯಾಖ್ಯಾನವನ್ನೂ ನೋಡಿ.
4. ಒಂದೇ ಚಿದಾಕಾಶವು ಉಪಾದಿಭೇದದಿಂದ ಮೂರುವಿಧವಾಗಿದೆ ಎಂದು ಭಾವ.

ಕುರುಕ್ಷೇತ್ರವೇ ಹೆಚ್ಚಿನದು ; (ಅದರಲ್ಲಿ) ಕುರುಕ್ಷೇತ್ರವು ಅರ್ಧ(ವಾದರೆ), ಪೃಥೂದಕವೇ ಅರ್ಧ'' (?) ಎನ್ನುವರೋ ಹಾಗೆಯೇ ಇದು.[1]

ಹಾರ್ದಾಕಾಶರೂಪವಾದ ಈ ಬ್ರಹ್ಮದ ಉಪಾಸನೆಯ ಫಲ

(ಭಾಷ್ಯ)

೨೩೮. ತದೇತದ್ ಹಾರ್ದಾಕಾಶಾಖ್ಯಂ ಬ್ರಹ್ಮ ಪೂರ್ಣಂ ಸರ್ವಗತಮ್ । ನ ಹೃದಯಮಾತ್ರಪರಿಚ್ಛಿನ್ನಮಿತಿ ಮನ್ತವ್ಯಂ ಯದ್ಯಪಿ ಹೃದಯಾಕಾಶೇ ಚೇತಃ ಸಮಾಧೀಯತೇ । ಅಪ್ರವರ್ತಿ ನ ಕುತಶ್ಚಿತ್ ಕ್ವಚಿತ್ ಪ್ರವರ್ತಿತುಂ ಶೀಲಮ್ ಅಸ್ಯ ಇತ್ಯಪ್ರವರ್ತಿ ತತ್ ಅನುಚ್ಛಿತ್ತಿಧರ್ಮಕಮ್ । ಯಥಾ ಅನ್ಯಾನಿ ಭೂತಾನಿ ಪರಿಚ್ಛಿನ್ನಾನಿ ಉಚ್ಛಿತ್ತಿಧರ್ಮಕಾಣಿ, ನ ತಥಾ ಹಾರ್ದಂ ನಭಃ । ಪೂರ್ಣಾಮ್ ಅಪ್ರವರ್ತಿನೀಮ್ ಅನುಚ್ಛೇದಾತ್ಮಿಕಾಂ ಶ್ರಿಯಂ ವಿಭೂತಿಂ ಗುಣಫಲಂ ಲಭತೇ ದೃಷ್ಟಮ್, ಯ ಏವಂ ಯಥೋಕ್ತಂ ಪೂರ್ಣಾಪ್ರವರ್ತಿಗುಣಂ ಬ್ರಹ್ಮ ವೇದ ಜಾನಾತಿ । ಇಹೈವ ಜೀವನ್ ತದ್ಭಾವಂ ಪ್ರತಿಪದ್ಯತೇ ಇತ್ಯರ್ಥಃ॥

(ಭಾಷ್ಯಾರ್ಥ)

ಈ ಹಾರ್ದಾಕಾಶವೆಂಬ ಬ್ರಹ್ಮವು[2] ಪೂರ್ಣವು, ಸರ್ವಗತ(ವಾಗಿದೆ) ; - ಹೃದಯಾಕಾಶದಲ್ಲಿ ಚಿತ್ತವನ್ನು ಸಮಾಧಾನಮಾಡಿಕೊಳ್ಳಬೇಕಾಗಿದೆಯಾದರೂ - ಹೃದಯದಷ್ಟೇ (ಅಳತೆಗೆ) ಕಟ್ಟುಬಿದ್ದಿರುವದೆಂದು ಭಾವಿಸಬಾರದು.[3] (ಇದು) ಅಪ್ರವೃತ್ತಿ, ಎಲ್ಲಿಂದಲೂ ಎಲ್ಲಿಗೂ ಪ್ರವರ್ತಿಸುವದು ಅದರ ಸ್ವಭಾವವಲ್ಲವಾದ್ದರಿಂದ ಅದು ಅಪ್ರವರ್ತಿ, ನಾಶವಿಲ್ಲದ ಧರ್ಮವುಳ್ಳದ್ದು. ಹೇಗೆ ಮಿಕ್ಕ ಭೂತಗಳು ಪರಿಚ್ಛಿನ್ನವಾಗಿದ್ದು ನಾಶವಾಗುವವೋ ಹಾಗಲ್ಲ, ಹಾರ್ದಾಕಾಶವು. ಪೂರ್ಣವೂ

1. ಪೃಥೂದಕವು ಮೂರು ಲೋಕಗಳೊಳಗೇ ಸೇರಿದ್ದರೂ ಅದರ ಹೆಚ್ಚುಗಾರಿಕೆಯನ್ನು ತಿಳಿಸಲು ಅದನ್ನು ಬೇರೆ ಮಾಡಿದಂತೆ ಹೃದಯಾಕಾಶಸ್ಥಾನವನ್ನು ಹೊಗಳುವದಕ್ಕಾಗಿ ಆಕಾಶದೊಳಗೇ ಸೇರಿರುವ ಅದನ್ನು ಬೇರ್ಪಡಿಸಿದೆ ಎಂದು ಭಾವ. ಇಲ್ಲಿ ಹೃದಯಾಕಾಶವು ಪರಮಾರ್ಥವಾಗಿ ಬ್ರಹ್ಮವೇ ಆಗಿರುವದರಿಂದ, ವ್ಯಾವಹಾರಿಕವಾದ ಹೃದಯಾಕಾಶದಲ್ಲಿ ಅದನ್ನು ಉಪಾಸನೆಮಾಡಬೇಕು ಎಂಬುದರಲ್ಲಿ ತಾತ್ಪರ್ಯ.
2. ಹಾರ್ದಾಕಾಶವೆಂದರೆ ಬ್ರಹ್ಮವೇ ; ಏಕೆಂದರೆ ಸುಷುಪ್ತಿಯಲ್ಲಿ ಬ್ರಹ್ಮಕ್ಕಿಂತ ಬೇರೆಯಾದ ಯಾವ ಆಕಾಶವೂ ಇರುವದಿಲ್ಲ.
3. ಉಪಾಸನೆಗಾಗಿ ಹೃದಯಾಕಾಶವೆಂಬ ಸ್ಥಾನವನ್ನು ಹೇಳಿದ್ದರೂ ಸ್ವತಃ ಬ್ರಹ್ಮವು ಸರ್ವಗತವೇ ಎಂದರ್ಥ.

ಅಪ್ರವೃತ್ತಿಯೂ ಆಗಿರುವ - (ಅಪ್ರವರ್ತಿ ಎಂದರೆ) ನಾಶರಹಿತವಾದದ್ದು. (ಅಂಥ) - ಶ್ರೀಯನ್ನು ವಿಭೂತಿ ಎಂಬ ದೃಷ್ಟವಾದ[1] ಗುಣಫಲವನ್ನು - ಮೇಲೆ ಹೇಳಿದ ಪೂರ್ಣಾಪ್ರವರ್ತಿಗುಣಗಳುಳ್ಳ ಬ್ರಹ್ಮವನ್ನು ಯಾವನು ಹೀಗೆಂದು ಅರಿತು ಕೊಳ್ಳುವನೋ ಉಪಾಸನೆಮಾಡುವನೋ (ಅವನು) - ಪಡೆದುಕೊಳ್ಳುತ್ತಾನೆ. ಇಲ್ಲಿಯೇ ಬದುಕಿರುವಾಗಲೇ ಅದರ ಭಾವವನ್ನು ಹೊಂದುತ್ತಾನೆ ಎಂದರ್ಥ.[2]

ಮೂರನೆಯ ಅಧ್ಯಾಯ - ಹದಿಮೂರನೆಯ ಖಂಡ

(ಗಾಯತ್ರೀಬ್ರಹ್ಮದ ಅಂಗೋಪಾಸನೆಗಳು, ಪ್ರತೀಕೋಪಾಸನೆ)

ಗಾಯತ್ರೀಬ್ರಹ್ಮದ ದ್ವಾರಪುರುಷರುಗಳ ಉಪಾಸನೆಗಳು

(ಉಪನಿಷತ್ತು)

ತಸ್ಯ ಹ ವಾ ಏತಸ್ಯ ಹೃದಯಸ್ಯ ಪಞ್ಚ ದೇವಸುಷಯಃ ಸ ಯೋಽಸ್ಯ ಪ್ರಾಙ್ಸುಷಿಃ ಸ ಪ್ರಾಣಸ್ತಚ್ಚಕ್ಷುಃ ಸ ಆದಿತ್ಯಸ್ತದೇತತ್ತೇಜೋಽನ್ನಾದ್ಯ-ಮಿತ್ಯುಪಾಸೀತ ತೇಜಸ್ವ್ಯನ್ನಾದೋ ಭವತಿ ಯ ಏವಂ ವೇದ ॥೧॥

೧. ಆ ಈ ಹೃದಯಕ್ಕೆ ಐದು ದೇವಸುಷಿಗಳು. ಇದಕ್ಕೆ ಪೂರ್ವದ ಆ ಸುಷಿಯಿದೆಯಲ್ಲ, ಅದೇ ಪ್ರಾಣವು, ಅದೇ ಚಕ್ಷುಸ್ಸು, ಅದೇ ಆದಿತ್ಯನು. ಆ ಇದನ್ನು ತೇಜಸ್ಸು, ಅನ್ನಾದ್ಯವು ಎಂದು ಉಪಾಸನೆಮಾಡಬೇಕು. ಯಾವನು ಹೀಗೆಂದು ಅರಿತುಕೊಳ್ಳುವನೋ (ಅವನು) ತೇಜಸ್ವಿಯೂ ಅನ್ನಾದನೂ ಆಗುವನು.

ಎಂಥ ಗುಣದಿಂದ ಕೂಡಿದ್ದೆಂದು ಉಪಾಸನೆಮಾಡುವರೋ ಅಂಥ ಫಲವು ಲಭಿಸುವದು. ಈ ಫಲವು ಇಲ್ಲಿಯೇ ಕಾಣುವಂಥದ್ದಾದ್ದರಿಂದ ಇದನ್ನು ದೃಷ್ಟಫಲವೆಂದಿದೆ.

ಬದುಕಿರುವಾಗ ಉಪಾಸ್ಯದ ಸಾಕ್ಷಾತ್ಕಾರವಾದಬಳಿಕವೇ ಸತ್ತಬಳಿಕ ಅದರ ಸಾಯುಜ್ಯವು ದೊರಕುತ್ತದೆ. ಬೃ.ಭಾ. ೪-೧-೨ (ಭಾ. ಭಾ. ೧೪೫)ನ್ನು ನೋಡಿ. ಇಲ್ಲಿ ಹೇಳಿರುವದು ಗುಣೋಪಾಸನೆಗೆ ಅನುಗುಣವಾದ ದೃಷ್ಟಫಲಮಾತ್ರ.

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೨೩೯. 'ತಸ್ಯ ಹ ವಾ' ಇತ್ಯಾದಿನಾ ಗಾಯತ್ರ್ಯಾಖ್ಯಸ್ಯ ಬ್ರಹ್ಮಣಃ ಉಪಾಸನಾಙ್ಗತ್ವೇನ ದ್ವಾರಪಾಲಾದಿಗುಣವಿಧಾನಾರ್ಥಮ್ ಆರಭ್ಯತೇ । ಯಥಾ ಲೋಕೇ ದ್ವಾರಪಾಲಾಃ ರಾಜ್ಞಃ ಉಪಾಸನೇನ ವಶೀಕೃತಾಃ ರಾಜಪ್ರಾಪ್ತ್ಯರ್ಥಾ ಭವನ್ತಿ ತಥಾ ಇಹಾಪೀತಿ ॥

(ಭಾಷ್ಯಾರ್ಥ)

'ತಸ್ಯ ಹ ವಾ'ಎಂದು ಮುಂತಾಗಿರುವ (ಗ್ರಂಥಜಾತ)ದಿಂದ ಗಾಯತ್ರಿ ಎಂಬ ಬ್ರಹ್ಮದ ಉಪಾಸನೆಗೆ ಅಂಗವಾಗಿ ದ್ವಾರಪಾಲಕರೇ ಮುಂತಾದ ಗುಣವನ್ನು[1] ವಿಧಿಸುವದಕ್ಕಾಗಿ (ಈ ಮುಂದಿನ ಗ್ರಂಥವನ್ನು) ಆರಂಭಿಸಿರುತ್ತದೆ. ರಾಜನ ದ್ವಾರಪಾಲಕರನ್ನು ಉಪಾಸನೆಯಿಂದ ವಶಗೊಳಿಸಿಕೊಂಡರೆ ಹೇಗೆ (ಅವರು) ರಾಜನ ಪ್ರಾಪ್ತಿಗೆ (ಸಹಾಯಕ)ರಾಗುವರೋ ಹಾಗೆಯೇ ಇಲ್ಲಿಯೂ (ತಿಳಿಯಬೇಕು).[2]

ಪೂರ್ವದ್ವಾರಪುರುಷನ ಉಪಾಸನೆ

(ಭಾಷ್ಯ)

೨೪೦. ತಸ್ಯ ಇತಿ ಪ್ರಕೃತಸ್ಯ ಹೃದಯಸ್ಯ ಇತ್ಯರ್ಥಃ । ಏತಸ್ಯ ಅನನ್ತರನಿರ್ದಿಷ್ಟಸ್ಯ ಪಞ್ಚ ಪಞ್ಚಸಂಖ್ಯಾಕಾಃ ದೇವಾನಾಂ ಸುಷಯಃ ದೇವಸುಷಯಃ ಸ್ವರ್ಗಲೋಕಪ್ರಾಪ್ತಿದ್ವಾರಚ್ಛಿದ್ರಾಣಿ, ದೇವೈಃ ಪ್ರಾಣಾದಿತ್ಯಾದಿಭಿಃ ರಕ್ಷ್ಯಮಾಣಾನಿ ಇತ್ಯತೋ ದೇವಸುಷಯಃ । ತಸ್ಯ ಸ್ವರ್ಗಲೋಕಭವನಸ್ಯ ಹೃದಯಸ್ಯ ಅಸ್ಯ ಯಃ ಪ್ರಾಙ್ಮುಷಿಃ ಪೂರ್ವಾಭಿಮುಖಸ್ಯ ಪ್ರಾಗ್ಗತಂ ಯಚ್ಛಿದ್ರಂ ದ್ವಾರಂ ಸ ಪ್ರಾಣಃ । ತತ್ಸ್ಥಃ ತೇನ ದ್ವಾರೇಣ ಯಃ ಸಂಚರತಿ ವಾಯುವಿಶೇಷಃ ಸ ಪ್ರಾಗ್ ಅನಿತೀತಿ ಪ್ರಾಣಃ । ತೇನೈವ ಸಂಬದ್ಧಮ್ ಅವ್ಯತಿರಿಕ್ತಂ ತಚ್ಚಕ್ಷುಃ । ತಥೈವ ಸ ಆದಿತ್ಯಃ । ''ಆದಿತ್ಯೋ ಹ ವೈ ಬಾಹ್ಯಪ್ರಾಣಃ'' (? ಪ್ರ. ೫)[3] ಇತಿ ಶ್ರುತೇಃ ಚಕ್ಷೂರೂಪಪ್ರತಿಷ್ಠಾಕ್ರಮೇಣ ಹೃದಿ

---

1. ಗಾಯತ್ರೀಬ್ರಹ್ಮದ ಉಪಾಸನೆಯು ಪೂರ್ಣವಾಗುವದಕ್ಕೆ ಹೃದಯಲ್ಲಿರುವ ದ್ವಾರವಾಲಕರೇ ಮುಂತಾದವರ ಉಪಾಸನೆಮಾಡಬೇಕು. ಆದ್ದರಿಂದ ಈ ಅಂಗೋಪಾಸನೆಗಳನ್ನುಹೇಳಲಾಗುವದು.
2. ಹಾಗೆಯೇ ಈ ದ್ವಾರಪಾಲಕರು ಗಾಯತ್ರೀಬ್ರಹ್ಮಪ್ರಾಪ್ತಿಗೆ ಸಹಾಯಕರಾಗುತ್ತಾರೆ ಎಂದು ತಿಳಿಯಬೇಕು.
3. ಇದು ಪ್ರಶ್ನೋಪನಿಷತ್ತಿನ ವಾಕ್ಯವೋ ಮತ್ತೆಲ್ಲಿಯಾದರೂ ಇದೆಯೋ ತಿಳಿಯದು.

ಸ್ಥಿತಃ। "ಸ ಆದಿತ್ಯಃ ಕಸ್ಮಿನ್ ಪ್ರತಿಷ್ಠಿತ ಇತಿ ಚಕ್ಷುಷಿ" (ಬೃ. ೩-೯-೨೦) ಇತ್ಯಾದಿ ಹಿ ವಾಜಸನೇಯಕೇ । ಪ್ರಾಣವಾಯುದೇವತೈವ ಹಿ ಏಕಾ ಚಕ್ಷುರಾದಿತ್ಯಶ್ಚ ಸಹಾऽऽಶ್ರಯೇಣ । ವಕ್ಷ್ಯತಿ ಚ ಪ್ರಾಣಾಯ ಸ್ವಾಹಾ ಇತಿ ಹುತಂ ಹವಿಃ ಸರ್ವಮೇತತ್ ತರ್ಪಯತೀತಿ । ತದೇತತ್ ಪ್ರಾಣಾಖ್ಯಂ ಸ್ವರ್ಗಲೋಕ-ದ್ವಾರಪಾಲತ್ವಾತ್ ಬ್ರಹ್ಮ । ಸ್ವರ್ಗಲೋಕಂ ಪ್ರತಿಪಿತ್ಸುಃ ತೇಜಶ್ಚ[1] ಏತತ್ ಚಕ್ಷುರಾದಿತ್ಯಸ್ವರೂಪೇಣ, ಅನ್ನದತ್ವಾಚ್ಚ[2] ಸವಿತುಃ ತೇಜಃ, ಅನ್ನಾದ್ಯಮ್ ಇತ್ಯಾಭ್ಯಾಂ ಗುಣಾಭ್ಯಾಮ್ ಉಪಾಸೀತ । ತತಃ ತೇಜಸ್ವೀ ಅನ್ನಾದಶ್ಚ ಆಮಯಾವಿತ್ವರಹಿತೋ ಭವತಿ । ಯ ಏವಂ ವೇದ ತಸ್ಯೈತದ್ ಗುಣಫಲಮ್ । ಉಪಾಸನೇನ ವಶೀಕೃತೋ ದ್ವಾರಪಃ ಸ್ವರ್ಗಲೋಕಪ್ರಾಪ್ತಿಹೇತುರ್ಭವತೀತಿ। ಮುಖ್ಯಂ ಚ ಫಲಮ್ ॥

(ಭಾಷ್ಯಾರ್ಥ)

ಆ (ಹೃದಯಕ್ಕೆ) ಎಂದರೆ ಪ್ರಕೃತವಾದ ಹೃದಯಕ್ಕೆ ಎಂದರ್ಥ ; ಈ ಎಂದರೆ ಈ ಹಿಂದೆಯೇ (ಹೇಳಿರುವ) ಹೃದಯಕ್ಕೆ,[3] ಐದು-ಐದು-ಸಂಖ್ಯೆಯ ದೇವಸುಷಿಗಳು, ದೇವತೆಗಳ ಸುಷಿಗಳು, ಸ್ವರ್ಗಲೋಕವನ್ನು ಪಡೆಯುವದಕ್ಕೆ[4] ದ್ವಾರವಾಗಿರುವ ರಂಧ್ರಗಳು. (ಇವು) ದೇವತೆಗಳಾದ ಪ್ರಾಣ, ಆದಿತ್ಯ-ಮುಂತಾದವರು (ಇಲ್ಲಿ) ಕಾವಲಿರುವದರಿಂದ ದೇವಸುಷಿಗಳು.[5] ಆ ಸ್ವರ್ಗಲೋಕದ ಭವನವಾದ[6] ಈ ಹೃದಯಕ್ಕೆ ಪೂರ್ವದಿಕ್ಕಿನ ಸುಷಿಯಿದೆಯಲ್ಲ, ಪೂರ್ವಕ್ಕೆ ತಿರುಗಿ ನಿಂತವನ ಪೂರ್ವದಲ್ಲಿರುವ ಛಿದ್ರವಿದೆಯಲ್ಲ,[7] ದ್ವಾರವಿದೆಯಲ್ಲ, ಅದೇ ಪ್ರಾಣವು.

---

1. 'ತೇಜಸ್ಸು' ಎಂಬ ಪಾಠವು ಬೇಕಿಲ್ಲ.
2. ಅನ್ನಾದ್ಯತ್ವಾಚ್ಚ ಎಂಬುದನ್ನು ಅನ್ನದತ್ವಾಚ್ಚ ಎಂದು ತಿದ್ದುಕೊಂಡಿದೆ.
3. ಭೂತಪೃಥಿವ್ಯಾದಿಕ್ರಮದಿಂದ ಗಾಯತ್ರೀಸಂಬದ್ಧವೆಂದು ಮೊದಲು ಹೇಳಿತ್ತಷ್ಟೆ, ಆ ಹೃದಯದಲ್ಲಿಯೇ ಗಾಯತ್ರೀಬ್ರಹ್ಮವನ್ನು ಉಪಾಸನೆಮಾಡಬೇಕೆಂದು ಇದರ ಹಿಂದಿನ ಕಂಡಿಕೆಯಲ್ಲಿ ಹೇಳಿತ್ತು; ಇದಕ್ಕೇ ಈಗ ದ್ವಾರಪಾಲಕರನ್ನು ಹೇಳುತ್ತಿರುವದು ಎಂದರ್ಥ.
4. ಸ್ವರ್ಗಲೋಕವೆಂದರೆ ಉಪಾಸ್ಯವಾದ ಬ್ರಹ್ಮ; ಮುಂದೆ ೬ನೆಯ ಕಂಡಿಕೆಯನ್ನು ನೋಡಿ.
5. ಬ್ರಹ್ಮಪ್ರಾಪ್ತಿಗೆ ದ್ವಾರವಾಗಿರುವದರಿಂದ ಸುಷಿಗಳು ; ದೇವತೆಗಳು ಇಲ್ಲಿ ಕಾವಲಿರುವದರಿಂದ ದೇವಸುಷಿಗಳು- ಎಂದಿದೆ ಎಂದರ್ಥ.
6. ಬ್ರಹ್ಮಸ್ಥಾನವಾದ ಎಂದರ್ಥ. ಅಲ್ಲಿಯೇ ಈ ಗಾಯತ್ರೀಬ್ರಹ್ಮವನ್ನು ಸಾಕ್ಷಾತ್ಕಾರಮಾಡಿ [illegible]
7. ಮನುಷ್ಯನು ತಿರುಗಿದಂತೆ ಅವನ ಹೃದಯವೂ ತಿರುಗುವದರಿಂದ ಆದಕ್ಕೆ ಪೂರ್ವದಿಕ್ಕಿನ ಸುಷಿ ಎಂದರೆ ಯಾವದನ್ನು ಗ್ರಹಿಸಬೇಕು ?- ಎಂಬ ಶಂಕೆಗೆ ಪರಿಹಾರವಿದು.

ಅದರಲ್ಲಿದ್ದುಕೊಂಡು[1] ಆ ದ್ವಾರದಿಂದ ಸಂಚರಿಸುತ್ತಿರುವದಲ್ಲ, ಆ ವಾಯುವು (ಪ್ರ) ಮುಂದುಗಡೆಗೆ (ಅನಿತಿ) ಚಲಿಸುತ್ತದೆಯಾಗಿ 'ಪ್ರಾಣ'ವೆನಿಸಿರುತ್ತದೆ. ಅದೇ (ಪ್ರಾಣಕ್ಕೆ) ಸಂಬದ್ಧವಾಗಿ ಅದಕ್ಕಿಂತ ಬೇರೆಯಲ್ಲದ್ದರಿಂದ,[2] ಅದೇ ಚಕ್ಷುಸ್ಸು. ಹಾಗೆಯೇ[3] ಅದು ಆದಿತ್ಯನು. ಏಕೆಂದರೆ, ''ಆದಿತ್ಯನೇ ಹೊರಗಿನ ಪ್ರಾಣವು'' (? ಪ್ರ. ೫)[4] ಎಂದು ಶ್ರುತಿಯಿದೆ. (ಆ ಆದಿತ್ಯನು) ಚಕ್ಷುಸ್ಸು, ರೂಪ - ಇವುಗಳು (ಒಂದರಲ್ಲೊಂದು) ಪ್ರತಿಷ್ಠಿತವಾಗಿರುವ ಕ್ರಮದಿಂದ ಹೃದಯದಲ್ಲಿರುತ್ತಾನೆ.[5] ''ಆ ಆದಿತ್ಯನು ಏತರಲ್ಲಿ ಪ್ರತಿಷ್ಠಿತನಾಗಿರುತ್ತಾನೆ ? ಚಕ್ಷುಸ್ಸಿನಲ್ಲಿ'' (ಬೃ. ೩-೯-೨೦) ಎಂದು ಮುಂತಾಗಿ[6] ವಾಜಸನೇಯದಲ್ಲಿದೆಯಲ್ಲವೆ ? ಪ್ರಾಣವಾಯುದೇವತೆಯೊಂದೇ ಅಲ್ಲವೆ, ತಮ್ಮ ಆಶ್ರಯದಿಂದೊಡಗೂಡಿದೆ, ಚಕ್ಷುಸ್ಸೂ ಆದಿತ್ಯನೂ (ಆಗಿದೆ)[7] ? 'ಪ್ರಾಣಾಯ ಸ್ವಾಹಾ !' ಎಂದು ಹೋಮಮಾಡಿದ ಹವಿಸ್ಸು ಇದೆಲ್ಲಕ್ಕೂ ತೃಪ್ತಿಯನ್ನುಂಟು ಮಾಡುತ್ತದೆ - ಎಂದು ಮುಂದೆ (೫-೧೯-೨ರಲ್ಲಿ) ಹೇಳಿಯೂ ಇರುತ್ತದೆ.[8]

ಆ ಈ ಪ್ರಾಣನೆಂಬುದು ಸ್ವರ್ಗಲೋಕದ ದ್ವಾರಪಾಲನಾಗಿರುವದರಿಂದ

1. ಅದೇ ಪ್ರಾಣವು, ಆ ಸುಷಿಯಲ್ಲಿರುವ ವಾಯುವಿಶೇಷವೇ ಪ್ರಾಣವು ಎಂದರ್ಥ. 'ಮಂಚಕೆಗಳು ಕೂಗುತ್ತವೆ' ಎಂದಂತೆ ಲಕ್ಷಣೆಯಿಂದ ಅದೇ ಎಂಬ ಶಬ್ದವನ್ನು ಪ್ರಯೋಗಿಸಿದೆ.
2. ಚಕ್ಷುಸ್ಸು ಪ್ರಾಣನಿಗಿಂತ ಅವ್ಯತಿರಿಕ್ತ ; ಏಕೆಂದರೆ ಪ್ರಾಣನ ಬಲದಿಂದಲೇ ಅದು ವ್ಯಾಪಾರಮಾಡುತ್ತದೆ.
3. ಇದರಂತೆಯೇ ಆದಿತ್ಯನೂ ಪ್ರಾಣಕ್ಕಿಂತ ಅವ್ಯತಿರಿಕ್ತನು, ಬೇರೆಯಲ್ಲ ಎಂದರ್ಥ. ೪-೩-೧ನ್ನು ನೋಡಿ.
4. ಪ್ರಶ್ನೋಪನಿಷತ್ತಿನಲ್ಲಿ ಬಾಹ್ಯಃ ಪ್ರಾಣಃ ಎಂದಿಲ್ಲ, ಪ್ರಾಣಃ ಎಂದಿಷ್ಟೇ ಇದೆ ; ಇದು ಅದರ ಅರ್ಥಮಾತ್ರವೊ, ಮತ್ತೆಲ್ಲಿಯಾದರೂ ಈ ವಾಕ್ಯವೇ ಇದೆಯೊ, ತಿಳಿಯದು.
5. ಆದಿತ್ಯನು ಕಾರಣವಾದ ಚಕ್ಷುಸ್ಸಿನಲ್ಲಿ ಚಕ್ಷುಸ್ಸು ತನ್ನ ಆರಂಭಕವಾದ ರೂಪಗಳಲ್ಲಿ, ರೂಪಗಳು ತಮ್ಮ ಆಕಾರದಿಂದ ಪರಿಣತವಾಗಿರುವ ಹೃದಯದಲ್ಲಿ - ಈ ಕ್ರಮದಿಂದ ಎಂದರ್ಥ. ಇದನ್ನು ಮುಂದಿನ ವಾಕ್ಯದಿಂದ ಸಮರ್ಥಿಸಿದೆ.
6. ಆದಿತ್ಯನು ಏತರಲ್ಲಿ ಪ್ರತಿಷ್ಠಿತನಾಗಿದಾನೆ ? ಚಕ್ಷುಸ್ಸಿನಲ್ಲಿ, ಚಕ್ಷುಸ್ಸು ಏತರಲ್ಲಿ ಪ್ರತಿಷ್ಠಿತವಾಗಿದೆ? ರೂಪಗಳಲ್ಲಿ, ಏಕೆಂದರೆ ಚಕ್ಷುಸ್ಸಿನಿಂದಲೇ ರೂಪಗಳನ್ನು ನೋಡುತ್ತಾನೆ. ರೂಪಗಳು ಏತರಲ್ಲಿ ಪ್ರತಿಷ್ಠಿತವಾಗಿವೆ ? ಹೃದಯದಲ್ಲಿ, ಹೃದಯದಲ್ಲಲ್ಲವೆ, ರೂಪಗಳನ್ನು ಅರಿಯುತ್ತಾನೆ ? 'ಹೃದಯದಲ್ಲಿಯೇ ರೂಪಗಳು ಪ್ರತಿಷ್ಠಿತವಾಗಿವೆ' ಎಂಬುದು ಪೂರ್ಣವಾಕ್ಯ.
7. ಅಧ್ಯಾತ್ಮವಾಗಿ ಪ್ರಾಣವೇ ಚಕ್ಷುಸ್ಸಾಗಿದೆ, ಅಧಿದೈವತವಾಗಿ ವಾಯುವೇ ಆದಿತ್ಯನಾಗಿದೆ ; ಪ್ರಾಣವಾಯುಗಳೆರಡೂ ಒಂದೇ ದೇವತೆ.
8. ಪ್ರಾಣತೃಪ್ತಿಯಿಂದ ಚಕ್ಷುಸ್ಸು, ಆದಿತ್ಯ, ದ್ಯುಲೋಕದೇವತೆ, ಅವೆರಡರಿಂದ ಅಧಿಷ್ಠಿತವಾಗಿರುವದು- ಇವೆಲ್ಲಕ್ಕೂ ತೃಪ್ತಿಯಾಗುವದು ಎಂದು ಅಲ್ಲಿ ಹೇಳಿದೆ.

ಬ್ರಹ್ಮವು.[1] ಸ್ವರ್ಗಲೋಕವನ್ನು ಪಡೆದುಕೊಳ್ಳಬೇಕೆನ್ನುವವನು - ಚಕ್ಷುರಾದಿತ್ಯರ ರೂಪದಿಂದ ಇದು ತೇಜಸ್ಸೂ (ಆಗಿದೆ), ಸೂರ್ಯನು ಅನ್ನಪ್ರದನಾಗಿರುವದರಿಂದ[2] ಅನ್ನಾದ್ಯವೂ (ಆಗಿದೆ. ಆದ್ದರಿಂದ) ತೇಜಸ್ಸು, ಅನ್ನಾದ್ಯವು ಎಂಬೀ (ಎರಡು) ಗುಣಗಳಿಂದ (ಕೂಡಿದ್ದೆಂದು ಈ ಬ್ರಹ್ಮವನ್ನು) ಉಪಾಸನೆಮಾಡಬೇಕು. ಅದರಿಂದ ತೇಜಸ್ವಿಯೂ ಅನ್ನಾದನೂ ಎಂದರೆ ರೋಗರಹಿತನೂ ಆಗುತ್ತಾನೆ. ಯಾವನು ಹೀಗೆಂದು ಉಪಾಸನೆಮಾಡುವನೋ ಅವನಿಗೆ ಇದು ಗುಣಫಲವು.[3] (ಈ) ಉಪಾಸನೆಯಿಂದ ವಶೀಕೃತನಾದ (ಈ) ದ್ವಾರಪಾಲಕನು ಸ್ವರ್ಗಲೋಕಪ್ರಾಪ್ತಿಗೆ ಕಾರಣನಾಗುತ್ತಾನೆ ಎಂಬ ಮುಖ್ಯಫಲವೂ (ಆಗುತ್ತದೆ).

(ಉಪನಿಷತ್ತು)

ಅಥ ಯೋಽಸ್ಯ ದಕ್ಷಿಣಃ ಸುಷಿಃ ಸ ವ್ಯಾನಸ್ತಚ್ಛ್ರೋತ್ರಗ್ಂ ಸ ಚನ್ದ್ರಮಾಸ್ತದೇತಚ್ಛ್ರೀಶ್ಚ ಯಶಶ್ಚೇತ್ಯುಪಾಸೀತ ಶ್ರೀಮಾನ್ ಯಶಸ್ವೀ ಭವತಿ ಯ ಏವಂ ವೇದ ॥೨॥

೨. ಇನ್ನು ಇದರ ದಕ್ಷಿಣಸುಷಿಯಿದೆಯಲ್ಲ, ಅದು ವ್ಯಾನವು ; ಅದೇ ಶ್ರೋತ್ರವು, ಅದೇ ಚಂದ್ರನು. ಆ ಇದನ್ನು ಶ್ರೀಯೆಂದೂ ಯಶಸ್ಸೆಂದೂ ಉಪಾಸನೆಮಾಡಬೇಕು. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನು ಶ್ರೀಮಂತನೂ ಯಶಸ್ವಿಯೂ ಆಗುತ್ತಾನೆ.

ದಕ್ಷಿಣದ್ವಾರಪಾಲನ ಉಪಾಸನೆ

(ಭಾಷ್ಯ)

೨೪೧. ಅಥ ಯೋಽಸ್ಯ ದಕ್ಷಿಣಃ ಸುಷಿಃ ತತ್ಸ್ಥೋ ವಾಯುವಿಶೇಷಃ ಸ ವೀರ್ಯವತ್ಕರ್ಮ ಕುರ್ವನ್ ವಿಗೃಹ್ಯ ವಾ ಪ್ರಾಣಾಪಾನೌ ನಾನಾ ವಾ ಅನಿತಿ

---

1. ಬ್ರಹ್ಮಪ್ರಾಪ್ತಿಗೆ ಕಾರಣವಾಗಿರುವದರಿಂದ ಪ್ರಾಣನನ್ನು ಬ್ರಹ್ಮವೆಂದಿದೆ.

2. 'ಸವಿತುಶ್ಚ ಅನ್ನದತ್ವಂ ವೃಷ್ಟಿದ್ವಾರೇಣ ಆದಿತ್ಯಾಜ್ಜಾಯತೇ ವೃಷ್ಟಿರಿತ್ಯಾದೌ ದೃಷ್ಟಮ್ । ಅತಶ್ಚ ಅನ್ನಂ ಚ ತದಾದ್ಯಂ ಚೇತಿ ಗುಣಾನ್ತರವಿಶಿಷ್ಟತ್ವೇನಾಪಿ ಸವಿತೃರೂಪಂ ಪ್ರಾಣಾಖ್ಯಂ ಬ್ರಹ್ಮ ಧ್ಯಾನಾರ್ಹಮ್ ಇತ್ಯರ್ಥಃ' ಎಂಬ ವ್ಯಾಖ್ಯಾನದ ಬಲದಿಂದ ಮೂಲದ ಪಾಠವನ್ನು ಮಾರ್ಪಡಿಸಿಕೊಂಡು ಕನ್ನಡಿಸಿದೆ.

3. ಈ ಎರಡು ಗುಣಗಳಿಂದ ಕೂಡಿದ್ದೆಂದು ಉಪಾಸನೆಮಾಡಿದ್ದರಿಂದ ಆದ ದೃಷ್ಟಫಲವು.

ಇತಿ ವ್ಯಾನಃ । ತತ್ಸಂಬದ್ಧಮೇವ ಚ ತತ್ ಶ್ರೋತಮ್ ಇನ್ದ್ರಿಯಮ್ । ತಥಾ ಸ ಚನ್ದ್ರಮಾಃ । ''ಶ್ರೋತ್ರೇಣ ಸೃಷ್ಟಾ ದಿಶಶ್ಚ ಚನ್ದ್ರಮಾಶ್ಚ'' (ಐ. ಆ. ೧-೭) ಇತಿ ಶ್ರುತೇಃ । ಸಹಾಶ್ರಯೌ ಪೂರ್ವವತ್ । ತದೇತತ್ ಶ್ರೀಶ್ಚ ವಿಭೂತಿಃ ಶ್ರೋತ್ರ ಚನ್ದ್ರಮಸೋರ್ಜ್ಞಾನಾನ್ನಹೇತುತ್ವಮ್ । ಅತಸ್ತಾಭ್ಯಾಂ ಶ್ರೀತ್ವಮ್ । ಜ್ಞಾನಾನ್ನವತಶ್ಚ ಯಶಃ ಖ್ಯಾತಿರ್ಭವತೀತಿ ಯಶೋಹೇತುತ್ವಾತ್ ಯಶಸ್ತ್ವಮ್ । ಅತಃ ತಾಭ್ಯಾಂ ಗುಣಾಭ್ಯಾಮ್ ಉಪಾಸೀತ ಇತ್ಯಾದಿ ಸಮಾನಮ್ ॥

(ಭಾಷ್ಯಾರ್ಥ)

ಇನ್ನು ಈ (ಹೃದಯದ) ದಕ್ಷಿಣಸುಷಿಯಿರುವದಲ್ಲ, ಎಂದರೆ ಅದರಲ್ಲಿರುವ ವಾಯುವಿಶೇಷವಿರುವದಲ್ಲ, ಅದು (ವಿ-) ವೀರ್ಯವತ್ಕರ್ಮವನ್ನು ಮಾಡುತ್ತಾ, ಅಥವಾ ಪ್ರಾಣಾಪಾನಗಳನ್ನು ಹಿಡಿದುಕೊಂಡು[1], ಅಥವಾ ವಿವಿಧವಾದ ಕಡೆಗಳಲ್ಲಿ (ಅನಿತಿ -) ವ್ಯಾಪಾರಮಾಡುವದರಿಂದ ವ್ಯಾನವು. (ವ್ಯಾನಕ್ಕೆ) ಸಂಬದ್ಧವಾಗಿಯೇ (ಇರುವದರಿಂದ) ಅದೇ ಶ್ರೋತ್ರವು ; ಹಾಗೆಯೇ ಅದೇ ಚಂದ್ರನು. ''(ಪುರುಷನ) ಶ್ರೋತ್ರದಿಂದ ದಿಕ್ಕುಗಳೂ ಚಂದ್ರನೂ ಸೃಷ್ಟರಾಗಿರುತ್ತಾರೆ'' (ಐ. ಆ. ೧-೭) ಎಂದು ಶ್ರುತಿಯಿರುವದರಿಂದ (ಇವೆರಡೂ) ಆಶ್ರಯದೊಡನೆ (ಆ ವ್ಯಾನವೇ) ಎಂದು ಹಿಂದಿನಂತೆ ವ್ಯಾಖ್ಯಾನಮಾಡಬೇಕು.[2]

ಆ ಇದು ಶ್ರೀ ಎಂದೂ ವಿಭೂತಿ ಎಂದೂ- ಶ್ರೋತ್ರಚಂದ್ರರು (ಕ್ರಮವಾಗಿ) ಜ್ಞಾನ, ಅನ್ನ- ಇವುಗಳಿಗೆ ಹೇತುವಾಗಿರುತ್ತಾರೆ. ಆದ್ದರಿಂದ ಅವುಗಳಿಂದ ಶ್ರೀತ್ವವುಂಟಾಗುತ್ತದೆ. ಜ್ಞಾನಾನ್ನಗಳಿರುವವನಿಗೆ ಯಶಸ್ಸು ಎಂದರೆ ಒಳ್ಳೆಯ ಹೆಸರು ಬರುತ್ತದೆಯಾದ್ದರಿಂದ (ಅವರು) ಯಶಸ್ಸಿಗೂ ಕಾರಣ(ರಾಗಿರುತ್ತಾರೆ). ಆದ್ದರಿಂದ (ವ್ಯಾನಬ್ರಹ್ಮವನ್ನು) ಆ ಗುಣಗಳೆರಡರಿಂದಲೂ ಒಳಗೂಡಿದ್ದೆಂದು ಉಪಾಸನೆ-ಮಾಡಬೇಕು- ಎಂಬಿದೇ ಮುಂತಾದದ್ದು (ಹಿಂದಿನದಕ್ಕೆ) ಸಮಾನವು.[3]

---

1. ನಡುವಿನ ವ್ಯಾನವು ಪ್ರಾಣಾಪಾನಗಳನ್ನು (ವಿಗೃಹ್ಯ) ಹಿಡಿದುಕೊಂಡಿರುವ ವ್ಯಾಪಾರವನ್ನು ಮಾಡುವದರಿಂದ ಶರೀರವು ಮೇಲಕ್ಕೆ ಅಥವಾ ಕೆಳಕ್ಕೆ ಹೋಗದೆ ಸಮಸ್ಥಿತಿಯಲ್ಲಿದ್ದುಕೊಂಡಿರುತದೆ.
2. ವ್ಯಾನದ ತೃಪ್ತಿಯಿಂದ ಶ್ರೋತ್ರ, ಚಂದ್ರ, ದಿಕ್ಕುಗಳು, ಅವುಗಳಿಂದ ಅಧಿಷ್ಠಿತವಾಗಿರುವ ವೆಲ್ಲವೂ ತೃಪ್ತವಾಗುವವು ಎಂದು ೫-೨೦-೧ರಲ್ಲಿ ಹೇಳಿದೆಯಾದ್ದರಿಂದ ವ್ಯಾನವೇ ಶ್ರೋತ್ರಚಂದ್ರಾದಿಗಳು ಎಂದು ವ್ಯಾಖ್ಯಾನಮಾಡಿಕೊಳ್ಳಬೇಕು.
3. ಶ್ರೀಯಶಸ್ಸುಗಳು ಈ ಉಪಾಸನೆಯ ಗುಣಫಲವು ; ಸ್ವರ್ಗಲೋಕಪ್ರಾಪ್ತಿಯು ಮುಖ್ಯ ಫಲವು - ಎಂದು ವ್ಯಾಖ್ಯಾನಮಾಡಿಕೊಳ್ಳಬೇಕು ಎಂದು ಅಭಿಪ್ರಾಯ.

(ಉಪನಿಷತ್ತು)

ಅಥ ಯೋಽಸ್ಯ ಪ್ರತ್ಯಜ್ಜುಷಿಃ ಸೋಽಪಾನಃ ಸಾ ವಾಕ್

ಬ್ರಹ್ಮವರ್ಚಸ್ಯನ್ನಾದೋ ಭವತಿ ಯ ಏವಂ ವೇದ ॥೩॥

೩. ಇನ್ನು ಇದರ ಪಶ್ಚಿಮದ ಸುಷಿಯಿರುವದಲ್ಲ, ಅದು ಅಪಾನವು, ಅದೇ ವಾಕ್ಕು, ಅದೇ ಅಗ್ನಿಯು. ಆ ಇದನ್ನು ಬ್ರಹ್ಮವರ್ಚಸವು, ಅನ್ನಾದ್ಯವು ಎಂದು ಉಪಾಸನೆಮಾಡಬೇಕು. ಯಾವನು ಹೀಗೆಂದು ಅರಿತುಕೊಳ್ಳುತ್ತಾನೋ (ಅವನು) ಬ್ರಹ್ಮವರ್ಚಸಿಯೂ ಅನ್ನಾದನೂ ಆಗುತ್ತಾನೆ.

ಪಶ್ಚಿಮದ್ವಾರಪಾಲನ ಉಪಾಸನೆ

(ಭಾಷ್ಯ)

೨೪೨. ಅಥ ಯೋಽಸ್ಯ ಪ್ರತ್ಯಜ್ಜುಷಿಃ ಪಶ್ಚಿಮಃ ತತ್ರೋ೭ ವಾಯುವಿಶೇಷಃ ಸ ಮೂತ್ರಪುರೀಷಾದ್ಯಪನಯನ್ ಅಧೋಽನಿತಿ ಇತ್ಯಪಾನಃ । ಸಾ ತಥಾ[1] ವಾಕ್ । ತತ್ಸಂಬನ್ಧಾತ್ । ತಥಾ ಅಗ್ನಿಃ । ತದೇತದ್ ಬ್ರಹ್ಮವರ್ಚಸಮ್ । ವೃತ್ತಸ್ವಾಧ್ಯಾಯನಿಮಿತ್ತಂ ತೇಜಃ ಬ್ರಹ್ಮವರ್ಚಸಮ್ । ಅಗ್ನಿಸಂಬನ್ಧಾತ್ ವೃತ್ತಸ್ವಾಧ್ಯಾಯಸ್ಯ । ಅನ್ನಗ್ರಸನ ಹೇತುತ್ವಾತ್ ಅಪಾನಸ್ಯ ಅನ್ನಾದ್ಯತ್ವಮ್ । ಸಮಾನಮ್ ಅನ್ಯತ್ ॥

(ಭಾಷ್ಯಾರ್ಥ)

ಇನ್ನು ಇದಕ್ಕೆ ಯಾವದು ಪಶ್ಚಿಮದ ಸುಷಿಯೋ, ಪಶ್ಚಿಮದಲ್ಲಿರುವ (ರಂಧ್ರವೋ), ಅದರಲ್ಲಿರುವ ವಾಯುವಿಶೇಷವೋ (ಎಂದರ್ಥ) ; ಅದು ಮೂತ್ರಪುರೀಷವೇ ಮುಂತಾದದ್ದನ್ನು (ಅಪ) ತೆಗೆದುಕೊಂಡುಹೋಗುವದಕ್ಕೆ ಕೆಳಕ್ಕೆ (ಅನಿತಿ) ವ್ಯಾಪಾರಮಾಡುವದರಿಂದ ಅಪಾನವು. ಅದೇ ವಾಕ್ಕು ; ಏಕೆಂದರೆ ಅದಕ್ಕೆ ಸಂಬದ್ಧವಾಗಿದೆ ; ಹಾಗೆಯೇ ಅಗ್ನಿಯು.[2] ಆ ಈ (ಬ್ರಹ್ಮವು) ಬ್ರಹ್ಮವರ್ಚಸವು. ಹಿಂದೆ

1. ಇಲ್ಲಿ ತಥಾ ಎಂಬ ಮಾತು ಮೂಲಭಾಷ್ಯದಲ್ಲಿತ್ತೆ? ಎಂಬುದು ಸಂಶಯಗ್ರಸ್ತ.
2. ಇಲ್ಲಿಯೂ ಆದಿತ್ಯನಂತೆ ಅಗ್ನಿಗೆ ವಾಙ್ಮೂಲಕವಾಗಿ ಹೃದಯದ ಸಂಬಂಧವಿದೆ. ಬ್ಯ. ೩-೯-೨೪ನ್ನು ನೋಡಿ. ತತ್ಸಂಬನ್ಧಾತ್ ಎಂಬುದನ್ನು ವ್ಯಾಖ್ಯಾನದಲ್ಲಿ ಅಗ್ನಿಗೆ ಹೊಂದಿಸಿದ್ದರೂ ವಾಕ್ಕಿಗೇ ಇದು ಅನ್ವಯಿಸುತ್ತದೆ ಎಂದು ಹಿಂದಿನ ಭಾಷ್ಯದ ಶೈಲಿಯಿಂದ ಗೊತ್ತುಮಾಡಬಹುದು. ತಥಾ ಅಗ್ನಿಃ - ಎಂದರೇ ಬೇಕಾಗಿರುವ ಅರ್ಥವು ಹೊರಡುತ್ತದೆ. ಇಲ್ಲಿಯೂ ಅಪಾನತೃಪ್ತಿಯಿಂದ ವಾಕ್ಕು, ಅಗ್ನಿ, ಪೃಥಿವಿ- ಇವುಗಳಿಂದ ಅಧಿಷ್ಠಿತವಾದ-ದ್ದೆಲ್ಲವೂ ಹೀಗೆ ತೃಪ್ತವಾಗುತ್ತದೆ ಎಂಬ (೫-೨೧-೫) ಶ್ರುತಿಯನ್ನು ಮನದಂದು ಕೊಳ್ಳಬೇಕು.

ಆಗಿರುವ ಸ್ವಾಧ್ಯಾಯನಿಮಿತ್ತವಾದ[1] ತೇಜಸ್ಸಿಗೆ ಬ್ರಹ್ಮವರ್ಚಸವೆಂದು (ಹೆಸರು). ಹಿಂದಿನ ಸ್ವಾಧ್ಯಾಯಕ್ಕೆ ಅಗ್ನಿಯ ಸಂಬಂಧವಿರುವದರಿಂದ (ಅದನ್ನು ತೇಜಸ್ಸು ಎಂದು ಕರೆಯಬಹುದು). ಅನ್ನವನ್ನು ನುಂಗುವದಕ್ಕೆ ಅಪಾನವು ಕಾರಣವಾಗಿರುವದರಿಂದ[2] ಅನ್ನಾದ್ಯವು. ಮಿಕ್ಕದ್ದು ಸಮಾನವು.[3]

(ಉಪನಿಷತ್ತು)

ಅಥ ಯೋಽಸ್ಯೋದಜ್ಜುಷಿಃ ಸ ಸಮಾನಸ್ತನ್ಮನಃ ಸ ಪರ್ಜನ್ಯಸ್ತದೇತತ್ ಕೀರ್ತಿಶ್ಚ ವ್ಯುಷ್ಟಿಶ್ಚೇತ್ಯುಪಾಸೀತ ಕೀರ್ತಿಮಾನ್ ವ್ಯುಷ್ಟಿಮಾನ್ ಭವತಿ ಯ ಏವಂ ವೇದ ॥೪॥

೪. ಇನ್ನು ಇದರ ಉತ್ತರಸುಷಿಯಿದೆಯಲ್ಲ, ಅದು ಸಮಾನವು. ಅದೇ ಮನಸ್ಸು, ಅದೇ ಪರ್ಜನ್ಯನು. ಆ ಇದನ್ನು ಕೀರ್ತಿ, ವ್ಯುಷ್ಟಿ- ಎಂದು ಉಪಾಸನೆಮಾಡಬೇಕು. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನು ಕೀರ್ತಿವಂತನೂ ವ್ಯುಷ್ಟಿವಂತನೂ ಆಗುವನು.

ಉತ್ತರದ್ವಾರಪಾಲನ ಉಪಾಸನೆ

(ಭಾಷ್ಯ)

೨೪೩. ಅಥ ಯೋಽಸ್ಯ ಉದಜ್ಜುಷಿಃ ಉದಗ್ಗತಃ ಸುಷಿಃ ತತ್ಸ್ಥೋ ವಾಯುವಿಶೇಷಃ ಸೋಽಶಿತಪೀತೇ ಸಮಂ ನಯತೀತಿ ಸಮಾನಃ । ತತ್ಸಂಬದ್ಧಂ ಮನಃ, ಅನ್ತಃಕರಣಮ್[4] । ಸ ಪರ್ಜನ್ಯಃ ವೃಷ್ಟ್ಯುತ್ಪಕ್ತೋ ದೇವಃ । ಪರ್ಜನ್ಯನಿಮಿತ್ತಾಶ್ಚ ಆಪ ಇತಿ । ''ಮನಸಾ ಸೃಷ್ಟಾ ಆಪಶ್ಚ ವರುಣಶ್ಚ'' (ಐ. ಆ. ೨-೧) ಇತಿ ಶ್ರುತೇಃ । ತದೇತತ್ ಕೀರ್ತಿಶ್ಚ । ಮನಸೋ ಜ್ಞಾನಸ್ಯ ಕೀರ್ತಿಹೇತುತ್ವಾತ್ । ಆತ್ಮಪರೋಕ್ಷಂ ವಿಶ್ರುತತ್ವಂ ಕೀರ್ತಿರ್ಯಶಃ ಸ್ವಕರಣಸಂವೇದ್ಯಂ ವಿಶ್ರುತತ್ವಂ ವ್ಯುಷ್ಟಿಃ । ಕಾನ್ತಿಃ ದೇಹಗತಂ ಲಾವಣ್ಯಮ್ । ತತಶ್ಚ ಕೀರ್ತಿಸಂಭವಾತ್ ಕೀರ್ತಿಶ್ಚ ಇತಿ । ಸಮಾನಮ್ ಅನ್ಯತ್ ॥

1. ಅಧ್ಯಯನನಿಮಿತ್ತವಾದ. 2. ಐ. ೧-೩-೧೦.
3. ಯಾವನು ಹೀಗೆಂದು ಉಪಾಸನೆಮಾಡುವನೋ ಅವನಿಗೆ ಇಂಥ ಫಲವು ಎಂದು ಹಿಂದಿನಂತೆ ವ್ಯಾಖ್ಯಾನಮಾಡಿಕೊಳ್ಳಬೇಕು ಎಂದು ಅಭಿಪ್ರಾಯ.
4. 'ತತ್ಸಂಬದ್ಧಂ ತನ್ಮನಃ' ಎಂದೋ 'ತತ್ ತತ್ಸಂಬದ್ಧಂ ಮನಃ' ಎಂದೋ ಮೂಲವಿದ್ದಿರಬೇಕು.

(ಭಾಷ್ಯಾರ್ಥ)

ಇನ್ನು ಇದರ ಉತ್ತರಸುಷಿಯಿದೆಯಲ್ಲ, ಉತ್ತರದಲ್ಲಿರುವ ರಂಧ್ರವಿದೆಯಲ್ಲ, ಅದರಲ್ಲಿರುವ ವಾಯುವಿಶೇಷವಿದೆಯಲ್ಲ, ಅದು ಉಂಡದ್ದನ್ನೂ ಕುಡಿದದ್ದನ್ನೂ ಸಮವಾಗಿ ಒಯ್ಯುವದರಿಂದ 'ಸಮಾನ'ವೆನಿಸುವದು, ಅದಕ್ಕೆ ಸಂಬದ್ಧವಾಗಿರುವದರಿಂದ ಅದೇ ಮನಸ್ಸು, ಅಂತಃಕರಣವು- ಅದೇ ಪರ್ಜನ್ಯನು ; ವೃಷ್ಟ್ಯುತ್ಪಕನಾದ ದೇವನು ; ಏಕೆಂದರೆ ಅಪ್ಪು ಪರ್ಜನ್ಯನ ನಿಮಿತ್ತದಿಂದಾಗುತ್ತದೆ. "ಮನಸ್ಸಿನಿಂದ ಅಪ್ಪೂ ವರುಣನೂ ಸೃಷ್ಟರಾದರು" (ಐ. ಆ. ೨-೧) ಎಂದು ಶ್ರುತಿಯಿದೆ.[1]

ಆ ಇದು ಕೀರ್ತಿಯು, ಏಕೆಂದರೆ ಮನಸ್ಸಿನ ಜ್ಞಾನವು ಕೀರ್ತಿಗೆ ಕಾರಣವಾಗಿರುತ್ತದೆ[2]. ತನಗೆ ಪರೋಕ್ಷವಾಗಿ ಹೆಸರಾಗುವದು ಕೀರ್ತಿ, ಯಶಸ್ಸು ; ತನ್ನ ಕರಣಕ್ಕೇ ಗೋಚರವಾಗುವಂತೆ ಹೆಸರಾಂತಿರುವದು ವ್ಯುಷ್ಟಿಯು. (ವ್ಯುಷ್ಟಿ ಎಂದರೆ) ಕಾಂತಿ, ದೇಹಗತವಾದ ಲಾವಣ್ಯವು[3], ಅದರಿಂದ ಕೀರ್ತಿಯುಂಟಾಗುವದರಿಂದ (ಅದು) ಕೀರ್ತಿಯೂ (ಆಗುವದು). ಮಿಕ್ಕದ್ದು[4] ಸಮಾನವು.

(ಉಪನಿಷತ್ತು)

ಅಥ ಯೋಽಸ್ಯೋರ್ಧ್ವಃ ಸುಷಿಃ ಸ ಉದಾನಃ ಸ ವಾಯುಃ ಸ ಆಕಾಶಸ್ತದೇತದೋಜಶ್ಚ ಮಹಶ್ಚೇತ್ಯುಪಾಸೀತೌಜಸ್ವೀ ಮಹಸ್ವಾನ್ ಭವತಿ ಯ ಏವಂ ವೇದ ॥೫॥

೫. ಇನ್ನು ಇದರ ಮೇಲುಗಡೆಯ ಸುಷಿಯಿರುವದಲ್ಲ, ಅದು ಉದಾನವು. ಅದೇ ವಾಯು, ಅದೇ ಆಕಾಶವು. ಅದನ್ನು ಓಜಸ್ಸೆಂದೂ ಮಹವೆಂದೂ ಉಪಾಸನೆಮಾಡಬೇಕು. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನು ಓಜಸ್ವಿಯೂ ಮಹಸ್ವಂತನೂ ಆಗುವನು.

---

1. ಪ್ರಜಾಪತಿಯ ಮನಸ್ಸು ಅಪ್ಪಿಗೆ ಕಾರಣವೆಂದು ಶ್ರುತಿಪ್ರಸಿದ್ಧಿಯಿದೆ, ಪರ್ಜನ್ಯನು ಅಪ್ಪಿಗೆ ಕಾರಣನೆಂಬುದು ವ್ರಸಿದ್ಧವಾಗಿದೆ. ಆದ್ದರಿಂದ ಸಮಾನವಾಯುವಿಗೂ ಪರ್ಜನ್ಯನಿಗೂ ಸಂಬಂಧವಾಯಿತು - ಎಂದು ಆಶಯ. ಇಲ್ಲಿಯೂ ಸಮಾನದ ತೃಪ್ತಿಯಿಂದ ಮನಸ್ಸು, ಪರ್ಜನ್ಯ, ವಿದ್ಯುತ್ತು, ಮುಂತಾದದ್ದು ತೃಪ್ತವಾಗುವವು - ಎಂಬ (೫-೨೨-೨) ಶ್ರುತಿಯನ್ನು ಮನದಂದುಕೊಳ್ಳಬೇಕು.

2. ಆದ್ದರಿಂದ ಮನಸ್ಸಂಬಂಧದಿಂದ ಇದನ್ನು ಕೀರ್ತಿ ಎಂದು ಉಪಾಸನೆಮಾಡಬೇಕು.

3. ಆದ್ದರಿಂದ ಇದು ಸ್ವಾನುಭವದಲ್ಲಿರತಕ್ಕದ್ದು. ಕೀರ್ತಿ, ವ್ಯುಷ್ಟಿ ಎಂದು ಸಮಾನಬ್ರಹ್ಮವನ್ನು ಉಪಾಸನೆಮಾಡಬೇಕು. 4. ಫಲವಾಕ್ಯವು.

ಮೇಲುಗಡೆಯ ದ್ವಾರಪಾಲನ ಉಪಾಸನೆ

(ಭಾಷ್ಯ)

೨೪೪. ಅಥ ಯೋಽಸ್ಯ ಊರ್ಧ್ವಃ ಸುಷಿಃ ಸ ಉದಾನಃ । ಆಪಾದತಲಾತ್ ಆರಭ್ಯ ಊರ್ಧ್ವಮ್ ಉತ್ಕ್ರಮಣಾತ್ ಉತ್ಕರ್ಷಾರ್ಥಂ ಚ ಕರ್ಮ ಕುರ್ವನ್ ಅನಿತಿ ಇತಿ ಉದಾನಃ । ಸ ವಾಯುಃ, ತದಾಧಾರಶ್ಚ ಆಕಾಶಃ । ತದೇತತ್ ವಾಯ್ವಾಕಾಶಯೋಃ ಓಜೋಹೇತುತ್ವಾತ್ ಓಜಃ ಬಲಂ ಮಹತ್ತ್ವಾಚ್ಚ ಮಹಃ ಇತಿ । ಸಮಾನಮ್ ಅನ್ಯತ್ ॥

(ಭಾಷ್ಯ)

ಇನ್ನು ಇದರ ಮೇಲುಗಡೆಯ ಸುಷಿಯಿದೆಯಲ್ಲ, (ಅದರಲ್ಲಿರುವ ವಾಯು ವಿದೆಯಲ್ಲ), ಅದು ಉದಾನವು ; ಅಂಗಾಲಿನಿಂದ ಮೊದಲಾಗಿ ಮೇಲಕ್ಕೆ ಏರುತ್ತಲೂ ಉತ್ಕರ್ಷಾರ್ಥವಾದ ಕರ್ಮವನ್ನು ಮಾಡುತ್ತಲೂ (ಅನಿತಿ) ವ್ಯಾಪಾರಮಾಡು ತ್ತಿರುವದರಿಂದ ಉದಾನವು. ಅದೇ ವಾಯು, ಮತ್ತು ಅದಕ್ಕೆ ಆಧಾರವಾಗಿರುವ ಆಕಾಶವು.[1]

ವಾಯ್ವಾಕಾಶಗಳು ಓಜಸ್ಸಿಗೆ ಕಾರಣವಾಗಿರುವದರಿಂದ ಓಜಸ್ಸು, ಬಲವು ವ್ಯಾಪಕವಾಗಿರುವದರಿಂದ ಮಹವು.[2] ಮಿಕ್ಕ (ಗ್ರಂಥವು ಹಿಂದಿನದಕ್ಕೆ) ಸಮಾನ ವಾಗಿದೆ.[3]

ಬ್ರಹ್ಮಪುರುಷರ ಉಪಾಸನೆಗೆ ಬ್ರಹ್ಮಪ್ರಾಪ್ತಿಫಲ

(ಉಪನಿಷತ್ತು)

ತೇ ವಾ ಏತೇ ಪಞ್ಚ ಬ್ರಹ್ಮಪುರುಷಾಃ ಸ್ವರ್ಗಸ್ಯ ಲೋಕಸ್ಯ ದ್ವಾರಪಾಃ ಸ ಯ ಏತಾನೇವಂ ಪಞ್ಚ ಬ್ರಹ್ಮಪುರುಷಾನ್ ಸ್ವರ್ಗಸ್ಯ ಲೋಕಸ್ಯ ದ್ವಾರಪಾನ್ ವೇದಾಸ್ಯ ಕುಲೇ ವೀರೋ ಜಾಯತೇ ಪ್ರತಿಪದ್ಯತೇ

1. ಉದಾನದ ತೃಪ್ತಿಯಿಂದ ತ್ವಕ್ಕು, ವಾಯು, ಆಕಾಶ, ಮತ್ತು ವಾಯ್ವಾಕಾಶಗಳಿಂದ ಅಧಿಷ್ಠಿತವಾಗಿರುವದು- ಇವೆಲ್ಲವೂ ತೃಪ್ತವಾಗುವವೆಂಬ (೫-೨೩-೨) ಶ್ರುತಿಯನ್ನು ಇಲ್ಲಿ ಮನದಂದುಕೊಳ್ಳಬೇಕು.
2. ಈ ಗುಣಗಳಿಂದ ಕೂಡಿದ್ದೆಂದು ಉದಾನಬ್ರಹ್ಮವನ್ನು ಉಪಾಸನೆಮಾಡಬೇಕು.
3. ಫಲವಾಕ್ಯದ ಅರ್ಥವನ್ನು ಹಿಂದಿನಂತೆಯೇ ತಿಳಿದುಕೊಳ್ಳಬೇಕೆಂದು ಅಭಿಪ್ರಾಯ.

ಸ್ವರ್ಗಂ ಲೋಕಂ ಯ ಏತಾನೇವಂ ಪಞ್ಚ ಬ್ರಹ್ಮಪುರುಷಾನ್ ಸ್ವರ್ಗಸ್ಯ ಲೋಕಸ್ಯ ದ್ವಾರಪಾನ್ ವೇದ ॥೬॥

೬. ಈ ಐವರು ಬ್ರಹ್ಮಪುರುಷರೇ ಸ್ವರ್ಗಲೋಕದ ದ್ವಾರಪಾಲಕರು. ಯಾವನು ಹೀಗೆ ಈ ಐವರು ಬ್ರಹ್ಮಪುರುಷರನ್ನು ಸ್ವರ್ಗಲೋಕದ ದ್ವಾರಪಾಲಕರೆಂದು ಅರಿತುಕೊಳ್ಳುವನೋ ಅವನ ಕುಲದಲ್ಲಿ ವೀರನು ಹುಟ್ಟುತ್ತಾನೆ. ಯಾವನು ಹೀಗೆ ಸ್ವರ್ಗಲೋಕದ ದ್ವಾರಪಾಲಕರಾಗಿರುವ ಈ ಐವರು ಬ್ರಹ್ಮಪುರುಷರನ್ನು ಅರಿತುಕೊಳ್ಳುವನೋ (ಅವನು) ಸ್ವರ್ಗಲೋಕವನ್ನೂ ಪಡೆದುಕೊಳ್ಳುವನು.

(ಭಾಷ್ಯ)

೨೪೫. ತೇ ವಾ ಏತೇ ಯಥೋಕ್ತಾಃ ಪಞ್ಚಸುಷಿಸಂಬನ್ಧಾತ್ ಪಞ್ಚ ಬ್ರಹ್ಮಣೋ ಹಾರ್ದಸ್ಯ ಪುರುಷಾ ರಾಜಪುರುಷಾ ಇವ ದ್ವಾರಸ್ಥಾಃ ಸ್ವರ್ಗಸ್ಯ ಹಾರ್ದಸ್ಯ ಲೋಕಸ್ಯ ದ್ವಾರಪಾಃ ದ್ವಾರಪಾಲಾಃ । ಏತೈರ್ಹಿ ಚಕ್ಷುಃಶ್ರೋತ್ರವಾಙ್ಮನಃಪ್ರಾಣೈರ್ಬಹಿರ್ಮುಖಿ ಪ್ರವೃತ್ತೈರ್ಬ್ರಹ್ಮಣೋ ಹಾರ್ದಸ್ಯ ಪ್ರಾಪ್ತಿದ್ವಾರಾಣಿ ನಿರುದ್ಧಾನಿ । ಪ್ರತ್ಯಕ್ಷಂ ಹಿ ಏತತ್ ಅಜಿತಕರಣತಯಾ ಬಾಹ್ಯವಿಷಯಾಸಙ್ಗಾನೃತಪ್ರತ್ಯೂಢತ್ವಾತ್[1] ನ ಹಾರ್ದೇ ಬ್ರಹ್ಮಣಿ ಮನಸಿಷ್ಠತಿ । ತಸ್ಮಾತ್ ಸತ್ಯಮುಕ್ತಮ್ ಏತೇ ಪಞ್ಚ ಬ್ರಹ್ಮಪುರುಷಾಃ ಸ್ವರ್ಗಸ್ಯ ಲೋಕಸ್ಯ ದ್ವಾರಪಾಃ ಇತಿ । ಅತಃ ಸ ಯ ಏತಾನ್ ಏವಂ ಯಥೋಕ್ತಗುಣವಿಶಿಷ್ಟಾನ್ ಸ್ವರ್ಗಸ್ಯ ಲೋಕಸ್ಯ ದ್ವಾರಪಾನ್ ವೇದ ಉಪಾಸ್ತೇ ಉಪಾಸನಯಾ ವಶೀಕರೋತಿ ಸ ರಾಜದ್ವಾರಪಾಲಾನಿವ ಉಪಾಸನೇನ ವಶೀಕೃತ್ಯ ತೈಃ ಅನಿವಾರಿತಃ ಪ್ರತಿಪದ್ಯತೇ ಸ್ವರ್ಗಂ ಲೋಕಂ ರಾಜಾನಮಿವ ಹಾರ್ದಂ ಬ್ರಹ್ಮ । ಕಿಂ ಚ ಅಸ್ಯ ವಿದುಷಃ ಕುಲೇ ವೀರಃ ಪುತ್ರೋ ಜಾಯತೇ ವೀರಪುರುಷಸೇವನಾತ್[2] । ತಸ್ಯ ಚ ಋಣಾಪಾಕರಣೇನ ಬ್ರಹ್ಮೋಪಾಸನಪ್ರವೃತ್ತಿಹೇತುತ್ವಮ್ । ತತಶ್ಚ ಸ್ವರ್ಗಲೋಕಪ್ರತಿಪತ್ತಯೇ ಪಾರಮ್ಪರ್ಯೇಣ ಭವತೀತಿ ಸ್ವರ್ಗಲೋಕಪ್ರತಿಪತ್ತಿರೇವ ಏಕಂ ಫಲಮ್ ॥

(ಭಾಷ್ಯಾರ್ಥ)

ಆ ಈ ಮೇಲೆ ಹೇಳಿದ ಐದು ಸುಷಿಗಳಿಗೆ ಸಂಬದ್ಧವಾಗಿರುವದರಿಂದ ಐವರು ಹಾರ್ದಬ್ರಹ್ಮದ ಪುರುಷರು, ಬಾಗಿಲಿನಲ್ಲಿರುವ ರಾಜಸೇವಕರಂತೆ ಸ್ವರ್ಗಲೋಕ

---

1. 'ಪ್ರರೂಢತ್ವಾತ್' ಎಂಬುದಕ್ಕಿಂತ ಈ ಪಾಠವೇ ಮೇಲು. 2. ಈ ವಾ॥ ತೆ॥ ಅ॥ ಪಾಠವೇ ಸರಿ; ಆ॥ ಪಾಠದಲ್ಲಿ ಧೀರ ಎಂದಿರುವದು ಅಚ್ಚಿನ ತಪ್ಪಿರಬಹುದು.

ಹಾರ್ದ(ಬ್ರಹ್ಮ)ಕ್ಕೆ ದ್ವಾರಪರು, ದ್ವಾರಪಾಲಕರು. ಏಕೆಂದರೆ ಚಕ್ಷು, ಶ್ರೋತ್ರ, ವಾಕ್ಕು, ಮನಸ್ಸು, ಪ್ರಾಣ- ಎಂಬೀ[1] ಹೊರಮುಖವಾಗಿ ಹೊರಟಿರುವ[2] ಇವರಿಂದಲೇ ಅಲ್ಲವೆ, ಹಾರ್ದಬ್ರಹ್ಮದ ಪ್ರಾಪ್ತಿಯ ದ್ವಾರಗಳು ತಡೆಗಟ್ಟಲ್ಪಟ್ಟಿವೆ ? ಕರಣಗಳನ್ನು ಗೆದ್ದುಕೊಳ್ಳದೆ ಇರುವದರಿಂದ ಹೊರಗಿನ ವಿಷಯಗಳ ಆಸಂಗವೆಂಬ[3] ಅನೃತದಿಂದ ಹೊರದೂಡಲ್ಪಟ್ಟಿರುವದರಿಂದ[4] ಹಾರ್ದಬ್ರಹ್ಮದಲ್ಲಿ ಮನಸ್ಸು ನಿಲ್ಲದೆ ಇರುತ್ತದೆ - ಎಂಬುದು ಪ್ರತ್ಯಕ್ಷವೇ (ಆಗಿದೆ)ಯಷ್ಟೆ ? ಆದ್ದರಿಂದ ಈ ಐವರು ಬ್ರಹ್ಮಪುರುಷರು ಸ್ವರ್ಗಲೋಕಕ್ಕೆ ದ್ವಾರಪಾಲಕರು ಎಂದು ಹೇಳಿದ್ದು ಸತ್ಯವೇ ಆಗಿದೆ.

ಆದ್ದರಿಂದ ಯಾವನು ಇವರನ್ನು ಹೀಗೆಂದು ಮೇಲೆ ವರ್ಣಿಸಿದ ಗುಣಗಳಿಂದ[5] ಕೂಡಿರುವ ಸ್ವರ್ಗಲೋಕದ ದ್ವಾರಪಾಲಕರೆಂದು ಅರಿತುಕೊಳ್ಳುವನೋ ಉಪಾಸನೆ ಮಾಡುವನೋ, ಉಪಾಸನೆಯಿಂದ ವಶಗೊಳಿಸಿಕೊಂಡಿರುವನೋ[6] ಅವನು ರಾಜನ ದ್ವಾರಪಾಲಕರನ್ನು (ವಶಗೊಳಿಸಿಕೊಳ್ಳು)ವಂತೆ ಉಪಾಸನೆಯಿಂದ ವಶಗೊಳಿಸಿ ಕೊಂಡು ಅವರು ಅಡ್ಡಬರದೆ ಇರುವದರಿಂದ ಸ್ವರ್ಗಲೋಕವನ್ನು, ಎಂದರೆ ಹಾರ್ದಬ್ರಹ್ಮವನ್ನು, ರಾಜನನ್ನು (ಸೇರು)ವಂತೆಯೇ (ಯಾವ ಅಡ್ಡಿಯೂ ಇಲ್ಲದೆ) ಸೇರುತ್ತಾನೆ.

ಮತ್ತು (ಈ) ವೀರಪುರುಷರ ಸೇವನೆಯಿಂದ ಈ ಉಪಾಸಕನ ಕುಲದಲ್ಲಿ ವೀರನಾದ ಪುತ್ರನು ಹುಟ್ಟುತ್ತಾನೆ. ಮತ್ತು ಅವನು ಋಣವನ್ನು ತೀರಿಸುವ ಮೂಲಕ[7]

1. ಪೂರ್ವಾದಿಯಾದ ಹೃದಯದ್ವಾರಗಳಿಗೆ ಆದಿತ್ಯಾದ್ಯಧಿಷ್ಠಿತರಾದ ಚಕ್ಷುರಾದಿಗಳು ದ್ವಾರಪಾಲಕರು. 2. ಕ. ೨-೧-೧೮ ಸೂಚನೆ.
3. ಕರಣಗಳಿಗೆ ವಿಷಯದಲ್ಲಾಗುವ ಆಸಂಗವನ್ನು ಹಿಂದೆ ೧-೨ರಲ್ಲಿ ವರ್ಣಿಸಿದೆ ; ಬೃ. ೧-೩ರಲ್ಲಿಯೂ ತಿಳಿಸಿದೆ.
4. ೮-೩-೨ರಲ್ಲಿ 'ಅನೃತೇನ ಪ್ರತ್ಯೂಢಾಃ' ಎಂದಿರುವದರ ಸೂಚನೆಯಿದು.
5. ಚಕ್ಷುಃಪುರುಷನಿಗೆ ತೇಜಸ್ಸು, ಅನ್ನಾದ್ಯ ; ಶ್ರೋತ್ರಪುರುಷನಿಗೆ ಶ್ರೀ, ಯಶಸ್ಸು; ವಾಕ್ಪುರುಷನಿಗೆ ಬ್ರಸ್ಮವರ್ಚಸ್ಸು, ಅನ್ನಾದ್ಯ ; ಮನಃಪುರುಷನಿಗೆ ಕೀರ್ತಿ, ವ್ಯುಷ್ಟಿ ; ಪ್ರಾಣಪುರುಷನಿಗೆ ಓಜಸ್ಸು, ಮಹ- ಎಂಬ ಗುಣಗಳು. ಈ ಪುರುಷರು ಪ್ರಾಣಾದಿಸಂಬದ್ಧರಾಗಿರುವರೆಂದೂ ಉಪಾಸನೆಮಾಡಬೇಕು.
6. ಚಕ್ಷುರಾದಿಗಳು ಇಂಥಿಂಥ ದೇವತಾಧಿಷ್ಠಿತರಾಗಿ ಇಂಥಿಂಥ ಗುಣಗಳುಳ್ಳ ಪ್ರಾಣಾದಿ ರೂಪರು ಎಂದು ಉಪಾಸನೆಮಾಡಿದರೆ ಬಹಿರ್ಮುಖವೃತ್ತಿಯನ್ನು ತಪ್ಪಿಸಿ ಹಾರ್ದಬ್ರಹ್ಮದ ಕಡೆಗೆ ಉಪಾಸಕನ ಚಿತ್ತವನ್ನು ತಿರುಗಿಸುವರು.
7. ತಂದೆಯು ಮಾಡಬೇಕಾದ ಯಜ್ಞಾಧ್ಯಯನಾದಿಗಳನ್ನು ಮಾಡುವ ಮೂಲಕ.

ಬ್ರಹ್ಮದ ಉಪಾಸನೆಯಲ್ಲಿ ತೊಡಗುವದಕ್ಕೆ ಕಾರಣ(ನಾಗುತ್ತಾನೆ) ; ಆದ್ದರಿಂದಲೇ ಸ್ವರ್ಗಲೋಕಪ್ರಾಪ್ತಿಯೆಂಬುದೊಂದೇ (ಇಲ್ಲಿ ಮುಖ್ಯ)ಫಲವು.[1]

ಜ್ಯೋತಿರ್ಬ್ರಹ್ಮೋಪಾಸನೆ

(ಉಪನಿಷತ್ತು)

ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ ವಿಶ್ವತಃ ಪೃಷ್ಠೇಷು ಸರ್ವತಃ ಪೃಷ್ಠೇಷ್ವನುತ್ತಮೇಷೂತ್ತಮೇಷು ಲೋಕೇಷ್ವಿದಂ ವಾವ ತದ್ಯದಿದಮಸ್ಮಿನ್ನನ್ತಃಪುರುಷೇ ಜ್ಯೋತಿಸ್ತಸ್ಯೈಷಾ ದೃಷ್ಟಿರ್ಯತ್ರೈತದಸ್ಮಿ-ಞ್ಛರೀರೇ ಸಗ್ಂಸ್ಪರ್ಶೇನೋಷ್ಣಿಮಾನಂ ವಿಜಾನಾತಿ ತಸ್ಯೈಷಾ ಶ್ರುತಿರ್ಯತ್ರೈತತ್ ಕರ್ಣಾವಪಿಗೃಹ್ಯ ನಿನದಮಿವ ನದಥುರಿವಾಗ್ನೇ-ರಿವ ಜ್ವಲತ ಉಪಶೃಣೋತಿ ತದೇತದ್ದೃಷ್ಟಂ ಚ ಶ್ರುತಂ ಚೇತ್ಯುಪಾಸೀತ ಚಕ್ಷುಷ್ಯಃ ಶ್ರುತೋ ಭವತಿ ಯ ಏವಂ ವೇದ ಯ ಏವಂ ವೇದ[2] **॥೭॥**

೭. ಇನ್ನು ಆ ದಿವಕ್ಕಿಂತ ಆಚೆಗೆ, ವಿಶ್ವದ ಮೇಲುಗಡೆಯಲ್ಲಿ, ಎಲ್ಲಕ್ಕೂ ಮೇಲುಗಡೆಯಲ್ಲಿ, ಅನುತ್ತಮವಾದ ಉತ್ತಮಲೋಕಗಳಲ್ಲಿ ಹೊಳೆಯುತ್ತಿರುವ ಜ್ಯೋತಿಯಿದೆಯಲ್ಲ, ಅದು ಪುರುಷನೊಳಗೆ ಇರುವ ಈ ಜ್ಯೋತಿ ಎಂಬಿದೇ. ಅದಕ್ಕೆ ಯಾವಾಗ ಹೀಗೆ ಈ ಶರೀರದಲ್ಲಿ ಸಂಸ್ಪರ್ಶದಿಂದ ಔಷ್ಣ್ಯವನ್ನು ಅನುಭವಿಸುತ್ತಾನೋ ಇದೇ ಅದರ ದೃಷ್ಟಿಯು ; ಯಾವಾಗ ಕಿವಿಗಳನ್ನು ಹೀಗೆ ಹಿಡಿದುಕೊಂಡರೆ ದಡದಡ ಎನ್ನುವಂತೆ ಗುಟುರುಹಾಕಿದಂತೆ ಬೆಂಕಿಯು ಭುಗಿಲೆನ್ನುವಂತೆ ಕೇಳುತ್ತಾನಲ್ಲ, ಅದು ಅದರ ಶ್ರುತಿಯು. (ಅದನ್ನು) ದೃಷ್ಟವೂ ಶ್ರುತವೂ ಎಂದು ಉಪಾಸನೆಮಾಡಬೇಕು. ಯಾವನು ಹೀಗೆಂದು ಅರಿತು ಕೊಳ್ಳುವನೋ ಅವನು ನೋಡತಕ್ಕವನೂ ಕೇಳಿಬರತಕ್ಕವನೂ ಆಗುತ್ತಾನೆ.

---

1. ಏಕೆಂದರೆ ವೀರಪುತ್ರಪ್ರಾಪ್ತಿಯನ್ನು ಹೇಳಿರುವದೂ ಅದಕ್ಕಾಗಿಯೇ. ಈ ಉಪಾಸನೆಗಳಿಂದ ಆಯಾ ಅವಾಂತರಫಲವಲ್ಲದೆ ಪರಂಪರೆಯಿಂದ ಬ್ರಹ್ಮಪ್ರಾಪ್ತಿಫಲವೂ ಆಗುತ್ತದೆ ಎಂದು ಭಾವ.

2. ಈ ಕಂಡಿಕೆಯನ್ನು ವಾ॥ ಪಾಠದಲ್ಲಿ ಎರಡಾಗಿ ಒಡೆದು 'ತಸ್ಯೈಷಾ ದೃಷ್ಟಿಃ' ಎಂಬಲ್ಲಿಂದ ೮ನೆಯ ಕಂಡಿಕೆಯಾಗಿ ಕಾಣಿಸಿದೆ. ಆದರೆ ಅದಕ್ಕೆ ಆಧಾರವೇನೋ ತಿಳಿಯಲಿಲ್ಲ.

ಮುಂದಿನ ಗ್ರಂಥಭಾಗದ ಸಂಬಂಧ

(ಭಾಷ್ಯ)

೨೪೬. ಅಥ ಯದಸೌ ವಿದ್ವಾನ್ ಸ್ವರ್ಗಂ ಲೋಕಂ ವೀರಪುರುಷಸೇವನಾತ್ ಪ್ರತಿಪದ್ಯತೇ । ಯಚ್ಚೋಕ್ತಮ್, 'ತ್ರಿಪಾದಸ್ಯಾಮೃತಂ ದಿವಿ' (೩-೧೨-೬) ಇತಿ ತದಿದಂ ಲಿಙ್ಗೇನ ಚಕ್ಷುಃಶ್ರೋತ್ರೇನ್ದ್ರಿಯಗೋಚರಮ್ ಆಪಾದಯಿತವ್ಯಮ್ । ಯಥಾ ಅಗ್ನ್ಯಾದಿ ಧೂಮಾದಿಲಿಙ್ಗೇನ । ತಥಾ ಹಿ ಏವಮೇವೇದಮ್ ಇತಿ ಯಥೋಕ್ತೇऽರ್ಥೇ ದೃಢಾ ಪ್ರತೀತಿಃ ಸ್ಯಾತ್, ಅನನ್ಯತ್ವೇನ ನಿಶ್ಚಯ ಇತಿ । ಅತ ಆಹ ॥

(ಭಾಷ್ಯಾರ್ಥ)

'ಇನ್ನು' (ಎಂದು ಪ್ರಾರಂಭಿಸಿರುವ ಕಂಡಿಕೆಯ ಅರ್ಥವಿದು) : ಈ ಉಪಾಸಕನು ವೀರಪುರುಷಸೇವನೆಯಿಂದ ಸ್ವರ್ಗಲೋಕವನ್ನು (ಪರಂಪರೆಯಿಂದ) ಹೊಂದುತ್ತಾನೆ (ಎಂದು ಹೇಳಿತ್ತಷ್ಟೆ), ಮತ್ತು ಈ (ಬ್ರಹ್ಮದ) ''ಅಮೃತವಾದ ಮೂರುಪಾದವು ದ್ಯುಲೋಕದಲ್ಲಿದೆ'' (೩-೧೨-೬) ಎಂದಿತ್ತಷ್ಟೆ[1], ಆ ಇದನ್ನು- ಹೊಗೆಯೇ ಮುಂತಾದ ಲಿಂಗದಿಂದ ಬೆಂಕಿಯೇ ಮುಂತಾದವನ್ನು ಹೇಗೋ ಹಾಗೆ[2] ಲಿಂಗದಿಂದ ಚಕ್ಷುಃಶ್ರೋತ್ರೇಂದ್ರಿಯಗಳಿಗೆ ಗೋಚರವಾಗಿ ಮಾಡಬೇಕು ; ಹಾಗಾದರೇ ಅಲ್ಲವೆ, ಇದು ಹೀಗೆಯೇ ಸರಿ ಎಂಬ ಗಟ್ಟಿಯಾದ ಭಾವನೆಯಾದೀತು[3] ? (ನಾನು ಅದಕ್ಕಿಂತ) ಅನ್ಯನಲ್ಲ ಎಂಬ ನಿಶ್ಚಯವೂ (ಆದೀತು)[4] ? ಆದ್ದರಿಂದ (ಶ್ರುತಿ) ಹೀಗೆನ್ನುತ್ತಿದೆ :

ಜ್ಯೋತಿರ್ಬ್ರಹ್ಮದ ವರ್ಣನೆ

(ಭಾಷ್ಯ)

೨೪೭. ಯದತಃ ಅಮುಷ್ಮಾದ್ ದಿವಃ ದ್ಯುಲೋಕಾತ್ ಪರಃ ಪರಮ್ ಇತಿ ಲಿಙ್ಗವ್ಯತ್ಯಯೇನ ಜ್ಯೋತಿರ್ದೀಪ್ಯತೇ । ಸ್ವಯಂಪ್ರಭಂ ಸದಾ ಪ್ರಕಾಶತ್ವಾತ್ ದೀಪ್ಯತ ಇವ ದೀಪ್ಯತೇ ಇತ್ಯುಚ್ಯತೇ । ಅಗ್ನ್ಯಾದಿವತ್ ಜ್ವಲನಲಕ್ಷಣಾಯಾ ದೀಪ್ತೇರಸಂಭವಾತ್ । ವಿಶ್ವತಃ ಪೃಷ್ಠೇಷು ಇತಿ ಏತಸ್ಯ ವ್ಯಾಖ್ಯಾನಂ ಸರ್ವತಃ ಪೃಷ್ಠೇಷು ಇತಿ । ಸಂಸಾರಾತ್ ಉಪರಿ ಇತ್ಯರ್ಥಃ । ಸಂಸಾರ ಏವ ಹಿ ಸರ್ವಃ । ಅಸಂಸಾರಿಣ

1. ೩-೧೨-೬ರಲ್ಲಿ. 2. ಪರೋಕ್ಷವಾಗಿಯಾದರೂ ನಿಶ್ಚಯವಾಗಿ ಎಂಬುದಕ್ಕೆ ಈ ಹೋಲಿಕೆಯನ್ನು ಕೊಟ್ಟಿದೆ. 3. ಭಾವನೆಯು ಬಲವಾದರೆ ಉಪಾಸನೆಯು ಸಾಗುತ್ತದೆ.
4. ಸಾಕ್ಷಾತ್ಕಾರಕ್ಕೆ ಕಾರಣವಾದೀತು ಎಂದರ್ಥ.

ಏಕತ್ವಾತ್ ನಿರ್ಭೇದತ್ವಾಚ್ಚ। ಅನುತ್ತಮೇಷು। ತತ್ಪುರುಷಸಮಾಸಾಶಙ್ಕಾನಿವೃತ್ತಯೇ ಆಹ ಉತ್ತಮೇಷು ಲೋಕೇಷು ಇತಿ। ಸತ್ಯಲೋಕಾದಿಷು ಹಿರಣ್ಯಗರ್ಭಾದಿ-ಕಾರ್ಯಸ್ಯ[1] ಪರಸ್ಯೇಶ್ವರಸ್ಯ ಆಸನ್ನತ್ವಾತ್ ಉಚ್ಯತೇ ಉತ್ತಮೇಷು ಲೋಕೇಷು ಇತಿ॥

(ಭಾಷ್ಯಾರ್ಥ)

ಆ ಅಲ್ಲಿರುವ ದಿವಕ್ಕಿಂತ ದ್ಯುಲೋಕಕ್ಕಿಂತಲೂ ಆಚೆಗಿರುವ.[2] ಹೆಚ್ಚಿನ- ಪರಃ ಎಂಬುದನ್ನು (ನಪುಂಸಕ)ಲಿಂಗಕ್ಕೆ ಮಾರ್ಪಡಿಸಿಕೊಂಡು (ಅರ್ಥಮಾಡಬೇಕು)-ಜ್ಯೋತಿಯು ಹೊಳೆಯುತ್ತಿರುವದಲ್ಲ (ಎಂದರ್ಥ). ಸ್ವಯಂಪ್ರಭವಾಗಿ[3] ನಿತ್ಯಪ್ರಕಾಶ(ಸ್ವರೂಪವೇ) ಆಗಿರುವದರಿಂದ ಹೊಳೆಯುತ್ತಿರುವಂತಿದೆಯಾದ್ದರಿಂದ ಹೊಳೆಯುತ್ತಿದೆ[4] ಎಂದಿದೆ ; ಏಕೆಂದರೆ ಬೆಂಕಿಯೇ ಮುಂತಾದವುಗಳಂತೆ ಉರಿಯುವ ದೆಂಬ ದೀಪ್ತಿಯು (ಬ್ರಹ್ಮಕ್ಕೆ) ಹೊಂದುವದಿಲ್ಲ.[5]

ವಿಶ್ವದ ಮೇಲುಗಡೆಯಲ್ಲಿ ಎಂಬುದರ ವ್ಯಾಖ್ಯಾನವೇ ಎಲ್ಲದರ ಮೇಲುಗಡೆಯಲ್ಲಿ ಎಂಬುದು ; ಸಂಸಾರಕ್ಕಿಂತ ಮೇಲುಗಡೆಯಲ್ಲಿ ಎಂದರ್ಥ. ಸಂಸಾರವೇ ಅಲ್ಲವೆ, ಎಲ್ಲ (ಎನ್ನಿಸಿಕೊಳ್ಳತಕ್ಕದ್ದು) ? ಸಂಸಾರಿಯಲ್ಲದ ಆತನು ಒಬ್ಬನೇ ಆಗಿರುವದರಿಂದಲೂ, ಭೇದರಹಿತನಾಗಿರುವದರಿಂದಲೂ (ಸರ್ವಶಬ್ದಕ್ಕೆ ಈ

---

1. 'ಕಾರ್ಯಸ್ಥ' ಎಂಬಿದನ್ನು ಕಾರ್ಯಸ್ಯ ಎಂದು ತಿದ್ದಿಕೊಂಡಿದೆ.
2. ಸಗುಣಬ್ರಹ್ಮವು ದ್ಯುಲೋಕಕ್ಕೆ ಸಂಬದ್ಧವಾಗಿದ್ದರೂ ದ್ಯುಲೋಕದ ಆಚೆಗಿದೆ ಎಂದಿದೆ. ಮರದ ಕೊನೆಗೆ ಸಂಬದ್ಧವಾಗಿಯೇ ಇರುವ ಹಕ್ಕಿಯನ್ನು ಮರದ ಕೊನೆಯ ಆಚೆಗಿರುವದೆಂದೂ ತಿಳಿಸಿ ಹೇಳುವದುಂಟು. ಅಥವಾ ನಿರ್ಗುಣರೂಪದಿಂದ ದ್ಯುಲೋಕಕ್ಕೆ ಸಂಬಂಧಪಡದೆ ಇದ್ದರೂ ಹಿಂದೆ, 'ತ್ರಿಪಾದಸ್ಯಾಮೃತಂ ದಿವಿ' ಎಂದು ದ್ಯುಲೋಕದಲ್ಲಿದೆಯೆಂತ ಹೇಳಿತ್ತು ; ಅದನ್ನೇ ಇಲ್ಲಿ ದ್ಯುಲೋಕಕ್ಕೆ ಆಚೆ ಇದೆ ಎಂತ ಹೇಳಿದೆ. ಹೇಗೂ ಹಿಂದೆ ಹೇಳಿದ ಗಾಯತ್ರೀಬ್ರಹ್ಮವನ್ನೇ ಇಲ್ಲಿ ದ್ಯುಲೋಕಕ್ಕೆ ಆಚೆಯಿರುವದೆಂದು ಹೇಳಿದೆ. ಸೂ. ಭಾ. ೧-೧-೨೭ನ್ನು ನೋಡಿ.
3. ತಾನೇ ತೋರಿಕೊಳ್ಳುವ, ಅನಾತ್ಮವಸ್ತುವಿನಂತೆ ಮತ್ತೊಂದರಿಂದ ಬೆಳಗಲ್ಪಡಬೇಕಾದ ಅವಶ್ಯಕತೆಯಿಲ್ಲದಿರುವ ಎಂದರ್ಥ.
4. ಬ್ರಹ್ಮಕ್ಕೆ ಯಾವ ಹೊಳಪೂ ಇಲ್ಲ; ಅದೇ ಚೈತನ್ಯಪ್ರಕಾಶರೂಪವಾಗಿದೆ.
5. 'ತಾನೇ ತೋರಿಕೊಳ್ಳುವ' ಎಂಬ ಗೌಣಾರ್ಥವೇ ಹೊರತು ಬೆಂಕಿ, ಸೂರ್ಯ-ಮುಂತಾದವುಗಳಂತೆ ಹೊಳೆಯುತ್ತಿರುವ ಎಂದೇನೂ ಅರ್ಥವಲ್ಲ. ಬೆಂಕಿಯೇ ಮುಂತಾದವು ತಾವೇ ಹೊಳೆಯುವವೆಂಬುದೂ ವ್ಯವಹಾರದೃಷ್ಟಿಯಿಂದ ; ಅವಕ್ಕೆ ಚೈತನ್ಯಪ್ರಕಾಶದ ನೆರವು ಬೇಕು. ಚೈತನ್ಯಪ್ರಕಾಶದಂತೆ ಅವು ನಿತ್ಯವೂ ಅಲ್ಲ. ಆದ್ದರಿಂದ ಇಲ್ಲಿ ಹೊಳೆಯುತ್ತಿದೆ ಎಂಬುದು ದೀಪಾದಿಗಳಂತೆ ಎಂದು ಮುಖ್ಯಾರ್ಥದಲ್ಲಲ್ಲ.

ಅರ್ಥವೇ).[1] ಅನುತ್ತಮವಾದ (ಲೋಕಗಳಲ್ಲಿ ಎಂದರೆ) ತತ್ಪುರುಷಸಮಾಸವೆಂಬ (ಶಂಕೆಯುಂಟಾಗಬಹುದಾಗಿ[2] ಅದನ್ನು) ತೊಲಗಿಸುವದಕ್ಕಾಗಿ ಉತ್ತಮಲೋಕಗಳಲ್ಲಿ ಎಂದು (ಶ್ರುತಿ) ಹೇಳುತ್ತಿದೆ. ಸತ್ಯಲೋಕವೇ ಮುಂತಾದ (ಲೋಕ)ಗಳಲ್ಲಿರುವ ಹಿರಣ್ಯಗರ್ಭನೇ ಮುಂತಾದ ಕಾರ್ಯವು ಪರಮೇಶ್ವರನಿಗೆ ಆಸನ್ನವಾಗಿರುವದರಿಂದ[3] ಉತ್ತಮವಾದ ಲೋಕಗಳಲ್ಲಿ ಎಂದಿದೆ.

ಜ್ಯೋತಿರ್ಬ್ರಹ್ಮದ ದರ್ಶನ

(ಭಾಷ್ಯ)

೨೪೮. ಇದಂ ವಾವ ಇದಮೇವ ತದ್ ಯದಿದಮ್ ಅಸ್ಮಿನ್ ಪುರುಷೇ ಅನ್ತಃ ಮಧ್ಯೇ ಜ್ಯೋತಿಃ ಚಕ್ಷುಃಶ್ರೋತ್ರಗ್ರಾಹ್ಯೇಣ ಲಿಙ್ಗೇನ ಉಷ್ಣಿಮ್ನಾ ಶಬ್ದೇನ ಚ ಅವಗಮ್ಯತೇ । ಯತ್ ತ್ವಚಾ ಸ್ಪರ್ಶರೂಪೇಣ ಗೃಹ್ಯತೇ ತಚ್ಚಕ್ಷುಷ್ಯೈವ । ದೃಢಪ್ರತೀತಿಕರತ್ವಾತ್ ತ್ವಚಃ । ಅವಿನಾಭೂತತ್ವಾಚ್ಚ ರೂಪಸ್ಪರ್ಶಯೋಃ । ಕಥಂ ಪುನಃ ತಸ್ಯ ಜ್ಯೋತಿಷೋ ಲಿಙ್ಗಂ ತ್ವಗ್ದೃಷ್ಟಿಗೋಚರತ್ವಮ್ ಆಪದ್ಯತ ಇತಿ ? ಆಹ । ಯತ್ರ ಯಸ್ಮಿನ್ ಕಾಲೇ । ಏತತ್ ಇತಿ ಕ್ರಿಯಾವಿಶೇಷಣಮ್ । ಅಸ್ಮಿನ್ ಶರೀರೇ ಹಸ್ತೇನ ಆಲಭ್ಯ ಸಂಸ್ಪರ್ಶೇನ ಉಷ್ಣಿಮಾನಂ ರೂಪಸಹಭಾವಿನಮ್ ಉಷ್ಣಸ್ಪರ್ಶಭಾವಂ ವಿಜಾನಾತಿ । ಸ ಹಿ ಉಷ್ಣಿಮಾ ನಾಮರೂಪವ್ಯಾಕರಣಾಯ ದೇಹಮ್ ಅನುಪ್ರವಿಷ್ಟಸ್ಯ ಚೈತನ್ಯಾತ್ಮಜ್ಯೋತಿಷೋ ಲಿಙ್ಗಮ್ ; ಅವ್ಯಭಿಚಾರಾತ್ । ನ ಹಿ ಜೀವನ್ತಮ್ ಆತ್ಮಾನಮ್ ಉಷ್ಣಿಮಾ ವ್ಯಭಿಚರತಿ "ಉಷ್ಣ ಏವ ಜೀವಿಷ್ಯನ್ ಶೀತೋ ಮರಿಷ್ಯನ್" (ಶತ. ಬ್ರಾ. ೮-೭-೨-೧೧) ಇತಿ ಹಿ ವಿಜ್ಞಾಯತೇ । ಮರಣಕಾಲೇ ಚ "ತೇಜಃ ಪರಸ್ಯಾಂ ದೇವತಾಯಾಮ್" (೬-೮-೬) ಇತಿ ಪರೇಣಾವಿಭಾಗತ್ವೋಪಗಮಾತ್ । ಅತೋಽಸಾಧಾರಣಂ ಲಿಙ್ಗಮ್ ಔಷ್ಣ್ಯಮಗ್ನೇರಿವ ಧೂಮಃ । ಅತಸ್ತಸ್ಯ ಪರಸ್ಯ ಏಷಾ ದೃಷ್ಟಿಃ ಸಾಕ್ಷಾದಿವ ದರ್ಶನಂ ದರ್ಶನೋಪಾಯಃ ಇತ್ಯರ್ಥಃ ॥

---

1. ಬ್ರಹ್ಮವು ಒಂದೇ ಆಗಿ ನಿರ್ಭೇದವಾಗಿರುವದರಿಂದ ಸರ್ವಶಬ್ದವಾಚ್ಯವಾದ ಸಂಸಾರದ ಆಚೆಗಿರುವ ಲೋಕಗಳಲ್ಲಿ ಬ್ರಹ್ಮವಿದೆ ಎಂದು ಹೇಳಿದ್ದು ಸರಿ.
2. ತತ್ಪುರುಷಸಮಾಸವಾದರೆ ಉತ್ತಮವಲ್ಲದ ಎಂದೂ ಅರ್ಥವಾಗಬಹುದು ; ಮಿಗಿಲಿಲ್ಲದ ಉತ್ತಮಲೋಕಗಳು ಎಂಬರ್ಥಕ್ಕಾಗಿ ಮತ್ತೆ ಉತ್ತಮವಾದ ಎಂದಿದೆ.
3. ಕಾರ್ಯಬ್ರಹ್ಮವು ಬ್ರಹ್ಮಸ್ವರೂಪಕ್ಕೆ ಹತ್ತಿರವಾಗಿರುತ್ತದೆಯೆಂಬುದಕ್ಕೆ ಸೂ. ಭಾ. ೪-೩-೯ನ್ನು ನೋಡಿ. ಬ್ರಹ್ಮಕ್ಕೆ ಆಧಾರವಿಲ್ಲದಿದ್ದರೂ ಉಪಾಧಿಯ ಸಂಬಂಧದಿಂದ ಉಪಾಸನೆಗಾಗಿ ಉತ್ತಮಲೋಕಗಳೆಂಬ ಆಧಾರವನ್ನು ಹೇಳಬಹುದು. ಸೂ. ಭಾ. ೧-೧-೨೪ (ಭಾ. ಭಾ. ೧೨೮).

(ಭಾಷ್ಯಾರ್ಥ)

(ಇದಂ ವಾವ=ಇದಮೇವ) ಇದೇ ಅದು. ಈ ಪುರುಷನ ಒಳಗೆ ಒಳಗಡೆಯಲ್ಲಿ ಜ್ಯೋತಿಯು ಚಕ್ಷುಃಶ್ರೋತ್ರಗಳಿಂದ ಗ್ರಾಹ್ಯವಾಗಿರುವ ಲಿಂಗವಾದ ಬಿಸಿಯಿಂದಲೂ ಸದ್ದಿನಿಂದಲೂ ತಿಳಿದುಬರುತ್ತದೆಯಲ್ಲ, (ಅದೇ). ಯಾವದು ಸ್ಪರ್ಶರೂಪವಾದ ತ್ವಕ್ಕಿನಿಂದ ತಿಳಿದುಬರುತ್ತದೆಯೋ ಅದು ಚಕ್ಷುಸ್ಸಿನಿಂದಲೇ (ತಿಳಿದಂತೆ) ; ಏಕೆಂದರೆ ತ್ವಕ್ಕು ಗಟ್ಟಿಯಾದ ಜ್ಞಾನವನ್ನು ಉಂಟುಮಾಡುತ್ತದೆ.[1] ರೂಪಸ್ಪರ್ಶಗಳು (ಒಂದನ್ನೊಂದು) ಬಿಟ್ಟಿರುವದಿಲ್ಲವಾದ್ದರಿಂದಲೂ (ಇದು ಚಕ್ಷುಸ್ಸಿನಿಂದಲೇ ತಿಳಿದಂತೆ).

(ಪ್ರಶ್ನೆ) :- ಆ ಜ್ಯೋತಿಯ ಲಿಂಗವು ತ್ವಗ್ದೃಷ್ಟಿಗೋಚರವಾಗಿರುತ್ತದೆ ಎಂಬುದು ಹೇಗೆ ?

(ಉತ್ತರ) :- (ಇದಕ್ಕೆ ಶ್ರುತಿ) ಹೇಳುತ್ತದೆ. ಯಾವಾಗ ಯಾವ ಕಾಲದಲ್ಲಿ (ಏತತ್= ಹೀಗೆ) ಎಂಬುದು ಕ್ರಿಯಾವಿಶೇಷಣವು. (ಹೀಗೆ) ಈ ಶರೀರದಲ್ಲಿ ಕೈಯಿಂದ ಮುಟ್ಟಿ ಸಂಸ್ಪರ್ಶದಿಂದ ಬಿಸಿಯನ್ನು ರೂಪದೊಡನೆಯೇ ಇರುವ ಉಷ್ಣಸ್ಪರ್ಶದ ಇರುವಿಕೆಯನ್ನು ಅರಿತುಕೊಳ್ಳುತ್ತಾನೋ- ಆ ಬಿಸಿಯು ನಾಮರೂಪವ್ಯಾಕರಣಕ್ಕಾಗಿ ದೇಹವನ್ನು ಒಳಹೊಕ್ಕಿರುವ[2] ಚೈತನ್ಯಾತ್ಮಜ್ಯೋತಿಯ ಲಿಂಗವಷ್ಟೆ ; ಏಕೆಂದರೆ (ಅದು) ವ್ಯಭಿಚರಿತವಾಗುವದೇ ಇಲ್ಲ. ಬದುಕಿರುವ ಆತನನ್ನು ಬಿಸಿಯು ಯಾವಾಗಲೂ ಬಿಟ್ಟಿರುವದಿಲ್ಲವಷ್ಟೆ[3] ? "ಬದುಕಿರುವವನು ಬಿಸಿಯಾಗಿಯೇ ಇರುತ್ತಾನೆ, ಸಾಯಲಿರುವವನು ತಣ್ಣಗಿರುತ್ತಾನೆ" (ಶತ. ಬ್ರಾ. ೮-೭-೨-೧೧) ಎಂದಲ್ಲವೆ, (ಶ್ರುತಿಯಿಂದ) ತಿಳಿದುಬರುತ್ತದೆ ? ಮರಣಕಾಲದಲ್ಲಿ "ತೇಜಸ್ಸು ಪರದೇವತೆಯಲ್ಲಿ (ಸೇರುತ್ತದೆ)" (೬-೮-೬) ಎಂದು ಆ ಪರಮಾತ್ಮನಲ್ಲಿ (ಅದು) ಅವಿಭಕ್ತವಾಗುವದೆಂದು (ಶ್ರುತಿಯು) ಅಂಗೀಕರಿಸಿರುತ್ತದೆ. ಆದ್ದರಿಂದ ಹೊಗೆಯು ಬೆಂಕಿಗೆ ಹೇಗೋ ಹಾಗೆ (ಈ) ಬಿಸಿಯು (ಪರಮಾತ್ಮನಿಗೆ) ಲಿಂಗವು.[4] ಆದ್ದರಿಂದ

1. ಕಣ್ಣಿನಿಂದ ಕಂಡದ್ದನ್ನು ಸ್ಪರ್ಶಜ್ಞಾನವು ಗಟ್ಟಿಗೊಳಿಸುತ್ತದೆ.
2. ಚಿದಾತ್ಮನಾದ ಪರಮಾತ್ಮನು ಈ ಶರೀರದೊಳಗೆ ಜೀವರೂಪದಿಂದ ಹೊಕ್ಕು ನಾಮರೂಪವ್ಯಾಕರಣವನ್ನು ಮಾಡುತ್ತಾನೆಂದು ೬-೩-೨ರಲ್ಲಿ ಹೇಳಲಾಗುತ್ತದೆ.
3. ಸೂಕ್ಷ್ಮಶರೀರಕ್ಕೆ ಈ ಬಿಸಿಯು ಲಿಂಗವು, ಗುರುತು, (ಸೂ. ಭಾ. ೪-೨-೧೧) ; ಆ ಉಪಾಧಿಯ ಮೂಲಕ ಆತನಿಗೂ ಗುರುತು.
4. ಜೀವೇಶ್ವರರಿಗೆ ಹೀಗೆ ಐಕ್ಯವನ್ನು ಹೇಳಿರುವದರಿಂದ ಇದು ಪರಮಾತ್ಮನಿಗೂ ಲಿಂಗವಾಯಿತು ಎಂದು ಭಾವ.

ಆ ಪರಮಾತ್ಮನಿಗೆ ಇದು ದೃಷ್ಟಿಯು ಸಾಕ್ಷಾತ್ತಾಗಿ ನೋಡಿದಂತೆಯೇ ; ದರ್ಶನಕ್ಕೆ ಉಪಾಯವು ಎಂದರ್ಥ.[1]

ಜ್ಯೋತಿರ್ಬ್ರಹ್ಮದ ಶ್ರವಣ

(ಭಾಷ್ಯ)

೨೪೯. ತಥಾ ತಸ್ಯ ಜ್ಯೋತಿಷಃ ಏಷಾ ಶ್ರುತಿಃ ಶ್ರವಣಂ ಶ್ರವಣೋಪಾಯೋಽಪಿ ಉಚ್ಯಮಾನಃ । ಯತ್ರ ಯದಾ ಪುರುಷೋ ಜ್ಯೋತಿಷೋ ಲಿಙ್ಗಂ ಶುಶ್ರೂಷತಿ[2] ತದಾ ಏತತ್ ಕರ್ಣೌ ಅಪಿಗೃಹ್ಯ । ಏತಚ್ಛಬ್ದಃ ಕ್ರಿಯಾವಿಶೇಷಣಮ್ । ಅಪಿಗೃಹ್ಯ ಅಪಿಧಾಯ ಇತ್ಯರ್ಥಃ । ಅಙ್ಗುಲಿಭ್ಯಾಂ ಪ್ರೋರ್ಣುತ್ಯ ನಿನದಮಿವ । ರಥಸ್ಯೇವ ಘೋಷೋ ನಿನದಃ । ತಮಿವ ಶೃಣೋತಿ । ನದಥುರಿವ ಋಷಭಕೂಜಿತಮಿವ ಶಬ್ದಃ । ಯಥಾ ಚ ಅಗ್ನೇಃ ಬಹಿರ್ದ್ವಲತಃ ಏವಂ ಶಬ್ದಮ್ ಅನ್ತಃಶರೀರೇ ಉಪಶೃಣೋತಿ ॥

(ಭಾಷ್ಯಾರ್ಥ)

ಹೀಗೆಯೇ ಆ ಜ್ಯೋತಿಗೆ ಇದು ಶ್ರುತಿಯು, ಶ್ರವಣವು, ಶ್ರವಣೋಪಾಯವನ್ನೂ ಹೇಳಲಾಗುತ್ತದೆ (ಎಂದರ್ಥ. ಯತ್ರ=ಯದಾ) ಯಾವಾಗ (ಒಬ್ಬ) ಮನುಷ್ಯನು (ಈ) ಜ್ಯೋತಿಯ ಲಿಂಗವನ್ನು ಕೇಳಬಯಸುತ್ತಾನೋ ಆಗ ಹೀಗೆ ಕರ್ಣಗಳನ್ನು ಹಿಡಿದುಕೊಂಡರೆ- (ಮೂಲದಲ್ಲಿ) ಏತತ್ (ಹೀಗೆ) ಎಂಬ ಶಬ್ದವು ಕ್ರಿಯಾವಿಶೇಷಣವು -(ಹೀಗೆ) ಮುಚ್ಚಿಕೊಂಡರೆ ಎಂದರ್ಥ ; ಬೆರಳುಗಳಿಂದ ಮರೆಮಾಡಿಕೊಂಡರೆ, ದಡದಡ ಎನ್ನುವಂತೆ, ಬಂಡಿಯ(ಗಾಲಿಯ) ಸದ್ದಿನಂತೆ (ಆಗುವ ಸದ್ದು) ದಡದಡವು ; ಅದರಂತೆ ಅವನಿಗೆ ಕೇಳಿಸುತ್ತದೆ. ಗುಟುರು ಹಾಕಿದಂತೆ, ಎತ್ತಿನ ಗುಟರಿನಂತೆ ಇರುವ ಶಬ್ದವು (ಎಂದರ್ಥ). ಅಥವಾ ಹೇಗೆ ಹೊರಗೆ ಉರಿಯುತ್ತಿರುವ (ಶಬ್ದವಿರುವದಲ್ಲ) ಹಾಗಿರುವ (ಶಬ್ದವು) ಶರೀರದೊಳಗೆ (ಅವನಿಗೆ ಯಾವಾಗ) ಕೇಳಿಸುತ್ತದೆಯೋ (ಆ ಶಬ್ದವು).[3]

---

1. ಹೀಗೆಂದು ಉಪಾಸನೆಮಾಡಬೇಕು. 2 'ಶ್ರೋತುಮಿಚ್ಛತಿ' ಬೇಕಿಲ್ಲವೆಂದು ಬಿಟ್ಟಿದೆ.
3. ಯಾವಾಗಲಾದರೂ ಕಿವಿಗೊಟ್ಟರೆ ಕೇಳಿಸುತ್ತದೆಯಲ್ಲ, ಆ ಶಬ್ದವೇ ಜ್ಯೋತಿರ್ಬ್ರಹ್ಮವನ್ನು ಅರಿಯುವ ಉಪಾಯವು ಎಂದರ್ಥ. ಬ್ರಹ್ಮವು ಸ್ವತಃ ದೃಷ್ಟವೂ ಅಲ್ಲ, ಶ್ರುತವೂ ಅಲ್ಲ ; ಆದರೂ ಜಾಠರಾಗ್ನಿಯ ವ್ರತೀಕದ ದ್ವಾರದಿಂದ ಬ್ರಹ್ಮವನ್ನು ದೃಷ್ಟವೂ ಶ್ರುತವೂ ಎಂದು ಉಪಾಸನೆಮಾಡಬೇಕು - ಎಂಬುದು ವಿವಕ್ಷಿತ. ಸೂ. ಭಾ. ೧-೧-೨೪ (ಭಾ. ಭಾ. ೧೨೮)ನ್ನು ನೋಡಿ ಇಲ್ಲಿ ಉಪಾಸನಾವಾಕ್ಯದಲ್ಲಿ ಬ್ರಹ್ಮಲಿಂಗವಿಲ್ಲದಿದ್ದರೂ 'ಯದತಃ ಪರೋ ಜ್ಯೋತಿ' ಎಂದು ಯಚ್ಛಬ್ದದಿಂದ ಹಿಂದೆ ಹೇಳಿರುವ ತ್ರಿಪಾದಮೃತಬ್ರಹ್ಮವನ್ನೇ ಹೇಳಿದೆ ಎಂದು ದ್ಯುಸಂಬಂಧದಿಂದ ನಿರ್ಣಯಿಸಬೇಕೆಂದು ಸೂ. ಭಾ. ೧-೧-೨೪(ಭಾ. ಭಾ.೧೨೯)ರಲ್ಲಿ ನಿರ್ಣಯಿಸಿದೆ.

ಉಪಾಸನಾಗುಣವಿಧಿಯೂ ಉಪಾಸನೆಯ ಫಲವೂ

(ಭಾಷ್ಯ)

೨೫೦. ತದೇತತ್ ಜ್ಯೋತಿಃ ದೃಷ್ಟಶ್ರುತಲಿಙ್ಗತ್ವಾತ್ ದೃಷ್ಟಂ ಚ ಶ್ರುತಂ ಚ ಇತ್ಯುಪಾಸೀತ । ತಥಾ ಉಪಾಸನಾತ್ ಚಕ್ಷುಷ್ಯಃ ದರ್ಶನೀಯಃ ಶ್ರುತಃ ಏಶ್ರುತಶ್ಚ । ಯತ್ ಸ್ಪರ್ಶಗುಣೋಪಾಸನನಿಮಿತ್ತಂ ಫಲಂ ತತ್ ರೂಪೇ ಸಂಪಾದಯತಿ ಚಕ್ಷುಷ್ಯಃ ಇತಿ । ರೂಪಸ್ಪರ್ಶಯೋಃ ಸಹಭಾವಿತ್ವಾತ್, ಇಷ್ಟತ್ವಾಚ್ಚ ದರ್ಶನೀಯತಾಯಾಃ । ಏವಂ ಚ ವಿದ್ಯಾಯಾಃ ಫಲಮ್ ಉಪಪನ್ನಂ ಸ್ಯಾತ್ । ನ ತು ಮೃದುತ್ವಾದಿ ಸ್ಪರ್ಶವತ್ತ್ವೇ । ಯ ಏವಂ ಯಥೋಕ್ತೌ ಗುಣೌ ವೇದ । ಸ್ವರ್ಗಲೋಕಪ್ರತಿಪತ್ತಿ-ಸ್ತೂಕ್ತಮ್ ಅದೃಷ್ಟಂ ಫಲಮ್ । ದ್ವಿರಭ್ಯಾಸ ಆದರಾರ್ಥಃ॥

(ಭಾಷ್ಯಾರ್ಥ)

ಆ ಈ ಜ್ಯೋತಿಯನ್ನು ದೃಷ್ಟವಾದ ಮತ್ತು ಶ್ರುತವಾದ ಲಿಂಗವುಳ್ಳದ್ದಾದ್ದರಿಂದ ದೃಷ್ಟವೂ ಶ್ರುತವೂ ಎಂದು ಉಪಾಸನೆಮಾಡಬೇಕು. ಹಾಗೆ ಉಪಾಸನೆ ಮಾಡುವದರಿಂದ ಚಕ್ಷುಷ್ಯ(ನಾಗುವನು), ದರ್ಶನೀಯ(ನಾಗುವನು). ಶ್ರುತನೂ ಎಂದರೆ ಹೆಸರುವಾಸಿಯಾದವನೂ (ಆಗುತ್ತಾನೆ). (ಉಷ್ಣ)ಸ್ಪರ್ಶಾನುಗುಣವಾದ ಉಪಾಸನೆಯ ನಿಮಿತ್ತದಿಂದಾಗುವ ಫಲವನ್ನು ಚಕ್ಷುಷ್ಯ(ನಾಗುವನು) ಎಂದು (ಶ್ರುತಿಯ) ರೂಪದಲ್ಲಿ ಸಂಪಾದನೆಮಾಡಿರುತ್ತದೆ[1] ; ಏಕೆಂದರೆ ರೂಪಸ್ಪರ್ಶಗಳು ಜೊತೆಯಲ್ಲಿಯೇ ಇರುತ್ತವೆ, ಮತ್ತು ದರ್ಶನೀಯತ್ವ(ವೆಂಬ ಸುರೂಪವು) ಇಷ್ಟ ಫಲವೂ (ಆಗಿದೆ). ಹೀಗಾದರೇ ಉಪಾಸನೆಗೆ (ಇದು) ಫಲವೆಂಬುದು ಯುಕ್ತವಾಗುತ್ತದೆಯೇ ಹೊರತು ಮೃದುವಾಗಿರುವದೇ ಮುಂತಾದ ಸ್ಪರ್ಶವುಳ್ಳವನಾಗುವನು (ಎಂದರೆ ಯುಕ್ತ)ವಾಗಲಾರದು.[2]

ಹೀಗೆಂದು ಮೇಲೆ ಹೇಳಿದ ಗುಣಗಳನ್ನು ಯಾವನು (ಉಪಾಸನೆಮಾಡಿ) ಅರಿತುಕೊಳ್ಳುವನೋ, (ಅವನಿಗೆ) ಈ ಫಲ(ವಾಗುವದು). ಹಿಂದೆ ಹೇಳಿರುವ

1. ಉಷ್ಣಗುಣವನ್ನು ಉಪಾಸನೆಮಾಡಿರುವದರಿಂದ ಸ್ವರ್ಗದ ಫಲವಾಗಬೇಕಲ್ಲ ! ಎಂಬ ಶಂಕೆಗೆ ಸಮಾಧಾನವಿದು. ಸ್ಪರ್ಶದ ಉಪಾಸನೆಯ ಫಲವನ್ನು ರೂಪದಲ್ಲಿ ಸಂಪಾದನೆ ಮಾಡಿದೆ ಎಂದರೆ ಆರೋಪಿಸಿ ಚಿಂತಿಸಬೇಕೆಂದು ಹೇಳಿದೆ ಎಂದರ್ಥ.
2. ಶ್ರುತಿಯಲ್ಲಿ ಹೇಳಿರುವ ಫಲವು ಹೀಗೆ ಸಂಪಾದನೆಮಾಡಬೇಕೆಂದು ವಿಧಿಸಿದೆ ಎಂದರೇ ತಿಳಿಯುತ್ತದೆ ; ಏಕೆಂದರೆ ಚಕ್ಷುಷ್ಯನೆಂಬುದು ಸ್ಪರ್ಶಕ್ಕೆ ಹೊಂದುವದಿಲ್ಲ. ಚಕ್ಷುಷ್ಯನಾಗಿರುವದು ಇಷ್ಟವಾಗಿರುವದರಿಂದ ಅದು ಫಲವೂ ಆಗುತ್ತದೆ.

ಸ್ವರ್ಗಲೋಕಪ್ರಾಪ್ತಿಯಾದರೋ ಅದೃಷ್ಟಫಲವು.[1] (ಯ ಏವಂ ವೇದ=ಯಾವನು ಹೀಗೆಂದು ಅರಿಯುವನೋ ಎಂದು) ಎರಡು ಸಲ ಹೇಳಿರುವದು ಆದರವನ್ನು ತೋರಿಸುವದಕ್ಕೆ.

ಮೂರನೆಯ ಅಧ್ಯಾಯ- ಹದಿನಾಲ್ಕನೆಯ ಖಂಡ

(ಶಾಂಡಿಲ್ಯವಿದ್ಯೆ)

ಮನೋಮಯತ್ವಾದಿಗುಣಕಬ್ರಹ್ಮೋಪಾಸನೆ

(ಉಪನಿಷತ್ತು)

ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತ ಉಪಾಸೀತ । ಅಥ ಖಲು ಕ್ರತುಮಯಃ ಪುರುಷೋ ಯಥಾಕ್ರತುರಸ್ಮಿಲ್ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ ಸ ಕ್ರತುಂ ಕುರ್ವೀತ ॥೧॥

೧. ಇವೆಲ್ಲವೂ- ತಜ್ಜಲಾನ್ ಆಗಿರುವದರಿಂದ- ಬ್ರಹ್ಮವೇ ; ಆದ್ದರಿಂದ ಶಾಂತವಾಗಿ ಉಪಾಸನೆಮಾಡಬೇಕು. ಇನ್ನು ಪುರುಷನು ಕ್ರತುಮಯನೇ ; ಪುರುಷನು ಈ ಲೋಕದಲ್ಲಿ ಎಂಥ ಕ್ರತುವುಳ್ಳವನಾಗಿರುವನೋ ಇಲ್ಲಿಂದ ಹೊರಟುಹೋದಬಳಿಕ ಹಾಗೆಯೇ ಆಗುತ್ತದೆ. ಅವನು ಕ್ರತುವನ್ನು ಮಾಡಬೇಕು.

ಗ್ರಂಥಸಂಬಂಧ

(ಭಾಷ್ಯ)

೨೫೧. ಪುನಸ್ತಸ್ಯೈವ ತ್ರಿಪಾದಮೃತಸ್ಯ ಬ್ರಹ್ಮಣೋऽನನ್ತಗುಣವತೋऽನನ್ತಶಕ್ತೇಃ ಅನೇಕಭೇದೋಪಾಸ್ಯಸ್ಯ ವಿಶಿಷ್ಟಗುಣಶಕ್ತಿಮತ್ತ್ವೇನೋಪಾಸನಂ ವಿಧಿತ್ಸನ್ ಆಹ ॥

---

1. ಗುಣಗಳ ಉಪಾಸನೆಗೆ ಫಲವು ಚಕ್ಷುಷ್ಮತ್ವಾದಿಪ್ರಾಪ್ತಿ ; ಗುಣಿಯಾದ ಬ್ರಹ್ಮದ ಉಪಾಸನೆಗೆ ಬ್ರಹ್ಮಪ್ರಾಪ್ತಿ. ಇಲ್ಲಿ ಚಕ್ಷುಷ್ಮತ್ವಾದಿಯಾದ ಅಲ್ಪಫಲವನ್ನು ಹೇಳಿರುವದರಿಂದ ಇಲ್ಲಿ ಹೇಳಿರುವ ಜ್ಯೋತಿಯು ಬ್ರಹ್ಮವಲ್ಲ ಎಂಬ ಪೂರ್ವಪಕ್ಷವನ್ನು ೧-೧-೨೪ (ಭಾ. ಭಾ. ೧೨೮)ರಲ್ಲಿ ತಳ್ಳಿಹಾಕಿದೆ.

(ಭಾಷ್ಯಾರ್ಥ)

ಮತ್ತು ಅನಂತಗುಣಗಳುಳ್ಳದ್ದೂ ಅನಂತಶಕ್ತಿಯುತವಾದದ್ದೂ ಅನೇಕಭೇದಗಳಿಂದ[1] ಉಪಾಸ್ಯವೂ ಆಗಿರುವ ಅದೇ ತ್ರಿಪಾದಮೃತವಾಗಿರುವ ಬ್ರಹ್ಮಕ್ಕೇ[2] ಅಸಾಧಾರಣವಾದ ಗುಣಶಕ್ತಿಗಳುಳ್ಳದ್ದೆಂದು ಉಪಾಸನೆ (ಮಾಡಬೇಕೆಂದು) ವಿಧಿಸುವದಕ್ಕಾಗಿ (ಶ್ರುತಿಯು) ಹೀಗೆಂದು ಹೇಳುತ್ತಿದೆ :

ಬ್ರಹ್ಮೋಪಾಸನೆಯಲ್ಲಿ ಶಮವಿರಬೇಕು

(ಭಾಷ್ಯ)

೨೫೨. ಸರ್ವಂ ಸಮಸ್ತಂ ಖಲು ಇತಿ ವಾಕ್ಯಾಲಙ್ಕಾರಾರ್ಥೋ ನಿಪಾತಃ । ಇದಂ ಜಗತ್ ನಾಮರೂಪವ್ಯಾಕೃತಂ[3] ಪ್ರತ್ಯಕ್ಷಾದಿವಿಷಯಂ ಬ್ರಹ್ಮ ಕಾರಣಮ್ । ವೃದ್ಧತಮತ್ವಾತ್ ಬ್ರಹ್ಮ । ಕಥಂ ಸರ್ವಸ್ಯ ಬ್ರಹ್ಮತ್ವಮಿತಿ । ಅತ ಆಹ । ತಜ್ಜಲಾನ್ ಇತಿ । ತಸ್ಮಾದ್ ಬ್ರಹ್ಮಣೋ ಜಾತಂ ತೇಜೋಽಬನ್ನಾದಿಕ್ರಮೇಣ ಸರ್ವಮ್ । ಅತಃ ತಜ್ಜಮ್ । ತಥಾ ತೇನೈವ ಜನನಕ್ರಮೇಣ ಪ್ರತಿಲೋಮತಯಾ ತಸ್ಮಿನ್ನೇವ ಬ್ರಹ್ಮಣಿ ಲೀಯತೇ, ತದಾತ್ಮತಯಾ ಶಿಷ್ಯತ[4] ಇತಿ ತಲ್ಲಮ್ । ತಥಾ ತಸ್ಮಿನ್ನೇವ ಸ್ಥಿತಿಕಾಲೇ ಅನಿತಿ ಪ್ರಾಣಿತಿ ಚೇಷ್ಟತ ಇತಿ ತದನಮ್[5] । ಏವಂ ಬ್ರಹ್ಮಾತ್ಮತಯಾ ತ್ರಿಷು ಕಾಲೇಷು ಅವಿಶಿಷ್ಟಮ್ ತದ್ವ್ಯತಿರೇಕೇಣ ಅಗ್ರಹಣಾತ್ । ಅತಃ ತದೇವೇದಂ ಜಗತ್ । ಯಥಾ ಚೇದಂ ತದೇವೈಕಮ್ ಅದ್ವಿತೀಯಂ ತಥಾ ಷಷ್ಠೇ ವಿಸ್ತರೇಣ ವಕ್ಷ್ಯಾಮಃ । ಯಸ್ಮಾಚ್ಚ

---

1. ಅನೇಕ ಪ್ರಕಾರಗಳಿಂದ ಎಂದರ್ಥ. ಭೇದಗಳೆಂದರೆ ಗಾಯತ್ರಿಯೇ ಮುಂತಾದ ಅನೇಕ ಉಪಾಧಿಗಳು ಎಂಬ ಟೀಕಾವ್ಯಾಖ್ಯಾನವು ಪ್ರಕೃತೋಪಯೋಗಿಯಲ್ಲವೆಂದು ತೋರುತ್ತದೆ.
2. ಬ್ರಹ್ಮವು ಅದೇ; ಆದರೆ ಗುಣಶಕ್ತಿಭೇದಗಳಿರುವದರಿಂದ ಉಪಾಸನೆಯು ಬೇರೆಯೇ.
3. 'ವಿಕೃತಂ' ಎಂಬ ಪಾಠದಲ್ಲಿ ನಾಮರೂಪವಿಕಾರವಾಗಿರುವದರಿಂದ ಎಂದು ಕನ್ನಡಿಸಬೇಕಾಗುತ್ತದೆ ; ಆದರೆ ಪ್ರಕೃತಿಯೂ ಬೀಜರೂಪವಾಗಿರುವ ನಾಮರೂಪವೇ. ವಿಕೃತಿಯೂ ನಾಮರೂಪವೇ ಆಗಿರುವದರಿಂದ 'ವ್ಯಾಕೃತಮ್' ಎಂದು ತಿದ್ದಿಕೊಂಡಿದೆ. 'ನಾಮರೂಪವಿಕೃತಮ್' ಎಂಬ ಪ್ರಯೋಗವು ಭಾಷ್ಯದಲ್ಲಿಮತ್ತೆಲ್ಲಿಯೂ ಇಲ್ಲ.
4. ಶ್ಲಿಷ್ಯತೇ ಎಂಬುದನು ಹೀಗೆ ತಿದ್ದಿಕೊಂಡಿದೆ.
5. ಇಲ್ಲಿ ಆಚ್ಚಿನ ಪುಸ್ತಕದಲ್ಲಿ ಈ ಮಾತು ಬಿಟ್ಟುಹೋಗಿದೆ. 'ತದನ್' ಎಂಬ ಪಾಠಾಂತರವೂ ಇರುವದಾಗಿ ತಿಳಿಯಬಂದಿದೆಯಾದರೂ ಸೂತ್ರಭಾಷ್ಯಕ್ಕನುಗುಣವಾಗಿ 'ತದನಮ್' ಎಂದೇ ನಾವು ಬರೆದುಕೊಂಡಿರುತ್ತೇವೆ. 'ತದನ್' ಎಂದು ಶ್ರುತಿಯಲ್ಲಿರುವದು ಛಾಂದಸಪ್ರಯೋಗವು.

ಸರ್ವಮಿದಂ ಬ್ರಹ್ಮ ಅತಃ ಶಾನ್ತಃ ರಾಗದ್ವೇಷಾದಿದೋಷರಹಿತಃ ಸಂಯತಃ ಸನ್ ಯತ್ ತತ್ಸರ್ವಂ ಬ್ರಹ್ಮ ತದ್ ವಕ್ಷ್ಯಮಾಣೈರ್ಗುಣೈರುಪಾಸೀತ ॥

(ಭಾಷ್ಯಾರ್ಥ)

(ಸರ್ವಂ ಸಮಸ್ತಮ್) ಎಲ್ಲವೂ ಮೂಲದಲ್ಲಿರುವ ಖಲು (ಅಷ್ಟೇ) ಎಂಬುದು ವಾಕ್ಯಾಲಂಕಾರಕ್ಕಾಗಿ (ಬಂದಿರುವ) ನಿಪಾತವು[1]- ಇದು ಎಂದರೆ ನಾಮರೂಪಗಳಾಗಿ ವಿಂಗಡಿಸಿಕೊಂಡಿರುವ, ಪ್ರತ್ಯಕ್ಷಾದಿಗಳಿಗೆ ವಿಷಯವಾಗಿರುವ (ಈ) ಜಗತ್ತು (ಎಲ್ಲವೂ) ಬ್ರಹ್ಮವೇ ; ಎಲ್ಲಕ್ಕಿಂತಲೂ ಮಿಗಿಲಾದದ್ದರಿಂದ ಬೃಹ್[2](ವೆನಿಸಿಕೊಂಡಿರುವ) ಕಾರಣವೇ.[3] ಎಲ್ಲವೂ ಬ್ರಹ್ಮವೆಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ. ತಜ್ಜಲಾನ್ (ಆಗಿರುವದರಿಂದ). ಆ ಬ್ರಹ್ಮದಿಂದ ತೇಜೋऽಬನ್ನಾದಿಕ್ರಮದಿಂದ[4] ಎಲ್ಲವೂ ಹುಟ್ಟಿದೆ ; ಆದ್ದರಿಂದ 'ತಜ್ಜವು' ಹೀಗೂ (ಅದು) ಜನನಕ್ಕೆ ವಿಪರೀತವಾದ ಕ್ರಮದಿಂದ[5] ಬ್ರಹ್ಮದಲ್ಲಿಯೇ ಲಯವಾಗುತ್ತದೆ, ಅದರ ರೂಪದಿಂದ ಉಳಿದು ಕೊಳ್ಳುತ್ತದೆ ; ಆದ್ದರಿಂದ 'ತಲ್ಲವು', ಹಾಗೂ ಅದರಲ್ಲಿಯೇ ಸ್ಥಿತಿಕಾಲದಲ್ಲಿ ಅನನಮಾಡಿಕೊಂಡಿರುತ್ತದೆ. ಪ್ರಾಣನಮಾಡುತ್ತಿರುತ್ತದೆ, ವ್ಯಾಪಾರಮಾಡುತ್ತಿರುತ್ತದೆ ; ಆದ್ದರಿಂದ 'ತದನವು'.

ಹೀಗೆ ಬ್ರಹ್ಮಸ್ವರೂಪದಿಂದಿರುವದು ಮೂರುಕಾಲಗಳಲ್ಲಿಯೂ (ಇದಕ್ಕೆ) ಸಮಾನವಾಗಿರುತ್ತದೆ ; ಏಕೆಂದರೆ ಅದಕ್ಕಿಂತ ವ್ಯತಿರಿಕ್ತವಾಗಿ (ಇದು) ತಿಳಿಯಬರುತ್ತಿಲ್ಲ.[6] ಆದ್ದರಿಂದ ಈ ಜಗತ್ತು ಆ (ಬ್ರಹ್ಮ)ವೇ. ಈ (ಜಗತ್ತು) ತನಗೆರಡನೆಯದಿಲ್ಲದ, ಆ (ಬ್ರಹ್ಮ)ವೊಂದೇ ಹೇಗೆಂಬುದನ್ನು ಆರನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ

---

1. ಇದಕ್ಕೆ ವಿಶೇಷಾರ್ಥವೇನೂ ಇಲ್ಲ.
2. ಬೃಹ್ ಬೃಹಿ ವೃದ್ಧೌ ಎಂಬ ಧಾತುವಿನಿಂದ ಬ್ರಹ್ಮಶಬ್ದವು ಬಂದಿದೆ.
3. ಕಾರಣಕ್ಕಿಂತ ವ್ಯತಿರಿಕ್ತವಾಗಿಲ್ಲ.
4. ಬ್ರಹ್ಮದಿಂದ ಪಂಚಭೂತಗಳು ತೇಜಆದಿಕ್ರಮದಲ್ಲಿ ಹುಟ್ಟುವವೆಂದು ಈ ಶ್ರುತಿಯಲ್ಲಿದೆ , ಅದು ಆಕಾಶಾದಿಯಾಗಿ ಹುಟ್ಟುವದೆಂಬುದಕ್ಕೆ ಉಪಲಕ್ಷಣವೆಂದು ತೈತ್ತಿರೀಯ ಶ್ರುತಿಯ ಆಧಾರದಿಂದ ಸೂ. ಭಾ. ೨-೩-೬ರಲ್ಲಿ ನಿರ್ಣಯಿಸಿದೆ.
5. ಹುಟ್ಟುವ ಕ್ರಮಕ್ಕೆ ವಿಪರೀತವಾಗಿ ಪೃಥಿವಿಯು ಅಪ್ಪಿನಲ್ಲಿ, ಅಪ್ಪು ಅಗ್ನಿಯಲ್ಲಿ ಈ ಕ್ರಮದಿಂದ ಎಂದರ್ಥ.
6. ಮಡಕೆಯು ಮಣ್ಣಿಗಿಂತ ಬೇರೆಯಾಗಿರದೆ ಮಣ್ಣೇ ಆಗಿದ್ದೇ ತೋರಿಕೊಳ್ಳುವಂತೆ ಬ್ರಹ್ಮಸ್ವರೂಪವನ್ನು ಬಿಡದೆಯೇ ತನ್ನ ರೂಪದಿಂದಲೂ ತೋರಿಕೊಳ್ಳುತ್ತಿದೆ ಎಂದರ್ಥ.

ಹೇಳುವೆವು.[1] (ಹೀಗೆ) ಅದೆಲ್ಲವೂ ಬ್ರಹ್ಮವೇ (ಆಗಿರು)ವದಷ್ಟೆ, ಆದ್ದರಿಂದ ಶಾಂತನಾಗಿ ರಾಗದ್ವೇಷಾದಿಗಳಿಲ್ಲದೆ (ಮನಸ್ಸನ್ನು) ಬಿಗಿಹಿಡಿದುಕೊಂಡು ಸರ್ವವೂ ಆಗಿರುವ ಬ್ರಹ್ಮವಿದೆಯಲ್ಲ, ಅದನ್ನು ಮುಂದೆ ಹೇಳುವ ಗುಣಗಳಿಂದೊಡಗೂಡಿದ್ದೆಂದು ಉಪಾಸನೆಮಾಡಬೇಕು.[2]

ಬ್ರಹ್ಮವನ್ನು ಉಪಾಸನೆಮಾಡುವ ರೀತಿ

(ಭಾಷ್ಯ)

೨೫೩. ಕಥಮುಪಾಸೀತ ? ಕ್ರತುಂ ಕುರ್ವೀತ । ಕ್ರತುರ್ನಿಶ್ಚಯಃ, ಅಧ್ಯವಸಾಯಃ, ಏವಮೇವ ನಾನ್ಯಥಾ ಇತ್ಯವಿಚಲಃ ಪ್ರತ್ಯಯಃ । ತಂ ಕ್ರತುಂ ಕುರ್ವೀತ ಉಪಾಸೀತ ಇತ್ಯನೇನ ವ್ಯವಹಿತೇನ ಸಂಬನ್ಧಃ । ಕಿಂ ಪುನಃ ಕ್ರತುಕರಣೇನ ಕರ್ತವ್ಯಂ ಪ್ರಯೋಜನಮ್ ? ಕಥಂ ವಾ ಕ್ರತುಃ ಕರ್ತವ್ಯಃ ? ಕ್ರತುಕರಣಂ ಚ ಅಭಿಪ್ರೇತಾರ್ಥಸಿದ್ಧಿಸಾಧನಂ ಕಥಮ್ ಇತಿ ? ಅಸ್ಯಾರ್ಥಸ್ಯ ಪ್ರತಿಪಾದನಾರ್ಥಮ್ 'ಅಥ' ಇತ್ಯಾದಿಗ್ರಂಥಃ । ಅಥ ಖಲು ಇತಿ ಹೇತ್ವರ್ಥಃ । ಯಸ್ಮಾತ್ ಕ್ರತುಮಯಃ ಕ್ರತುಪ್ರಾಯಃ ಅಧ್ಯವಸಾಯಾತ್ಮಕಃ ಪುರುಷೋ ಜೀವಃ । ಯಥಾ ಕ್ರತುಃ ಯಾದೃಶಃ ಕ್ರತುರಸ್ಯ ಸೋಽಯಂ ಯಥಾಕ್ರತುಃ ಯಥಾಧ್ಯವಸಾಯಃ ಯಾದೃಙ್ನಿಶ್ಚಯಃ ಅಸ್ಮಿನ್ ಲೋಕೇ ಜೀವನ್ ಇಹ ಪುರುಷೋ ಭವತಿ ತಥಾ ಇತಃ ಅಸ್ಮಾದ್ದೇಹಾತ್ ಪ್ರೇತ್ಯ ಮೃತ್ವಾ ಭವತಿ । ಕ್ರತ್ವನುರೂಪಫಲಾತ್ಮಕೋ ಭವತಿ ಇತ್ಯರ್ಥಃ । ಏವಂ ಹಿ ಏತತ್ ಶಾಸ್ತ್ರತೋ ದೃಷ್ಟಮ್ । "ಯಂ ಯಂ ವಾಽಪಿ ಸ್ಮರನ್ ಭಾವಂ ತ್ಯಜತ್ಯನ್ತೇ ಕಲೇವರಮ್" (ಗೀ. ೮-೬) ಇತ್ಯಾದಿ । ಯತ ಏವಂ ವ್ಯವಸ್ಥಾ ಶಾಸ್ತ್ರದೃಷ್ಟಾ ಅತಃ ಸ ಏವಂ ಜಾನನ್ ಕ್ರತುಂ ಕುರ್ವೀತ ಯಾದೃಶಂ ಕ್ರತುಂ ವಕ್ಷ್ಯಾಮಸ್ತಮ್ । ಯತ ಏವಂ ಶಾಸ್ತ್ರಪ್ರಾಮಾಣ್ಯಾತ್ ಉಪಪದ್ಯತೇ ಕ್ರತ್ವನುರೂಪಂ ಫಲಮ್, ಅತಃ ಸ ಕರ್ತವ್ಯಃ ಕ್ರತುಃ ॥

---

1. ೬-೧-೩ರಿಂದ ಮುಂದಕ್ಕೆ ಇದನ್ನು ವಿಸ್ತಾರವಾಗಿ ಹೇಳಿದೆ. ಇದು ಉಪಾಸನಾವಾಕ್ಯವಾದ್ದರಿಂದ ಸೃಷ್ಟಿಯಾದದ್ದನ್ನು ಇಟ್ಟುಕೊಂಡೇ ಇಲ್ಲಿ ಉಪಾಸನೆಯನ್ನು ವಿಧಿಸಿದೆ ಎಂದು ಭಾವ. 2. ಈ ವಾಕ್ಯವು ಶಮವಿಧಿಪರವೇ ಆದರೂ ಮುಂದಿನ ವಾಕ್ಯದಲ್ಲಿ ಹೇಳಿರುವ ಮನೋಮಯತ್ವಾದಿಗುಣಗಳು ಬ್ರಹ್ಮಕ್ಕೆ ಸೇರಿದವೆಂದೇ ಉಪಾಸನೆ ಮಾಡಬೇಕು. ಇಲ್ಲಿ ಸರ್ವಂ ಖಲ್ವಿದಂ ಬ್ರಹ್ಮ ಎಂದು ಬ್ರಹ್ಮದ ಸನ್ನಿಧಿಯಿರುತ್ತದೆ, ಬ್ರಹ್ಮವನ್ನು ಸ್ವಶಬ್ದದಿಂದ ಹೇಳಿದೆ ; ಆದರೆ ಜೀವನ ಪರಾಮರ್ಶವಿಲ್ಲ. ಆ ಗುಣಗಳು ಬ್ರಹ್ಮಕ್ಕೆ ಹೊಂದುತ್ತವೆ. ಆದ್ದರಿಂದ ಇದು ಬ್ರಹ್ಮೋಪಾಸನೆಯೇ ಎಂದು ಸೂ. ಭಾ. ೧-೨-೧ (ಭಾ. ಭಾ. ೧೪೯, ೧೫೧)ರಲ್ಲಿ ನಿರ್ಣಯಿಸಿದೆ.

(ಭಾಷ್ಯಾರ್ಥ)

ಹೇಗೆ ಉಪಾಸನೆಮಾಡಬೇಕು ? ಕ್ರತುವನ್ನು ಮಾಡಬೇಕು. ಕ್ರತು ಎಂದರೆ ನಿಶ್ಚಯವು, ಗೊತ್ತುಪಡಿಸಿಕೊಳ್ಳುವದು, ಹೀಗೆಯೇ (ಸರಿ) ಬೇರೆಯ (ಪ್ರಕಾರ)ವಿಲ್ಲ- ಎಂದು ಅಲುಗಾಡದ ಪ್ರತ್ಯಯವು.[1] ಆ ಕ್ರತುವನ್ನು ಮಾಡಿಕೊಳ್ಳಬೇಕು. 'ಉಪಾಸನೆ ಮಾಡಬೇಕು' ಎಂಬುದಕ್ಕೆ ವ್ಯವಹಿತವಾಗಿರುವ ಈ (ವಾಕ್ಯ)ದೊಡನೆ ಸಂಬಂಧವನ್ನು ಮಾಡಿಕೊಳ್ಳಬೇಕು.[2]

ಕ್ರತುವನ್ನು ಮಾಡಿಕೊಳ್ಳುವದರಿಂದ (ಆಗುವ) ಪ್ರಯೋಜನವೇನು ? ಕ್ರತುವನ್ನು ಮಾಡಿಕೊಳ್ಳುವದಾದರೂ ಹೇಗೆ ? ಮತ್ತು ಕ್ರತುವನ್ನು ಮಾಡಿಕೊಳ್ಳುವದು ಇಷ್ಟಾರ್ಥಸಿದ್ಧಿಗೆ ಕಾರಣವೆಂಬುದು ಹೇಗೆ ?- ಎಂಬೀ ಅರ್ಥವನ್ನು ಪ್ರತಿಪಾದಿಸು ವದಕ್ಕಾಗಿ 'ಅಥ' ಮುಂತಾದ (ಮುಂದಿನ) ಗ್ರಂಥವು (ಬಂದಿದೆ). 'ಅಥ ಖಲು' ಎಂಬುದು ಹೇತುವೆಂಬರ್ಥ(ವನ್ನು ತಿಳಿಸುತ್ತದೆ). (ಹೇಗೆಂದರೆ) ಪುರುಷನು, ಜೀವನು, ಕ್ರತುಮಯನು, ಎಂದರೆ ಕ್ರತುವ್ಯಾಯನು, ಅಧ್ಯವಸಾಯಾತ್ಮಕನಷ್ಟೆ. ಪುರುಷನು ಈ ಲೋಕದಲ್ಲಿ ಇಲ್ಲಿ ಬದುಕಿರುವಾಗ ಎಂಥ ಕ್ರತುವುಳ್ಳವನಾಗಿರುತ್ತಾನೋ- ಇವನ ಕ್ರತುವೆಂಥದ್ದೋ ಇವನು ಅಂಥವನು - ಎಂಬುದನ್ನು ಯಥಾಕ್ರತು(ವೆಂಬ ಮಾತು ತಿಳಿಸುತ್ತದೆ)- ಎಂಥ ಅಧ್ಯವಸಾಯದವನೋ, ಎಂಥ ನಿಶ್ಚಯವುಳ್ಳವನಾಗಿರುವನೋ, ಇಲ್ಲಿಂದ ಈ ದೇಹದಿಂದ ಹೊರಟುಹೋಗಿ, ಸತ್ತು, ಅಂಥವನೇ ಆಗುವನು. ಕ್ರತುವಿಗೆ ಅನುಗುಣವಾದ ಫಲಸ್ವರೂಪನಾಗುವನು - ಎಂದರ್ಥ. ಇದು ಹೀಗೆಂದಲ್ಲವೆ, "ಯಾವ ಯಾವ ಭಾವವನ್ನು ಸ್ಮರಿಸಿಕೊಂಡು ಕೊನೆಯಲ್ಲಿ ಶರೀರವನ್ನು ಬಿಡುವನೋ" (ಗೀ. ೮-೬) ಎಂದು ಮುಂತಾದ ಶಾಸ್ತ್ರದಿಂದ ತಿಳಿಯಬರುತ್ತದೆ ? ಈ ರೀತಿಯ ವ್ಯವಸ್ಥೆಯು ಶಾಸ್ತ್ರದಲ್ಲಿ ಕಂಡುಬರುತ್ತಿರುವದಷ್ಟೆ. ಆದ್ದರಿಂದ ಅವನು ಹೀಗೆಂದು ತಿಳಿದು ಕ್ರತುವನ್ನು ಮಾಡಬೇಕು, ಮುಂದೆ ಎಂಥ ಕ್ರತುವನ್ನು ಹೇಳುವೆವೋ ಅದನ್ನು ಮಾಡಿಕೊಳ್ಳಬೇಕು. ಹೀಗೆ ಶಾಸ್ತ್ರಪ್ರಾಮಾಣ್ಯದಿಂದ ಕ್ರತ್ವನುಗುಣವಾಗಿ ಫಲವಾಗುವ ದೆಂಬುದು ಯುಕ್ತವಾಗಿರುವದರಿಂದ ಆ ಕ್ರತುವನ್ನು ಮಾಡಬೇಕು.

1. ಸಾಕ್ಷಾತ್ಕಾರವು. 2. ಉಪಾಸನೆಮಾಡಬೇಕು ಎಂಬುದಕ್ಕೆ ಹೀಗೆ ಎಂಬುದರ ಆಕಾಂಕ್ಷೆಯಿದೆ. ಅದನ್ನು 'ಕ್ರತುಂ ಕುರ್ವಿತ' ಎಂಬುದು ಪೂರ್ತಿಗೊಳಿಸುವದರಿಂದ ಇದರೊಡನೆ ಅದಕ್ಕೆ ಸಂಬಂಧವನ್ನು ಮಾಡಿಕೊಳ್ಳಬೇಕು. ಇದರಿಂದ ಸಾಕ್ಷಾತ್ಕಾರವಾಗು ವವರೆಗೂ ಉಪಾಸನೆಮಾಡಬೇಕು ಎಂಬ ಅಭಿಪ್ರಾಯವು ಹೊರಡುತ್ತದೆ.

3. ಅಥ ಖಲು ಎಂಬುದು ಹೇತ್ವರ್ಥವೆಂದಿದ್ದರ ಸ್ಪಷ್ಟೀಕರಣವಿದು. ಇಂಥ ಫಲವ್ಯಾಪ್ತಿಗಾಗಿ ಉಪಾಸನೆಮಾಡಬೇಕು.

(ಉಪನಿಷತ್ತು)

ಮನೋಮಯಃ ಪ್ರಾಣಶರೀರೋ ಭಾರೂಪಃ ಸತ್ಯಸಂಕಲ್ಪ ಆಕಾಶಾತ್ಮಾ ಸರ್ವಕರ್ಮಾ ಸರ್ವಕಾಮಃ ಸರ್ವಗನ್ಧಃ ಸರ್ವರಸಃ ಸರ್ವಮಿದಮಭ್ಯಾತ್ತೋಽವಾಕ್ಯನಾದರಃ ॥೨॥

೨. ಮನೋಮಯನು, ಪ್ರಾಣಶರೀರನು, ಭಾರೂಪನು, ಸತ್ಯಸಂಕಲ್ಪನು, ಆಕಾಶಾತ್ಮನು, ಸರ್ವಕರ್ಮನು, ಸರ್ವಕಾಮನು, ಸರ್ವಗಂಧನು, ಸರ್ವರಸನು, ಇದೆಲ್ಲದರಲ್ಲಿಯೂ ಅಭ್ಯಾತ್ತನಾಗಿರುವನು, ಅವಾಕಿಯು, ಅನಾದರನು.

ಚಿಂತಿಸಬೇಕಾದ ಬ್ರಹ್ಮದ ಗುಣಗಳು

(ಭಾಷ್ಯ)

೨೫೪. ಕಥಮ್ ? ಮನೋಮಯಃ ಮನಃಪ್ರಾಯಃ । ಮನುತೇ ಅನೇನೇತಿ ಮನಃ । ತತ್ ಸ್ವವೃತ್ತ್ಯಾ ವಿಷಯೇಷು ಪ್ರವೃತ್ತಂ ಭವತಿ ತೇನ ಮನಸಾ ತನ್ಮಯಃ । ತಥಾ ಪ್ರವೃತ್ತ ಇವ ತತ್ತ್ಯಾಯಃ ನಿವೃತ್ತ ಇವ ಚ । ಅತ ಏವ ಪ್ರಾಣಶರೀರಃ ಪ್ರಾಣೋ ಲಿಙ್ಗಾತ್ಮಾ ವಿಜ್ಞಾನಕ್ರಿಯಾಶಕ್ತಿದ್ವಯಸಂಮೂರ್ಛಿತಃ । ''ಯೋ ವೈ ಪ್ರಾಣಃ ಸಾ ಪ್ರಜ್ಞಾ ಯಾ ವಾ[1] ಪ್ರಜ್ಞಾ ಸ ಪ್ರಾಣಃ'' (ಕೌ. ೩-೩) ಇತಿ ಶ್ರುತೇಃ । ಸ ಶರೀರಂ ಯಸ್ಯ ಸ ಪ್ರಾಣಶರೀರಃ । ''ಮನೋಮಯಃ ಪ್ರಾಣಶರೀರನೇತಾ'' (ಮುಂ. ೨-೨-೮) ಇತಿ ಚ ಶ್ರುತ್ಯನ್ತರಾತ್ । ಭಾರೂಪಃ ಭಾ ದೀಪ್ತಿಃ ಚೈತನ್ಯಲಕ್ಷಣಂ ರೂಪಂ ಯಸ್ಯ ಚ ಭಾರೂಪಃ ಸತ್ಯಸಂಕಲ್ಪಃ । ಸತ್ಯಾಃ ಅವಿತಥಾಃ ಸಂಕಲ್ಪಾಃ ಯಸ್ಯ ಸೋಽಯಂ ಸತ್ಯಸಂಕಲ್ಪಃ । ನ ಯಥಾ ಸಂಸಾರಿಣಃ ಇವ[2] (?) ಅನೈಕಾನ್ತಿಕಫಲಃ ಸಂಕಲ್ಪ ಈಶ್ವರಸ್ಯ ಇತ್ಯರ್ಥಃ । ಅನೃತೇನ[3] ಮಿಥ್ಯಾಫಲತ್ವಹೇತುನಾ ಪ್ರತ್ಯೂಢತ್ವಾತ್ ಸಂಕಲ್ಪಸ್ಯ ಮಿಥ್ಯಾಫಲತ್ವಮ್ । ವಕ್ಷ್ಯತಿ ''ಅನೃತೇನ ಹಿ ಪ್ರತ್ಯೂಢಾಃ'' (೮-೩-೨) ಇತಿ । ಆಕಾಶಾತ್ಮಾ ಆಕಾಶ ಇವ ಆತ್ಮಾ ಸ್ವರೂಪಂ ಯಸ್ಯ ಸ ಆಕಾಶಾತ್ಮಾ । ಸರ್ವಗತತ್ವಂ

1. ಸೂ. ಭಾ. ೧-೧-೩೧ (ಭಾ. ಭಾ. ೧೪೧) 'ಯಾ ವೈ' ಎಂದು ಪಾಠ ; ಆ ॥ ನಿ ॥ ಪಾಠಗಳಲ್ಲಿ ಇಲ್ಲಿರುವಂತೆಯೇ ಪಾಠಗಳಿವೆ, ಆದರೆ ಆ॥ ಪಾಠಗಳಲ್ಲಿ ಈ ಎರಡು ವಾಕ್ಯಗಳೂ ಒಂದೇ ಕಡೆಯಲ್ಲಿಲ್ಲ.
2. 'ಯಥಾ' 'ಇವ' - ಇವುಗಳಲ್ಲಿ ಒಂದು ಹೆಚ್ಚು.
3. ಇದರ ಹಿಂದೆ 'ಸಂಸಾರಿಣಃ' ಎಂಬ ಮಾತು ಆ॥ ಮಾ॥ ಪಾಠಗಳಲ್ಲಿದೆ.

ಸೂಕ್ಷ್ಮತ್ವಂ ರೂಪಾದಿಹೀನತ್ವಂ ಚ ಆಕಾಶತುಲ್ಯತಾ ಈಶ್ವರಸ್ಯ । ಸರ್ವಕರ್ಮಾ । ಸರ್ವಂ ವಿಶ್ವಂ ತೇನ ಈಶ್ವರೇಣ ಕ್ರಿಯತೇ ಇತಿ ಜಗತ್ ಸರ್ವಂ ಕರ್ಮ ಅಸ್ಯ ಸ ಸರ್ವಕರ್ಮಾ । ''ಸ ಹಿ ಸರ್ವಸ್ಯ ಕರ್ತಾ'' (ಬೃ ೪-೪-೧೩) ಇತಿ ಶ್ರುತೇಃ । ಸರ್ವಕಾಮಃ । ಸರ್ವೇ ಕಾಮಾಃ ದೋಷರಹಿತಾಃ ಅಸ್ಯ ಇತಿ ಸರ್ವಕಾಮಃ । ''ಧರ್ಮಾವಿರುದ್ಧೋ ಭೂತೇಷು ಕಾಮೋಽಸಿ'' (ಗೀ. ೭-೧೧) ಇತಿ ಸ್ಮೃತೇಃ । ನನು ಕಾಮೋಽಸ್ಮಿ ಇತಿ ವಚನಾತ್ ಇಹ ಬಹುವ್ರೀಹಿರ್ನ ಸಂಭವತಿ 'ಸರ್ವಕಾಮ' ಇತಿ । ನ । ಕಾಮಸ್ಯ ಕರ್ತವ್ಯತ್ವಾತ್ ಶಬ್ದಾಧಿವತ್ ಪಾರಾರ್ಥ್ಯಪ್ರಸಙ್ಗಾಚ್ಚ ದೇವಸ್ಯ । ತಸ್ಮಾತ್ ಯಥೇಹ ಸರ್ವಕಾಮ ಇತಿ ಬಹುವ್ರೀಹಿಃ ತಥಾ ಕಾಮೋಽಸ್ಮೀತಿ ಸ್ಮೃತ್ಯರ್ಥೋ ವಾಚ್ಯಃ । ಸರ್ವಗನ್ಧಃ । ಸರ್ವೇ ಗನ್ಧಾಃ ಸುಖಿಕರಾಃ ಅಸ್ಯ ಸೋಽಯಂ ಸರ್ವಗನ್ಧಃ । ''ಪುಣ್ಯೋ ಗನ್ಧಃ ಪೃಥಿವ್ಯಾಮ್'' (ಗೀ. ೭-೯) ಇತಿ ಸ್ಮೃತೇಃ । ತಥಾ ರಸಾ ಅಪಿ ವಿಜ್ಞೇಯಾಃ । ಅಪುಣ್ಯಗನ್ಧರಸಗ್ರಹಣಸ್ಯ ಪಾಪ್ಮಸಂಬನ್ಧನಿಮಿತ್ತಶ್ರವಣಾತ್ ''ತಸ್ಮಾತ್ ತೇನೋ ಭಯಂ ಜಿಘ್ರತಿ ಸುರಭಿ ಚ ದುರ್ಗನ್ಧಿ ಚ । ಪಾಪ್ಮನಾ ಹ್ಯೇಷ ವಿದ್ಧಃ'' (೧-೨-೨) ಇತಿ[1]। ನ ಚ ಪಾಪ್ಮಸಂಸರ್ಗ ಈಶ್ವರಸ್ಯ । ಅವಿದ್ಯಾದಿದೋಷಸ್ಯ ಅನುಪಪತ್ತೇಃ । ಸರ್ವಮಿದಂ ಜಗತ್ ಅಭ್ಯಾತ್ತಃ ಅಭಿವ್ಯಾಪ್ತಃ । ಅತತೇರ್ವ್ಯಾಪ್ತ್ಯರ್ಥಸ್ಯ ಕರ್ತರಿ ನಿಷ್ಠಾ । ತಥಾ ಅವಾಕೀ । ಉಚ್ಯತೇ ಅನಯಾ ಇತಿ ವಾಕ್ । ವಾಗೇವ ವಾಕಃ । ಯದ್ವಾ ವಚೇರ್ಘಞನ್ತಸ್ಯ ಕರಣೇ ವಾಕಃ । ಸ ಯಸ್ಯ ವಿದ್ಯತೇ ಸ ವಾಕೀ । ನ ವಾಕೀ ಅವಾಕೀ । ವಾಕ್ಪ್ರತಿಷೇಧಶ್ಚ ಅತ್ರೋಪಲಕ್ಷಣಾರ್ಥಃ । ಗನ್ಧರಸಾದಿಶ್ರವಣಾತ್ ಈಶ್ವರಸ್ಯ ಪ್ರಾಪ್ತಾನಿ ಘ್ರಾಣಾದೀನಿ ಕರಣಾನಿ ಗನ್ಧಾದಿಗ್ರಹಣಾಯ । ಅತೋ ವಾಕ್ಪ್ರತಿಷೇಧೇನ ಪ್ರತಿಷಿಧ್ಯನ್ತೇ ತಾನಿ । ''ಅಪಾಣಿಪಾದೋ ಜವನೋ ಗ್ರಹೀತಾ ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ'' (ಶ್ವೇ. ೩-೧೯) ಇತ್ಯಾದಿಮನ್ತ್ರವರ್ಣಾತ್ । ಅನಾದರೋಽಸಂಭ್ರಮಃ । ಅಪ್ರಾಪ್ತಪ್ರಾಪ್ತೌ ಹಿ ಸಂಭ್ರಮಃ ಸ್ಯಾತ್ ಅನಾಪ್ತಕಾಮಸ್ಯ । ನ ತು

ಕ್ಯರ್ಥ)

ಹೇಗೆ (ಕ್ರತುವನ್ನು ಮಾಡಿಕೊಳ್ಳಬೇಕು ? ಎಂದರೆ) ಮನೋಮಯನು, ಮನಃಪ್ರಾಯನು. ಇದರಿಂದ ಮನನಮಾಡುತ್ತಾರಾದ್ದರಿಂದ (ಇದು) ಮನ (ವೆನಿಸಿದೆ). ಇದು ತನ್ನ ವೃತ್ತಿಯಿಂದ ವಿಷಯಗಳಲ್ಲಿ ಪ್ರವೃತ್ತವಾಗುತ್ತದೆ. ಈ ಮನಸ್ಸಿನಿಂದ ತನ್ಮಯ(ನಾಗಿರುತ್ತಾನೆ). ಅದರಂತೆ ಪ್ರವೃತ್ತನಾದಂತೆ

1. ಇದು ಮುಂದಿರುವ 'ಶ್ರುತೇಃ' ಎಂಬ ಮಾತು ಹೆಚ್ಚೆಂದು ಬಿಟ್ಟಿದೇವೆ.

(ತೋರುವದರಿಂದಲೂ ; ಅದರಂತೆಯೇ) ನಿವೃತ್ತನಾದಂತೆ (ತೋರುವದರಿಂದಲೂ) ತತ್ಪ್ರಾಯನಾಗಿರುತ್ತಾನೆ (ಎಂದರ್ಥ).[1]

ಆದ್ದರಿಂದಲೇ **ಪ್ರಾಣಶರೀರನು.** ಪ್ರಾಣವೆಂದರೆ ವಿಜ್ಞಾನ, ಕ್ರಿಯೆ- ಎಂಬ ಶಕ್ತಿದ್ವಯದಿಂದ ಒಟ್ಟುಗೂಡಿರುವ ಲಿಂಗಾತ್ಮವು. "ಯಾವದು ಪ್ರಾಣವೋ ಅದೇ ಪ್ರಜ್ಞೆಯು, ಯಾವದು ಪ್ರಜ್ಞೆಯೋ ಅದೇ ಪ್ರಾಣವು" (ಕೌ.೩-೩) ಎಂಬ ಶ್ರುತಿಯಿಂದ (ಇದು ಸಿದ್ಧವಾಗಿರುತ್ತದೆ).[2] ಆ (ಪ್ರಾಣವು) ಯಾವನಿಗೆ ಶರೀರವೋ ಅವನು ಪ್ರಾಣಶರೀರನು. "ಮನೋಮಯನು, ಪ್ರಾಣಶರೀರವನ್ನು ನಡೆಯಿಸುವವನು" (ಮುಂ. ೨-೨-೮) ಎಂದು ಶ್ರುತ್ಯಂತರದಲ್ಲಿರುವದರಿಂದ (ಹೀಗೆಂದು ತಿಳಿಯಬೇಕು).[3]

ಭಾರೂಪನು. ಭಾ ಎಂದರೆ ಪ್ರಕಾಶವು, ಚೈತನ್ಯರೂಪವಾದ (ಬೆಳಕು) ಯಾವನಿಗೆ ರೂಪವೋ ಅವನು ಭಾರೂಪನು.[4]

ಸತ್ಯಸಂಕಲ್ಪನು.[5] ಸತ್ಯವಾದ ವ್ಯರ್ಥವಲ್ಲದ ಸಂಕಲ್ಪಗಳು ಯಾವನಿಗೆ (ಇರುವವೋ) ಆ ಇವನು ಸತ್ಯಸಂಕಲ್ಪನು. ಸಂಸಾರಿಯ (ಸಂಕಲ್ಪ)ದಂತೆ ಈಶ್ವರನ ಸಂಕಲ್ಪವು ಅನಿಯತವಾದ ಫಲವುಳ್ಳದ್ದಲ್ಲ ಎಂದರ್ಥ. ಮಿಥ್ಯಾಫಲವಾಗುವದಕ್ಕೆ ಕಾರಣವಾದ ಅನೃತ(ವಾದ ಕಾಮ)ದಿಂದ ಹೊರಕ್ಕೆಳೆಯಲ್ಪಟ್ಟಿರುವದರಿಂದಲೇ ಸಂಸಾರಿಯ ಸಂಕಲ್ಪಕ್ಕೆ ಮಿಥ್ಯಾಫಲವಾಗುತ್ತಿರುವದು ಎಂಬುದನ್ನು ಮುಂದೆ

---

1. ಆತ್ಮನಿಗೆ ಪ್ರವೃತ್ತಿ-ನಿವೃತ್ತಿಗಳಿರುವಂತೆ ತೋರುವದಕ್ಕೆ ಮನಸ್ಸೆಂಬ ಉಪಾಧಿಯೇ ಕಾರಣ ಎಂದರ್ಥ. ತೈ. ಭಾ. ೧-೬ (ಭಾ. ಭಾ. ೪೦)ರಲ್ಲಿ ಈ ಶಬ್ದಕ್ಕೆ ವಿಜ್ಞಾನದಿಂದ ತಿಳಿಯಬರುವವನು, ಅಂತಃಕರಣವೆಂಬ ಲಿಂಗದಿಂದ ತಿಳಿಯಬರುವವನು - ಎಂದು ಅರ್ಥಮಾಡಿದೆ. ಮುಂ. ಭಾ. ೨-೨-೮ (ಭಾ. ಭಾ. ೮೧) ರಲ್ಲಿ ಮನೋವೃತ್ತಿಗಳಿಂದ ತಿಳಿದುಬರುವವನು ಎಂದು ಅರ್ಥಮಾಡಿದೆ.

2. ಆ ಶ್ರುತಿಯಲ್ಲಿ ಪರಮಾತ್ಮನ ಈ ಎರಡು ಶಕ್ತಿಗಳನ್ನು ಹೇಳಿದೆ.

3. ಪ್ರಾಣವೆಂಬ ಸೂಕ್ಷ್ಮಶರೀರವನ್ನು ಒಂದು ಸ್ಥೂಲಶರೀರದಿಂದ ಮತ್ತೊಂದಕ್ಕೆ ಒಯ್ಯುವವನು ಎಂದು ಮುಂ. ೨-೨-೮ರ ಭಾಷ್ಯದಲ್ಲಿ ಪ್ರಾಣಶರೀರನೇತಾ ಎಂಬುದಕ್ಕೆ ವ್ಯಾಖ್ಯಾನ, ಅದು ನಿರುಪಾಧಿಕನಾದ ಆತನ ವರ್ಣನೆಯಾದರೂ ಪ್ರಾಣವೆಂಬು ದೊಂದು ಶರೀರವು ಎಂಬುದಕ್ಕೆ ಆ ಶ್ರುತಿಯನ್ನು ಇಲ್ಲಿ ಸಮ್ಮತಿಗಾಗಿ ಉದಾಹರಿಸಿದೆ ಎಂದು ತಿಳಿಯಬೇಕು.

4. ಚೈತನ್ಯಪ್ರಕಾಶಸ್ವರೂಪನು ಎಂದರ್ಥ.

5. ಈ ಸತ್ಯಸಂಕಲ್ಪತ್ವವೇ ಮುಂತಾದ ಗುಣಗಳು ಜೀವನಿಗೆ ಹೊಂದುವದಿಲ್ಲವಾದ್ದರಿಂದ ಮನೋಮಯ, ಪ್ರಾಣಶರೀರ- ಮುಂತಾದ ವಿಶೇಷಣಗಳನ್ನು ಪರಮಾತ್ಮನಿಗೇ ಹೊಂದಿಸಿಕೊಳ್ಳಬೇಕು - ಎಂದು ಸೂ. ಭಾ. ೧-೧-೨ (ಭಾ. ಭಾ. ೧೫೧, ೧೫೨), ೧-೧-೩ (ಭಾ. ಭಾ. ೧೫೩)ರಲ್ಲಿ ನಿರ್ಣಯಿಸಿದೆ.

''ಅನ್ಯತದಿಂದ ಪ್ರತ್ಯೂಢರಾಗಿರುವರಲ್ಲವೆ ?'' (೮-೩-೨) ಎಂದು ಮುಂದೆ ಹೇಳಿರುತ್ತದೆ.

ಆಕಾಶಾತ್ಮನು. ಆಕಾಶದಂತೆ ಆತ್ಮವು, ಸ್ವರೂಪವು, ಯಾವನಿಗೆ (ಇರುವದೋ) ಅವನು ಆಕಾಶಾತ್ಮನು. ಈಶ್ವರನು ಸರ್ವಗತನೂ ಸೂಕ್ಷ್ಮನೂ ರೂಪಾದಿಗಳಿಲ್ಲದವನೂ ಆಗಿರುವದೇ ಆಕಾಶಕ್ಕೂ (ಅವನಿಗೂ ಇರುವ) ಹೋಲಿಕೆ.

ಸರ್ವಕರ್ಮನು. ಸರ್ವವೂ ಎಂದರೆ ಎಲ್ಲವೂ ಆ ಈಶ್ವರನಿಂದ ಮಾಡಲ್ಪಟ್ಟಿರುವದರಿಂದ ಸರ್ವಜಗತ್ತೂ ಅವನ ಕರ್ಮವು ; (ಆದ್ದರಿಂದ) ಇವನು ಸರ್ವಕರ್ಮನು. ''ಅವನು ಸರ್ವಕ್ಕೂ ಕರ್ತೃವಲ್ಲವೆ ?'' (ಬೃ. ೪-೪-೧೩) ಎಂಬ ಶ್ರುತಿಯಿಂದ[1] (ಇದು ಸಿದ್ಧವಾಗಿರುತ್ತದೆ).

ಸರ್ವಕಾಮನು. ದೋಷರಹಿತವಾದ ಎಲ್ಲಾ ಕಾಮಗಳೂ ಇವನಿಗೆ ಇರುವವಾದ್ದರಿಂದ (ಇವನು) ಸರ್ವಕಾಮನು. ''ಭೂತಗಳಲ್ಲಿರುವ ಧರ್ಮಾವಿರುದ್ಧವಾದ ಕಾಮವಾಗಿರುವೆನು'' (ಗೀ. ೭-೧೧) ಎಂಬ ಸ್ಮೃತಿಯಿಂದ (ಇದು ಸಿದ್ಧವಾಗಿದೆ).

(ಆಕ್ಷೇಪ) :- 'ಕಾಮವಾಗಿರುವೆನು' ಎಂದು (ಸ್ಮೃತಿ)ವಚನವಿರುವದರಿಂದ ಇಲ್ಲಿ ಸರ್ವಕಾಮನು ಎಂದು ಬಹುವ್ರೀಹಿಯಾಗಲಾರದಲ್ಲ![2]

(ಪರಿಹಾರ) :- ಹಾಗಲ್ಲ. ಏಕೆಂದರೆ (ಹಾಗಾದರೆ) ಕಾಮವು ಕಾರ್ಯವಾಗಿರುವದರಿಂದ ಶಬ್ದಾದಿಗಳಂತೆ ಈಶ್ವರನೂ ಮತ್ತೊಂದಕ್ಕೆ ಅಧೀನನೆಂದಾಗುವದು.[3] ಆದ್ದರಿಂದ ಸರ್ವಕಾಮವೆಂಬುದು ಇಲ್ಲಿ ಬಹುವ್ರೀಹಿಯಾಗುವಂತೆ ಕಾಮವಾಗಿರುವೆನು ಎಂಬ ಸ್ಮೃತಿಯ ಅರ್ಥವನ್ನು ಹೇಳಬೇಕು.[4]

1. ಆ ಶ್ರುತಿಯಲ್ಲಿ ಪರಮಾತ್ಮನ ತಾದಾತ್ಮ್ಯವನ್ನು ಹೊಂದಿದ ಜ್ಞಾನಿಯನ್ನು ಹೀಗೆಂದು ವರ್ಣಿಸಿದೆ.
2. ಆದ್ದರಿಂದ ಸರ್ವಕಾಮಗಳೂ ಆಗಿರುವವನು ಎಂದು ಸ್ಮೃತಿಗೆ ಅನುಗುಣವಾಗಿ ಅರ್ಥವನ್ನು ಮಾಡಬೇಕಲ್ಲವೆ ? ಎಂದು ಆಕ್ಷೇಪಕನ ಆಶಯ.
3. ಗುಣಗಳಾದ ಶಬ್ದಾದಿಗಳು ದ್ರವ್ಯಾಧೀನವಾಗಿರುವಂತೆ ಕಾಮರೂಪನಾದ ಈಶ್ವರನು ಕಾಮಿಗೆ ಅಧೀನವಾಗಿರುವನೆಂದಾಗುವದು. ಆಗ ಈಶ್ವರನ ಸತ್ತಾಸ್ವಾತಂತ್ರ್ಯಕ್ಕೆ ವಿರೋಧವಾಗುತ್ತದೆ.
4. ಸ್ಮೃತಿಯ ಅರ್ಥವನ್ನೇ ನ್ಯಾಯಯುಕ್ತವಾಗಿರುವ ಶ್ರುತಿಗೆ ಅನುಸಾರವಾಗಿ ಮಾಡಿಕೊಳ್ಳಬೇಕು ; ಧರ್ಮಾವಿರುದ್ಧವಾದ ಕಾಮವು ನನ್ನ ಅನುಗ್ರಹದಿಂದಲೇ ದೊರೆಯುವದರಿಂದ ಅದನ್ನು ನನ್ನ ವಿಭೂತಿ ಎಂದು ಚಿಂತಿಸಬೇಕು ಎಂದು ಗೀತಾವಾಕ್ಯಕ್ಕೆ ಅರ್ಥವನ್ನು ಕಲ್ಪಿಸಬೇಕು - ಎಂದು ಭಾವ. ಸರ್ವಗನ್ಧಃ, ಸರ್ವರಸಃ- ಎಂಬಿವುಗಳಿಗೂ ಇದೇ ಯುಕ್ತಿಯನ್ನು ಜೋಡಿಸಿಕೊಳ್ಳಬೇಕು.

ಸರ್ವಗನ್ಧನು. ಸುಖಕರವಾದ ಎಲ್ಲಾ ಗಂಧಗಳೂ ಇವನಿಗೆ ಇರುತ್ತವೆ. (ಆದ್ದರಿಂದ) ಆ ಇವನು ಸರ್ವಗಂಧನು. ''ಪೃಥಿವಿಯಲ್ಲಿರುವ ಒಳ್ಳೆಯ ಗಂಧವು'' (ಗೀ. ೭-೯) ಎಂಬ ಸ್ಮೃತಿಯಿಂದ (ಇದು ಸಿದ್ಧವಾಗಿದೆ). ರಸಗಳನ್ನೂ ಹೀಗೆಯೇ ತಿಳಿಯಬೇಕು[1] ; ಏಕೆಂದರೆ ಕೆಟ್ಟ ಗಂಧವನ್ನೂ ರಸವನ್ನೂ ಗ್ರಹಿಸುವದು ಪಾಪದ ನಿಮಿತ್ತದಿಂದ ಎಂದು ''ಆದ್ದರಿಂದ ಸುವಾಸನೆಯನ್ನೂ ದುರ್ವಾಸನೆಯನ್ನೂ ಮೂಸುತ್ತದೆ ; ಏಕೆಂದರೆ (ಇದು) ಪಾಪದಿಂದ ಹೊಡೆಯಲ್ಪಟ್ಟಿರುತದೆ'' (೧-೨-೨) ಎಂಬ ಶ್ರುತಿಯಲ್ಲಿ (ಹೇಳಿದೆ). ಈಶ್ವರನಿಗಾದರೋ ಪಾಪದ ಸಂಬಂಧವಿರುವದಿಲ್ಲ ಏಕೆಂದರೆ ಅವಿದ್ಯೆಯೇ ಮುಂತಾದ ದೋಷಗಳು (ಅವನಿಗೆ) ಹೊಂದುವದಿಲ್ಲ.

ಈ ಜಗತ್ತೆಲ್ಲವನ್ನೂ (ಅಭ್ಯಾತ್ತಃ=) ಅಭಿವ್ಯಾಪಿಸಿಕೊಂಡಿರುತ್ತಾನೆ. ('ಅಭ್ಯಾತ್ತಃ' ಎಂಬುದು) ವ್ಯಾಪ್ತಿಯೆಂಬರ್ಥವುಳ್ಳ ಅತ್ (ಧಾತುವಿಗೆ) ಕರ್ತೃರ್ಥದಲ್ಲಿ ಭೂತಕೃತ್ತದ್ಧಯವು (ಬಂದು ಆಗಿರುವ ರೂಪವು).[2]

ಇದರಂತೆ ಅವಾಕಿಯು. ಇದರಿಂದ ಮಾತನಾಡುತ್ತಾರಾದ್ದರಿಂದ (ಇದು) ವಾಕ್ಕು ; ವಾಕ್ಕೇ ವಾಕವು.[3] ಅಥವಾ ವಚಧಾತುವಿಗೆ ಘಞ್ (ಪ್ರತ್ಯಯವು) ಕರಣವೆಂಬರ್ಥದಲ್ಲಿ (ಬಂದು) ವಾಕ(ವೆಂಬ ಶಬ್ದರೂಪವಾಗಿದೆ).[4] ಆ (ವಾಕವು) ಯಾವನಿಗೆ ಇದೆಯೋ ಅವನು ವಾಕಿಯು ; ವಾಕಿಯಲ್ಲದವನು ಅವಾಕಿಯು. ಇಲ್ಲಿ ವಾಕ್ಕನ್ನೂ ಇಲ್ಲವೆಂದಿರುವದು ಉಪಲಕ್ಷಣಕ್ಕಾಗಿ.[5] (ಇದರ ವಿವರ) ; ಗಂಧ, ರಸ - ಮುಂತಾದವುಗಳು (ಇವೆ ಎಂದು) ಶ್ರುತಿಯಲ್ಲಿ ಹೇಳಿರುವದರಿಂದ ಗಂಧಾದಿಗಳನ್ನು ಗ್ರಹಿಸುವದಕ್ಕೆ ಈಶ್ವರನಿಗೆ ಘ್ರಾಣಾದಿಕರಣಗಳು ಇವೆ ಎಂದು ಬಂದೊದಗುತ್ತದೆ ; ಆದ್ದರಿಂದ ವಾಕ್ಕನ್ನು ಇಲ್ಲವೆಂದದ್ದರಿಂದ ಅವುಗಳನ್ನು ಇಲ್ಲವೆಂದಿರುತ್ತದೆ (ಎಂದು ತಿಳಿಯಬೇಕು), ''ಪಾಣಿಪಾದವಿಲ್ಲದೆ ವೇಗವುಳ್ಳವನೂ (ವಸ್ತುಗಳನ್ನು) ಹಿಡಿಯುವವನೂ (ಆಗಿರುತ್ತಾನೆ) ; ಚಕ್ಷುಸ್ಸಿಲ್ಲದೆ ನೋಡುತ್ತಾನೆ.

1. ಅಲ್ಲಿಯೂ ಒಳ್ಳೆಯ ರಸಗಳುಳ್ಳವನು ಎಂದೇ ಅರ್ಥಮಾಡಿಕೊಳ್ಳಬೇಕು.
2. ಕರ್ಮಾರ್ಥವಲ್ಲ, ವ್ಯಾಪಿಸಲ್ಪಟ್ಟವನು ಎಂದು ಅರ್ಥಮಾಡಬಾರದು.
3. ವಾಕ್ಶಬ್ದಕ್ಕೆ ಸ್ವಾರ್ಥದಲ್ಲಿ ಪ್ರತ್ಯಯವು ಬಂದು 'ವಾಕ್' ಎಂಬ ರೂಪವಾಗಿದೆ ಎಂದರ್ಥ.
4. ಆದ್ದರಿಂದ ವಾಕ ಎಂಬ ರೂಪವೇ ನೇರವಾಗಿ ಸಿದ್ಧಿಸಿರುವದರಿಂದ ಸ್ವಾರ್ಥಪ್ರತ್ಯಯವನ್ನು ಸೇರಿಸಿಕೊಳ್ಳಬೇಕಾದದ್ದೇನೂ ಇಲ್ಲ ಎಂದು ಭಾವ.
5. ಮಿಕ್ಕ ಕರಣಗಳೂ ಇಲ್ಲವೆನ್ನುವದಕ್ಕೆ ಹೆಗ್ಗುರುತಾಗಿ ಎಂದರ್ಥ.

ಕರ್ಣವಿಲ್ಲದೆ ಕೇಳುತ್ತಾನೆ'' (ಶ್ವೇ, ೩-೧೯) ಎಂಬ ಮಂತ್ರವರ್ಣವು (ಇದಕ್ಕೆ ಆಧಾರವು).[1]

ಅನಾದರನು, ಎಂದರೆ ಸಂಭ್ರಮವಿಲ್ಲದವನು. ಸಿಕ್ಕದಿರುವದನ್ನು ಪಡೆದುಕೊಳ್ಳುವದಕ್ಕಲ್ಲವೆ, ಆಪ್ತಕಾಮನಲ್ಲದವನಿಗೆ ಸಂಭ್ರಮವಾಗುವದು ? ಆದರೆ ಆಪ್ತಕಾಮನಾಗಿರುವದರಿಂದ ನಿತ್ಯತೃಪ್ತನಾಗಿರುವ ಈಶ್ವರನಿಗೆ (ಹಾಗೆ) ಏತರಲ್ಲಿಯೂ ಸಂಭ್ರಮವಿರುವದಿಲ್ಲ.

(ಉಪನಿಷತ್ತು)

ಏಷ ಮ ಆತ್ಮಾನ್ತರ್ಹೃದಯೇಽಣೀಯಾನ್ ವ್ರೀಹೇರ್ವಾ ಯವಾದ್ವಾ ಸರ್ಷಪಾದ್ ವಾ ಶ್ಯಾಮಾಕಾದ್ ವಾ ಶ್ಯಾಮಾಕತಣ್ಡುಲಾದ್ವೈಷ ಮ ಆತ್ಮಾನ್ತರ್ಹೃದಯೇ ಜ್ಯಾಯಾನ್ ಪೃಥಿವ್ಯಾ ಜ್ಯಾಯಾನನ್ತರಿಕ್ಷಾಜ್ಜ್ಯಾಯಾನ್ ದಿವೋ ಜ್ಯಾಯಾನೇಭ್ಯೋ ಲೋಕೇಭ್ಯಃ ॥೩॥

೩. ಹೃದಯದೊಳಗೆ (ಇರುವ) ಈತನು ನನ್ನ ಆತ್ಮನು. ಬತ್ತದಕಾಳಿಗಿಂತಲೂ ಜವೆಯಕಾಳಿಗಿಂತಲೂ ಸಾಸುವೆಯಕಾಳಿಗಿಂತಲೂ ಸಾವೆಗಿಂತಲೂ ಅಥವಾ ಸಾವೆಯಕ್ಕಿಯಕಾಳಿಗಿಂತಲೂ ಅಣುವಾಗಿರುವನು. ಈ ನನ್ನ ಹೃದಯದೊಳಗೆ (ಇರುವ) ಈ ನನ್ನ ಆತ್ಮನು ಪೃಥಿವಿಗಿಂತಲೂ ದೊಡ್ಡವನು, ಅಂತರಿಕ್ಷಕ್ಕಿಂತಲೂ ದೊಡ್ಡವನು, ದ್ಯುಲೋಕಕ್ಕಿಂತಲೂ ದೊಡ್ಡವನು, ಈ ಲೋಕಗಳಿಗಿಂತಲೂ ದೊಡ್ಡವನು.

ಮನೋಮಯತ್ವಾದಿಗುಣಕಬ್ರಹ್ಮವನ್ನು ಹೃದಯದಲ್ಲಿ ಉಪಾಸನೆಮಾಡಬೇಕು

(ಭಾಷ್ಯ)

೨೫೫. ಏಷ ಯಥೋಕ್ತಗುಣೋ ಮೇ ಮಮ **ಆತ್ಮಾನ್ತರ್ಹೃದಯೇ** ಹೃದಯಪುಣ್ಡರೀಕಸ್ಯಾನ್ತರ್ಮಧ್ಯೇ **ಅಣೀಯಾನ್** ಅಣುತರೋ **ವ್ರೀಹೇರ್ವಾ ಯವಾದ್ವಾ** ಇತ್ಯಾದಿ ಅತ್ಯನ್ತಸೂಕ್ಷ್ಮತ್ವಪ್ರದರ್ಶನಾರ್ಥಮ್ । **ಶ್ಯಾಮಾಕಾದ್ ವಾ**

---

1. ಸರ್ವಕರಣಗಳಲ್ಲಿರುವ ಶಕ್ತಿಯೂ ಆತ್ಮಚೈತನ್ಯವೇ ಆಗಿರುವದರಿಂದಲೂ ಸರ್ವಕರಣಗಳನ್ನೂ ಬೆಳಗುವ ಚೈತನ್ಯಸ್ವರೂಪನಾದ ಆತ್ಮನು ಅರಿಯುವದಕ್ಕೆ ಬೇರೆ ಕರಣಗಳು ಬೇಕಿರುವದಿಲ.

ಶ್ಯಾಮಾಕತಣ್ಡುಲಾದ್ ವಾ ಇತಿ ಪರಿಚ್ಛಿನ್ನಪರಿಮಾಣಾತ್ ಅಣೀಯಾನ್ ಇತ್ಯುಕ್ತೇ ಅಣುಪರಿಮಾಣತ್ವಂ ಪ್ರಾಪ್ತಮ್ ಆಶಙ್ಕ್ಯ[1] ಅತಃ (?) ತತ್ಪ್ರತಿಷೇಧಾಯ ಆರಭತೇ। ಏಷ ಮ ಆತ್ಮಾ ಅನ್ತರ್ಹೃದಯೇ ಜ್ಯಾಯಾನ್ ಪೃಥಿವ್ಯಾ ಇತ್ಯಾದಿನಾ । ಜ್ಯಾಯಃ ಪರಿಮಾಣಾಚ್ಚ ಜ್ಯಾಯಸ್ತ್ವಂ ದರ್ಶಯನ್ ಅನನ್ತಪರಿಮಾಣತ್ವಂ ದರ್ಶಯತಿ ॥

(ಭಾಷ್ಯಾರ್ಥ)

ಮೇಲೆ ಹೇಳಿರುವ ಗುಣಗಳುಳ್ಳ ಈ ನನ್ನ ಆತ್ಮನು ಹೃದಯದೊಳಗೆ[2] ಹೃದಯಪುಂಡರೀಕದ ಒಳಗೆ, ನಡುವೆ (ಇರುತ್ತಾನೆ) ; ಬತ್ತದ ಕಾಳಿಗಿಂತಲೂ ಜವೆಯ ಕಾಳಿಗಿಂತಲೂ ಅಣುವಾಗಿರುವನು - ಎಂದು ಮುಂತಾಗಿ ಹೇಳಿರುವದು (ಇವನು) ಅತ್ಯಂತಸೂಕ್ಷ್ಮನೆಂಬುದನ್ನು ತಿಳಿಸುವದಕ್ಕೆ.

'ಸಾವೆಗಿಂತಲೂ ಸಾವೆಯಕ್ಕಿಯ ಕಾಳಿಗಿಂತಲೂ' ಎಂದು ಅಳತೆಯ ಪರಿಮಾಣವುಳ್ಳದ್ದಕ್ಕಿಂತಲೂ ಅಣು ಎಂದದ್ದರಿಂದ (ಇವನು) ಅಣುಪರಿಮಾಣವುಳ್ಳವನು ಎಂದು ಬಂದೊದಗಿತೆಂದು ಆಶಂಕಿಸಿ ಅದನ್ನು ಅಲ್ಲವೆನ್ನುವದಕ್ಕಾಗಿ 'ಈ ಹೃದಯದೊಳಗಿನ ಈ ನನ್ನ ಆತ್ಮನು ಪೃಥಿವಿಗಿಂತಲೂ ದೊಡ್ಡವನು' ಎಂದು ಮುಂತಾಗಿ(ರುವ ಗ್ರಂಥವನ್ನು) ಆರಂಭಿಸಿರುತ್ತದೆ. ದೊಡ್ಡ ಪರಿಮಾಣದ್ದಕ್ಕಿಂತಲೂ ದೊಡ್ಡವನು ಎಂದು ತಿಳಿಸಿದ್ದರಿಂದ ಅನಂತಪರಿಮಾಣದವನು ಎಂದು ತಿಳಿಸಿದಂತಾಯಿತು.[3]

(ಉಪನಿಷತ್ತು)

ಸರ್ವಕರ್ಮಾ ಸರ್ವಕಾಮಃ ಸರ್ವಗನ್ಧಃ ಸರ್ವರಸಃ ಸರ್ವಮಿದಮಭ್ಯಾತ್ತೋಽವಾಕ್ಯನಾದರ ಏಷ ಮ ಆತ್ಮಾನ್ತರ್ಹೃದಯ ಏತದ್ಬ್ರಹ್ಮೈತಮಿತಃ ಪ್ರೇತ್ಯಾಭಿಸಂಭವಿತಾಸ್ಮೀತಿ ಯಸ್ಯ ಸ್ಯಾದದ್ಧಾ ನ ವಿಚಿಕಿತ್ಸಾಽಸ್ತೀತಿ ಹ ಸ್ಮಾಽಽಹ ಶಾಣ್ಡಿಲ್ಯಃ ಶಾಣ್ಡಿಲ್ಯಃ ॥೪॥

---

1. ಇಲ್ಲಿ ಭಾಷ್ಯಮೂಲವು ಏನೋ ಹೆಚ್ಚುಕಡಿಮೆಯಾಗಿರುವಂತೆ ಕಾಣುತ್ತದೆ. 'ಪ್ರಾಪ್ತಮಾಶಙ್ಕ್ಯ ತತ್ಪ್ರತಿಷೇಧಾಯ' ಎಂದೋ 'ಪ್ರಾಪ್ತಮಿತ್ಯಾಶಙ್ಕ್ಯೇತ । ಅತಃ' ಎಂದೋ ಇದ್ದರೆ ಸರಳವಾಗಿ ಅನ್ವಯವಾಗುವದು.
2. ಸರ್ವಗತನಾದ ಪರಮಾತ್ಮನನ್ನು ಹೃದಯದಲ್ಲಿಯೇ ಉಪಾಸನೆಮಾಡಿ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಇಲ್ಲಿ ಹೇಳಿದೆ ; ಆದ್ದರಿಂದ ಇಲ್ಲಿ ಹೃದಯಸಂಬಂಧದಿಂದ ಇವನು ಜೀವಾತ್ಮನು ಎಂದು ಶಂಕಿಸುವದಕ್ಕಾಗುವದಿಲ್ಲ.
3. ಏಕೆಂದರೆ ಪರಿಚ್ಛಿನ್ನವಾದ ಒಬ್ಬನೇ ಅಣುವೂ ದೊಡ್ಡವನೂ ಆಗಿರುವದು ಸಾಧ್ಯವಿಲ್ಲ.

೪. ಸರ್ವಕರ್ಮನು, ಸರ್ವಕಾಮನು, ಸರ್ವಗಂಧನು, ಸರ್ವರಸನು, ಇದೆಲ್ಲದರಲ್ಲಿಯೂ ಅಭ್ಯಾತ್ತನಾಗಿರುವನು, ಅವಾಕಿ, ಅನಾದರನು, ಹೃದಯದೊಳಗಿರುವ ಇವನು ನನ್ನ ಆತ್ಮನು. ಇದೇ ಬ್ರಹ್ಮವು, ಇವನನ್ನು ಇಲ್ಲಿಂದ ಹೊರಟುಹೋಗಿ ಸೇರುವವನಾಗಿರುವೆನು- ಎಂದು ಯಾವನಿಗೆ ನಿಶ್ಚಯವಾಗಿರುವದೋ, ಸಂಶಯವಿರುವದಿಲ್ಲವೋ, (ಅವನಿಗೇ ಫಲವು) ಎಂದು ಹೇಳುತ್ತಾನೆ, ಶಾಂಡಿಲ್ಯನು, ಶಾಂಡಿಲ್ಯನು.

ಗುಣಗಳಿಂದೊಡಗೂಡಿಯೇ ಬ್ರಹ್ಮವನ್ನು ಉಪಾಸನೆಮಾಡಬೇಕು

(ಭಾಷ್ಯ)

೨೫೬. ಮನೋಮಯ ಇತ್ಯಾದಿನಾ ಜ್ಯಾಯಾನೇಭ್ಯೋ ಲೋಕೇಭ್ಯಃ ಇತ್ಯನ್ತೇನ[1] ಯಥೋಕ್ತಗುಣಲಕ್ಷಣ ಈಶ್ವರೋ ಧ್ಯೇಯೋ ನ ತು ತದ್ಗುಣವಿಶಿಷ್ಟ ಏವ। ಯಥಾ ರಾಜಪುರುಷಮ್ ಆನಯ, ಚಿತ್ರಗುಂ ವಾ ಇತ್ಯುಕ್ತೇ ನ ವಿಶೇಷಣಸ್ಯಾಪಿ ಆನಯನೇ ವ್ಯಾಪ್ರಿಯತೇ ತದ್ವತ್ ಇಹಾಪಿ ಪ್ರಾಪ್ತಮ್ । ಅತಃ ತನ್ನಿವೃತ್ತ್ಯರ್ಥಂ ಸರ್ವಕರ್ಮಾ ಇತ್ಯಾದಿ ಪುನರ್ವಚನಮ್ । ತಸ್ಮಾತ್ ಮನೋಮಯತ್ವಾದಿಗುಣವಿಶಿಷ್ಟ ಏವ ಈಶ್ವರೋ ಧ್ಯೇಯಃ। ಅತ ಏವ ಷಷ್ಠಸಪ್ತಮಯೋರಿವ 'ತತ್ತ್ವಮಸಿ' (೬-೮-೭) 'ಆತ್ಮೈವೇದಂ ಸರ್ವಮ್' (೭-೨೫-೨) ಇತಿ ನೇಹ ಸ್ವಾರಾಜ್ಯೇ ಅಭಿಷಿಞ್ಚತಿ । 'ಏಷ ಮ ಆತ್ಮೈತದ್ ಬ್ರಹ್ಮೈತಮಿತಃ ಪ್ರೇತ್ಯಾಭಿಸಂಭವಿತಾಽಸ್ಮಿ' ಇತಿ ಲಿಙ್ಗಾತ್ । ನ ತು ಆತ್ಮಶಬ್ದೇನ ಪ್ರತ್ಯಗಾತ್ಮೈವೋಚ್ಯತೇ । 'ಮಮ' ಇತಿ ಷಷ್ಠ್ಯಾಃ ಸಂಬನ್ಧಾರ್ಥ ಪ್ರತ್ಯಾಯಕತ್ವಾತ್ । ಏತಮಭಿಸಂಭವಿತಾಸ್ಮೀತಿ ಚ ಕರ್ಮಕರ್ತೃತ್ವನಿರ್ದೇಶಾತ್ । ನನು ಷಷ್ಠೇಽಪಿ ''ಅಥ ಸಂಪತ್ಸ್ಯೇ'' (೬-೧೪-೨) ಇತಿ ಸತ್ಸಂಪತ್ತೇಃ ಕಾಲಾನ್ತರಿತತ್ವಂ ದರ್ಶಯತಿ । ನ । ಆರಬ್ಧಸಂಸ್ಕಾರಶೇಷಸ್ಥಿತ್ಯರ್ಥಪರತ್ವಾತ್ ನ ಕಾಲಾನ್ತರಿತಾರ್ಥತಾ । ಅನ್ಯಥಾ ತತ್ತ್ವಮಸೀತ್ಯೇತಸ್ಯ ಅರ್ಥಸ್ಯ ಬಾಧಪ್ರಸಙ್ಗಾತ್ । ಯದ್ಯಪಿ ಆತ್ಮಶಬ್ದಸ್ಯ ಪ್ರತ್ಯಗರ್ಥತ್ವಂ 'ಸರ್ವಂ ಖಲ್ವಿದಂ ಬ್ರಹ್ಮ' ಇತಿ ಪ್ರಕೃತಮ್ 'ಏಷ ಮ ಆತ್ಮಾಽನ್ತರ್ಹೃದಯೇ ಏತದ್ ಬ್ರಹ್ಮ' ಇತ್ಯುಚ್ಯತೇ, ತಥಾಪಿ ಅನ್ತರ್ಧಾನಮ್ ಈಷದ್ ಅಪರಿತ್ಯಜ್ಯೈವ ಏತಮಾತ್ಮಾನಮ್ ಇತೋಽಸ್ಮಾತ್ ಶರೀರಾತ್ ಪ್ರೇತ್ಯ ಅಭಿಸಂಭವಿತಾಽಸ್ಮಿ ಇತ್ಯುಕ್ತಮ್ ॥

---

1. ಅಚ್ಚಿನ ಪುಸ್ತಕದಲ್ಲಿ ಈ ಭಾಗವನ್ನು ಹಿಂದಿನ ಪ್ರಘಟ್ಟಕ್ಕೆ ಸೇರಿಸಿದೆಯಾದರೂ ಇದು ಇಲ್ಲಿಗೆ ಹೊಂದುತ್ತದೆ; ಆ॥ ಗಿ॥ ಟೀಕೆಯೂ ಇದಕ್ಕೇ ಅನುಗುಣವಾಗಿದೆ.

(ಭಾಷ್ಯಾರ್ಥ)

'ಮನೋಮಯನು' ಎಂದು ಮೊದಲುಮಾಡಿ 'ಈ ಲೋಕಗಳಿಗಿಂತಲೂ ದೊಡ್ಡವನು - ಎಂಬವರೆಗಿನ (ಗ್ರಂಥದಿಂದ) ಮೇಲೆ ಹೇಳಿರುವ ಗುಣಗಳ ಲಕ್ಷಣವುಳ್ಳ ಈಶ್ವರನನ್ನು (ಮಾತ್ರ)[1] ಧ್ಯಾನಮಾಡಬೇಕೇ ಹೊರತು ಆ ಗುಣಗಳಿಂದೊಡಗೂಡಿಯೇ ಇರುವ ಈಶ್ವರನನ್ನಲ್ಲ. ಹೇಗೆ 'ರಾಜಪುರುಷನನ್ನು ಕರೆದುಕೊಂಡು ಬಾ' ಅಥವಾ 'ಚಿತ್ರಗುವನ್ನು ಕರೆದುಕೊಂಡು ಬಾ' ಎಂದರೆ ವಿಶೇಷವನ್ನು ಕರೆದುಕೊಂಡು ಬರುವದರಲ್ಲಿ ವ್ಯಾಪೃತನಾಗುವದಿಲ್ಲ[2]. ಅದರಂತೆ ಇಲ್ಲಿಯೂ (ಎಂದು) ಬಂದೊದಗುತ್ತದೆ. ಆದ್ದರಿಂದ ಆ (ಶಂಕೆಯನ್ನು) ತೊಲಗಿಸುವದಕ್ಕಾಗಿ 'ಸರ್ವಕರ್ಮನು' ಎಂದು ಮುಂತಾದದ್ದನ್ನು ಮತ್ತೊಂದು ಸಲ ಹೇಳಿರುತ್ತದೆ. ಆದ್ದರಿಂದ ಮನೋಮಯತ್ವಾದಿಗುಣವಿಶಿಷ್ಟನಾದ ಈಶ್ವರನನ್ನೇ ಧ್ಯಾನಮಾಡಬೇಕು.[3]

ಆದ್ದರಿಂದಲೇ[4] ಆರನೆಯ ಏಳನೆಯ ಅಧ್ಯಾಯಗಳಲ್ಲಿ (ಮಾಡುವ ಹಾಗೆ) ''ತತ್ತ್ವಮಸಿ'' (ಅದೇ ನೀನಾಗಿರುವೆ, ೬-೮-೭), 'ಆತ್ಮೈವೇದಂ ಸರ್ವಮ್' (ಇದೆಲ್ಲವೂ ಆತ್ಮನೇ, ೭-೨೫-೨) ಎಂದು ಇಲ್ಲಿ ಸ್ವಾರಾಜ್ಯದಲ್ಲಿ ಅಭಿಷೇಕಮಾಡಿರುವದಿಲ್ಲ.[5] 'ಇವನು ನನ್ನ ಆತ್ಮನು, ಇದು ಬ್ರಹ್ಮವು, ಇವನನ್ನು ಇಲ್ಲಿಂದ ಹೊರಟುಹೋದಬಳಿಕ ಸೇರಿಕೊಳ್ಳುವವನಾಗಿರುವೆನು' ಎಂಬ ಲಿಂಗದಿಂದ (ಹೀಗೆಂದು ಗೊತ್ತಾಗುತ್ತದೆ). ಇಷ್ಟೇ ಹೊರತು 'ಆತ್ಮ' ಎಂಬ ಶಬ್ದದಿಂದ

---

1. ಗುಣಗಳನ್ನು ಬಿಟ್ಟು, ಆ ಗುಣಗಳಿಂದ ಉಪಲಕ್ಷಿತನಾದ ಈಶ್ವರನನ್ನು ಮಾತ್ರ ಎಂದರ್ಥ. 'ಕಾಗೆಕೂತಿರುವಮನೆ' ಎಂದು ಮನೆಯ ಗುರುತಿಗಾಗಿ ಕಾಗೆಯನ್ನು ತೋರಿಸುವಂತೆ ಇಲ್ಲಿ ಗುಣಗಳನ್ನು ಈಶ್ವರನ ಗುರುತಿಗಾಗಿ ಹೇಳಿದೆ ಎಂದು ಪೂರ್ವಪಕ್ಷಿಯ ಭಾವ.
2. 'ರಾಜಪುರುಷನನ್ನು ಕರೆದುಕೊಂಡು ಬಾ' ಎಂದರೆ ವಿಶೇಷವಾದ ರಾಜನನ್ನು ಕರೆತರುವದಕ್ಕೆ ಹೋಗುವದಿಲ್ಲ, ಅವನ ಭೃತ್ಯನನ್ನುಮಾತ್ರ ಕರೆಯುವದಕ್ಕೆ ಹೋಗುತ್ತಾರೆ ; ಇದರಂತೆ ಚಿತ್ರಗುವನ್ನು ಕರೆದುಕೊಂಡು ಬಾ ಎಂದರೂ ಹಂಡಹಸುವನ್ನು ತರುವದಕ್ಕೆ ಹೋಗುವದಿಲ್ಲ, ಹಸುವಿನ ಒಡೆಯನನ್ನೇ ಕರೆತರುವದಕ್ಕೆ ಹೋಗುತ್ತಾರೆ.
3. ಹೀಗೆಂದು ವಿಧಿಸುವದಕ್ಕಾಗಿಯೇ ಮತ್ತೊಮ್ಮೆ ಗುಣಗಳನ್ನು ಇಲ್ಲಿ ಹೇಳಿದೆ ಎಂದಭಿಪ್ರಾಯ.
4. ಸಗುಣಬ್ರಹ್ಮವನ್ನು ವಿಧಿಸಿರುವದರಿಂದಲೇ.
5. 'ಆದು ನೀನಾಗಿರುವೆ' ಎಂದರೆ ಈಗಲೇ ಆಗಿರುವೆ ಎಂದು ಅಭಿಪ್ರಾಯ, ಮುಂದೆ ಸತ್ತಬಳಿಕ ಆಗುವೆಯಂದಲ್ಲ, 'ಇದೆಲ್ಲವೂ ಆತನೇ' ಎಂದರೆ ಈಗಲೇ ಆತನು ಎಂದರ್ಥ ; ಮುಂದೆ ಎಂದಾದರೂ ಆಗುವದು ಎಂದಲ್ಲ.

(ನೇರಾಗಿ) ಪ್ರತ್ಯಗಾತ್ಮನನ್ನೇ ಹೇಳಿಲ್ಲ[1] ; ಏಕೆಂದರೆ ನನ್ನ ಎಂಬ ಷಷ್ಠೀವಿಭಕ್ತಿಯು ಸಂಬಂಧವೆಂಬ ಅರ್ಥವನ್ನು ತಿಳಿಸುತ್ತದೆ[2] ; 'ಇವನನ್ನು ಸೇರಿಕೊಳ್ಳುವವನಾಗಿರುವೆನು' ಎಂದು ಕರ್ಮಕರ್ತೃನಿರ್ದೇಶವೂ ಇಲ್ಲಿದೆ.[3]

(ಆಕ್ಷೇಪ):- ಆರನೆಯ (ಅಧ್ಯಾಯ)ದಲ್ಲಿಯೂ "ಆಗಲೆ ಸೇರಿಕೊಳ್ಳುವೆ" (೬-೧೪-೨) ಎಂದು ಕಾಲವ್ಯವಧಾನವನ್ನು ಹೇಳಿದೆಯಲ್ಲ ![4]

(ಪರಿಹಾರ):- ಹಾಗಲ್ಲ. ಏಕೆಂದರೆ ಪ್ರಾರಬ್ಧ(ಕರ್ಮದ) ಸಂಸ್ಕಾರದ ಶೇಷವು ಇರುತ್ತದೆ ಎಂಬುದರಲ್ಲಿ ತಾತ್ಪರ್ಯವಿರುವದರಿಂದ ಕಾಲವ್ಯವಧಾನವೆಂಬರ್ಥವು (ಆ ವಾಕ್ಯ)ಕ್ಕಿಲ್ಲ.[5] ಹೀಗಿಲ್ಲದಿದ್ದರೆ 'ಅದೇ ನೀನಾಗಿರುವೆ' (೬-೮-೭) ಎಂಬೀ ಅರ್ಥವು ಬಾಧಿತವಾಗಬೇಕಾದೀತು.[6] ಆತ್ಮಶಬ್ದಕ್ಕೆ ಪ್ರತ್ಯಗಾತ್ಮನೇ (ಮುಖ್ಯವಾದ) ಅರ್ಥವೆಂಬದೂ, (ಇಲ್ಲಿ) 'ಇದೆಲ್ಲವೂ ಬ್ರಹ್ಮವೇ' ಎಂದು ಪ್ರಕೃತವಾಗಿರುವದೂ 'ಹೃದಯದೊಳಗಿರುವ ಇವನು ನನ್ನ ಆತ್ಮನು, ಇದೇ ಬ್ರಹ್ಮವು' ಎಂದೂ

---

1. ನಿರುಪಾಧಿಕನಾದ ಪ್ರತ್ಯಗಾತ್ಮನೇ ಪರಮಾತ್ಮನು ; ಈ ಐಕ್ಯವನ್ನೇ ಇಲ್ಲಿ ಆತ್ಮನೆಂಬ ಶಬ್ದದಿಂದ ಪ್ರತಿಪಾದಿಸಿಲ್ಲ.
2. ಆತ್ಮಶಬ್ದದಿಂದ ಪ್ರತ್ಯಗಾತ್ಮನನ್ನೇ ಹೇಳಿದ್ದರೆ 'ನನ್ನ ಆತ್ಮನು' ಎಂದು ಸಂಬಂಧ ವಾಚಕವಾದ ಷಷ್ಠೀವಿಭಕ್ತಿಯನ್ನು ಪ್ರಯೋಗಿಸುತ್ತಿರಲಿಲ್ಲ - ಎಂದು ಭಾವ.
3. ಶರೀರವು ಬಿದ್ದಬಳಿಕ ಪರಮಾತ್ಮನನ್ನು ಸೇರುವೆ ಎಂದು ಜೀವನನ್ನು ಕರ್ತೃವಾಗಿಯೂ ಬ್ರಹ್ಮವನ್ನು ಪ್ರಾಪ್ತಿಕರ್ಮವನ್ನಾಗಿಯೂ ಹೇಳಿದೆ. ಆದ್ದರಿಂದ 'ಇವನೇ ನಿನ್ನ ಆತ್ಮನಾದ ಅಂತರ್ಯಾಮಿಯು' ಎಂದು ಬೃಹದಾರಣ್ಯಕದಲ್ಲಿ (ಬೃ. ೩-೬-೩) ಹೇಳಿರುವಂತೆ ನನ್ನ ಎಂಬ ಷಷ್ಠಿಯು ಗೌಣಾರ್ಥಕವೆಂದು ಕಲ್ಪಿಸುವದಕ್ಕೆ ಬರುವದಿಲ್ಲ.
4. ಶರೀರವು ಬಿದ್ದಬಳಿಕ ಪರಮಾತ್ಮನನ್ನು ಸೇರುವೆ - ಎಂದು ಅಲ್ಲಿಯೂ ಕಾಲಾಂತರದಲ್ಲಿಯೇ ಆತ್ಮಪ್ರಾಪ್ತಿಯನ್ನು ಹೇಳಿದೆಯಲ್ಲ ! ಆದ್ದರಿಂದ ಮೋಕ್ಷವು ಕಾಲಾಂತರ ಪ್ರಾಪ್ಯವೆಂದೇ ಆಗಲಿ ! - ಎಂದು ಭಾವ.
5. ಪ್ರಾರಬ್ಧಕರ್ಮಸಂಸ್ಕಾರವು ಕೆಲವು ಕಾಲವಿರುತ್ತದೆಯಾದರೂ ಜ್ಞಾನಿಗೆ ಮತ್ತೂ ದೇಹಾಂತರಪ್ರಾಪ್ತಿಯಿಲ್ಲ ; ಏಕೆಂದರೆ ಅವನು ಪರಮಾತ್ಮನೇ ಆಗಿರುತ್ತಾನೆ ಎಂಬುದರಲ್ಲಿ ಶ್ರುತಿಗೆ ತಾತ್ಪರ್ಯ. ಆದ್ದರಿಂದ ಅದೇ ಶ್ರುತಿಗೆ ಕಾಲಾಂತರದಲ್ಲಿ ಮುಕ್ತಿಯನ್ನು ಹೇಳುವದರಲ್ಲಿ ತಾತ್ಪರ್ಯವಿರಲಾರದು. ಈ ಪ್ರಾರಬ್ಧಸಂಸ್ಕಾರವೂ ಜ್ಞಾನಬಾಧಿತವಾಗಿಯೇ ಇರುತ್ತದೆ - ಎಂಬುದಕ್ಕೆ ಸೂ. ಭಾ. ೪-೧-೧೫ (ಭಾ. ಭಾ ೫೩೨)ನ್ನು ನೋಡಿ.
6. ಆದರೆ 'ತತ್ತ್ವಮಸಿ' ಎಂದು ತಾತ್ಪರ್ಯದಿಂದ ಶ್ರುತಿಯು ಮತ್ತೆ ಮತ್ತೆ ಹೇಳುತ್ತದೆ ; ಆದ್ದರಿಂದ ಈ ವಾಕ್ಯವನ್ನು ಕಾಲಾಂತರಮುಕ್ತಿಪರವೆಂದು ಹೇಳಿ ಆ ವಾಕ್ಯದರ್ಥವನ್ನು ಬಾಧಿಸುವದು ಯುಕ್ತವಲ್ಲ.

ಹೇಳಿದೆಯೆಂಬುದೂ (ನಿಜ), ಆದರೂ ಒಂದಿಷ್ಟು ವ್ಯವಧಾನವನ್ನೂ ಬಿಡದೆ (ಇಟ್ಟುಕೊಂಡೇ) 'ಈ ಆತ್ಮನನ್ನು ಈ ಶರೀರದಿಂದ ಹೊರಟುಹೋಗಿ ಸೇರುವವನಿರುವೆನು' ಎಂದು ಹೇಳಿರುತ್ತದೆ.[1]

ಸಾಕ್ಷಾತ್ಕಾರವು ಫಲಪ್ರಾಪ್ತಿಗೆ ಅವಶ್ಯ

(ಭಾಷ್ಯ)

೨೫೭. ಯಥಾಕ್ರತುರೂಪಸ್ಯ ಆತ್ಮನಃ ಪ್ರತಿಪತ್ತಾಸ್ಮಿ ಇತಿ ಯಸ್ಯೈವಂವಿದಃ ಸ್ಯಾತ್ ಭವೇತ್ ಅದ್ಧಾ ಸತ್ಯಮ್ ಏವಮಹಂ ಪ್ರೇತ್ಯ ಏವಂ ನ ಸ್ಯಾಮ್ ಇತಿ ನ ಚ ವಿಚಿಕಿತ್ಸಾ ಅಸ್ತಿ ಇತಿ ಏತಸ್ಮಿನ್ನರ್ಥೇ ಕ್ರತುಫಲಸಂಬನ್ಧೇ ಸ ತಥೈವ ಈಶ್ವರಭಾವಂ ಪ್ರತಿಪದ್ಯತೇ ವಿದ್ವಾನ್ ಇತ್ಯೇತದಾಹ ಸ್ಮ ಉಕ್ತವಾನ್ ಕಿಲ ಶಾಣ್ಡಿಲ್ಯೋ ನಾಮ ಋಷಿಃ। ದ್ವಿರಭ್ಯಾಸ ಆದರಾರ್ಥಃ॥

(ಭಾಷ್ಯಾರ್ಥ)

ಕ್ರತುವಿಗೆ ಅನುರೂಪವಾಗಿರುವ ಆತ್ಮನನ್ನು ಸೇರುವವನಾಗಿದ್ದೇನೆ - ಎಂದು ಹೀಗೆ ಉಪಾಸನೆಮಾಡಿರುವ ಯಾವನಿಗೆ ಸತ್ಯವಾಗಿಯೂ ನಾನು (ಇಲ್ಲಿಂದ) ಹೋದ ಬಳಿಕ ಹೀಗೆ ಆಗಿಯೇತೀರುವೆನು - ಎಂಬ (ನಿಶ್ಚಯವಿರುವದೋ), ಆಗದೆ ಇರಲೂಬಹುದು - ಎಂಬ ಸಂಶಯವೂ ಇರುವದಿಲ್ಲವೋ, (ಅವನಿಗೇ ಈ ಫಲವು) ಎಂದು ಈ ಕ್ರತುಫಲಸಂಬಂಧವಿಷಯದಲ್ಲಿ, ಆ (ಉಪಾಸಕನು) ಹಾಗೆಯೇ ಈಶ್ವರಸ್ವರೂಪವನ್ನು ಹೊಂದುವನು - ಎಂಬುದನ್ನು, ಶಾಂಡಿಲ್ಯನೆಂಬ ಋಷಿಯು (ಆಹ ಸ್ಮ=ಉಕ್ತವಾನ್ ಕಿಲ) ಹೇಳಿದನಂತೆ. (ಶಾಂಡಿಲ್ಯ ಎಂಬ ಮಾತನ್ನು) ಎರಡು ಸಲ ಹೇಳಿರುವದು ಆದರಕ್ಕಾಗಿ.

1. ಇದರಲ್ಲಿಯೇ ಶ್ರುತಿಗೆ ತಾತ್ಪರ್ಯವಿದೆಯಾದ್ದರಿಂದ ಹಿಂದೆ ಹೇಳಿರುವ ಆತ್ಮ, ಬ್ರಹ್ಮ-ಮುಂತಾದ ಶಬ್ದಗಳು ಮುಖ್ಯಾರ್ಥವನ್ನು ಪ್ರತಿಪಾದಿಸುವದಕ್ಕೆ ಬಂದಿಲ್ಲವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಕ್ರಮಮುಕ್ತಿಯಿಂದ ಪಡೆಯಬೇಕಾಗಿರುವ ಪರಮಾತ್ಮನನ್ನೇ ಆತ್ಮ, ಬ್ರಹ್ಮ - ಎಂಬ ಶಬ್ದಗಳಿಂದ ಹೇಳಿದೆಯೆಂದೂ ಸೂಕ್ಷ್ಮಶರೀರ ವಿಶಿಷ್ಟಜೀವನೇ ಆ ಪರಮಾತ್ಮನನ್ನು ಕಾಲಾಂತರದಲ್ಲಿ ಸೇರುತ್ತಾನೆಂದು ಹೇಳಿದೆ ಎಂದೂ ಕಲ್ಪಿಸಬೇಕು ಎಂದಭಿಪ್ರಾಯ.

ಮೂರನೆಯ ಅಧ್ಯಾಯ - ಹದಿನೈದನೆಯ ಖಂಡ

(ಪುತ್ರನ ಆಯುಸ್ಸಿಗಾಗಿ ಉಪಾಸನೆ)

ಕೋಶವಿಜ್ಞಾನ

(ಉಪನಿಷತ್ತು)

ಅನ್ತರಿಕ್ಷೋದರಃ ಕೋಶೋ ಭೂಮಿಬುಧ್ನೋ ನ ಜೀರ್ಯತಿ ದಿಶೋ ಹ್ಯಸ್ಯ ಸ್ರಕ್ತಯೋ ದ್ಯೌರಸ್ಯೋತ್ತರಂ ಬಿಲಗ್ಂ ಸ ಏಷ ಕೋಶೋ ವಸುಧಾನಸ್ತಸ್ಮಿನ್ ವಿಶ್ವಮಿದಗ್ಂ ಶ್ರಿತಮ್ ॥೧॥

೧. ಅಂತರಿಕ್ಷವೇ ಉದರವೂ ಭೂಮಿಯೇ ತಳವೂ ಆಗಿರುವ ಕೋಶವು ಹಳತಾಗುವದಿಲ್ಲ. ದಿಕ್ಕುಗಳು ಇದರ ಸ್ರಕ್ತಿಗಳು, ದ್ಯುಲೋಕವು ಇದರ ಮೇಲಿನ ಬಿಲವು, ಆ ಈ ಕೋಶವು ವಸುಧಾನವು. ಅದರಲ್ಲಿ ಇವೆಲ್ಲವೂ ಶ್ರಿತವಾಗಿರುತ್ತದೆ.

ಗ್ರಂಥಸಂಬಂಧ

(ಭಾಷ್ಯ)

೨೫೮. ಅಸ್ಯ ಕುಲೇ ವೀರೋ ಜಾಯತೇ ಇತ್ಯುಕ್ತಮ್ । ನ ವೀರಜನ್ಮಮಾತ್ರಂ ಪಿತುಸ್ತ್ರಾಣಾಯ । ''ತಸ್ಮಾತ್ ಪುತ್ರಮನುಶಿಷ್ಟಂ ಲೋಕ್ಯಮಾಹುಃ'' (ಬೃ. ೧-೫-೧೭) ಇತಿ ಶ್ರುತ್ಯನ್ತರಾತ್ । ಅತಃ ತದ್ದೀರ್ಘಾಯುಷ್ಟ್ವಂ ಕಥಂ ಸ್ಯಾತ್ ಇತ್ಯೇವಮರ್ಥಂ ಕೋಶವಿಜ್ಞಾನಾರಮ್ಭಃ । ಅಭ್ಯರ್ಹಿತವಿಜ್ಞಾನವ್ಯಪಜಾತ್ ಅನನ್ತರಮೇವ ನೋಕ್ತಮ್ । ತದಿದಾನೀಮೇವ ಆರಭ್ಯತೇ ॥

(ಭಾಷ್ಯಾರ್ಥ)

'ಇವನ ಕುಲದಲ್ಲಿ ವೀರನು ಹುಟ್ಟುತ್ತಾನೆ' (೨-೧೩-೬) ಎಂದು (ಹಿಂದೆ) ಹೇಳಿದೆಯಷ್ಟೆ, ವೀರನು ಹುಟ್ಟಿದಮಾತ್ರಕ್ಕೆ ತಂದೆಯನ್ನು ಕಾಪಾಡಿದಂತಾಗುವದಿಲ್ಲ. ಏಕೆಂದರೆ, ''ಆದ್ದರಿಂದ ಅನುಶಾಸನವನ್ನು ಮಾಡಿಸಿಕೊಂಡಿರುವ ಮಗನೇ ಲೋಕ್ಯನು ಎನ್ನುತ್ತಾರೆ''[1] (ಬೃ. ೧-೫-೧೭)ಎಂದು ಮತ್ತೊಂದು ಶ್ರುತಿ (ಹೇಳುತ್ತದೆ). ಆದ್ದರಿಂದ

---

1. ಮಾಡಬೇಕಾದ ಕರ್ತವ್ಯಗಳನ್ನು ತಂದೆಯಿಂದ ಕಲಿತುಕೊಂಡವನೇ ತಂದೆಗೆ ಉತ್ತಮಲೋಕಗಳನ್ನು ಕೊಡಿಸುತ್ತಾನೆ ಎಂದರ್ಥ.

ಅವನು ದೀರ್ಘಾಯುಸ್ಸುಳ್ಳವನಾಗಿರುವದಕ್ಕೆಂದು[1] ಕೋಶವಿಜ್ಞಾನವನ್ನು ಪ್ರಾರಂಭಿಸ ಲಾಗುತ್ತದೆ. ಹೆಚ್ಚು ಪೂಜ್ಯವಾದ (ವಿಷಯದ) ವಿಜ್ಞಾನದ ವ್ಯಾಸಂಗದಿಂದ ಆ ಕೂಡಲೆ ಹೇಳಲಿಲ್ಲ;[2] ಆದ್ದರಿಂದ ಈಗಲೇ ಅದನ್ನು (ಹೇಳುವದಕ್ಕೆ) ಪ್ರಾರಂಭಿಸಿದೆ.

ಕೋಶದ ವಿವರ

(ಭಾಷ್ಯ)

೨೫೯. ಅನ್ತರಿಕ್ಷಮ್ ಉದರಮ್, ಅನ್ತಃಸುಷಿರಂ ಯಸ್ಯ ಸೋಽಯಮ್ ಅನ್ತರಿಕ್ಷೋದರಃ ಕೋಶಃ ಕೋಶ ಇವ। ಅನೇಕಕೋಶ[3]ಧರ್ಮಸಾದೃಶ್ಯಾತ್ ಕೋಶಃ। ಸ ಚ ಭೂಮಿಬುಧ್ನೋ ಭೂಮಿಃ ಬುಧ್ನೋ ಮೂಲಂ ಯಸ್ಯ ಸ ಭೂಮಿಬುಧ್ನಃ। ನ ಜೀರ್ಯತಿ ನ ವಿನಶ್ಯತಿ। ತ್ರೈಲೋಕ್ಯಾತ್ಮಕತ್ವಾತ್ ಸಹಸ್ರಯುಗಕಾಲಾವಸ್ಥಾಯಿ ಹಿ ಸಃ। ದಿಶೋ ಹಿ ಅಸ್ಯ ಸರ್ವಾಃ ಪ್ರಕೃತಯಃ ಕೋಣಾಃ। ದ್ಯೌಃ ಅಸ್ಯ ಕೋಶಸ್ಯ ಉತ್ತರಮ್ ಊರ್ಧ್ವಂ ಬಿಲಮ್ ಸ ಏಷ ಯಥೋಕ್ತಗುಣಃ ಕೋಶಃ ವಸುಧಾನಃ। ವಸು ಧೀಯತೇಽಸ್ಮಿನ್ ಪ್ರಾಣಿನಾಂ ಕರ್ಮಫಲಾಖ್ಯಮ್ ಅತೋ ವಸುಧಾನಃ। ತಸ್ಮಿನ್ ಅನ್ತರ್ವಿಶ್ವಂ ಸಮಸ್ತಂ ಪ್ರಾಣಿಕರ್ಮಫಲಂ ಸಹ ತತ್ಸಾಧನೈಃ ಇದಂ ಯದ್ ಗೃಹ್ಯತೇ ಪ್ರತ್ಯಕ್ಷಾದಿಪ್ರಮಾಣೈಃ ಶ್ರಿತಮ್ ಆಶ್ರಿತಂ ಸ್ಥಿತಮ್ ಇತ್ಯರ್ಥಃ॥

(ಭಾಷ್ಯಾರ್ಥ)

ಯಾವದಕ್ಕೆ ಅಂತರಿಕ್ಷವು ಉದರವೋ, ಒಳಗಿನ ಪೊಳ್ಳೋ, ಆ ಇದು ಅಂತರಿಕ್ಷೋದರವಾದ ಕೋಶವು ; ಕೋಶದಂತಿರುವದು (ಎಂದರ್ಥ). ಅನೇಕ ಕೋಶಧರ್ಮಗಳ ಹೋಲಿಕೆಯಿರುವದರಿಂದ (ಅದು) ಕೋಶ(ವೆನಿಸಿದೆ).[4]

ಆ (ಕೋಶವು) ಭೂಮಿಬುಧ್ನವು, ಭೂಮಿಯೇ ಬುಧ್ನವು ಎಂದರೆ ತಳವಾಗಿರುವದರಿಂದ ಭೂಮಿಬುಧ್ನವು.[5] (ಅದು) ಹಳತಾಗುವದಿಲ್ಲ, ತ್ರೈಲೋಕ್ಯ

---

1. ದೀರ್ಘಾಯುಸ್ಸಿದ್ದರಲ್ಲವೆ, ಅವನಿಗೆ ಅನುಶಾಸನವು ದೊರಕುವದು ? ಆದ್ದರಿಂದ ಅದಕ್ಕಾಗಿ ದೀರ್ಘಾಯುಸ್ಸಿಗೆ ಇಲ್ಲಿ ಉಪಾಸನೆಯನ್ನು ಹೇಳಿದೆ.
2. ಬ್ರಹ್ಮೋಪಾಸನೆಯು ಪೂಜ್ಯವಾದದ್ದು, ಆದ್ದರಿಂದ ಗಾಯತ್ರೀಬ್ರಹ್ಮೋಪಾಸನೆಯೇ ಮುಂತಾದದ್ದನ್ನು ಹೇಳುವದರಲ್ಲಿ ವ್ಯಗ್ರವಾಗಿದ್ದದ್ದರಿಂದ ವೀರಪುತ್ರನು ಹುಟ್ಟುತ್ತಾನೆ - ಎಂದು ಹೇಳಿದಕೂಡಲೆ ಹೇಳಲಿಲ್ಲ- ಎಂದರ್ಥ.
3. 'ಅನೇಕಧರ್ಮ' - ಎಂಬ ಪಾಠಕ್ಕಿಂತ ಇದೇ ಮೇಲು.
4. ತ್ರೈಲೋಕ್ಯವನ್ನು ಕೋಶವೆಂದು ಚಿಂತಿಸಬೇಕು - ಎಂದರ್ಥ.
5. ಭೂಮಿಯೇ ಈ ಕೋಶದ ತಳವು ಎಂದು ಚಿಂತಿಸಬೇಕು.

ಸ್ವರೂಪವಾಗಿರುವದರಿಂದ ನಾಶವಾಗುವದಿಲ್ಲ.[1] (ಅದು) ಸಾವಿರಯುಗಗಳವರೆಗೆ ಇರತಕ್ಕದ್ದಲ್ಲವೆ ?[2] ಈ (ಕೋಶಕ್ಕೆ) ಎಲ್ಲಾ ದಿಕ್ಕುಗಳೇ ಸ್ರಕ್ತಿಗಳು, ಮೂಲೆಗಳು. ದ್ಯುಲೋಕವು ಇದರ ಮೇಲಿನ ಬಿಲವು. ಈ ಹೇಳಿದ ಗುಣಗಳುಳ್ಳ ಕೋಶವು ವಸುಧಾನವು ; ಪ್ರಾಣಿಗಳ ಕರ್ಮಫಲವೆಂಬ ಹಣವು ಇದರಲ್ಲಿ ಇಡಲ್ಪಡುವದರಿಂದ (ಇದು) ವಸುಧಾನವೂ ಆದರ ಒಳಗೆ ಎಲ್ಲವು - ಎಂದರೆ ಪ್ರಾಣಿಕರ್ಮಫಲವು ಆದರ ಸಾಧನವೂ ಸಹ ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿಯಬರುವ ಈ ಎಲ್ಲವೂ ಶ್ರಿತವಾಗಿದೆ, ಆಶ್ರಯಿಸಿಕೊಂಡಿರುತ್ತದೆ, (ಅದರೊಳಗೆ) ಇದ್ದುಕೊಂಡಿರುತ್ತದೆ.[3]

(ಉಪನಿಷತ್ತು)

ತಸ್ಯ ಪ್ರಾಚೀ ದಿಗ್ಜುಹೂರ್ನಾಮ ಸಹಮಾನಾ ನಾಮ ದಕ್ಷಿಣಾ ರಾಜ್ಞೀ ನಾಮ ಪ್ರತೀಚೀ ಸುಭೂತಾ ನಾಮೋದೀಚೀ ತಾಸಾಂ ವಾಯುರ್ವತ್ಸಃ ಸ ಯ ಏತಮೇವಂ ವಾಯುಂ ದಿಶಾಂ ವತ್ಸಂ ವೇದ ನ ಪುತ್ರರೋದಗ್ಂ ರೋದಿತಿ ಸೋಽಹಮೇತಮೇವಂ ವಾಯುಂ ದಿಶಾಂ ವತ್ಸಂ ವೇದ ಮಾ ಪುತ್ರರೋದಗ್ಂ ರುದಮ್ ॥೨॥

೨. ಅದರ ಪೂರ್ವದಿಕ್ಕಿಗೆ ಜುಹೂ ಎಂದು ಹೆಸರು ; ದಕ್ಷಿಣ(ದಿಕ್ಕಿಗೆ) ಸಹಮಾನಾ ಎಂದು ಹೆಸರು ; ಪಶ್ಚಿಮ(ದಿಕ್ಕಿಗೆ) ರಾಜ್ಞೀ ಎಂದು ಹೆಸರು ; ಉತ್ತರ(ದಿಕ್ಕಿಗೆ) ಸುಭೂತಾ ಎಂದು ಹೆಸರು. ಅವುಗಳಿಗೆ ವಾಯುವು ಮಗು. ಯಾವನು ಹೀಗೆ ಈ ವಾಯುವನ್ನು ಅವುಗಳ ಮಗುವೆಂದು ಅರಿತುಕೊಳ್ಳುವನೋ ಅವನು ಪುತ್ರರೋದವನ್ನು ಅಳುವದಿಲ್ಲ. ಆ ನಾನು ಹೀಗೆ ಈ ವಾಯುವು ದಿಕ್ಕುಗಳ ಮಗುವೆಂದು ಅರಿತುಕೊಂಡಿರುವೆನು ; ನಾನು ಪುತ್ರರೋದವನ್ನು ಅಳದಂತಾಗಲಿ !

---

1. ಬಹುಕಾಲವಿರತಕ್ಕದ್ದು ಎಂದು ಚಿಂತಿಸಬೇಕು. 2. ಒಂದು ಕಲ್ಪದವರೆಗೂ ಇರತಕ್ಕದ್ದು.
3. ಕೋಶದಲ್ಲಿ ಧನವು ತುಂಬಿರುವಂತೆ ಸಾಧ್ಯಸಾಧನಗಳೆಲ್ಲವೂ ಈ ತ್ರೈಲೋಕ್ಯ ಕೋಶದಲ್ಲಿ ತುಂಬಿರುತ್ತದೆ - ಎಂದು ಚಿಂತಿಸಬೇಕು.

ಕೋಶದಿಗ್ವತ್ಸವಿಜ್ಞಾನವೂ ಅದರ ಫಲವೂ

(ಭಾಷ್ಯ)

೨೬೦. ತಸ್ಯಾಸ್ಯ ಪ್ರಾಚೀ ದಿಕ್ ಪ್ರಾಗ್ಗತೋ ಭಾಗೋ ಜುಹೂರ್ನಾಮ । ಜುಹ್ವತಿ ಅಸ್ಯಾಂ ದಿಶಿ ಕರ್ಮಿಣಃ ಪ್ರಾಙ್ಮುಖಾಃ ಸನ್ತಃ ಇತಿ ಜುಹೂರ್ನಾಮ । ಸಹಮಾನಾ ನಾಮ ಸಹನ್ತೇ ಅಸ್ಯಾಂ ಪಾಪಕರ್ಮಫಲಾನಿ ಯಮಪುರ್ಯಾಂ ಪ್ರಾಣಿನಃ ಇತಿ ಸಹಮಾನಾ ನಾಮ ದಕ್ಷಿಣಾ ದಿಕ್ । ತಥಾ ರಾಜ್ಞೀ ನಾಮ ಪ್ರತೀಚೀ ಪಶ್ಚಿಮಾ ದಿಕ್ ರಾಜ್ಞೀ ರಾಜ್ಞಾ ವರುಣೇನ ಅಧಿಷ್ಠಿತಾ । ಸಂಧ್ಯಾರಾಗಯೋಗಾದ್ ವಾ । ಸುಭೂತಾ ನಾಮ ಭೂತಿಮದ್ಭಿಃ ಈಶ್ವರಕುಬೇರಾದಿಭಿರಧಿಷ್ಠಿತತ್ವಾತ್ ಸುಭೂತಾ ನಾಮ ಉದೀಚೀ । ತಾಸಾಂ ದಿಶಾಂ ವಾಯುರ್ವತ್ಸಃ । ದಿಗ್ಜತ್ವಾದ್ ವಾಯೋಃ । ಪುರೋವಾತ ಇತ್ಯಾದಿದರ್ಶನಾತ್ । ಸ ಯಃ ಕಶ್ಚಿತ್ ಪುತ್ರದೀರ್ಘಜೀವಿತಾರ್ಥೀ ಏವಂ ಯಥೋಕ್ತಗುಣಂ ವಾಯುಂ ದಿಶಾಂ ವತ್ಸಮ್ ಅಮೃತಂ ವೇದ ಸ ನ ಪುತ್ರರೋದಂ ಪುತ್ರನಿಮಿತ್ತಂ ರೋದನಂ ನ ರೋದಿತಿ । ಪುತ್ರೋ ನ ಮ್ರಿಯತ ಇತ್ಯರ್ಥಃ । ಯತ ಏವಂವಿಶಿಷ್ಟಂ ಕೋಶದಿಗ್ವತ್ಸವಿಷಯಂ ವಿಜ್ಞಾನಮ್ ಅತಃ ಸೋಽಹಂ ಪುತ್ರಜೀವಿತಾರ್ಥೀ । ಏವಮೇತಂ ವಾಯುಂ ದಿಶಾಂ ವತ್ಸಂ ವೇದ ಜಾನೇ । ಅತೋ ಮಾ ಪುತ್ರರೋದಂ ಮಾ ರುದಮ್ । ಪುತ್ರಮರಣನಿಮಿತ್ತಂ ಪುತ್ರರೋದೋ ಮಮ ಮಾ ಭೂತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಆ ಈ (ಕೋಶದ) ಪೂರ್ವದಿಕ್ಕಿಗೆ ಪೂರ್ವದಲ್ಲಿರುವ ಭಾಗಕ್ಕೆ 'ಜುಹೂ' ಎಂದು ಹೆಸರು ; ಕರ್ಮಿಗಳು ಈ ದಿಕ್ಕಿನಲ್ಲಿ ಪೂರ್ವಾಭಿಮುಖರಾಗಿ ಹೋಮ ಮಾಡುತ್ತಾರಾದ್ದರಿಂದ (ಇದಕ್ಕೆ) ಜುಹೂ ಎಂದು ಹೆಸರು. ದಕ್ಷಿಣದಿಕ್ಕಿಗೆ ಸಹಮಾನಾ ಎಂದು ಹೆಸರು. ಈ (ದಿಕ್ಕಿ)ನಲ್ಲಿ ಯಮಪುರಿಯಲ್ಲಿ ಪ್ರಾಣಿಗಳು ಪಾಪಕರ್ಮದ ಫಲಗಳನ್ನು ಸಹಿಸುತ್ತಾರಾದ್ದರಿಂದ[1] (ಇದಕ್ಕೆ) 'ಸಹಮಾನಾ' ಎಂದು ಹೆಸರು. ಇದರಂತೆ ಪ್ರತೀಚಿಗೆ ಪಶ್ಚಿಮದಿಕ್ಕಿಗೆ ರಾಜ್ಞೀ ಎಂದು ಹೆಸರು ; ರಾಜನಾದ ವರುಣನು (ಅದನ್ನು) ಆಳುತ್ತಾನಾದ್ದರಿಂದ, ಅಥವಾ (ಅದಕ್ಕೆ) ಸಂಧ್ಯಾರಾಗದ ಸಂಬಂಧವಿರುವದರಿಂದ (ಇದು ರಾಜ್ಞೀ).[2] ಉತ್ತರದಿಕ್ಕಿಗೆ ಸುಭೂತಾ ಎಂದು

---

1. ಅನುಭವಿಸುತ್ತಾರಾದ್ದರಿಂದ 'ಸಹಮಾನಾ'.
2. ರಾಜನಿಂದ ಆಳಲ್ಪಟ್ಟಿರುವದರಿಂದ ಅಥವಾ ರಾಗದಿಂದ ಹೊಳೆಯುತ್ತದೆಯಾದ್ದರಿಂದ ರಾಜ್ಞೀ.

ಹೆಸರು ; ಭೂತಿಯುಳ್ಳ ಈಶ್ವರ, ಕುಬೇರ- ಮುಂತಾದವರು ಆಳುತ್ತಾರಾದ್ದರಿಂದ (ಅದು) ಸುಭೂತಾ (ಎನಿಸಿದೆ).

ಆ ದಿಕ್ಕುಗಳಿಗೆ ವಾಯುವು ಮಗು ; ಏಕೆಂದರೆ ವಾಯು ದಿಕ್ಕುಗಳಲ್ಲಿ ಹುಟ್ಟುತ್ತದೆ, 'ಪುರೋವಾತ' ಎಂದು ಮುಂತಾಗಿ[1] (ಪ್ರಯೋಗವು) ಕಂಡು ಬರುವದರಿಂದ (ಹೀಗೆಂದು ತಿಳಿಯಬೇಕು).

ಪುತ್ರನು ದೀರ್ಘಕಾಲ ಬದುಕಿರಬೇಕೆಂದು ಬಯಸುವವನು ಯಾವನು ಮೇಲೆ ಹೇಳಿರುವಂಥ ಗುಣವುಳ್ಳ ವಾಂ ಎವು ದಿಕ್ಕುಗಳ ಅಮೃತವಾದ ಮಗುವೆಂದು ಆರಿತುಕೊಂಡಿರುವನೋ[2] ಅವನು ಪುತ್ರರೋದವನ್ನು, ಮಗನ ನಿಮಿತ್ತವಾದ ಅಳುವನ್ನು, ಅಳುವದಿಲ್ಲ (ಅವನ) ಮಗನು ಸಾಯುವುದಿಲ್ಲ[3] ಎಂದರ್ಥ. ಕೋಶದ, ದಿಕ್ಕುಗಳ, ಮಗುವಿನ ವಿಷಯದ ವಿಜ್ಞಾನವು ಇಂಥ ವಿಶಿಷ್ಟ(ಫಲದ್ದಾಗಿರುವ)ದಷ್ಟೆ, ಆದ್ದರಿಂದ ಮಗನು (ಬಹುಕಾಲ) ಬದುಕಿರಬೇಕೆಂಬ ಇಚ್ಛೆಯುಳ್ಳ ನಾನು ಈ ವಾಯುವನ್ನು ದಿಕ್ಕುಗಳ ಮಗುವೆಂದು (ವೇದ= ಜಾನೇ) ಉಪಾಸನೆಮಾಡಿರುತ್ತೇನೆ. ಆದ್ದರಿಂದ (ನಾನು) ಪುತ್ರರೋದವನ್ನು ಅಳದೆ ಇರುವಂತಾಗಲಿ ! ಮಗನ ಮರಣದ ನಿಮಿತ್ತವಾಗಿ ಅಳದಂತೆ ಆಗಲಿ ! ನನಗೆ ಪುತ್ರರೋದನವಾಗದಿರಲಿ ! ಎಂದರ್ಥ.

(ಉಪನಿಷತ್ತು)

ಅರಿಷ್ಟಂ ಕೋಶಂ ಪ್ರಪದ್ಯೇऽಮುನಾऽಮುನಾऽಮುನಾ ಪ್ರಾಣಂ ಪ್ರಪದ್ಯೇऽಮುನಾऽಮುನಾऽಮುನಾ ಭೂಃ ಪ್ರಪದ್ಯೇऽಮುನಾऽಮುನಾऽಮುನಾ ಭುವಃ ಪ್ರಪದ್ಯೇऽಮುನಾऽಮುನಾऽಮುನಾ ಸ್ವಃ ಪ್ರಪದ್ಯೇऽಮುನಾऽಮುನಾऽಮುನಾ ॥೩॥

೩. ಅರಿಷ್ಟವಾದ ಕೋಶವನ್ನು ಶರಣುಹೊಕ್ಕಿರುವೆನು, ಇವನಿಂದ ಇವನಿಂದ, ಇವನಿಂದ ! ಪ್ರಾಣವನ್ನು ಶರಣುಹೊಕ್ಕಿರುವೆನು, ಇವನಿಂದ,

1. ಮುಂತಾಗಿ ಎಂದಿರುವದು ಹೀಗೆ ಲೌಕಿಕವೈದಿಕಪ್ರಯೋಗವಿದೆ - ಎಂದು ತಿಳಿಸುವದಕ್ಕೆ ಎಂದು ಟೀಕೆ ; ಪುರೋವಾತ, ಪಶ್ಚಿಮಾನಿಲ - ಎಂದು ಮುಂತಾಗಿ ಗಾಳಿಯು ದಿಕ್ಕುಗಳಿಂದ ಬಂದದ್ದು ಎಂಬ ವ್ಯವಹಾರವಿದೆಯಾದ್ದರಿಂದ ವಾಯುವು ದಿಕ್ಕುಗಳಲ್ಲಿ ಹುಟ್ಟಿದ್ದೆಂದು ತಿಳಿಯಬೇಕು - ಎಂದು ಸರಳವಾಗಿ ಅರ್ಥವಾಗುತ್ತದೆ.
2. ವಾಯುವು ತ್ರೈಲೋಕ್ಯಕೋಶದ ಬೇರೆಬೇರೆಯ ಹೆಸರಿನ ದಿಕ್ಕುಗಳಲ್ಲಿ ಹುಟ್ಟಿರುವ ಅಮೃತವಾದ ಮಗು- ಎಂದು ಉಪಾಸನೆಮಾಡುವನೋ ಎಂದರ್ಥ.
3. ಅಲ್ಪಾಯುಸ್ಸಿನಲ್ಲಿ ಸಾಯುವದಿಲ್ಲ ಎಂದರ್ಥ.

ಇವನಿಂದ, ಇವನಿಂದ ! ಭೂಃ ಎಂಬುದನ್ನು ಶರಣಹೊಕ್ಕಿರುವೆನು, ಇವನಿಂದ, ಇವನಿಂದ, ಇವನಿಂದ ! ಭುವಃ ಎಂಬುದನ್ನು ಶರಣುಹೊಕ್ಕಿರುವೆನು, ಇವನಿಂದ, ಇವನಿಂದ, ಇವನಿಂದ ! ಸ್ವಃ ಎಂಬುದನ್ನು ಶರಣುಹೊಕ್ಕಿರುವೆನು, ಇವನಿಂದ, ಇವನಿಂದ, ಇವನಿಂದ !

ಉಪಾಸನಾಂಗವಾದ ಜಪಮಂತ್ರಗಳು

(ಭಾಷ್ಯ)

೨೬೧. ಅರಿಷ್ಟಮ್ ಅವಿನಾಶಿನಂ ಕೋಶಂ ಯಥೋಕ್ತಂ ಪ್ರಪದ್ಯೇ ಪ್ರಪನ್ನೋಽಸ್ಮಿ ಪುತ್ರಾಯುಷೇ । ಅಮುನಾ, ಅಮುನಾ, ಅಮುನಾ ಇತಿ ತ್ರಿರ್ನಾಮ ಗೃಹ್ಣಾತಿ ಪುತ್ರಸ್ಯ । ತಥಾ ಪ್ರಾಣಂ ಪ್ರಪದ್ಯೇ ಅಮುನಾ, ಅಮುನಾ, ಅಮುನಾ । ಭೂಃ ಪ್ರಪದ್ಯೇ ಅಮುನಾ ಅಮುನಾ ಅಮುನಾ । ಭುವಃ ಪ್ರಪದ್ಯೇ ಅಮುನಾ ಅಮುನಾ ಅಮುನಾ । ಸ್ವಃ ಪ್ರಪದ್ಯೇ ಅಮುನಾ ಅಮುನಾ ಅಮುನಾ । ಸರ್ವತ್ರ ಪ್ರಪದ್ಯೇ ಇತಿ ತ್ರಿರ್ನಾಮ ಗೃಹ್ಣಾತಿ ಪುನಃಪುನಃ ॥

(ಭಾಷ್ಯಾರ್ಥ)

ಅರಿಷ್ಟವಾದ ಎಂದರೆ ವಿನಾಶವಾಗದಿರುವ ಮೇಲೆ ಹೇಳಿರುವ ಕೋಶವನ್ನು ಶರಣುಹೊಕ್ಕಿರುವೆನು ; ಪುತ್ರನ ಆಯುಸ್ಸಿಗಾಗಿ (ಕೋಶವನ್ನು) ಮರೆಹೊಕ್ಕಿದ್ದೇನೆ. 'ಇವನಿಂದ', 'ಇವನಿಂದ', 'ಇವನಿಂದ' ಎಂದು ಮೂರುಸಲ ಪುತ್ರನ ನಾಮವನ್ನು ಗ್ರಹಣಮಾಡಬೇಕು. ಇದರಂತೆ ಪ್ರಾಣವನ್ನು ಶರಣುಹೊಕ್ಕಿರುವೆನು ಇವನಿಂದ, ಇವನಿಂದ, ಇವನಿಂದ, ಭೂಃ ಎಂಬಿದನ್ನು ಶರಣುಹೊಕ್ಕಿರುವೆನು 'ಇವನಿಂದ', 'ಇವನಿಂದ', 'ಇವನಿಂದ' ; ಭುವಃ ಎಂಬಿದನ್ನು ಶರಣುಹೊಕ್ಕಿರುವೆನು ; ಇವನಿಂದ, ಇವನಿಂದ, ಇವನಿಂದ. ಸುವಃ ಎಂಬುದನ್ನು ಶರಣುಹೊಕ್ಕಿರುವೆನು ; ಇವನಿಂದ, ಇವನಿಂದ, ಇವನಿಂದ. (ಈ) ಎಲ್ಲಾ ಕಡೆಯಲ್ಲಿಯೂ ಮೂರುಸಲ ಮತ್ತೆಮತ್ತೆ ನಾಮಗ್ರಹಣವನ್ನು ಮಾಡಬೇಕು.[1]

(ಉಪನಿಷತ್ತು)

ಸ ಯದವೋಚಂ ಪ್ರಾಣಂ ಪ್ರಪದ್ಯ ಇತಿ ಪ್ರಾಣೋ ವಾ ಇದಗ್ಂ ಸರ್ವಂ ಭೂತಂ ಯದಿದಂ ಕಿಂ ಚ ತಮೇವ ತತ್ಪ್ರಾಪತ್ಸಿ ॥೪॥

ಅಥ ಯದವೋಚಂ ಭೂಃ ಪ್ರಪದ್ಯ ಇತಿ ಪೃಥಿವೀಂ

---

1. ಮಗನ ಹೆಸರನ್ನು 'ಅಮುನಾ' ಎಂಬ ಸ್ಥಳದಲ್ಲಿ ಹೇಳಬೇಕು - ಎಂದರ್ಥ.

ಪ್ರಪದ್ಯೇಽನ್ತರಿಕ್ಷಂ ಪ್ರಪದ್ಯೇ ದಿವಂ ಪ್ರಪದ್ಯ ಇತ್ಯೇವ ತದ-ವೋಚಮ್ ॥೫॥

ಅಥ ಯದವೋಚಂ ಭುವಃ ಪ್ರಪದ್ಯ ಇತ್ಯಗ್ನಿಂ ಪ್ರಪದ್ಯೇ ವಾಯುಂ ಪ್ರಪದ್ಯ ಆದಿತ್ಯಂ ಪ್ರಪದ್ಯ ಇತ್ಯೇವ ತದವೋಚಮ್ ॥೬॥

ಅಥ ಯದವೋಚಗ್ಂ ಸ್ವಃ ಪ್ರಪದ್ಯ ಇತ್ಯೃಗ್ವೇದಂ ಪ್ರಪದ್ಯೇ ಯಜುರ್ವೇದಂ ಪ್ರಪದ್ಯೇ ಸಾಮವೇದಂ ಪ್ರಪದ್ಯೇ ಇತ್ಯೇವ ತದವೋಚಂ ತದವೋಚಮ್ ॥೭॥

೪. ಆ (ನಾನು) 'ಪ್ರಾಣವನ್ನು ಶರಣುಹೊಕ್ಕಿರುವೆನು' ಎಂದೆನಷ್ಟೆ ? ಈ ಏನೇನಿದೆಯೋ ಇದೆಲ್ಲ ಪ್ರಾಣವೇ, ಅದನ್ನೇ ಹಾಗೆ ಶರಣುಹೊಕ್ಕೆನು.

೫. ಇನ್ನು 'ಭೂಃ ಎಂಬುದನ್ನು ಶರಣುಹೊಕ್ಕಿರುವೆನು' ಎಂದೆನಷ್ಟೆ ? ಪೃಥಿವಿಯನ್ನು ಶರಣುಹೊಕ್ಕಿರುವೆನು, ಅಂತರಿಕ್ಷವನ್ನು ಶರಣುಹೊಕ್ಕಿರುವೆನು, ದ್ಯುಲೋಕವನ್ನು ಶರಣುಹೊಕ್ಕಿರುವೆನು- ಎಂದೇ ಹಾಗೆ ಹೇಳಿದೆನು.

೬. ಇನ್ನು 'ಭುವಃ' ಎಂಬುದನ್ನು ಶರಣುಹೊಕ್ಕಿರುವೆನು' ಎಂದೆನಷ್ಟೆ ? ಅಗ್ನಿಯನ್ನು ಶರಣುಹೊಕ್ಕಿರುವೆನು, ವಾಯುವನ್ನು ಶರಣುಹೊಕ್ಕಿರುವೆನು, ಆದಿತ್ಯನನ್ನು ಶರಣುಹೊಕ್ಕಿರುವೆನು - ಎಂದೇ ಹಾಗೆ ಹೇಳಿದೆನು.

೭. 'ಇನ್ನು ಸ್ವಃ ಎಂಬುದನು ಶರಣುಹೊಕ್ಕಿರುವೆನು' ಎಂದೆನಷ್ಟೆ ? ಋಗ್ವೇದವನ್ನು ಶರಣುಹೊಕ್ಕಿರುವೆನು, ಯಜುರ್ವೇದವನ್ನು ಶರಣು ಹೊಕ್ಕಿರುವೆನು, ಸಾಮವೇದವನ್ನು ಶರಣುಹೊಕ್ಕಿರುವೆನು - ಎಂದೇ ಹಾಗೆ ಹೇಳಿದೆನು, ಹಾಗೆ ಹೇಳಿದೆನು.

ಜಪಮಂತ್ರಗಳ ವ್ಯಾಖ್ಯಾನ

(ಭಾಷ್ಯ)

೨೬೨. ಸ ಯದವೋಚಂ ಪ್ರಾಣಂ ಪ್ರಪದ್ಯೇ ಇತಿ ವ್ಯಾಖ್ಯಾನಾರ್ಥಮ್ ಉಪನ್ಯಾಸಃ । ಪ್ರಾಣೋ ವಾ ಇದಂ ಸರ್ವಂ ಭೂತಂ ಯದಿದಂ ಜಗತ್ । "ಯಥಾ ವಾ ಅರಾ ನಾಭೌ" (೭-೧೫-೧) ಇತಿ ವಕ್ಷ್ಯತಿ । ಅತಸ್ತಮೇವ ಸರ್ವಂ ತತ್ತೇನ

ಪ್ರಾಣಪ್ರತಿಪಾದನೇನ ಪ್ರಾಪತ್ಸಿ ಪ್ರಪನ್ನೋಽಭೂವಮ್ । ತಥಾ[1] ಭೂಃ ಪ್ರಪದ್ಯ ಇತಿ ತ್ರೀನ್ ಲೋಕಾನ್ ಭೂರಾದೀನ್ ಪ್ರಪದ್ಯೇ ಇತಿ ತದವೋಚಮ್ । ಅಥ ಯದವೋಚಂ ಭುವಃ ಪ್ರಪದ್ಯ ಇತ್ಯಾಗ್ನ್ಯಾದೀನ್ ಪ್ರಪದ್ಯ ಇತಿ ತದವೋಚಮ್ । ಅಥ ಯದವೋಚಂ ಸ್ವಃ ಪ್ರಪದ್ಯ ಇತಿ ಋಗ್ವೇದಾದೀನ್ ಪ್ರಪದ್ಯೇ ಇತ್ಯೇವ ತದವೋಚಮಿತಿ । ಉಪದಿಷ್ಟಾನ್ ಮನ್ತ್ರಾನ್ ಜಪೇತ್ತತಃ ಪೂರ್ವೋಕ್ತಮ್ ಅಜರಂ ಕೋಶಂ ಸದಿಗ್ವತ್ಸಂ ಯಥಾವದ್ ಧ್ಯಾತ್ವಾ । ದ್ವಿರ್ವಚನಮ್ ಆದರಾರ್ಥಮ್ ॥

(ಭಾಷ್ಯಾರ್ಥ)

'ಆ (ನಾನು) ಪ್ರಾಣವನ್ನು ಶರಣುಹೊಕ್ಕಿರುವೆನು ಎಂದೆನಷ್ಟೆ' ಎಂದು (ಮತ್ತೆ) ಪ್ರಾರಂಭಿಸಿರುವದು (ಅದನ್ನು) ವಿವರಿಸುವದಕ್ಕಾಗಿ. ಇದೆಲ್ಲವೂ ಎಂದರೆ ಈ ಜಗತ್ತೆಂಬುದಿದೆಯಲ್ಲ, (ಅದು) ಪ್ರಾಣವೇ. "ಹೇಗೆ ಹಾರೆಕೋಲುಗಳು..." (೭-೧೫-೧) ಎಂದು ಮುಂದೆ ಹೇಳಲಾಗುವದು. ಆದ್ದರಿಂದ ಆ ಸರ್ವವಾದ (ಪ್ರಾಣ)ವನ್ನೇ ಹಾಗೆ ಆ ವ್ಯಾಣವಾಕ್ಯದಿಂದ ಶರಣುಹೊಕ್ಕೆನು, ಶರಣುಹೋದವನಾದೆನು.

ಹೀಗೆಯೇ 'ಭೂಃ ಎಂಬುದನು ಶರಣುಹೊಕ್ಕಿರುವೆನು' ಎಂದೆನಷ್ಟೆ, ಭೂ ಲೋಕವೇ ಮುಂತಾದ ಮೂರುಲೋಕಗಳನ್ನು ಶರಣುಹೊಕ್ಕಿರುವೆನು ಎಂಬುದನ್ನೇ ಹಾಗೆ ಹೇಳಿದೆನು. ಇನ್ನು 'ಭುವಃ ಎಂಬುದನ್ನು ಶರಣುಹೊಕ್ಕಿರುವೆನು' ಎಂದು ಹೇಳಿದೆನಷ್ಟೆ, ಅಗ್ನ್ಯಾದಿಗಳನ್ನು ಶರಣುಹೊಕ್ಕಿರುವೆನು ಎಂಬುದನ್ನೇ ಹಾಗೆ ಹೇಳಿದೆನು. ಇನ್ನು 'ಸ್ವಃ ಎಂಬುದನ್ನು ಶರಣುಹೊಕ್ಕಿರುವೆನು' ಎಂದು ಹೇಳಿದೆನಷ್ಟೆ, ಋಗ್ವೇದಾದಿಗಳನ್ನು ಶರಣುಹೊಕ್ಕಿರುವೆನು ಎಂದೇ ಹಾಗೆ ಹೇಳಿದೆನು.

ಹಿಂದೆ ಹೇಳಿರುವ ಹಳತಾಗದ ಕೋಶವನ್ನು ದಿಗ್ವತ್ಸಗಳ ಸಮೇತವಾಗಿ (ಇಲ್ಲಿ ಹೇಳಿರು)ವಂತೆಯೇ ಧ್ಯಾನಮಾಡಿ ಆ ಬಳಿಕ[2] ಮಂತ್ರಗಳನ್ನು ಜಪಿಸಬೇಕು. (ತದವೋಚಂ ಎಂದು) ಎರಡು ಸಲ ಹೇಳಿರುವದು ಆದರಕ್ಕಾಗಿ.

1. ಇದು 'ಅಥ' ಎಂದಿದ್ದುಲೇಖಕರು ಹೀಗೆ ಬರೆದುಕೊಂಡಿರಬಹುದೆ ?
2. ಇಲ್ಲಿ ಧ್ಯಾತ್ವಾ ಎಂಬುದಕ್ಕೆ ಬದಲು ಧ್ಯಾಯೇತ್ ಎಂಬ ಪಾಠಾಂತರವೂ ಕಂಡುಬರುತ್ತದೆ. ಆಗ ಮಂತ್ರಗಳನ್ನು ಜಪಿಸಬೇಕು, ಆಮೇಲೆ ಧ್ಯಾನಿಸಬೇಕು- ಎಂದಾಗುತ್ತದೆ ; ಆದರೆ ಆ॥ ಗಿ॥ ಟೀಕೆಯಲ್ಲಿ 'ಧ್ಯಾತ್ವಾ ಉಪರಿಷ್ಟಾತ್ ಇತಿ ಸಂಬನ್ಧಃ' ಎಂದಿದೆ ; ಆ ಪಾಠದಲ್ಲಿ ತತಃ ಎಂಬ ಮಾತು ಅನವಶ್ಯವಾಗುತ್ತದೆ. ಯಾವ ಪಾಠವು ಸಾಧುವೆಂಬುದನ್ನು ನಿರ್ಣಯಿಸುವದು ಇಲ್ಲಿ ಅತ್ಯವಶ್ಯ ; ಏಕೆಂದರೆ ಜಪಧ್ಯಾನಗಳಲ್ಲಿ ಮೊದಲು ಯಾವದು ಎಂಬುದನ್ನುಗೊತ್ತುಪಡಿಸುವದಕ್ಕೆ ಅದು ಬೇಕಾಗುತ್ತದೆ.

ಮೂರನೆಯ ಅಧ್ಯಾಯ - ಹದಿನಾರನೆಯ ಖಂಡ

(ದೀರ್ಘಜೀವನಕ್ಕಾಗಿ ಉಪಾಸನೆ)

ಪುರುಷವಿದ್ಯೆ

(ಉಪನಿಷತ್ತು)

ಪುರುಷೋ ವಾವ ಯಜ್ಞಸ್ತಸ್ಯ ಯಾನಿ ಚತುರ್ವಿಗ್ಂಶತಿ ವರ್ಷಾಣಿ ತತ್ ಪ್ರಾತಃಸವನಂ ಚತುರ್ವಿಗ್ಂಶತ್ಯಕ್ಷರಾ ಗಾಯತ್ರೀ ಗಾಯತ್ರಂ ಪ್ರಾತಃಸವನಂ ತದಸ್ಯ ವಸವೋಽನ್ವಾಯತ್ತಾಃ ಪ್ರಾಣಾ ವಾವ ವಸವ ಏತೇ ಹೀದಗ್ಂ ಸರ್ವಂ ವಾಸಯನ್ತಿ ॥೧॥

೧. ಪುರುಷನೇ ಯಜ್ಞವು. ಅವನ ಇಪ್ಪತ್ತುನಾಲ್ಕುವರ್ಷಗಳಿರುವವಲ್ಲ, ಅದು ಪ್ರಾತಃಸವನವು. ಗಾಯತ್ರಿಯು ಇಪ್ಪತ್ತುನಾಲ್ಕುಅಕ್ಷರಗಳದ್ದು ; ಪ್ರಾತಃಸವನವು ಗಾಯತ್ರವು. ಇದರ ಆ (ಸವನ)ವನ್ನು ವಸುಗಳು ಬೆಂಬಿಡಿದಿರುವರು. ಪ್ರಾಣಗಳೇ ವಸುಗಳು ; ಏಕೆಂದರೆ ಇವೇ ಇದೆಲ್ಲವನ್ನೂ ವಾಸಮಾಡಿಸುತ್ತವೆ.

ಗ್ರಂಥಸಂಬಂಧ

(ಭಾಷ್ಯ)

೨೬೩. ಪುತ್ರಾಯುಷ ಉಪಾಸನಮುಕ್ತಂ ಜಪಶ್ಚ । ಅಥ ಇದಾನೀಮ್ ಆತ್ಮನೋ ದೀರ್ಘಜೀವನಾಯ ಇದಮುಪಾಸನಂ ಜಪಂ ಚ ವಿದಧತ್ ಆಹ। ಜೀವನ್ ಹಿ ಸ್ವಯಂ ಪುತ್ರಾದಿಫಲೇನ ಯುಜ್ಯತೇ ನಾನ್ಯಥಾ ಇತ್ಯತ ಆತ್ಮಾನಂ ಯಜ್ಞಂ ಸಂಪಾದಯತಿ ॥

(ಭಾಷ್ಯಾರ್ಥ)

ಪುತ್ರನ ಆಯುಸ್ಸಿಗಾಗಿ ಉಪಾಸನೆಯನ್ನೂ ಜಪವನ್ನೂ ಹೇಳಿದ್ದಾಯಿತು. ಇನ್ನು ಈಗ ತನ್ನ ದೀರ್ಘಜೀವನಕ್ಕಾಗಿ ಈ ಉಪಾಸನೆಯನ್ನೂ ಜಪವನ್ನೂ ವಿಧಾನಮಾಡಬೇಕೆಂದು (ವೇದವು) ಹೇಳುತ್ತಿದೆ. ತಾನು ಬದುಕಿದ್ದರೇ ಪುತ್ರನೇ ಮುಂತಾದ ಫಲದಿಂದ ಯುಕ್ತನಾಗುತ್ತಾನೆ, ಇಲ್ಲದಿದ್ದರೆ ಇಲ್ಲ. ಆದ್ದರಿಂದ ಆತ್ಮನನ್ನು (ಶ್ರುತಿಯು) ಯಜ್ಞವೆಂದು ಸಂಪಾದನೆಮಾಡುತ್ತದೆ.

ಪುರುಷಯಜ್ಞಕ್ಕೆ ಪ್ರಾತಃಸವನ

(ಭಾಷ್ಯ)

೨೬೪. ಪುರುಷಃ । ಪುರುಷೋ ಜೀವನವಿಶಿಷ್ಟಃ ಕಾರ್ಯಕರಣಸಂಘಾತೋ ಯಥಾಪ್ರಸಿದ್ಧ ಏವ ವಾವಶಬ್ದೋಽವಧಾರಣಾರ್ಥಃ । ಪುರುಷ ಏವ ಯಜ್ಞ ಇತ್ಯರ್ಥಃ । ತಥಾ ಹಿ ಸಾಮಾನ್ಯೈಃ ಸಂಪಾದಯತಿ ಯಜ್ಞತ್ವಮ್ । ಕಥಮ್ ? ತಸ್ಯ ಪುರುಷಸ್ಯ ಯಾನಿ ಚತುರ್ವಿಂಶತಿವರ್ಷಾಣಿ ಆಯುಷಃ ತತ್ ಪ್ರಾತಃಸವನಂ ಪುರುಷಾಖ್ಯಸ್ಯ ಯಜ್ಞಸ್ಯ । ಕೇನ ಸಾಮಾನ್ಯೇನೇತಿ ? ಆಹ । ಚತುರ್ವಿಂಶತ್ಯಕ್ಷರಾ ಗಾಯತ್ರೀ ಛನ್ದಃ ಗಾಯತ್ರಂ ಗಾಯತ್ರೀಚ್ಛನ್ದಸ್ಕಂ ಹಿ ವಿಧಿಯಜ್ಞಸ್ಯ ಪ್ರಾತಃಸವನಮ್ । ಅತಃ ಪ್ರಾತಃಸವನಸಂಪನ್ನೇನ ಚತುರ್ವಿಂಶತಿವರ್ಷಾಯುಷಾ ಯುಕ್ತಃ ಪುರುಷಃ । ಅತಃ ವಿಧಿಯಜ್ಞಸಾದೃಶ್ಯಾದ್ ಯಜ್ಞಃ । ತಥಾ ಉತ್ತರಯೋರಪಿ ಆಯುಷೋಃ ಸವನದ್ವಯಸಂಪತ್ತಿಸ್ತ್ರಿಷ್ಟುಬ್ಜಗತ್ಯಕ್ಷರಸಂಖ್ಯಾಸಾಮಾನ್ಯತೋ ವಾಚ್ಯಾ । ಕಿಂ ಚ ತದಸ್ಯ ಪುರುಷಯಜ್ಞಸ್ಯ ಪ್ರಾತಃಸವನಂ ವಿಧಿಯಜ್ಞಸ್ಯೇವ ವಸವೋ ದೇವಾ ಅನ್ವಾಯತ್ತಾಃ ಅನುಗತಾಃ । ಸವನದೇವತಾತ್ವೇನ ಸ್ವಾಮಿನಃ ಇತ್ಯರ್ಥಃ । ಪುರುಷಯಜ್ಞೇಽಪಿ ವಿಧಿಯಜ್ಞ ಇವ ಅಗ್ನ್ಯಾದಯೋ ವಸವೋ ದೇವಾಃ ಪ್ರಾಪ್ತಾಃ ಇತ್ಯತೋ ವಿಶಿನಷ್ಟಿ । ಪ್ರಾಣಾ ವಾವ ವಸವಃ, ವಾಗಾದಯೋ ವಾಯವಶ್ಚ । ಏತೇ ಹಿ ಯಸ್ಮಾದಿದಂ ಪುರುಷಾದಿಪ್ರಾಣಿಜಾತಮ್ ಏತೇ ವಾಸಯನ್ತಿ । ಪ್ರಾಣೇಷು ಹಿ ದೇಹೇ ವಸತ್ಸು ಸರ್ವಮಿದಂ ವಸತಿ ನಾನ್ಯಥಾ ಇತ್ಯತೋ ವಸನಾತ್ ವಾಸನಾಚ್ಚ ವಸವಃ॥

(ಭಾಷ್ಯಾರ್ಥ)

ಪುರುಷಃ (ಎಂಬ ವಾಕ್ಯದ ಅರ್ಥವಿದು). ಪುರುಷನು ಎಂದರೆ ಜೀವನ ವಿಶಿಷ್ಟವಾದ (ಲೋಕದಲ್ಲಿ) ಪ್ರಸಿದ್ಧವಾಗಿರುವ ಕಾರ್ಯಕರಣಸಂಘಾತವೇ. (ಮೂಲ ದಲ್ಲಿರುವ) ವಾವ ಎಂಬ ಶಬ್ದವು ಅವಧಾರಣೆಯ ಅರ್ಥ(ದಲ್ಲಿ ಬಂದಿದೆ). ಪುರುಷನೇ ಯಜ್ಞವು ಎಂದರ್ಥ.[1] ಆದ್ದರಿಂದಲೇ (ಬೇರೆಬೇರೆಯ) ಹೋಲಿಕೆಗಳಿಂದ (ಪುರುಷನಲ್ಲಿ) ಯಜ್ಞತ್ವವನ್ನು ಸಂಪಾದನೆಮಾಡಿರುತ್ತದೆ.

ಹೇಗೆಂದರೆ, ಆ ಪುರುಷನ ಆಯುಸ್ಸಿನಲ್ಲಿ ಇಪ್ಪತ್ತುನಾಲ್ಕು ವರ್ಷಗಳಿರುವವಲ್ಲ,

---

1. ಇಲ್ಲಿ ಹೇಳಿರುವ ಪುರುಷಯಜ್ಞವು ತೈತ್ತಿರೀಯನಾರಾಯಣಪನ್ನದಲ್ಲಿ (೮೦) ಹೇಳಿರುವ ಪುರುಷಯಜ್ಞದಂತಲ್ಲ ; ಇಲ್ಲಿ ಪುರುಷನನ್ನೇ ಯಜ್ಞವೆಂದು ಸಂಪಾದನೆಮಾಡಿದೆ. ಅಲ್ಲಿ ಪ್ರಕೃತನಾದ ಜ್ಞಾನಿಯ ಯಜ್ಞಕ್ಕೆ ಇಂಥಿಂಥವು ಯಜ್ಞಾವಯವಗಳು - ಎಂದು ಆತ್ಮಜ್ಞಾನವನ್ನು ಹೊಗಳಿದೆ. ಸೂ. ಭಾ. ೩-೩-೨ ನ್ನು ನೋಡಿ.

ಅದೇ ಪುರುಷನೆಂಬ (ಈ) ಯಜ್ಞಕ್ಕೆ ಪ್ರಾತಃಸವನವು. ಯಾವ ಹೋಲಿಕೆಯಿಂದ ?- ಎಂದರೆ (ಶ್ರುತಿ) ಹೇಳುತ್ತದೆ. ಗಾಯತ್ರಿ ಎಂಬ ಛಂದಸ್ಸು ಇಪ್ಪತ್ತುನಾಲ್ಕು ಅಕ್ಷರದ್ದು ; ವಿಧಿಯಜ್ಞದ ಪ್ರಾತಃಸವನವೂ ಗಾಯತ್ರವಷ್ಟೆ, ಗಾಯತ್ರೀ ಛಂದಸ್ಸಿನದಷ್ಟೆ ? ಆದ್ದರಿಂದ ಪುರುಷನು ಪ್ರಾತಃಸವನವೆಂದು ಸಂಪಾದಿತವಾಗಿರುವ ಇಪ್ಪತ್ತುನಾಲ್ಕು ವರ್ಷದ ಆಯುಸ್ಸಿನಿಂದ ಕೂಡಿದವನಾಗಿರುತ್ತಾನೆ. ಆದ್ದರಿಂದ (ಇವನು) ವಿಧಿಯಜ್ಞದ (ಈ) ಸಾದೃಶ್ಯವುಳ್ಳವನಾಗಿರುವದರಿಂದ ಯಜ್ಞವು. ಇದರಂತೆ ಮುಂದಿನ (ಎರಡು) ಆಯುಷ್ಕಾಲಗಳಿಗೂ ತ್ರಿಷ್ಟುಪ್ಪು, ಜಗತಿ- ಇವುಗಳ ಅಕ್ಷರಸಂಖ್ಯೆಯ ಸಾಮಾನ್ಯದಿಂದ (ಉಳಿದ) ಎರಡು ಸವನಗಳ ಸಂಪತ್ತಿಯನ್ನು ಹೇಳಬೇಕು.[1]

ಇದಲ್ಲದೆ ಈ ಪುರುಷಯಜ್ಞದ ಆ (ಪ್ರಾತಃ)ಸವನವನ್ನು ವಿಧಿಯಜ್ಞದ (ಪ್ರಾತಃಸವನವನ್ನು) ಹೇಗೋ ಹಾಗೆ ವಸುಗಳೆಂಬ ದೇವತೆಗಳು ಬೆಂಬಿಡಿದಿರುತ್ತಾರೆ, ಅನುವರ್ತಿಸಿಕೊಂಡಿರುತ್ತಾರೆ ; (ಆ) ಸವನಕ್ಕೆ ದೇವತೆಗಳಾಗಿ ಒಡೆಯರಾಗಿರುತ್ತಾರೆ - ಎಂದರ್ಥ. ಪುರುಷಯಜ್ಞದಲ್ಲಿಯೂ ವಿಧಿಯಜ್ಞದಂತೆ ಅಗ್ನಿಯೇ ಮುಂತಾದ ವಸುದೇವತೆಗಳು (ಇರುತ್ತಾರೆಂದು) ಬಂದೊದಗುತ್ತದೆ. ಆದ್ದರಿಂದ (ಶ್ರುತಿಯು) ಇಂಥವರೇ ಎಂದು ಹೇಳುತ್ತಿದೆ. ಪ್ರಾಣಗಳೇ ಎಂದರೆ, ವಾಗಾದಿಗಳೂ (ಪಂಚ) ವಾಯುಗಳೂ ವಸುಗಳು. (ಹಿ= ಯಸ್ಮಾತ್) ಏಕೆಂದರೆ ಅವು ಮನುಷ್ಯನೇ ಮುಂತಾದ ಪ್ರಾಣಿಜಾತವನ್ನು ವಾಸಮಾಡಿಸುತ್ತವೆ. ಪ್ರಾಣಗಳು ದೇಹದಲ್ಲಿ ವಾಸಮಾಡಿಕೊಂಡಿದ್ದರಲ್ಲವೆ, ಇದೆಲ್ಲವೂ ವಾಸಮಾಡಿಕೊಂಡಿರುತ್ತದೆ ? ಆದ್ದರಿಂದ (ತಾವು) ವಾಸಮಾಡಿಕೊಂಡಿರುವದರಿಂದಲೂ (ಮಿಕ್ಕೆಲ್ಲವನ್ನೂ) ವಾಸಮಾಡಿಸುವದರಿಂದಲೂ (ಈ ಪ್ರಾಣಗಳು) ವಸುಗಳು.[2]

(ಉಪನಿಷತ್ತು)

ತಂ ಚೇದೇತಸ್ಮಿನ್ ವಯಸಿ ಕಿಂಚಿದುಪತಪೇತ್ ಸ ಬ್ರೂಯಾತ್ ಪ್ರಾಣಾ ವಸವ ಇದಂ ಮೇ ಪ್ರಾತಃಸವನಂ ಮಾಧ್ಯಂದಿನಗ್ಂ ಸವನಮನುಸಂತನುತೇತಿ ಮಾऽಹಂ ಪ್ರಾಣಾನಾಂ ವಸೂನಾಂ

1. ಪ್ರಾತಃಸವನಕ್ಕೆ ಗಾಯತ್ರಿಯಂತೆ ಮಾಧ್ಯಂದಿನಸವನಕ್ಕೆ ತ್ರಿಷ್ಟುಪ್ಪು, ಸಾಯಂಸವನಕ್ಕೆ ಜಗತೀ- ಇವು ಛಂದಸ್ಸುಗಳು ; ಅವುಗಳ ಅಕ್ಷರಸಂಖ್ಯೆಯಿಂದಲೇ ಅಷ್ಟಷ್ಟು ವರ್ಷಗಳ ಆಯುರ್ಭಾಗಕ್ಕೆ ಆಯಾ ಸವನವೆಂದು ಸಂಪತ್ತಿ ಎಂದರ್ಥ.
2. ವಸುದೇವತಾಕವಾಗಿರುವದರಿಂದಲೂ ಇದು ಪ್ರಾತಃಸವನವೆಂದು ಸಂಪಾದನೆ ಮಾಡಬೇಕು ಎಂದು ಅಭಿಪ್ರಾಯ.

ಮಧ್ಯೇ ಯಜ್ಞೋ ವಿಲೋಪ್ಸೀಯೇತ್ಯುದ್ಧೈವ ತತ ಏತ್ಯಗದೋ ಹ ಭವತಿ ॥೨॥

೨. ಅವನನ್ನು ಈ ವಯಸ್ಸಿನಲ್ಲಿ ಯಾವದಾದರೂ ಉಪತಾಪ ಗೊಳಿಸಿದರೆ ಅವನು "ಪ್ರಾಣವಸುಗಳೆ, ಈ ನನ್ನ ಪ್ರಾತಃಸವನವನ್ನು ಮಾಧ್ಯಂದಿನಸವನಕ್ಕೆ ಹೊಂದಿಕೆಯಾಗುವಂತೆ ಮುಂದುವರಿಸಿರಿ ! ಯಜ್ಞವಾದ ನಾನು ಪ್ರಾಣವಸುಗಳ ನಡುವೆ ವಿಲೋಪವಾಗದೆ ಇರುವಂತಾಗಲಿ !" ಎಂದು ಹೇಳಬೇಕು. ಅದರಿಂದ ಮೇಲಕ್ಕೆ ಹೋಗುತ್ತಾನೆ, ರೋಗವಿಲ್ಲದವನಾಗುತ್ತಾನೆ.

ಈ ಸವನಧ್ಯಾನಕ್ಕೆ ಅಂಗವಾದ ಜಪ

(ಭಾಷ್ಯ)

೨ಓ. ತಂ ಚೇತ್ ಯಜ್ಞಸಂಪಾದಿನಮ್ ಏತಸ್ಮಿನ್ ಪ್ರಾತಃಸವನಸಂಪನ್ನೇ ವಯಸಿ ಕಿಂಚಿತ್ ವ್ಯಾಧ್ಯಾದಿಮರಣಶಙ್ಕಾಕಾರಣಮ್ ಉಪತಪೇತ್ ದುಃಖಮುತ್ಪಾದಯೇತ್ ಸ ತದಾ ಯಜ್ಞಸಂಪಾದೀ ಪುರುಷಃ ಆತ್ಮಾನಂ ಯಜ್ಞಂ ಮನ್ಯಮಾನಃ ಬ್ರೂಯಾತ್ । ಜಪೇತ್ ಇತ್ಯರ್ಥಃ । ಇಮಂ ಮನ್ತ್ರಮ್ । ಹೇ ಪ್ರಾಣಾ ವಸವಃ, ಇದಂ ಮೇ ಪ್ರಾತಃಸವನಂ ಮಮ ಯಜ್ಞಸ್ಯ ವರ್ತತೇ । ತನ್ಮಾಧ್ಯಂದಿನಂ ಸವನಮ್ ಅನುಸಂತನುತ ಇತಿ ಮಾಧ್ಯಂದಿನೇನ ಸವನೇನ ಆಯುಷಾ ಸಹಿತಮ್ ಏಕೀಭೂತಂ ಸನ್ತತಂ ಕುರುತ ಇತ್ಯರ್ಥಃ । ಮಾ ಅಹಂ ಯಜ್ಞಃ ಯುಷ್ಮಾಕಂ ಪ್ರಾಣಾನಾಂ ವಸೂನಾಂ ಪ್ರಾತಃಸವನೇಶಾನಾಂ ಮಧ್ಯೇ ವಿಲೋಪ್ಸೀಯ ವಿಲುಪ್ಯೇಯ ವಿಚ್ಛಿದ್ಯೇಯ ಇತ್ಯರ್ಥಃ । ಇತಿಶಬ್ದೋ ಮನ್ತ್ರಪರಿಸಮಾಪ್ತ್ಯರ್ಥಃ । ಸ ತೇನ ಜಪೇನ ಧ್ಯಾನೇನ ಚ ತತಃ ತಸ್ಮಾತ್ ಉಪತಾಪಾತ್ ಉದೇತಿ ಉದ್ಗಚ್ಛತಿ । ಉದ್ಗಮ್ಯ ವಿಮುಕ್ತಃ ಸನ್ ಅಗದೋ ಹ ಅನುಪತಾಪೋ ಭವತ್ಯೇವ ॥

(ಭಾಷ್ಯಾರ್ಥ)

ಆ ಯಜ್ಞವಾಗಿ ಸಂಪಾದನೆಮಾಡಿಕೊಂಡ ಆ (ಪುರುಷ)ನನ್ನು ಈ ಪ್ರಾತಃಸವನನೆಂದು ಸಂಪಾದಿತವಾಗಿರುವ ವಯಸ್ಸಿನಲ್ಲಿ ಸಾವಿನ ಶಂಕೆಗೆ ಕಾರಣವಾಗಿರುವ ಯಾವದಾದರೂ ರೋಗವೇ ಮುಂತಾದದ್ದು ಉಪತಾಪಗೊಳಿಸಿದರೆ, ದುಃಖವನ್ನುಂಟುಮಾಡಿದರೆ, ಆಗ ಆ ಯಜ್ಞಸಂಪಾದನೆಯನ್ನು ಮಾಡಿಕೊಂಡಿರುವ

ಪುರುಷನು ತನ್ನನ್ನು ಯಜ್ಞವೆಂದು ಭಾವಿಸಿಕೊಂಡವನಾಗಿ (ಹೀಗೆಂದು) ಹೇಳಬೇಕು, ಈ ಮಂತ್ರವನ್ನು ಜಪಿಸಬೇಕು ಎಂದರ್ಥ. ''ಎಲೈ ಪ್ರಾಣಗಳೆಂಬ ವಸುಗಳೆ, ಇದು ಯಜ್ಞರೂಪನಾದ ನನ್ನ ಪ್ರಾತಃಸವನವಾಗಿದೆ. ಇದನ್ನು ಮಾಧ್ಯಂದಿನಸವನಕ್ಕೆ ಹೊಂದಿಕೆಯಾಗುವಂತೆ ಮುಂದುವರಿಸಿರಿ, ಮಾಧ್ಯಂದಿನಸವನವಾದ ಆಯುಸ್ಸಿನೊಡನೆ ಒಂದಾಗುವಂತೆ (ನಡುವೆ) ಕಡಿವಡೆಯದಂತೆ ಮಾಡಿರಿ - ಎಂದರ್ಥ. ಯಜ್ಞನಾದ ನಾನು ಪ್ರಾಣವಸುಗಳೆಂಬ ಪ್ರಾತಃಸವನದೊಡೆಯರಾದ ನಿಮ್ಮ ನಡುವೆಯಲ್ಲಿ (ವಿಲೋಪ್ಸೀಯ= ವಿಲುಪ್ಯೇಯ) ಲೋಪವಾಗದಂತಾಗಲಿ, ವಿಚ್ಛೇದವಾಗದಂತಾಗಲಿ ! ಎಂದರ್ಥ. (ಮೂಲದಲ್ಲಿರುವ) ಇತಿಶಬ್ದವು ಮಂತ್ರಪರಿಸಮಾಪ್ತಿಯನ್ನು (ತೋರಿಸು)ವದಕ್ಕೆ (ಬಂದಿದೆ).

ಅವನು ಈ ಜಪದಿಂದಲೂ ಧ್ಯಾನದಿಂದಲೂ ಆದರಿಂದ ಆ ಉಪತಾಪದಿಂದ ಮೇಲಕ್ಕೇಳುತ್ತಾನೆ. ಮೇಲಕ್ಕೇರುತ್ತಾನೆ. ಮೇಲಕ್ಕೇರಿ, ಬಿಡುಗಡೆಯನ್ನು ಹೊಂದಿದವನಾಗಿ ರೋಗವಿಲ್ಲದವನಾಗುತ್ತಾನೆ, ಉಪತಾಪವಿಲ್ಲದವನಾಗಿಯೇ ತೀರುತ್ತಾನೆ (ಎಂದರ್ಥ).

(ಉಪನಿಷತ್ತು)

ಅಥ ಯಾನಿ ಚತುಶ್ಚತ್ವಾರಿಗ್ಂಶದ್ ವರ್ಷಾಣಿ ತನ್ಮಾಧ್ಯಂದಿನಗ್ಂ ಸವನಂ ಚತುಶ್ಚತ್ವಾರಿಗ್ಂಶದಕ್ಷರಾ ತ್ರಿಷ್ಟುಪ್ ತ್ರೈಷ್ಟುಭಂ ಮಾಧ್ಯಂದಿನಗ್ಂ ಸವನಂ ತದಸ್ಯ ರುದ್ರಾ ಅನ್ವಾಯತ್ತಾಃ ಪ್ರಾಣಾ ವಾವ ರುದ್ರಾ ಏತೇ ಹೀದಗ್ಂ ಸರ್ವಗ್ಂ ರೋದಯನ್ತಿ ॥೩॥

೩. ಇನ್ನು ನಲವತ್ತನಾಲ್ಕು ವರ್ಷಗಳಿರುವವಲ್ಲ, ಅದು ಮಾಧ್ಯಂದಿನಸವನವು. ತ್ರಿಷ್ಟುಪ್ಪು ನಲವತ್ತುನಾಲ್ಕು ಅಕ್ಷರದ್ದು; ಮಾಧ್ಯಂದಿನಸವನವು ತ್ರಿಷ್ಟುಪ್ಪಿಗೆ ಸಂಬಂಧಪಟ್ಟದ್ದು. ಇದರ ಆ (ಸವನ)ವನ್ನು ರುದ್ರರು ಬೆಂಬಿಡಿದಿರುವರು. ಪ್ರಾಣಗಳೇ ರುದ್ರರು, ಏಕೆಂದರೆ ಇದೆಲ್ಲವನ್ನೂ ರೋದನಮಾಡಿಸುತ್ತಾರೆ.

(ಉಪನಿಷತ್ತು)

ತಂ ಚೇದೇತಸ್ಮಿನ್ ವಯಸಿ ಕಿಂಚಿದುಪತಪೇತ್ ಸ ಬ್ರೂಯಾತ್ ಪ್ರಾಣಾ ರುದ್ರಾ ಇದಂ ಮೇ ಮಾಧ್ಯಂದಿನಗ್ಂ ಸವನಂ ತೃತೀಯ-ಸವನಮನುಸಂತನುತೇತಿ ಮಾऽಹಂ ಪ್ರಾಣಾನಾಗ್ಂ ರುದ್ರಾಣಾಂ

ಮಧ್ಯೇ ಯಜ್ಞೋ ವಿಲೋಪಿಷ್ಯೇತ್ಯುದ್ಧೈವ ತತ ಏತ್ಯಗದೋ ಹ ಭವತಿ ॥೪॥

೪. ಅವನನ್ನು ಈ ವಯಸ್ಸಿನಲ್ಲಿ ಯಾವದಾದರೂ ಉಪತಾಪಗೊಳಿಸಿದರೆ ಅವನು "ಪ್ರಾಣರುದ್ರರುಗಳೆ, ಈ ನನ್ನ ಮಾಧ್ಯಂದಿನ ಸವನವನ್ನು ಮೂರನೆಯ ಸವನಕ್ಕೆ (ಹೊಂದುಗೆಯಾಗುವಂತೆ) ಮುಂದುವರಿಸಿರಿ ; ಯಜ್ಞವಾದ ನಾನು ಪ್ರಾಣರುದ್ರರ ನಡುವೆ ವಿಲೋಪವಾಗದೆ ಇರಲಿ !" ಎಂದು ಹೇಳಬೇಕು. ಅದರಿಂದ ಮೇಲಕ್ಕೆ ಹೋಗಿಯೇತೀರುತ್ತಾನೆ , ರೋಗವಿಲ್ಲದವನೇ ಆಗುತ್ತಾನೆ.

ಪುರುಷಯಜ್ಞದ ಮಾಧ್ಯಂದಿನಸವನವೂ ಜಪವೂ

(ಭಾಷ್ಯ)

೨೬. **ಅಥ ಯಾನಿ ಚತುಶ್ಚತ್ವಾರಿಂಶದ್ವರ್ಷಾಣಿ ಇತ್ಯಾದಿ ಸಮಾನಮ್ । ರುದನ್ತಿ ರೋದಯನ್ತೀತಿ ಪ್ರಾಣಾ ರುದ್ರಾಃ । ಕ್ರೂರಾ ಹಿ ತೇ ಮಧ್ಯಮೇ ವಯಸಿ ಅತೋ ರುದ್ರಾಃ ॥**

(ಭಾಷ್ಯಾರ್ಥ)

'ಇನ್ನು ನಲವತ್ತನಾಲ್ಕು ವರ್ಷಗಳಿರುವವಲ್ಲ.' ಎಂದು · ಮುಂತಾಗಿರುವ (ಗ್ರಂಥವು ಹಿಂದಿನದಕ್ಕೆ) ಸಮಾನ(ವಾಗಿದೆ). ಅಳುತ್ತವೆ, ಅಳುವಂತೆ ಮಾಡುತ್ತವೆ. ಆದ್ದರಿಂದ ಪ್ರಾಣರು ರುದ್ರರು. ನಡುಹರೆಯದಲ್ಲಿ ಅವು ಕ್ರೂರವಾಗಿರುತ್ತವೆಯಲ್ಲವೆ ? ಆದ್ದರಿಂದ ರುದ್ರರು ಎಂದಿದೆ.[1]

(ಉಪನಿಷತ್ತು)

ಅಥ ಯಾನ್ಯಷ್ಟಾಚತ್ವಾರಿಗ್ಂಶದ್ವರ್ಷಾಣಿ ತತ್ ತೃತೀಯ ಸವನಮಷ್ಟಾಚತ್ವಾರಿಗ್ಂಶದಕ್ಷರಾ ಜಗತೀ ಜಾಗತಂ ತೃತೀಯ ಸವನಂ ತದಸ್ಯಾಽಽದಿತ್ಯಾ ಅನ್ವಾಯತ್ತಾಃ ಪ್ರಾಣಾ ವಾವಾಽಽದಿತ್ಯಾ ಏತೇ ಹೀದಗ್ಂ ಸರ್ವಮಾದದತೇ ॥೫॥

1. ಜಪಮಂತ್ರದ ವಿಷಯಕ್ಕೆ ಹೆಚ್ಚಿಗೆಯೇನೂ ಹೇಳತಕ್ಕದ್ದಿಲ್ಲವಾದ್ದರಿಂದ ಭಾಷ್ಯದಲ್ಲಿ ಏನನ್ನೂ ಬರೆದಿಲ .

ತಂ ಚೇದೇತಸ್ಮಿನ್ ವಯಸಿ ಕಿಂಚಿದುಪತಪೇತ್ ಸ ಬ್ರೂಯಾತ್ ಪ್ರಾಣಾ ಆದಿತ್ಯಾ ಇದಂ ಮೇ ತೃತೀಯಸವನಮಾಯುರನು-ಸಂತನುತೇತಿ ಮಾಽಹಂ ಪ್ರಾಣಾನಾಮಾದಿತ್ಯಾನಾಂ ಮಧ್ಯೇ ಯಜ್ಞೋ ವಿಲೋಪ್ಸೀಯೇತ್ಯುದ್ಧೈವ ತತ ಏತ್ಯಗದೋ ಹೈವ ಭವತಿ ॥೬॥

೫. ಇನ್ನು ನಲವತ್ತೆಂಟುವರ್ಷಗಳಿರುವವಲ್ಲ, ಅದು ಮೂರನೆಯ ಸವನವು. ಜಗತಿಯು ನಲವತ್ತೆಂಟಕ್ಷರದ್ದು ; ಮೂರನೆಯ ಸವನವು ಜಗತೀಚ್ಛಂದಸ್ಸಿಗೆ ಸಂಬಂಧಪಟ್ಟದ್ದು. ಇದರ ಆ (ಸವನ)ವನ್ನು ಆದಿತ್ಯರು ಬೆಂಬಿಡಿದಿರುವರು. ಪ್ರಾಣಗಳೇ ಆದಿತ್ಯರು ; ಏಕೆಂದರೆ ಇವೇ ಇದೆಲ್ಲವನ್ನೂ ಆದಾನಮಾಡುತ್ತವೆ.

೬. ಅವನನ್ನು ಈ ವಯಸ್ಸಿನಲ್ಲಿ ಯಾವದಾದರೂ ಉಪತಾಪ ಗೊಳಿಸಿದರೆ ಅವನು "ಪ್ರಾಣಾದಿತ್ಯರೆ, ಈ ನನ್ನ ಮೂರನೆಯ ಸವನವಾದ ಆಯುಸ್ಸನ್ನು ಮುಂದುವರಿಸಿರಿ । ಯಜ್ಞವಾದ ನಾನು ಪ್ರಾಣಾದಿತ್ಯರ ನಡುವೆ ವಿಲೋಪವಾಗದೆ ಇರಲಿ !" ಎಂದು ಹೇಳಬೇಕು. ಅದರಿಂದ ಅವನು ಮೇಲಕ್ಕೆ ಹೋಗಿಯೇತೀರುತ್ತಾನೆ, ರೋಗವಿಲ್ಲದವನೇ ಆಗುತ್ತಾನೆ.

ಮೂರನೆಯ ಸವನವೂ ಅದರ ಜಪವೂ

(ಭಾಷ್ಯ)

೨೬೭. ತಥಾ ಆದಿತ್ಯಾಃ ಪ್ರಾಣಾಃ । ತೇ ಹಿ ಇದಂ ಶಬ್ದಾದಿಜಾತಮ್ ಆದದತೇ ತತ ಆದಿತ್ಯಾಃ । ತೃತೀಯಸವನಮ್ ಆಯುಃ ಷೋಡಶೋತ್ತರ-ವರ್ಷಶತಂ ಸಮಾಪಯತ ಅನುಸನ್ತನುತ । ಯಜ್ಞಂ ಸಮಾಪಯತ ಇತ್ಯರ್ಥಃ । ಸಮಾನಮನ್ಯತ್ ॥

(ಭಾಷ್ಯಾರ್ಥ)

ಇದರಂತೆಯೇ ಪ್ರಾಣಗಳೇ ಆದಿತ್ಯರು ; ಅವು ಈ ಶಬ್ದಾದಿಜಾತವನ್ನು ತೆಗೆದುಕೊಳ್ಳುತ್ತವೆಯಲ್ಲವೆ ? ಆದ್ದರಿಂದ (ಅವು) ಆದಿತ್ಯರು. ಮೂರನೆಯ ಸವನವಾದ ಆಯುಸ್ಸನ್ನು ಮುಂದುವರಿಸಿರಿ - ಎಂದರೆ ನೂರಹದಿನಾರುವರ್ಷವನ್ನು

ಮುಗಿಸಿಕೊಡಿರಿ, ಯಜ್ಞವನ್ನು ಮುಗಿಸಿಕೊಡಿರಿ ! ಎಂದರ್ಥ. (ಉಳಿದದ್ದು ಹಿಂದಿನ ಗ್ರಂಥಕ್ಕೆ) ಸಮಾನವು.

(ಉಪನಿಷತ್ತು)

ಏತದ್ಧ ಸ್ಮ ವೈ ತದ್ವಿದ್ವಾನಾಹ ಮಹಿದಾಸ ಐತರೇಯಃ ಸ ಕಿಂ ಮ ಏತದುಪತಪಸಿ ಯೋಽಹಮೇನೇನ ನ ಪ್ರೇಷ್ಯಾಮೀತಿ ಸ ಹ ಷೋಡಶಂ ವರ್ಷಶತಮಜೀವತ್ ಪ್ರ ಹ ಷೋಡಶಂ ವರ್ಷಶತಂ ಜೀವತಿ ಯ ಏವಂ ವೇದ॥೭॥

೭. ಆ ಇದನ್ನು ಅರಿತುಕೊಂಡು ಮಹಿದಾಸಐತರೇಯನು ಇಂತೆಂದನಂತೆ : "ಆ (ನೀನು) ಹೀಗೇಕೆ ನನ್ನನ್ನು ಉಪತಾಪಗೊಳಿಸುತ್ತೀಯೆ ? ಏಕೆಂದರೆ ನಾನು ಇದರಿಂದ ಹೋಗುವವನಲ್ಲ." ಅವನು ನೂರುಹದಿನಾರುವರ್ಷಗಳವರೆಗೂ ಬದುಕಿದ್ದನು. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನು ನೂರುಹದಿನಾರುವರ್ಷಗಳು ಬದುಕಿರುವನು.

ಉಪಾಸನೆಯ ಸಾಕ್ಷಾತ್ಕಾರಕ್ಕೆ ಫಲ

(ಭಾಷ್ಯ)

೨೬೮. ನಿಶ್ಚಿತಾ ಹಿ ವಿದ್ಯಾ ಫಲಾಯ ಇತ್ಯೇತದ್ದರ್ಶಯನ್ ಉದಾಹರತಿ । ಏತದ್ ಯಜ್ಞದರ್ಶನಂ ಹ ಸ್ಮ ವೈ ಕಿಲ ತದ್ ವಿದ್ವಾನ್ ಆಹ ಮಹಿದಾಸೋ ನಾಮತಃ । ಇತರಾಯಾ ಅಪತ್ಯಮ್ ಐತರೇಯಃ । ಕಿಂ ತಸ್ಮಾತ್ ಮೇ ಮಮ ಏತತ್ ಉಪತಪನಮ್ ಉಪತಪಸಿ ಸ ತ್ವಂ ಹೇ ರೋಗ, ಯೋಽಹಂ ಯಜ್ಞಃ ಅನೇನ ತ್ವತ್ಕೃತೇನ ಉಪತಾಪೇನ ನ ಪ್ರೇಷ್ಯಾಮಿ ನ ಮರಿಷ್ಯಾಮಿ ಅತೋ ವೃಥಾ ತವ ಶ್ರಮ ಇತ್ಯರ್ಥಃ । ಇತಿ ಏವಮ್ ಆಹ ಸ್ಮ ಇತಿ ಪೂರ್ವೇಣ ಸಂಬನ್ಧಃ । ಸ ಏವಂನಿಶ್ಚಯಃ ಸನ್ ಷೋಡಶಂ ವರ್ಷಶತಮ್ ಅಜೀವತ್ । ಅನ್ಯೋಽಪಿ ಏವಂನಿಶ್ಚಯಃ ಷೋಡಶಂ ವರ್ಷಶತಂ ಪ್ರಜೀವತಿ ಯ ಏವಂ ಯಥೋಕ್ತಂ ಯಜ್ಞಸಂಪಾದನಂ ವೇದ ಜಾನಾತಿ ಸ ಇತ್ಯರ್ಥಃ॥

(ಭಾಷ್ಯಾರ್ಥ)

ನಿಶ್ಚಿತವಾದ[1] ವಿದ್ಯೆಯೇ ಫಲಕ್ಕೆ (ಸಾಧಕವಾಗುವದು) ಎಂಬಿದನ್ನು

1. ಸಾಕ್ಷಾತ್ಕಾರದಿಂದ ಗಟ್ಟಿಯಾಗಿರುವ.

ತಿಳಿಸುವದಕ್ಕಾಗಿ (ಶ್ರುತಿಯು ಇದಕ್ಕೊಂದು) ಉದಾಹರಣೆಯನ್ನು ಕೊಡುತ್ತದೆ. ಆ ಈ ಯಜ್ಞದರ್ಶನವನ್ನು (ಹ ಸ್ಮ ವೈ= ಕಿಲ) ಅರಿತುಕೊಂಡ ಐತರೇಯನು ಇತರಾ ಎಂಬಾಕೆಯ ಮಗನಾದ ಮಹಿದಾಸನು (ಆ) ಹೆಸರಿನವನು, ಹೀಗೆಂದನಂತೆ ; ಎಲೈ ರೋಗವೆ, ಆ ನೀನು, ಏತಕ್ಕೆ ಯಾವ ಕಾರಣದಿಂದ (ಮೇ-ಮಮ) ನನಗೆ ಹೀಗೆ ಉಪತಾಪವನ್ನು ಮಾಡುತ್ತೀದೀಯೆ ? ಈ ಯಜ್ಞ(ರೂಪ)ನಾದ ನಾನು ಇದರಿಂದ, ನೀನು ಮಾಡುವ ಉಪತಾಪದಿಂದ ಹೊರಟುಹೋಗುವದಿಲ್ಲ, ಸಾಯುವದಿಲ್ಲ, ಆದ್ದರಿಂದ (ಈ) ನಿನ್ನ ಶ್ರಮವು ವ್ಯರ್ಥವು ಎಂದರ್ಥ. ಹೀಗೆಂದು (ಆಹ ಸ್ಮ ವೈ) ನುಡಿದನಂತೆ - ಎಂದು ಹಿಂದಿರುವ ಮಾತಿಗೆ ಇದಕ್ಕೆ ಸಂಬಂಧವು.

ಅವನು ಈ ನಿಶ್ಚಯವುಳ್ಳವನಾಗಿ ನೂರುಹದಿನಾರು ವರ್ಷಗಳವರೆಗೆ ಬದುಕಿದ್ದನು. ಮತ್ತೊಬ್ಬನೂ ಈ ನಿಶ್ಚಯವುಳ್ಳವನಾದರೆ ನೂರುಹದಿನಾರು ವರ್ಷಗಳ ವರೆಗೆ ಪ್ರಜೀವನಮಾಡಿಕೊಂಡಿರುವನು.[1] ಯಾವನು ಹೀಗೆ ಮೇಲೆ ಹೇಳಿದ ಯಜ್ಞಸಂಪಾದನ(ಕ್ರಮವನ್ನು) ಅರಿತುಕೊಂಡಿರುವನೋ, ತಿಳಿದುಕೊಂಡಿರುವನೋ, ಅವನು (ಹೀಗೆ ಜೀವಿಸಿಕೊಂಡಿರುವನು) ಎಂದರ್ಥ.

ಮೂರನೆಯ ಅಧ್ಯಾಯ-ಹದಿನೇಳನೆಯ ಖಂಡ

(ದೀರ್ಘಾಯುಸ್ಸಿಗೆ ಉಪಾಸನೆ ಮುಂದುವರಿದದ್ದು)

ಪುರುಷಯಜ್ಞದ ದೀಕ್ಷಾದಿಗಳು

(ಉಪನಿಷತ್ತು)

ಸ ಯದಶಿಶಿಷತಿ ಯತ್ತಿಪ್ಸಾಸತಿ ಯನ್ನ ರಮತೇ ತಾ ಅಸ್ಯ ದೀಕ್ಷಾಃ ॥೧॥

೧. ಅವನಿಗೆ ಹಸಿವಾಗುತ್ತದೆಯಲ್ಲ, ನೀರಡಿಕೆಯಾಗುತ್ತದೆಯಲ್ಲ, ರತಿಯಿಲ್ಲದೆ ಇರುವನಲ್ಲ, ಅವು ಈ (ಯಜ್ಞದ) ದೀಕ್ಷೆಗಳು.

1. ಉತಮರೀತಿಯಿಂದ ಬಾಳುವನು.

ಈ ಯಜ್ಞದ ದೀಕ್ಷೆ

(ಭಾಷ್ಯ)

೨೬೯. 'ಸ ಯದಶಿಶಿಷತಿ' ಇತ್ಯಾದಿ ಯಜ್ಞಸಾಮಾನ್ಯನಿರ್ದೇಶಃ ಪುರುಷಸ್ಯ ಪೂರ್ವೇಣೈವ ಸಂಬಧ್ಯತೇ । ಯದಶಿಶಿಷತಿ ಅಶಿತುಮಿಚ್ಛತಿ ತಥಾ ಪಿಪಾಸತಿ ಪಾತುಮಿಚ್ಛತಿ ಯನ್ನ ರಮತೇ ಇಷ್ಟಾದ್ಯಪ್ರಾಪ್ತಿನಿಮಿತ್ತಮ್ । ಯದೈವಂಜಾತೀಯಕಂ ದುಃಖಮನುಭವತಿ ತಾ ಅಸ್ಯ ದೀಕ್ಷಾಃ। ದುಃಖಸಾಮಾನ್ಯಾದ್ ವಿಧಿಯಜ್ಞಸ್ಯೇವ॥

(ಭಾಷ್ಯಾರ್ಥ)

'ಅವನಿಗೆ ಹಸಿವಾಗುತ್ತದೆಯಲ್ಲ....' ಎಂಬುದೇ ಮುಂತಾದ ಯಜ್ಞದ ಹೋಲಿಕೆಯನ್ನು ಪುರುಷನಿಗೆ ತಿಳಿಸಿರುವದು ಹಿಂದಿನ (ಗ್ರಂಥ)ಕ್ಕೇ ಸಂಬದ್ಧವಾಗಿರುತ್ತದೆ. (ಅಶಿಶಿಷತಿ =) ಎಂದರೆ ಹಸಿವನ್ನನುಭವಿಸುತ್ತಾನಲ್ಲ, ತಿನ್ನಬೇಕೆಂದು ಇಚ್ಛಿಸಿ (ಸಂಕಟಪಡು)ತ್ತಾನಲ್ಲ, ಮತ್ತು (ಪಿಪಾಸತಿ=) ನೀರಡಿಕೆಯನ್ನನುಭವಿಸುತ್ತಾನಲ್ಲ, ಕುಡಿಯಬೇಕೆಂದು ಇಚ್ಛಿಸಿ (ಸಂಕಟಪಡು)ತ್ತಾನಲ್ಲ, ತನಗೆ ಇಷ್ಟವಾದದ್ದೇ ಮುಂತಾದದ್ದು ದೊರಕದ್ದರಿಂದ ರತಿಯಿಲ್ಲದೆ (ಬೇಸರಪಡು)ತ್ತಾನಲ್ಲ[1], ಈ ಬಗೆಯ[2] ದುಃಖವನ್ನನುಭವಿಸುತ್ತಾನಲ್ಲ, ಅವುಗಳೇ ಇದರ ದೀಕ್ಷೆಗಳು ; ಏಕೆಂದರೆ ವಿಧಿಯಜ್ಞದ ದೀಕ್ಷೆಗಳಂತೆ (ಅವು) ದುಃಖ(ವಾಗಿರುವವೆಂಬುದು) ಸಮಾನವಾಗಿದೆ.

(ಉಪನಿಷತ್ತು)

ಯದಶ್ನಾತಿ ಯತ್ ಪಿಬತಿ ಯದ್ ರಮತೇ ತದುಪಸದೈರೇತಿ ॥೨॥

೨. ಇನ್ನು ತಿನ್ನುತ್ತಾನಲ್ಲ, ಕುಡಿಯುತ್ತಾನಲ್ಲ, ಸಂತುಷ್ಟನಾಗುತ್ತಾನಲ್ಲ, ಆಗ ಉಪಸತ್ತುಗಳೊಡನೆ (ಹೋಲಿಕೆಯನ್ನು) ಪಡೆದುಕೊಳ್ಳುತ್ತಾನೆ.

ಈ ಯಜ್ಞದ ಉಪಸದಗಳು

(ಭಾಷ್ಯ)

೨೭೦. ಅಥ ಯದಶ್ನಾತಿ ಯತ್ ಪಿಬತಿ ಯದ್ ರಮತೇ ರತಿಂ ಚ ಅನುಭವತಿ ಇಷ್ಟಾದಿಸಂಯೋಗಾತ್ ತತ್ ಉಪಸದೈಃ ಸಮಾನತಾಮ್ ಏತಿ । ಉಪಸದಾಂ ಚ

---

1. ಇಷ್ಟಾದ್ಯಪ್ರಾಪ್ತಿ ಎಂಬುದು ಇಷ್ಟಾಪ್ರಾಪ್ತ್ಯಾದಿ ಎಂದಿದ್ದರೆ ಚೆನ್ನಾಗಿರುತ್ತದೆ. ಆಗ ಅನಿಷ್ಟ ಪ್ರಾಪ್ತಿಯನ್ನೂ ಸೇರಿಸಿಕೊಳ್ಳಬಹುದಾಗುವದು ; ಆದರೆ ಮುಂದಿನ ಕಂಡಿಕೆಯ ಭಾಷ್ಯದಲ್ಲಿಯೂ ಇಷ್ಟಾದಿ ಎಂದೇ ಇದೆ.

2. ಇಲ್ಲಿಹೇಳಿರುವದು ಈ ಬಗೆಯ ಎಲ್ಲಾ ದುಃಖಗಳಿಗೂ ಉಪಲಕ್ಷಣವೆಂದು ಭಾವ.

ಪಯೋವ್ರತತ್ವನಿಮಿತ್ತಂ ಸುಖಮಸ್ತಿ। ಅಲ್ಪಭೋಜನೀಯಾನಿ ಚ ಅಹಾನಿ ಆಸನ್ನಾನಿ ಇತ್ಯತಃ ಪ್ರಶಾಸ್ತಿಃ ಅಶನಾದೀನಾಮ್ ಉಪಸದಾಂ ಚ ಸಾಮಾನ್ಯಮ್ ॥

(ಭಾಷ್ಯಾರ್ಥ)

ಇನ್ನು ತಿನ್ನುತ್ತಾನಲ್ಲ, ಕುಡಿಯುತ್ತಾನಲ್ಲ, ಸಂತುಷ್ಟನಾಗಿರುತ್ತಾನಲ್ಲ, ಇಷ್ಟವೇ ಮುಂತಾದದ್ದರ ಸಂಯೋಗದಿಂದ ಸಂತೋಷವನ್ನನುಭವಿಸುತ್ತಾನಲ್ಲ, ಆಗ ಉಪಸತ್ತುಗಳೊಡನೆ[1] ಸಮಾನತ್ವವನ್ನು ಪಡೆದುಕೊಳ್ಳುತ್ತಾನೆ. ಉಪಸತ್ತುಗಳಲ್ಲಿ ಪಯೋವ್ರತದ ನಿಮಿತ್ತದಿಂದ ಸುಖವಿರುತ್ತದೆ ; ಅಲ್ಪಭೋಜನದ ಅಹಸ್ಸುಗಳು, ಹತ್ತಿರವಿರುತ್ತವೆಂಬ ಸಮಾಧಾನವೂ ಇರುತ್ತದೆ.[2] (ಇದು) ಅಶನಾದಿಗಳಿಗೂ ಉಪಸತ್ತುಗಳಿಗೂ ಹೋಲಿಕೆ.[3]

(ಉಪನಿಷತ್ತು)

ಅಥ ಯದ್ದಸತಿ ಯಜ್ಜಕ್ಷತಿ ಯನ್ಮೈಥುನಂ ಚರತಿ ಸುತಶಸ್ತ್ರೈರೇವ ತದೇತಿ ॥೩॥

೩. ಇನ್ನು ನಗುತ್ತಾನಲ್ಲ, ತಿನ್ನುತ್ತಾನಲ್ಲ, ಮೈಥುನವನ್ನು ಮಾಡುತ್ತಾನಲ್ಲ, ಆಗ ಸುತಶಸ್ತ್ರಗಳೊಡನೆ (ಹೋಲಿಕೆಯನ್ನು) ಪಡೆಯುತ್ತಾನೆ.

ಈ ಯಜ್ಞದ ಸುತಶಸ್ತ್ರಗಳು

(ಭಾಷ್ಯ)

೨೭೧. ಅಥ ಯದ್ ಹಸತಿ ಯದ್ ಜಕ್ಷತಿ ಭಕ್ಷಯತಿ ಯತ್ ಮೈಥುನಂ ಚರತಿ, ಸುತಶಸ್ತ್ರೈರೇವ ತತ್ ಸಮಾನತಾಮ್ ಏತಿ। ಶಬ್ದವತ್ತ್ವಸಾಮಾನ್ಯಾತ್ ॥

(ಭಾಷ್ಯಾರ್ಥ)

ಇನ್ನು ನಗುತ್ತಾನಲ್ಲ, (ಜಕ್ಷತಿ = ಭಕ್ಷಯತಿ) ಅಗಿದು ತಿನ್ನುತ್ತಾನಲ್ಲ,

---

1. ಜ್ಯೋತಿಷ್ಟೋಮದಲ್ಲಿ ಪ್ರವರ್ಗ್ಯಾಹಸ್ಸುಗಳಲ್ಲಿ ಉಪಸತ್ತುಗಳೆಂಬ ಹೋಮಗಳಿರುತ್ತವೆ. ಅಲ್ಲಿ ಪಯೋಭಕ್ಷಣವೇ ಮುಂತಾದ ನಿಯಮಗಳನ್ನು ಮಾಡುತ್ತಾರೆ. ಐ. ಬ್ರಾ. ೪-೬ರಿಂದ ೮ರವರೆಗೆ ಉಪಸತ್ತುಗಳ ವಿಚಾರವಿದೆ.
2. ಉಪಸತ್ತುಗಳ ಮುಂದೆ ಬರುವ ಅಹಸ್ಸುಗಳಲ್ಲಿ ಅಲ್ಪಭೋಜನವನ್ನು ಮಾಡಬೇಕಾಗುತ್ತದೆ.
3. ಇಲ್ಲಿ ತಿನ್ನುವದು, ಕುಡಿಯುವದು- ಮುಂತಾದದ್ದರಿಂದ ಆಗುವ ಕ್ಲೇಶಪರಿಹಾರವನ್ನೂ ಸಮಾಧಾನವನ್ನೂ ಉಪಸತ್ತುಗಳಿಗೆ ಹೋಲಿಸಿದೆ ಎಂದರ್ಥ.

ಮೈಥುನವನ್ನಾಚರಿಸುತ್ತಾನಲ್ಲ, ಆಗ ಸ್ತುತಶಸ್ತ್ರಗಳೊಡನೆಯೇ[1] ಹೋಲಿಕೆಯನ್ನು ಪಡೆದುಕೊಳ್ಳುತ್ತಾನೆ, ಏಕೆಂದರೆ ಶಬ್ದವುಳ್ಳದ್ದಾಗಿರುವದೆಂಬುದು (ಎರಡಕ್ಕೂ) ಸಮಾನವಾಗಿರುತ್ತದೆ.

(ಉಪನಿಷತ್ತು)

ಅಥ ಯತ್ತಪೋ ದಾನಮಾರ್ಜವಮಹಿಗ್ಂಸಾ ಸತ್ಯವಚನಮಿತಿ ತಾ ಅಸ್ಯ ದಕ್ಷಿಣಾಃ ॥೪॥

೪. ಇನ್ನು ತಪಸ್ಸು, ದಾನ, ಆರ್ಜವ, ಅಹಿಂಸೆ, ಸತ್ಯವಚನ- ಇಂಥವುಗಳಿರುವವಲ್ಲ, ಅವು ಇದಕ್ಕೆ ದಕ್ಷಿಣೆಗಳು.

ಈ ಯಜ್ಞದ ದಕ್ಷಿಣೆಗಳು

(ಭಾಷ್ಯ)

೨೭೨. **ಅಥ ಯತ್ ತಪಃ, ದಾನಮ್, ಆರ್ಜವಮ್, ಅಹಿಂಸಾ, ಸತ್ಯವಚನಮ್ ಇತಿ ತಾ ಅಸ್ಯ ದಕ್ಷಿಣಾಃ। ಧರ್ಮಪುಷ್ಟಿಕರತ್ವಸಾಮಾನ್ಯಾತ್ ॥**

(ಭಾಷ್ಯಾರ್ಥ)

ಇನ್ನು ತಪಸ್ಸು, ದಾನ, ಋಜುತ್ವ, ಅಹಿಂಸೆ, ಸತ್ಯವಚನ- ಇಂಥವು ಗಳಿರುವವಲ್ಲ, ಅವು ಇದಕ್ಕೆ ದಕ್ಷಿಣೆಗಳು ; ಏಕೆಂದರೆ ಧರ್ಮಕ್ಕೆ ಪುಷ್ಟಿಯನ್ನುಂಟು ಮಾಡುವದೆಂಬುದು (ಎರಡಕ್ಕೂ) ಸಮಾನ(ವಾಗಿದೆ).

(ಉಪನಿಷತ್ತು)

ತಸ್ಮಾದಾಹುಃ ಸೋಷ್ಯತ್ಯಸೋಷ್ಟೇತಿ ಪುನರುತ್ಪಾದನಮೇವಾಸ್ಯ ತನ್ಮರಣಮೇವಾವಭೃಥಃ ॥೫॥

೫. ಆದ್ದರಿಂದ 'ಸೋಷ್ಯತಿ', 'ಅಸೋಷ್ಟ' - ಎನ್ನುವರು. ಅದಾದರೆ ಇದರ ಉತ್ಪಾದನೆಯೇ. ಮರಣವೇ ಇದರ ಅವಭೃಥವು.

ಈ ಯಜ್ಞದ ಸವನಾವಭೃಥಗಳು

(ಭಾಷ್ಯ)

೨೭೩. **ಯಸ್ಮಾಚ್ಚ ಯಜ್ಞಃ ಪುರುಷಃ, ತಸ್ಮಾತ್ ತಂ ಜನಯಿಷ್ಯತಿ ಮಾತಾ**

1. ಸ್ತೋತ್ರಗಳೂ ಮತ್ತು ಹೋತೃಗಳು ಹೇಳುವ ಶಸ್ತ್ರಗಳೆಂಬ ಋಕ್ಕುಗಳು - ಇವಕ್ಕೆ.

ಯದಾ ತದಾ ಆಹುರನ್ಯೇ ಸೋಷ್ಯತೀತಿ ತಸ್ಯ ಮಾತರಮ್ ಯದಾ ಚ ಪ್ರಸೂತಾ ಭವತಿ ತದಾ ಅಸೋಷ್ಟ ಪೂರ್ಣಿಕಾ ಇತಿ । ವಿಧಿಯಜ್ಞ ಇವ ಸೋಷ್ಯತಿ ಸೋಮಂ ದೇವದತ್ತಃ ಇತಿ, ಅಸೋಷ್ಟ ಸೋಮಂ ಯಜ್ಞದತ್ತಃ ಇತಿ । ಅತಃ ಶಬ್ದಸಾಮಾನ್ಯಾದ್ವಾ ಪುರುಷೋ ಯಜ್ಞಃ । ಪುನರುತ್ಪಾದನಮೇವಾಸ್ಯ ತತ್ ಪುರುಷಾಖ್ಯಸ್ಯ ಯಜ್ಞಸ್ಯ ಯತ್ ಸೋಷ್ಯತಿ, ಅಸೋಷ್ಟ ಇತಿ ಶಬ್ದಸಂಬನ್ಧಿತ್ವಂ ವಿಧಿಯಜ್ಞಸ್ಯೇವ । ಕಿಂ ಚ ತತ್ ಮರಣಮೇವ ಅಸ್ಯ ಪುರುಷಯಜ್ಞಸ್ಯ ಅವಭೃಥಃ ಸಮಾಪ್ತಿಸಾಮಾನ್ಯಾತ್ ॥

(ಭಾಷ್ಯಾರ್ಥ)

ಪುರುಷನು ಯಜ್ಞವಾಗಿರುವನಲ್ಲ, ಆದ್ದರಿಂದಲೇ ಅವನನ್ನು ತಾಯಿ ಯಾವಾಗ ಹಡೆಯಲಿರುವಳೋ ಆಗ ಅವನ ತಾಯಿಯನ್ನು ಉಳಿದವರು 'ಸೋಷ್ಯತಿ' (ಹಡೆಯುವಳು) ಎನ್ನುತ್ತಾರೆ ; ಯಾವಾಗ ಹಡೆದಾಯಿತೋ ಆಗ ಪೂರ್ಣಗರ್ಭಿಣಿಯಾಗಿದ್ದವಳು 'ಅಸೋಷ್ಟ' (ಹಡೆದಳು) ಎನ್ನುವರು. ವಿಧಿಯಜ್ಞದಲ್ಲಿ ದೇವದತ್ತನು ಸೋಮವನ್ನು 'ಸೋಷ್ಯತಿ' (ಹಿಂಡುವನು), ಯಜ್ಞದತ್ತನು ಸೋಮವನ್ನು 'ಅಸೋಷ್ಟ' (ಹಿಂಡಿದನು) ಎಂದು (ಹೇಗೆ ಹೇಳುವರೋ) ಹಾಗೆಯೇ (ಇದು). ಆದ್ದರಿಂದ (ಯಜ್ಞವು) ; ಅಥವಾ ಶಬ್ದವು ಸಮಾನವಾಗಿರುವದರಿಂದ ಪುರುಷನು ಯಜ್ಞವು. ವಿಧಿಯಜ್ಞಕ್ಕೆ ಹೇಗೆ ಸೋಷ್ಯತಿ, ಅಸೋಷ್ಟ- ಎಂಬ ಶಬ್ದಗಳ ಸಂಬಂಧಿತ್ವವಿದೆಯೋ ಹಾಗೆ (ಈ) ಪುರುಷನೆಂಬ ಯಜ್ಞಕ್ಕೆ (ಆ ಶಬ್ದಗಳ ಸಂಬಂಧವಿರುವ)ದಷ್ಟೆ, ಅದು ಉತ್ಪಾದನೆಯೇ(ಹಡೆಯುವದೇ)[1]. ಮತ್ತು ಅವನ ಮರಣವೇ ಈ ಪುರುಷಯಜ್ಞಕ್ಕೆ ಅವಭೃಥವು ; ಏಕೆಂದರೆ ಸಮಾಪ್ತಿ ಎಂಬಿದು (ಎರಡಕ್ಕೂ) ಸಮಾನವಾಗಿದೆ.

(ಉಪನಿಷತ್ತು)

ತದ್ಧೈತದ್ ಘೋರ ಆಙ್ಗಿರಸಃ ಕೃಷ್ಣಾಯ ದೇವಕೀಪುತ್ರಾ-ಯೋಕ್ತ್ವೋವಾಚಾಪಿಪಾಸ ಏವ ಸ ತು ಬಭೂವ ಸೋಽನ್ತ ವೇಲಾಯಾಮೇತತ್ ತ್ರಯಂ ಪ್ರತಿಪದ್ಯೇತಾಕ್ಷಿತಮಸ್ಯಚ್ಯುತಮಸಿ ಪ್ರಾಣಸಗ್ಂಶಿತಮಸೀತಿ ತತ್ರೈತೇ ದ್ವೇ ಋಚೌ ಭವತಃ ॥೬॥

೬. ಆ ಇದನ್ನು ಘೋರ ಆಂಗಿರಸನು ದೇವಕೀಪುತ್ರನಾದ ಕೃಷ್ಣನಿಗೆ

1. ಇಲ್ಲಿ ಪುನಃ ಎಂಬ ಶಬ್ದವನ್ನು ಟೀಕಾನುಸಾರವಾಗಿ ಯೋಜನೆಮಾಡಿದೆ. 'ಯತ್ಪುನರಸ್ಯ ಪುರುಷಾಖ್ಯಸ್ಯ ವಿಧಿಯಜ್ಞಸ್ಯೇವ ಸೋಷ್ಯತೀತ್ಯಾದಿಶಬ್ದಸಂಬನ್ಧಿತ್ವಂ ತದುತ್ಪಾದನಮೇವ ತತ್ ಇತಿ ಯೋಜನಾ' ಎಂದು ಟೀಕೆ. ಪುನರುತ್ಪಾದನಮೇವ ಎಂದರೆ ಮತ್ತೆ ಉಂಟುಮಾಡಿಕೊಳ್ಳುವದು, ಎಂದರೆ ಮತ್ತೆ ಹುಟ್ಟುವದು ಎಂಬರ್ಥವೂ ಆಗಬಹುದೆ ?

ಹೇಳಿದನೇನೆಂದರೆ- ''ಅವನಿಗೆ (ಇದರಿಂದ) ಬಾಯಾರಿಕೆಯೇ ಇಲ್ಲ ವಾಯಿತು- ಅವನು ಅಂತವೇಳೆಯಲ್ಲಿ 'ಅಕ್ಷಿತವಾಗಿದೀಯೆ', 'ಅಚ್ಯುತ ವಾಗಿದೀಯೆ', 'ಪ್ರಾಣಸಂಶಿತವಾಗಿದೀಯೆ'- ಎಂಬೀ ಮೂರನ್ನು ಅರಿತಿರಬೇಕು.'' ಈ ವಿಷಯದಲ್ಲಿ ಎರಡು ಋಕ್ಕುಗಳಿವೆ.

ವಿದ್ಯಾಸ್ತುತಿಯೂ, ವಿದ್ಯಾಂಗಜಪವೂ

(ಭಾಷ್ಯ)

೨೭೪. ತದ್ ಹ ಏತದ್ ಯಜ್ಞದರ್ಶನಂ ಘೋರೋ ನಾಮತಃ ಆಙ್ಗಿರಸೋ ಗೋತ್ರತಃ ಕೃಷ್ಣಾಯ ದೇವಕೀಪುತ್ರಾಯ ಶಿಷ್ಯಾಯ ಉಕ್ತ್ವಾ ಉವಾಚ । ತದೇತತ್ತ್ರಯಮ್ ಇತ್ಯಾದಿ ವ್ಯವಹಿತೇನ ಸಂಬನ್ಧಃ । ಸ ಚ ಏತದ್ ದರ್ಶನಂ ಶ್ರುತ್ವಾ ಅಪಿಪಾಸ ಏವ ಅನ್ಯಾಭ್ಯೋ ವಿದ್ಯಾಭ್ಯೋ ಬಭೂವ । ಇತ್ಥಂ ಚ ವಿಶಿಷ್ಟಾ ಇಯಂ ವಿದ್ಯಾ ಯತ್ ಕೃಷ್ಣಸ್ಯ ದೇವಕೀಪುತ್ರಸ್ಯ ಅನ್ಯಾಂ ವಿದ್ಯಾಂ ಪ್ರತಿ ತೃಡ್ವಿಚ್ಛೇದಕರೀ ಇತಿ ಪುರುಷಯಜ್ಞವಿದ್ಯಾಂ ಸ್ತೌತಿ । ಘೋರ ಆಙ್ಗಿರಸಃ ಕೃಷ್ಣಾಯ ಉಕ್ತ್ವಾ ಇಮಾಂ ವಿದ್ಯಾಂ ಕಿಮ್ ಉವಾಚೇತಿ ? ತದಾಹ । ಸ ಏವಂ ಯಥೋಕ್ತಯಜ್ಞವಿತ್ ಅನ್ತವೇಲಾಯಾಂ ಮರಣಕಾಲೇ ಏತತ್ ಮನ್ತ್ರತ್ರಯಂ ಪ್ರತಿಪದ್ಯೇತ ಜಪೇತ್ ಇತ್ಯರ್ಥಃ । ಕಿಂ ತತ್ ? ಅಕ್ಷಿತಮ್ ಅಕ್ಷೀಣಮ್, ಅಕ್ಷತಂ ವಾ ಅಸಿ ಇತ್ಯೇಕಂ ಯಜುಃ । ಸಾಮರ್ಥ್ಯಾತ್ ಆದಿತ್ಯಸ್ಥಂ ಪ್ರಾಣಂ ಚ ಏಕೀಕೃತ್ಯ ಆಹ । ತಥಾ ತಮೇವ ಆಹ । ಅಚ್ಯುತಂ ಸ್ವರೂಪಾತ್ ಅಪ್ರಚ್ಯುತಮ್ ಅಸಿ ಇತಿ ದ್ವಿತೀಯಂ ಯಜುಃ । ಪ್ರಾಣಸಂಶಿತಂ ಪ್ರಾಣಶ್ಚ ಸ ಸಂಶಿತಂ ಸಮ್ಯಕ್ ತನೂಕೃತಂ ಸೂಕ್ಷ್ಮಂ ತತ್ತ್ವಮ್ ಅಸಿ ಇತಿ ತೃತೀಯಂ ಯಜುಃ । ತತ್ರ ಏತಸ್ಮಿನ್ ಅರ್ಥೇ ವಿದ್ಯಾಸ್ತುತಿಪರೇ ದ್ವೇ ಋಚೌ ಮನ್ತ್ರೌ ಭವತಃ । ನ ಜಪಾರ್ಥೇ । ತ್ರಯಂ ಪ್ರತಿಪದ್ಯೇತ ಇತಿ ತ್ರಿತ್ವಸಂಖ್ಯಾಬಾಧನಾತ್ । ಪಞ್ಚಸಂಖ್ಯಾ ಹಿ ತದಾ ಸ್ಯಾತ್ ॥

(ಭಾಷ್ಯಾರ್ಥ)

ಆ ಈ ಯಜ್ಞದರ್ಶನವನ್ನು ಆಂಗಿರಸಗೋತ್ರದ ಘೋರನೆಂಬ ಹೆಸರಿನವನು ದೇವಕೀಪುತ್ರನಾದ ಕೃಷ್ಣನೆಂಬ ಶಿಷ್ಯನಿಗೆ ಹೇಳಿ ಇಂತೆಂದನು : (ಈ ವಾಕ್ಯವು) ''ಆ ಈ ಮೂರನ್ನೂ....'' ಎಂದುಮುಂತಾಗಿರುವ (ಮುಂದಿನ) ವ್ಯವಹಿತವಾಕ್ಯಕ್ಕೆ ಸಂಬಂಧ(ವಾಗತಕ್ಕದ್ದು). ಆ (ಕೃಷ್ಣನು) ಈ ದರ್ಶನವನ್ನು ಶ್ರವಣಮಾಡಿದಮೇಲೆ ಮಿಕ್ಕ ವಿದ್ಯೆಗಳಲ್ಲಿ ಬಾಯಾರಿಕೆಯಿಲ್ಲದವನೇ ಆದನು. ಈ ವಿದ್ಯೆಯು ಎಂಥ ವಿಶೇಷ(ಗುಣ)ವುಳ್ಳದ್ದೆಂದರೆ ದೇವಕೀಪುತ್ರನಾದ ಕೃಷ್ಣನಿಗೆ ಮತ್ತೊಂದು ವಿದ್ಯೆಯಲ್ಲಿ

ಆದು ಆಶೆಯನ್ನೇ ತೆಗೆದುಹಾಕಿಬಿಟ್ಟಿತು - ಎಂದು ಪುರುಷಯಜ್ಞವಿದ್ಯೆಯನ್ನು (ಶ್ರುತಿ) ಹೊಗಳಿರುತ್ತದೆ.

ಘೋರ ಆಂಗಿರಸನು ಈ ವಿದ್ಯೆಯನ್ನು ಕೃಷ್ಣನಿಗೆ ಹೇಳಿದ ಬಳಿಕ ಏನೆಂದನು ? ಎಂದರೆ (ಶ್ರುತಿ) ಆದನ್ನು ಹೇಳುತ್ತದೆ. ಅವನು, ಎಂದರೆ ಮೇಲೆ ಹೇಳಿರುವ ಯಜ್ಞವನ್ನು ಆರಿತುಕೊಂಡಿರುವವನು, ಅಂತವೇಳೆಯಲ್ಲಿ ಮರಣಕಾಲದಲ್ಲಿ ಈ ಮೂರು ಮಂತ್ರಗಳನ್ನು ಆರಿತಿರಬೇಕು, ಜಪಮಾಡುತ್ತಿರಬೇಕು ಎಂದರ್ಥ[1]. ಆ (ಮಂತ್ರತ್ರಯವು) ಯಾವದು ?- ಎಂದರೆ 'ಅಕ್ಷಿತಮಸಿ' (ಅಕ್ಷಿತವಾಗಿದೀಯೆ), ನಾಶವಾಗದ್ದು ಅಥವಾ ಗಾಯವಿಲ್ಲದ್ದು (ಆಗಿದೀಯೆ) ಎಂಬುದೊಂದು ಯಜುಸ್ಸು. ಆದಿತ್ಯನಲ್ಲಿರುವ (ದೇವತೆಯನ್ನೂ) ಪ್ರಾಣನನ್ನೂ ಒಂದುಮಾಡಿಕೊಂಡು (ಹೀಗೆ) ಹೇಳಿರುತ್ತದೆ- ಎಂದು ಅರ್ಥವಶದಿಂದ ಕಲ್ಪಿಸಬೇಕು[2]. ಹೀಗೆಯೇ ಆದೇ (ಪ್ರಾಣವನ್ನು ಕುರಿತು) 'ಅಚ್ಯುತಮಸಿ' (ಅಚ್ಯುತವಾಗಿದೀಯೆ !) ಸ್ವರೂಪದಿಂದ ಜಾರದೆ ಇರುವವನಾಗಿದೀಯೆ- ಎಂಬುದು ಎರಡನೆಯ ಯಜುಸ್ಸು. 'ಪ್ರಾಣಸಂಶಿತಮಸಿ' ಪ್ರಾಣವೂ ಸಂಶಿತವೂ ಎಂದರೆ ಚೆನ್ನಾಗಿ ಹರಿತವಾಗಿ ಮಾಡಿರುವ ಸೂಕ್ಷ್ಮವಾದ ತತ್ತ್ವವೂ ಆಗಿರುತ್ತೀಯೆ- ಎಂಬುದು ಮೂರನೆಯ ಯಜುಸ್ಸು.[3]

ಇಲ್ಲಿ ಎಂದರೆ ವಿದ್ಯೆಯನ್ನು ಹೊಗಳುವದರಲ್ಲಿ ತಾತ್ಪರ್ಯವುಳ್ಳ ಈ ವಿಷಯದಲ್ಲಿ ಎರಡು ಋಕ್ಕುಗಳು ಎಂದರೆ ಮಂತ್ರಗಳು ಇರುತ್ತವೆ. (ಇವು ಸ್ತುತಿಗೇ ಹೊರತು) ಜಪಕ್ಕಲ್ಲ ; ಏಕೆಂದರೆ (ಹಾಗಾದವಕ್ಷದಲ್ಲಿ) 'ಈ ಮೂರನ್ನೂ ಆರಿತಿರಬೇಕು' ಎಂದು (ಹೇಳಿರುವ) ಮೂರೆಂಬ ಸಂಖ್ಯೆಯನ್ನು ಬಾಧಿಸಿದಂತಾಗುತ್ತದೆ ; ಆಗ (ಮಂತ್ರಗಳ) ಸಂಖ್ಯೆ ಐದಾಗುವದಷ್ಟೆ ?

ಪುರುಷವಿದ್ಯಾಸ್ತುತಿಯ ಋಕ್ಕುಗಳು

(ಉಪನಿಷತ್ತು)

ಆದಿತ್ಪ್ರತ್ನಸ್ಯ ರೇತಸಃ । ಉದ್ವಯಂ ತಮಸಸ್ಪರಿ ಜ್ಯೋತಿಃ ಪಶ್ಯನ್ತ

1. ಸಾಯುವವರೆಗೂ ಜಪಮಾಡುತ್ತಿರಬೇಕು ಎಂದರ್ಥ; ಈ ಭಾವನೆ ಸಾಯುವಕಾಲದಲ್ಲಿಯೂ ಇರಬೇಕು. ಸೂ. ಭಾ. ೪-೧-೧೨ (ಭಾ. ಭಾ. ೫೨೬).
2. ಪುರುಷಯಜ್ಞದಲ್ಲಿ ಮತ್ತೆ ಯಾವ ಸವನದೇವತೆಯೂ ಇಲ್ಲದ್ದರಿಂದ ಪ್ರಾಣಾದಿತ್ಯರನ್ನು ಒಂದೆಂದು ಭಾವಿಸಿಕೊಂಡು ಆದಿತ್ಯನನ್ನೇ ಈ ಮಂತ್ರದಿಂದ ಹೇಳಿರುತ್ತದೆ ಎಂದು ನಿಶ್ಚಯಿಸಬೇಕಾಗಿದೆ- ಎಂದು ಭಾವ.
3. ಈ ಎಲ್ಲಾ ಮಂತ್ರಗಳೂ ಒಂದೇ ದೇವತೆಯನ್ನು ಹೇಳುತ್ತವೆ.

ಉತ್ತರಗ್ಂ ಸ್ವಃ ಪಶ್ಯನ್ತ ಉತ್ತರಂ ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಮಿತಿ ಜ್ಯೋತಿರುತ್ತಮಮಿತಿ ॥೭॥

೭. 'ಆದಿತ್ಯತ್ವನ್ನಸ್ಯ ರೇತಸಃ' ('ಪುರಾತನವಾದ ರೇತಸ್ಸಿನ' ಎಂದು ಒಂದು ಋಕ್ಕು). 'ಉದ್ವಯಂ....' 'ನಾವು ತಮಸ್ಸಿನ ಆಚೆ ಇರುವ ಉತ್ತರವಾದ ನಮ್ಮ ಉತ್ತರವಾದ ಜ್ಯೋತಿಯನ್ನು ಕಾಣುತ್ತಾ ದೇವತೆಗಳಲ್ಲಿರುವ ದೇವನಾದ ಉತ್ತಮಜ್ಯೋತಿಯಾದ, ಉತ್ತಮಜ್ಯೋತಿಯಾದ, ಸೂರ್ಯನನು ಮೇಲೇರಿ ಸೇರಿದೆವು' (ಎಂಬುದು) ಇನ್ನೊಂದು ಋಕ್ಕು.

ಬ್ರಹ್ಮಜ್ಞಾನಿಗಳಿಗೆ ಎಲ್ಲೆಲ್ಲಿಯೂ ಆತ್ಮಜ್ಯೋತಿಯು ಕಾಣಿಸುತ್ತದೆ

(ಭಾಷ್ಯ)

೨೭. ಆತ್ ಇತ್ಯತ್ರ ಆಕಾರಸ್ಯ ಅನುಬನ್ಧಸ್ತಕಾರೋಽನರ್ಥಕಃ, ಇಚ್ಛಬ್ದಶ್ಚ। ಪ್ರತ್ನಸ್ಯ ಚಿರನ್ತನಸ್ಯ ಪುರಾಣಸ್ಯ ಇತ್ಯರ್ಥಃ। ರೇತಸಃ ಕಾರಣಸ್ಯ ಬೀಜಭೂತಸ್ಯ ಜಗತಃ, ಸದಾಖ್ಯಸ್ಯ ಜ್ಯೋತಿಃ ಪ್ರಕಾಶಂ ಪಶ್ಯನ್ತಿ। ಆಶಬ್ದಃ ಉತ್ಸ್ಲಷ್ಟಾನುಬನ್ಧಃ ಪಶ್ಯನ್ತಿ ಇತ್ಯನೇನ ಸಂಬಧ್ಯತೇ। ಕಂ ತಜ್ಜ್ಯೋತಿಃ (ಯತ್)[1] ಪಶ್ಯನ್ತಿ? ವಾಸರಮ್ ಅಹಃ। ಅಹರಿವ ತತ್ ಸರ್ವತೋ ವ್ಯಾಪ್ತಂ ಬ್ರಹ್ಮಣೋ ಜ್ಯೋತಿಃ। ನಿವೃತ್ತಚಕ್ಷುಷಃ ಬ್ರಹ್ಮವಿದಃ ಬ್ರಹ್ಮಚರ್ಯಾದಿನಿವೃತ್ತಿಸಾಧನೈಃ ಶುದ್ಧಾನ್ತಃಕರಣಾಃ ಆ ಸಮನ್ತತೋ ಜ್ಯೋತಿಃ ಪಶ್ಯನ್ತಿ ಇತ್ಯರ್ಥಃ। ಪರಃ ಪರಮ್ ಇತಿ ಲಿಙ್ಗವ್ಯತ್ಯಯೇನ। ಜ್ಯೋತಿಷ್ಪರತ್ವಾತ್। ಯತ್ ಇಧ್ಯತೇ ದೀಪ್ಯತೇ ದಿವಿ ದ್ಯೋತನವತಿ ಪರಸ್ಮಿನ್ ಬ್ರಹ್ಮಣಿ ವರ್ತಮಾನಮ್। ಯೇನ ಜ್ಯೋತಿಷಾ ಇದ್ಧಃ ಸವಿತಾ ತಪತಿ, ಚನ್ದ್ರಮಾ ಭಾತಿ, ವಿದ್ಯುತ್ ವಿದ್ಯೋತತೇ, ಗ್ರಹತಾರಾಗಣಾ ವಿಭಾಸನ್ತೇ॥

(ಭಾಷ್ಯಾರ್ಥ)

ಆತ್ ಎಂಬಲ್ಲಿ ಆಕಾರಕ್ಕೆ ಸೇರಿಕೊಂಡಿರುವ ತಕಾರಕ್ಕೆ ಅರ್ಥವಿಲ್ಲ ; (ಮುಂದಿರುವ) ಇತ್ ಎಂಬ ಶಬ್ದಕ್ಕೂ (ಅರ್ಥವಿಲ್ಲ). ಪುರಾತನವಾದ, ಹಳೆಯ ಬಹಳ ಹಿಂದಿನ ಎಂದರ್ಥ. ರೇತಸ್ಸಿನ ಕಾರಣದ, ಸತ್ತೆಂಬ[2] ಜಗತ್ತಿನ ಬೀಜದ

---

1. ಇಲ್ಲೊಂದು 'ಯತ್' ಶಬ್ದವು ಇರಬೇಕೆಂದು ತೋರುತ್ತದೆ.
2. ಆರನೆಯ ಅಧ್ಯಾಯದಲ್ಲಿ ಹೇಳಿರುವ ಸದ್ಬ್ರಹ್ಮವನ್ನೇ ಇಲ್ಲಿ ಆದಿತ್ಯನಲ್ಲಿರುವ ಜ್ಯೋತಿಯೆಂದು ಹೇಳಿದೆ ; ಅಧ್ಯಾತ್ಮಪ್ರಾಣದೊಡನೆ ಒಂದೆಂದು ಭಾವಿಸಿ ಮೇಲೆ ಹೇಳಿದ ಮೂರು ಯಜುಸ್ಸುಗಳಲ್ಲಿ ತಿಳಿಸಿದೆ ಎಂಬುದನ್ನು 'ಸದಾಖ್ಯಸ್ಯ' ಎಂಬ ವಿಶೇಷಣವು ಸೂಚಿಸುತ್ತದೆ

ಜ್ಯೋತಿಯನ್ನು[1] (ತಕಾರವೆಂಬ) ಅನುಬಂಧವನ್ನು ಬಿಟ್ಟು (ಉಳಿಯುವ) ಆಶಬ್ದವು (ಮುಂದಿರುವ) ಪಶ್ಯನ್ತಿ ಎಂಬುದಕ್ಕೆ ಸಂಬದ್ಧವಾಗಿರುತ್ತದೆ, ಕಾಣುತ್ತಾರೆಂಬ ಆ ಜ್ಯೋತಿ ಯಾವದು ? (ಎಂದರೆ), ವಾಸರವನ್ನು ಹಗಲನ್ನು ಹಗಲಿನ (ಬೆಳಕಿ)ನಂತೆ ಎಲ್ಲೆಲ್ಲಿಯೂ ಹಬ್ಬಿಕೊಂಡಿರುವ ಆ ಬ್ರಹ್ಮದ ಬೆಳಕನ್ನು, ನಿವೃತ್ತಚಕ್ಷುಷ್ಕರಾದ ಬ್ರಹ್ಮಜ್ಞಾನಿಗಳು, ಬ್ರಹ್ಮಚರ್ಯವೇ ಮುಂತಾದ ನಿವೃತ್ತಿಸಾಧನಗಳಿಂದ ಶುದ್ಧರಾದ ಅಂತಃಕರಣವುಳ್ಳವರಾಗಿ ಆ ಎಂದರೆ ಎಲ್ಲೆಲ್ಲಿಯೂ (ಆ) ಜ್ಯೋತಿಯನ್ನು ಕಾಣುತ್ತಾರೆ ಎಂದರ್ಥ. 'ಪರಃ' ಎಂಬುದನ್ನು ಪರಮ್ ಎಂದು ಲಿಂಗವಿಪರಿಣಾಮವನ್ನು ಮಾಡಿಕೊಂಡು (ಅರ್ಥಮಾಡಿಕೊಳ್ಳಬೇಕು). ಏಕೆಂದರೆ (ಅದು) 'ಜ್ಯೋತಿ'ಯನ್ನು ಹೇಳುವ (ವಿಶೇಷಣವು). ದ್ಯುಲೋಕದಲ್ಲಿ ಎಂದರೆ ಪ್ರಕಾಶವುಳ್ಳ ಪರಬ್ರಹ್ಮ ದಲ್ಲಿದ್ದುಕೊಂಡು ಹೊತ್ತಿಕೊಂಡು ಉರಿಯುತ್ತಿರುವದಲ್ಲ, ಹೊಳೆಯುತ್ತಿರುವದಲ್ಲ, (ಆ ಜ್ಯೋತಿಯನ್ನು), ಯಾವ ಜ್ಯೋತಿಯಿಂದ ಹೊತ್ತಿಕೊಂಡು ಸೂರ್ಯನು ತಪಿಸುತ್ತಿರುವನೋ[2] ಚಂದ್ರನು ಬೆಳಗುತ್ತಿರುವನೋ, ಮಿಂಚು ಥಳಾರೆನ್ನುವದೋ, ಗ್ರಹತಾರಕೆಗಳು ಮಿನುಗುತ್ತಿರುವವೋ[3] (ಆ ಜ್ಯೋತಿಯನ್ನು ಕಾಣುತ್ತಾರೆ).

ಅಜ್ಞಾನನಾಶಕವಾದ ಆತ್ಮಜ್ಯೋತಿಯನ್ನು ಕಂಡವರು ಧನ್ಯರು

(ಭಾಷ್ಯ)

೨೭೬. ಕಿಂ ಚ ಅನ್ಯೋ ಮನ್ತ್ರದೃಕ್ ಆಹ ಯಥೋಕ್ತಂ ಜ್ಯೋತಿಃ ಪಶ್ಯನ್ । ಉದ್ ವಯಂ ತಮಸಃ ಅಜ್ಞಾನಲಕ್ಷಣಾತ್ ಪರಿ ಪರಸ್ಾತ್ ಇತಿ ಶೇಷಃ । ತಮಸೋ ವಾ ಅಪನೇತೃ ಯದ್ ಜ್ಯೋತಿಃ ಉತ್ತರಂ ಆದಿತ್ಯಸ್ಥಂ ಪರಿಪಶ್ಯನ್ತಃ ವಯಮ್ ಉದಗನ್ಮ ಇತಿ ವ್ಯವಹಿತೇನ ಸಂಬನ್ಧಃ । ತದ್ ಜ್ಯೋತಿಃ ಸ್ವಃ ಸ್ವಮ್ ಆತ್ಮೀಯಮ್ ಅಸ್ಮದ್ ಹೃದಿ ಸ್ಥಿತಮ್ । ಆದಿತ್ಯಸ್ಥಂ ಚ ತದೇಕಂ ಜ್ಯೋತಿಃ । ಯತ್ ಉತ್ತರಮ್ ಉತ್ಕೃಷ್ಟತರಮ್ ಊರ್ಧ್ವತರಂ ವಾ, ಅಪರಂ ಜ್ಯೋತಿರಪೇಕ್ಷ್ಯ ಪಶ್ಯನ್ತಃ ಉದಗನ್ಮ ವಯಮ್ । ಕಮ್ ಉದಗನ್ಮೇತಿ ? ಆಹ । ದೇವಂ ದ್ಯೋತನವನ್ತಂ ದೇವತ್ರಾ

---

1. ಆದಿತ್ಯನ್ನಸ್ಯ ರೇತಸೋ ಜ್ಯೋತಿಃ ಪಶ್ಯನ್ತಿ ವಾಸರಮ್ । ಪರೋ ಯದಿಧ್ಯತೇ ದಿವಿ ॥ (ಋ. ಸಂ. ಮಂ. ೮-೨೧-೬-೩೦) ಎಂಬ ಮಂತ್ರದ ಪ್ರತೀಕವನ್ನು ಉಪನಿಷತ್ತಿನಲ್ಲಿ ಕೊಟ್ಟಿದೆ. ಈ ಮಂತ್ರಕ್ಕೆ ಸಾಯಣಭಾಷ್ಯದಲ್ಲಿ ಸೂರ್ಯಪರವಾಗಿ ಅರ್ಥವನ್ನು ಬರೆದಿದ್ದರೂ ಇದು ನಿಜವಾಗಿ ಸೂರ್ಯನಲ್ಲಿರುವ ಆತ್ಮಜ್ಯೋತಿಯನ್ನೇ ತಿಳಿಸುತ್ತದೆ ಯಾದ್ದರಿಂದ ಅದರಂತೆ ಭಾಷ್ಯದಲ್ಲಿ ವ್ಯಾಖ್ಯಾನಮಾಡಿರುತ್ತದೆ.

2. ತೈ. ಬ್ರಾ. ೩-೧೨-೯ರ ಸೂಚನೆ. 3. ಮುಂ. ೨-೨-೧೦ರ ಸೂಚನೆ.

ದೇವೇಷು ಸರ್ವೇಷು ಸೂರ್ಯಂ ರಸಾನಾಂ ರಶ್ಮೀನಾಂ ಪ್ರಾಣಾನಾಂ ಚ ಜಗತಃ ಈರಣಾತ್ ಸೂರ್ಯಃ । ತಮ್ ಉದಗನ್ಮ ಗತವನ್ತೋ ಜ್ಯೋತಿಃ ಉತ್ತಮಂ ಸರ್ವಜ್ಯೋತಿರ್ಭ್ಯಃ ಉತ್ಕೃಷ್ಟತಮಮ್ । ಅಹೋ ಪ್ರಾಪ್ತಾ ವಯಮ್ ಇತ್ಯರ್ಥಃ । ಇದಂ ತಜ್ಜ್ಯೋತಿಃ ಯದೃಗ್ಭ್ಯಂ ಸ್ತುತಂ ಯದ್ ಯಜುಸ್ತ್ರಯೇಣ ಪ್ರಕಾಶಿತಮ್ । ದ್ವಿರಭ್ಯಾಸೋ ಯಜ್ಞಕಲ್ಪನಾಪರಿಸಮಾಪ್ತ್ಯರ್ಥಃ॥

(ಭಾಷ್ಯಾರ್ಥ)

ಮತ್ತು ಇನ್ನೊಬ್ಬ ಮಂತ್ರದ್ರಷ್ಟೃ(ವಾದ ಋಷಿಯು)[1] ಮೇಲೆ ಹೇಳಿದ ಜ್ಯೋತಿಯನ್ನು ಕಂಡುಕೊಂಡವನಾಗಿ ಹೀಗೆಂದಿರುತ್ತಾನೆ : ನಾವು ಅಜ್ಞಾನ ರೂಪವಾದ ತಮಸ್ಸಿನಿಂದ, ಅಚೆಗೆ ಎಂದು ಶೇಷ[2]. ಅಥವಾ ತಮಸ್ಸನ್ನು ಹೋಗಲಾಡಿಸುವ ಆದಿತ್ಯನಲ್ಲಿರುವ ಜ್ಯೋತಿಯಿದೆಯಲ್ಲ, ಅದನ್ನು (ಪರಿ=) ಎಲ್ಲೆಲ್ಲಿಯೂ ಕಾಣುತ್ತಾ[3] ನಾವು (ಉದಗನ್ಮ=) ಮೇಲಕ್ಕೇರಿ ಸೇರಿದೆವು- ಎಂದು ವ್ಯವಹಿತವಾದ (ಪಶ್ಯನ್ತಃ ಅಗನ್ಮ ಎಂಬುದ)ರೊಡನೆ (ಉತ್, ಪರಿ - ಎಂಬಿವಕ್ಕೆ) ಸಂಬಂಧವು.

ಆ ಜ್ಯೋತಿಯು (ಸ್ವಃ = ಸ್ವಮ್) ನಮ್ಮದು, ನಮ್ಮ ಹೃದಯದಲ್ಲಿರತಕ್ಕದ್ದು ; ಆದಿತ್ಯನಲ್ಲಿಯೂ[4] ಆ ಒಂದೇ ಜ್ಯೋತಿಯೇ ಇರತಕ್ಕದ್ದು. ಆ ಉತ್ತರವಾದ ಎಂದರೆ ಕಡಿಮೆಯ ಜ್ಯೋತಿಗಿಂತಲೂ[5] ಉತ್ಕೃಷ್ಟವಾಗಿರುವ, ಅಥವಾ ಅದಕ್ಕಿಂತಲೂ ಮೇಲಿರುವ[6] (ಜ್ಯೋತಿಯನ್ನು) ಕಾಣುತ್ತಾ ನಾವು ಮೇಲಕ್ಕೇರಿ ಸೇರಿದೆವು.[7] ಯಾವದನ್ನು ಮೇಲಕ್ಕೇರಿ ಸೇರಿದೆವು ?- ಎಂದರೆ ಹೇಳುತ್ತಾನೆ : ದೇವನನ್ನು ಕಾಂತಿಯುಳ್ಳ (ದೇವತ್ರಾ= ದೇವೇಷು) ಸರ್ವದೇವತೆಗಳಲ್ಲಿಯೂ (ಇರುವ)

---

1. ಈ ಮಂತ್ರವು ಋ. ಸಂ. ಮಂ. ೧-೯-೫೦-೧೦ರಲ್ಲಿದೆ. ಇದೂ ಸೂರ್ಯನನ್ನು ವಾಚ್ಯವೃತ್ತಿಯಿಂದಲೂ ಲಕ್ಷಣೆಯಿಂದ ಸೂರ್ಯನಲ್ಲಿರುವ ಪರಮಾತ್ಮನನ್ನೂ ಹೇಳುತ್ತದೆ.
2. ಅಜ್ಞಾನವಾಗಲಿ ಅದರ ಕಾರ್ಯವಾಗಲಿ ಒಂದಿಷ್ಟೂ ಸೋಂಕದ ಎಂದರ್ಥ.
3. ಆದಿತ್ಯನಲ್ಲಿರುವ ಜ್ಯೋತಿಯೆಂದು ಉಪಾಸನೆಯ ಜಪಮಂತ್ರದಲ್ಲಿ ಹೇಳಿದ್ದರೂ ಇದು ಎಲ್ಲೆಲ್ಲಿಯೂ ಇದೆ ಎಂಬುದನ್ನು ಜ್ಞಾನಿಗಳು ಬಲ್ಲರು.
4. ತೈ. ಭಾ. ೨-೮ (ಭಾ. ಭಾ. ೨೦೪). 5. ಸೂರ್ಯಮಂಡಲದ ಜ್ಯೋತಿಗಿಂತಲೂ.
6. ಸೂರ್ಯಜ್ಯೋತಿಗೆ ಸಜಾತೀಯವಾಗಿರುವದರಿಂದ ಇದನ್ನು ಜ್ಯೋತಿ ಎಂದು ಕರೆದಿದೆಯೆಂದು ಭಾವಿಸಬಾರದು ಎಂದು ಭಾವ.
7. ಅಪರಿಚ್ಛಿನ್ನರೂಪದಿಂದ ಕಂಡುಕೊಂಡೆವು.

ಸೂರ್ಯನೆಂಬ (ದೇವನನ್ನು) - ರಸಗಳನ್ನು, ರಶ್ಮಿಗಳನ್ನು ಮತ್ತು ಜಗತ್ತಿನ ಪ್ರಾಣಗಳನ್ನು ಪ್ರೇರಿಸುವದರಿಂದ ಸೂರ್ಯನು[1] ಆ (ಸೂರ್ಯನೆಂಬ) ಉತ್ತಮ ಜ್ಯೋತಿಯನ್ನು ಜ್ಯೋತಿಗಳೆಲ್ಲಕ್ಕಿಂತಲೂ ಉತ್ತಮವಾದ (ಜ್ಯೋತಿಯನ್ನು) ಮೇಲಕ್ಕೇರಿ ಸೇರಿಕೊಂಡೆವು, ನಾವು ಪಡೆದುಕೊಂಡೆವು- ಎಂದರ್ಥ.

ಎರಡು ಋಕ್ಕುಗಳಿಂದಲೂ ಸ್ತುತವಾಗಿರುವ ಈ ಜ್ಯೋತಿಯೇ (ಮೇಲೆ ಉದಾಹರಿಸಿದ) ಮೂರು ಯಜುಸ್ಸುಗಳಿಂದ ಪ್ರಕಾಶಿತವಾಗಿರುತ್ತದೆ. (ಜ್ಯೋತಿರುತ್ತಮಮ್ ಎಂದು) ಎರಡು ಸಲ ಹೇಳಿರುವದು ಯಜ್ಞಕಲ್ಪನೆಯ[2] ಪರಿಸಮಾಪ್ತಿಯನ್ನು (ತಿಳಿಸು)ವದಕ್ಕೆ.

ಮೂರನೆಯ ಅಧ್ಯಾಯ - ಹದಿನೆಂಟನೆಯ ಖಂಡ

(ಮನಆಕಾಶಗಳಲ್ಲಿ ಬ್ರಹ್ಮದೃಷ್ಟಿ)

ಮನಆಕಾಶಬ್ರಹ್ಮಗಳ ಉಪಾಸನೆ

(ಉಪನಿಷತ್ತು)

ಮನೋ ಬ್ರಹ್ಮೇತ್ಯುಪಾಸೀತೇತ್ಯಧ್ಯಾತ್ಮಮಥಾಧಿದೈವತಮಾಕಾಶೋ ಬ್ರಹ್ಮೇತ್ಯುಭಯಮಾದಿಷ್ಟಂ ಭವತ್ಯಧ್ಯಾತ್ಮಂ ಚಾಧಿದೈವತಂ ಚ ॥೧॥

೧. ಮನಸ್ಸು ಬ್ರಹ್ಮವೆಂದು ಉಪಾಸನೆಮಾಡಬೇಕು. ಇದು ಅಧ್ಯಾತ್ಮವು. ಇನ್ನು ಅಧಿದೈವತವು. ಆಕಾಶವು ಬ್ರಹ್ಮವೆಂದು (ಉಪಾಸನೆಮಾಡಬೇಕು. ಹೀಗೆ) ಅಧ್ಯಾತ್ಮ, ಅಧಿದೈವತ- ಈ ಎರಡನ್ನೂ ಉಪದೇಶಮಾಡಿದಂತೆ ಆಯಿತು.

1. ರಸಗಳು ಪಕ್ವವಾಗುವದು ರಶ್ಮಿಗಳು ಹರಡಿಕೊಳ್ಳುವದು, ಪ್ರಾಣಗಳು ವ್ಯಾಪಾರವನ್ನು ಮಾಡುವದು - ಈ ದೇವನ ಪ್ರೇರಣೆಯಿಂದಲೇ ಬೃ. ಭಾ. ೫-೧೫-೧ರಲ್ಲಿ (ಭಾ. ಭಾ. ೪೦೪). ಸೂರ್ಯಶಬ್ದಕ್ಕೆ ಮಾಡಿರುವ ವ್ಯಾಖ್ಯಾನವನ್ನು ನೋಡಿ. ಅಲ್ಲಿರುವದು ಸಗುಣಬ್ರಹ್ಮವಾದರೂ ಇಲ್ಲಿಗೂ ಆ ಅರ್ಥವು ಹೊಂದುತ್ತದೆ.
2. ತಾನೇ ಯಜ್ಞವೆಂದು ಸಂಪಾದನೆಮಾಡಿಕೊಳ್ಳುವ ರೂಪದ ಉಪಾಸನೆಯ ಪ್ರಕರಣದ.

ಗ್ರಂಥಸಂಬಂಧ

(ಭಾಷ್ಯ)

೨೭೭. ಮನೋಮಯ ಈಶ್ವರ ಉಕ್ತಃ, ಆಕಾಶಾತ್ಮಾ ಇತಿ ಚ ಬ್ರಹ್ಮಣೋ ಗುಣೈಕದೇಶತ್ವೇನ। ಅಥೇದಾನೀಂ ಮನಆಕಾಶಯೋಃ ಸಮಸ್ತಬ್ರಹ್ಮದೃಷ್ಟಿವಿಧಾನಾರ್ಥ ಆರಮ್ಭಃ 'ಮನೋ ಬ್ರಹ್ಮ' ಇತ್ಯಾದಿ॥

(ಭಾಷ್ಯಾರ್ಥ)

ಈಶ್ವರನು ಮನೋಮಯನೆಂದೂ ಆಕಾಶಾತ್ಮನೆಂದೂ (೩-೧೪-೨) (ಮನಆಕಾಶಗಳನ್ನು) ಬ್ರಹ್ಮದ ಗುಣಗಳ ಒಂದು ಭಾಗವಾಗಿ ಹೇಳಿದ್ದಾಯಿತು. ಇನ್ನು ಈಗ ಮನಆಕಾಶಗಳಲ್ಲಿ ಸಮಸ್ತಬ್ರಹ್ಮದ ದೃಷ್ಟಿಯನ್ನು ವಿಧಿಸುವದಕ್ಕಾಗಿ[1] 'ಮನೋಬ್ರಹ್ಮ' ಎಂದು ಮುಂತಾಗಿರುವ (ಈ ಮುಂದಿನ ಗ್ರಂಥ)ವನ್ನು ಆರಂಭಿಸಿದೆ.

ಮನಆಕಾಶಗಳನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು

(ಭಾಷ್ಯ)

೨೭೮. ಮನಃ ಮನುತೇಽನೇನ ಇತ್ಯನ್ತಃಕರಣಮ್। ತದ್ ಬ್ರಹ್ಮ ಪರಮ್ ಇತ್ಯುಪಾಸೀತ। ಇತಿ ಏತತ್ ಆತ್ಮವಿಷಯಂ ದರ್ಶನಮ್ ಅಧ್ಯಾತ್ಮಮ್। ಅಥ ಅಧಿದೈವತಮ್। ದೇವತಾವಿಷಯಮ್ ಇದಂ ವಕ್ಷ್ಯಾಮಹೇ। ಆಕಾಶೋ ಬ್ರಹ್ಮ ಇತ್ಯುಪಾಸೀತ। ಏವಮ್ ಉಭಯಮ್ ಅಧ್ಯಾತ್ಮಮ್ ಅಧಿದೈವತಂ ಚ ಉಭಯಂ ಬ್ರಹ್ಮದೃಷ್ಟಿವಿಷಯಮ್ ಆದಿಷ್ಟಮ್ ಉಪದಿಷ್ಟಂ ಭವತಿ। ಆಕಾಶಮನಸೋಃ ಸೂಕ್ಷ್ಮತ್ವಾತ್। ಮನಸಾ ಉಪಲಭ್ಯತ್ವಾಚ್ಚ ಬ್ರಹ್ಮಣೋ ಯೋಗ್ಯಂ ಮನೋ ಬ್ರಹ್ಮದೃಷ್ಟೇಃ ಆಕಾಶಶ್ಚ ಸರ್ವಗತತ್ವಾತ್, ಸೂಕ್ಷ್ಮತ್ವಾತ್ ಉಪಾಧಿಹೀನತ್ವಾಚ್ಚ॥

(ಭಾಷ್ಯಾರ್ಥ)

ಇದರಿಂದ ಅರಿತುಕೊಳ್ಳುತ್ತಾರಾದ್ದರಿಂದ ಅಂತಃಕರಣವನ್ನು 'ಮನಸ್ಸು' (ಎಂದಿದೆ), ಆ (ಮನಸ್ಸು) ಪರಬ್ರಹ್ಮವು - ಎಂದು ಉಪಾಸನೆಮಾಡಬೇಕು. ಇದು ಅಧ್ಯಾತ್ಮವು, ಎಂದರೆ ಆತ್ಮವಿಷಯದ ದರ್ಶನವು. ಇನ್ನು ಅಧಿದೈವತವನ್ನು ಎಂದರೆ ದೇವತಾವಿಷಯವಾದ ಇದನ್ನು ಹೇಳುವೆವು. ಆಕಾಶವು ಬ್ರಹ್ಮವು - ಎಂದು ಉಪಾಸನೆ

---

1. ಬ್ರಹ್ಮದ ಏಕದೇಶವೆಂದು ಹಿಂದೆ ಹೇಳಿತ್ತು, ಈಗ ಅದು ಸರ್ವಬ್ರಹ್ಮವೂ ಆಗಿದೆ ಎಂದು ಹೇಳಲಾಗುತ್ತದೆ. ಸಾಮಾವಯವಗಳ ಉಪಾಸನೆಯನ್ನು ಹೇಳಿದ ಬಳಿಕ ಸಮಸ್ತಸಾಮದ ಉಪಾಸನೆಯನ್ನು ಹೇಳಿದಂತೆಯೇ ಇದು.

ಮಾಡಬೇಕು. ಹೀಗೆ ಅಧ್ಯಾತ್ಮ, ಅಧಿದೈವತ- ಎಂಬ(ಈ) ಎರಡೂ ಬ್ರಹ್ಮದೃಷ್ಟಿಗೆ ವಿಷಯವು ಎಂದು ಉಪದೇಶಮಾಡಿದಂತೆ ಆಯಿತು.

ಆಕಾಶಮನಸ್ಸುಗಳು ಸೂಕ್ಷ್ಮವಾಗಿರುವದರಿಂದ (ಅವುಗಳಲ್ಲಿ) ಬ್ರಹದೃಷ್ಟಿಯನ್ನು (ಉಪದೇಶಿಸಿದೆ)[1], ಬ್ರಹ್ಮವು ಮನಸ್ಸಿನಿಂದಲೇ ಉಪಲಭ್ಯವಾಗಿರುವದರಿಂದ[2] ಮನಸ್ಸು ಬ್ರಹ್ಮದೃಷ್ಟಿಗೆ ತಕ್ಕದ್ದಾಗಿದೆ ; ಸರ್ವಗತವಾಗಿರುವದರಿಂದಲೂ ಸೂಕ್ಷ್ಮವಾಗಿರುವದರಿಂದಲೂ ಉಪಾಧಿಯಿಲ್ಲವಾದ್ದರಿಂದಲೂ ಆಕಾಶವೂ (ಬ್ರಹ್ಮದೃಷ್ಟಿಗೆ ಯೋಗ್ಯವಾಗಿರುತ್ತದೆ).[3]

(ಉಪನಿಷತ್ತು)

ತದೇತಚ್ಚತುಷ್ಪಾದ್ ಬ್ರಹ್ಮ ವಾಕ್ಪಾದಃ ಪ್ರಾಣಃ ಪಾದಶ್ಚಕ್ಷುಃ ಪಾದಃ ಶ್ರೋತ್ರಂ ಪಾದ ಇತ್ಯಧ್ಯಾತ್ಮಮಥಾಧಿದೈವತಮಗ್ನಿಃ ಪಾದೋ ವಾಯುಃ ಪಾದ ಆದಿತ್ಯಃ ಪಾದೋ ದಿಶಃ ಪಾದ ಇತ್ಯುಭಯಮೇವಾದಿಷ್ಟಂ ಭವತ್ಯಧ್ಯಾತ್ಮಂ ಚೈವಾಧಿದೈವತಂ ಚ ॥೨॥

೨. ಈ ಬ್ರಹ್ಮವು ಚತುಷ್ಪಾತ್ತಾಗಿದೆ. ವಾಕ್ಕು (ಒಂದು) ಪಾದವು, ಪ್ರಾಣವು (ಒಂದು) ಪಾದವು, ಚಕ್ಷುಸ್ಸು (ಒಂದು) ಪಾದವು, ಶ್ರೋತ್ರವು (ಒಂದು) ಪಾದವು. ಇದು ಅಧ್ಯಾತ್ಮವು. ಇನ್ನು ಅಧಿದೈವತವು . ಅಗ್ನಿಯು (ಒಂದು) ಪಾದವು, ವಾಯುವು (ಒಂದು) ಪಾದವು, ಆದಿತ್ಯನು (ಒಂದು) ಪಾದವು, ದಿಕ್ಕುಗಳು (ಒಂದು) ಪಾದವು. ಹೀಗೆ ಅಧ್ಯಾತ್ಮ, ಅಧಿದೈವತ - ಎರಡೂ ಉಪದಿಷ್ಟವಾದಂತೆ ಆಯಿತು.

ಬ್ರಹ್ಮದ ಚತುಷ್ಪಾದಗಳು

(ಭಾಷ್ಯ)

೨೭೯. ತದೇತನ್ಮನ ಆಖ್ಯಂ ಚತುಷ್ಪಾದ್ ಬ್ರಹ್ಮ । ಚತ್ವಾರಃ ಪಾದಾ ಅಸ್ಯೇತಿ । ಕಥಂ ಚತುಷ್ಪಾತ್ತ್ವಂ ಮನಸೋ ಬ್ರಹ್ಮಣ ಇತಿ ? ಆಹ । ವಾಕ್ಪ್ರಾಣಶ್ಚಕ್ಷುಃಶ್ರೋತ್ರಮ್

---

1. ಅಧ್ಯಾತ್ಮವಾಗಿ ಮನಸ್ಸಿಗಿಂತಲೂ ಅಧಿದೈವತವಾಗಿ ಆಕಾಶಕ್ಕಿಂತಲೂ ಸೂಕ್ಷ್ಮವಾದ ಪ್ರತೀಕವು ದೊರಕುವದಿಲ್ಲ. 2. ಕ. ೨-೨-೧೧, ಬೃ. ೪-೪-೧೯.
3. ಬ್ರಹ್ಮದ ಗುಣಗಳು ಆಕಾಶದಲ್ಲಿ ಬಹಳವಾಗಿರುವದರಿಂದ ಅದನ್ನು ಪ್ರತೀಕವಾಗಿಟ್ಟುಕೊಂಡಿದೆ ಎಂದು ಭಾವ.

ಇತ್ಯೇತೇ ಪಾದಾಃ । ಇತಿ ಅಧ್ಯಾತ್ಮಮ್ । ಅಥ ಅಧಿದೈವತಮ್ । ಆಕಾಶಸ್ಯ ಬ್ರಹ್ಮಣಃ ಅಗ್ನಿರ್ವಾಯುರಾದಿತ್ಯೋ ದಿಶಃ ಇತ್ಯೇತೇ । ಏವಮ್ ಉಭಯಮೇವ ಚತುಷ್ಪಾದ್ ಬ್ರಹ್ಮ ಆದಿಷ್ಟಂ ಭವತಿ ಅಧ್ಯಾತ್ಮಂ ಚೈವ ಅಧಿದೈವತಂ ಚ ॥

(ಭಾಷ್ಯಾರ್ಥ)

ಆ ಈ ಮನಸ್ಸೆಂಬ ಬ್ರಹ್ಮವು ಚತುಷ್ಪಾತ್ತಾಗಿದೆ. ಇದಕ್ಕೆ ನಾಲ್ಕು ಪಾದಗಳು, ಆದ್ದರಿಂದ (ಚತುಷ್ಪಾತ್ತು). ಮನೋಬ್ರಹ್ಮಕ್ಕೆ ನಾಲ್ಕು ಪಾದಗಳೆಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ. ವಾಕ್ಕು, ಪ್ರಾಣ, ಚಕ್ಷುಸ್ಸು, ಶ್ರೋತ್ರ - ಎಂಬಿವು (ಅದರ) ಪಾದಗಳು. ಹೀಗೆ (ಹೇಳಿದ್ದು) ಅಧ್ಯಾತ್ಮವು. ಇನ್ನು ಅಧಿದೈವತವನ್ನು ಹೇಳಲಾಗುವದು. ಆಕಾಶಬ್ರಹ್ಮಕ್ಕೆ ಅಗ್ನಿ, ವಾಯು, ಆದಿತ್ಯ, ದಿಕ್ಕು - ಎಂಬಿವು (ಪಾದಗಳು). ಹೀಗೆ ಅಧ್ಯಾತ್ಮ, ಅಧಿದೈವತ - ಎಂಬೀ ಎರಡು (ಬಗೆಯ) ಚತುಷ್ಪಾದ್ಬ್ರಹ್ಮವನ್ನೂ ಹೇಳಿದಂತೆ ಆಯಿತು.

ಪಾದಗಳ ವಿವರಣೆ

(ಭಾಷ್ಯ)

೨೮೦. ತತ್ರ ವಾಗೇವ ಮನಸೋ ಬ್ರಹ್ಮಣಶ್ಚತುರ್ಥಃ ಪಾದಃ ಇತರ ಪಾದತ್ರಯಾಪೇಕ್ಷಯಾ । ವಾಚಾ ಹಿ ಪಾದೇನೈವ ಗವಾದಿವಕ್ತವ್ಯವಿಷಯಂ ಪ್ರತಿತಿಷ್ಠತಿ । ಅತೋ ಮನಸಃ ಪಾದ ಇವ ವಾಕ್ । ತಥಾ ಪ್ರಾಣೋ ಘ್ರಾಣಃ ಪಾದಃ । ತೇನಾಪಿ ಗನ್ಧವಿಷಯಂ ಪ್ರತಿ ಚಙ್ಕ್ರಮಿತಿ[1] । ತಥಾ ಚಕ್ಷುಃ ಪಾದಃ, ಶ್ರೋತ್ರಂ ಪಾದಃ । ಇತ್ಯೇವಮ್ ಅಧ್ಯಾತ್ಮಂ ಚತುಷ್ಪಾತ್ತ್ವಂ ಮನಸೋ ಬ್ರಹ್ಮಣಃ । ಅಥ ಅಧಿದೈವತಮ್ ಅಗ್ನಿವಾಯ್ವಾದಿತ್ಯದಿಶ ಆಕಾಶಸ್ಯ ಬ್ರಹ್ಮಣಃ ಉದರ ಇವ ಗೋಃ ಪಾದಾಃ[2] ವಿಲಗ್ನಾ ಉಪಲಭ್ಯನ್ತೇ । ತೇನ ತಸ್ಯ ಆಕಾಶಸ್ಯ ಅಗ್ನ್ಯಾದಯಃ ಪಾದಾ ಉಚ್ಯನ್ತೇ । ಏವಮ್ ಉಭಯಮ್ ಅಧ್ಯಾತ್ಮಂ ಚೈವಾಧಿದೈವತಂ ಚ[3] ಚತುಷ್ಪಾದ್ ಆದಿಷ್ಟಂ ಭವತಿ ॥

(ಭಾಷ್ಯಾರ್ಥ)

ಇವುಗಳೊಳಗೆ ವಾಕ್ಕೇ ಮನೋಬ್ರಹ್ಮದ ನಾಲ್ಕನೆಯ ಪಾದವು, ಉಳಿದ

1. ಚಂಕ್ರಾಮತಿ ಎಂಬುದನ್ನು ಹೀಗೆ ತಿದ್ದಿಕೊಂಡಿದೆ ; ಅಥವಾ ಚ ಇಲ್ಲದಿದ್ದರೂ ಆಗುತ್ತದೆ.
2. 'ಪಾದಾ ಇವ ಲಗಾಃ' ಎಂಬ ಪಾಠಕ್ಕಿಂತ ಈ ಆ॥ ಪಾಠವೇ ಮೇಲು.
3. ಈ ಚಶಬ್ದವಿರುವ ಪಾಠವೇ ಮೇಲು.

ಪಾದಗಳ ಅಪೇಕ್ಷೆಯಿಂದ (ಇದು ನಾಲ್ಕನೆಯದು).[1] ವಾಕ್ಕಿನಿಂದಲೇ ಅಲ್ಲವೆ, ಗೋವೇ ಮುಂತಾದದ್ದು (ತನ್ನ) ಕಾಲಿನಿಂದ ಹೇಗೋ ಹಾಗೆ (ಈ ಮನಸ್ಸು) ವಕ್ತವ್ಯವಿಷಯವನ್ನು ಪಡೆದುಕೊಳ್ಳುತ್ತದೆ ?[2] ಆದ್ದರಿಂದ ಮನಸ್ಸಿಗೆ ವಾಕ್ಕು ಪಾದದಂತೆ (ಇದೆ). ಹೀಗೆಯೇ ಪ್ರಾಣವು ಎಂದರೆ ಘ್ರಾಣವು ಪಾದವು. ಅದರಿಂದಲೂ ಗಂಧವೆಂಬ ವಿಷಯವನ್ನು ಪಡೆದುಕೊಳ್ಳುತ್ತದೆ. ಹೀಗೆಯೇ ಚಕ್ಷಸ್ಸು ಪಾದವು, ಶ್ರೋತ್ರವು ಪಾದವು- ಎಂದಿಂತು ಮನೋಬ್ರಹ್ಮಕ್ಕೆ ಅಧ್ಯಾತ್ಮವಾಗಿ ಚತುಷ್ಪಾತ್ತ್ವವಿದೆ. ಇನ್ನು ಅಧಿದೈವತವು, ಅಗ್ನಿವಾಯ್ವಾದಿತ್ಯದಿಕ್ಕುಗಳು ಆಕಾಶವೆಂಬ ಬ್ರಹ್ಮಕ್ಕೆ ಗೋವಿನ ಹೊಟ್ಟೆಯಲ್ಲಿ ಕಾಲುಗಳು (ಸೇರಿಕೊಂಡಿರು)ವಂತೆ ಸೇರಿಕೊಂಡು ಕಾಣಬರುತ್ತವೆ. ಆದ್ದರಿಂದ ಆ ಆಕಾಶಕ್ಕೆ ಅಗ್ನ್ಯಾದಿಗಳನ್ನು ಪಾದವೆಂದಿದೆ.[3] ಹೀಗೆ ಅಧ್ಯಾತ್ಮ ಅಧಿದೈವತ-(ಈ) ಎರಡು ಬಗೆಯ ಚತುಷ್ಪಾದ್ಬ್ರಹ್ಮವನ್ನು ಉಪದೇಶಮಾಡಿದಂತೆ ಆಯಿತು.

(ಉಪನಿಷತ್ತು)

ವಾಗೇವ ಬ್ರಹ್ಮಣಶ್ಚತುರ್ಥಃ ಪಾದಃ ಸೋಽಗ್ನಿನಾ ಜ್ಯೋತಿಷಾ ಭಾತಿ ಚ ತಪತಿ ಚ ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ ॥೩॥

ಪ್ರಾಣ ಏವ ಬ್ರಹ್ಮಣಶ್ಚತುರ್ಥಃ ಪಾದಃ ಸ ವಾಯುನಾ ಜ್ಯೋತಿಷಾ ಭಾತಿ ಚ ತಪತಿ ಚ ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ ॥೪॥

1. ಇಲ್ಲಿ 'ಚತುರ್ಥಃ ಪಾದಃ ಇತರಪಾದತ್ರಯಾಪೇಕ್ಷಯಾ' ಎಂಬ ಮಾತುಗಳು ಮುಂದಿನ ಕಂಡಿಕೆಯ ಭಾಷ್ಯದಲ್ಲಿದ್ದು ಇಲ್ಲಿಗೆ ಲೇಖಕರ ಪ್ರಮಾದದಿಂದ ಬಂದಿರಬಹುದು. ಇಲ್ಲಿ ಪಾದಃ ಎಂದಿಷ್ಟೇ ಇದ್ದಿರಬಹುದು ; ಏಕೆಂದರೆ ಮುಂದೆಯೂ ಪಾದಃ ಎಂದಿಷ್ಟೇ ಇದೆ. ಟೀಕೆಯಲ್ಲಿಯೂ ಪಾದಾನ್ ಪ್ರವಕ್ಷ್ಯತಿ ಎಂದಿಷ್ಟೇ ಇದೆ, ಅಥವಾ ಚತುರ್ಥಃ ಪಾದಃ ಎಂದಿಷ್ಟನ್ನು ಇಲ್ಲಿಗೆ ಆಕರ್ಷಣೆಯಿಂದ ಆಚಾರ್ಯರು ಸೇರಿಸಿಕೊಂಡಿದ್ದರೂ ಇರಬಹುದು. ಇದನ್ನು ಲಕ್ಷಿಸದೆ ಆ॥ ಪಾಠದಲ್ಲಿ ಈ ಭಾಷ್ಯಭಾಗವನ್ನು ಮುಂದಿನ ಕಂಡಿಕೆಗೇ ಜೋಡಿಸಿದೆ. ನಾವು ವಾ॥ ಪಾಠವನನ್ನುಸರಿಸಿ ಇಲ್ಲಿಗೇ ಈ ಭಾಗವನ್ನು ತಂದುಕೊಂಡಿರುತ್ತೇವೆ.

2. ಹೇಳುವದರಿಂದ ವಿಷಯೀಕರಿಸುತ್ತದೆ.

3. ಮನೋಬ್ರಹ್ಮವು ಆಯಾ ವಿಷಯಗಳನ್ನು ವಾಗಾದಿಗಳಿಂದ ಪಡೆದುಕೊಳ್ಳುತ್ತದೆ (ಪ್ರತಿಪದ್ಯತೇ)ಯಾದ್ದರಿಂದ ಅವು ಪಾದವೆನಿಸಿದೆ. ಅಗ್ನ್ಯಾದಿಗಳು ಗೋವಿನ ಪಾದಗಳಂತೆ ಬೇರೆಬೇರೆಯಾಗಿ ಆಕಾಶಬ್ರಹ್ಮಕ್ಕೆ ಸೇರಿಕೊಂಡಿವೆಯಾದ್ದರಿಂದ ಪಾದಗಳೆನಿಸಿವೆ.

ಚಕ್ಷುರೇವ ಬ್ರಹ್ಮಣಶ್ಚತುರ್ಥಃ ಪಾದಃ ಸ ಆದಿತ್ಯೇನ ಜ್ಯೋತಿಷಾ ಭಾತಿ ಚ ತಪತಿ ಚ ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ ॥೫॥

ಶ್ರೋತ್ರಮೇವ ಬ್ರಹ್ಮಣಶ್ಚತುರ್ಥಃ ಪಾದಃ ಸ ದಿಗ್ಭಿರ್ಜ್ಯೋತಿಷಾ ಭಾತಿ ಚ ತಪತಿ ಚ ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ ಯ ಏವಂ ವೇದ ॥೬॥

೩. ವಾಕ್ಕೇ ಬ್ರಹ್ಮದ ನಾಲ್ಕನೆಯ ಪಾದವು. ಅದು ಅಗ್ನಿಯೆಂಬ ಜ್ಯೋತಿಯಿಂದ ಹೊಳೆಯುತ್ತದೆ ಮತ್ತು ತಪಿಸುತ್ತದೆ. ಯಾವನು ಹೀಗೆಂದು ಅರಿತುಕೊಳ್ಳುವನೋ (ಅವನು) ಕೀರ್ತಿಯಿಂದಲೂ ಯಶಸ್ಸಿನಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ಹೊಳೆಯುತ್ತಾನೆ, ಮತ್ತು ತಪಿಸುತ್ತಾನೆ.

೪. ಪ್ರಾಣವೇ ಬ್ರಹ್ಮದ ನಾಲ್ಕನೆಯ ಪಾದವು. ಅದು ವಾಯು ವೆಂಬ ಜ್ಯೋತಿಯಿಂದ ಹೊಳೆಯುತ್ತದೆ ಮತ್ತು ತಪಿಸುತ್ತದೆ. ಯಾವನು ಹೀಗೆಂದು ಅರಿತುಕೊಳ್ಳುವನೋ (ಅವನು) ಕೀರ್ತಿಯಿಂದಲೂ ಯಶಸ್ಸಿನಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ಹೊಳೆಯುತ್ತಾನೆ, ಮತ್ತು ತಪಿಸುತ್ತಾನೆ.

೫. ಚಕ್ಷುಸ್ಸೇ ಬ್ರಹ್ಮದ ನಾಲ್ಕನೆಯ ಪಾದವು. ಅದು ಆದಿತ್ಯನೆಂಬ ಜ್ಯೋತಿಯಿಂದ ಹೊಳೆಯುತ್ತದೆ ಮತ್ತು ತಪಿಸುತ್ತದೆ. ಯಾವನು ಹೀಗೆಂದು ಅರಿತುಕೊಳ್ಳುವನೋ (ಅವನು) ಕೀರ್ತಿಯಿಂದಲೂ ಯಶಸ್ಸಿನಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ಹೊಳೆಯುತ್ತಾನೆ, ಮತ್ತು ತಪಿಸುತ್ತಾನೆ.

೬. ಶ್ರೋತ್ರವೇ ಬ್ರಹ್ಮದ ನಾಲ್ಕನೆಯ ಪಾದವು. ಅದು ದಿಕ್ಕುಗಳೆಂಬ ಜ್ಯೋತಿಯಿಂದ ಹೊಳೆಯುತ್ತದೆ ಮತ್ತು ತಪಿಸುತ್ತದೆ. ಯಾವನು ಹೀಗೆಂದು ಅರಿತುಕೊಳ್ಳುವನೋ ಯಾವನು ಹೀಗೆಂದು ಅರಿತುಕೊಳ್ಳುವನೋ (ಅವನು) ಕೀರ್ತಿಯಿಂದಲೂ ಯಶಸ್ಸಿನಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ಹೊಳೆಯುತ್ತಾನೆ, ಮತ್ತು ತಪಿಸುತ್ತಾನೆ.

ವಾಗಾದಿಪಾದಗಳಿಗೂ ಅಗ್ನ್ಯಾದಿಪಾದಗಳಿಗೂ ಸಂಬಂಧ

(ಭಾಷ್ಯ)

೨೮೧. ತತ್ರ ವಾಗೇವ ಮನಸೋ ಬ್ರಹ್ಮಣಶ್ಚತುರ್ಥಃ ಪಾದಃ । ಸೋಽಗ್ನಿನಾ ಅಧಿದೈವತೇನ ಜ್ಯೋತಿಷಾ ಭಾತಿ ಚ ದೀಪ್ಯತೇ ತಪತಿ ಚ ಸಂತಾಪಂ ಚ ಔಷ್ಣ್ಯಂ ಕರೋತಿ । ಅಥವಾ ತೈಲಘೃತಾದ್ಯಾಗ್ನೇಯಾಶನೇನ ಇದ್ಧಾ ವಾಕ್ ಭಾತಿ ಚ ತಪತಿ ಚ । ವದನಾಯ ಉತ್ಸಾಹವತೀ ಸ್ಯಾತ್ ಇತ್ಯರ್ಥಃ । ವಿದ್ವತ್ಫಲಮ್ । ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ಯಥೋಕ್ತಂ ವೇದ । ತಥಾ ಪ್ರಾಣ ಏವ ಬ್ರಹ್ಮಣಶ್ಚತುರ್ಥಃ ಪಾದಃ । ಸ ವಾಯುನಾ ಗನ್ಧಗ್ರಹಣಾಯ[1] ಭಾತಿ ಚ ತಪತಿ ಚ । ತಥಾ ಚಕ್ಷುಃ ಆದಿತ್ಯೇನ ರೂಪಗ್ರಹಣಾಯ, ಶ್ರೋತ್ರಂ ದಿಗ್ಭಿಃ ಶಬ್ದಗ್ರಹಣಾಯ । ವಿದ್ಯಾಫಲಂ ಸಮಾನಂ ಸರ್ವತ್ರ । ಬ್ರಹ್ಮ ಸಂಪತ್ತಿರದೃಷ್ಟಂ ಫಲಮ್ । ಯ ಏವಂ ವೇದ ಇತಿ[2] ದ್ವಿರುಕ್ತಿರ್ದರ್ಶನಸಮಾಪ್ತ್ಯರ್ಥಾ ॥

(ಭಾಷ್ಯಾರ್ಥ)

ಇವುಗಳಲ್ಲಿ ವಾಕ್ಕೇ ಮನಸ್ಸೆಂಬ ಬ್ರಹ್ಮದ ನಾಲ್ಕನೆಯ ಪಾದವು[3] ; ಅದು ಅಗ್ನಿ ಎಂಬ ಅಧಿದೈವತಜ್ಯೋತಿಯಿಂದ ಹೊಳೆಯುತ್ತದೆ, ಬೆಳಗುತ್ತದೆ ; ಮತ್ತು ತಪಿಸುತ್ತದೆ, ಔಷ್ಣ್ಯವನ್ನುಂಟುಮಾಡುತ್ತದೆ.[4] ಅಥವಾ ಎಣ್ಣೆ, ತುಪ್ಪ[5] - ಮುಂತಾದ ಅಗ್ನಿಸಂಬಂಧವಾದ (ವಸ್ತುಗಳನ್ನು) ಸೇವಿಸುವದರಿಂದ ಹೊತ್ತಿಕೊಂಡು ವಾಕ್ಕು ಹೊಳೆಯುತ್ತದೆ ಮತ್ತು ತಪಿಸುತ್ತದೆ ; ಮಾತಾಡುವದಕ್ಕೆ ಉತ್ಸಾಹವುಳ್ಳದ್ದಾಗುತ್ತದೆ ಎಂದರ್ಥ.[6] ಹೀಗೆಂದು ಉಪಾನೆಮಾಡುವವನಿಗೆ ಫಲ(ವಿದು) : ಯಾವನು ಈ ಮೇಲೆ

---

1. 'ಗನ್ಧಾಯ' ಎಂಬ ಅಚ್ಚಿನ ಪಾಠವನ್ನು ಹೀಗೆಂದು ತಿದ್ದಿಕೊಂಡಿದೆ.
2. ಈ ಮಾತು ಇಲ್ಲಿ ಇರಬೇಕೆಂದು ಸೇರಿಸಿಕೊಂಡಿದೆ.
3. ಹಿಂದಿನ ಕಂಡಿಕೆಯ ಭಾಷ್ಯದಲ್ಲಿರುವ 'ಇತರಪಾದತ್ರಯಾಪೇಕ್ಷಯಾ' ಎಂಬ ಮಾತು ಇಲ್ಲಿದ್ದರೆ ಚೆನ್ನಾಗಿರುತ್ತದೆ. ಒಂದನೆಯ, ಎರಡನೆಯ, ಮೂರನೆಯ, ನಾಲ್ಕನೆಯ ಪಾದ - ಎಂದು ಅನುಕ್ರಮಾರ್ಥದಲ್ಲಿ ನಾಲ್ಕನೆಯದೆಂದಿಲ್ಲ, ಪ್ರತಿಯೊಂದು ಪಾದವು, ನಾಲ್ಕನೆಯಂಶವು ಎಂದರ್ಥ.
4. ಅಧಿಷ್ಠಾತೃದೇವತೆಯ ಅನುಗ್ರಹದಿಂದ ತನ್ನ ಕೆಲಸವನ್ನು ಮಾಡಲು ಶಕ್ತವಾಗಿದೆ ಎಂದರ್ಥ. ಸೂ. ಭಾ. ೨-೪-೧೪ (ಭಾ. ಭಾ. ೧೯೭).
5. ವೈದ್ಯಶಾಸ್ತ್ರದಲ್ಲಿ ಸ್ವರವೈಶಿಷ್ಟ್ಯಕ್ಕೆ ಕೆಲವು ತೈಲಗಳನ್ನೂ ಘೃತಗಳನ್ನೂ ಹೇಳಿರುತ್ತದೆ.
6. ಇಲ್ಲಿಯೂ ಅಗ್ನ್ಯಾದಿಗಳ ಸಹಾಯವನ್ನು ವಾಗಾದಿಗಳು ಬಯಸಿದಂತೆ ಆಯಿತು.

ಹೇಳಿದಂತೆ ಅರಿತುಕೊಳ್ಳುವನೋ (ಅವನು) ಕೀರ್ತಿಯಿಂದಲೂ[1] ಯಶಸ್ಸಿನಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ಹೊಳೆಯುವನು ಮತ್ತು ತಪಿಸುವನು.

ಹೀಗೆಯೇ ಪ್ರಾಣವೇ ಬ್ರಹ್ಮದ ನಾಲ್ಕನೆಯ ಪಾದವು. ಅದು ವಾಯು(ವೆಂಬ ಜ್ಯೋತಿಯಿಂದ) ಗ್ರಂಥಗ್ರಹಣಕ್ಕಾಗಿ ಹೊಳೆಯುತ್ತದೆ ಮತ್ತು ತಪಿಸುತ್ತದೆ. ಹೀಗೆಯೇ ಆದಿತ್ಯನಿಂದ ರೂಪಗ್ರಹಣಕ್ಕಾಗಿಯೂ ಶ್ರೋತ್ರವು ದಿಕ್ಕುಗಳಿಂದ ಶಬ್ದಗ್ರಹಣಕ್ಕಾಗಿಯೂ (ಹೊಳೆಯುತ್ತದೆ ಮತ್ತು ತಪಿಸುತ್ತದೆ).

ಉಪಾಸನೆಯ ಫಲವು ಎಲ್ಲಾ (ಕಡೆಗಳಲ್ಲಿಯೂ ಸಮಾನವಾಗಿರುತ್ತದೆ.)[2] ಬ್ರಹ್ಮಸಂಪತ್ತಿಯು ಅದೃಷ್ಟಫಲವು. 'ಯ ಏವಂ ವೇದ' ಎಂದು ಎರಡು ಸಲ ಹೇಳಿರುವದು (ಈ) ಉಪಾಸನೆಯ ಸಮಾಪ್ತಿಯನ್ನು (ತಿಳಿಸು)ವದಕ್ಕೆ.

ಮೂರನೆಯ ಅಧ್ಯಾಯ - ಹತ್ತೊಂಬತ್ತನೆಯ ಖಂಡ

(ಆದಿತ್ಯಬ್ರಹ್ಮೋಪಾಸನೆ)

ಆ ಬ ೪ ೨

(ಉಪನಿಷತ್ತು)

ಆದಿತ್ಯೋ ಬ್ರಹ್ಮೇತ್ಯಾದೇಶಸ್ತಸ್ಯೋಪವ್ಯಾಖ್ಯಾನಮಸದೇವೇದಮಗ್ರ ಆಸೀತ್ । ತತ್ಸದಾಸೀತ್ತತ್ಸಮಭವತ್ತದಾಣ್ಡಂ ನಿರವರ್ತತ ತತ್ಸಂವತ್ಸರಸ್ಯ ಮಾತ್ರಾಮಶಯತ ತನ್ನಿರಭಿದ್ಯತ ತೇ ಆಣ್ಡಕಪಾಲೇ ರಜತಂ ಚ ಸುವರ್ಣಂ ಚಾಭವತಾಮ್ ॥೧॥

1. ಕೀರ್ತಿಯು ಪ್ರತ್ಯಕ್ಷ, ಯಶಸ್ಸು ಪರೋಕ್ಷ.

2. ಉಪಾಸನೆಗೆ ಕೀರ್ತಿ, ಯಶಸ್ಸು, ಬ್ರಹ್ಮವರ್ಚಸ್ಸು - ಎಂಬ ದೃಷ್ಟಫಲವಾಗುವದೆಂಬುದು ಸಮಾನವಾಗಿದೆ. ಕ್ರಮಮುಕ್ತಿಯಾಗಿ ಬ್ರಹ್ಮಪ್ರಾಪ್ತಿಯಾಗುವದೆಂಬುದು ಅದೃಷ್ಟ ಫಲವೆಂಬುದು ಸಮಾನವಾಗಿದೆ. ಇಲ್ಲಿ ಒಂದೊಂದು ಪಾದಕ್ಕೂ ಫಲವನ್ನು ಹೇಳಿದರೂ ಒಟ್ಟು ಉಪಾಸನೆಗೇ ಈ ಫಲವೆಂದು ತಿಳಿಯಬೇಕು. ಅಂಗೋಪಾಸನೆಗಳನ್ನು ಹೊಗಳಿರುವದು ಪ್ರಧಾನೋಪಾಸನೆಯ ಫಲವನ್ನು ತಿಳಿಸುವದಕ್ಕಾಗಿಯೇ.

೧. ಆದಿತ್ಯನು ಬ್ರಹ್ಮವೆಂದು ಆದೇಶವು. ಅದರ ಉಪವ್ಯಾಖ್ಯಾನ(ವನ್ನು ಮಾಡಲಾಗುವದು). ಇದು ಮೊದಲು ಅಸತ್ತೇ ಆಗಿತ್ತು ; ಅದು ಸತ್ತಾಗಿತ್ತು. ಅದು ಹುಟ್ಟಿತು. ಅದು ಆಂಡವಾಯಿತು. ಅದು ಸಂವತ್ಸರದವರೆಗೂ ಇದ್ದುಕೊಂಡಿತ್ತು. ಅದು ಒಡೆದುಕೊಂಡಿತು. ಆ ಆಂಡಕಪಾಲಗಳು ಬೆಳ್ಳಿಯೂ ಚಿನ್ನವೂ ಆದವು.

ಗ್ರಂಥಸಂಬಂಧ

(ಭಾಷ್ಯ)

೨೮೨. ಆದಿತ್ಯೋ ಬ್ರಹ್ಮಣಃ ಪಾದ ಉಕ್ತಃ ಇತಿ ತಸ್ಮಿನ್ ಸಕಲಬ್ರಹ್ಮದೃಷ್ಟ್ಯರ್ಥಮ್ ಇದಮಾರಭ್ಯತೇ॥

(ಭಾಷ್ಯಾರ್ಥ)

ಆದಿತ್ಯನು ಬ್ರಹ್ಮದ ಪಾದವೆಂದು (೩-೧೮-೨) ಹೇಳಿದ್ದಾಯಿತಾದ್ದರಿಂದ ಆ (ಆದಿತ್ಯ)ನಲ್ಲಿ ಸಕಲಬ್ರಹ್ಮದ ದೃಷ್ಟಿಯನ್ನು (ವಿಧಿಸ)ಬೇಕೆಂದು ಇದನ್ನು ಆರಂಭಿಸಿರುತ್ತದೆ.

ಸೃಷ್ಟಿಗೆ ಪೂರ್ವದಲ್ಲಿ ಜಗತ್ತು ಅವ್ಯಾಕೃತವಾಗಿತ್ತು

೨೮೩. ಆದಿತ್ಯೋ ಬ್ರಹ್ಮ ಇತಿ ಆದೇಶಃ ಉಪದೇಶಃ । ತಸ್ಯ ಉಪವ್ಯಾಖ್ಯಾನಂ ಕ್ರಿಯತೇ ಸ್ತುತ್ಯರ್ಥಮ್ । ಅಸತ್ ಅವ್ಯಾಕೃತನಾಮರೂಪಮ್ ಇದಂ ಜಗತ್ ಅಶೇಷಮ್ ಅಗ್ರೇ ಪ್ರಾಗವಸ್ಥಾಯಾಮ್ ಉತ್ಪತ್ತೇಃ ಆಸೀತ್ । ನ ತ್ವಸದೇವ । ''ಕಥಮಸತಃ ಸಜ್ಜಾಯೇತ'' (೬-೨-೨) ಇತಿ ಅಸತ್ಕಾರ್ಯತ್ವಸ್ಯ ಪ್ರತಿಷೇಧಾತ್ । ನನು ಇಹ ಅಸದೇವ ಇತಿ ವಿಧಾನಾತ್ ವಿಕಲ್ಪಃ ಸ್ಯಾತ್ । ನ । ಕ್ರಿಯಾಸ್ವಿವ ವಸ್ತುನಿ ವಿಕಲ್ಪಾನುಪಪತ್ತೇಃ । ಕಥಂ ತರ್ಹಿ ಇದಮ್ 'ಅಸದೇವ' ಇತಿ ? ನನ್ವಪೋಚಾಮ ಅವ್ಯಾಕೃತನಾಮರೂಪತ್ವಾತ್ ಅಸದಿವ ಅಸತ್ ಇತಿ । ನನ್ವೇವಶಬ್ದೋಽವ-ಧಾರಣಾರ್ಥಃ । ಸತ್ಯಮೇವಮ್ । ನ ತು ಸತ್ತಾಭಾವಮ್ ಅವಧಾರಯತಿ, ಕಿಂ ತರ್ಹಿ ವ್ಯಾಕೃತನಾಮರೂಪಾಭಾವಮ್ ಅವಧಾರಯತಿ[1] । ನಾಮರೂಪವ್ಯಾಕೃತವಿಷಯೇ ಸಚ್ಛಬ್ದಪ್ರಯೋಗೋ ದೃಷ್ಟಃ । ತಚ್ಚ ನಾಮರೂಪವ್ಯಾಕರಣಮ್ ಆದಿತ್ಯಾಯತ್ತಂ

---

[1] ಇದು ಪಾ॥ ಪಾಠದಲ್ಲಿ ಮಾತ್ರ ಇದೆ.

ಪ್ರಾಯಶೋ ಜಗತಃ । ತದಭಾವೇ ಹಿ ಅನ್ಧಂ ತಮ ಇವ ಇದಂ ನ ಪ್ರಜ್ಞಾಯೇತ ಕಿಂಚನ ಇತಿ । ಅತಃ ತತ್ಸ್ತುತಿಪರೇ ವಾಕ್ಯೇ ಸದಪೀದಂ ಪ್ರಾಕ್ ಉತ್ಪತ್ತೇರ್ಜಗತ್ ಅಸದೇವ ಇತಿ ಆದಿತ್ಯಂ ಸ್ತೌತಿ ಬ್ರಹದೃಷ್ಟ್ಯರ್ಹತ್ವಾಯ । ಆದಿತ್ಯನಿಮಿತ್ತೋ ಹಿ ಲೋಕೇ ಸದಿತಿ ವ್ಯವಹಾರಃ । ಯಥಾ ಅಸದೇವೇದಂ ರಾಜಕುಲಂ[1] ಸರ್ವಗುಣಸಂಪನ್ನೇ ಪೂರ್ಣವರ್ಮಣಿ ರಾಜನಿ ಅಸತೀತಿ ತದ್ವತ್ । ನ ಚ ಸತ್ತ್ವಮ್ ಅಸತ್ತ್ವಂ ವಾ ಇಹ ಜಗತಃ ಪ್ರತಿಪಿಪಾದಯಿಷಿತಮ್ ಆದಿತ್ಯೋ ಬ್ರಹ್ಮ ಇತ್ಯಾದೇಶಪರತ್ವಾತ್ । ಉಪಸಂಹರಿಷ್ಯತ್ಯನ್ತೇ 'ಆದಿತ್ಯಂ ಬ್ರಹ್ಮೇತ್ಯುಪಾಸ್ತೇ' (೩-೧೯-೪) ಇತಿ ॥

(ಭಾಷ್ಯಾರ್ಥ)

ಆದಿತ್ಯಬ್ರಹ್ಮವು ಎಂದು ಆದೇಶವು, ಉಪದೇಶವು. ಅದರ ಉಪವ್ಯಾಖ್ಯಾನವನ್ನು ಸ್ತುತಿಗಾಗಿ (ಈಗ) ಮಾಡಲಾಗುವದು. ಈ ಜಗತ್ತೆಲ್ಲವೂ ಮೊದಲು, ಹುಟ್ಟುವ ಮುನ್ನಿನ ಅವಸ್ಥೆಯಲ್ಲಿ ಅಸತ್ತಾಗಿತ್ತು, ನಾಮರೂಪಗಳಾಗಿ ವ್ಯಾಕೃತವಾಗದೆ (ಇತ್ತು ಎಂದು ಅರ್ಥವೇ ಹೊರತು ತೀರ) ಅಸತ್ತೇ (ಆಗಿತ್ತು) ಎಂದಲ್ಲ. ಏಕೆಂದರೆ "ಅಸತ್ತಿನಿಂದ ಸತ್ತು ಹೇಗೆ ಹುಟ್ಟೀತು ?" (೬-೨-೨) ಎಂದು ಅಸತ್ಕಾರ್ಯವಾದವನ್ನು (ಶ್ರುತಿಯಲ್ಲಿ) ಅಲ್ಲಗಳೆದಿದೆ.

(ಆಕ್ಷೇಪ) :- ಈ (ವಚನ)ದಲ್ಲಿ ಅಸತ್ತೇ ಎಂದಿರುವದರಿಂದ ವಿಕಲ್ಪವಾಗಬಹುದಲ್ಲ[2] !

(ಪರಿಹಾರ) :- ಹಾಗಲ್ಲ. ಏಕೆಂದರೆ **ಕ್ರಿಯೆಗಳಲ್ಲಿ ಹೇಗೋ ಹಾಗೆ ವಸ್ತುವಿನಲ್ಲಿ ವಿಕಲ್ಪ(ವಿರುವದು) ಹೊಂದುವದಿಲ್ಲ.**[3]

(ಆಕ್ಷೇಪ) :- ಹಾಗಾದರೆ 'ಅಸತ್ತೇ ಆಗಿತ್ತು' ಎಂದು (ಇಲ್ಲಿ ಹೇಳಿರುವದು) ಹೇಗೆ (ಸರಿ)[4] ?

1. ಈ ಪಾಠವೇ ಯುಕ್ತ. 2. ಶ್ರುತಿಯು ಸತ್ಕಾರ್ಯದಂತೆ ಅಸತ್ಕಾರ್ಯವನ್ನೂ ಒಪ್ಪಿದೆಯಲ್ಲ ! ಎರಡು ವಾಕ್ಯಕ್ಕೂ ಪ್ರಾಮಾಣ್ಯವಿರಬಹುದಲ್ಲವೆ ?
3. ಕ್ರಿಯಾವಾಕ್ಯಗಳು ಹೀಗೆ ಬೇರೆ ಬೇರೆಯಿರಬಹುದು ; ಏಕೆಂದರೆ ಕ್ರಿಯೆಯನ್ನು ಹೇಗಾದರೂ ಮಾಡಬಹುದು ; ಆದರೆ ವಸ್ತುತತ್ತ್ವವು ಹಾಗೂ ಇರಬಹುದು, ಹೀಗೂ ಇರಬಹುದು ಎನ್ನುವದಾಗದು.
4. ಈ ವಾಕ್ಯಕ್ಕೂ ಪ್ರಾಮಾಣ್ಯವಿರಬೇಕಲ್ಲವೆ ?

(ಪರಿಹಾರ) :- ನಾಮರೂಪವ್ಯಾಕರಣವಿಲ್ಲದ್ದರಿಂದ ಅಸತ್ತಿನಂತೆ ಇತ್ತು ಎಂದು (ಆಗಲೆ ವ್ಯಾಖ್ಯಾನವನ್ನು) ಹೇಳಿದೇವಲ್ಲ[1] !

(ಆಕ್ಷೇಪ) :- (ಇಲ್ಲಿರುವ) ಏವಶಬ್ದಕ್ಕೆ ಅವಧಾರಣೆಯೇ ಅರ್ಥವಲ್ಲವೆ[2] ?

(ಪರಿಹಾರ) :- ನಿಜ, ಹೀಗೆಯೇ ಸರಿ. ಆದರೆ (ಈ ಶಬ್ದವು) ಸತ್ತಲ್ಲವೆಂಬುದನ್ನು ಅವಧಾರಣೆಮಾಡುವದಿಲ್ಲ ; ಮತ್ತೇನೆಂದರೆ ವ್ಯಾಕೃತನಾಮರೂಪವಾಗಿರಲಿಲ್ಲ ವೆಂಬುದನ್ನು ಅವಧಾರಣೆಮಾಡುತ್ತದೆ. (ಇದರ ವಿವರ) : ನಾಮರೂಪಗಳಾಗಿ ವ್ಯಾಕೃತವಾದದ್ದರ ವಿಷಯದಲ್ಲಿ ಸತ್ ಎಂಬ ಶಬ್ದವನ್ನು ಪ್ರಯೋಗಿಸುವದು ಕಂಡುಬಂದಿದೆ(ಯಷ್ಟೆ ?) ಜಗತ್ತಿನ ಆ ನಾಮರೂಪವ್ಯಾಕರಣವು ಬಲುಮಟ್ಟಿಗೆ ಆದಿತ್ಯನಿಗೆ ಅಧೀನವಾಗಿರುತ್ತದೆ. ಹೇಗೆಂದರೆ ಆ (ಆದಿತ್ಯ)ನಿಲ್ಲದಿದ್ದರೆ ಇದೆಲ್ಲವೂ ಅಂಧಂತಮಸ್ಸಾಗಿರುವದು, ಯಾವದೊಂದೂ ಇಂಥದ್ದೆಂದು ತಿಳಿಯಬರಲಾರದು. ಆದ್ದರಿಂದ ಆ (ಆದಿತ್ಯನನ್ನು) ಹೊಗಳುವದಕ್ಕಾಗಿ ಬಂದಿರುವ ಈ ವಾಕ್ಯದಲ್ಲಿ[3] ಈ ಜಗತ್ತು ಹುಟ್ಟುವ ಮುಂಚೆ ಸತ್ತಾಗಿದ್ದರೂ ಅಸತ್ತೇ ಎಂದು- (ಆದಿತ್ಯನು) ಬ್ರಹ್ಮದೃಷ್ಟಿಗೆ ತಕ್ಕವನೆಂದು (ತಿಳಿಸುವದಕ್ಕಾಗಿ)- ಆದಿತ್ಯನನ್ನು ಹೊಗಳಿರುತ್ತದೆ. ಲೋಕದಲ್ಲಿ ಸತ್ತೆಂಬ ವ್ಯವಹಾರವು ಆದಿತ್ಯನ ನಿಮಿತ್ತದಿಂದಾಗುವದಷ್ಟೆ ? ಹೇಗೆ ''ಸರ್ವಗುಣಸಂಪನ್ನನಾದ ಪೂರ್ಣವರ್ಮರಾಜನು ಇಲ್ಲದಿದ್ದರೆ ಈ ರಾಜವಂಶವು ಅಸತ್ತೇ'' ಎನ್ನುವರೋ ಹಾಗೆಯೇ (ಇದು).[4] ಇದಲ್ಲದೆ ಇಲ್ಲಿ ಜಗತ್ತು ಸತ್ತೆಂದಾಗಲಿ ಅಸತ್ತೆಂದಾಗಲಿ ತಿಳಿಸಿಕೊಡಬೇಕೆಂಬ ಅಭಿಪ್ರಾಯವಿಲ್ಲ ; ಏಕೆಂದರೆ (ಇದಕ್ಕೆ) 'ಆದಿತ್ಯನು ಬ್ರಹ್ಮ' ಎಂಬ (ಉಪಾಸನೆಯನ್ನು) ಉಪದೇಶ

1. ಅಸತ್ತಿನಂತೆ ಇತ್ತು- ಎಂದರ್ಥದಲ್ಲಿಯೇ ಈ ವಾಕ್ಯಕ್ಕೇ ಪ್ರಾಮಾಣ್ಯವು- ಎಂದು ಅಭಿಪ್ರಾಯ.
2. ಅವಧಾರಣೆಯನ್ನು ಹೇಳುವ ಶಬ್ದವನ್ನು ಮುಖ್ಯಾರ್ಥದಿಂದ ತಪ್ಪಿಸಿ ಉಪಮಾನಾರ್ಥವನ್ನು ತೆಗೆದುಕೊಳ್ಳುವದಕ್ಕೇನು ಕಾರಣ ?
3. ಆದಿತ್ಯನನ್ನು ಹೊಗಳುವದೇಕೆಂದರೆ ಅವನನ್ನು ಬ್ರಹ್ಮದೃಷ್ಟಿಯಿಂದ ಉಪಾಸನೆಮಾಡಬೇಕೆಂದು ವಿಧಿಸುವದಕ್ಕಾಗಿ ; ಆದ್ದರಿಂದ ಈ ಸಂದರ್ಭದಲ್ಲಿ ಅಸತ್ತಿನಿಂದ ಸತ್ತುಂಟಾಗಲಾರದು ಎಂದು ಹೇಳುವ ತತ್ಪರವಾಕ್ಯವನ್ನು ತಳ್ಳಿಹಾಕಿ 'ಏವ' ಎಂಬ ಶಬ್ದದ ಆಧಾರದಿಂದ ಅಸದ್ವಾದವನ್ನು ತರುವದಕ್ಕೆ ಆಗುವದಿಲ್ಲ.
4. ಈ ಪ್ರಯೋಗದಲ್ಲಿ ಅಸತ್ತೆಂದರೆ ತೀರ ಇಲ್ಲದ್ದು ಎಂದೇನೂ ಅರ್ಥವಿಲ್ಲ, ಇದ್ದರೂ ಇಲ್ಲದಂತೆ- ಎಂದರ್ಥವೇ ಇಲ್ಲಿದೆ. ಹಾಗೆಯೇ ಪ್ರಕೃತದಲ್ಲಿ ಅವ್ಯಾಕೃತವನ್ನೂ ಅಸತ್ತೆಂದಿದೆ ಎಂದು ಕಲ್ಪಿಸುವದು ತಪ್ಪಲ್ಲ.

ಮಾಡುವದರಲ್ಲಿ ತಾತ್ಪರ್ಯವಿದೆ.[1] "(ಯಾವನು) ಆದಿತ್ಯನನ್ನು ಬ್ರಹ್ಮವೆಂದು ಉಪಾಸನೆಮಾಡುವನೋ...." (೩-೧೯-೪) ಎಂದು ಕೊನೆಯಲ್ಲಿ ಉಪಸಂಹಾರವನ್ನು ಮಾಡಿಯೂ ಇರುತ್ತದೆ.[2]

ಅಂಡಕಪಾಲಗಳುಂಟಾದದ್ದು

೨ಆ೪. ತತ್ ಸದಾಸೀತ್ । ತತ್ ಅಸಚ್ಛಬ್ದವಾಚ್ಯಂ ಪ್ರಾಗುತ್ಪತ್ತೇಃ ಸ್ತಿಮಿತಮ್ ನಿಸ್ಪನ್ದಮ್[3] ಅಸದಿವ ಸತ್ ಕಾರ್ಯಾಭಿಮುಖಿಮ್ ಈಷದುಪಜಾತಪ್ರವೃತ್ತಿ ಸದಾಸೀತ್ । ತತೋ ಲಬ್ಧಪರಿಸ್ಪನ್ದಂ ತತ್ ಸಮಭವತ್ ಅಲ್ಪತರನಾಮ ರೂಪವ್ಯಾಕರಣೇನ ಅಙ್ಕುರೀಭೂತಮಿವ ಬೀಜಮ್ । ತತೋಽಪಿ ಕ್ರಮೇಣ ಸ್ಥೂಲೀಭವತ್ ತತ್ ಅದ್ಭ್ಯಃ ಅಣ್ಡಂ ಸಮವರ್ತತ ಸಂವೃತ್ತಮ್ । ಅಣ್ಡಮ್ ಇತಿ ದೈರ್ಘ್ಯಂ ಘಾನ್ದಸಮ್ । ತದಣ್ಡಂ ಸಂವತ್ಸರಸ್ಯ ಕಾಲಸ್ಯ ಪ್ರಸಿದ್ಧಸ್ಯ ಮಾತ್ರಾಂ ಪರಿಮಾಣಮ್ ಅಭಿನಿಷ್ಪನ್ನರೂಪಮೇವ ಅಶಯತ ಸ್ಥಿತಂ ಬಭೂವ । ತತ್ ತತಃ ಸಂವತ್ಸರಪರಿಮಾಣಾತ್ ಕಾಲಾತ್ ಊರ್ಧ್ವಂ ನಿರಭಿದ್ಯತ ನಿರ್ಭಿನ್ನಂ ವಯಸಾಮಿವ ಅಣ್ಡಮ್ । ತಸ್ಯ ನಿರ್ಭಿನ್ನಸ್ಯ ಅಣ್ಡಸ್ಯ ಕಪಾಲೇ ದ್ವೇ ರಜತಂ ಚ ಸುವರ್ಣಂ ಚ ಅಭವತಾಂ ಸಂವೃತ್ತೇ ॥

(ಭಾಷ್ಯಾರ್ಥ)

ಅದು ಸತ್ತಾಯಿತು ; ಆ ಅಸಚ್ಛಬ್ದವಾಚ್ಯವಾದ (ಜಗತ್ತು) ಉತ್ಪತ್ತಿಯಾಗುವ ಮುಂಚೆ ಅಸತ್ತಿನ ಹಾಗೆ, ಅಲುಗಾಡದೆ ಚಲನವಿಲ್ಲದೆ ಇದ್ದದ್ದು ಕಾರ್ಯಾಭಿಮುಖವಾಗಿ ಒಂದಿಷ್ಟು ಪ್ರವೃತ್ತಿಯುಳ್ಳದ್ದಾಗಿ

1. ಜಗತ್ತನ್ನು ಅಸತ್ತೇ ಎಂದು ಪ್ರತಿಪಾದಿಸುವದು, ಆದಿತ್ಯನನ್ನು ಉಪಾಸನೆಮಾಡುವದಕ್ಕೂ ಹೋಗುವದು - ಎಂಬ ಎರಡು ತಾತ್ಪರ್ಯಗಳನ್ನು ಕಲ್ಪಿಸಿದರೆ ವಾಕ್ಯಭೇದವಾಗುತ್ತದೆ. ಆದ್ದರಿಂದ 'ನಾಮರೂಪವ್ಯಾಕರಣವು ಇರಲೇ ಇಲ್ಲ, ಆದ್ದರಿಂದ ಅಸತ್ತಿದ್ದಂತೆ ಇತ್ತು' ಎಂಬುದೇ ವಾಕ್ಯಕ್ಕೆ ತಾತ್ಪರ್ಯವೆಂದಾಯಿತು- ಎಂದು ಭಾವ.
2. ಉಪಕ್ರಮೋಪಸಂಹಾರಗಳಿಂದ ಈ ವಚನವು ಉಪಾಸನಾಪರವೆಂದು ನಿಶ್ಚಿತವಾಗುವದರಿಂದ ಇದು ವಸ್ತುಸ್ವಭಾವವನ್ನು ಹೇಳುವ ವಚನವಲ್ಲವೆಂದಾಗುತ್ತದೆ. ಆದ್ದರಿಂದ ಸತ್ಕಾರ್ಯಶ್ರುತಿಗೆ ಇದು ವಿರುದ್ಧವಲ್ಲ.
3. 'ಅನಿಸ್ಪನ್ದಮ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

ಸತ್ತಾಯಿತು.[1] ಆ ಬಳಿಕ ಚಲನೆಯನ್ನು ಹೊಂದಿ ಅಲ್ಪತರವಾದ ನಾಮರೂಪವ್ಯಾಕರಣ ದಿಂದ, ಬೀಜವು ಮೊಳಕೆಯಾಗುವಂತೆ, ಅದು (ಕಾರ್ಯವಾಗಿ) ಹುಟ್ಟಿತು. ಆಮೇಲೆ ಕ್ರಮವಾಗಿ ಇನ್ನೂ ಸ್ಥೂಲವಾಗಿ ಅದು ಅಪ್ಪಿನಿಂದ ಆಂಡವಾಯಿತು. (ಅಂಡ) ವಾಯಿತು. (ಇಲ್ಲಿ) 'ಆಂಡ'ವೆಂದು ದೀರ್ಘವಿರುವದು ವೈದಿಕ(ಪ್ರಯೋಗವು). ಆ ಅಂಡವು ಸಂವತ್ಸರವೆಂದು ಪ್ರಸಿದ್ಧವಾಗಿರುವ ಕಾಲದ ಮಾತ್ರೆಯನ್ನು ಎಂದರೆ (ಅಷ್ಟು) ಪರಿಮಾಣದ (ಕಾಲದ)ವರೆಗೆ ಸ್ವರೂಪದಲ್ಲಿ ಯಾವ ಬದಲಾವಣೆಯೂ ಇಲ್ಲದೆಯೇ ಇದ್ದುಕೊಂಡಿತ್ತು, (ಹಾಗೆಯೇ) ಇತ್ತು. ಅದು ಆ ಬಳಿಕ, ಸಂವತ್ಸರ ಪರಿಮಾಣದ ಕಾಲವಾದಮೇಲೆ ಒಡೆಯಿತು, ಹಕ್ಕಿಗಳ ಅಂಡದಂತೆ ಒಡೆದುಕೊಂಡಿತು. (ಹಾಗೆ) ಒಡೆದುಕೊಂಡ ಆ ಅಂಡದ ಹೋಳುಗಳು ಬೆಳ್ಳಿಯೂ ಚಿನ್ನವೂ ಆದವು, ಆಗಿ ತೋರಿಕೊಂಡವು.

(ಉಪನಿಷತ್ತು)

ತದ್ಯದ್ರಜತಗ್ಂ ಸೇಯಂ ಪೃಥಿವೀ ಯತ್ ಸುವರ್ಣಗ್ಂ ಸಾ ದ್ಯೌರ್ಯಜ್ಜರಾಯು ತೇ ಪರ್ವತಾ ಯದುಲ್ಬಗ್ಂ ಸಮೇಘೋ ನೀಹಾರೋ ಯಾ ಧಮನಯಸ್ತಾ ನದ್ಯೋ ಯದಾಸ್ತೇಯ-ಮುದಕಗ್ಂ ಸ ಸಮುದ್ರಃ ॥೨॥

೨. ಅಲ್ಲಿ ಬೆಳ್ಳಿಯಿತ್ತಲ್ಲ, ಅದೇ ಈ ಪೃಥಿವಿ ; ಚಿನ್ನವಿತ್ತಲ್ಲ, ಅದೇ ದ್ಯುಲೋಕವು ; ಜರಾಯುವಿತ್ತಲ್ಲ, ಅದೇ ಪರ್ವತಗಳು ; ಉಲ್ಬವಿತ್ತಲ್ಲ, (ಅದೇ) ಮೋಡಗಳಿಂದೊಡಗೂಡಿದ ನೀಹಾರವು ; ಧಮನಿಗಳಿದ್ದವಲ್ಲ, ಅವೇ ನದಿಗಳು ; ವಾಸ್ತೇಯ ಉದಕವಿತ್ತಲ್ಲ, ಅದೇ ಸಮುದ್ರವು.

ಅಂಡವು ಒಡೆದುಕೊಂಡಿದ್ದಾಗ ಹುಟ್ಟಿದ ವಸ್ತುಗಳು

(ಭಾಷ್ಯ)

೨೮೫. ತತ್ ತಯೋಃ ಕಪಾಲಯೋಃ ಯತ್ ರಜತಂ ಕಪಾಲಮಾಸೀತ್

ಅವ್ಯಾಕೃತವು ವ್ಯಾಕೃತವಾಗುವ ಬಗೆಯನ್ನು ಮುಂ. ಭಾ ೧-೧-೮ (ಭಾ. ಭಾ. ೨೩), ಬೃ. ಭಾ. ೧-೨, ೧-೪ ಇವುಗಳಲ್ಲಿಯೂ ವರ್ಣಿಸಿದೆ. ಆಸತ್ತು ಇತ್ತು ಎನ್ನುವದೂ ಅದು ಸತ್ತಾಯಿತು ಎನ್ನುವದೂ ಸತ್ಕಾರ್ಯವಾದಕ್ಕೆ ಹೊಂದುವದಿಲ್ಲ ; ಏಕೆಂದರೆ ಆಸತ್ತಿಗೆ ಕಾಲಸಂಬಂಧವಿಲ್ಲ, ಇರುವಿಕೆಯ ಸಂಬಂಧವೂ ಇಲ್ಲ. ಸೂ. ಭಾ. ೨-೧-೧೭ (ಭಾ. ಭಾ. ೪೪೫ನ್ನು ನೋಡಿ).

ಸೇಯಂ ಪೃಥಿವೀ । ಪೃಥಿವ್ಯುಪಲಕ್ಷಿತಮ್ ಅಧೋಽಣ್ಡಕಪಾಲಮ್ ಇತ್ಯರ್ಥಃ । ಯತ್ ಸುವರ್ಣಂ ಕಪಾಲಂ ಸಾ ದ್ಯೌಃ । ದ್ಯುಲೋಕೋಪಲಕ್ಷಿತಮ್ ಊರ್ಧ್ವಕಪಾಲಮ್ ಇತ್ಯರ್ಥಃ । ಯತ್ ಜರಾಯು ಗರ್ಭಪರಿವೇಷ್ಟನಂ ಸ್ಥೂಲಮ್ ಅಣ್ಡಸ್ಯ ದ್ವಿಶಕಲೀಭಾವಕಾಲೇ ಆಸೀತ್ ತೇ ಪರ್ವತಾ ಬಭೂವುಃ । ಯದುಲ್ಬಂ ಸೂಕ್ಷ್ಮಂ ಗರ್ಭಪರಿವೇಷ್ಟನಂ ತತ್ ಸಹ ಮೇಘೈಃ ಸಮೇಘಃ ನೀಹಾರಃ ಅವಶ್ಯಾಯೋ ಬಭೂವ ಇತ್ಯರ್ಥಃ । ಯಾ ಗರ್ಭಸ್ಯ ಜಾತಸ್ಯ ದೇಹೇ ಧಮನಯಃ ಶಿರಾಃ ತಾ ನದ್ಯೋ ಬಭೂವುಃ । ಯತ್ ತಸ್ಯ ವಸ್ತೌ ಭವಂ ವಾಸ್ತೇಯಮ್ ಉದಕಂ ಸ ಸಮುದ್ರಃ ॥

(ಭಾಷ್ಯಾರ್ಥ)

ಅಲ್ಲಿ ಎಂದರೆ ಆ ಹೋಳುಗಳೊಳಗೆ ಬೆಳ್ಳಿಯಿತ್ತಲ್ಲ, (ಬೆಳ್ಳಿಯ) ಹೋಳಿತ್ತಲ್ಲ, ಅದೇ ಈ ಪೃಥಿವಿಯು ; ಪೃಥಿವಿಯೆಂಬ ಉಪಲಕ್ಷಣವುಳ್ಳ ಕೆಳಗಿನ ಅಂಡಕಪಾಲವು ಎಂದರ್ಥ. ಚಿನ್ನದ ಹೋಳಿತ್ತಲ್ಲ, ಅದು ದ್ಯುಲೋಕವು ; ದ್ಯುಲೋಕವೆಂಬ ಉಪಲಕ್ಷಣವುಳ್ಳ ಮೇಲಿನ ಕಪಾಲವು ಎಂದರ್ಥ. ಜರಾಯುವಿತ್ತಲ್ಲ, ಎರಡು ಹೋಳಾಗುವ ಕಾಲಕ್ಕೆ ಮೊಟ್ಟೆಯ ಮೇಲಿನ ದಪ್ಪನೆಯ ಪೊರೆಯಿತ್ತಲ್ಲ, ಅದು ಪರ್ವತಗಳಾಯಿತು. ಉಲ್ಬವು ಎಂದರೆ ಗರ್ಭದ ಮೇಲಿನ ತೆಳುವಾದ ಪೊರೆಯಿತ್ತಲ್ಲ, ಅದು ಸಮೇಘವಾದ ಎಂದರೆ ಮೋಡಗಳಿಂದೊಡಗೂಡಿದ ನೀಹಾರವು ಮಂಜು ಆಯಿತು ಎಂದರ್ಥ.[1] ಹುಟ್ಟಿದ ಗರ್ಭದ ದೇಹದಲ್ಲಿ ಧಮನಿಗಳು ಎಂದರೆ ನಾಡಿ (ಗಳಿದ್ದ)ವಲ್ಲ, ಅವು ನದಿಗಳಾದವು, ವಾಸ್ತೇಯವಾದ, ಎಂದರೆ ವಸ್ತಿಯಲ್ಲಿದ್ದ[2] ನೀರಿತ್ತಲ್ಲ, ಅದು ಸಮುದ್ರವಾಯಿತು.

(ಉಪನಿಷತ್ತು)

ಅಥ ಯತ್ತದಜಾಯತ ಸೋಽಸಾವಾದಿತ್ಯಸ್ತಂ ಜಾಯಮಾನಂ ಘೋಷಾ ಉಲೂಲವೋಽನೂದತಿಷ್ಠನ್ ಸರ್ವಾಣಿ ಚ ಭೂತಾನಿ ಸರ್ವೇ ಚ ಕಾಮಾಸ್ತಸ್ಮಾತ್ ತಸ್ಯೋದಯಂ ಪ್ರತಿ ಪ್ರತ್ಯಾಯನಂ ಪ್ರತಿ ಘೋಷಾ ಉಲೂಲವೋಽನೂತ್ತಿಷ್ಠನ್ತಿ ಸರ್ವಾಣಿ ಚ ಭೂತಾನಿ ಸರ್ವೇ ಚ ಕಾಮಾಃ ॥೩॥

1. ಮೋಡಗಳೂ ಮಂಜೂ ಆದವು ಎಂದರ್ಥ.
2. ವಸ್ತಿ ಎಂದರೆ ಮೂತ್ರಾಶಯವು ; ಈ ಶಬ್ದಕ್ಕೆ ಬಸ್ತಿ ಎಂಬ ರೂಪವೂ ಉಂಟು. ೫-೧೬-೨ನ್ನು ನೋಡಿ.

೩. ಇನ್ನು (ಆಗ) ಹುಟ್ಟಿತಲ್ಲ, ಅದೇ ಈ ಆದಿತ್ಯನು. ಅವನು ಹುಟ್ಟಿದಾಗ ಬಲುಗಟ್ಟಿಯಾದ ಘೋಷಗಳು ಎದ್ದುಕೊಂಡವು. ಸರ್ವಭೂತಗಳೂ ಸರ್ವಕಾಮಗಳೂ (ಎದ್ದುಕೊಂಡವು). ಆದ್ದರಿಂದ ಅವನ ಉದಯವಾಗುವಾಗಲೂ ಪ್ರತ್ಯಾಯನವಾಗುವಾಗಲೂ ಸರ್ವಭೂತಗಳೂ ಸರ್ವಕಾಮಗಳೂ ಒಡನೆಯೇ ಎದ್ದುಕೊಳ್ಳುವವು.

ಆದಿತ್ಯನ ಜನ್ಮದಲ್ಲಾದ ವಿಶೇಷಗಳು

(ಭಾಷ್ಯ)

೨೮೬. ಅಥ ಯತ್ತದಜಾಯತ ಗರ್ಭರೂಪಂ ತಸ್ಮಿನ್ ಅಣ್ಡೇ ಸೋಽಸಾವಾದಿತ್ಯಃ । ತಮಾದಿತ್ಯಂ ಜಾಯಮಾನಂ ಘೋಷಾಃ ಶಬ್ದಾಃ ಉಲೂಲವಃ ಉರೂರವೋ ವಿಸ್ತೀರ್ಣರವಾಃ ಉದತಿಷ್ಠನ್ ಉತ್ತಿತವನ್ತಃ । ಈಶ್ವರಸ್ಯೇವ ಇಹ ಪ್ರಥಮಪುತ್ರಜನ್ಮನಿ । ಸರ್ವಾಣಿ ಚ ಸ್ಥಾವರಜಙ್ಗಮಾನಿ ಭೂತಾನಿ ಸರ್ವೇ ಚ ತೇಷಾಂ ಭೂತಾನಾಂ ಕಾಮಾಃ । ಕಾಮ್ಯನ್ತ ಇತಿ ವಿಷಯಾಃ ಸ್ತ್ರೀವಸ್ತ್ರಾನ್ನಾದಯಃ । ಯಸ್ಮಾತ್ ಆದಿತ್ಯಜನ್ಮನಿಮಿತ್ತಾ ಭೂತಕಾಮೋತ್ಪತ್ತಿಃ ತಸ್ಮಾತ್ ಅದ್ಯತ್ವೇಽಪಿ ತಸ್ಯ ಆದಿತ್ಯಸ್ಯ ಉದಯಂ ಪ್ರತಿ ಪ್ರತ್ಯಾಯನಂ ಪ್ರತಿ ಅಸ್ತಗಮನಂ ಚ ಪ್ರತಿ । ಅಥವಾ ಪುನಃ ಪುನಃ ಪ್ರತ್ಯಾಗಮನಂ ಪ್ರತ್ಯಾಯನಮ್ । ತತ್ ಪ್ರತಿ । ತನ್ನಿಮಿತ್ತೀಕೃತ್ಯ ಇತ್ಯರ್ಥಃ । ಸರ್ವಾಣಿ ಚ ಭೂತಾನಿ ಸರ್ವೇ ಚ ಕಾಮಾಃ ಘೋಷಾಃ ಉಲೂಲವಶ್ಚ ಅನೂತ್ತಿಷ್ಠನ್ತಿ । ಪ್ರಸಿದ್ಧಂ ಹ್ಯೇತತ್ ಉದಯಾದೌ ಸವಿತುಃ ॥

(ಭಾಷ್ಯಾರ್ಥ)

ಇನ್ನು ಆ ಅಂಡದಲ್ಲಿ ಗರ್ಭರೂಪವಾಗಿ ಹುಟ್ಟಿತಲ್ಲ, ಅದೇ ಆದಿತ್ಯನು. ಆ ಆದಿತ್ಯನು ಹುಟ್ಟುತ್ತಲೂ (ಉಲೂಲವಃ= ಉರೂರವಃ) ಬಲುಗಟ್ಟಿಯಾದ ಬಹಳ ಗದ್ದಲವನ್ನುಂಟುಮಾಡುವ ಘೋಷಗಳು ಶಬ್ದಗಳು[1] ಎದ್ದುಕೊಂಡವು, ಈಶ್ವರನಾದವನಿಗೆ[2] ಚೊಚ್ಚಲಮಗನು ಹುಟ್ಟಿದಾಗ (ಆಗು)ವಂತೆ ಎದ್ದುಕೊಂಡವು. ಸ್ಥಾವರಜಂಗಮಭೂತಗಳೆಲ್ಲವೂ ಮತ್ತು ಆ ಭೂತಗಳ ಕಾಮಗಳೆಲ್ಲವೂ- (ಕಾಮಗಳು ಎಂದರೆ) ಕಾಮಿಸಲ್ಪಡುವ ಸ್ತ್ರೀವಸ್ತ್ರಾನ್ನಾದಿವಿಷಯಗಳು, ಅವುಗಳೂ- (ಉಂಟಾದವು. ಹೀಗೆ) ಆದಿತ್ಯಜನ್ಮದ ನಿಮಿತ್ತದಿಂದಲೇ ಭೂತಕಾಮಗಳ ಉತ್ಪತ್ತಿಯಾಯಿತಷ್ಟೆ,

1. ಉತ್ಸವಕಾಲದಲ್ಲಿ ಆಗುವ ಶಬ್ದಗಳು ಎಂದು ಆ॥ ಗಿ॥ ಟೀಕೆ.
2. ಐಶ್ವರ್ಯವಂತನಿಗೆ ಅಥವಾ ರಾಜನಿಗೆ.

ಆದ್ದರಿಂದ ಈಗಲೂ ಆ ಆದಿತ್ಯನ ಉದಯವಾಗುತ್ತಲೂ, ಪ್ರತ್ಯಾಯನವಾಗುತ್ತಲೂ ಎಂದರೆ ಅಸ್ತಮಯವಾಗುತ್ತಲೂ- ಅಥವಾ ಮತ್ತೆಮತ್ತೆ ಹಿಂತಿರುಗಿಬರುವದೇ ಪ್ರತ್ಯಾಯನವು ; ಆದು ಆಗುತ್ತಲೂ[1] - ಆದನ್ನು ನಿಮಿತ್ತವಾಗಿ ಮಾಡಿಕೊಂಡು ಎಂದರ್ಥ. ಸರ್ವಭೂತಗಳೂ ಸರ್ವಕಾಮಗಳೂ ಬಲುಗಟ್ಟಿಯಾದ ಘೋಷಗಳೂ ಎದ್ದುಕೊಳ್ಳುತ್ತವೆ. ಸೂರ್ಯನ ಉದಯಾದಿಯಲ್ಲಿ ಇದು ಪ್ರಸಿದ್ಧವಷ್ಟೆ ?

(ಉಪನಿಷತ್ತು)

ಸ ಯ ಏತಮೇವಂ ವಿದ್ವಾನಾದಿತ್ಯಂ ಬ್ರಹ್ಮೇತ್ಯುಪಾಸ್ತೇऽಭ್ಯಾಶೋ ಹ ಯದೇನಗ್ಂ ಸಾಧವೋ ಘೋಷಾ ಆ ಚ ಗಚ್ಛೇಯುರುಪ ಚ ನಿಮ್ರೇಡೇರನ್ನಿಮ್ರೇಡೇರನ್ ॥೪॥

೪. ಯಾವನು ಹೀಗೆಂದರಿತುಕೊಂಡು ಈ ಆದಿತ್ಯನನ್ನು ಬ್ರಹ್ಮವೆಂದು ಉಪಾಸನೆಮಾಡುವನೋ ಅವನು (ಅವನನ್ನೇ ಸೇರುವನು). ಅವನ ಬಳಿಗೆ ಬೇಗನೆ ಒಳ್ಳೆಯ ಘೋಷಗಳು ಬರುವವು ಮತ್ತು ಒಳ್ಳೆಯದನ್ನು ಮಾಡುವವು, ಒಳ್ಳೆಯದನ್ನು ಮಾಡುವವು.

ಆದಿತ್ಯಬ್ರಹ್ಮೋಪಾಸನೆಗೆ ಫಲ

೨೮೭. ಸ ಯಃ ಕಶ್ಚಿತ್ ಏತಮ್ ಏವಂ ಯಥೋಕ್ತಮಹಿಮಾನಂ ವಿದ್ವಾನ್ ಸನ್ ಆದಿತ್ಯಂ ಬ್ರಹ್ಮೇತ್ಯುಪಾಸ್ತೇ ಸ ತದ್ಭಾವಂ ಪ್ರತಿಪದ್ಯತೇ ಇತ್ಯರ್ಥಃ । ಕಿಂ ಚ ದೃಷ್ಟಂ ಫಲಮ್ ಅಭ್ಯಾಶೋ ಹ ಕ್ಷಿಪ್ರಂ ತದ್ವಿದೋ ಯತ್ ಇತಿ ಕ್ರಿಯಾ ವಿಶೇಷಣಮ್ ಏನಮ್ ಏವಂವಿದಂ ಸಾಧವಃ ಶೋಭನಾ ಘೋಷಾಃ । ಸಾಧುತ್ವಂ ಘೋಷಾದೀನಾಂ ಯದುಪಭೋಗೇ ಪಾಪಾನುಬನ್ಧಾಭಾವಃ । ಆ ಚ ಗಚ್ಛೇಯುಃ ಆಗಚ್ಛೇಯುಶ್ಚ । ಉಪ ಚ ನಿಮ್ರೇಡೇರನ್ ಉಪನಿಮ್ರೇಡೇರಂಶ್ಚ । ನ ಕೇವಲಮ್ ಆಗಮನಮಾತ್ರಂ ಘೋಷಾಣಾಮ್ ಉಪಸುಖಿಯೇಯುಶ್ಚ, ಉಪಸುಖಂ ಚ ಕುರ್ಯುಃ ಇತ್ಯರ್ಥಃ । ದ್ವಿರಭ್ಯಾಸೋऽಧ್ಯಾಯಪರಿಸಮಾಪ್ತ್ಯರ್ಥಃ, ಆದರಾರ್ಥಶ್ಚ ॥

---

1. ಈ ಎರಡನೆಯ ಅರ್ಥವೇ ಇಲ್ಲಿ ಹೆಚ್ಚು ಒಪ್ಪುತ್ತದೆ - ಎಂಬುದು ವಾಕ್ಯವಿಶೇಷದಿಂದ ಗೊತಾಗುತದೆ.

ಸ್ಯಾತ್.)

ಯಾವನೊಬ್ಬನು ಇವನನ್ನು ಹೀಗೆಂದು ಮೇಲೆ ಹೇಳಿರುವ ಮಹಿಮೆಯವನೆಂದು ಅರಿತುಕೊಂಡವನಾಗಿ (ಈ) ಆದಿತ್ಯನನ್ನು ಬ್ರಹ್ಮವೆಂದು ಉಪಾಸನೆಮಾಡುವನೋ, ಅವನು ಈ (ಬ್ರಹ್ಮದ) ಸ್ವರೂಪವನ್ನು ಪಡೆದುಕೊಳ್ಳುತ್ತಾನೆ ಎಂದರ್ಥ.[1] ಮತ್ತು ದೃಷ್ಟಫಲವೇನೆಂದರೆ (ಅಭ್ಯಾಶಃ = ಕ್ಷಿಪ್ರಮ್) ಬೇಗನೆ ಹೀಗೆಂದು ಉಪಾಸನೆಮಾಡುವ ಈ (ಉಪಾಸಕ)ನಿಗೆ - ಇಲ್ಲಿ (ಮೂಲದಲ್ಲಿ) ಯತ್ ಎಂದಿರುವದು ಕ್ರಿಯಾವಿಶೇಷಣವು. ಒಳ್ಳೆಯ ಉತ್ತಮವಾದ ಘೋಷಗಳು - ಘೋಷಗಳೇ ಮುಂತಾದವು[2] ಒಳ್ಳೆಯವಾಗಿರುವದೆಂದರೆ ಉಪಭೋಗಿಸಿದರೆ ಪಾಪಸಂಬಂಧ ವಿಲ್ಲದಿರುವದೇ- (ಆ ಚ ಗಚ್ಛೇಯುಃ = ಆಗಚ್ಛೇಯುಶ್ಚ) ಬಂದೂ ಬರುತ್ತವೆ ; ಮತ್ತು (ಉಪ ಚ ನಿಮ್ರೇಡೇರನ್ = ಉಪನಿಮ್ರೇಡೇರಂಶ್ಚ) ಒಳ್ಳೆಯವಾಗಿದ್ದುಕೊಂಡೂ ಇರುವವು. (ಈ ಘೋಷಾದಿಗಳು) ಬರುವವೆಂಬುದಿಷ್ಟೇ ಅಲ್ಲ, ಉಪಸುಖವನ್ನುಂಟುಮಾಡುತ್ತಲೂ ಇರುವವು ಎಂದರ್ಥ. (ನಿಮ್ರೇಡೇರನ್ ಎಂದು) ಎರಡು ಸಲ ಹೇಳಿರುವದು ಅಧ್ಯಾಯವು ಮುಗಿಯಿತೆಂಬುದಕ್ಕೆ ಮತ್ತು (ಈ ಉಪಾಸನೆಯಲ್ಲಿ) ಆದರವನ್ನುಂಟುಮಾಡುವದಕ್ಕೆ.

1. ಇದು ಅದೃಷ್ಟಫಲವು.
2. ಕಾಮಗಳನ್ನೂ ಇಲ್ಲಿ ಸೇರಿಸಿಕೊಳ್ಳಬೇಕೆಂದು ಸ ಎಂಬ ಸರ್ವನಾಮದಿಂದಲೇ ಉಕ್ತವಾಗಿದೆ - ಎಂದು ಭಾವ.

ಮೂರನೆಯ ಅಧ್ಯಾಯದ ಸಾರ

ಈ ಅಧ್ಯಾಯದಲ್ಲಿ ಮಧುವಿದ್ಯೆ, ಗಾಯತ್ರೀಬ್ರಹ್ಮೋಪಾಸನೆ, ಶಾಂಡಿಲ್ಯವಿದ್ಯೆ, ಕೋಶವಿದ್ಯೆ, ಪುರುಷವಿದ್ಯೆ, ಮನಆಕಾಶಬ್ರಹ್ಮೋಪಾಸನೆಗಳು- ಇವುಗಳನ್ನು ಹೇಳಿದೆ.

ಖಂಡಗಳು ಒಂದರಿಂದ ಹನ್ನೊಂದರವರೆಗೆ

ಸೂಚನೆ : ಇಲ್ಲಿ ಮೊದಲು ಖಂಡಸಂಖ್ಯೆ, ಮುಂದೆ ಕೊಟ್ಟಿರುವದು ಕಂಡಿಕೆಗಳ ಸಂಖ್ಯೆ.

ಖಂ. ೧ ಕಂ. ೧-೪. ಆದಿತ್ಯನು ದೇವಮಧು. ಆ ಮಧುವಿಗೆ ದ್ಯುಲೋಕವೇ ಅಡ್ಡಬಿದಿರು ; ಅಂತರಿಕ್ಷವು ಹುಟ್ಟಿ ; ರಶ್ಮಿಗಳಲ್ಲಿರುವ ಆಪ್ಪೇ ಭ್ರಮರಬೀಜಗಳು. ಋಕ್ಕುಗಳೆಂಬ ಭ್ರಮರಗಳು ಋಗ್ವೇದವೆಂಬ ಹೂವಿನಿಂದ ಹೀರಿಕೊಂಡುಬಂದಿರುವ- ಕರ್ಮದಲ್ಲಿ ಅವು ಉಪಯುಕ್ತವಾದಾಗ ಉಂಟಾಗುವ ಯಶಸ್ಸು, ತೇಜಸ್ಸು, ಇಂದ್ರಿಯ, ವೀರ್ಯ, ಅನ್ನ - ಎಂಬ ರಸವು ಪೂರ್ವದಿಕ್ಕಿನ ರಶ್ಮಿಗಳೆಂಬ ಮಧುನಾಡಿಗಳಲ್ಲಿ ರೋಹಿತರೂಪದಿಂದ ನಿಂತಿರುತ್ತದೆ.

ಖಂ. ೨ ಕಂ. ೧-೩. ಹೀಗೆಯೇ ಯಜುಸ್ಸುಗಳಿಂದ ಉಂಟಾದ ರಸವು ದಕ್ಷಿಣದಿಕ್ಕಿನ ರಶ್ಮಿಗಳಲ್ಲಿ ಶುಕ್ಲರೂಪದಿಂದ ನಿಂತಿರುತ್ತದೆ.

ಖಂ. ೩ ಕಂ. ೧-೩. ಸಾಮಗಳಿಂದ ಉಂಟಾದ ರಸವು ಪಶ್ಚಿಮದಿಕ್ಕಿನ ರಶ್ಮಿಗಳಲ್ಲಿ ಕೃಷ್ಣರೂಪದಿಂದ ನಿಂತಿರುತ್ತದೆ.

ಖಂ. ೪ ಕಂ. ೧-೩. ಅಥರ್ವಾಂಗಿರಸನಿಂದ ದೃಷ್ಟವಾದ ಮಂತ್ರಗಳು ಪಾರಿಪ್ಲವದಲ್ಲಿ ಪ್ರಯುಕ್ತವಾಗುವ ಇತಿಹಾಸಪುರಾಣಗಳೆಂಬ ಪುಷ್ಪಗಳಿಂದ ತಂದ ರಸವು ಹೆಚ್ಚಿನ ಕೃಷ್ಣರೂಪವಾಗಿ ಉತ್ತರದ ರಶ್ಮಿಗಳಲ್ಲಿ ನಿಂತಿರುತ್ತದೆ.

ಖಂ. ೫ ಕಂ. ೧-೩. ಲೋಕದ್ವಾರೀಯಾದಿ ವಿಧಿಗಳೂ ಕರ್ಮಾಂಗವಿಷಯವಾದ ಉಪಾಸನೆಗಳೂ ಪ್ರಣವವೆಂಬ ಪುಷ್ಪದಿಂದ ತಂದ ರಸವು ಆದಿತ್ಯನ ಮೇಲುಗಡೆಯ ರಶ್ಮಿಗಳಲ್ಲಿ ಆದಿತ್ಯನ ನಡುವೆ ಇರುತ್ತದೆ.

೬ರಿಂದ ೧೦ನೆಯ ಖಂಡಗಳು. ಕೆಂಪುಬಣ್ಣದ ಮೊದಲನೆಯ ಅಮೃತರಸವನ್ನು ಅಗ್ನಿಪ್ರಮುಖರಾದ ವಸುಗಳು ದರ್ಶನಮಾಡುವದರಿಂದಲೇ ಉಪಭೋಗಿಸಿ ತೃಪ್ತರಾಗಿರುತ್ತಾರೆ. ಅವರು ತಮ್ಮ ಕಾಲವು ಬಂದಾಗಲೇ ಉತ್ಸಾಹಭರಿತರಾಗಿ ಆ ರಸವನ್ನು ಉಪಭೋಗಿಸುತ್ತಾರೆ ; ಮಿಕ್ಕ ಕಾಲದಲ್ಲಿ ಉದಾಸೀನರಾಗಿರುತ್ತಾರೆ. ಇದರಂತೆ ಬಿಳಿಯಬಣ್ಣದ ಎರಡನೆಯ ಅಮೃತರಸವನ್ನು ರುದ್ರರು ಉಪಭೋಗಿಸುತ್ತಾರೆ , ಮೂರನೆಯದಾದ ಕೃಷ್ಣರೂಪದ ಅಮೃತವನ್ನು ಆದಿತ್ಯರು ಉಪಭೋಗಿಸುತ್ತಾರೆ ; ನಾಲ್ಕನೆಯದಾದ ಹೆಚ್ಚುಕಪ್ಪಿನ ಬಣ್ಣದ ಅಮೃತರಸವನ್ನು ಮರುತ್ತರು ಉಪಭೋಗಿಸುತ್ತಾರೆ; ಐದನೆಯದನ್ನು ಸಾಧ್ಯರು ಉಪಭೋಗಿಸುತ್ತಾರೆ. ಯಾವನು ಹೀಗೆಂದು ಉಪಾಸನೆಮಾಡುವನೋ ಅವನು

ವಸುಸಾಯುಜ್ಯವನ್ನು ಹೊಂದಿ, ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಮುಳುಗುವಷ್ಟು ಕಾಲವೂ ವಸುಗಳ ಆಧಿಪತ್ಯವನ್ನೂ ಸ್ವಾರಾಜ್ಯವನ್ನೂ ಪಡೆದುಕೊಂಡಿರುವನು ; ಆದರ ಎರಡರಷ್ಟು ಕಾಲದವರೆಗೆ ಸೂರ್ಯನು ದಕ್ಷಿಣದಲ್ಲಿ ಉದಯಿಸಿ ಉತ್ತರದಲ್ಲಿ ಮುಳುಗವಷ್ಟು ಕಾಲವೂ - ರುದ್ರರ ಸ್ವಾರಾಜ್ಯವನ್ನು ಪಡೆದುಕೊಂಡಿರುವನು ; ಆದರ ಎರಡರಷ್ಟು ಕಾಲ - ಸೂರ್ಯನು ಪಶ್ಚಿಮದಲ್ಲಿ ಉದಯಿಸಿ ಪೂರ್ವದಲ್ಲಿ ಅಸ್ತವಾಗುವಷ್ಟು ಕಾಲವೂ - ಆದಿತ್ಯರ ಸಾಯುಜ್ಯವನ್ನು ಪಡೆದಿರುವನು ; ಆದರ ಎರಡರಷ್ಟು ಕಾಲ - ಸೂರ್ಯನು ಉತ್ತರದಲ್ಲಿ ಉದಯಿಸಿ ದಕ್ಷಿಣದಲ್ಲಿ ಅಸ್ತವಾಗುವಷ್ಟು ಕಾಲವೂ- ಮರುತ್ತರ ಸ್ವಾರಾಜ್ಯವನ್ನು ಪಡೆದುಕೊಂಡಿರುವನು ; ಆದರ ಎರಡರಷ್ಟು ಕಾಲ- ಸೂರ್ಯನು ಮೇಲುಗಡೆ ಉದಯಿಸಿ ಕೆಳಗಡೆ ಅಸ್ತವಾಗುವವರೆಗೂ - ಸಾಧ್ಯರ ಸ್ವಾರಾಜ್ಯವನ್ನು ಪಡೆದು ಕೊಂಡಿರುವನು.

೪೦. ೧೧ ಕಂ. ೧-೩. ಆಮೇಲೆ ಸೂರ್ಯನಿಗೆ ಉದಯಾಸ್ತಗಳಿರುವದಿಲ್ಲ ; ಬ್ರಹ್ಮಸ್ವರೂಪದಲ್ಲಿಯೇ ಆಗ ಸ್ಥಿತಿಯಿದ್ದುಬಿಡುತ್ತದೆ. ಈ ಉಪಾಸಕನಿಗೂ ಎಂದೆಂದಿಗೂ ಹಗಲೇ ಆಗಿರುತ್ತದೆ. ಆಗ ಅದ್ವಿತೀಯವಾದ ಸ್ವಯಂಜ್ಯೋತಿಯಾದ ಬ್ರಹ್ಮದ ಬೆಳಕಿನಲ್ಲಿಯೇ ಅವನು ಇದ್ದುಕೊಂಡುಬಿಡುತ್ತಾನೆ.

೪೦. ೧೧ ಕಂ. ೪-೬. ಈ ಮಧುವಿದ್ಯೆಯನ್ನು ಹಿರಣ್ಯಗರ್ಭನು ಪ್ರಜಾಪತಿಗೆ ಹೇಳಿಕೊಟ್ಟನು ; ಅವನು ಮನುವಿಗೂ ಮನುವು ಮಿಕ್ಕ ಪ್ರಜೆಗಳಿಗೂ ತಿಳಿಸಿಕೊಟ್ಟರು.

ಈ ವಿದ್ಯೆಯನ್ನು ಜ್ಯೇಷ್ಠಪುತ್ರನಾದ ಉದ್ದಾಲಕಆರುಣಿಗೆ ಅವನ ತಂದೆಯು ತಿಳಿಸಿಕೊಟ್ಟನು.

ಈ ವಿದ್ಯೆಯನ್ನು ಮಿಕ್ಕವರು ತಮ್ಮ ಜ್ಯೇಷ್ಠಪುತ್ರನಿಗೆ ಅಥವಾ ಯೋಗ್ಯನಾದ ಶಿಷ್ಯನಿಗೆ ಹೇಳಿಕೊಡಬೇಕು ; ಮಿಕ್ಕವರಿಗೆ ಹೇಳಿಕೊಡಬಾರದು. ಏಕೆಂದರೆ ಈ ವಿದ್ಯೆಯ ದಾನವೆಂಬುದು ಧನಪೂರ್ಣವಾದ ಇಡಿಯ ಭೂಮಿಯ ದಾನಕ್ಕಿಂತಲೂ ಹೆಚ್ಚಿನದು.

೪೦ಡಗಳು ಹನ್ನೆರಡರಿಂದ ಹದಿಮೂರು ಪೂರ

೪೦. ೧೨ ಕಂ. ೧-೫. ಸ್ಥಾವರಜಂಗಮಾತ್ಮಕವಾದ ಭೂತಗಳ ರೂಪದಲ್ಲಿರುವ ಇದೆಲ್ಲವೂ ಗಾಯತ್ರಿಯೇ. ಹೇಗೆಂದರೆ ಗಾಯತ್ರಿಯು ವಾಕ್ಕೇ ; ಏಕೆಂದರೆ ವಾಕ್ಕು ಎಲ್ಲಾ ಭೂತಗಳನ್ನೂ ಹೇಳುತ್ತದೆ (ಗಾಯತಿ), ಮತ್ತು ಕಾಪಾಡುತ್ತದೆ(ತ್ರಾಯತೇ). ಈ ಸರ್ವಭೂತವಾಗಿರುವ ಗಾಯತ್ರಿಯು ಪೃಥಿವಿಯೇ ; ಏಕೆಂದರೆ ಸರ್ವಭೂತಗಳೂ ಪೃಥಿವಿಯಲ್ಲಿ ಇವೆ. ಹೀಗೆ ಸರ್ವಭೂತಗಳ ಸಂಬಂಧದಿಂದ ಪೃಥಿವಿಯೂ ಗಾಯತ್ರಿಯಾಯಿತು. ಈ ಪೃಥಿವಿಯು ಪಾರ್ಥಿವಶರೀರವೇ ; ಶರೀರದಲ್ಲಿ ಭೂತಶಬ್ದವಾಚ್ಯಗಳು ಪ್ರಾಣಗಳಿರುವದರಿಂದ ಅದಕ್ಕೂ ಗಾಯತ್ರೀತ್ವವಿದೆ. ಈ ಶರೀರಗಾಯತ್ರಿಯು ಹೃದಯವೇ ; ಏಕೆಂದರೆ ಹೃದಯದಲ್ಲಿಯೇ ಭೂತಶಬ್ದ-

ವಾಚ್ಯವಾದ ಪ್ರಾಣಗಳಿರುತ್ತವೆ. ಹೀಗೆ ನಾಲ್ಕು ಪಾದಗಳುಳ್ಳ ಗಾಯತ್ರಿಯು ವಾಕ್ಕು, ಭೂತ, ಪೃಥಿವೀ, ಶರೀರ, ಹೃದಯ, ಪ್ರಾಣ- ಎಂಬ ಆರು ರೂಪವಾಗಿರುತ್ತದೆ - ಎಂದು ಉಪಾಸನೆಮಾಡಬೇಕು.

೩೦. ೧೨ ಕಂ. ೬ ಈ ಗಾಯತ್ರೀಬ್ರಹ್ಮದ ಮಹಿಮೆಯನ್ನೇ ಋಕ್ಕು ಹೀಗೆಂದು ವರ್ಣಿಸುತ್ತದೆ. ಈತನ ಮಹಿಮೆಯು ಇಷ್ಟೂ ಆಗಿದೆ ; ಆದರೆ ಈ ಪುರುಷನು ಅದಕ್ಕಿಂತ ಹೆಚ್ಚಿನ ಸ್ವರೂಪದವನಾಗಿರುತ್ತಾನೆ. ಇವನಿಗೆ ಭೂತಗಳೆಲ್ಲವೂ ಪಾದಮಾತ್ರ, ಇವನ ಅಮೃತವಾದ ಮೂರು ಪಾದವು ದಿವದಲ್ಲಿ ಎಂದರೆ ಸ್ವಾತ್ಮರೂಪದಲ್ಲಿಯೇ ಇದ್ದುಕೊಂಡಿರುತ್ತದೆ.

೩೦. ೧೨. ಕಂ. ೭-೯. ಗಾಯತ್ರೀದ್ವಾರದಿಂದ ಹೇಳಿದ ಈ ಬ್ರಹ್ಮವಿದೆಯಲ್ಲ, ಇದು ಹೊರಗಿನ ಭೂತಾಕಾಶವೇ ; ಆ ಭೂತಾಕಾಶವು ಶರೀರದೊಳಗಿನ ಕನಸ್ಸಿನ ಆಕಾಶವೇ ; ಆ ಶರೀರಾಕಾಶವು ಹೃದಯದೊಳಗಿನ ಆಕಾಶವೇ. ಆ ಆಕಾಶದಲ್ಲಿ ಚಿಂತಿಸುವ ಬ್ರಹ್ಮವು ಪೂರ್ಣವಾದದ್ದು, ಅವಿನಾಶಿ ಎಂದು ಉಪಾಸನೆಮಾಡಬೇಕು. ಯಾವನು ಈ ಬ್ರಹ್ಮವನ್ನು ಸಾಕ್ಷಾತ್ಕಾರಮಾಡಿಕೊಳ್ಳುವನೋ ಅವನಿಗೆ ಪೂರ್ಣವೂ ಅವಿನಾಶಿಯೂ ಆದ ಶ್ರೀಯ ಲಾಭವಾಗುವದು.

೩೦. ೧೩., ಕಂ. ೧ರಿಂದ೬. ಹೃದಯದಲ್ಲಿ ಉಪಾಸನೆಮಾಡಬೇಕಾಗಿರುವ ಈ ಗಾಯತ್ರೀ ಬ್ರಹ್ಮಕ್ಕೆ ಐವರು ದ್ವಾರಪಾಲರು. ಹೃದಯದ ಪೂರ್ವದ ರಂಧ್ರದಲ್ಲಿರುವ ಪ್ರಾಣವು, ಚಕ್ಷುಸ್ಸು, ಆದಿತ್ಯನು ; ಆದಿತ್ಯನು ಚಕ್ಷುಃಪ್ರಾಣಗಳ ಸಂಬಂಧದಿಂದ ಹೃದಯದಲ್ಲಿರುತ್ತಾನೆ ಎಂದು ಉಪಾಸನೆಮಾಡಬೇಕು. ಹೀಗೆಯೇ ಚಂದ್ರ, ಶ್ರೋತ್ರ, ವ್ಯಾನ - ಇವುಗಳು ದಕ್ಷಿಣದ ರಂಧ್ರದಲ್ಲಿರುತ್ತವೆ ; ಅಗ್ನಿ, ವಾಕ್ಕು, ಅಪಾನ- ಇವು ಪಶ್ಚಿಮ ರಂಧ್ರದಲ್ಲಿರುತ್ತವೆ ; ಪರ್ಜನ್ಯ, ಮನಸ್ಸು, ಸಮಾನ - ಇವು ಉತ್ತರ ರಂಧ್ರದಲ್ಲಿರುತ್ತವೆ ; ಆಕಾಶ, ವಾಯು, ಉದಾನ- ಇವು ಮೇಲುಗಡೆಯ ರಂಧ್ರದಲ್ಲಿ. ಈ ಐದು ರಂಧ್ರಗಳಲ್ಲಿರುವ ದ್ವಾರಪಾಲರನ್ನು ಕ್ರಮವಾಗಿ ತೇಜಸ್ಸು, ಅನ್ನಾದ್ಯ ; ಶ್ರೀ, ಯಶಸ್ಸು ; ಬ್ರಹ್ಮವರ್ಚಸ್ಸು, ಅನ್ನಾದ್ಯ ; ಕೀರ್ತಿ, ವ್ಯುಷ್ಟಿ ; ಓಜಸ್ಸು, ಮಹತ್ತ್ವ- ಎಂದು ಉಪಾಸನೆಮಾಡಬೇಕು. ಈ ಉಪಾಸಕನಿಗೆ ವೀರಪುತ್ರನು ಜನಿಸುವನು. ಹಾರ್ದಬ್ರಹ್ಮದ ಪ್ರವೇಶವು ದೊರಕುವದು.

೩೦. ೧೩. ಕಂ. ೭-೮ ಪೂರ. ಸಂಸಾರವನ್ನು ಮೀರಿ ಸ್ವಯಂಜ್ಯೋತಿಯಾಗಿರುವ ಮಿಗಿಲಿಲ್ಲದಷ್ಟು ಉತ್ತಮವಾಗಿರುವ ಲೋಕಗಳಲ್ಲಿಯೂ ಇರುವ ಜ್ಯೋತಿಯೇ ಚಕ್ಷುಶ್ರೋತ್ರ ಗ್ರಾಹ್ಯವಾದ ಬಿಸಿ ಮತ್ತು ಸದ್ದು- ಎಂಬ ಲಿಂಗಗಳಿಂದ ಗಮ್ಯವಾಗಿ ಶರೀರದೊಳಗೆ ಇರುತ್ತದೆ ; ಇದು ದೃಷ್ಟವು, ಶ್ರುತವು - ಎಂದು ಉಪಾಸನೆಮಾಡಬೇಕು. ಅದರಿಂದ ದರ್ಶನೀಯನೂ ವಿಶ್ರುತನೂ ಆಗುವನು, ಉತ್ತಮವಾದ ಸ್ವರ್ಗಲೋಕವೆಂಬ ಫಲವನ್ನು ಪಡೆದುಕೊಳ್ಳುವನು.

ಹದಿನಾಲ್ಕನೆಯ ಖಂಡ

ಈ ಖಂಡದಲ್ಲಿ ಶಾಂಡಿಲ್ಯವಿದ್ಯೆಯನ್ನು ಉಪದೇಶಿಸಿದೆ.

೧-೩. ಮನುಷ್ಯನು ಯಾವ ನಿಶ್ಚಯದಿಂದ ಸಾಯುವನೋ ಆದಕ್ಕನುಗುಣವಾಗಿ ಸತ್ತಬಳಿಕ ಫಲವಾಗುವದು. ಇದೆಲ್ಲವೂ ಬ್ರಹ್ಮದಿಂದ ಹುಟ್ಟಿ, ಅದರಲ್ಲಿಯೇ ಇದ್ದು, ಅದರಲ್ಲಿಯೇ ಲಯವಾಗುತ್ತಿರುವದರಿಂದ, ಬ್ರಹ್ಮವೇ ಆಗಿರುವದರಿಂದ ಶಾಂತನಾಗಿ ಹೀಗೆಂದು ನಿಶ್ಚಯಮಾಡಿಕೊಂಡು ಉಪಾಸನೆಮಾಡಬೇಕು. ಪರಮಾತ್ಮನು ಮನೋಮಯನು, ಪ್ರಾಣಶರೀರನು, ಭಾರೂಪನು, ಸತ್ಯಸಂಕಲ್ಪನು, ಆಕಾಶಾತ್ಮನು, ಸರ್ವಕರ್ಮನು, ಸರ್ವಕಾಮನು, ಸರ್ವಗಂಧನು, ಸರ್ವರಸನು, ಇದೆಲ್ಲವನ್ನೂ ವ್ಯಾಪಿಸಿರುವವನು, ವಾಗಾದಿಕರಣಹಿತನು, ಸಂಭ್ರಮರಹಿತನು ; ಅಣುವಿಗಿಂತಲೂ ಅಣುವಾಗಿ ಮಹತ್ತಿಗಿಂತಲೂ ಮಹತ್ತಾಗಿರುವವನು. ಇವನೇ ನನ್ನ ಆತ್ಮನು- ಎಂದು ಉಪಾಸನೆಮಾಡಬೇಕು.

೪. ಈ ಗುಣಗಳಿಂದ ಕೂಡಿದವನೇ ನನ್ನ ಆತ್ಮನಾದ ಬ್ರಹ್ಮವು ; ಇವನನ್ನು ದೇಹವಾತವಾದ ಬಳಿಕ ಸೇರುವೆನು - ಎಂದು ಗುಣವಿಶಿಷ್ಟವಾದ ಬ್ರಹ್ಮವನ್ನು ಉಪಾಸನೆ ಮಾಡಬೇಕು. ಹೀಗೆಯೇ ಫಲವಾಗುವದೆಂದು ನಿಶ್ಚಿತವಾದ ಬುದ್ಧಿಯೊಡನೆ ಯಾವನು ಉಪಾಸನೆಮಾಡುವನೋ ಅವನಿಗೆ ಅಂಥ ಈಶ್ವರಭಾವವೇ ಫಲವಾಗುವದು - ಎಂದು ಶಾಂಡಿಲ್ಯನು ಹೇಳಿರುತ್ತಾನೆ.

ಹದಿನೈದನೆಯ ಖಂಡ

ಈ ಖಂಡದಲ್ಲಿ ವೀರಪುತ್ರನು ಹುಟ್ಟುವದಕ್ಕೆ ಬೇಕಾದ ಕೋಶವಿದ್ಯೆಯನ್ನು ಹೇಳಿದೆ.

೧-೨. ವಿಶ್ವಕೋಶಕ್ಕೆ ಅಂತರಿಕ್ಷವೇ ಹೊಟ್ಟೆ, ಭೂಮಿಯೇ ತಳ ; ದ್ಯುಲೋಕವೇ ಮೇಲುಬಾಯಿ, ಇದು ಚಿರಕಾಲ ಇರತಕ್ಕದ್ದು. ಅದಕ್ಕೆ ಪೂರ್ವದಲ್ಲಿ ಜುಹೂ, ದಕ್ಷಿಣಕ್ಕೆ ಸಹಮಾನಾ, ಪಶ್ಚಿಮಕ್ಕೆ ರಾಜ್ಞೀ, ಉತ್ತರಕ್ಕೆ ಸುಭೂತಾ- ಎಂಬ ಭಾಗಗಳು. ಆ ದಿಕ್ಕುಗಳಿಗೆ ವಾಯುವೇ ಮಗು. ಹೀಗೆಂದು ತಿಳಿದವನಿಗೆ ಪುತ್ರಶೋಕವಿಲ್ಲ.

೩-೭. ಈ ಕೋಶವನ್ನು ಧ್ಯಾನಮಾಡಿ ಅರಿಷ್ಟಂ ಕೋಶಂ ಪ್ರಪದ್ಯೇ, ಪ್ರಾಣಂ ಪ್ರಪದ್ಯೇ, ಭೂಃ ಪ್ರಪದ್ಯೇ, ಭುವಃ ಪ್ರವದ್ಯೇ ಸ್ವಃ ಪ್ರಪದ್ಯೇ - ಎಂಬ ಮಂತ್ರಗಳನ್ನು ಅರ್ಥಾನುಸಂಧಾನ ಪೂರ್ವಕವಾಗಿ ಜಪಮಾಡಬೇಕು. ಇದರಿಂದ ಪುತ್ರನು ದೀರ್ಘಾಯುವಾಗುವನು.

ಹದಿನಾರನೆಯ ಖಂಡ

ಹದಿನಾರುಹದಿನೇಳನೆಯ ಖಂಡಗಳಲ್ಲಿ ದೀರ್ಘಾಯುಸ್ಸಿಗಾಗಿ ಮಾಡುವ ಪುರುಷವಿದ್ಯೆಯನ್ನು ಹೇಳಿದೆ.

೧-೨. ಪುರುಷನೇ ಯಜ್ಞವು. ಅದಕ್ಕೆ ಇಪ್ಪತ್ತು ನಾಲ್ಕು ವರ್ಷಗಳು ಪ್ರಾತಃಸವನವು ; ಏಕೆಂದರೆ ಗಾಯತ್ರಿಗೆ ಅಷ್ಟು ಅಕ್ಷರಗಳು. ಅದಕ್ಕೆ ಪ್ರಾಣಗಳೇ ವಸುಗಳು. ಆ ವಯಸ್ಸಿನಲ್ಲಿ ಯಾವದಾದರೂ ರೋಗವು ಬಂದರೆ 'ಪ್ರಾಣಗಳೆಂಬ ವಸುಗಳೇ. ಈ ನನ್ನ ಪ್ರಾತಃಸವನವನ್ನು ಮಾಧ್ಯಂದಿನಸವನಕ್ಕೆ ಸೇರಿಸಿರಿ !' ಎಂಬರ್ಥದ ಮಂತ್ರವನ್ನು ಜಪಿಸಬೇಕು.

೩-೪. ಮುಂದಿನ ನಲವತ್ತುನಾಲ್ಕು ವರ್ಷಗಳು ಮಾಧ್ಯಂದಿನಸವನವು ; ಏಕೆಂದರೆ ತ್ರಿಷ್ಟುಪ್ಪಿಗೆ ಅಷ್ಟು ಅಕ್ಷರಗಳು. ಅದಕ್ಕೆ ಪ್ರಾಣಗಳೇ ರುದ್ರರು. ಆ ವಯಸ್ಸಿನಲ್ಲಿ ಯಾವದಾದರೂ ರೋಗವು ಬಂದರೆ ಪ್ರಾಣಗಳೆಂಬ ರುದ್ರರನ್ನು ಪ್ರಾರ್ಥಿಸುವ ಮಂತ್ರವನ್ನು ಜಪಿಸಬೇಕು.

೫-೬. ಮುಂದಿನ ನಲವತ್ತೆಂಟುವರ್ಷಗಳು ಸಾಯಂಸವನವು ; ಏಕೆಂದರೆ ಜಗತೀಛಂಧಸ್ಸಿಗೆ ಅಷ್ಟು ಅಕ್ಷರಗಳು. ಅದಕ್ಕೆ ಪ್ರಾಣಗಳೇ ಆದಿತ್ಯರು. ಆ ವಯಸ್ಸಿನಲ್ಲಿ ಏನಾದರೂ ರೋಗವು ಬಂದರೆ ಪ್ರಾಣಗಳೆಂಬ ಆದಿತ್ಯರನ್ನು ಪ್ರಾರ್ಥಿಸುವ ಮಂತ್ರವನ್ನು ಜಪಿಸಬೇಕು.

೭. ಈ ಯಜ್ಞದರ್ಶನವನ್ನು ಮಹಿದಾಸ ಐತರೇಯನು ಅರಿತುಕೊಂಡು 'ಎಲೈ ರೋಗವೆ, ನನ್ನನ್ನು ಸುಮ್ಮನೆ ಏತಕ್ಕೆ ಗೋಳುಗುಟ್ಟಿಸುತ್ತಿರುವೆ ? ಇಷ್ಟರಿಂದ ನಾನು ಸಾಯುವದಿಲ್ಲ !' ಎಂದನಂತೆ, ಯಾವನು ಹೀಗೆಂದು ಉಪಾಸನೆಮಾಡುವನೋ ಅವನು ಮಹಿದಾಸನಂತೆ ನೂರುಹದಿನಾರು ವರ್ಷಗಳು ಜೀವಿಸುತ್ತಾನೆ.

ಹದಿನೇಳನೆಯ ಖಂಡ

೧-೫. ಈ ಪುರುಷಯಜ್ಞಕ್ಕೆ ಹಸಿವು, ನೀರಡಿಕೆ, ಅರತಿ- ಇವೇ ದೀಕ್ಷೆಗಳು ; ತಿನ್ನುವದು, ಕುಡಿಯುವದು, ರತಿ - ಇವೇ ಉಪಸತ್ತುಗಳು ; ನಗುವದು, ಭಕ್ಷಿಸುವದು, ಮೈಥುನ- ಇವೇ ಸುತ್ತಶಸ್ತ್ರಗಳು ; ತಪಸ್ಸು, ದಾನ, ಆರ್ಜವ, ಅಹಿಂಸೆ, ಸತ್ಯವಚನ- ಇವೇ ದಕ್ಷಿಣೆಗಳು ; ಜನನವೇ ಸವನವು, ಮರಣವೇ ಅವಭೃಥವು. ಹೀಗೆಂದು ಯಜ್ಞತ್ವ ಸಂಪಾದನೆಯನ್ನು ಮಾಡಿಕೊಳ್ಳಬೇಕು.

೬-೭. ಈ ಯಜ್ಞದರ್ಶನವನ್ನು ಘೋರ ಆಂಗಿರಸನು ದೇವಕೀಪುತ್ರನಾದ ಕೃಷ್ಣನಿಗೆ ಹೇಳಿದ್ದರಿಂದ ಅವನಿಗೆ ಮತ್ತೊಂದು ಉಪಾಸನೆಯಲ್ಲಿ ಆಶೆಯೇ ಇಲ್ಲವಾಯಿತು. ಉಪಾಸಕನು ಸಾಯುವಕಾಲಕ್ಕೆ ಅಕ್ಷಿತಮಸಿ, ಅಚ್ಯುತಮಸಿ, ಪ್ರಾಣಸಂಶಿತಮಸಿ - ಎಂಬ ಮಂತ್ರತ್ರಯವನ್ನು ಜಪಿಸಬೇಕು. ಈ ವಿದ್ಯೆಯನ್ನು ಹೊಗಳುವದಕ್ಕೆ ಎರಡು ಋಕ್ಕುಗಳು ವೇದದಲ್ಲಿವೆ.

ಸೂರ್ಯನಲ್ಲಿರುವ ಪರಮಾತ್ಮನನ್ನೂ ಹೃದಯದಲ್ಲಿರುವ ಪ್ರಾಣನನ್ನೂ ಒಂದೆಂದು ಭಾವಿಸಿ- ಈ ಯಜುಸ್ಸಿನಲ್ಲಿ ಪ್ರಕಾಶಿಸಿರುತ್ತದೆ, ಆ ಋಕ್ಕುಗಳಲ್ಲಿಯೂ ಹೊಗಳಿರುತ್ತದೆ.

ಹದಿನೆಂಟನೆಯ ಖಂಡ

ಈ ಖಂಡದಲ್ಲಿ ಅಧ್ಯಾತವಾಗಿ ಮನೋಬ್ರಹ್ಮವನ್ನೂ ಅಧಿದೈವತವಾಗಿ ಆದಿತ್ಯ ಬ್ರಹ್ಮವನ್ನೂ ಉಪಾಸನೆಮಾಡಬೇಕೆಂದು ವಿಧಿಸಿದೆ.

೧-೨. ಅಧ್ಯಾತ್ಮವಾಗಿ ಮನಸ್ಸನ್ನು ಬ್ರಹ್ಮವೆಂದೂ ಅಧಿದೈವತವಾಗಿ ಆಕಾಶವನ್ನು ಬ್ರಹ್ಮವೆಂದೂ ಉಪಾಸನೆಮಾಡಬೇಕು. ಮನೋಬ್ರಹ್ಮಕ್ಕೆ ವಾಕ್ಕು, ಪ್ರಾಣ, ಚಕ್ಷುಸ್ಸು, ಶ್ರೋತ್ರ- ಎಂಬಿವು ಪಾದಗಳು ; ಆಕಾಶಬ್ರಹ್ಮಕ್ಕೆ ಅಗ್ನಿ, ವಾಯು, ಆದಿತ್ಯ, ದಿಕ್ಕುಗಳು- ಇವು ಪಾದಗಳು.

೩-೬. ಮನೋಬ್ರಹ್ಮದ ವಾಕ್ಪಾದಕ್ಕೆ ಅಗ್ನಿ, ಪ್ರಾಣಪಾದಕ್ಕೆ ವಾಯು, ಚಕ್ಷುಃಪಾದಕ್ಕೆ ಆದಿತ್ಯ, ಶ್ರೋತ್ರಪಾದಕ್ಕೆ ದಿಕ್ಕುಗಳು - ಹೀಗೆ ಅನುಗ್ರಹೀತೃಗಳು. ಅಧಿದೈವತಪಾದಗಳಿಂದ ಅಧ್ಯಾತ್ಮಪಾದಗಳು ಹೊಳೆಯುತ್ತಿವೆ, ತಮ್ಮತಮ್ಮ ಕಾರ್ಯದಲ್ಲಿ ವ್ಯಾಪೃತವಾಗುತ್ತಿವೆ.

ಹತ್ತೊಂಬತ್ತನೆಯ ಖಂಡ

ಇಲ್ಲಿ ಆದಿತ್ಯಬ್ರಹ್ಮದ ಉಪಾಸನೆಯನ್ನು ಹೇಳಿದೆ.

೧-೩. ಆದಿತ್ಯನೇ ಬ್ರಹ್ಮವೆಂದು ಉಪಾಸನೆಮಾಡಬೇಕು. ಆದಿತ್ಯನು ಹುಟ್ಟಿದ್ದು ಹೇಗೆಂದರೆ ಅವ್ಯಾಕೃತವಾದ ಜಗತ್ತು ವ್ಯಾಕೃತವಾಗುವಾಗ ಮೊಳೆತು ಅಂಡವಾಯಿತು. ಸಂವತ್ಸರದ ಮೇಲೆ ಒಡೆದುಕೊಂಡಿತು. ಆದರಿಂದ ಪೃಥಿವೀರೂಪದ ರಜತಕಪಾಲವೂ ದ್ಯುರೂಪವಾದ ಸುವರ್ಣಕಪಾಲವೂ ಆದವು. ಅದು ಒಡೆದುಕೊಳ್ಳುವಾಗ ಜರಾಯುವು ಪರ್ವತಗಳಾಯಿತು, ತೆಳುವಿನ ಪೊರೆಯು ಮೋಡವೂ ಮಂಜೂ ಆಯಿತು ; ನಾಡಿಗಳು ನದಿಗಳಾದವು, ಬಸ್ತಿಯ ಉದಕವು ಸಮುದ್ರವಾಯಿತು. ಕೊನೆಗೆ ಹುಟ್ಟಿದ ಶಿಶುವೇ ಆದಿತ್ಯನು. ಆದಿತ್ಯನು ಹುಟ್ಟಿದಾಗ ಮಹಾಕೋಲಾಹಲವಾಯಿತು, ಸರ್ವಭೂತಗಳೂ ಸರ್ವಕಾಮಗಳೂ ಹುಟ್ಟಿಕೊಂಡವು. ಈಗಲೂ ಸೂರ್ಯೋದಯವಾಗುವಾಗ ಹಾಗೆಯೇ ಆಗುತ್ತಿರುತ್ತದೆ.

೪. ಹೀಗೆಂದರಿತು ಯಾವನು ಆದಿತ್ಯನನ್ನು ಬ್ರಹ್ಮವೆಂದು ಉಪಾಸನೆಮಾಡುವನೋ ಅವನ ಬಳಿಗೆ ಸಾಧುಘೋಷಗಳು ಬರುವವು, ಸುಖವನ್ನೂ ಉಂಟುಮಾಡುವವು.

ನಾಲ್ಕನೆಯ ಅಧ್ಯಾಯ - ಒಂದನೆಯ ಖಂಡ

(ಸಂವರ್ಗವಿದ್ಯೆ)

ಜಾನಶ್ರುತಿಯು ರೈಕ್ವನನ್ನು ಕಂಡುಹಿಡಿದದ್ದು

(ಉಪನಿಷತ್ತು)

ಜಾನಶ್ರುತಿರ್ಹ ಪೌತ್ರಾಯಣಃ ಶ್ರದ್ಧಾದೇಯೋ ಬಹುದಾಯೀ ಬಹುಪಾಕ್ಯ ಆಸ ಸ ಹ ಸರ್ವತ ಆವಸಥಾನ್ ಮಾಪಯಾಂಚಕ್ರೇ ಸರ್ವತ ಏವ ಮೇಽನ್ನಮತ್ಸ್ಯನ್ತೀತಿ ॥೧॥

೧. ಜಾನಶ್ರುತಿ ಪೌತ್ರಾಯಣನು, ಶ್ರದ್ಧಾದೇಯನೂ ಬಹುದಾಯಿಯೂ ಬಹುಪಾಕ್ಯನೂ ಆಗಿದ್ದನು. ಅವನು ಎಲ್ಲಾ ಕಡೆಯಲ್ಲಿಯೂ ನನ್ನ ಅನ್ನವನ್ನು[1] ಜನರು ತಿನ್ನಲಿ! - ಎಂದು ಆವಸಥಗಳನ್ನು ನಿರ್ಮಾಣಮಾಡಿಸಿದ್ದನು.

ಗ್ರಂಥಸಂಬಂಧವೂ ಕಥಾಪ್ರಯೋಜನವೂ

೨೮೭. ವಾಯುಪ್ರಾಣಯೋರ್ಬ್ರಹ್ಮಣಃ ಪಾದದೃಷ್ಟ್ಯಧ್ಯಾಸಃ ಪುರಸ್ತಾದ್ ವರ್ಣಿತಃ। ಅಥೇದಾನೀಂ ತಯೋಃ ಸಾಕ್ಷಾದ್ ಬ್ರಹ್ಮತ್ವೇನ ಉಪಾಸ್ಯತ್ವಾಯ ಉತ್ತರಮ್ ಆರಭ್ಯತೇ । ಸುಖಾವಬೋಧಾರ್ಥಾ ಆಖ್ಯಾಯಿಕಾ, ವಿದ್ಯಾದಾನಗ್ರಹಣವಿಧಿ ಪ್ರದರ್ಶನಾರ್ಥಾ ಚ। ಶ್ರದ್ಧಾನ್ನದಾನಾನುದ್ಧತತ್ವಾದೀನಾಂ ಚ ವಿದ್ಯಾಪ್ರಾಪ್ತಿಸಾಧನತ್ವಂ ಪ್ರದರ್ಶ್ಯತ ಆಖ್ಯಾಯಿಕಯಾ ॥

(ಭಾಷ್ಯಾರ್ಥ)

ವಾಯುಪ್ರಾಣಗಳಲ್ಲಿ ಬ್ರಹ್ಮದ ಪಾದವೆಂಬ ದೃಷ್ಟಿಯನ್ನು (ಇಡಬೇಕೆಂದು) (ಈ) ಮುಂಚೆ[2] ವರ್ಣಿಸಲಾಗಿದೆ. ಇನ್ನು ಈಗ ಅವುಗಳನ್ನು ನೇರಾಗಿ ಬ್ರಹ್ಮವೆಂದೇ ಉಪಾಸನೆಮಾಡಬೇಕೆಂದು (ವಿಧಿಸುವದಕ್ಕಾಗಿ) ಮುಂದಿನ (ಗ್ರಂಥವನ್ನು) ಆರಂಭಿಸಿರುತ್ತದೆ. ಕಥೆಯನ್ನು ಹೇಳಿರುವದು (ವಿಷಯವು) ಸುಲಭವಾಗಿ

1. ಅನ್ನಮ್ ಎಂಬ ಮಾತು ಆ॥ ಮುದ್ರಿತಪುಸ್ತಕದಲ್ಲಿ ಬಿಟ್ಟುಹೋಗಿದೆ.
2. ೩-೧೮-೨ರಲ್ಲಿ ಮನೋಬ್ರಹ್ಮಕ್ಕೂ ಆಕಾಶಬ್ರಹ್ಮಕ್ಕೂ ಇವು ಪಾದಗಳೆಂದು ಹೇಳಿತ್ತು.

ತಿಳಿಯಲೆಂದೂ ವಿದ್ಯೆಯನ್ನು (ಮತ್ತೊಬ್ಬರಿಗೆ) ಉಪದೇಶಮಾಡುವ ಮತ್ತು ಸ್ವೀಕರಿಸುವ ಕ್ರಮವನ್ನು ತಿಳಿಸುವದಕ್ಕೆಂದೂ (ಆಗಿರುತ್ತದೆ). ಶ್ರದ್ಧೆ, ಅನ್ನದಾನ, ದಿಟ್ಟನಾಗದೆ ಇರುವದು - ಮುಂತಾದವು ವಿದ್ಯಾಪ್ರಾಪ್ತಿಗೆ ಸಾಧನವೆಂಬುದನ್ನು (ಇಲ್ಲಿ) ತಿಳಿಸಲಾಗಿರುತ್ತದೆ.

ಜಾನಶ್ರುತಿಯ ಗುಣಕಥನ

೨೮೮. ಜಾನಶ್ರುತಿಃ ಜನಶ್ರುತಸ್ಯ ಅಪತ್ಯಮ್ । ಹ[1] ಐತಿಹ್ಯಾರ್ಥಃ। ಪುತ್ರಸ್ಯ ಪೌತ್ರಃ ಪೌತ್ರಾಯಣಃ ಸ ಏವ । ಶ್ರದ್ಧಾದೇಯಃ ಶ್ರದ್ಧಾಪುರಃಸರಮೇವ ಬ್ರಾಹ್ಮಣಾದಿಭ್ಯೋ ದೇಯಮ್ ಅಸ್ಯ ಇತಿ ಶ್ರದ್ಧಾದೇಯಃ। ಬಹುದಾಯೀ (ಬಹು)[2] ಪ್ರಭೂತಂ ದಾತುಂ ಶೀಲಮ್ ಅಸ್ಯ ಇತಿ ಬಹುದಾಯೀ । ಬಹುಪಾಕ್ಯಃ । ಬಹುಪಕ್ತವ್ಯಮ್ ಅಹನ್ಯಹನಿ ಗೃಹೇ ಯಸ್ಯ ಅಸೌ ಬಹುಪಾಕ್ಯಃ । ಭೋಜನಾರ್ಥಿಭ್ಯೋ ಬಹು ಅಸ್ಯ ಗೃಹೇ ಅನ್ನಂ ಪಚ್ಯತ ಇತ್ಯರ್ಥಃ। ಏವಂಗುಣಸಂಪನ್ನೋಽಸೌ ಜಾನಶ್ರುತಿಃ ಪೌತ್ರಾಯಣಃ ವಿಶಿಷ್ಟೇ ದೇಶೇ ಕಾಲೇ ಚ ಕಸ್ಮಿಂಶ್ಚಿತ್ ಆಸ ಬಭೂವ । ಸ ಹ ಸರ್ವತಃ ಸರ್ವಾಸು ದಿಕ್ಷು ಗ್ರಾಮೇಷು ನಗರೇಷು ಚ ಆವಸಥಾನ್ ಏತ್ಯ ವಸನ್ತಿ ಏಷ್ವಿತಿ ಆವಸಥಾಃ । ತಾನ್ ಮಾಪಯಾಂಚಕ್ರೇ ಕಾರಿತವಾನ್ ಇತ್ಯರ್ಥಃ। ಸರ್ವತ ಏವ ಮೇ ಮಮ ಅನ್ನಂ ತೇಷು ಆವಸಥೇಷು ವಸನ್ತಃ ಅತ್ಸ್ಯನ್ತಿ ಭೋಕ್ಷ್ಯನ್ತೇ ಇತ್ಯೇವಮಭಿಪ್ರಾಯಃ ॥

(ಭಾಷ್ಯಾರ್ಥ)

ಜಾನಶ್ರುತಿಯು ಎಂದರೆ ಜನಶ್ರುತನ ಮಗನು. ಹ ಎಂಬುದು ಹಿಂದೆ ನಡೆದದ್ದನ್ನು (ತಿಳಿಸು)ವದಕ್ಕೆ. ಅವನೇ ಪೌತ್ರಾಯಣನು, ಪುತ್ರನೆಂಬವನ ಮೊಮ್ಮಗನು. ಶ್ರದ್ಧಾದೇಯನು, ಶ್ರದ್ಧಾಪೂರ್ವಕವಾಗಿಯೇ ಬ್ರಾಹ್ಮಣಾದಿಗಳಿಗೆ ಕೊಡತಕ್ಕದ್ದನ್ನು (ಕೊಡುತ್ತಿದ್ದನಾದ್ದರಿಂದ) ಶ್ರದ್ಧಾದೇಯನು. ಬಹುದಾಯಿ : ಬಹಳವಾಗಿ ಹೆಚ್ಚಿನ ಪ್ರಮಾಣದಲ್ಲಿ ದಾನಮಾಡುವ ಸ್ವಭಾವದವನಾದ್ದರಿಂದ (ಅವನು) ಬಹುದಾಯಿ. ಬಹುಪಾಕ್ಯನು : ದಿನದಿನವೂ ಬಹುವಾಗಿ ಅಡಿಗೆ ಮಾಡಿಸುತ್ತಿದ್ದನಾದ್ದರಿಂದ ಬಹುಪಾಕ್ಯನು ; ಭೋಜನಾರ್ಥಿಗಳಿಗಾಗಿ ಇವನ ಮನೆಯಲ್ಲಿ ಬಹಳ ಅನ್ನವನ್ನು ಅಡುತ್ತಿದ್ದನು - ಎಂದರ್ಥ. ಇಂಥ ಗುಣಗಳಿಂದ ಸಂಪನ್ನನಾದ ಈ ಜಾನಶ್ರುತಿ ಪೌತ್ರಾಯಣನು ಒಂದಾನೊಂದು ಗೊತ್ತಾದ ದೇಶದಲ್ಲಿ ಮತ್ತು ಕಾಲದಲ್ಲಿ ಇದ್ದನು,

1. 'ಹ ಇತಿ' ಎಂದೂ ಪಾಠಾಂತರ ; ಅದಿಲ್ಲದಿದ್ದರೂ ಸಾಗುತ್ತದೆ.
2. ಈ ಮಾತು ಬಿಟ್ಟುಹೋಗಿರಬೇಕು.

ಇರುತ್ತಿದ್ದನು. ಅವನು ಎಲ್ಲಾ ಕಡೆಯಲ್ಲಿಯೂ, ಎಲ್ಲಾ ದಿಕ್ಕುಗಳಲ್ಲಿಯೂ ಗ್ರಾಮಗಳಲ್ಲಿಯೂ ನಗರಗಳಲ್ಲಿಯೂ ಆವಸಥಗಳನ್ನು - ಬಂದು ಇವುಗಳಲ್ಲಿ ವಾಸಮಾಡುತ್ತಾರಾದ್ದರಿಂದ (ಇವು) ಆವಸಥಗಳು. ಅಂಥ (ಆವಸಥಗಳನ್ನು) - ನಿರ್ಮಾಣಮಾಡಿಸಿದ್ದನು, ಕಟ್ಟಿಸಿದ್ದನು ಎಂದರ್ಥ. ಎಲ್ಲಾ ಕಡೆಗಳಿಂದಲೂ (ಬಂದು) ಈ ಆವಸಥಗಳಲ್ಲಿದ್ದು (ಮೇ = ಮಮ) ನನ್ನ ಅನ್ನವನ್ನು ತಿನ್ನಲಿ, ಭುಂಜಿಸಲಿ ! - ಎಂಬ ಅಭಿಪ್ರಾಯದಿಂದ (ಹೀಗೆ ಕಟ್ಟಿಸಿದ್ದನು) .

(ಉಪನಿಷತ್ತು)

ಅಥ ಹ ಹಗ್ಂಸಾ ನಿಶಾಯಾಮತಿಪೇತುಸ್ತದ್ಧೈವಗ್ಂ ಹಗ್ಂಸೋ ಹಗ್ಂಸಮಭ್ಯುವಾದ ಹೋ ಹೋಯಿ ಭಲ್ಲಾಕ್ಷ ಭಲ್ಲಾಕ್ಷ ಜಾನಶ್ರುತೇಃ ಪೌತ್ರಾಯಣಸ್ಯ ಸಮಂ ದಿವಾ ಜ್ಯೋತಿರಾತತಂ ತನ್ಮಾ ಪ್ರಸಾಙ್ಕ್ಷೀಸ್ತತ್ತ್ವಾ ಮಾ ಪ್ರಧಾಕ್ಷೀರಿತಿ ॥೨॥

೨. ಹೀಗಿರಲು ಹಂಸಗಳು ಒಂದು ದಿನ ನಿಶಾ(ಸಮಯ)ದಲ್ಲಿ ಹಾರಿಹೋಗುತ್ತಿದ್ದವು. ಆಗ (ಒಂದು) ಹಂಸವು ಮತ್ತೊಂದು ಹಂಸವನ್ನು ಕುರಿತು ಇಂತೆಂದಿತು : ''ಹೋ , ಹೋ ! ಭಲ್ಲಾಕ್ಷ, ಭಲ್ಲಾಕ್ಷ ! ಜಾನಶ್ರುತಿ ಪೌತ್ರಾಯಣನ ಜ್ಯೋತಿಯು ದ್ಯು(ಲೋಕ)ಕ್ಕೆ ಸಮನಾಗಿ ಹರಡಿಕೊಂಡಿದೆ. ಅದನ್ನು ಸೊಂಕಬೇಡ ; ಅದು ನಿನ್ನನ್ನು ಸುಡದಿರಲಿ !''

ಹಂಸವು ಜಾನಶ್ರುತಿಯನ್ನು ಹೊಗಳಿದ್ದು

(ಭಾಷ್ಯ)

೨ಶಂ. ತತ್ರ ಏವಂ ಸತಿ ರಾಜನಿ ತಸ್ಮಿನ್ ಘರ್ಮಕಾಲೇ ಹರ್ಮ್ಯತಲಸ್ಥೇ ಅಥ ಹ ಹಂಸಾ ನಿಶಾಯಾಂ ರಾತ್ರೌ ಅತಿಪೇತುಃ । ಋಷಯೋ ದೇವತಾ ವಾ ರಾಜ್ಞೋಽನ್ನ ದಾನಗುಣೈಸ್ತೋಷಿತಾಃ ಸನ್ತಃ ಹಂಸರೂಪಾ ಭೂತ್ವಾ ರಾಜ್ಞೋ ದರ್ಶನಗೋಚರೇ ಅತಿಪೇತುಃ ಪತಿತವನ್ತಃ । ತತ್ ತಸ್ಮಿನ್ ಕಾಲೇ ತೇಷಾಂ ಪತತಾಂ ಹಂಸಾನಾಮ್ ಏಕಃ ಪೃಷ್ಠತಃ ಪತನ್ ಅಗ್ರತಃ ಪತನ್ತಂ ಹಂಸಮ್ ಅಭ್ಯುವಾದ ಅಭ್ಯುಕ್ತವಾನ್ । ಹೋ ಹೋಯಿ ಇತಿ ಭೋ ಭೋ ಇತಿ ಸಂಬೋಧ್ಯ । ಭಲ್ಲಾಕ್ಷ ಭಲ್ಲಾಕ್ಷ ಇತಿ ಆದರಂ ದರ್ಶಯನ್ । ಯಥಾ ಪಶ್ಯ ಪಶ್ಯ ಆಶ್ಚರ್ಯಮ್ ಇತಿ ತದ್ವತ್ । ಭಲ್ಲಾಕ್ಷ ಇತಿ ಮನ್ದದೃಷ್ಟಿತ್ವಂ ಸೂಚಯನ್ ಆಹ । ಅಥವಾ ಸಮ್ಯಗ್ಬ್ರಹ್ಮದರ್ಶನಾಭಿಮಾನವತ್ತ್ವಾತ್

ತಸ್ಯ ಅಸಕೃತ್ ಉಪಾಲಬ್ಧಸ್ತೇನ ಪೀಡ್ಯಮಾನೋಽಮರ್ಷಿತಯಾ ತತ್ ಸೂಚಯತಿ ಭಲ್ಲಾಕ್ಷ ಇತಿ । ಜಾನಶ್ರುತೇಃ ಪೌತ್ರಾಯಣಸ್ಯ ಸಮಂ ತುಲ್ಯಂ ದಿವಾ ದ್ಯುಲೋಕೇನ ಜ್ಯೋತಿಃ ಪ್ರಭಾಸ್ವರಮ್ ಅನ್ನದಾನಾದಿಜನಿತಪ್ರಭಾವಜಮ್ ಆತತಂ ವ್ಯಾಪ್ತಂ ದ್ಯುಲೋಕಸ್ಪೃಕ್ ಇತ್ಯರ್ಥಃ । ದಿವಾ ಅಹ್ನಾ ವಾ ಸಮಂ ಜ್ಯೋತಿಃ ಇತ್ಯೇತತ್ । ತನ್ಮಾ ಪ್ರಸಾಙ್ಕ್ಷ್ಮೀಃ ಸಞ್ಜನಂ ಸಕ್ತಿಂ ತೇನ ಜ್ಯೋತಿಷಾ ಸಂಬನ್ಧಂ ಮಾ ಕಾರ್ಷೀಃ ಇತ್ಯರ್ಥಃ । ತತ್ ಪ್ರಸಞ್ಜನೇನ ತತ್ ಜ್ಯೋತಿಃ ತ್ವಾ ತ್ವಾಂ ಮಾ ಪ್ರಧಾಕ್ಷೀಃ ಮಾ ದಹತು ಇತ್ಯರ್ಥಃ । ಪುರುಷವ್ಯತ್ಯಯೇನ ಮಾ ಪ್ರಧಾಕ್ಷೀದಿತಿ ॥

(ಭಾಷ್ಯಾರ್ಥ)

ಇದು ಹೀಗಿರಲು ಆ ರಾಜನು ಬೇಸಗೆಯ ಕಾಲದಲ್ಲಿ ಉಪ್ಪರಿಗೆಯ ಮೇಲೆ ಇದ್ದುಕೊಂಡಿರಲು, ಆಗ ಹಂಸಗಳು ನಿಶಾ(ಸಮಯ)ದಲ್ಲಿ ರಾತ್ರೆಯಲ್ಲಿ ಹಾರಿ ಹೋಗುತ್ತಿದ್ದವು ; ಋಷಿಗಳೋ ದೇವತೆಗಳೋ ರಾಜನ ಅನ್ನದಾನಗುಣಗಳಿಂದ ತುಷ್ಟರಾಗಿ ಹಂಸರೂಪದಿಂದ ರಾಜನಿಗೆ ಕಾಣುವಂತೆ ಹಾರಿಹೋಗುತ್ತಿದ್ದವು. (ಆ ಕಡೆಯಿಂದ) ಹಾರಿಕೊಂಡು ಹೋಗುತ್ತಿದ್ದವು.

ಆಗ ಆ ಕಾಲದಲ್ಲಿ (ಹಾಗೆ) ಹಾರಿಹೋಗುತ್ತಿದ್ದ ಆ ಹಂಸಗಳೊಳಗೆ ಹಿಂದುಗಡೆ ಹಾರಿಹೋಗುತ್ತಿದ್ದ ಓಂದು ಹಂಸವು ಮುಂದೆ ಹಾರಿಹೋಗುತ್ತಿದ್ದ ಹಂಸವನ್ನು ಕುರಿತು ಇಂತೆಂದಿತು , ಹೀಗೆಂದು ಹೇಳಿತು , ಹೋ ಹೋ , ಎಲೊ ಎಲೊ ! ಎಂದು ಕರೆದು (ಇಂತೆಂದಿತು) ; ಭಲ್ಲಾಕ್ಷ , ಭಲ್ಲಾಕ್ಷ (ಎಂದು ಎರಡು ಸಲ) ಆದರವನ್ನು ತೋರಿಸಿ (ಮಾತನಾಡಿತು). 'ನೋಡು , ನೋಡು ; ಈ ಆಶ್ಚರ್ಯವನ್ನ !'ಎಂದು ಹೇಗೆ (ಹೇಳುತ್ತಾರೋ) ಹಾಗೆಯೇ ಇದು. ಭಲ್ಲಾಕ್ಷ ಎಂದಿರುವದು ಅಲ್ಪದೃಷ್ಟಿತ್ವವನ್ನು ಸೂಚಿಸುವದಕ್ಕೆ[1] ಅಥವಾ ಅದಕ್ಕೆ (ತನಗೆ) ಸರಿಯಾದ ಬ್ರಹ್ಮಜ್ಞಾನವು (ಇರುವದೆಂಬ) ಅಭಿಮಾನವಿದ್ದದ್ದರಿಂದ ಎಷ್ಟೋ ಸಲ ಆ (ಹಂಸ)ದಿಂದ ಹಂಗಿಸಲ್ಪಟ್ಟದ್ದದ್ದರಿಂದ ವ್ಯಥೆಯಿಂದ ತಡೆದುಕೊಳ್ಳಲಾರದೆ , ಭಲ್ಲಾಕ್ಷ ! ಎಂದು ಆ (ಅಸಹನೆಯನ್ನು) ಸೂಚಿಸಿತು (ಎಂದಾದರೂ ವ್ಯಾಖ್ಯಾನಮಾಡಬಹುದು). ''ಜಾನಶ್ರುತಿಪೌತ್ರಾಯಣನ ಅನ್ನದಾನಾದಿಗಳ ಪ್ರಭಾವದಿಂದುಂಟಾದ ಬೆಳಗುವ ಜ್ಯೋತಿಯು (ದಿವಾ = ದ್ಯುಲೋಕೇನ) ದ್ಯುಲೋಕಕ್ಕೆ ಸಮನಾಗಿ (ಆತತಂ = ವ್ಯಾಪ್ತಮ್) ಹರಡಿಕೊಂಡಿದೆ ; ದ್ಯುಲೋಕವನ್ನು ಮುಟ್ಟುತ್ತಿದೆ ಎಂದರ್ಥ. ಅಥವಾ (ದಿವಾ = ಅಹ್ನಾ) ಹಗಲಿನ (ಬೆಳಕಿಗೆ) ಸಮನಾದ ಜ್ಯೋತಿಯು ಎಂದು ತಾತ್ಪರ್ಯ. ಅದನ್ನು ಸೋಂಕಬೇಡ ; ಸಂಜನವನ್ನು ಸಂಗವನ್ನು ಆ ಜ್ಯೋತಿಯ ಸಂಬಂಧವನ್ನು ಮಾಡಿಕೊಳ್ಳದಿರು

1. ಸರಿಯಾಗಿ ಕಣ್ಣುಕಾಣಿಸುವದಿಲ್ಲವೆ ? - ಎಂದು ಎಚ್ಚರಿಸಿಮಾತನಾಡುವದಕ್ಕೆ.

ಎಂದರ್ಥ. ಅದನ್ನು ಸೋಂಕುವದರಿಂದ ಆ ಜ್ಯೋತಿಯು (ತ್ವಾ = ತ್ವಾಮ್) ಸುಡದಿರಲಿ, ಸುಟ್ಟುಹಾಕದಿರಲಿ ! ಎಂದರ್ಥ. (ಮಾ ಪ್ರಧಾಕ್ಷೀಃ ಎಂಬುದಕ್ಕೆ) ಪುರುಷವಿಪರಿಣಾಮದಿಂದ ಮಾ ಪ್ರಧಾಕ್ಷೀತ್ ಎಂದು (ಪ್ರಥಮಪುರುಷಕ್ಕೆ ತಿರುಗಿಸಿ ಅರ್ಥವನ್ನು ಮಾಡಿಕೊಳ್ಳಬೇಕು).

(ಉಪನಿಷತ್ತು)

ತಮು ಹ ಪರಃ ಪ್ರತ್ಯುವಾಚ ಕಮ್ವರ ಏನಮೇತತ್ ಸನ್ತಗ್ಂ ಸಯುಗ್ವಾನಮಿವ ರೈಕ್ವಮಾತ್ಥೇತಿ ಯೋ ನು ಕಥಗ್ಂ ಸಯುಗ್ವಾ ರೈಕ್ವ ಇತಿ ॥೩॥

೩. ಅದಕ್ಕೆ ಮತ್ತೊಂದು ಹೀಗೆಂದಿತು : 'ಎಲೆ, ಹೀಗಿರುವ ಇವನನ್ನು ಯಾವನೆಂದು ಸಯುಗ್ವರೈಕ್ವನಂತೆ ಹೇಳುತ್ತಿದ್ದೀಯೆ ?' 'ಆ ಸಯುಗ್ವರೈಕ್ವ ನೆಂಬವನು ಹೇಗಿರುತ್ತಾನೆ ?'

ರೈಕ್ವನ ಪ್ರಸಾಪನೆ

(ಭಾಷ್ಯ)

೨೯೦. ತಮ್ ಏವಮುಕ್ತವನ್ತಂ ಪರಃ ಇತರೋಽಗ್ರಗಾಮೀ ಪ್ರತ್ಯುವಾಚ । ಅರೇ ನಿಕೃಷ್ಟೋಽಯಂ ರಾಜಾ ವರಾಕಃ। ತಂ ಕಮು ಏನಂ ಸನ್ತಂ ಕೇನ ಮಾಹಾತ್ಮ್ಯೇನ ಯುಕ್ತಂ ಸನ್ತಮ್ ಇತಿ ಕುತ್ಸಯತಿ । ಏನಮ್ ಏವಂ ಸಬಹುಮಾನಮ್ ಏತದ್ ವಚನಮ್ ಆತ್ಥ ರೈಕ್ವಮಿವ ಸಯುಗ್ವಾನಮ್ । ಸಹ ಯುಗ್ವನಾ ಗನ್ತ್ರ್ಯಾ ವರ್ತತ ಇತಿ ಸಯುಗ್ವಾ ರೈಕ್ವಃ । ತಮಿವ ಆತ್ಥ ಏನಮ್ । ಅನನುರೂಪಮ್ ಅಸ್ಮಿನ್ ಅಯುಕ್ತಮ್ ಈದೃಶಂ ವಕ್ತುಃ ರೈಕ್ವ ಇವ ಇತ್ಯಭಿಪ್ರಾಯಃ । ಇತರಶ್ಚ ಆಹ । ಯೋ ನು ಕಥಂ ತ್ವಯಾ ಉಚ್ಯತೇ ಸಯುಗ್ವಾ ರೈಕ್ವಃ । ಇತ್ಯುಕ್ತವನ್ತಂ ಭಲ್ಲಾಕ್ಷ ಆಹ- ಶೃಣು ಯಥಾ ಸ ರೈಕ್ವಃ ॥

(ಭಾಷ್ಯಾರ್ಥ)

ಹೀಗೆಂದ ಆ (ಹಂಸವನ್ನು ಕುರಿತು) ಮತ್ತೊಂದು ಮುಂದೆ ಹೋಗುತ್ತಿದ್ದ ಇನ್ನೊಂದು (ಹಂಸವು ಹೀಗೆಂದು) ಮಾರುನುಡಿಯಿತು. ''ಎಲೆ, ಈ ರಾಜನು ಕೀಳನು, ಸಣ್ಣಮನುಷ್ಯನು. ಇವನನ್ನು ಯಾವನೆಂದು 'ಯಾವ ಮಹಿಮೆಯಿಂದೊಡ ಗೂಡಿದವನೆಂದು' ಎಂದು ತಿರಸ್ಕಾರದಿಂದ ನುಡಿದದ್ದು. (ಹೀಗಿರುವ) ಇವನನ್ನು ಹೀಗೆ ಗೌರವದಿಂದೊಡಗೂಡಿದ ವಚನವನ್ನು- ಸಯುಗ್ವರೈಕ್ವನನ್ನು (ಹೊಗಳು ವಂತೆ)- ನುಡಿಯುತ್ತಿರುವೆ ? ಯುಗ್ವದಿಂದ ಎಂದರೆ ಬಂಡಿಯೊಡನೆ ಇರುವ

ನಾದ್ದರಿಂದ ರೈಕ್ವನು ಸಯುಗ್ವನು , ಅವನನ್ನು (ಹೊಗಳುವಂತೆ) ಇವನನ್ನು (ಹೊಗಳಿ) ಮಾತನಾಡುತ್ತಿರುವೆಯಲ್ಲ !'' ರೈಕ್ವನ ವಿಷಯದಲ್ಲಿ ಹೇಗೋ ಹಾಗೆ ಇವನ (ವಿಷಯ)ದಲ್ಲಿ ಇಂಥ (ಮಾತನ್ನು) ಆಡುವದು ಅನುಗುಣವಲ್ಲ- ಎಂದು ಅಭಿಪ್ರಾಯ. (ಆ) ಮತ್ತೊಂದು ಹಂಸವಿಂತೆಂದಿತು. ''ಸಯುಗ್ವರೈಕ್ವನೆನ್ನುವೆಯಲ್ಲ, (ಅವನು) ಹೇಗಿರುವನೋ !''ಹೀಗೆಂದು ಹೇಳಲು ಭಲ್ಲಾಕ್ಷನು ಹೇಳುತ್ತದೆ : ಆ ರೈಕ್ವನು ಹೇಗಿರುವನೆಂಬುದನ್ನು (ಹೇಳುವೆನು) ಕೇಳು :[1]

(ಉಪನಿಷತ್ತು)

ಯಥಾ ಕೃತಾಯ ವಿಜಿತಾಯಾಧರೇಯಾಃ ಸಂಯನ್ತ್ಯೇವಮೇನಗ್ಂ ಸರ್ವಂ ತದಭಿಸಮೈತಿ[2] ಯತ್ಕಿಂಚ ಪ್ರಜಾಃ ಸಾಧು ಕುರ್ವನ್ತಿ ಯಸ್ತದ್ವೇದ ಯತ್ ಸ ವೇದ ಸ ಮಯ್ಯೈತದುಕ್ತ ಇತಿ ॥೪॥

೪. ಹೇಗೆ ಕೃತವನ್ನು ಗೆದ್ದುಕೊಂಡರೆ (ಅದರ ಬಳಿ)ಗೆ ಕೆಳಗಿನವು ಬಂದು ಸೇರುತ್ತವೆಯೋ ಹಾಗೆಯೇ ಪ್ರಜೆಗಳು ಏನೇನು ಒಳ್ಳೆಯದನ್ನು ಮಾಡುವರೋ ಅದೆಲ್ಲವೂ ಅವನು ಯಾವದನ್ನರಿತಿರುವನೋ ಅದನ್ನರಿತಿರುವವನ ಬಳಿಗೆ ಬಂದು ಸೇರುವದು. ಅವನನ್ನೇ ನಾನು ಹೀಗೆಂದು ಹೇಳಿರುವದು.

ರೈಕ್ವನ ಮಹಿಮೆ

(ಭಾಷ್ಯ)

೨೯೧. ಯಥಾ ಲೋಕೇ ಕೃತಾಯಃ ಕೃತೋ ನಾಮಾಯೋ[3] ದ್ಯೂತ ಸಮಯೇ ಪ್ರಸಿದ್ಧಶ್ಚತುರಙ್ಕಃ । ಸ ಯದಾ ಜಯತಿ ದ್ಯೂತೇ ಪ್ರವೃತ್ತಾನಾಮ್ ತಸ್ಮೈ ವಿಜಿತಾಯ ತದರ್ಥಮ್ ಇತರೇ ತ್ರಿದ್ವ್ಯೇಕಾಙ್ಕಾ ಅಧರೇಯಾಃ ತ್ರೇತಾ ದ್ವಾಪರಕಲಿನಾಮಾನಃ ಸಂಯನ್ತಿ ಸಂಗಚ್ಛನ್ತೇ ಅನರ್ಘವನ್ತಿ । ಚತುರಙ್ಕೇ ಕೃತಾಯೇ ತ್ರಿದ್ವ್ಯೇಕಾಙ್ಕಾನಾಂ ವಿದ್ಯಮಾನತ್ವಾತ್ತದನರ್ಘವನ್ತಿ ಇತ್ಯರ್ಥಃ । ಯಥಾ ಅಯಂ

1. ಈ ವಾಕ್ಯವು ಮುಂದಿನ ಕಂಡಿಕೆಗೆ ಅವತರಣಿಕೆ.
2. 'ಸಮೇತಿ'ಎಂದು ಕಂಡಿಕೆಯಲ್ಲಿಯೂ ಭಾಷ್ಯದಲ್ಲಿಯೂ ಪಾಠಾಂತರವಿದೆ.
3. ಮೂಲದಲ್ಲಿ ಆಯ ಎಂಬ ಶಬ್ದವೇ ಇದೆ ಎಂದು ಮುಂದೆ 'ತ್ರೇತಾದ್ಯಾಯ ಸ್ಥಾನೀಯಮ್' ಎಂದಿರುವದರಿಂದ ಊಹಿಸಬಹುದಾಗಿದೆ ; ಆದರೆ ಅಲ್ಲಿಯೂ ವಾ॥ ಪಾಠದಲ್ಲಿ ತ್ರೇತಾದ್ಯಯ ಎಂಬ ಪಾಠಾಂತರವಿದೆ. ಟೀಕೆಯಲ್ಲೇನೊ ಅಯ ಎಂದೇ ಇದೆ.

ದೃಷ್ಟಾನ್ತಃ ಏವಮ್ ಏನಂ ರೈಕ್ವಂ ಕೃತಾಯಸ್ಥಾನೀಯಂ ತ್ರೇತಾದ್ಯಯಸ್ಥಾನೀಯಂ ಸರ್ವಂ ತದಭಿಸಮೈತಿ ಅನರ್ಭವತಿ ರೈಕ್ವೇ। ಕಂ ತತ್ ? ಯತ್ಕಿಂಚ ಲೋಕೇ ಸರ್ವಾಃ ಪ್ರಜಾಃ ಸಾಧು ಶೋಭನಂ ಧರ್ಮಜಾತಂ ಕುರ್ವನ್ತಿ ತತ್ ಸರ್ವಂ ರೈಕ್ವಸ್ಯ ಧರ್ಮೇ ಅನರ್ಭವತಿ। ತಸ್ಯ ಚ ಫಲೇ ಸರ್ವಪ್ರಾಣಿಧರ್ಮಫಲಮ್ ಅನರ್ಭವತಿ ಇತ್ಯರ್ಥಃ। ತಥಾ ಅನ್ಯೋಽಪಿ ಕಶ್ಚಿತ್ ಯಸ್ತತ್ ವೇದ್ಯಂ ವೇದ। ಕಂ ತತ್ ? ಯತ್ ವೇದ್ಯಂ ಸ ರೈಕ್ವಃ ವೇದ । ತದ್ವೇದ್ಯಮ್ ಅನ್ಯೋಽಪಿ ಯೋ ವೇದ ತಮಪಿ ಸರ್ವಪ್ರಾಣಿಧರ್ಮಜಾತಂ ತತ್ಫಲಂ ಚ ರೈಕ್ವಮಿವ ಅಭಿಸಮೈತಿ ಇತ್ಯನುವರ್ತತೇ । ಸ ಏವಂಭೂತಃ ಅರೈಕ್ವೋಽಪಿ ಮಯಾ ವಿದ್ವಾನ್ ಏತದುಕ್ತಃ ಏವಮುಕ್ತಃ। ರೈಕ್ವವತ್ ಸ ಏವ ಕೃತಾಯಸ್ಥಾನೀಯೋ ಭವತಿ ಇತ್ಯಭಿಪ್ರಾಯಃ॥

(ಭಾಷ್ಯಾರ್ಥ)

ಹೇಗೆ ಲೋಕದಲ್ಲಿ ಕೃತಾಯವು ಕೃತವೆಂಬ ಗರವು , ನಾಲ್ಕು ಅಂಕಗಳುಳ್ಳದ್ದೆಂದು ದ್ಯೂತಸಮಯದಲ್ಲಿ ಪ್ರಸಿದ್ಧವಷ್ಟೆ ; ದ್ಯೂತದಲ್ಲಿ ಪ್ರವೃತ್ತರಾದವರಿಗೆ ಅದು-ಯಾವಾಗ ಗೆಲ್ಲುತ್ತದೆಯೋ (ಆಗ) ಆ ಗೆದ್ದ (ಗರಕ್ಕೆ) ಅದಕ್ಕಾಗಿ ಉಳಿದ ಮೂರು, ಎರಡು, ಒಂದು - ಅಂಕಗಳುಳ್ಳ ತ್ರೇತ, ದ್ವಾಪರ, ಕಲಿ- ಎಂಬ ಹೆಸರಿನ ಕೆಳಗಿನ (ಗರ)ಗಳು ಬಂದುಸೇರುತ್ತವೆಯೋ, ಸೇರಿಕೊಳ್ಳುತ್ತವೆಯೋ, (ಅದರೊಳಗೆ) ಅಡಕವಾಗಿಬಿಡುವವೋ, ನಾಲ್ಕು ಅಂಕದ ಕೃತಾಯದಲ್ಲಿ ಮೂರು, ಎರಡು, ಒಂದು - ಎಂಬ ಅಂಕಗಳೂ ಇರುವದರಿಂದ ಅದರೊಳಗೆ ಅಡಕವಾಗಿಬಿಡುವವೋ ಎಂದರ್ಥ.[1] ಈ ದೃಷ್ಟಾಂತವು ಹೇಗೋ, ಹಾಗೆಯೇ ಕೃತಾಯದಂತಿರುವ ಈ ರೈಕ್ವನನ್ನು ತ್ರೇತೆಯೇ ಮುಂತಾದ ಗರಗಳಂತಿರುವ ಅದೆಲ್ಲವೂ ಬಂದುಸೇರುತ್ತದೆ, ರೈಕ್ವನಲ್ಲಿ ಅಡಕವಾಗಿ ಬಿಡುತ್ತದೆ. ಅದು ಎಂದರೆ ಯಾವದು ? ಎಂದರೆ ಲೋಕದಲ್ಲಿ ಸರ್ವಪ್ರಜೆಗಳೂ ಒಳ್ಳೆಯದನ್ನು ಉತ್ತಮವಾದ ಪುಣ್ಯಜಾತವನ್ನು ಮಾಡುತ್ತಾರೋ ಅದೆಲ್ಲವೂ ರೈಕ್ವನ ಧರ್ಮದಲ್ಲಿ ಅಡಕವಾಗುತ್ತದೆ. ಆ (ಧರ್ಮದ) ಫಲದಲ್ಲಿ ಸರ್ವಪ್ರಾಣಿಗಳ ಧರ್ಮಫಲವೂ ಅಡಕವಾಗಿರುತ್ತದೆ ಎಂದರ್ಥ.[2]

ಇದರಂತೆ ಮತ್ತೊಬ್ಬನೂ ಯಾವನೇ ಆಗಲಿ, ಆ ವೇದ್ಯವನ್ನು ಅರಿತುಕೊಂಡ ನಾದರೆ - ಅದನ್ನು ಎಂದರೆ ಯಾವದು ? ಯಾವದನ್ನು ಆ ರೈಕ್ವನು ಅರಿತುಕೊಂಡಿರುವನೋ (ಅದನ್ನು ಅರಿತುಕೊಂಡನಾದರೆ) - ಆ ವೇದ್ಯವನ್ನು ಮತ್ತೊಬ್ಬನೂ

---

1. ಕೃತಾಯವನ್ನು ಗೆದ್ದವನಿಗೆ ೪ + ೩ + ೨ + ೧ = ೧೦ ಗರ ಬಿದ್ದಂತೆ ಎಂದು ಆಟದಲ್ಲಿ ಭಾವಿಸುತ್ತಾರೆ.

2. ಸರ್ವಕರ್ಮಗಳ ಫಲವನ್ನೂ ಅವನು ಅನುಭವಿಸಿದಂತೆ ಎಂದರ್ಥ.

ಯಾವನು ಅರಿತುಕೊಂಡಿರುವನೋ ಅವನನ್ನು ಸರ್ವಪ್ರಾಣಿಗಳ ಧರ್ಮಜಾತವೂ ಅದರ ಫಲವೂ ರೈಕ್ವನನ್ನು ಹೇಗೋ ಹಾಗೆಯೇ 'ಬಂದು ಸೇರುತ್ತದೆ'ಎಂದು ಅನುವೃತ್ತಿಯಾಗುತ್ತದೆ. ಹೀಗಿರುವ ಜ್ಞಾನಿಯು ರೈಕ್ವನಲ್ಲದಿದ್ದರೂ ಅವನನ್ನು (ಏತದುಕ್ತಃ=ಏವಮುಕ್ತಃ) ನಾನು ಹೀಗೆಂದಿರುತ್ತೇನೆ, ರೈಕ್ವನಂತೆ ಅವನೇ ಕೃತಾಯದಂತಿರುವನು - ಎಂದರ್ಥ.[1]

(ಉಪನಿಷತ್ತು)

ತದು ಹ ಜಾನಶ್ರುತಿಃ ಪೌತ್ರಾಯಣ ಉಪಶುಶ್ರಾವ ಸ ಹ ಸಂಜಿಹಾನ ಏವ ಕ್ಷತ್ತಾರಮುವಾಚಾಜ್ಞಾರೇ ಹ ಸಯುಗ್ವಾನಮಿವ ರೈಕ್ವಮಾತ್ಥೇತಿ ಯೋ ನು ಕಥಗ್ಂ ಸಯುಗ್ವಾ ರೈಕ್ವ ಇತಿ ॥೫॥

ಯಥಾ ಕೃತಾಯ ವಿಜಿತಾಯಾಧರೇಯಾಃ ಸಂಯನ್ತ್ಯೇವಮೇನಗ್ಂ ಸರ್ವಂ ತದಭಿಸಮೈತಿ ಯತ್ಕಿಂಚ ಪ್ರಜಾಃ ಸಾಧು ಕುರ್ವನ್ತಿ ಯಸ್ತದ್ವೇದ ಯತ್ಸ ವೇದ ಸ ಮಯ್ಯೇತದುಕ್ತ ಇತಿ ॥೬॥

೫. ಅದನ್ನು ಜಾನಶ್ರುತಿಯು , ಕೇಳಿದನು. ಅವನು (ಹಾಸಿಗೆಯನ್ನು) ಬಿಡುತ್ತಲೂ ಕ್ಷತ್ತೃವನ್ನು "ಎಲಾ , ಏನಯ್ಯ , ಸಯುಗ್ವರೈಕ್ವನನ್ನು ಕುರಿತು (ಹೀಗೆಂದು) ಹೇಳು !"ಎಂದನು. "ಸಯುಗ್ವರೈಕ್ವನು ಎಂದೆಯಲ್ಲ , ಅವನು ಹೇಗೆ ಇರುವನೋ !"ಎಂದು (ಕ್ಷತ್ತೃವು ಕೇಳಿದನು).

೬. "ಹೇಗೆ ಕೃತವನ್ನು ಗೆದ್ದುಕೊಂಡರೆ (ಅವನ ಬಳಿಗೆ) ಕೆಳಗಿನವು ಬಂದುಸೇರುವವೋ ಹಾಗೆಯೇ ಪ್ರಜೆಗಳು ಏನೇನು ಒಳ್ಳೆಯದನ್ನು ಮಾಡುವರೋ ಅದೆಲ್ಲವೂ ಅವನು ಯಾವದನ್ನರಿತಿರುವನೋ ಅವನ ಬಳಿಗೆ ಬಂದುಸೇರುವದು. ಅವನನ್ನೇ ನಾನು ಹೀಗೆ ಹೇಳಿರುವದು"ಎಂದನು.

ಜಾನಶ್ರುತಿಯು ರೈಕ್ವನನ್ನು ಹುಡುಕಿಸಿದ್ದು

(ಭಾಷ್ಯ)

೨೯೨. ತದು ಹ ತದೇತತ್ ಈದೃಶಂ ಹಂಸವಾಕ್ಯಮ್ ಆತ್ಮನಃ ಕುತ್ಸಾರೂಪಮ್ ಅನ್ಯಸ್ಯ ವಿದುಷೋ ರೈಕ್ವಾದೇಃ ಪ್ರಶಂಸಾರೂಪಮ್ ಉಪಶುಶ್ರಾವ

1. ಅವನಿಗೂ ಸರ್ವಕರ್ಮಫಲಗಳನ್ನು ಒಳಗೊಂಡ ಫಲವಾಗುತ್ತದೆ ಎಂದರ್ಥ.

ಶ್ರುತವಾನ್ ಹರ್ಮ್ಯತಲಸ್ಥೋ ರಾಜಾ ಜಾನಶ್ರುತಿಃ ಪೌತ್ರಾಯಣಃ । ತಚ್ಚ ಹಂಸವಾಕ್ಯಂ ಸ್ಮರನ್ನೇವ ಪೌನಃಪುನ್ಯೇನ ರಾತ್ರಿಶೇಷಮ್ ಅತಿವಾಹಯಾಮಾಸ । ತತಃ ಸ ವನ್ದಿಭಿಃ ರಾಜಾ ಸ್ತುತಿಯುಕ್ತಾಭಿರ್ವಾಗ್ಭಿಃ ಪ್ರತಿಬೋಧ್ಯಮಾನಃ ಉವಾಚ ಕ್ಷತ್ತಾರಂ ಸಂಜಿಹಾನ ಏವ ಶಯನಂ ನಿದ್ರಾಂ ವಾ ಪರಿತ್ಯಜನ್ನೇವ । ಹೇ ಅಜ್ಞ ವತ್ಸ ಅರೇ ಹ ಸಯುಗ್ವಾನಮಿವ ರೈಕ್ವಮ್ ಆತ್ಥ ಕಿಂ ಮಾಮ್ ? ಸ ಏವ ಸ್ತುತ್ಯರ್ಹೋ ನಾಹಮ್ ಇತ್ಯಭಿಪ್ರಾಯಃ । ಅಥವಾ ಸಯುಗ್ವಾನಂ ರೈಕ್ವಮ್ ಆತ್ಥ ಗತ್ವಾ ಮಮ ತದ್ದಿದೃಕ್ಷಾಮ್ । ತದಾ ಇವಶಬ್ದೋಽವಧಾರಣಾರ್ಥೋಽನರ್ಥಕೋ ವಾ ವಾಚ್ಯಃ । ಸ ಚ ಕ್ಷತ್ತಾ ಪ್ರತ್ಯುವಾಚ ರೈಕ್ವಾನಯನಕಾಮೋ ರಾಜ್ಞೋಽಭಿಪ್ರಾಯಜ್ಞಃ । ಯೋ ನು ಕಥಂ ಸಯುಗ್ವಾರೈಕ್ವ ಇತಿ ? ರಾಜ್ಞಾ ಏವಂ ಚೋಕ್ತಃ ಆನೇತುಂ ತಚ್ಚಿಹ್ನಂ ಜ್ಞಾತುಮಿಚ್ಛನ್ ಯೋ ನು ಕಥಂ ಸಯುಗ್ವಾ ರೈಕ್ವ ಇತ್ಯವೋಚತ್ । ಸ ಚ ಭಲ್ಲಾಕ್ಷವಚನಮೇವ ಅವೋಚತ್ ತಸ್ಯ ಸ್ಮರನ್[1] ॥

(ಭಾಷ್ಯಾರ್ಥ)

ಅದನ್ನು, ತನ್ನ ನಿಂದೆಯ ರೂಪವಾಗಿಯೂ ರೈಕ್ವನೇ ಮೊದಲಾದ ಜ್ಞಾನಿಯಾದ ಮತ್ತೊಬ್ಬನ ಸ್ತುತಿಯ ರೂಪವಾಗಿಯೂ (ಇದ್ದ) ಇಂಥ ಹಂಸವಾಕ್ಯವನ್ನು ಉಪ್ಪರಿಗೆಯ ಮೇಲುಗಡೆ ಇದ್ದ ಜಾನಶ್ರುತಿಪೌತ್ರಾಯಣರಾಜನು ಕೇಳಿದನು. ಆ ಹಂಸವಾಕ್ಯವನ್ನು ಮತ್ತೆಮತ್ತೆ ಸ್ಮರಿಸುತ್ತಲೇ ಉಳಿದ ರಾತ್ರೆಯನ್ನು ಕಳೆದನು. ಆ ಬಳಿಕ ವಂದಿಗಳು ಸ್ತುತಿಯುಕ್ತವಾದ ವಾಕ್ಕುಗಳಿಂದ ಎಚ್ಚರಿಸಲು ರಾಜನು ಕ್ಷತ್ತೃವನ್ನು[2] ಕುರಿತು ಬಿಡುತ್ತಲೆ, ಹಾಸಿಗೆಯನ್ನು ಅಥವಾ ನಿದ್ರೆಯನ್ನು ಬಿಡುತ್ತಲೆ, ಇಂತೆಂದನು. ಎಲಾ , ಏನಯ್ಯ, ಬಂಡಿಯ ರೈಕ್ವನನ್ನು ಹೊಗಳುವಂತೆ ನನ್ನನ್ನೇಕೆ ಹೊಗಳುತ್ತಿರುವೆ ? ಅವನೇ ಸ್ತುತ್ಯರ್ಹನೇ ಹೊರತು ನಾನಲ್ಲ ಎಂದು ಅಭಿಪ್ರಾಯ. ಅಥವಾ ರೈಕ್ವನಲ್ಲಿಗೆ ಹೋಗಿ ನಾನು ಅವನನ್ನು ಕಾಣಲಿಚ್ಛಿಸುವೆನೆಂದು ಹೇಳು (ಎಂದು ಈ ವಾಕ್ಯಕ್ಕೆ ಅರ್ಥ). ಆಗ ಇವಶಬ್ದವು ಅವಧಾರಣಾರ್ಥಕವೆಂದೋ ಅರ್ಥರಹಿತ ವೆಂದೋ ಹೇಳಬೇಕಾಗುವದು.

ಆಗ ಕ್ಷತ್ತೃವು ರಾಜನ ಅಭಿಪ್ರಾಯವನ್ನು ತಿಳಿದುಕೊಂಡವನಾಗಿ ರೈಕ್ವನನ್ನು ಕರೆತರಬೇಕೆಂಬ ಇಚ್ಛೆಯುಳ್ಳವನಾಗಿ 'ಆ ಬಂಡಿಯ ರೈಕ್ವನೆಂಬುವನು ಹೇಗಿರುವನೊ !' ಎಂದು ಮತ್ತೆ ಕೇಳಿದನು ; ಹೀಗೆನ್ನಲು ರಾಜನು (ಅವನನ್ನು) ಕರೆದು

1. ಇದು ವಾ॥ ಪಾಠದಂತೆ ಇಲ್ಲಿದೆ ; ಆ॥ ಪಾಠದಲ್ಲಿ ಮುಂದಿನ ಕಂಡಿಕೆಯ ಮೊದಲಿದೆ.
2. ಕ್ಷತ್ರಿಯನಿಗೆ ಶೂದ್ರಳಲ್ಲಿ ಜನಿಸಿದವನು ಕ್ಷತ್ತೃವು ; ಅವನನ್ನು ರಾಜರು ಸಾರಥ್ಯ, ದ್ವಾರಪಾಲಕತ್ವ- ಮುಂತಾದ ಕೆಲಸಗಳಿಗೆ ನಿಯಮಿಸಿಕೊಳ್ಳುತ್ತಿದ್ದರು.

ಕೊಂಡುಬರುವದಕ್ಕೆ ಅವನ ಗುರುತನ್ನು (ತಿಳಿಯ)ಲೆಳಸಿದವನಾಗಿ ಆ ಬಂಡಿಯ ರೈಕ್ವನಿರುವನಲ್ಲ, ಅವನು ಹೇಗಿರುವನೊ, ಎಂದನು. (ಆ ರಾಜನು) ಭಲ್ಲಾಕ್ಷ (ಹಂಸದ) ಮಾತನ್ನೇ ಸ್ಮರಣೆಗೆ ತಂದು[1]ಕೊಂಡು ಅದನ್ನೇ ಹೇಳಿದನು.

(ಉಪನಿಷತ್ತು)

ಸ ಹ ಕ್ಷತ್ತಾನ್ವಿಷ್ಯ ನಾವಿದಮಿತಿ ಪ್ರತ್ಯೇಯಾಯ ತಗ್ಂ ಹೋವಾಚ ಯತ್ರಾರೇ ಬ್ರಾಹ್ಮಣಸ್ಯಾನ್ವೇಷಣಾ ತದೇನಮಚ್ಛೈತಿ ॥೭॥

೭. ಆ ಕ್ಷತ್ತೃ ಹುಡುಕಿ 'ತಿಳಿಯಲಿಲ್ಲ' ಎಂದು ಹಿಂತಿರುಗಿದನು. ಅವನನ್ನು (ರಾಜನು) "ಎಲಾ, ಎಲ್ಲಿ ಬ್ರಾಹ್ಮಣನನ್ನು ಹುಡುಕಬೇಕೋ ಅಲ್ಲಿ ಇವನ ಬಳಿಗೆ ಹೋಗಿ (ನೋಡು) !"

(ಭಾಷ್ಯ)

೨೯೩. ಸ ಹ ಕ್ಷತ್ತಾ ನಗರಂ ಗ್ರಾಮಂ ಚ[2] ಗತ್ವಾ ಅನ್ವಿಷ್ಯ ರೈಕ್ವಂ ನಾವಿದಂ ನ ವ್ಯಜ್ಞಾಸಿಷಮ್ ಇತಿ ಪ್ರತ್ಯೇಯಾಯ ಪ್ರತ್ಯಾಗತವಾನ್ । ತಂ ಹೋವಾಚ ಕ್ಷತ್ತಾರಮ್ । ಅರೇ ಯತ್ರ ಬ್ರಾಹ್ಮಣಸ್ಯ ಬ್ರಹ್ಮವಿದಃ ವಿಕಾನ್ತೇ ಅರಣ್ಯನದೀಪುಲಿನಾದೌ[3] ವಿವಿಕ್ತದೇಶೇ[4] ಅನ್ವೇಷಣಾ ಅನುಮಾರ್ಗಣಂ ಭವತಿ ತತ್ ತತ್ರ ಏನಂ ರೈಕ್ವಮ್ ಅಚ್ಛೈ ಇಚ್ಛ ಗಚ್ಛ । ತತ್ರ ಮಾರ್ಗಣಂ ಕುರು ಇತ್ಯರ್ಥಃ ॥

(ಭಾಷ್ಯಾರ್ಥ)

ಆ ಕ್ಷತ್ತೃವು[5] ನಗರಕ್ಕೂ ಗ್ರಾಮಕ್ಕೂ ಹೋಗಿ[6] ರೈಕ್ವನನ್ನು ಹುಡುಕಿ ನನಗೆ ತಿಳಿಯಲಿಲ್ಲ , ನನಗೆ ಗೊತ್ತಾಗಲಿಲ್ಲ - ಎಂದು ಹಿಂತಿರುಗಿದನು , ಮರಳಿಬಂದನು. ಆ ಕ್ಷತ್ತೃವನ್ನು (ಕುರಿತು ಅರಸ)ನಿಂತೆಂದನು : ಎಲಾ, ಎಲ್ಲಿ ಬ್ರಾಹ್ಮಣನನ್ನು

1. ಇದು ಮುಂದಿನ ಕಂಡಿಕೆಗೆ ಸೇರಿದ್ದರೆ ಭಲ್ಲಾಕ್ಷನ ಮಾತನ್ನೇ ಹೇಳಿದನು- ಎಂದಿಷ್ಟೇ ಕನ್ನಡಿಸಿಕೊಳ್ಳಬೇಕು.
2. 'ವಾ' ಎಂಬುದಕ್ಕಿಂತ ಈ ಪಾಠವು ಮೇಲು.
3. 'ಅರಣ್ಯೇ ನದೀ' ಎಂಬುದಕ್ಕಿಂತ ಈ ಪಾಠವೇ ಮೇಲು.
4. 'ವಿವಿಕ್ತೇ ದೇಶೇ' ಎಂಬುದಕ್ಕಿಂತ ಈ ಸಮಾಸಪಾಠವೇ ಮೇಲು.
5. ಇದರ ಹಿಂದೆ 'ತಸ್ಯ ಸ್ಮರನ್' ಎಂದಿರುವ ಆ॥ ಪಾಠದಲ್ಲಿ (ಅವನ) ಆ (ಮಾತನ್ನೇ) ಸ್ಮರಿಸುತ್ತಾ ಎಂದು ಕನ್ನಡಿಸಿಕೊಳ್ಳಬೇಕು. 6. ಊರೂರನ್ನು ಹುಡುಕಿ ಎಂದರ್ಥ.

ಬ್ರಹ್ಮಜ್ಞಾನಿಯನ್ನು ಕಾಡು, ನದಿಯಮಳಲೊಟ್ಟಿಲು ಮುಂತಾದ (ಯಾವ) ಏಕಾಂತ ಸ್ಥಲದಲ್ಲಿ ಅನ್ವೇಷಣವಾಗುವದೋ ಹುಡುಕುವದಾದೀತೋ (ತತ್ = ತತ್ರ) ಅಲ್ಲಿ ಈ ರೈಕ್ವನನ್ನು (ಅರ್ಚ್ಛ = ಋಚ್ಛ) ಪಡೆದುಕೊ , ಹೋಗಿಸೇರು ; ಅಲ್ಲಿ ಅವನನ್ನು ಹುಡುಕು ಎಂದರ್ಥ.

(ಉಪನಿಷತ್ತು)

ಸೋಽಧಸ್ತಾಚ್ಛಕಟಸ್ಯ ಪಾಮಾನಂ ಕಷಮಾಣಮುಪೋಪವಿವೇಶ ತಗ್ಂ ಹಾಭ್ಯುವಾದ ತ್ವಂ ನು ಭಗವಃ ಸಯುಗ್ವಾ ರೈಕ್ವ ಇತ್ಯಹಗ್ಂ ಹ್ಯರಾಸಿ ಇತಿ ಹ ಪ್ರತಿಜಜ್ಞೇ ಸ ಹ ಕ್ಷತ್ತಾವಿದಮಿತಿ ಪ್ರತ್ಯೇಯಾಯ ॥೮॥

೮. ಅವನು ಬಂಡಿಯ ಕೆಳಗೆ ಕಜ್ಜಿಯನ್ನು ತುರಿಸಿಕೊಳ್ಳುತ್ತಿರುವ (ಅವನ) ಬಳಿಯಲ್ಲಿ ಕುಳಿತುಕೊಂಡನು. ಅವನನ್ನು 'ಪೂಜ್ಯರೆ , ಸಯುಗ್ವರೈಕ್ವನೆಂದರೆ ತಾವೇಯೊ ?'ಎಂದು ಕೇಳಿದನು. 'ನಾನೇ ಕಾಣೋ !'ಎಂದು (ಅವನು) ಹೇಳಿದನು. ಆ ಕ್ಷತ್ತೃವು 'ತಿಳಿಯಿತು'ಎಂದು ಹಿಂತಿರುಗಿದನು.

ಕ್ಷತ್ತೃವು ರೈಕ್ವನನ್ನು ಕಂಡುಬಂದದ್ದು

(ಭಾಷ್ಯ)

೨೯. ಇತ್ಯುಕ್ತಃ ಕ್ಷತ್ತಾ ಅನ್ವಿಷ್ಯ ತಂ ವಿಜನೇ ದೇಶೇ ಅಧಸ್ತಾತ್ ಶಕಟಸ್ಯ ಗನ್ತ್ರ್ಯಾಃ ಪಾಮಾನಂ ಖರ್ಜೂಂ ಕಷಮಾಣಂ ಕಣ್ಡೂಯಮಾನಂ ದೃಷ್ಟ್ವಾ ಅಯಂ ನೂನಂ ಸಯುಗ್ವಾ ರೈಕ್ವ ಇತಿ ಉಪ ಸಮೀಪೇ ಉಪವಿವೇಶ ವಿನಯೇನ ಉಪವಿಷ್ಟವಾನ್ । ತಂ ಚ ರೈಕ್ವಂ ಹ ಅಭ್ಯುವಾದ ಉಕ್ತವಾನ್ । ತ್ವಮಸಿ ಹೇ ಭಗವಃ ಭಗವನ್ ಸಯುಗ್ವಾ ರೈಕ್ವ ಇತಿ ? ಏವಂ ಪೃಷ್ಟಃ ಅಹಮಸ್ಮಿ ಹಿ ಅರಾಸಿ ಅರೇ ಇತಿ ಹ ಅನಾದರ ಏವ ಪ್ರತಿಜಜ್ಞೇ ಅಭ್ಯುಪಗತವಾನ್ । ಸ ತಂ ವಿಜ್ಞಾಯ ಅವಿದಂ ವಿಜ್ಞಾತವಾನ್ ಅಸ್ಮಿ ಇತಿ ಪ್ರತ್ಯೇಯಾಯ ಪ್ರತ್ಯಾಗತಃ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆನ್ನಲು (ಆ) ಕ್ಷತ್ತೃವು ವಿಜನವಾದ ಸ್ಥಲದಲ್ಲಿ ಅವನನ್ನು ಹುಡುಕಿ ಬಂಡಿಯ ಗಾಡಿಯ ಕೆಳಗೆ (ಪಾಮಾನಂ = ಖರ್ಜೂಂ) ಕಜ್ಜಿಯನ್ನು ತುರಿಸಿಕೊಳ್ಳುತ್ತಾ ಕೆರೆದುಕೊಳ್ಳುತ್ತಾ ಇದ್ದ (ರೈಕ್ವನನ್ನು) ಕಂಡು ಇವನೇ (ಆ) ಸಯುಗ್ವರೈಕ್ವನಿರಬೇಕು

ಎಂದು (ಉಪ) ಬಳಿಯಲ್ಲಿ ಕುಳಿತುಕೊಂಡನು. ವಿನಯದಿಂದ ಕೂತು ಕೊಂಡನು. ಮತ್ತು ಆ ರೈಕ್ವನನ್ನು (ಕುರಿತು) ಇಂತೆಂದನು : "ಎಲೈ ಪೂಜ್ಯನೆ, ನೀನೇಯೊ, ಸಯುಗ್ವರೈಕ್ವನು ?" "ನಾನೇ ಕಾಣೋ !"ಎಂದು - ಅರೇ ಎಂದು ಅನಾದರದಿಂದಲೇ ಹೇಳಿದನು , ಒಪ್ಪಿಕೊಂಡನು. ಅವನು ಅವನನ್ನು ಅರಿತುಕೊಂಡು 'ತಿಳಿದುಕೊಂಡೆನು, ಗೊತ್ತಾಯಿತು' ಎಂದು ಹಿಂತಿರುಗಿದನು, ಮರಳಿಬಂದನು ಎಂದರ್ಥ.

ನಾಲ್ಕನೆಯ ಅಧ್ಯಾಯ - ಎರಡನೆಯ ಖಂಡ

(ಸಂವರ್ಗವಿದ್ಯೆ)

ಜಾ[illegible] ರೈ[illegible]ದ್ದ

(ಉಪನಿಷತ್ತು)

ತದು ಹ ಜಾನಶ್ರುತಿಃ ಪೌತ್ರಾಯಣಃ ಷಟ್ಶತಾನಿ ಗವಾಂ ನಿಷ್ಕಮಶ್ವ-ತರೀರಥಂ ತದಾದಾಯ ಪ್ರತಿಚಕ್ರಮೇ ತಗ್ಂ ಹಾಭ್ಯುವಾದ ॥೧॥

೧. ಆಗಲೇ ಜಾನಶ್ರುತಿ ಪೌತ್ರಾಯಣನು ಆರುನೂರು ಗೋಗಳು, ನಿಷ್ಕ, ಅಶ್ವತರೀರಥ - ಇವನ್ನು ತೆಗೆದುಕೊಂಡು ಹೊರಟನು. ಅವನನ್ನು ಕುರಿತು ಇಂತೆಂದನು.

ಜಾನಶ್ರುತಿ ರೈಕ್ವನಲ್ಲಿಗೆ ಹೋದದ್ದು

(ಭಾಷ್ಯ)

೨೯೫. ತತ್ ತತ್ರ ಋಷೇಃ ಗಾರ್ಹಸ್ಥ್ಯಂ ಪ್ರತಿ ಅಭಿಪ್ರಾಯಂ ಬುದ್ಧ್ವಾ ಧನಾರ್ಥಿತಾಂ ಚ ಉ ಹ ಏವ ಜಾನಶ್ರುತಿಃ ಪೌತ್ರಾಯಣಃ ಷಟ್ಶತಾನಿ ಗವಾಂ ನಿಷ್ಕಂ ಕಣ್ಠಹಾರಮ್ ಅಶ್ವತರೀರಥಮ್ ಅಶ್ವತರೀಭ್ಯಾಂ ಯುಕ್ತಂ ರಥಂ ತತ್ ಆದಾಯ ಧನಂ ಗೃಹೀತ್ವಾ ಪ್ರತಿಚಕ್ರಮೇ ರೈಕ್ವಂ ಪ್ರತಿ ಗತವಾನ್ । ತಂ ಚ ಗತ್ವಾ ಅಭ್ಯುವಾದ ಹ ಅಭ್ಯುಕ್ತವಾನ್ ॥

(ಭಾಷ್ಯಾರ್ಥ)

(ತತ್=ತತ್ರ) ಆಗ,[1] ಋಷಿಗೆ ಗಾರ್ಹಸ್ಥ್ಯದಲ್ಲಿ ಅಭಿಪ್ರಾಯವಿದೆ ಎಂಬುದನ್ನು ಧನವು ಬೇಕೆಂಬುದನ್ನು ತಿಳಿದುಕೊಂಡು - ಉ ಹ ಎಂದರೆ ಏ (ಎಂದರ್ಥ. ಆದ್ದರಿಂದ ತದು ಹ ಎಂದರೆ ಆಗಲೇ) ಜಾನಶ್ರುತಿಪೌತ್ರಾಯಣನು ಆರುನೂರು ಗೋಗಳು , ನಿಷ್ಕ ಎಂದರೆ ಕಂಠೀಸರ, ಅಶ್ವತರೀರಥ ಎಂದರೆ ಹೇಸರಕತ್ತೆಗಳನ್ನು ಕಟ್ಟಿದ್ದ ರಥ - ಇಷ್ಟು ಧನವನ್ನು ತೆಗೆದುಕೊಂಡು ಹೊರಟು ರೈಕ್ವನ ಬಳಿಗೆ ಹೋದನು. ಅವನಲ್ಲಿಗೆ ಹೋಗಿ ಇಂತೆಂದನು.

(ಉಪನಿಷತ್ತು)

ರೈಕ್ವೇಮಾನಿ ಷಟ್ಶತಾನಿ ಗವಾಮಯಂ ನಿಷ್ಕೋಽಯಮಶ್ವತರೀ ರಥೋಽನು ಮ ಏತಾಂ ಭಗವೋ ದೇವತಾಗ್ಂ ಶಾಧಿ ಯಾಂ ದೇವತಾಮುಪಾಸ್ಸ ಇತಿ ॥೨॥

೨. ರೈಕ್ವನೆ , ಇವು ಆರುನೂರು ಗೋಗಳು, ಇದು ನಿಷ್ಕವು, ಇದು ಅಶ್ವತರೀರಥವು. ಭಗವಂತನೆ , ಯಾವ ದೇವತೆಯನ್ನು ನೀನು ಉಪಾಸನೆ ಮಾಡುತ್ತಿರುವೆಯೋ ಆ ದೇವತೆಯನ್ನು ನನಗೆ ತಿಳಿಸಿಕೊಡು.

ಕಾಣಿಕೆಯನ್ನು ಒಪ್ಪಿಸಿ ಉಪದೇಶವನ್ನು ಕೇಳಿಕೊಂಡದ್ದು

(ಭಾಷ್ಯ)

೨ಕ. ಹೇ ರೈಕ್ವ ಗವಾಂ ಷಟ್‌ಶತಾನಿ ಇಮಾನಿ ತುಭ್ಯಂ ಮಯಾ ಆನೀತಾನಿ ಅಯಂ ನಿಷ್ಕಃ ಅಶ್ವತರೀರಥಶ್ಚಾಯಮ್ , ಏತದ್ ಧನಮ್ ಆದತ್ಸ್ವ । ಭಗವಃ ಅನುಶಾಧಿ ಚ ಮೇ ಮಾಮ್ ಏತಾಮ್ ಯಾಂ ಚ ದೇವತಾಂ ತ್ವಮ್ ಉಪಾಸ್ಸೇ । ತದ್ದೇವತೋಪದೇಶೇನ ಮಾಮ್ ಅನುಶಾಧಿ ಇತ್ಯರ್ಥಃ॥

(ಭಾಷ್ಯಾರ್ಥ)

ಎಲೆ ರೈಕ್ವನೆ, (ಇಗೊ) ಇವು ನಿನಗಾಗಿ ನಾನು ತಂದಿರುವ ಆರುನೂರು ಗೋಗಳು ; ಇದು ನಿಷ್ಕವು, ಇದು ಹಾರವು, ಇದು ಹೇಸರುಕತ್ತೆಗಳ ರಥವು. ಈ ಧನವನ್ನು ತೆಗೆದುಕೊ ! ಪೂಜ್ಯನೆ, ನನಗೆ ನೀನು ಯಾವ ದೇವತೆಯನ್ನು ಉಪಾಸನೆಯನ್ನು ಮಾಡುತ್ತಿರುವೆಯೋ ಅದನ್ನು ತಿಳಿಸಿಕೊಡು. ಆ ದೇವತೆಯನ್ನು ಉಪದೇಶಿಸಿ ಅನುಶಾಸನಮಾಡು - ಎಂದರ್ಥ.

---

1. ಆ ಕ್ಷತ್ತೃವಚನವನ್ನು ಕೇಳಿದಾಗ ಎಂದರ್ಥ.

(ಉಪನಿಷತ್ತು)

ತಮು ಹ ಪರಃ ಪ್ರತ್ಯುವಾಚಾಹ ಹಾರೇತ್ವಾ ಶೂದ್ರ ತವೈವ ಸಹ ಗೋಭಿರಸ್ತ್ವಿತಿ ತದು ಹ ಪುನರೇವ ಜಾನಶ್ರುತಿಃ ಪೌತ್ರಾಯಣಃ ಸಹಸ್ರಂ ಗವಾಂ ನಿಷ್ಕಮಶ್ವತರೀರಥಂ ದುಹಿತರಂ ತದಾದಾಯ ಪ್ರತಿಚಕ್ರಮೇ ॥೩॥

೩. ಅವನಿಗೆ (ಆ) ಮತ್ತೊಬ್ಬನು ಪ್ರತಿಯಾಗಿ ಇಂತೆಂದನು : "ಆಹ, ಎಲಾ ಶೂದ್ರ ! ಗೋಗಳಿಂದೊಡಗೂಡಿದ ಹಾರೇತ್ವವು ನಿನಗೇ ಇರಲಿ !" ಅದನ್ನು (ಅರಿತು) ಜಾನಶ್ರುತಿಪೌತ್ರಾಯಣನು ಮತ್ತು ಗೋಸಹಸ್ರವನ್ನೂ ನಿಷ್ಕವನ್ನೂ ಅಶ್ವತರೀರಥವನ್ನೂ ಮಗಳನ್ನೂ ತೆಗೆದುಕೊಂಡು (ಅಲ್ಲಿಗೆ) ಹೊರಟನು.

ರೈಕ್ವನ ತಿರಸ್ಕಾರ, ರಾಜನು ಹೆಚ್ಚಿನ ಕಾಣಿಕೆಯನ್ನು ಒಪ್ಪಿಸಿದ್ದು

(ಭಾಷ್ಯ)

.೨೬. ತಮ್ ಏವಮುಕ್ತವನ್ತಂ ರಾಜಾನಂ ಪ್ರತ್ಯುವಾಚ ಪರೋ ರೈಕ್ವಃ । ಅಹ ಇತ್ಯಯಂ ನಿಪಾತೋ ವಿನಿಗ್ರಹಾರ್ಥೀಯೋಽನ್ಯತ್ರ । ಇಹ ತು ಅನರ್ಥಕಃ । ಏವಶಬ್ದಸ್ಯ ಪೃಥಕ್ ಪ್ರಯೋಗಾತ್ । ಹಾರೇತ್ವಾ ಹಾರೇಣ ಯುಕ್ತಾ ಇತ್ವಾ ಗನ್ತ್ರೀ ಸೇಯಂ ಹಾರೇತ್ವಾ ಗೋಭಿಃ ಸಹ ತವೈವಾಸ್ತು ತವೈವ ತಿಷ್ಠತು । ನ ಮಮ ಅಪರ್ಯಾಪ್ತೇನ ಕರ್ಮಾರ್ಥಮ್ ಅನೇನ ಪ್ರಯೋಜನಮ್ ಇತ್ಯಭಿಪ್ರಾಯಃ। ಹೇ ಶೂದ್ರ ಇತಿ। ನನು ರಾಜಾಸೌ ಕ್ಷತ್ತೃಸಂಬನ್ಧಾತ್ । ಸ ಹ ಕ್ಷತ್ತಾರಮ್ ಉವಾಚ ಇತ್ಯುಕ್ತಮ್ । ವಿದ್ಯಾಗ್ರಹಣಾಯ ಚ ಬ್ರಾಹ್ಮಣಸಮೀಪೋಪಗಮಾತ್ । ಶೂದ್ರಸ್ಯ ಚ ಅನಧಿಕಾರಾತ್ । ಕಥಮಿದಮ್ ಅನನುರೂಪಂ ರೈಕ್ವೇಣ ಉಚ್ಯತೇ ಹೇ ಶೂದ್ರ ಇತಿ ? ತತ್ರಾಹುರಾಚಾರ್ಯಾಃ । ಹಂಸವಚನಶ್ರವಣಾತ್ ಶುಕ್ ಏನಮ್ ಆವಿವೇಶ । ತೇನಾಸೌ ಶುಚಾ ಶ್ರುತ್ವಾ ರೈಕ್ವಸ್ಯ ಮಹಿಮಾನಂ ವಾ ಆದ್ರವತೀತಿ ಋಷಿಃ ಆತ್ಮನಃ ಪರೋಕ್ಷಜ್ಞತಾಂ ದರ್ಶಯನ್ ಶೂದ್ರ ಇತ್ಯಾಹೇತಿ । ಶೂದ್ರವದ್ ವಾ ಧನೇನೈವ ಏನಂ ವಿದ್ಯಾಗ್ರಹಣಾಯ ಉಪಜಗಾಮ ನ ಚ ಶುಶ್ರೂಷಯಾ । ನ ತು ಜಾತ್ಯೈವ ಶೂದ್ರಃ ಇತಿ । ಅಪರೇ ಪುನರಾಹುಃ ಅಲ್ಪಂ ಧನಮ್ ಆಹೃತಮಿತಿ ರುಷೈವ ಏನಮ್ ಉಕ್ತವಾನ್ ಶೂದ್ರ ಇತಿ। ಲಿಙ್ಗಂ ಚ ಬಹ್ವಾಹರಣೇ ಉಪಾದಾನಂ ಧನಸ್ಯೇತಿ। ತದು ಹ ಋಷೇರ್ಮತಂ ಜ್ಞಾತ್ವಾ ಪುನರೇವ ಜಾನಶ್ರುತಿಃ ಪೌತ್ರಾಯಣೋ ಗವಾಂ ಸಹಸ್ರಮ್

ಅಧಿಕಂ (?)[1] ಜಾಯಾಂ ಚ ಋಷೇರಭಿಮತಾಂ ದುಹಿತರಮ್ ಆತನಃ ತದಾದಾಯ ಪ್ರತಿಚಕ್ರಮೇ ಕ್ಯಾನ್ತವಾನ್ ॥

(ಭಾಷ್ಯಾರ್ಥ)

ಹೀಗೆ ಹೇಳಿದ ರಾಜನಿಗೆ (ಆ) ಮತ್ತೊಬ್ಬನಾದ ರೈಕ್ವನು ಪ್ರತಿಯಾಗಿ ಇಂತೆಂದನು. ಅಹ ಎಂಬ ನಿಪಾತಕ್ಕೆ ಮಿಕ್ಕಕಡೆಗಳಲ್ಲಿ ಅನಾದರವೆಂಬರ್ಥ(ವಿದೆ) : ಆದರೆ ಇಲ್ಲಿ (ಅದಕ್ಕೆ ಯಾವ) ಅರ್ಥವೂ ಇಲ್ಲ. ಏಕೆಂದರೆ (ಇಲ್ಲಿ ತವೈವ ಎಂದು) ಏವಶಬ್ದವನ್ನು ಬೇರೆಯಾಗಿ ಪ್ರಯೋಗಿಸಿದೆ.[2] ಹಾರೇತ್ವಾ ಎಂದರೆ ಹಾರದೊಡನೆ ಕೂಡಿರುವ ಇತ್ವಾ (ಅಥವಾ) ಬಂಡಿ. ಈ ಹಾರೇತ್ವವು ಗೋಗಳೊಡಗೂಡಿ ನಿನಗೇ ಇರಲಿ, ನಿನ್ನಲ್ಲಿಯೇ ಇದ್ದುಕೊಂಡಿರಲಿ ! ಕರ್ಮಕ್ಕೆ ಸಾಲದೆ ಇರುವ ಇದರಿಂದ ನನಗೆ ಯಾವ ಪ್ರಯೋಜನವೂ ಇಲ್ಲ ಎಂದು ಅಭಿಪ್ರಾಯ. ಎಲೈ ಶೂದ್ರನೆ, (ಎಂದು ಸಂಬೋಧನೆ).

(ಆಕ್ಷೇಪ) :- ಇವನು ರಾಜನಲ್ಲವೆ ? ಏಕೆಂದರೆ (ಇವನಿಗೆ) ಕ್ಷತ್ತೃಸಂಬಂಧ ವಿದೆ. "ಅವನು ಕ್ಷತ್ತೃವನ್ನು ಕುರಿತು ಇಂತೆಂದನು" (೪-೧-೫)[3] ಎಂದಲ್ಲವೆ, ಹೇಳಿದೆ. ವಿದ್ಯಾಗ್ರಹಣಕ್ಕಾಗಿ ಬ್ರಾಹ್ಮಣನ ಸಮೀಪಕ್ಕೆ ಹೋಗಿರುವದರಿಂದಲೂ, ಶೂದ್ರನಿಗೆ ಅಧಿಕಾರವಿಲ್ಲದ್ದರಿಂದಲೂ[4] (ಅವನು ಶೂದ್ರನಲ್ಲವೆಂದಾಗುತ್ತದೆ). ರೈಕ್ವನು 'ಎಲೆ ಶೂದ್ರ,' ಎಂದು ಅನನುಗುಣವಾಗಿ ಹೇಳಿರುವದು ಹೇಗೆ (ಸರಿ) ?

(ಪರಿಹಾರ) :- ಇದಕ್ಕೆ ಆಚಾರ್ಯರು[5] ಹೇಳಿರುವದೇನೆಂದರೆ, ಹಂಸ ವಚನವನ್ನು ಕೇಳಿದ್ದರಿಂದ ಇವನನ್ನು ಶೋಕವು ಆವರಿಸಿಕೊಂಡಿತು. ಆ ಶೋಕದಿಂದ (ಶುಚಾ) ರೈಕ್ವನ ಮಹಿಮೆಯನ್ನು ಕೇಳಿ ಹೋಗಿರುತ್ತಾನೆ (ದ್ರವತಿ), ಎಂದು ಋಷಿಯು

---

1. ಅನುವಾದದ ಟಿಪ್ಪಣಿಯನ್ನು ನೋಡಿ. 2. ನಿನಗೇ ಇರಲಿ, ನನಗೇನೂ ಬೇಡ- ಎಂದು ಏವಶಬ್ದದಿಂದಲೇ ವಿನಿಗ್ರಹವೆಂಬರ್ಥವನ್ನು ತಿಳಿಸಿರುವದರಿಂದ 'ಅಹ' ಎಂಬುದಕ್ಕೆ ಮತ್ತೆ ಆ ಅರ್ಥವನ್ನು ಕಲ್ಪಿಸಬೇಕಾಗಿಲ್ಲ. ಅಹ ಎಂಬುದಕ್ಕೆ ವಿನಿಗ್ರಹಾರ್ಥ ವೆಂಬುದಕ್ಕೆ ನಿರುಕ್ತ ೧-೨ನ್ನು ನೋಡಿ.
3. ಇದು ಶ್ರುತಿಯ ಅರ್ಥಮಾತ್ರ. 4. ಶೂದ್ರನು ಇಲ್ಲಿ ಪ್ರಕೃತನಾಗಿರುವದರಿಂದಲೂ ಎಂದು ಅರ್ಥವನ್ನು ಮಾಡಬಹುದು ; ವಿದ್ಯೆಗೆಂದು ಬ್ರಾಹಣನಲ್ಲಿಗೆ ಹೋಗುವವನು ಶೂದ್ರನಾಗಿರಲಾರನಾದ್ದರಿಂದಲೂ ಎಂಬುದು ಹಿಂದಿನ ವಿಶೇಷಣದಿಂದಲೇ ಸಿದ್ಧವಾಗುತ್ತದೆ. ಈಗ ನಾವು ಟೀಕೆಯಂತೆ ಕನ್ನಡಿಸಿರುತ್ತೇವೆ.
5. ಇವರೂ ದ್ರವಿಡಾಚಾರ್ಯರೇ ಇರಬಹುದೆ ? ೩-೮ರಿಂದ ೧೦ನೆಯ ಖಂಡಗಳ ಭಾಷ್ಯ (ಭಾ. ಭಾ. ೨೨೧)ವನ್ನು ನೋಡಿ.

ತನ್ನ ಪರೋಕ್ಷಜ್ಞತೆಯನ್ನು ತೋರಿಸುವದಕ್ಕಾಗಿ ಶೂದ್ರ ಎಂದನು. ಅಥವಾ ಶೂದ್ರನಂತೆ ಇವನನ್ನು ಧನದಿಂದಲೇ ವಿದ್ಯಾಗ್ರಹಣಕ್ಕಾಗಿ ಬಳಿಸಾರಿದನೇ ಹೊರತು ಶುಶ್ರೂಷೆಯಿಂದಲ್ಲ. ಇಷ್ಟೇ ಹೊರತು ಜಾತಿಯಿಂದಲೇ (ಇವನು) ಶೂದ್ರನೆಂದಲ್ಲ.[1] ಇನ್ನು ಕೆಲವರು ಹೇಳಿರುವದೇನೆಂದರೆ ಅಲ್ಪಧನವನ್ನು ತಂದನೆಂಬ ಸಿಟ್ಟಿನಿಂದಲೇ ಇವನನ್ನು ಶೂದ್ರನೆಂದನು ; ಬಹಳ ಧನವನ್ನು ತರುತ್ತಲೂ ತೆಗೆದುಕೊಂಡಿದ್ದು (ಇದಕ್ಕೆ) ಜ್ಞಾಪಕವು ಎಂದು (ಅವರ ಮತ).[2]

ಆ ಋಷಿಯ ಅಭಿಪ್ರಾಯವನ್ನು ಅರಿತುಕೊಂಡು ಮತ್ತೆ ಜಾನಶ್ರುತಿ ಪೌತ್ರಾಯಣನು ಸಾವಿರ ಗೋಗಳನ್ನೂ ಹೆಚ್ಚಾಗಿ[3] ಋಷಿಗೆ ಒಪ್ಪಾದ ಹೆಂಡತಿಯಾಗಿ ತನ್ನ ಮಗಳನ್ನೂ ಕೊಡಲು ಹೊರಟನು , (ಅವನ ಬಳಿಗೆ) ಬಂದನು.

(ಉಪನಿಷತ್ತು)

ತಗ್ಂ ಹಾಭ್ಯುವಾದ ರೈಕ್ವೇದಗ್ಂ ಸಹಸ್ರಂ ಗವಾಮಯಂ ನಿಷ್ಕೋಽಯಮಶ್ವತರೀರಥ ಇಯಂ ಜಾಯಾಯಂ ಗ್ರಾಮೋ ಯಸ್ಮಿನ್ನಾಸ್ಸೇಽನ್ವೇವ ಮಾ ಭಗವಃ ಶಾಧೀತಿ ॥೪॥

ತಸ್ಯಾ ಹ ಮುಖಮುಪೋದ್ಗೃಹ್ಯನ್ನುವಾಚಾಜಹಾರೇಮಾಃ ಶೂದ್ರಾನೇನೈವ ಮುಖೇನಾಲಾಪಯಿಷ್ಯಥಾ ಇತಿ ತೇ ಹೈತೇ ರೈಕ್ವಪರ್ಣಾ ನಾಮ ಮಹಾವೃಷೇಷು ಯತ್ರಾಸ್ಮಾ ಉವಾಸ ತಸ್ಮೈ[4] ಹೋವಾಚ ॥೫॥

೪. ಅವನನ್ನು ಕುರಿತು ಇಂತೆಂದನು : 'ರೈಕ್ವನೆ, ಇಗೊ ಇದು

1. ಸೂ. ಭಾ. ೧-೩-೩೪ (ಭಾ. ಭಾ. ೩೦೮)ರಲ್ಲಿ ಶುಚಮ್ ಅಭಿದುದ್ರಾವ, ಶುಚಾ ವಾ ಅಭಿದುದ್ರುವೇ, ಶುಚಾ ವಾ ರೈಕ್ವಮ್ ಅಭಿದುದ್ರಾವ- ಎಂದು ಮಾತ್ರ ವ್ಯುತ್ಪತ್ತಿಯನ್ನು ಬರೆದಿದೆ ; ಅಲ್ಲಿ ಎರಡನೆಯ ಅರ್ಥವನ್ನು ಬರೆದಿಲ್ಲ.
2. ಇವರು ಯಾರೆಂಬುದು ತಿಳಿಯಲಿಲ್ಲ. ರೈಕ್ವನಿಗೆ ರೋಷವುಂಟಾಯಿತೆಂಬುದು ಆಚಾರ್ಯರಿಗೆ ಅಸಮ್ಮತವಾಗಿದ್ದದ್ದರಿಂದ ಈ ಅಭಿಪ್ರಾಯವನ್ನು ಬೇರ್ಪಡಿಸಿ ಹೇಳಿರಬಹುದು.
3. ಈಗ ಗೋಗಳನ್ನು ಹೆಚ್ಚಾಗಿ ತಂದನು, ಹಾರವನ್ನೂ ರಥವನ್ನೂ ಮುನ್ನಿನಂತೆ ತಂದನು, ತನ್ನ ಮಗಳನ್ನೂ ರೈಕ್ವನ ಹೆಂಡತಿಯಾಗಲೆಂದು ಕರೆತಂದನು- ಎಂದರ್ಥ. ಮೂಲದಲ್ಲಿ 'ನಿಷ್ಕಮಶ್ವತರೀರಥಮ್' ಎಂಬ ಮಾತು ಬಿಟ್ಟುಹೋಗಿದೆಯೆಂದು ಕಾಣುತ್ತದೆ.
4. ಇಲ್ಲಿ "ಸ ತಸ್ಮೈ" ಎಂದು ವಾ॥ ಪಾಠದಲ್ಲಿದೆ.

ಗೋಸಹಸ್ರವು ; ಇದು ನಿಷ್ಕವು ; ಇದು ಅಶ್ವತರೀರಥವು ; ಇವಳು ಹೆಂಡತಿ ; ಇದು ನೀನು ಇರುವದಕ್ಕೆ ಗ್ರಾಮವು ; ಭಗವಂತನೆ , ನನಗೆ ಅನುಶಾಸನವನ್ನೇ ಮಾಡು !'

೫. ಆಕೆಯನ್ನು ಮುಖವಾಗಿ ಗ್ರಹಿಸಿ (ರೈಕ್ವನಿಂತೆಂದನು) : 'ಶೂದ್ರನೆ, ಇವುಗಳನ್ನು ತಂದಿರುವೆಯಲ್ಲ, ಈ ಮುಖದಿಂದಲೇ ಮಾತನಾಡಿಸುವೆ !' ಇವನು ವಾಸಮಾಡಿಕೊಂಡಿದ್ದನಲ್ಲ, ಆ ಇವು ಮಹಾವೃಷ(ದೇಶ)ದಲ್ಲಿ ರೈಕ್ವಪರ್ಣ ಎಂಬಿವು. ಅವನು ಅವನಿಗೆ ಇಂತೆಂದನು :

ರೈಕ್ವನು ಕಾಣಿಕೆಯನ್ನು ಒಪ್ಪಿ, ಉಪದೇಶಕ್ಕೆ ಮೊದಲುಮಾಡಿದ್ದು

(ಭಾಷ್ಯ)

೨೯. ರೈಕ್ವ, ಇದಂ ಗವಾಂ ಸಹಸ್ರಮ್, ಅಯಂ ನಿಷ್ಕಃ, ಅಯಮ್ ಅಶ್ವತರೀರಥಃ, ಇಯಂ ಜಾಯಾ ಜಾಯಾರ್ಥಂ ಮಮ ದುಹಿತಾ ಆನೀತಾ । ಅಯಂ ಚ ಗ್ರಾಮೋ ಯಸ್ಮಿನ್ ಆಸ್ಸೇ ತಿಷ್ಠಸಿ । ಸ ಚ ತ್ವದರ್ಥೇ ಮಯಾ ಕಲ್ಪಿತಃ । ತದೇತತ್ ಸರ್ವಮ್ ಆದಾಯ ಅನುಶಾಧ್ಯೇವ ಮಾ ಮಾಂ ಹೇ ಭಗವಃ । ಇತ್ಯುಕ್ತಃ ತಸ್ಯಾ ಜಾಯಾರ್ಥಮ್ ಆನೀತಾಯಾಃ ರಾಜ್ಞೋ ದುಹಿತುಃ ಹ ಏವ ಮುಖಂ ದ್ವಾರಂ ವಿದ್ಯಾಯಾ ದಾನೇ ತೀರ್ಥಮ್ ಉಪೋದ್ಗೃಹ್ಣನ್ ಜಾನನ್ ಇತ್ಯರ್ಥಃ । ''ಬ್ರಹ್ಮಚಾರೀ ಧನದಾಯಾ ಮೇಧಾವೀ ಶ್ರೋತ್ರಿಯಃ ಪ್ರಿಯಃ । ವಿದ್ಯಯಾ ವಾ ವಿದ್ಯಾಂ ಪ್ರಾಹ ತಾನಿ ತೀರ್ಥಾನಿ ಷಣ್ಮಮ ॥'' (?) ಇತಿ ವಿದ್ಯಾಯಾ ವಚನಂ ವಿಜ್ಞಾಯತೇ ಹಿ । ಏವಂ ಜಾನನ್ ಉಪೋದ್ಗೃಹ್ಣನ್ ಉವಾಚ ಉಕ್ತವಾನ್ । ಆಜಹಾರ ಆಹೃತವಾನ್ ಭವಾನ್ ಯತ್ ಇಮಾ ಗಾಃ ಯಚ್ಚ ಅನ್ಯದ್ ಧನಂ ತತ್ಸಾಧು ಇತಿ ವಾಕ್ಯಶೇಷಃ । ಶೂದ್ರ ಇತಿ ಪೂರ್ವೋಕ್ತಾನುಕೃತಿಮಾತ್ರಂ ನ ತು ಕಾರಣಾನ್ತರಾಪೇಕ್ಷಯಾ ಪೂರ್ವವತ್ । ಅನೇನೈವ ಮುಖೇನ ವಿದ್ಯಾಗ್ರಹಣತೀರ್ಥೇನ ಆಲಾಪಯಿಷ್ಯಥಾಃ ಆಲಾಪಯಸಿ ಇತಿ । ಮಾಂ ಭಾಣಯಸೀತ್ಯರ್ಥಃ । ತೇ ಹ ಏತೇ ಗ್ರಾಮಾಃ ರೈಕ್ವಪರ್ಣಾ ನಾಮ ವಿಖ್ಯಾತಾ ಮಹಾವೃಷೇಷು ದೇಶೇಷು ಯತ್ರ ಯೇಷು ಗ್ರಾಮೇಷು ಉವಾಸ ಉಷಿತವಾನ್ ರೈಕ್ವಃ । ತಾನಸೌ ಗ್ರಾಮಾನ್ ಅದಾತ್ ಆಸ್ಮೈ ರೈಕ್ವಾಯ ರಾಜಾ । ತಸ್ಮೈ ರಾಜ್ಞೇ ಧನಂ ದತ್ತವತೇ ಹ ಕಿಲ ಉವಾಚ ವಿದ್ಯಾಂ ಸ ರೈಕ್ವಃ ॥

(ಭಾಷ್ಯಾರ್ಥ)

ರೈಕ್ವನೆ, ಇದು ಗೋಸಹಸ್ರವು, ಇದು ನಿಷ್ಕವು, ಇದು ಅಶ್ವತರೀರಥವು ; ಈಕೆಯು (ನಿನ್ನ) ಹೆಂಡತಿಯಾಗಲೆಂದು (ನಾನು) ಕರೆತಂದಿರುವ ನನ್ನ ಮಗಳು. ಈ ನೀನು ಇರುವೆಯಲ್ಲ, ಇದ್ದುಕೊಂಡಿರುವೆಯಲ್ಲ, ಇದು ಗ್ರಾಮವು ; ಇದನ್ನು ನಿನಗಾಗಿ ನಾನು ಏರ್ಪಡಿಸಿರುವೆನು. ಇದೆಲ್ಲವನ್ನೂ ತೆಗೆದುಕೊಂಡು, ಎಲೈ ಭಗವಂತನೆ, ನನಗೆ ಅನುಶಾಸನವನ್ನೇ ಮಾಡು !

ಹೀಗೆನ್ನಲು ಹೆಂಡತಿಯಾಗಲೆಂದು ಕರೆತಂದಿದ್ದ ಆ ರಾಜನ ಮಗಳನ್ನು ಮುಖವೆಂದು ವಿದ್ಯಾದಾನಕ್ಕೆ ದ್ವಾರವೆಂದು ತೀರ್ಥವೆಂದು ಗ್ರಹಿಸಿ ಅರಿತುಕೊಂಡು ಎಂದರ್ಥ. ''ಬ್ರಹ್ಮಚಾರಿಯು, ಧನವನ್ನು ಕೊಟ್ಟವನು, ಮೇಧಾವಿಯು, ಶ್ರೋತ್ರಿಯನು, ಪ್ರಿಯನು, ಅಥವಾ ವಿದ್ಯೆಗೆ ಬದಲಾಗಿ ವಿದ್ಯೆಯನ್ನು ಹೇಳಿಕೊಡುವವನು- ಇವು ಆರೂ ನನಗೆ ತೀರ್ಥಗಳು'' (?....) ಎಂಬ ವಿದ್ಯೆಯ ವಚನವು ತಿಳಿದುಬರುತ್ತಿದೆಯಲ್ಲವೆ ?[1] ಹೀಗೆಂದು ಗ್ರಹಿಸಿಕೊಂಡು ತಿಳಿದುಕೊಂಡು ಇಂತೆಂದನು, ಹೀಗೆಂದನು : ''ಈ ಗೋಗಳನ್ನೂ ಮಿಕ್ಕಧನವನ್ನೂ ನೀನು (ಆಜಹಾರ = ಆಹೃತವಾನ್) ತಂದಿರುವೆಯಲ್ಲ, ಆದು ಒಳ್ಳೆಯದಾಯಿತು- ಎಂದು ವಾಕ್ಯಶೇಷವು. 'ಶೂದ್ರನೆ,' ಎಂದಿರುವದು ಹಿಂದೆ ಹೇಳಿದ್ದರ ಅನುಕರಣವೇ ಹೊರತು ಹಿಂದಿನಂತೆ ಮತ್ತೊಂದು ಕಾರಣದಿಂದ (ಹೇಳಿ)ದ್ದಲ್ಲ. ಇದೇ ಮುಖದಿಂದಲೇ ವಿದ್ಯಾಗ್ರಹಣತೀರ್ಥದಿಂದ ಮಾತನಾಡಿಸುವೆ, ಮಾತನಾಡಿಸುತ್ತಿದ್ದೀಯೆ, ನನ್ನನ್ನು ಮಾತನಾಡುವಂತೆ ಮಾಡಿದ್ದೀಯೆ''ಎಂದರ್ಥ.

ಯಾವ ಗ್ರಾಮಗಳಲ್ಲಿ[2] ರೈಕ್ವನು ವಾಸವಾಗಿದ್ದನೋ, ಆ ಈ ಗ್ರಾಮಗಳು ಮಹಾವೃಷದೇಶದಲ್ಲಿ ರೈಕ್ವಪರ್ಣಗಳೆಂದು ವಿಖ್ಯಾತವಾಗಿವೆ. ಅವನ್ನು ರಾಜನು ಈ ರೈಕ್ವನಿಗೆ ಕೊಟ್ಟನು. (ಹೀಗೆ) ಧನವನ್ನು ಕೊಟ್ಟ ಆ ರಾಜನಿಗೆ ಆ ರೈಕ್ವನು ವಿದ್ಯೆಯನ್ನು ಹೇಳಿದನಂತೆ.

1. ತೀರ್ಥಗಳು ಎಂದರೆ ವಿದ್ಯಾದಾನಕ್ಕೆ ದ್ವಾರಗಳು. ಇಲ್ಲಿ ಹೇಳಿರುವ ವಚನವು ಎಲ್ಲಿದೆಯೋ ತಿಳಿಯದು. 'ವಿಜ್ಞಾಯತೇ'ಎಂಬ ಮಾತನ್ನು ಶ್ರುತಿಯ ವಾಕ್ಯದ ಅನುವಾದದಲ್ಲಿ ಹೇಳುವ ರೂಢಿಯಿದೆ.

2. ಹಿಂದೆ 'ಗ್ರಾಮಃ' ಎಂದು ಒಂದೇ ಗ್ರಾಮವನ್ನು ಹೇಳಿದೆ ; ಇಲ್ಲಿ ರೈಕ್ವಪರ್ಣಗಳೆಂಬ ಗ್ರಾಮಗಳು ಎಂದಿದೆ. ರೈಕ್ವನಿಗೆ ಬಹಳ ಗ್ರಾಮಗಳನ್ನು ಕೊಟ್ಟಿದ್ದರೂ 'ಇದು'(ಅಯಮ್) ಎಂದು ಏಕೆ ಏಕವಚನವನ್ನೇ ಪ್ರಯೋಗಿಸಿದನು ?- ಎಂಬುದು ವಿಚಾರಣೀಯವಾಗಿದೆ.

ನಾಲ್ಕನೆಯ ಅಧ್ಯಾಯ - ಮೂರನೆಯ ಖಂಡ

(ಸಂವರ್ಗವಿದ್ಯೆ)

ಅಧಿದೈವತಸಂವರ್ಗ

(ಉಪನಿಷತ್ತು)

ವಾಯುರ್ವಾವ ಸಂವರ್ಗೋ ಯದಾ ವಾ ಅಗ್ನಿರುದ್ವಾಯತಿ ವಾಯುಮೇವಾಪ್ಯೇತಿ ಯದಾ ಸೂರ್ಯೋಽಸ್ತಮೇತಿ ವಾಯುಮೇವಾಪ್ಯೇತಿ ಯದಾ ಚನ್ದ್ರೋಽಸ್ತಮೇತಿ ವಾಯುಮೇವಾಪ್ಯೇತಿ ॥೧॥

ಯದಾಪ ಉಚ್ಛುಷ್ಯನ್ತಿ ವಾಯುಮೇವಾಪಿ ಯನ್ತಿ । ವಾಯುರ್ಹ್ಯೇವೈತಾನ್ ಸರ್ವಾನ್ ಸಂವೃಙ್ಕ್ತ ಇತ್ಯಧಿದೈವತಮ್ ॥೨॥

೧. ವಾಯುವೇ ಸಂವರ್ಗವು. ಯಾವಾಗ ಅಗ್ನಿಯು ಹೊರಟುಹೋಗುತ್ತದೆಯೋ (ಆಗ) ವಾಯುವನ್ನೇ ಸೇರಿಕೊಳ್ಳುತ್ತದೆ. ಯಾವಾಗ ಸೂರ್ಯನು ಅಸ್ತವನ್ನು ಹೊಂದುತ್ತಾನೋ (ಆಗ) ವಾಯುವನ್ನೇ ಸೇರಿಕೊಳ್ಳುತ್ತಾನೆ. ಯಾವಾಗ ಚಂದ್ರನು ಅಸ್ತವಾಗುತ್ತಾನೋ (ಆಗ) ವಾಯುವನ್ನೇ ಸೇರಿಕೊಳ್ಳುತ್ತಾನೆ.

೨. ಯಾವಾಗ ಅಪ್ಪು ಉಚ್ಛೋಷವಾಗುವದೋ (ಆಗ) ವಾಯುವನ್ನೇ ಸೇರಿಕೊಳ್ಳುತ್ತವೆ. ವಾಯುವೇ ಅಲ್ಲವೆ, ಇವೆಲ್ಲವನ್ನೂ ಒಳಗೊಳ್ಳುತ್ತದೆ ? ಇದು ಅಧಿದೈವತವು.

ವಾಯುವೇ ಅಧಿದೈವತಸಂವರ್ಗವು

(ಭಾಷ್ಯ)

೨೯೯. ವಾಯುರ್ವಾವ ಸಂವರ್ಗಃ । ವಾಯುರ್ಬಾಹ್ಯಃ ವಾವ ಇತಿ ಅವಧಾರಣಾರ್ಥಃ। ಸಂವರ್ಗಃ ಸಂವರ್ಜನಾತ್ , ಸಂಗ್ರಹಣಾತ್ , ಸಂಗ್ರಸನಾದ್ ವಾ ಸಂವರ್ಗಃ[1] । ವಕ್ಷ್ಯಮಾಣಾ ಅಗ್ನ್ಯಾದ್ಯಾ ದೇವತಾ ಆತ್ಮಭಾವಮ್ ಆಪಾದಯತಿ ಇತ್ಯತಃ

1. ಸಂವರ್ಗಃ ಎಂದು ಮತ್ತೆ ಇಲ್ಲಿ ಬರೆದಿರುವದು ಬೇಕಿಲ್ಲವೆಂದು ತೋರುತ್ತದೆ. ಭಾಮತೀವ್ಯಾಖ್ಯಾನದಲ್ಲಿ (ಸೂ. ಭಾ. ೧-೧-೪) 'ಯಥಾ ಹ ದ್ರವಿಡಾಚಾರ್ಯಃ →

ಸಂವರ್ಗಃ । ಸಂವರ್ಜನಾತ್ಸೋ ಗುಣೋ ಧ್ಯೇಯಃ , ವಾಯುವತ್[1] । ಕೃತಾಯಾನ್ತರ್ಭಾವದೃಷ್ಟಾನ್ತಾತ್ । ಕಥಂ ಸಂವರ್ಗತ್ವಂ ವಾಯೋರಿತಿ ? ಆಹ । ಯದಾ ಯಸ್ಮಿನ್ ಕಾಲೇ ವಾ ಅಗ್ನಿಃ ಉದ್ವಾಯತಿ, ಉದ್ವಾಸನಂ ಪ್ರಾಪ್ನೋತಿ, ಉಪಶಾಮ್ಯತಿ, ತದಾ ಅಸೌ ಅಗ್ನಿಃ ವಾಯುಮೇವ ಅಪ್ಯೇತಿ, ವಾಯುಸ್ವಾಭಾವ್ಯಮ್ ಅಪಿಗಚ್ಛತಿ । ತಥಾ ಯದಾ ಸೂರ್ಯಃ ಅಸ್ತಮೇತಿ ವಾಯುಮೇವ ಅಪ್ಯೇತಿ । ಯದಾ ಚನ್ದ್ರಃ ಅಸ್ತಮೇತಿ ವಾಯುಮೇವ ಅಪ್ಯೇತಿ । ನನು ಕಥಂ ಸೂರ್ಯಾಚನ್ದ್ರಮಸೋಃ ಸ್ವರೂಪಾವಸ್ಥಿತಯೋರ್ವಾಯಾವಪಿಗಮನಮ್ ? ನೈಷ ದೋಷಃ । ಅಸ್ತಮನೇ ಅದರ್ಶನಪ್ರಾಪ್ತೇರ್ವಾಯುನಿಮಿತ್ತತ್ವಾತ್ । ವಾಯುನಾ ಹಿ ಅಸ್ತಂ ನೀಯತೇ ಸೂರ್ಯಃ । ಚಲನಸ್ಯ ವಾಯುಕಾರ್ಯತ್ವಾತ್ । ಅಥವಾ ಪ್ರಲಯೇ ಸೂರ್ಯಾಚನ್ದ್ರಮಸೋಃ ಸ್ವರೂಪಭ್ರಂಶೇ ತೇಜೋರೂಪಯೋರ್ವಾಯಾವೇವ ಅಪಿಗಮನಂ ಸ್ಯಾತ್ । ತಥಾ ಯದಾ ಆಪ ಉಚ್ಛ್ವಷ್ಯನ್ತಿ ಉಚ್ಛ್ವೋಷಮ್ ಅಪ್ನುವನ್ತಿ ತದಾ ವಾಯುಮೇವ ಅಪಿಯನ್ತಿ । ವಾಯುರ್ಹಿ ಯಸ್ಮಾದೇವ ಏತಾನ್ ಅಗ್ನ್ಯಾದೀನ್ ಮಹಾಬಲಾನ್ ಸಂವೃಙ್ಕ್ತೇ । ಅತೋ ವಾಯುಃ ಸಂವರ್ಗಗುಣಃ ಉಪಾಸ್ಯಃ ಇತ್ಯರ್ಥಃ ಇತ್ಯಧಿದೈವತಂ ದೇವತಾಸು ಸಂವರ್ಗದರ್ಶನಮ್ ಉಕ್ತಮ್ ॥

(ಭಾಷ್ಯಾರ್ಥ)

ವಾಯುವೇ ಸಂವರ್ಗವು. ವಾಯು ಎಂದರೆ ಹೊರಗಿನ (ವಾಯು). ವಾವ ಎಂಬುದು ಅವಧಾರಣೆಗಾಗಿ (ಬಂದಿದೆ). ಒಳಗೊಳ್ಳುವದರಿಂದ ಎಂದರೆ ಒಳಕ್ಕೆ ತೆಗೆದುಕೊಳ್ಳುವದರಿಂದ , ಅಥವಾ ಚೆನ್ನಾಗಿ ನುಂಗುವದರಿಂದ ಸಂವರ್ಗ(ವೆನಿಸಿದೆ). ಮುಂದೆ ಹೇಳಲಾಗುವ ಅಗ್ನಿಯೇ ಮುಂತಾದ ದೇವತೆಗಳನ್ನು ತನ್ನ ರೂಪಕ್ಕೆ ತಿರುಗಿಸಿಕೊಳ್ಳುವದರಿಂದ (ಇದು) ಸಂವರ್ಗವು.[2] ಸಂವರ್ಜನ (ಒಳಗೊಳ್ಳುವದು) ಎಂಬ ಗುಣವನ್ನೂ ವಾಯುವಿನಂತೆ ಧ್ಯಾನಮಾಡಬೇಕು.[3] ಕೃತಾಯದಲ್ಲಿ (ಮಿಕ್ಕ

ಸಂಹರಣಾದ್ವಾ ಸಂವರಣಾದ್ವಾ ಸಾತೀಭಾವಾದ್ ವಾಯುಃ ಸಂವರ್ಗಃ'ಎಂಬ ಉದಾಹರಣೆಯಿದೆ. ಇಲ್ಲಿರುವದು ಆಚಾರ್ಯರು ದ್ರವಿಡಾಚಾರ್ಯರ ಅಭಿಪ್ರಾಯವನ್ನು ಮಾತ್ರ ಬರೆದದ್ದಾಗಿರಬಹುದು.

1. 'ವಾಯೋಃ' ಎಂದು ವಾ॥ ಅ॥ ಪಾಠ, 'ವಾಯೋಃ'ಎಂಬ ಪಾಠಕ್ಕೆ ಮುಂದಿನ ಸಂವರ್ಗವೆಂಬ ಗುಣವನ್ನು ಧ್ಯಾನಮಾಡಬೇಕು- ಎಂದು ಅರ್ಥ.

2. ಇದು ಸಂಗ್ರಹಣಪಕ್ಷವೆಂದು ಆ॥ ಗಿ॥ ಟೀಕೆ ; ಸಂವರ್ಗ ಎಂಬಲ್ಲಿ ಸಂಪೂರ್ವಕವಾದ ಧಾತುವಿಗೆ ಸಂಗ್ರಹಣವೆಂದೋ ಸಂಗ್ರಸನವೆಂದೋ ಅರ್ಥವೆಂದಿಷ್ಟೇ ಭಾಷ್ಯಕಾರರ ಅಭಿಪ್ರಾಯವೆಂದು ತೋರುತ್ತದೆ ; ಇಲ್ಲಿ ಎರಡು ಬೇರೆಬೇರೆಯ ಪಕ್ಷಗಳಿರುವಂತೆ ಕಾಣುವದಿಲ್ಲ. 3. ವಾಯುವನ್ನು ಸಂವರ್ಗಗುಣಯುಕ್ತವೆಂದು ಧ್ಯಾನಿಸಬೇಕು ಎಂದರ್ಥ.

ಗರಗಳು) ಅಡಕವಾಗುವವೆಂಬ ದೃಷ್ಟಾಂತವನ್ನು ಕೊಟ್ಟಿರುವದರಿಂದ (ಹೀಗೆಂದು ಏರ್ಪಡುತ್ತದೆ).[1] ವಾಯುವು ಸಂವರ್ಗವೆಂಬುದು ಹೇಗೆ ? ಎಂದರೆ ಹೇಳುತ್ತಾನೆ.[2] ಯಾವಾಗ ಯಾವ ಕಾಲಕ್ಕೆ ಅಗ್ನಿಯು ಹೊರಟುಹೋಗುತ್ತದೆಯೋ, ಎಂದರೆ ಉಪಶಾಂತವಾಗುತ್ತದೆಯೋ, ಆಗ ಈ ಅಗ್ನಿಯು ವಾಯುವನ್ನೇ ಸೇರಿಕೊಳ್ಳುತ್ತದೆ, ವಾಯುವಿನ ಸ್ವಭಾವವನ್ನು ಹೊಂದುತ್ತದೆ. ಇದರಂತೆ ಯಾವಾಗ ಸೂರ್ಯನು ಅಸ್ತವಾಗುತ್ತಾನೋ (ಆಗ) ವಾಯುವನ್ನೇ ಸೇರಿಕೊಳ್ಳುತ್ತಾನೆ ; ಯಾವಾಗ ಚಂದ್ರನು ಅಸ್ತವಾಗುತ್ತಾನೋ (ಆಗ) ವಾಯುವನ್ನೇ ಸೇರಿಕೊಳ್ಳುತ್ತಾನೆ.

(ಆಕ್ಷೇಪ) :- ಸೂರ್ಯಚಂದ್ರರುಗಳು ತಮ್ಮತಮ್ಮ ರೂಪದಿಂದಲೇ ಇರುತ್ತಿರುವಲ್ಲಿ ಅವರಿಬ್ಬರಿಗೂ ವಾಯುವಿನಲ್ಲಿಯೇ ಲಯವೆಂದು (ಹೇಳಿದ್ದು) ಹೇಗೆ (ಸರಿ) ?

(ಪರಿಹಾರ) :- ಇದೇನೂ ತಪ್ಪಲ್ಲ. ಏಕೆಂದರೆ ಅಸ್ತವಾದಾಗ ಕಾಣದೆ ಇರುವದು ವಾಯುನಿಮಿತ್ತದಿಂದ. (ಇದರ ವಿವರ) : ವಾಯುವಿನಿಂದಲೇ ಸೂರ್ಯನು ಅಸ್ತವಾಗಿಸಲ್ಪಡುತ್ತಾನೆ ; ಏಕೆಂದರೆ ಚಲನವು ವಾಯುವಿನ ಕಾರ್ಯವಾಗಿದೆ.[3] ಅಥವಾ ಪ್ರಲಯದಲ್ಲಿ ಚಂದ್ರಸೂರ್ಯರುಗಳ ಸ್ವರೂಪವು ನಾಶವಾಗುವಾಗ ತೇಜೋರೂಪರಾದ (ಅವರಿಗೆ) ವಾಯುವಿನಲ್ಲಿಯೇ ಪ್ರಲಯವಾಗುವದು.[4]

ಇದರಂತೆ ಯಾವಾಗ ಅಪ್ಪು ಉಚ್ಛ್ವೋಷವಾಗುವದೋ ಒಣಗಿಹೋಗುವದೋ ಆಗ (ಅದು) ವಾಯುವನ್ನೇ ಸೇರಿಕೊಳ್ಳುತ್ತದೆ. (ಹಿ = ಯಸ್ಮಾತ್) ವಾಯುವೇ ಅಲ್ಲವೆ, ಈ ಮಹಾಬಲಶಾಲಿಗಳಾದ ಅಗ್ನ್ಯಾದಿಗಳನ್ನು ಒಳಗೊಳ್ಳುತ್ತದೆ ! ಆದ್ದರಿಂದ ವಾಯುವು ಸಂವರ್ಗವೆಂಬ ಗುಣವುಳ್ಳದ್ದು ಎಂದು ಉಪಾಸನೆ ಮಾಡಬೇಕು ಎಂದರ್ಥ. ಇದು ಅಧಿದೈವತವು. ದೇವತೆಗಳ ವಿಷಯದಲ್ಲಿ ಸಂವರ್ಗದರ್ಶನವನ್ನು ಹೇಳಿದ್ದಾಯಿತು.

1. ಸಂವರ್ಗವಿದ್ಯೆಯುಳ್ಳ ಉಪಾಸಕನಿಗೆ ಮಿಕ್ಕ ಫಲವೆಲ್ಲವೂ ಸೇರುವದೆಂಬುದಕ್ಕೆ ಈ ದೃಷ್ಟಾಂತವನ್ನು ಕೊಟ್ಟಿರುವದರಿಂದ ವಾಯುವಿನಲ್ಲಿ ಎಲ್ಲಾ ದೇವತೆಗಳೂ ಸೇರಿರುವರೆಂದು ಉಪಾಸನೆಮಾಡಬೇಕೆಂದು ಹೇಳಿದಂತೆ ಆಯಿತು ಎಂದರ್ಥ.
2. ಸಂಗ್ರಸನಾದ್ವಾ ಎಂಬುದಕ್ಕೆ ಈ ಅಭಿಪ್ರಾಯವನ್ನು ಇಲ್ಲಿ ತಿಳಿಸಿದೆ ಎಂದು ಟೀಕೆ. ಹೀಗೆ ಪಕ್ಷಭೇದವನ್ನು ಕಲ್ಪಿಸುವದಕ್ಕೆ ಭಾಷ್ಯದಲ್ಲಿ ಗಮಕವೇನೂ ಕಾಣುವದಿಲ್ಲ.
3. ಚಲನವಿಲ್ಲದೆ ಉದಯಾಸ್ತಗಳಿಲ್ಲವಾದ್ದರಿಂದ ಸೂರ್ಯಚಂದ್ರರು ಅಸ್ತವಾಗುವದು ವಾಯುವಿನ ವಶವೆಂದು ಹೇಳಿದೆ ಎಂದು ಭಾವ.
4. ಹಿಂದಿನ ವ್ಯಾಖ್ಯಾನದಲ್ಲಿ ಗೌಣಲಯವನ್ನು ಹೇಳಿತ್ತು ; ಇಲ್ಲಿ ಮುಖ್ಯಲಯವನ್ನು ಹೇಳಿದೆ. ವಿದ್ಯುದ್ವೃಷ್ಟಿಚಂದ್ರಸೂರ್ಯಾಗ್ನಿಗಳು ವಾಯುವಿನಲ್ಲಿ ಲಯವಾಗುವ ಕ್ರಮವನ್ನು ಐ.ಬ್ರಾ. ೪-೫ರಲ್ಲಿ ವರ್ಣಿಸಿರುವದನ್ನು ನೋಡಿ.

ಅಧ್ಯಾತ್ಮಸಂವರ್ಗ

(ಉಪನಿಷತ್ತು)

ಅಥಾಧ್ಯಾತ್ಮಂ ಪ್ರಾಣೋ ವಾವ ಸಂವರ್ಗಃ ಸ ಯದಾ ಸ್ವಪಿತಿ ಪ್ರಾಣಮೇವ ವಾಗಪ್ಯೇತಿ ಪ್ರಾಣಂ ಚಕ್ಷುಃ ಪ್ರಾಣಗ್ಂ ಶ್ರೋತ್ರಂ ಪ್ರಾಣಂ ಮನಃ ಪ್ರಾಣೋ ಹ್ಯೇವೈತಾನ್ ಸರ್ವಾನ್ ಸಂವೃಙ್ಙ್ತ ಇತಿ ॥೩॥

೩. ಇನ್ನು ಅಧ್ಯಾತ್ಮವು. ಪ್ರಾಣವೇ ಸಂವರ್ಗವು. ಅವನು ಯಾವಾಗ ನಿದ್ರೆಯನ್ನು ಮಾಡುವನೋ ಆಗ ಪ್ರಾಣವನ್ನೇ ವಾಕ್ಕು ಸೇರಿಕೊಳ್ಳುತ್ತದೆ ; ಪ್ರಾಣವನ್ನೇ ಚಕ್ಷುಸ್ಸು (ಸೇರಿಕೊಳ್ಳುತ್ತದೆ) ; ಪ್ರಾಣವನ್ನೇ ಶ್ರೋತ್ರವು (ಸೇರಿಕೊಳ್ಳುತ್ತದೆ) , ಪ್ರಾಣವನ್ನೇ ಮನಸ್ಸು (ಸೇರಿಕೊಳ್ಳುತ್ತದೆ). ಪ್ರಾಣವೇ ಅಲ್ಲವೆ , ಇವೆಲ್ಲವನ್ನೂ ಒಳಗೊಳ್ಳುತ್ತದೆ ?

ಪ್ರಾಣವೇ ಅಧ್ಯಾತ್ಮಸಂವರ್ಗ

(ಭಾಷ್ಯ)

೩೦೦. ಅಥ ಅನನ್ತರಮ್ ಅಧ್ಯಾತ್ಮಮ್ ಆತ್ಮನಿ ಸಂವರ್ಗದರ್ಶನಮ್ ಇದಮುಚ್ಯತೇ । ಪ್ರಾಣೋ ಮುಖ್ಯಃ ವಾವ ಸಂವರ್ಗಃ । ಸ ಪುರುಷಃ ಯದಾ ಯಸ್ಮಿನ್ ಕಾಲೇ ಸ್ವಪಿತಿ ತದಾ ಪ್ರಾಣಮೇವ ವಾಕ್ ಅಪ್ಯೇತಿ ವಾಯುಮಿವ ಅಗ್ನಿಃ । ಪ್ರಾಣಂ ಚಕ್ಷುಃ , ಪ್ರಾಣಂ ಶ್ರೋತ್ರಂ , ಪ್ರಾಣಂ ಮನಃ । ಪ್ರಾಣೋ ಹಿ ಯಸ್ಮಾತ್ ಏವ ಏತಾನ್ ವಾಗಾದೀನ್ ಸರ್ವಾನ್ ಸಂವೃಙ್ಙ್ತ ಇತಿ ॥

(ಭಾಷ್ಯಾರ್ಥ)

ಇನ್ನು (ಅಧಿದೈವತವಾದ) ಬಳಿಕ ಅಧ್ಯಾತ್ಮವಾಗಿ ತನ್ನೊಳಗಿನ ವಿಷಯದಲ್ಲಿ ಈ ಸಂವರ್ಗದರ್ಶನವನ್ನು ಹೇಳಲಾಗುವದು. ಮುಖ್ಯಪ್ರಾಣವೇ ಸಂವರ್ಗವು. ಅವನು ಎಂದರೆ ಪುರುಷನು ಯಾವಾಗ ಯಾವ ಕಾಲದಲ್ಲಿ ನಿದ್ರಿಸುವನೋ ಆಗ ಪ್ರಾಣವನ್ನೇ ವಾಕ್ಕು ಸೇರಿಕೊಳ್ಳುವದು, ವಾಯುವನ್ನು ಅಗ್ನಿಯು ಹೇಗೆ (ಸೇರುವನೋ ಹಾಗೆ), ಪ್ರಾಣವನ್ನೇ ಚಕ್ಷುಸ್ಸು, ಪ್ರಾಣವನ್ನೇ ಶ್ರೋತ್ರವು, ಪ್ರಾಣವನ್ನೇ ಮನಸ್ಸು. (ಹಿ = ಯಸ್ಮಾತ್) ಪ್ರಾಣವೇ ಅಲ್ಲವೆ, ಈ ವಾಗಾದಿಗಳನ್ನೆಲ್ಲ ಒಳಗೊಳ್ಳುತ್ತದೆ ?

ಸಂವರ್ಗವಿದ್ಯೆಯ ಉಪಸಂಹಾರ

(ಉಪನಿಷತ್ತು)

ತೌ ವಾ ಏತೌ ದ್ವೌ ಸಂವರ್ಗೌ ವಾಯುರೇವ ದೇವೇಷು ಪ್ರಾಣಃ ಪ್ರಾಣೇಷು ॥೪॥

೪. ಆ ಈ ಎರಡು ಸಂವರ್ಗಗಳು, ವಾಯುವೇ ದೇವತೆಗಳಲ್ಲಿ, ಪ್ರಾಣವೇ ಪ್ರಾಣಗಳಲ್ಲಿ.

ವಾಯುಪ್ರಾಣಗಳನ್ನು ಸಂವರ್ಗವೆಂದು ಉಪಾಸನೆಮಾಡಬೇಕು

(ಭಾಷ್ಯ)

೩೦೧. ತೌ ವಾ ಏತೌ ದ್ವೌ ಸಂವರ್ಗೌ ಸಂವರ್ಜನಗುಣೌ । ವಾಯುರೇವ ದೇವೇಷು ಸಂವರ್ಗಃ, ಪ್ರಾಣಃ ಪ್ರಾಣೇಷು ವಾಗಾದಿಷು ಮುಖ್ಯಃ ॥

(ಭಾಷ್ಯಾರ್ಥ)

ಈ ಎರಡೂ ಸಂವರ್ಗಗಳು, ಸಂವರ್ಜನವೆಂಬ ಗುಣವುಳ್ಳವು, ವಾಯುವೇ ದೇವತೆಗಳೊಳಗೆ ಸಂವರ್ಗವು ; ಮುಖ್ಯಪ್ರಾಣವೇ ಪ್ರಾಣಗಳಲ್ಲಿ, ವಾಗಾದಿಗಳಲ್ಲಿ (ಸಂವರ್ಗವು).[1]

ವಾಯುಪ್ರಾಣಗಳ ಸ್ತುತಿಗಾಗಿ ಕಥೆ

(ಉಪನಿಷತ್ತು)

ಅಥ ಹ ಶೌನಕಂ ಚ ಕಾಪೇಯಮಭಿಪ್ರತಾರಿಣಂ ಚ ಕಾಕ್ಷಸೇನಿಂ ಪರಿವಿಷ್ಯಮಾಣೌ ಬ್ರಹ್ಮಚಾರೀ ಬಿಭಿಕ್ಷೇ ತಸ್ಮಾ ಉ ಹ ನ ದದತುಃ ॥೫॥

೫. ಇನ್ನು (ಆಖ್ಯಾಯಿಕೆ) ಶೌನಕ ಕಾಪೇಯನನ್ನು ಅಭಿಪ್ರತಾರಿ ಕಾಕ್ಷಸೇನಿಯನ್ನೂ (ಊಟಕ್ಕೆ) ಬಡಿಸಿಕೊಳ್ಳುತ್ತಿದ್ದಾಗ ಬ್ರಹ್ಮಚಾರಿಯು ಭಿಕ್ಷೆಬೇಡಿದನು. ಅವನಿಗೆ ಅವರು ಕೊಡಲಿಲ್ಲ.

---

1. ಇಲ್ಲಿ ವಾಯುಪ್ರಾಣಗಳನ್ನು ಸಂವರ್ಗವೆಂದು ಉಪಾಸನೆಮಾಡುವ ವಿದ್ಯೆಯು ಒಂದೇ ; ಆದರೂ ಇವನ್ನು ಬೇರೆಬೇರೆಯಾಗಿಯೇ ಚಿಂತಿಸಬೇಕು ಎಂದು ಸೂ. ಭಾ. ೩-೩-೪೩ (ಭಾ. ಭಾ. ೪೦೨, ೪೦೩)ರಲ್ಲಿ ನಿರ್ಣಯಿಸಿದೆ.

ಸಂವರ್ಗೋಪಾಸಕನಿಗೆ ಭಿಕ್ಷೆಹಾಕದೆ ಇದ್ದದ್ದು

(ಭಾಷ್ಯ)

೩೦೨. ಅಥ ಏತಯೋಃ ಸ್ತುತ್ಯರ್ಥಮ್ ಇಯಮ್ ಆಖ್ಯಾಯಿಕಾ ಆರಭ್ಯತೇ। ಹ ಇತಿ ಐತಿಹ್ಯಾರ್ಥಃ । ಶೌನಕಂ ಚ ಶುನಕಸ್ಯ ಅಪತ್ಯಂ ಶೌನಕಂ ಕಾಪೇಯಂ ಕಪಿಗೋತ್ರಮ್ ಅಭಿಪ್ರತಾರಿಣಂ ಚ ನಾಮತಃ ಕಕ್ಷಸೇನಸ್ಯ ಅಪತ್ಯಂ ಕಾಕ್ಷಸೇನಿಂ ಭೋಜನಾಯ ಉಪವಿಷ್ಟೌ ಪರಿವಿಷ್ಯಮಾಣೌ ಸೂಪಕಾರೈಃ ಬ್ರಹ್ಮಚಾರೀ ಬ್ರಹ್ಮವಿಚ್ಛ್ರೌಣ್ಡೋ ಬಿಭಿಕ್ಷೇ ಭಿಕ್ಷಿತವಾನ್ । ಬ್ರಹ್ಮಚಾರಿಣೋ ಬ್ರಹ್ಮವಿನ್ಮಾನಿತಾಂ ಬುದ್ಧ್ವಾ[1] ಜಿಜ್ಞಾಸಮಾನೌ ತಸ್ಮೈ ಉ ಭಿಕ್ಷಾಂ ನ ದದತುಃ ನ ದತ್ತವನ್ತೌ ಹ । ಕಿಮಯಂ ವಕ್ಷ್ಯತೀತಿ ॥

(ಭಾಷ್ಯಾರ್ಥ)

ಇನ್ನು ಈ (ಎರಡರ) ಸ್ತುತಿಗಾಗಿ ಈ ಕಥೆಯನ್ನು ಆರಂಭಿಸಲಾಗಿದೆ. ಹ ಎಂಬಿದು ಹಿಂದೆ ನಡೆಯಿತೆಂಬುದನ್ನು (ತಿಳಿಸು)ವದಕ್ಕೆ. ಶೌನಕನು ಎಂದರೆ ಶುನಕನ ಮಗನು ; ಕಾಪೇಯನೆಂದರೆ ಕಪಿಗೋತ್ರದವನು.[2] ಮತ್ತು ಅಭಿಪ್ರತಾರಿ (ಎಂದರೆ ಆ) ಹೆಸರಿನವನು ; ಕಾಕ್ಷಸೇನಿ ಎಂದರೆ ಕಕ್ಷಸೇನನ ಮಗನು. ಊಟಕ್ಕೆ ಕುಳಿತುಕೊಂಡು ಅಡಿಗೆಯವರಿಂದ (ಅನ್ನವನ್ನು) ಬಡಿಸಿಕೊಳ್ಳುತ್ತಿದ್ದ (ಆ ಇಬ್ಬರನ್ನು. ಒಬ್ಬ) ಬ್ರಹ್ಮಚಾರಿಯು, ಬ್ರಹ್ಮಜ್ಞಾನಿಗಳಲ್ಲಿ ಶೂರನಾದವನು[3] ಭಿಕ್ಷೆಯನ್ನು ಬೇಡಿದನು, ಯಾಚಿಸಿದನು. ಬ್ರಹ್ಮಚಾರಿಯು ತಾನು ಬ್ರಹ್ಮಜ್ಞಾನಿಯೆಂದು ಭಾವಿಸಿಕೊಂಡಿರುವ ನೆಂಬುದನ್ನು ಅರಿತುಕೊಂಡು[4] ಅವನಿಗೆ - ಇವನು ಏನು ಹೇಳುತ್ತಾನೋ ತಿಳಿದು ಕೊಳ್ಳೋಣ ಎಂದು - ಭಿಕ್ಷೆಯನ್ನು ಕೊಡಲಿಲ್ಲ.

---

1. ಇದರ ಮುಂದಿರುವ 'ತಂ' ಬೇಕಿಲ್ಲವೆಂದು ಬಿಟ್ಟಿದೇವೆ.
2. ಕಾಪೇಯನಾಮಸಂಬಂಧದಿಂದ ಜಾನಶ್ರುತಿಯು ಕ್ಷತ್ರಿಯನೆಂದು ಕಲ್ಪಿಸಿರುವ ಒಂದು ಯುಕ್ತಿಯನ್ನು ಸೂ. ಭಾ. ೧-೩-೩೫ (ಭಾ. ಭಾ. ೩೦೯ರಲ್ಲಿ) ಕಾಣಬಹುದು.
3. ಸಂವರ್ಗವಿದ್ಯೆಯಲ್ಲಿ ವಾಯುಪ್ರಾಣಗಳನ್ನು ಬ್ರಹ್ಮದೃಷ್ಟಿಯಿಂದ ಉಪಾಸನೆ ಮಾಡುವದರಿಂದ ಇದೂ ಬ್ರಹ್ಮವಿದ್ಯೆಯೇ. ಆದ್ದರಿಂದ ಇವನನ್ನು ಬ್ರಹ್ಮಜ್ಞಾನಿ ಎಂದಿದೆ.
4. ಬ್ರಹ್ಮವಿಚ್ಛ್ರೌಣ್ಡಃ ಎಂಬುದು ಬ್ರಹ್ಮಚಾರಿ ಎಂಬುದರ ಭಾಷ್ಯಕ್ಕೆ ಬರೆದಿರುವ ವ್ಯಾಖ್ಯಾನ. ಬ್ರಹ್ಮಚಾರಿಯು ತಾನು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನೆಂದು ತಿಳಿದುಕೊಂಡಿದ್ದನು ಎಂಬರ್ಥವನ್ನು ಟೀಕೆಯಲ್ಲಿ ತೆಗೆದಿರುವದಕ್ಕೆ ಭಾಷ್ಯದ ಆಧಾರವು ಸಾಲದು. ಬ್ರಹ್ಮಚಾರಿಯು ಎಷ್ಟರಮಟ್ಟಿಗೆ ಬ್ರಹ್ಮವನ್ನು ತಿಳಿದಿದ್ದಾನೋ ನೋಡೋಣವೆಂಬ ಕುತೂಹಲದಿಂದ ಭಿಕ್ಷೆಯನ್ನು ಕೊಡಲಿಲ್ಲ ಎಂದಿಷ್ಟೇ ಭಾಷ್ಯಕ್ಕೆ ಅರ್ಥ.

(ಉಪನಿಷತ್ತು)

ಸ ಹೋವಾಚ ಮಹಾತ್ಮನಶ್ಚತುರೋ ದೇವ ಏಕಃ ಕಃ ಸ ಜಗಾರ ಭುವನಸ್ಯ ಗೋಪಾಸ್ತಂ ಕಾಪೇಯ ನಾಭಿಪಶ್ಯನ್ತಿ ಮರ್ತ್ಯಾ ಅಭಿಪ್ರತಾರಿನ್ ಬಹುಧಾ ವಸನ್ತಂ ಯಸ್ಮೈ ವಾ ಏತದನ್ನಂ ತಸ್ಮಾ ಏತನ್ನ ದತ್ತಮಿತಿ ॥೬॥

೬. ಅವನು ಇಂತೆಂದನು : ನಾಲ್ವರು ಮಹಾತ್ಮರನ್ನು ಒಬ್ಬನೇ ದೇವನಾದ ಆ ಕನು ನುಂಗಿರುತ್ತಾನೆ ; (ಅವನೇ) ಭುವನದ ಗೋಪ್ತೃ. 'ಕಾಪೇಯನೆ, ಅಭಿಪ್ರತಾರಿಯೆ, ಬಹುಪ್ರಕಾರದಿಂದ ಇರುತ್ತಿರುವ ಆತನನ್ನು ಮರ್ತ್ಯರು ಕಾಣರು. ಯಾವನಿಗೋಸ್ಕರ ಈ ಅನ್ನವೋ, ಅವನಿಗೆ ಇದನ್ನು ಕೊಡಲಿಲ್ಲ!'

(ಭಾಷ್ಯ)

೩೦೩. ಸ ಹೋವಾಚ ಬ್ರಹ್ಮಚಾರೀ 'ಮಹಾತ್ಮನಶ್ಚತುರ' ಇತಿ ದ್ವಿತೀಯಾಬಹುವಚನಮ್ । ದೇವ ಏಕಃ ಅಗ್ನ್ಯಾದೀನ್ ವಾಯುಃ । ವಾಗಾದೀನ್ ಪ್ರಾಣಃ। ಕಃ ಸ ಪ್ರಜಾಪತಿಃ ಜಗಾರ ಗ್ರಸಿತವಾನ್ । ಕಃ ಸ ಜಗಾರ ? ಇತಿ ಪ್ರಶ್ನಮೇಕೇ। ಭುವನಸ್ಯ ಭವನ್ತಿ ಅಸ್ಮಿನ್ ಭೂತಾನಿ ಇತಿ ಭುವನಂ ಭೂರಾದಿಃ ಸರ್ವೋ ಲೋಕಃ। ತಸ್ಯ ಗೋಪಾಃ ಗೋಪಾಯಿತಾ ರಕ್ಷಿತಾ । ಗೋಪ್ತಾ ಇತ್ಯರ್ಥಃ । ತಂ ಕಂ ಪ್ರಜಾಪತಿಂ ಹೇ ಕಾಪೇಯ ನಾಭಿಪಶ್ಯನ್ತಿ ನ ಜಾನನ್ತಿ ಮರ್ತ್ಯಾ ಮರಣಧರ್ಮಾಣಃ ಅವಿವೇಕಿನೋ ವಾ ಹೇ ಅಭಿಪ್ರತಾರಿನ್ ಬಹುಧಾ ಅಧ್ಯಾ [illegible]ಕಾರ್ಯೈಃ ವಸನ್ತಮ್ । ಯಸ್ಮೈ ವಾ ಏತತ್ ಅಹನ್ಯಹನಿ ಅನ್ನಮ್ ಅದನಾಯ ಆಹ್ರಿಯತೇ ಸಂಸ್ಕ್ರಿಯತೇ ಚ ತಸ್ಮೈ ಪ್ರಜಾಪತಯೇ ಏತದನ್ನಂ ನ ದತ್ತಮಿತಿ ॥

(ಭಾಷ್ಯಾರ್ಥ)

ಬ್ರಹ್ಮಚಾರಿಯು ಇಂತೆಂದನು ; ಮಹಾತ್ಮನಶ್ಚತುರಃ ಎಂಬಿದು ದ್ವಿತೀಯಾ ಬಹುವಚನವು.[1] (ನಾಲ್ವರು ಮಹಾತ್ಮರನ್ನು) ಒಬ್ಬನೇ ದೇವನು, ಅಗ್ನಿಯೇ

1. ಚತುರಃ ಎಂಬುದು ಏಕವಚನವಲ್ಲ ; ಮಹಾತ್ಮನಃ ಎಂಬುದಕ್ಕೆ ವಿಶೇಷಣವಾಗಿ ದ್ವಿತೀಯಾಬಹುವಚನ ಎಂದರ್ಥ. ಟೀಕೆಯಲ್ಲಿ - ಮಹಾತ್ಮನಃ ಎಂಬುದು ಪಂಚಮೀ ವಿಭಕ್ತಿಯೆಂದೂ ಚತುರಃ ಎಂಬಿದು ಸಮೀಚೀನಾರ್ಥಕವೆಂದೂ ತಿಳಿಯಬಾರದೆಂದು ಹೀಗೆ ಹೇಳಿದೆಯೆಂದಿದೆ.

ಮೊದಲಾದವರನ್ನು ವಾಯು(ವೊಬ್ಬನೇ) ವಾಕ್ಕೇ ಮುಂತಾದವುಗಳನ್ನು ಪ್ರಾಣ (ವೊಂದೇ) ಕನು ಎಂದರೆ ಪ್ರಜಾಪತಿಯಾದ ಆತನು ನುಂಗಿರುತ್ತಾನೆ, ಗ್ರಾಸ ಮಾಡಿಕೊಂಡಿರುತ್ತಾನೆ. ನುಂಗಿರುತ್ತಾನಲ್ಲ ಅವನು (ಕಃ ?) ಯಾರು ? ಎಂದು ಕೆಲವರು (ಇದನ್ನು) ಪ್ರಶ್ನೆಯಾಗಿ ವ್ಯಾಖ್ಯಾನಮಾಡಿರುತ್ತಾರೆ. ಭುವನದ - ಇದರಲ್ಲಿ ಭೂತಗಳು ಇರುತ್ತವೆ (ಭವನ್ತಿ), ಆದ್ದರಿಂದ ಭೂರಾದಿಲೋಕವೆಲ್ಲವೂ ಭುವನ ವೆನಿಸುವದು. ಅದರ - (ಗೋಪಾಃ = ಗೋಪಾಯಿತಾ) ಕಾಪಾಡತಕ್ಕ ಗೋಪ್ತ್ರವು ಎಂದರ್ಥ. ಆ ಪ್ರಜಾಪತಿಯನ್ನು ಎಲೈ ಕಾಪೇಯನೆ, ಮರ್ತ್ಯರು ಮರಣಧರ್ಮ ವುಳ್ಳವರು, ಅಥವಾ ಅವಿವೇಕಿಗಳು, ಎಲೈ ಅಭಿಪ್ರತಾರಿಯೆ, ಬಹುಪ್ರಕಾರದಿಂದ ಎಂದರೆ ಅಧ್ಯಾತ್ಮ, ಅಧಿದೈವತ, ಅಧಿಭೂತ - ಎಂಬ ಪ್ರಕಾರಗಳಿಂದ ಇರುತ್ತಿರುವ (ಅವನನ್ನು) ಕಾಣರು, ಅರಿಯರು. ಯಾವನಿಗಾಗಿ ದಿನದಿನವೂ ಈ ಅನ್ನವನ್ನು ಉಣ್ಣಲೆಂದು ತರುತ್ತಿರುವರೋ ಮತ್ತು ಸಂಸ್ಕರಿಸುತ್ತಿರುವರೋ ಆ ಪ್ರಜಾಪತಿಗೆ ಈ ಅನ್ನವನ್ನು ನೀವು ಕೊಡಲಿಲ್ಲ![1]

(ಉಪನಿಷತ್ತು)

ತದು ಹ ಶೌನಕಃ ಕಾಪೇಯಃ ಪ್ರತಿಮನ್ವಾನಃ ಪ್ರತ್ಯೇಯಾಯಾತ್ಮಾ ದೇವಾನಾಂ ಜನಿತಾ ಪ್ರಜಾನಾಗ್ಂ ಹಿರಣ್ಯದಗ್ಂಷ್ಟ್ರೋ ಬಭಸೋಽನಸೂರಿರ್ಮಹಾನ್ತಮಸ್ಯ ಮಹಿಮಾನಮಾಹುರನದ್ಯ-ಮಾನೋ ಯದನನ್ನಮತ್ತೀತಿ[2] ವೈ ವಯಂ ಬ್ರಹ್ಮಚಾರಿನ್ನೇದ-ಮುಪಾಸ್ಮಹೇ ದತ್ತಾಽಸ್ಮೈ ಭಿಕ್ಷಾಮಿತಿ ॥೭॥

೭. ಶೌನಕ ಕಾಪೇಯನು ಅದನ್ನು ಕುರಿತು ಮನನಮಾಡಿ ಹತ್ತಿರಕ್ಕೆ ಬಂದನು ; 'ಆತ್ಮನೂ ದೇವತೆಗಳ (ಮತ್ತು) ಪ್ರಜೆಗಳ ಜನಕನೂ ಚಿನ್ನದ ದಾಡೆ ಯುಳ್ಳವನೂ ಬಭಸನೂ ಅನಸೂರಿಯೂ ಆಗಿರುವ ಇವನ ಮಹಿಮೆಯನ್ನು ದೊಡ್ಡದೆಂದು ಹೇಳುತ್ತಾರೆ. ಏಕೆಂದರೆ ತಿನ್ನಲ್ಪಡದೆ ಅನನ್ನವನ್ನು ತಿನ್ನುತ್ತಾನೆ. ಬ್ರಹ್ಮಚಾರಿಯೆ, ನಾವು ಇದನ್ನು ಚೆನ್ನಾಗಿ ಉಪಾಸನೆಮಾಡುತ್ತಿದೇವೆ. ಇವನಿಗೆ ಭಿಕ್ಷೆಯನ್ನು ಕೊಡಿರೊ !'(ಎಂದನು).

---

1. ನೀವು ನನಗೆ ಭಿಕ್ಷೆಯನ್ನು ಕೊಡದಿರುವದು ಆ ಪ್ರಜಾಪತಿಗೇ ಕೊಡದೆ ಇದ್ದಂತೆ ಎಂದು ತನ್ನ ಸಾಕ್ಷಾತ್ಕಾರವನ್ನು ತಿಳಿಸಿದನೆಂದು ಭಾವ.
2. 'ಆತ್ಮಾ ದೇವಾನಾಮ್' ಎಂಬ ಋಕ್ಕು ಸಂಹಿತೆಯಲ್ಲಿ ಎಲ್ಲಿಯಾದರೂ ಇದೆಯೋ ಇಲ್ಲಿಯೇ ಬ್ರಾಹ್ಮಣೋತ್ಪನ್ನವಾದದ್ದೋ ತಿಳಿಯದು.

ಶೌನಕಕಾಪೇಯನು ವಾಯುವನ್ನು ಪ್ರಶಂಸಿಸಿದ್ದು

(ಭಾಷ್ಯ)

೩೦೪. ತದು ಹ ಬ್ರಹ್ಮಚಾರಿಣೋ ವಚನಂ ಶೌನಕಃ ಕಾಪೇಯಃ ಪ್ರತಿಮನ್ವಾನಃ ಮನಸಾ ಆಲೋಚಯನ್ ಬ್ರಹ್ಮಚಾರಿಣಂ ಪ್ರತ್ಯೇಯಾಯ ಆಜಗಾಮ । ಗತ್ವಾ ಚ ಆಹ । ಯಂ ತ್ವಮ್ ಅವೋಚಃ ನ ಪಶ್ಯನ್ತಿ[1] ಮರ್ತ್ಯಾ ಇತಿ ತಂ ವಯಂ ಪಶ್ಯಾಮಃ । ಕಥಮ್ ? ಆತ್ಮಾ ಸರ್ವಸ್ಯ ಸ್ಥಾವರಸ್ಯ ಜಙ್ಗಮಸ್ಯ ಚ[2] । ಕಂ ಚ ದೇವಾನಾಮ್ ಅಗ್ನ್ಯಾದೀನಾಮ್ ಆತ್ಮನಿ ಸಂಹೃತ್ಯ ಗ್ರಸಿತ್ವಾಪುನರ್ಜನಿತಾ ಉತ್ಪಾದಯಿತಾ ವಾಯುರೂಪೇಣ ಅಧಿದೈವತಮ್ ಅಗ್ನ್ಯಾದೀನಾಮ್ ಅಧ್ಯಾತ್ಮಂ ಚ ಪ್ರಾಣರೂಪೇಣ ವಾಗಾದೀನಾಂ ಪ್ರಜಾನಾಂ ಚ ಜನಿತಾ । ಅಥವಾ ಆತ್ಮಾ ದೇವಾನಾಮ್ ಅಗ್ನಿವಾಗಾದೀನಾಮ್ ಜನಿತಾ ಪ್ರಜಾನಾಂ ಸ್ಥಾವರಜಙ್ಗಮಾನಾಮ್ । ಹಿರಣ್ಯದಂಷ್ಟ್ರಃ ಅಮೃತದಂಷ್ಟ್ರಃ । ಅಭಗ್ನದಂಷ್ಟ್ರ ಇತಿ ಯಾವತ್ । ಬಭಸಃ ಭಕ್ಷಣಶೀಲಃ । ಅನಸೂರಿಃ । ಸೂರಿಃ ಮೇಧಾವೀ । ನ ಸೂರಿಃ ಅಸೂರಿಃ । ತತ್ಪ್ರತಿಷೇಧೋಽನಸೂರಿಃ । ಸೂರಿರೇವ ಇತ್ಯರ್ಥಃ । ಮಹಾನ್ತಮ್ ಅತಿಪ್ರಮಾಣಮ್ ಅಪ್ರಮೇಯಮ್ ಅಸ್ಯ ಪ್ರಜಾಪತೇಃ ಮಹಿಮಾನಂ ವಿಭೂತಿಮ್ ಆಹುಃ ಬ್ರಹ್ಮವಿದಃ । ಯಸ್ಮಾತ್ ಸ್ವಯಮ್ ಅನ್ಯೈಃ ಅನದ್ಯಮಾನಃ ಅಭಕ್ಷ್ಯಮಾಣಃ ಯದನನ್ನಮ್ ಅಗ್ನಿವಾಗಾದಿದೇವತಾರೂಪಮ್ ಅತ್ತಿ ಭಕ್ಷಯತೀತಿ । ವಾ ಇತಿ ನಿರರ್ಥಕಃ । ವಯಂ ಹೇ ಬ್ರಹ್ಮಚಾರಿನ್ । ಆ ಇದಮ್ ಏವಂ ಯಥೋಕ್ತಲಕ್ಷಣಂ ಬ್ರಹ್ಮ ವಯಮ್ । ಆ ಉಪಾಸ್ಮಹೇ । ವಯಮ್ ಇತಿ ವ್ಯವಹಿತೇನ ಸಂಬನ್ಧಃ । ಅನ್ಯೇ ನ ವಯಮಿದಮ್ ಉಪಾಸ್ಮಹೇ ಕಂ ತರ್ಹಿ ಪರಮೇವ ಬ್ರಹ್ಮ ಉಪಾಸ್ಮಹೇ ಇತಿ ವರ್ಣಯನ್ತಿ । ದತ್ತ ಅಸ್ಮೈ ಭಿಕ್ಷಾಮ್ ಇತ್ಯವೋಚತ್ ಭೃತ್ಯಾನ್ ॥

(ಭಾಷ್ಯಾರ್ಥ)

ಆ ಬ್ರಹ್ಮಚಾರಿಯ ವಚನವನ್ನು ಶೌನಕಕಾಪೇಯನು ಮನನಮಾಡುತ್ತಾ ಮನಸ್ಸಿನಲ್ಲಿ ಆಲೋಚಿಸುತ್ತಾ ಬ್ರಹ್ಮಚಾರಿಯ ಬಳಿಗೆ ಬಂದನು , ಬಂದುಸೇರಿದನು , ಬಂದು ಇಂತೆಂದನು : 'ಮರ್ತ್ಯರು ಕಾಣರು' ಎಂದು ನೀನು ಹೇಳಿದೆಯಲ್ಲ, ಅವನನ್ನು

1. 'ನಾಭಿಪಶ್ಯನ್ತಿ' ಎಂದು ಮಾ॥ ಆ॥ ಪಾಠ ; ಇದು ಹಿಂದಿನ ಉಪನಿಷತ್ತಿನ ಮೂಲಕ್ಕೆ ಹೊಂದುತ್ತದೆ.
2. 'ಸ್ಥಾವರಜಙ್ಗಮಸ್ಯ' ಎಂಬುದಕ್ಕಿಂತ ಈ ಪಾಠವು ಮೇಲು.

ನಾವು ಕಂಡಿರುತ್ತೇವೆ. ಹೇಗೆಂದರೆ , (ಅವನು) ಎಲ್ಲಕ್ಕೂ , ಸ್ಥಾವರಕ್ಕೂ ಜಂಗಮಕ್ಕೂ ಆತ್ಮನು ; ಮತ್ತು ಅಗ್ನ್ಯಾದಿದೇವತೆಗಳನ್ನು ತನ್ನೊಳಕ್ಕೆ ಸೇರಿಸಿಕೊಂಡು ನುಂಗಿ ಮತ್ತೆ ಅಧಿದೈವತವಾಗಿ ವಾಯುರೂಪದಿಂದ (ಆ) ಅಗ್ನ್ಯಾದಿದೇವತೆಗಳಿಗೂ ಜನಕನಾಗಿರುವನು , ಉತ್ಪಾದಕನಾಗಿರುವನು ,[1] ಅಧ್ಯಾತ್ಮವಾಗಿ ಪ್ರಾಣರೂಪದಿಂದ ವಾಗಾದಿಗಳಿಗೂ ಪ್ರಜೆಗಳಿಗೂ ಜನಕನಾಗಿರುವನು, ಅಥವಾ (ಆತ್ಮಾ ದೇವಾನಾಮ್) ಅಗ್ನಿವಾಗಾದಿ ದೇವತೆಗಳಿಗೆ ಆತ್ಮನಾಗಿರುವನು,[2] (ಜನಿತಾ ಪ್ರಜಾನಾಂ) ಸ್ಥಾವರಜಂಗಮ (ರೂಪವಾದ) ಪ್ರಜೆಗಳಿಗೆ ಜನಕನಾಗಿರುವನು (ಎಂದಾದರೂ ಅನ್ವಯಿಸಬಹುದು), ಹಿರಣ್ಯದಂಷ್ಟ್ರನು, ಎಂದರೆ ಅಮೃತವಾದ ದಂಷ್ಟ್ರವುಳ್ಳವನು, ನಾಶವಾಗದ ಕೋರೆದಾಡೆಗಳುಳ್ಳವನು ಎಂದರ್ಥ.[3] ಬಭಸನು ಎಂದರೆ (ಎಲ್ಲವನ್ನೂ) ಭಕ್ಷಿಸುವ ಸ್ವಭಾವದವನು. ಅನಸೂರಿಯು ; ಸೂರಿ ಎಂದರೆ ತಿಳಿದವನು ; ಸೂರಿಯಲ್ಲದವನು ಅಸೂರಿ ; ಅದಲ್ಲದವನು ಅನಸೂರಿ ; ಎಂದರೆ ಸೂರಿಯೇ ಎಂದರ್ಥ. ಈ ಪ್ರಜಾಪತಿಯ ಮಹಿಮೆಯು, ವಿಭೂತಿಯು ದೊಡ್ಡದು, ಅಳತೆಯಿಲ್ಲದ್ದು, (ಇಷ್ಟೆಂದು) ಗೊತ್ತುಪಡಿಸಲಾಗದ್ದು ಎಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ. ಏಕೆಂದರೆ ತಾನು ಮತ್ತೊಬ್ಬರಿಂದ ತಿನ್ನಲ್ಪಡದೆ ಅಗ್ನಿವಾಗಾದಿರೂಪರಾದ ದೇವತೆಗಳನ್ನು ತಿನ್ನುತ್ತಾನೆ. (ಮೂಲದಲ್ಲಿರುವ) ವಾ ಎಂಬ ಮಾತಿಗೆ ಅರ್ಥವಿಲ್ಲ.

ಎಲೈ ಬ್ರಹ್ಮಚಾರಿಯೆ , ಬ್ರಹ್ಮಚಾರಿನ್ ಆ ಇದಮ್ (ಎಂದು ಪದಚ್ಛೇದ), ಹೀಗೆ ಮೇಲೆ ಹೇಳಿರುವ ಲಕ್ಷಣವುಳ್ಳ ಬ್ರಹ್ಮವನ್ನು ನಾವು ಚೆನ್ನಾಗಿ ಉಪಾಸನೆಮಾಡುತ್ತೇವೆ. (ಆ ಉಪಾಸ್ಮಹೇ ಎಂಬುದಕ್ಕೆ) ವಯಮ್ (ನಾವು) ಎಂಬ (ಹಿಂದೆ) ದೂರದಲ್ಲಿರುವ (ಪದಕ್ಕೆ) ಸಂಬಂಧ. ಮತ್ತೆ ಕೆಲವರು (ವ್ಯಾಖ್ಯಾನಕಾರರು) ನಾವು (ನೇದಂ) ಇದನ್ನು ಉಪಾಸನೆಮಾಡುತ್ತಿಲ್ಲ, (ಮತ್ತೇನನ್ನೆಂದರೆ) ಪರಬ್ರಹ್ಮವನ್ನೇ ಉಪಾಸನೆಮಾಡುತ್ತೇವೆ ಎಂದು (ಈ ವಾಕ್ಯದರ್ಥವನ್ನು) ವರ್ಣಿಸುತ್ತಾರೆ[4]. 'ಇವನಿಗೆ ಭಿಕ್ಷೆಯನ್ನು ಕೊಡಿರೋ !' ಎಂದು (ಕಾಪೇಯನು) ಅಳುಗಳಿಗೆ ಹೇಳಿದನು.

1. ಐತರೇಯ ಬ್ರಾಹ್ಮಣದಲ್ಲಿ 'ಬ್ರಹ್ಮಣಃ ಪರಿಮರ'ವೆಂದು ವರ್ಣಿಸಿರುವ ಕಡೆಯಲ್ಲಿ ವಾಯುವಿನಲ್ಲಿ ಅಗ್ನ್ಯಾದಿಗಳ ಪ್ರಲಯವನ್ನೂ ಮತ್ತೆ ವಾಯುವಿನಿಂದ ಉತ್ಪತ್ತಿಯನ್ನೂ ಹೇಳಿದೆ. 2. ಏಕೆಂದರೆ ಸರ್ವದೇವತಾತ್ಮನಿವನು.
3. ಚಿನ್ನವು ಗಟ್ಟಿಯಾಗಿರುವದರಿಂದ ಹಿರಣ್ಯಶಬ್ದಕ್ಕೆ ನಾಶವಾಗದ ಎಂಬರ್ಥವನ್ನು ತೆಗೆದಿದೆ.
4. ಈ ವ್ಯಾಖ್ಯಾನವು ಪ್ರಕೃತರಾದ ವಾಯುಪ್ರಾಣರನ್ನು ಹೊಗಳುವ ಈ ಪ್ರಕರಣಕ್ಕೆ ಅಷ್ಟು ಒಪ್ಪಾಗಿ ಕಾಣುವದಿಲ್ಲ.

ಸಂವರ್ಗವಿದ್ಯೆಯ ಫಲ

(ಉಪನಿಷತ್ತು)

ತಸ್ಮಾ ಉ ಹ ದದುಸ್ತೇ ವಾ ಏತೇ ಪಞ್ಚಾನ್ಯೇ ಪಞ್ಚಾನ್ಯೇ ದಶ ಸನ್ತಸ್ತತ್ಕೃತಂ ತಸ್ಮಾತ್ಸರ್ವಾಸು ದಿಕ್ಷ್ವನ್ನಮೇವ ದಶ ಕೃತಗ್ಂ ಸೈಷಾ ವಿರಾಡನ್ನಾದೀ ತಯೇದಗ್ಂ ಸರ್ವಂ ದೃಷ್ಟಂ ಸರ್ವಮಸ್ಯೇದಂ ದೃಷ್ಟಂ ಭವತ್ಯನ್ನಾದೋ ಭವತಿ ಯ ಏವಂ ವೇದ ಯ ಏವಂ ವೇದ ॥೮॥

೮. ಮತ್ತು ಅವನಿಗೆ ಕೊಟ್ಟರು. ಆ ಇವು ಐದು ಬೇರೆ , ಐದು ಬೇರೆ- (ಹೀಗೆ) ಹತ್ತಾಗಿರುವದರಿಂದ ಇದು ಕೃತವು. ಆದ್ದರಿಂದ ಎಲ್ಲಾ ದಿಕ್ಕು ಗಳಲ್ಲಿಯೂ ಅನ್ನವೇ, ಹತ್ತು ಕೃತವೇ. ಆ ಈ ವಿರಾಟ್ಪು ಅನ್ನಾದಿ ಯಾಗಿರುವದು, ಆದರಿಂದ ಇದೆಲ್ಲವೂ ದೃಷ್ಟವಾಗಿರುತ್ತದೆ. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನಿಗೆ ಎಲ್ಲವೂ ದೃಷ್ಟವಾಗುವದು ; (ಅವನು) ಅನ್ನಾದನಾಗುವನು. ಯಾವನು ಹೀಗೆಂದು ಅರಿಯುವನೋ (ಅವನಿಗೆ ದೃಷ್ಟವಾಗುವದು , ಅವನು ಅನ್ನಾದನಾಗುವನು).

ಸಂವರ್ಗವಿದ್ಯೆಯ ದೃಷ್ಟಫಲ

(ಭಾಷ್ಯ)

೩೦೫. ತಸ್ಮಾ ಉ ಹ ದದುಃ ತೇ ಹ[1] ಭಿಕ್ಷಾಮ್ । ತೇ ವೈ ಯೇ ಗ್ರಸ್ಯನ್ತೇ ಅಗ್ನ್ಯಾದಯಃ ಯಶ್ಚ ತೇಷಾಂ ಗ್ರಸಿತಾ ವಾಯುಃ ಪಞ್ಚ ಅನ್ಯೇ ವಾಗಾದಿಭ್ಯಃ । ತಥಾ ಅನ್ಯೇ ತೇಭ್ಯಃ ಪಞ್ಚ ಅಧ್ಯಾತ್ಮಂ ವಾಗಾದಯಃ ಪ್ರಾಣಶ್ಚ । ತೇ ಸರ್ವೇ ದಶ ಭವನ್ತಿ ಸಂಖ್ಯಯಾ । ದಶ ಸನ್ತಃ ತತ್ಕೃತಂ ಭವತಿ ತೇ । ಚತುರಙ್ಗ ಏಕ ಆಯಃ[2] । ಏವಂ ಚತ್ವಾರಃ । ತ್ರ್ಯಙ್ಗಾಯಃ ಏವಂ ತ್ರಯೋಽಪರೇ । ದ್ವ್ಯಙ್ಗಾಯಃ ಏವಂ ದ್ವೌ ಅನ್ಯೌ । ಏಕಾಙ್ಗಾಯಃ । ಏವಮೇಕೋಽನ್ಯಃ । ಇತ್ಯೇವಂ ದಶ ಸನ್ತಃ ತತ್ಕೃತಂ ಭವತಿ । ಯತ ಏವಮ್ ತಸ್ಮಾತ್ ಸರ್ವಾಸು ದಿಕ್ಷು ದಶಸ್ವಪಿ ಅಗ್ನ್ಯಾದ್ಯಾ ವಾಗಾದ್ಯಾಶ್ಚ ದಶಸಂಖ್ಯಾಸಾಮಾನ್ಯಾತ್ ಅನ್ನಮೇವ ದಶಾಕ್ಷರಾ ವಿರಾಟ್ । ''ವಿರಾಡನ್ನಮ್''

1. ಹಿ ಎಂಬುದನ್ನು ಹ ಎಂದು ತಿದ್ದಿಕೊಂಡಿದೆ.

2 ಏಕಾಯಃ ಎಂಬುದಕ್ಕಿಂತ ಈ ವ್ಯಸ್ತಪಾಠವೇ ಉತ್ತಮ.

ಇತಿ ಹಿ ಶ್ರುತಿಃ । ಅತ್ಯೋಽನ್ನಮೇವ ದಶಸಂಖ್ಯಿತ್ವಾತ್ । ತತ ಏವ ದಶಕೃತಮ್ । ಕೃತೇ ಅನ್ತರ್ಭಾವಾತ್ ಚತುರಜ್ಯಾಯತ್ವೇನ[1] ಇತ್ಯವೋಚಾಮ । ಸೈಷಾ ವಿರಾಟ್ ದಶಸಂಖ್ಯಾ ಸತೀ ಅನ್ನಂ ಚ ಅನ್ನಾದೀ ಅನ್ನಾದಿನೀ ಚ ಕೃತತ್ವೇನ । ಕೃತೇ ಹಿ ದಶಸಂಖ್ಯಾ ಅನ್ತರ್ಭೂತಾ । ಅತೋಽನ್ನಮ್ ಅನ್ನಾದಿನೀ ಚ ಸಾ । ತಥಾ ವಿದ್ವಾನ್ ದಶ ದೇವತಾತ್ಮಭೂತಃ ಸನ್ ವಿರಾಟ್ತ್ವೇನ ದಶಸಂಖ್ಯಯಾ ಅನ್ನಂ ಕೃತಸಂಖ್ಯಯಾ ಅನ್ನಾದೀ ಚ । ತಯಾ ಅನ್ನಾನ್ನಾದಿನ್ಯಾ ಇದಂ ಸರ್ವಂ ಜಗತ್ ದಶದಿಕ್ಸ್ಥಂ ದೃಷ್ಟಂ ಕೃತಸಂಖ್ಯಾಭೂತಯಾ ಉಪಲಬ್ಧಮ್ । ಏವಂವಿದಃ ಅಸ್ಯ ಸರ್ವಂ ಕೃತಸಂಖ್ಯಾ ಭೂತಸ್ಯ ದಶದಿಕ್ಸಂಬದ್ಧಂ ದೃಷ್ಟಮ್ ಉಪಲಬ್ಧಂ ಭವತಿ । ಕಿಂ ಚ ಅನ್ನಾದಶ್ಚ ಭವತಿ ಯ ಏವಂ ವೇದ ಯಥೋಕ್ತದರ್ಶೀ । ದ್ವಿರಭ್ಯಾಸ ಉಪಾಸನಸಮಾಪ್ತ್ಯರ್ಥಃ ॥

(ಭಾಷ್ಯಾರ್ಥ)

ಅವನಿಗೆ ಅವರು ಭಿಕ್ಷೆಯನ್ನು ಕೊಟ್ಟರು. ಅವರು- ನುಂಗಲ್ಪಡುತ್ತಾರಲ್ಲ, ಆ ಅಗ್ನ್ಯಾದಿಗಳು ಮತ್ತು ಅವರನ್ನು ನುಂಗುವ ವಾಯುವಿದಾನಲ್ಲ , ಅವನು. (ಹೀಗೆ)- ಐವರು ವಾಗಾದಿಗಳಿಗಿಂತ ಬೇರೆ ಮತ್ತು ಅವರಿಗಿಂತ ಅಧ್ಯಾತ್ಮವಾಗಿರುವ ವಾಗಾದಿಗಳೂ ಪ್ರಾಣನೂ ಈ ಐವರೂ ಬೇರೆ. ಅವರೆಲ್ಲ (ಸೇರಿದರೆ) ಸಂಖ್ಯೆಯಲ್ಲಿ ಹತ್ತಾಗುತ್ತಾರೆ , ಹತ್ತಾಗುವದರಿಂದ ಇದು ಕೃತವಾಗುವದು , ಅವು - ನಾಲ್ಕು ಅಂಕಗಳ ಒಂದು ಗರ , ಹೀಗೆ ನಾಲ್ವರು ; ಮೂರು ಅಂಕದ (ಒಂದು ಗರ) , ಹೀಗೆ ಮೂರು ಬೇರೆ ; ಎರಡು ಅಂಕದ (ಗರ ಒಂದು) , ಹೀಗೆ ಎರಡು ಬೇರೆ ; ಒಂದಂಕದ (ಗರ ಒಂದು) , ಹೀಗೆ ಒಂದು ಬೇರೆ- ಅಂತೂ ಹೀಗೆ ಹತ್ತಾದರೆ ಅದು ಕೃತವಾಗುತ್ತದೆ.

ಹೀಗಿರುವದಷ್ಟೆ, ಆದ್ದರಿಂದ ಎಲ್ಲಾ ದಿಕ್ಕುಗಳಲ್ಲಿಯೂ , ಹತ್ತು (ದಿಕ್ಕು ಗಳಲ್ಲಿಯೂ) ಅಗ್ನ್ಯಾದಿಗಳೂ ವಾಗಾದಿಗಳೂ ಹತ್ತು ಎಂಬ ಸಂಖ್ಯೆಯು ಹೋಲಿಕೆ ಯಿರುವದರಿಂದ ಅನ್ನವೇ. ವಿರಾಟ್ಛಂದಸ್ಸು ಹತ್ತಕ್ಷರದ್ದು , "ವಿರಾಜವು ಅನ್ನವೇ"(?) ಎಂದಲ್ಲವೆ, ಶ್ರುತಿಯಿದೆ ? ಆದ್ದರಿಂದ (ಇದು) ಹತ್ತೆಂಬ ಸಂಖ್ಯೆಯಿರುವದರಿಂದ (ಇವು) ಅನ್ನವೇ.[2] ಆದ್ದರಿಂದಲೇ (ಈ) ಹತ್ತು ಕೃತವು ; ಏಕೆಂದರೆ ನಾಲ್ಕು ಅಂಕೆಗಳ ಗರವಿರುವದರಿಂದ (ಹತ್ತು) ಕೃತದಲ್ಲಿ ಅಂತರ್ಭಾವವಾಗಿದೆ ಎಂದು ಆಗಲೆ ಹೇಳಿರುತೇವೆ.

1. ಚತುರಾಯತ್ವೇನ ಎಂಬುದಕ್ಕಿಂತ ಈ ಪಾಠವು ಮೇಲು.
2. ವಿರಾಟ್ಛಂದಸ್ಸಿನಲ್ಲಿ ಹತಕ್ಷರವಿದ್ದು , ಅದು ಶ್ರುತಿಪ್ರಮಾಣದಿಂದ ಅನ್ನವೆನಿಸಿದೆ ; ಅದರಂತೆ ಹತ್ತು ದೇವತೆಗಳ ರೂಪವಾದ ವಿರಾಜನಾಗಿರುವದರಿಂದ ಇದೂ ಅನ್ನವೇ.

ಆ ಈ ವಿರಾಜವು ಹತ್ತು ಸಂಖ್ಯೆಯಿರುವದಾದ್ದರಿಂದ ಅನ್ನವೂ, ಕೃತವಾಗಿರುವದರಿಂದ (ಅನ್ನಾದೀ = ಅನ್ನಾದಿನೀ) ಅನ್ನಾದಿಯೂ ಆಗಿರುತ್ತದೆ. ಕೃತದಲ್ಲಿ ಹತ್ತೆಂಬ ಸಂಖ್ಯೆಯು ಅಂತರ್ಭೂತವಾಗಿದೆಯಲ್ಲವೆ ? ಆದ್ದರಿಂದ ಅದು ಅನ್ನವೂ ಅನ್ನಾದಿಯೂ ಆಗಿರುತ್ತದೆ. ಇದರಂತೆ ಉಪಾಸಕನು ಹತ್ತು ದೇವತೆಗಳ ಸ್ವರೂಪವುಳ್ಳವನಾಗಿರುವದರಿಂದ ಹತ್ತೆಂಬ ಸಂಖ್ಯೆಯಿಂದ ವಿರಾಟ್ಟಾಗಿರುವದರಿಂದ ಅನ್ನವೂ ಕೃತಸಂಖ್ಯೆಯಿಂದ ಅನ್ನಾದಿಯೂ (ಆಗಿರುತ್ತಾನೆ).[1] ಈ ಅನ್ನಾನ್ನಾದಿಯಾಗಿರುವ ಅದರಿಂದ ಈ ಸರ್ವಜಗತ್ತೂ ಹತ್ತುದಿಕ್ಕುಗಳಲ್ಲಿರುವ (ಜಗತ್ತೆಲ್ಲವೂ) ದೃಷ್ಟವಾಗಿರುತ್ತದೆ, ಕೃತಸಂಖ್ಯೆಯಾಗಿರುವದರಿಂದ ಅರಿಯಲ್ಪಟ್ಟಿರುತ್ತದೆ. ಹೀಗೆಂದು ಅರಿತಿರುವ ಕೃತಸಂಖ್ಯಾರೂಪನಾದ ಈ (ಉಪಾಸಕನಿಗೆ) ಹತ್ತುದಿಕ್ಕುಗಳಿಗೆ ಸಂಬದ್ಧವಾದ ಎಲ್ಲವೂ ದೃಷ್ಟವಾಗುತ್ತದೆ, ಅರಿಯಲ್ಪಟ್ಟದ್ದಾಗುತ್ತದೆ.[2] ಮತ್ತು ಅವನು ಯಾವನು ಹೀಗೆಂದು ಅರಿತಿರುವನೋ, ಮೇಲೆ ಹೇಳಿದಂತೆ ಕಂಡುಕೊಂಡಿರುವನೋ (ಅವನು) ಅನ್ನಾದನೂ (ಆಗುತ್ತಾನೆ).[3] (ಯ ಏವಂ ವೇದ) ಎಂದು ಎರಡು ಸಲ ಹೇಳಿರುವದು ಉಪಾಸನೆಯು ಮುಗಿಯಿತೆಂದು (ತಿಳಿಸು)ವದಕ್ಕೆ.

1. ಛಂದಸ್ಸಿನಂತೆ ಅನ್ನವಾಗಿದೆ, ಕೃತಾಯದಂತೆ ಅನಾದಿಯಾಗಿದೆ ಎರಡಕ್ಕೂ ಹತ್ತೆಂಬ ಸಂಖ್ಯೆಯೇ ಕಾರಣವಾಗಿದೆ.
2. ಏಕೆಂದರೆ ಜಗತ್ತೇ ಈ ಹತ್ತು ದೇವತೆಗಳ ರೂಪವಾಗಿರುತ್ತದೆ.
3. ಇದೂ ದೃಷ್ಟಫಲವೇ, ಪ್ರಜಾಪತಿಪ್ರಾಪ್ತಿಯೇ ಅದೃಷ್ಟಫಲ ಏಕೆಂದರೆ ಇವನು ಪ್ರಜಾಪತಿಯನ್ನೇ ಸಂವರ್ಗವೆಂದು ಉಪಾಸನೆಮಾಡಿರುತ್ತಾನೆ.

ನಾಲ್ಕನೆಯ ಅಧ್ಯಾಯದ ಒಂದರಿಂದ ಮೂರನೆಯ ಖಂಡಗಳ ಸಾರ

ಒಂದನೆಯ ಖಂಡ

೧-೬. ಜಾನಶ್ರುತಿಪೌತ್ರಾಯಣನು ಶ್ರದ್ಧೆಯಿಂದ ಛತ್ರಗಳನ್ನು ಕಟ್ಟಿಸಿ ಅನ್ನದಾನ ಮಾಡಿಸುವದರಲ್ಲಿ ಪ್ರಖ್ಯಾತನಾಗಿದ್ದನು. ಒಂದು ದಿನ ರಾತ್ರೆ ಅರಮನೆಯ ಮೇಲೆ ಕೆಲವು ಹಂಸಗಳು ಹಾದುಹಾರಿಹೋಗುತ್ತಿರುವಲ್ಲಿ ಆ ಸಾಲಿನಲ್ಲಿ ಹಿಂದುಗಡೆಯಿದ್ದ ಹಂಸವೊಂದು ತೀರ ಮುಂದೆ ಇದ್ದ ಹಂಸವನ್ನು ಕುರಿತು ''ಭಲ್ಲಾಕ್ಷನೆ, ಜಾನಶ್ರುತಿಯ ಕಡೆಗೆ ಕಾಲುಚಾಚದಿರು ; ಅವನ ಧರ್ಮಜ್ಯೋತಿಯು ನಿನ್ನನ್ನು ಸುಟ್ಟುಹಾಕಬಹುದು'' ಎಂದಿತು. ಆಗ ಭಲ್ಲಾಕ್ಷನು ''ಇವನೇನು ಮಹಾಪುರುಷ ? ಬಂಡಿಯ ರೈಕ್ವನೋ, ಎನ್ನುವಹಾಗೆ ಹೇಳುತ್ತಿರುವೆಯಲ್ಲ !'' ಎಂದಿತು. ''ಆ ರೈಕ್ವನು ಎಂದರೆ ಹೇಗಿರುವನು ?'' ಎಂದು ಹಿಂದಿನ ಹಂಸವು ಕೇಳಿದ್ದಕ್ಕೆ ''ಪಗಡೆಯಲ್ಲಿ ಕೃತಾಯವನ್ನು ಗೆದ್ದರೆ ಕೆಳಗಿನ ತ್ರೇತೆ , ದ್ವಾಪರ, ಕಲಿ - ಎಲ್ಲವೂ ಆದರಲ್ಲಿ ಹೇಗೆ ಸೇರಿಹೋಗಿರುವವೋ ಹಾಗೆಯೇ ಆ ರೈಕ್ವನು ಅರಿತಿರುವ ದೇವತೆಯನ್ನು ಉಪಾಸನೆಮಾಡುವವನಿಗೆ ಜನರು ಮಾಡುವ ಪುಣ್ಯವೆಲ್ಲವೂ ಸೇರಿಹೋಗಿರುವದು'' ಎಂದಿತು.

೭-೮. ರಾಜನು ಬೆಳಗಾಗುತ್ತಲೂ ಎದ್ದು ತನ್ನ ದೂತನಿಗೆ ಆ ರೈಕ್ವನನ್ನು ಹುಡುಕುವಂತೆ ಅಪ್ಪಣೆಮಾಡಿದನು. ಊರೂರನ್ನೂ ಹುಡುಕಿ 'ಸಿಕ್ಕಲಿಲ್ಲ'ಎಂದು ಅವನು ಹಿಂತಿರುಗಿದನು. 'ಬ್ರಹ್ಮಜ್ಞಾನಿಗಳು ಇರಬಹುದಾದ ಏಕಾಂತಸ್ಥಲಗಳಲ್ಲಿ ಹುಡುಕು'ಎಂದು ರಾಜನು ಮತ್ತೆ ಕಳುಹಿಸಲು 'ಆ ದೂತನು ಒಂದು ಬಂಡಿಯ ಕೆಳಗೆ ಕಜ್ಜಿಯನ್ನು ತುರಿಸಿಕೊಳ್ಳುತ್ತಾ ಕುಳಿತಿದ್ದ ರೈಕ್ವನನ್ನು ಕಂಡು ವಿಚಾರಿಸಿ ತಿಳಿದುಕೊಂಡು ರಾಜನ ಬಳಿಗೆ ಬಂದು ಹೇಳಿದನು.

ಎರಡನೆಯ ಖಂಡ

೧-೨. ಜಾನಶ್ರುತಿಪೌತ್ರಾಯಣನು ಆರುನೂರು ಗೋಗಳು, ಒಂದು ಕಂಠಮಾಲಿಕೆ, ಒಂದು ರಥ- ಇಷ್ಟನ್ನು ತೆಗೆದುಕೊಂಡುಹೋಗಿ ''ಭಗವಂತನೆ , ಇದನ್ನು ತೆಗೆದುಕೊಂಡು, ತಾವು ಉಪಾಸನೆಮಾಡುವ ದೇವತೆಯ ವಿದ್ಯೆಯನ್ನು ನನಗೆ ತಿಳಿಸಿಕೊಡಬೇಕು'' ಎಂದು ಬೇಡಿಕೊಂಡನು.

೩-೫. ರೈಕ್ವನು ಪರೋಕ್ಷಜ್ಞಾನದಿಂದ ಜಾನಶ್ರುತಿಯು ಶೋಕಗ್ರಸ್ತನಾಗಿ ಬಂದಿರುವನೆಂದು ತಿಳಿದುಕೊಂಡನು. ಆದರೂ ಶೂದ್ರನಂತೆ ಬರಿಯ ಧನಮಾತ್ರದಿಂದ ಉಪಾಸನೆಯನ್ನು ಕಲಿತುಕೊಳ್ಳುವದಕ್ಕೆ ಪ್ರಯತ್ನಿಸಿದ್ದರಿಂದ ರಾಜನನ್ನು ''ಎಲಾ ಶೂದ್ರ , ಈ ಅಲ್ಪಧನವು ನಿನ್ನಲ್ಲೇ ಇರಲಿ , ನನಗೇತಕ್ಕೆ ?'' ಎಂದನು. ಆಗ ಜಾನಶ್ರುತಿಯು ಮತ್ತೆ ಸಾವಿರ ಗೋಗಳನ್ನೂ ಹಾರವನ್ನೂ ರಥವನ್ನೂ ತನ್ನ ಮಗಳನ್ನೂ ತೆಗೆದುಕೊಂಡು ಅವನ ಬಳಿಗೆ ಬಂದು ''ರೈಕ್ವನೆ, ಇದೆಲ್ಲವನ್ನೂ ತೆಗೆದುಕೊ, ನನಗೆ ಆ ದೇವತಾವಿದ್ಯೆಯನ್ನೂ ಹೇಳಿಕೊಡು !'' ಎಂದು ಕೇಳಿಕೊಂಡನು. ಅವನಿಗೆ ವಾಸಕ್ಕೆ ಒಂದು ಗ್ರಾಮವನ್ನೂ ಕೊಟ್ಟನು.

ಆಗ ಋಷಿಯು ಆ ಸ್ತ್ರೀದಾನವನ್ನೇ ದ್ವಾರವಾಗಿಮಾಡಿಕೊಂಡು ಅವನಿಗೆ ವಿದ್ಯೆಯನ್ನು ಉಪದೇಶಿಸಿದನು. ರೈಕ್ವನು ವಾಸಮಾಡಿಕೊಂಡಿದ್ದ ಬಳಿಯ ಗ್ರಾಮಗಳು ಮಹಾವೃಷದೇಶದಲ್ಲಿ ರೈಕ್ವಪರ್ಣಗಳು - ಎಂದು ಪ್ರಸಿದ್ಧವಾದವು.

ಮೂರನೆಯ ಖಂಡ

೧-೪. ಆಗ ರೈಕ್ವನು ಹೀಗೆಂದು ಉಪದೇಶಿಸಿದನು : ಅಧಿದೈವತವಾಗಿ ವಾಯುವೇ ಸಂವರ್ಗವು ; ಏಕೆಂದರೆ ಪ್ರಲಯದಲ್ಲಿ ಅಗ್ನಿ, ಸೂರ್ಯ, ಚಂದ್ರ, ಅಪ್ಪು - ಇವೆಲ್ಲ ವಾಯುವಿನಲ್ಲಿಯೇ ಲಯವಾಗುವವು. ಅಧ್ಯಾತ್ಮವಾಗಿ ಪ್ರಾಣವೇ ಸಂವರ್ಗವು ; ಏಕೆಂದರೆ ಸುಷುಪ್ತಿಯಲ್ಲಿ ವಾಕ್ಕು, ಚಕ್ಷುಸ್ಸು, ಶ್ರೋತ್ರ, ಮನಸ್ಸು - ಇವು ಪ್ರಾಣದಲ್ಲಿಯೇ ಲಯವಾಗುವವು. ಆದ್ದರಿಂದ ವಾಯು , ಪ್ರಾಣ- ಇವೆರಡನ್ನೂ ಸಂವರ್ಗವೆಂದು ಉಪಾಸನೆಮಾಡಬೇಕು.

೫-೭. ಹಿಂದಕ್ಕೆ ಶೌನಕ-ಕಾಪೇಯ, ಅಭಿಪ್ರತಾರಿ-ಕಾಕ್ಷಸೇನಿ - ಎಂಬಿಬ್ಬರು ಊಟಕ್ಕೆ ಕುಳಿತುಕೊಳ್ಳುತ್ತಿರುವಲ್ಲಿ ಈ ಸಂಗರ್ವವಿದ್ಯೆಯನ್ನು ಬಲ್ಲ ಬ್ರಹ್ಮಜ್ಞಾನಿಯೊಬ್ಬನು ಭಿಕ್ಷೆಗೆ ಬಂದನು. ಆಗ ಅವರಿಬ್ಬರೂ ಇವನು ಎಷ್ಟರಮಟ್ಟಿಗೆ ತಿಳಿದಿರುವನೋ ನೋಡೋಣ - ಎಂದು ಭಿಕ್ಷೆಯನ್ನು ಹಾಕಿಸಲಿಲ್ಲ. ಆಗ ಆ ಬ್ರಹ್ಮಚಾರಿಯು ''ನಾಲ್ವರು ದೇವತೆಗಳನ್ನು ನುಂಗುವ ಒಬ್ಬ ದೇವನಿರುವನು; ಅವನು ಭುವನಕ್ಕೆಲ್ಲ ರಕ್ಷಕನು. ಬಹುಪ್ರಕಾರದಲ್ಲಿರುವ ಆತನನ್ನು ಮರ್ತ್ಯರು ಅರಿಯರು, ಕಾಪೇಯನೆ, ಅಭಿಪ್ರಾತಾರಿಯೆ, ಅವನಿಗಾಗಿಯೇ ಮಾಡಿಸಿರುವ ಅನ್ನವನ್ನು ನೀವು ಅವನಿಗೆ ಕೊಡಲಿಲ್ಲ !'' ಎಂದನು. ಅದನ್ನು ಶೌನಕಕಾಪೇಯನು ಮನದಟ್ಟುಮಾಡಿಕೊಂಡು ಹೀಗೆ ಉತ್ತರವಿತ್ತನು ; ''ದೇವತೆಗಳಿಗೆ ಆತ್ಮನೂ ಪ್ರಜೆಗಳ ಜನಕನೂ ಆಗಿರುವ ಅಭಗ್ನದಂಷ್ಟ್ರನಾದ ಭಕ್ಷಕನಾದ ಸೂರಿಯೇ ಅವನು. ಅವನ ಮಹಿಮೆಯು ಅನಂತವು ; ಏಕೆಂದರೆ ಅವನು ಅನ್ನವಲ್ಲದ್ದನ್ನು ತಿನ್ನುತ್ತಿರುವನು. ಬ್ರಹ್ಮಚಾರಿಯೆ, ನಾವು ಈ ದೇವತೆಯನ್ನು ಚೆನ್ನಾಗಿ ಅರಿತು ಉಪಾಸನೆಮಾಡುತ್ತಿರುವೆವು'' ಎಂದು ಭಿಕ್ಷವನ್ನು ಬ್ರಹ್ಮಚಾರಿಗೆ ಕೊಡಿಸಿದನು.

೮. ಈ ದೇವತೆಗಳು ಅಧಿದೈವವಾಗಿ ಐದು , ಅಧ್ಯಾತ್ಮವಾಗಿ ಐದು - ಹೀಗೆ ಹತ್ತಾ ಗಿರುವದರಿಂದ ಇದು ಕೃತವಾಯಿತು. ಹತ್ತುದಿಕ್ಕುಗಳಲ್ಲಿಯೂ ಇರುವ ಇದು ವಿರಾಟ್ಪುರುಷನಂತೆ ಅನ್ನವೂ ಕೃತಾಯದಂತೆ ಅನ್ನಾದಿಯೂ ಆಗಿರುತ್ತದೆ. ಇದು ಎಲ್ಲವನ್ನೂ ಒಳಗೊಂಡಿರುವದರಿಂದ ಎಲ್ಲವನ್ನೂ ಕಂಡುಕೊಂಡಿದೆ. ಯಾವನು ಹೀಗೆಂದು ಉಪಾಸನೆಮಾಡುವನೋ ಅವನಿಗೆ ಇದೆಲ್ಲವೂ ದೃಷ್ಟವಾಗುತ್ತದೆ , ಅವನು ದೀಪ್ತಾಗ್ನಿಯಾದ ಅನ್ನಾದನೂ ಆಗಿರುವನು. ಪ್ರಜಾಪತಿಪ್ರಾಪ್ತಿಯೆಂಬ ಅದೃಷ್ಟಫಲವೂ ಅವನಿಗೆ ಆಗುವದು.

ನಾಲ್ಕನೆಯ ಅಧ್ಯಾಯ - ನಾಲ್ಕನೆಯ ಖಂಡ

(ಷೋಡಶಕಲವಿದ್ಯೆ)

ಸತ್ಯಕಾಮನು ಹಾರಿದ್ರುಮತನ ಶಿಷ್ಯನಾದದ್ದು

(ಉಪನಿಷತ್ತು)

ಸತ್ಯಕಾಮೋ ಹ ಜಾಬಾಲೋ ಜಬಾಲಾಂ ಮಾತರಮಾ-ಮನ್ತ್ರಯಾಂಚಕ್ರೇ ಬ್ರಹ್ಮಚರ್ಯಂ ಭವತಿ ವಿವತ್ಸ್ಯಾಮಿ ಕಿಂಗೋತ್ರೋ ನ್ವಹಮಸ್ಮೀತಿ ॥೧॥

೧. ಸತ್ಯಕಾಮಜಾಬಾಲನು ತಾಯಿಯಾದ ಜಬಾಲೆಯನ್ನು "ಅಮ್ಮ, ಬ್ರಹ್ಮಚರ್ಯೆಯನ್ನು ಮಾಡಬೇಕೆಂದಿರುವೆನು. ನಾನು ಯಾವ ಗೋತ್ರದವನಾಗಿರುವೆನು ?" ಎಂದು ಕೇಳಿದನು.

ಗ್ರಂಥಸಂಬಂಧ

(ಭಾಷ್ಯ)

೩೦೬. ಸರ್ವಂ ವಾಗಾದಿ ಅಗ್ನ್ಯಾದಿ ಚ ಅನ್ನಾನ್ನಾದತ್ವಸಂಸ್ತುತಂ ಜಗತ್ ಏಕೀಕೃತ್ಯ ಷೋಡಶಧಾ ಪ್ರವಿಭಜ್ಯ ತಸ್ಮಿನ್ ಬ್ರಹ್ಮದೃಷ್ಟಿರ್ವಿಧಾತವ್ಯಾ ಇತ್ಯಾರಭ್ಯತೇ । ಶ್ರದ್ಧಾತಪಸೋರ್ಬ್ರಹ್ಮೋಪಾಸನಾಙ್ಗತ್ವಪ್ರದರ್ಶನಾಯ ಆಖ್ಯಾಯಿಕಾ ॥

(ಭಾಷ್ಯಾರ್ಥ)

ವಾಗಾದಿಯಾದ ಮತ್ತು ಅಗ್ನ್ಯಾದಿಯಾದ, ಅನ್ನಾನ್ನಾದವೆಂದು ಹೊಗಳಲಾಗಿರುವ, ಜಗತ್ತೆಲ್ಲವನ್ನೂ ಒಂದುಗೂಡಿಸಿ[1] ಹದಿನಾರು ಪ್ರಕಾರದಿಂದ ವಿಂಗಡಿಸಿ, ಅದರಲ್ಲಿ ಬ್ರಹ್ಮದೃಷ್ಟಿಯನ್ನು ವಿಧಾನಮಾಡಬೇಕೆಂದು (ಈ ಗ್ರಂಥವನ್ನು) ಆರಂಭಿಸಿರುತ್ತದೆ. ಶ್ರದ್ಧಾತಪಸ್ಸುಗಳು ಬ್ರಹ್ಮೋಪಾಸನೆಗೆ ಅಂಗವೆಂಬುದನ್ನು ತಿಳಿಸಿ ಕೊಡುವದಕ್ಕಾಗಿ ಕಥೆ (ಬಂದಿದೆ).

---

1. 'ಕಾರಣರೂಪದಿಂದ ಒಂದೆಂದು ಭಾವಿಸಿ' ಎಂದು ಟೀಕೆ. ಒಟ್ಟನ್ನು ಬ್ರಹ್ಮವೆಂದು ಧ್ಯಾನಿಸಬೇಕು ಎಂದಿಷ್ಟೇ ಭಾಷ್ಯದಲ್ಲಿ ತೋರುತ್ತದೆ.

ಸತ್ಯಕಾಮನು ಬ್ರಹ್ಮಚರ್ಯಕ್ಕೆ ಮನಸ್ಸುಮಾಡಿದ್ದು

(ಭಾಷ್ಯ)

೩೦೭. ಸತ್ಯಕಾಮೋ ಹ ನಾಮತಃ । ಹಶಬ್ದ ಐತಿಹ್ಯಾರ್ಥಃ । ಜಬಾಲಾಯಾ ಅಪತ್ಯಂ ಜಾಬಾಲಃ ಜಬಾಲಾಂ ಸ್ವಾಂ ಮಾತರಮ್ ಆಮನ್ತ್ರ್ಯಾಂಬಕ್ರೇ ಆಮನ್ತ್ರಿತವಾನ್ । ಬ್ರಹ್ಮಚರ್ಯಂ ಸ್ವಾಧ್ಯಾಯಗ್ರಹಣಾಯ ಹೇ ಭವತಿ, ವಿವತ್ಸ್ಯಾಮಿ ಆಚಾರ್ಯಕುಲೇ । ಕಿಂಗೋತ್ರೋಽಹಮ್ ? ಕಿಮಸ್ಯ ಮಮ ಗೋತ್ರಂ ಸೋಽಹಂ ಕಿಂಗೋತ್ರೋ ನು ಅಹಮಸ್ಮೀತಿ ॥

(ಭಾಷ್ಯಾರ್ಥ)

ಸತ್ಯಕಾಮನೆಂಬ ಹೆಸರಿನ - ಹಶಬ್ದವು ಹಿಂದೆ (ಹೀಗೆ) ನಡೆಯಿತೆಂದು ತಿಳಿಸುವದಕ್ಕೆ (ಬಂದಿದೆ). ಜಬಾಲೆಯ ಮಗನು ಜಾಬಾಲನು ; (ಅವನು) ಜಬಾಲೆ ಎಂಬ ತನ್ನ ತಾಯಿಯನ್ನು (ಹೀಗೆಂದು) ಕೇಳಿದನು, ಕೇಳಿದವನಾದನು. ''ಅಮ್ಮ, ಸ್ವಾಧ್ಯಾಯವನ್ನು ಗ್ರಹಿಸುವದಕ್ಕಾಗಿ[1] ಆಚಾರ್ಯರ ಮನೆಯಲ್ಲಿ ಬ್ರಹ್ಮಚಾರಿಯಾಗಿ ಇರಬೇಕೆಂದಿರುವೆನು. ನಾನು ಯಾವ ಗೋತ್ರದವನು ?'' (ಕಿಂಗೋತ್ರಃ ಎಂಬುದಕ್ಕೆ ಕಿಂ ಗೋತ್ರಮ್ ಅಸ್ಯ ಎಂದು ವಿಗ್ರಹ) , ಯಾವ ಗೋತ್ರದವನಾಗಿರುವೆನು ?

(ಉಪನಿಷತ್ತು)

ಸಾ ಹೈನಮುವಾಚ ನಾಹಮೇತದ್ ವೇದ ತಾತ ಯದ್ಗೋತ್ರಸ್ತ್ವಮಸಿ ಬಹ್ವಹಂ ಚರನ್ತೀ ಪರಿಚಾರಿಣೀ ಯೌವನೇ ತ್ವಾಮಲಭೇ ಸಾಹಮೇತನ್ನ ವೇದ ಯದ್ಗೋತ್ರಸ್ತ್ವಮಸಿ ಜಬಾಲಾ ತು ನಾಮಾಹಮಸ್ಮಿ ಸತ್ಯಕಾಮೋ ನಾಮ ತ್ವಮಸಿ ಸ ಸತ್ಯಕಾಮ ಏವ ಜಾಬಾಲೋ ಬ್ರುವೀಥಾ ಇತಿ ॥೨॥

೨. ಆಕೆಯು ಅವನನ್ನು ಕುರಿತು ''ಅಪ್ಪ , ನೀನು ಯಾವ ಗೋತ್ರದವನಾಗಿರುವೆಯೋ ನಾನು ಅದನ್ನರಿಯೆನು, ನಾನು ಬಹಳವಾಗಿ ಪರಿಚರ್ಯೆಯನ್ನು ಮಾಡುವ ಪರಿಚಾರಿಣಿಯಾಗಿದ್ದು ಯೌವನದಲ್ಲಿ ನಿನ್ನನ್ನು ಪಡೆದೆನು. ಆ ನಾನು , ನೀನು ಯಾವ ಗೋತ್ರದವನೋ ಅದನ್ನರಿಯೆ. ಆದರೆ ನಾನು ಜಬಾಲೆ ಎಂಬವಳು , ನೀನು ಸತ್ಯಕಾಮನೆಂಬವನಾಗಿರುವೆ. ಆದ್ದರಿಂದ ಸತ್ಯಕಾಮ - ಜಾಬಾಲನೆಂದೇ ಹೇಳಿಕೊ'' ಎಂದಳು.

1. ವೇದಗ್ರಹಣಕ್ಕಾಗಿ ಎಂದರ್ಥ.

ತಾಯಿಗೆ ಅವನ ಗೋತ್ರವು ತಿಳಿಯದೆ ಇದ್ದದ್ದು

(ಭಾಷ್ಯ)

೩೦೮. ಏವಂ ಪೃಷ್ಟಾ ಜಬಾಲಾ ಸಾ ಹೈನಂ ಪುತ್ರಮ್ ಉವಾಚ । ನಾಹ ಮೇತತ್ ತವ ಗೋತ್ರಂ ವೇದ ಹೇ ತಾತ ಯದ್ಗೋತ್ರಸ್ತ್ವಮಸಿ । ಕಸ್ಮಾತ್ ನ ವೇತ್ಸೀತ್ಯುಕ್ತಾ ಆಹ । ಬಹು ಭರ್ತೃಗೃಹೇ ಪರಿಚರ್ಯಾಜಾತಮ್ ಅತಿಥ್ಯಭ್ಯಾಗತಾದಿ ಚರನ್ತೀ ಅಹಂ ಪರಿಚಾರಿಣೇ ಪರಿಚರನ್ತೀತಿ ಪರಿಚರಣಶೀಲೈವಾಹಮ್ । ಪರಿಚರಣ ಚಿತ್ತತಯಾ ಗೋತ್ರಾದಿಸ್ಮರಣೇ ಮಮ ಮನೋ ನಾಭೂತ್ । ಯೌವನೇ ಚ ತತ್ಕಾಲೇ ತ್ವಾಮ್ ಅಲಭೇ ಲಬ್ಧವತೀ ಅಸ್ಮಿ । ತದೈವ ತೇ ಪಿತಾ ಉಪರತಃ । ಅತೋಽನಾಥಾ ಅಹಮ್ । ನಾಹಮೇತತ್ ನ ವೇದ ಯದ್ಗೋತ್ರಸ್ತ್ವಮಸಿ । ಜಬಾಲಾ ತು ನಾಮಾಹಮಸ್ಮಿ । ಸತ್ಯಕಾಮೋ ನಾಮ ತ್ವಮಸಿ । ಸ ತ್ವಂ ಸತ್ಯಕಾಮ ಏವಾಹಂ ಜಾಬಾಲೋಽಸ್ಮಿ ಇತಿ ಆಚಾರ್ಯಾಯ ಬ್ರುವೀಥಾಃ ಯದಿ ಆಚಾರ್ಯೇಣ ಪೃಷ್ಟಃ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಹೀಗೆಂದು ಕೇಳಲು ಜಬಾಲೆಯು ಈ ಮಗನನ್ನು ಕುರಿತು ಇಂತೆಂದಳು : "ಅಪ್ಪ, ನೀನು ಯಾವ ಗೋತ್ರದವನಾಗಿರುವೆಯೆಂಬುದನ್ನು, ನಿನ್ನ ಗೋತ್ರವನ್ನು ನಾನು ಅರಿಯೆನು. ಏತಕ್ಕೆ ಅರಿಯೆ ? ಎಂದರೆ ಹೇಳುತ್ತಾಳೆ. ಗಂಡನ ಮನೆಯಲ್ಲಿ ಬಹಳವಾಗಿ ಪರಿಚರ್ಯೆಗಳನ್ನು ಅತಿಥ್ಯಭ್ಯಾಗತಾದಿಗಳ (ಪರಿಚರ್ಯೆಗಳನ್ನು) ಮಾಡುವವಳಾಗಿ ನಾನು ಪರಿಚಾರಿಣಿಯಾಗಿ - ಪರಿಚರ್ಯೆಯನ್ನು ಮಾಡುವ ಳಾದ್ದರಿಂದ ಪರಿಚಾರಿಣಿ ಎನಿಸಿದ್ದವಳಾಗಿ - ಪರಿಚರಣದ ಸ್ವಭಾವವುಳ್ಳವಳೇ ಆಗಿದ್ದೆನಾದ್ದರಿಂದ ಪರಿಚರಣದಲ್ಲಿಯೇ ಚಿತ್ತವನ್ನಿಟ್ಟಿದ್ದದ್ದರಿಂದ ಗೋತ್ರಾದಿಗಳನ್ನು ನೆನಪಿಡುವದರಲ್ಲಿ ನನ್ನ ಮನಸ್ಸು ಇರಲಿಲ್ಲ. ಮತ್ತು ಆ ಕಾಲದಲ್ಲಿ ಯೌವನದಲ್ಲಿ ನಿನ್ನನ್ನು ಪಡೆದುಕೊಂಡೆನು, ಪಡೆದುಕೊಂಡವಳಾಗಿರುವೆನು, ಆಗಲೇ ನಿಮ್ಮ ತಂದೆ ಗತಿಸಿದನು. ಆದ್ದರಿಂದ ನಾನು ಅನಾಥಳು ; ಇಂಥ ನಾನು , ನೀನು ಯಾವ ಗೋತ್ರ ದವನೋ ಅದನ್ನರಿಯೆ. ಆದರೆ ನಾನು ಜಬಾಲೆ - ಎಂಬ ಹೆಸರಿನವಳಾಗಿರುವೆನು, ನೀನು ಸತ್ಯಕಾಮನೆಂಬ ಹೆಸರಿನವನಾಗಿರುವೆ. ಆ ನೀನು ಸತ್ಯಕಾಮಜಾಬಾಲನೇ ಆಗಿರುವೆನು - ಎಂದೇ ಆಚಾರ್ಯನಿಗೆ ಹೇಳು. ಆಚಾರ್ಯನು (ನಿನ್ನನ್ನು) ಕೇಳಿದರೆ (ಹೀಗೆಂದೇ ಹೇಳು) ಎಂದು ಅಭಿಪ್ರಾಯ.

(ಉಪನಿಷತ್ತು)

ಸ ಹ ಹಾರಿದ್ರುಮತಂ ಗೌತಮಮೇತ್ಯೋವಾಚ ಬ್ರಹ್ಮಚರ್ಯಂ ಭಗವತಿ ವತ್ಸ್ಯಾಮ್ಯುಪೇಯಾಂ ಭಗವನ್ತಮಿತಿ ॥೩॥

ತಗ್ಂ ಹೋವಾಚ ಕಿಂಗೋತ್ರೋ ನು ಸೋಮ್ಯಾಸೀತಿ ಸ ಹೋವಾಚ ನಾಹಮೇತದ್ವೇದ ಭೋ ಯದ್ಗೋತ್ರೋಽಹ ಮಸ್ಮ್ಯಪೃಚ್ಛಂ ಮಾತರಗ್ಂ ಸಾ ಮಾ ಪ್ರತ್ಯಬ್ರವೀದ್ ಬಹ್ವಹಂ ಚರನ್ತೀ ಪರಿಚಾರಿಣೇ ಯೌವನೇ ತ್ವಾಮಲಭೇ ಸಾಹಮೇತನ್ನ ವೇದ ಯದ್ಗೋತ್ರಸ್ತ್ವಮಸಿ ಜಬಾಲಾ ತು ನಾಮಾಹಮಸ್ಮಿ ಸತ್ಯಕಾಮೋ ನಾಮ ತ್ವಮಸೀತಿ ಸೋಽಹಗ್ಂ ಸತ್ಯಕಾಮೋ ಜಾಬಾಲೋಽಸ್ಮಿ ಭೋ ಇತಿ ॥೪॥

೩. ಅವನು ಹಾರಿದ್ರುಮತಗೌತಮನ ಬಳಿಗೆ ಬಂದು ಇಂತೆಂದನು : ಭಗವಂತರಾದ (ತಮ್ಮಲ್ಲಿ) ಬ್ರಹ್ಮಚರ್ಯವಾಸವನ್ನು ಮಾಡುವೆನು. ಭಗವಂತರಾದ ತಮ್ಮನ್ನು ಬಳಿಸಾರುವೆನು !

೪. ಅವನನ್ನು ಕುರಿತು 'ಸೋಮ್ಯ, ಯಾವ ಗೋತ್ರದವನಾಗಿರುವೆಯೊ!' ಎಂದನು. ಅವನಿಂತೆಂದನು : ''ಸ್ವಾಮಿ, ನಾನು ಯಾವ ಗೋತ್ರದವನೆಂಬುದನ್ನು ನಾನರಿಯೆ. ತಾಯಿಯನ್ನು ಕೇಳಿದೆನು. ಆಕೆಯು ನನಗೆ ಹೀಗೆಂದು ಉತ್ತರವಿತ್ತಳು : 'ಬಹುವಾಗಿ ಪರಿಚರ್ಯೆಯನ್ನು ಮಾಡುವ ಪರಿಚಾರಿಣಿಯಾಗಿದ್ದು ಯೌವನದಲ್ಲಿ ನಿನ್ನನ್ನು ಪಡೆದುಕೊಂಡೆನು. ಆ ನಾನು , ನೀನು ಯಾವ ಗೋತ್ರದವನಾಗಿರುವೆಯೋ ಅರಿಯೆ. ನಾನೇನೋ ಜಬಾಲೆ ಎಂಬ ಹೆಸರಿನವಳಾಗಿರುವೆನು, ನೀನು ಸತ್ಯಕಾಮನೆಂಬ ಹೆಸರಿನವನಾಗಿರುವೆ.' ಆದ್ದರಿಂದ 'ಸ್ವಾಮಿ, ನಾನು ಸತ್ಯಕಾಮಜಾಬಾಲನಾಗಿರುವೆನು.''

ಸತ್ಯಕಾಮನು ಹಾರಿದ್ರುಮತನ ಬಳಿಗೆ ಬಂದದ್ದು

(ಭಾಷ್ಯ)

೩೯. ಸ ಹ ಸತ್ಯಕಾಮಃ ಹಾರಿದ್ರುಮತಂ ಹರಿದ್ರುಮತೋಽಪತ್ಯಂ ಹಾರಿದ್ರುಮತಂ ಗೌತಮಂ ಗೋತ್ರತಃ ಏತ್ಯ ಗತ್ವಾ ಉವಾಚ । ಬ್ರಹ್ಮಚರ್ಯಂ ಭಗವತಿ

ಪೂಜಾವತಿ ತ್ವಯಿ ವತ್ಸ್ಯಾಮಿ । ಅತಃ ಉಪೇಯಾಮ್ ಉಪಗಚ್ಛೇಯಂ ಶಿಷ್ಯತಯಾ ಭಗವನ್ತಮ್ - ಇತ್ಯುಕ್ತವನ್ತಂ ತಂ ಹ ಉವಾಚ ಗೌತಮಃ । ಕಿಂ ಗೋತ್ರಃ ನು ಸೋಮ್ಯ[1] ಅಸೀತಿ । ವಿಜ್ಞಾತಕುಲಗೋತ್ರಃ ಶಿಷ್ಯ ಉಪನೇತವ್ಯಃ । ಇತಿ ಪೃಷ್ಟಃ ಪ್ರತ್ಯಾಹ ಸತ್ಯಕಾಮಃ । ಸ ಹ ಉವಾಚ । ನಾಹಮೇತದ್ ವೇದ ಭೋಃ ಯದ್ಗೋತ್ರೋಽಹ ಮಸ್ಮಿ । ಕಿಂ ತು ಅಪೃಚ್ಛಂ ಪೃಷ್ಟವಾನಸ್ಮಿ ಮಾತರಮ್ । ಸಾ ಮಯಾ ಪೃಷ್ಟಾ ಮಾಂ ಪ್ರತ್ಯಬ್ರವೀತ್ ಮಾತಾ ಬಹ್ವಹಂ ಚರನ್ತೀ ಇತ್ಯಾದಿಪೂರ್ವವತ್ । ತಸ್ಯಾ ಅಹಂ ವಚಃ ಸ್ಮರಾಮಿ । ಸೋಽಹಂ ಸತ್ಯಕಾಮೋ ಜಾಬಾಲೋಽಸ್ಮಿ ಭೋಃ ಇತಿ ॥

(ಭಾಷ್ಯಾರ್ಥ)

ಆ ಸತ್ಯಕಾಮನು ಹಾರಿದ್ರುಮತನನ್ನು, ಹರಿದ್ರುಮತನ ಮಗನಾದ ಹಾರಿ ದ್ರುಮತನನ್ನು, ಗೋತ್ರದಿಂದ ಗೌತಮ(ನೆನಿಸಿದ್ದ ಹಾರಿದ್ರುಮತನನ್ನು) ಸೇರಿ, (ಅವನ ಬಳಿಗೆ) ಬಂದು, ಇಂತೆಂದನು. 'ಭಗವಂತರಾದ ಪೂಜ್ಯರಾದ ತಮ್ಮಲ್ಲಿ ಬ್ರಹ್ಮಚರ್ಯಕ್ಕಾಗಿ ವಾಸಮಾಡಿಕೊಂಡಿರುವೆನು ; ಆದ್ದರಿಂದ ಪೂಜ್ಯರಾದ ತಮ್ಮನ್ನು ಶಿಷ್ಯನಾಗಿ ಬಳಿಸಾರುವೆನು.'

ಹೀಗೆನ್ನಲು ಅವನನ್ನು ಕುರಿತು ಗೌತಮನಿಂತೆಂದನು, 'ನೀನು ಯಾವ ಗೋತ್ರದವನಪ್ಪ ? ಕುಲಗೋತ್ರಗಳನ್ನು ಅರಿತುಕೊಂಡು ಶಿಷ್ಯನಿಗೆ ಉಪನಯನ ಮಾಡಿಸಬೇಕು.'[2] ಹೀಗೆಂದು ಕೇಳಲು ಸತ್ಯಕಾಮನು (ಹೀಗೆಂದು) ಉತ್ತರವಿತ್ತನು. ಅವನು ಹೇಳಿದನೇನೆಂದರೆ ''ಸ್ವಾಮಿ, ನಾನು ಯಾವ ಗೋತ್ರದವನಾಗಿರುವೆನೋ ಅದನ್ನು ನಾನರಿಯೆ. ಆದರೆ ತಾಯಿಯನ್ನು ಕೇಳಿದೆನು.'' ನಾನು ಕೇಳಿದ್ದಕ್ಕೆ ಆ (ತಾಯಿ) ಹೀಗೆಂದು ಉತ್ತರವಿತ್ತಳು. 'ಬಹುವಾಗಿ (ಪರಿ)ಚರ್ಯೆಯನ್ನು ಮಾಡುತ್ತಿದ್ದು' ಎಂದು ಮುಂತಾಗಿರುವ (ಗ್ರಂಥಕ್ಕೆ) ಹಿಂದಿನಂತೆಯೇ (ವ್ಯಾಖ್ಯಾನ). ''ಆಕೆಯ ಮಾತು ನನಗೆ ನೆನಪಿದೆ. ಆ ನಾನು ಸತ್ಯಕಾಮಜಾಬಾಲನಾಗಿರುತ್ತೇನೆ , ಸ್ವಾಮಿ !''

ಸತ್ಯಕಾಮನ ಗೋಸೇವೆ

(ಉಪನಿಷತ್ತು)

ತಗ್ಂ ಹೋವಾಚ ನೈತದಬ್ರಾಹ್ಮಣೋ ವಿವಕ್ತುಮರ್ಹತಿ ಸಮಿಧಗ್ಂ ಸೋಮ್ಯಾಹರೋಪ ತ್ವಾ ನೇಷ್ಯೇ ನ ಸತ್ಯಾದಗಾ ಇತಿ ತಮುಪನೀಯ ಕೃಶಾನಾಮಬಲಾನಾಂ ಚತುಃಶತಾ ಗಾ ನಿರಾಕೃತ್ಯೋವಾಚೇಮಾಃ

1. ಸೌಮ್ಯ ಎಂಬ ಪಾಠಕ್ಕಿಂತ ಇದು ಹೆಚ್ಚು ಕೋಶಗಳಲ್ಲಿರುವ ಪಾಠ.
2. ಈ ಅಭಿಪ್ರಾಯವನ್ನು ಗೌತಮನ ಪ್ರಶ್ನೆಯು ಸೂಚಿಸುತ್ತದೆ ಎಂದು ಭಾವ.

ಸೋಮ್ಯಾನುಸಂವ್ರಜೇತಿ ತಾ ಅಭಿಪ್ರಸ್ಥಾಪಯನ್ನುವಾಚ ನಾಸಹಸ್ರೇಣಾವರ್ತೇಯೇತಿ ಸ ಹ ವರ್ಷಗಣಂ ಪ್ರೋವಾಸ ತಾ ಯದಾ ಸಹಸ್ರಗ್ಂ ಸಂಪೇದುಃ ॥೫॥

೫. (ಗೌತಮನು) ಅವನನ್ನು ಕುರಿತು ''ಅಬ್ರಾಹ್ಮಣನು ಇದನ್ನು ಹೇಳಲಾರನು. ಸೋಮ್ಯ, ಸಮಿತ್ತನ್ನು ತೆಗೆದುಕೊಂಡು ಬಾ ! ನಿನಗೆ ಉಪನಯನವನ್ನು ಮಾಡಿಸುವೆನು. (ನೀನು) ಸತ್ಯವನ್ನು ಬಿಟ್ಟಿರುವದಿಲ್ಲ'' ಎಂದನು. ಅವನಿಗೆ ಉಪನಯನವನ್ನು ಮಾಡಿಸಿ ಕೃಶವಾಗಿ ಬಲವಿಲ್ಲದಿದ್ದ ನಾನೂರು ಗೋಗಳನ್ನು ತೆಗೆದುಕೊಟ್ಟು 'ಸೋಮ್ಯ, ಇವುಗಳನ್ನು ಹಿಂಬಾಲಿಸು !' ಎಂದನು. ಅವುಗಳನ್ನು ಹೊರಡಿಸಿಕೊಂಡು ಹೋಗುವಾಗ (ಸತ್ಯಕಾಮನು) 'ಸಹಸ್ರವಿಲ್ಲದೆ ಹಿಂತಿರುಗೆನು' ಎಂದನು. ಅವನು ವರ್ಷಗಟ್ಟಲೆಯಾಗಿ ಹೊರಗಿದ್ದನು. ಅವು ಯಾವಾಗ ಸಾವಿರವಾದವೋ (ಆಗ)-

ಗುರುಗಳ ಗೋಗಳನ್ನು ಶ್ರದ್ಧೆಯಿಂದ ಕಾಯ್ದದ್ದು

(ಭಾಷ್ಯ)

೫೧೦. ತಂ ಹ ಉವಾಚ ಗೌತಮಃ । ನೈತದ್ ವಚಃ ಅಬ್ರಾಹ್ಮಣೋ (ವಿವಕ್ತುಮ್)[1] ವಿಶೇಷೇಣ ವಕ್ತುಮ್ ಅರ್ಹತಿ ಆರ್ಜವಾರ್ಥಸಂಯುಕ್ತಮ್ । ಋಜವೋ ಹಿ ಬ್ರಾಹ್ಮಣಾ ನೇತರೇ ಸ್ವಭಾವತಃ । ಯಸ್ಮಾತ್ ನ ಸತ್ಯಾತ್ ಬ್ರಾಹ್ಮಣಜಾತಿಧರ್ಮಾತ್ ಅಗಾಃ ನಾಪೇತವಾನಸಿ । ಅತಃ ಬ್ರಾಹ್ಮಣಂ ತ್ವಾಮ್ ಉಪನೇಷ್ಯೇ । ಅತಃ ಸಂಸ್ಕಾರಾರ್ಥಂ ಹೋಮಾಯ ಸಮಿಧಂ ಸೋಮ್ಯ ಆಹರ । ಇತ್ಯುಕ್ತ್ವಾ ತಮ್ ಉಪನೀಯ ಕೃಶಾನಾಮ್ ಅಬಲಾನಾಂ ಗೋಯೂಥಾತ್ ನಿರಾಕೃತ್ಯ ಅಪಕೃಷ್ಯ[2] ಚತುಃಶತಾಃ ಚತ್ವಾರಿ ಶತಾನಿ ಗವಾಮ್, ಉವಾಚ । ಇಮಾ ಗಾಃ ಸೋಮ್ಯ ಅನುಸಂವ್ರಜ ಅನುಗಚ್ಛ । ಇತ್ಯುಕ್ತಃ ತಾ ಅರಣ್ಯಂ ಪ್ರತ್ಯಭಿಪ್ರಸ್ಥಾಪಯನ್ ಉವಾಚ । ನಾಸಹಸ್ರೇಣ ಅಪೂರ್ಣೇನ ಸಹಸ್ರೇಣ ನಾವರ್ತೇಯ ನ ಪ್ರತ್ಯಾಗಚ್ಛೇಯಮ್ । ಸ ಏವಮುಕ್ತ್ವಾ ಗಾಃ ಅರಣ್ಯಂ ತೃಣೋದಕಬಹುಲಂ

---

1. ಈ ಮೂಲದ ಮಾತು ಇಲ್ಲಿ ಬಿಟ್ಟುಹೋಗಿದೆ.
2. 'ಅಪಾಕೃತ್ಯ' ಎಂದು ಪಾಠಾಂತರ.

ದ್ವಂದ್ವರಹಿತಂ ಪ್ರವೇಶ್ಯ ಸ ಹ ವರ್ಷಗಣಂ ದೀರ್ಘಂ ಪ್ರೋವಾಸ ಪ್ರೋಷಿತವಾನ್ । ತಾಃ ಸಮ್ಯಗ್ ಗಾವಃ ರಕ್ಷಿತಾಃ ಯದಾ ಯಸ್ಮಿನ್ ಕಾಲೇ ಸಹಸ್ರಂ ಸಂಪೇದುಃ ಸಂಪನ್ನಾಃ ಬಭೂವುಃ ॥

(ಭಾಷ್ಯಾರ್ಥ)

ಅವನನ್ನು ಕುರಿತು ಗೌತಮನಿಂತೆಂದನು : ಈ ಋಜುವಾದ ಅರ್ಥವುಳ್ಳ ಮಾತನ್ನು ಬ್ರಾಹ್ಮಣನಲ್ಲದವನು (ವಿವಕ್ತುಮರ್ಹತಿ) ವಿಶೇಷವಾಗಿ ಹೇಳಲಾರನು. ಬ್ರಾಹ್ಮಣರಲ್ಲವೆ, ಸ್ವಭಾವದಿಂದಲೇ ಸರಳರಾಗಿರುತ್ತಾರೆ, ಮಿಕ್ಕವರಲ್ಲ. (ನೀನು) ಬ್ರಾಹ್ಮಣಜಾತಿಯ ಧರ್ಮವಾದ ಸತ್ಯವನ್ನು ಬಿಟ್ಟಿಲ್ಲ, (ಬಿಟ್ಟು) ಚಲಿಸಿದವನಾಗಲಿಲ್ಲ; ಆದ್ದರಿಂದ ಬ್ರಾಹ್ಮಣನಾದ ನಿನಗೆ ಉಪನಯನವನ್ನು ಮಾಡಿಸುವೆನು. ಆದ್ದರಿಂದ ಸೋಮ್ಯನೆ, ಸಂಸ್ಕಾರಾರ್ಥವಾದ ಹೋಮಕ್ಕಾಗಿ ಸಮಿತ್ತನ್ನು ತೆಗೆದುಕೊಂಡು ಬಾ- ಎಂದು ಅವನಿಗೆ ಉಪನಯನವನ್ನು ಮಾಡಿಸಿ[1] ಗೋಗಳ ಹಿಂಡಿನಿಂದ ಬಡಕಲಾಗಿ ದುರ್ಬಲವಾಗಿದ್ದ ನಾನೂರು ನಾಲ್ಕುನೂರು ಗೋಗಳನ್ನು ಆರಿಸಿ , ಈಚೆಗೆ ತೆಗೆಯಿಸಿ[2] 'ಸೋಮ್ಯ, ಈ ಗೋಗಳನ್ನು ಹಿಂಬಾಲಿಸು, ಅನುಸರಿಸಿಕೊಂಡು ಹೋಗು !' ಎಂದನು.

ಹೀಗೆನ್ನಲು ಅವನ್ನು ಅರಣ್ಯಕ್ಕೆ ಹೊರಡಿಸಿಕೊಂಡು ಹೊರಟವನು 'ಸಹಸ್ರ ವಿಲ್ಲದೆ ಸಾವಿರವನ್ನು ಪೂರ್ತಿಗೊಳಿಸಿಕೊಳ್ಳದೆ ಹಿಂತಿರುಗೆನು, ಹಿಂತಿರುಗಿ ಬರಲಾರೆನು' ಎಂದನು. ಅವನು ಹೀಗೆಂದು ನುಡಿದು ಗೋಗಳನ್ನು ಹುಲ್ಲೂ ನೀರೂ ಹೆಚ್ಚಾಗಿದ್ದು (ಶೀತೋಷ್ಣಾದಿ)ದ್ವಂದ್ವಗಳಿಲ್ಲದ ಕಾಡಿಗೆ ಹೊಡೆದುಕೊಂಡು ಹೋಗಿ ಅವನು ವರ್ಷಗಟ್ಟಲೆಯಾಗಿ ದೀರ್ಘ(ಕಾಲ) ಹೊರಗೆ ಇದ್ದನು , (ಅಲ್ಲಿಯೇ) ಇದ್ದುಬಿಟ್ಟನು. ಚೆನ್ನಾಗಿ ಕಾಪಾಡಿದ ಆ ಗೋಗಳು ಯಾವಾಗ ಯಾವ ಕಾಲದಲ್ಲಿ ಸಹಸ್ರವಾದವೋ (ಸಾವಿರ ಗೋಗ)ಳಾದವೋ (ಆಗ)-

1. ಶೂದ್ರನಲ್ಲವೆಂದು ನಿರ್ಧರಿಸಿದಮೇಲೆಯೇ ಉಪನಯನವನ್ನು ಮಾಡಿಸಿದನೆಂದು ಹೇಳಿರುವದರಿಂದ ವೈದಿಕಬ್ರಹ್ಮವಿದ್ಯೆಯಲ್ಲಿ ಶೂದ್ರನಿಗೆ ಅಧಿಕಾರವಿಲ್ಲವೆಂದಾಯಿತು ಎಂದು ಸೂ. ಭಾ. ೧-೩-೩೭ (ಭಾ. ಭಾ. ೩೧೧) ರಲ್ಲಿ ನಿರ್ಣಯಿಸಿದೆ.

2 ಹಟ್ಟಿಯಿಂದ ಹೊರಕ್ಕೆ ಹೊಡೆಯಿಸಿ ಎಂದರ್ಥ.

ನಾಲ್ಕನೆಯ ಅಧ್ಯಾಯ - ಐದನೆಯ ಖಂಡ

(ಷೋಡಶಕಲವಿದ್ಯೆ)

ಸತ್ಯಕಾಮನಿಗೆ ಎತ್ತಿನ ಉಪದೇಶ

(ಉಪನಿಷತ್ತು)

ಅಥ ಹೈನಮೃಷಭೋಽಭ್ಯುವಾದ ಸತ್ಯಕಾಮಽ ಇತಿ ಭಗವ ಇತಿ ಹ ಪ್ರತಿಶುಶ್ರಾವ ಪ್ರಾಪಾತ್ಃ ಸೋಮ್ಯ ಸಹಸ್ರಗ್ಂ ಸ್ಮಃ ಪ್ರಾಪಯ ನ ಆಚಾರ್ಯಕುಲಮ್ ॥೧॥

೧. ಆಗ ಎತ್ತು ಇವನನ್ನು 'ಸತ್ಯಕಾಮಾಽ' ಎಂದು (ಕೂಗಿ) ಕರೆಯಿತು. ಅದಕ್ಕೆ ಪ್ರತಿಯಾಗಿ (ಇವನು) 'ಭಗವಂತನೆ', ಎಂದನು. 'ಸೋಮ್ಯ, ಸಾವಿರವನ್ನು ಮುಟ್ಟಿರುತ್ತೇವೆ ; ಆಚಾರ್ಯರ ಕುಲಕ್ಕೆ ನಮ್ಮನ್ನು ಸೇರಿಸು !'

ಗೋಗಳು ಸಾವಿರವಾದದ್ದು

(ಭಾಷ್ಯ)

೩೧೧. ತಮೇತಂ ಶ್ರದ್ಧಾತಪೋಭ್ಯಾಂ ಸಿದ್ಧಂ ವಾಯುದೇವತಾ ದಿಕ್ಸಂಬನ್ಧಿನೀ ತುಷ್ಟಾ ಸತೀ ಋಷಭಮನುಪ್ರವಿಶ್ಯ ಋಷಭಭಾವಮಾಪನ್ನಾ ಅನುಗ್ರಹಾಯ । ಅಥ ಹ ಏನಮ್ ಋಷಭಃ ಅಭ್ಯುವಾದ ಅಭ್ಯುಕ್ತವಾನ್ ಸತ್ಯಕಾಮಽ ಇತಿ ಸಂಬೋಧ್ಯ । ತಮ್ ಅಸೌ ಸತ್ಯಕಾಮೋ ಭಗವಃ ಇತಿ ಹ ಪ್ರತಿಶುಶ್ರಾವ ಪ್ರತಿವಚನಂ ದದೌ । ಪ್ರಾಪಾತ್ಃ ಸೋಮ್ಯ ಸಹಸ್ರಂ ಸ್ಮಃ । ಪೂರ್ಣಾ ತವ ಪ್ರತಿಜ್ಞಾ । ಅತಃ ಪ್ರಾಪಯ ನಃ ಅಸ್ಮಾನ್ ಆಚಾರ್ಯಕುಲಮ್ ॥

(ಭಾಷ್ಯಾರ್ಥ)

(ಹೀಗೆ) ಶ್ರದ್ಧಾತಪಸ್ಸುಗಳಿಂದ ಸಿದ್ಧನಾಗಿದ್ದ ಆ ಇವನನ್ನು ಕುರಿತು ದಿಕ್ಸಂಬಂಧಿಯಾದ ವಾಯುದೇವತೆಯು ತೃಪ್ತವಾಗಿ (ಇವನನ್ನು) ಅನುಗ್ರಹಿಸುವದಕ್ಕಾಗಿ ಎತ್ತಿನೊಳಗೆ ಹೊಕ್ಕು ಎತ್ತಾಯಿತು. ಆಗ ಇವನನ್ನು ಕುರಿತು ಎತ್ತು 'ಸತ್ಯಕಾಮಾಽ' ಎಂದು (ಕೂಗಿ) ಕರೆದು ಇಂತೆಂದಿತು , ಹೀಗೆಂದು ನುಡಿಯಿತು. ಅದಕ್ಕೆ ಪ್ರತಿಯಾಗಿ ಈ ಸತ್ಯಕಾಮನು 'ಭಗವಂತನೆ !' ಎಂದನು, ಪ್ರತ್ಯುತ್ತರವನ್ನು ಕೊಟ್ಟನು. ಸೋಮ್ಯನೆ, ಸಾವಿರವನ್ನು ಮುಟ್ಟಿರುತ್ತೇವೆ, ನಿನ್ನ ಪ್ರತಿಜ್ಞೆಯು

ಪೂರ್ಣವಾಯಿತು. ಆದ್ದರಿಂದ (ನಃ = ಅಸ್ಮಾನ್) ನಮ್ಮಗಳನ್ನು ಆಚಾರ್ಯರ ಮನೆಗೆ ಸೇರಿಸು ! (ಎಂದಿತು).

(ಉಪನಿಷತ್ತು)

ಬ್ರಹ್ಮಣಶ್ಚತೇ ಪಾದಂ ಬ್ರವಾಣೀತಿ ಬ್ರವೀತು ಮೇ ಭಗವಾನಿತಿ ತಸ್ಮೈ ಹೋವಾಚ ಪ್ರಾಚೀ ದಿಕ್ಕಲಾ ಪ್ರತೀಚೀ ದಿಕ್ಕಲಾ ದಕ್ಷಿಣಾ ದಿಕ್ಕಲೋದೀಚೀ ದಿಕ್ಕಲೈಷ ವೈ ಸೋಮ್ಯ ಚತುಷ್ಕಲಃ ಪಾದೋ ಬ್ರಹ್ಮಣಃ ಪ್ರಕಾಶವಾನ್ನಾಮ ॥೨॥

೨. 'ನಿನಗೆ ಬ್ರಹ್ಮದ (ಒಂದು) ಪಾದವನ್ನು ಹೇಳಿಕೊಡುವೆನು', 'ಪೂಜ್ಯರು ನನಗೆ ಹೇಳಿಕೊಡಬೇಕು !' ಅವನಿಗೆ ಹೇಳಿತೇನೆಂದರೆ : 'ಪೂರ್ವ ದಿಕ್ಕು (ಒಂದು) ಕಲೆ , ಪಶ್ಚಿಮದಿಕ್ಕು (ಒಂದು) ಕಲೆ , ದಕ್ಷಿಣ ದಿಕ್ಕು (ಒಂದು) ಕಲೆ, ಉತ್ತರದಿಕ್ಕು (ಒಂದು) ಕಲೆ. ಸೋಮ್ಯ, ಇದೇ ಬ್ರಹ್ಮದ ಪ್ರಕಾಶವಾನ್ ಎಂಬ ಚತುಷ್ಕಲಪಾದವು.

ಬ್ರಹ್ಮದ ಮೊದಲನೆಯ ಪಾದ

(ಭಾಷ್ಯ)

೩೧೨. ಕಿಂ ಚ ಅಹಂ ಬ್ರಹ್ಮಣಃ ಪರಸ್ಯ ತೇ ತುಭ್ಯಂ ಪಾದಂ ಬ್ರವಾಣಿ ಕಥಯಾನಿ । ಇತ್ಯುಕ್ತಃ ಪ್ರತ್ಯುವಾಚ । ಬ್ರವೀತು ಕಥಯತು ಮೇ ಮಹ್ಯಂ ಭಗವಾನ್ । ಇತ್ಯುಕ್ತಃ ಋಷಭಃ ತಸ್ಮೈ ಸತ್ಯಕಾಮಾಯ ಹ ಉವಾಚ । ಪ್ರಾಚೀ ದಿಕ್ ಕಲಾ ಬ್ರಹ್ಮಣಃ ಪಾದಸ್ಯ ಚತುರ್ಥೋ ಭಾಗಃ । ತಥಾ ಪ್ರತೀಚೀ ದಿಕ್ ಕಲಾ, ದಕ್ಷಿಣಾ ದಿಕ್ ಕಲಾ, ಉದೀಚೀ ದಿಕ್ ಕಲಾ । ಏಷ ವೈ ಸೋಮ್ಯ ಬ್ರಹ್ಮಣಃ ಪಾದಃ ಚತುಷ್ಕಲಃ ಚತಸ್ರಃ ಕಲಾ ಅವಯವಾ ಯಸ್ಯ ಸೋಽಯಂ ಚತುಷ್ಕಲಃ ಪಾದೋ ಬ್ರಹ್ಮಣಃ ಪ್ರಕಾಶವಾನ್ ನಾಮ । ಪ್ರಕಾಶವಾನ್ ಇತ್ಯೇವಂ[1] ನಾಮ ಅಭಿಧಾನಂ ಯಸ್ಯ । ತಥಾ ಉತ್ತರೇಽಪಿ ಪಾದಾಸ್ತ್ರಯಃ ಚತುಷ್ಕಲಾ ಬ್ರಹ್ಮಣಃ ॥

(ಭಾಷ್ಯಾರ್ಥ)

ಮತ್ತು ಪರಬ್ರಹ್ಮದ[2] (ಒಂದು) ಪಾದವನ್ನು ನಿನಗೆ ಹೇಳಿಕೊಡುವೆನು,

---

1. 'ಏವ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
2. ಪರಬ್ರಹ್ಮವೇ ಷೋಡಶಕಲವೆಂದು ಉಪದಿಷ್ಟವಾಗಿರುವ ಉಪಾಸ್ಯಬ್ರಹ್ಮವೆಂಬುದನ್ನು ಈ ವಿಶೇಷಣವು ತಿಳಿಸುತ್ತದೆ.

ತಿಳಿಸಿಕೊಡುವೆನು. ಹೀಗೆನ್ನಲು (ಸತ್ಯಕಾಮನು) ಪ್ರತ್ಯುತ್ತರವಿತ್ತನು : '(ಮೇ= ಮಹ್ಯಂ) ನನಗೆ ಪೂಜ್ಯರಾದ (ತಾವು) ಹೇಳಿಕೊಡಬೇಕು, ತಿಳಿಸಿಕೊಡಬೇಕು !' ಹೀಗೆನ್ನಲು ಎತ್ತು ಆ ಸತ್ಯಕಾಮನಿಗೆ ಇಂತೆಂದಿತು. ಪೂರ್ವದಿಕ್ಕು (ಒಂದು) ಕಲೆ.[1] ಬ್ರಹ್ಮದ (ಈ) ಪಾದದ ನಾಲ್ಕನೆಯ ಭಾಗವು. ಹೀಗೆಯೇ ಪಶ್ಚಿಮದಿಕ್ಕು ಒಂದು ಕಲೆ, ದಕ್ಷಿಣದಿಕ್ಕು (ಒಂದು) ಕಲೆ, ಉತ್ತರದಿಕ್ಕು (ಒಂದು) ಕಲೆ. ಸೋಮ್ಯ, ಇದೇ ಚತುಷ್ಕಲವಾದ-ನಾಲ್ಕು ಕಲೆಗಳು, ಅವಯವಗಳು, ಇದಕ್ಕೆ ಇರುವದರಿಂದ ಚತುಷ್ಕಲ(ವೆನಿಸಿರುವ)-ಬ್ರಹ್ಮದ ಪಾದವು, ಪ್ರಕಾಶವಾನ್ ಎಂಬ ಹೆಸರಿನ (ಪಾದವು), ಪ್ರಕಾಶವಾನ್ ಎಂಬ[2] (ನಾಮ-ಅಭಿಧಾನವು) ಇದಕ್ಕೆ ಇರುವದು. ಹೀಗೆಯೇ ಬ್ರಹ್ಮದ ಮುಂದಿನ ಮೂರುಪಾದಗಳೂ ಚತುಷ್ಕಲವಾಗಿರುತ್ತವೆ.

(ಉಪನಿಷತ್ತು)

ಸ ಯ ಏತಮೇವಂ ವಿದ್ವಾಗ್ಂಶ್ಚತುಷ್ಕಲಂ ಪಾದಂ ಬ್ರಹ್ಮಣಃ ಪ್ರಕಾಶವಾನಿತ್ಯುಪಾಸ್ತೇ ಪ್ರಕಾಶವಾನಸ್ಮಿಲ್ಲೋಕೇ ಭವತಿ ಪ್ರಕಾಶವತೋ ಹ ಲೋಕಾಞ್ಜಯತಿ ಯ ಏತಮೇವಂ ವಿದ್ವಾಗ್ಂಶ್ಚತುಷ್ಕಲಂ ಪಾದಂ ಬ್ರಹ್ಮಣಃ ಪ್ರಕಾಶವಾನಿತ್ಯುಪಾಸ್ತೇ ॥೩॥

೩. ಯಾವನು ಬ್ರಹ್ಮದ ಈ ಚತುಷ್ಕಲಪಾದವನ್ನು ಹೀಗೆಂದರಿತು ಪ್ರಕಾಶವುಳ್ಳದ್ದು - ಎಂದು ಉಪಾಸನೆಮಾಡುವನೋ ಅವನು ಈ ಲೋಕದಲ್ಲಿ ಪ್ರಕಾಶವುಳ್ಳವನಾಗಿರುವನು. ಯಾವನು ಬ್ರಹ್ಮದ ಈ ಚತುಷ್ಕಲಪಾದವನ್ನು ಹೀಗೆಂದರಿತು ಪ್ರಕಾಶವುಳ್ಳದ್ದೆಂದು ಉಪಾಸನೆಮಾಡುವನೋ (ಅವನು) ಪ್ರಕಾಶವುಳ್ಳ ಲೋಕಗಳನ್ನು ಗೆದ್ದುಕೊಳ್ಳುವನು.

ಬ್ರಹ್ಮದ ಮೊದಲನೆಯ ಪಾದದ ಉಪಾಸನೆಯ ಫಲ

(ಭಾಷ್ಯ)

೩೧೩. ಸ ಯಃ ಕಶ್ಚಿತ್ ಏವಂ ಯಥೋಕ್ತಮ್ ಏವಂ ಬ್ರಹ್ಮಣಃ ಚತುಷ್ಕಲಂ ಪಾದಂ (ಏವಂ)[3] ವಿದ್ವಾನ್ ಪ್ರಕಾಶವಾನ್ ಇತ್ಯನೇನ ಗುಣೇನ ವಿಶಿಷ್ಟಮ್ ಉಪಾಸ್ತೇ,

---

1. ಹದಿನಾರನೆಯ ಅಂಶವು. 2. 'ಪ್ರಕಾಶವಾನ್ ಇತ್ಯೇವ' ಎಂಬ ಅಚ್ಚಿನ ಪಾಠಕ್ಕೆ ಪ್ರಕಾಶವಾನ್ ಎಂದೇ - ಎಂದು ಅರ್ಥ ; ಅವಧಾರಣೆಯು ಬೇಕಿಲ್ಲದ್ದರಿಂದ ಏವಂ (=ಎಂಬ) ಎಂದು ತಿದ್ದಿಕೊಂಡಿದೇವೆ. 3. ಈ ಮೂಲದ ಮಾತು ಇಲ್ಲಿರಬೇಕು.

ತಸ್ಯೇದಂ ಫಲಮ್ । ಪ್ರಕಾಶವಾನ್ ಅಸ್ಮಿನ್ ಲೋಕೇ ಭವತಿ । ಪ್ರಖ್ಯಾತೋ ಭವತಿ ಇತ್ಯರ್ಥಃ । ತಥಾ ಅದೃಷ್ಟಂ ಫಲಮ್ । ಪ್ರಕಾಶವತಃ ಹ ಲೋಕಾನ್ ದೇವಾದಿಸಂಬನ್ಧಿನಃ ಮೃತಃ ಸನ್ ಜಯತಿ ಪ್ರಾಪ್ನೋತಿ । ಯ ಏತಮೇವಂ ವಿದ್ವಾನ್ ಚತುಷ್ಕಲಂ ಪಾದಂ ಬ್ರಹ್ಮಣಃ ಪ್ರಕಾಶವಾನ್ ಇತ್ಯುಪಾಸ್ತೇ ॥

(ಭಾಷ್ಯಾರ್ಥ)

ಯಾವನೊಬ್ಬನು ಮೇಲೆ ಹೇಳಿರುವ ಈ ಬ್ರಹ್ಮದ ಚತುಷ್ಕಲಪಾದವನ್ನು ಹೀಗೆಂದು ಅರಿತು ಪ್ರಕಾಶವುಳ್ಳದ್ದು - ಎಂಬೀ ಗುಣದಿಂದ ಕೂಡಿದ್ದೆಂದು ಉಪಾಸನೆ ಮಾಡುತ್ತಾನೋ ಅವನಿಗೆ ಇದು (ದೃಷ್ಟ)ಫಲವು : ಅವನು ಈ ಲೋಕದಲ್ಲಿ ಪ್ರಕಾಶವುಳ್ಳವನಾಗಿರುತ್ತಾನೆ, ಪ್ರಖ್ಯಾತನಾಗಿರುತ್ತಾನೆ ಎಂದರ್ಥ. ಇದರಂತೆ (ಈ) ಅದೃಷ್ಟಫಲವೂ (ಆಗುತ್ತದೆ). ಯಾವನು ಈ ಬ್ರಹ್ಮದ ಚತುಷ್ಕಲಪಾದವನ್ನು ಹೀಗೆಂದರಿತು ಪ್ರಕಾಶವುಳ್ಳದ್ದು - ಎಂದು ಉಪಾಸನೆಮಾಡುತ್ತಾನೋ ಅವನು ಪ್ರಕಾಶವುಳ್ಳ ದೇವಾದಿಗಳಿಗೆ ಸೇರಿದ ಲೋಕಗಳನ್ನು, ಸತ್ತವನಾಗಿ, ಗೆದ್ದುಕೊಳ್ಳುತ್ತಾನೆ, ಪಡೆದುಕೊಳ್ಳುತಾನೆ.

ನಾಲ್ಕನೆಯ ಅಧ್ಯಾಯ - ಆರನೆಯ ಖಂಡ

(ಷೋಡಶಕಲವಿದ್ಯೆ)

ಸತ್ಯಕಾಮನಿಗೆ ಅಗ್ನಿಯ ಉಪದೇಶ

(ಉಪನಿಷತ್ತು)

ಅಗ್ನಿಷ್ಟೇ ಪಾದಂ ವಕ್ತೇತಿ ಸ ಹ ಶ್ವೋಭೂತೇ ಗಾ ಅಭಿಪ್ರಸ್ಥಾಪಯಾಂಚಕಾರ ತಾ ಯತ್ರಾಭಿ ಸಾಯಂ ಬಭೂವು- ಸತ್ತಾಗ್ನಿಮುಪಸಮಾಧಾಯ ಗಾ ಉಪರುಧ್ಯ ಸಮಿಧಮಾಧಾಯ ಪಶ್ಚಾದಗ್ನೇಃ ಪ್ರಾಙುಪೋಪವಿವೇಶ ॥೧॥

೧. 'ನಿನಗೆ ಅಗ್ನಿಯು (ಇನ್ನೊಂದು) ಪಾದವನ್ನು ಹೇಳಿಕೊಡುವದು' ಎಂದಿತು. ಅವನು ಬೆಳಗಾಗಲು ಗೋಗಳನ್ನು ಹೊಡೆದುಕೊಂಡು

ಹೊರಟನು. ಅವು ಎಲ್ಲಿ ಸಾಯಂಕಾಲದಲ್ಲಿ ಒಟ್ಟಾದವೋ ಅಲ್ಲಿ ಅಗ್ನಿಯನ್ನು ಹೊತ್ತಿಸಿ, ಗೋಗಳನ್ನು ತಡೆಗಟ್ಟಿ ಸಮಿತ್ತನ್ನು ಇಟ್ಟು ಅಗ್ನಿಯ ಹಿಂದುಗಡೆಯಲ್ಲಿ ಪೂರ್ವಮುಖನಾಗಿ ಹತ್ತಿರಹತ್ತಿರದಲ್ಲಿಯೇ ಕುಳಿತುಕೊಂಡನು.

ಸತ್ಯಕಾಮನು ಅಗ್ನಿಯ ಉಪದೇಶಕ್ಕೆ ಅನುವಾದದ್ದು

(ಭಾಷ್ಯ)

೩೧೪. ಸಃ ಅಗ್ನಿಷ್ಟೇ[1] ಪಾದಂ ವಕ್ತಾ ಇತ್ಯುಪರರಾಮ ಋಷಭಃ। ಸ ಸತ್ಯಕಾಮಃ ಹ ಶ್ವೋಭೂತೇ ಪರೇದ್ಯುಃ ನೈತ್ಯಕಂ ನಿತ್ಯಂ ಕರ್ಮ[2] ಕೃತ್ವಾ ಗಾ ಅಭಿಪ್ರಸ್ಥಾಪಯಾಂಚಕಾರ ಆಚಾರ್ಯಕುಲಂ ಪ್ರತಿ । ತಾಃ ಶನೈಶ್ಚರನ್ತ್ಯಃ ಆಚಾರ್ಯಕುಲಾಭಿಮುಖ್ಯಃ ಪ್ರಸ್ಥಿತಾಃ ಯತ್ರ ಯಸ್ಮಿನ್ ಕಾಲೇ ದೇಶೇ[3] ಅಭಿ ಸಾಯಂ ನಿಶಾಯಾಮ್ ಅಭಿಸಂಬಭೂವುಃ ಏಕತ್ರಾಭಿಮುಖ್ಯಃ ಸಂಭೂತಾಃ ತತ್ರ ಅಗ್ನಿಮ್ ಉಪಸಮಾಧಾಯ ಗಾ ಉಪರುಧ್ಯ ಸಮಿಧಮಾಧಾಯ ಪಶ್ಚಾತ್ ಅಗ್ನೇಃ ಪ್ರಾಙ್ಮುಖಃ[4] ಉಪೋಪವಿವೇಶ[5] ಋಷಭವಚೋ ಧ್ಯಾಯನ್ ॥

(ಭಾಷ್ಯಾರ್ಥ)

ಆ (ಎತ್ತು) ನಿನಗೆ ಅಗ್ನಿಯು (ಇನ್ನೊಂದು) ಪಾದವನ್ನು ಹೇಳುವದು - ಎಂದು (ನುಡಿದು)[6] ಸುಮ್ಮನಾಯಿತು. ಆ ಸತ್ಯಕಾಮನು ಬೆಳಗಾಗಲು ಮಾರನೆಯ ದಿನ ನಿತ್ಯದ ಕರ್ಮವನ್ನು ಮಾಡಿ ಗೋಗಳನ್ನು ಆಚಾರ್ಯರ ಮನೆಯಕಡೆಗೆ ಹೊರಡಿಸಿದನು. ಅವು ಮೆಲ್ಲಗೆ ನಡೆಯುತ್ತಾ ಆಚಾರ್ಯರ ಮನೆಯಕಡೆಗೆ ಹೊರಟು ಎಲ್ಲಿ

ಬಹುಕೋಶಗಳಲ್ಲಿ ಅಗ್ನಿಷ್ಟೇ ಎಂದೇ ಇದೆ. ಮೂಲದಲ್ಲಿರುವಂತೆ ಇಲ್ಲಿ ಬರೆದು ಕೊಂಡಿದೆ ಎಂದು ಹಿಡಿದು ಆ ಪಾಠವನ್ನೇ ಇಟ್ಟುಕೊಂಡಿದೇವೆ.

'ನಿತ್ಯಂ ಕರ್ಮ'ಎಂಬ ಎರಡು ಮಾತುಗಳೂ ಇಲ್ಲದ ಪಾಠವು ಉಂಟು ; ಹೇಗೂ 'ನಿತ್ಯಂ'ಎಂಬ ಮಾತು ಇಲ್ಲದಿದ್ದರೂ ಸಾಗುತ್ತದೆ.

ಕಾಲೇ ಎಂಬುದು ಬೇಕಿಲ್ಲವೆಂದು ತೋರುತ್ತದೆ. ಅನುವಾದದ ಟಿಪ್ಪಣಿಯನ್ನು ನೋಡಿ.

ಕೆಲವು ಪುಸ್ತಕಗಳಲ್ಲಿ ಈ ವಾ॥ ಪಾಠವೇ ಇರಬಹುದು.

ವಾ॥ ಪಾಠದಲ್ಲಿ ಒಂದು ಉಪ ಬಿಟ್ಟುಹೋಗಿದೆ.

ಇತ್ಯುಕ್ತ್ವಾ ಎಂದೂ ಒಂದು ಕೋಶದಲ್ಲಿ ಪಾಠವಿರುವದಾಗಿ ತಿಳಿಯುತ್ತದೆ.

ಯಾವ ಕಾಲದಲ್ಲಿ (ಯಾವ) ದೇಶದಲ್ಲಿ[1] ಸಾಯಂಕಾಲ ಕತ್ತಲೆಯಾಗಲು ಒಟ್ಟಾದವೋ, ಒಂದೇ ಕಡೆಯಲ್ಲಿ ಅಭಿಮುಖವಾಗಿ ಸೇರಿದವೋ, ಅಲ್ಲಿ ಬೆಂಕಿಯನ್ನು ಹೊತ್ತಿಸಿ ಗೋಗಳನ್ನು ತಡೆಗಟ್ಟಿ ಸಮಿತ್ತನ್ನಿಟ್ಟು ಅಗ್ನಿಯ ಹಿಂದುಗಡೆಯಲ್ಲಿ ಪೂರ್ವ ಮುಖನಾಗಿ ಎತ್ತಿನ ಮಾತನ್ನೇ ಚಿಂತಿಸಿಕೊಳ್ಳುತ್ತಾ ಹತ್ತಿರಹತ್ತಿರ[2] ಕುಳಿತುಕೊಂಡನು.

(ಉಪನಿಷತ್ತು)

ತಮಗ್ನಿರಭ್ಯುವಾದ ಸತ್ಯಕಾಮಃ ಇತಿ ಭಗವ ಇತಿ ಹ ಪ್ರತಿ ಶುಶ್ರಾವ ॥೨॥

ಬ್ರಹ್ಮಣಃ ಸೋಮ್ಯ ತೇ ಪಾದಂ ಬ್ರವಾಣೀತಿ ಬ್ರವೀತು ಮೇ ಭಗವಾನಿತಿ ತಸ್ಮೈ ಹೋವಾಚ ಪೃಥಿವೀ ಕಲಾಽನ್ತರಿಕ್ಷಂ ಕಲಾ ದ್ಯೌಃ ಕಲಾ ಸಮುದ್ರಃ ಕಲೈಷ ವೈ ಸೋಮ್ಯ ಚತುಷ್ಕಲಃ ಪಾದೋ ಬ್ರಹ್ಮಣೋಽನನ್ತವಾನ್ನಾಮ ॥೩॥

೨. ಅವನನ್ನು ಕುರಿತು ಅಗ್ನಿಯು 'ಸತ್ಯಕಾಮಾ೩' ಎಂದಿತು. ಅದಕ್ಕೆ ಪ್ರತಿಯಾಗಿ (ಇವನು) 'ಭಗವಂತನೆ' , ಎಂದನು.

೩. ಸೋಮ್ಯ , ನಿನಗೆ ಬ್ರಹ್ಮದ (ಒಂದು) ಪಾದವನ್ನು ಹೇಳಿಕೊಡುವೆನು. 'ಪೂಜ್ಯರು ನನಗೆ ಹೇಳಿಕೊಡಬೇಕು !' ಅವನಿಗೆ (ಅದು) ಹೇಳಿತೇನೆಂದರೆ 'ಪೃಥಿವಿಯು (ಒಂದು) ಕಲೆ, ಅಂತರಿಕ್ಷವು (ಒಂದು) ಕಲೆ, ದ್ಯುಲೋಕವು ಒಂದು ಕಲೆ, ಸಮುದ್ರವು (ಒಂದು) ಕಲೆ. ಸೋಮ್ಯ, ಇದೇ ಬ್ರಹ್ಮದ ಅನಂತವಾನ್ ಎಂಬ ಚತುಷ್ಕಲಪಾದವು.'

ಬ್ರಹ್ಮದ ಎರಡನೆಯ ಪಾದ

(ಭಾಷ್ಯ)

೩೧೫. ತಮ್ ಅಗ್ನಿರಭ್ಯುವಾದ ಸತ್ಯಕಾಮಃ ಇತಿ ಸಂಬೋಧ್ಯ । ತಮ್ ಅಸೌ

---

1. ಸಾಯಂಕಾಲ ಎಂದೇ ಇರುವದರಿಂದ ಯಸ್ಮಿನ್ ದೇಶೇ ಎಂದಿಷ್ಟೇ ಇದ್ದರೂ ಸಾಕಾಗಿತ್ತೆಂದು ತೋರುತ್ತದೆ ; ಅಥವಾ ಸಾಯಂಕಾಲ ಯಾವಾಗ ಒಟ್ಟುಗೂಡಿದವೋ ಎಂದೂ ಅರ್ಥವಾಗಬಹುದು. ಆಗ ದೇಶೇ ಚ ಎಂದಿದ್ದರೆ ಚೆನ್ನಾಗಿರುವದು.

2. ಗೋಗಳಿಗೂ ಅಗ್ನಿಗೂ ಹತ್ತಿರವಾಗಿ ಕುಳಿತನೆಂಬುದನ್ನು ಎರಡು ಉಪಶಬ್ದಗಳು ತಿಳಿಸುತದೆ ಎಂದು ಆ॥ ಟೀಕೆ.

ಸತ್ಯಕಾಮೋ ಭಗವಃ ಇತಿ ಹ ಪ್ರತಿಶುಶ್ರಾವ ಪ್ರತಿವಚನಂ ದದೌ । ಬ್ರಹ್ಮಣಃ ಸೋಮ್ಯ ತೇ ಪಾದಂ ಬ್ರವಾಣೀತಿ । ಬ್ರವೀತು ಮೇ ಭಗವಾನ್ ಇತಿ । ತಸ್ಮೈ ಹ ಉವಾಚ । ಪೃಥಿವೀ ಕಲಾ ಅನ್ತರಿಕ್ಷಂ ಕಲಾ ದ್ಯೌಃ ಕಲಾ ಸಮುದ್ರಃ ಕಲಾ ಇತಿ ಆತ್ಮಗೋಚರಮೇವ ದರ್ಶನಮ್ ಅಗ್ನಿರಬ್ರವೀತ್ । ಏಷ ವೈ ಸೋಮ್ಯ ಚತುಷ್ಕಲಃ ಪಾದೋ ಬ್ರಹ್ಮಣಃ ಅನನ್ತವಾನ್ ನಾಮ ॥

(ಭಾಷ್ಯಾರ್ಥ)

ಅವನನ್ನು ಕುರಿತು ಅಗ್ನಿಯು 'ಸತ್ಯಕಾಮಾ!' ಎಂದು ಸಂಬೋಧಿಸಿ ಮಾತನಾಡಿತು. ಅದಕ್ಕೆ ಪ್ರತಿಯಾಗಿ ಈ ಸತ್ಯಕಾಮನು 'ಭಗವಂತನೆ !' ಎಂದನು, ಪ್ರತ್ಯುತ್ತರವನ್ನು ಕೊಟ್ಟನು. ಅಗ್ನಿಯು , ''ಸೋಮ್ಯ, ಬ್ರಹ್ಮದ (ಒಂದು) ಪಾದವನ್ನು ನಿನಗೆ ಹೇಳಿಕೊಡುವೆನು'' ಎಂದಿತು. ''ಪೂಜ್ಯರು ನನಗೆ ಹೇಳಿಕೊಡಬೇಕು'' ಎನ್ನಲು ಅವನಿಗೆ ಅದು ಹೇಳಿತೇನೆಂದರೆ, ಪೃಥಿವಿಯು (ಒಂದು) ಕಲೆ, ಅಂತರಿಕ್ಷವು (ಒಂದು) ಕಲೆ, ದ್ಯುಲೋಕವು (ಒಂದು) ಕಲೆ, ಸಮುದ್ರವು (ಒಂದು) ಕಲೆ- ಎಂದು ತನ್ನ ವಿಷಯವಾದ ದರ್ಶನವನ್ನೇ[1] ಅಗ್ನಿಯು ಹೇಳಿತು. ''ಸೋಮ್ಯ, ಇದೇ ಬ್ರಹ್ಮದ ಅನಂತವಾನ್ ಎಂಬ ಚತುಷ್ಕಲಪಾದವು.''

(ಉಪನಿಷತ್ತು)

ಸ ಯ ಏತಮೇವಂ ವಿದ್ವಾಗ್ಂಶ್ಚತುಷ್ಕಲಂ ಪಾದಂ ಬ್ರಹ್ಮಣೋಽನನ್ತವಾನಿತ್ಯುಪಾಸ್ತೇಽನನ್ತವಾನಸ್ಮಿಲ್ಲೋಕೇ ಭವತ್ಯನನ್ತವತೋ ಹ ಲೋಕಾಞ್ಜಯತಿ ಯ ಏತಮೇವಂ ವಿದ್ವಾಗ್ಂಶ್ಚತುಷ್ಕಲಂ ಪಾದಂ ಬ್ರಹ್ಮಣೋಽನನ್ತವಾನಿತ್ಯುಪಾಸ್ತೇ ॥೪॥

೪. ಯಾವನು ಹೀಗೆಂದರಿತು ಈ ಬ್ರಹ್ಮದ ಚತುಷ್ಕಲಪಾದವನ್ನು ಅನಂತವಂತವೆಂದು ಉಪಾಸನೆಮಾಡುವನೋ ಅವನು ಈ ಲೋಕದಲ್ಲಿ ಅನಂತವಂತನಾಗುತ್ತಾನೆ. ಯಾವನು ಹೀಗೆಂದರಿತು ಬ್ರಹ್ಮದ ಚತುಷ್ಕಲ ಪಾದವನ್ನು ಅನಂತವಂತವೆಂದು ಉಪಾಸನೆಮಾಡುತ್ತಾನೋ (ಅವನು) ಅಂತವಿಲ್ಲದ ಲೋಕಗಳನ್ನು ಗೆದ್ದುಕೊಳ್ಳುತ್ತಾನೆ.

1. ಅಗ್ನಿಯು ಪೃಥಿವ್ಯಾದಿಗಳಿಗೆ ಸಂಬಂಧವುಳ್ಳ ದೇವತೆ ; ಆದ್ದರಿಂದ ಈ ಪೃಥಿವ್ಯಾದಿರೂಪದ ಚತುಷ್ಕಲಪಾದವನ್ನೇ ಹೇಳಿತು.

ಎರಡನೆಯ ಚತುಷ್ಕಲಪಾದದ ಉಪಾಸನೆಯ ಫಲ

(ಭಾಷ್ಯ)

೩೧೬. ಸ ಯಃ ಕಶ್ಚಿತ್ ಯಥೋಕ್ತಂ ಪಾದಮ್ ಅನನ್ತವತ್ತ್ವೇನ ಗುಣೇನ ಉಪಾಸ್ತೇ ಸ ತಥೈವ ತದ್ಗುಣೋ ಭವತಿ ಅಸ್ಮಿಲ್ಲೋಕೇ । ಮೃತಶ್ಚ ಅನನ್ತವತೋ ಹ ಲೋಕಾನ್ ಸ ಜಯತಿ ಯ ಏತಮೇವಮ್ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಯಾವನೊಬ್ಬನು ಮೇಲೆ ಹೇಳಿದ ಪಾದವನ್ನು ಅಂತವಿಲ್ಲದ್ದೆಂಬ ಗುಣ ವುಳ್ಳದ್ದೆಂದು ಉಪಾಸನೆಮಾಡುವನೋ ಅವನು ಈ ಲೋಕದಲ್ಲಿ ಹಾಗೆಯೇ ಅದೇ ಗುಣವುಳ್ಳವನಾಗುತ್ತಾನೆ. ಸತ್ತ ಬಳಿಕ ಅಂತವಿಲ್ಲದ ಲೋಕಗಳನ್ನು ಗೆದ್ದುಕೊಳ್ಳುತ್ತಾನೆ. 'ಯ ಏವಮ್' ಮುಂತಾದ (ಉಳಿದ ಗ್ರಂಥಕ್ಕೆ) ಹಿಂದಿನಂತೆಯೇ ಅರ್ಥ.

ನಾಲ್ಕನೆಯ ಅಧ್ಯಾಯ - ಏಳನೆಯ ಖಂಡ

(ಷೋಡಶಕಲವಿದ್ಯೆ)

ಸತ್ಯಕಾಮನಿಗೆ ಹಂಸದ ಉಪದೇಶ

(ಉಪನಿಷತ್ತು)

ಹಗ್ಂಸಸ್ತೇ ಪಾದಂ ವಕ್ತೇತಿ ಸ ಹ ಶ್ವೋಭೂತೇ ಗಾ ಅಭಿಪ್ರಸ್ಥಾಪಯಾಂಚಕಾರ ತಾ ಯತ್ರಾಭಿ ಸಾಯಂ ಬಭೂವು ಸತ್ತ್ರಾಗ್ನಿಮುಪಸಮಾಧಾಯ ಗಾ ಉಪರುಧ್ಯ ಸಮಿಧಮಾಧಾಯ ಪಶ್ಚಾದಗ್ನೇಃ ಪ್ರಾಙುಪೋಪವಿವೇಶ ॥೧॥

೧. 'ನಿನಗೆ ಹಂಸವು (ಇನ್ನೊಂದು) ಪಾದವನ್ನು ಹೇಳುವದು' ಎಂದಿತು. ಅವನು ಬೆಳಗಾಗಲು ಗೋಗಳನ್ನು ಹೊಡೆದುಕೊಂಡು ಹೊರಟನು. ಅವು ಎಲ್ಲಿ ಸಾಯಂಕಾಲದಲ್ಲಿ ಒಟ್ಟಾದವೋ ಅಲ್ಲಿ ಅಗ್ನಿಯನ್ನು

ಹೊತ್ತಿಸಿ ಗೋಗಳನ್ನು ತಡೆಗಟ್ಟಿ ಸಮಿತ್ತನ್ನಿಟ್ಟು ಅಗ್ನಿಯ ಹಿಂದುಗಡೆ ಪೂರ್ವಾಭಿಮುಖನಾಗಿ ಹತ್ತಿರ ಹತ್ತಿರವೇ ಕುಳಿತುಕೊಂಡನು.

(ಭಾಷ್ಯ)

೩೦೭. ಸೋಽಗ್ನಿಃ ಹಂಸಸ್ತೇ ಪಾದಂ ವಕ್ತಾ ಇತ್ಯುಕ್ತ್ವಾ[1] ಉಪರರಾಮ । ಹಂಸ ಆದಿತ್ಯಃ । ಶೌಕ್ಲ್ಯಾತ್ ಪತನಸಾಮಾನ್ಯಾಚ್ಚ । ಸ ಹ ಶ್ವೋಭೂತ ಇತ್ಯಾದಿ ಸಮಾನಮ್ ॥

(ಭಾಷ್ಯಾರ್ಥ)

ಆ ಅಗ್ನಿಯು ಹಂಸವು ನಿನಗೆ (ಇನ್ನೊಂದು) ಪಾದವನ್ನು ಹೇಳುವದು - ಎಂದು ನುಡಿದು ಸುಮ್ಮನಾಯಿತು. ಹಂಸವು ಎಂದರೆ ಆದಿತ್ಯನು ; ಏಕೆಂದರೆ (ಅವನೂ) ಬೆಳ್ಳಗಿರುತ್ತಾನೆ ; (ಆಕಾಶದಲ್ಲಿ) ಹಾರಾಡುವದೆಂಬುದೂ (ಇಬ್ಬರಿಗೂ) ಸಮಾನ (ವಾಗಿದೆ). 'ಅವನು ಬೆಳಗಾಗಲು' ಎಂಬುದೇ ಮುಂತಾದ (ಭಾಗವು ಹಿಂದಿನ ಗ್ರಂಥಕ್ಕೂ ಇದಕ್ಕೂ) ಸಮಾನವು.

(ಉಪನಿಷತ್ತು)

ತಗ್ಂ ಹಗ್ಂಸ ಉಪನಿಪತ್ಯಾಭ್ಯುವಾದ ಸತ್ಯಕಾಮಾಽ ಇತಿ ಭಗವ ಇತಿ ಹ ಪ್ರತಿಶುಶ್ರಾವ ॥೨॥

ಬ್ರಹ್ಮಣಃ ಸೋಮ್ಯ ತೇ ಪಾದಂ ಬ್ರವಾಣೀತಿ ಬ್ರವೀತು ಮೇ ಭಗವಾನಿತಿ ತಸ್ಮೈ ಹೋವಾಚಾಗ್ನಿಃ ಕಲಾ ಸೂರ್ಯಃ ಕಲಾ ಚನ್ದ್ರಃ ಕಲಾ ವಿದ್ಯುತ್ ಕಲೈಷ ವೈ ಸೋಮ್ಯ ಚತುಷ್ಕಲಃ ಪಾದೋ ಬ್ರಹ್ಮಣೋ ಜ್ಯೋತಿಷ್ಮಾನ್ನಾಮ ॥೩॥

೨. ಹಂಸವು ಅವನ ಬಳಿಗೆ ಹಾರಿಬಂದು 'ಸತ್ಯಕಾಮಾಽ' ಎಂದಿತು. ಅವನು (ಅದಕ್ಕೆ) ಪ್ರತಿಯಾಗಿ 'ಭಗವಂತನೆ !' ಎಂದನು.

೩. 'ಸೋಮ್ಯ , ನಿನಗೆ ಬ್ರಹ್ಮದ (ಒಂದು) ಪಾದವನ್ನು ಹೇಳಿಕೊಡುವೆನು' ಎಂದಿತು. 'ಪೂಜ್ಯರು ನನಗೆ ಹೇಳಿಕೊಡಬೇಕು !' ಎಂದನು. ಅವನಿಗೆ ಅದು ಹೇಳಿತೇನೆಂದರೆ : 'ಅಗ್ನಿಯು (ಒಂದು) ಕಲೆ , ಸೂರ್ಯನು (ಒಂದು) ಕಲೆ ,

1. 'ಇತ್ಯುಕ್ತ್ವಾ' ಎಂಬ ಪಾಠವು ಇಲ್ಲಿರುವದರಿಂದ ಎಲ್ಲಾ ಕಡೆಯಲ್ಲಿಯೂ ಇದ್ದಿತೆ ? ಶೋಧಿಸಿ ನಿರ್ಣಯಿಸಬೇಕಾಗಿದೆ.

ಚಂದ್ರನು (ಒಂದು) ಕಲೆ, ಮಿಂಚು (ಒಂದು) ಕಲೆ, ಸೋಮ್ಯ, ಇದೇ ಬ್ರಹ್ಮದ ಜ್ಯೋತಿಷ್ಮಾನ್ ಎಂಬ ಚತುಷ್ಕಲಪಾದವು.

ಬ್ರಹ್ಮದ ಮೂರನೆಯ ಪಾದ

(ಭಾಷ್ಯ)

೩೧೮. ಅಗ್ನಿಃ ಕಲಾ ಸೂರ್ಯಃ ಕಲಾ ಚನ್ದ್ರಃ ಕಲಾ ವಿದ್ಯುತ್ ಕಲಾ ಏಷ ವೈ ಸೋಮ್ಯ.... ಇತಿ ಜ್ಯೋತಿರ್ವಿಷಯಮೇವ ಚ ದರ್ಶನಂ ಪ್ರೋವಾಚ। ಅತೋ ಹಂಸಸ್ಯ ಆದಿತ್ಯತ್ವಂ ಪ್ರತೀಯತೇ ॥

(ಭಾಷ್ಯಾರ್ಥ)

"ಅಗ್ನಿಯು (ಒಂದು) ಕಲೆ, ಸೂರ್ಯನು (ಒಂದು) ಕಲೆ, ಚಂದ್ರನು (ಒಂದು) ಕಲೆ, ಮಿಂಚು (ಒಂದು) ಕಲೆ, ಸೋಮ್ಯ, ಇದೇ....." ಎಂದು ಜ್ಯೋತಿರ್ವಿಷಯವಾದ ದರ್ಶನವನ್ನೇ (ಹಂಸವು) ಹೇಳಿತು. ಆದ್ದರಿಂದ ಹಂಸವು ಆದಿತ್ಯನೆಂದು ನಿಶ್ಚಯವಾಗುತ್ತದೆ.

ಮೂರನೆಯ ಪಾದದ ಉಪಾಸನೆಗೆ ಫಲ

(ಉಪನಿಷತ್ತು)

ಸ ಯ ಏತಮೇವಂ ವಿದ್ವಾಗ್ಂಶ್ಚತುಷ್ಕಲಂ ಪಾದಂ ಬ್ರಹ್ಮಣೋ ಜ್ಯೋತಿಷ್ಮಾನಿತ್ಯುಪಾಸ್ತೇ ಜ್ಯೋತಿಷ್ಮಾನಸ್ಮಿಲ್ಲೋಕೇ ಭವತಿ ಜ್ಯೋತಿಷ್ಮತೋ ಹ ಲೋಕಾಞ್ಜಯತಿ ಯ ಏತಮೇವಂ ವಿದ್ವಾಗ್ಂ ಶ್ಚತುಷ್ಕಲಂ ಪಾದಂ ಬ್ರಹ್ಮಣೋ ಜ್ಯೋತಿಷ್ಮಾನಿತ್ಯುಪಾಸ್ತೇ ॥೪॥

೪. ಯಾವನು ಬ್ರಹ್ಮದ ಈ ಚತುಷ್ಕಲಪಾದವನ್ನು ಹೀಗೆಂದರಿತು ಜ್ಯೋತಿಯುಳ್ಳದ್ದು - ಎಂದು ಉಪಾಸನೆಮಾಡುವನೋ ಅವನು ಈ ಲೋಕದಲ್ಲಿ ಜ್ಯೋತಿಷ್ಮಂತನಾಗಿರುವನು. ಯಾವನು ಬ್ರಹ್ಮದ ಈ ಚತುಷ್ಕಲಪಾದವನ್ನು ಹೀಗೆಂದರಿತು ಜ್ಯೋತಿಯುಳ್ಳದ್ದೆಂದು ಉಪಾಸನೆಮಾಡುವನೋ (ಅವನು) ಜ್ಯೋತಿಯುಳ್ಳ ಲೋಕಗಳನ್ನು ಗೆದ್ದುಕೊಳ್ಳುವನು.

(ಭಾಷ್ಯ)

೩೧೯. ವಿದ್ವತ್ಫಲಮ್ । ಜ್ಯೋತಿಷ್ಮಾನ್ ದೀಪ್ತಿಯುಕ್ತೋಽಸ್ಮಿನ್ ಲೋಕೇ

ಭವತಿ । ಚನ್ದ್ರಾದಿತ್ಯಾದೀನಾಂ ಜ್ಯೋತಿಷ್ಮತ ಏವ ಚ ಮೃತ್ವಾ ಲೋಕಾನ್ ಜಯತಿ । ಸಮಾನಮುತ್ತರಮ್ ॥

(ಭಾಷ್ಯಾರ್ಥ)

ಉಪಾಸಕನಿಗೆ ಫಲವೇನೆಂದರೆ ಈ ಲೋಕದಲ್ಲಿ ಜ್ಯೋತಿಷ್ಮಂತನು, ಕಾಂತಿಯುಕ್ತನು, ಆಗಿರುತ್ತಾನೆ ; ಸತ್ತಬಳಿಕ ಚಂದ್ರಾದಿತ್ಯಾದಿಗಳ ಜ್ಯೋತಿರ್ಯುಕ್ತ ಲೋಕಗಳನ್ನೇ ಗೆದ್ದುಕೊಳ್ಳುವನು. ಮುಂದಿನ (ಗ್ರಂಥವು) ಹಿಂದಿನದಕ್ಕೆ ಸಮಾನ(ವಾಗಿದೆ).

ನಾಲ್ಕನೆಯ ಅಧ್ಯಾಯ-ಎಂಟನೆಯ ಖಂಡ

(ಷೋಡಶಕಲವಿದ್ಯೆ)

ಸತ್ಯಕಾಮನಿಗೆ ಮದ್ದುವಿನ ಉಪದೇಶ

(ಉಪನಿಷತ್ತು)

ಮದ್ದುಷ್ಟೇ ಪಾದಂ ವಕ್ತೇತಿ ಸ ಹ ಶ್ವೋಭೂತೇ ಗಾ ಅಭಿಪ್ರಸ್ಥಾಪಯಾಂಚಕಾರ ತಾ ಯತ್ರಾಭಿ ಸಾಯಂ ಬಭೂವು ಸತ್ತ್ರಾಗ್ನಿಮುಪಸಮಾಧಾಯ ಗಾ ಉಪರುಧ್ಯ ಸಮಿಧಮಾಧಾಯ ಪಶ್ಚಾದಗ್ನೇಃ ಪ್ರಾಙುಪೋಪವಿವೇಶ ॥೧॥

೧. 'ಮದ್ದುವು ನಿನಗೆ (ಇನ್ನೊಂದು) ಪಾದವನ್ನು ಹೇಳಿಕೊಡುವದು' ಎಂದಿತು. ಅವನು ಬೆಳಗಾಗಲು ಗೋಗಳನ್ನು ಹೊಡೆದುಕೊಂಡು ಹೊರಟನು. ಅವು ಎಲ್ಲಿ ಸಾಯಂಕಾಲದಲ್ಲಿ ಒಟ್ಟಾದವೋ ಅಲ್ಲಿ ಅಗ್ನಿಯನ್ನು ಹೊತ್ತಿಸಿ ಗೋಗಳನ್ನು ತಡೆಗಟ್ಟಿ ಅಗ್ನಿಯ ಹಿಂದುಗಡೆ ಪೂರ್ವಾಭಿಮುಖನಾಗಿ ಹತಿರ ಹತಿರವೇ ಕುಳಿತನು.

ಸತ್ಯಕಾಮನು ಮದ್ಗುವಿನ ಉಪದೇಶಕ್ಕೆ ಅನುವಾದದ್ದು

(ಭಾಷ್ಯ)

೩.೨೦. ಹಂಸೋಽಪಿ ಮದ್ಗುಷ್ಟೇ ಪಾದಂ ವಕ್ತಾ ಇತ್ಯುಪರರಾಮ । ಮದ್ಗುಃ ಉದಕಚರಃ ಪಕ್ಷೀ । ಸ ಚ ಅಪ್ಸಂಬನ್ಧಾತ್ ಪ್ರಾಣಃ । ಸ ಹ ಶ್ವೋಭೂತೇ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಹಂಸವುಕೂಡ ಮದ್ಗುವು ನಿನಗೆ (ಇನ್ನೊಂದು) ಪಾದವನ್ನು ಹೇಳುವದು ಎಂದು (ನುಡಿದು) ಸುಮ್ಮನಾಯಿತು. ಮದ್ಗು ಎಂಬುದು ನೀರಿನಲ್ಲಿರುವ (ಒಂದು ಜಾತಿಯ) ಪಕ್ಷಿ.[1] ಅದು ನೀರಿನ ಸಂಬಂಧದಿಂದ ಪ್ರಾಣನು (ಎಂದು ನಿಶ್ಚಯಿಸ ಬೇಕು).[2] ಅವನು ಬೆಳಗಾಗಲು.... ಎಂದು ಮುಂತಾದದ್ದು ಹಿಂದಿನಂತೆಯೇ (ವ್ಯಾಖ್ಯಾನಮಾಡಿಕೊಳ್ಳತಕ್ಕದ್ದು).

(ಉಪನಿಷತ್ತು)

ತಂ ಮದ್ಗುರುಪನಿಪತ್ಯಾಭ್ಯುವಾದ ಸತ್ಯಕಾಮಾ ಇತಿ ಭಗವ ಇತಿ ಹ ಪ್ರತಿಶುಶ್ರಾವ ॥೨॥

ಬ್ರಹ್ಮಣಃ ಸೋಮ್ಯ ತೇ ಪಾದಂ ಬ್ರವಾಣೀತಿ ಬ್ರವೀತು ಮೇ ಭಗವಾನಿತಿ ತಸ್ಮೈ ಹೋವಾಚ ಪ್ರಾಣಃ ಕಲಾ ಚಕ್ಷುಃ ಕಲಾ ಶ್ರೋತ್ರಂ ಕಲಾ ಮನಃ ಕಲೈಷ ವೈ ಸೋಮ್ಯ ಚತುಷ್ಕಲಃ ಪಾದೋ ಬ್ರಹ್ಮಣ ಆಯತನವಾನ್ನಾಮ ॥೩॥

೨. ಮದ್ಗುವು ಅವನ ಹತ್ತಿರಕ್ಕೆ ಹಾರಿಬಂದು 'ಸತ್ಯಕಾಮಾ' ಎಂದಿತು. (ಅವನು) 'ಭಗವಂತನೆ!' ಎಂದು ಅದಕ್ಕೆ ಪ್ರತ್ಯುತ್ತರವನ್ನು ಕೊಟ್ಟನು.

೩. 'ಸೋಮ್ಯ, ನಿನಗೆ ಬ್ರಹ್ಮದ (ಒಂದು) ಪಾದವನ್ನು ಹೇಳಿಕೊಡುವೆನು' ಎಂದಿತು. 'ಪೂಜ್ಯರು ನನಗೆ ಹೇಳಿಕೊಡಬೇಕು!' ಎಂದನು. ಅವನಿಗೆ (ಅದು) ಹೇಳಿದ್ದೇನೆಂದರೆ: ಪ್ರಾಣವು (ಒಂದು) ಕಲೆ, ಚಕ್ಷುಸ್ಸು (ಒಂದು) ಕಲೆ,

1. ನೀರುಕೋಳಿ, ಬಾತು - ಇಂಥ ಪಕ್ಷಿ.
2. ಇದಕ್ಕೇನು ಯುಕ್ತಿ ಎಂಬುದು ತಿಳಿಯಲಿಲ್ಲ, ವ್ಯಾಖ್ಯಾನದಲ್ಲಿಯೂ ಇಲ್ಲ.

ಶ್ರೋತ್ರವು (ಒಂದು) ಕಲೆ , ಮನಸ್ಸು (ಒಂದು) ಕಲೆ. ಸೋಮ್ಯ , ಇದೇ ಬ್ರಹ್ಮದ ಆಯತನವಾನ್ - ಎಂಬ ಚತುಷ್ಕಲಪಾದವು.

ಬ್ರಹ್ಮದ ನಾಲ್ಕನೆಯ ಪಾದವು

(ಭಾಷ್ಯ)

೩.೨೧. ಸ ಚ ಮದ್ಗುಃ ಪ್ರಾಣಃ ಸ್ವವಿಷಯಮೇವ ಚ ದರ್ಶನಮುವಾಚ ಪ್ರಾಣಃ ಕಲಾ ಇತ್ಯಾದಿ । ಆಯತನವಾನ್ ಇತ್ಯೇವಂ ನಾಮ । ಆಯತನಂ ನಾಮ ಮನಃ ಸರ್ವಕರಣೋಪಹೃತಾನಾಂ ಭೋಗಾನಾಮ್ ತತ್ ಅಸ್ಮಿನ್[1] ಪಾದೇ ವಿದ್ಯತ ಇತಿ ಆಯತನವಾನ್ ನಾಮ ಪಾದಃ ॥

(ಭಾಷ್ಯಾರ್ಥ)

ಆ ಮದ್ಗು (ರೂಪದ) ಪ್ರಾಣನು , 'ಪ್ರಾಣವು (ಒಂದು) ಕಲೆ' ಎಂದು ಮುಂತಾಗಿ ತನ್ನ ವಿಷಯವೇ ಆದ ಉಪಾಸನೆಯನ್ನು ಹೇಳಿತು. ಆಯತನವಾನ್ ಎಂಬುದು (ಈ ಪಾದದ) ಹೆಸರು. ಆಯತನ ಎಂದರೆ ಸರ್ವಕರಣಗಳೂ ತಂದುಕೊಡುವ ಭೋಗ ಗಳಿಗೆ (ಆಶ್ರಯವಾದ) ಮನಸ್ಸು. ಆ (ಆಯತನವು) ಈ ಪಾದದಲ್ಲಿದೆಯಾದ್ದರಿಂದ (ಈ) ಪಾದವು ಆಯತನವಾನ್ ಎನಿಸಿದೆ.

(ಉಪನಿಷತ್ತು)

ಸ ಯ ಏತಮೇವಂ ವಿದ್ವಾಗ್ಂಶ್ಚತುಷ್ಕಲಂ ಪಾದಂ ಬ್ರಹ್ಮಣ ಆಯತನವಾನಿತ್ಯುಪಾಸ್ತ ಆಯತನವಾನಸ್ಮಿಲ್ಲೋಕೇ ಭವತ್ಯಾಯ ತನವತೋ ಹ ಲೋಕಾಞ್ಜಯತಿ ಯ ಏತಮೇವಂ ವಿದ್ವಾಗ್ಂ ಶ್ಚತುಷ್ಕಲಂ ಪಾದಂ ಬ್ರಹ್ಮಣ ಆಯತನವಾನಿತ್ಯುಪಾಸ್ತೇ ॥೪॥

೪. ಯಾವನು ಬ್ರಹ್ಮದ ಈ ಚತುಷ್ಕಲಪಾದವನ್ನು ಹೀಗೆಂದರಿತು ಆಯತನವುಳ್ಳದ್ದು - ಎಂದು ಉಪಾಸನೆಮಾಡುತ್ತಾನೋ ಅವನು ಈ ಲೋಕದಲ್ಲಿ ಆಯತನವುಳ್ಳವನಾಗಿರುತ್ತಾನೆ. ಯಾವನು ಬ್ರಹ್ಮದ ಈ ಚತುಷ್ಕಲಪಾದವನ್ನು ಆಯತನವುಳ್ಳದ್ದು ಎಂದು ಉಪಾಸನೆಮಾಡುತ್ತಾನೋ (ಅವನು) ಆಯತನವುಳ್ಳ ಲೋಕಗಳನ್ನು ಗೆದ್ದುಕೊಳ್ಳುತ್ತಾನೆ.

1. ಯಸ್ಮಿನ್ ಎಂಬುದನ್ನು ಹೀಗೆಂದು ತಿದ್ದಿಕೊಂಡಿದೆ.

ನಾಲ್ಕನೆಯ ಪಾದದ ಉಪಾಸನೆಗೆ ಫಲ

(ಭಾಷ್ಯ)

೩.೨೨. ತಂ ಪಾದಂ ತಥೈವ ಉಪಾಸ್ತೇ ಯಃ ಸ ಆಯತನವಾನ್ ಆಶ್ರಯವಾನ್ ಅಸ್ಮಿನ್ ಲೋಕೇ ಭವತಿ । ಆಯತನವತ ಏವ ಸಾವಕಾಶಾನ್ ಲೋಕಾನ್ ಮೃತ್ಯೋ ಜಯತಿ । ಯ ಏತಮೇವಮ್ ಇತ್ಯಾದಿ ಪೂರ್ವವತ್ ॥

(ಭಾಷ್ಯಾರ್ಥ)

ಆ ಪಾದವನ್ನು ಹಾಗೆಯೇ ಯಾವನು ಉಪಾಸನೆಮಾಡುತ್ತಾನೋ ಅವನು ಈ ಲೋಕದಲ್ಲಿ ಆಯತನವುಳ್ಳವನು, ಆಶ್ರಯವುಳ್ಳವನು ಆಗಿರುತ್ತಾನೆ. ಹಾಗೂ ಸತ್ತಮೇಲೆ ಆಯತನವುಳ್ಳವೇ ಆದ, ಅವಕಾಶವುಳ್ಳ, ಲೋಕಗಳನ್ನೂ ಗೆದ್ದು ಕೊಳ್ಳುತ್ತಾನೆ. 'ಯ ಏತದೇವಮ್' (ಯಾವನು ಇದನ್ನು ಹೀಗೆಂದರಿತು....) ಮುಂತಾದ (ಗ್ರಂಥ)ಕ್ಕೆ ಹಿಂದಿನಂತೆ (ವ್ಯಾಖ್ಯಾನ).

ನಾಲ್ಕನೆಯ ಅಧ್ಯಾಯ – ಒಂಬತ್ತನೆಯ ಖಂಡ

(ಷೋಡಶಕಲವಿದ್ಯೆ)

ಗುರುವಿನಿಂದಲೂ ಸತ್ಯಕಾಮನಿಗೆ ಉಪದೇಶ

(ಉಪನಿಷತ್ತು)

ಪ್ರಾಪ ಹಾಚಾರ್ಯಕುಲಂ ತಮಾಚಾರ್ಯೋಽಭ್ಯುವಾದ ಸತ್ಯಕಾಮ। ಇತಿ ಭಗವ ಇತಿ ಹ ಪ್ರತಿಶುಶ್ರಾವ ॥೧॥

ಬ್ರಹ್ಮವಿದಿವ ವೈ ಸೋಮ್ಯ ಭಾಸಿ ಕೋ ನು ತ್ವಾನುಶಶಾಸೇತ್ಯನ್ಯೇ ಮನುಷ್ಯೇಭ್ಯ ಇತಿ ಹ ಪ್ರತಿಜಜ್ಞೇ ಭಗವಾಗ್ಂ ಸ್ತ್ವೇವ ಮೇ ಕಾಮೇ ಬ್ರೂಯಾತ್ ॥೨॥

೧. ಆಚಾರ್ಯನ ಮನೆಯನ್ನು ಸೇರಿದನು. ಅವನನ್ನು ಆಚಾರ್ಯನು

'ಸತ್ಯಕಾಮಾಽ' ಎಂದನು. 'ಭಗವಂತನೆ !' ಎಂದು (ಅದಕ್ಕೆ ಅವನು)

೨. 'ಸೋಮ್ಯ, ಬ್ರಹ್ಮವಿದನಂತೆ ಕಾಣುತ್ತಿರುವೆ. ನಿನಗೆ ಯಾವನು ಹೇಳಿಕೊಟ್ಟನೊ !' ಎಂದನು. 'ಮನುಷ್ಯರಿಗಿಂತ ಬೇರೆಯವರು' ಎಂದು (ಅವನು) ಹೇಳಿದನು. 'ನನ್ನ ಕಾಮದಲ್ಲಿ ಪೂಜ್ಯರಾದ ತಾವೇ ಹೇಳಬೇಕು !'

ಸತ್ಯಕಾಮನು ಗುರುವನ್ನು ಉಪದೇಶಿಸಬೇಕೆಂದು ಬೇಡಿಕೊಂಡದ್ದು

(ಭಾಷ್ಯ)

೩.೨ಽ. ಸ ಏವಂ ಬ್ರಹ್ಮವಿತ್ ಸನ್ ಪ್ರಾಪ ಹ ಪ್ರಾಪ್ತವಾನ್ ಆಚಾರ್ಯಕುಲಮ್ । ತಮ್ ಆಚಾರ್ಯೋ೨ಭ್ಯುವಾದ ಸತ್ಯಕಾಮಾಽ ಇತಿ । ಭಗವ ಇತಿ ಹ ಪ್ರತಿಶುಶ್ರಾವ । ಬ್ರಹ್ಮವಿದಿವ ವೈ ಸೋಮ್ಯ ಭಾಸಿ । ಪ್ರಸನ್ನೇನ್ದ್ರಿಯಃ ಪ್ರಹಸಿತವದನಶ್ಚ ನಿಶ್ಚಿನ್ತಃ ಕೃತಾರ್ಥೋ೨ ಬ್ರಹ್ಮವಿದ್ ಭವತಿ । ಅತ ಆಹ ಆಚಾರ್ಯಃ 'ಬ್ರಹ್ಮವಿದಿವ ಭಾಸಿ' ಇತಿ । ಕೋ ನು ಇತಿ ವಿತರ್ಕಯನ್ ಉವಾಚ । ಕಸ್ಮಾತ್ತ್ವಮ್ ಅನುಶಶಾಸ ? ಇತಿ । ಸ ಚ ಆಹ ಸತ್ಯಕಾಮಃ ಅನ್ಯೇ ಮನುಷ್ಯೇಭ್ಯಃ । ದೇವತಾ ಮಾಮ್ ಅನುಶಿಷ್ಟವತ್ಯಃ । ಕೋ೨ನ್ಯೋ ಭಗವಚ್ಛಿಷ್ಯಂ ಮಾಂ ಮನುಷ್ಯಃ ಸನ್ ಅನುಶಾಸಿತುಮ್ ಉತ್ಸಹೇತ ಇತ್ಯಭಿಪ್ರಾಯಃ । ಅತಃ ಅನ್ಯೇ ಮನುಷ್ಯೇಭ್ಯಃ ಇತಿ ಹ ಪ್ರತಿಜಜ್ಞೇ ಪ್ರತಿಜ್ಞಾತವಾನ್ । ಭಗವಾಂಸ್ತ್ವೇವ ಮೇ ಕಾಮೇ ಮಮೇಚ್ಛಾಯಾಂ ಬ್ರೂಯಾತ್ । ಕಿಮನ್ಯೈರುಕ್ತೇನ ? ನಾಹಂ ತದ್ ಗಣಯಾಮಿ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಅವನು ಹೀಗೆ ಬ್ರಹ್ಮವಿದನಾಗಿ ಆಚಾರ್ಯರ ಮನೆಯನ್ನು ಸೇರಿದನು , ಸೇರಿದವನಾದನು. ಅವನನ್ನು ಆಚಾರ್ಯನು 'ಸತ್ಯಕಾಮಾಽ' ಎಂದು ಕೂಗಿಕರೆದನು. 'ಭಗವಂತನೆ !'ಎಂದು (ಅವನು) ಪ್ರತ್ಯುತ್ತರವಿತ್ತನು.

ಸೋಮ್ಯ, ಬ್ರಹ್ಮಜ್ಞಾನಿಯಂತೆ ಕಾಣುತ್ತಿರುವೆ. ಬ್ರಹ್ಮಜ್ಞಾನಿಯು ಪ್ರಸನ್ನೇಂದ್ರಿಯನೂ ನಗೆಮುಖದವನೂ ನಿಶ್ಚಿಂತನೂ ಕೃತಾರ್ಥನೂ ಆಗಿರುತ್ತಾನೆ. ಆದ್ದರಿಂದ ಆಚಾರ್ಯನು 'ಬ್ರಹ್ಮಜ್ಞಾನಿಯಂತೆ ಕಾಣುತ್ತಿರುವೆ' ಎಂದಿರುತ್ತಾನೆ. ನಿನಗೆ ಯಾವನು ಹೇಳಿಕೊಟ್ಟನೊ ! ನಿನಗೆ ತಿಳಿಸಿಕೊಟ್ಟವನು ಯಾರು ?- ಎಂದು

ವಿತರ್ಕಮಾಡುತ್ತಾ[1] ಕೇಳಿದನು. ಆ ಸತ್ಯಕಾಮನು ಮನುಷ್ಯರಿಗಿಂತ ಬೇರೆಯವರು, ದೇವತೆಗಳು, ನನಗೆ ತಿಳಿಸಿಕೊಟ್ಟಿರುತ್ತಾರೆ - ಎಂದು ನುಡಿದನು. ಪೂಜ್ಯರಾದ ತಮ್ಮ ಶಿಷ್ಯನಾದ ನನಗೆ ಮನುಷ್ಯನಾಗಿದ್ದುಕೊಂಡಿರುವ ಮತ್ತೆ ಯಾವನು ತಾನೆ, ಹೇಳಿ ಕೊಡಲು ಶಕ್ತನಾದಾನು[2] ?- ಎಂದು ಅಭಿಪ್ರಾಯ. ಆದ್ದರಿಂದ ಮನುಷ್ಯರಿಗಿಂತ ಬೇರೆಯವರು ಎಂದು ಹೇಳಿದನು, ಹೇಳಿದವನಾದನು. ನನ್ನ ಕಾಮದಲ್ಲಿ, ನನ್ನ ಇಚ್ಛೆಯಂತೆ ಪೂಜ್ಯರಾದ ತಾವೇ ಹೇಳಬೇಕು ; ಮಿಕ್ಕವರು ಹೇಳಿದ್ದರಿಂದೇನು ? ನಾನು ಅದನ್ನು ಲೆಕ್ಕಕ್ಕೆ ತರುವವನಲ್ಲ ಎಂದು ಅಭಿಪ್ರಾಯ.[3]

(ಉಪನಿಷತ್ತು)

ಶ್ರುತಗ್ಂ ಹ್ಯೇವ ಮೇ ಭಗವದ್ದ್ಯಶೇಭ್ಯ ಆಚಾರ್ಯಾದ್ಧ್ಯೇವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪದಿತಿ[4] ತಸ್ಮೈ ಹೈತದೇವೋವಾಚಾತ್ರ ಹ ನ ಕಿಂಚನ ವೀಯಾಯೇತಿ ವೀಯಾಯೇತಿ ॥೩॥

೩. ಆಚಾರ್ಯನಿಂದಲೇ ಅರಿತುಕೊಂಡ ವಿದ್ಯೆಯು ಸಾಧಿಷ್ಠವನ್ನು ಹೊಂದುತ್ತದೆ ಎಂದು ಭಗವಂತನಂಥವರಿಂದ ಕೇಳಿದ್ದೇ ನನ್ನಲ್ಲಿದೆ. ಅವನಿಗೆ ಇದನ್ನೇ (ಆಚಾರ್ಯನು) ಹೇಳಿಕೊಟ್ಟನು ; ಇದರಲ್ಲಿ ಒಂದಿಷ್ಟೂ ಹೋಗಲಿಲ್ಲ, ಹೋಗಲಿಲ್ಲ.

1. ನು ಎಂಬುದು ವಿತರ್ಕವನ್ನು ಹೇಳುವ ನಿಪಾತ ; ನಿನಗೆ ಯಾರು ತಿಳಿಸಿಕೊಟ್ಟವರಾಗಿದ್ದೀತು ?- ಈ ರಹಸ್ಯವನ್ನು ತಿಳಿದವರು ಮತ್ತೆ ಯಾರಿದ್ದಾರು ? ಎಂದು ಆಚಾರ್ಯನು ತನ್ನಲ್ಲಿ ತಾನು ಆಲೋಚಿಸಿಕೊಂಡನು ಎಂದರ್ಥ.
2. ತಮ್ಮ ಶಿಷ್ಯನಾದ ನನಗೆ ಉಪದೇಶಮಾಡುವದಕ್ಕೆ ಮತ್ತೆ ಯಾವ ಮನುಷ್ಯಗುರು ಶಕ್ತನು ? ತಮಗೊಬ್ಬರಿಗೆ ಮಾತ್ರ ಇದು ತಿಳಿದಿರುವ ವಿಷಯ. ದೇವತೆಗಳಿಗೆ ಮಾತ್ರ ತಿಳಿದಿರಬಹುದು, ಮನುಷ್ಯರಿಗಂತೂ ತಿಳಿಯುವಂತಿಲ್ಲ. ತಮ್ಮಲ್ಲಿ ಶಿಷ್ಯನಾದ ನನಗೆ ಹೇಳಿಕೊಡುವ ಎದೆಯು ಮನುಷ್ಯರಿಗೆ ಬರುವಂತೆಯೂ ಇಲ್ಲ - ಎಂಬ ಭಾವವು ಇಲ್ಲಿ ಅಡಗಿದೆ.
3. ದೇವತೆಗಳು ಹೇಳಿದ್ದರೂ ಹೇಳಿರಲಿ, ಗುರುಗಳಾದ ತಾವು ಹೇಳಿಕೊಟ್ಟಮೇಲೆಯೇ ಅದಕ್ಕೆ ಬೆಲೆ ಎಂದರ್ಥ.
4. ಉಪನಿಷತ್ತಿನಲ್ಲಿಯೂ 'ಪ್ರಾಪದಿತಿ', 'ಪ್ರಾಪತ್'ಎಂಬ ಎರಡು ಪಾಠಗಳಿವೆ ; ಪ್ರಾವತ್ (ಪಡೆಯಿತು) ಎಂಬ ರೂಪವನ್ನು ನಾವು ಸ್ವೀಕರಿಸಿದೇವೆ. ಯಾವದು ಸಾಧುವೆಂಬುದನ್ನು ವಿದ್ವಾಂಸರು ನಿರ್ಣಯಿಸಬೇಕು.

ಆಚಾರ್ಯನೂ
ಇದೇ ಷೋಡಶಕಲವಿದ್ಯೆಯನ್ನೇ ಹೇಳಿಕೊಟ್ಟನು

೩.೨೪. ಕಿಂ ಚ ಶ್ರುತಂ ಹಿ ಯಸ್ಮಾತ್ ಮಮ ವಿದ್ಯತ ಏವ ಅಸ್ಮಿನ್ನಪಿ ಭಗವದ್ದೃಶೇಭ್ಯಃ ಭಗವತ್ಸಮೇಭ್ಯೋ ಋಷಿಭ್ಯಃ। ಆಚಾರ್ಯಾದ್ ಹೈವ ವಿದ್ಯಾ ವಿದಿತಾ ಸಾಧಿಷ್ಠಂ ಸಾಧುತಮತ್ವಂ ಪ್ರಾಪತ್ ಪ್ರಾಪ್ನೋತಿ (ಇತಿ)[1] । ಅತೋ ಭಗವಾನೇವ ಬ್ರೂಯಾತ್ । ಇತ್ಯುಕ್ತ ಆಚಾರ್ಯಃ ಅಬ್ರವೀತ್ ತಸ್ಮೈ (ಏತದೇವ)[2] ತಾಮೇವ ದೈವತೈರುಕ್ತಾಂ ವಿದ್ಯಾಮ್ । ಅತ್ರ ಹ ನ ಕಿಂಚನ ಷೋಡಶಕಲವಿದ್ಯಾಯಾಃ ಕಿಂಚಿತ್ ಏಕದೇಶಮಾತ್ರಮಪಿ ನ ವೀಯಾಯ ನ ವಿಗತಮ್ ಇತ್ಯರ್ಥಃ। ದ್ವಿರಭ್ಯಾಸೋ ವಿದ್ಯಾ ಪರಿಸಮಾಪ್ತ್ಯರ್ಥಃ॥

(ಭಾಷ್ಯಾರ್ಥ)

ಮತ್ತು (ಹಿ = ಯಸ್ಮಾತ್) ಈ ವಿಷಯದಲ್ಲಿ ತಮ್ಮಂಥವರಿಂದ, ತಮಗೆ ಸಮರಾದ ಋಷಿಗಳಿಂದ ಕೇಳಿದ್ದು ನನ್ನಲ್ಲಿದ್ದೇ ಇದೆಯಷ್ಟೆ. (ಏನೆಂದರೆ), 'ಆಚಾರ್ಯನಿಂದಲೇ ಅರಿತುಕೊಂಡ ವಿದ್ಯೆಯು ಸಾಧಿಷ್ಠವನ್ನು ಸಾಧುತಮತ್ವವನ್ನು (ಪ್ರಾಪತ್ = ಪ್ರಾಪ್ನೋತಿ) ಹೊಂದುತ್ತದೆ' (ಎಂದು ಕೇಳಿಯೇ ಇರುತ್ತೇನಷ್ಟೆ). ಆದ್ದರಿಂದ ತಾವೇ ಹೇಳಿಕೊಡಬೇಕು.

ಹೀಗೆನ್ನಲು ಆಚಾರ್ಯನು ಅವನಿಗೆ (ಇದನ್ನೇ) ದೇವತೆಗಳು ಹೇಳಿಕೊಟ್ಟ ಆ ವಿದ್ಯೆಯನ್ನೇ ಹೇಳಿಕೊಟ್ಟನು. ಇದರಲ್ಲಿ (ಈ) ಷೋಡಶಕಲವಿದ್ಯೆಯಲ್ಲಿ ಒಂದಿಷ್ಟೂ ಸ್ವಲ್ಪಭಾಗವು ಕೂಡ ಹೋಗಲಿಲ್ಲ. (ಅವನನ್ನು ಬಿಟ್ಟುಹೋಗಲಿಲ್ಲ ಎಂದರ್ಥ). (ವೀಯಾಯ ಎಂಬುದನ್ನು) ಎರಡು ಸಲ ಹೇಳಿರುವದು ವಿದ್ಯೆಯು ಮುಗಿಯಿತೆಂದು ತಿಳಿಸುವದಕ್ಕೆ.

1. ಇಲ್ಲಿ ಮೂಲದ 'ಇತಿ' ಯಿರಬೇಕು.
2. ಇಲ್ಲಿ ಮೂಲದ 'ಏತದೇವ' ಇರಬೇಕು.

ನಾಲ್ಕನೆಯ ಅಧ್ಯಾಯದ ನಾಲ್ಕನೆಯ ಖಂಡದಿಂದ ಒಂಬತ್ತನೆಯ ಖಂಡದವರೆಗಿನ ಗ್ರಂಥದ ಸಾರ

ಈ ಭಾಗದಲ್ಲಿ ಷೋಡಶಕಲವಿದ್ಯೆಯನ್ನು ಉಪದೇಶಿಸಿದೆ.

ನಾಲ್ಕನೆಯ ಖಂಡ

ಸತ್ಯಕಾಮಜಾಬಾಲನೆಂಬ ಹುಡುಗನು ತಾಯಿಯಾದ ಜಬಾಲೆಯನ್ನು 'ನಾನು ಬ್ರಹ್ಮಚರ್ಯವನ್ನು ಮಾಡಬೇಕು ; ನಮ್ಮ ಗೋತ್ರ ಯಾವುದು ?' ಎಂದು ಕೇಳಿದನು. ತಾಯಿಯು 'ಚಿಕ್ಕಂದಿನಲ್ಲಿ ನಿನ್ನನ್ನು ಹಡೆದೆನು ; ನಿಮ್ಮ ತಂದೆಯು ಬೇಗನೆ ಕಾಲವಾದರು. ಆದ್ದರಿಂದ ನನಗೆ ಗೋತ್ರವು ನೆನಪಿಲ್ಲ. ನಿನ್ನ ಹೆಸರು ಸತ್ಯಕಾಮ ಜಾಬಾಲ ; ಹೀಗೆಂದೇ ಗುರುಗಳಲ್ಲಿ ಹೇಳು' ಎಂದಳು.

ಸತ್ಯಕಾಮನು ಹಾರಿದ್ರುಮತ ಗೌತಮರಲ್ಲಿಗೆ ಬಂದು 'ತಮ್ಮ ಶಿಷ್ಯನಾಗಿರುತ್ತೇನೆ ; ನನಗೆ ದಯವಿಟ್ಟು ಉಪನಯನಮಾಡಿಸಬೇಕು' ಎಂದು ಕೇಳಿಕೊಂಡನು. 'ನಿಮ್ಮ ಗೋತ್ರವು ಯಾವುದು ?' ಎಂದು ಅವುರ ಕೇಳಲು ತಾಯಿಯು ಹೇಳಿದ್ದನ್ನೇ ತಿಳಿಸಿದನು. ಅವನು 'ನಿಜವನ್ನೇ ಹೇಳಿದ್ದೀಯೆ ; ಆದ್ದರಿಂದ ನೀನು ಬ್ರಾಹ್ಮಣನೇ' ಎಂದು ಅವನಿಗೆ ಉಪನಯನವನ್ನು ಮಾಡಿಸಿದರು. ಅವನಿಗೆ ನಾನೂರು ಬಡಕಲುದನಗಳನ್ನು ಕೊಟ್ಟು 'ಇವುಗಳನ್ನು ಕಾಯುತ್ತಿರು' ಎಂದು ಕಟ್ಟುಮಾಡಿದರು. ಇವುಗಳನ್ನು ಸಾವಿರಕ್ಕೆ ಹೆಚ್ಚಿಸಿದ ಮೇಲೆಯೇ ಹಿಂತಿರುಗುತ್ತೇನೆಂಬ ಪ್ರತಿಜ್ಞೆಯಿಂದ ಸತ್ಯಕಾಮನು ಹೊರಟನು.

ಐದನೆಯ ಖಂಡ

ಕಾಲಕ್ರಮದಲ್ಲಿ ದನಗಳು ಸಾವಿರವಾದವು. ಆಗ ವಾಯುದೇವತೆಯು ಒಂದು ಎತ್ತಿನಲ್ಲಿ ಆವಿಷ್ಟವಾಗಿ ''ಸತ್ಯಕಾಮನೆ, ಸಾವಿರ ದನಗಳಾದವು, ನಮ್ಮನ್ನು ಗುರುಗಳ ಮನೆಗೆ ಹೊಡೆದುಕೊಂಡು ಹೋಗು. ನಿನಗೆ ಬ್ರಹ್ಮದ ಒಂದು ಪಾದವನ್ನು ಹೇಳಿಕೊಡುವೆನು, ಕೇಳು. ಪೂರ್ವದಿಕ್ಕು, ಪಶ್ಚಿಮದಿಕ್ಕು, ದಕ್ಷಿಣದಿಕ್ಕು, ಉತ್ತರದಿಕ್ಕು – ಎಂಬ ನಾಲ್ಕು ಕಲೆಗಳುಳ್ಳದ್ದು ಬ್ರಹ್ಮದ ಒಂದು ಪಾದವು. ಇದಕ್ಕೆ ಪ್ರಕಾಶವಂತ ಎಂದು ಹೆಸರು. ಹೀಗೆಂದರಿತು ಇದನ್ನು ಉಪಾಸನೆಮಾಡಿದವನು ಪ್ರಖ್ಯಾತಿಪ್ರಕಾಶದಿಂದ ಬಾಳಿ ಪರದಲ್ಲಿ ಪ್ರಕಾಶಯುಕ್ತಲೋಕಗಳನ್ನೇ ಪಡೆದುಕೊಳ್ಳುವನು'' ಎಂದನು.

ಆರನೆಯ ಖಂಡ

''ಇನ್ನೊಂದು ಪಾದವನ್ನು ನಿನಗೆ ಅಗ್ನಿಯು ತಿಳಿಸಿಕೊಡುವದು'' ಎಂದು ಎತ್ತು ಸುಮ್ಮನಾಯಿತು. ಸತ್ಯಕಾಮನು ಮಾರನೆಯ ದಿನ ದನಗಳನ್ನು ಅಟ್ಟಿಕೊಂಡು ಹೊರಟನು. ಸಾಯಂಕಾಲದಲ್ಲಿ ಅವನು ಒಕ್ಕಡೆಯಲ್ಲಿ ತಡೆಗಟ್ಟಿ, ಅಗ್ನಿಯನ್ನು ಇಟ್ಟುಕೊಂಡು ಪೂರ್ವಾಭಿಮುಖವಾಗಿ ಹತ್ತಿರಹತ್ತಿರವೇ ಕುಳಿತುಕೊಂಡನು.

ಅಗ್ನಿಯು ''ಸತ್ಯಕಾಮನೆ, ನಿನಗೆ ಬ್ರಹ್ಮದ ಒಂದು ಪಾದವನ್ನು ಹೇಳಿಕೊಡುವೆನು. ಪೃಥಿವಿ, ಅಂತರಿಕ್ಷ, ದ್ಯುಲೋಕ, ಸಮುದ್ರ – ಈ ನಾಲ್ಕು ಇದರ ಕಲೆಗಳು. ಬ್ರಹ್ಮದ ಈ ಪಾದಕ್ಕೆ ಅನಂತವಂತ ಎಂದು ಹೆಸರು. ಹೀಗೆಂದರಿತು ಇದನ್ನು ಉಪಾಸನೆಮಾಡಿದವನು ಅನಂತಗುಣಯುಕ್ತನಾಗಿ ಬಾಳಿ ಪರದಲ್ಲಿ ಅನಂತಗುಣವುಳ್ಳ ಲೋಕಗಳನ್ನು ಪಡೆದುಕೊಳ್ಳುವನು'' ಎಂದನು.

ಏಳನೆಯ ಖಂಡ

''ಹಂಸವು ನಿನಗೆ ಇನ್ನೊಂದು ಪಾದವನ್ನು ಹೇಳಿಕೊಡುವದು'' ಎಂದು ಅಗ್ನಿಯು ಸುಮ್ಮನಾಯಿತು. ಅವನು ಮಾರನೆಯ ದಿನವೂ ಮುಂದಕ್ಕೆ ಹೊರಟು ಸಾಯಂಕಾಲದಲ್ಲಿ ಅಗ್ನಿಯನ್ನಿಟ್ಟುಕೊಂಡು ಪೂರ್ವಾಭಿಮುಖವಾಗಿ ಕುಳಿತನು.

ಹಂಸವು ಅವನ ಬಳಿಗೆ ಬಂದು ಇಂತೆಂದಿತು : (ಇಲ್ಲಿ ಹಂಸನಲ್ಲಿ ಒಳಹೊಕ್ಕ ಆದಿತ್ಯನನ್ನೇ ಹಂಸವೆಂದಿದೆ). ''ಸತ್ಯಕಾಮನೆ, ನಿನಗೆ ಬ್ರಹ್ಮದ ಒಂದು ಪಾದವನ್ನು ಹೇಳಿಕೊಡುವೆನು. ಅಗ್ನಿ, ಸೂರ್ಯ, ಚಂದ್ರ, ಮಿಂಚು – ಇವೇ ಈ ಪಾದದ ನಾಲ್ಕು ಕಲೆಗಳು, ಇದಕ್ಕೆ ಜ್ಯೋತಿಷ್ಮಂತನೆಂದು ಹೆಸರು. ಯಾವನು ಹೀಗೆಂದರಿತು ಈ ಪಾದವನ್ನು ಉಪಾಸನೆಮಾಡುವನೋ ಅವನು ಕಾಂತಿಯುಕ್ತನಾಗಿ ಬಾಳಿ ಪರದಲ್ಲಿ ಜ್ಯೋತಿರ್ಯುಕ್ತವಾದ ಚಂದ್ರಾದಿತ್ಯಾದಿಲೋಕಗಳನ್ನು ಪಡೆದುಕೊಳ್ಳುವನು'' ಎಂದಿತು.

ಎಂಟನೆಯ ಖಂಡ

''ನೀರುಕೋಳಿಯು ನಿನಗೆ ಇನ್ನೊಂದು ಪಾದವನ್ನು ಹೇಳಿಕೊಡುವದು'' ಎಂದು ಹಂಸವು ಸುಮ್ಮನಾಯಿತು. ಅವನು ಮಾರನೆಯ ದಿನ ಸಾಯಂಕಾಲವು ಮತ್ತೊಂದು ಕಡೆಯಲ್ಲಿ ದನವನ್ನು ಕೂಡಿಸಿ ಹಿಂದಿನ ದಿನದಂತೆ ಅಗ್ನಿಯ ಬಳಿಯಲ್ಲಿ ಕುಳಿತನು.

ನೀರುಕೋಳಿಯು (ಅದರಲ್ಲಿ ಪ್ರವಿಷ್ಟವಾದ ಪ್ರಾಣನು), ''ಸತ್ಯಕಾಮನೆ, ನಿನಗೆ ಬ್ರಹ್ಮದ ನಾಲ್ಕನೆಯ ಪಾದವನ್ನು ಹೇಳಿಕೊಡುವೆನು. ಪ್ರಾಣ, ಚಕ್ಷುಸ್ಸು, ಶ್ರೋತ್ರ,

ಮನಸ್ಸು – ಇವೇ ಇದರ ಕಲೆಗಳು. ಇದಕ್ಕೆ ಆಯತನವೆಂದು ಹೆಸರು. ಯಾವನು ಬ್ರಹ್ಮದ ಈ ಪಾದವನ್ನು ಹೀಗೆಂದರಿತು ಉಪಾಸನೆಮಾಡುವನೋ ಅವನು ಈ ಲೋಕದಲ್ಲಿ ಆಶ್ರಯವುಳ್ಳವನಾಗಿ ಬಾಳಿ, ಪರದಲ್ಲಿ ಅವಕಾಶಯುಕ್ತವಾದ ಲೋಕಗಳನ್ನು ಪಡೆದುಕೊಳ್ಳುವನು.

ಒಂಬತ್ತನೆಯ ಖಂಡ

ಸತ್ಯಕಾಮನು ಕೊನೆಗೆ ಗುರುಗಳ ಮನೆಗೆ ಬಂದನು. ಹಾರಿದ್ರುಮತರು ''ಸತ್ಯಕಾಮನೆ, ಬ್ರಹ್ಮಜ್ಞಾನಿಯಂತೆ ಕಾಣಿಸುತ್ತಿರುವೆಯಲ್ಲ! ನಿನಗೆ ಈ ವಿದ್ಯೆಯನ್ನು ಯಾರು ಹೇಳಿಕೊಟ್ಟರು ?'' ಎಂದು ಕೇಳಿದರು. ಸತ್ಯಕಾಮನು ''ಮನುಷ್ಯರಂತೂ ಅಲ್ಲ, ಆದರೆ ಯಾರು ಹೇಳಿಕೊಟ್ಟರೇನು ? ನನಗೆ ತಾವೇ ಉಪದೇಶಿಸಬೇಕೆಂಬ ಇಚ್ಛೆ. ಆಚಾರ್ಯರಿಂದಲೇ ವಿದ್ಯೆಯನ್ನು ಪಡೆದುಕೊಂಡರೆ ಅದು ಉತ್ತಮಫಲವನ್ನು ಕೊಡುವದು, ಎಂದು ತಮ್ಮಂಥವರಿಂದ ಕೇಳಿರುತ್ತೇನೆ'' ಎಂದನು. ಆಗ ಗುರುಗಳು ಇದೇ ಷೋಡಶಕಲವಿದ್ಯೆಯನ್ನು ಅವನಿಗೆ ಉಪದೇಶಿಸಿದರು. ಅದರಿಂದ ವಿದ್ಯೆಯಲ್ಲಿ ಒಂದಿಷ್ಟೂ ಅವನನ್ನು ಬಿಟ್ಟು ಹೋಗದಂತೆ ಗಟ್ಟಿಯಾಯಿತು.

ನಾಲ್ಕನೆಯ ಅಧ್ಯಾಯ - ಹತ್ತನೆಯ ಖಂಡ

(ಉಪಕೋಸಲವಿದ್ಯೆ)

ಉಪಕೋಸಲನು ವಿದ್ಯೆಗಾಗಿ ನಿರಶನನಾದದ್ದು

(ಉಪನಿಷತ್ತು)

ಉಪಕೋಸಲೋ ಹ ವೈ ಕಾಮಲಾಯನಃ ಸತ್ಯಕಾಮೇ ಜಾಬಾಲೇ ಬ್ರಹ್ಮಚರ್ಯಮುವಾಸ ತಸ್ಯ ಹ ದ್ವಾದಶವರ್ಷಾಣ್ಯಗ್ನೀನ್ ಪರಿಚಚಾರ ಸ ಹ ಸ್ಮಾನ್ಯಾನನ್ತೇವಾಸಿನಃ ಸಮಾವರ್ತಯಗ್ಂಸ್ತಗ್ಂ ಹ ಸ್ಮೈವ ನ ಸಮಾವರ್ತಯತಿ ॥೧॥

೧. ಉಪಕೋಸಲ ಕಾಮಲಾಯನನು ಸತ್ಯಕಾಮಜಾಬಾಲನಲ್ಲಿ ಬ್ರಹ್ಮಚರ್ಯದಿಂದ ಇರುತ್ತಿದ್ದನು. ಆತನ ಅಗ್ನಿಗಳನ್ನು ಹನ್ನೆರಡು ವರ್ಷಗಳು ಪರಿಚರ್ಯೆಮಾಡಿದನು. ಆತನು ಮಿಕ್ಕ ಶಿಷ್ಯರನ್ನು ಸಮಾವರ್ತನ ಮಾಡಿಸಿದರೂ ಅವನನ್ನೊಬ್ಬನನ್ನೇ ಸಮಾವರ್ತನಮಾಡಿಸಲಿಲ್ಲ.

ಗ್ರಂಥದ ಸಂಬಂಧ

(ಭಾಷ್ಯ)

೩೨೫. ಪುನರ್ಬ್ರಹ್ಮವಿದ್ಯಾಂ ಪ್ರಕಾರಾನ್ತರೇಣ ವಕ್ಷ್ಯಾಮೀತ್ಯಾರಭತೇ, ಗತಿಂ ಚ ತದ್ವಿದಃ , ಅಗ್ನಿವಿದ್ಯಾಂ ಚ। ಆಖ್ಯಾಯಿಕಾ ಪೂರ್ವವತ್ ಶ್ರದ್ಧಾತಪಸೋರ್ಬ್ರಹ್ಮವಿದ್ಯಾ ಸಾಧನತ್ವಪ್ರದರ್ಶನಾರ್ಥಾ ॥

(ಭಾಷ್ಯಾರ್ಥ)

ಮತ್ತೆ, ಇನ್ನೊಂದು ಪ್ರಕಾರದಿಂದ ಬ್ರಹ್ಮವಿದ್ಯೆಯನ್ನೂ ಬ್ರಹ್ಮಜ್ಞಾನಿಗೆ ಗತಿಯನ್ನೂ ಅಗ್ನಿವಿದ್ಯೆಯನ್ನೂ ಹೇಳೋಣವೆಂದು (ಮುಂದಿನ ಗ್ರಂಥವನ್ನು) ಆರಂಭಿಸಿರುತ್ತದೆ. ಕಥೆಯು ಹಿಂದಿನಂತೆ ಶ್ರದ್ಧಾತಪಸ್ಸುಗಳು ಬ್ರಹ್ಮವಿದ್ಯೆಗೆ ಸಾಧನ ವೆಂಬುದನ್ನು ತಿಳಿಸುವದಕ್ಕೆ (ಬಂದಿದೆ).

ಉಪಕೋಸಲನಿಗೆ ಗುರು ವಿದ್ಯೆಯನ್ನು ಹೇಳದೆ ಇದ್ದದ್ದು

೩.೨೬. ಉಪಕೋಸಲೋ ಹ ವೈ ನಾಮತಃ ಕಮಲಸ್ಯಾಪತ್ಯಂ ಕಾಮಲಾಯನಃ ಸತ್ಯಕಾಮೇ ಜಾಬಾಲೇ ಬ್ರಹ್ಮಚರ್ಯಮ್ ಉವಾಸ । ತಸ್ಯ ಹ ಏತಿಹ್ಯಾರ್ಥಃ । ತಸ್ಯಾಚಾರ್ಯಸ್ಯ ದ್ವಾದಶವರ್ಷಾಣಿ ಅಗ್ನೀನ್ ಪರಿಚಚಾರ ಅಗ್ನೀನಾಂ ಪರಿಚರಣಂ ಕೃತವಾನ್ । ಸ ಹ ಸ ಆಚಾರ್ಯಃ ಅನ್ಯಾನ್ ಬ್ರಹ್ಮಚಾರಿಣಃ ಸ್ವಾಧ್ಯಾಯಂ ಗ್ರಾಹಯಿತ್ವಾ ಸಮಾವರ್ತಯನ್ ತಮೇವೋಪಕೋಸಲಮ್ ಏಕಂ ನ ಸಮಾವರ್ತಯತಿ ಸ್ಮ ಹ ॥

(ಭಾಷ್ಯಾರ್ಥ)

ಉಪಕೋಸಲನೆಂಬ ಹೆಸರುಳ್ಳ ಕಮಲನ ಮಗನಾದ ಕಾಮಲಾಯನನು, ಸತ್ಯಕಾಮಜಾಬಾಲನಲ್ಲಿ ಬ್ರಹ್ಮಚರ್ಯದಿಂದಿರುತ್ತಿದ್ದನು. ಆತನ- ಹ ಎಂಬುದು ಹಿಂದೆ ನಡೆದದ್ದನ್ನು ತಿಳಿಸುವದಕ್ಕೆ (ಬಂದಿರುವ ಶಬ್ದವು)- ಆ ಆಚಾರ್ಯನ ಅಗ್ನಿಗಳನ್ನು ಹನ್ನೆರಡು ವರ್ಷಗಳವರೆಗೆ ಪರಿಚರ್ಯೆಮಾಡಿದನು, ಅಗ್ನಿಗಳ ಸೇವೆಯನ್ನು ಮಾಡಿದನು. ಆ ಆಚಾರ್ಯನು ಮಿಕ್ಕ ಬ್ರಹ್ಮಚಾರಿಗಳಿಗೆ ಅಧ್ಯಯನವನ್ನು ಕಲಿಸಿ ಹಿಂತಿರುಗಿ ಕಳುಹಿಸಿಕೊಟ್ಟವನು, ಅವನೊಬ್ಬನನ್ನೇ ಉಪಕೋಸಲನೊಬ್ಬನನ್ನು ಮಾತ್ರ ಹಿಂತಿರುಗಿ ಕಳುಹಿಸಲಿಲ್ಲ.

(ಉಪನಿಷತ್ತು)

ತಂ ಜಾಯೋವಾಚ ತಪ್ತೋ ಬ್ರಹ್ಮಚಾರೀ ಕುಶಲಮಗ್ನೀನ್ ಪರಿಚಚಾರೀನ್ನಾತ್ವಾವಗ್ನಯಃ ಪರಿಪ್ರವೋಚನ್ ಪ್ರಬ್ರೂಹ್ಯಸ್ಮಾ ಇತಿ ತಸ್ಮೈ ಹಾಪ್ರೋಚ್ಯೈವ ಪ್ರವಾಸಾಂಚಕ್ರೇ ॥೨॥

೨. ಆತನನ್ನು (ಕುರಿತು) ಹೆಂಡತಿಯು 'ಬ್ರಹ್ಮಚಾರಿಯು ತಪ್ತನಾಗಿರುತ್ತಾನೆ ; ಕುಶಲವಾಗಿ ಅಗ್ನಿಗಳನ್ನು ಪರಿಚರ್ಯೆಮಾಡಿರುತ್ತಾನೆ. ನಿನ್ನನ್ನು ಅಗ್ನಿಗಳು (ಏನೂ) ಅನ್ನದೆ ಇರಲಿ ! ಇವನಿಗೆ ಹೇಳಿಕೊಡು !' ಎಂದಳು. ಆವನಿಗೆ ಹೇಳಿಕೊಡದೆಯೇ ಹೊರಟುಹೋದನು.

ಹೆಂಡತಿ ನೆನಪುಕೊಟ್ಟರೂ
ಗುರು ಉಪದೇಶಿಸದೆ ಹೊರಟುಹೋದದ್ದು

೩.೨೭. ತಮ್ ಆಚಾರ್ಯಂ ಜಾಯಾ ಉವಾಚ । ತಪ್ತೋ ಬ್ರಹ್ಮಚಾರೀ ಕುಶಲಂ ಸಮ್ಯಕ್ ಅಗ್ನೀನ್ ಪರಿಚಚಾರೀತ್ ಪರಿಚರಿತವಾನ್ । ಭಗವಾಂಶ್ಚ ಅಗ್ನಿಷು ಭಕ್ತಂ ನ ಸಮಾವರ್ತಯತಿ । ಅತಃ ಅಸ್ಮದ್ಭಕ್ತಂ ನ ಸಮಾವರ್ತಯತೀತಿ ಜ್ಞಾತ್ವಾ ತ್ವಾಮ್ ಅಗ್ನಯಃ ಮಾ ಪರಿಪ್ರವೋಚನ್ ಗರ್ಹಾಂ ತವ ಮಾ ಕುರ್ಯುಃ । ಅತಃ ಪ್ರಬ್ರೂಹಿ ಅಸ್ಮೈ ವಿದ್ಯಾಮ್ ಇಷ್ಟಾಮ್ ಉಪಕೋಸಲಾಯ ಇತಿ । ತಸ್ಮೈ ಏವಂ ಜಾಯಯಾ ಉಕ್ತೋಽಪಿ ಹ ಅಪ್ರೋಚ್ಯೈವ ಅನುಕ್ತ್ವೈವ ಕಿಂಚಿತ್ ಪ್ರವಾಸಾಂಚಕ್ರೇ ಪ್ರವಸಿತವಾನ್ ॥

(ಭಾಷ್ಯಾರ್ಥ)

ಆ ಆಚಾರ್ಯನನ್ನು ಕುರಿತು ಹೆಂಡತಿಯು 'ಬ್ರಹ್ಮಚಾರಿಯು ತಪಸ್ಸನ್ನಾಗಿರುತ್ತಾನೆ[1] ; ಅಗ್ನಿಗಳನ್ನು ಕುಶಲವಾಗಿ ಚೆನ್ನಾಗಿ ಪರಿಚರ್ಯೆಮಾಡಿರುತ್ತಾನೆ, ಸೇವಿಸಿರುತ್ತಾನೆ. ಆದರೆ ಅಗ್ನಿಗಳಲ್ಲಿ ಭಕ್ತಿಯುಳ್ಳ ಅವನನ್ನು ತಾವು ಹಿಂದಕ್ಕೆ ಕಳುಹಿಸುತ್ತಿಲ್ಲ. ಆದ್ದರಿಂದ ನಮ್ಮ ಭಕ್ತನನ್ನು ಹಿಂದಕ್ಕೆ ಕಳುಹಿಸಲಿಲ್ಲವಲ್ಲ!- ಎಂದರಿತು ನಿಮ್ಮನ್ನು ಅಗ್ನಿಗಳು (ಏನೂ) ಹೇಳದೆ ಇರಲಿ, ನಿಮ್ಮ ನಿಂದೆಯನ್ನು ಮಾಡದೆ ಇರಲಿ ! ಆದ್ದರಿಂದ ಈ ಉಪಕೋಸಲನಿಗೆ ಇಷ್ಟವಾದ ವಿದ್ಯೆಯನ್ನು ಹೇಳಿರಿ !'ಎಂದಳು.

ಹೀಗೆಂದು ಹೇಳಿದಮೇಲೂ ಅವನಿಗೆ ಹೇಳದೆಯೇ ಏನನ್ನೂ ಹೇಳಿಕೊಡದೆಯೇ (ಆಚಾರ್ಯನು ಊರುಬಿಟ್ಟು) ಹೊರಟುಹೋದನು.

(ಉಪನಿಷತ್ತು)

ಸ ಹ ವ್ಯಾಧಿನಾನಶಿತುಂ ದಧ್ರೇ ತಮಾಚಾರ್ಯಜಾಯೋವಾಚ ಬ್ರಹ್ಮಚಾರಿನ್ನಶಾನ ಕಿಂ ನು ನಾಶ್ನಾಸೀತಿ ಸ ಹೋವಾಚ ಬಹವ ಇಮೇಽಸ್ಮಿನ್ ಪುರುಷೇ ಕಾಮಾ ನಾನಾತ್ಯಯಾ ವ್ಯಾಧಿಭಿಃ ಪ್ರತಿಪೂರ್ಣೋಽಸ್ಮಿ ನಾಶಿಷ್ಯಾಮೀತಿ ॥೩॥

೩. ಅವನು ವ್ಯಾಧಿಯಿಂದ ಊಟಮಾಡದಿರುವದಕ್ಕೆ ನಿಶ್ಚಯಿಸಿದನು.

---

1. ನಿಮ್ಮ ಶುಶ್ರೂಷೆಯಲ್ಲಿ ಬಹಳ ಕಾಯಕ್ಲೇಶವನ್ನು ಮಾಡಿದ್ದಾನೆ - ಎಂದು ಟೀಕೆ ; ತಪಸ್ಸು ಮಾಡಿದ್ದಾನೆ ಎಂದರ್ಥ. ವಿದ್ಯೆಯಿಲ್ಲದೆ ಸಂತಪ್ತನಾಗಿದಾನೆ ಎಂಬರ್ಥವೂ ಇರಬಹುದು.

ಅವನನ್ನು ಆಚಾರ್ಯನ ಹೆಂಡತಿ 'ಬ್ರಹ್ಮಚಾರಿಯೆ, ಊಟಮಾಡು. ಏಕೆ ಊಟಮಾಡದಿರುವೆಯೋ ?' ಎಂದಳು. ಅವನು 'ಈ ಪುರುಷನಲ್ಲಿ ನಾನಾಗತಿಯ ಬಹಳ ಕಾಮಗಳಿರುವವು, ವ್ಯಾಧಿಗಳಿಂದ ತುಂಬಿರುವೆನು, ಊಟಮಾಡೆನು' ಎಂದನು.

ಉಪಕೋಸಲನು ವ್ಯಥೆಯಿಂದ ಊಟಮಾಡದೆಹೋದದ್ದು

(ಭಾಷ್ಯ)

೩.೨೮. ಸ ಹ ಉಪಕೋಸಲಃ ವ್ಯಾಧಿನಾ ಮಾನಸೇನ ದುಃಖೇನ ಅನಶಿತುಮ್ ಅನಶನಂ ಕರ್ತುಂ ದಧ್ರೇ ಧೃತವಾನ್ ಮನಃ । ತಂ ತೂಷ್ಣೀಮ್ ಅಗ್ನ್ಯಾಗಾರೇಽವ ಸ್ಥಿತಮ್ ಆಚಾರ್ಯಜಾಯಾ ಉವಾಚ । ಹೇ ಬ್ರಹ್ಮಚಾರಿನ್ ಅಶಾನ ಭುಙ್ಕ್ಷ್ವ । ಕಿಂ ನು ಕಸ್ಮಾನ್ನು ಕಾರಣಾತ್ ನಾಶ್ನಾಸಿ ? ಇತಿ । ಸ ಹ ಉವಾಚ । ಬಹವಃ ಅನೇಕೇ ಅಸ್ಮಿನ್ ಪುರುಷೇ ಅಕೃತಾರ್ಥೇ ಪ್ರಾಕೃತೇ ಕಾಮಾಃ ಇಚ್ಛಾಃ ಕರ್ತವ್ಯಂ ಪ್ರತಿ । ನಾನಾ ಅತ್ಯಯಃ ಅತಿಗಮನಂ ಯೇಷಾಂ ವ್ಯಾಧೀನಾಂ ಕರ್ತವ್ಯಚಿನ್ತಾನಾಂ ತೇ ನಾನಾತ್ಯಯಾ ವ್ಯಾಧಯಃ । ಕರ್ತವ್ಯತಾಽಪ್ರಾಪ್ತಿನಿಮಿತ್ತಾನಿ ಚಿತ್ತದುಃಖಾನಿ ಇತ್ಯರ್ಥಃ । ತೈಃ ಪ್ರತಿ ಪೂರ್ಣೋಽಸ್ಮಿ । ಅತೋ ನಾಶಿಷ್ಯಾಮೀತ್ಯುಕ್ತ್ವಾ ತೂಷ್ಣೀಂ ಭೂತೇ ಬ್ರಹ್ಮಚಾರಿಣಿ-

(ಭಾಷ್ಯಾರ್ಥ)

ಆ ಉಪಕೋಸಲನು ವ್ಯಾಧಿಯಿಂದ ಮನಸ್ಸಿನ ದುಃಖದಿಂದ[1] ಊಟ ಮಾಡದಿರುವದಕ್ಕೆ ಉಪವಾಸವನ್ನು ಮಾಡುವದಕ್ಕೆ ನಿಶ್ಚಯಿಸಿದನು, ಮನಸ್ಸು ಮಾಡಿದನು. ಸುಮ್ಮನೆ ಅಗ್ನಿಯ ಮನೆಯಲ್ಲಿ ಇದ್ದುಕೊಂಡಿದ್ದ ಅವನನ್ನು ಕುರಿತು ಆಚಾರ್ಯನ ಹೆಂಡತಿಯು "ಎಲೈ ಬ್ರಹ್ಮಚಾರಿಯೆ, ಊಟಮಾಡು, ಭೋಜನ ಮಾಡು , ಏತಕ್ಕೆ ಯಾವ ಕಾರಣದಿಂದ ಊಟಮಾಡದಿರುವೆಯೊ ?" ಎಂದಳು. ಅವನು "ಈ ಪುರುಷನಲ್ಲಿ ಪ್ರಾಕೃತನಾದ ಕೃತಾರ್ಥನಲ್ಲದ (ಈ ಮನುಷ್ಯನಲ್ಲಿ), ನಾನಾಗತಿಯ- ಬಗೆಬಗೆಯ ಅತ್ಯಯವು, (ಒಂದನ್ನು) ಬಿಟ್ಟು (ಮತ್ತೊಂದಕ್ಕೆ) ಹೋಗುವಿಕೆಯು, ಯಾವ ವ್ಯಾಧಿಗಳಿಗೆ ಕರ್ತವ್ಯಚಿಂತೆಗಳಿಗೆ[2] ಇರುವದೋ ಅವು

---

1. ರೂಢಿಯಲ್ಲಿ ವ್ಯಾಧಿಯೆಂದರೆ ರೋಗವು ; ಇಲ್ಲಿ ಅವನಿಗೆ ಮನಸ್ಸಿನ ವ್ಯಥೆಯು ಮಾತ್ರ ಇದ್ದದ್ದರಿಂದ ಆದಿ ಎಂಬರ್ಥದಲ್ಲಿಯೇ ಈ ಶಬ್ದವನ್ನುಪಯೋಗಿಸಿದೆ ಎಂದು ಭಾವ.

2. 'ಯೇಷಾಂ ವ್ಯಾದೀನಾಂ'ಎಂದು ಭಾಷ್ಯದಲ್ಲಿದೆ. ಮೂಲದಲ್ಲಿ ನಾನಾತ್ಯಯಾ ಎಂಬುದು ಕಾಮಗಳಿಗೆ ವಿಶೇಷಣವಾಗಿದೆಯಾದ್ದರಿಂದ ಭಾಷ್ಯದಲ್ಲಿ ವ್ಯಾದಿಗಳೆಂದರೆ ಕಾಮಗಳೇ ಎಂದು ಟೀಕೆ. ಆದರೆ ಭಾಷ್ಯದಲ್ಲಿ ಕಾಮಗಳು, ಇಚ್ಛೆಗಳು - ಎಂದು ವಿವರಿಸಿ →

ನಾನಾತ್ಯಯ (ನಾನಾ ಗತಿಯ ಕಾಮಗಳು) ; ಅಂಥ- ಈ ಕಾಮಗಳು ಕರ್ತವ್ಯಕ್ಕಾಗಿರುವ ಇಚ್ಛೆಗಳು , ಬಹಳ , ಅನೇಕ , (ವ್ಯಾಧಿಗಳಿಂದ) ವ್ಯಾಧಿಗಳೆಂದರೆ ಕರ್ತವ್ಯತೆಯು ದೊರೆಯದೆ ಇರುವದರಿಂದಾದ ಚಿತ್ತದುಃಖಗಳು[1] ಎಂದರ್ಥ ; ಆ (ವ್ಯಾಧಿಗಳಿಂದ) ತುಂಬಿರುತ್ತೇನೆ. ಆದ್ದರಿಂದ ಊಟಮಾಡೆನು'' ಎಂದು ನುಡಿದು ಬ್ರಹ್ಮಚಾರಿಯು ಸುಮ್ಮನಾಗಲು[2]-

ಉಪಕೋಸಲನಿಗೆ ಅಗ್ನಿಗಳ ಒಟ್ಟು ಉಪದೇಶ

(ಉಪನಿಷತ್ತು)

ಅಥ ಹಾಗ್ನಯಃ ಸಮೂದಿರೇ ತಪ್ತೋ ಬ್ರಹ್ಮಚಾರೀ ಕುಶಲಂ ನಃ ಪರ್ಯಚಾರೀದ್ಧನಾಸ್ತ್ಮೈ ಪ್ರಬ್ರವಾಮೇತಿ ತಸ್ಮೈ ಹೋಚುಃ ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮೇತಿ[3] ॥೪॥

೪. ಆಗ ಅಗ್ನಿಗಳು 'ಬ್ರಹ್ಮಚಾರಿಯು ತಪ್ತನಾಗಿರುತ್ತಾನೆ. ನಮ್ಮನ್ನು ಚೆನ್ನಾಗಿ ಪರಿಚರ್ಯೆಮಾಡಿದ್ದಾನೆ. ಒಳ್ಳೆಯದು, ಇವನಿಗೆ ಹೇಳಿಕೊಡೋಣ' ಎಂದು ಸಂವಾದಮಾಡಿಕೊಂಡವು. ಅವನಿಗೆ 'ಪ್ರಾಣವು ಬ್ರಹ್ಮವು ; ಕಂ ಬ್ರಹ್ಮವು, ಖಂ ಬ್ರಹ್ಮವು' ಎಂದು ಹೇಳಿದವು.

ಕರ್ತವ್ಯಚಿಂತೆಗಳು ಎಂದು ಹೇಳಿರುವದರಿಂದ ಇಂಥದ್ದನ್ನು ಮಾಡಬೇಕೆಂಬ ಚಿಂತೆಯೇ ಕಾಮಗಳೆಂದಾಗುತ್ತದೆ. 'ವ್ಯಾಧೀನಾಂ'ಎಂಬುದು 'ಕಾಮಾನಾಂ'ಎಂಬುದರ ಬದಲು ಲೇಖಕರ ಕೈತಪ್ಪಿನಿಂದ ಬಿದ್ದಿರಲಾರದೆ ? ವಿಚಾರಿಸತಕ್ಕದ್ದಾಗಿದೆ.

1. ವ್ಯಾಧಿಗಳು ಎಂದರೆ ಕರ್ತವ್ಯತಾऽಪ್ಯಾಪ್ತಿಯ ದುಃಖಗಳು ; ಉಪಕೋಸಲನಿಗೆ ವಿದ್ಯೆಯನ್ನು ದೊರಕಿಸಿಕೊಳ್ಳಲಿಲ್ಲವಲ್ಲ ಎಂಬ ಕಾರಣದಿಂದ ದುಃಖವಾಗಿತ್ತು. ಇಲ್ಲಿ 'ಕರ್ತವ್ಯಚಿಂತಾ' ಎಂದಿರದೆ ಅಪ್ರಾಪ್ತಿನಿಮಿತ್ತದುಃಖಾದಿ ಎಂದಿರುವದರಿಂದ ಹಿಂದೆ 'ಕಾಮಾನಾಂ' ಎಂಬುದಕ್ಕೆ ವ್ಯಾಧೀನಾಂ ಎಂದು ತಪ್ಪಿನಿಂದ ಬರೆದುಕೊಂಡದ್ದಾಗಿರ ಬಹುದೆಂಬ ಊಹೆಗೆ ಬೆಂಬಲವಿದೆ.

2. 'ಇತ್ಯುಕ್ತ್ವಾ ತೂಷ್ಣೀಂಭೂತೇ ಬ್ರಹ್ಮಚಾರಿಣಿ' ಎಂಬುದು ಮುಂದಿನ ಭಾಷ್ಯಕ್ಕೆ ಸಂಬಂಧವನ್ನು ಹೇಳುವ ವಾಕ್ಯ. ಮೂಲದಲ್ಲೊಂದು ಇತಿಯನ್ನು ಇಲ್ಲಿ ಬಿಟ್ಟಿದೆಯೆಂದೋ ಇತಿಯ ಮುಂದೆ ಮತ್ತೊಂದು ಇತಿಯು ಬರುವಾಗ ಆದನ್ನು ಬಿಡುವದು ಭಾಷ್ಯಕಾರರ ಶೈಲಿಯೆಂದೋ ಇಟ್ಟುಕೊಳ್ಳಬೇಕಾಗಿದೆ.

3. ಈ ವಾಕ್ಯವು ತೆ॥ ಪಾಠದಲ್ಲಿ ಮುಂದಿನ ಕಂಡಿಕೆಗೆ ಸೇರಿದೆ.

ಪ್ರಾಣವು ಬ್ರಹ್ಮ, ಕಂ ಬ್ರಹ್ಮ, ಖಂ ಬ್ರಹ್ಮ

(ಭಾಷ್ಯ)

೩೨೯. ಅಥ ಹ ಅಗ್ನಯಃ ಶುಶ್ರೂಷಯಾ ಆವರ್ಜಿತಾಃ ಕಾರುಣ್ಯಾವಿಷ್ಟಾಃ ಸನ್ತಃ ತ್ರಯೋಽಪಿ ಸಮೂದಿರೇ ಸಂಭೂಯ ಉಕ್ತವನ್ತಃ । 'ಹನ್ತ ಇದಾನೀಮ್ ಅಸ್ಮೈ ಬ್ರಹ್ಮಚಾರಿಣೇ ಅಸ್ಮದ್ಭಕ್ತಾಯ ದುಃಖಿತಾಯ ತಪಸ್ವಿನೇ ಶ್ರದ್ದಧಾನಾಯ ಸರ್ವೇ ಅನುಶಾಸ್ಮಃ ಅನುಪ್ರಬ್ರವಾಮ[1] ಬ್ರಹ್ಮವಿದ್ಯಾಮ್'ಇತಿ । ಏವಂ ಸಂಪ್ರಧಾರ್ಯ ತಸ್ಮೈ ಹ ಊಚುಃ ಉಕ್ತವನ್ತಃ 'ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮ' ಇತಿ ॥

(ಭಾಷ್ಯಾರ್ಥ)

ಆ ಬಳಿಕ ಅಗ್ನಿಗಳು (ಅವನ) ಶುಶ್ರೂಷೆಯಿಂದ (ಅವನಿಗೆ) ಒಲಿದು ಕಾರುಣ್ಯದಿಂದೊಡಗೂಡಿದವಾಗಿ[2] ಮೂರೂ ಸಂವಾದಮಾಡಿಕೊಂಡವು, ಒಟ್ಟು ಸೇರಿ ಇಂತೆಂದವು. ''ಒಳ್ಳೆಯದು[3], ಈಗ ಈ ನಮ್ಮ ಭಕ್ತನಾದ, ದುಃಖಿಯೂ ತಪಸ್ವಿಯೂ[4] ಶ್ರದ್ಧಾವಂತನೂ ಆಗಿರುವ ಬ್ರಹ್ಮಚಾರಿಗೆ ಬ್ರಹ್ಮವಿದ್ಯೆಯನ್ನು (ಅನುಪ್ರಬ್ರವಾಮಃ= ಅನುಶಾಸ್ಮ) ಎಲ್ಲರೂ (ಸೇರಿ) ಹೇಳಿಕೊಡೋಣ.'' ಹೀಗೆಂದು ನಿಶ್ಚಯಿಸಿ ಅವನಿಗೆ 'ಪ್ರಾಣವು ಬ್ರಹ್ಮ, ಕಂ ಬ್ರಹ್ಮ, ಖಂ ಬ್ರಹ್ಮ' - ಎಂದು (ಊಚುಃ=ಉಕ್ತವನ್ತಃ) ತಿಳಿಸಿದವು.

(ಉಪನಿಷತ್ತು)

ಸ ಹೋವಾಚ ವಿಜಾನಾಮ್ಯಹಂ ಯತ್ ಪ್ರಾಣೋ ಬ್ರಹ್ಮ ಕಂ ಚ ತು ಖಂ ಚ ನ ವಿಜಾನಾಮೀತಿ ತೇ ಹೋಚುರ್ಯದ್ವಾವ ಕಂ ತದೇವ ಖಂ ಯದೇವ ಖಂ ತದೇವ ಕಮಿತಿ ಪ್ರಾಣಂ ಚ ಹಾಸ್ಮೈ ತದಾಕಾಶಂ ಚೋಚುಃ ॥೫॥

೫. ಅವನು ಹೇಳಿದನೇನೆಂದರೆ 'ಪ್ರಾಣವು ಬ್ರಹ್ಮ ಎಂಬುದನ್ನು ನಾನು ತಿಳಿದುಕೊಂಡೆನು. ಆದರೆ ಕಂ ಎಂಬುದನ್ನೂ ಖಂ ಎಂಬುದನ್ನೂ

---

1. ಪ್ರಬ್ರವಾಮ ಎಂದೇ ಮೂಲದಲ್ಲಿರುವದರಿಂದ ಅನುಶಾಸ್ಮ ಎಂಬುದೇ ಆದಾದ ಮೇಲೆ ಇದ್ದರೆ ಚೆನ್ನಾಗಿತ್ತು ; ಅನು ಎಂಬುದು ಅರ್ಥದ್ಯೋತನಕ್ಕಾಗಿ ಸೇರಿಸಿಕೊಂಡದ್ದು.
2. 'ವರ್ಜಿತಾಃ' ಎಂದು ಪರಿಚ್ಛೇದಮಾಡಿದ ಪಾಠವೂ ಅಚ್ಚಿನ ಆ॥ ಪುಕ್ತಕದಲ್ಲಿದ್ದೆ ; ಆದರೆ ಶುಶ್ರೂಷೆಬಿಟ್ಟನೆಂದು ಅಗ್ನಿಗಳು ಹೇಳಿಕೊಟ್ಟವು ಎಂಬುದು ಸರಿಯಾಗಿ ಕಾಣುವದಿಲ್ಲ.
3. ಹನ್ತ ಎಂಬ ಅವ್ಯಯವನ್ನು ಅನುಮತಿಯನ್ನು ಕೇಳುವ ಸೂಚನೆಗೆ ಶೇಷವಾಗಿ ಪ್ರಯೋಗಿಸುತ್ತಾರೆ. 4. ಉಪವಾಸದಿಂದ ಕೃಶನಾಗಿರುವ ಎಂಬರ್ಥವೂ ಇದರಲ್ಲಿ ಸೇರಿರಬಹುದು.

ತಿಳಿಯಲಾರೆ'. ಅವು ಹೇಳಿದವೇನೆಂದರೆ 'ಕಂ ಎಂಬುದು ಯಾವದೋ ಅದೇ ಖಂ ; ಖಂ ಎಂಬುದು ಯಾವದೋ ಅದೇ ಕಮ್.' ಪ್ರಾಣವನ್ನೂ ಅದರ ಆಕಾಶವನ್ನೂ ಅವನಿಗೆ ಹೇಳಿಕೊಟ್ಟವು.

ಉಪಕೋಸಲನ ಸಂಶಯ

(ಭಾಷ್ಯ)

೩೩೦. ಸ ಹ ಉವಾಚ ಬ್ರಹ್ಮಚಾರೀ । ವಿಜಾನಾಮ್ಯಹಂ ಯದ್ ಭವದ್ಭಿರುಕ್ತಂ ಪ್ರಸಿದ್ಧಪದಾರ್ಥಕತ್ವಾತ್[1] ಪ್ರಾಣೋ ಬ್ರಹ್ಮೇತಿ । ಸ[2] ಯಸ್ಮಿನ್ ಸತಿ ಜೀವನಂ ಯದಪಗಮೇ ಚ ನ ಭವತಿ[3], ತಸ್ಮಿನ್ ವಾಯುವಿಶೇಷೇ ಲೋಕೇ ರೂಢಃ । ಅತೋ ಯುಕ್ತಂ ಬ್ರಹ್ಮತ್ವಂ ತಸ್ಯ । ತೇನ ಪ್ರಸಿದ್ಧಪದಾರ್ಥಕತ್ವಾದ್ ವಿಜಾನಾಮ್ಯಹಂ ಯತ್ ಪ್ರಾಣೋ ಬ್ರಹ್ಮೇತಿ । ಕಂ ಚ ತು ಖಂ ಚ ನ ವಿಜಾನಾಮೀತಿ । ನನು ಕಂಖಂಶಬ್ದಯೋರಪಿ ಸುಖಾಕಾಶವಿಷಯತ್ವೇನ ಪ್ರಸಿದ್ಧಪದಾರ್ಥಕತ್ವಮೇವ । ಕಸ್ಮಾದ್ ಬ್ರಹ್ಮಚಾರಿಣೋಽಜ್ಞಾನಮ್ ? ನೂನಮ್ । ಸುಖಸ್ಯ ಕಂಶಬ್ದವಾಚ್ಯಸ್ಯ ಕ್ಷಣಪ್ರಧ್ವಂಸಿತ್ವಾತ್ । ಖಂಶಬ್ದವಾಚ್ಯಸ್ಯ ಚಾಕಾಶಸ್ಯಾಚೇತನಸ್ಯ ಕಥಂ ಬ್ರಹ್ಮತ್ವಮ್ ಇತಿ ಮನ್ಯತೇ । ಕಥಂ ಚ ಭಗವತಾಂ ವಾಕ್ಯಮ್ ಅಪ್ರಮಾಣಂ ಸ್ಯಾದಿತಿ । ಅತೋ ನ ವಿಜಾನಾಮಿ ಇತ್ಯಾಹ ॥

(ಭಾಷ್ಯಾರ್ಥ)

ಆ ಬ್ರಹ್ಮಚಾರಿಯು ಇಂತೆಂದನು. ತಾವು ಹೇಳಿದಿರಲ್ಲ, ಪ್ರಾಣವು ಬ್ರಹ್ಮವೆಂದು ; ಅದು ನನಗೆ ತಿಳಿಯಿತು. ಏಕೆಂದರೆ (ಆ ವಾಕ್ಯದಲ್ಲಿ) ಪ್ರಸಿದ್ಧವಾದ ಅರ್ಥವಿದೆ.[4] ಯಾವದಿದ್ದರೆ ಜೀವನ(ವಿರುತ್ತದೆಯೋ), ಯಾವದು ಹೋದರೆ ಇಲ್ಲದೆ ಹೋಗುವದೋ, ಆ ವಾಯುವಿಶೇಷದಲ್ಲಿ ಆ (ಪ್ರಾಣಶಬ್ದವು) ರೂಢವಾಗಿದೆ.[5] ಆದ್ದರಿಂದ

---

1. 'ಪ್ರಸಿದ್ಧಪದಾರ್ಥತ್ವಾತ್' ಎಂದು ಕಕಾರರಹಿತಪಾಠವೂ ಉಂಟು.
2. ಇದು ಕೆಲವು ಪಾಠಗಳಲ್ಲಿರುವದಿಲ್ಲ; ಅನುವಾದದ ಟಿಪ್ಪಣಿಯನ್ನು ನೋಡಿ.
3. ಇದರ ಮುಂದಿರುವ ಇತಿ ಬೇಡವೆಂದು ಬಿಟ್ಟುಬಿಟ್ಟಿದೆ.
4. ಅದು ಪ್ರಸಿದ್ಧವಾದ ಅರ್ಥವಾಗಿದೆ- ಎಂಬುದು ಪ್ರಸಿದ್ಧಾರ್ಥತ್ವಾತ್ ಎಂಬುದಕ್ಕೆ ಕನ್ನಡ.
5. 'ರೂಢಃ' ಎಂಬುದಕ್ಕೆ 'ಸಃ' ಎಂಬ ಉದ್ದೇಶವಿದ್ದರೆ ಅನ್ವಯವಾಗುತ್ತದೆ ; ಆದರೆ ಅದಕ್ಕೆ ಪದಾರ್ಥತ್ವಾತ್ ಎಂದಿರುವ ಪಾಠದಲ್ಲಿ ಪ್ರಾಣವು ಶಬ್ದವಲ್ಲ, ಪದಾರ್ಥವೇ ಆಗುವದು. ಆದ್ದರಿಂದ 'ಪದಾರ್ಥಕತ್ವಾತ್' ಎಂಬ ಪಾಠವನ್ನು ಒಪ್ಪುವದೇ ಸರಿಯೆಂದಾಗುತ್ತದೆ. ಆದರೆ ಆಗಲೂ ವಾಕ್ಯವೆಂಬುದೇ ಪರಾಮೃಷ್ಟವಾಗುತ್ತದೆ ; ಪ್ರಾಣಶಬ್ದವೆಂಬ ಮಾತು →

ಅದು ಬ್ರಹ್ಮವೆಂಬುದು ಯುಕ್ತವೇ. ಆದ್ದರಿಂದ ಪ್ರಾಣವು ಬ್ರಹ್ಮ ಎಂಬುದು ಪ್ರಸಿದ್ಧವಾದ ಅರ್ಥವುಳ್ಳ (ವಾಕ್ಯ)ವಾದ್ದರಿಂದ (ಅದು ನನಗೆ) ಗೊತ್ತಿದೆ. ಆದರೆ ಕಂ ಮತ್ತು ಖಂ (ಇವು ಬ್ರಹ್ಮ ಎಂದಿರಲ್ಲ, ಇದು) ನನಗೆ ತಿಳಿಯಲಿಲ್ಲ.

(ಆಕ್ಷೇಪ) :- ಕಂಖಂಶಬ್ದಗಳಿಗೂ ಸುಖ, ಆಕಾಶ- ಎಂಬ ಅರ್ಥವಿರುವದರಿಂದ (ಅದಕ್ಕೂ) ಪ್ರಸಿದ್ಧವಾದ ಅರ್ಥವೇ ಇದೆ.[1] ಬ್ರಹ್ಮಚಾರಿಗೆ (ಇವು) ತಿಳಿಯಲಿಲ್ಲ ಎಂಬುದಕ್ಕೆ ಕಾರಣವೇನು ?

(ಪರಿಹಾರ) :- ಕಂಶಬ್ದವಾಚ್ಯವಾದ ಸುಖವು ಕ್ಷಣಕ್ಕೆ ನಾಶವಾಗುವದಾದ್ದರಿಂದಲೂ , ಖಂಶಬ್ದವಾಚ್ಯವಾದ ಆಕಾಶವು ಅಚೇತನವಾಗಿರುವದರಿಂದಲೂ (ಅವು) ಬ್ರಹ್ಮವೆಂದರೆ ಹೇಗೆ[2] ? ಎಂದು (ಅವನ) ಅಭಿಪ್ರಾಯವಿರಬೇಕು. ಆದರೆ ಪೂಜ್ಯರಾದ (ಅಗ್ನಿಗಳ) ವಾಕ್ಯವು ಹೇಗೆತಾನೆ ಅಪ್ರಮಾಣವಾದೀತು ? ಎಂದೂ (ಅವನ ಅಭಿಪ್ರಾಯವಿರಬೇಕು). ಆದ್ದರಿಂದ ನನಗೆ ತಿಳಿಯಲಿಲ್ಲ ಎಂದಿರುತ್ತಾನೆ.

ಸುಖವಿಶಿಷ್ಟಬ್ರಹ್ಮವನ್ನೇ ಇಲ್ಲಿ ಹೇಳಿದೆ

(ಭಾಷ್ಯ)

೩೩೧. ತಮ್ ಏವಮುಕ್ತವನ್ತಂ ಬ್ರಹ್ಮಚಾರಿಣಂ ತೇ ಹ ಅಗ್ನಯ ಊಚುಃ । ಯದ್ವಾವ ಯದೇವ ವಯಂ ಕಮ್ ಅವೋಚಾಮ । ತದೇವ ಖಮ್ ಆಕಾಶಮ್ । ಇತ್ಯೇವಂ ಖೇನ ವಿಶೇಷ್ಯಮಾಣಂ ಕಂ ವಿಷಯೆನ್ದ್ರಿಯಸಂಯೋಗಜಾತ್ ಸುಖಾನ್ನಿವರ್ತಿತಂ ಸ್ಯಾತ್ । ನೀಲೇನೇವ ವಿಶೇಷ್ಯಮಾಣಮ್ ಉತ್ಪಲಂ ರಕ್ತಾದಿಭ್ಯಃ । ಯದೇವ ಖಮ್ ಇತ್ಯಾಕಾಶಮ್ ಅವೋಚಾಮ , ತದೇವ ಚ ಕಂ ಸುಖಮಿತಿ ಜಾನೀಹಿ । ಏವಂ ಚ ಸುಖೇನ ವಿಶೇಷ್ಯಮಾಣಂ ಖಂ ಭೌತಿಕಾತ್ ಅಚೇತನಾತ್ ಖಾನ್ನಿವರ್ತಿತಂ ಸ್ಯಾತ್ । ನೀಲೋತ್ಪಲವದೇವ । ಸುಖಮಾಕಾಶಸ್ಥಂ ನೇತರಲ್ಲೌಕಿಕಮ್ , ಆಕಾಶಂ ಚ ಸುಖಾಶ್ರಯಂ ನೇತರದ್ ಭೌತಿಕಮ್ ಇತ್ಯರ್ಥಃ ॥

ಹಿಂದೆ ಇಲ್ಲ. ಮತ್ತು 'ಅದು ಬ್ರಹ್ಮ' ಎಂಬ ವಾಕ್ಯಶೇಷದಲ್ಲಿ ಪ್ರಾಣವೇ ಬೇಕಾಗುತ್ತದೆ, ಪ್ರಾಣಶಬ್ದವಲ್ಲ. 'ರೂಢಃ ಪ್ರಾಣಶಬ್ದಃ' ಎಂದು ಟೀಕೆಯಲ್ಲಿ ಅಧ್ಯಾಹಾರಮಾಡಿಕೊಂಡಿದೆ. ಅಲ್ಲಿಯೂ ಅನ್ವಯಕ್ಲೇಶವಿದೆ. ಆದ್ದರಿಂದ ವಾಕ್ಯವು ಏನೋ ಬರೆದವರ ಪ್ರಮಾದದಿಂದ ಹೆಚ್ಚುಕಡಿಮೆಯಾಗಿರಬೇಕು.

1. ಇಲ್ಲಿ ಶಬ್ದಗಳಿಗೆ ಅರ್ಥವಿದೆ ಎಂದಿರುವದರಿಂದ ಹಿಂದಿನ ವಾಕ್ಯದಲ್ಲಿಯೂ ಪ್ರಾಣಶಬ್ದದ ಪ್ರಯೋಗವಿತ್ತೆಂದು ಊಹಿಸುವದಕ್ಕೆಡೆಯಿದೆ.
2. 'ಅಚೇತನಸ್ಯ'ಎಂಬುದು 'ಅಚೇತನತ್ವಾತ್'ಎಂದಿದ್ದಂತೆ ಭಾವಿಸಿ ಕನ್ನಡಿಸಿದೆ ; ಈಗ ಇರುವಂತೆ ಈ ವಾಕ್ಯದಲ್ಲಿಯೂ ಅನ್ವಯಕ್ಲೇಶವಿದೆ.

ಕ್ಷ)

ಹೀಗೆಂದು ಹೇಳಿದ ಬ್ರಹ್ಮಚಾರಿಯನ್ನು ಕುರಿತು ಆ ಅಗ್ನಿಗಳು ಇಂತೆಂದವು : (ಯದ್ವಾವ = ಯದೇವ) ಯಾವದನ್ನು ನಾವು ಕಂ ಎಂದೆವೋ , ಅದೇ ಖಮ್ , ಆಕಾಶವು. ಹೀಗೆ ಆಕಾಶವೆಂಬ ವಿಶೇಷಣವನ್ನು ಕೊಟ್ಟದ್ದರಿಂದ ಕಂ (ಸುಖವನ್ನು) ವಿಷಯೇಂದ್ರಿಯಗಳ ಸಂಯೋಗದಿಂದುಂಟಾದ ಸುಖದಿಂದ ಬೇರ್ಪಡಿಸಿಕೊಂಡಂತೆ ಆಗುತ್ತದೆ. ಕಪ್ಪೆಂಬ ವಿಶೇಷಣವನ್ನು ಕೊಟ್ಟರೆ ನೈದಿಲೆಯನ್ನು ಕೆಂಪು (ನೈದಿಲೆ) ಮುಂತಾದವುಗಳಿಂದ (ಹೇಗೆ ಬೇರ್ಪಡಿಸಿಕೊಂಡಂತೆ ಆಗುವದೋ) ಹಾಗೆ. ಯಾವದನ್ನು ಖಮ್, ಎಂಬ ಆಕಾಶವೆಂದು, ಹೇಳಿದೆವೋ ಅದೇ ಕಂ ಎಂಬ ಸುಖವೆಂದು ತಿಳಿ. ಹೀಗೆ ಸುಖವೆಂಬ ವಿಶೇಷಣವನ್ನು ಕೊಟ್ಟದ್ದರಿಂದ ಖಂ (ಆಕಾಶವನ್ನು) ಭೌತಿಕವಾದ ಅಚೇತನವಾದ ಆಕಾಶದಿಂದ ಬೇರ್ಪಡಿಸಿಕೊಂಡಂತೆ ಆಗುವದು. (ಇದೂ) ನೀಲೋತ್ಪಲದಂತೆಯೇ.[1] ಸುಖವೆಂಬುದು ಆಕಾಶದಲ್ಲಿರುವದೇ ಹೊರತು ಲೌಕಿಕಸುಖವಲ್ಲ. ಆಕಾಶವೆಂದರೆ ಸುಖಕ್ಕೆ ಆಶ್ರಯವಾಗಿರುವದೇ ಹೊರತು ಭೌತಿಕ(ವಾದ ಆಕಾಶ)ವಲ್ಲ- ಎಂದರ್ಥ.[2]

ಕಂಖಿಂಗಳನ್ನು ವ್ಯತಿಹಾರದಿಂದ ಹೇಳಿದ್ದೇಕೆ ?

(ಭಾಷ್ಯ)

೩೩.೨. ನನ್ವಾಕಾಶಂ ಚೇತ್ ಸುಖೇನ ವಿಶೇಷಯಿತುಮಿಷ್ಟಮ್ ಅಸ್ತ್ವನ್ಯತರದೇವ ವಿಶೇಷಣಮ್ 'ಯದ್ವಾವ ಕಂ ತದೇವ ಖಮ್' ಇತಿ । ಅತಿರಿಕ್ತಮ್ ಇತರತ್ । 'ಯದೇವ ಖಂ ತದೇವ ಕಮ್'ಇತಿ ಪೂರ್ವವಿಶೇಷಣಂ ವಾ । ನನು ಸುಖಾಕಾಶಯೋರುಭಯೋರಪಿ ಲೌಕಿಕಸುಖಾಕಾಶಾಭ್ಯಾಂ ವ್ಯಾವೃತ್ತಿರಿಷ್ಟಾ ಇತ್ಯವೋಚಾಮ । ಸುಖೇನ ಆಕಾಶೇ ವಿಶೇಷಿತೇ ವ್ಯಾವೃತ್ತಿರುಭಯೋರರ್ಥ ಪ್ರಾಪ್ತೈವೇತಿ ಚೇತ್ । ಸತ್ಯಮೇವಮ್ । ಕಿಂ ತು ಸುಖೇನ ವಿಶೇಷಿತಸ್ಯೈವ ಆಕಾಶಸ್ಯ ಧ್ಯೇಯತ್ವಂ ವಿಹಿತಮ್ ನ ತ್ವಾಕಾಶಗುಣಸ್ಯ ವಿಶೇಷಣಸ್ಯ ಸುಖಸ್ಯ ಧ್ಯೇಯತ್ವಂ ವಿಹಿತಂ ಸ್ಯಾತ್ । ವಿಶೇಷಣೋಪಾದಾನಸ್ಯ ವಿಶೇಷ್ಯನಿಯನ್ತೃತ್ವೇನೈವ

[1] ನೀಲೋತ್ಪಲ (ಕನ್ನೈದಿಲೆ) ಎಂಬಲ್ಲಿ ಕಪ್ಪು ಎಂಬುದು ಸೇರಿದ್ದರಿಂದ ಕೆಂಪು ನೈದಿಲೆಯಲ್ಲವೆಂದು ಹೇಗೆ ಆಗುವದೋ ಹಾಗೆ, ನೈದಿಲೆ ಎಂಬುದು ಸೇರಿದ್ದರಿಂದ ಮತ್ತೊಂದರ ಕಪ್ಪಲ್ಲ ಎಂದೂ ಆಗುತ್ತದೆಯಷ್ಟೆ? ಹೀಗೆಯೇ ಇಲ್ಲಿಯೂ ತಿಳಿಯಬೇಕು.

[2] ಕಂಖಿಂಗಳು ಎರಡೂ ಒಂದಕ್ಕೊಂದು ವಿಶೇಷವಾಗಿರುವದರಿಂದ ಅಪರಿಚ್ಛಿನ್ನವಾದ ಸ್ವರೂಪಾನಂದವನ್ನೇ ಹೇಳಿದಂತಾಗುವದು ಎಂದು ಭಾವ.

ಉಪಕ್ಷಯಾತ್ । ಅತಃ ಖೇನ ಸುಖಿಮಪಿ ವಿಶೇಷ್ಯತೇ ಧ್ಯೇಯತ್ವಾಯ । ಕುತಶ್ಚೈತನ್ನಿಶ್ಚೀಯತೇ ? ಕಂಶಬ್ದಸ್ಯಾಪಿ ಬ್ರಹ್ಮಶಬ್ದಸಂಬನ್ಧಾತ್ ಕಂ ಬ್ರಹ್ಮೇತಿ । ಯದಿ ಹಿ ಸುಖಿಗುಣವಿಶಿಷ್ಟಸ್ಯ ಖಸ್ಯ ಧ್ಯೇಯತ್ವಂ ವಿವಕ್ಷಿತಂ ಸ್ಯಾತ್ ಕಂ ಖಂ ಬ್ರಹ್ಮ ಇತಿ ಬ್ರೂಯುರಗ್ನಯಃ ಪ್ರಥಮಮ್ । ನ ಚೈವಮ್ ಉಕ್ತವನ್ತಃ । ಕಿಂ ತರ್ಹಿ ? ಕಂ ಬ್ರಹ್ಮ ಖಂ ಬ್ರಹ್ಮ ಇತಿ । ಅತಃ ಬ್ರಹ್ಮಚಾರಿಣೋ ಮೋಹಾಪನಯನಾಯ ಕಂಖಂ ಶಬ್ದಯೋರಿತರೇತರವಿಶೇಷಣವಿಶೇಷ್ಯತ್ವನಿರ್ದೇಶೋ ಯುಕ್ತ ಏವ ಯದ್ವಾವ ಕಮ್ ಇತ್ಯಾದಿಃ ॥

(ಭಾಷ್ಯಾರ್ಥ)

(ಆಕ್ಷೇಪ) :- ಆಕಾಶಕ್ಕೆ ಸುಖವೆಂಬ ವಿಶೇಷಣವನ್ನು ಕೊಡಬೇಕೆಂಬ ಇಚ್ಛೆಯಿದ್ದರೆ ಇವೆರಡರಲ್ಲಿ ಒಂದೇ ವಿಶೇಷಣವಾಗಿರಲಿ 'ಯದ್ವಾವ ಕಂ ತದೇವ ಖಮ್'(ಯಾವದು ಕಂ ಎಂದೆವೋ ಅದೇ ಖಂ) ಎಂದಿರಲಿ, ಇನ್ನೊಂದು ಹೆಚ್ಚು. ಅಥವಾ 'ಯದೇವ ಖಂ ತದೇವ ಕಮ್'(ಯಾವದನ್ನು ಖಂ ಎಂದೆವೋ ಅದೇ ಕಂ) ಎಂದು ಮೊದಲಿನದಕ್ಕೇ ವಿಶೇಷಣವಾಗಲಿ !

(ಪರಿಹಾರ) :- ಸುಖ , ಆಕಾಶ- ಎರಡೂ ಲೌಕಿಕಸುಖ , (ಭೌತಿಕ) ಆಕಾಶ- ಇವುಗಳಿಂದ ಬಿಡಿಸಿಕೊಳ್ಳುವದು ಬೇಕಾಗಿದೆ ಎಂದು ಹೇಳಿದೆವಲ್ಲ !

(ಆಕ್ಷೇಪ) :- ಆಕಾಶಕ್ಕೆ ಸುಖವೆಂಬ ವಿಶೇಷಣವನ್ನು ಕೊಟ್ಟರೆ ಎರಡನ್ನೂ (ಮಿಕ್ಕವುಗಳಿಂದ) ಬಿಡಿಸಿಕೊಂಡದ್ದು ತಾನೇ ಪ್ರಾಪ್ತವಾಗುವದಲ್ಲ !

(ಪರಿಹಾರ) :- ಹಾಗೇ ಸರಿ. ಆದರೆ (ಆಗ) ಸುಖವೆಂಬ ವಿಶೇಷಣವುಳ್ಳ ಆಕಾಶವನ್ನೇ ಧ್ಯಾನಮಾಡಬೇಕೆಂದು ವಿಧಿಸಿದ್ದಾಗುವದೇ ಹೊರತು ಆಕಾಶಗುಣವಾದ ಸುಖವೆಂಬ ವಿಶೇಷಣವನ್ನು ಧ್ಯಾನಮಾಡಬೇಕೆಂದು ವಿಧಿಸಿದ್ದಾಗಲಾರದು. ಏಕೆಂದರೆ (ಸುಖವೆಂಬ) ವಿಶೇಷಣವನ್ನು ತೆಗೆದುಕೊಂಡದ್ದಕ್ಕೆ ವಿಶೇಷ್ಯವನ್ನು ಗೊತ್ತುಮಾಡುವ ದರಲ್ಲಿಯೇ (ತಾತ್ಪರ್ಯವು) ಮುಗಿದುಹೋಗುವದು. ಆದ್ದರಿಂದ (ಅದನ್ನು ಧ್ಯಾನಿಸಲೆಂದು) ಆಕಾಶವೆಂಬ ವಿಶೇಷಣವನ್ನು ಸುಖಕ್ಕೂ ಕೊಟ್ಟಿದೆ.

ಇದನ್ನು ಮತ್ತೂ ಏತರಿಂದ ನಿಶ್ಚಯಿಸಬಹುದೆಂದರೆ, ಕಂ ಬ್ರಹ್ಮ ಎಂದು ಕಂಶಬ್ದಕ್ಕೂ ಬ್ರಹ್ಮಶಬ್ದದ ಸಂಬಂಧವಿರುವದರಿಂದ. ಸುಖಗುಣವಿಶಿಷ್ಟವಾದ ಆಕಾಶವನ್ನು (ಮಾತ್ರ) ಧ್ಯಾನಮಾಡತಕ್ಕದ್ದೆಂದು ಹೇಳುವ ಇಚ್ಛೆ ಇದ್ದಿದ್ದರೆ ಕಂ ಖಂ ಬ್ರಹ್ಮ ಎಂದೇ ಅಗ್ನಿಗಳು ಮೊದಲೇ ಹೇಳಿಬಿಡುತ್ತಿದ್ದವು. ಆದರೆ ಹಾಗೆ ಹೇಳಿರುವದಿಲ್ಲ ;

ಮತ್ತೇನೆಂದರೆ ಕಂ ಬ್ರಹ್ಮ ಖಂ ಬ್ರಹ್ಮ ಎಂದೇ (ಹೇಳಿವೆ).[1] ಆದ್ದರಿಂದ ಬ್ರಹ್ಮಚಾರಿಯ ಭ್ರಾಂತಿಯನ್ನು ಕಳೆಯುವದಕ್ಕಾಗಿ 'ಯದ್ವಾವ ಕಮ್' ಎಂದುಮುಂತಾಗಿ ಕಂಖಂ ಶಬ್ದಗಳನ್ನು (ಎರಡನ್ನೂ) ಒಂದಕ್ಕೊಂದು ವಿಶೇಷಣವಿಶೇಷ್ಯಭಾವದಿಂದ ತಿಳಿಸಿರುವದು ಯುಕ್ತವೇ ಆಗಿರುತ್ತದೆ.

ಅಗ್ನಿಗಳ ಉಪದೇಶದ ಒಟ್ಟರ್ಥ

(ಭಾಷ್ಯ)

೫.೩.೩. ತದೇತತ್ ಅಗ್ನಿಭಿರುಕ್ತಂ ವಾಕ್ಯಾರ್ಥಮ್ ಅಸ್ಮಾದ್ಬೋಧಾಯ ಶ್ರುತಿರಾಹ। ಪ್ರಾಣಂ ಚ ಹ ಅಸ್ಮೈ ಬ್ರಹ್ಮಚಾರಿಣೇ ತಸ್ಯ ಆಕಾಶಃ ತದಾಕಾಶಃ । ಪ್ರಾಣಸ್ಯ ಸಂಬನ್ಧೀ ಆಶ್ರಯತ್ವೇನ ಹಾರ್ದ ಆಕಾಶ ಇತ್ಯರ್ಥಃ । ಸುಖಗುಣವತ್ತ್ವನಿರ್ದೇಶಾತ್ । ತಂ ಚ ಆಕಾಶಂ ಸುಖಗುಣವಿಶಿಷ್ಟಂ ಬ್ರಹ್ಮ ತತ್ಸ್ಥಂ ಚ ಪ್ರಾಣಂ ಬ್ರಹ್ಮಸಂಪರ್ಕಾದೇವ ಬ್ರಹ್ಮೇತ್ಯುಭಯಂ ಪ್ರಾಣಂ ಚ ಆಕಾಶಂ ಚ ಸಮುಚ್ಚಿತ್ಯ ಬ್ರಹ್ಮಣಿ ಊಚುಃ ಅಗ್ನಯಃ ಇತಿ ॥

(ಭಾಷ್ಯಾರ್ಥ)

ಆ ಈ ಅಗ್ನಿಗಳು ಹೇಳಿದ್ದರ ವಾಕ್ಯಾರ್ಥವನ್ನು ನಮ್ಮ ತಿಳಿವಳಿಕೆಗಾಗಿ ಶ್ರುತಿಯು ಹೇಳುತ್ತಿದೆ : ಈ ಬ್ರಹ್ಮಚಾರಿಗೆ ಪ್ರಾಣವನ್ನು (ಹೇಳಿದವು). ಅದರ ಆಕಾಶವು ತದಾಕಾಶವು ; ಪ್ರಾಣಕ್ಕೆ ಸಂಬದ್ಧವಾಗಿರುವ ಹಾರ್ದ - ಆಕಾಶವು ಎಂದರ್ಥ. ಏಕೆಂದರೆ (ಅದಕ್ಕೆ) ಸುಖವೆಂಬ ಗುಣವಿದೆ ಎಂದು (ಇಲ್ಲಿ) ತಿಳಿಸಿರುತ್ತದೆ. ಆ (ಹಾರ್ದವಾದ) ಆಕಾಶವೆಂಬ ಸುಖಗುಣವಿಶಿಷ್ಟವಾದ ಬ್ರಹ್ಮವನ್ನೂ ಅದರಲ್ಲಿರುವ ಪ್ರಾಣವನ್ನೂ- ಬ್ರಹ್ಮದ ಸಂಬಂಧದಿಂದಲೇ (ಅದೂ) ಬ್ರಹ್ಮವು- ಹೀಗೆ ಪ್ರಾಣವನ್ನೂ ಆಕಾಶವನ್ನೂ ಎರಡನ್ನೂ ಸೇರಿಸಿ ಬ್ರಹ್ಮಗಳು ಎಂದು ಅಗ್ನಿಗಳು ಹೇಳಿದವು.[2]

1. ಸೂ. ಭಾ. ೧-೨-೧೫ (ಭಾ. ಭಾ. ೧೮೧)ನ್ನು ನೋಡಿ.
2. ಸೂ. ಭಾ. ದಲ್ಲಿ ಬ್ರಹ್ಮವಿಚಾರವನ್ನು ಮಾಡಿರುವದರಿಂದ ಇಲ್ಲಿ ಪ್ರಾಣವನ್ನೂ ಹೇಳಿದೆ ಎಂಬುದನ್ನು ಪರಾಮರ್ಶಮಾಡಿಲ್ಲವೆಂದು ಕಾಣುತ್ತದೆ.

ನಾಲ್ಕನೆಯ ಅಧ್ಯಾಯ - ಹನ್ನೊಂದನೆಯ ಖಂಡ

(ಉಪಕೋಸಲವಿದ್ಯೆ)

ಗಾರ್ಹಪತ್ಯಾಗ್ನಿಯ ವಿದ್ಯೆ

(ಉಪನಿಷತ್ತು)

ಅಥ ಹೈನಂ ಗಾರ್ಹಪತ್ಯೋಽನುಶಶಾಸ ಪೃಥಿವ್ಯಗ್ನಿರನ್ನಮಾದಿತ್ಯ ಇತಿ ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮೀತಿ ॥೧॥

೧. ಇನ್ನು ಇವನಿಗೆ ಗಾರ್ಹಪತ್ಯವು (ಹೀಗೆಂದು) ಅನುಶಾಸನ ಮಾಡಿತು : 'ಪೃಥಿವಿ , ಅಗ್ನಿ , ಅನ್ನ , ಆದಿತ್ಯ. ಆದಿತ್ಯನಲ್ಲಿ ಈ ಪುರುಷನು ಕಾಣಬರುತ್ತಾನಲ್ಲ, ಅವನು ನಾನಾಗಿದ್ದೇನೆ ; ಅವನೇ ನಾನಾಗಿರುತ್ತೇನೆ.'

ಗಾರ್ಹಪತ್ಯದ ತನುಚತುಷ್ಟಯ

(ಭಾಷ್ಯ)

೩೩೪. ಸಂಭೂಯಾಗ್ನಯಃ ಬ್ರಹ್ಮಚಾರಿಣೇ ಬ್ರಹ್ಮ ಉಕ್ತವನ್ತಃ । ಅಥ ಅನನ್ತರಂ ಪ್ರತ್ಯೇಕಂ ಸ್ವಸ್ವವಿಷಯಾಂ ವಿದ್ಯಾಂ ವಕ್ತುಮ್ ಆರೇಭಿರೇ । ತತ್ರ ಆದೌ ಏನಂ ಬ್ರಹ್ಮಚಾರಿಣಂ ಗಾರ್ಹಪತ್ಯೋಽಗ್ನಿಃ ಅನುಶಶಾಸ । ಪೃಥಿವೀ, ಅಗ್ನಿಃ, ಅನ್ನಮ್, ಆದಿತ್ಯಃ- ಇತಿ ಮಮೈತಾಶ್ಚತಸ್ರಸ್ತನವಃ । ತತ್ರ ಯ ಆದಿತ್ಯೇ ಏಷ ಪುರುಷೋ ದೃಶ್ಯತೇ ಸೋಽಹಮಸ್ಮಿ ಗಾರ್ಹಪತ್ಯೋಽಗ್ನಿಃ । ಯಶ್ಚ ಗಾರ್ಹಪತ್ಯೋಽಗ್ನಿಃ ಸ ಏವಾಹಮ್ ಆದಿತ್ಯೇ ಪುರುಷೋಽಸ್ಮಿ- ಇತಿ ಪುನಃ ಪರಾವೃತ್ತ್ಯಾ ಸ ಏವಾಽಹಮಸೀತಿ ವಚನಮ್ । ಪೃಥಿವ್ಯನ್ನಯೋರಿವ ಭೋಜ್ಯತ್ವಲಕ್ಷಣಯೋಃ ಸಂಬನ್ಧೋ ನ ಗಾರ್ಹಪತ್ಯಾದಿತ್ಯಯೋಃ । ಅತ್ತೃತ್ವಪಕ್ತೃತ್ವಪ್ರಕಾಶನಧರ್ಮಾ ಅವಿಶಿಷ್ಟಾ ಇತ್ಯತಃ ಏಕತ್ವಮೇವಾನಯೋರತ್ಯನ್ತಮ್ । ಪೃಥಿವ್ಯನ್ನಯೋಸ್ತು ಭೋಜ್ಯತ್ವೇನ ಆಭ್ಯಾಂ ಸಂಬನ್ಧಃ ॥

(ಭಾಷ್ಯಾರ್ಥ)

ಒಟ್ಟಾಗಿ ಅಗ್ನಿಗಳು ಬ್ರಹ್ಮಚಾರಿಗೆ ಬ್ರಹ್ಮವನ್ನು ಹೇಳಿದವು. ಇನ್ನು ಆ ಬಳಿಕ (ಅವು) ಒಂದೊಂದೂ ತಮ್ಮತಮ್ಮ ವಿಷಯದ ವಿದ್ಯೆಯನ್ನು ಹೇಳಿಕೊಡುವದಕ್ಕೆ ಪ್ರಾರಂಭಿಸಿದವು.

ಅವುಗಳಲ್ಲಿ ಮೊದಲು ಈ ಬ್ರಹ್ಮಚಾರಿಗೆ ಗಾರ್ಹಪತ್ಯಾಗ್ನಿಯು (ಹೀಗೆಂದು) ಅನುಶಾಸನಮಾಡಿತು. ಪೃಥಿವಿ, ಅಗ್ನಿ, ಅನ್ನ, ಆದಿತ್ಯ- ಎಂಬಿವು ನನ್ನ ನಾಲ್ಕು ತನುಗಳು. ಇವುಗಳಲ್ಲಿ ಆದಿತ್ಯನಲ್ಲಿ ಈ ಪುರುಷನು ಕಾಣಿಸುತ್ತಿರುವನಲ್ಲ[1], ಅವನೇ ಗಾರ್ಹಪತ್ಯವೆಂಬ ಅಗ್ನಿಯಾದ ನಾನಾಗಿರುವೆನು ; ಮತ್ತು ಗಾರ್ಹಪತ್ಯವೆಂಬ ಅಗ್ನಿಯಿರುವನಲ್ಲ, ಆ ನಾನೇ ಆದಿತ್ಯನಲ್ಲಿರುವ ಪುರುಷನಾಗಿರುವೆನು- ಎಂದು ಮತ್ತೆ ತಿರುಗಮುರುಗಾಗಿ 'ಅವನೇ ನಾನಾಗಿರುತ್ತೇನೆ' ಎಂದು ಹೇಳಿರುತ್ತದೆ.

ಭೋಜ್ಯರೂಪವಾಗಿರುವ ಪೃಥಿವಿ, ಅನ್ನ- ಇವುಗಳಿಗಿರುವಂಥ ಸಂಬಂಧವಲ್ಲ, ಗಾರ್ಹಪತ್ಯಾದಿತ್ಯರಿಗೆ. **ಅತ್ತೃತ್ವ (ತಿನ್ನುವವನಾಗಿರುವಿಕೆ), ಪಕ್ತೃತ್ವ (ಬೇಯಿಸುವವನಾಗಿರುವಿಕೆ) , ಪ್ರಕಾಶನ (ಬೆಳಗುವಿಕೆ)**- ಎಂಬ ಧರ್ಮಗಳು ಸಮಾನವಾಗಿರುತ್ತವೆ- ಯಾದ್ದರಿಂದ ಇವರಿಬ್ಬರಿಗೂ ಅತ್ಯಂತವಾಗಿ ಏಕತ್ವವೇ. ಪೃಥಿವ್ಯನ್ನಗಳಿಗೋ ಎಂದರೆ ಇವುಗಳಿಗೆ ಭೋಜ್ಯವಾಗಿವೆ ಎಂಬುದರಿಂದಲೇ ಸಂಬಂಧ.

(ಉಪನಿಷತ್ತು)

ಸ ಯ ಏತಮೇವಂ ವಿದ್ವಾನುಪಾಸ್ತೇಽಪಹತೇ ಪಾಪಕೃತ್ಯಾಂ ಲೋಕೀ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ನಾಸ್ಯಾವರಪುರುಷಾಃ ಕ್ಷೀಯನ್ತ ಉಪ ವಯಂ ತಂ ಭುಞ್ಜಾಮೋಽಸ್ಮಿಗ್ಂಶ್ಚ ಲೋಕೇಽಮುಷ್ಮಿಗ್ಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ ॥೨॥

೨. ಯಾವನು ಹೀಗೆಂದರಿತುಕೊಂಡು ಈ (ಅಗ್ನಿ)ಯನ್ನು ಉಪಾಸನೆ ಮಾಡುತ್ತಾನೋ ಅವನು ಪಾಪಕೃತ್ಯವನ್ನು ನಾಶಗೊಳಿಸಿಕೊಳ್ಳುವನು, ಲೋಕಿಯಾಗುವನು, ಸರ್ವಾಯುಸ್ಸನ್ನು ಪಡೆದುಕೊಳ್ಳುವನು, ಚೆನ್ನಾಗಿ ಜೀವಿಸುವನು ; ಇವನ ಕೆಳಗಿನ ಪುರುಷರು ಲಯವಾಗುವದಿಲ್ಲ. ಯಾವನು ಹೀಗೆಂದರಿತು ಉಪಾಸನೆಮಾಡುತ್ತಾನೋ ಅವನನ್ನು ಈ ಲೋಕದಲ್ಲಿಯೂ ಆ (ಲೋಕದಲ್ಲಿ)ಯೂ ನಾವು ಉಪಭುಂಜಿಸುವೆವು.

ಗಾರ್ಹಪತ್ಯೋಪಾಸನೆಗೆ ಫಲ

(ಭಾಷ್ಯ)

೩೩೫. ಸ ಯಃ ಕಶ್ಚಿತ್ ಏವಂ ಗಾರ್ಹಪತ್ಯಾಗ್ನಿಂ ಅನ್ನಾನ್ನಾದತ್ವೇನ ಚತುರ್ಧಾ

1. ಶಾಸ್ತ್ರಪ್ರಸಿದ್ಧನಾಗಿರುವನಲ್ಲ ಎಂದರ್ಥ.

ಪ್ರವಿಭಕ್ತಮ್ ಉಪಾಸ್ತೇ । ಸಃ ಅಪಹತೇ ವಿನಾಶಯತಿ ಪಾಪಕೃತ್ಯಾಂ ಪಾಪಂ ಕರ್ಮ । ಲೋಕೀ ಲೋಕವಾಂಶ್ಚ ಅಸ್ಮದೀಯೇನ ಲೋಕೇನ ಆಗ್ನೇಯೇನ ತದ್ವಾನ್ ಭವತಿ ಯಥಾ ವಯಮ್ । ಇಹ ಚ ಲೋಕೇ ಸರ್ವಂ ವರ್ಷಶತಮ್ ಆಯುರೇತಿ ಪ್ರಾಪ್ನೋತಿ । ಜ್ಯೋಕ್ ಉಜ್ಜ್ವಲಂ ಜೀವತಿ । ನಾಪ್ರಖ್ಯಾತ ಇತ್ಯೇತತ್ । ನ ಚ ಅಸ್ಯ ಅವರಾಶ್ಚ ತೇ ಪುರುಷಾಶ್ಚ ಅಸ್ಯ ವಿದುಷಃ । ಸಂತತಿಜಾ ಇತ್ಯರ್ಥಃ । ನ ಕ್ಷೀಯನ್ತೇ ಸಂತತ್ಯುಚ್ಛೇದೋ ನ ಭವತೀತ್ಯರ್ಥಃ । ಕಿಂ ಚ ತಂ ವಯಮ್ ಉಪಭುಞ್ಜ್ಮಹಃ ಪಾಲಯಾಮಃ ಅಸ್ಮಿಂಶ್ಚ ಲೋಕೇ ಜೀವನ್ತಮ್ ಅಮುಷ್ಮಿಂಶ್ಚ ಪರಲೋಕೇ । ಯ ಏತಮ್ ಏವಂ ವಿದ್ವಾನ್ ಉಪಾಸ್ತೇ ಯಥೋಕ್ತಂ ತಸ್ಯ ಏತತ್ ಫಲಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಯಾವನೊಬ್ಬನು ಹೀಗೆ ಮೇಲೆ ಹೇಳಿದಂತೆ ಗಾರ್ಹಪತ್ಯಾಗ್ನಿಯನ್ನು ಅನ್ನ, ಅನ್ನಾದ್ಯ- ಎಂಬ ರೂಪದಿಂದ ನಾಲ್ಕು ಬಗೆಯಾಗಿ ವಿಂಗಡವಾಗಿರುವನೆಂದು[1] ಉಪಾಸನೆಮಾಡುತ್ತಾನೋ, ಅವನು ಪಾಪಕೃತ್ಯವನ್ನೂ ಪಾಪಕರ್ಮವನ್ನೂ (ಅಪಹತೇ = ವಿನಾಶಯತಿ) ವಿನಾಶಮಾಡಿಕೊಳ್ಳುವನು. ಲೋಕಿಯಾಗುತ್ತಾನೆ, ನಾವು ಹೇಗೋ ಹಾಗೆ (ಅವನು) ಅಗ್ನಿಸಂಬಂಧವಾದ ಲೋಕದಿಂದ ಲೋಕವುಳ್ಳವನಾಗುತ್ತಾನೆ. ಈ ಲೋಕದಲ್ಲಿಯೂ ಎಲ್ಲ ಎಂದರೆ ನೂರುವರ್ಷದ ಆಯುಸ್ಸನ್ನೂ ಪಡೆದುಕೊಳ್ಳುವನು , ಹೊಂದುವನು. ಚೆನ್ನಾಗಿ ಜೀವಿಸುವನು ; ಹೆಸರುವಾಸಿಯಿಲ್ಲದೆ (ಜೀವಿಸು)ವದಿಲ್ಲ ಎಂದು ಅಭಿಪ್ರಾಯ. ಮತ್ತು ಅವನ ಕೆಳಗಿನವರಾದ ಪುರುಷರು , ಈ ಉಪಾಸಕನ ಸಂತತಿಯಲ್ಲಿ ಜನಿಸಿದವರು ಎಂದರ್ಥ, ಕ್ಷಯವಾಗುವದಿಲ್ಲ, (ಅವನ) ಸಂತತಿಯು ನಾಶವಾಗುವದಿಲ್ಲ ಎಂದರ್ಥ. ಮತ್ತು ಅವನನ್ನು ನಾವು ಈ ಲೋಕದಲ್ಲಿ (ಅವನು) ಬದುಕಿರುವಾಗಲೂ ಮತ್ತು ಆ ಪರಲೋಕದಲ್ಲಿಯೂ ಉಪಭುಂಜಿಸುವೆವು, ಕಾವಾಡುವೆವು. ಯಾವನು ಈ (ಅಗ್ನಿ)ಯನ್ನು ಹೀಗೆಂದು ಅರಿತು ಉಪಾಸನೆ ಮಾಡುತ್ತಾನೋ ಅವನಿಗೆ ಇದು ಫಲವು ಎಂದರ್ಥ.

1. ಅನ್ನಗಳೆರಡು, ಅತ್ತೃಗಳೆರಡು ಎಂದು ; ಅದರಲ್ಲಿಯೂ ಎರಡು ಬಗೆಯಲ್ಲಿ ಕಾಣುವ ಅತ್ತೃವು ಒಬ್ಬನೇ ಎಂದು ಅರಿತು ಉಪಾಸನೆಮಾಡುತ್ತಾನೋ ಎಂದರ್ಥ.

ನಾಲ್ಕನೆಯ ಅಧ್ಯಾಯ - ಹನ್ನೆರಡನೆಯ ಖಂಡ

(ಉಪಕೋಸಲವಿದ್ಯೆ)

ಅನ್ವಾಹಾರ್ಯಪಚನಾಗ್ನಿಯ ವಿದ್ಯೆ

(ಉಪನಿಷತ್ತು)

ಅಥ ಹೈನಮನ್ವಾಹಾರ್ಯಪಚನೋಽನುಶಶಾಸಾಪೋ ದಿಶೋ ನಕ್ಷತ್ರಾಣಿ ಚನ್ದ್ರಮಾ ಇತಿ ಯ ಏಷ ಚನ್ದ್ರಮಸಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮೀತಿ ॥೧॥

ಸ ಯ ಏತಮೇವಂ ವಿದ್ವಾನುಪಾಸ್ತೇಽಪಹತೇ ಪಾಪಕೃತ್ಯಾಂ ಲೋಕೀ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ನಾಸ್ಯಾವರಪುರುಷಾಃ ಕ್ಷೀಯನ್ತ ಉಪ ವಯಂ ತಂ ಭುಞ್ಜಾಮೋಽಸ್ಮಿಗ್ಂಶ್ಚ ಲೋಕೇಽಮುಷ್ಮಿಗ್ಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ ॥೨॥

೧. ಇನ್ನು ಇವನಿಗೆ ಅನ್ವಾಹಾರ್ಯಪಚನವು ಅನುಶಾಸನ ಮಾಡಿತು. ಅಪ್ಪು, ದಿಕ್ಕುಗಳು, ನಕ್ಷತ್ರಗಳು, ಚಂದ್ರನು. ಚಂದ್ರನಲ್ಲಿ ಈ ಪುರುಷನು ಕಾಣಬರುತ್ತಾನಲ್ಲ, ಅವನು ನಾನಾಗಿದ್ದೇನೆ ; ಅವನೇ ನಾನಾಗಿರುತ್ತೇನೆ.

೨. ಯಾವನು ಹೀಗೆಂದರಿತು ಈ (ಅಗ್ನಿ)ಯನ್ನು ಉಪಾಸನೆ ಮಾಡುತ್ತಾನೋ ಅವನು ಪಾಪಕೃತ್ಯವನ್ನು ನಾಶಗೊಳಿಸಿಕೊಳ್ಳುವನು. ಲೋಕಿಯಾಗುವನು. ಸರ್ವಾಯುಸ್ಸನ್ನು ಪಡೆದುಕೊಳ್ಳುವನು. ಚೆನ್ನಾಗಿ ಜೀವಿಸುವನು. ಅವನ ಕೆಳಗಿನ ಪುರುಷರು ಕ್ಷಯವಾಗುವದಿಲ್ಲ. ಯಾವನು ಹೀಗೆಂದರಿತು ಉಪಾಸನೆಮಾಡುತ್ತಾನೋ ಅವನನ್ನು ಈ ಲೋಕದಲ್ಲಿಯೂ ಆ (ಲೋಕ)ದಲ್ಲಿಯೂ ನಾವು ಉಪಭುಂಜಿಸುವೆವು.

ಅನ್ವಾಹಾರ್ಯಪಚನದ ತನುಚತುಷ್ಟಯವೂ ಉಪಾಸನೆಯ ಫಲವೂ

(ಭಾಷ್ಯ)

೩೩೬. ಅಥ ಹ ಏನಮ್ ಅನ್ವಾಹಾರ್ಯಪಚನಃ ಅನುಶಶಾಸ ದಕ್ಷಿಣಾಗ್ನಿಃ । ಆಪಃ , ದಿಶಃ , ನಕ್ಷತ್ರಾಣಿ , ಚನ್ದ್ರಮಾ- ಇತ್ಯೇತಾ ಮಮ ಚತಸ್ರಸ್ತನವಃ । ಚತುರ್ಧಾ ಅಹಮ್ ಅನ್ವಾಹಾರ್ಯಪಚನಃ[1] ಆತ್ಮಾನಂ ಪ್ರವಿಭಜ್ಯ ಅವಸ್ಥಿತಃ । ತತ್ರ ಯ ಏಷ ಚನ್ದ್ರಮಸಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮಿ ಇತಿ ಪೂರ್ವವತ್ । ಅನ್ನಸಂಬನ್ಧಾತ್ ಜ್ಯೋತಿಷ್ಟ್ವಸಾಮಾನ್ಯಾಚ್ಚ ಅನ್ವಾಹಾರ್ಯಪಚನ ಚನ್ದ್ರಮಸೋ ರೇಕತ್ವಂ ದಕ್ಷಿಣಾದಿಕ್ಸಂಬನ್ಧಾಚ್ಚ । ಆಪಾಂ ನಕ್ಷತ್ರಾಣಾಂ ಚ ಪೂರ್ವವದನ್ನತ್ವೇನೈವ ಸಂಬನ್ಧಃ । ನಕ್ಷತ್ರಾಣಾಂ ಚನ್ದ್ರಮಸೋ ಭೋಗ್ಯತ್ವಪ್ರಸಿದ್ಧೇಃ । ಆಪಾಮ್ ಅನ್ನೋತ್ಪಾದಕತ್ವಾದನ್ನತ್ವಂ ದಕ್ಷಿಣಾಗ್ನೇಃ । ಪೃಥಿವೀವದ್ ಗಾರ್ಹಪತ್ಯಸ್ಯ । ಸಮಾನಮನ್ಯತ್ ॥

(ಭಾಷ್ಯಾರ್ಥ)

ಇನ್ನು ಈ (ಬ್ರಹ್ಮಚಾರಿಗೆ) ಅನ್ವಾಹಾರ್ಯಪಚನವು, ದಕ್ಷಿಣಾಗ್ನಿಯು, ಅನುಶಾಸನಮಾಡಿತು. ಅಪ್ಪು , ದಿಕ್ಕುಗಳು, ನಕ್ಷತ್ರಗಳು , ಚಂದ್ರ- ಎಂಬಿವು ನನ್ನ ನಾಲ್ಕು ತನುಗಳು. ನಾಲ್ಕು ಪ್ರಕಾರದಿಂದ ಅನ್ವಾಹಾರ್ಯಪಚನವೆಂಬ ನಾನು ನನ್ನನ್ನು ವಿಂಗಡಿಸಿಕೊಂಡು ಇರುತ್ತಿರುವೆನು. ಇವುಗಳಲ್ಲಿ ಚಂದ್ರನಲ್ಲಿ ಈ ಪುರುಷನು ಕಾಣಿಸುತ್ತಿರುವನಲ್ಲ, ಅವನು ನಾನಾಗಿರುವೆನು, ಅವನೇ ನಾನಾಗಿರುವೆನು- ಎಂಬುದಕ್ಕೆ ಹಿಂದಿನಂತೆ (ವ್ಯಾಖ್ಯಾನ). ಅನ್ನಸಂಬಂಧವಿರುವದರಿಂದಲೂ[2] ಜ್ಯೋತಿಯಾಗಿರುವದು ಸಮಾನವಾಗಿರುವದರಿಂದಲೂ ಅನ್ವಾಹಾರ್ಯಪಚನ, ಚಂದ್ರ- ಇವರುಗಳಿಗೆ ಏಕತ್ವ(ವಿದೆ) ; ದಕ್ಷಿಣದಿಕ್ಕಿನ ಸಂಬಂಧವಿರುದರಿಂದಲೂ[3] (ಏಕತ್ವವಿದೆ). ಅಪ್ಪು, ನಕ್ಷತ್ರಗಳು- ಇವುಗಳಿಗೆ ಹಿಂದಿನ (ಕಂಡಿಕೆಯಲ್ಲಿ ಹೇಳಿರು)ವಂತೆ ಅನ್ನವಾಗಿರುವದರಿಂದಲೇ (ಒಂದಕ್ಕೊಂದಕ್ಕೆ) ಸಂಬಂಧ. ಏಕೆಂದರೆ ನಕ್ಷತ್ರಗಳು ಚಂದ್ರನಿಗೆ ಭೋಗ್ಯ

---

1. 'ಅನ್ವಾಹಾರ್ಯಪಚನೇ' ಎಂದು ವಾ॥ ಪಾಠವು ಸರಿಯಲ್ಲ.
2. 'ದರ್ಶಪೂರ್ಣಮಾಸಗಳಲ್ಲಿ ಹವಿಸ್ಸನ್ನು ಅನ್ವಾಹಾರ್ಯಪಚನದಲ್ಲಿ ಬೇಯಿಸುತ್ತಾರೆ' 'ಅವರು ಚಂದ್ರನನ್ನು ಸೇರಿ ಅನ್ನವಾಗುತ್ತಾರೆ' ಎಂಬ ಶ್ರುತಿಯಲ್ಲಿ ಚಂದ್ರನಿಗೆ ಅನ್ನಸಂಬಂಧವಿದೆ ಆದ್ದರಿಂದ ಅವರಿಬ್ಬರೂ ಒಂದೇ ಎಂದರ್ಥ ಎಂದು ಟೀಕೆ.
3. 'ಅನ್ವಾಹಾರ್ಯಪಚನಕ್ಕೆ ದಕ್ಷಿಣಾಗ್ನಿ ಎಂದು ಹೆಸರು ; ಚಂದ್ರನನ್ನು ದಕ್ಷಿಣಮಾರ್ಗದಿಂದ ಪಡೆದುಕೊಳ್ಳುತ್ತಾರೆ- ಹೀಗೆ ದಕ್ಷಿಣದಿಕ್ಕಿನ ಸಂಬಂಧವಿದೆ'ಎಂದು ಟೀಕೆ.

ವೆಂದು ಪ್ರಸಿದ್ಧಿಯಿದೆ. ಅಪ್ಪು ಅನ್ನವನ್ನುಂಟುಮಾಡುವದರಿಂದ- ಪೃಥಿವಿಯು ಗಾರ್ಹಪತ್ಯಕ್ಕೆ ಹೇಗೋ ಹಾಗೆ (ಅದು) - ದಕ್ಷಿಣಾಗ್ನಿಗೆ ಅನ್ನವು. ಮಿಕ್ಕದ್ದು ಸಮಾನವು.

ನಾಲ್ಕನೆಯ ಅಧ್ಯಾಯ - ಹದಿಮೂರನೆಯ ಖಂಡ

(ಉಪಕೋಸಲವಿದ್ಯೆ)

ಆಹವನೀಯಾಗ್ನಿಯ ವಿದ್ಯೆ

(ಉಪನಿಷತ್ತು)

ಅಥ ಹೈನಮಾಹವನೀಯೋಽನುಶಶಾಸ ಪ್ರಾಣ ಆಕಾಶೋ ದ್ಯೌರ್ವಿದ್ಯುದಿತಿ ಯ ಏಷ ವಿದ್ಯುತಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮೀತಿ ॥೧॥

ಸ ಯ ಏತಮೇವಂ ವಿದ್ವಾನುಪಾಸ್ತೇಽಪಹತೇ ಪಾಪಕೃತ್ಯಾಂ ಲೋಕೇ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ನಾಸ್ಯಾವರಪುರುಷಾಃ ಕ್ಷೀಯನ್ತ ಉಪ ವಯಂ ತಂ ಭುಞ್ಜಾಮೋಽಸ್ಮಿಂಶ್ಚ ಲೋಕೇಽಮುಷ್ಮಿಗ್ಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ ॥೨॥

೧. ಇನ್ನು ಇವನಿಗೆ ಆಹವನೀಯವು ಅನುಶಾಸನಮಾಡಿತು. ಪ್ರಾಣ, ಆಕಾಶ, ದ್ಯುಲೋಕ, ಮಿಂಚು. ಈ ಮಿಂಚಿನಲ್ಲಿ ಪುರುಷನು ಕಾಣ ಬರುತ್ತಾನಲ್ಲ, ಅವನು ನಾನಾಗಿದ್ದೇನೆ , ಅವನೇ ನಾನಾಗಿರುತ್ತೇನೆ.

೨. ಯಾವನು ಹೀಗೆಂದರಿತು ಈ (ಅಗ್ನಿ)ಯನ್ನು ಉಪಾಸನೆ ಮಾಡುತ್ತಾನೋ ಅವನು ಪಾಪಕೃತ್ಯವನ್ನು ನಾಶಗೊಳಿಸಿಕೊಳ್ಳುವನು. ಸರ್ವಾಯುಸ್ಸನ್ನೂ ಪಡೆದುಕೊಳ್ಳುವನು, ಚೆನ್ನಾಗಿ ಜೀವಿಸುವನು. ಅವನ ಕೆಳಗಿನ

ಪುರುಷರು ಕ್ಷಯವಾಗುವಹಾಗಿಲ್ಲ. ಯಾವನು ಹೀಗೆಂದರಿತು ಉಪಾಸನೆ ಮಾಡುತ್ತಾನೋ ಅವನನ್ನು ಈ ಲೋಕದಲ್ಲಿಯೂ ಆ (ಲೋಕ)ದಲ್ಲಿಯೂ ನಾವು ಉಪಭುಂಜಿಸುವೆವು'.

ಆಹವನೀಯದ ತನುಚತುಷ್ಟಯ

(ಭಾಷ್ಯ)

೩೩೭. ಅಥ ಹೈನಮ್ ಆಹವನೀಯೋಽನುಶಶಾಸ । ಪ್ರಾಣಃ, ಆಕಾಶಃ, ದ್ಯೌಃ, ವಿದ್ಯುತ್ - ಇತಿ ಮಮಾಪ್ಯೇತಾಶ್ಚತಸ್ರಸ್ತನವಃ । ಯ ಏಷ ವಿದ್ಯುತಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಇತ್ಯಾದಿ ಪೂರ್ವವತ್ । ಸಾಮಾನ್ಯಾತ್ । ದ್ವ್ಯಾಕಾಶಯೋಽಸ್ತು[1] ಆಶ್ರಯತ್ವಾತ್ ವಿದ್ಯುದಾಹವನೀಯಯೋಃ ಭೋಗ್ಯತ್ವೇನೈವ ಸಂಬನ್ಧಃ । ಸಮಾನಮನ್ಯತ್ ॥

(ಭಾಷ್ಯಾರ್ಥ)

ಇನ್ನು ಈ (ಬ್ರಹ್ಮಚಾರಿ)ಗೆ ಆಹವನೀಯವು ಅನುಶಾಸನಮಾಡಿತು. ಪ್ರಾಣ , ಆಕಾಶ, ದ್ಯುಲೋಕ, ಮಿಂಚು - ಎಂಬೀ ನಾಲ್ಕು ನನ್ನ ತನುಗಳು. ಈ ವಿದ್ಯುತ್ತಿನಲ್ಲಿ ಈ ಪುರುಷನು ಕಾಣಿಸುತ್ತಿರುವನಲ್ಲ , ಅವನು ನಾನಾಗಿದ್ದೇನೆ- ಎಂದು ಮುಂತಾದದ್ದು ಹಿಂದಿನಂತೆ ಹೋಲಿಕೆಯಿಂದ[2] (ಎರಡೂ ಒಂದೇ ಎಂದು ವ್ಯಾಖ್ಯಾನಮಾಡಿ ಕೊಳ್ಳಬೇಕು). ದ್ಯುಲೋಕ , ಆಕಾಶ- ಇವುಗಳಾದರೋ ಮಿಂಚು, ಆಹವನೀಯ- ಇವುಗಳಿಗೆ ಆಶ್ರಯವಾಗಿರುವದರಿಂದ[3] (ಅವಕ್ಕೆ ದ್ಯುಲೋಕಾಕಾಶಗಳೊಡನೆ) ಭೋಗ್ಯವಾಗಿರುವದರಿಂದಲೇ ಸಂಬಂಧ. ಮಿಕ್ಕದ್ದು ಸಮಾನವು.

1. 'ದಿವಾಕಾಶಯೋಃ' ಎಂಬ ಪಾಠವನ್ನು ಬಿಟ್ಟು ಈ ಪಾಠವನ್ನೇ ಇಟ್ಟುಕೊಂಡಿದೆ.
2. ಅಗ್ನಿ , ಮಿಂಚು- ಎರಡೂ ಜ್ಯೋತಿಯಾಗಿರುವ ಹೋಲಿಕೆಯಿಂದ ಎಂದರ್ಥ.
3. 'ಆಹವನೀಯದಲ್ಲಿ ಮಾಡಿದ ಹೋಮದ ಅಪೂರ್ವಕ್ಕೆ ದ್ಯುಲೋಕವೇ ಆಶ್ರಯವು ; ಮಿಂಚಿಗೆ ಆಕಾಶವು ಆಶ್ರಯವೆಂಬುದು ಪ್ರಸಿದ್ಧವೇ'- ಎಂದು ಟೀಕೆ.

ನಾಲ್ಕನೆಯ ಅಧ್ಯಾಯ - ಹದಿನಾಲ್ಕನೆಯ ಖಂಡ

(ಉಪಕೋಸಲವಿದ್ಯೆ)

ಆಚಾರ್ಯನಲ್ಲಿ ಉಪಕೋಸಲನು ನಡೆದದ್ದನ್ನು ಹೇಳಿದ್ದು

(ಉಪನಿಷತ್ತು)

ತೇ ಹೋಚುರುಪಕೋಸಲೈಷಾ ಸೋಮ್ಯ ತೇಽಸ್ಮದ್ವಿದ್ಯಾಽಽತ್ಮವಿದ್ಯಾ ಚಾಚಾರ್ಯಸ್ತು ತೇ ಗತಿಂ ವಕ್ತೇತ್ಯಾಜಗಾಮ ಹಾಸ್ಯಾಚಾರ್ಯಸ್ತಮಾಚಾರ್ಯೋಽಭ್ಯುವಾದೋಪಕೋಸಲೇತಿ ॥೧॥

೧. ಅವು 'ಸೋಮ್ಯ ಉಪಕೋಸಲ , ಇದೇ ನಿನಗೆ (ನಾವು ಹೇಳಿರುವ) ನಮ್ಮ ವಿದ್ಯೆ, ಮತ್ತು ಆತ್ಮವಿದ್ಯೆ. ಆದರೆ ಆಚಾರ್ಯನು ನಿನಗೆ ಗತಿಯನ್ನು ಹೇಳಿಕೊಡುವನು' ಎಂದವು. ಇವನ ಆಚಾರ್ಯನು ಬಂದನು. ಅವನನ್ನು ಆಚಾರ್ಯನು 'ಉಪಕೋಸಲಾಽ' ಎಂದನು.

ಅಗ್ನಿಗಳ ಉಪದೇಶದ ಉಪಸಂಹಾರ

(ಭಾಷ್ಯ)

೩೩೮. ತೇ ಪುನಃ ಸಂಭೂಯ ಊಚುಃ ಹ । ಉಪಕೋಸಲ ಏಷಾ ಸೋಮ್ಯ ತೇ ತವ ಅಸ್ಮದ್ವಿದ್ಯಾ । ಅಗ್ನಿವಿದ್ಯೇತ್ಯರ್ಥಃ । ಆತ್ಮವಿದ್ಯಾ ಪೂರ್ವೋಕ್ತಾ ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮ ಇತಿ ಚ । ಆಚಾರ್ಯಸ್ತು ತೇ ಗತಿಂ ವಕ್ತಾ ವಿದ್ಯಾಫಲಪ್ರಾಪ್ತಯೇ ಇತ್ಯುಕ್ತ್ವಾ ಉಪರೇಮುರಗ್ನಯಃ । ಆಜಗಾಮ ಹ ಅಸ್ಯ ಆಚಾರ್ಯಃ ಕಾಲೇನ । ತಂ ಚ ಶಿಷ್ಯಮ್ ಆಚಾರ್ಯೋಽಭ್ಯುವಾದ ಉಪಕೋಸಲೇತಿ ॥

(ಭಾಷ್ಯಾರ್ಥ)

ಅವು ಮತ್ತೆ ಒಟ್ಟಾಗಿ ಇಂತೆಂದವು : ''ಅಪ್ಪ, ಉಪಕೋಸಲ , ಇದು ನಮ್ಮ ವಿದ್ಯೆಯು ಎಂದರೆ ಅಗ್ನಿವಿದ್ಯೆಯು ಎಂದರ್ಥ ; ಮತ್ತು ಆತ್ಮವಿದ್ಯೆಯು ; ಹಿಂದೆ 'ಪ್ರಾಣವು ಬ್ರಹ್ಮವು ; ಕಂ ಬ್ರಹ್ಮ , ಖಂ ಬ್ರಹ್ಮ' - ಎಂದು ಹೇಳಿದೆವಲ್ಲ, (ಆ ವಿದ್ಯೆಯು). (ಇನ್ನು) ಆಚಾರ್ಯನಾದರೋ ವಿದ್ಯೆಯ ಫಲದ ಪ್ರಾಪ್ತಿಗಾಗಿ ನಿನಗೆ ಗತಿಯನ್ನು ಹೇಳುತ್ತಾನೆ''-[1] ಎಂದು ಹೇಳಿ ಅಗ್ನಿಗಳು ಸುಮ್ಮನಾದವು.

---

1. ಉಪಾಸನೆಯಲ್ಲಿ ಗತಿಯನ್ನೂ ಧ್ಯಾನಮಾಡಬೇಕು ; ಹಾಗಾದರೆ ಫಲವು ನಿಶ್ಚಯವಾಗಿ ದೊರಕುತದೆ.

ಕಾಲಾನುಕಾಲಕ್ಕೆ ಇವನ ಆಚಾರ್ಯನು ಬಂದನು. ಮತ್ತು ಆ ಶಿಷ್ಯನನ್ನು 'ಉಪಕೋಸಲಾತ್ಮ' ಎಂದು ಕೂಗಿ ಕರೆದನು.

(ಉಪನಿಷತ್ತು)

ಭಗವ ಇತಿ ಹ ಪ್ರತಿಶುಶ್ರಾವ ಬ್ರಹ್ಮವಿದ ಇವ ಸೋಮ್ಯ ತೇ ಮುಖಂ ಭಾತಿ ಕೋ ನು ತ್ವಾನುಶಶಾಸೇತಿ ಕೋ ನು ಮಾನು ಶಿಷ್ಯಾದ್ಬೋ ಇತೀಹಾಪೇವ ನಿಹ್ನುತ ಇಮೇ ನೂನಮಿಾದೃಶಾ ಅನ್ಯಾದೃಶಾ ಇತೀಹಾಗ್ನೀನಭ್ಯೂದೇ ಕಿಂ ನು ಸೋಮ್ಯ ಕಿಲ ತೇಽವೋಚನ್ನಿತಿ ॥೨॥

ಇದಮಿತಿ ಹ ಪ್ರತಿಜಜ್ಞೇ ಲೋಕಾನ್ ವಾವ ಕಿಲ ಸೋಮ್ಯ ತೇಽವೋಚನ್ನಹಂ ತು ತೇ ತದ್ ವಕ್ಷ್ಯಾಮಿ ಯಥಾ ಪುಷ್ಕರ ಪಲಾಶ ಆಪೋ ನ ಶ್ಲಿಷ್ಯನ್ತ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತ ಇತಿ ಬ್ರವೀತು ಮೇ ಭಗವಾನಿತಿ ತಸ್ಮೈ ಹೋವಾಚ ॥೩॥

೨. 'ಭಗವಂತನೆ' ಎಂದು (ಅವನು) ಉತ್ತರಕೊಟ್ಟನು. (ಆಚಾರ್ಯನು) 'ಅಪ್ಪ, ಬ್ರಹ್ಮಜ್ಞಾನಿಯ (ಮುಖ)ದಂತೆ ನಿನ್ನ ಮುಖವು ಹೊಳೆಯುತ್ತಿದೆ. ನಿನಗೆ ಯಾವನು ಅನುಶಾಸನಮಾಡಿದನೊ !'ಎಂದನು. 'ನನಗೆ ಯಾವನುತಾನೆ ಅನುಶಾಸನಮಾಡಿಯಾನು, ಸ್ವಾಮಿ ?'ಎಂದು ಇಲ್ಲಿ ಅಲ್ಲಗಳೆಯುವವನಂತೆ (ನುಡಿದು) 'ಇವೇ ನಿಜವಾಗಿ ! ಹೀಗೆ ಇವೆ, (ಮತ್ತೊಂದು ಬಗೆಯಾಗಿದ್ದವು)'ಎಂದು ಇಲ್ಲಿ ಅಗ್ನಿಗಳನ್ನು ಹೇಳಿದನು. 'ಅವು ನಿನಗೆ ಏನು ಹೇಳಿದವಪ್ಪ ?'

೩. 'ಇದನ್ನು' ಎಂದಿಂತು ಹೇಳಿದನು. 'ಅಪ್ಪ, ಲೋಕಗಳನ್ನೇ ಅವು ಹೇಳಿರುತ್ತವೆ. ಆದರೆ ನಾನು ಅದನ್ನು ನಿನಗೆ ಹೇಳುವೆನು. ಹೇಗೆ ಪುಷ್ಕರ ಪಲಾಶದಲ್ಲಿ ನೀರು ಅಂಟಿಕೊಳ್ಳುವದಿಲ್ಲವೋ, ಹಾಗೆಯೇ ಹೀಗೆಂದು ಅರಿತಿರುವವನಲ್ಲಿ ಪಾಪಕರ್ಮವು ಅಂಟಿಕೊಳ್ಳುವದಿಲ್ಲ.' 'ಭಗವಂತನು, ನನಗೆ ಹೇಳಿಕೊಡಬೇಕು !' ಅವನನ್ನು ಕುರಿತು (ಆಚಾರ್ಯನು) ಇಂತೆಂದನು :

ಆಚಾರ್ಯನು
ಅಗ್ನಿಗಳು ಉಪದೇಶಮಾಡಿದ್ದನ್ನು ತಿಳಿದುಕೊಂಡದ್ದು

(ಭಾಷ್ಯ)

೩೫೯. ಭಗವಃ ಇತಿ ಹ ಪ್ರತಿಶುಶ್ರಾವ । ಬ್ರಹ್ಮವಿದ ಇವ ಸೋಮ್ಯ ತೇ ಮುಖಂ ಪ್ರಸನ್ನಂ ಭಾತಿ । ಕೋ ನು ತ್ವಾ ಅನುಶಶಾಸ ಇತ್ಯುಕ್ತಃ ಪ್ರತ್ಯಾಹ । ಕೋ ನು ಮಾ ಅನುಶಿಷ್ಯಾತ್ ಅನುಶಾಸನಂ ಕುರ್ಯಾತ್ ಭೋ ಭಗವನ್ ತ್ವಯಿ ಪ್ರೋಷಿತೇ ? - ಇತಿ ಇಹ ಅಪ ಇವ ನಿಹ್ನುತೇ । ಅಪನಿಹ್ನುತ ಇವೇತಿ ವ್ಯವಹಿತೇನ ಸಂಬನ್ಧಃ । ನ ಚ ಅಪನಿಹ್ನುತೇ ನ ಚ ಯಥಾವತ್ ಅಗ್ನಿಭಿರುಕ್ತಂ ಬ್ರವೀತಿ ಇತ್ಯಭಿಪ್ರಾಯಃ । ಕಥಮ್ ? ಇಮೇ ಅಗ್ನಯಃ ಮಯಾ ಪರಿಚರಿತಾಃ । ಉಕ್ತವನ್ತೋ ನೂನಮ್ । ಯತಸ್ತ್ವಾಂ ದೃಷ್ಟ್ವಾ ವೇಪಮಾನಾ ಇವ ಈದೃಶಾ ದೃಶ್ಯನ್ತೇ ಪೂರ್ವಮನ್ಯಾದೃಶಾಃ ಸನ್ತಃ । ಇತಿ ಇಹ ಅಗ್ನೀನ್ ಅಭ್ಯೂದೇ ಅಭ್ಯುಕ್ತವಾನ್ ಕಾಕ್ವಾ ಅಗ್ನೀನ್ ದರ್ಶಯನ್ । ಕಿಂ ನು ಸೋಮ್ಯ ಕಿಲ ತೇ ತುಭ್ಯಮ್ ಅವೋಚನ್ ಅಗ್ನಯಃ ಇತಿ ? ಪೃಷ್ಟಃ ಇತಿ । ಏವಮ್ ಇದಮುಕ್ತವನ್ತ ಇತ್ಯೇವಂ ಹ ಪ್ರತಿಜಜ್ಞೇ ಪ್ರತಿಜ್ಞಾತವಾನ್ ಪ್ರತೀಕಮಾತ್ರಂ ಕಿಂಚಿತ್ , ನ ಸರ್ವಂ ಯಥೋಕ್ತಮಗ್ನಿಭಿರುಕ್ತಮ್ ಅವೋಚತ್ ॥

(ಭಾಷ್ಯಾರ್ಥ)

''ಭಗವಂತನೆ''ಎಂದು (ಆ ಉಪಕೋಸಲನು) ಪ್ರತ್ಯುತ್ತರವನ್ನು ಕೊಟ್ಟನು. (ಆಚಾರ್ಯನು) ''ಅಪ್ಪ , ನಿನ್ನ ಮುಖವು ಬ್ರಹ್ಮಜ್ಞಾನಿಯ ಮುಖದಂತೆ ಪ್ರಸನ್ನವಾಗಿ ಕಾಣುತ್ತಿದೆ ; ನಿನಗೆ ಯಾವನು ಹೇಳಿಕೊಟ್ಟನೊ !'' ಎನ್ನಲು (ಅವನು ಹೀಗೆಂದು) ಉತ್ತರವಿತ್ತನು. ''ಸ್ವಾಮಿ , ಪೂಜ್ಯರೆ , ತಾವು ಹೊರಕ್ಕೆ ಹೋಗಿರುವಲ್ಲಿ ನನಗೆ ಯಾವನು ಅನುಶಾಸನವನ್ನು ಮಾಡಿಯಾನು ?'' ಎಂದು ಈ (ವಿಷಯ)ದಲ್ಲಿ (ಅಪೇವ ನಿಹ್ನುತೇ =ಅಪನಿಹ್ನುತೇ ಇವ) ಎಂದು ವ್ಯವಹಿತವಾದದ್ದಕ್ಕೆ ಸಂಬಂಧವನ್ನು ಮಾಡಿಕೊಳ್ಳಬೇಕು- ಅಲ್ಲಗಳೆಯುವವನಂತೆ ; ಅಲ್ಲಗಳೆಯಲೂ ಇಲ್ಲ , ಅಗ್ನಿಗಳು ಹೇಳಿದರೆಂಬುದನ್ನು ಇದ್ದದ್ದು ಇದ್ದಂತೆ ಹೇಳಲೂ ಇಲ್ಲ. ಹೇಗೆಂದರೆ , ''ಈ ನಾನು ಪರಿಚರ್ಯೆ ಮಾಡಿದ ಅಗ್ನಿಗಳೇ ಹೇಳಿರಬೇಕು ; ಏಕೆಂದರೆ ನಿಮ್ಮನ್ನು ಕಂಡು ನಡುಗುತ್ತವೆಯೋ ಎಂಬಂತೆ , ಹೀಗೆ ಕಾಣುತ್ತಿವೆ ; ಮೊದಲು ಇನ್ನೊಂದು ಬಗೆಯಾಗಿದ್ದುಕೊಂಡು (ಈಗ ಹೀಗೆ ಕಾಣುತ್ತಿವೆ)'' - ಎಂದು ಇಲ್ಲಿ ಕಾಕುವಿನಿಂದ[1] ಅಗ್ನಿಗಳನ್ನು ತೋರಿಸುತ್ತಾ

1. ಮಾತಾನಾಡುವಾಗ ಆಗುವ ಸ್ವರಭೇದಕ್ಕೆ ಕಾಕುವೆಂದು ಹೆಸರು ; 'ಇವೇ ಹೇಳಿರಬೇಕು' ಎಂದು ಅಗ್ನಿಗಳ ಕಡೆಗೆ ನೋಡಿದ್ದರಿಂದ ಆಚಾರ್ಯನಿಗೆ ತಿಳಿಯುವಂತೆ ಮಾಡಿದನು ಏಕೆಂದರೆ ಆಗ ಅವನು ಹೆದರಿಕೊಂಡಿದ್ದನು.

(ಅಭ್ಯೂದೇ = ಅಭ್ಯುಕ್ತವಾನ್) ನುಡಿದನು. "ಅಪ್ಪ , ಅವು ನಿನಗೆ ಏನು ಹೇಳಿ ಕೊಟ್ಟವೊ !" ಎಂದು (ಆಚಾರ್ಯನು) ಕೇಳಲು ಇದನ್ನು ಹೇಳಿದವು ಎಂದು (ಇತಿ= ಏವಮ್) ಹೀಗೆ ಒಂದಿಷ್ಟು ಪ್ರತೀಕವನ್ನು[1] ಮಾತ್ರ (ಪ್ರತಿಜಜ್ಞೇ=ಪ್ರತಿಜ್ಞಾತವಾನ್) ಹೇಳಿದನು ; ಅಗ್ನಿಗಳು ಹೇಳಿದ್ದೆಲ್ಲವನ್ನೂ ಮೇಲೆ ಹೇಳಿದಂತೆ ತಿಳಿಸಲಿಲ್ಲ.

ಆಚಾರ್ಯನು ಉಪದೇಶಿಸುವದಕ್ಕೆ ಪ್ರಾರಂಭಿಸಿದ್ದು

(ಭಾಷ್ಯ)

೩೪೦. ಯತ ಆಹಾऽऽಚಾರ್ಯಃ । ಲೋಕಾನ್ ವಾವ ಪೃಥಿವ್ಯಾದೀನ್ ಹೇ ಸೋಮ್ಯ ಕಿಲ ತೇ ಅವೋಚನ್, ನ ಬ್ರಹ್ಮ ಸಾಕಲ್ಯೇನ । ಅಹಂ ತು ತೇ ತುಭ್ಯಂ ತದ್ ಬ್ರಹ್ಮ ಯದೀಚ್ಛಸಿ[2] ತ್ವಂ ಶ್ರೋತುಂ ವಕ್ಷ್ಯಾಮಿ । ಶೃಣು ತಸ್ಯ ಮಯೋಚ್ಯಮಾನಸ್ಯ ಬ್ರಹ್ಮಣೋ ಜ್ಞಾನಮಾಹಾತ್ಮ್ಯಮ್ । ಯಥಾ ಪುಷ್ಕರಪಲಾಶೇ ಪದ್ಮಪತ್ರೇ ಆಪೋ ನ ಶ್ಲಿಷ್ಯನ್ತೇ ಏವಂ ಯಥಾ ವಕ್ಷ್ಯಾಮಿ ಬ್ರಹ್ಮ ಏವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ ನ ಸಂಬಧ್ಯತೇ ಇತಿ । ಏವಮುಕ್ತವತಿ ಆಚಾರ್ಯೇ ಅಹ ಉಪಕೋಸಲಃ ಬ್ರವೀತು ಮೇ ಭಗವಾನ್ ಇತಿ । ತಸ್ಮೈ ಹ ಉವಾಚಾऽऽಚಾರ್ಯಃ ॥

(ಭಾಷ್ಯಾರ್ಥ)

ಆದ್ದರಿಂದಲೇ[3] ಆಚಾರ್ಯನು ಹೀಗೆಂದಿರುತ್ತಾನೆ : "ಎಲೈ ಸೋಮ್ಯನೆ , ಅವು ಪೃಥಿವಿಯೇ ಮುಂತಾ ಲೋಕಗಳನ್ನೇ ಹೇಳಿರುವವೇ ಹೊರತು ಬ್ರಹ್ಮವನ್ನು ಪೂರ್ಣವಾಗಿ[4] (ಹೇಳಿ)ಲ್ಲ. ಆದರೆ ನಾನು (ತೇ=ತುಭ್ಯಂ) ನಿನಗೆ (ನಿನಗೆ) ಇಚ್ಛೆಯಿದ್ದರೆ ಬ್ರಹ್ಮವನ್ನು (ಪೂರ್ಣವಾಗಿ) ಹೇಳುವೆನು. ನಾನು ಹೇಳುತ್ತಿರುವ ಆ ಬ್ರಹ್ಮದ ಜ್ಞಾನದ ಮಹಿಮೆಯನ್ನು ಕೇಳು : ಹೇಗೆ ಪುಷ್ಕರಪಲಾಶದಲ್ಲಿ, ತಾವರೆ ಎಲೆಯಲ್ಲಿ ನೀರು ಅಂಟಿಕೊಳ್ಳುವದಿಲ್ಲವೋ ಹಾಗೆ ನಾನು ಬ್ರಹ್ಮವನ್ನು ಹೇಳುವೆನಲ್ಲ, ಹಾಗೆಯೇ ಅರಿತು ಕೊಂಡಿರುವವನಲ್ಲಿ ಪಾಪಕರ್ಮವು ಅಂಟಿಕೊಳ್ಳುವದಿಲ್ಲ, ಸಂಬದ್ಧವಾಗುವದಿಲ್ಲ."

1. ಒಂದೆರಡು ಮಾತುಗಳನ್ನು ಮಾತ್ರ, ಸಾರಾಂಶವನ್ನು ಮಾತ್ರ- ಎಂದರ್ಥ.
2. 'ಯದಿಚ್ಛಸಿ' ಎಂಬುದಕ್ಕಿಂತ ಈ ಪಾಠವು ಮೇಲು.
3. 'ಶಿಷ್ಯನು ಹೀಗೆ ಹೇಳಿದ್ದರಿಂದಲೇ' ಎಂದು ಟೀಕೆ. ಅವನು ಪ್ರತೀಕಮಾತ್ರವನ್ನು ಹೇಳಿದ್ದನ್ನು ಕೇಳಿದ್ದರಿಂದಲೇ ಎಲ್ಲವನ್ನೂ ತಿಳಿದುಕೊಂಡು- ಎಂಬ ಅಭಿಪ್ರಾಯವು ಇಲ್ಲಿದೆ.
4. ಅಗ್ನಿಗಳು ಆತ್ಮವಿದ್ಯೆಯನ್ನು ಸ್ವಲ್ಪ ಹೇಳಿವೆ ; ಅದನ್ನೇ ಪೂರ್ಣವಾಗಿ ಹೇಳುತ್ತೇನೆ ಎಂದರ್ಥ.

ಆಚಾರ್ಯನು ಹೀಗೆನ್ನಲು ಉಪಕೋಸಲನು ''ಭಗವಂತನು ನನಗೆ ಹೇಳಿಕೊಡಬೇಕು'' ಎಂದನು. ಅವನಿಗೆ ಆಚಾರ್ಯನು (ಹೀಗೆಂದು) ಹೇಳಿದನು.

ನಾಲ್ಕನೆಯ ಅಧ್ಯಾಯ - ಹದಿನೈದನೆಯ ಖಂಡ

(ಉಪಕೋಸಲವಿದ್ಯೆ)

ಅಕ್ಷಿಪುರುಷನ ವಿದ್ಯೆ

(ಉಪನಿಷತ್ತು)

ಯ ಏಷೋಽಕ್ಷಿಣಿ ಪುರುಷೋ ದೃಶ್ಯತ ಏಷ ಆತ್ಮೇತಿ ಹೋವಾ-
ಚೈತದಮೃತಮಭಯಮೇತದ್ಬ್ರಹ್ಮೇತಿ ತದ್ಯದ್ಯಪ್ಯಸ್ಮಿನ್
ಸರ್ಪಿರ್ವೋದಕಂ ವಾ ಸಿಞ್ಚತಿ ವರ್ತ್ಮನೀ ಏವ ಗಚ್ಛತಿ ॥೧॥

೧. ಕಣ್ಣಿನಲ್ಲಿ ಕಾಣಿಸುವ ಈ ಪುರುಷನಿದಾನಲ್ಲ, ಇವನೇ ಆತ್ಮನು. ಇದೇ ಅಮೃತವು, ಅಭಯವು ; ಇದೇ ಬ್ರಹ್ಮವು- ಎಂದನು. ಅಲ್ಲಿ ಇದರಲ್ಲಿ ಬೆಣ್ಣೆಯನ್ನಾಗಲಿ ನೀರನ್ನಾಗಲಿ ಚಿಮುಕಿಸಿದರೂ ಕಡೆ(ಗಣ್ಣು)ಗಳಿಗೇ ಬಂದು ಸೇರುತ್ತದೆ.

ಅಕ್ಷಿಪುರುಷನೇ ಬ್ರಹ್ಮ

(ಭಾಷ್ಯ)

೩೪೧. ಯ ಏಷೋಽಕ್ಷಿಣಿ ಪುರುಷೋ ದೃಶ್ಯತೇ ನಿವೃತ್ತಚಕ್ಷುರ್ಭಿರ್ಬ್ರಹ್ಮ-ಚರ್ಯಾದಿಸಾಧನಸಂಪನ್ನೈಃ ಶಾನ್ತೈರ್ವಿವೇಕಿಭಿಃ ''ದೃಷ್ಟೇರ್ದ್ರಷ್ಟಾ'' (ಬೃ ೩-೪-೨), ''ಚಕ್ಷುಷಶ್ಚಕ್ಷುಃ'' (ಕೇ. ೧-೨) ಇತ್ಯಾದಿಶ್ರುತ್ಯನ್ತರಾತ್ । ನನ್ವಗ್ನಿಭಿರುಕ್ತಂ ವಿತಥಮ್ । ಯತ ಆಚಾರ್ಯಸ್ತು ತೇ ಗತಿಂ ವಕ್ತಾ (೪-೧೪-೧) ಇತಿ ಗತಿಮಾತ್ರಸ್ಯ ವಕ್ತೇತ್ಯವೋಚನ್ । ಭವಿಷ್ಯದ್ವಿಷಯಾಪರಿಜ್ಞಾನಂ ಚಾಗ್ನೀನಾಮ್ । ನೈಷ ದೋಷಃ । ಸುಖಾಕಾಶಸ್ಯೈವ ಅಕ್ಷಿಣಿ ದೃಶ್ಯತೇ ಇತಿ ದ್ರಷ್ಟುರನುವಾದಾತ್ । ಏಷ ಆತ್ಮಾ ಪ್ರಾಣಿನಾಮ್ ಇತಿ ಹ ಉವಾಚ ಏವಮುಕವಾನ್ । ಏತತ್ ಯದೇವ

ತತ್ತ್ವಮುವೋಚಾಮ ಏತತ್ ಅಮೃತಮ್ ಅಮರಣಧರ್ಮಿ ಅವಿನಾಶಿ । ಅತ ಏವ ಅಭಯಮ್ । ಯಸ್ಯ ಹಿ ವಿನಾಶಾಶಙ್ಕಾ ತಸ್ಯ ಭಯೋಪಪತ್ತಿಃ । ತದಭಾವಾತ್ ಅಭಯಮ್ । ಅತ ಏವ ಏತದ್ ಬ್ರಹ್ಮ ಬೃಹತ್, ಅನನ್ತಮಿತಿ । ಕಿಂ ಚಾಸ್ಯ ಬ್ರಹ್ಮಣೋಽಕ್ಷಿಪುರುಷಸ್ಯ ಮಾಹಾತ್ಮ್ಯಮ್ । ತತ್ ತತ್ರ ಪುರುಷಸ್ಯ ಸ್ಥಾನೇ ಅಕ್ಷಿಣಿ ಯದ್ಯಪಿ ಅಸ್ಮಿನ್ ಸರ್ಪಿರ್ವಾ ಉದಕಂ ವಾ ಸಿಞ್ಚತಿ ವರ್ತ್ಮನೀ ಏವ ಗಚ್ಛತಿ ಪಕ್ಷ್ಮಾವೇವ ಗಚ್ಛತಿ । ನ ಚಕ್ಷುಷಾ ಸಂಬಧ್ಯತೇ ಪದ್ಮಪತ್ರೇಣೇವೋದಕಮ್ । ಸ್ಥಾನಸ್ಯಾಪ್ಯೇತನ್ಮಾಹಾತ್ಮ್ಯಮ್ । ಕಿಂ ಪುನಃ ಸ್ಥಾನಿನೋಽಕ್ಷಿಪುರುಷಸ್ಯ ನಿರಞ್ಜನತ್ವಂ ವಕ್ತವ್ಯಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಇಂದ್ರಿಯಗಳನ್ನು ಹಿಂತಿರುಗಿಸಿಕೊಂಡು ಬ್ರಹ್ಮಚರ್ಯವೇ ಮುಂತಾದ ಸಾಧನಗಳಿಂದೊಡಗೂಡಿದವರಾಗಿ ಶಾಂತರೂ ವಿವೇಕಿಗಳೂ ಆದವರಿಗೆ ಕಣ್ಣಿನಲ್ಲಿ ಕಾಣುವ ದೃಷ್ಟಿಯ ದ್ರಷ್ಟೃವೂ, (ಬೃ ೩-೪-೨) ಚಕ್ಷುಸ್ಸಿಗೂ ಚಕ್ಷುಸ್ಸೂ (ಕೇ. ೩-೨) ಮುಂತಾದ ಶ್ರುತಿಗಳ (ಪ್ರಮಾಣ)ದಿಂದ (ತಿಳಿಯಬರುವ) ಈ ಪುರುಷನಿದಾನಲ್ಲ[1]-

(ಆಕ್ಷೇಪ) :- ಅಗ್ನಿಗಳು ಹೇಳಿದ್ದು ಸುಳ್ಳಾಯಿತಲ್ಲ ! ''ಆಚಾರ್ಯನಾದರೆ ಗತಿಯನ್ನು ಹೇಳಿಕೊಡುವನು'' (೪-೧೪-೧) ಗತಿಮಾತ್ರವನ್ನು ಹೇಳಿಕೊಡುತ್ತಾನೆ ಎಂದು (ಅವು) ಹೇಳಿದ್ದವು. ಅಗ್ನಿಗಳಿಗೆ ಭವಿಷ್ಯತ್ಕಾಲದ ವಿಷಯವು ತಿಳಿಯಲಿಲ್ಲವೆಂದೂ (ಆಯಿತಲ್ಲ) !

(ಪರಿಹಾರ) :- (ಇಲ್ಲಿ) ಈ ದೋಷವಿಲ್ಲ. ಸುಖಾಕಾಶನಾದ ದ್ರಷ್ಟೃವನ್ನೇ 'ಕಣ್ಣಿನಲ್ಲಿ ಕಾಣುತ್ತಾನಲ್ಲ' ಎಂದು ಅನುವಾದಮಾಡಿಕೊಂಡಿರುತ್ತದೆ[2]. (ಕಣ್ಣಿನಲ್ಲಿ ಕಾಣುವ ಈ ಪುರುಷನಿದಾನಲ್ಲ;) ಇವನೇ ಪ್ರಾಣಿಗಳ ಆತ್ಮನು[3] ಎಂದಿಂತು ಹೇಳಿದನು,

1. ಇಲ್ಲಿ ಕಣ್ಣಿನಲ್ಲಿ ಕಾಣುವ ಪುರುಷನೆಂದರೆ ಕಣ್ಣಿನ ಗೊಂಬೆಯಲ್ಲ, ಚಕ್ಷುಸ್ಸಿನ ಅನುಗ್ರಾಹಕನಾದ ಸೂರ್ಯನೂ ಅಲ್ಲ ; ಇಂದ್ರಿಯಗಳನ್ನೆಲ್ಲ ಬೆಳಗುವ ಚೈತನ್ಯಪ್ರಕಾಶನಾದ ಪರಮಾತ್ಮನೇ ಎಂಬುದನ್ನು ಇಲ್ಲಿರುವ ವಿಶೇಷಣಗಳು ತಿಳಿಸುತ್ತವೆ. ಈ ವಾಕ್ಯದ ಚರ್ಚೆಯನ್ನೂ ಸಿದ್ಧಾಂತವನ್ನೂ ಸೂ. ಭಾ. ೧-೨-೧೩ರಿಂದ ೧೬ರವರೆಗಿನ (ಭಾ. ೧೭೭ರಿಂದ ೧೮೭ರ ವರೆಗಿನ) ಗ್ರಂಥದಲ್ಲಿಕಾಣಬಹುದು.

2. ಹಿಂದೆ ಅಗ್ನಿಗಳು ಹೇಳಿದ್ದ ಆತ್ಮನನ್ನೇ ಅನುವಾದಮಾಡಿಕೊಂಡು ಇಲ್ಲಿ ಬ್ರಹ್ಮವನ್ನು ಪೂರ್ಣವಾಗಿ ಹೇಳಿದೆ. 3. ಆತ್ಮ, ಅಮೃತ, ಅಭಯ, ಬ್ರಹ್ಮ- ಈ ಶಬ್ದಗಳೂ ಮುಂದೆ ಹೇಳುವ ಗುಣಗಳೂ ಬ್ರಹ್ಮಕ್ಕೆ ಹೊಂದುವವೆಂಬುದು ಸ್ಪಷ್ಟವಾಗಿದೆ.

ಹೇಳಿದವನಾದನು. ಇದು , ಎಂದರೆ (ನಾವು) ಯಾವ ಆತ್ಮತತ್ತ್ವವನ್ನು ಹೇಳಿದೆಯೋ ಇದೇ ಅಮೃತವು , ಸಾವೆಂಬ ಧರ್ಮವಿಲ್ಲದ್ದು , ನಾಶವಾಗದ್ದು , ಆದ್ದರಿಂದಲೇ ಅಭಯವು ; ಯಾವದಕ್ಕೆ ವಿನಾಶದ ಆಶಂಕೆಯಿರುವದೋ ಅದಕ್ಕೆ ಭಯವಾಗುವ ದೆಂಬುದು ಹೊಂದುತ್ತದೆ , ಅದಿಲ್ಲದ್ದರಿಂದ (ಇದು) ಅಭಯವು. ಆದ್ದರಿಂದಲೇ ಇದು ಬ್ರಹ್ಮವು , ದೊಡ್ಡದು , ಅನಂತವಾದದ್ದು ಎಂದನು.

ಮತ್ತು ಈ ಅಕ್ಷಿಪುರುಷನೆಂಬ ಬ್ರಹ್ಮದ ಮಾಹಾತ್ಮ್ಯವೇನೆಂದರೆ, (ತತ್=ತತ್ರ) ಅಲ್ಲಿ (ಈ) ಪುರುಷನ ಸ್ಥಾನವಾದ ಕಣ್ಣಿನಲ್ಲಿ ತುಪ್ಪವನ್ನಾಗಲಿ ನೀರನ್ನಾಗಲಿ, ಚಿಮುಕಿಸಿದರೂ ಕಡೆ(ಕಣ್ಣು)ಗಳಿಗೇ (ಗಣ್ಣಿನ) ಕಡೆಯ ಭಾಗಗಳಿಗೇ ಹೋಗಿ ಸೇರುತ್ತದೆ , ನೀರು ತಾವರೆಯೆಲೆಗೆ ಸಂಬಂಧಿಸದೆ ಇರುವಂತೆ , ಕಣ್ಣಿಗೆ ಸಂಬಂಧಿಸದೆ ಇರುತ್ತದೆ. (ಇವನ) ಸ್ಥಾನಕ್ಕೂ ಈ ಮಾಹಾತ್ಮ್ಯವಿರುತ್ತದೆ, ಸ್ಥಾನಿಯಾದ (ಈ) ಅಕ್ಷಿಪುರುಷನ ನಿರಂಜನತ್ವವನ್ನು[1] ಹೇಳುವದೇನಿದೆ ?- ಎಂದು ಅಭಿಪ್ರಾಯ.

(ಉಪನಿಷತ್ತು)

ಏತಗ್ಂ ಸಂಯದ್ವಾಮ ಇತ್ಯಾಚಕ್ಷತ ಏತಗ್ಂ ಹಿ ಸರ್ವಾಣಿ ವಾಮಾನ್ಯಭಿಸಂಯನ್ತಿ ಸರ್ವಾಣ್ಯೇನಂ ವಾಮಾನ್ಯಭಿಸಂಯನ್ತಿ ಯ ಏವಂ ವೇದ ॥೨॥

೨. ಈತನನ್ನು ಸಂಯದ್ವಾಮನೆಂದು ಕರೆಯುತ್ತಾರೆ. ಇವನನ್ನು ಎಲ್ಲಾ ವಾಮಗಳೂ ಬಂದು ಸೇರುತ್ತವೆಯಲ್ಲವೆ ? ಯಾವನು ಹೀಗೆಂದು ಅರಿತುಕೊಳ್ಳುವನೋ ಅವನನ್ನು ಎಲ್ಲಾ ವಾಮಗಳೂ ಬಂದು ಸೇರುವವು.

ಅಕ್ಷಿಪುರುಷನು ಸಂಯದ್ವಾಮನು

(ಭಾಷ್ಯ)

೩೪೨. ಏತಂ ಯಥೋಕ್ತಂ ಪುರುಷಂ ಸಂಯದ್ವಾಮಃ ಇತ್ಯಾಚಕ್ಷತೇ । ಕಸ್ಮಾತ್ ? (ಹಿ)[2] ಯಸ್ಮಾತ್ ಏತಂ ಸರ್ವಾಣಿ ವಾಮಾನಿ ವನನೀಯಾನಿ ಸಂಭಜನೀಯಾನಿ ಶೋಭನಾನಿ ಅಭಿಸಂಯನ್ತಿ ಅಭಿಸಂಗಚ್ಛನ್ತೀತ್ಯತಃ

---

1. ಪರಮಾತ್ಮನಿಗೆ ಏತರ ಅಂಟೂ ಇಲ್ಲವೆಂಬುದನ್ನು ಈ ಪವಿತ್ರಸ್ಥಾನದಿಂದಲೇ ಮನದಂದುಕೊಳ್ಳಬಹುದು ; ಆತನ ಸಂಬಂಧದಿಂದ ಈ ಸ್ಥಾನವೇ ಇಷ್ಟು ನಿರ್ಮಲವಾಗಿರುವಾಗ ಆತನು ನಿತ್ಯನಿರ್ಮಲನೆಂಬುದನ್ನು ಹೇಳಬೇಕಾದದ್ದೇ ಇಲ್ಲ ಎಂದು ಅಭಿಪ್ರಾಯ. 2. ಈ ಮಾತು ಇಲ್ಲಿ ಬಿಟ್ಟುಹೋಗಿರುತ್ತದೆ.

ಸಂಯದ್ವಾಮಃ । ತಥಾ ಏವಂವಿದಮೇನಂ ಸರ್ವಾಣಿ ವಾಮಾನಿ ಅಭಿಸಂಯನ್ತಿ ಯ ಏವಂ ವೇದ ॥

(ಭಾಷ್ಯಾರ್ಥ)

ಈ ಮೇಲೆ ಹೇಳಿದ ಪುರುಷನನ್ನು 'ಸಂಯದ್ವಾಮನು'ಎಂದು ಕರೆಯುತ್ತಾರೆ. ಏಕೆ ? (ಹಿ=ಯಸ್ಮಾತ್) ಏಕೆಂದರೆ ಇವನನ್ನು ಎಲ್ಲಾ ವಾಮಗಳೂ ವನನೀಯವಾದ ಬಯಸಬೇಕಾದ ಮಂಗಲಗಳೂ (ಅಭಿಸಂಯನ್ತಿ=ಅಭಿಸಂಗಚ್ಛನ್ತಿ) ಬಂದು ಸೇರುತ್ತವೆ. ಆದ್ದರಿಂದ (ಇವನು) ಸಂಯದ್ವಾಮ(ನೆನಿಸಿರುತಾನೆ). ಹೀಗೆಯೇ ಹೀಗೆಂದು ಉಪಾಸನೆಮಾಡುವವನಲ್ಲ ಅವನ ಬಳಿಗೂ ಎಲ್ಲಾ ವಾಮಗಳೂ ಬಂದು ಸೇರುತ್ತವೆ.

(ಉಪನಿಷತ್ತು)

ಏಷ ಉ ಏವ ವಾಮನೀರೇಷ ಹಿ ಸರ್ವಾಣಿ ವಾಮಾನಿ ನಯತಿ ಸರ್ವಾಣಿ ವಾಮಾನಿ ನಯತಿ ಯ ಏವಂ ವೇದ ॥೩॥

೩. ಮತ್ತು ಈತನೇ ವಾಮನಿಯು. ಈತನಲ್ಲವೆ, ಎಲ್ಲ ವಾಮಗಳನ್ನು ಒದಗಿಸುತ್ತಾನೆ ? ಯಾವನು ಹೀಗೆಂದು ಅರಿತಿರುವನೋ (ಅವನು) ಎಲ್ಲಾ ವಾಮಗಳನ್ನೂ ಒದಗಿಸುವನು.

ಅಕ್ಷಿಪುರುಷನು ವಾಮನಿಯು

(ಭಾಷ್ಯ)

೩೪೩. ಏಷ ಉ ಏವ ವಾಮನೀಃ । ಯಸ್ಮಾದೇಷ ಹಿ ಸರ್ವಾಣಿ ವಾಮಾನಿ ಪುಣ್ಯಕರ್ಮಫಲಾನಿ ಪುಣ್ಯಾನುರೂಪಂ ಪ್ರಾಣಿಭ್ಯೋ ನಯತಿ ಪ್ರಾಪಯತಿ ವಹತಿ ಚ ಆತ್ಮಧರ್ಮತ್ವೇನ । ವಿದುಷಃ ಫಲಮ್- ಸರ್ವಾಣಿ ವಾಮಾನಿ ನಯತಿ ಯ ಏವಂ ವೇದ ॥

(ಭಾಷ್ಯಾರ್ಥ)

ಮತ್ತು ಈತನೇ ವಾಮನಿಯು ; (ಹಿ=ಯಸ್ಮಾತ್) ಏಕೆಂದರೆ ಎಲ್ಲಾ ವಾಮ ಗಳನ್ನೂ ಎಂದರೆ ಪುಣ್ಯಕರ್ಮಫಲಗಳನ್ನೂ ಪುಣ್ಯಕ್ಕೆ ಅನುಗುಣವಾಗಿ ಪ್ರಾಣಿಗಳಿಗೆ (ನಯತಿ=ಪ್ರಾಪಯತಿ) ಒದಗಿಸಿಕೊಡುತ್ತಾನೆ ಮತ್ತು ತನ್ನ ಧರ್ಮವಾಗಿಟ್ಟು ಕೊಂಡಿರುತ್ತಾನೆ[1]. ಉಪಾಸಕನಿಗೆ ಫಲವೇನೆಂದರೆ, ಯಾವನು ಹೀಗೆಂದು ಅರಿಯು ವನೋ ಅವನು ಸರ್ವಕಾಮಗಳನ್ನೂ ಒದಗಿಸುತ್ತಾನೆ.

1. ತನ್ನ ಧರ್ಮವಾಗಿಟ್ಟುಕೊಂಡಿರುತ್ತಾನೆ ಎಂದು ಹಿಂದಿನ ಕಂಡಿಕೆಯ ಎರಡನೆಯ ವ್ಯಾಖ್ಯಾನವನ್ನು ಅನುಸರಿಸಿ ಅರ್ಥಮಾಡಿಕೊಳ್ಳಬೇಕು.

(ಉಪನಿಷತ್ತು)

ಏಷ ಉ ಏವ ಭಾಮನೀರೇಷ ಹಿ ಸರ್ವೇಷು ಲೋಕೇಷು ಭಾತಿ ಸರ್ವೇಷು ಲೋಕೇಷು ಭಾತಿ ಯ ಏವಂ ವೇದ ॥೪॥

೪. ಮತ್ತು ಈತನೇ ಭಾಮನಿಯು. ಈತನೇ ಅಲ್ಲವೆ, ಸರ್ವಲೋಕಗಳಲ್ಲಿಯೂ ಹೊಳೆಯುತ್ತಿರುತ್ತಾನೆ ? ಯಾವನು ಹೀಗೆಂದು ಅರಿತಿರುವನೋ ಅವನು ಸರ್ವಲೋಕಗಳಲ್ಲಿಯೂ ಹೊಳೆಯುವನು.

ಅಕ್ಷಿಪುರುಷನು ಭಾಮನಿಯು

(ಭಾಷ್ಯ)

೩೪೪. ಏಷ ಉ ಏವ ಭಾಮನೀಃ । ಏಷ ಹಿ ಯಸ್ಮಾತ್ ಸರ್ವೇಷು ಲೋಕೇಷು ಆದಿತ್ಯಚನ್ದ್ರಾಗ್ನ್ಯಾದಿರೂಪೈಃ ಭಾತಿ ದೀಪ್ಯತೇ । ''ತಸ್ಯ ಭಾಸಾ ಸರ್ವಮಿದಂ ವಿಭಾತಿ'' (ಮುಂ. ೨-೨-೧೧) ಇತಿ ಶ್ರುತೇಃ । ಅತೋ ಭಾಮಾನಿ ನಯತಿ ಇತಿ ಭಾಮನೀಃ । ಯ ಏವಂ ವೇದ ಅಸಾವಪಿ ಸರ್ವೇಷು ಲೋಕೇಷು ಭಾತಿ ॥

(ಭಾಷ್ಯಾರ್ಥ)

ಮತ್ತು ಇವನೇ ಭಾಮನಿಯು. ಇವನೇ ಅಲ್ಲವೆ, ಸರ್ವಲೋಕಗಳಲ್ಲಿಯೂ ಆದಿತ್ಯ , ಚಂದ್ರ , ಅಗ್ನಿ- ಮುಂತಾದ ರೂಪಗಳಿಂದ (ಭಾತಿ = ದೀಪ್ಯತೇ) ಹೊಳೆಯುತ್ತಾನೆ ; ''ಅವನ ಕಾಂತಿಯಿಂದ ಇದೆಲ್ಲವೂ ಹೊಳೆಯುತ್ತಿದೆ'' (ಮುಂ. ೨-೨-೧೧) ಎಂಬ ಶ್ರುತಿಯಿಂದ ಇದು ಸಿದ್ಧವಾಗುತ್ತದೆ. ಆದ್ದರಿಂದ ಭಾಮ (ಕಾಂತಿ)ಗಳನ್ನು ಒಯ್ಯುತ್ತಾನೆ[1] ಎಂಬ ಕಾರಣದಿಂದ (ಇವನು) ಭಾಮನಿಯು. ಯಾವನು ಹೀಗೆಂದು ಅರಿತಿರುವನೋ ಅವನೂ ಸರ್ವಲೋಕಗಳಲ್ಲಿಯೂ ಹೊಳೆಯುತ್ತಿರುವನು.

ಸಗುಣಬ್ರಹ್ಮವಿದ್ಯೆಗೆ ಉತ್ತರಗತಿ

(ಉಪನಿಷತ್ತು)

ಅಥ ಯದು ಚೈವಾಸ್ಮಿಞ್ಛವ್ಯಂ ಕುರ್ವನ್ತಿ ಯದಿ ಚ ನಾರ್ಚಿಷಮೇವಾಭಿಸಂಭವನ್ತ್ಯರ್ಚಿಷೋಽಹರಹ್ನ ಆಪೂರ್ಯಮಾಣಪಕ್ಷಮಾಪೂರ್ಯಮಾಣಪಕ್ಷಾದ್ಯಾನ್ ಷಡುದಙ್ಙೇತಿ ಮಾಸಾಗ್ಂಸ್ತಾನ್

1. ಹೊಳೆಯುವ ಪದಾರ್ಥಗಳಿಗೆ ಕೊಡುತ್ತಾನೆ.

ಮಾಸೇಭ್ಯಃ ಸಂವತ್ಸರಗ್ಂ ಸಂವತ್ಸರಾದಾದಿತ್ಯಮಾದಿತ್ಯಾಚ್ಚನ್ದ್ರಮಸಂ ಚನ್ದ್ರಮಸೋ ವಿದ್ಯುತಂ ತತ್ಪುರುಷೋಽಮಾನವಃ ಸ ಏನಾನ್ ಬ್ರಹ್ಮ ಗಮಯತ್ಯೇಷ ದೇವಪಥೋ ಬ್ರಹ್ಮಪಥ ಏತೇನ ಪ್ರತಿಪದ್ಯಮಾನಾ ಇಮಂ ಮಾನವಮಾವರ್ತಂ ನಾವರ್ತನ್ತೇ ನಾವರ್ತನ್ತೇ ॥೫॥

೫. ಇನ್ನು ಈತನ (ವಿಷಯದ)ಲ್ಲಿ ಶವ್ಯವನ್ನು ಮಾಡಲಿ, (ಮಾಡ)ದಿರಲಿ, (ಈ ಉಪಾಸಕರು) ಅರ್ಚಿಸ್ಸನ್ನು ಸೇರುತ್ತಾರೆ. ಅರ್ಚಿಸ್ಸಿನಿಂದ ಅಹಸ್ಸನ್ನು, ಅಹಸ್ಸಿನಿಂದ ಆಪೂರ್ಯಮಾಣಪಕ್ಷವನ್ನು, ಆಪೂರ್ಯಮಾಣಪಕ್ಷದಿಂದ (ಆದಿತ್ಯನು) ಉತ್ತರದಿಕ್ಕಿಗೇ ಹೋಗುವನಲ್ಲ ಆ ಷಣ್ಮಾಸಗಳನ್ನು, ಆ ಮಾಸ-ಗಳಿಂದ ಸಂವತ್ಸರವನ್ನು, ಸಂವತ್ಸರದಿಂದ ಆದಿತ್ಯನನ್ನು, ಆದಿತ್ಯನಿಂದ ಚಂದ್ರನನ್ನು, ಚಂದ್ರನಿಂದ ವಿದ್ಯುತ್ತನ್ನು, (ಸೇರುತ್ತಾರೆ). ಅಲ್ಲಿರುವ ಇವರನ್ನು ಅಮಾನವಪುರುಷನು ಬ್ರಹ್ಮವನ್ನು ಸೇರಿಸುತ್ತಾನೆ. ಇದು ದೇವಪಥವು, ಬ್ರಹ್ಮಪಥವು. ಇದರಿಂದ ಪಡೆಯುವವರು ಈ ಮಾನವ ಆವರ್ತಕ್ಕೆ ಹಿಂತಿರುಗುವದಿಲ್ಲ, ಹಿಂತಿರುಗುವದಿಲ್ಲ.

ಉಪಾಸಕನಿಗೆ ಉತ್ತರಮಾರ್ಗದಿಂದ ಬ್ರಹ್ಮಪ್ರಾಪ್ತಿ

(ಭಾಷ್ಯ)

೫।೪೫. ಅಥೇದಾನೀಂ ಯಥೋಕ್ತಬ್ರಹ್ಮವಿದೋ ಗತಿರುಚ್ಯತೇ । ಯತ್ ಯದಿ ಉ ಚೈವ ಅಸ್ಮಿನ್ ಏವಂವಿದಿ ಶವ್ಯಂ ಶವಕರ್ಮ ಮೃತೇ ಕುರ್ವನ್ತಿ ಯದಿ ಚ ನ ಕುರ್ವನ್ತಿ ಋತ್ವಿಜಃ, ಸರ್ವಥಾಪ್ಯೇವಂವಿತ್ ತೇನ ಶವಕರ್ಮಣಾ ಅಕೃತೇನಾಪಿ ಪ್ರತಿಬದ್ಧೋ ನ ಬ್ರಹ್ಮ ನ ಪ್ರಾಪ್ನೋತಿ । ನ ಚ ಕೃತೇನ ಶವಕರ್ಮಣಾ ಅಸ್ಯ ಕಶ್ಚನಾಭ್ಯುದಿಕೋ ಲೋಕಃ । ''ನ ಕರ್ಮಣಾ ವರ್ಧತೇ ನೋ ಕನೀಯಾನ್'' (ಬೃ ೪-೪-೨೩) ಇತಿ ಶ್ರುತ್ಯನ್ತರಾತ್ ಶವಕರ್ಮಣ್ಯನಾದರಂ ದರ್ಶಯನ್ ವಿದ್ಯಾಂ ಸ್ತೌತಿ । ನ ಪುನಃ ಶವಕರ್ಮ ಏವಂವಿದೋ ನ ಕರ್ತವ್ಯಮಿತಿ । ಅಕ್ರಿಯಮಾಣೇ ಹಿ ಶವಕರ್ಮಣಿ ಕರ್ಮಣಾಂ ಫಲಾರಮ್ಭೇ ಪ್ರತಿಬನ್ಧಃ ಕಶ್ಚಿದನುಮೀಯತೇಽನ್ಯತ್ರ । ಯತ ಇಹ ವಿದ್ಯಾಫಲಾರಮ್ಭಕಾಲೇ ಶವಕರ್ಮ ಸ್ಯಾದ್ ವಾ ನ ವಾ ಇತಿ ವಿದ್ಯಾವತೋಽಪ್ರತಿಬನ್ಧೇನ ಫಲಾರಮ್ಭಂ ದರ್ಶಯತಿ । ಯೇ ಸುಖಾಕಾಶಮಕ್ಷಿಸ್ಥಂ ಸಂಯದ್ವಾಮೋ ವಾಮನೀರ್ಭಾಮನೀರಿತ್ಯೇವಂ ಗುಣಮ್ ಉಪಾಸತೇ

ಪ್ರಾಣಸಹಿತಾಮ್ ಅಗ್ನಿವಿದ್ಯಾಂ ಚ ತೇಷಾಮ್ ಅನ್ತ್ಯಂ[1] ಕರ್ಮ ಭವತು ಮಾ ವಾ ಭೂತ್, ಸರ್ವಥಾಪಿ ತೇ ಅರ್ಚಿಷಮೇವ ಅಭಿಸಂಭವನ್ತಿ । ಅರ್ಚಿರಭಿಮಾನಿನೀಂ ದೇವತಾಮ್ ಅಭಿಸಂಭವನ್ತಿ ಪ್ರತಿಪದ್ಯನ್ತ ಇತ್ಯರ್ಥಃ । ಅರ್ಚಿಷಃ ಅರ್ಚಿರ್ದೇವತಾಯಾ ಅಹಃ ಅಹರಭಿಮಾನಿನೀಂ ದೇವತಾಮ್ । ಅಹ್ನಃ ಆಪೂರ್ಯಮಾಣಪಕ್ಷಂ ಶುಕ್ಲಪಕ್ಷದೇವತಾಮ್ । ಆಪೂರ್ಯಮಾಣಪಕ್ಷಾತ್ ಯಾನ್ ಷಣ್ಮಾಸಾನ್ ಉದಙ್ ಉತ್ತರಾಂ ದಿಶಮ್ ಏತಿ ಸವಿತಾ ತಾನ್ ಮಾಸಾನ್ ಉತ್ತರಾಯಣದೇವತಾನ್ । ತೇಭ್ಯೋ ಮಾಸೇಭ್ಯಃ ಸಂವತ್ಸರಂ ಸಂವತ್ಸರದೇವತಾಮ್ । ತತಃ ಸಂವತ್ಸರಾತ್ ಆದಿತ್ಯಮ್ । ಆದಿತ್ಯಾತ್ ಚನ್ದ್ರಮಸಮ್ ಚನ್ದ್ರಮಸೋ ವಿದ್ಯುತಮ್ । ತತ್ ತತ್ರಸ್ಥಾನ್ ತಾನ್ ಪುರುಷಃ ಕಶ್ಚಿತ್ ಬ್ರಹ್ಮಲೋಕಾತ್ ಏತ್ಯ ಅಮಾನವಃ, ಮಾನವ್ಯಾಂ ಸೃಷ್ಟೌ ಭವೋ ಮಾನವಃ । ನ ಮಾನವೋಽಮಾನವಃ । ಸ ಪುರುಷಃ ಏನಾನ್ ಬ್ರಹ್ಮ-ಸತ್ಯಲೋಕಸ್ಥಂ ಗಮಯತಿ । ಗನ್ತೃಗನ್ತವ್ಯಗಮಯಿತೃತ್ವವ್ಯಪದೇಶೇಭ್ಯಃ । ಸನ್ಮಾತ್ರಬ್ರಹ್ಮಪ್ರಾಪ್ತೌ ತದನುಪಪತ್ತೇಃ । ''ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ'' (ಬೃ ೪-೪-೬) ಇತಿ ಹಿ ತತ್ರ ವಕ್ತುಂ ನ್ಯಾಯ್ಯಮ್ । ಸರ್ವಭೇದನಿರಾಸೇನ ಸನ್ಮಾತ್ರಪ್ರತಿಪತ್ತಿಂ ವಕ್ಷ್ಯತಿ । ನ ಚ ಅದೃಷ್ಟೋ ಮಾರ್ಗೋ ಗಮನಾಯ ಉಪತಿಷ್ಠತೇ । ''ಸ ಏನಮ್ ಅವಿದಿತೋ ನ ಭುನಕ್ತಿ'' (ಬೃ ೧-೪-೧೫) ಇತಿ ಶ್ರುತ್ಯನ್ತರಾತ್ । ಏಷ ದೇವಪಥಃ । ದೇವೈಃ ಅರ್ಚಿರಾದಿಭಿಃ ಗಮಯಿತೃತ್ವೇನ ಅಧಿಕೃತೈಃ ಉಪಲಕ್ಷಿತಃ ಪನ್ಥಾ ದೇವಪಥ ಉಚ್ಯತೇ । ಬ್ರಹ್ಮ ಗನ್ತವ್ಯಮ್ । ತೇನ ಚ ಉಪಲಕ್ಷಿತಃ ಇತಿ ಬ್ರಹ್ಮಪಥಃ । ಏತೇನ ಪ್ರತಿಪದ್ಯಮಾನಾ ಗಚ್ಛನ್ತಃ ಬ್ರಹ್ಮ ಇಮಂ ಮಾನವಂ ಮನುಸಂಬನ್ಧಿನಂ ಮನೋಃ ಸೃಷ್ಟಿಲಕ್ಷಣಮ್ ಆವರ್ತಂ ನಾವರ್ತನ್ತೇ । ಆವರ್ತನ್ತೇ ಅಸ್ಮಿನ್ ಜನನಮರಣಪ್ರಬನ್ಧಚಕ್ರಾರೂಢಾ ಘಟೀಯನ್ತ್ರವತ್ ಪುನಃಪುನಃ ಇತಿ ಆವರ್ತಃ । ತಂ ನ ಪ್ರತಿಪದ್ಯನ್ತೇ । ನಾವರ್ತನ್ತೇ ಇತಿ ದ್ವಿರುಕ್ತಿಃ ಸಫಲಾಯಾಃ ವಿದ್ಯಾಯಾಃ ಪರಿಸಮಾಪ್ತಿಪ್ರದರ್ಶನಾರ್ಥಾ ॥

(ಭಾಷ್ಯಾರ್ಥ)

ಇನ್ನು ಈಗ ಹಿಂದೆ ಹೇಳಿರುವ ಬ್ರಹ್ಮವನ್ನು ಉಪಾಸನೆಮಾಡಿರುವಾತನಿಗೆ ಗತಿಯನ್ನು ಹೇಳಲಾಗುತ್ತದೆ.

(ಅಸ್ಮಿನ್=) ಈತನ (ವಿಷಯ)ದಲ್ಲಿ, ಈ ಪ್ರಕಾರವಾಗಿ ಉಪಾಸನೆ ಮಾಡಿರುವನಾಗಿ ಮೃತನಾಗಿರುವವನ ವಿಷಯದಲ್ಲಿ ಋತ್ವಿಜರು ಶವ್ಯವನ್ನು ಶವ ಕರ್ಮವನ್ನು ಮಾಡಿರಲಿ ಮಾಡದೆ ಇರಲಿ, ಹೇಗೇ ಆಗಲಿ, ಹೀಗೆಂದು ಉಪಾಸನೆ

1. ಆನ್ಯತ್ ಎಂಬುದನ್ನು ಹೀಗೆಂದು ತಿದ್ದಿಕೊಂಡಿದೆ.

ಮಾಡಿದವನು ಆ ಶವಕರ್ಮವನ್ನು ಮಾಡದೆ ಇದ್ದದ್ದರಿಂದಲೂ ಅಡ್ಡಿಯಾಗಿ ಬ್ರಹ್ಮವನ್ನು ಪಡೆಯುವದಿಲ್ಲವೆಂಬುದೂ ಇಲ್ಲ, (ಅದನ್ನು) ಮಾಡಿದ್ದರಿಂದ ಇವನಿಗೆ ಯಾವ ಹೆಚ್ಚಿನ ಲೋಕವೂ (ಪ್ರಾಪ್ತವಾಗು)ವದಿಲ್ಲ. ಏಕೆಂದರೆ ''ಕರ್ಮದಿಂದ ಹೆಚ್ಚುವದಿಲ್ಲ, ಕಡಿಮೆಯಾಗುವದೂ ಇಲ್ಲ'' (ಬೃ. ೪-೪-೨೩) ಎಂದು ಮತ್ತೊಂದು ಶ್ರುತಿಯಲ್ಲಿದೆ. ಶವಕರ್ಮದಲ್ಲಿ ಅಸಡ್ಡೆಯನ್ನು ತೋರಿಸಿ ವಿದ್ಯೆಯನ್ನು ಹೊಗಳಿರುತ್ತದೆಯೇ ಹೊರತು ಇಂಥ ಉಪಾಸಕನಿಗೆ ಶವಕರ್ಮವನ್ನು ಮಾಡಬಾರದು - ಎಂದೇನೂ (ಹೇಳಿ)ರುವದಿಲ್ಲ. ಮಿಕ್ಕ ಕಡೆಯಲ್ಲಿ[1] ಶವಕರ್ಮವನ್ನು ಮಾಡದೆ ಇದ್ದರೆ ಕರ್ಮಗಳು (ತಮ್ಮ) ಫಲವನ್ನುಂಟುಮಾಡುವದಕ್ಕೆ ಯಾವದೋ ಒಂದು ಅಡ್ಡಿಯಾಗುತ್ತದೆಯೆಂದೇ (ಇದರಿಂದ) ಅನುಮಾನಿಸಬೇಕು ; ಏಕೆಂದರೆ ಇಲ್ಲಿ ಉಪಾಸನೆಯ ಫಲವುಂಟಾಗುವ ಕಾಲದಲ್ಲಿ ಶವಕರ್ಮವಾಗಲಿ ಬಿಡಲಿ , ಉಪಾಸಕನಿಗೆ (ಯಾವ) ಅಡ್ಡಿಯೂ ಇಲ್ಲದೆ ಫಲವುಂಟಾಗುವದೆಂದು ತಿಳಿಸಿರುತ್ತದೆ.

ಯಾರು ಆನಂದಾಕಾಶ(ಬ್ರಹ್ಮವು) ಕಣ್ಣಿನಲ್ಲಿರುವದೆಂದೂ ಸಂಯದ್ವಾಮ , ವಾಮನೀ , ಭಾಮನೀ- ಎಂಬೀ ಗುಣವುಳ್ಳದ್ದೆಂದೂ ಉಪಾಸನೆಮಾಡುತ್ತಾರೋ ಮತ್ತು ಪ್ರಾಣಸಹಿತವಾದ ಅಗ್ನಿವಿದ್ಯೆಯನ್ನು ಉಪಾಸನೆಮಾಡುತ್ತಾರೋ ಅವರಿಗೆ ಅಂತ್ಯಕರ್ಮವನ್ನು ಮಾಡಿರಲಿ (ಮಾಡದೆ)ಯಾದರೂ ಇರಲಿ, ಹೇಗೂ ಅವರು ಅರ್ಚಿಯನ್ನೇ[2] ಜ್ವಾಲೆಗೆ ಅಭಿಮಾನಿಯಾದ ದೇವತೆಯನ್ನು ಸೇರುತ್ತಾರೆ, ಪಡೆದುಕೊಳ್ಳುತ್ತಾರೆ. ಅರ್ಚಿಸ್ಸಿನಿಂದ ಅಹಸ್ಸನ್ನು ಎಂದರೆ ಹಗಲಿನ ಅಭಿಮಾನಿಯಾದ ದೇವತೆಯನ್ನು, ಅಹಸ್ಸಿನಿಂದ ಆಪೂರ್ಯಮಾಣಪಕ್ಷವನ್ನು ಎಂದರೆ ಶುಕ್ಲಪಕ್ಷದೇವತೆಯನ್ನು , ಆಪೂರ್ಯಮಾಣವಕ್ಷದಿಂದ ಸೂರ್ಯನು ಯಾವ ಆರು ತಿಂಗಳು ಉತ್ತರಕ್ಕೆ ಹೋಗುತ್ತಾನೋ ಆ (ಆರು) ತಿಂಗಳುಗಳ (ದೇವತೆಯನ್ನು) ಎಂದರೆ ಉತ್ತರಾಯಣ ದೇವತೆಯನ್ನು, ಆ ಮಾಸಗಳಿಂದ ಸಂವತ್ಸರವನ್ನು ಸಂವತ್ಸರದೇವತೆಯನ್ನು, ಆ ಸಂವತ್ಸರದಿಂದ ಆದಿತ್ಯನನ್ನು , ಆದಿತ್ಯನಿಂದ ಚಂದ್ರನನ್ನು , ಚಂದ್ರನಿಂದ ವಿದ್ಯುತ್ತನ್ನು ಸೇರುತ್ತಾರೆ.

(ತತ್ = ತತ್ರಸ್ಥಾನ್) ಅಲ್ಲಿರುವ[3] ಅವರನ್ನು ಅಮಾನವನಾದ ಒಬ್ಬ

---

1. ಉಪಾಸಕನಲ್ಲದ ಕರ್ಮಿಯ ವಿಷಯದಲ್ಲಿ.
2. ಸೂ. ಭಾ. ೪-೩-೪ (ಭಾ. ಭಾ. ೫೭೦), ೪-೩-೫ (ಭಾ. ಭಾ. ೫೭೧)ರಲ್ಲಿ ಅರ್ಚಿರಾದಿಗಳು ಬರಿಯ ಮಾರ್ಗಚಿಹ್ನೆಗಳಲ್ಲ, ಲೋಕಗಳೂ ಅಲ್ಲ ; ಅತಿವಾಹಿಕದೇವತೆಗಳೇ ಎಂದು ನಿರ್ಣಯಿಸಿದೆ.
3. ವಿದ್ಯುದ್ದೇವತೆಯಾದ ಬಳಿಕ ವರುಣನನ್ನೂ ಆಮೇಲೆ ಇಂದ್ರಪ್ರಜಾಪತಿಗಳನ್ನೂ ಸೇರಿಸಿಕೊಳ್ಳಬೇಕೆಂದು ಸೂ. ಭಾ. ೪-೩-೩ (ಭಾ. ಭಾ. ೫೬೮)ರಲ್ಲಿ ನಿರ್ಣಯಿಸಿದೆ.

ಪುರುಷನು-ಮಾನವಸೃಷ್ಟಿಯಲ್ಲಿ ಹುಟ್ಟಿದವನು ಮಾನವನು. ಮಾನವನಲ್ಲದವನು ಅಮಾನವನು.[1] ಆ (ಅಮಾನವನಾದ) ಪುರುಷನು- ಬ್ರಹ್ಮಲೋಕದಿಂದ ಬಂದು ಇವರನ್ನು ಸತ್ಯಲೋಕದಲ್ಲಿರುವ ಬ್ರಹ್ಮದ (ಬಳಿಗೆ) ಕರೆದುಕೊಂಡು ಹೋಗುತ್ತಾನೆ. ಹೋಗುವವರು, ಹೋಗುವ (ಬ್ರಹ್ಮ) , ಕರೆದುಕೊಂಡು ಹೋಗುವವನು - ಎಂದು ಹೇಳಿರುವದರಿಂದ (ಸತ್ಯಲೋಕದಲ್ಲಿರುವ ಬ್ರಹ್ಮದ ಬಳಿಗೆ ಎಂದೇ ಅರ್ಥ) ; ಏಕೆಂದರೆ ಸನ್ಮಾತ್ರವಾಗಿರುವ ಬ್ರಹ್ಮಪ್ರಾಪ್ತಿಯಲ್ಲಿ ಆ (ಗಂತೃಗಂತವ್ಯಗಮಯಿತೃಗಳು) ಹೊಂದುವ ದಿಲ್ಲ.[2] ''ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಸೇರಿಹೋಗುತ್ತಾನೆ' (ಬೃ. ೪-೪-೬) ಎಂದಲ್ಲವೆ, ಅದರ ವಿಷಯದಲ್ಲಿ ಹೇಳುವದು ಯುಕ್ತವಾಗಿರುತ್ತದೆ ? ಎಲ್ಲಾ ಭೇದವನ್ನೂ ತೆಗೆದುಹಾಕಿ ಸನ್ಮಾತ್ರ(ಬ್ರಹ್ಮವನ್ನು) ಪಡೆಯುವನೆಂದು ಮುಂದೆ ಹೇಳಲಾಗುತ್ತದೆ.[3] ಮಾರ್ಗವನ್ನು ಉಪಾಸನೆಮಾಡದೆ ಇದ್ದರೆ (ಅದು) ಗತಿಗೆ ಸಿದ್ಧವಾಗಲಾರದು[4]

1. 'ಮಾನಸಪುರುಷನು'ಎಂದು ಬೃ. ೬-೨-೧೫ರಲ್ಲಿದೆ. ಅಮಾನವ ಮತ್ತು ಮಾನಸ- ಎರಡಕ್ಕೂ ಒಂದೇ ಅರ್ಥ. ಮಾನವಸೃಷ್ಟಿಯಲ್ಲಿ ಸ್ತ್ರೀಪುರುಷರ ಕೂಟದಿಂದ ಹುಟ್ಟಿದವನಲ್ಲದ ಬ್ರಹ್ಮನಿಂದ ಮನಸ್ಸಿನಿಂದಲೇ ಸೃಷ್ಟವಾಗಿರುವ ಪುರುಷನು ಎಂದು ಒಟ್ಟರ್ಥ.
2. ಸೂ. ಭಾ. ೪-೩-೭ (ಭಾ. ಭಾ. ೫೭೩) ಮತ್ತು ಸೂ. ಭಾ. ೪-೩-೧೪ (ಭಾ. ಭಾ. ೫೮೨) ಇವುಗಳಲ್ಲಿ ಹೀಗೆಂದು ನಿರ್ಣಯವನ್ನು ಮಾಡಿದೆ.
3. ಮುಂದೆ ೬-೧೪-೨ರಲ್ಲಿ ಹೇಳಿರುವ ಸತ್ಸಂಪತ್ತಿಯು ಬೃಹದಾರಣ್ಯಕದಲ್ಲಿ ಹೇಳಿರುವ 'ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿಯೇ ಸೇರಿಹೋಗುತ್ತಾನೆ'ಎಂಬಂತೆಯೇ ಇದೆ. ಅಲ್ಲಿ ಗತಿಯನ್ನೇನೂ ಹೇಳಿಲ್ಲ.
4. 'ಆಗಮನಾಯ'ಎಂಬ ಪಾಠವನ್ನು ಒಪ್ಪಿ ಏಕತ್ವವೆಂಬ ಮಾರ್ಗವನ್ನು ಕಂಡುಕೊಳ್ಳದೆ ಇದ್ದರೆ ಅದು ಆಗಮನಕ್ಕೆ ಕಾರಣವಾಗುವದಿಲ್ಲ- ಎಂಬ ಒಂದು ವ್ಯಾಖ್ಯಾನವನ್ನೂ 'ಗಮನಾಯ' ಎಂಬ ಪಾಠವನ್ನು ಒಪ್ಪಿ ಏಕತ್ವಲಕ್ಷಣವಾದ ಮಾರ್ಗವನ್ನು ಅರಿತುಕೊಳ್ಳದಿದ್ದರೆ ಗಮನಕ್ಕೆ ಎಂದರೆ ಮೋಕ್ಷಕ್ಕೆ ಕಾರಣವಾಗುವದಿಲ್ಲ- ಎಂಬ ಮತ್ತೊಂದು ವ್ಯಾಖ್ಯಾನವನ್ನೂ ಟೀಕೆಯಲ್ಲಿ ಕೊಟ್ಟಿದೆ. ಇವೆರಡಕ್ಕಿಂತಲೂ 'ಇಲ್ಲಿ ಹೇಳಿರುವ ಮಾರ್ಗವನ್ನು ಧ್ಯಾನಮಾಡದಿದ್ದರೆ ಬ್ರಹ್ಮಲೋಕಗಮನಕ್ಕೆ ಇದು ಸತ್ತಬಳಿಕ ಸಾಧನವಾಗಿ ಕಾಣಿಸಿಕೊಳ್ಳುವದಿಲ್ಲ' ಎಂಬುದೇ ಸರಳವಾದ ಅರ್ಥವೆಂದು ನಮ್ಮ ಮತ. ಭಾಷ್ಯದಲ್ಲಿ ಉದಾಹೃತವಾಗಿರುವ ಬೃಹದಾರಣ್ಯಕ ಶ್ರುತಿಯ ಭಾಷ್ಯದಲ್ಲಿ ವೇದವನ್ನು ಅಧ್ಯಯನಮಾಡದಿದ್ದರೂ ಮತ್ತೆ ಯಾವದಾದರೂ ಕರ್ಮವನ್ನು ಮಾಡದಿದ್ದರೂ ಅವು ಫಲದಾಯಕವಲ್ಲದಿರುವಂತೆ (ಆತ್ಮಲೋಕವೂ ವಿಧಿತವಾಗದೆ ಇದ್ದರೆ ಫಲದಾಯಕವಲ್ಲ) ಎಂಬ ಹೋಲಿಕೆಯಲ್ಲಿ ಹೇಳಿರುವಂತೆ ಉಪಾಸನೆಯಲ್ಲಿ ಮಾರ್ಗವನ್ನು ಚಿಂತಿಸದಿದ್ದರೆ ಫಲದಾಯಕವಲ್ಲ ಎಂಬುದು - ಭಾಷ್ಯಾಭಿಪ್ರಾಯ.

''ಅದು ಅವಿದಿತವಾದರೆ ಇವನನ್ನು ರಕ್ಷಿಸುವದಿಲ್ಲ'' (ಬೃ. ೧-೪-೧೫) ಎಂಬ ಬೇರೊಂದು ಶ್ರುತಿಯಿಂದ (ಇದು ಸಿದ್ಧವಾಗುತ್ತದೆ).

ಇದೇ ದೇವಪಥವು. ಕರೆದುಕೊಂಡು ಹೋಗುವದಕ್ಕೆ ಅಧಿಕಾರಿಗಳಾದ ಅರ್ಚಿರಾದಿದೇವತೆಗಳ ಉಪಲಕ್ಷಣವುಳ್ಳ ಮಾರ್ಗವನ್ನು[1] ದೇವಪಥವೆಂದಿದೆ. ಗಂತವ್ಯವಾದ ಬ್ರಹ್ಮವಿದೆಯಲ್ಲ, ಅದರಿಂದಲೂ ಉಪಲಕ್ಷಿತವಾಗಿರುವ (ಮಾರ್ಗವಾದ್ದರಿಂದ) ಬ್ರಹ್ಮಪಥವೆನಿಸಿದೆ.[2] ಇದರಿಂದ ಹೋಗಿ ಬ್ರಹ್ಮವನ್ನು ಸೇರುವವರು ಈ ಮಾನವವಾದ ಮನುಸಂಬಂಧಿಯಾದ, ಮನುವಿನ ಸೃಷ್ಟಿರೂಪವಾದ ಆವರ್ತಕ್ಕೆ- ಇದರಲ್ಲಿ ಜನನಮರಣಪ್ರಬಂಧದ ಚಕ್ರವನ್ನೇರಿ ರಾಟೆಯಂತೆ ಮತ್ತೆ ಮತ್ತೆ ಸುತ್ತುತ್ತಿರುವದಾದ್ದರಿಂದ (ಇದು) ಆವರ್ತವು ; ಆ (ಆವರ್ತಕ್ಕೆ)- ಹಿಂತಿರುಗುವದಿಲ್ಲ, ಮತ್ತೆ (ಅದನ್ನು) ಪಡೆಯುವದಿಲ್ಲ.[3] 'ಹಿಂತಿರುಗುವದಿಲ್ಲ' ಎಂದು ಎರಡು ಸಲ ಹೇಳಿರುವದು ಫಲಸಹಿತವಾದ ವಿದ್ಯೆಯು ಮುಗಿಯಿತೆಂಬುದನ್ನು ತಿಳಿಸುವದಕ್ಕೆ (ಬಂದಿದೆ).

1. ಕರೆದುಕೊಂಡುಹೋಗುವ ದೇವತೆಗಳಿಂದ ಇದಕ್ಕೆ ದೇವಪಥವೆಂಬ ಹೆಸರು.
2. ಮುಟ್ಟಬೇಕಾದ ಬ್ರಹ್ಮದಿಂದ ಬ್ರಹ್ಮಪಥವೆಂಬ ಹೆಸರು.
3. 'ಇಮಂ' ಈ (ಮಾನವ ಆವರ್ತವನ್ನು) ಎಂದಿರುವದಿಂದ ಮತ್ತೊಂದು ಕಲ್ಪದ ಮಾನವಸೃಷ್ಟಿಗೆ ಬರುತ್ತಾರೆಂದೇ ಅರ್ಥವೆಂದು ಬೃ. ಭಾ. ೬-೨-೧೫ (ಭಾ. ಭಾ. ೪೫೦) ರಲ್ಲಿ ನಿರ್ಣಯಿಸಿರುವದನ್ನು ನೋಡಿರಿ.

ನಾಲ್ಕನೆಯ ಅಧ್ಯಾಯದ ಹತ್ತನೆಯ ಖಂಡದಿಂದ ಹದಿನೈದನೆಯ ಖಂಡದವರೆಗಿನ ಗ್ರಂಥದ ಸಾರ

ಈ ಭಾಗದಲ್ಲಿ ಅಗ್ನಿವಿದ್ಯೆಯನ್ನೂ ಉಪಕೋಸಲವಿದ್ಯೆಯನ್ನು ಹೇಳಿದೆ.

ಹತ್ತನೆಯ ಖಂಡ

ಉಪಕೋಸಲಕಾಮಲಾಯನನು ಸತ್ಯಕಾಮಜಾಬಾಲನಲ್ಲಿ ಬ್ರಹ್ಮಚಾರಿಯಾಗಿದ್ದು ಕೊಂಡಿದ್ದನು. ಗುರುವು ಮಿಕ್ಕ ಶಿಷ್ಯರಿಗೆ ವಿದ್ಯೆಯನ್ನು ಹೇಳಿ ಮನೆಗೆ ಕಳುಹಿಸಿದಮೇಲೂ ಇವನಿಗೆ ಮಾತ್ರ ಹೇಳದೆ ಇದ್ದನು. ಹೆಂಡತಿಯು ಆರಿಕೆಮಾಡಿಕೊಂಡಮೇಲೂ ಆಚಾರ್ಯನು ತನಗೆ ವಿದ್ಯೆಯನ್ನು ಹೇಳದೆ ಇದ್ದದ್ದರಿಂದ ದುಃಖಿತನಾದ ಉಪಕೋಸಲನು ಸಂತಪ್ತನಾಗಿ ಊಟಮಾಡದೆ ಇದ್ದುಬಿಟ್ಟನು.

ಆಗ ಅಗ್ನಿಗಳೆಲ್ಲವೂ ಒಟ್ಟಾಗಿ ಪ್ರಾಣವು ಬ್ರಹ್ಮವು ; ಕಂ ಬ್ರಹ್ಮ, ಖಂ ಬ್ರಹ್ಮ - ಎಂದು ಉಪದೇಶಿಸಿದವು. ಉಪಕೋಸಲನಿಗೆ ಕಂ ಖಂ ಎಂಬಿವು ಹೇಗೆ ಬ್ರಹ್ಮವೆಂಬುದು ತಿಳಿಯಲಿಲ್ಲ. ಆಗ ಕಂ ಖಂ ಎಂಬಿವೆರಡೂ ಒಂದೇ ಬ್ರಹ್ಮದ ಸ್ವರೂಪವೆಂದೂ ಸರ್ವವ್ಯಾಪಿಯಾದ ಅಲೌಕಿಕಾನಂದವೇ ಬ್ರಹ್ಮವೆಂದೂ ತಿಳಿಸಿಕೊಟ್ಟವು.

ಹನ್ನೊಂದರಿಂದ ಹದಿಮೂರನೆಯ ಖಂಡದವರೆಗೆ

ಆಮೇಲೆ ಅಗ್ನಿಗಳು ಒಂದೊಂದಾಗಿ ತಮ್ಮ ತಮ್ಮ ವಿದ್ಯೆಯನ್ನು ತಿಳಿಸಿಕೊಟ್ಟವು. ಗಾರ್ಹಪತ್ಯಾಗ್ನಿಯು 'ಪೃಥಿವಿ, ಅಗ್ನಿ, ಅನ್ನ, ಆದಿತ್ಯ - ಎಂಬಿವು ನನ್ನ ತನುಗಳು ; ಅಗ್ನ್ಯಾದಿತ್ಯ ರೂಪದಿಂದ ನಾನೊಬ್ಬನೇ ಇದೇನೆ. ಹೀಗೆಂದು ನನ್ನನ್ನು ಉಪಾಸನೆ ಮಾಡಿದವನು ಈ ಲೋಕದಲ್ಲಿ ನೂರುವರ್ಷವೂ ಸುಖದಿಂದ ಪ್ರಜಾಸಂತತಿಯುಕ್ತನಾಗಿ ಬಾಳಿ ಸತ್ತಬಳಿಕ ನನ್ನ ಲೋಕವನ್ನು ಪಡೆಯುತ್ತಾನೆ' – ಎಂದು ತಿಳಿಸಿಕೊಟ್ಟಿತು.

ಆ ಬಳಿಕ ದಕ್ಷಿಣಾಗ್ನಿಯು 'ಅಪ್ಪು, ದಿಕ್ಕು, ನಕ್ಷತ್ರಗಳು, ಚಂದ್ರ – ಇವು ನನ್ನ ತನುಗಳು ; ಅಗ್ನಿಚಂದ್ರರರೂಪದಿಂದ ನಾನೊಬ್ಬನೇ ಇರುತ್ತೇನೆ. ಹೀಗೆಂದು ನನ್ನನ್ನು ಉಪಾಸನೆ ಮಾಡಿದವನಿಗೆ ಉಕ್ತರೀತಿಯಿಂದ ಇಹಪರಗತಿಯಾಗುವದು' ಎಂದು ತಿಳಿಸಿ ಕೊಟ್ಟಿತು.

ಆ ಬಳಿಕ ಆಹವನೀಯವು 'ಪ್ರಾಣ, ಆಕಾಶ, ದ್ಯುಲೋಕ, ಮಿಂಚು – ಎಂಬಿವು ನನ್ನ ತನುಗಳು. ಮಿಂಚಿನಲ್ಲಿರುವ ಪುರುಷನು ನಾನು ಬೇರೆಬೇರೆಯಲ್ಲ ; ಎರಡೂ ನಾನೇ. ಹೀಗೆಂದು ನನ್ನನ್ನು ಉಪಾಸನೆಮಾಡಿದವನಿಗೆ ಉಕ್ತರೀತಿಯ ಫಲವಾಗುವದು.

ಹದಿನಾಲ್ಕನೆಯ ಖಂಡ

ಅಗ್ನಿಗಳು ಒಟ್ಟಾಗಿ ''ಅಪ್ಪ, ಇದು ನಮ್ಮಗಳ ಅಗ್ನಿವಿದ್ಯೆ, ಮತ್ತು ಆತ್ಮವಿದ್ಯೆ. ಮುಂದೆ ಆಚಾರ್ಯನು ಆತ್ಮವಿದ್ಯೆಯ ಗತಿಯನ್ನು ತಿಳಿಸಿಕೊಡುವನು'' ಎಂದವು.

ಆಚಾರ್ಯನಾದ ಸತ್ಯಕಾಮನು ಕಾಲಾನುಕಾಲಕ್ಕೆ ಬಂದು ''ನಿನ್ನ ಮುಖವನ್ನು ನೋಡಿದರೆ ಬ್ರಹ್ಮಜ್ಞಾನಿಯಂತೆ ಕಾಣುತ್ತಿರುವೆ ; ನಿನಗೆ ಹೇಳಿಕೊಟ್ಟವರು ಯಾರು ?'' ಎಂದು ಕೇಳಿದನು. ಉಪಕೋಸಲನು ಅಗ್ನಿಗಳು ಹೇಳಿಕೊಟ್ಟ ವಿಷಯಗಳನ್ನು ಸಂಗ್ರಹವಾಗಿ ತಿಳಿಸಿದನು.

ಆಗ ಗುರುವು ''ಅವು ಪೃಥಿವ್ಯಾದಿಲೋಕಗಳನ್ನು ಮಾತ್ರ ತಿಳಿಸಿಕೊಟ್ಟಿರುತ್ತವೆ. ನಾನು ಆ ಬ್ರಹ್ಮಸ್ವರೂಪವನ್ನು ಪೂರ್ಣವಾಗಿ ಹೇಳಿಕೊಡುವೆನು. ಇದನ್ನು ಅರಿತುಕೊಂಡವನಿಗೆ, ತಾವರೆಯೆಲೆಗೆ ನೀರು ಅಂಟದಿರುವಂತೆ, ಪಾಪಕರ್ಮದ ಲೇಪವುಂಟಾಗದೆ ಇರುವದು'' ಎಂದನು.

ಹದಿನೈದನೆಯ ಖಂಡ

ಸತ್ಯಕಾಮನು ಉಪಕೋಸಲನಿಗೆ ಮಾಡಿದ ಉಪದೇಶವೇನೆಂದರೆ :

''ಕಣ್ಣಿನಲ್ಲಿರುವ ಸರ್ವದ್ರಷ್ಟ್ರವಾದ ಪುರುಷನಿರುವನಲ್ಲ. ಅವನೇ ವ್ಯಾಪಕಾನಂದ ಸ್ವರೂಪನಾದ ಆ ಪರಮಾತ್ಮನು ; ಅದೇ ಅಮೃತವೂ ಅಭಯವೂ ಆದ ಬ್ರಹ್ಮವು. ಆ ಬ್ರಹ್ಮದ ಸ್ಥಾನವಾದ್ದರಿಂದಲೇ ಕಣ್ಣಿನಲ್ಲಿ ತುಪ್ಪ, ನೀರು – ಮುಂತಾದದ್ದನ್ನು ಚಿಮುಕಿಸಿದರೆ ಕಡೆಗಣ್ಣಿಗೇ ಬಂದುಬಿಡುವುದು.

ಈ ಆತ್ಮನು ಸಂಯದ್ವಾಮನು, ಎಂದರೆ ಸರ್ವವಾಂಛಿತಗಳೂ ಬಂದು ಸೇರುವವು. ಇವನೇ ವಾಮನಿಯು ; ಎಂದರೆ ಸರ್ವವಾಮಗಳನ್ನೂ ಪುಣ್ಯಕರ್ಮಫಲಗಳನ್ನೂ ಪ್ರಾಣಿಗಳಿಗೆ ಒದಗಿಸತಕ್ಕವನು. ಇವನೇ ಭಾಮನಿಯು, ಎಂದರೆ ಎಲ್ಲಾ ಲೋಕಗಳಲ್ಲಿಯೂ ಹೊಳೆಯುತ್ತಿರುವವನು.

ಈ ಬ್ರಹ್ಮವಿದ್ಯೆಯನ್ನು ಅಳವಡಿಸಿಕೊಂಡವನಿಗೆ ಅಂತ್ಯಕರ್ಮವನ್ನು ಮಾಡಲಿ ಬಿಡಲಿ, ಅವನು ಅರ್ಚಿ, ಅಹಸ್ಸು, ಆಪೂರ್ಯಮಾಣಪಕ್ಷ, ಉತ್ತರಾಯಣಮಾಸ, ಸಂವತ್ಸರ, ಆದಿತ್ಯ, ಚಂದ್ರ, ವಿದ್ಯುತ್ – ಈ ದೇವತೆಗಳನ್ನು ಪಡೆಯುವನು. ಆ ವಿದ್ಯುತ್ತಿನಲ್ಲಿರುವಾಗ ಬ್ರಹ್ಮಲೋಕದಿಂದ ಬಂದ ಅಮಾನವಪುರುಷನು ಇವನನ್ನು ಹಿರಣ್ಯಗರ್ಭನ ಸಮೀಪಕ್ಕೆ ಒಯ್ಯುವನು. ಇದೇ ದೇವಪಥವು, ಬ್ರಹ್ಮಪಥವು. ಇದರಿಂದ ಹೋದವರು ಈ ಆವರ್ತರೂಪದ ಮಾನವಸೃಷ್ಟಿಗೆ ಮರಳಿಬರುವುದಿಲ್ಲ.''

ನಾಲ್ಕನೆಯ ಅಧ್ಯಾಯ - ಹದಿನಾರನೆಯ ಖಂಡ

(ಪ್ರಾಸಂಗಿಕವಾಗಿ ಯಜ್ಞಧರ್ಮಗಳು)

ಯಜ್ಞದಲ್ಲಿ ಬ್ರಹ್ಮನು ಮೌನವಾಗಿರುವ ಕಾಲ

(ಉಪನಿಷತ್ತು)

ಏಷ ಹ ವೈ ಯಜ್ಞೋ ಯೋಽಯಂ ಪವತ ಏಷ ಹ ಯನ್ನಿದಗ್ಂ ಸರ್ವಂ ಪುನಾತಿ ಯದೇಷ ಯನ್ನಿದಗ್ಂ ಸರ್ವಂ ಪುನಾತಿ ತಸ್ಮಾದೇಷ ಏವ ಯಜ್ಞಸ್ತಸ್ಯ ಮನಶ್ಚ ವಾಕ್ಚ ವರ್ತನೀ ॥೧॥

೧. ಈ ಬೀಸುತ್ತಿದೆಯಲ್ಲ , ಇದೇ ಯಜ್ಞವು. ಇದೇ ಹೋಗುತ್ತಾ ಇದೆಲ್ಲವನ್ನೂ ಪವಿತ್ರಗೊಳಿಸುತ್ತದೆ : ಇದು ಹೋಗುತ್ತಾ ಇದೆಲ್ಲವನ್ನೂ ಪವಿತ್ರಗೊಳಿಸುತ್ತದೆಯಷ್ಟೆ ? ಆದ್ದರಿಂದ ಇದೇ ಯಜ್ಞವು , ಅದಕ್ಕೆ ಮನಸ್ಸೂ ವಾಕ್ಕೂ ವರ್ತನಿಗಳು.

ಗ್ರಂಥದ ಸಂಬಂಧ

೩೪೬. ರಹಸ್ಯಪ್ರಕರಣೇ ಪ್ರಸಙ್ಗಾತ್ , ಆರಣ್ಯಕತ್ವಸಾಮಾನ್ಯಾಚ್ಚ ಯಜ್ಞೇ ಕ್ವಚ ಉತ್ಪನ್ನೇ ವ್ಯಾಹೃತಯಃ ಪ್ರಾಯಶ್ಚಿತ್ತಾರ್ಥಾ ವಿಧಾತವ್ಯಾಃ । ತದಭಿಜ್ಞಸ್ಯ ಚ ಋತ್ವಿಜೋ ಬ್ರಹ್ಮಣಃ ಮೌನಮ್ ಇತ್ಯತ ಇದಮಾರಭ್ಯತೇ ॥

(ಭಾಷ್ಯಾರ್ಥ)

(ಇದು) ರಹಸ್ಯಪ್ರಕರಣ(ವಾದರೂ) ಪ್ರಸಂಗವಶದಿಂದಲೂ[1] (ಇದೂ) ಆರಣ್ಯಕ[2]ವಾಗಿರುವದರಿಂದಲೂ ಯಜ್ಞದಲ್ಲಿ (ಏನಾದರೂ) ಕೊರತೆಯುಂಟಾದರೆ ಪ್ರಾಯಶ್ಚಿತ್ತಕ್ಕಾಗಿ ವ್ಯಾಹೃತಿಗಳನ್ನು ವಿಧಾನಮಾಡಬೇಕಾಗಿದೆ ಅದನ್ನರಿತಿರುವ

ಉಪಾಸಕರಿಗೆ ಫಲಪ್ರಾಪ್ತಿಗೆ ಮಾರ್ಗಚಿಂತನೆಯನ್ನು ಹೇಳಿದಂತೆ ಇಲ್ಲಿ ಯಜ್ಞವನ್ನು ಸರಿಯಾಗಿ ಮಾಡುವದಕ್ಕೆ ಮಾರ್ಗವನ್ನು ತಿಳಿಸುತ್ತದೆ. ಇದನ್ನು ಪ್ರಾಸಂಗಿಕವಾಗಿ ಹೇಳಿದ್ದು; ಹಿಂದಿನ ಉಪಾಸನೆಗೂ ಇದಕ್ಕೂ ಸಂಬಂಧವೇನೂ ಇಲ್ಲ.

ಹಿಂದಿನ ಗ್ರಂಥದಂತೆ ಇದನ್ನು ಆರಣ್ಯದಲ್ಲಿ ಅಧ್ಯಯನಮಾಡಬೇಕು

ಋತ್ವಿಜನಾದ ಬ್ರಹ್ಮನಿಗೆ ಮೌನವನ್ನು (ವಿಧಾನಮಾಡಬೇಕಾಗಿದೆ). ಆದ್ದರಿಂದ ಇದನ್ನು ಆರಂಭಿಸಿದೆ.

ಯಜ್ಞವು ವಾಯುವೇ

(ಭಾಷ್ಯ)

೩೪೭. ಏಷ ಹ ವೈ ಏಷ ವಾಯುರ್ಯೋಽಯಂ ಪವತೇ ಅಯಂ ಯಜ್ಞಃ। ಹ ವೈ ಇತಿ ಪ್ರಸಿದ್ಧಾರ್ಥಾವದ್ಯೋತಕೌ ನಿಪಾತೌ। ವಾಯುಪ್ರತಿಷ್ಠೋ ಹಿ ಯಜ್ಞಃ ಪ್ರಸಿದ್ಧಃ ಶ್ರುತಿಷು। ''ಸ್ವಾಹಾ ವಾತೇಧಾಃ'' (ತೈ. ಸಂ. ೧-೧-೧೩-೩), ''ಅಯಂ ವೈ ಯಜ್ಞೋ ಯೋಽಯಂ ಪವತೇ'' (ಐ. ಬ್ರಾ. ೨೫-೮) ಇತ್ಯಾದಿಶ್ರುತಿಭ್ಯಃ। ವಾತ ಏವ ಹಿ ಚಲನಾತ್ಮಕತ್ವಾತ್ ಕ್ರಿಯಾಸಮವಾಯಿ। ''ವಾತ ಏವ ಯಜ್ಞಸ್ಯಾಽಽರಮ್ಭಕೋ ವಾತಃ ಪ್ರತಿಷ್ಠಾ'' (?) ಇತಿ ಚ ಶ್ರವಣಾತ್। ಏಷ ಹ ಯನ್ ಗಚ್ಛನ್ ಚಲನ್ ಇದಂ ಸರ್ವಂ ಜಗತ್ ಪುನಾತಿ ಪಾವಯತಿ ಶೋಧಯತಿ। ನ ಹಿ ಅಚಲತಃ ಶುದ್ಧಿರಸ್ತಿ। ದೋಷನಿರಸನಂ ಚಲತೋ ಹಿ ದೃಷ್ಟಂ ನ ಸ್ಥಿರಸ್ಯ। ಯದ್ ಯಸ್ಮಾಚ್ಚ ಯನ್ ಏಷ ಇದಂ ಸರ್ವಂ ಪುನಾತಿ ತಸ್ಮಾತ್ ಏಷ ಏವ ಯಜ್ಞಃ ಯಃ ಪುನಾತೀತಿ[1]॥

(ಭಾಷ್ಯಾರ್ಥ)

ಇದೇ, ಬೀಸುತ್ತಿದೆಯಲ್ಲ ಈ ವಾಯುವೇ, ಈ ಯಜ್ಞವು. ಹ ವೈ ಎಂಬಿವು ಪ್ರಸಿದ್ಧವಾದ ಅರ್ಥವನ್ನು ತಿಳಿಸುವ ನಿಪಾತಗಳು. ಯಜ್ಞವು ವಾಯುವಿನಲ್ಲಿ ಪ್ರತಿಷ್ಠಿತವಾಗಿದೆ ಎಂದಲ್ಲವೆ, ಶ್ರುತಿಗಳಲ್ಲಿ ಪ್ರಸಿದ್ಧವಾಗಿರುತ್ತದೆ? ''ಸ್ವಾಹಾ ವಾತೇಧವು''[2] (ತೈ. ಸಂ. ೧-೧-೧೩-೩). ''ಈ ಬೀಸುತ್ತಿದೆಯಲ್ಲ, ಇದೇ ಯಜ್ಞವು'' (ಐ. ಬ್ರಾ. ೨೫-೮) ಮುಂತಾದ ಶ್ರುತಿಗಳಿಂದ (ಹೀಗೆಂದು ಗೊತ್ತಾಗುತ್ತದೆ). ವಾತವೇ ಅಲ್ಲವೆ , ಚಲನಾತ್ಮಕವಾಗಿರುವದರಿಂದ ಕ್ರಿಯೆಗೆ ಸಂಬಂಧಪಟ್ಟಿದೆ ? ''ವಾತವೇ ಯಜ್ಞದ ಆರಂಭಕವು , ವಾತವೇ (ಅದಕ್ಕೆ) ಪ್ರತಿಷ್ಠೆಯು'' (?) ಎಂದೂ ಶ್ರುತಿಯಿರುತ್ತದೆ. ಈ (ವಾಯು ಯನ್=ಗಚ್ಛನ್) ಹೋಗುತ್ತಾ ಚಲಿಸುತ್ತಿರುವಾಗ ಈ ಎಲ್ಲ ಜಗತ್ತನ್ನು (ಪುನಾತಿ = ಪಾವಯತಿ) ಪವಿತ್ರಗೊಳಿಸುತ್ತದೆ, ಶುದ್ಧಿಗೊಳಿಸುತ್ತದೆ. ಚಲಿಸದೆ ಇರುವದಕ್ಕೆ[3] ಶುದ್ಧಿಯಿಲ್ಲವಷ್ಟೆ ? ದೋಷವನ್ನು ಹೋಗಲಾಡಿಸುವದು

---

1. 'ಯತ್' ಎಂಬುದಕ್ಕಿಂತ ಈ ಪಾಠವೇ ಮೇಲು.
2. ಸ್ವಾಹಾಕಾರವನ್ನು ಉಚ್ಚರಿಸಿ ವಾತದಲ್ಲಿ ಇಡಲ್ಪಡುತ್ತದೆಯಾದ್ದರಿಂದ ಯಜ್ಞವು ವಾತೇಧಾ- ಎಂದು ಟೀಕೆ.
3. ಕ್ರಿಯಾನುಷ್ಠಾನವಿಲ್ಲದವನಿಗೆ

ಚಲಿಸುವವನಿಗೇ ಕಂಡಿದೆಯೇ ಹೊರತು, ಸ್ಥಿರನಾದವನಿಗೆ ಇಲ್ಲವಷ್ಟೆ[1] (ಯತ್= ಯಸ್ಮಾತ್) ಹೋಗುತ್ತಿರುವ ಇದು ಇದೆಲ್ಲವನ್ನೂ ಪವಿತ್ರಗೊಳಿಸುತ್ತದೆಯಲ್ಲ, ಆದ್ದರಿಂದ ಪವಿತ್ರಗೊಳಿಸುವ ಯಜ್ಞವು ಇದೇ.

ಯಜ್ಞದ ಮಾರ್ಗದ್ವಯ

(ಭಾಷ್ಯ)

೩೪೮. ತಸ್ಯಾಸ್ಯ ಏವಂವಿಶಿಷ್ಟಸ್ಯ ಯಜ್ಞಸ್ಯ ವಾಕ್ಚ ಮನ್ತ್ರೋಚ್ಚಾರಣೇ ವ್ಯಾಪೃತಾ , ಮನಶ್ಚ ಯಥಾಭೂತಾರ್ಥಜ್ಞಾನೇ ವ್ಯಾಪೃತಮ್ । ತೇ ಏತೇ ವಾಙ್ಮನಸೇ ವರ್ತನೀ ಮಾರ್ಗೌ । ಯಾಭ್ಯಾಂ ಯಜ್ಞಸ್ತಾಯಮಾನಃ ಪ್ರವರ್ತತೇ ವರ್ತನೀ । 'ಪ್ರಾಣಾಪಾನಪರಿಚಲನವತ್ಯಾ ಹಿ ವಾಚಶ್ಚಿತ್ತಸ್ಯ ಚೋತ್ತರೋತ್ತರಕ್ರಮೋ ಯದ್ಯಜ್ಞಃ'(ಐ. ಆ. ೨-೩)[2] ಇತಿ ಹಿ ಶ್ರುತ್ಯನ್ತರಮ್ । ಅತೋ ವಾಙ್ಮನಸಾಭ್ಯಾಂ ಯಜ್ಞೋ ವರ್ತತ ಇತಿ ವಾಙ್ಮನಸೇ ವರ್ತನೀ ಉಚ್ಯೇತೇ ಯಜ್ಞಸ್ಯ ॥

(ಭಾಷ್ಯಾರ್ಥ)

ಇಂಥ ವಿಶೇಷಣವುಳ್ಳ ಆ ಈ ಯಜ್ಞಕ್ಕೆ ಮಂತ್ರೋಚ್ಚಾರಣೆಯಲ್ಲಿ ಕೆಲಸ ಮಾಡುವ ವಾಕ್ಕು, ಇರತಕ್ಕ ಅರ್ಥವನ್ನು ಅರಿತುಕೊಳ್ಳುವದರಲ್ಲಿ ವ್ಯಾಪೃತವಾದ ಮನಸ್ಸು- ಎಂಬೀ ವಾಙ್ಮನಸ್ಸುಗಳು ವರ್ತನಿಗಳು, ಮಾರ್ಗಗಳು. ಮಾಡುವ ಯಜ್ಞವು ಯಾವ ಎರಡರಿಂದ ಸಾಗುವದೋ (ಆ) ವರ್ತನಿಗಳು. 'ಪ್ರಾಣಾಪಾನಸಂಚಾರವುಳ್ಳ[3] ವಾಕ್ಕಿನ ಮತ್ತು ಚಿತ್ತದ ಮುಂದುಮುಂದಿನ ಕ್ರಮವುಳ್ಳದ್ದೇ ಯಜ್ಞವೆಂಬುದು'(ಐ. ಆ. ೨-೩) ಎಂದಲ್ಲವೆ, ಮತ್ತೊಂದು ಶ್ರುತಿಯಲ್ಲಿದೆ ? ಆದ್ದರಿಂದ ವಾಙ್ಮನಸ್ಸುಗಳಿಂದ ಯಜ್ಞವು ಸಾಗುತ್ತದೆಯಾದ್ದರಿಂದ ವಾಙ್ಮನಸ್ಸುಗಳು ಯಜ್ಞಕ್ಕೆ ವರ್ತನಿಗಳು ಎಂದಿರುತ್ತದೆ.

(ಉಪನಿಷತ್ತು)

ತಯೋರನ್ಯತರಾಂ ಮನಸಾ ಸಗ್ಂಸ್ಕರೋತಿ ಬ್ರಹ್ಮಾ ವಾಚಾ

---

1. ಶುದ್ಧಿ ಎಂದರೆ ಇದ್ದ ದೋಷವು ಹೋಗುವದು ; ಇದ್ದಂತೆ ಇರುವ ವಸ್ತುವಿಗೆ ದೋಷ ಪರಿಹಾರವಿಲ್ಲ. 2. ಇದು ಶ್ರುತಿಯ ಅರ್ಥ. 'ಸ ಏಷ ವಾಚಶ್ಚಿತ್ತಸ್ಯೋತ್ತರೋತ್ತರಕ್ರಮೋ ಯದ್ಯಜ್ಞಃ' ಎಂದು ಐ. ಆ. ದ ಪಾಠ.
3. ಪ್ರಾಣಾಪಾನಗಳಲ್ಲಿಯೇ ಚಕ್ಷುಃಶ್ರೋತ್ರಮನೋವಾಕ್ಕುಗಳು ವಿಶಿಷ್ಟವಾಗಿವೆ ಎಂಬ ಐ. ಆ. ದ ಹಿಂದಿನ ವಾಕ್ಯದ ಅನುವಾದವಿದು.

ಹೋತಾऽಧ್ವರ್ಯುರುದ್ಗಾತಾऽನ್ಯತರಾಗ್ಂ ಸ ಯತ್ರೋಪಾಕೃತೇ ಪ್ರಾತರನುವಾಕೇ ಪುರಾ ಪರಿಧಾನೀಯಾಯಾ ಬ್ರಹ್ಮಾ ವ್ಯವವದತಿ ॥೨॥

ಅನ್ಯತರಾಮೇವ ವರ್ತನೀಗ್ಂ ಸಗ್ಂಸ್ಕರೋತಿ ಹೀಯತೇऽನ್ಯತರಾ ಸ ಯಥೈಕಪಾದ್ ವ್ರಜನ್ಪಥೋ ವೈಕೇನ ಚಕ್ರೇಣ ವರ್ತಮಾನೋ ರಿಷ್ಯತ್ಯೇವಮಸ್ಯ ಯಜ್ಞೋ ರಿಷ್ಯತಿ ಯಜ್ಞಗ್ಂ ರಿಷ್ಯನ್ತ್ಂ ಯಜಮಾನೋऽನುರಿಷ್ಯತಿ ಸ ಇಷ್ಟ್ವಾ ಪಾಪೀಯಾನ್ ಭವತಿ ॥೩॥

೨. ಅವುಗಳಲ್ಲಿ ಒಂದನ್ನು ಬ್ರಹ್ಮನು ಮನಸ್ಸಿನಿಂದ ಸಂಸ್ಕರಿಸುತ್ತಾನೆ. ಹೋತೃವೂ ಅಧ್ವರ್ಯುವೂ ಉದ್ಗಾತೃವೂ ಒಂದನ್ನು ವಾಕ್ಕಿನಿಂದ (ಸಂಸ್ಕರಿಸುತ್ತಾರೆ). ಬ್ರಹ್ಮನು ಪ್ರಾತರನುವಾಕವು ಉಪಾಕೃತವಾಗಿ ಪರಿಧಾನೀಯದ ಹಿಂದೆ ಯಾವಾಗ ಮಾತನಾಡುತ್ತಾನೋ -

೩. (ಆಗ) ಒಂದೇ ವರ್ತನಿಯನ್ನು ಸಂಸ್ಕರಿಸಿದರೆ ಇನ್ನೊಂದು ಹಾನಿಯಾಗುವದು. ಅದು ಹೇಗೆಂದರೆ (ಹೇಗೆ) ಒಂದು ಕಾಲಿನಲ್ಲಿ ಹೋಗುವವನು, ಅಥವಾ ಒಂದೇ ಚಕ್ರದಿಂದ ಸಾಗುವ ರಥವು, ಹೇಗೆ ರೇಷವಾಗುತ್ತದೆಯೋ (ಹಾಗೆ) ಯಜ್ಞವು ರೇಷವಾಗುತ್ತದೆ. ಯಜ್ಞವು ರೇಷವಾದರೆ ಯಜಮಾನನು ಹಿಂದೆಯೇ ರೇಷವಾಗುವನು. ಅವನು ಯಾಗವನ್ನು ಮಾಡಿದರೆ ಪಾಪೀಯಾಂಸನಾಗುವನು.

ಬ್ರಹ್ಮನು ಮೌನವಾಗಿರದಿದ್ದರೆ ದೋಷ

(ಭಾಷ್ಯ)

೩೪೯. ತಯೋರ್ವರ್ತನ್ಯೋರನ್ಯತರಾಂ ವರ್ತನೀಂ ಮನಸಾ ವಿವೇಕ ಜ್ಞಾನವತಾ ಸಂಸ್ಕರೋತಿ ಬ್ರಹ್ಮಾ ಋತ್ವಿಕ್ । ವಾಚಾ ವರ್ತನ್ಯಾ ಹೋತಾ , ಅಧ್ವರ್ಯುಃ, ಉದ್ಗಾತಾ ಇತ್ಯೇತೇ ತ್ರಯೋऽಪಿ ಋತ್ವಿಜೋऽನ್ಯತರಾಂ ವಾಗ್ಲಕ್ಷಣಾಂ ವರ್ತನೀಂ ವಾಚೈವ ಸಂಸ್ಕುರ್ವನ್ತಿ । ತತ್ರೈವಂ ಸತಿ ವಾಙ್ಮನಸೇ ವರ್ತನೀ ಸಂಸ್ಕಾರ್ಯೇ ಯಜ್ಞೇ । ಅಥ ಸ ಬ್ರಹ್ಮಾ ಯತ್ರ ಯಸ್ಮಿನ್ ಕಾಲೇ ಉಪಾಕೃತೇ ಪ್ರಾರಬ್ಧೇ ಪ್ರಾತರನುವಾಕೇ ಶಸ್ತ್ರೇ ಪುರಾ ಪೂರ್ವಂ ಪರಿಧಾನೀಯಾಯಾ ಋಚಃ ಬ್ರಹ್ಮಾ

ಏತಸ್ಮಿನ್ ಅನ್ತರೇ ಕಾಲೇ ವ್ಯವವದತಿ ಮೌನಂ ಪರಿತ್ಯಜತಿ ಯದಾ[1] ತದಾऽನ್ಯತರಾಮೇವ ವಾಗ್ವರ್ತನೀಂ ಸಂಸ್ಕರೋತಿ ಬ್ರಹ್ಮಣಾ ಅಸಂಸ್ಕ್ರಿಯಮಾಣಾ ಮನೋವರ್ತನೀ ಹೀಯತೇ ವಿನಶ್ಯತಿ ಛಿದ್ರೀಭವತಿ ಅನ್ಯತರಾ । ಸ ಯಜ್ಞಃ ವಾಗ್ವರ್ತನ್ಯೈವಾನ್ಯತರಯಾ ವರ್ತಿತುಮಶಕ್ನುವನ್ ರಿಷ್ಯತಿ । ಕಥಮಿವೇತಿ ? ಆಹ । ಸ ಯಥಾ ಏಕಪಾತ್ ಪುರುಷೋ ವ್ರಜನ್ ಗಚ್ಛನ್ನಧ್ವಾನಂ ರಿಷ್ಯತಿ ರಥೋ ವಾ ಏಕೇನ ಚಕ್ರೇಣ ವರ್ತಮಾನೋ ಗಚ್ಛನ್ ರಿಷ್ಯತಿ ಏವಮಸ್ಯ ಯಜಮಾನಸ್ಯ ಕುಬ್ರಹ್ಮಣಾ ಯಜ್ಞೋ ರಿಷ್ಯತಿ ವಿನಶ್ಯತಿ । ಯಜ್ಞಂ ರಿಷ್ಯನ್ತಂ ಯಜಮಾನೋऽನುರಿಷ್ಯತಿ । ಯಜ್ಞಪ್ರಾಣೋ ಹಿ ಯಜಮಾನಃ । ಅತೋ ಯುಕ್ತೋ ಯಜ್ಞರೇಷೇ ರೇಷಸ್ತಸ್ಯ । ಸ ತಂ ಯಜ್ಞಮಿಷ್ಟ್ವಾತಾದೃಶಂ ಪಾಪೀಯನ್ ಪಾಪತರೋ ಭವತಿ ॥

(ಭಾಷ್ಯಾರ್ಥ)

ಆ ವರ್ತನಿಗಳೊಳಗೆ ಒಂದು ವರ್ತನಿಯನ್ನು ವಿವೇಕಜ್ಞಾನವುಳ್ಳ ಮನಸ್ಸಿನಿಂದ ಬ್ರಹ್ಮನೆಂಬ ಋತ್ವಿಜನು ಸಂಸ್ಕಾರಮಾಡುತ್ತಾನೆ. ವಾಕ್ಕೆಂಬ ವರ್ತನಿಯಿಂದ ಹೋತೃ, ಅಧ್ವರ್ಯು, ಉದ್ಗಾತೃ- ಎಂಬೀ ಮೂವರೂ ಋತ್ವಿಜರು ವಾಕ್ಕೆಂಬ ವರ್ತನಿಯನ್ನು ವಾಕ್ಕಿನಿಂದಲೇ ಸಂಸ್ಕಾರಮಾಡುವರು. ಇದು ಹೀಗಿರುವಲ್ಲಿ ವಾಜ್ಯನಸ್ಸುಗಳೆಂಬ ವರ್ತನಿಗಳನ್ನು ಯಜ್ಞದಲ್ಲಿ ಸಂಸ್ಕಾರಮಾಡಬೇಕು.

ಇನ್ನು ಆ ಬ್ರಹ್ಮನು ಪ್ರಾತರನುವಾಕದ ಶಸ್ತ್ರವು ಉಪಾಕೃತವಾಗಿ ಪ್ರಾರಂಭವಾಗಿ ಪರಿಧಾನೀಯದ ಋಕ್ಕನ್ನು (ಹೇಳುವದಕ್ಕಿಂತ) ಮೊದಲು[2] (ಆಗ) ಈ ನಡುವಿನ ಕಾಲದಲ್ಲಿ ಬ್ರಹ್ಮನು ಮಾತನಾಡುತ್ತಾನಾದರೆ, ಮೌನವನ್ನು ಬಿಡುತ್ತಾನಾದರೆ, ಯಾವಾಗ ಯಾವ ಕಾಲದಲ್ಲಿ ಮೌನವನ್ನು ಬಿಡುತ್ತಾನೋ (ಮಾತನಾಡುತ್ತಾನೋ) ಆಗ (ಅವೆರಡರಲ್ಲಿ) ಒಂದೇ ಆದ ವಾಕ್ಕೆಂಬ ವರ್ತನಿಯನ್ನು (ಯಜಮಾನನು) ಸಂಸ್ಕಾರಮಾಡುತ್ತಾನೆ. ಬ್ರಹ್ಮನಿಂದ ಸಂಸ್ಕಾರವಾಗಬೇಕಾಗಿದ್ದ ಅವುಗಳಲ್ಲೊಂದಾದ ಮನೋವರ್ತನಿಯ ಹಾನಿಯಾಗುವದು, ವಿನಾಶವಾಗುವದು, ಕೊರತೆಯುಳ್ಳ ದ್ದಾಗುವದು. ಆ ಯಜ್ಞವು ಒಂದೇಒಂದಾದ ವಾಗ್ವರ್ತನಿಯಿಂದಲೇ ಸಾಗುವದಕ್ಕೆ

1. ಇದು ಯದಾ ಎಂದೇ ಇರಬೇಕೆಂದೂ 'ಯತ್ರ' ಎಂಬುದರ ಅರ್ಥವೇ ಎಂದೂ ಇಟ್ಟುಕೊಂಡಿದೇವೆ ; ಆದ್ದರಿಂದ ಇದನ್ನು ಅನುವಾದಮಾಡಿಲ್ಲ.
2. ಇದು ಶಸ್ತ್ರದ ಕೊನೆಯನ್ನು ಸೂಚಿಸುವ ಕಾಲ. ಪ್ರಾತರನುವಾಕದ ಶಸ್ತ್ರವನ್ನು ಆರಂಭಿಸಿ ಮುಗಿಸುವದಕ್ಕಿಂತ ನಡುವಿನ ಕಾಲದಲ್ಲಿ ಬ್ರಹ್ಮನು ಮೌನವಾಗಿರಬೇಕು. ಪರಿಧಾನೀಯ ಋಕ್ಕುಗಳ ವಿಷಯಕ್ಕೆ ಐ. ಬ್ರಾ. ೨೭-೪ನ್ನು ನೋಡಿ.

ಶಕ್ತಿಯಿಲ್ಲದೆ ನಾಶವಾಗುತ್ತದೆ. ಏತರಂತೆ ?- ಎಂದರೆ (ಶ್ರುತಿ) ಹೇಳುತ್ತದೆ. ಅದು ಹೇಗೆಂದರೆ (ಹೇಗೆ) ಒಂದೇ ಕಾಲಿನಲ್ಲಿ ಹೋಗುವವನು ದಾರಿಯನ್ನು ನಡೆಯುವವನು, ಅಥವಾ ಒಂದೇ ಗಾಲಿಯಿಂದ ಸಾಗುವ ಗಾಡಿಯು, ಹೇಗೆ ನಾಶವಾಗುವದೋ, ಹಾಗೆಯೇ ಈ ಯಜಮಾನನ ಯಜ್ಞವು ಕೀಳುಬ್ರಹ್ಮನಿಂದ (ರಿಷ್ಯತಿ= ವಿನಶ್ಯತಿ) ರೇಷವಾಗುವದು, ಹಾಳಾಗುವದು. ಯಜ್ಞವು ರೇಷವಾದರೆ ಯಜಮಾನನು ಹಿಂದೆಯೇ ರೇಷವಾಗುವನು ; ಯಜಮಾನನಿಗೆ ಯಜ್ಞವೇ ಪ್ರಾಣವಷ್ಟೆ ? ಆದ್ದರಿಂದ ಯಜ್ಞವು ರೇಷವಾದರೆ ಅವನಿಗೂ ರೇಷವಾಗುವದು ಯುಕ್ತ. ಅವನು ಆ ಯಜ್ಞವನ್ನು ಮಾಡಿ ಹಾಗೆ ಪಾಪೀಯಾಂಸನು, ಬಹಳ ಪಾಪಿಯು ಆಗುವನು.[1]

(ಉಪನಿಷತ್ತು)

ಅಥ ಯತ್ರೋಪಾಕೃತೇ ಪ್ರಾತರನುವಾಕೇ ನ ಪುರಾ ಪರಿಧಾನೀಯಾಯಾ ಬ್ರಹ್ಮಾ ವ್ಯವವದತ್ಯುಭೇ ಏವ ವರ್ತನೀ ಸಗ್ಂಸ್ಕುರ್ವನ್ತಿ ನ ಹೀಯತೇಽನ್ಯತರಾ ॥೪॥

ಸ ಯಥೋಭಯಪಾದ್ಯಜನ್ರಥೋ ವೋಭಾಭ್ಯಾಂ ಚಕ್ರಾಭ್ಯಾಂ ವರ್ತಮಾನಃ ಪ್ರತಿತಿಷ್ಠತ್ಯೇವಮಸ್ಯ ಯಜ್ಞಃ ಪ್ರತಿತಿಷ್ಠತಿ ಯಜ್ಞಂ ಪ್ರತಿತಿಷ್ಠನ್ತಂ ಯಜಮಾನೋಽನುಪ್ರತಿತಿಷ್ಠತಿ ಸ ಇಷ್ಟಾ ಶ್ರೇಯಾನ್ ಭವತಿ ॥೫॥

೪. ಇನ್ನು ಆ ಬ್ರಹ್ಮನು ಯಾವಾಗ ಪ್ರಾತರನುವಾಕವು ಪ್ರಾರಂಭವಾಗಿ ಪರಿಧಾನೀಯದ ಮುಂಚೆ ಯಾವಾಗ ಮಾತನಾಡುವದಿಲ್ಲವೋ ಎರಡು ವರ್ತನಿಗಳನ್ನೂ ಸಂಸ್ಕಾರಮಾಡಿದವರಾಗುತ್ತಾರೆ. ಅವುಗಳಲ್ಲಿ ಯಾವದೊಂದೂ ಹಾನಿಯಾಗುವದಿಲ್ಲವೋ.

೫. ಅದು ಹೇಗೆಂದರೆ (ಹೇಗೆ) ಎರಡು ಕಾಲಿನವನು ಹೋಗುವವನು (ಪ್ರತಿಷ್ಠಿತನಾಗಿರುವವನೋ) ಅಥವಾ ಎರಡು ಚಕ್ರಗಳಿಂದ ಸಾಗುತ್ತಿರುವ ರಥವು ಪ್ರತಿಷ್ಠಿತವಾಗಿರುವದೋ, ಹಾಗೆಯೇ ಇವನ ಯಜ್ಞವು ಪ್ರತಿಷ್ಠಿತ

1. ವಾಗ್ವರ್ತನಿಯ ಸಂಸ್ಕಾರವಿಲ್ಲದಿದ್ದರೂ ಹೀಗೆಯೇ ದೋಷವೆಂದು ತಿಳಿಯಬೇಕು- ಎಂದು ಟೀಕೆ.

ವಾಗಿರುವದು, ಯಜ್ಞವು ಪ್ರತಿಷ್ಠಿತವಾದರೆ ಯಜಮಾನನೂ ಹಿಂದೆಯೇ ಪ್ರತಿಷ್ಠಿತನಾಗಿರುವನು. ಅವನು ಯಾಗಮಾಡಿದರೆ ಶ್ರೇಯಾಂಸನಾಗುವನು.

ಬ್ರಹ್ಮನು ಮೌನದಿಂದಿದ್ದರೆ ಗುಣ

(ಭಾಷ್ಯ)

೩೫೦. ಅಥ ಪುನಃ ಯತ್ರ ಬ್ರಹ್ಮಾ ವಿದ್ವಾನ್ ಮೌನಂ ಪರಿಗೃಹ್ಯ ವಾಗ್ವಿಸರ್ಗಮ್ ಅಕುರ್ವನ್ ವರ್ತತೇ ಯಾವತ್ ಪರಿಧಾನೀಯಾಯಾ ನ ವ್ಯವವದತಿ ತಥೈವ ಸರ್ವರ್ತ್ವಿಜಃ , ಉಭೇ ಏವ ವರ್ತನೀ ಸಂಸ್ಕುರ್ವನ್ತಿ ನ ಹೀಯತೇ ಅನ್ಯತರಾಪಿ । ಕಿಮಿವೇತಿ ? ಆಹ । ಪೂರ್ವೋಕ್ತವಿಪರೀತೌ ದೃಷ್ಟಾನ್ತೌ । ಏವಮಸ್ಯ ಯಜಮಾನಸ್ಯ ಯಜ್ಞಃ ಸ್ವವರ್ತನೀಭ್ಯಾಂ ವರ್ತಮಾನಃ ಪ್ರತಿತಿಷ್ಠತಿ ಸ್ವೇನಾऽऽತ್ಮನಾ ಅವಿನಶ್ಯನ್ ವರ್ತತ ಇತ್ಯರ್ಥಃ । ಯಜ್ಞಂ ಪ್ರತಿತಿಷ್ಠನ್ತಂ ಯಜಮಾನೋऽನುಪ್ರತಿತಿಷ್ಠತಿ । ಸ ಯಜಮಾನ ಏವಂ ಮೌನವಿಜ್ಞಾನವದ್ಬ್ರಹ್ಮೋಪೇತಂ ಯಜ್ಞಮ್ ಇಷ್ಟ್ವಾ ಶ್ರೇಯಾನ್ ಭವತಿ ಶ್ರೇಷ್ಠೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಇನ್ನು ಇದಕ್ಕೆ ಬದಲು ಯಾವಾಗ ಬಲ್ಲವನಾದ ಬ್ರಹ್ಮನು ಮೌನವನ್ನು ಸ್ವೀಕರಿಸಿ ಮಾತನಾಡದೆಯೆ ಇರುವನೋ ಪರಿಧಾನೀಯವು (ಮುಗಿಯುವ)ವರೆಗೂ ಮಾತಿಲ್ಲದೆ (ಸುಮ್ಮ)ನಿರುವನೋ, (ಮತ್ತು) ಹಾಗೆಯೇ ಎಲ್ಲಾ ಋತ್ವಿಜರೂ (ಸರಿಯಾಗಿ ತಮ್ಮ ಕೆಲಸವನ್ನು ಮಾಡುತ್ತಿರುವರೋ, ಆಗ) ಎರಡೂ ವರ್ತನಿಗಳನ್ನೂ ಸಂಸ್ಕರಿಸಿದವರಾಗುವರು, (ಅವೆರಡರಲ್ಲಿ) ಒಂದೂ ಹಾನಿಯಾಗುವದಿಲ್ಲ. ಏತರಂತೆ ? ಎಂದರೆ (ಶ್ರುತಿ) ಹೇಳುತ್ತದೆ : ಇಲ್ಲಿ ದೃಷ್ಟಾಂತಗಳು ಹಿಂದೆ ಹೇಳಿದ್ದಕ್ಕೆ ವಿಪರೀತವಾಗಿರುತ್ತವೆ.

ಈ (ದೃಷ್ಟಾಂತ)ಗಳಂತೆಯೇ ಈ ಯಜಮಾನನ ಯಜ್ಞವು ತನ್ನ ವರ್ತನಿಗಳಿಂದ ಸಾಗುವದಾಗಿ ಪ್ರತಿಷ್ಠಿತವಾಗಿರುತ್ತದೆ. ವಿನಾಶವಾಗದೆ ತನ್ನ ರೂಪದಿಂದಲೇ ಸಾಗುತ್ತದೆ ಎಂದರ್ಥ. ಯಜ್ಞವು ಪ್ರತಿಷ್ಠಿತವಾಗಿದ್ದರೆ ಯಜಮಾನನೂ ಹಿಂದೆಯೇ ಪ್ರತಿಷ್ಠಿತನಾಗಿರುವನು. ಆ ಯಜಮಾನನು ಈ ಮೌನವಿಜ್ಞಾನವನ್ನು ಬಲ್ಲ ಬ್ರಹ್ಮನೊಡಗೂಡಿದ ಯಜ್ಞವನ್ನು ಮಾಡಿದ್ದರಿಂದ ಶ್ರೇಯಾಂಸನಾಗುವನು , ಶ್ರೇಷ್ಠನಾಗುತ್ತಾನೆ ಎಂದರ್ಥ.

ನಾಲ್ಕನೆಯ ಅಧ್ಯಾಯ - ಹದಿನೇಳನೆಯ ಖಂಡ

(ಪ್ರಾಸಂಗಿಕವಾಗಿ ಯಜ್ಞಧರ್ಮಗಳು)

ವ್ಯಾಹೃತಿಗಳ ಉತ್ಪತ್ತಿ

(ಉಪನಿಷತ್ತು)

ಪ್ರಜಾಪತಿರ್ಲೋಕಾನಭ್ಯತಪತ್ತೇಷಾಂ ತಪ್ಯಮಾನಾನಾಗ್ಂ ರಸಾನ್ ಪ್ರಾವೃಹದಗ್ನಿಂ ಪೃಥಿವ್ಯಾ ವಾಯುಮನ್ತರಿಕ್ಷಾದಾದಿತ್ಯಂ ದಿವಃ ॥೧॥

ಸ ಏತಾಸ್ತಿಸ್ರೋ ದೇವತಾ ಅಭ್ಯತಪತ್ತಾಸಾಂ ತಪ್ಯಮಾನಾನಾಗ್ಂ ರಸಾನ್ ಪ್ರಾವೃಹದಗ್ನೇರ್ಋಚೋ ವಾಯೋರ್ಯಜೂಗ್ಂಷಿ ಸಾಮಾನ್ಯಾದಿತ್ಯಾತ್ ॥೨॥

ಸ ಏತಾಂ ತ್ರಯೀಂ ವಿದ್ಯಾಮಭ್ಯತಪತ್ತಸ್ಯಾಸ್ತಪ್ಯಮಾನಾಯಾ ರಸಾನ್ ಪ್ರಾವೃಹದ್ಭೂರಿತ್ಯೃಗ್ಭ್ಯೋ ಭುವರಿತಿ ಯಜುರ್ಭ್ಯಃ ಸ್ವರಿತಿ ಸಾಮಭ್ಯಃ ॥೩॥

೧. ಪ್ರಜಾಪತಿಯು ಲೋಕಗಳನ್ನು ಕುರಿತು ತಪಸ್ಸುಮಾಡಿದನು, ತಪ್ಯಮಾನವಾದ ಅವುಗಳಿಂದ - ಪೃಥಿವಿಯಿಂದ ಅಗ್ನಿ, ಅಂತರಿಕ್ಷದಿಂದ ವಾಯು, ದ್ಯುಲೋಕದಿಂದ ಆದಿತ್ಯ - (ಹೀಗೆ ಈ) ರಸಗಳನ್ನು ಈಚೆಗೆ ತೆಗೆದನು.

೨. ಅವನು ಈ ಮೂರು ದೇವತೆಗಳನ್ನು ಕುರಿತು ತಪಸ್ಸುಮಾಡಿದನು. ತಪ್ಯಮಾನವಾದ ಅವುಗಳಿಂದ - ಅಗ್ನಿಯಿಂದ ಋಕ್ಕುಗಳನ್ನು, ವಾಯುವಿನಿಂದ ಯಜುಸ್ಸುಗಳನ್ನು ಆದಿತ್ಯನಿಂದ ಸಾಮಗಳನ್ನು - (ಹೀಗೆ ಈ) ರಸಗಳನ್ನು ಈಚೆಗೆ ತೆಗೆದನು.

೩. ಅವನು ಈ ತ್ರಯೀವಿದ್ಯೆಯನ್ನು ಕುರಿತು ತಪಸ್ಸುಮಾಡಿದನು. ತಪ್ಯಮಾನವಾದ ಅದರಿಂದ - ಋಕ್ಕುಗಳಿಂದ ಭೂಃ ಎಂಬುದು, ಯಜುಸ್ಸುಗಳಿಂದ ಭುವಃ ಎಂಬುದು, ಸಾಮಗಳಿಂದ ಸ್ವಃ ಎಂಬುದು - (ಹೀಗೆ ಈ) ರಸಗಳನ್ನು ಈಚೆಗೆ ತೆಗೆದನು.

ಗ್ರಂಥದ ಸಂಬಂಧ

೩.೫೧. ಅತ್ರ ಬ್ರಹ್ಮಣೋ ಮೌನಂ ವಿಹಿತಮ್ । ಅಥ[1] ತದ್ರೇಷೇ ಬ್ರಹ್ಮತ್ವಕರ್ಮಣಿ ಚ ಅಥಾನ್ಯಸ್ಮಿಂಶ್ಚ ಹೌತ್ರಾದಿಕರ್ಮರೇಷೇ ವ್ಯಾಹೃತಿಹೋಮಃ ಪ್ರಾಯಶ್ಚಿತ್ತಮಿತಿ ತದರ್ಥಂ ವ್ಯಾಹೃತಯೋ ವಿಧಾತವ್ಯಾ ಇತ್ಯಾಹ ॥

(ಭಾಷ್ಯಾರ್ಥ)

ಇಲ್ಲಿ ಬ್ರಹ್ಮನಿಗೆ ಮೌನವನ್ನು ವಿಧಿಸಲಾಯಿತು. ಇನ್ನು ಬ್ರಹ್ಮತ್ವಕರ್ಮದಲ್ಲಿ ಅದು ತಪ್ಪಿಹೋದರೆ, ಮತ್ತು ಬೇರೆಯ ಹೋತೃವೇ ಮುಂತಾದವರ ಕರ್ಮಗಳು ತಪ್ಪಿದರೆ ವ್ಯಾಹೃತಿಹೋಮವು ಪ್ರಾಯಶ್ಚಿತ್ತವಾದ್ದರಿಂದ ಅದಕ್ಕಾಗಿ ವ್ಯಾಹೃತಿಗಳನ್ನು ವಿಧಿಸಬೇಕೆಂದು (ಶ್ರುತಿ ಹೀಗೆಂದು) ಹೇಳುತ್ತಿದೆ.

ಲೋಕಾದಿಗಳಲ್ಲಿ ಸಾರತಮವಾದವು ವ್ಯಾಹೃತಿಗಳು

(ಭಾಷ್ಯ)

೩.೫೧. ಪ್ರಜಾಪತಿರ್ಲೋಕಾನ್ ಅಭ್ಯತಪತ್ । ಲೋಕಾನುದ್ದಿಶ್ಯ ತತ್ರ ಸಾರಜಿಘೃಕ್ಷಯಾ ಧ್ಯಾನಲಕ್ಷಣಂ ತಪಶ್ಚಚಾರ । ತೇಷಾಂ ತಪ್ಯಮಾನಾನಾಂ ಲೋಕಾನಾಂ ರಸಾನ್ ಸಾರರೂಪಾನ್ ಪ್ರಾವೃಹತ್ ಉದ್ಧೃತವಾನ್ । ಜಗ್ರಾಹ ಇತ್ಯರ್ಥಃ । ಕಾನ್ ? ಅಗ್ನಿಂ ರಸಂ ಪೃಥಿವ್ಯಾಃ । ವಾಯುಮನ್ತರಿಕ್ಷಾತ್ ಆದಿತ್ಯಂ ದಿವಃ । ಪುನರಪ್ಯೇವಮೇವ[2] ಅಗ್ನ್ಯಾದ್ಯಾಃ ಸ ಏತಾಸ್ತಿಸ್ರೋ ದೇವತಾ ಉದ್ದಿಶ್ಯ ಅಭ್ಯತಪತ್ । ತತೋಽಪಿ ಸಾರಂ ರಸಂ ತ್ರಯ್ಯಾಂ[3] ವಿದ್ಯಾಂ ಜಗ್ರಾಹ । ಸ ಏತಾಂ ಪುನರಭ್ಯತಪತ್ ತ್ರಯ್ಯಾಂ ವಿದ್ಯಾಮ್ । ತಸ್ಯಾಸ್ತಪ್ಯಮಾನಾಯಾಃ ರಸಂ ಭೂರಿತಿ ವ್ಯಾಹೃತಿಂ ಋಗ್ಭ್ಯೋ ಜಗ್ರಾಹ । ಭುವರಿತಿ ವ್ಯಾಹೃತಿಂ ಯಜುರ್ಭ್ಯಃ । ಸ್ವರಿತಿ ವ್ಯಾಹೃತಿಂ ಸಾಮಭ್ಯಃ । ಅತ ಏವ ಲೋಕದೇವವೇದರಸಾ ಮಹಾವ್ಯಾಹೃತಯಃ ॥

(ಭಾಷ್ಯಾರ್ಥ)

ಪ್ರಜಾಪತಿಯು ಲೋಕಗಳನ್ನು ಅಭಿತಪಿಸಿದನು, ಲೋಕಗಳನ್ನು ಕುರಿತು

---

1. 'ಅಥ' ಇರುವ ಪಾಠವೇ ಮೇಲು.
2. 'ಏವಮೇವಮ್' ಎಂಬುದಕ್ಕಿಂತ ಈ ಮಾ॥ ಪಾಠವೇ ಮೇಲು.
3. ಮೂಲಕ್ಕನುಗುಣವಾಗಿ 'ತ್ರಯ್ಯಾ ವಿದ್ಯಾಂ' ಎಂಬುದಕ್ಕೆ ಬದಲು ಈ ಪಾಠವನ್ನೇ ಹಿಡಿದಿದೆ.

ಅವುಗಳಲ್ಲಿ ಸಾರವನ್ನು ಗ್ರಹಿಸುವ ಇಚ್ಛೆಯಿಂದ ಧ್ಯಾನರೂಪವಾದ ತಪಸ್ಸನ್ನು ಮಾಡಿದನು. ತಪ್ಯಮಾನವಾದ ಆ ಲೋಕಗಳ ರಸಗಳನ್ನು ಸಾರರೂಪವಾದವುಗಳನ್ನು ಈಚೆಗೆ ತೆಗೆದನು, ಎತ್ತಿಕೊಂಡನು, ಸ್ವೀಕರಿಸಿದನು ಎಂದರ್ಥ. ಯಾವ (ರಸಗಳನ್ನು) ? ಎಂದರೆ, ಪೃಥಿವಿಯಿಂದ ಅಗ್ನಿ ಎಂಬ ರಸವನ್ನು, ಅಂತರಿಕ್ಷದಿಂದ ವಾಯುವನ್ನು, ದ್ಯುಲೋಕದಿಂದ ಆದಿತ್ಯನನ್ನು (ತೆಗೆದುಕೊಂಡನು). ಮತ್ತು ಹೀಗೆಯೇ ಈ ಅಗ್ನಿಯೇ ಮೊದಲಾದ ಮೂವರು ದೇವತೆಗಳನ್ನು ಕುರಿತು ತಪಸ್ಸುಮಾಡಿದನು. ಅವುಗಳಿಂದಲೂ ಸಾರವಾದ ತ್ರಯೀವಿದ್ಯೆ ಎಂಬ ರಸವನ್ನು ಸ್ವೀಕರಿಸಿದನು.

ಅವನು ಈ (ತ್ರಯೀವಿದ್ಯೆಯನ್ನು) ಕುರಿತು ಮತ್ತೆ ತಪಿಸಿದನು. ಆ ತಪ್ಯಮಾನವಾದ (ವಿದ್ಯೆ)ಯಿಂದ ಭೂಃ ಎಂಬ ವ್ಯಾಹೃತಿರೂಪವಾದ ರಸವನ್ನು ಋಕ್ಕುಗಳಿಂದ ತೆಗೆದುಕೊಂಡನು, ಭುವಃ ಎಂಬ ವ್ಯಾಹೃತಿಯನ್ನು ಯಜುಸ್ಸುಗಳಿಂದ (ತೆಗೆದುಕೊಂಡನು), ಸ್ವಃ ಎಂಬ ವ್ಯಾಹೃತಿಯನ್ನು ಸಾಮಗಳಿಂದ (ತೆಗೆದುಕೊಂಡನು). ಆದ್ದರಿಂದಲೇ (ಈ) ಮಹಾವ್ಯಾಹೃತಿಗಳು ಲೋಕದೇವವೇದಗಳ ರಸಗಳು.

ವ್ಯಾಹೃತಿಗಳಿಂದ ಹೋಮಮಾಡುವ ಪ್ರಾಯಶ್ಚಿತ್ತ

(ಉಪನಿಷತ್ತು)

ತದ್ಯದ್ಯೃಕ್ತೋ[1] ರಿಷ್ಯೇದ್ಭೂಃ ಸ್ವಾಹೇತಿ ಗಾರ್ಹಪತ್ಯೇ ಜುಹುಯಾದೃಚಾಮೇವ ತದ್ರಸೇನರ್ಚಾಂ ವೀರ್ಯೇಣರ್ಚಾಂ ಯಜ್ಞಸ್ಯ ವಿರಿಷ್ಟಗ್ಂ ಸಂದಧಾತಿ ॥೪॥

ಅಥ ಯದಿ ಯಜುಷ್ಟೋ ರಿಷ್ಯೇದ್ಭುವಃ ಸ್ವಾಹೇತಿ ದಕ್ಷಿಣಾಗ್ನೌ ಜುಹುಯಾದ್ಯಜುಷಾಮೇವ ತದ್ರಸೇನ ಯಜುಷಾಂ ವೀರ್ಯೇಣ ಯಜುಷಾಂ ಯಜ್ಞಸ್ಯ ವಿರಿಷ್ಟಗ್ಂ ಸಂದಧಾತಿ ॥೫॥

ಅಥ ಯದಿ ಸಾಮತೋ ರಿಷ್ಯೇತ್ ಸ್ವಃ ಸ್ವಾಹೇತ್ಯಾಹವನೀಯೇ ಜುಹುಯಾತ್ ಸಾಮ್ನಾಮೇವ ತದ್ರಸೇನ ಸಾಮ್ನಾಂ ವೀರ್ಯೇಣ ಸಾಮ್ನಾಂ ಯಜ್ಞಸ್ಯ ವಿರಿಷ್ಟಗ್ಂ ಸಂದಧಾತಿ ॥೬॥

೪. ಅಲ್ಲಿ ಋಕ್ಕಿನಿಂದ ರೇಷವಾದರೆ 'ಭೂಃ ಸ್ವಾಹಾ !'ಎಂದು ಗಾರ್ಹ

1. 'ಯದ್ಯೃಕ್ತೋ'ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ. ಭಾಷ್ಯದ ಟಿಪ್ಪಣಿಯನ್ನು ನೋಡಿ.

ಪತ್ಯದಲ್ಲಿ ಹೋಮಮಾಡಬೇಕು, ಹಾಗೆ ಋಕ್ಕುಗಳ ಯಜ್ಞದ ವಿರಿಷ್ಟವನ್ನು ಋಕ್ಕುಗಳ ರಸದಿಂದಲೇ ಋಕ್ಕುಗಳ ವೀರ್ಯದಿಂದಲೇ ಬೆಸಗೆಮಾಡಿದವ ನಾಗುತ್ತಾನೆ.

೫. ಇನ್ನು ಯಜುಸ್ಸಿನಿಂದ ರೇಷವಾದರೆ 'ಭುವಃ ಸ್ವಾಹಾ !'ಎಂದು ದಕ್ಷಿಣಾಗ್ನಿಯಲ್ಲಿ ಹೋಮಮಾಡಬೇಕು. ಯಜುಸ್ಸುಗಳ ಯಜ್ಞದ ವಿರಿಷ್ಟವನ್ನು ಯಜುಸ್ಸುಗಳ ರಸದಿಂದಲೇ ಯಜುಸ್ಸುಗಳ ವೀರ್ಯದಿಂದಲೇ ಬೆಸಗೆಮಾಡಿದವನಾಗುತ್ತಾನೆ.

೬. ಇನ್ನು ಸಾಮದಿಂದ ರೇಷವಾದರೆ 'ಸ್ವಃ ಸ್ವಾಹಾ !'ಎಂದು ಆಹವನೀಯದಲ್ಲಿ ಹೋಮಮಾಡಬೇಕು. ಸಾಮಗಳ ಯಜ್ಞದ ವಿರಿಷ್ಟವನ್ನು ಸಾಮಗಳ ರಸದಿಂದಲೇ ಸಾಮಗಳ ವೀರ್ಯದಿಂದಲೇ ಬೆಸಗೆಮಾಡಿದವ ನಾಗುತ್ತಾನೆ.

ವ್ಯಾಹೃತಿಗಳನ್ನು ಪ್ರಾಯಶ್ಚಿತ್ತಕ್ಕೆ ವಿನಿಯೋಗಿಸುವ ಕ್ರಮ

(ಭಾಷ್ಯ)

೩೫೨. ಅತಃ ತತ್ ತತ್ರ ಯಜ್ಞೇ ಯದಿ[1] ಋಕ್ತಃ ಋಕ್ಸಂಬನ್ಧಾತ್ ಋಜ್ವಮಿತ್ತಂ ರಿಷ್ಯೇದ್ ಯಜ್ಞಃ ಕ್ಷತಂ ಪ್ರಾಪ್ನುಯಾತ್ ಭೂಃ ಸ್ವಾಹಾ ! ಇತಿ ಗಾರ್ಹಪತ್ಯೇ ಜುಹುಯಾತ್ । ಸಾ ತತ್ರ ಪ್ರಾಯಶ್ಚಿತ್ತಿಃ । ಕಥಮ್ ? ಋಚಾಮೇವ ತದಿತಿ ಕ್ರಿಯಾವಿಶೇಷಣಮ್ । ರಸೇನ ಋಚಾಂ ವೀರ್ಯೇಣ ಓಜಸಾ ಋಚಾಂ ಯಜ್ಞಸ್ಯ ಋಕ್ಸಂಬನ್ಧಿನೋ ಯಜ್ಞಸ್ಯ ವಿರಿಷ್ಟಂ ವಿಚ್ಛಿನ್ನಂ ಕ್ಷತರೂಪಮುತ್ಪನ್ನಂ ಸಂದಧಾತಿ ಪ್ರತಿಸಂಧತ್ತೇ ॥ ಅಥ ಯದಿ ಯಜುಷ್ಟೋ ಯಜುರ್ಮಿತ್ತಂ ರಿಷ್ಯೇತ್, ಭುವಃ ಸ್ವಾಹಾ ! ಇತಿ ದಕ್ಷಿಣಾಗ್ನೌ ಜುಹುಯಾತ್ । ತಥಾ ಸಾಮನಿಮಿತ್ತೇ ರೇಷೇ ಸ್ವಃ ಸ್ವಾಹಾ ! ಇತಿ ಆಹವನೀಯೇ ಜುಹುಯಾತ್ । ತಥಾ ಪೂರ್ವವದ್ ಯಜ್ಞಂ ಸಂದಧಾತಿ । ಬ್ರಹ್ಮನಿಮಿತ್ತೇ ತು ರೇಷೇ ತ್ರಿಷು ಅಗ್ನಿಷು ತಿಸೃಭಿರ್ವ್ಯಾಹೃತಿಭಿಃ ಜುಹುಯಾತ್ । ತ್ರಯ್ಯಾ ಹಿ ವಿದ್ಯಾಯಾ ಸ ರೇಷಃ । ''ಅಥ ಕೇನ ಬ್ರಹ್ಮತ್ವಮಿತ್ಯನಯೈವ ತ್ರಯ್ಯಾ

1. ಇಲ್ಲಿ 'ಯತ್ ಯದಿ' ಎಂದು ಪ್ರತೀಕಗ್ರಹಣಪೂರ್ವಕವಾಗಿ ವ್ಯಾಖ್ಯಾನಮಾಡಿಲ್ಲ ವಾದ್ದರಿಂದ 'ಯದ್ಯೃಕ್ತಃ' ಎಂದು ಉಪನಿಷನ್ಮೂಲವೂ ಇತ್ತೆಂದು ಊಹಿಸುವದಕ್ಕೆಡೆಯಿದೆ. ತೆ॥ ಪಾಠದಲ್ಲಿ ಹಾಗೆಯೇ ಇದೆ.

ವಿದ್ಯಯಾ''[1] (?) ಇತಿ ಶ್ರುತೇಃ । ನ್ಯಾಯಾನ್ತರಂ ವಾ ಮೃಗ್ಯಂ ಬ್ರಹ್ಮತ್ವನಿಮಿತ್ತೇ ರೇಷೇ ॥

(ಭಾಷ್ಯಾರ್ಥ)

ಆದ್ದರಿಂದ (ತತ್ = ತತ್ರ) ಆ ಯಜ್ಞದಲ್ಲಿ ಋಕ್ಕಿನಿಂದ ಋಕ್ಸಂಬಂಧದಿಂದ ಋಕ್ಕಿನ ನಿಮಿತ್ತವಾಗಿ ರೇಷವಾದರೆ, ಯಜ್ಞವು ಕೊರತೆಯನ್ನು ಪಡೆದರೆ, 'ಭೂಃ ಸ್ವಾಹಾ !'ಎಂದು ಗಾರ್ಹಪತ್ಯದಲ್ಲಿ ಹೋಮಮಾಡಬೇಕು. ಅದೇ ಅದರ ವಿಷಯದಲ್ಲಿ ಪ್ರಾಯಶ್ಚಿತ್ತವು. ಹೇಗೆಂದರೆ, 'ತತ್' (ಹಾಗೆ ಮಾಡಿದರೆ) ಎಂಬುದು ಕ್ರಿಯಾ ವಿಶೇಷಣವು ; ಋಕ್ಕುಗಳ ರಸದಿಂದಲೇ, ಋಕ್ಕುಗಳ ವೀರ್ಯದಿಂದಲೇ, ಓಜಸ್ಸಿನಿಂದಲೇ , ಋಕ್ಕುಗಳ ಋಕ್ಸಂಬಂಧವಾದ ಯಜ್ಞದ ವಿರಿಷ್ಟವನ್ನು ವಿಚ್ಛಿನ್ನವಾದ ಕೊರೆಯ ರೂಪವುಂಟಾಗುವದಲ್ಲ (ಅದನ್ನು), ಬೆಸಗೆಮಾಡಿದವನಾಗುತ್ತಾನೆ.

ಇನ್ನು ಯಜುಸ್ಸಿನಿಂದ ಯಜುಸ್ಸಿನ ನಿಮಿತ್ತದಿಂದ ರೇಷವಾದರೆ 'ಭುವಃ ಸ್ವಾಹಾ !' ಎಂದು ದಕ್ಷಿಣಾಗ್ನಿಯಲ್ಲಿ ಹೋಮಮಾಡಬೇಕು. ಹೀಗೆಯೇ ಸಾಮ ನಿಮಿತ್ತದಿಂದ ರೇಷವಾದರೆ 'ಸ್ವಃ ಸ್ವಾಹಾ !'ಎಂದು ಆಹವನೀಯದಲ್ಲಿ ಹೋಮ ಮಾಡಬೇಕು. ಹಾಗೆ (ಮಾಡಿದರೆ) ಹಿಂದಿನಂತೆಯೇ ಯಜ್ಞವನ್ನು ಬೆಸಗೆಮಾಡಿದವ ನಾಗುತ್ತಾನೆ. ಬ್ರಹ್ಮನಿಮಿತ್ತವಾಗಿ ರೇಷವಾದರೋ ಮೂರು ಅಗ್ನಿಗಳಲ್ಲಿಯೂ ಮೂರು ವ್ಯಾಹೃತಿಗಳಿಂದಲೂ ಹೋಮಮಾಡಬೇಕು[2]. ಏಕೆಂದರೆ ಆ ರೇಷವು ತ್ರಯಿವಿದ್ಯೆಗೆ ಸಂಬಂಧಪಟ್ಟದ್ದು. ''ಇನ್ನು (ಹೀಗಿರುವಲ್ಲಿ) ಬ್ರಹ್ಮತ್ವವನ್ನು ಏತರಿಂದ (ಮಾಡತಕ್ಕದ್ದು) ? ಎಂದರೆ ಇದೇ ತ್ರಯಿವಿದ್ಯೆಯಿಂದ'' (?) ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). ಅಥವಾ ಬ್ರಹ್ಮತ್ವನಿಮಿತ್ತವಾದ ರೇಷಕ್ಕೆ ಮತ್ತೆ ಯಾವದಾದರೊಂದು ನ್ಯಾಯವನ್ನಾದರೂ ಹುಡುಕಬೇಕು.[3]

1. ಐ. ಬ್ರಾ. ೨೫-೮ರಲ್ಲಿ 'ಅಥ ಕೇನ ಬ್ರಹ್ಮತ್ವಂ ಕ್ರಿಯತ ಇತಿ ತ್ರಯ್ಯಾ ವಿದ್ಯಯೇತಿ ಬ್ರೂಯಾತ್' ಎಂದಿದೆ.

2. ಈ ಹೋಮವನ್ನು ಬ್ರಹ್ಮನೇ ಮಾಡಬೇಕು ಎಂದು ಐ. ಬ್ರಾ. ೨೫-೯ ರಲ್ಲಿ ಹೇಳಿದೆ.

3. ಬ್ರಹ್ಮನ ಜ್ಞಾನನಿಮಿತ್ತವಾಗಿಯೇ ಸರ್ವದೋಷಗಳೂ ನಿವೃತ್ತವಾಗುವದರಿಂದ ಅವನ ವಿಷಯದಲ್ಲಿ ಮತ್ತೆ ಯಾವ ಪ್ರಾಯಶ್ಚಿತ್ತವೂ ವಿಹಿತವಾಗತಕ್ಕದ್ದಲ್ಲ ಎಂದು ಆಚಾ. ಟೀಕೆ. ಆದರೆ ಹಿಂದೆ ಮೌನಭ್ರೇಷವಾದರೆ ಯಜ್ಞವು ಕೆಟ್ಟುಹೋಗುತ್ತದೆ ಎಂದು ಹೇಳಿರುವದರಿಂದ ಅವನ ನಿಮಿತ್ತದಿಂದ ರೇಷವಾದರೂ ಪ್ರಾಯಶ್ಚಿತ್ತವುಂಟೆಂಬುದೇ ಆಚಾರ್ಯರ ಅಭಿಪ್ರಾಯವೆಂದು ತೋರುತ್ತದೆ. ಐ. ಬ್ರಾ. ೨೫-೯ ನ್ನು ನೋಡಿ.

ವಿದ್ವಾಂಸನಾದವನನ್ನೇ ಬ್ರಹ್ಮನನ್ನಾಗಿ ಮಾಡಿಕೊಳ್ಳಬೇಕು

(ಉಪನಿಷತ್ತು)

ತದ್ಯಥಾ ಲವಣೇನ ಸುವರ್ಣಗ್ಂ ಸಂದಧ್ಯಾತ್ ಸುವರ್ಣೇನ ರಜತಗ್ಂ ರಜತೇನ ತ್ರಪು ತ್ರಪುಣಾ ಸೀಸಗ್ಂ ಸೀಸೇನ ಲೋಹಂ ಲೋಹೇನ ದಾರು ದಾರು ಚರ್ಮಣಾ ॥೭॥

ಏವಮೇಷಾಂ ಲೋಕಾನಾಮಾಸಾಂ ದೇವತಾನಾಮಸ್ಯಾಸ್ತ್ರಯ್ಯಾ ವಿದ್ಯಾಯಾ ವೀರ್ಯೇಣ ಯಜ್ಞಸ್ಯ ವಿರಿಷ್ಟಗ್ಂ ಸಂದಧಾತಿ ಭೇಷಜಕೃತೋ ಹ ವಾ ಏಷ ಯಜ್ಞೋ ಯತ್ರೈವಂವಿದ್ ಬ್ರಹ್ಮಾ ಭವತಿ ॥೮॥

೭. ಅದು ಹೇಗೆಂದರೆ (ಹೇಗೆ) ಉಪ್ಪಿನಿಂದ ಚಿನ್ನವನ್ನು, ಚಿನ್ನದಿಂದ ಬೆಳ್ಳಿಯನ್ನು, ಬೆಳ್ಳಿಯಿಂದ ತವರವನ್ನು, ತವರದಿಂದ ಸೀಸವನ್ನು, ಸೀಸದಿಂದ ಕಬ್ಬಿಣವನ್ನು ಕಬ್ಬಿಣದಿಂದ ಮರವನ್ನು, ಮರವನ್ನು ಚರ್ಮದಿಂದಲೂ ಹೇಗೆ ಕೂಡಿಸುತ್ತಾರೋ-

೮. ಹಾಗೆಯೇ ಈ ಲೋಕಗಳ ಈ ದೇವತೆಗಳ ಈ ತ್ರಯೀವಿದ್ಯೆಯ ವೀರ್ಯದಿಂದ ಯಜ್ಞದ ವಿರಿಷ್ಟವನ್ನು ಕೂಡಿಸುತ್ತಾನೆ. ಎಲ್ಲಿ ಹೀಗೆ ತಿಳಿದಿರುವ ಬ್ರಹ್ಮನು ಇರುತ್ತಾನೋ ಆ ಯಜ್ಞವು ಭೇಷಜಕೃತನಿಂದ ಕೂಡಿದ್ದಾಗಿರುತ್ತದೆ.

ತಿಳಿದ ಬ್ರಹ್ಮನಿದ್ದರೆ ಯಜ್ಞಕ್ಕೆ ಗುಣ

(ಭಾಷ್ಯ)

೫೫೩. ತದ್ಯಥಾ ಲವಣೇನ ಸುವರ್ಣಂ ಸಂದಧ್ಯಾತ್ । ಕ್ವಾರೇಣ ಟಙ್ಕಣಾದಿನಾ ಖರೇ ಮೃದುತ್ವಕರಂ ಹಿ ತತ್ । ಸುವರ್ಣೇನ ರಜತಮಶಕ್ಯಸಂಧಾನಂ ಸಂದಧ್ಯಾತ್ । ರಜತೇನ ತಥಾ ತ್ರಪು , ತ್ರಪುಣಾ ಸೀಸಂ , ಸೀಸೇನ ಲೋಹಂ , ಲೋಹೇನ ದಾರು , ದಾರು ಚರ್ಮಣಾ ಚರ್ಮಬನ್ಧನೇನ । ಏವಮೇಷಾಂ ಲೋಕಾನಾಮ್ ಆಸಾಂ ದೇವತಾನಾಮ್ ಅಸ್ಯಾಸ್ತ್ರಯ್ಯಾ ವಿದ್ಯಾಯಾ ವೀರ್ಯೇಣ ರಸಾಖ್ಯೇನ ಓಜಸಾ ಯಜ್ಞಸ್ಯ ವಿರಿಷ್ಟಂ ಸಂದಧಾತಿ । ಭೇಷಜಕೃತಾ[1] ಉ ಹ ವಾ ಏಷ ಯಜ್ಞಃ । ರೋಗಾರ್ತ

1. 'ಭೇಷಜಕೃತಃ' ಎಂದು ಆ॥ ಟೀಕಾಪಾಠ ; ಅನುವಾದದ ಟಿಪ್ಪಣಿಯನ್ನು ನೋಡಿ.

ಇವ ಪುಮಾನ್ ಚಿಕಿತ್ಸಕೇನ ಸುಶಿಕ್ಷಿತೇನ ಏಷ ಯಜ್ಞೋ ಭವತಿ । ಕೋಽಸೌ ? ಯತ್ರ ಯಸ್ಮಿನ್ ಯಜ್ಞ ಏವಂವಿದ್ ಯಥೋಕ್ತವ್ಯಾಹೃತಿಹೋಮಪ್ರಾಯಶ್ಚಿತ್ತವಿತ್ ಬ್ರಹ್ಮಾ ಋತ್ವಿಕ್ ಭವತಿ ಸ ಯಜ್ಞಃ ಇತ್ಯರ್ಥಃ ॥

(ಭಾಷ್ಯಾರ್ಥ)

ಅದು ಹೇಗೆಂದರೆ (ಹೇಗೆ) ಉಪ್ಪಿನಿಂದ ಚಿನ್ನವನ್ನು ಕೂಡಿಸುತ್ತಾರೋ ; (ಕಾಯಿಸಿ) ಉಪ್ಪಿನಿಂದ ಟೆಂಕವೇ ಮುಂತಾದದ್ದರಿಂದ (ಹೇಗೆ ಬೆಸೆಯುತ್ತಾರೋ ಎಂದರ್ಥ). ಗಟ್ಟಿಯಾದ (ಚಿನ್ನವನ್ನು) ಮೆದುಮಾಡುವದಕ್ಕಲ್ಲವೆ, ಆದು ? ಕೂಡಿಸುವದಕ್ಕೆ ಆಗದೆ ಇರುವ ಬೆಳ್ಳಿಯನ್ನು ಚಿನ್ನದಿಂದ ಕೂಡಿಸುತ್ತಾರೋ, ಬೆಳ್ಳಿಯಿಂದ ತವರವನ್ನು, ತವರದಿಂದ ಸೀಸವನ್ನು, ಸೀಸದಿಂದ ಕಬ್ಬಿಣವನ್ನು, ಕಬ್ಬಿಣದಿಂದ ಕಟ್ಟಿಗೆಯನ್ನು, ಕಟ್ಟಿಗೆಯನ್ನು ಚರ್ಮದಿಂದ ಎಂದರೆ ತೊಗಲಿನಿಂದ ಬಿಗಿದು (ಹೇಗೆ ಸೇರಿಸುತ್ತಾರೋ) ಹಾಗೆಯೇ ಈ ಲೋಕಗಳ, ಈ ದೇವತೆಗಳ, ಈ ತ್ರಯೀವಿದ್ಯೆಯ ವೀರ್ಯದಿಂದ, ರಸವೆಂಬ ಶಕ್ತಿಯಿಂದ, ಯಜ್ಞದ ವಿಚ್ಛಿನ್ನತೆಯನ್ನು ಬ್ರಹ್ಮನು ಕೂಡಿಸುತ್ತಾನೆ. ಆ ಯಜ್ಞವು ಭೇಷಜಕೃತನಿಂದ (ಕೂಡಿದ್ದಾಗಿರುತ್ತದೆ). ಮತ್ತು ರೋಗದಿಂದ ನರಳುತ್ತಿರುವ ಪುರುಷನು, ಸುಶಿಕ್ಷಿತನಾಗಿರುವ ಚಿಕಿತ್ಸಕನಿಂದ ಕೂಡಿರುವಂತೆ ಈ ಯಜ್ಞವು ವೈದ್ಯನಿಂದ ಕೂಡಿದ್ದಾಗಿರುತ್ತದೆ[1]. ಯಾವ (ಯಜ್ಞ) ವದು ? -ಎಂದರೆ ಎಲ್ಲಿ, ಯಾವ ಯಜ್ಞದಲ್ಲಿ, ಹೀಗೆಂದು ತಿಳಿದಿರುವ, ಮೇಲೆ ಹೇಳಿರುವ ವ್ಯಾಹೃತಿಹೋಮಗಳ ಪ್ರಾಯಶ್ಚಿತ್ತವನ್ನು ಅರಿತಿರುವ ಬ್ರಹ್ಮನು ಋತ್ವಿಜನಾಗಿರುವನೋ ಆ ಯಜ್ಞವು ಎಂದರ್ಥ.

(ಉಪನಿಷತ್ತು)

ಏಷ ಹ ವಾ ಉದಕ್ಪ್ರವಣೋ ಯಜ್ಞೋ ಯತ್ರೈವಂವಿದ್ ಬ್ರಹ್ಮಾ ಭವತ್ಯೇವಂವಿದಗ್ಂ ಹ ವಾ ಏಷಾ ಬ್ರಹ್ಮಾಣಮನು ಗಾಥಾ ಯತೋ ಯತ ಆವರ್ತತೇ ತತ್ತದ್ಗಚ್ಛತಿ ॥೯॥

ಮಾನವೋ ಬ್ರಹ್ಮೈವೈಕ ಋತ್ವಿಕ್ಕುರೂನಶ್ವಾಭಿರಕ್ಷತ್ಯೇವಂವಿದ್ಧ ವೈ

ಇದನ್ನು ತಿಳಿದ ಬ್ರಹ್ಮನು ಯಜ್ಞದ ದೋಷಕ್ಕೆ ಮದ್ದುಮಾಡುವ ವೈದ್ಯನಂತೆ ಇರುತ್ತಾನೆ ಎಂದರ್ಥ. 'ಚಿಕಿತ್ಸಕೇನ'ಎಂದು ಭಾಷ್ಯದಲ್ಲಿ ವ್ಯಾಖ್ಯಾನಮಾಡಿರುವದರಿಂದ ಭೇಷಜಕೃತಾ ಎಂಬ ಪಾಠವೇ ಸರಿಯೆಂದು ಹೇಳಬೇಕಾಗಿದೆ.

ಬ್ರಹ್ಮಾ ಯಜ್ಞಂ ಯಜಮಾನಗ್ಂ ಸರ್ವಾಂಶ್ಚರ್ತ್ವಿಜೋಽಭಿರಕ್ಷತಿ ತಸ್ಮಾದೇವಂವಿದಮೇವ ಬ್ರಹ್ಮಾಣಂ ಕುರ್ವೀತ ನಾನೇವಂವಿದಂ ನಾನೇವಂವಿದಮ್ ॥೧೦॥

೯. ಎಲ್ಲಿ ಹೀಗೆಂದರಿತ ಬ್ರಹ್ಮನಿರುತ್ತಾನೋ ಅದೇ ಉದಕ್ವ್ರಣವಾದ ಯಜ್ಞವು. ಇದು ಬ್ರಹ್ಮವನ್ನು ಕುರಿತ ಅನುಗಾಥೆಯು : "ಎತ್ತೆತ್ತಲಿಂದ ಹಿಂತಿರುಗುವದೋ ಅತ್ತತ್ತ ಹೋಗುತ್ತಿರುವನು."

೧೦. ಮಾನವನಾದ ಬ್ರಹ್ಮನೆಂಬ ಋತ್ವಿಜನೊಬ್ಬನೇ ಕುರುಗಳನ್ನು ಹೆಣ್ಣುಕುದುರೆಯು ರಕ್ಷಿಸುತ್ತದೆಯಲ್ಲ, ಹಾಗೆ- ಹೀಗೆಂದು ತಿಳಿದಿರುವ ಬ್ರಹ್ಮನು ಯಜ್ಞವನ್ನೂ ಯಜಮಾನನನ್ನೂ ಎಲ್ಲಾ ಋತ್ವಿಜರನ್ನೂ ಕಾಪಾಡುತ್ತಾನೆ. ಆದ್ದರಿಂದ ಹೀಗೆಂದು ಬಲ್ಲವನನ್ನೇ ಬ್ರಹ್ಮನನ್ನು ಮಾಡಿಕೊಳ್ಳಬೇಕು, ಹೀಗೆಂದು ತಿಳಿಯದಿರುವವನನ್ನಲ್ಲ, ಹೀಗೆಂದು ತಿಳಿಯದಿರುವವನನ್ನಲ್ಲ.

ತಿಳಿದ ಬ್ರಹ್ಮನ ಸ್ತುತಿ

(ಭಾಷ್ಯ)

೩೫೪. ಕಿಂ ಚ ಏಷ ಹ ವಾ ಉದಕ್ವ್ರಣ ಉದಙ್ಙಿವೋ ದಕ್ಷಿಣೋಚ್ಛ್ರಯೋ ಯಜ್ಞೋ ಭವತಿ । ಉತ್ತರಮಾರ್ಗಪ್ರತಿಪತ್ತಿಹೇತುರಿತ್ಯರ್ಥಃ । ಯತ್ರೈವಂವಿದ್ ಬ್ರಹ್ಮಾ ಭವತಿ । ಏವಂವಿದಂ ಹ ವೈ ಬ್ರಹ್ಮಾಣಮ್ ಋತ್ವಿಜಂ ಪ್ರತಿ ಏಷಾ ಅನುಗಾಥಾ ಬ್ರಹ್ಮಣಃ ಸ್ತುತಿಪರಾ । ಯತೋ ಯತ ಆವರ್ತತೇ ಕರ್ಮಪ್ರದೇಶಾತ್ ಋತ್ವಿಜಾಂ ಯಜ್ಞಃ ಕ್ಷತೀಭವನ್ ತತ್ತದ್ಯಜ್ಞಸ್ಯ ಕ್ಷತರೂಪಂ ಪ್ರತಿಸಂದಧತ್ ಪ್ರಾಯಶ್ಚಿತ್ತೇನ ಗಚ್ಛತಿ । ಪರಿಪಾಲಯತೀತ್ಯೇತತ್ ॥

(ಭಾಷ್ಯಾರ್ಥ)

ಮತ್ತು ಎಲ್ಲಿ ಹೀಗೆಂದು ತಿಳಿದಿರುವವನು ಬ್ರಹ್ಮನಾಗಿರುತ್ತಾನೋ ಅದೇ ಉದಕ್ವ್ರಣವಾದ ಉತ್ತರದ ಕಡೆಗೆ ಇಳಿಜಾರಾಗಿರುವ, ದಕ್ಷಿಣದ ಕಡೆಗೆ ತಿಟ್ಟಾಗಿರುವ ಯಜ್ಞವಾಗಿರುತ್ತದೆ. ಅದೇ ಉತ್ತರಮಾರ್ಗಕ್ಕೆ ಕಾರಣವಾಗಿರುತ್ತದೆ ಎಂದರ್ಥ. ಹೀಗೆಂದರಿತಿರುವ ಬ್ರಹ್ಮನೆಂಬ ಋತ್ವಿಜನನ್ನು ಕುರಿತು, ಬ್ರಹ್ಮವನ್ನು

ಹೊಗಳುವದರಲ್ಲಿ ತಾತ್ಪರ್ಯವುಳ್ಳ ಈ ಅನುಗಾಥೆ(ಯಿರುತ್ತದೆ). "ಎತ್ತೆತ್ತಲಿಂದ (ಯಾವ ಯಾವ) ಋತ್ವಿಜರ ಕರ್ಮಪ್ರದೇಶದಿಂದ ಯಜ್ಞವು ಕ್ಷತವಾಗಿ ಹಿಂತಿರುಗುತ್ತದೆಯೋ ಅತ್ತತ್ತ ಯಜ್ಞದ ಕ್ಷತರೂಪವನ್ನು ಪ್ರಾಯಶ್ಚಿತ್ತದಿಂದ ಮಾಡಿಸುತ್ತಾ (ಇವನು) ಹೋಗುತ್ತಿರುವನು, ಕಾಪಾಡುತ್ತಾನೆ" ಎಂದು ಅಭಿಪ್ರಾಯ.

ತಿಳಿದ ಬ್ರಹ್ಮನನ್ನೇ ಮಾಡಿಕೊಳ್ಳಬೇಕು

(ಭಾಷ್ಯ)

೩೫೫. **ಮಾನವೋ ಬ್ರಹ್ಮಾ ಮೌನಾಚರಣಾತ್, ಮನನಾದ್ ವಾ, ಜ್ಞಾನವತ್ತ್ವಾತ್ । ತತೋ ಬ್ರಹ್ಮೈವೈಕಃ ಋತ್ವಿಕ್ ಕುರೂನ್ ಕರ್ತೄನ್, ಯೋದ್ಧೄನಾರೂಢಾನ್ ಅಶ್ವಾ ವಡವಾ ಯಥಾ ಅಭಿರಕ್ಷತಿ, ಏವಂವಿತ್ ಹ ವೈ ಬ್ರಹ್ಮಾ ಯಜ್ಞಂ ಯಜಮಾನಂ ಸರ್ವಾಂಶ್ಚ ಋತ್ವಿಜೋಽಭಿರಕ್ಷತಿ । ತತ್ಕೃತದೋಷಾಪನಯನಾತ್ । ಯತ ಏವಂ ವಿಶಿಷ್ಟೋ ಬ್ರಹ್ಮಾ ವಿದ್ವಾನ್ ತಸ್ಮಾತ್ ಏವಂವಿದಮೇವ ಯಥೋಕ್ತವ್ಯಾಹೃತ್ಯಾದಿವಿದಂ ಬ್ರಹ್ಮಾಣಂ ಕುರ್ವೀತ , ನಾನೇವಂವಿದಂ ಕದಾಚನೇತಿ । ದ್ವಿರಭ್ಯಾಸೋಽಧ್ಯಾಯಪರಿಸಮಾಪ್ತ್ಯರ್ಥಃ ॥**

(ಭಾಷ್ಯಾರ್ಥ)

ಬ್ರಹ್ಮನು ಮಾನವನು ; ಮೌನವನ್ನು ಆಚರಣೆಮಾಡುವದರಿಂದ ಅಥವಾ ಮನನಮಾಡುತ್ತಿರುವದರಿಂದ (ಸರಿಯಾದ) ಜ್ಞಾನವುಳ್ಳವನಾದ್ದರಿಂದ (ಮಾನವನು). ಆದ್ದರಿಂದ ಬ್ರಹ್ಮನೆಂಬ ಋತ್ವಿಜನೊಬ್ಬನೇ ಕುರುಗಳನ್ನು ಎಂದರೆ ಕರ್ತೃಗಳಾದವರನ್ನು-(ತನ್ನ) ಮೇಲೇರಿರುವ ಯೋಧರನ್ನು (ಅಶ್ವಾ = ವಡವಾ) ಹೆಣ್ಣುಕುದುರೆಯು ಹೇಗೆ ಕಾಪಾಡುತ್ತದೆಯೋ (ಹಾಗೆ) ಹೀಗೆಂದು ಬಲ್ಲ ಬ್ರಹ್ಮನೇ ಯಜ್ಞವನ್ನೂ ಯಜಮಾನನನ್ನೂ ಎಲ್ಲಾ ಋತ್ವಿಜರನ್ನೂ ಅವರು ಮಾಡಿದ ದೋಷಗಳನ್ನೂ ಹೋಗಲಾಡಿಸಿ ಕಾಪಾಡುತ್ತಾನೆ. ತಿಳಿದ ಬ್ರಹ್ಮನು ಇಂಥವನಲ್ಲವೆ , ಆದ್ದರಿಂದ ಹೀಗೆಂದು ತಿಳಿದಿರುವವನನ್ನೇ ಎಂದರೆ ಹಿಂದೆ ಹೇಳಿರುವ ವ್ಯಾಹೃತ್ಯಾದಿಗಳನ್ನು ಬಲ್ಲವನನ್ನೇ ಬ್ರಹ್ಮನನ್ನು ಮಾಡಿಕೊಳ್ಳಬೇಕು. ಹೀಗೆಂದು ತಿಳಿಯದಿರುವವನನ್ನು ಎಂದಿಗೂ (ಮಾಡಿಕೊಳ್ಳ)ಬಾರದು. (ನಾನೇವಂವಿದಮ್ ಎಂದು) ಎರಡು ಸಲ ಮತ್ತೆ ಹೇಳಿರುವದು ಅಧ್ಯಾಯದ ಪರಿಸಮಾಪ್ತಿಯನ್ನು (ತಿಳಿಸು)ವದಕ್ಕಾಗಿ.

ನಾಲ್ಕನೆಯ ಅಧ್ಯಾಯದ
ಹದಿನಾರು , ಹದಿನೇಳನೆಯ ಖಂಡಗಳ ಸಾರ

ಈ ಖಂಡಗಳಲ್ಲಿ ಪ್ರಾಸಂಗಿಕವಾಗಿ ಕೆಲವು ಯಜ್ಞಧರ್ಮಗಳನ್ನು ವಿಧಿಸಿದೆ.

ಹದಿನಾರನೆಯ ಖಂಡ

ಯಜ್ಞವೆಂಬುದು ಈ ವಾಯುವೇ ; ಏಕೆಂದರೆ ಇದು ಬೀಸುತ್ತಿರುವಾಗ ಎಲ್ಲವನ್ನೂ ಶುದ್ಧಿಗೊಳಿಸುತ್ತದೆ- ಎಂದು ವಾಯುದೃಷ್ಟಿಯಿಂದ ಯಜ್ಞವನ್ನು ನೋಡಬೇಕು. ಈ ಯಜ್ಞಕ್ಕೆ ವಾಕ್ಕು, ಮನಸ್ಸು- ಎಂದು ಎರಡು ಮಾರ್ಗಗಳಿವೆ. ಈ ಮಾರ್ಗಗಳಿಂದಲೇ ಯಜ್ಞವು ಮುಂದಕ್ಕೆ ಸಾಗುತ್ತದೆ. ಬ್ರಹ್ಮನೆಂಬ ಋತ್ವಿಜನು ಮೌನಾಚರಣೆಯಿಂದಲೂ ಹೋತೃ , ಅಧ್ವರ್ಯು, ಉದ್ಗಾತೃ- ಇವರು ಮಂತ್ರೋಚ್ಚಾರಣೆಯಿಂದಲೂ ಈ ಮಾರ್ಗಗಳಿಗೆ ಸಂಸ್ಕಾರವನ್ನುಂಟು ಮಾಡುತ್ತಾರೆ. ಈ ಎರಡರಲ್ಲಿ ಯಾವ ಸಂಸ್ಕಾರವು ತಪ್ಪಿದರೂ ಯಜ್ಞವು ಕೆಟ್ಟುಹೋಗುತ್ತದೆ , ಯಜಮಾನನಿಗೆ ಫಲವಾಗುವದಿಲ್ಲ. ಬ್ರಹ್ಮನು ಪ್ರಾತರನುವಾಕದಿಂದ ಹಿಡಿದು ಪರಿಧಾನೀಯ ಋಕ್ಕುಗಳನ್ನು ಹೇಳುವವರೆಗೂ ಮೌನದಿಂದರಬೇಕು. ಹಾಗಿದ್ದರೆ ಮನೋಮಾರ್ಗವು ಸಂಸ್ಕೃತವಾಗುತ್ತದೆ, ಇಲ್ಲದಿದ್ದರೆ ಇಲ್ಲ.

ಹದಿನೇಳನೆಯ ಖಂಡ

ಪ್ರಜಾಪತಿಯು ಚೆನ್ನಾಗಿ ಧ್ಯಾನಮಾಡಿ ಲೋಕಗಳ ಸಾರವು ಅಗ್ನಿ , ವಾಯು , ಆದಿತ್ಯ- ಈ ದೇವತೆಗಳೆಂದೂ , ಈ ದೇವತೆಗಳ ಸಾರವು ಋಗ್ಯಜುಃಸಾಮಗಳೆಂದೂ , ಅವುಗಳ ಸಾರವು ಭೂರ್ಭುವಃಸ್ವರೆಂಬ ವ್ಯಾಹೃತಿಗಳೆಂದೂ ಕಂಡುಹಿಡಿದನು.

ಆದ್ದರಿಂದ ಋಕ್ಕಿನಿಂದ ಆದ ಕೊರತೆಯನ್ನು 'ಭೂಃ ಸ್ವಾಹಾ'ಎಂದು ಗಾರ್ಹಪತ್ಯದಲ್ಲಿ ಹೋಮಮಾಡುವದರಿಂದಲೂ ಯಜುಸ್ಸುಗಳಿಂದಾದ ಕೊರತೆಯನ್ನು 'ಭುವಃ ಸ್ವಾಹಾ'ಎಂದು ದಕ್ಷಿಣಾಗ್ನಿಯಲ್ಲಿ ಹೋಮಮಾಡುವದರಿಂದಲೂ ಸಾಮದಿಂದಾದ ಕೊರತೆಯನ್ನು 'ಸ್ವಃ ಸ್ವಾಹಾ' ಎಂದು ಆಹವನೀಯದಲ್ಲಿ ಹೋಮಮಾಡುವದರಿಂದಲೂ ಬ್ರಹ್ಮನು ಸರಿಪಡಿಸಿಕೊಳ್ಳಬೇಕು.

ಕ್ಷಾರ, ಚಿನ್ನ, ಬೆಳ್ಳಿ, ತವರ, ಸೀಸ, ಕಬ್ಬಿಣ, ಕಟ್ಟಿಗೆ, ಚರ್ಮ- ಇವುಗಳನ್ನು ಒಂದಕ್ಕೊಂದನ್ನು ಕೂಡಿಸುವ ಜಾಣನಂತೆ ಬ್ರಹ್ಮನು ಈ ಲೋಕದೇವತಾತ್ರಯಾವಿದ್ಯೆಗಳ ವೀರ್ಯದಿಂದ ಯಜ್ಞದ ಕೊರತೆಯನ್ನು ಹೋಗಲಾಡಿಸುವನು.

ಹೀಗೆ ಮೌನಪ್ರಾಯಶ್ಚಿತ್ತಗಳನ್ನು ಅರಿತಿರುವ ಬ್ರಹ್ಮನು ಋತ್ವಿಜನಾಗಿರುವ ಯಜ್ಞವು ಉತ್ತರಾಯಣಗತಿಗೆ ಕಾರಣವಾಗುವದು. ಜಾತಿಯ ಹೆಣ್ಣುಕುದುರೆಯು ಯೋಧರನ್ನು ರಕ್ಷಿಸುವಂತೆ ಈ ವಿದ್ಯೆಯನ್ನು ಬಲ್ಲ ಬ್ರಹ್ಮನೇ ಯಜ್ಞ , ಯಜಮಾನ , ಋತ್ವಿಜರು- ಎಲ್ಲರನ್ನೂ ಕಾಪಾಡುತ್ತಾನೆ. ಆದ್ದರಿಂದ ಇಂಥ ಬಲ್ಲ ಬ್ರಹ್ಮನೇ ಋತ್ವಿಜನಾಗಿರುವಂತೆ ಯಜಮಾನನು ನೋಡಿಕೊಳ್ಳಬೇಕು.

ಉಪನಿಷದ್ಭಿಭಾಗಗಳ ವರ್ಣಾನುಕ್ರಮಣಿಕೆ

ಪ್ರತೀಕೆಗಳು	ಅ.ಖಂ.ವಿ.
ಅಗ್ನಿರ್ಹಿಕಾಂರೋ ವಾಯುಃ	೨-೨೦-೧
ಅಗ್ನಿಷ್ಟೇ ವಾದಂ ವಕ್ತೇತಿ	೪-೬-೧
ಅಜಾ ಹಿಂಕಾರೋಽವಯಃ	೨-೧೮-೧
ಅತೋ ಯಾನ್ಯನ್ಯಾನಿ	೧-೩-೫
ಅತ್ರ ಯಜಮಾನ .... ತಸ್ಯೈ ರುದ್ರಾಃ	೨-೨೪-೧೦
ಅತ್ರ ಯಜಮಾನಃ .... ತಸ್ಯೈ ವಸವಃ	೨-೨೪-೬
ಅತ್ಸ್ಯನ್ನಂ ಪಶ್ಯಸಿ .... ಪಾದೌ	೫-೧೭-೨
ಅತ್ಸ್ಯನ್ನಂ ಪಶ್ಯಸಿ....ಪ್ರಾಣಸ್ತ್ವೇಷ	೫-೧೪-೨
ಅತ್ಸ್ಯನ್ನಂ ಪಶ್ಯಸಿ ....ಬಸ್ತಿಸ್ತ್ವೇಷ	೫-೧೬-೨
ಅತ್ಸ್ಯನ್ನಂ ಪಶ್ಯಸಿ .... ಮೂರ್ಧಾ ತ್ವೇಷ	೫-೧೨-೨
ಅತ್ಸ್ಯನ್ನಂ ಪಶ್ಯಸಿ .... ಸಂದೇಹಸ್ತ್ವೇಷ	೫-೧೫-೨
ಅಥ ಖಲು ಯ ಉದ್ಗೀಥಃ ಸ ಪ್ರಣವೋ .... ಇತಿ ಹೋತೃಷದನಾತ್	೧-೫-೫
ಅಥ ಖಲು ಯ ಉದ್ಗೀಥಃ ಇತ್ಯಸೌವಾ	೧-೫-೧
ಅಥ ಖಲು ವ್ಯಾನಮೇವ	೧-೩-೩
ಅಥ ಖಲೂದ್ಗೀಥಾಕ್ಷರಾಣಿ	೧-೩-೬
ಅಥ ಖಲ್ವಮುಮಾದಿತ್ಯಗ್ಂ	೨-೯-೧
ಅಥ ಖಲ್ವಾತ್ಮಸಂಮಿತಮ್	೨-೧೦-೧
ಅಥ ಖಲ್ವಾಶೀಃಸಮೃದ್ಧಿಃ	೧-೩-೮
ಅಥ ಖಲ್ವೇತಯರ್ಚಾ	೫-೨-೭
ಅಥ ಜುಹೋತಿ ನಮ ಆದಿತ್ಯೇಭ್ಯಃ	೨-೨೪-೧೪
ಅಥ ಜುಹೋತಿ ನಮೋಽಗ್ನಯೇ	೨-೨೪-೫
ಅಥ ಜುಹೋತಿ ನಮೋ ವಾಯವೇ	೨-೨೪-೯
ಅಥ ತತ ಊರ್ಧ್ವ	೩-೧೧-೧
ಅಥ ಪ್ರತಿಸೃವ್ಯಾಜ್ಜಲೌ	೫-೨-೬
ಅಥ ಯ ಆತ್ಮಾ ಸ ಸೇತುಃ	೮-೪-೧
ಅಥ ಯ ಇಮೇ ಗ್ರಾಮೇ	೫-೧೦-೩
ಅಥ ಯ ಏತದೇವಂ ವಿದ್ವಾನಗ್ನಿಹೋತ್ರಂ	೫-೨೪-೨
ಅಥ ಯ ಏತದೇವಂ ವಿದ್ವಾನ್ ಸಾಮ	೧-೭-೭
ಅಥ ಯ ಏಷೋಽನ್ತರಕ್ಷಿಣಿ	೧-೭-೫
ಅಥ ಯ ಏಷ ಸಂಪ್ರಸಾದೋ	೮-೩-೪
ಅಥ ಯಚ್ಚತುರ್ಥಮಮೃತಂ	೩-೯-೧
ಅಥ ಯತ್ತದಜಾಯತ	೩-೧೯-೩
ಅಥ ಯತ್ತಪೋ ದಾನಂ	೩-೧೭-೪
ಅಥ ಯತ್ತೃತೀಯಮಮೃತಂ	೩-೮-೧
ಅಥ ಯತ್ಪಞ್ಚಮಂ	೩-೧೦-೧
ಅಥ ಯತ್ಪಥಮಾಸ್ತಮಿತೇ	೨-೯-೮
ಅಥ ಯತ್ಪಥಮೋದಿತೇ	೨-೯-೩
ಅಥ ಯತ್ಪೈತತ್ಪುರುಷಃ	೬-೮-೫
ಅಥ ಯತ್ಪೈತದಬಲಿಮಾನಂ	೮-೬-೪
ಅಥ ಯತ್ಪೈತದಸ್ಮಾಚ್ಛರೀರಾತ್	೮-೬-೫
ಅಥ ಯತ್ಪೈತದಾಕಾಶಮ್	೮-೧೨-೪
ಅಥ ಯತ್ಪೋವಾಕೃತೇ	೪-೧೬-೪
ಅಥ ಯತ್ಸಙ್ಗವವೇಲಾಯಾಂ	೨-೯-೪
ಅಥ ಯತ್ಸಂವ್ರತಿ ಮಧ್ಯನ್ದಿನೇ	೨-೯-೫

ಪ್ರತೀಕೆಗಳು	ಅ.ಖಂ.ವಿ.
ಅಥ ಯತ್ಸತ್ಯಾಯಣಮಿತ್ಯಾಚಕ್ಷತೇ	೮-೫-೨
ಅಥ ಯದತಃ ಪರೋ	೩-೧೩-೭
ಅಥ ಯದನಾಶಕಾಯನ-ಮಿತ್ಯಾಚಕ್ಷತೇ	೮-೫-೩
ಅಥ ಯದವೋಚಂ ಭುವಃ	೩-೧೫-೬
ಅಥ ಯದವೋಚಂ ಭೂಃ	೩-೧೫-೫
ಅಥ ಯದವೋಚಂ ಸ್ವಃ	೩-೧೫-೭
ಅಥ ಯದಶ್ನಾತಿ	೩-೧೫-೫
ಅಥ ಯದಾऽಸ್ಯ ವಾಙ್ಮನಸಿ	೩-೧೫-೭
ಅಥ ಯದಿ ಗನ್ಧಮಾಲ್ಯ-ಲೋಕಕಾಮಃ	೮-೨-೬
ಅಥ ಯದಿ ಗೀತವಾದಿತ್ರ-ಲೋಕಕಾಮಃ	೮-೨-೮
ಅಥ ಯದಿ ತಸ್ಯಾऽಕರ್ತಾ	೬-೧೬-೨
ಅಥ ಯದಿದಮಸ್ಮಿನ್ ಬ್ರಹ್ಮಪುರೇ	೮-೧-೧
ಅಥ ಯದಿ ಭ್ರಾತೃಲೋಕಕಾಮಃ	೮-೨-೩
ಅಥ ಯದಿ ಮಹಜ್ಜಿಗಮಿಷೇತ್	೫-೨-೪
ಅಥ ಯದಿ ಮಾತೃಲೋಕಕಾಮಃ	೮-೨-೨
ಅಥ ಯದಿ ಯಜುಷ್ಮೋ	೪-೧೭-೫
ಅಥ ಯದಿ ಸಖಿಲೋಕಕಾಮಃ	೮-೨-೫
ಅಥ ಯದಿ ಸಾಮತೋ	೪-೧೭-೬
ಅಥ ಯದಿ ಸ್ತ್ರೀಲೋಕಕಾಮಃ	೮-೨-೯
ಅಥ ಯದಿ ಸ್ವಸೃಲೋಕಕಾಮಃ	೮-೨-೪
ಅಥ ಯದು ಚೈವಾಸ್ಮಿನ್	೪-೧೫-೫
ಅಥ ಯದೂರ್ಧ್ವಮಪರಾಹ್ಣಾತ್	೨-೯-೭
ಅಥ ಯದೂರ್ಧ್ವಂ ಮಧ್ಯಂದಿನಾತ್	೨-೯-೬
ಅಥ ಯದೇತದಕ್ಷ್ಣಃ	೧-೭-೪
ಅಥ ಯದೇತದಾದಿತ್ಯಸ್ಯ	೧-೬-೫
ಅಥ ಯದೇವೈತದಾದಿತ್ಯಸ್ಯ	೧-೬-೬

ಪ್ರತೀಕೆಗಳು	ಅ.ಖಂ.ವಿ.
ಅಥ ಯದ್ಯಜ್ಞ ಇತ್ಯಾಚಕ್ಷತೇ	೮-೫-೧
ಅಥ ಯದ್ಯನ್ನಪಾನಲೋಕಕಾಮಃ	೮-೨-೭
ಅಥ ಯದ್ಯವ್ಯೇನಾ-ನುತ್ಕ್ರಾನ್ತಪ್ರಾಣಾನ್	೭-೧೫-೩
ಅಥ ಯದ್ಯೇನಮೂಷ್ಮ-ಸೂಪಾಲಭೇತ	೨-೨೨-೪
ಅಥ ಯದ್ದ್ವಿತೀಯಮಮೃತಮ್	೩-೭-೧
ಅಥ ಯದ್ಧಸತಿ	೩-೧೭-೩
ಅಥ ಯಾ ಏತಾ	೮-೬-೧
ಅಥ ಯಾನಿ ಚತುಶ್ಚತ್ವಾರಿಂಶದ್	೩-೧೬-೩
ಅಥ ಯಾನ್ಯಷ್ಟಾಚತ್ವಾರಿಂಶದ್	೩-೧೬-೫
ಅಥ ಯಾಂ ಚತುರ್ಥೀಂ	೫-೨೨-೧
ಅಥ ಯಾಂ ತೃತೀಯಾಂ	೫-೨೧-೧
ಅಥ ಯಾಂ ದ್ವಿತೀಯಾಂ	೫-೨೦-೧
ಅಥ ಯಾಂ ಪಞ್ಚಮೀಂ	೫-೨೩-೧
ಅಥ ಯೇ ಚಾಸ್ಯೇಹ ಜೀವಾಃ	೮-೩-೨
ಅಥ ಯೇऽಸ್ಯ ದಕ್ಷಿಣಾ	೩-೨-೧
ಅಥ ಯೇऽಸ್ಯ ಪ್ರತ್ಯಞ್ಚೋ	೩-೩-೧
ಅಥ ಯೇऽಸ್ಯೋದಞ್ಚೋ	೩-೪-೧
ಅಥ ಯೇऽಸ್ಯೋರ್ಧ್ವಾ	೩-೫-೧
ಅಥ ಯೋ ವೇದೇದಂ ಮನ್ವಾನೀತಿ	೮-೧೨-೫
ಅಥ ಯೋऽಸ್ಯ ದಕ್ಷಿಣಃ	೩-೧೩-೨
ಅಥ ಯೋऽಸ್ಯ ಪ್ರತ್ಯಙ್	೩-೧೩-೩
ಅಥ ಯೋऽಸ್ಯೋದಙ್	೩-೧೩-೪
ಅಥ ಯೋऽಸ್ಯೋರ್ದ್ವಃ	೩-೧೩-೫
ಅಥ ಸಪ್ತವಿಧಸ್ಯ	೨-೮-೧
ಅಥ ಹ ಚಕ್ಷುರುದ್ಗೀಥಮ್	೧-೨-೪
ಅಥ ಹ ಪ್ರಾಣ ಉಚ್ಚಿಕ್ರಮಿಷನ್	೫-೧-೧೨
ಅಥ ಹ ಪ್ರಾಣಾ ಅಹಗ್ಂ ಶ್ರೇಯಸಿ	೫-೧-೬

ಪ್ರತೀಕೆಗಳು	ಅ.ಖಂ.ವಿ.
ಅಥ ಹ ಮನ ಉದ್ಗೀಥಮ್	೧-೨-೬
ಅಥ ಹ ಯ ಏತಾನೇವಂ	೫-೧೦-೧೦
ಅಥ ಹ ಯ ಏವಾಯಂ	೧-೨-೭
ಅಥ ಹ ವಾಚಮ್	೧-೨-೩
ಅಥ ಹ ಶೌನಕಂ ಚ	೪-೩-೫
ಅಥ ಹ ಶ್ರೋತ್ರಮ್	೧-೨-೫
ಅಥ ಹ ಹಗ್ಂಸಾ	೪-೧-೨
ಅಥ ಹಾಗ್ನಯಃ	೪-೧೦-೪
ಅಥ ಹೇನ್ದ್ರೋಽಪ್ರಾಯೈವ	೮-೯-೧
ಅಥ ಹೈನಂ ಯಜಮಾನಃ	೧-೧೧-೧
ಅಥ ಹೈನಂ ವಾಗುವಾಚ	೫-೧-೧೩
ಅಥ ಹೈನಗ್ಂ ಶ್ರೋತ್ರಮುವಾಚ	೫-೧-೧೪
ಅಥ ಹೈನಮನ್ವಾಹಾರ್ಯಪಚನೋ	೪-೧೨-೧
ಅಥ ಹೈನಂ ಗಾರ್ಹಪತ್ಯೋ	೪-೧೧-೧
ಅಥ ಹೈನಂ ಪ್ರತಿಹರ್ತಾ	೧-೧೧-೪
ಅಥ ಹೈನಂ ಪ್ರಸ್ತೋತೋಪಸಸಾದ	೧-೧೧-೪
ಅಥ ಹೈನಮಾಹವನೀಯೋ	೪-೧೩-೧
ಅಥ ಹೈನಮುದ್ಗಾತಾ	೧-೧೧-೬
ಅಥ ಹೈನಮೃಷಭೋ	೪-೫-೧
ಅಥ ಹೋವಾಚ ಜನಗ್ಂ	೫-೧೫-೧
ಅಥ ಹೋವಾಚ ಬುಡಿಲಂ	೫-೧೬-೧
ಅಥ ಹೋವಾಚ ಸತ್ಯಯಜ್ಞಂ	೫-೧೩-೧
ಅಥ ಹೋವಾಚೇನ್ದ್ರದ್ಯುಮ್ನಂ	೫-೧೪-೧
ಅಥ ಹೋವಾಚೋದ್ದಾಲಕಂ	೫-೧೭-೧
ಅಥಾತ ಆತ್ಮಾದೇಶ ಏವ	೭-೨೫-೨
ಅಥಾತಃ ಶೌವಃ ಉದ್ಗೀಥಃ	೧-೧೨-೧
ಅಥಾಧಿದೈವತಂ	೧-೩-೧
ಅಥಾಧ್ಯಾತ್ಮಂ ಪ್ರಾಣೋ	೪-೩-೩
ಅಥಾಧ್ಯಾತ್ಮಂ ಯ ಏವಾಯಂ	೧-೫-೩

ಪ್ರತೀಕೆಗಳು	ಅ.ಖಂ.ವಿ.
ಅಥಾಧ್ಯಾತ್ಮಂ ವಾಗೇವ	೧-೭-೧
ಅಥಾಽನು ಕಿಮನುಶಿಷ್ಟೋ	೫-೩-೪
ಅಥಾಽನೇನೈವ	೧-೭-೮
ಅಥಾವೃತ್ತೇಷು	೨-೨-೨
ಅಥೈತಯೋಃ ಪಥೋ	೫-೧೦-೮
ಅಥೋತಾಪ್ಯಾಹುಃ	೨-೧-೩
ಅಧೀಹಿ ಭಗವ ಇತಿ	೭-೧-೧
ಅನಿರುಕ್ತಸ್ತ್ರಯೋದಶಃ	೧-೧೩-೩
ಅನ್ತರಿಕ್ಷಮೇವ	೧-೬-೨
ಅನ್ತರಿಕ್ಷೋದರಃ	೩-೧೫-೧
ಅನ್ನಮಯಗ್ಂ ಹಿ ಸೋಮ್ಯ	೬-೫-೪
ಅನ್ನಮಯಗ್ಂ ಹಿ ಸೋಮ್ಯ	೬-೬-೫
ಅನ್ನಮಶಿತಂ ತ್ರೇಧಾ	೬-೫-೧
ಅನ್ನಮಿತಿ ಹೋವಾಚ	೧-೧೧-೯
ಅನ್ನಂ ವಾವ ಬಲಾದ್ ಭೂಯಃ	೭-೯-೧
ಅನ್ಯತರಾಮೇವ ವರ್ತನೀಗ್ಂ	೪-೧೬-೩
ಅಪಾಗ್ಂ ಸೋಮ್ಯ ಪೀಯಮಾನಾನಾಂ	೬-೬-೩
ಅಪಾಂ ಕಾ ಗತಿ	೧-೮-೫
ಅಪಾನೇ ತೃಪ್ಯತಿ	೫-೨೧-೨
ಅಭಿಮನ್ಥತಿ ಸ ಹಿಂಕಾರಃ	೨-೧೨-೧
ಅಭ್ರಾಣಿ ಸಂಪ್ಲವನ್ತೇ	೨-೧೫-೧
ಅಭ್ರಂ ಭೂತ್ವಾ ಮೇಘೋ ಭವತಿ	೫-೧೦-೬
[illegible]	೨-೨೨-೨
ಅಯಂ ವಾವ ಲೋಕೋ	೧-೧೩-೧
ಅಯಂ ವಾವ ಸ ಯೋಽಯಮನನ್ತಃಪುರುಷಃ	೩-೧೨-೮
ಅಯಂ ವಾವ ಸ ಯೋಽಯಮನನ್ತರ್ಹೃದಯ	೩-೧೨-೯

ಪ್ರತೀಕೆಗಳು	ಅ.ಖಂ.ವಿ.
ಅರಿಷ್ಟಂ ಕೋಶಂ ಪ್ರಪದ್ಯೇ	೩-೧೫-೩
ಅಶನಾಪಿಪಾಸೇ ಮೇ ಸೋಮ್ಯ	೬-೮-೩
ಅಶರೀರೋ ವಾಯುರಭ್ರಂ	೮-೧೨-೨
ಅಸೌ ವಾ ಆದಿತ್ಯೋ	೩-೧-೧
ಅಸೌ ವಾವ ಲೋಕೋ	೫-೪-೧
ಅಸ್ಯ ಯದೇಕಾಂ ಶಾಖಾಂ	೬-೧೧-೨
ಅಸ್ಯ ಲೋಕಸ್ಯ ಕಾ ಗತಿ	೧-೯-೧
ಅಸ್ಯ ಸೋಮ್ಯ ಮಹತೋ	೨-೧೧-೧
ಆಕಾಶೋ ವಾವ ತೇಜಸಃ	೭-೧೨-೧
ಆಕಾಶೋ ವೈ ನಾಮ	೮-೧೪-೧
ಆಗಾತಾ ಹ ವೈ	೧-೨-೧೪
ಆತ್ಮಾನಮನ್ತ	೧-೩-೧೨
ಆದಿತ್ಪತ್ನಸ್ಯ ರೇತಸಃ	೩-೧೭-೭
ಆದಿತ್ಯ ಇತಿ ಹೋವಾಚ	೧-೧೧-೭
ಆದಿತ್ಯ ಊಕಾರಃ	೧-೧೩-೨
ಆದಿತ್ಯಮಥ ವೈಶ್ವದೇವಂ	೨-೨೪-೧೩
ಆದಿತ್ಯೋ ಬ್ರಹ್ಮೇತ್ಯಾದೇಶ	೩-೧೯-೧
ಆದಿರಿತಿ ದ್ವ್ಯಕ್ಷರಂ	೨-೧೦-೨
ಆಪಯಿತಾ ಹ	೧-೧-೭
ಆಪ್ನೋತಿ ಹಾದಿತ್ಯಸ್ಯ	೨-೧೦-೬
ಆಪೋ ವಾವ	೭-೧೦-೧
ಆಪಃ ಪೀತಾ	೬-೫-೨
ಆಶಾ ವಾವ ಸ್ಮರಾತ್	೭-೧೪-೧
ಇತಿ ತು ಪಞ್ಚಮ್ಯಾಮ್	೫-೯-೧
ಇದಮಿತಿ ಹ ಪ್ರತಿಜಜ್ಞೇ	೪-೧೪-೩
ಇದಂ ವಾವ ತಜ್ಜ್ಯೇಷ್ಠಾಯ	೩-೧೧-೫
ಇಮಾಃ ಸೋಮ್ಯ ನದ್ಯಃ	೬-೧೦-೧
ಇಯಮೇವರ್ಗಗ್ನಿಃ ಸಾಮ	೧-೬-೧
ಉದಶರಾವ ಆತಾನಮವೇಕ್ಷ್ಯ	೮-೮-೧

ಪ್ರತೀಕೆಗಳು	ಅ.ಖಂ.ವಿ.
ಉದಾನೇ ತೃಪ್ಯತಿ	೫-೨೩-೨
ಉದ್ಗೀಥ ಇತಿ ತ್ರ್ಯಕ್ಷರಂ	೨-೧೦-೩
ಉದ್ದಾಲಕೋ ಹಾऽऽರುಣಿಃ	೬-೮-೧
ಉದ್ಯನ್ಹಿಂಕಾರ ಉದಿತಃ	೨-೧೪-೧
ಉಪಕೋಸಲೋ ಹ ವೈ	೪-೧೦-೧
ಉಪಮನ್ತ್ರಯತೇ ಸ	೨-೧೩-೧
ಋಗ್ವೇದಂ ಭಗವೋ	೭-೧-೨
ಋತುಷು ಪಞ್ಚವಿಧಂ	೨-೫-೧
ಏಕವಿಂಶತ್ಯಾದಿತ್ಯಂ	೨-೧೦-೫
ಏತಗ್ಂ ಸಂಯದ್ವಾಮ	೪-೧೫-೨
ಏತದ್ಧಸ್ಮ ವೈ ತದ್ವಿದ್ವಾಗ್ಂಸ	೬-೪-೯
ಏತದ್ಧಸ್ಮ ವೈ ತದ್ವಿದ್ವಾನಾಹ	೩-೧೬-೭
ಏತಮು ಏವಾಹಮ್ .... ಪ್ರಾಣಾಗ್ಂಸ್ತ್ವಂ	೧-೫-೪
ಏತಮು ಏವಾಹಮ್ .... ರಶೀಗ್ಂ ಸ್ತ್ವಮ್	೧-೫-೨
ಏತಮೃಗ್ವೇದಮ್	೩-೧-೩
ಏತೇಷಾಂ ಮೇ ದೇಹೀತಿ	೧-೧೦-೩
ಏವಗ್ಂ ಸೋಮ್ಯ ತೇ	೬-೭-೬
ಏವಮೇವ ಖಲು ಸೋಮ್ಯ	೬-೧೧-೨
ಏವಮೇವ ಖಲು ಸೋಮ್ಯಾನ್ನಸ್ಯ	೬-೬-೨
ಏವಮೇವ ಖಲು ಸೋಮ್ಯೇಮಾಃ	೬-೧೦-೨
ಏವಮೇವ ಪ್ರತಿಹರ್ತಾರಮ್	೧-೧೦-೧೧
ಏವಮೇವೈಷ ಮಘವನ್ನಿತಿ .... ನೋ ಏವಾನ್ಯತ್ರ	೮-೧೧-೩
ಏವಮೇವೈಷ ಮಘವನ್ನಿತಿ .... ಭೂಯೋऽನುವ್ಯಾಖ್ಯಾಸ್ಯಾಮಿ ವಸಾಪರಾಣಿ	೮-೯-೩
ಏವಮೇವೈಷ ಸಂಪ್ರಸಾದಃ	೮-೧೨-೩

ಪ್ರತೀಕೆಗಳು	ಅ.ಖಂ.ವಿ.
ಏವಮೇವೋದ್ಗಾತಾರಂ	೧-೧೦-೧೦
ಏವಮೇಷಾಂ ಲೋಕಾನಾಂ	೪-೧೭-೮
ಏಷ ಉ ಏವ ಭಾಮನೀಃ	೪-೧೫-೪
ಏಷ ಉ ಏವ ವಾಮನೀಃ	೪-೧೫-೩
ಏಷ ತು ವಾ ಅತಿವದತಿ	೭-೧೬-೧
ಏಷ ಮ ಆತ್ಮಾ	೩-೧೪-೩
ಏಷ ವೈ ಯಜಮಾನಸ್ಯ	೨-೨೪-೧೫
ಏಷ ಹ ವಾ ಉದಕ್ಯವಣೋ	೪-೧೭-೯
ಏಷ ಹ ವೈ ಯಜ್ಞೋ	೪-೧೬-೧
ಏಷಾಂ ಭೂತಾನಾಂ	೧-೧-೨
ಓಷಿಮದಾಷಿಮೋಂಷಿ	೧-೧೨-೫
ಓಮಿತ್ಯೇತದಕ್ಷರಮ್	೧-೧-೧
ಓಮಿತ್ಯೇತದಕ್ಷರಮ್	೧-೪-೧
ಔಪಮನ್ಯವ ಕಂ	೫-೧೨-೧
ಕತಮಾ ಕತಮರ್ಕ್	೧-೧-೪
ಕಲ್ಪನ್ತೇ ಹಾಸಾ ಋತವಃ	೨-೫-೨
ಕಲ್ಪನ್ತೇ ಹಾಸ್ಯೈ ಲೋಕಾಃ	೨-೨-೩
ಕಾ ಸಾಮ್ನೋ ಗತಿರಿತಿ	೧-೮-೪
ಕುತಸ್ತು ಖಲು ಸೋಮ್ಯೇವಗಂ	೬-೨-೨
ಕಂ ತೇ ಕಾಮಮಾಗಾಯಾನೀತಿ	೧-೭-೯
ಕ್ವ ತರ್ಹಿ ಯಜಮಾನಸ್ಯ	೨-೨೪-೨
ಗಾಯತ್ರೀ ವಾ ಇದಗಂ ಸರ್ವಂ	೩-೧೨-೧
ಗೋ ಅಶ್ವಮಿಹ	೭-೨೪-೨
ಚಕ್ಷುರೇವ ಬ್ರಹ್ಮಣಶ್ಚತುರ್ಥಃ	೩-೧೮-೫
ಚಕ್ಷುರೇವಗರ್ಹಾತ್ಮಾ	೧-೭-೨
ಚಕ್ಷುರ್ಹೋಚ್ಚಕ್ರಾಮ	೫-೧-೯
ಚಿತ್ತಂ ವಾವ ಸಂಕಲ್ಪಾತ್	೭-೫-೧
ಜಾನಶ್ರುತಿರ್ಹ ಪೌತ್ರಾಯಣಃ	೪-೧-೧
ತ ಇಮೇ ಸತ್ಯಾಃ ಕಾಮಾಃ	೮-೩-೧

ಪ್ರತೀಕೆಗಳು	ಅ.ಖಂ.ವಿ.
ತ ಇಹ ವ್ಯಾಘ್ರೋ ವಾ	೬-೯-೩
ತ ಏತದೇವ ರೂಪಮಭಿ	೩-೬-೨
ತ ಏತದೇವ ರೂಪಮಭಿ	೩-೭-೨
ತ ಏತದೇವ ರೂಪಮಭಿ	೩-೮-೨
ತ ಏತದೇವ ರೂಪಮಭಿ	೩-೯-೨
ತ ಏತದೇವ ರೂಪಮಭಿ	೩-೧೦-೨
ತಂ ವಾ ಏತಂ ದೇವಾ	೮-೧೨-೬
ತಗ್ಂ ಹಗ್ಂಸ ಉವನಿವತ್ಯ	೪-೭-೨
ತಗ್ಂ ಹ ಚಿರಂ	೫-೩-೭
ತಗ್ಂ ಹ ಪ್ರವಾಹಣೋ	೧-೮-೮
ತಗ್ಂ ಹಾಭ್ಯುವಾದ	೪-೨-೪
ತಗ್ಂ ಹ ಶಿಲಕಃ	೧-೮-೬
ತಗ್ಂ ಹಾಜ್ಗರಾ	೧-೨-೧೦
ತಗ್ಂ ಹೈತಮತಿಧನ್ವಾ	೧-೯-೩
ತಗ್ಂ ಹೋವಾಚ ಕಿಂಗೋತ್ರೋ	೪-೪-೪
ತಗ್ಂ ಹೋವಾಚ ನೈತದಬ್ರಾಹ್ಮಣೋ	೪-೪-೫
ತಗ್ಂ ಹೋವಾಚ ಯಂ ವೈ	೬-೧೨-೨
ತಗ್ಂ ಹೋವಾಚ ಯಥಾ ಸೋಮ್ಯ ....ಅಂಗಾರಃ	೬-೭-೩
ತಗ್ಂ .... ಅಂಗಾರಃ	೬-೭-೫
ತಂ ಚೇದೇತಸ್ಮಿನ್ವಯಸಿ .... ಪ್ರಾಣಾ ಆದಿತ್ಯಾ	೩-೧೬-೬
ತಂ .... ಪ್ರಾಣಾ ರುದ್ರಾ	೩-೧೬-೪
ತಂ .... ಪ್ರಾಣಾ ವಸವಃ	೩-೧೬-೨
ತಂ ಚೇದ್ಬ್ರೂಯುರಸ್ಮಿಗ್ಂಶ್ಚೇದಿದಂ	೮-೧-೪
ತಂ ಚೇದ್ಬ್ರೂಯುರ್ಯದಿದಮಸ್ಮಿನ್	೮-೧-೨
ತಂ ಜಾಯೋವಾಚ ತಪ್ತೋ	೪-೧೦-೨
ತಂ ಜಾಯೋವಾಚ ಹನ್ತ	೧-೧೦-೭
ತತ್ರೋದ್ಗಾತ್ವನ್	೧-೧೦-೮

ಪ್ರತೀಕೆಗಳು	ಅ.ಖಂ.ವಿ.
ೇ	೧-೯-೪
ತಥೇತಿ ಹ ಸಮುಪಾವಿವಿಶುಃ	೧-೮-೨
ತದುತಾಪ್ಯಾಹುಃ	೨-೧-೨
ತದುಹ ಜಾನಶ್ರುತಿಃ ...ಉಪಶುಶ್ರಾವ	೪-೧-೫
ತದುಹ ಜಾನಶ್ರುತಿಃ ಷಟ್ಶತಾನಿ	೪-೨-೧
ತದುಹ ಶೌನಕಃ	೪-೩-೭
ತದೇಚ್ಚತ್ತುಷ್ಪಾದ್ಬ್ರಹ್ಮ	೩-೧೮-೨
ತದೇತನ್ಮಿಥುನಮ್	೧-೧-೬
ತದೇಷ ಶ್ಲೋಕಃ ಶತಂ ಚೈಕಾ	೮-೬-೬
ತದೇಷ ಶ್ಲೋಕೋ ನ ಪಶ್ಯೋ	೭-೨೬-೨
ತದೇಷ ಶ್ಲೋಕೋ ಯದಾ	೫-೨-೮
ತದೇಷ ಶ್ಲೋಕೋ ಯಾನಿ	೨-೨೧-೩
ತದೈಕ್ಷತ ಬಹುಸ್ಯಾಂ	೬-೨-೩
ತದ್ಧೈತತ್ ಸತ್ಯಕಾಮೋ	೫-೨-೩
ತದ್ಧೈತದ್ಬ್ರಹ್ಮಾ ಪ್ರಜಾಪತಯ .... ಆಚಾರ್ಯಕುಲಾತ್	೮-೧೫-೧
ತದ್ಧೈತದ್ಬ್ರಹ್ಮಾ ಪ್ರಜಾಪತಯ .... ತದ್ಧೈತತ್	೩-೧೧-೪
ತದ್ಧೈತದ್ಘೋರ	೩-೧೭-೬
ತದ್ಧೋಭಯೇ ದೇವಾಸುರಾ	೮-೭-೨
ತದ್ಯ ಇತ್ಥಂ ವಿದುಃ	೫-೧೦-೧
ತದ್ಯ ಇಹ ರಮಣೀಯ	೫-೧೦-೭
ತದ್ಯ ಏವೈತಂ ಬ್ರಹ್ಮ	೮-೪-೩
ತದ್ಯ ಏವೈತಾವರಂ ಚ	೮-೫-೪
ತದ್ಯತ್ತಥಮಮಮೃತಂ	೩-೬-೧
ತದ್ಯತ್ರೈತತ್ ಸುಪ್ತಃ .... ವಿಜಾನಾತ್ಯಾಸು	೮-೬-೩
ತದ್ಯತ್ರೈತತ್ ಸುಪ್ತಃ .... ವಿಜಾನಾತ್ಯೇಷ	೮-೧೧-೧
ತದ್ಯಥಾ ಮಹಾಪಥ ಆತತಃ	೮-೬-೨
ತದ್ಯಥಾ ಲವಣೇನ	೪-೧೭-೭
ತದ್ಯಥೇಷೀಕಾತೂಲಮ್	೫-೨೪-೩
ತದ್ಯಥೇಹ ಕರ್ಮಜಿತೋ	೮-೧-೬
ತದ್ಯದ್ಧಕ್ತಂ ಪ್ರಥಮಮಾಗಚ್ಛೇತ್	೫-೧೯-೧
ತದ್ಯದ್ಯಕ್ತೋ ರಿಷ್ಯೇತ್	೪-೧೭-೪
ತದ್ಯದ್ರಜತಗ್ಂ ಸೇಯಂ	೩-೧೯-೨
ತದ್ವಾ ಏತದನುಜ್ಞಾಕ್ಷರಂ	೧-೧-೮
ತದ್ವ್ಯಕ್ಷರತ್ತದಾದಿತ್ಯಮ್ .... ಕೃಷ್ಣಗ್ಂ ರೂಪಮ್	೩-೩-೩
ತದ್ವ್ಯಕ್ಷರ... ಪರಂ ಕೃಷ್ಣಗ್ಂ	೩-೪-೩
ತದ್ವ್ಯಕ್ಷರ... ಮಧ್ಯೇ ಕ್ಷೋಭತ	೩-೫-೩
ತದ್ವ್ಯಕ್ಷರ... ರೋಹಿತಗ್ಂ	೩-೧-೪
ತದ್ವ್ಯಕ್ಷರ... ಶುಕ್ಲಗ್ಂ	೩-೨-೩
ತಮಗ್ನಿರಭ್ಯವಾದ	೪-೬-೨
ತಮು ಹ ಪರಃ ಪ್ರತ್ಯುವಾಚ ಕಮ್ಮರ	೪-೧-೩
ತಮು ಹ ಪರಃ ಪ್ರತ್ಯುವಾಚಾಹ ಹಾರೇ ತ್ವಾ	೪-೨-೩
ತಂ ಮದ್ಗುರುಪನಿಪತ್ಯ	೪-೮-೨
ತಯೋರನ್ಯತರಾಂ ಮನಸಾ	೪-೧೬-೨
ತಸ್ಮಾ ಆದಿತ್ಯಾಶ್ಚ	೨-೨೪-೧೬
ತಸ್ಮಾ ಉ ಹ ದದುಸ್ತೇ	೪-೩-೮
ತಸ್ಮಾದಪ್ಯದ್ಯೇಹ	೮-೮-೫
ತಸ್ಮಾದಾಹುಃ ಸೋಷ್ಯತ್ಯಸೋಷ್ಟೇತಿ	೩-೧೭-೫
ತಸ್ಮಾದು ಹೈವಂ ವಿದ್ಯದ್ಯಪಿ	೫-೨೪-೪
ತಸ್ಮಾದ್ವಾ ಏತಗ್ಂ ಸೇತುಂ	೮-೪-೨
ತಸ್ಮಿನ್ನಿಮಾನಿ ಸರ್ವಾಣಿ	೨-೯-೨
ತಸ್ಮಿನ್ನೇತಸ್ಮಿನ್ .... ಅನ್ನಂ ಜುಹ್ವತಿ	೫-೭-೨
ತಸ್ಮಿನ್ನೇತಸ್ಮಿನ್....ರೇತೋ ಜುಹ್ವತಿ	೫-೮-೨

ಪ್ರತೀಕೆಗಳು	ಆ.ಖಂ.ವಿ.
ತಸ್ಮಿನ್ನೇ .... ವರ್ಷಂ ಜುಹ್ವತಿ	೫-೭-೨
ತಸ್ಮಿನ್ನೇ .... ಶ್ರದ್ಧಾಂ ಜುಹ್ವತಿ	೫-೪-೨
ತಸ್ಮಿನ್ನೇತಸ್ಮಿನ್ .... ಸೋಮಂ	೫-೫-೨
ತಸ್ಮಿನ್ ಯಾವತ್ಸಂಪಾತಮುಷಿತ್ವಾ	೫-೧೦-೫
ತಸ್ಯೈ ಶ್ವಾ ಶ್ವೇತಃ	೧-೧೨-೨
ತಸ್ಯ ಕ್ವ ಮೂಲಗ್ಂ ಸ್ಯಾದನ್ಯತ್ರಾನ್ನಾತ್	೬-೮-೪
ತಸ್ಯ ಕ್ವಮೂಲಗ್ಂ ಸ್ಯಾದನ್ಯತ್ರಾದ್ಭ್ಯೋ	೬-೮-೬
ತಸ್ಯ ವ್ರಾಚೀದಿಗ್ಜುಹೂ	೩-೧೫-೨
ತಸ್ಯ ಯಥಾ ಕಪ್ಯಾಸಂ	೧-೬-೭
ತಸ್ಯ ಯಥಾಭಿನಹನಂ	೬-೧೪-೨
ತಸ್ಯ ಯೇ ಪ್ರಾಞ್ಚೋ	೩-೧-೨
ತಸ್ಯರ್ಕ್ಚ ಸಾಮ ಚ	೧-೬-೮
ತಸ್ಯ ಹ ವಾ ಏತಸ್ಯ	೩-೧೩-೧
ತಸ್ಯ ಹ ವಾ ಏತಸ್ಯಾತ್ಮನೋ	೫-೧೮-೨
ತಸ್ಯ ಹ ವಾ ಏತಸ್ಯೈವಂ	೭-೨೬-೧
ತಸ್ಯಾ ಹ ಮುಖಮುಪೋದ್ಗೃಹ್ಣನ್	೪-೨-೫
ತಾ ಆಪ ಐಕ್ಷನ್ತ	೬-೨-೪
ತಾನಿ ವಾ ಏತಾನಿ ಯಜೂಗ್ಂಷಿ	೩-೨-೨
ತಾನಿ ವಾ ಏತಾನಿ ಸಾಮಾನಿ	೩-೩-೨
ತಾನಿ ಹ ವಾ ಏತಾನಿ ಚಿತ್ತೈಕಾಯನಾನಿ	೭-೫-೨
ತಾನಿ ಹ ವಾ ಏತಾನಿ ತ್ರೀಣ್ಯಕ್ಷರಾಣಿ	೮-೩-೫
ತಾನಿ ..... ಸಂಕಲ್ಪೈಕಾಯನಾನಿ	೭-೪-೨
ತಾನು ತತ್ರ ಮೃತ್ಯುರ್ಯಥಾ	೧-೪-೩
ತಾನ್ಯಭ್ಯತಪತ್ತೇಭ್ಯೋ	೨-೨೩-೩
ತಾನ್ಹೋವಾಚ ಪ್ರಾತರ್ವಃ	೫-೧೧-೭
ತಾನ್ಹೋವಾಚಾಶ್ವಪತಿರ್ವೈ	೫-೧೧-೪
ತಾನ್ಹೋವಾಚೇಹೈವ	೧-೧೨-೩
ತಾನ್ಹೋವಾಚೈತೇ ವೈ	೫-೧೪-೧
ತಾವಾನಸ್ಯ ಮಹಿಮಾ	೩-೧೨-೬
ತಾಸಾಂ ತ್ರಿವೃತಂ ತ್ರಿವೃತಮೇಕೈಕಾಂ ಕರವಾಣಿ	೬-೩-೩
ತಾಸಾಂ ತ್ರಿವೃತಂ ತ್ರಿವೃತಮೇಕೈಕಾಮಕರೋತ್	೬-೩-೪
ತೇಜಸಃ ಸೋಮ್ಯಾಶ್ಯಮಾನಸ್ಯ	೬-೬-೪
ತೇಜೋವಾವಾऽದ್ಭ್ಯೋ ಭೂಯಃ	೭-೧೧-೧
ತೇಜೋऽಶಿತಂ ತ್ರೇಧಾ	೬-೫-೩
ತೇನ ತಗ್ಂಹ ಬಕೋ	೧-೨-೧೩
ತೇನ ತಗ್ಂಹ ಬೃಹಸ್ಪತಿಃ	೧-೨-೧೧
ತೇನ ತಗ್ಂಹಾऽऽಯಾಸ್ಯ	೧-೨-೧೨
ತೇನೇಯಂ ತ್ರಯೀ	೧-೧-೯
ತೇನೋಭೌ ಕುರುತೋ	೧-೧-೧೦
ತೇಭ್ಯೋ ಹ ಪ್ರಾಪ್ತೇಭ್ಯಃ	೫-೧೧-೫
ತೇ ಯಥಾ ತತ್ರ ನ ವಿವೇಕಂ	೬-೯-೨
ತೇ ವಾ ಏತೇ ಗುಹ್ಯಾ	೩-೫-೨
ತೇ ವಾ ಏತೇऽಥರ್ವಾಙ್ಗಿರಸ	೩-೪-೨
ತೇ ವಾ ಏತೇ ಪಞ್ಚ	೩-೧೩-೬
ತೇ ವಾ ಏತೇ ರಸಾನಾಗ್ಂ ರಸಾ	೩-೫-೪
ತೇಷಾಂ ಖಲ್ವೇಷಾಂ	೬-೩-೧
ತೇ ಹ ನಾಸಿಕ್ಯಂ	೧-೨-೨
ತೇ ಹ ಪ್ರಾಣಾಃ	೫-೧-೭
ತೇ ಹ ಯಥೈವೇದಂ	೧-೧೨-೪
ತೇ ಹ ಸಂಪ್ರಾದಯಾಂಚಕ್ರುಃ	೫-೧೧-೨
ತೇಹೋಚುರುಪಕೋಸಲೈಷಾ	೪-೧೪-೧
ತೇ ಹೋಚುರ್ಯೇನ	೫-೧೧-೬
ತೌ ವಾ ಏತೌ ದ್ವೌ ಸಂವರ್ಗೌ	೪-೩-೪
ತೌ ಹ ದ್ವಾತ್ರಿಗ್ಂ ಶತಂವರ್ಷಾಣಿ	೮-೭-೩

ಪ್ರತೀಕೆಗಳು	ಅ.ಖಂ.ವಿ.
ತೌ ಹ ಪ್ರಜಾಪತಿರುವಾಚ ಯ ಏಷೋ	೮-೭-೪
ತೌ ಹ ಪ್ರಜಾಪತಿರುವಾಚ ಸಾಧ್ವಲಂಕೃತೌ	೮-೮-೨
ತೌ ಹಾನ್ವೀಕ್ಷ್ಯ ಪ್ರಜಾಪತಿಃ	೮-೮-೪
ತೌ ಹೋಚತುರ್ಯಥೈವೇದಮ್	೮-೮-೩
ತ್ರಯಿ ವಿದ್ಯಾ ಹಿಂಕಾರಃ	೨-೨೧-೧
ತ್ರಯೋ ಧರ್ಮಸ್ಕನ್ಧಾಃ	೨-೨೩-೧
ತ್ರಯೋ ಹೋದ್ಗೀಥೇ	೧-೮-೧
ದಧ್ನಃ ಸೋಮ್ಯ ಮಥ್ಯಮಾನಸ್ಯ	೬-೬-೧
ದುಗ್ಧೇನಸ್ಯೈ .... ಭವತಿ ಯ ಏತದೇವಂ	೨-೮-೩
ದುಗ್ಧೇನಸ್ಯೈ .... ಭವತಿ ಯ ಏತಾಮ್	೧-೧೩-೪
ದೇವಾ ವೈ ಮೃತ್ಯೋಃ	೧-೪-೨
ದೇವಾಸುರಾ ಹ	೧-೨-೧
ದ್ಯೌರೇವರ್ಗಾದಿತ್ಯಃ	೧-೬-೩
ದ್ಯೌರೇವೋದುದನ್ತರಿಕ್ಷಂ ಗೀಃ	೧-೩-೭
ಧ್ಯಾನಂ ವಾವ ಚಿತ್ತಾದ್ಭೂಯೋ	೭-೬-೧
ನಕ್ಷತ್ರಾಣ್ಯೇವರ್ಕ್ಷನ್ದ್ರಮಾಃ ಸಾಮ	೧-೬-೪
ನ ವಧೇನಾಸ್ಯ ಹನ್ಯತೇ .... ವಶ್ಯಾಮೀ	೮-೧೦-೨
ನ ವಧೇನಾಸ್ಯ ಹನ್ಯತೇ .... ಪಶ್ಯಾಮೀತ್ಯೇವಮೇವೈಷ	೮-೧೦-೪
ನ ವೈ ತತ್ರ ನ ನಿಮ್ಲೋಚಃ	೩-೧೧-೨
ನ ವೈ ನೂನಂ ಭಗವನ್ತಃ	೬-೧-೭
ನ ವೈ ವಾಚೋ ನ ಚಕ್ಷೂಗ್ಂಷಿ	೫-೧-೧೫
ನ ಸ್ವಿದೇತೇನಪ್ಯುಚ್ಛಿಷ್ಟಾಃ	೧-೧೦-೪
ನ ಹ ವಾ ಅಸ್ಮಾ	೩-೧೧-೩
ನ ಹಾನಪ್ಸು ಪ್ರೇತ್ಯಪ್ಸು	೨-೪-೨
ನಾನನ್ಯಸ್ಮೈ ಕಸ್ಮೈಚನ	೩-೧೧-೬
ನಾಮ ವೈ ಋಗ್ವೇದೋ	೭-೧-೪
ನಾನಹಮತ್ರ ಭೋಗ್ಯಂ ಪಶ್ಯಾಮೀತಿ	೮-೯-೨
ನಿಧನಮಿತಿ ತ್ರ್ಯಕ್ಷರಂ	೨-೧೦-೪
ನೈವೈತೇನ ಸುರಭಿ	೧-೨-೯
ನ್ಯಗ್ರೋಧಫಲಮತ	೬-೧೨-೧
ಪಞ್ಚಮಾ ರಾಜನ್ಯಬನ್ಧುಃ	೫-೩-೫
ಪರೋವರೀಯೋ ಹಾಸ್ಯ	೨-೭-೨
ಪರ್ಜನ್ಯೋ ವಾವ ಗೌತಮಾಗ್ನಿಃ	೫-೫-೧
ಪಶುಷು ಪಞ್ಚವಿಧಂ	೨-೬-೧
ಪುರಾ ತೃತೀಯಸವನಸ್ಯ	೨-೨೪-೧೧
ಪುರಾ ಪ್ರಾತರನುವಾಕಸ್ಯ	೨-೨೪-೩
ಪುರಾ ಮಾಧ್ಯನ್ದಿನಸ್ಯ	೨-೨೪-೭
ಪುರುಷಂ ಸೋಮ್ಯೋನತ ಹಸ್ತ ಗೃಹೀತಮ್	೬-೧೬-೧
ಪುರುಷಗ್ಂ ಸೋಮ್ಯೋನತೋಪತಾಪಿನಂ	೬-೧೫-೧
ಪುರುಷೋ ವಾವ ಗೌತಮಾಗ್ನಿಃ	೫-೭-೧
ಪುರುಷೋ ವಾವ ಯಜ್ಞಃ	೩-೧೬-೧
ಪೃಥಿವೀ ವಾವ ಗೌತಮಾಗ್ನಿಃ	೫-೬-೧
ಪೃಥಿವೀ ಹಿಂಕಾರೋನನ್ತರಿಕ್ಷಂ	೨-೧೭-೧
ಪ್ರಜಾಪತಿರ್ಲೋಕಾನಭ್ಯತಪತ್ತೇಭ್ಯಃ	೨-೨೩-೨
ಪ್ರಜಾಪತಿರ್ಲೋಕಾನಭ್ಯತಪತ್ತೇಷಾಂ	೪-೧೭-೧
ಪ್ರವೃತ್ತೋನಶ್ವತರೀರಥೋ	೫-೧೩-೨
ಪ್ರಸ್ತೋತರ್ಯಾ ದೇವತಾ	೧-೧೦-೯
ಪ್ರಾಚೀನಶಾಲ ಔಪಮನ್ಯವಃ	೫-೧೧-೧
ಪ್ರಾಣ ಇತಿ ಹೋವಾಚ	೧-೧೧-೫
ಪ್ರಾಣ ಏವ ಬ್ರಹ್ಮಣಶ್ಚತುರ್ಥಃ	೩-೧೮-೪

ಪ್ರತೀಕೆಗಳು	ಅ.ಖಂ.ವಿ.
ವ್ರಾಣೇ ತೃಪ್ಯತಿ	೫-೧೯-೨
ವ್ರಾಣೇಷು ಪಞ್ಚವಿಧಂ	೨-೭-೧
ವ್ರಾಣೋ ವಾವ ಆಶಾಯಾಃ	೭-೧೫-೧
ವ್ರಾಣೋ ಹ್ಯೇವೈತಾನಿ ಸರ್ವಾಣಿ	೭-೧೫-೪
ವ್ರಾವ ಹಾऽऽಚಾರ್ಯಕುಲಂ	೪-೯-೧
ಬಲಂ ವಾ ವಿಜ್ಞಾನಾದ್ಭೂಯೋ	೭-೮-೧
ಬ್ರಹ್ಮಣಶ್ಚತೇ ಪಾದಂ	೪-೫-೨
ಬ್ರಹ್ಮಣಃ ಸೋಮ್ಯ ತೇ ವಾದಂ ಅನನ್ತವಾನ್ನಾಮ	೪-೬-೩
ಬ್ರಹ್ಮಣಃ ಸೋಮ್ಯ ಆಯತನವಾನ್ನಾಮ	೪-೮-೩
ಬ್ರಹ್ಮಣಃ ಸೋಮ್ಯ ಜ್ಯೋತಿಷ್ಮನ್ನಾಮ	೪-೭-೩
ಬ್ರಹ್ಮವಾದಿನೋ ವದನ್ತಿ	೨-೨೪-೧
ಬ್ರಹ್ಮವಿದಿವ ವೈ ಸೋಮ್ಯ	೪-೯-೨
ಭಗವ ಇತಿ ಹ ಪ್ರತಿಶುಶ್ರಾವ	೪-೧೩-೨
ಭವನ್ತಿ ಹಾऽಸ್ಯ ಪಶವಃ	೨-೬-೨
ಭಗವಾಗ್ಂಸ್ತ್ವೇವ	೧-೧೧-೩
ಮಘವನ್ಮರ್ತ್ಯಂ ವಾ ಇದಂ ಶರೀರಂ	೮-೧೨-೧
ಮಟಚೀಹತೇಷು	೧-೧೦-೧
ಮದ್ಗುಷ್ವೇ ಪಾದಂ	೪-೮-೧
ಮನೋ ಬ್ರಹ್ಮೇತ್ಯುಪಾಸೀತ	೩-೧೮-೧
ಮನೋಮಯಃ ಪ್ರಾಣಶರೀರೋ	೩-೧೪-೨
ಮನೋ ವಾವ ವಾಚೋ ಭೂಯೋ	೭-೩-೧
ಮನೋ ಹಿಂಕಾರೋ	೨-೧೧-೧
ಮನೋ ಹೋಚ್ಚಕ್ರಾಮ	೫-೧-೧೧
ಮಾನವೋ ಬ್ರಹ್ಮೈವೈಕಃ	೪-೧೭-೧೦
ಮಾಸೇಭ್ಯಃ ಪಿತೃಲೋಕಂ	೫-೧೦-೪
ಮಾಸೇಭ್ಯಃ ಸಂವತ್ಸರಗ್ಂ	೫-೧೦-೨
ಯ ಆತ್ಮಾऽಪಹತಪಾಪ್ಮಾ	೮-೭-೧
ಯ ಏಷ ಸ್ವಪ್ನೇ	೮-೧೦-೧
ಯ ಏಷೋऽಕ್ಷಿಣಿ	೪-೧೫-೧
ಯ ಯಮನ್ತಮಭಿಕಾಮೋ	೮-೨-೧೦
ಯಚ್ಚನ್ದ್ರಮಸೋ ರೋಹಿತಗ್ಂ	೬-೪-೩
ಯತ್ರ ನಾನ್ಯತ್ಪಶ್ಯತಿ	೭-೨೪-೧
ಯಥಾ ಕೃತಾಯ	೪-೧-೪
ಯಥಾ ಕೃತಾಯ	೪-೧-೬
ಯಥಾ ವಿಲೀನಮೇವಾಜ್ಯ	೬-೧೩-೨
ಯಥಾऽಶ್ಮಾನಮಾಖಣಮ್	೧-೨-೮
ಯಥಾ ಸೋಮ್ಯ ಪುರುಷಂ	೬-೧೪-೧
ಯಥಾ ಸೋಮ್ಯ ಮಧು	೬-೯-೧
ಯಥಾ ಸೋಮ್ಯೈಕೇನ ನಖ ನಿಕೃನ್ತೇನ	೬-೧-೬
ಯಥಾ .... ಮೃತ್ಪಿಣ್ಡೇನ	೬-೧-೪
ಯಥಾ .... ಲೋಹಮಣಿನಾ	೬-೧-೫
ಯಥೇಹ ಕ್ಷುಧಿತಾ ಬಾಲಾ	೫-೨೪-೫
ಯದಗ್ನೇ ರೋಹಿತಗ್ಂ ರೂಪಂ	೬-೪-೧
ಯದಾದಿತ್ಯಸ್ಯ ರೋಹಿತಂ ರೂಪಂ	೬-೪-೨
ಯದಾಪ ಉಚ್ಛ್ವಷ್ಯನ್ತಿ	೪-೩-೨
ಯದಾ ವಾ ಋಚಮ್	೧-೪-೪
ಯದಾ ವೈ ಕರೋತ್ಯಥ	೭-೨೧-೧
ಯದಾ ವೈ ನಿಸ್ತಿಷ್ಠತ್ಯಥ	೭-೨೦-೧
ಯದಾ ವೈ ಮನುತೇऽಥ	೭-೧೮-೧
ಯದಾ ವೈ ವಿಜಾನಾತ್ಯಥ	೭-೧೭-೧
ಯದಾ ವೈ ಶ್ರದ್ದಧಾತ್ಯಥ	೭-೧೯-೧
ಯದುದಿತ ಸ ಉದ್ಗೀಥ	೫೨-೮-೨
ಯದಾ ವೈ ಸುಖಂ ಲಭತೇ	೭-೨೨-೧
ಯದು ರೋಹಿತಮಿವಾಭೂದಿತಿ	೬-೪-೬
ಯದ್ವವಿಜ್ಞಾತಮಿವಾಭೂತ್	೬-೪-೭

ಪ್ರತೀಕೆಗಳು	ಅ.ಖಂ.ವಿ.
ಯದ್ವಿದ್ಯುತೋ ರೋಹಿತಗ್ಂ ರೂಪಮ್	೬-೪-೪
ಯದ್ವೈತತ್ಪುರುಷೇ ಶರೀರಂ	೩-೧೨-೪
ಯದ್ವೈತದ್ಬ್ರಹ್ಮೇತೀದಂ	೩-೧೨-೭
ಯಸ್ತದ್ವೇದ ಸ ವೇದ	೨-೨೧-೪
ಯಸ್ಯಾಮ್ಯಚಿ ತಾಮ್ಯಚಂ	೧-೩-೯
ಯಾ ವಾಕ್ತರ್ಕ್ತಸ್ಮಾತ್	೧-೩-೪
ಯಾವಾನ್ವಾ ಅಯಮಾಕಾಶಃ	೮-೧-೩
ಯಾ ವೈ ಸಾ ಗಾಯತ್ರೀ	೩-೧೨-೨
ಯಾ ವೈ ಸಾ ಪೃಥಿವೀ	೩-೧೨-೩
ಯಾಂ ದಿಶಮಭಿಷ್ಪೋಷ್ಯನ್	೧-೩-೧೧
ಯೇನ ಚ್ಛನ್ದಸಾ	೧-೩-೧೦
ಯೋ ವೈ ಭೂಮಾ ತತ್ಸುಖಂ	೭-೨೩-೧
ಯೋಷಾ ವಾವ ಗೌತಮಾಗ್ನಿಃ	೫-೮-೧
ಯೋ ಹ ವಾ ಆಯತನಂ	೫-೧-೫
ಯೋ ಹ ವೈ ಜ್ಯೇಷ್ಠಂ ಚ	೫-೧-೧
ಯೋ ಹ ವೈ ಪ್ರತಿಷ್ಠಾಂ	೫-೧-೩
ಯೋ ಹ ವೈ ವಸಿಷ್ಠಂ	೫-೧-೨
ಯೋ ಹ ವೈ ಸಂಪದಂ	೫-೧-೪
ರೈಕ್ವೇಮಾನಿ ಷಟ್ಶತಾನಿ	೪-೨-೨
ಲವಣಮೇತದುದಕೇ	೬-೧೩-೧
ಲೋಕೇಷು ಪಞ್ಚವಿಧಗ್ಂ	೨-೨-೧
ಲೋಕಿಕದ್ವಾರಮಪಾವಾರ್ಣ್ಣೂತ್ಸಿ ವಯಂ ರಾ	೨-೨೪-೪
ಲೋಕಿಕದ್ವಾರಮಪಾವಾರ್ಣ್ಣೂತ್ಸಿ ವಯಂ ವೈರಾ	೨-೨೪-೮
ಲೋಕಿಕದ್ವಾರಮಪಾವಾರ್ಣ್ಣೂತ್ಸಿ ವಯಗ್ಂ ಸ್ವಾರಾ	೨-೨೪-೧೨
ಲೋಮ ಹಿಂಕಾರಃ	೨-೧೯-೧

ಪ್ರತೀಕೆಗಳು	ಅ.ಖಂ.ವಿ.
ವರ್ಷತಿ ಹಾಸ್ಮೈ	೨-೩-೨
ವಸನ್ತೋ ಹಿಂಕಾರಃ	೨-೧೬-೧
ವಸಿಷ್ಠಾಯ ಸ್ವಾಹೇ	೫-೨-೫
ವಾಗೇವ ಬ್ರಹ್ಮಣಶ್ಚತುರ್ಥಃ	೩-೧೮-೩
ವಾಗೇವರ್ಕ್ಪಾಣಃ	೧-೧-೫
ವಾಗ್ವಾವ ನಾಮ್ನೋ	೭-೨-೧
ವಾಯುರ್ವಾವ ಸಂವರ್ಗೋ	೪-೩-೧
ವಿನರ್ದಿ ಸಾಮ್ನೋ	೨-೨೨-೧
ವಿಜ್ಞಾನಂ ವಾವ	೭-೭-೧
ವೃಷ್ಟೌ ಪಞ್ಚವಿಧಗ್ಂ	೨-೩-೧
ವೇತ್ಥ ಯಥಾಽಸೌ	೫-೩-೩
ವೇತ್ಥ ಯದಿತೋಽಧಿ	೫-೩-೨
ವ್ಯಾನೇ ತೃಪ್ಯತಿ	೫-೨೦-೨
ಶ್ಯಾಮಾಚ್ಛಬಲಂ ಪ್ರಪದ್ಯೇ	೮-೧೩-೧
ಶ್ರುತಗ್ಂ ಹ್ಯೇವ ಮೇ	೪-೯-೩
ಶ್ರೋತ್ರಮೇವರ್ಕ್ಪನಃ	೧-೭-೩
ಶ್ರೋತ್ರಮೇವ ಬ್ರಹ್ಮಣಶ್ಚತುರ್ಥಃ	೩-೧೮-೬
ಶ್ರೋತ್ರಗ್ಂ ಹೋಚ್ಚಕ್ರಾಮ	೫-೧-೧೦
ಶ್ವೇತಕೇತುರ್ಹಾಽಽರುಣೇಯ ಆಸ	೬-೧-೧
ಶ್ವೇತಕೇತುರ್ಹಾಽಽರುಣೇಯ ಪಞ್ಚಾಲಾನಾಂ	೫-೩-೧
ಶ್ವೇತಕೇತೋ ಯನ್ನು	೬-೧-೩
ಷೋಡಶಕಲಃ ಸೋಮ್ಯ	೬-೭-೧
ಸ ಏತಾಂ ತ್ರಯೀ ವಿದ್ಯಾಂ	೪-೧೭-೩
ಸ ಏತಾಸ್ತಿಸ್ರೋ ದೇವತಾ	೪-೧೭-೨
ಸ ಏವಾಧಸ್ತಾತ್	೭-೨೫-೧
ಸ ಏಷ ಪರೋವರೀಯಾನ್	೧-೯-೨
ಸ ಏಷ ಯೇ ಚೈತಸ್ಮಾತ್	೧-೭-೬
ಸ ಏಷ ರಸಾನಾಗ್ಂ	೧-೧-೩

ಪ್ರತೀಕೆಗಳು	ಅ.ಖಂ.ವಿ.
ಸ ಜಾತೋ ಯಾವದಾಯುಷಂ	೫-೯-೨
ಸತ್ಯಕಾಮೋ ಹ ಜಾಬಾಲೋ	೪-೪-೧
ಸದೇವ ಸೋಮ್ಯೇದಮಗ್ರ	೬-೨-೧
ಸ ಬ್ರೂಯಾನ್ನಾನಸ್ಯ	೮-೧-೫
ಸಮಸ್ತಸ್ಯ ಖಲು ಸಾಮ್ನಃ	೨-೧-೧
ಸಮಾನ ಉ ಏವಾಯಂ	೧-೩-೨
ಸಮಾನೇ ತೃಪ್ಯತಿ	೫-೨೨-೨
ಸ ಯ ಆಕಾಶಂ	೭-೧೨-೨
ಸ ಯ ಆಶಾಂ	೭-೧೪-೨
ಸ ಯ ಇದಮವಿದ್ವಾನ್	೫-೨೪-೧
ಸ ಯ ಏತದೇವಮಮೃತಂ ವೇದ ಮರುತಾಂ	೩-೯-೩
ಸ .... ರುದ್ರಾಣಾಂ	೩-೭-೩
ಸ .... ವಸೂನಾಂ	೩-೬-೩
ಸ... ಸಾಧ್ಯಾನಾಂ	೩-೧೦-೩
ಸ .... ವೇದಾಽಽದಿತ್ಯಾನಾಂ	೩-೮-೩
ಸ ಯ ಏತದೇವಂ ವಿದ್ವಾಂಶ್ಚತುಷ್ಕಲಂ	೪-೮-೪
ಸ ಯ ಏತದೇವಂ ವಿದ್ವಾನಕ್ಷರಂ	೧-೪-೫
ಸ ..... ವಿದ್ವಾನಗ್ನಿಹೋತ್ರಂ	೫-೨೪-೨
ಸ ..... ವಿದ್ವಾನ್ಸಾಧು	೨-೧-೪
ಸ ಯ ಏತಮೇವಂ ವಿದ್ವಾಗ್ಂಶ್ಚತುಷ್ಕಲಂ ಪಾದಂ ಬ್ರಹ್ಮಣಃ ಪ್ರಕಾಶವಾನ್	೪-೫-೩
ಸ .... ಜ್ಯೋತಿಷ್ಮಾನ್	೪-೭-೪
ಸ .... ಬ್ರಹ್ಮಣೋಽನನ್ತವಾನ್	೪-೬-೪
ಸ ಯ ಏತಮೇವಂ ವಿದ್ವಾನಾದಿತ್ಯಂ	೩-೧೯-೪
ಸ ಯ ಏತಮೇವಂ ವಿದ್ವಾನುಪಾಸ್ತೇ	೪-೧೧-೨
ಸ ಯ ಏತಮೇವಂ ವಿದ್ವಾನುಪಾಸ್ತೇ	೪-೧೨-೨
ಸ ಯ ಏತಮೇವಂ ವಿದ್ವಾನುಪಾಸ್ತೇ	೪-೧೩-೨

ಪ್ರತೀಕೆಗಳು	ಅ.ಖಂ.ವಿ.
ಸ ಯ ಏವಮೇವತತ್ಸಾಮ	೨-೨೧-೨
ಸ ಯ ಏವಮೇತದ್ಗಾಯತ್ರಂ	೨-೧೧-೨
ಸ ಯ ಏವಮೇತದ್ಬೃಹದಾದಿತ್ಯೇ	೨-೧೪-೨
ಸ ಯ ಏವಮೇತದ್ಯಜ್ಞಾಯ-ಯಜ್ಞೀಯಂ	೨-೧೯-೨
ಸ ಯ ಏವಮೇತದ್ರಥನ್ತರಮ್	೨-೧೨-೨
ಸ ಯ ಏವಮೇತದ್ರಾಜನಂ	೨-೨೦-೨
ಸ ಯ ಏವಮೇತದ್ವಾಮದೇವ್ಯಂ	೨-೧೩-೨
ಸ ಯ ಏವಮೇತದ್ವೈರಾಜಮ್	೨-೧೬-೨
ಸ ಯ ಏವಮೇತದ್ವೈರೂಪಮ್	೨-೧೫-೨
ಸ ಯ ಏವಮೇತಾ ರೇವತ್ಯಃ	೨-೧೮-೨
ಸ ಯ ಏವಮೇತಾಃ ಶಕ್ವರ್ಯೋ	೨-೧೭-೨
ಸ ಯ ಏಷೋಽಣಿಮೈತದಾತ್ಮ್ಯಮ್	೬-೮-೭
ಸ ಯ ಏಷೋಽಣಿಮೈತದಾತ್ಮ್ಯಮ್	೬-೯-೪
ಸ ಯ ಏಷೋಽಣಿಮೈತದಾತ್ಮ್ಯಮ್	೬-೧೦-೩
ಸ ಯ ಏಷೋಽಣಿಮೈತದಾತ್ಮ್ಯಮ್	೬-೧೨-೩
ಸ ಯ ಏಷೋಽಣಿಮೈತದಾತ್ಮ್ಯಮ್	೬-೧೪-೩
ಸ ಯ ಏಷೋಽಣಿಮೈತದಾತ್ಮ್ಯಮ್	೬-೧೩-೩
ಸ ಯ ಏಷೋಽಣಿಮೈತದಾತ್ಮ್ಯಮ್	೬-೧೫-೩
ಸ ಯಥಾ ತತ್ರ	೬-೧೬-೩
ಸ ಯಥಾ ಶಕುನಿಃ	೬-೮-೨
ಸ ಯಥೋಭಯಪಾತ್	೪-೧೬-೫
ಸ ಯದವೋಚಂ ಪ್ರಾಣಂ	೩-೧೫-೪
ಸ ಯದಶಿಶಿಷತಿ	೩-೧೭-೧
ಸ ಯದಿ ಪಿತರಂ	೭-೧೫-೨
ಸ ಯದಿ ಪಿತೃಲೋಕಕಾಮೋ	೮-೨-೧
ಸ ಯಶ್ಚಿತ್ತಂ	೭-೫-೩
ಸ ಯಸ್ತೇಜೋ	೭-೧೧-೨
ಸ ಯಃ ಸಂಕಲಂ	೭-೪-೩

ಪ್ರತೀಕೆಗಳು	ಅ.ಖಂ.ವಿ.
ಸ ಯಃ ಸ್ಮರಂ	೭-೧೩-೨
ಸ ಯಾವದಾದಿತ್ಯ ಉತ್ತರತಃ	೩-೧೦-೪
ಸ ಯಾವದಾದಿತ್ಯ ಪಶ್ಚಾತ್	೩-೯-೪
ಸ ಯಾವದಾದಿತ್ಯ ಪುರಸ್ತಾತ್ .... ದ್ವಿಸ್ತಾವತ್	೩-೭-೪
ಸ .... ವಸೂನಾಂ	೩-೬-೪
ಸ ಯಾವದಾದಿತ್ಯೋ ದಕ್ಷಿಣತಃ	೩-೮-೪
ಸ ಯೋ ಧ್ಯಾನಂ	೭-೬-೨
ಸ ಯೋ ನಾಮ	೭-೧-೫
ಸ ಯೋಽನ್ನಂ	೭-೯-೨
ಸ ಯೋಽಪೋ	೭-೧೦-೨
ಸ ಯೋ ಬಲಂ	೭-೮-೨
ಸ ಯೋ ಮನೋ	೭-೩-೨
ಸ ಯೋ ವಾಚಂ	೭-೭-೩
ಸ ಯೋ ವಿಜ್ಞಾನಂ	೭-೭-೨
ಸರ್ವಕರ್ಮಾ ಸರ್ವಕಾಮಃ	೩-೧೪-೪
ಸರ್ವಂ ಖಲ್ವಿದಂ ಬ್ರಹ್ಮ	೩-೧೪-೧
ಸರ್ವಾಸ್ವಪ್ಸು	೨-೪-೧
ಸರ್ವೇ ಸ್ವರಾ ಇನ್ದ್ರಸ್ಯ	೨-೨೨-೩
ಸರ್ವೇ ಸ್ವರಾಘೋಷವನ್ತೋ	೨-೨೨-೫
ಸ ವಾ ಏಷ ಆತ್ಮಾ	೮-೩-೩
ಸ ಸಮಿತ್ಪಾಣಿ .... ದುಷ್ಯತಿ	೮-೧೦-೩
ಸ ಸಮಿತ್ಪಾಣಿ .... ಪಶ್ಯಾಮೀತಿ	೮-೧೧-೨
ಸ ಹ ಕ್ಷತ್ತಾ	೪-೧-೭
ಸ ಹ ಖಾದಿತ್ವಾ	೧-೧೦-೫
ಸ ಹ ಗೌತಮೋ	೫-೩-೬

ಪ್ರತೀಕೆಗಳು	ಅ.ಖಂ.ವಿ.
ಸ ಹ ದ್ವಾದಶವರ್ಷ	೬-೮-೨
ಸ ಹ ಪಞ್ಚದಶಾಹಾನಿ	೬-೭-೨
ಸ ಹ ಪ್ರಾತಃ ಸಂಜಿಹಾನ	೧-೧೦-೬
ಸ ಹ ವ್ಯಾಧಿನಾಽನಶಿತುಂ	೪-೧೦-೩
ಸ ಹ ಶಿಲಕಃ	೧-೮-೩
ಸ ಹ ಸಂಪಾದಯಾಂಚಕಾರ	೫-೧೧-೩
ಸ ಹ ಹಾರಿದ್ರುಮತಂ	೪-೪-೩
ಸ ಹಾಽಶಾಥ	೬-೭-೪
ಸ ಹೇಭ್ಯಂ ಕುಲ್ಮಾಷಾನ್	೧-೧೦-೨
ಸ ಹೋವಾಚ ಕಿಂ ಮೇಽನ್ನಂ	೫-೨-೧
ಸ ಹೋವಾಚ ಕಿಂ ಮೇ ವಾಸೋ	೫-೨-೨
ಸ ಹೋವಾಚ ಭಗವನ್ತಂ	೧-೧೧-೨
ಸ ಹೋವಾಚ ಮಹಾತ್ಮನಶ್ಚತುರೋ	೪-೩-೬
ಸ ಹೋವಾಚ ವಿಜಾನಾಮ್ಯಹಂ	೪-೧೦-೫
ಸಂಕಲ್ಪೋ ವಾವ ಮನಸಃ	೭-೪-೧
ಸಾ ಹ ವಾಗುಚ್ಚಕ್ರಾಮ	೫-೧-೮
ಸಾ ಹೈನಮುವಾಚ	೪-೪-೨
ಸೇಯಂ ದೇವತೈಕ್ಷತ	೬-೩-೨
ಸೈಷಾ ಚತುಷ್ಪದಾ	೩-೧೨-೫
ಸೋಽಥಸ್ತಾಚ್ಛಕಟಸ್ಯ	೪-೧-೮
ಸೋಽಹಂ ಭಗವೋ	೭-೧-೩
ಸ್ತೇನೋ ಹಿರಣ್ಯಸ್ಯ	೫-೧೦-೯
ಸ್ಮರೋ ವಾವಾಽಽಕಾಶಾತ್	೭-೧೩-೧
ಹಗ್ಂಸಸ್ತೇ ಪಾದಂ ವಕ್ತೇತಿ	೪-೭-೪
ಹನ್ತಾಽಹಮೇತದ್ಭಗವತೋ	೧-೮-೭

ಶಬ್ದಾನುಕ್ರಮಣಿಕೆ

ಬಹಳಕಡೆಗಳಲ್ಲಿರುವ ಶಬ್ದಗಳಿಗೆ ಕೆಲವೇ ಭಾಷ್ಯಭಾಗಗಳ ಸಂಖ್ಯೆಗಳನ್ನು ಕೊಟ್ಟಿದೆ. ವಿವರಣೆಯಲ್ಲಿ ಕಪ್ಪಕ್ಷದಲ್ಲಿರುವದು ಆ ಮಾತನ್ನು ಅನುಕ್ರಮಣಿಕೆಯಲ್ಲಿ ನೋಡಬೇಕೆಂಬುದನ್ನು ಸೂಚಿಸುತ್ತದೆ.

೧. **ಅಚಿನ್ತ್ಯಾನನ್ತಶಕ್ತಯಃ** - ಬ್ರಹ್ಮದಲ್ಲಿ ತರ್ಕದಿಂದ ಚಿಂತಿಸುವದಕ್ಕಸದಳವಾದ ಅನಂತಶಕ್ತಿಗಳು, ೪೬೪

೨. **ಅಜಂ ಬ್ರಹ್ಮ** - ಜನ್ಮರಹಿತವಾದ ಬ್ರಹ್ಮ, ೨೨೬

೩. **ಅತತ್ತ್ವನಿಷ್ಠ** - ತತ್ತ್ವದಲ್ಲಿ ಕೊನೆಗಾಣದ (ವಾದ), ೪೬೫

೪. **ಅತ್ಯಾಶ್ರಮೀ** - ಸ್ಮಾರ್ತಸಂನ್ಯಾಸ-ಲಿಂಗವಿಲ್ಲದ ಪರಮಹಂಸ, ೧೮೩

ಅದ್ವೈತಾತ್ಮದರ್ಶನಮ್,-ವಿಜ್ಞಾನಮ್,-ವಿದ್ಯಾ - ಎರಡನೆಯದಿಲ್ಲದ ಆತ್ಮನೇ ತಾನೆಂಬ ಅರಿವು, ೨, ೩, ೪,

೬. **ಅಧಿಕರಣಾಧಿಕರ್ತವ್ಯತಾ** - ಒಂದರಲ್ಲೊಂದಿರುವದು, ಆಧಾರಾಧೇಯಭಾವ, ೫೯೯

೭. **ಅಧಿಗತಸಕಲವೇದಾರ್ಥಃ** - ಎಲ್ಲಾ ವೇದದ ಅರ್ಥವನ್ನೂ ತಿಳಿದು ಕೊಂಡಿರುವವ, (ಕರ್ಮಾಧಿಕಾರಿ), ೪.

೮. **ಅಧಿದೈವತಮ್** - ದೇವತೆಗಳ ವಿಷಯದ್ದು, ೩೩, ೩೪, ೫೪, ೬೪, ೨೭೯

೯. **ಅಧ್ಯಾತ್ಮಮ್** - ಶರೀರದೊಳಗಿನ ವಿಷಯದ್ದು, ೩೩, ೫೫, ೬೫, ೬೯, ೨೭೯

೧೦. **ಅಧಿಷ್ಠಾನಮ್** - ಭೋಗಕ್ಕೆ ಆಶ್ರಯವಾದ, ಜೀವರೂಪದಿಂದ ಪರಮಾತ್ಮನು ಇದ್ದುಕೊಂಡಿರುವ ಸ್ಥಾನವಾದ ಶರೀರ, ೬೬೬

೧೧. **ಅಧ್ಯಾರೋಪಿತ** - ಭ್ರಾಂತಿಯಿಂದ ಹುಟ್ಟುಗಟ್ಟಿದ, ೫

೧೨. **ಅನುಗಮಃ** - ಕಾರ್ಯದಿಂದ ಅದರ ಕಾರಣವನ್ನು ಹುಡುಕುತ್ತಾ ಪರಮ ಕಾರಣವಾದ ಆತ್ಮನನ್ನು ಅರಸುವ ಕ್ರಮ, ೫೦೨

೧೩. **ಅನುಶಯಿನಃ** - ಕರ್ಮವು ಭುಕ್ತವಾಗಿ ಉಳಿದಿರುವ ಅನುಶಯ (ಕರ್ಮಶೇಷ)ವುಳ್ಳವರು, ೪೧೭, ೪೧೪, ೪೧೬

೧೪. **ಅನೃತ** - (೧) ಮಿಥ್ಯಾವಸ್ತು, ೩, ೧೭೯, ೪೬೫, ೫೦೧, ೫೩೭, ೫೩೯, ೬೧೧. (೨) ಮಿಥ್ಯಾಜ್ಞಾನದಿಂದಾಗುವ ತೃಷ್ಣೆ, ೬೧೯.

೧೫. **ಅಪರಂ ರೂಪಮ್** - ಆತ್ಮನ ಕೀಳುರೂಪ, ದೇಹಾತ್ಮಭಾವ, ೬೨೩.

೧೬. **ಅಪಹತಪಾಪ್ಮಾ** - ಧರ್ಮಾಧರ್ಮಗಳ ಸಂಬಂಧವಿಲ್ಲದ (ಆತ್ಮ), ೬೧೨, ೬೨೧, ೬೪೬.

೧೭. **ಅಪ್ರವೃತ್ತಫಲಮ್** - ಫಲವು ಇನ್ನೂ ಆಗದಿರುವ (ಕರ್ಮ), ೫೨೯.

೧೮. **ಅಭಿಚರಣಮ್** - ಶತ್ರುವಿನ ಮರಣಕ್ಕಾಗಿ ಮಾಡುವ ಕರ್ಮ, ೧೮೧

೧೯. **ಅಭಿಧಾನಾಭೀಧೇಯಭೇದಃ** - ಶಬ್ದ, ಅರ್ಥ - ಎಂಬ ಭೇದ, ೪೫೬, ೫೫೦.

೨೦. **ಅಭ್ಯುದಯಃ** - ಏಳಿಗೆ, ಮೋಕ್ಷವ ಲ್ಲದ ಸಾತಿಶಯಪುರುಷಾರ್ಥ, ೫.

೨೧. **ಅಮೃತ** - (೧) ಅಮೃತವಾಚಕ, ೬೨೫, (೨) ನಾಶವಿಲ್ಲದ ಸ್ವಭಾವದ, ೫೯೬, ೬೨೩, ೬೫೧, ೬೫೫, (೩) ವೇದಫಲ ೨೧೨, ೨೧೩, ೨೧೪, ೨೧೫.

೨೨. **ಅಮೃತತ್ವಮ್** - (೧) ಮೋಕ್ಷ, ೧೭೬, ೧೭೭, ೧೭೮, ೧೮೭, ೧೮೯. (೨) ಕ್ರಮಮುಕ್ತಿ, ೬೪೪

೨೩. **ಅರ್ಚಾ** - ದೇವತೆಯ ಪ್ರತಿಮೆ, ೭

೨೪. **ಅರ್ಚಿರಾದಿಮಾರ್ಗಃ** - ಬ್ರಹ್ಮ ಲೋಕಕ್ಕೆ ಹೋಗುವ ಉತ್ತರ ಮಾರ್ಗ, ೨, ೪೦೨, ೪೧೩.

೨೫. **ಅವಿದ್ಯಾ** - (೧) ಅಧ್ಯಾಸರೂಪ ವಾದ ತಪ್ಪುತಿಳಿವಳಿಕೆ, ೪, ೨೫೪, ೫೨೭, ೬೦೫, ೬೭೦, ೬೭೫, ೬೭೬, ೬೮೩, (೨) ತಿಳಿಯದಿರು ವದು, ೧೬, ೬೦೪.

೨೬. **ಅವಿದ್ಯಾಕಾಮಕರ್ಮಾಣಿ** - ಸಂಸಾರಕ್ಕೆ ಕಾರಣವಾದ ಅವಿದ್ಯಾ-ಕಾಮಕರ್ಮಗಳು, ೪೯೫, ೪೯೭, ೫೩೪, ೬೪೧.

೨೭. **ಅವಿದ್ವಾನ್** - (೧) ಉಪಾಸನೆ ಯಿಲ್ಲದವನು, ೧೬, ೧೭; (೨) ಅರಿಯದೆ ಇರುವವನು, ೫೩೩, ೫೩೬, ೬೮೯.

೨೮. **ಅವ್ಯಾಕೃತ** - ಬಿಡಿಬಿಡಿಯಾಗಿ ವಿಂಗಡ ವಾಗದೆ ಇರುವ, ೨೮೩, ೪೬೬.

೨೯. **ಅಶರೀರಃ** -ಮಿಥ್ಯಾದೇಹವೇ ತಾನೆಂಬ ಅಭಿಮಾನವು ಹೋಗಿರು ವವ, ೬೬೮, ೬೬೯, ೬೭೦, ೬೭೬, ೬೭೭.

೩೦. **ಅಶುದ್ಧಿಕಾರಣಮ್** - ಗೃಹಸ್ಥರಿಗೆ ಚಿತ್ತಾಶುದ್ಧಿಗೆ ಕಾರಣವಾಗಿರುವ ಹಿಂಸಾನೃತಾದಿ ದೋಷಗಳು, ೪೦೪.

೩೧. **ಅಸತ್** - (೧) ಅವ್ಯಾಕೃತ, ೨೮೩. (೨) ಮಿಥ್ಯಾ, ೪೫೬ (೩) ಸತ್ತಿನ ಅಭಾವ, ೪೫೧, ೪೫೨, ೪೫೪.

೩೨. **ಅಸುರಾಃ** - ತಮೋರೂಪವಾದ ಇಂದ್ರಿಯವೃತ್ತಿಗಳು, ೨೦.

೩೩. **ಆಕಾಶಃ** - (೧) ಪಂಚಭೂತ ಗಳಲ್ಲಿ ಒಂದು, ೨೩೬; ೬೦೮. (೨) ಪರ ಮಾತ್ಮ, ೮೨, ೨೩೮, ೬೦೮, ೬೨೧, ೬೮೬.

೩೪. **ಆಚಾರ್ಯಃ** - ತತ್ತ್ವವನ್ನು ಇದ್ದಂತೆ ಉಪದೇಶಿಸಬಲ್ಲ ಗುರು, ೫೨೬, ೫೨೭, ೫೪೪.

೩೫. **ಆತ್ಮಸಂವೇದ್ಯತಾ, ಸ್ವಾತ್ಮ** - ಸ್ವ- ತನ್ನ ಅನುಭವಕ್ಕೆ ಬರುವದು, ೬೧೨, ೬೧೪, ೬೧೫.

೩೬. **ಆತ್ಯನ್ತಿಕಮಮೃತತ್ವಮ್, ಆತ್ಯನ್ತಿಕ ನಿಃಶ್ರೇಯಸಮ್** - ಮರಣವೇ ಇಲ್ಲದ ಸ್ವಭಾವದ ರೂಪದ ಮುಕ್ತಿ, ೩, ೧೭೬.

೩೭. **ಆಪೇಕ್ಷಿಕಮ್ ಅಮೃತತ್ವಮ್** - ಇತರ ಫಲಗಳಿಗೆ ಹೋಲಿಸಿದರೆ ಬಹುಕಾಲ ವಿರುವ ಅಮೃತತ್ವ, ಬ್ರಹ್ಮಲೋಕಪ್ರಾಪ್ತಿ, ೧೨೬.

೩೮. **ಆಭೂತಸಂಪ್ಲವಸ್ಥಾನ** - ಭೂತ-ಪ್ರಲಯವಾಗುವವರೆಗೆ ಇರುವ ಸ್ಥಾನ, ಬ್ರಹ್ಮಲೋಕಪ್ರಾಪ್ತಿ, ೪೮೫.

೩೯. **ಆಲಮ್ಬನಮ್** - ಉಪಾಸನೆ-ಗಾಗಿಟ್ಟುಕೊಂಡಿರುವ ಪ್ರತೀಕ, ೬.

೪೦. ಆಸ್ಪದ - ವಿಕಲ್ಪಗಳಿಗೆ ಆಧಾರ , (ಕಲ್ಪಿತವಾದ ಹಾವಿಗೆ ಹಗ್ಗದಂತೆ ಇರುವ ನಿಮಿತ್ತ) , ೬೧೧ , ೫೭೦.

೪೧. ಆಹಾರಶುದ್ಧಿಃ - ಆಹಾರದ ಎಂದರೆ ಶಬ್ದಾದಿವಿಷಯಗಳ ಜ್ಞಾನದ ಶುದ್ಧಿ, ರಾಗದ್ವೇಷಾದಿಗಳಿಲ್ಲದೆ ವಿಷಯಾನುಭವ , ೬೦೪.

೪೨. ಇದಂಶಬ್ದಬುದ್ಧೀ - ವ್ಯವಹಾರದಲ್ಲಿ ಆತ್ಮನ ವಿಷಯಕ್ಕೆ ಆಗಿರುವ ಇದು ಎಂಬ ಶಬ್ದಬುದ್ಧಿಗಳು, ೪೫೫.

೪೩. ಇಷ್ಟಾಪೂರ್ತೇ - ಅಗ್ನಿಹೋತ್ರಾದಿ ವೈದಿಕಕರ್ಮಗಳು, ವಾಪೀಕೂಪಾದಿಗಳನ್ನು ಮಾಡುವದು ಇವು, ೪೦೭.

೪೪. ಉದ್ಗೀಥಃ - (೧) ಸಾಮದಲ್ಲಿ ಉದ್ಗಾತೃವು ಮಾಡುವ ಗಾನಭಾಗ , ೧೦೧ ; (೨) ಉದ್ಗೀಥದ ಅವಯವವಾದ ಓಂಕಾರ , ೭ , ೯ , ೧೧ , ೨೯ , ೩೬.

೪೫. ಉದ್ಗಾತೃಪುರುಷಾಃ - ಉದ್ಗಾತೃವಿನ ಜೊತೆಯಲ್ಲಿರುವ ಗಾತೃಗಳು, ೧೦೪

೪೬. ಉಪಕುರ್ವಾಣಃ, ಉಪಕುರ್ವಾಣಕಃ - ಗುರುವಿನ ಬಳಿಯಲ್ಲಿ ಅಧ್ಯಯನ- ಕ್ಕಾಗಿರುವ ಬ್ರಹ್ಮಚಾರಿ , ನೈಷ್ಠಿಕನಲ್ಲ, ೧೭೬ , ೪೦೨, ೬೮೯.

೪೭. ಉಪನಿಷತ್ - (೧) ಆತ್ಮನ ವಿಷಯದ (ತಪ್ಪು) ತಿಳಿವಳಿಕೆ, ೬೫೬, ೬೫೭. (೨) ಆತ್ಮಜ್ಞಾನವನ್ನು ತಿಳಿಸುವ ಗ್ರಂಥ , ೧

೪೮. ಉಪಾಸನಮ್ - ಧ್ಯಾನ , ೫ , ೭ , ೭೩ , ೧೧೨ , ೨೦೦.

೪೯. ಏಕತ್ವಪ್ರತ್ಯಯಃ , ಏಕತ್ವಜ್ಞಾನಮ್ - ಆತ್ಮನೊಬ್ಬನೇ ಸತ್ಯವೆಂಬ ಅರಿವು, ೧೮೧ ,೧೮೨ ,೧೮೬.

೫೦. ಏಕಾಗ್ರ್ಯಮ್ - ಮನಸ್ಸನ್ನು ಒಂದೇ ಕಡೆಯಲ್ಲಿ ನಿಲ್ಲಿಸಿಕೊಳ್ಳುವದು , ೭.

೫೧. - ತಾನು ಕರ್ತೃಭೋಕ್ತೃಸ್ವಭಾವದವನೆಂಬ ತಿಳಿವಳಿಕೆ , ೪.

೫೨. ಕರ್ಮಜ್ಞಾನಾಧಿಕೃತಃ - ಕರ್ಮೋಪಾಸನೆಗಳನ್ನು ಮಾಡುವದಕ್ಕೆ ಅಧಿಕಾರಿ ಯಾದವ , ೨೧.

೫೩. ಕರ್ಮನಿರಪೇಕ್ಷಮ್ - ಕರ್ಮದ ಹಂಗಿಲ್ಲದ , (ಅದ್ವೈತಜ್ಞಾನ) , ೨.

೫೪. ಕರ್ಮಸಹಭಾವಿ - ಕರ್ಮದೊಡನೆ ಇರಬಹುದಾದ , ೪.

ಕಷಾಯಃ - ರಾಗದ್ವೇಷಾದಿಚಿತ್ತದೋಷಗಳು , ೬೦೫.

೫೬. ಕಷ್ಟಾ ಗತಿಃ - ಕರ್ಮೋಪಾಸನೆಗಳಿಲ್ಲದ ಸಾಮಾನ್ಯರಿಗೆ ದೊರಕುವ ಕೀಳುಗತಿ, ಕೀಳುಪ್ರಾಣಿಗಳ ಜನವೇ ಮುಂತಾದದ್ದು , ೨.

೫೭. ಕಾರ್ಯಕರಣಸಂಘಾತಃ - ದೇಹೇಂದ್ರಿಯಗಳು , ಒಟ್ಟುಗೂಡಿ ಕೆಲಸ ಮಾಡುವ ಗುಂಪು , ೨೩೨ , ೪೭೪ , ೫೪೫, ೬೦೦.

೫೮. ಕಾರ್ಯಕಾರಣತ್ವಮ್ - ಉಪಾದಾನ ಕಾರಣ , ಅದರ ಕಾರ್ಯ - ಇವುಗಳ ಸಂಬಂಧ , ೫೮೧.

೫೯. ಕಾರ್ಯಕಾರಣಪರಂಪರಾ - ಕಾರ್ಯದ ಕಾರಣ, ಅದರ ಕಾರಣ

- ಹೀಗೆ ಒಂದರಹಿಂದೊಂದು ಬರುವ ಕಾರ್ಯಕಾರಣಗಳ ಸಾಲು, ೪೯೮.

೬೦. **ಕೈವಲ್ಯಸಂನಿಕೃಷ್ಟಫಲಮ್** - ಮೋಕ್ಷಕ್ಕೆ ಹತ್ತಿರವಿರುವ ಫಲ , ಬ್ರಹ್ಮಲೋಕ ವ್ಯಾಪ್ತಿ, ೫೫.

೬೧. **ಕ್ರಿಯಾಕಾರಕಫಲಭೇದಃ** - ಕ್ರಿಯೆ, ಅದರ ಸಾಮಗ್ರಿ ಮತ್ತು ಫಲ ಎಂಬ ಭೇದ, ೫೫ , ೫೮೧ , ೫೯೫ , ೬೨೬.

೬೨. **ಗುಣಪ್ರಧಾನಭಾವಃ** - ಒಂದು ಹೆಚ್ಚಾಗಿ ಪ್ರಧಾನವಾಗಿರುವದು, ಮಿಕ್ಕದ್ದು ಅದಕ್ಕೆ ಅಧೀನವಾಗಿರು ವದು ಹೀಗಿರುವಿಕೆ , ೪೬೭.

೬೩. **ಗ್ರನ್ಥಯಃ** ಹೃದಯವನ್ನು ಬಲವಾಗಿ ಆಶ್ರಯಿಸಿಕೊಂಡಿರುವ ಅವಿದ್ಯಾ ವಾಸನೆಗಳ ರಾಶಿ , ೬೦೪.

೬೪. **ಚನ್ದ್ರಲೋಕಪ್ರತಿಪತ್ತಿಃ** - ಕರ್ಮಿಗಳು ಧೂಮಾದಿಮಾರ್ಗ ದಿಂದ ಪಡೆಯುವ ಗತಿ , ೨.

೬೫. **ತದ್ವಿದ್ಯಸಂವಾದಃ** - ಆ ವಿದ್ಯೆಯನ್ನು ಬಲ್ಲವರೊಡನೆ ವಾದಮಾಡು ವದು, ೭೪.

೬೬. **ತಪಃ** - (೧) ಧ್ಯಾನ, ೧೮೭; (೨) ಕೃಚ್ಛ್ರಚಾಂದ್ರಾಯಣಾದಿಗಳು, ವಾನಪ್ರಸ್ಥ, ೧೭೬

೬೭. **ತೀರ್ಥಮ್** - (೧) ವಿದ್ಯಾದಾನಕ್ಕೆ ಪಾತ್ರ, ೨೨೮ ; (೨) ಶಾಸ್ತ್ರದಲ್ಲಿ ಆಗಬಹು ದೆಂದಿರುವ ಯೋಗ್ಯ ಸಂದರ್ಭ , ೬೮೯.

೬೮. **ತೈಮಿರಿಕದ್ವಿಚನ್ದ್ರಪ್ರತ್ಯಯಃ** - ಕಣ್ಣು ಪರೆ ಬಂದವನಿಗೆ ಆಗುವ ಇಬ್ಬರು ಚಂದ್ರರ ಅರಿವು , ೧೭೯.

೬೯. **ತ್ರಯೀ ವಿದ್ಯಾ** - ವೇದವಿದ್ಯೆ ೧೮೭, ೩೫೧ , ೩೫೨.

೭೦. **ದತ್ತಮ್** - ಯಜ್ಞಸಂದರ್ಭ-ದಲ್ಲಲ್ಲದೆ ಕೊಡುವ ದಾನ , ೪೦೭.

೭೧. **ದೃಷ್ಟಂ ಫಲಮ್** - ಈ ಲೋಕ ದಲ್ಲಾಗುವ ಕರ್ಮಫಲ , ಅಥವಾ ಉಪಾಸನೆ , ೩೩.

೭೨. **ದೃಷ್ಟಿ ವಿಶೇಷ** - ಕರ್ಮಾಂಗಗಳಿಗೆ ಸಂಸ್ಕಾರವನ್ನು ಮಾಡುವ ಒಂದೊಂದು ಭಾವನೆ , ೧೬೭.

೭೩. **ದೇವತಾರೂಪಮ್** - ಜೀವನ ಪರಮಾತ್ಮ ಸ್ವರೂಪ, ೪೯೫, ೪೯೬, ೬೨೨.

೭೪. **ದೇಶಕಾಲನಿಮಿತ್ತಾದ್ಯನೃತಾಭಿ-ಸಂಧಿಃ** - ಕರ್ಮಕ್ಕೆ ಫಲವಾಗು ವುದಕ್ಕೆ ದೇಶ ಕಾಲಾದಿಗಳು ಬೇಕೆಂಬ ಮಿಥ್ಯಾವಸ್ತುವಿನ ಭಾವನೆ, ೫೩೪.

೭೫. **ದೇಹಪಾತಃ, ಶರೀರಪಾತಃ** - ದೇಹವು ಬಿದ್ದುಹೋಗುವುದು , ಸಾವು ೫೨೭ , ೫೨೮ , ೫೩೯.

೭೬. **ದೇಹಾತ್ಮದರ್ಶನಮ್, ಶರೀರತ್ಮ-ಭಾವಃ** - ದೇಹವೇ ತಾನೆಂಬ ತಿಳಿವಳಿಕೆ , ೬೫೯ , ೬೭೬.

೭೭. **ಧರ್ಮಸ್ಕನ್ಧಾಃ** - ಧರ್ಮವನ್ನು ಮಾಡುವ ಆಶ್ರಮಗಳು , ೧೭೬.

೭೮. **ಧೂಮಾದಿಮಾರ್ಗಃ**- ಕರ್ಮಿಗಳು ಫಲಾನುಭವಕ್ಕೆ ಹೋಗುವ ದಕ್ಷಿಣಮಾರ್ಗ , ೨.

೭೯. **ಧ್ಯಾನಾಹಾರಾಃ** - ಧ್ಯಾನವೇ ಆಹಾರರಾಗಿ, ಮತ್ತೆ ಯಾವ ಆಹಾ ರವು ಇಲ್ಲದಿರುವವರು, ೪೮೭.

೮೦. ನಿಮಿತ್ತನೈಮಿತ್ತಿಕತ್ವಮ್ - ಈ ನಿಮಿತ್ತ ಕಾರಣದಿಂದ ಇಂಥ ಕಾರ್ಯವಾಗುವದು ಎಂಬ ಸಂಬಂಧ, ೪೫೪.

೮೧. ನೈಷ್ಠಿಕಃ - ಜೀವಮಾನವೆಲ್ಲ ಗುರು ಕುಲದಲ್ಲಿಯೇ ಇದ್ದುಕೊಂಡಿರುವ ಬ್ರಹ್ಮಚಾರಿ, ೧೭೬, ೪೦೬.

೮೨. ನ್ಯಾಯಾಗಮೌ - ಯುಕ್ತಿ, ಸಾಂಪ್ರದಾಯಿಕೋಪದೇಶ ಎಂಬ ಜ್ಞಾನ ಸಾಧನಗಳು, ೫೧೭.

೮೩. ಪರಮಾತ್ಮವಿಕಾರಃ - ಪರಮಾತ್ಮನ ಕಾರ್ಯ (ಮಿಥ್ಯಾ ಪ್ರಪಂಚ), ೧೮೮.

೮೪. ಪರಮಾತ್ಮಾ - ಬ್ರಹ್ಮ, ೭

೮೫. ಪರಮಾರ್ಥಸತ್, ಪರಮಾರ್ಥ-ಸತ್ಯಮ್ - ನಿಜವಾಗಿರುವದು, ಸತ್ಯವಾಗಿ ತೋರುವದು ಮಾತ್ರ ವಲ್ಲ, ನಿಜವಾಗಿಯೂ ಸತ್ಯವಾಗಿರುವುದು. ೫೦೫, ೫೮೫, ೫೮೭, ೬೦೬.

೮೬. ಪರವಿದ್ಯಾ ಕರ್ಮವಿಷಯವಲ್ಲದೆ, ಪರಮಾತ್ಮವಿಷಯಕವಾದ ಜ್ಞಾನ, ೫೪೭.

೮೭. ಪರಾದೇವತಾ - ಪರಮಾತ್ಮ, ೫೦೪, ೫೩೨, ೫೪೦, ೫೮೧.

೮೮. ಪರಿವ್ರಾಜಕಃ, ಪರಿವ್ರಾಟ್ - ಪರಮಹಂಸಸಂನ್ಯಾಸಿ, ೧೭೬, ೧೭೮, ೧೭೯.

೮೯. ಪಾಪ್ಮಾ - (೧) ಧರ್ಮಾಧರ್ಮ ರೂಪವಾದ ಕಲ್ಮಷ, ೬೧೨ (೨) ಅಧರ್ಮದಲ್ಲಿ ಆಸಕ್ತಿ, ೨೨, ೨೩.

೯೦. ಪಾರಿಪ್ಲವಾಃ - ಅಶ್ವಮೇಧದಲ್ಲಿ ಕೆಲವು ಕಥೆಗಳನ್ನು ಹೇಳಬೇಕಾದ ರಾತ್ರೆಗಳು, ೨೦೮.

೯೧. ಪಾರಿಶೇಷ್ಯಮ್ - ಮಿಕ್ಕದ್ದೆಲ್ಲವೂ ಹೊಂದುವದಿಲ್ಲವಾಗಿ ಇದೊಂದೇ ಉಳಿದಿದೆಯಾದ್ದರಿಂದ ಎಂಬ ಯುಕ್ತಿ, ೪೦೨

೯೨. ಪುಣ್ಯಲೋಕಃ - ಧರ್ಮದ ಫಲವಾಗಿ ಉಪಕುರ್ವಾಣ, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥರಿಗೆ ದೊರಕುವ ಫಲ, ೧೭೮, ೧೮೩.

೯೩. ಪುರುಷಃ - (೧) ಶರೀರೇಂದ್ರಿಯಗಳ ಗುಂಪು, ಶರೀರವು, ೨೩೨, ೨೩೩, ೨೬೪; (೨) ಎಲ್ಲವನ್ನೂ ತುಂಬಿಕೊಂಡಿರುವ ಪರಮಾತ್ಮ, ೨೩೫;

೯೪. ಪುರುಷಾರ್ಥಸಿದ್ಧಿಃ - ಪುರುಷನು ಬಯಸುವ (ಮೋಕ್ಷದ) ಸಿದ್ಧಿ, ೨.

೯೫. ಪೂರ್ತಮ್ - ವಾಪೀಕೂಪಾದಿಗಳನ್ನು ಏರ್ಪಡಿಸುವ ಕರ್ಮ, ೪೦೭.

೯೬. ಪ್ರಜಾಪತಿಃ - ವಿರಾಟ್ಪುರುಷ, ಕಶ್ಯಪ, ೧೦೮, ೬೪೭, ೬೫೨, ೬೫೯, ೬೭೧.

೯೭. ಪ್ರಣವಃ - ಓಂಕಾರ, ಬ್ರಹ್ಮ, ೧೭೭, ೧೭೮.

೯೮. ಪ್ರತಿಮಾ - ವಿಷ್ಣು ಮುಂತಾದ ದೇವತೆಗಳ ಮೂರ್ತಿ, ೫೫೨.

೯೯. ಪ್ರತಿಷಿದ್ಧಸೇವಾ - ಶಾಸ್ತ್ರದಲ್ಲಿ ಕೂಡದೆಂದು ಹೇಳಿದ ಕರ್ಮವನ್ನು ಮಾಡುವದು, ೧೮೨.

೧೦೦. ಪ್ರತ್ಯಕ್ಷಾದಿಪ್ರಮಾಣಾನಿ - ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ-ಮುಂತಾದ ಪ್ರಮಾಣಗಳು, ೨೫೯.

೧೦೧. ಪ್ರತ್ಯಗಾತ್ಮಾ - ಪ್ರಾಣಿಗಳೊಳಗಿರುವ ಆತ್ಮ, ೬೭೪.

೧೦೨. ಪ್ರತ್ಯವಾಯಃ - ಕರ್ಮವನ್ನು ಮಾಡದಿದ್ದರೆ ದೋಷ, ೧೪೧.

೧೦೩. ಪ್ರಧಾನಮ್ - ಜಗತ್ಕಾರಣವೆಂದು ಸಾಂಖ್ಯರು ಕಲ್ಪಿಸಿರುವ ಕಾರಣ, ೪೫೬.

೧೦೪. ಪ್ರಮಾಣಪ್ರಮೇಯಬುದ್ಧಿಃ - ಇದು ಅರಿಯುವ ಸಾಧನ, ಇದು ಅರಿಯಲ್ಪಡುವ ವಸ್ತು ಎಂಬ ಬುದ್ಧಿ, ೧೭೯.

೧೦೫. ಪ್ರವೃತ್ತಫಲಮ್ - ಫಲ ವನ್ನುಂಟು ಮಾಡುವದಕ್ಕೆ ಆರಂಭಿಸಿರುವ (ಕರ್ಮ), ೫೨೯.

೧೦೬. ಪ್ರಾಣಕರಣಸಂಘಾತಃ - ಪ್ರಾಣ ಮತ್ತು ಕರಣಗಳು ಸೇರಿದ ಒಟ್ಟು (ಸೂಕ್ಷ್ಮ ಶರೀರ), ೫೦೪.

೧೦೭. ಪ್ರಾಣವಿಜ್ಞಾನ - ಉದ್ಗೀಥವನ್ನು ಪ್ರಾಣನೆಂದು ಉಪಾಸನೆ ಮಾಡುವದು, ೩೨.

೧೦೮. ಪ್ರಾಣಸಂಬನ್ಧಃ - (ಆತ್ಮನು ಜೀವನೆನಿಸಿರುವದಕ್ಕೆ ಕಾರಣವಾದ) ಕರಣ- ಸಂಬಂಧ, ೪೦೫.

೧೦೯. ಪ್ರಾಯಶ್ಚಿತ್ತಮ್ - ಪಾಪವನ್ನು ಕಳೆಯುವದಕ್ಕೆ ಮಾಡಿದ ಕರ್ಮ, ೫೨೯.

೧೧೦. ಬಹಿಷ್ಪವಮಾನಮ್ - ಒಂದಾನೊಂದು ಸಾಮಸ್ತೋತ್ರ, 'ಉಪಾಸ್ಮೈಗಾಯತ', 'ದವಿದ್ಯುತತ್ನ', 'ಪವಸ್ವ' ಎಂಬ ಮೂರು ತೃಚಗಳಿಂದಾಗಿರುವ ಒಂಬತ್ತು ಋಕ್ಕುಗಳ ಗಾನ, ೧೦೪.

೧೧೧. ಬೃಹತ್ - ಒಂದಾನೊಂದು ಸಾಮ, ('ತ್ವಾಮಿದ್ಧಿ ಹವಾಮಹೇ' ಋ. ೬-೪೬-೧), ೧೫೩.

೧೧೨. ಬ್ರಹ್ಮ - (೧) ಪರಮಾತ್ಮ, ೩೪೫; (೨) ಸತ್ಯಲೋಕದಲ್ಲಿರುವ ಹಿರಣ್ಯಗರ್ಭ, ೩೪೫.

೧೧೩. ಬ್ರಹ್ಮದೃಷ್ಟಿಃ - ಬ್ರಹ್ಮವೆಂದು ಭಾವಿಸುವದು, ೨೭೭, ೩೦೬.

೧೧೪. ಬ್ರಹ್ಮಪ್ರತಿಪತ್ತಿಃ - ಬ್ರಹ್ಮಪ್ರಾಪ್ತಿ, ೨.

೧೧೫. ಬ್ರಹ್ಮಲೋಕಃ - ಬ್ರಹ್ಮನಿರುವ ಲೋಕ, ೬೨೭, ೬೨೮, ೬೩೩.

೧೧೬. ಬ್ರಹ್ಮವಿಜ್ಞಾನಮ್, ಬ್ರಹ್ಮವಿದ್ಯಾ - ಉಪಾಸನೆ, ೨೨೭, ೨೨೯, ೨೭೫.

೧೧೭. ಬ್ರಹ್ಮವಿದ್ - (೧) ಸಾಕ್ಷಾತ್ಕಾರ ಮಾಡಿಕೊಂಡಿರುವ ಉಪಾಸಕ, ೨೨೬, ೨೭೫, ೩೨೩, ೩೩೯, ೩೪೫.

೧೧೮. ಬ್ರಹ್ಮಸಂಸ್ಥಃ - ಬ್ರಹ್ಮದಲ್ಲಿಯೇ ನಿಷ್ಠನಾಗಿರುವವನು, ಪ್ರಣವಸೇವೆಯನ್ನು ಮಾಡುತ್ತಿರುವವನು, ೧೭೬, ೧೭೮, ೧೭೯.

೧೧೯. ಬ್ರಹ್ಮಹತ್ಯಾ - ಅನೇಕಜನ್ಮಗಳಿಗೆ ಕಾರಣವಾದ ಬ್ರಹ್ಮಹತ್ಯೆ, ೪೧೦.

೧೨೦. ಬ್ರಹ್ಮಾದಿಸ್ತಮ್ಬಪರ್ಯನ್ತಮ್ - ಬ್ರಹ್ಮದಿಂದ ಹಿಡಿದು ಸ್ಥಾವರದ ವರೆಗಿನ (ಜಗತ್ತು), ೫೮೪.

೧೨೧. ಭಕ್ತಿಃ - ಸಾಮದ ಅವಯವ, ಪ್ರಸ್ತಾವ, ಉದ್ಗೀಥ ಮುಂತಾದವು, ೭, ೧೦೬, ೧೩೩, ೧೩೫, ೧೩೬.

೧೨೨. ಭಿಕ್ಷಾಚರಣಮ್ - ಸಂನ್ಯಾಸಿಯು ಭಿಕ್ಷೆಯಿಂದ ಆಹಾರವನ್ನು ಸಂಪಾದಿಸುವದು, ೧೪೧.

೧೨೩. ಭಿಕ್ಷುಕಃ - ಸಂನ್ಯಾಸಿ, ೧೮೨.
೧೨೪. ಭೂತಮಾತ್ರಾಸಂಸರ್ಗಃ - ಭೂತಗಳ ಅಂಗದ ಸಂಬಂಧ, ೪೬೩.
೧೨೫. ಭೂತಾನಿ - ಪ್ರಾಣಿಗಳು, ೪೬೧.
೧೨೬. ಮನನವಿಜ್ಞಾನೇ - ವಿಚಾರ ಮಾಡುವದು, ಅನುಭವಕ್ಕೆ ತಂದು ಕೊಳ್ಳುವದು, ೫೯೪, ೬೦೧.
೧೨೭. ಮುಮುಕ್ಷನ್ - ಮೋಕ್ಷೇಚ್ಛೆಯುಳ್ಳ ವನು, ೫೨೬.
೧೨೮. ಮೋಕ್ಷಃ - ಪರಮ ಪುರುಷಾರ್ಥ, ೩, ೪೧೦.
೧೨೯. ಯಜ್ಞಾಯಜ್ಞೀಯಮ್ - ಒಂದು ಸಾಮ (ಯಜ್ಞಾ ಯಜ್ಞಾವೋ .... ಋ. ೬-೪೮-೧), ೧೬೩.
೧೩೦. ಯಮನಿಯಮಾದಿಃ - ಸಂನ್ಯಾಸಿಯ ಧರ್ಮಗಳು, ೧೮೨.
೧೩೧. ಯೋಗೀ - ಉಪಾಸಕ, ೨೨೪, ೬೫೧.
೧೩೨. ಯೋಗೀಶ್ವರಃ - ಬ್ರಹ್ಮಚಿಂತನೆ ಯಲ್ಲಿ ನಿಂತವನು, ೫೪೮.
೧೩೩. ರಥನ್ತರಮ್ - ಒಂದು ಬಗೆಯ ಸಾಮ (ಅಭಿತ್ವಾಶೂರ ಋ. ೭-೩೨-೨೨), ೧೪೯.
೧೩೪. ರಸಾದಿಕ್ರಮಃ - ಅನ್ನವು ರಸ, ರಕ್ತ, ಮಾಂಸ ಮುಂತಾದ ಕ್ರಮದಿಂದ ಪರಿಣಮಿಸುವಿಕೆ, ೫೦೧.
೧೩೫. ರಹಸ್ಯಮ್ - ವಿದ್ಯೆ, ಉಪಾಸನೆ ಮತ್ತು ಜ್ಞಾನ, ೫, ೩೪೬.
೧೩೬. ರಾಜನಮ್ - ಒಂದು ಬಗೆಯ ಸಾಮ, (ತದಿದಾಸ ಭುವನೇಷು ಋ. ೧೦-೧೨೦-೧), ೧೬೫.
೧೩೭. ರೇವತ್ಯಃ - ಒಂದು ಬಗೆಯ ಸಾಮ, (ರೇವತಿರ್ನಃ ಸಧಮಾದೇ ಋ. ೧-೩೦-೧೩), ೧೬೧.
೧೩೮. ಲಕ್ಷ್ಯಮುಕ್ತೇಷುಃ - ಗುರಿಯಿಟ್ಟು ಬಿಟ್ಟ ಬಾಣ, ೫೨೯.
೧೩೯. ವಸ್ತ್ವಾಕೃತಿಃ - ವಸ್ತುಸಾಮಾನ್ಯ, ೪೫೨.
೧೪೦. ವಾಕ್ಯಪ್ರಮಾಣಮ್ - ಶ್ರುತಿವಾಕ್ಯ ರೂಪವಾದ ಪ್ರಮಾಣ, ೫೪೧.
೧೪೧. ವಾಚಾರಮ್ಭಣಮ್ - ಬರಿಯ ಮಾತಿನಿಂದ ಹೇಳಲ್ಪಡುವ (ಕಾರ್ಯ), ೨೩೫, ೪೪೭, ೪೬೮.
೧೪೨. ವಾಮದೇವ್ಯಮ್ - ಒಂದು ಬಗೆಯ ಸಾಮ ('ಕಯಾನಶ್ಚಿತ್ರ ಆಭುವತ್' ಋ. ೪-೩೧-೧) ೧೫೧.
೧೪೩. ವಿಕಾರಃ - ಕಾರ್ಯ, (ಅನಾತ್ಮ), ೨೩೫, ೪೪೭, ೪೬೫, ೪೬೮, ೪೭೧, ೬೧೧.
೧೪೪. ವಿಕಾರಾನ್ಯತಜೀವಾತ್ಮವಿಜ್ಞಾನಮ್ - ಕಾರ್ಯವೂ ಹುಸಿಯೂ ಆದ ಜೀವಾತ್ಮನೆಂಬ ತಿಳಿವಳಿಕೆ, ೫೪೧.
೧೪೫. ವಿಜಿಜ್ಞಾಸಿತವ್ಯ - ತನ್ನ ಅನುಭವಕ್ಕೆ ತಂದುಕೊಳ್ಳಬೇಕಾದ (ಉಪಾಸ್ಯ ಆಥವಾ ಜ್ಞೇಯ), ೬೦೭, ೬೦೮, ೬೪೬, ೬೪೮.
೧೪೬. ವಿಜ್ಞಪ್ತಿಸ್ವಭಾವ - ಚೈತನ್ಯ ಸ್ವರೂಪವಾದ (ಆತ್ಮನ ಬೆಳಕು), ೬೨೩.
೧೪೭. ವಿದ್ಯಾ - (೧) ಉಪಾಸನೆ, ೨, ೧೬, ೨೨೮, ೨೬೮, ೨೭೪, ೩೩೪, ೩೮೬; (೨) ಜ್ಞಾನ, ೪೪೩, ೬೦೪, ೬೦೮.

೧೪೮. ವಿದ್ಯಾಕ್ರಿಯಾಶಕ್ತಿಸಂಮೂರ್ಛಿತಾತಾ - ಜ್ಞಾನಶಕ್ತಿಕ್ರಿಯಾಶಕ್ತಿಗಳೆರಡೂ ಸೇರಿರುವ ಪ್ರಾಣ, ೬೮೦.

೧೪೯. ವಿದ್ಯಾವಿದ್ಯಾಪ್ರತ್ಯಯೌ - ಆತ್ಮಸ್ವರೂಪನಿಶ್ಚಯರೂಪವಾದ ಪ್ರತ್ಯಯ, ಆತ್ಮನ ವಿಷಯದ ಮಿಥ್ಯಾಪ್ರತ್ಯಯ - ಇವುಗಳು, ೧೭೯.

೧೫೦. ವಿದ್ಯಾಸಂಪ್ರದಾನನ್ಯಾಯಃ - ಜ್ಞಾನದ ರಹಸ್ಯವನ್ನು ಉಪದೇಶ ಮಾಡುವ ವಿಧಾನ, ೪೧೯.

೧೫೧. ವಿಪರೀತಗ್ರಹಣಮ್, ವಿಪರೀತಾಧಿಗಮಃ - ತಪ್ಪಾಗಿ ತಿಳಿದುಕೊಳ್ಳುವದು, ೪೫೨, ೬೪೮, ೬೫೨, ೬೫೪, ೬೫೫.

೧೫೨. ವಿರಾಟ್ - (೧) ಪ್ರಜಾಪತಿಬ್ರಹ್ಮ, ೨೨೭; (೨) ಅನ್ನ, ೧೦೮.

೧೫೩. ವಿಷ್ಣ್ವಾದಿಬುದ್ಧಿಃ - ಪ್ರತಿಮೆಯೇ ಮುಂತಾದದ್ದರಲ್ಲಿ ವಿಷ್ಣುವೇ ಮುಂತಾದ ದೇವತೆಗಳ ಬುದ್ಧಿ, ೫೪೨, ೫೫೨.

೧೫೪. ವೇದಾನ್ತಪ್ರಮಾಣಮ್ - ಶ್ರುತಿವಾಕ್ಯರೂಪಪ್ರಮಾಣ, ೧೮೫.

೧೫೫. ವೇದೋಕ್ತಂಪಾರಿವ್ರಾಜ್ಯಮ್ - ಶ್ರುತಿವಿಹಿತವಾದ ಸಂನ್ಯಾಸ, ೧೮೪.

೧೫೬. ವೈನಾಶಿಕಾಃ, ಮಹಾವೈನಾಶಿಕಾಃ - ಯಾವುದೊಂದು ವಸ್ತುವೂ ಪರಮಾರ್ಥವಾಗಿಲ್ಲ ಎನ್ನುವವರು, ೪೫೧, ೪೫೩.

೧೫೭. ವೈರಾಜಸಾಮ - ಒಂದು ಬಗೆಯ ಸಾಮ ('ಪಿಬಾ ಸೋಮಮಿನ್ದ್ರ ಮನ್ದತು ತ್ವಾ', ಋ. ೧-೧೩೦-೨), ೧೦೮, ೧೫೦.

೧೫೮. ವೈರೂಪಮ್ - ಒಂದು ಬಗೆಯ ಸಾಮ (ಯದ್ದ್ಯೌವ ಇನ್ದ್ರತೇ ಶತಮ್, ಋ. ೮-೭೦-೫), ೧೫೫.

೧೫೯. ವೈಶೇಷಿಕಾಃ-ಸತ್ತೆಯೆಂಬ ಸಾಮಾನ್ಯ ವಿದೆಯೆಂಬ (ವೈಶೇಷಿಕ)ವಾದಿಗಳು, ೪೫೦.

೧೬೦. ವೈಶ್ವದೇವ್ಯಮ್ - ಒಂದು ಬಗೆಯ ಸಾಮ (ಪ್ರಮಿತ್ರಾಯ ಪ್ರಾರ್ಯಮ್ಣೇ ಋ. ೮-೧೦೧-೫), ೧೦೮.

೧೬೧. ವ್ಯಾಕೃತ - ನಾಮರೂಪಗಳಾಗಿ ವಿಂಗಡಿಸಿದ, ೪೬೬, ೪೬೭.

೧೬೨. ವ್ಯಾವಹಾರಿಕಮ್ - ವ್ಯವಹಾರದಲ್ಲಿ ನಿಜವೆಂದು ತೋರುವ, ೬೧೧.

೧೬೩. ವ್ಯಾವೃತ್ತ್ಯನುವೃತ್ತೀ - ಅನ್ವಯ ವ್ಯತಿರೇಕಗಳು, ೪೯೩.

೧೬೪. ಶಕ್ವರ್ಯಃ - ಒಂದು ಬಗೆಯ ಸಾಮ, ('ಪ್ರೋಷ್ಠಸ್ಯೈ ಪುರೋರಥಮ್' ಋ. ೧೦-೧೩೩-೧), ೧೫೯.

೧೬೫. ಶರೀರಾತ್ಮಭಾವನಾ - ದೇಹವೇ ತಾನೆಂದು ಬಗೆಯುವದು, ೬೨೩.

೧೬೬. ಶಾಸ್ತ್ರಾರ್ಥಃ - ಶಾಸ್ತ್ರವು ತಾತ್ಪರ್ಯದಿಂದ ಹೇಳುವ ವಿಷಯ, ೫೮೪.

೧೬೭. ಶುದ್ಧಸತ್ತ್ವಮ್ - ದೋಷ ಸಂಬಂಧವಿಲ್ಲದ ಅಂತಃಕರಣ, ೬೧೨, ೬೩೬, ೬೭೦.

ಸಂಸ್ಥಾಪಕರ ಸ್ಮರಣೆ

ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯ ಸರ್ವದಾ ಸ್ಮರಣೀಯರಾದ ಶ್ರೀ ಶಂಕರಭಗವತ್ಪಾದರದು. **ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು** (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರು - ವೈ. ಸುಬ್ಬರಾಯರು, ಜನನ 5-1-1880), ಶ್ರೀ ಶಂಕರ ವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ, ತಮ್ಮ ವಿಶಿಷ್ಟಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯ ಭಾಷ್ಯಗಳಿಗೆ ಹತ್ತಿದ್ದ ಕಳೆಯನ್ನು, ಮುತ್ತಿದ್ದ ಧೂಳನ್ನು ತೊಡೆದು ಶಾಂಕರವೇಂದಾಂತದ ನೈಜ ತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಪ್ರತಿಪಾದಕರಾದರು, **ಅಭಿನವ ಶಂಕರರಾದರು.**

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತ ಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **ಪುರುಷ ಸರಸ್ವತಿ** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರ ಸಂಪರ್ಕ, ಅಧ್ಯಾತ್ಮ ಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀ ಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳು ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀಮಹಾಸ್ವಾಮಿಗಳವರಿಂದ ಭಾಷ್ಯಶಾಂತಿಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

1937 ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರ ವೇದಾಂತಕ್ಕೆ ಅರ್ಪಿಸಿಕೊಂಡರು. 1948 ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀ ಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) **ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರಕೇಂದ್ರವಾಗಿದೆ.**

ಪೂಜ್ಯರು 1975ನೇ ಆಗಸ್ಟ್ 5 ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥